ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧ನೇ ಜೂನ್ ಶುಕ್ರವಾರ ೧೯೧೭. | ಸಂಚಿಕೆ ೨೨.

ಲಯೊನೆಲ್ ವ್ಯಾಬರ್ಟ್, ಎಸ್ಕ್ವಾಯರ್, ಐ. ಸಿ. ಯಸ್.,
ದಕ್ಷಿಣ ಕನ್ನಡಾ ಜಿಲ್ಲಾ ಕಲ್ಲೆಕ್ಟರ್ ದೊರೆಗಳವರು.

ನೋಟೀಸು.

ಯುದ್ಧದ ಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಸಾಲಕ್ಕೆ ಸರಕಾರಿ ನೌಕರರು 10 ಯಾ 24 ತಿಂಗಳುಗಟ್ಲೆ ಕಂತುಗಳಲ್ಲಿ ತಮ್ಮ ತಲಬಿನಿಂದ ವಜಾ ಮಾಡುವದರ ಮೂಲಕ ಹಣ ಕೊಡುವದಕ್ಕೆ ಅನುಕೂಲವಾಗುವ ಹಾಗೆ ಮಾಡಿದ ವಿಲೆವಾರಿಗಳು ಜನರಲ್ ರೆವೆನ್ಯೂನಿಂದ ತಲಬು ಸಲ್ಲುವ ಎಲ್ಲಾ ತರದ ಗ್ರಾಮ ನೌಕರರಿಗೂ ಲಗಾವಾಗುತ್ತದೆ ಎಂತ ಸರಕಾರದವರು ದೃಢೀಕರಿಸಿದ್ದಾರೆ.

2. ಸಾಲಕ್ಕೆ ರೂ. 100ಕ್ಕಿಂತ ಕಡಿಮೆ ಐವಜನ್ನು ಕೊಡಕೂಡದಾದ ಕಾರಣ, ತಿಂಗಳಿಗೆ ರೂ. 10ಕ್ಕಿಂತ ಕಡಿಮೆ ತಲಬಿನ ನೌಕರರು 10 ಕಂತುಗಳಲ್ಲಿ ಕೊಡುವ ವಿಲೆವಾರಿಗೆ ಹೊರಗಾಗಿರುತ್ತಾರೆ. ಆದ ಕಾರಣ ಅಂಥವರು 24 ಕಂತುಗಳಲ್ಲಿ ಕೊಡುವ ವಿಲೆವಾರಿಯನ್ನು ಉಪಯೋಗಿಸಿಕೊಳ್ಳಬಹುದು. ಈ ವಿಲೆವಾರಿಯಲ್ಲಿ ನೌಕರರು ಸರಕಾರಕ್ಕೆ ಸಾಲಕೊಡುವ ಪೂರ್ಣ ಐವಜನ್ನು ಮದ್ರಾಸು ಬೇಂಕಿನವರು ಮುಂದಾಗಿ ಸರಕಾರಕ್ಕೆ ಕೊಟ್ಟು ಆ ಐವಜನ್ನು 24 ತಿಂಗಳುಗಟ್ಲೆ ಕಂತುಗಳಲ್ಲಿ ಈ ಕೆಳಗೆ ನಮೂದಿಸಿದ ಪ್ರಕಾರ ಅವರ ಸಂಬಳದಿಂದ ವಜಾ ಮಾಡಿ ಭರ್ತಿ ಮಾಡಿಕೊಳ್ಳುತ್ತದೆ.

1929ರಿಂದ 1947ನೇ ಇಸವಿಯೊಳಗೆ ಸಂದಾಯವಾಗುವ ಯುದ್ಧದ ಸಾಲ ಯಾನೆ ವಾರ್ ಲೋನ್ ಆದರೆ

ಪ್ರಥಮ 4 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ, ವಸಕೊಳ್ಳುವ ಐವಜ ಶೇಕಡಾ 4ರಂತೆ
ಆ ಮೇಲಿನ 15 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ವಸಕೊಳ್ಳುವ ಐವಜ ,, 4ರಂತೆ
ಅನಂತರದ 5 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ವಸಕೊಳ್ಳುವ ಐವಜ ,, 3ರಂತೆ

ಅಂದರೆ ರೂ. 100ರ ಸಾಲದ ಪತ್ರಕ್ಕೆ ಒಟ್ಟು ರೂ. 95

1920ನೇ ಇಸವಿಯ ಅಥವಾ 1922ನೇ ಇಸವಿಯ ಯುದ್ಧದ ಯಾನೆ ವಾರ್ ಬಾಂಡುಗಳ ವಿಷಯದಲ್ಲಾದರೆ

ಪ್ರಥಮ 4 ತಿಂಗಳುಗಳಲ್ಲಿ ತಿಂಗಳೊಂದರ, ಪ್ರತಿಕೊಂಡ ಒಟ್ಟು ಐವಜ ಶೇಕಡಾ 5ರಂತೆ
ಅನಂತರದ 20 ತಿಂಗಳುಗಳಲ್ಲಿ ಶೇಕಡಾ 4ರಂತೆ

ಅಂದರೆ ರೂ. 100ರ ಬಾಂಡ್ ಪತ್ರದ ಬಗ್ಗೆ ರೂ 100.

3. ಬ್ಯಾಂಕಿನಿಂದ ಹಣ ಪಡೆದು ಸರಕಾರಕ್ಕೆ ಸಾಲಕೊಡುವ ವಿಲೆವಾರಿಯ ಬಗ್ಗೆ ಅರ್ಜಿಗಳು 1917ನೇ ಇಸವಿ ಜೂನ್ ತಾ. 10ರ ಒಳಗೆ ಮದ್ರಾಸ್ ಎಕೌಂಟೆಂಟ್ ಜನರಲರವರಿಗೆ ತಲಪಬೇಕಾಗಿರುವದರಿಂದ ಈ ವಿಲೆವಾರಿಯ ಪ್ರಯೋಜನ ಹೊಂದಬೇಕೆಂದಿರುವ ಗ್ರಾಮ ಶಿಬಂದಿಯವರು ಈ ಸಂದರ್ಭದಲ್ಲಿ ಸ್ವಲ್ಪವಾದರೂ ಕಾಲಹರಣ ಮಾಡಕೂಡದು.

ಮಂಗಳೂರು, 26-5-1917. | ಪಿ. ಗೋಪಾಲನ್ ನಾಯರ್, ಕಲ್ಲೆಕ್ಟರ ಬಗ್ಗೆ.

ಪಂಡಿತ ಎಂ. ಎಸ್. ಯವರ ಮದರಾಸ್ ಪುಡಿ ನಸ್ಯ.



ಈ ನಸ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ ಪುಡಿಯನ್ನು ಉಪಯೋಗಿಸುವುದರಿಂದ ಸೀನಾಸಿ, ಅರತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣ ಮಾಡುವದು. ಈ ನಸ್ಯವು ಬೇರೆಯವರ ನಸ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮೆದುಳನ್ನು ಕೆಡಿಸುವದಿಲ್ಲ. ಈ ನಸ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5 ಆಣೆ.

ಒಂದೇ ಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್. ಸಿಟಿ. ಬಾಬು ಕಂಪನಿ,
ನಂ. 7-2ನೇ ಕುರಾಂಬು ಬೀದಿ, ಮಿಂಟ್ ಬಿಲ್ಡಿಂಗ್, ಮದರಾಸ್.

ಒಳ್ಳೆ ಗೊಬ್ಬರ! ಅವ್ವಲ್ ಊಟ!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಒತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡಿಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾಗುವಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು, ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ. ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda.
1, Royal Exchange Place, Calcutta.

ಕುಂಬಳೆ ಪಂಡಿತ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೂ ಐದು ಅಧ್ಯಾಯ ಸತ್ಯ ವ್ರತ ಕಥಾ ಪಾ ... ಗಳಿವೆ. ... ತಿಳಿಯುವ ಸುಲಭ ಶೈಲಿಯಾಗಿದ್ದು ಭಾವ ... ಪಟ್ಟದಿಯಿಂದ ವಿರಚಿಸಿರುವುದು. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವುದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೧ ಆಣೆಗೆ ವಿ. ಪಿ. ಮೂಲಕ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮೀಷನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯ ಲ್ಲಿಯೂ ದೊರೆಯುವುದು.

ಮನೋಲ್ಲಾಸಿನಿ ತೈಲ!



ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಹುರಿ, ಕಣ್ಣುರಿ, ಶಿರಯಿಂದ ತೀವ್ರ ಸೋರುವುದು, ಶಿರಘೂರ್ಣನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕುಂದಿಹೋಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದೆಂತಲೂ ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನು ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗಿರುವ ಕೂದಲನ್ನು ತಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆಂತಲೂ ಈ ತೈಲವನ್ನು ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ 1 ಸೀಸೆಗೆ ರೂ. 0—12—0. (ವಿ. ಪಿ. ಖರ್ಚು 4 ಆಣೆ)
,, 3 ಸೀಸೆಗಳಿಗೆ,, 2— 0—0. ,, ,, 8 ,,

ಬೆಲೆ ಸುಲಭ! ಚಿನ್-ಚಿನ್-ಬಾಂ. ಗುಣ ಅಧಿಕ!

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ಆಕಂ, ಥಂಡಿ, ಬೇಳು ಕಡಿತ, ಕೃಕ್ಕ ಮುಂತಾದ್ದು ತಕ್ಷಣ ಗುಣ. ಬೆಲೆ 1 ಡಬ್ಬಿಗೆ ಒಂದೇ ಆಣೆ, ಡಜನ್ 1ಕ್ಕೆ ರೂ. 0—10—0. ಅಂಚೆ ಹಾಸಲು ಬೇರೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್.

ಸೂಚನೆ:— ಅನೇಕ ತರದ ಮಾತ್ರೆಗಳು, ತೈಲಗಳು, ಘೃತಗಳು, ಲೇಹ್ಯಗಳು, ಅರಿಷ್ಟಗಳು, ಸಿದ್ಧವಾಗಿವೆ. ಪಟ್ಟಿಯಾಗಿ ಬರೆಯಿರಿ.

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
4, ... ಮಂಗಳೂರು.

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡವೆಯು ಒಳ್ಳೆಯದೊ ಕೆಡುಕೊ ಎಂಬದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೇಲಿನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ

ಅತ್ಯುತ್ತಮವಾದ ಗೊಬ್ಬರಗಳು.

1. ನೈಟ್ರೇಟ್ ಒಫ್ ಸೋಡಾ — Nitrate of Soda.
2. ಸುಪರ್ ಫೊಸ್‌ಫೇಟ್ಸ್ — Super Phosphates.
3. ಬೆಸಿಕ್ ಸ್ಲೆಗ್ — Basic Slag.

ಇವುಗಳು ತೊಪ್ಪೆ ಸೆಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಖಂಡುಗ ಹಟ್ಟಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುಪ್ಪೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಶಿ ಹಾಕುವುದಕ್ಕಿಂತ ಒಂದು ಹಿಡಿ ಸೌಳುಪ್ಪನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲಾ ಮಾಹಿತಿಯನ್ನು ಕೊಡುವ ಸೂಚನಾ ಪತ್ರಗಳು ಬೇಕಾದ್ದಲ್ಲಿ ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. ಕೆಳಗೆ ಕಾಣಿಸಿದ ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ, ಸಾಕಷ್ಟು ರಖಮಾಗಿ ಪಡಕೊಳ್ಳಬಹುದು.

ಹೆಚ್ಚಿನ ಅನುಭವವನ್ನು ಕುರಿತು ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ತೇರಬೀದಿ, ಮಂಗಳೂರು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಲೋ. ಸ. ಟೆಕ್ಸ್ಟ್ 4 ಆಣೆ, ಡಿಟೋ ನೋಟ್ಸು ಮ ವೆಂಕಟ ಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟ್ 3¼ ಆಣೆ, Rama & Sita 4 as., (Do Notes 6 as., General Eng. Questions & Answers from 1901-1917 6 as., by Mr. Pichumuttu, B. A.) Gen. English by Mr. Chennakesaviah Rs. 1-2-0, ಛಂದಮಣಿ 1 5 ಆಣೆ, ಡಿಟೋ 11ನೇದು 5 ಆಣೆ, ಪ್ರಶ್ನೋತ್ತರ ಲೇಖ್ಯಬೋಧಿನಿ ರೂ. 1-8-0, ನವೀನ ಗಣಿತ 3 ಆಣೆ, ಹಿಂದು ಚರಿತ್ರಸಾರ 10½ ಆಣೆ, ಸರ್ಕಾರ 1ನೇ ರೀಡರ್ 5 ಆಣೆ, ಡಿಟೋ 2ನೇದು 7 ಆಣೆ, ಡಿಟೋ 3ನೇದು 8½ ಆಣೆ, ಡ್ರಿಲ್ ಪುಸ್ತಕ 3½ ಆಣೆ, ಮಕ್ಕಳ ಚಿತ್ರಾವಳಿ 12 ಆಣೆ, ಲೇಖ್ಯಬೋಧಿನಿ 8½ ಆಣೆ, ಲೇಖನ ಅಭ್ಯಾಸ 5 ಆಣೆ, 6ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

ಈ ಪುಸ್ತಕದಲ್ಲಿ:—೧ ಪಿನಲ್‌ಕೋಡು, ೨ ದೊಡ್ಡೀ ಆಕ್ಟು, ೩ ... ರೆಗ್ಯುಲೇಶನ್, ೪ ಆಯುಧಗಳ ರೆಗ್ಯುಲೇಶನ್, ೫ ದಸ್ತವೇಜುಗಳ ರೆಗ್ಯುಲೇಶನ್, ೬ ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಶನ್, ೭ ... ಕೂಡದೆಂಬ ರೆಗ್ಯುಲೇಶನ್, ೮ ಬಾಲ್ಯವಿವಾಹಗಳ ರೆಗ್ಯುಲೇಶನ್, ೯ ... ಲೇಶನ್, ೧೦ ... ಆಕ್ಟು, ೧೧ ... ಆಕ್ಟು ... ಆಗುವ ತಪ್ಪುಗಳೂ ಮತ್ತು ... ವಿವರಿಸಲಾಗಿದೆ. ಕ್ರಯ ರೂ. 2—3—0.

ಎಚ್. ಎನ್. ರಾವ್ ಬ್ರದರ್ಸ್,
...

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital	Rs. ...	300,000—0—0
Issued Capital	... ...	225,000—0—0
Subscribed Capital	... ...	225,000—0—0
Paid up Capital	... ...	200,225—0—0
Deposits	... ...	323,038—15—10
Reserve Fund	... ...	50,003—2—5

ನಿಯಮಿತ ಮೂಲ ಧನವು	ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	200,225—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		323,038—15—10
ರಕ್ಷಿತ ಧನವು	... ...	50,003—2—5

25% of the net profits are added annually to the Reserve Fund. Rs. 28,485/- have been invest ed in Government Paper of the face value of Rs. 29,300/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಶೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ 28,485—0—0 ಸರಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

Dividends of not less than 6%. paid during the past years and a bonus of 1% to 2%. paid in addition during the last eight years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಳೆದ 8 ವರುಷಗಳಲ್ಲಿ ಶೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one weeks notice of withdrawal after one month received @ ..% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಶೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4⅛%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಶೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡಲ್ಪಡೋಣಾಗುತ್ತವೆ.

Loans granted on proper securities and pledges.

Canara Bank Ltd.,
Mangalore, 1st. May 1917.

P. Gopal Naik,
Secretary.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಒಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಕಣ್ಮನಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:—

ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
ಬೆಂಗಳೂರು ಸಿಟಿ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮೀಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೂಪಿ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಋತು ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕುಮಾರ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್:— ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಿಗಿ ಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೂಪಿ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎನ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ
ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಪ್ಲೇಗ್ ನಿವಾರಣ. ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.
ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ. ಇದು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ... ಹಳೇ ವ್ರಣ ಮತ್ತು ಸಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಪಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4 ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್ಸ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯವಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
[illegible]	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರಫುಲ್ಲ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿದ್ದುಪಡಿ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1—0—0
,, ಸಂಗೀತ ಸಮುಚ್ಚಯ	1—4—0
ಮಾನ್ಯನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ ,,	0—10—0
[illegible] 18 [illegible]	0—1—0

ಯೂರೋಪದ ಮಹಾ ಯುದ್ಧ.

ಇಟೆಲಿಯನರು ಪ್ರಕೃತ ವಿಶೇಷವಾದ ಕದನಗಳನ್ನು ನಡಿಸುತ್ತಿರುವರು. ಟೊಸ್ಮೆನಿಯೊ, ಲೊಳಿಟ್, ಜಿಜಿಯಾನೆ ಪ್ರಾಂತ್ಯಗಳನ್ನು ಕೈವಶಮಾಡಿಕೊಂಡಿರುವರು. ಟ್ರಾಕೊ ಎಂಬ ಗ್ರಾಮದ ಕೆಲವು ಪ್ರಾಂತ್ಯವು ಇಟೆಲಿಯನರ ಕೈಸೇರಿರುತ್ತದೆ. ಈ ಕದನಗಳಲ್ಲಿ ಇಟೆಲಿಯವರಿಗೆ ಬ್ರಿಟಿಷರ ೧೦ ಬತ್ತೇರಿಗಳ ಸಹಾಯವು ಇತ್ತು. ೧೪೦ ಆಕಾಶನಾವೆಗಳೂ ಜಲಯಾನಗಳೂ ಶತ್ರುಗಳನ್ನು ಬಹಳವಾಗಿ ಕಾಡಿಸಿಯವೆ. ೯೦೦೦ ಜನ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ.

ಪಶ್ಚಿಮರಣರಂಗದಲ್ಲಿ ಬ್ರಿಟಿಷರು ತಾವು ಶತ್ರುಗಳಿಂದ ಪಡದಿರುವ ನೆಲೆಗಳನ್ನು ಭದ್ರಪಡಿಸುತ್ತಿರುವರಲ್ಲದೆ ಮೋಲ್ಟಾಯದು ಬರುತ್ತಿರುವ ಶತ್ರುಗಳ ಪಡೆಗಳನ್ನು ಹಿಂದಕ್ಕೆ ಅಟ್ಟುತ್ತಿದ್ದಾರೆ. ಕ್ರೈಯಾನು ಸಮೀಪ ಫ್ರೆಂಚರು ಶತ್ರುಗಳ ಮೇಲೆ ಮುನ್ನುಗ್ಗಿ ಬಿದ್ದು ಆ ಪ್ರಾಂತ್ಯದಲ್ಲಿ ಶತ್ರುಗಳ ಕಾವಲಿನ ಸ್ಥಳವನ್ನು ಸ್ವಾಧೀನಪಡಿಸಿರುವರು. ಪೆತ್ರೆಸ್ಲ್ ಪೂರ್ವದಲ್ಲಿ ಶತ್ರುಗಳ ಕಂದಕಗಳ ಮೂರು ಸಾಲುಗಳನ್ನು ಫ್ರೆಂಚರು ಪಡೆದಿರುತ್ತಾರೆ. ಶತ್ರುಗಳು ತಮ್ಮ ಕಾವಲಿನ ಸೇನಾಂಗಗಳನ್ನು ಮಾತ್ರವಲ್ಲ ಪೂರ್ವರಣರಂಗದಲ್ಲಿರುವ ಸೇನೆಗಳನ್ನು ಸಹ ತರಿಸಿಕೊಂಡು ಮಿತ್ರರನ್ನು ಎದುರಿಸುತ್ತಿದ್ದಾರೆಂತ ಕಾಣುತ್ತದೆ. ಆದ್ದರಿಂದ ಪಶ್ಚಿಮರಣರಂಗದಲ್ಲಿ ಮಿತ್ರರಿಗೆ ಮೂರು ನಾಲ್ಕು ವಾರಗಳ ಹಿಂದೆ ಮುಂದುವರಿದು ಹೋದಂತೆ ಈಗ ಹೋಗಲು ಸ್ವಲ್ಪ ತಡೆಯುಂಟಾಗಿದ್ದರೂ ಮಿತ್ರರು ಸ್ಥಿರವಾಗಿ ಮುಂದುವರಿಯುತ್ತಿರುವರು.

ಸಬ್ ಮೆರಾನುಗಳ ಮೂಲಕ ಪ್ರಕೃತ ಉಂಟಾಗುತ್ತಿರುವ ನಷ್ಟವು ಎಪ್ರಿಲ ತಿಂಗಳಾಂತ್ಯದಲ್ಲಿ ಉಂಟಾಗಿರುವದರ ಅರ್ಧದಷ್ಟು ಸಹ ಆಗುವದಿಲ್ಲ. ತಾ. ೨೦ಕ್ಕೆ ಅಂತ್ಯವಾದ ವಾರದಲ್ಲಿ ೨೬೭೪ ಹಡಗಗಳು ಬ್ರಿಟಿಷ ಬಂದರುಗಳಿಗೆ ಬಂದು ತಲ್ಪಿವೆ. ಮತ್ತು ಬ್ರಿಟಿಷ ಬಂದರುಗಳಿಂದ ಹೊರಟವುಗಳ ಸಂಖ್ಯೆಯು ೨೭೫೯ ಆಗಿರುವದು. ೧೬೦೦ ಟನ್ನುಗಳ ಭರಾವಣೆಗೆ ಮಿಕ್ಕಿದ ಹಡಗಗಳು ೧೮ ಮತ್ತು ಈ ಭರಾವಣೆಗೆ ಕಡಮೆ ಇದ್ದ ಹಡಗಗಳು ೯ ಮುಳುಗಿಹೋಗಿರುವವು. ಬ್ರಿಟಿಷರ ಟ್ರಾನ್ಸ್‌ಪೋರ್ಟ ಹಡಗ ಟ್ರಾನ್‌ಸಿಲ್‌ವೇನಿಯಾ ಎಂಬುದು ಮುಳುಗಿಹೋಗಿ ೪೧೩ ಜನರು ಮೃತಪಟ್ಟರು. ಜಪಾನೀಯರ ಹಡಗಗಳು ಮೆಡಿಟೆರೆನಿಯನ್ ಸಮುದ್ರದಲ್ಲಿ ಮಿತ್ರರ ನೌಕಾವಳಿಗೆ ಬೇಕಾದ ಸಹಾಯವನ್ನು ಮಾಡುತ್ತಿರುವರು. ಜಪಾನೀಯರ ಬಲವಾದ ಕ್ರೂಜರ್ ನಾವೆಗಳು ಹಿಂದೂಸಾಗರ ಮತ್ತು ದಕ್ಷಿಣ ಶಾಂತಸಾಗರದಲ್ಲಿರುವ ಬ್ರಿಟಿಷರ ನೌಕಾವಳಿಯ ಸಹಾಯಕ್ಕಿರುವವು.

ಅಂಗ್ಲಾಂಡ ನೊರ್ಫೋಕ್ ಎಂಬಲ್ಲಿ ಶತ್ರುಗಳ ಜಪಲಿನ್ ನಾವೆಗಳು ಬಾಂಬು ಹಾಕಿದವು. ಆದರೆ ಇವುಗಳಿಂದ ವಿಶೇಷ ಹಾವಳಿಯು ಉಂಟಾಗಲಿಲ್ಲ.

ವಿದೇಶ ವೃತ್ತಾಂತ.

ಟರ್ಕಿಯ ಕದನವು ಇನ್ನೊಮ್ಮೆ ಪ್ರಾರಂಭವಾಗುವಷ್ಟರಲ್ಲಿ ಸಂಧಾನವಾಗುವದೆಂತ ಬಲ್ಗೇರಿಯಾದ ಮಂತ್ರಿಗಳು ವರ್ತಮಾನ ಪತ್ರಿಕೆಯ ಒಬ್ಬ ಪ್ರತಿನಿಧಿಗೆ ತಿಳಿಸಿರುತ್ತಾರೆ.

ಒಸ್ಟ್ರಿಯನರ ಸಂಧಾನದ ನವೀನ ಪ್ರಯತ್ನವನ್ನು ಪೋಪ ದೊಡ್ಡವರುಗಳು ಆಗ್ರಹದಿಂದ ಪರ್ಯಾಲೋಚಿಸುತ್ತಿರುವರೆಂತ ರೋಮನ್ ಪಟ್ಟಣದ ಒಬ್ಬ ಬಾತ್ಮಿದಾರರು 'ಟ್ಯಾಡ್' ಪತ್ರಿಕೆಗೆ ಬರೆದಿರುವರು.

ಪೋಲೆಂಡನ್ನು ಹಿತದಕ್ಕೆ ಕೊಡುವದು ಡಾರ್ಡನಲ್ಸ್‌ನ ಸ್ವಾತಂತ್ರ್ಯ, ರಷ್ಯಕ್ಕೆ ಸಾಲ, ಸಂಧಾನದ ಈ ಶರ್ತಗಳನ್ನು ರುಷ್ಯಕ್ಕೆ ಕೊಡೋಣಾಗಬೇಕೆಂಬ ಒಸ್ಟ್ರಿಯಾದ ಚಕ್ರವರ್ತಿಗಳ ಸೂಚನೆಯನ್ನು ಪರ್ಯಾಲೋಚಿಸಲಿಕ್ಕೆ ಜರ್ಮನ ಮತ್ತು ಒಸ್ಟ್ರಿಯಾದ ಮಂತ್ರಿಗಳು ಸಭೆಕೂಡಿದರೆಂಬ ವರ್ತಮಾನವನ್ನು ಟ್ಯಾಡ್ ಪತ್ರಿಕೆಗೆ ಒಬ್ಬ ಜರ್ಮನ ಬಾತ್ಮಿದಾರನು ಬರೆದಿರುತ್ತಾನೆ.

ಒಸ್ಟ್ರಿಯನರು ಮತ್ತು ಜರ್ಮನರು ರುಷ್ಯದೊಡನೆ ಪ್ರತ್ಯೇಕ ಸಂಧಾನ ಮಾಡಬೇಕೆಂತ ನಡಿಸಿದ ಕುತಂತ್ರಗಳು ಬಿದ್ದುಹೋದವು ಎಂತ ತಿಳಿದು ಬರುತ್ತದೆ.

"ಬ್ಲಾಕ್‌ಸೀ"ಯಲ್ಲಿರುವ ರುಷ್ಯನರ ನೌಕಾವಳಿಯ ಪ್ರತಿನಿಧಿಗಳು ಸೇನಿಕರ ಸಭೆಗೆ ಬಂದಿದ್ದಾಗ ತಾವು ಎಂದೂ ಪ್ರತ್ಯೇಕ ಸಂಧಾನಕ್ಕೆ ಸಮ್ಮತಿಸಲಿಕ್ಕಿಲ್ಲವೆಂತ ಹೇಳಿರುವರು. ರುಷ್ಯದಲ್ಲಿ ಕೃಷಿಕರ ಸಭೆಗೆ ಪ್ರಾರಂಭವಾಗಿದೆ.

ವಸಾಹತುಗಳಿಗೆ ಹಿಂದೀ ಕೂಲಿಗಳ ಗೈಮೆಕರಾರಿನ ಪದ್ಧತಿಯ ಸರಬರಾಯಿಯ ಕ್ರಮವು ಇನ್ನು ಎಂದೂ ನಡೆಯಲಿಕ್ಕಿಲ್ಲವೆಂತ ಮಿ॥ ಚೇಂಬರ್‌ಲೇನರು ಪಾರ್ಲಿಮೆಂಟ ಸಭೆಯಲ್ಲಿ ಹೇಳಿರುತ್ತಾರೆ.

ಉತ್ತರ ಹಿಂದೂಸ್ಥಾನ.

ಅಮೇರಿಕ ಮಹಾ ಸಂಸ್ಥಾನಗಳಿಗೆ ಹಿಂದೂಸ್ಥಾನದಿಂದ ಹೋಗುವ ಹಡಗಗಳ ನೋರುಗಳ ದರವು ಸೇಕಡಾ ೧೫೦ರಷ್ಟು ಮತ್ತು ಜಪಾನ್ಯದಿಂದ ಸೇಕಡಾ ೧೪೦ರಷ್ಟು ಹೆಚ್ಚಿರುವದು.

ಚಕ್ರವರ್ತಿಗಳ ಜನನ ದಿನವು ಇದೇ ತಿಂಗಳ ತಾ. ೪ನೇ ಸೋಮವಾರ ಆಚರಿಸಲ್ಪಡುವದು. ಈ ಜನನ ದಿನದ ಸಮರ್ಪಣೆಗಾಗಿ ಒಂದೂವರೆ ಕೋಟಿ ರುಪಾಯಿಗಳನ್ನಾದರೂ ಯುದ್ಧ ಸಾಲಕ್ಕೆ ಕೊಡುವ ಏರ್ಪಾಡನ್ನು ಮಾಡಬೇಕೆಂತ ಬಂಗಾಳದ ಸಂಸ್ಥಾನದವರೆಲ್ಲರಿಗೂ ಒಂದು ವಿಜ್ಞಾಪನೆಯನ್ನು ಕಲ್ಕತ್ತೆಯ ದೇವಲಿನ್ಸ ಎಂಬವರು ಬರಕೊಂಡಿರುವರು.

ಪೋಸ್ಟು ಆಫೀಸುಗಳ ಮುಖಾಂತರ ಬಂದ ಮೊಬಲಗುಗಳಲ್ಲದೆ ಕಳೆದ ತಾ. ೩೦ರ ವರೆಗೆ ಎತ್ತಲ್ಪಟ್ಟ ಯುದ್ಧ ಸಾಲದ ಮೊಬಲಗು ರೂ. ೨೩,೪೦,೮೫,೪೦೦ ಆಗಿರುತ್ತದೆ.

ದಕ್ಷಿಣ ಹಿಂದೂಸ್ಥಾನ.

ಕೊಯಂಬತ್ತೂರಿನಲ್ಲಿ ಜಿಲ್ಲಾ ಪರಿಷತ್ತನ್ನು ಕೂಡಿಸುವ ವಿಷಯ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರೊಳಗೆ ಇರುವಂಥಾ ಭೇದಬುದ್ಧಿಯು ಇನ್ನೂ ಬಿಟ್ಟು ಹೋದಂತೆ ಕಂಡುಬರುವದಿಲ್ಲ. ಜನರ ಸಭೆಗಳು ಕೂಡಿಕೊಂಡು ಪರಿಷತ್ತು ಈ ವರ್ಷ ಬೇಡ, ಅಥವಾ ಬೆಸೆಂಟರವರು ಅಧ್ಯಕ್ಷರಾಗಕೂಡದು,— ಈ ರೀತಿ ವಾದಗಳು ನಡೆದು ಅಲ್ಲಿಯವರು ಇನ್ನೂ ಗೊಂದಲದಲ್ಲಿಯೆ ಇರುತ್ತಾರೆಂಬುದಾಗಿ ಕಾಣುತ್ತದೆ.

ಕಳೆದ ತಿಂಗಳ ತಾ. ೨೫ರಲ್ಲಿ ಕುನೂರಿನಲ್ಲಿ ಕೂಡಿದ ಮಿಶನರಿಗಳ ಕಾನ್ಫರೆನ್ಸಿನಲ್ಲಿ ಯುದ್ಧ ಸಹಾಯಾರ್ಥವಾಗಿ ಸರಕಾರದವರು ಸೇವೆಗಳನ್ನು ಏರ್ಪಡಿಸುವರೆ ತಮ್ಮ ಸಮ್ಮತಿಯನ್ನು ಕೊಡುವದು ನ್ಯಾಯವಲ್ಲವೆಂಬ ನಿರ್ಣಯವನ್ನು ಮಾಡಿರುತ್ತಾರೆ.

ಸ್ಥಾನಿಕ ವರ್ತಮಾನಗಳು.

[illegible]

ರಾಜಾ ಲಕ್ಷ್ಮೀನಾಥ ಸ್ವಾಮಿಜಿಯವರು, ಸಬ್ ರಿಜಿಸ್ಟ್ರಾರ ಮ॥ ರಾ॥ ಎಮ್ ರಾಮಪ್ಪನವರು, ಮ॥ ರಾ॥ ಪಿ. ಗಣೇಶರಾವ್ ಸುಪ್ರವೈಸರ್, ಮ॥ ರಾ॥ ಥಾ. ಸುಂದರ ರಾಮರಾವ್ ಆಕ್ಟಿಂಗ್ ವಕೀಲ, ಮ॥ ರಾ॥ ನೆತ್ರಕೆರೆ ಶಂಕರನಾರಾಯಣ ಭಟ್ಟ ಜ್ಯುವೆಲ್ಲರ್, ಮ॥ ರಾ॥ ಕನ್ಯಾನ ವಕೀಲ ಗಣಪತಿ ಭಟ್ಟ ಮೊದಲಾದವರು ಸಭೆಗೆ ಬಂದಿದ್ದರು. ಮ॥ ರಾ॥ ಸ್ಕೂಲ್ ಸುಪ್ರವೈಸರ್ ಪಿ. ಗಣೇಶರಾವ್‌ರವರು ಈ ಸಭೆಯು ಯಾರ ಬಗ್ಗೆ ಕೂಡಿಸೋಣಾಯಿತೆಂಬ ನೋಟೀಸನ್ನು ಓದಿದನಂತರ ಸಭಾಧ್ಯಕ್ಷರು ಸರಕಾರದವರಿಗೆ ಈ ಸಂದುಕಟ್ಟಿನ ಕಾಲದಲ್ಲಿ ಸಹಾಯವನ್ನು ಮಾಡುವ ಆವಶ್ಯಕತೆಯನ್ನು ತಮ್ಮ ಭಾಷಣದಲ್ಲಿ ವ್ಯಕ್ತಗೊಳಿಸಿ ಸ್ಥಿರಾಸ್ತಿಗಳ ಮೇಲೆ ಸಿಕ್ಕುವಂಥಾ ಬಡ್ಡಿಕ್ಕಿಂತ ಅಧಿಕವಾದ ಬಡ್ಡಿಯು ಪರಮ್ ಹೊರಳವಾದ ಜವಾಬ್ದಾರಿಯೂ ಇರುವಂಥಾ ಈ ಸಾಲದಲ್ಲಿ ಹಣವನ್ನು ಹಾಕುವದು ಭದ್ರವೂ ಲಾಭಕರವೂ ಆಗಿದೆ ಎಂದು ಬಹಳ ಅಭಿಮಾನದಿಂದ ಮ॥ ರಾ॥ ಪಿ. ಗಣೇಶರಾವ್ ರವರು ಮಾತಾಡಿದರು. ಮತ್ತು ಸಾಲದ ವಿವರವನ್ನೆಲ್ಲಾ ವಿವರಿಸಿ ಹೇಳಿದರು. ನಂತರ ಒಂದು ಪಟ್ಟಿಯನ್ನು ಸಭೆಯಲ್ಲಿ ಮಾತಲಾಗಿ ಸರ್ವರೂ ತಮಗೆ ಯುಕ್ತತೋರಿದ ಮೊಬಲಗನ್ನು ವಾಗ್ದಾನಮಾಡಿದರು. ಹೀಗೆ ವಾಗ್ದಾನಮಾಡಿದ ಸಂಖ್ಯೆ ರೂ. ೬೫೦೦ ಚಿಲ್ಲರೆ ಆಗಿರುವದು. (ಇದರ ವಿವರವು ಇನ್ನೊಂದು ಕಡೆಯಲ್ಲಿ ಮುದ್ರಿತವಾಗಿದೆ.) ಈ ಪ್ರಾಂತ್ಯದ ಅನೇಕ ಮಹಾನುಭಾವರು ಸಭೆಗೆ ಬಾರದೆ ಇರುವದರಿಂದ ಬೇಗನೆ ತಿರುಗಿ ಒಂದು ಸಭೆಯು ಜರಗುವದು ಅಗತ್ಯವೆಂತ ಅಧ್ಯಕ್ಷರವರು ಸೂಚಿಸಿದ್ದನ್ನು ಎಲ್ಲರೂ ಅನುಮೋದಿಸಿದರು. ನಂತರ ಈಗ ನಡೆಯುವ ಯುದ್ಧದಲ್ಲಿ ನಮ್ಮ ಚಕ್ರವರ್ತಿಯವರಿಗೂ ಮಿತ್ರರಿಗೂ ಜಯವು ಬೇಗನೆ ಸಿಕ್ಕಬೇಕಾಗಿ ಶ್ರೀ ದೇವರ ಹತ್ತರ ಪ್ರಾರ್ಥಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಬಂಟ್ವಾಳ.

ಕಳೆದ ವಾರದಲ್ಲಿ ಇಲ್ಲಿ ಮೊದಲು ಸರ್ಜನರಾಗಿದ್ದ ಡಾಕ್ಟರ್ ಥಾಮಸ್ ರವರಿಗೆ ಇಲ್ಲಿಯ ಮಹಾ ಜನಗಳು ಅವರು ಇಲ್ಲಿದ್ದಾಗ ಮಾಡಿದ ವೈದ್ಯೋಪಚಾರದ ಕೃತಜ್ಞತಾಪೂರ್ವಕವಾಗಿ ಯೂನಿಯನ್ ಕ್ಲಬ್ಬಿನಲ್ಲಿ ಸಭೆಸೇರಿ ಒಂದು ಚಿನ್ನದ ಪದಕವನ್ನು ಬಹುಮಾನವಾಗಿ ಅರ್ಪಿಸಿದರು. ಅಂದು ನಡೆದ ಸಭೆಗೆ ರಾ॥ ರಾ॥ ಕೃಷ್ಣ ಬಾಳಿಗರು ಅಧ್ಯಕ್ಷರಾಗಿದ್ದರು.

ಇಲ್ಲಿಯ ಬೋರ್ಡ್ ಸೆಕೆಂಡರಿ ಶಾಲೆಯಲ್ಲಿ IV ಫೋರ್ಮ್ ಎಂಬುವ ಸ್ಕೂಲ್ ಫೈನಲ್ ತರಗತಿಯ ಕ್ಲಾಸನ್ನು ಈ ವರುಷದಿಂದ ಆರಂಭಿಸುವರು. ಮಂಗಳೂರಲ್ಲಿ ಕ್ಲಾಸಿನ, ಹಣಾಗುಹದ ಮತ್ತು ಇತರ ಅನುಕೂಲತೆಗಳಿಂದ ಸ್ಕೂಲ್ ಫೈನಲಿನ ಕ್ಲಾಸುಗಳನ್ನು ಸೇರಲಿಚ್ಛಿಸುವ ವಿದ್ಯಾರ್ಥಿಗಳಿಗೆ ಇರುವ ಸಂಕಟಗಳನ್ನು ಈಗ ನಿವಾರಿಸುವ ಹಾಗೆ ಇಲ್ಲಿ ದೇವಸ್ಥಾನದ ಕಡೆಯಿಂದ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಾಂತ್ಯದ ವಿದ್ಯಾರ್ಥಿಗಳಿಗೆ ಇದು ಬಹಳಾ ಸಂತೋಷಕರವಾಗುತ್ತದೆಂದೂ ಇದರ ದೆಸೆಯಿಂದ ಮೇಲಿನ ತರಗತಿಯ ವಿದ್ಯಾಭಿವೃದ್ಧಿಗೆ ಸಹಾಯವಾಗುವದೆಂದೂ ನಮಗೆ ಭರವಸೆ ಇದೆ.

ಜ್ವರ, ಸನ್ನಿಪಾತ ರೋಗಗಳು ಬಲವಾಗಿ ರೂಢಿಯಲ್ಲಿರುತ್ತಾ ನಮ್ಮ ವೈದ್ಯರನ್ನು ಇಲ್ಲಿಂದ ಆಗಾಗ ಬದಲಿಸುವದಲ್ಲದೆ ಅಗತ್ಯವಾದ ಗೈರಹಾಜರಿಯಲ್ಲಿ ಇರಗೊಡಿಸುವದು ಉಚಿತವಾಗಿಲ್ಲ. ಮೊದಲು ಇದೇ ಪತ್ರಿಕೆಯಲ್ಲಿ ಸೂಚಿಸಿಕೊಂಡ ನಂತರ ವೈದ್ಯರು ರಜೆಯಲ್ಲಿ ತೆರಳಿದರೆ ಅವರಿಗೆ ಬದಲಾಗಿ ಮತ್ತೊಬ್ಬರು ಇಲ್ಲಿಗೆ ಕಳುಹಿಸಲ್ಪಡುತ್ತಿದ್ದರು. ಈಚೆಗೆ ಈ ವ್ಯವಸ್ಥೆಯು ಲೋಪವಾಗಹತ್ತಿರುವದು ಊರವರ ದುರ್ಭಾಗ್ಯವೆನ್ನಬಹುದು. ಈ ಪ್ರಮಾದವನ್ನು ಸರಿಗೊಳಿಸುವದು ಅಧಿಕಾರಿಗಳ ಆವಶ್ಯಕರ್ತವ್ಯವು. ಆಸ್ಪತ್ರೆಗೆ ದಿನಂಪ್ರತಿ ಬರುವ ರೋಗಿಗಳಿಗೆ ನಿಲ್ಲಲಿಕ್ಕೆ ಸಹ ಸ್ಥಳ ಸಾಲದೆಂದಮೇಲೆ ಡಾಕ್ಟರರೇ ಇಲ್ಲದಿದ್ದರೆ ಊರಿಗೆ ಎಷ್ಟರ ಸಂಕಟವಾಗುವದು!

ಮಂಗಳವಾರದಿಂದ ಒಂದೆರಡು ಮಳೆಗಳು ಜನುಗಹತ್ತಿವೆ. ವಿಪರೀತ ಸೆಕೆ.

ಯುದ್ಧ ಫಂಡಿನ ಸಭೆಯು ಇಲ್ಲಿಯೂ ನಡೆದು ಶ್ರೀ ದೇವರಿಂದ ರೂಪಾಯಿ ೧೦೦೦ ವರೆಗೆ ಕೊಡಲಾಯಿತು. ಒಟ್ಟಿನ ಮೇಲೆ ಆರೇಳು ಸಾವಿರ ರೂಪಾಯಿಗಳಷ್ಟು ಮಾತಿಗೆಯಾಗಿರಬಹುದು.

ಪೂಜಾ ಸಂಕವನ್ನು ಕೊಂಕ್ರೀಟಿನ ಸಂಕದಿಂದ ಜೀರ್ಣೋದ್ಧಾರ ಮಾಡಿದ ನಂತರ ಇನ್ನು ಸಂಕದೆಂಸೂ ಕಡೆ ಮೆಟ್ಟಲುಗಳನ್ನು ಇರಿಸಿರುವರು. ಇವನ್ನು ಕೆಗೆದು ಸರಿಯಾಗಿ ಮಾರ್ಗದೆಂದಿಗೆ ಆಗುವದೂ ಎಂದು ನಿರೀಕ್ಷಿಸಬೇಕಾಗಿದೆ.

ಕಾಪು:— ಇಲ್ಲಿಯ ಬೇಟಿನ ಶರನ್ನರಲ್ಲೊಬ್ಬನಾದ ಮ॥ ರಾ॥ ಸಂಜೀವ ಶೆಟ್ಟಿ ಎಂಬವನು ಮದ್ರಾಸಿನಲ್ಲಿ ಬಿ. ಎಲ್ ಪರೀಕ್ಷೆ ಕೊಟ್ಟು ಉತ್ತೀರ್ಣರಾದ ವಾರ್ತೆ ಕೇಳಿ ಸರ್ವರಿಗೂ ಆನಂದವಾಗಿದೆ.

ಮ॥ ರಾ॥ ಸಂಜೀವ ಶೆಟ್ಟಿಯವರು ಇಲ್ಲಿ ಒಂದು ರಾತ್ರಿ ಶಾಲೆಯನ್ನು ತೆರೆಯುವ ಉದ್ದಿಷ್ಟ ಊರಜನರಿಗೆ ಪ್ರೋತ್ಸಾಹ ಕೊಟ್ಟಲ್ಲಿ ಕಳೆದ ವಾರ ಒಂದು ಶಾಲೆ ಮುಹೂರ್ತ ಆಗಿದ್ದಾಯಿತು. ಅಂದಿನವೇ ೬ ಜನರು ವಿದ್ಯೆ ಕಲಿಯುವರೆ ಬಂದಿದ್ದರು. ಸದ್ರಿ ಶಾಲೆ ಉತ್ತಮ ಸ್ಥಿತಿಗೆ ಬಂದಲ್ಲಿ ಬಡ ಜನರಿಗೆ ಎಷ್ಟೋ ಉಪಕಾರವೆಂದು ಹೇಳಬೇಕಾಗಿದೆ.

ಇಲ್ಲಿ ಹೊಸತಾಗಿ ಕಟ್ಟಿಸುವ ಶಾಲೆಯು ಬೋರ್ಡು ಕನ್ನಡ ಶಾಲೆಗೋಸ್ಕರವೆಂತಲೂ, ಹಳೆ ಶಾಲೆಯು ಪಂಚಮರಿಗೆಂತಲೂ ಊರಲ್ಲಿ ವಾರ್ತೆ ಇದೆ. ಒಂದೇ ಕಂಪೌಂಡಿನೊಳಗೆ ಇವೆರಡು ಶಾಲೆಯು ಇರುವದು ಸರಿಯಲ್ಲವೆಂದು ತಿಳಿದು ಊರ ಜನರು ಹಳೇ ಶಾಲೆಯು ಹುಡುಗಿಯರಿಗೋಸ್ಕರ ಇರಗೊಡಿಸಿ, ಹುಡುಗಿಯರ ಒಂದು ಬೋರ್ಡ ಶಾಲೆ ತೆರೆಯಬೇಕೆಂಬದಾಗಿ ಈಗಿನ ಮಾನ್ಯ ಬೋರ್ಡ ಪ್ರಸಿಡೆಂಟರವರಿಗೆ ಒಂದು ಮನವಿಯನ್ನು ಕಳುಹಿಸಿರುವರು. ಈ ಅರ್ಜಿಗೆ ಈಗಿನ ದಯಾಳುವಾದ ಪ್ರಸಿಡೆಂಟರವರು ತಕ್ಕ ನಿಗಾ ಕೊಟ್ಟಲ್ಲಿ ಊರಜನರು ಕೃತಾರ್ಥರಾಗುತ್ತಿದ್ದರು.

ಯುದ್ಧದ ಬಗ್ಗೆ ಸಾಲವನ್ನು ಎತ್ತುವ ಉದ್ದಿಷ್ಟ ಗ್ರಾಮಚಾವಡಿಯಲ್ಲಿ ತಾ. ೨೭ನೇ ದಿವಸ ಮ॥ ರಾ॥ ಸಂಜೀವ ಶೆಟ್ಟಿ ಬಿ. ಎ. ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಜರಗಿತು.

ಜನೋಪಕಾರಿಗಳೂ ದಯಾಳುಗಳೂ ಆದ ಮಲ್ಲಾರು ಪಟೇಲರಾದ ಮ॥ ರಾ॥ ಬೆಳ್ಳಿ ಶಾಂತಪ್ಪ ಸೆಟ್ರರವರು ಕಳೆದವಾರ ಅಕಸ್ಮಾತ್ ಮರಣಪಟ್ಟರೆಂದು ತಿಳಿಸಲು ವ್ಯಸನ ಪಡುತ್ತೇನೆ. ಯಾರು ಏನು ಬಂದು ಕೇಳಿದಾಗ್ಯೂ ನಾಸ್ತಿ ಎಂದು ಹೇಳುವ ಗುಣವೆ ಇವರಲ್ಲಿ ಇದ್ದಿಲ್ಲ. ಇಲ್ಲಿಯ ಶ್ರೀ ಜನಾರ್ಧನ ದೇವಸ್ಥಾನದ ಆಡಳಿತದಾರರಾಗಿದ್ದು ದೇವಸ್ಥಾನ, ರಥ, ಮುಂತಾದ್ದು ಕಟ್ಟಿಸಿ, ವರ್ಷಂಪ್ರತಿಯೂ ಉತ್ಸವವನ್ನು ಚೆಂದಗಾಣಿಸುತಲಿದ್ದ ಈ ಮಹನೀಯವರಿಗೂ ಇವರ ಕುಟುಂಬದವರಿಗೂ ಶ್ರೀ ಜನಾರ್ಧನನೇ ಉತ್ತರೋತ್ತರವನ್ನು ಕೊಡಲಿ ಎಂದು ಪ್ರಾರ್ಥಿಸುವದಲ್ಲದೆ ಮೃತರ ಪ್ರಥಮ ಪುತ್ರನಾದ ಕುಂದಾಪುರದ ಡಾಕ್ಟರರಾದ ಮ॥ ರಾ॥ ಬಿ. ರಾಮಣ್ಣ ಸೆಟ್ಟರು, ಇವರ ಸಹೋದರರೂ ಸಹೋದರಿಯರೊಂದಿಗೆ ನಾವೂ ಸಹ ಸಂತಾಪ ಪಡುವೆವು.

ಮುಲ್ಕಿ:— ಇಲ್ಲಿಯ ನಿವಾಸಿಗಳಾದ ಮುಂಡ್ಕೂರು ಶ್ರೀನಿವಾಸ ರಾಯರು ೧೦-೧೨ ವರುಷಗಳಿಂದ ಈ ಊರಿನಲ್ಲಿ ರಾತ್ರೆ ಕಾಲದಲ್ಲಿ ಹಚ್ಚುವ ಬಗ್ಗೆ ದೀಪಸ್ತಂಭಗಳನ್ನು ಇರಿಸಿ ಈ ವರೆಗೆ ಅವುಗಳನ್ನು ಉರಿಸುತ್ತಿದ್ದರು. ಆದರೆ [illegible]

ಇಲ್ಲಿ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪಿತವಾಗಿ ಇಂದಿಗೆ ಕೆಲವು ವರ್ಷಗಳಾದವು. ಆದರೂ ಆ ಸಂಘವು ಈ ಊರಲ್ಲಿ ಇರುತ್ತದೆಂಬುದು ಸಹ ಹೆಚ್ಚಿನವರಿಗೆ ಗೊತ್ತಿರದು. ನಮ್ಮೂರಿನ ಸಂಪನ್ನರೂ ಪ್ರಮುಖ ಗೃಹಸ್ಥರೂ ಆ ಸಂಘಕ್ಕೆ ಇದು ವರೆಗೆ ಕೈಗೊಡದ್ದರಿಂದ ಜನಪ್ರಯೋಜನಕರವಾದ ಈ ಸಂಸ್ಥೆಯು ಈ ವರೆಗೆ ಈ ಊರಿಗೆ ತಕ್ಕದಾದ ಸ್ಥಿತಿಯಲ್ಲಿ ಇನ್ನೂ ಅಭಿವೃದ್ಧಿಯನ್ನು ಹೊಂದಿರುವದಿಲ್ಲ. ಈ ಸಂಘದ ಪ್ರಯೋಜನವನ್ನು ಹೊಂದತಕ್ಕವರಾದ ಸಾಮಾನ್ಯ ತರಗತಿಯ ವ್ಯಾಪಾರಸ್ಥರೂ ರೈತರೂ ಈ ಊರಿನಲ್ಲಿ ಹೆಚ್ಚು ಜನರಿದ್ದರೂ ಅಂಥವರು ಈ ಸಂಘದ ಪ್ರಯೋಜನವನ್ನು ಹೊಂದುವಂತೆ ಬೇಕಾದ ಮಾಹಿತಿಯನ್ನೂ ಅದರ ಪ್ರಯೋಜನವನ್ನೂ ತಿಳಿಯಪಡಿಸಿ ಅವಶ್ಯವಿರುವ ಸೌಕರ್ಯಗಳನ್ನು ಕಲ್ಪಿಸಿಕೊಡುವ ಬದಲಾಗಿ ಆ ಸಂಘವನ್ನು ಇಲ್ಲಿಂದ ಕಾರನಾಡ ಅತ್ತಕಡೆಗೆ ಅಟ್ಟಿಸಿಬಿಟ್ಟಿರುವರು. ಯೂನಿಯನಿನ ಮೆಂಬರರಾಗುವಷ್ಟು ಯೋಗ್ಯತೆಯ ಗೃಹಸ್ಥರು ನಮ್ಮ ಊರಲ್ಲಿದ್ದು ಲೋಕಹಿತಕರವಾದ ಈ ಸಂಸ್ಥೆಯ ವಿಷಯ ಉದಾಸೀನಭಾವದಿಂದಿರುವದು ನಮ್ಮ ಊರಿನ ದುರಾದೃಷ್ಟವೆಂದೇ ಹೇಳಬೇಕು.

ಮಹಾಯುದ್ಧದ ಕಾರಣ ಎಲ್ಲ ಸಾಮಗ್ರಿಗಳಿಗೆ ಬೆಲೆ ಏರಿದರೂ ದವಸಧಾನ್ಯಗಳ ಕ್ರಯವು ಮತ್ತಷ್ಟು ಹೆಚ್ಚಿರುವದು. ಈಚೆಗೆ ಕೆಲವು ಸಮಯದಿಂದ ಅಕ್ಕಿಯ ಕ್ರಯವು ತಗ್ಗದೆ ಏರಿರುವದರಿಂದ ಬಡಬಗ್ಗರ ಜೀವನವು ಸಂಕಷ್ಟಕರವಾಗಿ ಪರಿಣಮಿಸಿರುವದು. ಅದಲ್ಲದೆ ಮಳೆಗಾಲದಲ್ಲಿ ಅಕ್ಕಿ ಧಾರಣೆಯು ಇನ್ನಷ್ಟು ಏರುವ ಸಂಭವವು ಕಂಡು ಬರುತ್ತದೆ. ಕಳೆದ ವರ್ಷ ಕಡಿಮೆ ಕ್ರಯದಲ್ಲಿ ಅಕ್ಕಿ ಮಾರುವಂತೆ ಇಲ್ಲಿಯ ಸಾಹುಕಾರರಲ್ಲಿ ಆಲೋಚನೆ ನಡೆದು ಗೇಣಿ ಅಕ್ಕಿ ವಸೂಲಿ ಹೋದ್ದರಿಂದ ಸಾಧ್ಯವಿಲ್ಲೆಂದು ಆ ಆಲೋಚನೆಯು ಬಿದ್ದು ಹೋಯಿತು. ಆದುದರಿಂದ ಈ ವರ್ಷ ಗೇಣಿ ಅಕ್ಕಿ ಮುಗಿಯುವ ಮುಂಚೆಯೇ ಈ ಆಲೋಚನೆಯನ್ನು ಮಾಡಿದರೆ ಬಡಬಗ್ಗರಿಗೆ ಬಹಳ ಉಪಕಾರವಾಗುತ್ತಿತ್ತು. ಆದರೂ ಕಳೆದ ವರ್ಷ ವರ್ತಕರಾದ ರಾಮನವರೆಂಬ ಚಿಲ್ಲರೆ ಅಂಗಡಿಕಾರರೊಬ್ಬರು ಕೆಲವು ಮುಡಿ ಅಕ್ಕಿಯನ್ನು ಕಡಿಮೆ ಕ್ರಯದಲ್ಲಿ ಮಾರಿರುವರು. ಚಿಲ್ಲರೆ ಅಂಗಡಿಗಾರರಲ್ಲಿ ಮೂಡಿದ ಈ ಪರಿಣಾಮವು ನಮ್ಮೂರಿನ ಸಂಪನ್ನ ಗೃಹಸ್ಥರಲ್ಲಿ ಉದಯಿಸುತ್ತಿದ್ದರೆ ಬಡಬಗ್ಗರಿಗೆ ಎಷ್ಟೋ ಉಪಕಾರವಾಗುತ್ತಿತ್ತು. ದಯೆ, ಕರುಣೆ, ಪರೋಪಕಾರ ಮೊದಲಾದ ದೈವೀ ಗುಣಗಳಿಗೆ ನಮ್ಮೂರಿನ ಸಂಪನ್ನ ಗೃಹಸ್ಥರ ವಿಶಾಲವಾದ ಹೃದಯದಲ್ಲಿ ಒಂದಿಷ್ಟಾದರೂ ಎಡೆ ದೊರಕದೆ?

ಇಲ್ಲಿಯ ಯೂನಿಯನ್ ಕ್ಲಬ್ ಸ್ಥಾಪಿತವಾಗಿ ಒಂದುವರೆ ವರ್ಷ ಕಳೆದು ಹೋಯಿತು. ಈ ಮೊದಲು ಇಲ್ಲಿ ಜನ್ಮವೆತ್ತಿದ ಹಲವು ಕ್ಲಬ್ಬುಗಳು ಕೆಲವು ತಿಂಗಳಲ್ಲಿಯೇ ಬಾಲಗ್ರಹದ ಪೀಡೆಯಿಂದ ಪಂಚತ್ವವನ್ನೈದಿರುವವು. ಆದರೆ ನಮ್ಮ ಜನಪ್ರೀತರಾದ ಡಾಕ್ಟರ ರಾಮರಾಯರ ಶಿಶ್ರೂಷೆಯಲ್ಲಿ ಬೆಳೆದಿರುವ ಈ ಶಿಶುವಿಗೆ ನಿರ್ವಿಘ್ನದಿಂದ ಒಂದುವರೆ ವರುಷವು ಸಂದಿರುವದು. ಈಚೆಗೆ ಕೆಲವು ಸಮಯದಿಂದ ಇದಕ್ಕೆ ಸ್ವಲ್ಪ ಬಾಲಗ್ರಹದ ಪೀಡೆಗೆ ಪ್ರಾರಂಭವಾಗಿರುವದಾಗಿ ಕಂಡು ಬರುತ್ತದೆ. ಆದರೆ ಬೋರ್ಡಿನ ಪ್ರೆಸಿಡೆಂಟರಾಗಿ ನಮ್ಮ ಡಾಕ್ಟರರವರೇ ಈ ಶಿಶುವಿನ ಪಾಲನೆಯ ಭಾರವನ್ನು ವಹಿಸಿರುವದರಿಂದ ಈ ಪೀಡೆಗೆ ಸಕಾಲದಲ್ಲಿ ತಕ್ಕ ಚಿಕಿತ್ಸೆಯನ್ನು ನಡಿಸುವರಾಗಿ ನಂಬುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಎತ್ತಲ್ಪಟ್ಟ ಯುದ್ಧದ ಸಾಲಗಳ ವಿವರ.

ಕಾಸರಗೋಡು ತಾಲೂಕು:— ಮಂಜೇಶ್ವರದ ಶ್ರೀ ಮದನಂತೇಶ್ವರ ದೇವಸ್ಥಾನ ರೂ.೯,೦೦೦; ರಾಜೇಶ್ರೀಗಳಾದ ಮಂಜೇಶ್ವರ ನರ್ಸಯ್ಯ ಶ್ಯಾನುಭಾಗ ರೂ. ೩,೦೦೦; ಮಂಜೇಶ್ವರ ವೈಕುಂಠ ಭಕ್ತ ರೂ. ೨,೦೦೦; ಬೊಬ್ಬಾಣ ಚಿಕ್ಕಪ್ಪ ನಾಯ್ಕ ರೂ.೧,೦೦೦; ಕೋಟೆಯಿಲ್ ಕುಂಞಬು ನಂಬಿಯಾರ ರೂ.೧,೦೦೦ ದಿವಾನ್ ಬಹದ್ದೂರ್ ಆ. ವೆಂಕಟರಮಣ ಪೈಗಳವರು ರೂ ೧,೦೦೦; ಇಷ್ಟಂಪಾಡಿ ಕೋಟ್ಯಕ್ಕಾಳ್ವ ರೂ. ೫೦೦; ಚೆರ್ವಾಡಿ ಕೃಷ್ಣನ್ ನಾಯರ ರೂ. ೫೦೦; ಮಂಜೇಶ್ವರ ಭವಾನಿಶಂಕರ ರಾವ್ ರೂ. ೫೦೦; ಕೆಡಂಬಾರ ತಿಮ್ಮಪ್ಪ ಶೆಟ್ಟಿ ರೂ. ೫೦೦; ಗೋವಿಂದ ಪೈ ಸಹೋದರರು ರೂ. ೫೦೦; ಮಹಮ್ಮದ್ ಚೆಮ್ನಾಡರು ರೂ. ೫೦೦; ಕೆಂಬಾರ ಕುಂಞಾಲಿಬ್ಯಾರಿ ರೂ. ೫೦೦; ಹಳೆಕೋಟೆ ಕುಂಞ ಮೈಕುಟ್ಟಿ ಬ್ಯಾರಿ ರೂ. ೫೦೦; ಮಾಡೂರು ತಿಮ್ಮಣ್ಣ ಬಂಟ ರೂ. ೫೦೦; ವಿಲಿಯಕಥು ಪದ್ಮನಾಭ ಅರಸ ರೂ. ೫೦೦; ವಿಷ್ಣು ಕೊಕ್ಕಿಲಾಯ ರೂ ೫೦೦; ತಹಸೀಲದಾರ ಎಮ್. ಅನಂತನ್ ನಾಯರರು ೫೦೦; ಡಾಕ್ಟರ್ ಸಿ. ರಾಮ ಕಾಮತರು ರೂ. ೫೦೦; ಕಾವಿಲನ್ ಕೃಷ್ಣನ್ ನಾಯರರು ೫೦೦; ಕೆ. ಶಿವರಾಯರು ರೂ. ೪೦೦; ಸ್ನಾಂಡ್ಲಾಳ್ವರು ರೂ. ೩೦೦; ಕೆ. ನರಸಿಂಗನಾಯ್ಕ ರೂ ೩೦೦; ಕೆ. ಪಿ. ಅಬ್ದುಲ್ಲ ಮತ್ತು ಮಗಂದಿಯರು ರೂ.೩೦೦; ಹೆರೂರು ತಿಪ್ಪಣ್ಣ ಆಳ್ವ ರೂ ೨೦೦; ಕನ್ನೊಟ್ಟಿ ಕಣ್ಣ ನಂಬಿಯಾರು ರೂ. ೨೦೦; ಮಂಜೇಶ್ವರ ಪದ್ಮನಾಭ ಭಟ್ಟ ರೂ ೨೦೦; ವಿಶ್ವನಾಥ ಆಚಾರರಾಯರು ರೂ.೨೦೦; ಬೇಕಲ ರಾಮಸಿಂಗರು ರೂ. ೨೦೦; ಬೇಕಲ ಅಬ್ದುಲ್ ರಹಿಮಾನರು ೨೦೦; ಕೊಪಾಲ ರಾಮಪ್ಪ ರೂ ೨೦೦; ಸಬ್ ಮೆಜಿಸ್ಟ್ರೇಟ ಎಸ್. ಬಾಬುರಾಯ ರೂ. ೨೦೦; ಶೆಕ್ಕ ಕೊವಿಲಿಯನ್ ಕೃಷ್ಣ ವರ್ಮ ರಾಜರು ರೂ. ೨೦೦; ಕೂಡಿಂಗಾನ್ ಶಂಕರ ಭಟ್ಟರು ೨೦೦; ವಕೀಲ ಸಿ. ರಾಮರಾವ್ ರೂ. ೨೦೦; ವಕೀಲ ಎಚ್ ಶ್ರೀನಿವಾಸ ಕಾಮತರು ರೂ. ೨೦೦; ಪರಮೇಶ್ವರ ಪಡಕನ್ನಾಯರು ರೂ. ೧೦೦; ಕಡವತ್ ಮಹಮ್ಮದ್ ಹಾಜಿ ಕಲ್ಲಿಕೋಟು ರೂ. ೧೦೦, ಕುಕ್ಕಾರ ತಿಮ್ಮಣ್ಣ ಭಂಡಾರಿ ೧೦೦; ಮೇಲೋತ್ ಕುಂಞಬು ನಾಯರ ರೂ. ೧೦೦; ಕಂಬಾರ್ ಅಬ್ದುಲ್ ಬ್ಯಾರಿ ರೂ. ೧೦೦; ವಿಷ್ಣು ಕುಂಡಲಾಯರ ರೂ. ೧೦೦; ತಲಂಗರೆ ಅಬ್ಬಾಸ ರೂ.೧೦೦; ಮವಕೆ ಕೋವಿಲಂಗವ್ ರವಿವರ್ಮ ಅರಸು ರೂ. ೧೦೦; ಉಪೇಂದ್ರ ದೇವಿ ಚಾಯೂಡ ರೂ. ೧೦೦; ರಾಮಪ್ಪಯ್ಯ ರೂ. ೧೦೦; ವಿಷ್ಣಯ್ಯ ರೂ. ೧೦೦; ತಿಂಬಣ್ಣ ನಾಯ್ಕ ರೂ. ೧೦೦; ಕುಂಜ ರಾಮನ್ ನಾಯರ್ ರೂ. ೧೦೦; ಯದು ಯೋಗಿ ಸುಬ್ರಾಯಭಟ್ಟರು ರೂ. ೧೦೦; ತಾಲೂಕು ಹೆಡ್ ಎಕೌಂಟಂಟ್ ಯು. ಸುಬ್ಬರಾವ್ ರೂ ೧೦೦; ವಕೀಲ ಸಿ. ಮಂಜುನಾಥ ಕಾಮತರು ರೂ. ೧೦೦; ವಕೀಲ ಸಿ. ಆನಂದರಾವ್ ರೂ. ೧೦೦; ವಕೀಲ ಎಸ್. ವಿ. ರಾಮರಾವ್ ೧೦೦; ಶಿವಿಸ್ಮಾ ಇನ್ಸಪೆಕ್ಟರ್ ಜಿ. ಶ್ರೀನಿವಾಸ ಶ್ಯಾನಭಾಗ ರೂ. ೧೦೦; ಜುಮ್ಲಾ ೫೯,೦೦೦ ೧೦೦ರ ಕೆಳಗಿನ ಸಾಲಗಳ ಜುಮ್ಲಾ ರೂ. ೧೨೨೦ನ್ನು ಕೂಡಿಸಿ ಒಟ್ಟು ಜುಮ್ಲಾ ರೂ. ೩೦,೮೨೦.

ಉಡ್ಪಿ ತಾಲೂಕು, ಉಡ್ಪಿ:— ಖಾನ್ ಸಾಹೇಬ್ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬ ಬಹದ್ದೂರ್ ರೂ. ೫೦೦೦; ಕಲ್ಯಾಡಿ ಸುಬ್ಬರಾವ್ ಮತ್ತು ರಾಘವೇಂದ್ರ ರಾವ್ ರೂ. ೨೦೦೦; ಅಂಬಾರ ಸಯ್ಯದ್ ಅಬ್ಬಾಸಾಹೇಬ ಬಹದ್ದೂರ್ ರೂ. ೧,೫೦೦; ಮೂಡುಬೆಟ್ಟು ತಿಮ್ಮಪ್ಪ ಹೆಗ್ಗಡೆರು ರೂ. ೧,೫೦೦; ರಾಮಣ್ಣ ಹೆಗಡೆ ಅಂಜಾರು ರೂ. ೧,೨೦೦; ಬಡಗುಬೆಟ್ಟು ರಾಮಯ್ಯ ಹೆಗಡೆರು ರೂ. ೧,೦೦೦; ಕಿಂಜೂರು ವ್ಯಾಸರಾಯರು ರೂ. ೧,೦೦೦; ಕೆಮ್ಮು ಜೋರ್ಜ ರೆಬೆಲ್ಲೊ ರೂ. ೧,೦೦೦; ರಾಘವೇಂದ್ರರಾವ್ ಯಾನೆ ವೆಂಕಪ್ಪಯ್ಯ ಕಡೇಕಾರ್ ರೂ. ೧,೦೦೦; [illegible] ಕೃಷ್ಣರಾವ್ ಕಡೇಕಾರ್ ರೂ. ೧,೦೦೦; ಮು. ಉಜರಸಿಂಗರಾವ್ ರೂ. ೧,೦೦೦; ಡಾಕ್ಟರ ಪಿ. ಶಂಕರನಾರಾಯಣ ರೂ. ೧,೦೦೦; [illegible] ಗಿರಿರಾವ್ ರೂ. ೫೦೦; ತಹಸೀಲದಾರ [illegible] ರೂ. ೫೦೦; [illegible] ಮೆಜಿಸ್ಟ್ರೇಟ್ ಆರ್. [illegible] ರೂ. ೫೦೦; [illegible]

ಅನುಕ್ರಮಣಿಕೆ.

	ಪಾನು.
ಅಗ್ರಲೇಖ:—	
ಇದುವೆ ಸಹಾನುಭೂತಿಯ ಭಾಷಣ	೪
ಸ್ಫುಟವಿಚಾರಗಳು:—	
೧ ಶಿಕ್ಷಣ ಪ್ರಸ್ತಾಪಗಳು	೪-೫
೨ ,,	,,
೩ ,,	,,
೪ ಕಾಯಿದೆ ಕೌನ್ಸಿಲಿನಲ್ಲಿ ಬಂದ ಠರಾವುಗಳು	,,
೫ ಮಂಗಳೂರಿನಲ್ಲಿ ಸಿಪ್ಪರ್ಸ್ ಕೋಒಪರೇಟಿವ್ ಸೊಸಾಯಿಟಿ	,,
ವರ್ತಮಾನ ಸಂಗ್ರಹಗಳು:—	
ಸ್ಥಳಿಕ — ಮಂಗಳೂರು	೫
೧ ಯೂರೋಪದ ಮಹಾಯುದ್ಧ	೭
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದೂಸ್ಥಾನ	,,
೪ ದಕ್ಷಿಣ ಹಿಂದುಸ್ಥಾನ	
೫ ಬಾಕಿ ಪತ್ರಗಳು, ಮುಲ್ಕಿ, ಕಾಪು, ಬಂಟವಾಳ.	,,
೬ ನಮ್ಮ ಜಿಲ್ಲೆಯಲ್ಲಿ ಎತ್ತಲ್ಪಟ್ಟ ಯುದ್ಧ ಸಾಲ.	೭-೬
೭ ಗವರ್ನರ ದೊರೆಗಳ ಭಾಷಣ.	೬
೮ ಪತ್ರವ್ಯವಹಾರ	,,

ಸ್ವದೇಶಾಭಿಮಾನಿ.

ಶಕ ೧೮೩೮ ಜ್ಯೇಷ್ಠ ಶು. ೧೧ ಶುಕ್ರವಾರ.

ಇದುವೆ ಸಹಾನುಭೂತಿಯ ಭಾಷಣ!

ಪ್ರತಾಪಶಾಲಿಗಳಾದ ನಮ್ಮ ಗವರ್ನರ ದೊರೆಗಳು ಬೇಸಿಗೆಯ ಕೌನ್ಸಿಲಿನ ಅಧಿವೇಶನವನ್ನು ಮುಗಿಸುವಾಗ ಮಾಡಿದ ಭಾಷಣದ ಸಾರಾಂಶವನ್ನು ಇನ್ನೊಂದು ಕಡೆಯಲ್ಲಿ ಕೊಟ್ಟಿರುವೆವು. ಆ ಭಾಷಣವನ್ನು ವಾಚಕರು ಓದಿದರೆ ಸಾಕಾಗಿದೆ; ಆ ವಿಚಾರಸರಣಿಯ ಏಕದೇಶಿತ್ವ, ಉಗ್ರತ್ವ ಹಾಗು ಆ ಭಾಷಣದಿಂದ ಕಂಡು ಬರುವ ಗವರ್ನರ ದೊರೆಗಳ ಮಾನಸಿಕ ಸ್ಥಿತಿ, ಬ್ರಿಟಿಷ್ ಮುತ್ಸದಿಗಳ ಸ್ವಾಭಾವಿಕವಾದ ಔದಾರ್ಯ, ಮತ್ತು ಸ್ವಾತಂತ್ರ್ಯ ಪ್ರೀತಿಯನ್ನು ತೋರಿಸಿ ಜನತೆಯ ನ್ಯಾಯ್ಯ ಪರಂತು ನಮ್ರವಾದ ಆಕಾಂಕ್ಷೆ ಹಾಗೂ ಕಾಯಿದೆಗೂ ಸ್ವಸ ರಿಗೂ ಅನುವಾಗಿರುವ ಪ್ರಯತ್ನ ಇವುಗಳನ್ನು ತಪ್ಪಿಸಲು ದೊರೆಗಳು ತಮ್ಮ ಭಾಷಣದಲ್ಲಿ ಅಪ್ರತ್ಯಕ್ಷ ರೀತಿಯಿಂದ ಕೊಟ್ಟಿರುವ ಸೂಚನೆ ಇವುಗಳನ್ನೆಲ್ಲ ಪುನಃ ನಮ್ಮ ಟೀಕೆಯಿಂದ ಸ್ಪಷ್ಟಪಡಿಸಬೇಕಾದ ಅಗತ್ಯವಿಲ್ಲ. ಆದರೂ ಪತ್ರಕಾರರ ಧರ್ಮದಂತೆ ಈ ಭಾಷಣದ ಸ್ವರೂಪವನ್ನು ತೋರಿಸುವುದು ನಮ್ಮ ಪಾಲಿಗೆ ಬಂದಿದೆ.

ಕ್ರಮದಂತೆ ನೋಡುವಾಗ ನಮ್ಮ ಲೊರ್ಡ ಪೆಂಟಲೇಂಡ ದೊರೆಗಳ ಪ್ರಾಂತಾಧಿಪತಿತ್ವದ ಮುದಕು ಮುಗಿಯುತ್ತ ಬಂದಿದೆ. ಅವರ ಆಳಿಕೆಯ ಪೂರ್ವಾರ್ಧದಲ್ಲಿ ಅವರ ಮನಃಸ್ಥಿತಿಯು ಕೊಂಚವೂ ತಳಿಸಿದ್ದಾಗಿ ಕಂಡುಬರಲಿಲ್ಲ. ಆದರೆ ಇತ್ತಲಾಗಿನ ಅವರ ಕೌನ್ಸಿಲು ಭಾಷಣಗಳನ್ನು ಕೇಳುವಾಗ ಅವರು ಹೇಳುವಂತೆ ಜನತೆಯೇ ದಿನೇ ದಿನೇ ಉಚ್ಛೃಂಖಲವಾಗುತ್ತ ಹೋಗಿದೆಯೊ ಅಥವಾ ಅವರ ಮನಸ್ಸೆ ಎಂಗ್ಲೊ ಇಂಡಿಯನ್ ವಿಚಾರಗಳಲ್ಲಿ ಮುಣುಗ ಹತ್ತಿದೆಯೊ ಇದಾವದೂ ಗೊತ್ತಾಗದು. ಗವರ್ನರ ದೊರೆಗಳು ಮೊದಲಿನಂತೆಯೇ ಉದಾರ ಮನಸ್ಕರಿದ್ದಾರೆ. ಜನರ ವರ್ತನವು ಮಾತ್ರ ಸರಿಯಾಗಿಲ್ಲ, ಎಂದಾಲೋಚಿಸೋಣೆಂದರೆ, ಅದಕ್ಕೂ ಎಡೆ ಇಲ್ಲ. ಇದಕ್ಕೆ ಲೊ ಪೆಂಟಲೇಂಡರ ಮಾತನ್ನೆ ಉದಾಹರಿಸ ಬಹುದು. "ರಾಜಕಾರಣವೂ ವಿದ್ಯಾರ್ಥಿಗಳೂ" ಈ ವಿಷಯದಲ್ಲಿ ಹೊರಟ ಸರಕಾರಿ ಸರ್ಕ್ಯೂಲರಿನ ವಿಷಯವನ್ನು ಸಮರ್ಥಿಸುವಾಗ ಲೊ| ಪೆಂಟಲೇಂಡರು ಮದ್ರಾಸ ಪ್ರಾಂತ್ಯದೊಳಗಿನ ಕೊಲೇಜ ವಿದ್ಯಾರ್ಥಿಗಳ ವರ್ತನವು ಆಕ್ಷೇಪಾರ್ಹವಿಲ್ಲ. ಮತ್ತು ವಿದ್ಯಾರ್ಥಿಗಳ ಯಾವದಾದರೂ ಕೃತ್ಯದಿಂದ ಈ ಸರ್ಕ್ಯೂಲರನ್ನು ಹೊರಡಿಸಿದ್ದಿಲ್ಲ, ಎಂದು ಸ್ಪಷ್ಟವಾಗಿ ಅಭಿಪ್ರಾಯ ಪಡುವರು. ಈ ಅಭಿಪ್ರಾಯವನ್ನು ಆಲೋಚಿಸಿದರೆ, ಸರಕಾರದ ಪ್ರವೃತ್ತಿಗೆ ಜನರ ನಡತೆಯೆ ಕಾರಣವಾಗಬೇಕಾಗುತ್ತದೆಂಬ ಸಿದ್ಧಾಂತವನ್ನಿಟ್ಟುಕೊಳ್ಳಲು ಆಗುವದಿಲ್ಲ. ಇಷ್ಟರ ವರೆಗೆ ವಿದ್ಯಾರ್ಥಿಗಳು ಮಾಡಿದ ತಪ್ಪು ಯಾವದೂ ಇಲ್ಲ. ಆದರೂ ಅವರ ಹಿತಸಾಧನಕ್ಕಾಗಿಯೇ ಇದು ಹೊರಟದಂತೆ, ಸಾಕ! ವಿದ್ಯಾರ್ಥಿಗಳ ಯೋಗಕ್ಷೇಮದ ವಿಷಯದಲ್ಲಿ ಸರಕಾರಕ್ಕೆ ಇಷ್ಟು ಯೋಚನವು ಯಾಕೆ? ಮುಂದೆ ಸಂಭವಿಸತಕ್ಕ ಆಪತ್ತುಗಳನ್ನು ಮೊದಲಿನಿಂದಲೆ ನಿವಾರಿಸುವದು ಉತ್ತಮವೆ, ಆದರೆ ಅಸಂಭವನೀಯವಾದ ಸಂಗತಿಗಳನ್ನು ವೃಥಾ ಕಲ್ಪಿಸಿಕೊಂಡು ಅವುಗಳನ್ನು ಪ್ರತಿಕರಿಸಲು ಹೊರಡುವದೆಂದರೆ ಆಕಾಶವು ಜಾರಿ ಬಿದ್ದು, ಲೋಕವೆಲ್ಲ ಹಾಳಾದೀತೆಂಬ ಭಯದಿಂದ ಟಿಟ್ಟಿಭ ಪಕ್ಷಿಯು ಮೇಲಕ್ಕೆ ಕಾಲು ಚಾಚಿ ಮಲಗುವಂತೆಯೆ ಸರಿ. ಟಿಟ್ಟಿಭವು ತನ್ನ ಕಾಲುಗಳನ್ನು ಮೇಲಕ್ಕೆ ಚಾಚುವದರಿಂದ ಅದಕ್ಕೆ ಮಾತ್ರ ಶ್ರಮವಾದೀತು. ಮತ್ತು [illegible] ಅದನ್ನು ನೋಡಿ ಜನರಿಗೆ ಅದರ ಮೂರ್ಖ ಬುದ್ಧಿಯ ಬಗ್ಗೆ ನಗು ಬಂದೀತು, ಹೊರತು ಲೋಕಕ್ಕೆ ಅದರಿಂದ ಬಾಧಕವೇನೂ ಇಲ್ಲ, ಪರಂತು ಇಲ್ಲದ ಸಂಗತಿಯನ್ನು ಮನಸ್ಸಿಗೆ ತಂದುಕೊಂಡು ನಿಷ್ಕಲಂಕ ವಿದ್ಯಾರ್ಥಿಗಳ ಸ್ವಾಭಾವಿಕ ಹಕ್ಕುಗಳನ್ನು ಸಂಕೋಚಿಸುವದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಿಲ್ಲವೆ? ನಮ್ಮ ಗವರ್ನರರು ಮಾತ್ರ ಹೀಗೆ ನೆನೆಸಿಕೊಳ್ಳುವುದಿಲ್ಲ. ವಿದ್ಯಾರ್ಥಿಗಳಿಗೆ ತಂತಮ್ಮ ಕೊಲೇಜಿನ ಡಿಬೆಟಿಂಗ್ ಸೊಸಾಯಿಟಿಗಳಲ್ಲಿ ಜಗತ್ತಿನೊಳಗಿನ ಬೇಕಾದ ರಾಜಕೀಯ ವಿಷಯವನ್ನು ಚರ್ಚಿಸಲು ಪ್ರತಿಬಂಧವಿಲ್ಲ. ಅವರ ಸ್ವಾಭಾವಿಕ ಹಕ್ಕಿಗೆ ಈ ಸರ್ಕ್ಯೂಲರಿನಿಂದ ಬಾಧಕವಿಲ್ಲ. ಹೀಗೆಯೆ ನಮ್ಮ ಗವರ್ನರರು ತಿಳಿಯುತ್ತಾರೆ. ಚಿಕ್ಕ ಕೋಣೆಯಲ್ಲಿ ಒಂದು ಪಾಗವನ್ನು ಹಾಕಿ ಪಾಗ! ಇದೆ ನಿನ್ನ ಲೋಕ! ಎಂದು ಹೇಳುವದು ಎಷ್ಟು ಸಮಂಜಸವೊ ಅಥವಾ ಅತ್ತಿ ಹಣ್ಣಿನೊಳಗಿನ ಹುಳವು "ಇದೇ ಲೋಕವು ಇದರಲ್ಲಿಯೆ ಇದೆ" ಎಂದು ತಿಳಿಯುವದು ಎಷ್ಟು ಸಮರ್ಪಕವೊ ಅಷ್ಟೆ ವಿದ್ಯಾರ್ಥಿಗಳಿಗೆ ಕೊಲೇಜಿನ ಸೊಸೈಟಿಗಳೆ ಲೋಕವೆಂದು ಹೇಳುವುದು ಸಮರ್ಪಕವಾಗಿದೆ. ಈಗ ಸುಧಾರಿಸಿದ ಬೇರೆ ದೇಶಗಳಲ್ಲಿಯು— ಯಾಕೆ, ಸ್ವತಃ ಇಂಗ್ಲೆಂಡಿನೊಳಗಿನ—ವಿದ್ಯಾರ್ಥಿಗಳಿಗೆ ರಾಜಕೀಯ ವಿಷಯಗಳನ್ನು ಚರ್ಚಿಸಲು ಮಾತ್ರವಲ್ಲ, ದೊಡ್ಡ ದೊಡ್ಡ ರಾಜಕೀಯ ಸಭೆಗಳಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡಲು, ಎಷ್ಟು ಸ್ವಾತಂತ್ರ್ಯವಿದೆ ಎಂಬದನ್ನು ಗವರ್ನರ ದೊರೆಗಳಿಗೆ ನಾವು ಹೇಳಬೇಕಾಗಿಲ್ಲ. ವಿದ್ಯಾರ್ಥಿ ದಶೆಯಲ್ಲಿ ಸ್ವಯಂ ತಮಗೆಯೆ ಎಷ್ಟು ಸ್ವಾತಂತ್ರ್ಯವಿತ್ತೆಂಬುದನ್ನು ಅವರೇ ಸ್ಮರಿಸಿ ಕೊಳ್ಳಬಹುದು. ಇಲ್ಲವೆ ಈ [illegible] [illegible] ಕೆಂಬ್ರಿಜ್ [illegible] ವಿಶ್ವವಿದ್ಯಾಲಯದೊಳಗಿನ ವಿದ್ಯಾರ್ಥಿಗಳ [illegible] ಉದಾಹರಣೆಗಳನ್ನಾದರೂ [illegible]. [illegible] ಪೆಂಟಲೇಂಡರು ಈ ಎಲ್ಲ ವಸ್ತುಸ್ಥಿತಿಗಳ ಕಡೆಗೆ ಕಣ್ಣೆತ್ತಿ ನೋಡರು. ಮದ್ರಾಸ ಪ್ರಾಂತ್ಯದ ಪ್ರೌಢ ವಿದ್ಯಾರ್ಥಿಗಳು ಸಹ ಈ ಸರ್ಕ್ಯೂಲರಿನ ಬೇಡಿಯನ್ನು ಕಟ್ಟಿಕೊಂಡರು. ಮಾತ್ರವಲ್ಲ, ಸರಕಾರವು ವಿದ್ಯಾರ್ಥಿಗಳಿಗೆ ಹಾಕಿಕೊಟ್ಟ ಈ ಪ್ರತಿಬಂಧವು ಅವರ ಹಿತಕ್ಕಾಗಿರುವದರಿಂದ ಕೊಲೇಜು ಅಧಿಕಾರಿಗಳು ಮತ್ತು ಸಾಮಾನ್ಯ ಜನರ ಅನಾಸ್ಥೆಗೆ ಪಾತ್ರವಾಗಲಿಲ್ಲೆಂದು ಹೇಳಿ, ತಮ್ಮ ಕೃತ್ಯಕ್ಕೆ ಲೋಕಮತದ ಬೆಂಬಲವನ್ನು ಸ್ಪಷ್ಟ ಶಬ್ದಗಳಿಂದ ತೋರಿಸಹತ್ತಿರುವರು. ಸದರಿ ಸರ್ಕ್ಯೂಲರು ಪ್ರಸಿದ್ಧವಾದಂದಿನಿಂದ ಹಿಂದಿ ಪತ್ರಕಾರರೂ— ಬರೆ ಮದ್ರಾಸ ಪ್ರಾಂತ್ಯದವರು ಮಾತ್ರವಲ್ಲ, ಬೇರೆ ಪ್ರಾಂತ್ಯದ ಪತ್ರಕಾರರೂ ಪ್ರಾಂತಿಕ ಮತ್ತು ಜಿಲ್ಲಾ ಪರಿಷತ್ತುಗಳೂ, ಕಾಯಿದೆ ಕೌನ್ಸಿಲಿನ ಸಭಾಸದರೂ, ಈ ಸರ್ಕ್ಯೂಲರಿನ ಬಗ್ಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಗೊಳಿಸುವಾಗ ತುಂಬಿದ ಕೌನ್ಸಿಲಿನಲ್ಲಿ ಗವರ್ನರರು ತಮ್ಮ ಸರಕಾರಿ ಕೃತ್ಯವನ್ನು ಬೇರೆ ಯೋಗ್ಯ ಲೋಕಮತವೆ ಆಧಾರವೆಂಬಂತೆ ವಿನೂ ಸಂಕೋಚಪಡದೆ ಸಮರ್ಥಿಸಲು ಯತ್ನಿಸುವದು ಗವರ್ನರರಂಥ ಉನ್ನತಪದವಿಯವರಿಗೆ [illegible]. ವಿದ್ಯಾರ್ಥಿಗಳ ಹಿತಕ್ಕಾಗಿ ಈ ಸರ್ಕ್ಯೂಲರು ಜನ್ಮಿಸಿದೆಂದು ಪುನಃ ಪುನಃ ಅದರ ಜನ್ಮಕಥೆಯನ್ನು ಹೇಳುವವರು ಆ ವಿದ್ಯಾರ್ಥಿಗಳ ಹಿತವನ್ನು ನೋಡುವ ಕಂಟ್ರಾಕ್ಟನ್ನು ತಾವೆ ತಕ್ಕೊಂಡಿದ್ದೇವೆಂದು ಅಷ್ಟು ತೀವ್ರತೆಯನ್ನು ಪ್ರದರ್ಶಿಸುವದಕ್ಕೆ ಯಾವ ಹೆಸರು ಕೊಡಬೇಕೆಂಬುದು ಗೊತ್ತಾಗುವದಿಲ್ಲ. ಇರಲಿ.

ಲೊರ್ಡ ಪೆಂಟಲೇಂಡರ ಭಾಷಣದಲ್ಲಿ ಇನ್ನೊಂದು ವಿಚಾರಣೀಯವಾದ ಅಂಶವಿದೆ. ಈ ಮಹಾಯುದ್ಧದಿಂದ ಇಡಿ ಲೋಕದಲ್ಲಿ ವಿಲಕ್ಷಣವಾದ ಜಾಗೃತಿ ಕಿಂಬಹುನಾ ಕ್ರಾಂತಿಯು ಉಂಟಾಗಿದೆ. ಮಹಾಯುದ್ಧದ ಹೊಳೆಯು ಯೂರೋಪದ ಒಂದು ಕಡೆಯಲ್ಲಿ ಹೊತ್ತಿಕೊಂಡಿರುವಾಗ ಇನ್ನೊಂದು ಕಡೆಯಲ್ಲಿ ಸಾಮ್ರಾಜ್ಯದ ಪುನರ್ಘಟನೆ, ಪಾರ್ಲಿಮೆಂಟಿನ ಸ್ವರಾಜ್ಯ, ದೇಶದೇಶಗಳಲ್ಲಿ ವ್ಯಾಪಾರ ಪ್ರಚಾರಣ ಮುಂತಾದ ಪ್ರಶ್ನೋತ್ತರ [illegible] ಪ್ರಸ್ತಾಪಗಳು ನಡೆಯುತ್ತವೆ. ಈ ಸಂಗತಿಗಳು ನಮಗೆ ಗೊತ್ತಿಲ್ಲವೆ ಅಥವಾ ಗವರ್ನರರಿಗೆ ಗೊತ್ತಿಲ್ಲವೆ? ಆದರೂ ಪುನಃ ಅವರು "ಹಿಂದುಸ್ಥಾನದೊಳಗಿನ ಮುಖಂಡರು ಸ್ವರಾಜ್ಯದ ಚಳವಳವನ್ನು ಉಪಸ್ಥಿತಪಡಿಸಲು ಇದು ಸಮಯವಲ್ಲ" ಎಂದು ಗದರಿಸಿ ಹೇಳುತ್ತಾರೆ! ಹೌದು. ಆದರೆ ಇದಕ್ಕೆ ಶುಭಮುಹೂರ್ತವು ಯಾವದೆಂದು ಬಿಚ್ಚಿ ಭಾವಿಕರು ಇವರ ಭಾಷಣದ ಹಾಳೆಗಳನ್ನು ಮಗಚಿ ನೋಡಿದರೆ ಅವರು ಹೇಳುವ ಮುಹೂರ್ತವು ಭಾವಿಕರ [illegible] ಸಿಕ್ಕಿಹೋಗುವದು. ಈ ಯುದ್ಧ ಸಮಯದಲ್ಲಿ ಸ್ವರಾಜ್ಯವನ್ನು ಕೇಳಿಕೊಳ್ಳುವದು ಹೇಗೆ ಅಸಮಂಜಸವಾದ ಸಂಗತಿ ಎಂಬದು ನಮಗೆ ಗೊತ್ತಾಗದು. ಸಾಮ್ರಾಜ್ಯದೊಳಗಿನ ಬೇರೆ ಬೇರೆ ಭಾಗದವರು ದೂರದೃಷ್ಟಿಯಿಂದ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸಿಕೊಳ್ಳುವಾಗ ಹಿಂದಿ ಜನರು ಮಾತ್ರ ಕೇವಲ ಮೂಕಭಾವದಿಂದ ಕುಳಿತುಕೊಳ್ಳುವದೆಂದರೆ ಮನುಷ್ಯಸ್ವಭಾವಕ್ಕೆ ತೀರ ವಿರುದ್ಧವಾದದ್ದು. ಸಾಮ್ರಾಜ್ಯ ಸರಕಾರವು ಯುದ್ಧದಲ್ಲಿ ತೊಡಗಿದೆ ಎಂಬದೆನ್ನು ಹಿಂದುಸ್ಥಾನವು ಹೃತ್ಪೂರ್ವಕವಾಗಿ ತಿಳಿದುಕೊಂಡಿದೆ. ಸಾಮ್ರಾಜ್ಯ ಸರಕಾರದ ಸಂಕಟಗಳಾವವೆಂಬದನ್ನು ಹಿಂದುಸ್ಥಾನವು ತಾನು ಅನುತಾಪಪಟ್ಟು ಅರಿತುಕೊಂಡಿದೆ! ಬರೆ ಈ ಸಂಗತಿಗಳನ್ನು ತಿಳಿದುಕೊಂಡೇ, ಅರಿತುಕೊಂಡೇ ಸುಮ್ಮನಿರಲಿಲ್ಲ. ತನ್ನಿಂದಾದ ಸಾಹಾಯ್ಯವನ್ನು ಮಾಡುತ್ತಿದೆ. ಕೆಲವು ಸಂದರ್ಭದಲ್ಲಿ ಶಕ್ತಿಗೆ ಮೀರಿ ಸಹ ತನ್ನ ಸಾಹಾಯ್ಯವನ್ನು ಕೊಡುತ್ತಿದೆ. ಮತ್ತು ಇದೆ ರೀತಿಯಿಂದ ಸಾಮ್ರಾಜ್ಯ ಸರಕಾರಕ್ಕೆ ಹಿಂದುಸ್ಥಾನದ ಮದತು ಆಗಬೇಕೆಂತಲು ನಮ್ಮೆಲ್ಲರ—ಹಿಂದಿ ಜನರ—ಮನಸ್ಸು. [illegible] ಬಿದ್ದಾಗ ಅದರ ಮೇಲೆ [illegible] ಈ ಮಾತನ್ನು ನಾವು ಇಡಿ ಹಿಂದುಸ್ಥಾನದ ಕಡೆಯಿಂದ ಗವರ್ನರ ದೊರೆಗಳಿಗೆ ನಮ್ರತನದಿಂದ ಅರಿಕೆಮಾಡಿಕೊಳ್ಳುವೆವು. ಹಿಂದೀ ರಾಷ್ಟ್ರವನ್ನು ಇಡಿ ಒಂದು ಶತಕದಿಂದ ಆಳುತ್ತಿರುವ ಇಂಗ್ಲಿಷ್ ಮುತ್ಸದಿಗಳು ಇನ್ನು ಹಿಂದುಸ್ಥಾನದ ರಾಜನಿಷ್ಠೆಯಬಗ್ಗೆ ಸಾಶಂಕರಾಗಿರುವದೆಂದರೆ ಈ ದೇಶದ ದುರ್ದೈವವೆಂತಲೆ ನೆನೆಸಬೇಕು. ಹಿಂದುಸ್ಥಾನದ ಮುಖಂಡರು—ವರಿಷ್ಠ ಕೌನ್ಸಿಲಿನ ೧೯ ಸಭಾಸದರು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೇಳುತ್ತಾರೆಂಬ ಪರಿಂದಲೆ ಅವರ ರಾಜನಿಷ್ಠೆಗೆ ಭಂಗಬರುವದೆ? ಸ್ವರಾಜ್ಯವನ್ನು ಕೇಳುವ ಇದೆ ಮುಖಂಡರು ಬ್ರಿಟಿಷ್ ರಾಷ್ಟ್ರಕ್ಕೆ ಮದತು ಕೊಡಬೇಕೆಂದು ಜನರನ್ನು ಪ್ರೇರಿಸುವುದಿಲ್ಲವೆ? ತಮ್ಮಿಂದಾದ ಮದತನ್ನು ಮಾಡುವದಿಲ್ಲವೆ? ಯುದ್ಧದ ಸಾಲವೆತ್ತುವ ಬಗ್ಗೆ ದೇಶಬಂಧುಗಳನ್ನು ಉಪದೇಶಿಸುವದಿಲ್ಲವೆ? ಭಾರತ ಸಂರಕ್ಷಕ ಸೈನ್ಯದ ಭರತಿಯ ಬಗ್ಗೆ ಜನರಲ್ಲಿ ಉತ್ಸಾಹವನ್ನು ಹುಟ್ಟಿಸುವದಿಲ್ಲವೆ? ಸ್ವರಾಜ್ಯವನ್ನು ಕೇಳುವ ಮುಖಂಡರು ಸರಕಾರಕ್ಕೆ ಯಾವ ಮದತನ್ನು ಮಾಡುವದಿಲ್ಲ? ಈ ಇಕ್ಕಟ್ಟಿನ ಸಮಯದಲ್ಲಿ ಸರಕಾರಕ್ಕೆ ಬೇಕಾದ ಸಾಹಾಯ್ಯವನ್ನು ಕೊಟ್ಟು ಇನ್ನೂ ಬೇಕಾದ್ದದ್ದನ್ನು ಮಾಡಲು ಸಿದ್ಧರಿದ್ದು ಬರೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೇಳಿದ್ದೆ ಅವರ ತಪ್ಪಾಯಿತೆ?

ಹಾಗೆನ್ನುವವಕ್ಷದಲ್ಲಿ ಈ ಪ್ರಶ್ನಕ್ಕೆ ವಿಚಾರಣೀಯವಾದ ಇನ್ನೊಂದು ಕವಲಿದೆ. ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೇಳುವದಾಗಲಿ ಅಥವಾ ಅದನ್ನು ಹೊಂದಲು ಕಾಯಿದೆ ಮತ್ತು ಸನದು ಇವುಗಳಿಗೆ ಅನುವಾಗಿ ಯತ್ನಿಸುವದಾಗಲಿ ತಪ್ಪಾಗದೆ ಎಂದು ನಮ್ಮ ಗವರ್ನರರು ಅಭಿಪ್ರಾಯಪಡುವದಾದರೆ, 'ಅದೆ ಸಾಮ್ರಾಜ್ಯದಲ್ಲಿ ಅಂತರ್ಗತ ಸ್ವರಾಜ್ಯವನ್ನು ಉಪಭೋಗಿಸುವ ವಸಾಹತುಗಳಿಗೆ ಹೇಗೆ ಇರಗೊಟ್ಟಿರುವಿರಿ? ಪ್ರಧಾನ ಮಂತ್ರಿಗಳಾದ ಲೊಯ್ಡ್ ಜೋರ್ಜರು ಐರಿಶ್-ಹೋಮ್‌ರೂಲಿನ ಮುಹೂರ್ತಕಂಭವನ್ನು ಯಾಕೆ ಹೂಡುವರು?' ಇವೇ ಮುಂತಾದ ಪ್ರಶ್ನೆಗಳು ಬರುವದಿಲ್ಲವೆ? ಆದರೆ ಈ ಪ್ರಶ್ನೆಗಳಿಗೆ ಬಂದಕ್ಕೂ ಲೊ. ಪೆಂಟಲೆಂಡ ಪ್ರಭುಗಳು ಉತ್ತರ ಕೊಡುವದಿಲ್ಲ. ಅವರ ಸಿದ್ಧಾಂತವು ಒಂದೆ. ಅದು ಯಾವದೆಂದರೆ— ನೀವು ಹಿಂದಿಗಳು ಸ್ವರಾಜ್ಯದಿಂದ ಬಹು ದೂರದಲ್ಲಿರುವಿರಿ. ಅದನ್ನು ಬರೆ ಧ್ಯೇಯವಾಗಿಟ್ಟುಕೊಂಡು ಮೆಲ್ಲಮೆಲ್ಲನೆ (ಕೂರ್ಮಗತಿಯಿಂದಲೆ) ಮುಂದರಿಸಿರಿ. ನಿಮ್ಮಲ್ಲಿ ೧೦೦ ಅಕೆಯ ರಾಜನಿಷ್ಠೆಯು ಇರಬೇಕು. ಮಾತಿನಲ್ಲಿ ರಾಜನಿಷ್ಠೆಯ ಮಂಗಲಾಚರಣವನ್ನು ಮಾಡಿ ಸಾಮ್ರಾಜ್ಯದೊಡನೆ ಸಂಬಂಧವನ್ನು ತೋರಿಸಲು ಅಂತರ್ಗತ ಸ್ವರಾಜ್ಯದ ಹೆಸರು ಕೊಟ್ಟು ಅಧಿಕಾರಿಗಳ ಕೃತ್ಯಗಳನ್ನು ದೂಷಿಸುವದು ಪರಸ್ಪರ ವಿಸಂಗತವಲ್ಲವೆ? ಇದು ನಿಜವಾದ ರಾಜನಿಷ್ಠೆಯಲ್ಲ ಎಂದು ನಮ್ಮ ಪ್ರಾಂತಾಧಿಪತಿಗಳು ಒತ್ತಿ ಹೇಳುವರು. ಈ ವಿಧಾನಕ್ಕೆ ಪ್ರಜೆಗಳ ಹತ್ತರ ಉತ್ತರವಿಲ್ಲೆಂದಿಲ್ಲ, ಅಧಿಕಾರಿಗಳಲ್ಲಿ ಅನೇಕ ತರದ ವಿಸಂಗತತ್ವದ ಉದಾಹರಣಗಳನ್ನು ತೋರಿಸಬಹುದು. ಆದರೆ ನಮ್ಮ ಗವರ್ನರರೆ ಹೇಳಿದಂತೆ ಏಕಪಕ್ಷೀಯ ವಾದವು ಬಹು ಸುಲಭವಿದ್ದರೂ ನಿಷ್ಪ್ರಯೋಜನವಾದದಿಂದ ವೃಥಾ ಶ್ರಮವು ಮಾತ್ರ ಸೆರಗಿನಲ್ಲಿ ಬೀಳುವದು. ಆದ್ದರಿಂದ ಟೀಕೆಯ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡುವೆವು.

ತಾತ್ಪರ್ಯ ಕೌನ್ಸಿಲಿನ ಅಧಿವೇಶನವು ನೀಲಗಿರಿಯ ಶೀತಲ ಹವೆಯಲ್ಲಿ ಆದರೂ ನಮ್ಮ ಪ್ರಭುಗಳ ಬಾಯಿಯಿಂದ ಹೊಂಟ ವಿಚಾರಸರಣಿಯನ್ನು ನೋಡುವಾಗ ಆ ಶೀತಲಹವೆಯ ಪರಿಣಾಮವೇನೂ ಆ ಮಾತುಗಳಲ್ಲಿ ಆಗಲಿಲ್ಲೆಂತಲೆ ನಮಗೆ ಬಹು ಕಷ್ಟದಿಂದ ಹೇಳಬೇಕಾಗುತ್ತದೆ. ಕನಿಷ್ಟಪಕ್ಷಕ್ಕೆ ಈ ಬಿರುಸು ವಿಚಾರಗಳಿಂದ ಸಭಾಸದರಿಗಾದರೂ ಘಟಕಮಂಡಿನ ತಂಗಾಳಿಯು ಉಪಯೋಗವಾಗಿರಲಿಕ್ಕಿಲ್ಲ. ಕಾರಣ, ಈ ವಿಚಾರಗಳು ಸಹಾನುಭೂತಿಪ್ರೇರಿತವಾದವುಗಳಲ್ಲ.

ಸ್ಫುಟವಿಚಾರಗಳು.

೧ ಸರಕಾರದವರಿಂದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕುರಿತು ಪ್ರಕಟಿಸಿದ ಪುಸ್ತಕದಿಂದ ೧೯೧೪-೧೫ನೇ ಇಸವಿಯಲ್ಲಿ ಬಾಲಕರ ಶಾಲೆಗಳಲ್ಲಿ ೧,೯೬,೩೭೦ ಮಂದಿ ಹುಡುಗರು ಹೆಚ್ಚಿರುವರೆಂದು ಕಂಡುಬರುತ್ತದೆ. ಆದರೆ ಆ ವರ್ಷದ ರಿಪೋರ್ಟನ್ನು ನೋಡಿದರೆ ಈ ಸಂಖ್ಯೆಯು ತಪ್ಪೆಂದು ತಿಳಿದು ಬರುವದು. "ಇತರ ಶಾಲೆಗಳು" ಎಂಬ ಸಾಲಿನ ಶಾಲೆಗಳನ್ನು ಪ್ರಾಥಮಿಕ ಶಾಲೆಗಳೆಂದು ತಪ್ಪಾಗಿ ಗ್ರಹಿಸಿಕೊಂಡದ್ದರಿಂದ ಈ ಪ್ರಮಾದವು ಬರಲು ಕಾರಣ. ಮತ್ತು ಇತರ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಯು ೬೩,೦೦೦ಕ್ಕೆ ಕಡಿಮೆಯಾಗಿರುವದು. ೧೯೧೪-೧೫ನೇ ಇಸವಿಯಲ್ಲಿ ಹಿಂದೂಸ್ಥಾನದ ಜನಸಂಖ್ಯೆಯ ಸೇಕಡಾ ೨.೭ ಅಂದರೆ ೬೭,೦೦,೦೦೦ ಮಕ್ಕಳು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದುತ್ತಿದ್ದರು. ವಿದ್ಯಾಭ್ಯಾಸ ಹೊಂದುವವರ ಸಂಖ್ಯೆಯು ಇಲ್ಲಿಯ ಜನಸಂಖ್ಯೆಯ ಸೇಕಡಾ ೧೫ ಆಗಿರುವುದು ಎಂದು ಹೇಳುವ ಕ್ರಮವನ್ನು ಈ ವರ್ಷ ವಿದ್ಯಾಖಾತೆಯ ಕಮಿಶನರು ಮೂಲೆಗೊತ್ತಿದಂತೆ ಕಾಣುವುದು. ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯು ಕಳೆದ ವರ್ಷದಲ್ಲಿ ಸ್ವಲ್ಪ ಮಟ್ಟಿಗೆ ಏರಿದ್ದೇನೋ ನಿಜ. ಆದರೆ ಹಿಂದಿನ ವರ್ಷಗಳಲ್ಲಿ ವಿದ್ಯಾಭ್ಯಾಸವು ಉನ್ನತಸ್ಥಿತಿಗೆ ಬರುತ್ತಿದ್ದಷ್ಟು ಕಳೆದ ವರ್ಷ ಬರಲಿಲ್ಲ. [illegible]

ಆ ಬಗ್ಗೆ ವರಿಷ್ಠ ಸರಕಾರದವರು ದಯಪಾಲಿಸುವ ಗ್ರಾಂಟುಗಳನ್ನು ಇಲ್ಲಿಯ ವಿದ್ಯಾಭ್ಯಾಸವು ಹೊಂದಿಕೊಂಡಿರುವುದು ಹೀಗಾಗಲು ಕಾರಣ. ಸ್ಥಳಿಕ ಸರಕಾರದವರು ವಿದ್ಯಾ ವಿಷಯವಾಗಿ ನಿಶ್ಚೈಸಿದ ಏರ್ಪಾಟು-ವ್ಯಾಪಾರ್ಟುಗಳನ್ನು ಜಾರಿಗೆ ತರುವದಕ್ಕೆ ತಕ್ಕ ದ್ರವ್ಯಸಹಾಯ್ಯವಿಲ್ಲದೆ ಪ್ರಾಥಮಿಕ ವಿದ್ಯಾಭ್ಯಾಸವು ಇಷ್ಟು ಹೀನಸ್ಥಿತಿಯಲ್ಲಿರುವುದು. ಬಂಗಾಳದ ವಿದ್ಯಾಖಾತೆಯ ಡೈರೆಕ್ಟರರಾದ ಹೊರ್ನೆಲ್ ಸಾಹೇಬರು ಹೇಳುವದೇನೆಂದರೆ "ಹೆಚ್ಚಿನ ದ್ರವ್ಯಸಹಾಯವಿಲ್ಲದೇ ವಿದ್ಯಾಭ್ಯಾಸವು ಇನ್ನು ಮುಂದುವರಿಯದು. ಮಾತ್ರವೇ ಅಲ್ಲ ಕಳೆದ ಗ್ರಾಂಟಿನ ಸಾಹಾಯ್ಯದಿಂದ ತೊಡಗಿದ ಏರ್ಪಾಡುಗಳೆಲ್ಲವನ್ನು ನಿಲ್ಲಿಸಬೇಕಾದೀತು." ಪಂಜಾಬಿನ ಗೋಡ್ಲಿ ಸಾಹೇಬರ ರಿಪೋರ್ಟು ಕೂಡಾ ಇದೇ ಅಭಿಪ್ರಾಯವನ್ನು ಸೂಚಿಸುತ್ತದೆ. ತಕ್ಕ ರೀತಿಯಲ್ಲಿ ದ್ರವ್ಯಸಹಾಯ್ಯವು ಒದಗೀತೆಂಬ ಭರವಸೆಯು ಬರುವ ವರೆಗೆ ವಿದ್ಯೆಯ ಉನ್ನತಿಗೋಸ್ಕರ ನೂತನ ಏರ್ಪಾಡುಗಳನ್ನು ಬರೀ ಕಾಲ್ಪನಿಕ ಧನವನ್ನೆ ನಂಬಿಕೊಂಡು ಯೋಚಿಸುವದು ನಿರರ್ಥಕವಾಗಿದೆ.

೨ ಮೂಲ ವಿದ್ಯಾಭ್ಯಾಸವನ್ನು ಹಬ್ಬಿಸಲು ಹಣದ ಅನುಕೂಲತೆ ಇಲ್ಲ ಎಂಬದೊಂದೆ ಮಾತು ಸರಕಾರವು ಹಿಂದೂಸ್ಥಾನದಲ್ಲಿ ಹೇಳುತ್ತದೆ. ಆ ಬಗ್ಗೆ ಯಾವ ಯಾವ ಉಪಾಯಗಳನ್ನು ಮಾಡಬೇಕೆಂಬ ವಿಷಯದಲ್ಲಿ ಬೇರೆ ಬೇರೆ ಡಿರೆಕ್ಟರುಗಳ ಅಭಿಪ್ರಾಯವನ್ನು ೧೯೧೫-೧೬ನೆಯ ರಿಪೋರ್ಟಿನಿಂದ ತಿಳಿದುಕೊಳ್ಳಬಹುದು. ಹಿಂದೂಸ್ಥಾನದ ಸ್ಥಿತಿಯನ್ನು ಆಲೋಚಿಸುವಾಗಲೆ ಈಚೆಗೆ ಪ್ರಸಿದ್ಧವಾದ ವಿಲಾಯತಿಯೊಳಗಿನ ಶಿಕ್ಷಣ ಬೋರ್ಡಿನ ಅಧ್ಯಕ್ಷರಾದ ಮಿ. ಫಿಶರ್ ಇವರ ಯೋಜನೆಯನ್ನು ತುಲನೆಗಾಗಿ ನೋಡುವಂತಿದೆ. ಮಿ। ಫಿಶರರು ಪ್ರಸ್ತುತ ವರ್ಷದ ಖರ್ಚಿನಲ್ಲಿ ೪೦ ಲಕ್ಷ ಪೌಂಡುಗಳನ್ನು ಹೆಚ್ಚಿಗೆ ಕೂಡಿಸಿದ ಸಂಗತಿಯನ್ನು ನಾವು ಮೊದಲೆ ವಾಚಕರಿಗೆ ತಿಳಿಸಿದ್ದೇವೆ. ಸ್ಥೂಲಮಾನದಿಂದ ನೋಡುವದಾದರೆ ಅವರ ಯೋಜನೆಯಲ್ಲಿ ಎರಡು ಮುಖ್ಯ ಸಂಗತಿಗಳಿವೆ. ಉಪಾಧ್ಯಾಯರ ವೇತನವನ್ನು ಕೂಡಿದಷ್ಟು ಸಮಾಧಾನಕರ ಸ್ಥಿತಿಗೆ ತಂದು, ಅವರ ಪೆನ್‌ಶನಿನ ವ್ಯವಸ್ಥೆಯನ್ನು ಮಾಡುವದು. ಈ ಬಗ್ಗೆ ಅವರು ಪಡುವ ಅಭಿಪ್ರಾಯವೇನೆಂದರೆ, ಉಪಾಧ್ಯಾಯರಿಗೆ ಸಂಬಳವನ್ನು ಹೆಚ್ಚು ಕೊಡುವದು ವಿದ್ಯಾಭಿವೃದ್ಧಿಯ ಲಕ್ಷಣವು. ಪ್ರಾಥಮಿಕ ಮತ್ತು ಮಧ್ಯಮ ತರಗತಿಯ ವಿದ್ಯಾಭ್ಯಾಸದಲ್ಲಿ ಶಿಕ್ಷಕರಿಗೆ ಹೆಚ್ಚಿಸಿದ ಸಂಬಳವನ್ನು ಸರಕಾರವೆ ಕೊಡುವದು ವಿಹಿತವಾಗಿದೆ. ಮಿ। ಫಿಶರ ದೊರೆಗಳ ಈ ವಿಧಾನದ ಆಶಯವು ಹೇಗಾಗಿರಬಹುದೆಂದು ತೋರುತ್ತದೆ. ಹೆಚ್ಚಿಸಿದ ಹಣವನ್ನು ಸರಕಾರವು ತನ್ನ ಕೈಯಿಂದಲೆ ಕೊಡಬೇಕಲ್ಲದೆ ಆ ಬಗ್ಗೆ ವಿದ್ಯಾರ್ಥಿಗಳ ಸಂಬಳವನ್ನು ಹೆಚ್ಚಿಸುವದಾಗಲಿ ಇಲ್ಲವೆ ಲೋಕಲ್ ಬೋರ್ಡುಗಳ ತಲೆಯ ಮೇಲೆ ಈ ಭಾರವನ್ನು ಹಾಕುವದಾಗಲಿ ಯುಕ್ತವಲ್ಲ. ಅವರ ಯೋಚನೆಯೊಳಗಿನ ಇನ್ನೊಂದು ಮಹತ್ವದ ಪ್ರಸ್ತಾಪವು ಯಾವದೆಂದರೆ, ಪ್ರಾಥಮಿಕ ಶಾಲೆಯಲ್ಲಿ ಇರುವಷ್ಟು ವಿದ್ಯಾರ್ಥಿಗಳು ಮಧ್ಯಮ ತರಗತಿಗೆ ಬರುವದಿಲ್ಲ. ಮೇಲು ಮೇಲಿನ ವಿದ್ಯೆಯನ್ನು ಪಡಕೊಳ್ಳುವವರ ಸಂಖ್ಯೆಯು ಕಡಿಮೆಯಾಗುತ್ತದೆ. ಮಿ। ಫಿಶರರು ವರ್ಣಿಸಿದ ಈ ಸ್ಥಿತಿಯು ಹಿಂದೂಸ್ಥಾನದಲ್ಲಿಯೂ ಕಂಡುಬರುತ್ತದೆ. ಇದಕ್ಕೆ ತಕ್ಕ ಪ್ರತಿಕಾರವು ದ್ರವ್ಯದೃಷ್ಟ್ಯಾ ಶಿಕ್ಷಣವನ್ನು ಆದಷ್ಟು ಸುಲಭ ಮಾಡುವದೆ ಆಗಿದೆ.

೩ ಕಳೆದ ವಾರದಲ್ಲಿ ನಡೆದ ಶಿಕ್ಷಣ ವಿಷಯಕ ಪ್ರಸ್ತಾಪಗಳಲ್ಲಿ ತಿರುವಣಕೋರ ಸಂಸ್ಥಾನದಲ್ಲಿ ಸೇರಿದ ಖಾಸಗಿ ಶಾಲಾ ಮೆನೆಜರುಗಳ ಕೂಟವನ್ನು ನಮೂದಿಸುವಂತಿದೆ. ಆ ಕೂಟದಲ್ಲಿ ಕೆಲವು ಠರಾವುಗಳನ್ನು ಪಾಸುಮಾಡಿ ಅವನ್ನು ಸಂಸ್ಥಾನದ ಕಡೆಗೆ ಕಳುಹಿಸಿಕೊಟ್ಟಿರುವರು. ಈ ಠರಾವುಗಳಲ್ಲಿ ಎರಡನೆ ತರಗತಿಯ ಟ್ರೈನಿಂಗ್ ಕೋರ್ಸಿಗೆ ಎರಡು ವರ್ಷಗಳಿದ್ದವು, ಈ ಅವಧಿಯನ್ನು ಒಂದೆ ವರ್ಷದ್ದಾಗಿ ಮಾಡುವದು, ಹುಡುಗಿಯರ ಮಧ್ಯಮ ಶಿಕ್ಷಣದ ಕ್ರಮಿಕ ಪುಸ್ತಕಗಳ ಸುಧಾರಣೆ ಹಾಗು ಕೆಲವು ವಿದ್ಯಾಖಾತೆಯ ನಿಯಮಗಳಲ್ಲಿ ಬದಲಾವಣೆ ಮುಂತಾದ ಸಂಗತಿಗಳು ಮುಖ್ಯವಾಗಿದ್ದವು. ಖಾಸಗಿ ಶಾಲಾ ಮೆನೆಜರುಗಳು ಕೊಟ್ಟಿರುವ ಈ ಸೂಚನೆಗಳು ಅಲ್ಲಿಯ ಸರಕಾರಕ್ಕೆ ಹಿತವಾಗಿವೆಂದು ತಿಳಿದು ಬರುತ್ತದೆ.

೪. ಈ ಸಾರೆಯ ಕಾಯಿದೆ ಕೌನ್ಸಿಲಿನಲ್ಲಿ ಬಂದ ಠರಾವುಗಳಲ್ಲಿ "ಭೂಮಿಗಳ ಸಬ್ ಡಿವಿಜನ್" ಎಂದರೆ ಪೋಟ ವಿಭಾಗದ ಕುರಿತು ನಾಮದಾರ ಕೃಷ್ಣರಾಯರು ತಂದ ಠರಾವು ಮಹತ್ವದ್ದಿತ್ತು. ಈ ಠರಾವಿನ ಮೇಲೆ ಉಭಯ ಪಕ್ಷದಿಂದಲೂ ಕೆಲವು ಚರ್ಚೆ ನಡೆದು ಕೊನೆಗೆ ಅದು ಸರಕಾರದಿಂದ ವಿಚಾರದ ಬಗ್ಗೆ ಅಂಗೀಕರಿಸಲಾಯಿತು. ಆದರೆ ಮಿ। ರಂಗಾಚಾರ್ಯರು ತಂದಿರುವ ಗ್ರಾಮಪಂಚಾಯತಿನ ಮಸೂದೆಯು ಸರಕಾರಿ ಸಹಾನುಭೂತಿಗೆ ಪಾತ್ರವಾದಂತೆ ತೋರಲಿಲ್ಲ. ಈ ಮಸೂದೆಯು ಕೌನ್ಸಿಲಿನಲ್ಲಿ ಬಂದಾಗ ಸಾಮಾನ್ಯವಾಗಿ ಲೋಕನಿಯುಕ್ತ ಸಭಾಸದರೆಲ್ಲರು ಗ್ರಾಮಪಂಚಾಯತಿಪದ್ಧತಿಯ ಅವಶ್ಯಕತೆಯನ್ನು ಸಮರ್ಥಿಸಿ ತೋರಿಸಿದರು. ಆದರೆ ಖೇದದ ಮಾತೇನೆಂದರೆ, ಸದರಿ ಠರಾವು ಕೌನ್ಸಿಲಿನಲ್ಲಿ ನಿಲ್ಲಲಿಲ್ಲ. ಈ ಮಸೂದೆಯ ಕಡೆಗೆ ಲೋಕನಿಯುಕ್ತರ ಮತಗಳಿದ್ದರೂ ಬಹುಮತವು ಸರಕಾರದ ಕಡೆಗೆ ಆಗಿ ಅದು ಬಿದ್ದು ಹೋಯಿತು. ವಸ್ತುತಃ ಲೋಕೋಪಯೋಗಕ್ಕೆ ಬೀಳುವ ಸಂಗತಿಗಳ ಅವಸ್ಥೆಯು ಹೀಗೆ ಆಗುವದು! ಈಗಿನ ಕೌನ್ಸಿಲು ರಚನೆಯ ಕುಂದುಕೊರತೆಗಳನ್ನು ನಾವು ಹಿಂದೆ ಕೌನ್ಸಿಲ್ ವಿಮರ್ಶನಪರದಲ್ಲಿ ಅನೇಕ ಸಾರೆ ತೋರಿಸಿರುವದರಿಂದ ಪುನಃ ಅವೇ ಸಂಗತಿಗಳನ್ನು ಪ್ರಸ್ತಾಪಿಸುವದರಲ್ಲಿ ಲಕ್ಷ್ಯವಿಲ್ಲ.

ಸ್ಥಳಿಕ—ಮಂಗಳೂರು.

ಹೊಸದುರ್ಗದ ಡಿಪ್ಯುಟಿ ತಹಸೀಲ್ದಾರರಾಗಿರುವ ಮ। ರಾ। ರಾ। ವಿ. ವೆಂಕಟರಾಯರು ಈ ಮೊದಲೆ ಪಡಕೊಂಡ ಪ್ರಿವಿಲೇಜ್ ರಜೆಯಲ್ಲದೆ ಇನ್ನು ನಾಲ್ಕು ವಾರಗಳ ರಜೆಯನ್ನು ಪಡಕೊಂಡಿರುವದರಿಂದ ಮ। ರಾ। ರಾ। ಬಿ. ರಘುನಾಥ ಭಂಡಾರಿಗಳು ಹೊಸದುರ್ಗದ ಅಕ್ಟಿಂಗ್ ಡಿಪ್ಯುಟಿ ತಹಸೀಲ್ದಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಾರ್ಕಳದ ಸಬ್ ಮೇಜಿಸ್ಟ್ರೇಟರಾಗಿರುವ ಮ। ರಾ। ರಾ। ಎಮ್. ರಾಘವೇಂದ್ರ ರಾವ್‌ರವರು ಜೂನ್ ತಿಂಗಳ ತಾ. ೪ರಿಂದ ೧೫ ದಿವಸಗಳ ಪ್ರಿವಿಲೇಜ್ ರಜೆ ಪಡದಿರುವದರಿಂದ ಅವರ ಬದಲಿಗೆ ಹೊಸದುರ್ಗದಲ್ಲಿ ಅಕ್ಟಿಂಗ್ ಡಿಪ್ಯುಟಿ ತಹಸೀಲ್ದಾರರಾಗಿರುವ ಮ। ರಾ। ರಾ। ಪಿ. ಮಹಾಬಲೇಶ್ವರಯ್ಯನವರು ನೇಮಿಸಲ್ಪಟ್ಟಿರುವರು.

ಮ। ರಾ। ರಾ। ಬಿ. ರಘುನಾಥ ಭಂಡಾರಿಗಳ ಬದಲಿಗೆ ತಾಲೂಕು ಹೆಡ್ ಎಕೌಂಟರಾಗಿರುವ ಮ। ರಾ। ರಾ। ಕಾಪು ರಾಮರಾಯರವರು ರೂ. ೧೦೦ರ ಸಂಬಳದ ಮೇಲೆ ಕಲೆಕ್ಟರರ ಆಫೀಸಿನ ಹೆಡ್ ಎಕೌಂಟಾಂಟರಾಗಿ ನೇಮಿಸಲ್ಪಟ್ಟಿರುತ್ತಾರೆ. ಮಂಗಳೂರು ತಾಲೂಕು ಆಫೀಸಿನ ಅಕ್ಟಿಂಗ್ ಹೆಡ್ ಎಕೌಂಟಾಂಟರಾಗಿ ಮ। ರಾ। ರಾ। ಪಿ. ಆನಂದರಾಯರು ನೇಮಿಸಲ್ಪಟ್ಟಿರುವರು.

ಕಳೆದ ತಾ. ೩ರಲ್ಲಿ ಮುನ್ಸಿಪಲ್ ಕೌನ್ಸಿಲರರ ಮೆ. ತಿಂಗಳ ಸಭೆಯು ಕೂಡಿತ್ತು. ಡಾಕ್ಟರ ರಾವ್ ಸಾಹೇಬ ವರ್ಗಿಸ್ ಮತ್ತು ಡಾಕ್ಟರ ಫರ್ನಾಂಡಿಸ್, [illegible] ವರ್ಗಿಸ್ ವ ಕೆ. ವ್ಯಾಸ [illegible] ನರ ಪ್ರಸ್ತಾ[illegible] ವಂದನೆಗಳನ್ನು ಸೂಚಿಸಿ ೧೯೧೬-೧೭ನೇ ಸಾಲಿನ ಮುನ್ಸಿಪಲ್ ಆಡಳಿತ ರಿಪೋರ್ಟು ಸಭೆಯಲ್ಲಿ ಮಂಜೂರುಮಾಡಲ್ಪಟ್ಟಿತು. [illegible] ನ ಸ್ಥಾಕಲುಗಳು ತಮ್ಮ [illegible] ಸೂಚಿಸುವದೆ ಕೊಂಡುಗಳನ್ನು ಮೋಟಾರ್ ಸ್ಟ್ಯಾಂಡು ಮತ್ತು ಬಂಡಿಗಳು ಉಪಯೋಗಿಸುವಂತೆ ಉಪಯೋಗಿಸಕೂಡದೆಂಬ ವಿಧಿಯು ಮುನ್ಸಿಪಲ್ ಕೌನ್ಸಿಲಿನ ಮಂಜೂರಾತಿಯನ್ನು ಹೊಂದಿರುತ್ತದೆ. ಮುನ್ಸಿಪಲ್ ರಸ್ತೆಗಳ ಕನಾರೆಯಲ್ಲಿರುವ ಖಾಲಿ ಸ್ಥಳಗಳನ್ನು ದರಕಾಸ್ತಿಗೆ ಕೊಡುವುದು ಉಪಯುಕ್ತವಲ್ಲವಾದ್ದರಿಂದ ಈ ಕನಾರೆಗಳನ್ನು ದರಕಾಸ್ತಿಗೆ ಅಪೇಕ್ಷಿಸಿ ಬರುವ ಅರ್ಜಿಗಳ ವಿಷಯ ತಮ್ಮ ಈ ಅಭಿಪ್ರಾಯವನ್ನೇ ರೆವಿನ್ಯೂ ಅಧಿಕಾರಿಗಳಿಗೆ ಸಾಮಾನ್ಯವಾಗಿ ಸೂಚಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಕಲ್ಯಾಣಪುರ ಶಾಲೆಯ ಕಟ್ಟಡಕ್ಕೆ ಮ। ರಾ। ರಾ। ಅತ್ತಾವರ ಬಾಲಕೃಷ್ಣ ಶೆಟ್ಟಿಯವರು ರೂ. ೧೦ನ್ನು ಕೊಟ್ಟು ಧನಸಹಾಯ ಮಾಡಿದ ಮುಹೂರ್ತವು ಸುಮುಹೂರ್ತವಾಗಿರುವದೆಂದೂ ಪ್ರಸ್ತುತ ಈ ಶಾಲೆಯನ್ನು ಹುಚ್ಚುಭಾವನೆಯಿಂದ ನಿರುಪಸ್ತು ಪಡಿಸುವ ಕಾರ್ಯವನ್ನು ನೆರವೇರಿಸಿಕೊಡಲು ತಾಲೂಕು ಬೋರ್ಡು ಮೆಂಬರರಾದ ಮ। ರಾ। ರಾ। ರಘುಚಂದ್ರ ಬಲ್ಲಾಳರವರು ಸಮ್ಮತಿಸಿರುವರೆಂದೂ ಈ ಬಗ್ಗೆ ಶಾಲಾ ವಿದ್ಯಾರ್ಥಿಗಳೂ ಇವರ ಹೆತ್ತವರೂ ಬಲ್ಲಾಳರವರಿಗೆ ಕೃತಜ್ಞರಾಗಿರುವರೆಂದೂ ಸೂಚಿಸಿ ಒಬ್ಬ ಬಾತ್ಮಿದಾರರು ಒಂದು ಪತ್ರವನ್ನು ಬರೆದಿರುತ್ತಾರೆ.

ಈ ಪತ್ರಿಕೆಯ ತಾ. ೪-೧-೧೭ನೆಯ ಸಂಚಿಕೆಯಲ್ಲಿ ಪ್ರಕಟವಾದ ವಿಷಯಖಂಡನವೆಂಬುದಕ್ಕೆ ಉತ್ತರವಾಗಿ ವೈಜಯಂತೀ ಪಂಚಾಂಗ ಸಂಪಾದಕರು ವಿಷಯಮಂಡನವೆಂಬುದನ್ನು ಬರೆದು ಪ್ರಕಟಣೆ ಬಗ್ಗೆ ಕಳುಹಿಸಿರುತ್ತಾರೆ. ಖಂಡನದ ವಾದಗಳನ್ನು ವೈಜಯಂತೀ ಪಂಚಾಂಗ ಕರ್ತರು ತಮ್ಮ ಮಂಡನದಲ್ಲಿ ಖಂಡಿಸಿರುವರು. ಆದರೆ ಈ ವಾದವಿವಾದಗಳಿಗೆ ಈ ಮೊದಲೆ ಸಾಕಷ್ಟು ಸ್ಥಳವು ಈ ಪತ್ರದಲ್ಲಿ ಕೊಡೋಣಾಗಿದೆ. ಇನ್ನೂ ಇವುಗಳ ವಿಷಯ ಬಂದ ಲೇಖಗಳನ್ನು ಪ್ರಕಟಿಸುವದು ನಮಗೆ ಯುಕ್ತ ಕಾಣುವದಿಲ್ಲ.

ಕಾಸರಗೋಡು ತಾಲೂಕಿನ ಹೊಸದುರ್ಗ ಸರ್ಕಲಿನಿಂದ ಒಬ್ಬ ತಾಲೂಕು ಬೋರ್ಡ ಮೆಂಬರನನ್ನು ಚುನಾಯಿಸುವ ಬಗ್ಗೆ ಸ್ಥಾನಾರ್ಥಿಯಾಗಿ ನಿಂತ ಮ। ರಾ। ರಾ। ಎಮ್. ಗೋವಿಂದ ಪೈ ಸ್ಪೆಶ್ಯಲ್ ಮೇಜಿಸ್ಟ್ರೇಟ ಇವರ ಉಮೇದವಾರಿಕೆಯು ಮಂಜೂರಾತಿಯನ್ನು ಪಡದಿರುವರು.

ಕಳೆದ ತಿಂಗಳ ತಾ. ೧೮ನೇ ಸಂಚಿಕೆಯಲ್ಲಿ ಮ। ರಾ। ವಕೀಲ ಎಮ್. ಮಾಧವರಾಯರ ಮೂಲಕ ಕೆನರಾ ಹ್ಯಾಸ್ಕೂಲಿನ ಸಿಲ್ವರ್ ಜುಬಿಲಿಯ ಸ್ಮಾರಕಕ್ಕಾಗಿ ಪಡೆದ ದ್ರವ್ಯಸಹಾಯದ ವಾಗ್ದಾನಗಳಲ್ಲಿ ಕೆಲವು ಈ ಮೊದಲು ಪ್ರಕಟವಾಗಿವೆ. ನಂತರ ಪ್ರಕಟಣೆ ಬಗ್ಗೆ ಬಂದವುಗಳು ಯಾವವೆಂದರೆ ಡಾಕ್ಟರ್ ಬಿ. ಶ್ರೀನಿವಾಸ ಮಲ್ಯರು ಪ್ರಥಮ ಕಂತು ರೂ. ೩೦೦; ಕಾರ್ಕಳ ಸದಾಶಿವರಾವ್ ಮತ್ತು ಸಹೋದರರು ರೂ. ೧೧೧; ಡಾಕ್ಟರ್ ಎ. ರಾಮಕಾಮತ್ ರೂ. ೧೦೫; ಬೋಳ ನಾಗೇಶರಾವ್ ಮತ್ತು ಸಹೋದರರು ರೂ. ೫೦; ಡಾಕ್ಟರ್ ಎ. ಪಿ. ಕಾಮತ್ ರೂ. ೫೦; ಡಾಕ್ಟರ್ ಪಿ. ಆರ್. ಭಂಡಾರಕಾರ್ ರೂ. ೫೦; ಎಮ್. ಸುಬ್ಬರಾವ್ (ವಿದ್ಯಾರ್ಥಿ) ರೂ. ೨೫, ಕೆ. ರಾಘವೇಂದ್ರ ಕಿಣಿ (ವಿದ್ಯಾರ್ಥಿ) ರೂ. ೧೦; ಬಿ. ಸುಬ್ರಾಯ ಭಂಡಾರಿ ರೂ. ೧೦ ಒಟ್ಟಿಗೆ ಜುಮುಲಾ ರೂ. ೭೧೧.

ನಿನ್ನೆ ತಾ. ೩ನೇ ಗುರುವಾರ ಇಲ್ಲಿಯ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಗಳ ನೂತನ ವಿದ್ಯಾರ್ಥಿಭವನದ ಪ್ರವೇಶ ಸಮಾರಂಭವು ಜರುಗಿತು. ಪ್ರವೇಶ ಕಾಲದ ಹೋಮಹವನಗಳಾದ ನಂತರ ದ್ರಾವಿಡ ಬ್ರಾಹ್ಮಣರ ಭೋಜನವಾಯಿತು. ಜಿಲ್ಲಾ ಪೋಲೀಸು ಸುಪರಿಂಟೆಂಡೆಂಟರಾದ ರಾ। ಆರ್ನೆ ಸುಬ್ಬರಾವ್, ಡಿಪ್ಯುಟಿ ಪೋಲೀಸು ಸುಪರಿಂಟೆಂಡೆಂಟ್ ರಾ। ರಾಮಚಂದ್ರಯ್ಯರ್, ಇನ್ನಿತ್ಸ ಮುಖ್ಯರಾದ ರಾ। ಅತ್ತಾವರ ರಾವ್ ಕಾಗತ್, ರಾ। ಕಲ್ಯಾಡಿ ಲಕ್ಷ್ಮೀನಾರಾಯಣರಾವ್, ರಾ। ಹಳ್ಳಿಕಾಯಿ ವೆಂಕಟರಾವ್, ರಾ। ಪಾಂಗಾಳ ಸುಬ್ಬರಾವ್, ರಾ। ಬೇಕಾವರ ಭೋಜರಾವ್, ರಾ। ಹ್ಯಾಕೋರ್ಟ ವಕೀಲ ಬಂಟವಾಳ ಸೀತಾರಾಮರಾವ್, ಮೊದಲಾದ ಗೃಹಸ್ಥರು ಪ್ರವೇಶ ಮುಹೂರ್ತಕ್ಕೂ ಭೋಜನಕ್ಕೂ ಬಂದಿದ್ದರು. ಭೋಜನದ ನಂತರ ವಕೀಲ ಭೀಡೆ ಶೇಷಭಟ್ಟರವರು ದ್ರಾವಿಡ ವಿದ್ಯಾವರ್ಧಕ ಸಂಘದ ವಿಷಯ ಚಿಕ್ಕದೊಂದು ವೃತ್ತಾಂತವನ್ನು ಸಭಿಕರಿಗೆ ತಿಳಿಸಿದ ನಂತರ ವಿದ್ಯಾರ್ಥಿಭವನದಲ್ಲಿ ಒಂದು ಪುಸ್ತಕ ಭಂಡಾರದ ಸ್ಥಾಪನೆಗೆ ಸಹ ಮುಹೂರ್ತವಾಯಿತು. ಈ ಮುಹೂರ್ತ ಕಾಲದಲ್ಲಿ ಸಭಾಧ್ಯಕ್ಷಸ್ಥಾನವನ್ನು ಮ। ರಾ। ಆರ್ನೆ ಸುಬ್ಬರಾವ್‌ರವರು ವಹಿಸಿಕೊಂಡಿದ್ದರು.

ಇತ್ತಲಾಗೆ ಎರಡು ಮೂರು ದಿವಸಗಳಿಂದ ಇಲ್ಲಿ ಮಳೆ ಬರಲು ಪ್ರಾರಂಭವಾಗಿದೆ.

ಇಲ್ಲಿಯ ಟ್ರೆಜರಿ ಡಿಪ್ಯುಟಿ ಕಲೆಕ್ಟರರಾದ ದಿವಾನ ಬಹದ್ದೂರ್ ಸಿ. ಗೋಪಾಲನ್ನಾಯರರವರು ಈ ದಿನದಿಂದಲೆ ಉದ್ಯೋಗದಿಂದ ನಿವೃತ್ತರಾಗುವರು. ಇವರಿಗೆ ಬೋಳಾರಮ್ ಎಂಬಲ್ಲಿ ಮಿಲಿಟರಿ ಎಕೌಂಟ ಇಲಾಖೆಯಲ್ಲಿ ರೂ. ೭೦೦ರ ಹುದ್ದೆಗೆ ನೇಮಕವಾಗಿದೆ. ಇಲ್ಲಿ ಟ್ರೆಜರಿ ಡಿಪ್ಯುಟಿ ಕಲೆಕ್ಟರರಾಗಿ ಮ। ರಾ। ಪಿ. ಕೃಷ್ಣನಂದಿಯಾರ್‌ರವರು ನೇಮಿಸಲ್ಪಟ್ಟಿರುವರು.

---

೫. ಪ್ರೆಸಿಡೆನ್ಸಿ ಪೋರ್ಟ ಆಫೀಸರರು ಮೊದಲಾದವರು ಕೂಡಿಕೊಂಡಿದ್ದ ಇಲ್ಲಿಯ ಸ್ಥಳಿಕ ಸಾವುಕಾರರ ಸಭೆಯಲ್ಲಿ ಪತ್ತೆಮಾರಿಗಳನ್ನು ಕಟ್ಟಿಸುವ ಏರ್ಪಾಡಿನ ಸೂಚನೆಯು ಬಿದ್ದುಹೋಯಿತೆಂಬುದನ್ನು ನಾವು ತಿಳಿಕೊಂಡೊಡನೆಯೆ ಬಹಳ ಆಶ್ಚರ್ಯಪಟ್ಟೆವು. ಒಂದಲ್ಲ ಎರಡು ಮೋಟಾರು ಕಂಪನಿಗಳನ್ನು ಸ್ಥಾಪಿಸಿರುವ ಮಂಗಳೂರು ಬಂದರದ ಸಾವುಕಾರರು ತಮ್ಮ ವ್ಯಾಪಾರಕ್ಕೆ ಬೇಕಾಗಿರುವ ಏರ್ಪಾಡಿನಲ್ಲಿ ಕೈಹಾಕಲು ಹಿಂಜರಿಯುವದೆಂದರೆ ಯಾರಿಗೆ ಆಶ್ಚರ್ಯವುಂಟಾಗಲಿಕ್ಕಿಲ್ಲ. ಸಭೆಯಲ್ಲಿ ಈ ಏರ್ಪಾಡನ್ನು ಸಮಗ್ರವಾಗಿ ಸಾವುಕಾರರು ತಾವೇ ಆಲೋಚಿಸಲು ಅವಕಾಶವು ಇಲ್ಲದೆ ಹೋದ್ದರಿಂದ ಸಭೆಯಲ್ಲಿ ಏನೂ ಮಾಡಲು ಸಾಧ್ಯವಾಗಲಿಲ್ಲ. ನಂತರ 'ಶಿಪ್ಪರ್ಸ್ ಕೋಆಪರೇಟಿವ್ ಸೊಸೈಟಿ' ಸರಕು ಹತ್ತಿಸುವವರ ಸಹಕಾರ ಸಂಘ ಒಂದನ್ನು ಸ್ಥಾಪಿಸುವ ಆಲೋಚನೆಯು ಇಲ್ಲಿಯ ಸಾವುಕಾರರಿಗೆ ವಿವರಿಸಲ್ಪಟ್ಟಿತು. ಪತ್ತೆಮಾರಿಗಳನ್ನು ಕಟ್ಟಿಸುವದು, ಅಥವಾ ಅವುಗಳನ್ನು ಕ್ರಯಕ್ಕೆ ಪಡಕೊಳ್ಳುವದು, ಬಾಡಿಗೆಗೆ ವಹಿಸಿಕೊಡುವದು, ಅಥವಾ ಬಾಡಿಗೆಗೆ ಕೊಡುವದು ಈ ಉದ್ದೇಶಗಳುಳ್ಳ ಒಂದು ಸಂಘವನ್ನು ಸ್ಥಾಪಿಸಲಿಕ್ಕೆ ಇಲ್ಲಿಯ ಸಾವುಕಾರರಲ್ಲಿ ಹಲವರು ತಮ್ಮ ಸಮ್ಮತಿಯನ್ನು ಕೊಟ್ಟಿರುವರು. ಸ್ಟೀಮರುಗಳು ವಿರಳವಾದಾಗ ಪತ್ತೆಮಾರಿಗಳೇ ಅಗತ್ಯವಾಗಿ ಬೇಕಾಗಿರುವದರಿಂದ ಇಂಥಾ ಕಾಲದಲ್ಲಿ ಅವುಗಳ ಉಪಯುಕ್ತತೆಯ ವಿಷಯ ನಾವು ಏನೂ ಹೇಳಬೇಕಾದದ್ದಿಲ್ಲ. ಆದರೆ ಸ್ಟೀಮರುಗಳ ಕೊರತೆಯು ಇಲ್ಲದ ಸಂದರ್ಭದಲ್ಲಿ ಈ ಪತ್ತೆಮಾರಿಗಳ ಉಪಯೋಗವು ಇರದಾದ ಕಾರಣ ಅಂಥಾ ಕಾಲದಲ್ಲಿ ಇವುಗಳಿಂದ ನಷ್ಟವು ಉಂಟಾಗಬಹುದೆಂದು ಕೆಲವರ ವಾದವು ಇದೆ. ಈ ಬಂದರದ ಸರಕುಗಳ ವೈವಾಟಗಳನ್ನು ಸರಿಯಾಗಿ ಪರಿಶೀಲಿಸಿ ನೋಡಿದರೆ ಈ ವಾದಕ್ಕೆ ತಕ್ಕದಾದ ಆಧಾರವು ಇರದೆಂಬುದು ಸ್ಪಷ್ಟವಾಗಿ ತೋರಿಬಂದೀತು. ಪ್ರಥಮದಲ್ಲಿ, ಸರಕುಗಳ ಆಮದುರಫ್ತಿಗೆ ಬೇಕಾದಂತೆ ಸ್ಟೀಮರುಗಳ ಸೌಕರ್ಯವು ಎಲ್ಲಾ ಸಾವುಕಾರರಿಗೂ ಒಂದೇ ಪ್ರಕಾರ ದೊರಕುವದು ಸ್ಟೀಮರುಗಳು ವಿರಳವಲ್ಲದಕಾಲದಲ್ಲಿ ಸಹ ಕಷ್ಟವೆಂತ ತಿಳಿಯುತ್ತೇವೆ. ಅಷ್ಟೇ ಅಲ್ಲ, ಸರಕುಗಳ ವಯ್ಯೋಣ ಕ್ರಮದಲ್ಲಿ ವ್ಯವಸ್ಥೆಯಿಲ್ಲದೆ ಬಹಳ ನಷ್ಟಕಷ್ಟಗಳನ್ನು ಪಡಿಯುತ್ತಿರುವ ಸಂಗತಿಗಳೂ ನಮ್ಮ ಲಕ್ಷಕ್ಕೆ ಆಗಾಗ್ಗೆ ಬಂದಿವೆ. ಮಂಗಳೂರು ಬಂದರದಲ್ಲಿ ಸಾವುಕಾರರೊಳಗೆ ಪರಸ್ಪರ ಸಹಕಾರದ ಪ್ರಯತ್ನಗಳೂ ಆದಕಾರಣ ಐಕ್ಯವೂ ಇಲ್ಲದೆ ಬಂದರಿನ ವ್ಯಾಪಾರಿಗಳಲ್ಲಿ ಅವ್ಯವಸ್ಥಿತ ಸ್ಥಿತಿಯು ಸದಾ ಇರುವದೆಂಬುವ ಸಂಗತಿಯೂ ಪದೇ ಪದೇ ಗೊತ್ತಾಗುತ್ತಿರುವದು. ಆದ್ದರಿಂದ ಪರಸ್ಪರ ಸಹಾಯಕ ಸಂಘಗಳ ಧ್ಯೇಯವನ್ನು ತಮ್ಮ ಮುಂದಿಟ್ಟುಕೊಂಡು ಕಾರ್ಯನಿರ್ವಾಹಗಳನ್ನು ನಡಿಸುತ್ತಿರುವ ಒಂದು ಸ್ಥಾಪನೆಯಿಂದ ಮಂಗಳೂರು ಬಂದರದಲ್ಲಿರುವ ಹಲವು ಅನರ್ಥಗಳ ನಿವೃತ್ತಿಗೆ ಎಡೆದೊರಕಬಹುದು.—ಶಿಪ್ಪರ್ಸ್ ಸಹಕಾರ ಸಂಘದ ಇದೊಂದು ಪ್ರಯೋಜನ. ಸ್ಟೀಮರುಗಳ ಮೂಲಕವಲ್ಲದೆ ಈ ಬಂದರದಿಂದ ಹೊರಪ್ರಾಂತ್ಯಗಳಿಗೆ ಹೋಗುವ ಸರಕುಗಳು ಇಲ್ಲಿ ಇರುವವು ಹಂಚು ಇಲ್ಲಿಂದ ಬಹಳವಾಗಿ ಹೊರಪ್ರಾಂತ್ಯಗಳಿಗೆ ಕಳುಹಿಸೋಣಾಗುತ್ತದೆ. ಮುಂಬಯಿಂದ ಬರುವಂಥಾ ಗಾಜಿನ ಒಡವೆಗಳು, ಉಪ್ಪು—ಇವುಗಳು ಪತ್ತೆಮಾರಿಗಳಿಗೆ ಬೇಕಾದಷ್ಟು ಸಿಕ್ಕುತ್ತವೆ. ಇಷ್ಟೇ ಅಲ್ಲ, ಒಂದು ವ್ಯವಸ್ಥಿತ ಸಂಸ್ಥೆಯ ಮೂಲಕ ಈ ಪತ್ತೆಮಾರಿಗಳ ವೈವಾಟವು ನಡಿಸೋಣಾಗುವದರಿಂದ ಇವುಗಳ ಕಲಾಸಿ ತಂಡೇಲರುಗಳ ಆಗ್ರಹ ಅವಿಶ್ವಾಸ ಮೊದಲಾದವುಗಳ ಮೂಲಕ ಉಂಟಾಗುವ ನಷ್ಟಗಳು ಕಡಿಮೆಯಾಗುವದರಿಂದ ಇತರ ಸರಕುಗಳೂ ಸಂಘದ ಪತ್ತೆಮಾರಿಗಳಿಗೆ ದೊರಕುವ ಸಂಭವವುಂಟು. ಆದ್ದರಿಂದ ಇಲ್ಲಿಯ ಸಾವುಕಾರರು ಈ [illegible] ದಲ್ಲಿ ಕಾರ್ಯಶೂನ್ಯರಾಗಿ ಸುಮ್ಮನೆ ಕುತುಕೊಳ್ಳುವದು [illegible] ಸರಕಾರದವರೂ ಸಹ ಈ ಏರ್ಪಾಡಿಗೆ ಸಹಾಯಮಾಡುವದರಲ್ಲಿ [illegible] ರೆಂಬುದಾಗಿ ಕೇಳುತ್ತೇವೆ. ಇಂಥ ಸಾಹಾಯ್ಯವು ಏನಿಂಬುದಾಗಿ [illegible] ಕೊಂಡು ಶಿಪ್ಪರ್ಸ್ ಸಹಕಾರ ಸಂಘವನ್ನು ಬೇಗನೆ ಸ್ಥಾಪಿಸ[illegible]
ಇಲ್ಲಿಯ ಸಾವುಕಾರರು ಪ್ರಯತ್ನ[illegible]

...೩೦೦; ಕುಕ್ಕಾಡಿ ನಾಗಯ್ಯ ಶೆಟ್ಟಿ ರೂ. ೩೦೦; ಪಾಂಗಾಳ ನಾಗಪ್ಪಯ್ಯ ರೂ. ೩೦೦; ಕೋಟೆಕಾರ್ ಸುಬ್ಬರಾವ್ ರೂ. ೧೦೦; ಧೈಲೂರು ರಾಮರಾವ್ ರೂ. ಹಿರಿ ಶೀನ ಹೆಗ್ಗಡೆ ರೂ. ೧೦೦; ಶಿರ್ವಾನಂದ್ಯಪ್ಪ ಹೆಗಡೆ ರೂ. ೧೦೦; ...ಂಗೆರೆ ಶೀತಾರಾಮ ಹೆಬ್ಬಾರ್ ರೂ. ೨೦೦; ಮೂಡಬೆಟ್ಟು ಚೆನ್ನಯಸೆಟ್ಟಿ ರೂ. ೧೦೦; ಶಿರ್ವಾಶಂಕರ ನಾರಾಯಣ ರಾವ್ ರೂ. ೧೦೦; ಶೀಲಾರ ನಾಗಪ್ಪ ರೂ. ೧೦೦; ಲಕ್ಷ್ಮೀನಾರಾಯಣ ಮಧ್ಯಸ್ಥ ರೂ. ೨೦೦; ಉಳಿಯಾರಗೋಳಿ ಮಂಕಸೆಟ್ಟಿ ರೂ. ೧೦೦; ಜುಮ್ಲಾ ರೂ. ೨೪,೪೦೦; ಉಡುಪಿ ತಾಲೂಕು ಕೋಟಾ — ನಾಗಪ್ಪ ಐಕಾಳ್ ಗ್ರಿಯಾರ್ ರೂ. ೫೦೦; ಸಣ್ಣಯ್ಯ ಯಾನೆ ನಾರಾಯಣ ಹೊಳ್ಳ ರೂ. ೫೦೦; ಸಣ್ಣಯ್ಯ ಹಂದೆರು ರೂ. ೫೦೦; ವರ್ಣತೀರ್ಥ ಮಂಜುನಾಥ ಶ್ಯಾನಭಾಗ ರೂ. ೩೦೦; ಮಂಜುನಾಥ ಉಪಾಧ್ಯಾಯ ರೂ. ೨೦೦; ಕರ್ಕಟ್ಟು ಕೃಷ್ಣ ಉರಾಳಾ ರೂ. ೨೦೦; ಕೋದಂಡ ಹೊಳ್ಳರು ೨೦೦; ಸಣ್ಣಯ್ಯ ಗುಂಡ್ಮಿ ರೂ. ೨೦೦; ಪರಂಪಳ್ಳಿ ರಾಮಪ್ಪ ಹಂದೆರು ರೂ. ೨೦೦; ಬೇಲೂರು ಮಂಜಯ್ಯ ಸೆಟ್ಟಿ ರೂ. ೨೦೦; ಪಟೇಲ ತಿಮ್ಮಪ್ಪ ಸೆಟ್ಟಿ ರೂ. ೨೦೦; ಪುಟ್ಟೆಣ್ಣ ಸೋಮಯಾಜಿ ರೂ. ೨೦೦; ಗಿಳಿಯಾರು ಶೀನ ಹೆಬ್ಬಾರ ರೂ. ೧೦೦; ಗಿಳಿಯಾರ ಮರ್ಕಳ ಪ್ರಭು ರೂ. ೧೦೦; ಚಿತ್ರಪಾಡಿ ಶಂಕರ ನಾರಾಯಣ ಸೋಮಯಾಜಿ ರೂ. ೧೦೦; ಚಿತ್ರಪಾಡಿ ಪಟೇಲ ನರ್ಸಯ್ಯ ಉರಾಳ ರೂ. ೧೦೦; ಕಾರ್ಕಟು ಸುಬ್ರಾಯ ಸೋಮಯಾಜಿ ರೂ. ೧೦೦; ಸರಿಪಳ್ಳಿ ರಾಮಚಂದ್ರ ಉಪಾಧ್ಯಾ ರೂ. ೧೦೦; ವೆಂಕಟರಮಣ ಐತಾಳ ರೂ. ೧೦೦; ವಾಸ್ತವರು ವಾಸ್ತೇವ ಹಂದೆ; ರೂ. ೧೦೦; ಕೋಟತಟ್ಟು ಸಣ್ಣಯ್ಯ ಹಂದೆ ರೂ. ೧೦೦; ಕೋಟತಟ್ಟು ಶೀಪಕಾರಾಂತ ರೂ. ೨೦೦; ಜುಮ್ಲಾ ರೂ. ೪,೫೦೦; ಎಟ್ಟು ಉಡುಪಿ ತಾಲೂಕಿನ ಜುಮ್ಲಾ ರೂ. ೩೩,೯೦೦.

ಉಪ್ಪಿನಂಗಡಿ ತಾಲೂಕು:—ವಿಟ್ಲ ಮ। ರಾ। ರಾ। ರವಿವರ್ಮ ನರಸಿಂಹ ರಾಜರವರ ಮ್ಯಾನೇಜರ ರವಿವರ್ಮ ನರಸಿಂಹ ರಾಜ ರೂ. ೩,೦೦೦; (ಪುತ್ತೂರಿನಲ್ಲಿ ಕೊಟ್ಟಿರುವ ರೂ. ೨,೦೦೦ದ ಹೊರತು.) ಕುಂಡ್ಯ ದಾಸ ಸೆಟ್ಟಿ ರೂ. ೧,೦೦೦; ಕರಗಲ್ಲು ತಿಮ್ಮಣ್ಣ ಸೆಟ್ಟಿ ರೂ. ೨೦೦; ನೇತ್ರಕೆರೆ ರಂಗರ ನಾರಾಯಣ ಭಟ್ಟ ರೂ. ೧೦೦; ಚಿಪ್ಪಾರ ರಾಮಯ್ಯ ಬಲ್ಲಾಳ ರೂ. ೫೦೦; ಕನಿಯೂರು ಗಣಪತಿ ಭಟ್ಟ ರೂ. ೧೦೦; ಮುಡಿಯಾರ ಲಿಂಗಭಟ್ಟ ರೂ. ೧೦೦; ಕುಲಶೇಖರ ಸೆಟ್ಟಿ ರೂ. ೫೦೦; ಬಿಳಿಯಂಪವದ ರಾಮಕೃಷ್ಣಭಟ್ಟ ರೂ. ೨೦೦; ಯಡಬು ಕೃಷ್ಣಭಟ್ಟ ರೂ. ೨೦೦; ಕಾತಿಮುಲೆಗಣಪಯ್ಯ ರೂ. ೧೦೦; ಧಾರೇಶ್ವರ ಸುಂದರ ರಾಮರಾವ್ ರೂ. ೧೦೦; ವಿಟ್ಲದ ರಾಜಾಲಕ್ಷ್ಮೀನಾಥ ರೂ. ೩೦೦; ಅಳ್ಳಿಗುಡ್ಡ ಅಬ್ಬು ಸೆಟ್ಟಿ ರೂ. ೧೦೦; ೧೦೦ಕ್ಕೆ ಕಡಿಮೆಯಾದ ಮೊಬಲಗುಗಳ ಜಮ್ಲಾ ರೂ. ೫೩೩-೧೩-೦. ಒಟ್ಟಿಗೆ ಜುಮ್ಲಾ ರು. ೬೫೩೩-೧೩-೦.

ಕುಂದಾಪುರ ತಾಲೂಕು:—ಕಳೆದ ಏಪ್ರಿಲ್ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ರೂ. ೧೫,೬೮೦; ನಂತರದ ವಾರದಲ್ಲಿ ರೂ. ೩,೪೭೦ ಈ ೧೯೧೭ ತಾ. ೨೬ರ ವರೆಗೆ ಈ ತಾಲೂಕಿನ ತಹಸೀಲ್ದಾರರ ಮೂಲಕ ರೂ. ೨೬,೭೫೦ ವಾಗ್ದಾನಗಳು ಆಗಿರುವವು.

ಕಾರ್ಕಳ ತಾಲೂಕು:—ಈ ತಾಲೂಕಿನಲ್ಲಿ ತಾ. ೨೧—೫—೧೯೧೭ ವರೆಗೆ ತಹಸೀಲ್ದಾರರ ಮೂಲಕ ಜುಮ್ಲಾ ರೂ. ೨೩,೫೩೦ ಸಾಲಗಳ ವಾಗ್ದಾನಗಳಾಗಿವೆ.

ಮಂಗಳೂರು ತಾಲೂಕು:—ಬಂಟವಾಳ ಡೆಪ್ಯುಟಿ ತಹಸೀಲ್ದಾರರ ಮುಖಾಂತರ ಸುಮಾರು ರೂ. ೯೦೦೦ ಮತ್ತು ಮೂಲ್ಕಿ ಡೆಪ್ಯುಟಿ ತಹಸೀಲ್ದಾರರ ಮುಖಾಂತರ ಸುಮಾರು ರೂ. ೨೧,೦೦೦ ಈ ಮೊಬಲಗುಗಳ ಹೊರತು ಆದ ತಾ. ೨೬ಕ್ಕೆ ಅಂತ್ಯವಾಗುವ ವಾರದ ವರೆಗೆ ರೂ. ೯೭೪೦ ಮೊಬಲಗಿನ ವಾಗ್ದಾನಗಳು ತಹಸೀಲ್ದಾರರ ಮುಖಾಂತರ ಆಗಿವೆ. ಮಂಗಳೂರು ಯುದ್ಧ ಸಾಲದ ಕಮ್ಮಿಟಿಯವರ ಮೂಲಕ ಸಂಗ್ರಹವಾದ ಮೊಬಲಗುಗಳು ಇವುಗಳಲ್ಲಿ ಸೇರಿವೆ.

ಮಂಗಳೂರು ಸೆಂಟ್ರಲ್ ವಾರ್ಡಿಗೆ ನೇಮಿಸಲ್ಪಟ್ಟ ಕಮಿಟಿಯವರ ಮೂಲಕ ವಾಗ್ದಾನ ಮಾಡಿದ ಮೊಬಲಗುಗಳು:— ನಗರ ದಾಮೋದರ ಶ್ಯಾನಭಾಗ ಮತ್ತು ಸಹೋದರರು ರೂ. ೧೦೦೦; ಕಸ್ತೂರಿ ಸುಬ್ರಾಯ ಪೈ ಮತ್ತು ಸಹೋದರ ರಾಮಚಂದ್ರ ನಾಯಕ ಮತ್ತು ಕಂಪೆನಿ ರೂ. ೫೦೦; ಉಳ್ಳಾಲ ವಾಸುದೇವ ಮಲ್ಯರು ರೂ. ೫೦೦; ಮಿಜಾರ ತಿಮ್ಮಪ್ಪೈ ಮತ್ತು ಸಹೋದರರು ರೂ. ೫೦೦; ಸಾಹುಕಾರ ಬಂಗಪ್ಪೈ ರೂ. ೩೦೦; ಉಳ್ಳಾಲ ಲಕ್ಷ್ಮಣ ಕಿಣಿ ರೂ. ೩೦೦; ಪಟೇಲ ನರಸಿಂಹ ವೆಂಕಟೇಶ ಪೈ ರೂ. ೨೫೦; ಉಳ್ಳಾಲ ರಾಮಕೃಷ್ಣ ಮಲ್ಯ ರೂ. ೨೦೦; ಜಿ. ಪುರುಷೋತ್ತಮ ಕಾಮತ್ ರೂ. ೨೦೦; ಕೆ. ಮಂಗೇಶಯ್ಯ ರೂ. ೨೦೦; ಎಂ. ವೆಂಕಟ ಕೃಷ್ಣರಾವ್ ರೂ. ೨೦೦; ಕೆ. ಮರ್ಕರ ಶ್ಯಾನಭಾಗ ಮತ್ತು ಮಗಂದಿಯರು ರೂ. ೨೦೦, ಗುರುಪುರ ಮಹಾಬಲ ಪ್ರಭು ರೂ. ೨೦೦. ಎಸ್. ನಾಗಪ್ಪ ನಾಯಕರು ರೂ. ೨೦೦; ಪುರುಷೋತ್ತಮ ನಾನಜಿ ಸೇಟ್ ರೂ. ೨೦೦; ಕೆ. ರಘುನಾಥರಾವ್ ರೂ. ೧೫೦; ಕೆ. ರಘುನಾಥ ವಿಟ್ಠಲನಾಯ್ಕರ ರೂ. ೧೦೦; ಬೋಳಂತೂರು ಪುರುಷೋತ್ತಮ ಪ್ರಭು ರೂ. ೧೦೦; ಕುಂಬಳೆ ಕೇಶವಪ್ರಭು ರೂ. ೧೦೦; ಹಾಜಿ ಅಬ್ದುಲ್ ಸತ್ತಾರ್ ಸೇಟ ರೂ. ೧೦೦; ಪಿ. ಯಮ್. ಕಾಮತ್ ರೂ. ೧೦೦; ಸರಾಫ ಅಪ್ಪಾಜಿಶೆಟ್ಟಿ ರೂ. ೧೦೦; ಬಸ್ತಿ ದೇವಪ್ಪ ಶ್ಯಾನಭಾಗ ರೂ. ೧೦೦; ಹಂಡಿ ವೆಂಕಟೇಶ ಕಮ್ತಿ ರೂ. ೧೦೦; ಜುಮ್ಲಾ ರೂ. ೬೯೫೦

ಕೌನ್ಸಿಲಿನೊಳಗಿನ ಗವರ್ನರರ ಸಮಾರೋಪದ ಭಾಷಣದ ಸಾರಾಂಶ.

ಮದ್ರಾಸು ಕಾಯಿದೆ ಕೌನ್ಸಿಲಿನ ಬೇಸಿಗೆಯ ಅಧಿವೇಶನವು ನಾಲ್ಕು ದಿವಸಗಳು ನಡೆದು ಮೇ ತಾ. ೨೪ರಲ್ಲಿ ಗವರ್ನರ ದೊರೆಗಳ ಸಮಾರೋಪದ ಭಾಷಣದಿಂದ ಮುಕ್ತಾಯವಾಯಿತು. ಲೋರ್ಡ್ ಪೆಂಟ್ಲೆಂಡ್ ದೊರೆಗಳೆಂದರು:

ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0— 8—0
[illegible] ,,	0—10—0
ಇಂದಿರಾ ಕೃ. ಮು.	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0— 4—0
ಪ್ರತಿಜ್ಞೆ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0— 1—6
ಕುಸುಮ ,,	0— 1—0
ರಾಧಾನಾಥ ,,	0— 2—0
ಸುಭದ್ರೆ ,,	0— 5—0
ಚಂದ್ರಹಾಸ (ಹೊಸ ಕಥೆ)	0— 1—0
ಧ್ರುವ ,,	0— 2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1— 0—0
,, ಸಂಗೀತ ಸಮಯಸಾರ	1— 4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1— 4—0
[illegible] ,,	1— 2—0
[illegible]	0—10—0
[illegible]	0— 1—0

ಮಹಾ ಯುದ್ಧ.

[illegible]ರುವ ವಾಯುವಿಮಾನಗಳ ಕಾದಾಟಗಳು ಮತ್ತು ಶತ್ರುಗಳನ್ನು ಹಿಂದಕ್ಕೆ ಅಟ್ಟಿದ ವೃತ್ತಾಂತಗಳ ಹೊರತು ಪಶ್ಚಿಮರಣರಂಗದಲ್ಲಿ ವಿಶೇಷ ಕದನಗಳ ಸುದ್ದಿಯಿಲ್ಲ. ಪೂರ್ವರಣರಂಗದಲ್ಲಿ ರುಶ್ಯನರು ತಮ್ಮ ದೇಶದಲ್ಲಿ ಸಂಭವಿಸಿದ ಕ್ರಾಂತಿಯಿಂದ ಸರ್ವತ್ರ ಉಂಟಾದ ಬಗೆ ಬಗೆಯ ಭಾವಗಳನ್ನು ಸಂತೈಸಿಕೊಂಡು ಸೇನೆಯನ್ನು ಕದನಕ್ಕೆ ಅಣಿಗೊಳಿಸುತ್ತಿರುವದರಿಂದ ಆ ರಣರಂಗದಲ್ಲಿಯೂ ಕಾದಾಟಗಳ ಸುದ್ದಿಯು ಕಡಮೆಯಾಗಿರಬಹುದು. ರುಶ್ಯದಲ್ಲಿ ಕ್ರಾಂತಿಯು ಸಂಭವಿಸಿ ದೇಶವು ಅಲ್ಲೋಲಕಲ್ಲೋಲ ಸ್ಥಿತಿಯಲ್ಲಿದ್ದಾಗ ಅದನ್ನು ನುಗ್ಗಿಕೊಂಡು ಹೋಗುವ ಆಲೋಚನೆಯು ಶತ್ರುಗಳಲ್ಲಿ ಇರಬಹುದಾದ್ದರಿಂದ ಫ್ರೆಂಚರೂ ಬ್ರಿಟಿಷರೂ ಇಟಲಿಯನರೂ ಕ್ರಮವಾಗಿ ಪಶ್ಚಿಮರಣರಂಗದಲ್ಲಿ ಮುಂದರಿಸಿಕೊಂಡು ಹೋಗಿ ಶತ್ರುಗಳ ಮೇಲೆ ಬಿದ್ದರು. ಈ ವೃತ್ತಾಂತಗಳು ಮೊದಲೆ ವಾಚಕರಿಗೆ ಗೊತ್ತಿವೆ. ಹೀಗೆ ಶತ್ರುಗಳ ಮೇಲೆ ಮಿತ್ರರು ಪಶ್ಚಿಮರಣರಂಗದಲ್ಲಿ ಕದನ ನಡಿಸಿದ್ದರಿಂದ ರುಶ್ಯದೇಶದ ಗಡಿಬಡಿಯ ಕಾಲದಲ್ಲಿ ಆ ದೇಶ ಮೇಲೆ ಕಾರ್ಯಗಳನ್ನು ನಡಿಸಲು ಸಾಧ್ಯವಾಗಲಿಲ್ಲ. ಪೂರ್ವ ರಣರಂಗದಿಂದ ಸೇನಾಂಗಗಳನ್ನು ತರಿಸಿ ಪಶ್ಚಿಮರಣರಂಗದಲ್ಲಿ ಮಿತ್ರರೊಡನೆ ಶತ್ರುಗಳಿಗೆ ಕಾದಾಡಬೇಕಾಯಿತು. ಮಿತ್ರರ ಉದ್ದೇಶವು ಈರೀತಿ ಬಹಳಮಟ್ಟಿಗೆ ನೆರವೇರಿದೆ, ಪ್ರಕೃತ ರುಶ್ಯದೇಶದ ಕ್ರಾಂತಿಯು ದಾಟಿಹೋಗಿ ನವಚೇತನದಿಂದ ಕಾದಾಡಲು ರುಶ್ಯಯನರು ಸಿದ್ಧರಾಗುತ್ತಿದ್ದಾರೆ. ಮಿತ್ರರ ಯುದ್ಧತಂತ್ರೋಪಾಯಗಳು ಒಂದೇ ಸಿದ್ಧಾಂತವಿದ್ದು ನಡಿಯತಕ್ಕವುಗಳಾದ್ದರಿಂದ ಇಂಥಾ ಸಿದ್ಧಾಂತಕ್ಕನುಗುಣವಾದ ತಯ್ಯಾರಿಯು ಎಲ್ಲಾ ರಣರಂಗಗಳಲ್ಲಿಯೂ ಇರಬೇಕಾದ್ದರಿಂದ ಆ ಬಗ್ಗೆ ಕಾರ್ಯವಿಳಂಭವು ರಣರಂಗದಲ್ಲಿರಬಹುದು, ಅಥವಾ ಮತ್ತೊಂದು ಸಲ ಶತ್ರುಗಳ ಮೇಲೆ ಹಾಯುದುಹೋಗುವ ಬಗ್ಗೆ ಅಗತ್ಯವಿರುವ ಸಿದ್ಧತೆಯನ್ನು ಎಲ್ಲಾ ಕಡೆಗಳಲ್ಲಿಯೂ ಮಾಡತಕ್ಕ ಬಗ್ಗೆ ರಣರಂಗಗಳಲ್ಲಿ ತಮ್ಮಗೆಯು ಇರಬಹುದೆಂತ ಭಾವಿಸುತ್ತೇವೆ.

ಹ್ಯಾಗೂ ಮಾರ್ಶೆಲ್ ಹೇಗಂವರು ಕದನವಾರ್ತೆಗಳ ವಿಷಯ ಈ ರೀತಿ ಬರೆದಿರುತ್ತಾರೆ. ಮೇ ತಿಂಗಳಲ್ಲಿ ೩೪೧೩ ಸೇನಿಕರನ್ನು ಬ್ರಿಟಿಷರು ಸೆರೆಹಿಡಿದರು. ೮೦ ತೋಪುಗಳನ್ನು ಶತ್ರುಗಳಿಂದ ಪಡೆದಿರುವರು. ಯಪ್ರಸ್ ಪ್ರಾಂತ್ಯಗಳಲ್ಲಿ ತೋಪು ಕಾಳಗಗಳು ನಡದಿರುವವು. ಶತ್ರುಗಳು ಬಾಲ್ಲಿಕೋರ್ ವಿಮಿಗ್ಯಾವ ಮೊದಲಾದ ಕಡೆಗಳ ಸೇನಾನೆಲೆಗಳನ್ನು ಮುತ್ತಲು ಸಾಧನ ನಡಿಸಿದರೂ ಶತ್ರುಗಳಿಂದ ಈ ಭಾಗದಲ್ಲಿ ಏನೂ ಮಾಡಲಿಕ್ಕೂ ಆಗಲಿಲ್ಲ. ಪ್ರಕೃತ ತೋಪು ಕಾಳಗಗಳಿಂದ ತಿರಿಗೊಮ್ಮೆ ಭೀಕರವಾದ ಕದನ ಬ್ರಿಟಿಷರು ಪ್ರಾರಂಭಿಸಿರುತ್ತಾರೆಂತ ತಿಳಿದುಬರುತ್ತದೆ. ಕ್ರ್ಯೊಯಿಸ್ ಪ್ರಾಂತ್ಯದಲ್ಲಿ ಶತ್ರುಗಳು ಫ್ರೆಂಚರನ್ನು ಬಹಳವಾಗಿ ಕಾದಾಡಿದರು. ಆದರೆ ಫ್ರೆಂಚರು ಶತ್ರುಗಳನ್ನು ಬಹಳ ನಷ್ಟಗೊಳಿಸಿ ಹಿಮ್ಮೆಟ್ಟಿರುತ್ತಾರೆ.

ಬ್ರಿಟಿಷರು ಟೆಂಬಿ ಪ್ರಾಂತ್ಯದಲ್ಲಿ ಕಳಕೊಂಡ ನೆಲೆಯನ್ನು ತಿರಿಗಿ ಪಡಕೊಂಡಿರುವರು. ಲಿಬಸ್ಲೆ ನ್ಯುವಚಿಪೆಲ್ಲಿಯ ನೆರೆಯಲ್ಲಿ ಶತ್ರುಗಳು ರಾತ್ರಿ ಕಾಲಗಳಲ್ಲಿ ನಡಿಸಿದ ಕದನಗಳು ನಿಷ್ಫಲವಾಗಿ ಹೋಗಿವೆ. ವರ್ಮಿಲಿಸ್‌ದ ಪೂರ್ವದಲ್ಲಿರುವ ಶತ್ರುಗಳ ಕಂದಕಗಳನ್ನು ಬ್ರಿಟಿಷರು ಹಿಡಿದಿರುವರು.

ಸಾಟೆಜ್ ನದಿಯ ದಕ್ಷಿಣದಲ್ಲಿ ಬಹಳ ಕದನಗಳು ನಡದವು. ತಮ್ಮ ಸೇನೆಯನ್ನು ಅನೇಕ ಸೇನಾಂಗಗಳಿಂದ ಬಲಪಡಿಸಿ ಶತ್ರುಗಳು ಬಂದಿದ್ದರು. ಆದ್ದರಿಂದ ಬೆಳಿಗ್ಗೆ ಪಡದಿದ್ದ ಜಯಲಾಭದ ಪ್ರಯೋಜನವನ್ನು ವಿಶೇಷವಾಗಿ ಮುಂದರಿಸಿ ಪಡಿಯಲು ಆಗಲಿಲ್ಲ. ಈ ಕದನಗಳಲ್ಲಿ ೯೨ ಜನ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಶತ್ರುಗಳ ೧೦ ವಾಯುವಿಮಾನಗಳನ್ನು ನಾಶಪಡಿಸಿರುತ್ತಾರೆ. ಬ್ರಿಟಿಷರ ೪ ವಿಮಾನಗಳು ಕಾಣೆಯಾಗಿವೆ. ಬ್ರಿಟಿಷರು ಸಾಜೆಜ್ ನದಿಯನ್ನು ದಾಟಿಕೊಂಡು ಶತ್ರುಗಳು ತೋಪುಗಳನ್ನು ಹಾರಿಸುವ ಮುಖ್ಯ ಸ್ಥಾನಗಳನ್ನು ಸ್ವಾಧೀನಪಡಿಸಿಕೊಂಡಿರುವರು. ಈ ಪ್ರಾಂತ್ಯದಲ್ಲಿ ೮೦ ಜನ ಶತ್ರುಸೇನಿಕರನ್ನು ಸೆರೆಹಿಡಿದಿರುತ್ತಾರೆ. ಈ ಪ್ರಾಂತ್ಯದಲ್ಲಿ ಕದನಗಳು ಇನ್ನೂ ನಡಿಯುತ್ತಲಿವೆ.

ಗೊರಿಜಾದ ಪೂರ್ವಪ್ರಾಂತ್ಯಗಳಲ್ಲಿ ಶತ್ರುಗಳು ವರ್ಟೊಯಿಬೊಜಾದಿಂದ ಸಮುದ್ರ ಕರಾವಳಿಯವರೆಗೆ ಇಟಲಿಯನರ ಮೇಲೆ ತೋಪುಗುಂಡುಗಳನ್ನು ಹಾರಿಸಿ ಕದನವನ್ನು ನಡಿಸಿದರು. ಆದರೆ ಇಟಲಿಯನರು ಬಹಳ ಪರಾಕ್ರಮದಿಂದ ಶತ್ರುಗಳನ್ನು ಇದಿರಾಡಿಕೊಂಡು ಶತ್ರುಗಳನ್ನು ಹಿಂದಕ್ಕೆ ಓಡಿಸಿರುತ್ತಾರೆ.

ವಿದೇಶ ವೃತ್ತಾಂತ.

ಅಮೇರಿಕದ ಸಂಯುಕ್ತ ಮಹಾ ಸಂಸ್ಥಾನಗಳಿಂದ ರುಶ್ಯಕ್ಕೆ ಹೊರಟಿರುವ ರಾಯಭಾರಿಗಳು ರುಶ್ಯಕ್ಕೆ ಬಂದು ತಲ್ಪಿರುವರು. ರುಶ್ಯದ ಯುದ್ಧಮಂತ್ರಿಗಳಾದ ಎಮ್. ಕೆರೆನ್ಸ್ಕಿಯವರು ಯುದ್ಧರಂಗದ ಎಲ್ಲಾ ಭಾಗಗಳಿಗೂ ಹೋಗಿ ರುಶ್ಯನರ ಸೇನಿಕರನ್ನು ಕಂಡು ಬಂದು, ಸೇನಿಕರು ಶತ್ರುಗಳೊಡನೆ ಏಕೀಭಾವವನ್ನು ಎಂದೂ ಇಟ್ಟಗೊಡಲಾರರೆಂದೂ, ಸೇನಿಕರೊಳಗಿನ ವ್ಯವಸ್ಥೆಯೂ ಸರಿಯಾಗುತ್ತ ಬರುತ್ತಿದೆ ಎಂದೂ, ಸೇನಿಕರ ಬಲವೂ ದಿನೇ ದಿನೇ ಹೆಚ್ಚುತ್ತದೆ ಎಂದೂ, ಹೇಳಿರುತ್ತಾರೆ. ರೀಗಾದಲ್ಲಿಯ ರುಶ್ಯನರು ಪ್ರತ್ಯೇಕ ಸಂಧಿಯಾ ಶರ್ತಗಳನ್ನು ಒಳಸಂಚಿನಿಂದ ತಂದಿದ್ದ ಒಬ್ಬ ಜರ್ಮನ್ ದಳವಾಯಿಯನ್ನು ಸೆರೆಹಿಡಿದಿರುವರು. ಈತನನ್ನು ಬಿಟ್ಟುಕೊಡಬೇಕೆಂತ ಜರ್ಮನರು ವಾಯುವಿಮಾನಗಳ ಮೂಲಕ ಕೇಳಿಕೊಂಡರೂ ರುಶ್ಯನರು ಈತನನ್ನು ಬಿಡಲಿಲ್ಲ.

ಮೇ ತಿಂಗಳಲ್ಲಿ ಸಬ್ ಮರೀನುಗಳ ಮೂಲಕ ಮುಳುಗಿಹೋದ ನೋರ್ವೇ ದೇಶದ ಸ್ಟೀಮರುಗಳು ಒಟ್ಟಿಗೆ ೭೫,೩೯೭ ಟನ್ನುಗಳ ಭಾರವುಳ್ಳದ್ದಾಗಿವೆ.

ಅಮೇರಿಕದ ಬ್ರೆಜಿಲ್ ದೇಶದವರು ಜರ್ಮನರ ೪೨ ಹಡಗುಗಳನ್ನು ಸುರಕ್ಷಿತವಾಗ ಹಿಡಿದಿರುವರು. ಮಿತ್ರರ ಉಪಯೋಗಕ್ಕೋಸ್ಕರ ಇವು ಕೊಡೋಣಾಗುವವು.

ಚಿಕಾಗೋದಲ್ಲಿ ಜರ್ಮನರ ಮೊದಲಿನ ರಾಯಭಾರಿಯಾಗಿದ್ದ ಬೆರನ್‌ರಿಸ್ ವಿಟ್ಸ್‌ರು ಕೂಡಿ ೧೪ ಜನರ ಮೇಲೆ ಹಿಂದೂಸ್ಥಾನದಲ್ಲಿ ದಂಗೆ ಎಬ್ಬಿಸುವ ಒಳಸಂಚನ್ನು ನಡಿಸುವರೆಂಬ ತಪ್ಪು ಆರೋಪಿಸಲ್ಪಟ್ಟಿರುವದು.

ಕುಡಿಕತನದ ಚಟ್ಟನ್ನು ಅಡಗಿಸಿಬಿಡಲು, ರುಶ್ಯದಲ್ಲಿ ಕಠಿಣವಾದ ಶಾಸನಗಳನ್ನು ಜಾರಿಗೆ ತರುತ್ತಿರುವರು. ಬಹಿರಂಗ ಸ್ಥಳಗಳಲ್ಲಿ ಕುಡಿದು ಮತ್ತರಾದಂಥವರು ಸಿಕ್ಕಿದರೆ ಇಂಥವರಿಗೆ ೧॥ ವರುಷದ ಕಾರಾಗೃಹ ವಾಸದ ಶಿಕ್ಷೆ ಮತ್ತು ಕುಡಿಕತನದಿಂದ ಕಳವು ಬಲಾತ್ಕಾರ ಇತ್ಯಾದಿಗಳನ್ನು ನಡಿಸಿದವರಿಗೆ ೮ ವರುಷಗಳ ಜಾತ್ರ ಶಿಕ್ಷೆಯು ಕೊಡೋಣಾಗುವದು.

ಜುಲಾಯಿ ತಿಂಗಳ ತಾ. ೧೫ರಿಂದ ೩೦ರೊಳಗೆ ಸ್ಟಾಕ್ ಹೋಮ್ ಎಂಬಲ್ಲಿ ಒಂದು ಸೋಶಿಯಲಿಸ್ಟ್ ಕನ್ಫರೆನ್ಸ್ ಎಂಬ ಆಯಾ ಜನಾಂಗಗಳ ಲೋಕಪಕ್ಷದ ಪ್ರತಿನಿಧಿಗಳುಳ್ಳ ಪರಿಷತ್ತು ಕೂಡಬೇಕೆಂತ ನಿರ್ಣಯವಾಗಿರುತ್ತದೆ.

ಚೀನಾದೇಶದ ಸ್ಥಿತಿಯು ವಿಪರೀತವಾಗಿದೆ. ಚೀನ ಸಾಮ್ರಾಜ್ಯದ ಸಂಸ್ಥಾನಗಳಲ್ಲಿ [illegible] ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಂಡಿರುವವು.

ಅಮೇರಿಕದಿಂದ [illegible]

ರಿಕದಲ್ಲಿ ಆಶ್ಚರ್ಯವನ್ನು ಉಂಟುಮಾಡಿರುವದು, ಆ ದೇಶದಲ್ಲಿ ಗುಪ್ತಚರರ ಸೋಂಕು ಇರುವದೆಂಬುದು ಇದರಿಂದ ವ್ಯಕ್ತವಾಗುವದು.

ಜರ್ಮನಿಯಲ್ಲಿರುವ ಬ್ರಿಟಿಷ ಕೈದಿಗಳ ಸಂಖ್ಯೆಯು ೪೩,೮೩೧ ಆಗಿದೆ, ಬ್ರಿಟಿಷ ದ್ವೀಪಗಳಲ್ಲಿರುವ ಜರ್ಮನ ಕೈದಿಗಳ ಸಂಖ್ಯೆಯು ೫೮,೧೩೮ ಆಗಿರುವದು.

ಅಂಗ್ಲಾಂಡದಲ್ಲಿ ಏರ್ಪಡಿಸಿದ ಯುದ್ಧ ಸಾಲದ ಪೈಕಿ ಪೋಸ್ಟ್ ಆಫೀಸುಗಳ ಮೂಲಕ ಬಂದದ್ದು ೧೯೧೧ ಮಿಲಿಯ ಆಗಿರುತ್ತದೆ ಇದರಿಂದ ಸೇವಿಂಗ್ಸ್ ಬೇಂಕುಗಳ ಠೇವಣಾತಿಗಳು ಕಡಮೆಯಾದದ್ದಿಲ್ಲ. ಇವುಗಳ ಸಂಖ್ಯೆಯು ೧೮೫,೪೦೧,೦೦೦ ಆಗಿದೆ.

ಅಮೇರಿಕದ ಸಂಯುಕ್ತ ಮಹಾ ಸಂಸ್ಥಾನಗಳ ಬ್ರಿಟಿಷರಿಗೆ ಕೊಟ್ಟ ಹಣವು ೮೦ ಮಿಲಿಯ ಪವನುಗಳಾಗಿದೆ.

ನೌಕಾವಳಿಯ ಮತ್ತು ಇತರ ಸೇನೆ ಸಂಬಂಧವಾದ ಸುದ್ದಿಗಳನ್ನು ತಿಳಕೊಂಡು ಇವುಗಳನ್ನು ವೈರಿಗಳಿಗೆ ತಿಳಿಸುವ ಒಳಸಂಚನ್ನು ನಡಿಸುತ್ತಿರುವ ನಾಲ್ಕು ಜನರನ್ನು ಅಮೇರಿಕದಲ್ಲಿ ಕೈದು ಮಾಡಿರುತ್ತಾರೆ. ಇವರಲ್ಲಿ ಒಬ್ಬನು ಜರ್ಮನನು ಇನ್ನೊಬ್ಬನು ಸ್ವೀಡ್‌ದೇಶದವನಾಗಿರುತ್ತಾನೆ.

ಜರ್ಮನರ ೯ ಜನ ಸೋಶಿಲಿಸ್ಟರು, ಲೋಕಪಕ್ಷದವರು ಸ್ಟಾಕ್‌ಹೋಮಿಗೆ ಬಂದು ತಲ್ಪಿರುತ್ತಾರೆ.

ಪೇರಿಸ್ ಟೆಂಬಿನಲ್ಲಿ ಸ್ಟಾಕ್‌ಹೋಮಿನ ವಿಷಯ ೩ ದಿವಸ ತರ್ಕವಾದಗಳು ಗುಪ್ತವಾಗಿ ನಡದು ಎಮ್. ರಿಬೋಟ್‌ರವರ ಭಾಷಣವು ಚೇಂಬರಿನವರಿಂದ ಅಂಗೀಕರಿಸಲ್ಪಟ್ಟಿರುವದು.

ಬ್ರಿಟಿಷರ ಕಲಾಸಿಗಳ ಮತ್ತು ಹಡಗುಗಳ ಇಂಜಿನಗಳನ್ನು ನಡಸುವವರ ಸಂಘದ ಕಾರ್ಯನಿರ್ವಾಹಕರು ಒಂದು ವಿಶೇಷವಾದ ನಿರ್ಣಯವನ್ನು ಮಾಡಿಕೊಂಡಿದ್ದಾರೆ. ಈ ನಿರ್ಣಯದ ಪ್ರಕಾರ ತಮ್ಮ ಬೋಟುಗಳ ಮೂಲಕ ಹಡಗುಗಳನ್ನು ಮುಣಗಿಸಿ ಕೊಂದ ಕಲಾಸಿಗಳ ಮತ್ತು ಹಡಗುಗಳ ಬಗ್ಗೆ ನಷ್ಟ ಪರಿಹಾರವನ್ನು ಕೇಳಿಕೊಳ್ಳುವರೆಂಬ ತಮ್ಮ ಪತ್ರಿಕೆ ಸಹಿ ಹಾಕಿದ ವಿನಹ ಸ್ಟಾಕ್‌ಹೋಮಿಗೆ ಹೋಗುವಂಥವರನ್ನು ಒಯ್ಯುವ ಹಡಗುಗಳಲ್ಲಿ ಕೆಲಸ ಮಾಡವೆಂತ ನಿರ್ಧಾರ ಮಾಡಿರುತ್ತಾರೆ. ಪೆಟ್ರೋಗ್ರೇಡ್‌ಗೆ ಹೋಗಿ ತಮ್ಮ ಆಲೋಚನೆಯನ್ನು ತಿಳಿಸಲು ಟೋಮಾಸ್ ಎಂಬವನನ್ನು ಕಳುಹಿಸಿಕೊಡುವರು.

ಚೀನಾ ದೇಶದಲ್ಲಿ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಂಡಿರುವ ಸಂಸ್ಥಾನದವರು ತಮ್ಮ ಒಂದು ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಿಕೊಂಡಿರುತ್ತಾರೆ. ಚೀನಾ ದೇಶದ ಪ್ರೆಸಿಡೆಂಟರವರು ದೇಶಕ್ಕೆ ಬಂದು ಒದಗಿರುವ ಈ ಕಷ್ಟಪ್ರಾಪ್ತಿ ವಿಷಯ ಆಲೋಚಿಸುವರೆ ಜನರಲ್ ಚಂಗ್‌ಶನ್ ಎಂಬ ಸಂಸ್ಥಾನಾಧಿಪರನ್ನು ಆಮಂತ್ರಿಸಿರುವರು.

ಉತ್ತರ ಹಿಂದೂಸ್ಥಾನ.

ದರ್ಭಂಗದ ಮಹಾರಾಜರವರು ಚಕ್ರವರ್ತಿಯವರ ಜನನ ದಿವಸದ ಸ್ಮರಣಾರ್ಥವಾಗಿ ಎರಡು ಲಕ್ಷ ರೂಪಾಯಿಗಳನ್ನು ಯುದ್ಧ ಸಹಾಯಾರ್ಥವಾಗಿ ಕೊಟ್ಟಿರುವರು. ಚಕ್ರವರ್ತಿಯವರ ಸೂಚನೆ ಮೇರೆಗೆ ಈ ಹಣವು ಯುದ್ಧ ಸಹಾಯಾರ್ಥವಾಗಿ ವಿನಿಯೋಗಿಸಲ್ಪಡುವದು.

ಇದೇ ತಿಂಗಳ ತಾ. ೧೪ನೆಯ ದಿನ ಯುದ್ಧಕಾಲದ ದಿನವಾಗಿ ಆಚರಿಸಿ ಕ್ರೈಸ್ತ ದೇವಾಲಯಗಳೇ ಮೊದಲಾದ ದೇವಾಲಯಗಳಲ್ಲಿ ಆರಾಧನೆಗಳನ್ನು ನಡಿಸುವ ಏರ್ಪಾಡು ಮುಂಬಯಿ ಪ್ರಾಂತ್ಯಗಳಲ್ಲಿ ಮಾಡೋಣಾಗುವದು.

ಡಾಕ್ಟರ ದಾದಾಬಾಯಿ ನವರೋಜಿಯವರಿಗೆ ದೇಹಾಲಸ್ಯವು ಉಂಟಾಗಿರುವ ಕಾರಣ ಇವರನ್ನು ವರ್ಸೋವದಿಂದ ಮುಂಬಾಯಿಗೆ ತಂದಿರುತ್ತಾರೆ.

ಯುದ್ಧದ ಪರವಾಗಿ ವೈಸರಾಯಿ ಪ್ರಭುಗಳಿಗೆ ಯುಕ್ತ ತೋರುವ ವಿಧಾನಗಳಲ್ಲಿ ವಿನಿಯೋಗಿಸುವರೆ ಮಹಾರಾಜ ಹೋಳ್ಕರರವರು ರೂ. ೫೦,೦೦೦ವನ್ನು ಕೊಟ್ಟಿರುವರು.

ಡಿಫೆನ್ಸ್ ಒಫ್ ಇಂಡಿಯಾ ಆಕ್ಟಿಗೆ ಅನುಗುಣವಾದ ಹುಕುಮಿನ ಪ್ರಕಾರ ಪೋಲಾವರದಿಂದ ಒಂದು ಮೊಸ್ಲ ಕುಟುಂಬಕ್ಕೆ ಸಂಬಂಧ ಪಟ್ಟ ಒಬ್ಬ ಬಂಗಾಳಿ ಯುವತಿಯನ್ನು ಕೈದು ಮಾಡಿ, ಕಲ್ಕತ್ತೆಗೆ ಕಳೆದ ತಿಂಗಳ ಪ್ರಾರಂಭದಲ್ಲಿ ತಂದಿದ್ದರು. ಇವಳನ್ನು ಕಲ್ಕತ್ತೆಯ ಒಂದು ಪರೋಪಕಾರಿಕ ಸಂಸ್ಥೆಯ ಕಾವಲಿನಲ್ಲಿಟ್ಟಿದ್ದಾರೆಂಬುದಾಗಿ ತಿಳಿದುಬರುತ್ತದೆ. ಡಿಫೆನ್ಸ್ ಒಫ್ ಇಂಡಿಯಾ ಆಕ್ಟಿನ ಜಾರಿಯು ಬಂಗಾಳದ ಸ್ತ್ರೀಯರಲ್ಲಿ ಜಾರಿಯಾದದ್ದು ಇದು ಪ್ರಥಮ ಸತಿಯಾಗಿರುತ್ತದೆ.

ಬಿಹಾರ ಮತ್ತು ಒರಿಸ್ಸಾದ ಸರಕಾರದ ಕಾರ್ಯನಿರ್ವಾಹಕ ಕೌನ್ಸಿಲಿನ ಮೆಂಬರರಾದ ದರ್ಭಂಗದ ಮಹಾರಾಜರವರ ಸ್ಥಾನಕ್ಕೆ ಪಾಟ್ನದ ಹೈ ಕೋರ್ಟ್ ಜಡ್ಜರಾದ ಬಹುಮಾನ ಪಟ್ಟ ಸಯ್ಯದ್ ಶರಾಫುದ್ದಿನ್‌ರವರು ನೇಮಿಸಲ್ಪಟ್ಟಿರುವದರಿಂದ ಪಾಟ್ನದ ಹೈ ಕೋರ್ಟ ಜಡ್ಜರಾಗಿ ಸರ್ ಸಯ್ಯದ್ ಅಲಿ ಇಮಾಮ್‌ರವರು ನೇಮಿಸಲ್ಪಟ್ಟಿರುತ್ತಾರೆ.

ವಿಲಾಯತಿ ಮೊದಲಾದ ದೇಶಗಳಿಂದ ಇಲ್ಲಿಗೆ ಜಿನ್ ಮೊದಲಾದ ಆಹಾರ ಸಂಗ್ರಹಗಳು ರಫ್ತಾಗುತ್ತಿವೆ. ಇವುಗಳ ಬದಲಿಗೆ ಈ ದೇಶದಲ್ಲಿಯೇ ಇವುಗಳನ್ನು ತಯಾರಿಸುವದರಿಂದ ಪ್ರಕೃತ ಇವುಗಳನ್ನು ತುಂಬಿಕೊಂಡು ಬರುವ ಹಡಗುಗಳ ಭಾರವನೆಯು ಕಡಮೆಯಾಗಿ, ಸಾಮ್ರಾಜ್ಯದ ಯುದ್ಧದ ಸೇವೆಗೆ ಈ ಮೂಲಕ ಹಡಗುಗಳ ಸೌಕರ್ಯವನ್ನು ಒದಗಿಸಬಹುದೆಂತ ದೇಶೀಯ ಆಹಾರ ಪದಾರ್ಥಗಳ ಒಂದು ಪ್ರದರ್ಶನವನ್ನು ಮುಂಬಯಿ ಯುದ್ಧಫಂಡಿನ ಸ್ತ್ರೀಯರ ಶಾಖೆಯವರು ಮುಂಬಯಿಯಲ್ಲಿ ಏರ್ಪಡಿಸುವರು. ವೈಸರಾಯಿ ಪ್ರಭುಗಳೂ, ಮುಂಬಯಿ ಗವರ್ನರರೂ, ಈ ಏರ್ಪಾಡಿಗೆ ವಿಶೇಷ ಪ್ರೋತ್ಸಾಹವನ್ನು ಕೊಡುವರು. ದಬ್ಬಿಯೊಳಗೆ ತುಂಬಿಬರುವ ಮಾಂಸದ ಪದಾರ್ಥಗಳು, ಮಾಂಸ, ಜಿನ್‌ಗಳೆಂಬ ಮೊಟ್ಟೆಗಳು, ನಾನಾ ನಮೂನೆಯ ಹಣ್ಣುಗಳ ಮುರಬ್ಬಗಳು, ಸಾಬೂನು, ಬಗೆಬಗೆಯ ಉಪ್ಪಡಗಳು, ಚೊಕಲೇಟು, ಚಾ, ಕಾಫಿ, ಇತ್ಯಾದಿ ಆಹಾರಪದಾರ್ಥಗಳೂ, ಗೃಹಕೃತ್ಯದ ಇತರ ಸಾಮಗ್ರಿಗಳೂ, ಈ ಪ್ರದರ್ಶನದಲ್ಲಿ ದೇಖಾವೆ ಬಗ್ಗೆ ಇಡೋಣಾಗುವುವಂತೆ ಗೊತ್ತಾಗಿದೆ. ಇಂಥಾ ಪ್ರದರ್ಶನವನ್ನು ಏರ್ಪಡಿಸಿರುವದರಿಂದ ಈ ಪದಾರ್ಥಗಳು ಎಲ್ಲಿಲ್ಲಿ ತಯಾರಾಗುತ್ತಿವೆ, ಎಂಬುದು ಗೊತ್ತಾಗಿ ಗಿರ್ಹ್ಯಾಕಿಗಳಿಗೆ ಅವುಗಳನ್ನು ತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಂಥಾ ಒದವೆಗಳನ್ನು ಪ್ರಕೃತ ತಯಾರಿಸುತ್ತಿರುವ ವ್ಯಾಪಾರಸ್ಥರ ಮತ್ತು ಇತರರ ಸಹಕಾರವನ್ನು ದೇಶದ ಎಲ್ಲಾ ಕಡೆಗಳಿಂದಲೂ, ಕೋರಿರುತ್ತಾರೆ. ಈ ಒದವೆಗಳನ್ನು ಪ್ರದರ್ಶನಕ್ಕೆ ಇಡಲು, ಅಪೇಕ್ಷಿಸುವವರು ಇದೇ ಬರುವ ಜುಲಾಯಿ ತಿಂಗಳ ತಾ. ೧೫ರರೊಳಗೆ ಪ್ರದರ್ಶನದ ಕಾರ್ಯದರ್ಶಿಗಳಿಗೆ ಬರಕೊಳ್ಳಬೇಕೆಂತ ಪ್ರಕಟಿಸಲ್ಪಟ್ಟಿರುವದು.

ದಕ್ಷಿಣ ಹಿಂದೂಸ್ಥಾನ.

[illegible]

ಜಡ್ಜರಾದ ಬಹುಮಾನಪಟ್ಟ ಟಿ. ಸದಾಶಿವ ಅಯ್ಯರು, ಮಿಸಿಸ್ ಅನ್ನಿಬೆಸೆಂಟರು ಈ ಪರಿಷತ್ತಿಗೆ ಪ್ರೇಕ್ಷಕರಾಗಿ ಬಂದಿರುವರು. ದಿವಾನ್ ಬಹದ್ದೂರ್ ಕರುಣಾಕರ ಮೇನನರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿರುತ್ತಾರೆ.

ರಾಷ್ಟ್ರಾಭಿವೃದ್ಧಿಗೆ ಬೇಕಾಗಿರುವ ರಾಜಕೀಯ ಸಾಂಪತ್ತಿಕ ಸಂಸ್ಥೆಗಳ ಏರ್ಪಾಡುಗಳು ಮೈಸೂರು ಸಂಸ್ಥಾನದಲ್ಲಿ ಪ್ರಜಾ ಪ್ರತಿನಿಧಿ ಸಭೆ, ನ್ಯಾಯನಿರ್ಮಾಣ ಸಭೆ, ಸಂಪದಭಿವೃದ್ಧಿ ಪರಿಷತ್ತು ಇವುಗಳ ಮೂಲಕ ನಡಿಯುವಂಥಾದ್ದು ವಾಚಕರು ತಿಳಿದಿರುವರು. ಪ್ರಕೃತ ಸಾಮಾಜಿಕ ವಿಷಯಗಳಲ್ಲಿ ಮತ್ತು ಪ್ರಜಾಧರ್ಮ ಶಿಷ್ಟಾಚಾರಗಳಲ್ಲಿ ಬೇಕಾದ ಅಭಿವೃದ್ಧಿ ಸಾಧನೆಯನ್ನು ನಡಿಸುವ ಉದ್ದೇಶಗಳಿರುವ ಸಾಮಾಜಿಕ ಪರಿಷತ್ತು ಮೈಸೂರಿನಲ್ಲಿ ಇದೇ ತಿಂಗಳ ತಾ. ೩ರಲ್ಲಿ ಕೂಡಿತ್ತು. ಮೈಸೂರಿನ ಯುವರಾಜರವರ, ಈ ಪರಿಷತ್ತಿಗೆ ಮುಹೂರ್ತ ಮಾಡಿರುತ್ತಾರೆ. ಸರ್. ಎಮ್. ವಿಶ್ವೇಶ್ವರಯ್ಯನವರು ಈ ಪರಿಷತ್ತಿನವರು ನಡಿಸಬೇಕಾದ ಕಾರ್ಯಕ್ರಮಗಳನ್ನು ವಿವರವಾಗಿ ಸೂಚಿಸಿಕೊಂಡು ಸಭೆಯಲ್ಲಿ ಭಾಷಣವನ್ನು ಮಾಡಿರುವರು. ಮೈಸೂರಿನ ಹಲವು ಕುಲಸ್ತ್ರೀಯರು ಸಹ ಸಭೆಯಲ್ಲಿ ಹಾಜರಾಗಿ ಸಭಾ ನಿರ್ಣಯಗಳಲ್ಲಿ ಹಲವನ್ನು ಅನುಮೋದಿಸಿರುವರು. ನಿರಾಶ್ರಿತ ಜನರ ಉದ್ಧರಣೆ, ಬಾಲಿಕೆಯರ ವಿವಾಹ ಪ್ರಾಯವನ್ನು ಹೆಚ್ಚಿಸುವದು, ಆರೋಗ್ಯಪಾಲನೆ ಇತ್ಯಾದಿ ವಿಷಯಗಳು ಸಭೆಯಲ್ಲಿ ಪಾರಿಸಲ್ಪಟ್ಟ ನಿರ್ಣಯಗಳು ಮುಖ್ಯರಾಗಿವೆ.

ನೆಲ್ಲೂರಿನಲ್ಲಿ ಕೂಡಿದ ಆಂಧ್ರರ ಪರಿಷತ್ತಿನಲ್ಲಿ ಪ್ರೆಸ್ ಆಕ್ಟನ್ನು ರದ್ದುಪಡಿಸಬೇಕೆಂಬ ನಿರ್ಣಯವು ಮಂಜೂರಾದದ್ದಲ್ಲದೆ, ರಾಜಮಹೇಂದ್ರಿಯಲ್ಲಿ ಪ್ರಕಟವಾಗುತ್ತಿರುವ ದೇಶಮಾತಾ ಎಂಬ ಪತ್ರದಿಂದ ರೂ. ೧೦೦೦ದ ಜವಾಬ್ದಾರಿಯನ್ನು ಸರಕಾರದವರು ತಕ್ಕೊಂಡಿರುವದರಿಂದ ಈ ಜವಾಬ್ದಾರಿ ಹಣವನ್ನು ಪರಿಷತ್ತಿನವರೇ ಸಂಗ್ರಹಿಸಿಕೊಡಬೇಕೆಂತ ನಿಶ್ಚಯಿಸಲ್ಪಟ್ಟಿತು. ಈ ಬಗ್ಗೆ ಸಭೆಯಲ್ಲಿಯೇ ರೂ. ೧೩೩೦ ಕೂಡಿದೆ.

ಹಿಂದೀ ಜನಾಂಗದ ಯಥಾರ್ಥವಾದ ಏಳಿಗೆಗೆ ಬೇಕಾದ ಶಿಕ್ಷಣವನ್ನು ಕೊಡಲು ಅನುಕೂಲವಾದ ನೇಶನಲ್ ಕೊಲೇಜುಗಳನ್ನು ಏರ್ಪಡಿಸುವ ಬಗ್ಗೆ ಒಂದು ಬೋರ್ಡನ್ನು ಸ್ಥಾಪಿಸುವ ವಿಷಯದಲ್ಲಿ ಹಿಂದೀ ಪ್ರಮುಖರೆಲ್ಲರಿಗೆ ಮಿಸಿಸ್ ಎನ್ನಿ ಬಿಸೆಂಟರವರು ಬರೆದಿರುವ ಒಂದು ಲೇಖವು ಪ್ರಕಟವಾಗಿರುತ್ತದೆ. ಥಿಯೊಸೊಫಿಕಲ್ ಸೊಸ್ಯಾಟಿಯ ಶಾಲಾ ಕೊಲೇಜುಗಳು ಈ ಬೋರ್ಡಿನ ಅಡಳಿತಕ್ಕೆ ಒಳಪಡಿಸುವವೆಂತ ಬಿಸೆಂಟರವರ ಪತ್ರದಲ್ಲಿ ಸೂಚಿಸೋಣಾಗಿರುವದು. ೭೪ ಜನ ಹಿಂದೀ ಪ್ರಮುಖರಿಗೆ ಈ ಪತ್ರವು ಕಳುಹಿಸೋಣಾಗಿರುವದು. ೪೧ ಜನರು ಈ ಬೋರ್ಡಿನ ಮೆಂಬರರಾಗಲು ತಮ್ಮ ಒಪ್ಪಿಗೆಯನ್ನು ಕೊಟ್ಟಿರುವರು. ಈ ಬೋರ್ಡಿನ ಪ್ರಥಮ ಮೆಂಬರರಾಗತಕ್ಕವರ ಹೆಸರುಗಳಲ್ಲಿ ಹಲವು ಸಹ ಸೂಚಿಸೋಣಾಗಿರುವವು. ಬಂಗಾಳದಿಂದ ಸರ್. ರವೀಂದ್ರನಾಥ ಟಾಗೋರ್, ಸುರೇಂದ್ರನಾಥ ಬೆನರ್ಜಿ, ಮೋತಿಲಾಲ್ ಘೋಷ್, ಸಿ ಆರ್. ದಾಸ ಮೊದಲಾದವರು; ಮುಂಬಾಯಿಂದ — ಲೋ. ಬಾಲಗಂಗಾಧರ ತಿಲಕ, ಪ್ರೊಫೆಸ್ಸರ್ ಪಿ. ಕೆ ತಿಲಂಗ, ಜಮುನಾದಾಸ ದ್ವಾರಕದಾಸ. ಯುನೈಟೆಡ್ ಪ್ರೊವಿನ್ಸಗಳಿಂದ—ಬಹುಮಾನಪಟ್ಟ ಡಾಕ್ಟರ್ ತೇಜ ಬಹದ್ದೂರ್ ಸಪ್ರು, ಬಹುಮಾನಪಟ್ಟ ಮೋತಿಲಾಲ ನೇಹರು, ಬಿ. ಸಂಜೀವರಾವ್ ಮೊದಲಾದವರು. ಮದ್ರಾಸಿನಿಂದ — ಸರ್. ಸುಬ್ರಮಣ್ಯ ಅಯ್ಯರ್, ವಿ. ಪಿ. ಮಾಧವರಾಯರು, ಬಹುಮಾನಪಟ್ಟ ಬಿ. ಎನ್. ಶರ್ಮ, ಜಸ್ಟಿಸ್ ಸದಾಶಿವ ಐಯ್ಯರ್ ಮೊದಲಾದವರು.

ಕೊಯಮತ್ತೂರಿನ ಜಿಲ್ಲಾ ಪರಿಷತ್ತಿನ ಆಮಂತ್ರಣ ಕಮಿಟಿಯವರ ಸಭೆಯು ಇದೇ ತಿಂಗಳ ತಾ. ೪ರಲ್ಲಿ ಕೂಡಿತ್ತು. ಜುಲಾಯಿ ತಿಂಗಳ ಅಂತ್ಯದೊಳಗೆ ಪರಿಷತ್ತು ಕೂಡಬೇಕೆಂದು, ಈ ಸಭೆಯಲ್ಲಿ ನಿರ್ಣಯವಾಗಿದೆ.

ಕಳದ ಮೇ ತಿಂಗಳ ತಾ. ೨೬ರವರೆಗೆ ಡಿಫೆನ್ಸ್ ಒಫ್ ಇಂಡಿಯಾ ಫೋರ್ಸಿಗೆ ಸೇರುವರೆ ಬಂದ ಅರ್ಜಿಗಳು ಮದ್ರಾಸು ಸಂಸ್ಥಾನದಲ್ಲಿ ೪೨೨ ಆಗಿರುತ್ತವೆ. ಇವುಗಳ ವಿವರವು ಈ ಪ್ರಕಾರವಾಗಿರುವದು: — ಕೊಯಮತ್ತೂರು ೨೧, ಮದ್ರಾಸು ೪೪, ಮಧುರಾ ೨೬, ತಿರುಚಿನಾಪಳ್ಳಿ ೧೬, ಕರ್ನೂಲು ೨, ದಕ್ಷಿಣ ಆರ್ಕಾಡು ೫, ಚಿಂಗಲ್ಪಟ್ಟು ೨೧, ಉತ್ತರಾರ್ಕಾಡು ೮೫, ನೆಲ್ಲೂರು ೪, ಅನಂತಪುರ ೨, ತಂಜಾವೂರು ೩೯, ಗೋದಾವರಿ ೮, ವಿಶಾಖಪಟ್ಟ ೧, ದಕ್ಷಿಣ ಕೆನ್ನಡ ೬, ತಿನ್ನೆವೆಲ್ಲಿ ೫, ಚಿತ್ತೂರು ೪, ನೀಲ್ಗಿರಿ ೩, ಮಲಬಾರು ೧೩೬, ಕೃಷ್ಣ ೪, ಬಳ್ಳಾರಿ ೪, ಗುಂಟೂರು ೬, ಗಂಜಾಮು ೩, ಸೇಲಂ ೬, ಮೈಸೂರು ೧, ಬೆಂಗಳೂರು ೧, ಕೊಡಗು ೮, ಕಡಪಾ ೧, ತಿರುವಾಂಕೋಡು ೧, ಜಮುಲಾ ೪೪೨. ಈ ಪೈಕಿ ೨೪೧ ಜನರು ಬ್ರಾಹ್ಮಣರು, ಕ್ರೈಸ್ತರು ೧೬, ಮುಸಲ್ಮಾನರು ೬, ಬಾಕಿಯವರು ನಾಯರರು, ತೀಯರರು, ಪಿಳ್ಳೆಗಳು ಇತರರು ಆಗಿರುತ್ತಾರೆ.

ಮೈಸೂರು ಮಹಾರಾಜರವರ ಜನನ ದಿನದ ಆಚರಣೆಯ ಸಂಭ್ರಮಗಳಲ್ಲಿ ಈ ವರ್ಷ ವೇಶ್ಯಾಸ್ತ್ರೀಯರ ನರ್ತನವನ್ನು ತೆಗೆದುಹಾಕಿರುವರೆಂಬುದಾಗಿ ತಿಳಿಯುತ್ತೇವೆ.

ತಿರ್ಪುರಿನಲ್ಲಿ ಜರಗುವ ಜಾನುವಾರುಗಳ ಪ್ರದರ್ಶನವು ಪ್ರಾರಂಭವಾಗಿರುವದು. ಗವರ್ನರ ದೊರೆಗಳವರು ಈ ದಿನ ಬಂದು ಪ್ರದರ್ಶನವನ್ನು ನೋಡಿ ಇನಾಮುಗಳನ್ನು ಹಂಚುವರು.

ಕೊನೂರಿನಲ್ಲಿ ಯುದ್ಧಸಾಲವನ್ನು ಎತ್ತಲು ಕೂಡಿದ ಸಭೆಯಲ್ಲಿ ಮದ್ರಾಸು ಗವರ್ನರ ದೊರೆಗಳವರು ಬ್ರಿಟಿಷ ಜನರಿಗೆ ಈ ಯುದ್ಧಸಂಬಂಧವಿರುವ ಅಡಚಣೆಗಳನ್ನು ಈ ರೀತಿ ವಿವರಿಸಿರುತ್ತಾರೆ: ಬ್ರಿಟಿಷರ ನೆಶನಲ್ ಡೆಟ್ ಎಂಬುವ ಸಾಲವು ಯುದ್ಧದ ಮೊದಲು ೭೦೬ ಮಿಲಿಯವಿದ್ದದ್ದು ಈಗ ೪೦೦೦ ಮಿಲಿಯಕ್ಕೆ ಮಿಕ್ಕಿರುತ್ತದೆ. ಇದಕ್ಕೆ ಸೇಕಡಾ ೫ರ ದರದ ಬಡ್ಡಿಯೆಂದರೆ ಅದು ೨೦೦ ಮಿಲಿಯವಾಗುತ್ತದೆ. ಯುದ್ಧದ ಮೊದಲು ಬ್ರಿಟಿಷ ಸರಕಾರದ ಉತ್ಪತ್ತಿ ೧೯೮॥ ಮಿಲಿಯವಾಗಿತ್ತು. ಆದ್ದರಿಂದ ಬಡ್ಡಿಯ ಭಾರವು ಸರಕಾರದ ಮೇಲೆ ಈಗಲೇ ಹೇಗೆ ಹೆಚ್ಚಿದೆಂಬುದು ವ್ಯಕ್ತವಾಗುವದು. ದಿನಂಪ್ರತಿ ಖರ್ಚು ಈಗ ಸುಮಾರು ೭ ಮಿಲಿಯವಾಗಿರುತ್ತದೆ. ಇದರಲ್ಲಿ ೧॥ ಮಿಲಿಯ ತೆರಿಗೆಗಳ ಮೂಲಕ ದೊರಕುತ್ತದೆ. ಬಾಕಿ ಉಳಿಯುವ ೫॥ ಮಿಲಿಯ ಪವನುಗಳನ್ನು ಸಾಲಗಳಿಂದ ಭರ್ತಿಮಾಡಿಕೊಳ್ಳಬೇಕು. ನಂತರ ಪ್ರಾಣನಷ್ಟ! ಮಡಿದುಹೋದವರ ಮತ್ತು ಗಾಯಪಡದವರ ಮತ್ತು ಕಾಣೆಯಾದವರ ಸಂಖ್ಯೆಯು ೪,೩೯೧,೦೦೦ ಆಗಿರುವದೆಂತ ಈ ಲೆಕ್ಕ ತಯ್ಯಾರಿಯವರು ಹೇಳುತ್ತಾರೆ. ೪೦ ವರುಷಗಳ ವಯಸ್ಸಿಗೆ ಮೀರದ ಪ್ರಾಯದವರಲ್ಲಿ ೧೦,೫೦೦,೦೦೦ ಜನರ ನಷ್ಟವಿದೆ. ಈ ರೀತಿಯಲ್ಲಿ ಇನ್ನೊಂದು ವರುಷದ ಯುದ್ಧದಿಂದ ಮಾನವ ವರ್ಗದಲ್ಲಿ ೫ ಮಿಲಿಯ ಜನರು ನಷ್ಟವಾಗಿ ಹೋಗುವರು. ನಾಶವಾಗಿ ಹೋದ ಹಡಗುಗಳ ಲೆಕ್ಕವು ಸಂಪೂರ್ಣ [illegible] [illegible] ಆಹಾರ ಜಿನಸುಗಳ [illegible] [illegible] ಯಿಂದ ಬರಗಾಲವು ಬಂದು ಪ್ರಾಪ್ತವಾಗಬಹುದು. [illegible]

[illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು.
ನೆಟಾಲದಲ್ಲಿ ಹಿಂದಿಗಳು ೪
ಸ್ಫುಟವಿಚಾರಗಳು:—
೧ ಬಿಹಾರ-ಪ್ರಾಂತ್ಯದಲ್ಲಿ ಗಾಂಧಿಯವರ ಚೌಕಶಿ . . . . ,,
೨ ಗಾಂಧಿಯವರ ಮೇಲೆ ಮದ್ರಾಸು ಮೇಲಿನ ಟೀಕಾಸ್ತ್ರ—ಮಿ. ಪೊಲಾಕರವರ ಉತ್ತರ ೪-೫
೩ ಭಾರತ ಸಂರಕ್ಷಕ ಸೈನ್ಯ . . . . ,,
೪ ಯುದ್ಧಸಾಲವನ್ನು ಎತ್ತುವದರಲ್ಲಿ ಬಂಗಾಲ ಸರಕಾರದ ಸರ್ಕ್ಯುಲರ್ ,,
೫ ಮುಂಬಯಿಗೆ ಬಂದಿದ್ದ ಸರ್ ಸತ್ಯೇಂದ್ರ ಸಿಂಹ ಮತ್ತು ಬಿಕಾನೇರ ಮಹಾರಾಜರುಗಳ ಸಂದರ್ಶನ. . . . . ,,
೬ ಗೌಡ ಸಾರಸ್ವತರ ಬಡವಿದ್ಯಾರ್ಥಿಗಳಿಗೆ ಸಹಾಯ . . . . ,,
೭ ಶ್ರೀ ಚನ್ನಪುರಿ ಆಯುರ್ವೇದ ಪ್ರಚಾರಿಣೆ ಸಭಾ . . . . ,,
ವರ್ತಮಾನ ಸಂಗ್ರಹಗಳು:—
ಸ್ಥಳಿಕ—ಮಂಗಳೂರು . . . . ,,
೧ ಯೂರೋಪದ ಮಹಾಯುದ್ಧ ೫
೨ ವಿದೇಶ ವೃತ್ತಾಂತ, ಉತ್ತರ ಹಿಂದುಸ್ಥಾನ. . . . . ,,
೩ ದಕ್ಷಿಣ ಹಿಂದೂಸ್ಥಾನ. . . . . ,,
೪ ಬಾತ್ಮಿ ಪತ್ರಗಳು, ಮುಲ್ಕಿ, ಕಾರ್ಕಳ ೬
೫ ನಮ್ಮ ಜಿಲ್ಲೆಯಲ್ಲಿ ಎತ್ತಲ್ಪಟ್ಟ ಯುದ್ಧ ಸಾಲ . . . . ,,
೬ ಪತ್ರವ್ಯವಹಾರ, ಇತರ ವಿಷಯಗಳು—ಕೊಬ್ಬರಿ . . . . ,,

ಸ್ವದೇಶಾಭಿಮಾನಿ.

ಶಕ ೧೮೩೯ ಜ್ಯೇಷ್ಠ ಬ. ೩ ಶುಕ್ರವಾರ.

ನೆಟಾಲದಲ್ಲಿ ಹಿಂದಿಗಳು.

ದಕ್ಷಿಣ ಆಫ್ರಿಕದೊಳಗಿನ ನೆಟಾಲದಲ್ಲಿ ಹಿಂದಿಗಳು ಅಸಮತ್ವ ಹಾಗು ಅನ್ಯಾಯಮೂಲಕವಾದ ಅಪಮಾನಗಳನ್ನು ಸಹಿಸುವ ಸಂದರ್ಭಗಳು ಹೇಗೆ ತಲೆದೋರುತ್ತಿವೆ ಎಂಬುವನ್ನು ತಿಳಿದುಕೊಳ್ಳಬೇಕಾದರೆ "ಇಂಡಿಯನ್ ಒಪ್ಪೀನಿಯನ್" ಎಂಬ ಪತ್ರಿಕೆಯಲ್ಲಿ ಈಚೆಗೆ ಪ್ರಕಟವಾದ ಕೆಲವು ಸಂಗತಿಗಳನ್ನು ಓದಿಕೊಳ್ಳಬಹುದು. ಹಿಂದಿಗಳ ಅದೃಷ್ಟವೆ ಅಷ್ಟು ಹೀನವಾಗಿದೆ, ಅವರಿಗೆ ಮನೆಯಲ್ಲಿ ಪ್ರಾಪ್ತಿ ಕಡಿಮೆ, ಎಂದು ಬೇರೆ ಕಡೆಯಲ್ಲಿ ಹೋದರೆ ಅಪಮಾನ ಹೆಚ್ಚು! ಬೇರೆ ಕಡೆಯಲ್ಲಿ ಎಂದರೆ ಬ್ರಿಟಿಷ್ ಸಾಮ್ರಾಜ್ಯದ ಹೊರಗೆ ಅಲ್ಲ. ದಕ್ಷಿಣ ಆಫ್ರಿಕದಂಥ ಸಾಮ್ರಾಜ್ಯದ ಒಂದು ಭಾಗದಲ್ಲಿಯೇ ಹಿಂದಿಗಳು ಹೋದರೆ ಅವರಿಗೆ ಎಷ್ಟು ತೊಂದರೆಗಳು, ಏನೆಲ್ಲ ಅಪಮಾನಗಳು! ಇಂಗ್ಲಂಡಿನಲ್ಲಿ ಸಾಮ್ರಾಜ್ಯ ಯುದ್ಧಪರಿಷತ್ತು ಸೇರಿತು. ಅದರಲ್ಲಿ ಅಪವಾದರೂ ಒಂದೆರಡು ವಸಾಹತುಗಳನ್ನು ಬಿಟ್ಟರೆ ಬೇರೆ ಸಾಮಾನ್ಯವಾಗಿ ಎಲ್ಲ ವಸಾಹತುಗಳಿಂದ ಪ್ರತಿನಿಧಿಗಳು ಹಾಜರಿದ್ದರು. ಆದೇ ಪರಿಷತ್ತಿನಲ್ಲಿ ಹಿಂದುಸ್ಥಾನದಿಂದಲೂ ಸರಕಾರನಿಯುಕ್ತ ಪ್ರತಿನಿಧಿಗಳೂ ಹೋಗಿದ್ದರು. ಪರಿಷತ್ತಿನಲ್ಲಿ ಪ್ರಕಟವಾದ ಬಾತಮಿಗಳಂತೆ, ಎಲ್ಲರೂ ಏಕಭಾವನೆಯಿಂದ, ನ್ಯೂನಾಧಿಕತ್ವದ ಕಲ್ಪನೆಯನ್ನು ಮನಸ್ಸಿಗೆ ತಾರದೆ ನಡೆಕೊಂಡರು. ಆದರೆ ನೆಟಾಲದಲ್ಲಿಯ ಪ್ರಕಾರಗಳೇ ಬೇರೆ. ತಾತ್ವಿಕ ಜಗತ್ತೂ ವ್ಯಾವಹಾರಿಕ ಜಗತ್ತೂ ಯಾವಾಗಲೂ ಒಂದಲ್ಲ. ಗೋವಿಂದರಾಯ ಮತ್ತು ರಾಮರಾಯ ಇವರಿಬ್ಬರು ದಾರಿಯ ಮೇಲೆ ಕಂಡಾಗ ಶಿಷ್ಟಾಚಾರದಂತೆ ಒಬ್ಬರಿಗೊಬ್ಬರು ನಮಸ್ಕಾರ ಮಾಡಿಕೊಂಡರೂ ಒಂದಕ್ಕೊಂದು ಹೊಂದಿಕೊಂಡಿರುವ ತಮ್ಮ ತೋಟಗಳ ಗಡಿಗಳನ್ನು ಕಾಪಾಡುವದರಲ್ಲಿ ಕೂಡಿದಷ್ಟು ಉಪಾಯಗಳನ್ನು ಸಾಧಿಸುವರು. ಆ ಪ್ರಸಂಗದಲ್ಲಿ ಶಿಷ್ಟಾಚಾರವಿರದು, ದಾಕ್ಷಿಣ್ಯವಿರದು, ನ್ಯಾಯವಿವೇಚನವೂ ಇರದು. ಇದೆ ದೃಷ್ಟಾಂತವು ಪ್ರಕೃತ ನೆಟಾಲದವರು ಉದ್ದೇಶಿಸಿರುವ ನಡತೆಗೆ ಅನ್ವಯಿಸುತ್ತದೆ. ಯುದ್ಧಪರಿಷತ್ತಿನಲ್ಲಿ ಮಿ। ಸ್ಮಟ್ಸರಂಥವರು ಹಿಂದಿಗಳೊಡನೆ ಸಮತೆಯ ಭಾವನೆಯನ್ನು ಎಷ್ಟು ಉಚ್ಚರಿಸಿಕೊಂಡರೂ ಅವರ ಸಹೋದರರು ನೆಟಾಲದಲ್ಲಿ ಕೆಲವು ವಿಧದ ನಿಬಂಧನಗಳನ್ನು ಹಾಕಿ ಹಿಂದೀ ಜನರನ್ನು ಪೀಡಿಸುವ ಕ್ರಮವನ್ನು ಜ್ಯಾರಿಗೆ ತರುವದರಲ್ಲಿದ್ದಾರೆ. ಈ ವಿಷಯವು ಎಷ್ಟು ಶೋಚನೀಯವೊ ಅಷ್ಟೆ ಉದ್ವೇಗಕರವಾದದ್ದು. ನೆಟಾಲದಲ್ಲಿ ತೆರಿಗೆ ಕೊಡುವ ಹಿಂದಿಗಳಿಗೆ ಮುನ್ಸಿಪಾಲಿಟಿಯ ಚುನಾವಣೆಯಲ್ಲಿ ವೋಟ್ ಎಂದರೆ ಮತಕೊಡುವ ಹಕ್ಕಿರುವದು. ಅದನ್ನು ಈಗ ಒಂದು ಹೊಸ 'ರೆಗ್ಯುಲೇಶನ್' ಎಂದರೆ ನಿಬಂಧನವನ್ನು ಹೊರಡಿಸಿ ಅಲ್ಲಿಯ ಸ್ಥಾನಿಕ ಸರಕಾರವು ಹಿಂದಿಗಳ ಕೆಲವು ಹಕ್ಕುಗಳನ್ನು ಕಸಕೊಳ್ಳಲು ಉದ್ಯುಕ್ತವಾಗಿರುವದು. ಮುನ್ಸಿಪಾಲಟಿ ಚುನಾವಣೆಗೆ ಮತಕೊಡುವ ಹಕ್ಕನ್ನು ಹಾಗು ಹಿಂದಿಗಳ ಕಡೆಯಿಂದಲೆ ಮುನ್ಸಿಪಾಲಟಿಗಳಲ್ಲಿ ಸಭಾಸದನಾಗಿ ನಿಲ್ಲುವ ಹಕ್ಕನ್ನು ನಿರಾಕರಿಸುವ ನಿಬಂಧನದಲ್ಲಿ "White" ಎಂಬ, ಗೌರವರ್ಣ ಸೂಚಕವಾದ ಶಬ್ದವನ್ನಿಟ್ಟು, ಮೇಲೆ ಹೇಳಿದ ಹಿಂದೀ ಜನರ ಪಾತ್ರತೆಯನ್ನು ಕಡಿಯಲು ಅಲ್ಲಿಯ ಸರಕಾರವು ಯೋಚಿಸಿರುವದು. ಹೊಸ ನಿಬಂಧನದಲ್ಲಿ ಬಿಳಿ ಬಣ್ಣವನ್ನು ತೋರಿಸಿ ಕೊಡುವ ಶಬ್ದವನ್ನು ಪ್ರಯೋಗಿಸುವದಕ್ಕಿಂತ ಮುಂಚೆ, ಅಂದರೆ ಈಗ, ಮುನ್ಸಿಪಲ್ ಮತದ ಅಥವಾ ಸಭಾಸದತ್ವದ ಉಪಭೋಗವನ್ನು ಕಾರ್ಯರೂಪದಿಂದ ಅಲ್ಲಿಯ ಹಿಂದಿಗಳು ... ಕೊಳ್ಳುತ್ತಿದ್ದಾರೆ. ಆದ್ದರಿಂದ ನೆಟಾಲವಾಸಿ ಹಿಂದಿಗಳು ಈ ನೂತನ ಅಪಮಾನವನ್ನು ಸಹಿಸುವದು ಅಸಾಧ್ಯವೆಂತ ತಿಳಿದು ಈ ಹೊಸ ನಿಬಂಧನದ ವಿಷಯದಲ್ಲಿ ನಿಷೇಧಪ್ರದರ್ಶಕ ಸಭೆಗಳನ್ನು ಕೂಡಿಸಬೇಕಾಯಿತು. ಅನಂತರ ಮುನ್ಸಿಪಲ್ ಕೊನ್ಫರನ್ಸ ಸೇರಿದಾಗ ಈ ನಿಷೇಧಪ್ರದರ್ಶಕ ಸಭೆಯ ಮತವನ್ನು ಅದರಲ್ಲಿ ಚರ್ಚಿಸಿ ಮುನ್ಸಿಪಲ್ ಕೌನ್ಸಿಲಿನ ಮೆಂಬರುತನದ ಯೋಗ್ಯತೆಗಳಿಂದ "White" ಎಂಬ ಆಮೇಲಿನ ಶಬ್ದವನ್ನು ತೆಗೆದು ಹಾಕಿದರು. ಆದರೆ "ಯುರೋಪಿಯನ್ ಸಂತತಿಯವರಿಗೆನೆ ಈ ಹಕ್ಕು ಇರಬೇಕಾದ್ದೆಂದು ಆ ಕೊನ್ಫರನ್ಸಿನಲ್ಲಿ ನಿಶ್ಚಯಿಸಿದರು. ಇದರ ಪರಿಣಾಮವೇನಾಗಿದೆಂದರೆ "ಶಾಂತಿಕರ್ಮಣಿ ವೇತಾಲೋದಯಃ" ಎಂದರೆ ದುಷ್ಟಗ್ರಹ ಸಮಾಧಾನದ ಬಗ್ಗೆ ಶಾಂತಿ ಮಾಡಿದ್ದಲ್ಲಿ ಭೇತಾಲನು ಪ್ರತ್ಯಕ್ಷನಾದಂತೆ ಈಗ ಸುಧಾರಿಸಿದ "ಯುರೋಪಿಯನ್ ಸಂತತಿ" ಎಂಬ ಪಾತ್ರತೆಯಿಂದ ಮೊರಿಶಸ್ ದ್ವೀಪದ ಜನರಿಗೂ ಕೌನ್ಸಿಲುಗಳಲ್ಲಿ ಕುಳಿತು ಹಿಂದಿಗಳ ಮೇಲೆ ಅಧಿಕಾರ ನಡೆಯಿಸಲು ಸಂದರ್ಭ ಒದಗುವದು. ಹೊರತು ಹಿಂದಿಗಳಿಗೆ ಮಾತ್ರ ಈ ಪಾತ್ರತೆಯು ತಪ್ಪಿಹೋಗುವದು. ಗೌರ ಎಂಬ ಶಬ್ದವನ್ನು ತೆಗೆದುಹಾಕಿ ಸುಧಾರಿಸಿದ ಈ ನಿಬಂಧನವು ಒಂದು ಅಲಂಕಾರವೆಂದು ಯಾರು ತಿಳಿದಾರು? ಸಾಮ್ರಾಜ್ಯಾಂತರ್ಗತ ಎಲ್ಲ ಭಾಗಗಳು ಈ ಯುದ್ಧ ಮೂಲಕದಿಂದ ಒಂದಕ್ಕೊಂದು ದೃಢ ಸಂಬಂಧವುಳ್ಳವುಗಳಾಗುತ್ತವೆಂದು ದೊಡ್ಡ ದೊಡ್ಡ ಪದವಿಯ ಮುತ್ಸದ್ದಿಗಳು ಒಂದು ಕಡೆಯಲ್ಲಿ ಹೇಳುವಾಗ ಇನ್ನೊಂದು ಕಡೆಯಲ್ಲಿ ವಸಾಹತುಗಳ ಈ ಚೇಷ್ಟೆಗಳನ್ನು ನೋಡಿ ಈ ಎರಡು ಸಂಗತಿಗಳ ಸಾಮಂಜಸ್ಯವನ್ನು ಹೇಗೆ ಜೋಡಿಸಬಹುದು, ಇವುಗಳ ಏಕವಾಕ್ಯತೆಯನ್ನು ಹೇಗೆ ಮಾಡಬಹುದು, ಇವೆರಡು ಹೇಗೆ ಸಮರಸವಾದಾವು ಎನ್ನುವ ಆ ಮುತ್ಸದ್ದಿಗಳೆ ವಿವೇಚಿಸಿಕೊಳ್ಳಲಿ. ಸಾಮ್ರಾಜ್ಯದೊಳಗಿನ ಅವಯವಗಳು ಒಟ್ಟಿಗೆ ಬರಬೇಕಾದರೆ ಸ್ವಾಭಾವಿಕ ಭೇದಗಳಲ್ಲವು ಹೋಗಬೇಕೆಂದು ಹೇಳುವಾಗ ಅಸ್ವಾಭಾವಿಕ ಕೃತ್ರಿಮ ಭೇದಗಳನ್ನು ಬೆಳೆಯಿಸುವದೆಂದರೆ ಒಂದಕ್ಕೊಂದು ತಾಳೆ ಬೀಳುವದಿಲ್ಲ.

ಸಾಮ್ರಾಜ್ಯ ಯುದ್ಧ ಪರಿಷತ್ತಿನೊಳಗಿನ ಉದಾರ ತತ್ವಕ್ಕೂ ದಕ್ಷಿಣ ಆಫ್ರಿಕದ ನೆಟಾಲದವರು ಯೋಚಿಸಿರುವ ವ್ಯವಹಾರಕ್ಕೂ ತಾಳೆ ಬೀಳುವದಿಲ್ಲವೆಂಬುದಕ್ಕೆ ನೆಟಾಲದ ಈ ಕಾನೂನು ಮಸೂದೆಯಲ್ಲಿ ಇನ್ನೂ ಕೆಲವು ಸಂಗತಿಗಳನ್ನು ತೋರಿಸಬಹುದು. ಹಿಂದೀ ಮತ್ತು ಇತರ ಏಶಿಯದ ಜನರಿಗೆ ವಾಸವಾಗಿರಲು ಪ್ರತ್ಯೇಕ ಸ್ಥಳಗಳನ್ನು ಏರ್ಪಡಿಸಬೇಕು, ಏಶಿಯದೊಳಗಿನವರಿಗೂ ಹಾಗು ಭಿನ್ನವರ್ಣದವರಿಗೂ ಪ್ರತ್ಯೇಕ ಟ್ರಾಮ ಬಂಡಿಗಳಿರಬೇಕು ಮತ್ತು ಒಂದೆ ಉಪಾಹಾರ ಗೃಹದಲ್ಲಿ ಗೌರಕಾಯರನ್ನೂ ಅನ್ಯವರ್ಣದವರನ್ನೂ ಒಟ್ಟಿಗೆ ಆಹಾರಾದಿಗಳನ್ನು ತೆಗೆದುಕೊಳ್ಳಗೊಡದು ಎಂಬೀ ನಿರ್ಬಂಧನೆಗಳ ಸೂಚನೆಯು ಅಲ್ಲಿಯ ಕೌನ್ಸಿಲಿನವರು ಯೋಚಿಸಿರುವ ಕಾನೂನಿನ ಮಸೂದೆಯಲ್ಲಿದೆ. ಅಲ್ಲದೆ ಕೆರೆ ಮುಂತಾದ ಸ್ನಾನದ ಸಾರ್ವಜನಿಕ ಸ್ಥಾನಗಳನ್ನೂ, ಸಾರ್ವಜನಿಕ ವಿನೋದ ಸ್ಥಳಗಳನ್ನೂ ಉಪಯೋಗಿಸಿಕೊಳ್ಳಲು ... ವಿಭಿನ್ನ ವರ್ಣದವರಿಗೂ ಪ್ರತಿಬಂಧ ಇರಬೇಕಂತೆ. ಇಂಥ ನಿಯಮಗಳ ಪರಮಾವಧಿಯು ಎಷ್ಟರವರೆಗೆ ಹೋಗುತ್ತದೆಂದರೆ ಯುರೋಪಿಯನ್ ಸಂತತಿಯವರಾದ ಗೌರಕಾಯರಿಗಾಗಿ ಹಿಂದೀ ಮಹಾಸಾಗರದ ಭಾಗಗಳು ಕಾದಿಡಲ್ಪಡಬೇಕಾಗಿವಂತೆ! ಇಷ್ಟರಲ್ಲಿ ನಡತೆ ನೆಟಾಲದವರು ತೃಪ್ತಿಯನ್ನು ಹೊಂದಲಿಲ್ಲ. ಈ ಉದ್ದೇಶಿತ ಯೋಜನೆಗಳ ರಕ್ಷಣೆಯಲ್ಲಿ ಪ್ರಸ್ತುತ ಇನ್ನೊಂದು ಮಣಿಯನ್ನು ಪೋಣಿಸುವರು. ವ್ಯಾಪಾರ ಮಾಡುವುದಕ್ಕೆ ಅಲ್ಲಿ ಲೈಸನ್ಸ ಬೇಕಾಗಿರುವದು. ಲೈಸನ್ಸ ಕೊಡುವ ಅಧಿಕಾರಿಗಳ ಅಧಿಕಾರ ಮರ್ಯಾದೆಯನ್ನು ಈಗ ಹೆಚ್ಚಿಸುವದರಲ್ಲಿದ್ದಾರೆ. ಲೈಸನ್ಸಿಗೆ ಯಾವವನಾದರೂ ವಿಶಿಷ್ಟ ಪಾತ್ರತೆಯನ್ನು ಇಡದೆ ಆ ಲೈಸನ್ನು ಕೊಡುವವರ ಚಿತ್ತಕ್ಕೆ ಬಿಟ್ಟಿದೆ. ಹಿಂದಿಗಳು ಭಿನ್ನವರ್ಣದವರಾದ್ದರಿಂದ ಅವರ ವಿಷಯದಲ್ಲಿ ಅಲ್ಲಿಯ ಜನರಿಗೂ ಸರಕಾರಕ್ಕೂ ಮೊದಲೇ ತುಚ್ಛತೆಯು ಇದ್ದೇ ಇದೆ, ಅದರ ಮೇಲೆ ವ್ಯಾಪಾರದ ಲೈಸನ್ಸ ಕೊಡುವವರ ಗಣನೆಗೆ ಬಿಟ್ಟಲ್ಲಿ ಆವರಿಂದ ಹಿಂದಿಗಳಿಗೆ ಲೈಸನ್ಸ ಸಿಗುವ ಹಾಗಿದೆಯೊ?

ನೆಟಾಲದವರು ಹಿಂದೀ ಜನರ ಕಡೆ ತೋರಿಸುತ್ತಿರುವ ಈ ಭಾವವೆಲ್ಲಿ? ಯುದ್ಧ ಪರಿಷತ್ತಿನ ಬಗ್ಗೆ ಇಂಗ್ಲಂಡಕ್ಕೆ ಹೋಗಿರುವ ವಸಾಹತುಗಳ ಮಂತ್ರಿಗಳು ಆಡಿ ತೋರಿಸಿರುವ ಸಮತ್ವಭಾವವೆಲ್ಲಿ? ಹಿಂದೂಸ್ಥಾನಕ್ಕೆ ವಸಾಹತುಗಳಂತೆಯೇ ಆ ಮೊತ್ತ ಅಂತರ್ಗತ ಸ್ವರಾಜ್ಯದ ಉಪಭೋಗವು ಇರುತ್ತಿದ್ದರೆ ನೆಟಾಲದೊಳಗಿನ ಹಿಂದೀಗಳನ್ನು ನಿರ್ಬಂಧಿಸುವ ಇಂಥ ಕಾನೂನು ಮಸೂದೆಯ ಪ್ರಸ್ತಾಪವು ಬರುತ್ತಿತ್ತೆ? ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡುವ ಪ್ರಸ್ತಾಪವಿಲ್ಲ; ಸಾಮ್ರಾಜ್ಯದ ಬೇರೆ ಭಾಗಗಳಲ್ಲಿ ಅದಕ್ಕೆ ಮರ್ಯಾದೆ ಇಲ್ಲ. ಈಗ ಒಂದು ವೇಳೆ ಕೆಲವು ಸಮಯದವರೆಗೆ ವಸಾಹತು ಮಂತ್ರಿಗಳೊಟ್ಟಿಗೆ ಏಕಪರಿಷತ್ತಿನಲ್ಲಿ ಏಕಾಸನದಲ್ಲಿ ಕುಳಿತು ಸಹವಾಸ, ಸಹಾಲಾಪ ಮತ್ತು ಸಹಪಂಕ್ತಿ (ಫಲಾಹಾರದಲ್ಲಿ) ಮುಂತಾದವುಗಳನ್ನು ಪಡೆದ ಮಿ. ಸತ್ಯೇಂದ್ರ ಸಿಂಹರಂಥವರೂ ಹಾಗು ಬಿಕಾನೇರ ಮಹಾರಾಜರೂ ವಸಾಹತುಗಳ ಔದಾರ್ಯದ ಮತ್ತು ವ್ಯಾಪಕ ಹಾಗು ಸಮುದ್ರದೃಷ್ಟಿಯ ಕೊಂಡಾಟವನ್ನು ಎಷ್ಟು ಮಾಡಿದ್ದಾಗ್ಯೂ ಬಾತಮಿದಾರರ ಹತ್ತರ ಅವುಗಳ ಪ್ರೌಢಿಯನ್ನು ವ್ಯಕ್ತಗೊಳಿಸಿದ್ದಾಗ್ಯೂ ದಕ್ಷಿಣ ಆಫ್ರಿಕದೊಳಗಿನ ನೆಟಾಲದಂಥ ಕಡೆಯಲ್ಲಿ ಹಿಂದೂಸ್ಥಾನದೊಡನೆ ಒಂದೆ ಸಾಮ್ರಾಜ್ಯದ ಅವಯವಗಳೆಂಬ ಪ್ರೀತಿಯು ಇನ್ನೂ ಹುಟ್ಟಿಲ್ಲ. ಇದಕ್ಕೆ ಮೇಲೆ ಪ್ರಸ್ತಾಪಿಸಿರುವ ನೆಟಾಲದವರ ಕಾನೂನು ಮಸೂದೆಯು ನಿದರ್ಶನವಾಗಿದೆ. ಇದೇ ನಮ್ಮ ತಾತ್ಪರ್ಯವು.

ಸ್ಫುಟವಿಚಾರಗಳು.

೧. ದೇಶಭಕ್ತ ಮತ್ತು ಸತ್ವಧೀರರಾದ ಗಾಂಧಿಯವರು ಬಿಹಾರ ಪ್ರಾಂತ್ಯದಲ್ಲಿ ಕೂಲಿಗಳ ಸ್ಥಿತಿಯ ಕುರಿತು ಚೌಕಶಿ ನಡೆಯಿಸಿದಂದಿನಿಂದ ಅಲ್ಲಿಯ ಎಂಗ್ಲೊ ಇಂಡಿಯನರ ಮತ್ತು ತೋಟಿಗರ ಹೊಟ್ಟೆನೋವು ಜೋರಾಗುತ್ತ ನಡೆದಿದೆ. ಯುರೋಪಿಯನ್ ತೋಟಿಗರು ಹಾಗು ಹಿಂದೀ ಕೂಲಿಗಳು ಈ ಉಭಯತರಲ್ಲಿ ನಡೆಯುವ ವಿದ್ಯಮಾನಗಳ ವಿಚಾರಣೆಯನ್ನು ಮಾಡಬೇಕೆಂದಿದ್ದರೆ, ಅದನ್ನು ಸರಕಾರವು ತಾನೆ ಮಾಡಬೇಕು, ಇಲ್ಲವೆ ಕನಿಷ್ಠಪಕ್ಷಕ್ಕೆ ಆ ಬಗ್ಗೆ ಸರಕಾರಿ-ಬಿನ್‌ಸರಕಾರಿ ಗೃಹಸ್ಥರ ಒಂದು ಕಮಿಟಿಯನ್ನು ನೇಮಿಸಬಹುದು. ಹೊರತು ಈ ಬಗ್ಗೆ ಗಾಂಧಿಯವರ ಕೈಗೆ ಈ ಕೆಲಸವನ್ನು ಒಪ್ಪಿಸುವದು ವಿಹಿತವಲ್ಲ; ಎಂಬದಾಗಿ ಬಿಹಾರಸ್ಥ ತೋಟಿಗರು ಸತತಪ್ರಯತ್ನಗಳನ್ನು ನಡೆಯಿಸಿಕೊಂಡಿದ್ದಾರೆ. ಮೊತ್ತಮೊದಲು ಸರಕಾರಿ ಕೆಳ ಅಧಿಕಾರಿಗಳು ತೋಟಿಗರ ಪಕ್ಷದಲ್ಲಿ ನಿಂತು ದೇಶಭಕ್ತ ಗಾಂಧಿಯವರನ್ನು ಹೇಗೆ ಹೇಗೆ ಉಪದ್ರವಿಸಿದರು, ಆದರೆ ಲೆ. ಗವರ್ನರುಗಳ ಕಡೆಯಿಂದ ಹುಕುಮು ಬಂದ ಬಳಿಕ ಆ ಅಧಿಕಾರಿಗಳು ಗಾಂಧಿಯವರಿಗೆ ಉಪದ್ರವದ ಬದಲು ಸಾಧ್ಯವಾದ ಮದತನ್ನು ಹೇಗೆ ಮಾಡತೊಡಗಿದರು, ಈ ಸಂಗತಿಯನ್ನು ನಮ್ಮ ವಾಚಕರು ಮರೆತಿರಲಾರದು. ಸರಕಾರಿ ಮದತು ಗಾಂಧಿಯವರಿಗೆ ಸಿಗುವದರಿಂದ ಬಹು ಅಸಮಾಧಾನಪಟ್ಟ ತೋಟಿಗರು ದೇ. ಗಾಂಧಿಯವರ ಪ್ರಯತ್ನಗಳನ್ನು ಮುರಿದುಬಿಡಲು ಒದ್ದಾಡುತ್ತಿದ್ದಾರು. ಈ ರೀತಿಯಿಂದ ಒದ್ದಾಡುತ್ತಿರುವಾಗ ಎಂಗ್ಲೊ ಇಂಡಿಯನ್ ಪತ್ರದ ಬಾತಮಿದಾರರು ಕೌಶಲ್ಯದಿಂದ ಕೆಲವು ಬಾತಮಿಗಳನ್ನು ಪ್ರಕಟಿಸಿದರು. "ಗಾಂಧಿಯವರ ಚೌಕಶಿಯಿಂದ ಬಿಹಾರ ಪ್ರಾಂತ್ಯದಲ್ಲಿ ಗಲಬಿಲಿ ಉಂಟಾಗಹತ್ತಿದೆ" ಎಂದು ಹೇಳಿ ಬಾತಮಿದಾರರು ಈ ಚೌಕಶಿಯ ಬಾತಮಿಯ ಒಟ್ಟಿಗೆನೆ ಆ ಪ್ರಾಂತದೊಳಗಿನ ಚಂಪಾರಣ್ಯದಲ್ಲಿ ಒಂದು ಮನೆಗೆ ಬೆಂಕಿ ಬಿದ್ದ ಸುದ್ದಿಯನ್ನೂ ಪ್ರಕಟಿಸಿದರು. ಮೇಲಿಂದ ಮೇಲೆ ನೋಡುವವರಿಗೆ ಗಾಂಧಿಯವರು ಚಂಪಾರಣ್ಯದಲ್ಲಿ ನಡೆಯಿಸಿದ ಚೌಕಶಿಗೂ ಅಲ್ಲಿಯ ಒಂದು ಮನೆಗೆ ಬಿದ್ದ ಬೆಂಕಿಗೂ ಸಂಬಂಧವಿರಬೇಕೆಂದು ಕಲ್ಪಿಸಲು ಒಂದು ಎಡೆ ಸಿಕ್ಕಿತು. "ಇಂಡಿಯನ್ ಎಸೋಸಿಯೇಟೆಡ್ ಪ್ರೆಸ್" ಎಂಬ ಬಾತಮಿ ಕಂಪನಿಯ ಬಾತಮಿದಾರನು ಈ ರೀತಿಯಿಂದ ಬಾತಮಿಗಳನ್ನು ಪ್ರಕಟಿಸಿ "ಚಂಪಾರಣ್ಯದ ಚೌಕಶಿಯಿಂದಲೇ ಅಲ್ಲಿ ಅಸ್ವಸ್ಥತೆಯುಂಟಾಗಿದೆ" ಎಂದು ಒಂದು ತರದ ಭ್ರಮಕ್ಕೆ ಆಸ್ಪದವನ್ನು ಕೊಟ್ಟ ಕಾರಣ ದೇ. ಗಾಂಧಿಯವರ ಮೇಲೆ "ಮದ್ರಾಸ ಮೈಲ್" ನಂಥ ಎಂಗ್ಲೊ ಇಂಡಿಯನ್ ಪತ್ರಿಕೆಗಳು ಯಥೇಚ್ಛವಾಗಿ ಟೀಕಾಸ್ತ್ರಗಳನ್ನು ಬಿಟ್ಟು, ಮುಖಸುಖವನ್ನು ಪಡೆಯಹತ್ತಿದವು. ಆದರೆ ದೇ. ಗಾಂಧಿಯವರು "ತನ್ನಷ್ಟಕ್ಕೆ ಬಿದ್ದ ಮನೆಯ ಬೆಂಕಿಗೂ ಮತ್ತು ಈ ಚೌಕಶಿಗೂ ಯಾವ ಸಂಬಂಧವೂ ಇಲ್ಲ; ಇದು ಒರೆ ವಿಘ್ನಸಂತೋಷಿಯಾದ ಬಾತಮಿದಾರನ ಬಾತಮಿಯನ್ನು ಕೊಡುವ ಚಾತುರ್ಯವು" ಎಂಬ ವಸ್ತುಸ್ಥಿತಿಯನ್ನು ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಲಕ್ಷ್ಯಕ್ಕೆ ತಂದುಕೊಟ್ಟರು. ಇದರಿಂದ ಸರಕಾರಿ ಅಧಿಕಾರಿಗಳ ದೃಷ್ಟಿಯ ಮೇಲೆ ಪುನಃ ಬರಹತ್ತಿದ ತಪ್ಪು ತಿಳಿವಿನ ಮೋಡಗಳು ಕರಗಿಹೋಗಲು ಕಾರಣವಾಯಿತು. ಆದರೆ "ಮ. ಮೈಲ್" ನಂಥ ಪತ್ರಿಕೆಗಳು ತಮ್ಮ ಸ್ವಭಾವಕ್ಕನುಗುಣವಾಗಿ ಗಾಂಧಿಯವರನ್ನು ಟೀಕಿಸುತ್ತಲೇ ಇವೆ. "ಇವರು ಮೊದಲಿರುವಂತೆ ಈಗ ಇಲ್ಲ. ಇವರ ಶೀಲವು ಈಗ ಬದಲಾಗಿದೆ. ಇವರು "ಸ್ವಯಂನಿಯುಕ್ತ ಮುಖಂಡರು" ಇತ್ಯಾದಿ ದೋಷಗಳನ್ನು ಇವರ ತಲೆಯ ಮೇಲೆ "ಮೈಲು" ಇಡಹತ್ತಿದೆ.

೨. ಪರಂತು ದೇ. ಗಾಂಧಿಯರ ಶಿಷ್ಯರಾದ ಮಿ. ಪೊಲಾಕ ಎಂಬವರು "ಮದ್ರಾಸ ಮೈಲಿ"ಗೆ ಸಮರ್ಪಕವಾದ ಉತ್ತರವನ್ನು ಬರೆದು ಅದರ ಹೊಟ್ಟೆಕಿಚ್ಚನ್ನು ಬೈಲಿಗೆ ತಂದಿರುವರು. ಅವಲ್ಲದೆ "ಗಾಂಧಿಯವರ ಉಪಾಧ್ಯಾಪಿಗಳಾಗಿದ್ದು ಏನಾದರೂ ಚಳವಳವನ್ನು ಎಬ್ಬಿಸುವರಾಗಿದ್ದರೆ ಇಂಗ್ಲಿಷ್ ಜನರಿಗೆ ಲಾಂಛನಾಸ್ಪದವಾದ ಭಯಂಕರ ಪ್ರಕಾರಗಳನ್ನು ಅವರು ಬೈಲಿಗೆ ತರುತ್ತಿದ್ದರು" ಎಂಬದಾಗಿಯೂ ಮಿ. ಪೊಲಾಕರು ಬರೆದಿರುವರು. ಇದರ ಮೇಲಿಂದ ಬಿಹಾರ ಪ್ರಾಂತದಲ್ಲಿ ಏನೋ ಭಯಂಕರ ಸ್ಥಿತಿಯು ಹೊರಬಿದ್ದಿದೆ ಎಂಬುದಾಗಿ ಗೊತ್ತಾಗುತ್ತದೆ; ಇರಲಿ. ಯುರೋಪಿಯನ್ ತೋಟಿಗರ ಅನ್ಯಾಯಗಳು ಹೊರಬೀಳುವ ಸಂದರ್ಭವು ಒಂದೊದಗಿದ್ದನ್ನು ಕಂಡು ಈಗ ಎಂಗ್ಲೊ ಇಂಡಿಯನರೂ ಮತ್ತು ತೋಟಿಗ ಪಕ್ಷದವರೂ "ಹಿಂದೀ ಜಮೀನುದಾರರೂ ತಮ್ಮ ಕೂಲಿಗಳನ್ನು ಯಾವ ರೀತಿಯಿಂದ ನಡೆಯಿಸುತ್ತಾರೆ" ಎಂಬುದನ್ನು ಚೌಕಶಿ ಮಾಡಬೇಕು ಎಂದು ಹೇಳಲು ಉಪಕ್ರಮಿಸಿದ್ದಾರೆ. ಅಲಹಾಬಾದಿನ "ಪಾಯೊನಿಯರ್" ಎಂಬ ಪತ್ರಿಕೆಯು ಮೇಲಿನಂತೆ ಗುಣುಗುಟ್ಟಿದ್ದಕ್ಕಾಗಿ ದೇ. ಗಾಂಧಿಯವರು ಪ್ರಕಟಿಸಿದ್ದಾರೆ; ಅದೇನೆಂದರೆ "ಪ್ರಕೃತ ನಡೆಯುತ್ತಿರುವ ಪ್ರಸಿದ್ಧ ತಪ್ಪುಗಳನ್ನು ಕೂಡಲೇ ನಿಲ್ಲಿಸಿದರೆ, ಇಂತಿಷ್ಟು ಸಮಯದೊಳಗೆ ಇಂಥಿಂಥ ವಿಷಯಗಳ, ಮತ್ತು ಅವುಗಳ ಮೇಲಿನ ಅಭಿಪ್ರಾಯದ ಕುರಿತು ವಿಚಾರಣೆಯನ್ನು ಮಾಡಿ ಸದ್ಯದ ಸ್ಥಿತಿಯನ್ನು ಸುಧಾರಿಸಬಹುದು. ಈ ಕೆಲಸಕ್ಕಾಗಿ ನೇಮಿಸಿದ ವಿಚಾರಣಾ ಮಂಡಲದ ಮುಂದೆ ಸಾಕ್ಷಿ ಪ್ರಮಾಣಗಳನ್ನು ತಂದು ನಿಲ್ಲಿಸುವುದು ನನ್ನ ಮತ್ತು ನನ್ನ ಸಹಕಾರಿಗಳ ಕರ್ತವ್ಯವಾಗಿದೆ." "ಪಾಯೊನಿಯರ್ ಪತ್ರಿಕೆಯು ಸೂಚಿಸುವ ವಿಚಾರಣಾ ಮಂಡಲದ ಕೆಲಸವೇನೆಂದರೆ, ಜಮೀನುದಾರರು ಮತ್ತು ಅವರ ಕೃಷಿಕರು ಇವರ ಪರಸ್ಪರ ಸಂಬಂಧಗಳಲ್ಲಿ ಸಾಮಾನ್ಯವಾಗಿ ಹಾಗು ತೋಟಿಗರು ಮತ್ತು ಕೂಲಿಗಳು ಇವರಲ್ಲಿರುವ ಸಂಬಂಧವನ್ನು ವಿಶೇಷ ರೀತಿಯಿಂದ ಆ ಕಮಿಟಿಯು ಚೌಕಶಿಯನ್ನು ಮಾಡ... ದೇ. ಗಾಂಧಿಯವರ ... ಸ್ವೀಕರಿಸ...

ರರೂ ಆಗಿರುವದರಿಂದ ಅವರ ಎದುರುವಾದಿಗಳ ಮನೋರಥವು ಪೂರ್ಣವಾಗಲಿಕ್ಕಿಲ್ಲವೆಂದು ಹೇಳಬಹುದು.

೪. ಭಾರತ ಸಂರಕ್ಷಕ ಸೈನ್ಯದಲ್ಲಿ ಜನರ ಎಂದರೆ ಉಮೇದವಾರರ ಭರತಿಯು ಸಮಾಧಾನಕರವಾದ ರೀತಿಯಲ್ಲಿ ಆಗುವದಿಲ್ಲ. ಎರಡು ತಿಂಗಳ ಅವಧಿಯು ದಾಟಿಹೋದರೂ, ಮುನ್ನೂರು ಜನರಿಗಿಂತ ಹೆಚ್ಚಿನ ಉಮೇದವಾರರ ಹೆಸರುಗಳು ದಾಖಲಾಗಲಿಲ್ಲ. ಜನರ ಮುಖಂಡರು ಈ ಬಗ್ಗೆ ಹೆಚ್ಚಿನ ಉತ್ಸಾಹ ತೆಗೆದುಕೊಳ್ಳುವದಿಲ್ಲ. ಇವೇ ಮೊದಲಾದ ಸಂಗತಿಗಳನ್ನು ಒಳಕೊಂಡ ಒಂದು ಠರಾವನ್ನು ವೈಸರಾಯ ಪ್ರಭುಗಳು ಪ್ರಕಟಿಸಿದ ವಿಷಯವನ್ನು ನಮ್ಮ ಪತ್ರಿಕೆಯಲ್ಲಿ ಪ್ರಸ್ತಾಪಿಸಿ ಎರಡು ವಾರಗಳಾದವಷ್ಟೆ. ವೈಸರಾಯರ ಈ ಠರಾವು ಹೊರಬಿದ್ದಂದಿನಿಂದ ಜನತೆಯ ಅಜಾಗ್ರತೆಯೋ, ಆಲಸ್ಯವೋ, ಔದಾಸೀನ್ಯವೋ, ಯಾವದು ಬೇಕಾದ ಹೆಸರನ್ನು ಕೊಡಬಹುದು. ಪರಂತು ಇದಾವದರಿಂದಲೂ, ಸೈನ್ಯದ ಭರತಿಯು ನಿಂತದ್ದಲ್ಲ, ಮಂದವಾದದ್ದಲ್ಲ, ಇದಕ್ಕೆ ಕಾರಣವು ಸರಕಾರಿ ಅಧಿಕಾರಿಗಳೇ ಎಂದು ಈಚೆಗೆ ಉಪಲಬ್ಧವಾದ ಕೆಲವು ಸಂಗತಿಗಳಿಂದ ತಿಳಿದುಬರುತ್ತದೆ. ಮೂವತ್ತು ಕೋಟಿ ಜನಸಂಖ್ಯೆ ಇರುವಲ್ಲಿ ಸರಕಾರಕ್ಕೆ ಬೇಕಾದ್ದು ಬರೆ ಆರು ಸಾವಿರ ಮಾತ್ರ, ಠರಾಯಿದೆಯು ವರಿಷ್ಠ ಕೌನ್ಸಿಲಿನಲ್ಲಿ ಪಾಸಾದ ಕೂಡಲೇ ಕೆಲವು ಕಡೆಗಳಲ್ಲಿಯ ಮುಖಂಡರು "ಈ ಬಗ್ಗೆ ಹೆಚ್ಚಿನ ನಿಯಮಗಳಾವವು" ಎಂದು ಕೇಳಿದ್ದಕ್ಕೆ ಆಯಾ ಅಧಿಕಾರಿಗಳಿಂದ ಸಕಾಲದಲ್ಲಿ ಉತ್ತರ ಬರಲೊಲ್ಲದು; ಪುನಃ "ಇಷ್ಟು ಅವಸರವು ಯಾಕೆ?" ಎಂದು ಅಧಿಕಾರಿಗಳು ಕೇಳುವರು. ಕೆಲವು ಕಡೆಗಳಲ್ಲಿ ಉಮೇದವಾರರ ಹೆಸರುಗಳನ್ನು ನಮೂದಿಸಲಿಕ್ಕೆ ಬೇಕಾದ ಫಾರ್ಮುಗಳನ್ನೆ ಅಧಿಕಾರಿಗಳು ಪೂರೈಸರು. ಇವೇ ಮುಂತಾದ ಹಲವು ಸಂಗತಿಗಳು ಈಚೀಚೆಗೆ ವರ್ತಮಾನಪತ್ರಿಕೆಗಳಲ್ಲಿ ಗೋಚರಕ್ಕೆ ಬರುತ್ತಿವೆ. ಇನ್ನೊಂದು ಸಂಗತಿ, ವೈಸರಾಯರ ಠರಾವಿನೊಳಗಿನ ಮುನ್ನೂರರ ಸಂಖ್ಯೆಯು ತಪ್ಪಿದ್ದದೋ ಏನೊ? ಕಾರಣ, ನಾವು ಎರಡು ವಾರಗಳ ಹಿಂದಿನ ಸಂಚಿಕೆಯಲ್ಲಿ ಮದ್ರಾಸ ಕೌನ್ಸಿಲಿನ ಪ್ರಸ್ತಾವದಲ್ಲಿ ಪ್ರಕಟಿಸಿದಂತೆ, ಮೇ. ತಾ. ೧೫ರ ವರೆಗೆ ಒಬ್ಬ ಮದ್ರಾಸ ಸಂಸ್ಥಾನದಲ್ಲಿಯೆ ಸೈನ್ಯಭರತಿಗೆ ಸೇರಿದ ಉಮೇದವಾರರ ಸಂಖ್ಯೆಯು ೩೫೭ ಆಗಿದೆ, ಎಂದು ಸರಕಾರವೆ ಹೇಳುತ್ತಿದೆ. ಈ ವಿಷಯವು ಹ್ಯಾಗೂ ಇರಲಿ; ಸರಕಾರಿ ಅಧಿಕಾರಿಗಳ ಅನುತ್ಸುಕತೆಯಿಂದ ಸೈನ್ಯಭರತಿಯಲ್ಲಿ ಇಷ್ಟರ ವರೆಗೆ ನ್ಯೂನತೆಯಾದರೂ ಇನ್ನು ಮುಂದೆ ವೈಸರಾಯರು ತಮ್ಮ ಠರಾವಿನಲ್ಲಿ ವ್ಯಕ್ತಗೊಳಿಸಿದ ಅಪೇಕ್ಷೆಯಂತೆ, ಜನರು ಉತ್ಸಾಹವಂತರಾಗಿ ಯಾವ ತೊಂದರೆಯನ್ನೂ ಮನಸ್ಸಿಗೆ ತಂದುಕೊಳ್ಳದೆ, ಮಾತೃಭೂಮಿಯ ಸೇವೆಯನ್ನು ಕೈಕೊಳ್ಳಬೇಕು, ಇದೇ ನಮ್ಮ ಮನೀಷೆ.

೫. ಯುದ್ಧಸಾಲವನ್ನು ಎತ್ತುವದರಲ್ಲಿ ಕೆಲಕೆಲವು ಪ್ರಾಂತಗಳಲ್ಲಿ ಕೆಳಗಿನ ಅಧಿಕಾರಿಗಳು ಜನರಿಗೆ ಬೇಕಾದ್ದಕ್ಕಿಂತ ಸ್ವಲ್ಪ ಹೆಚ್ಚು ಒತ್ತಾಯವನ್ನು ಮಾಡುತ್ತಿದ್ದಾರೆಂದು ವರ್ತಮಾನಪತ್ರಿಕೆಗಳಲ್ಲಿ ಪ್ರಕಟವಾಗುವ ಕೆಲವು ಸಂಗತಿಗಳಿಂದ ತಿಳಿದುಬರುತ್ತದೆ. ಆದರೆ ಈ ಬಗ್ಗೆ ಬಂಗಾಲ ಸರಕಾರವು ಈಚೆಗೆ ಒಂದು ಸರಕ್ಯುಲರನ್ನು ಹೊರಡಿಸಿದೆ. ಅದರ ಆಶಯವೇನೆಂದರೆ: "ಸಾಲವೆತ್ತುವ ಸಂದರ್ಭದಲ್ಲಿ ಜನರ ಮೇಲೆ ಕೆಳಗಿನ ಅಧಿಕಾರಿಗಳು ಅಯೋಗ್ಯವಾದ ರೀತಿಯಲ್ಲಿ ತಮ್ಮ ಭಾರವನ್ನು ಹಾಕುತ್ತಾರೆಂದು ಅನೇಕ ಕಂಪ್ಲೆಂಟುಗಳು (ದೂರುಗಳು) ನಮ್ಮ ಕಡೆಗೆ ಬಂದಿವೆ. ಆದ್ದರಿಂದ ಗವರ್ನರ್ ಇನ್ ಕೌನ್ಸಿಲು ಈ ಸರಕ್ಯುಲರಿನ ಮೂಲಕದಿಂದ ಎಲ್ಲ ಜನರಿಗೆ ತಿಳಿಯಪಡಿಸುವದೇನೆಂದರೆ, ಯುದ್ಧಸಾಲವು ಜನರೊಳಗೆ ಹಬ್ಬುವದಕ್ಕಿಂತ ಮುಂಚೆಯೇ ಯಾವದಾದರೂ ಬಗೆಯಿಂದ ಜನರು ಸಾಲ ಕೊಡಬೇಕಾಗಿ ಬಂದೀತು, ಎಂದು ಯಾರೂ ಅನ್ನಕೂಡದೆಂದು ಸರಕಾರವು ತಿಳಿಸಿತ್ತು. ಅದನ್ನೇ ಪುನಃ ಈ ಹುಕುಮಿನಿಂದ ಸಾಲವೆತ್ತುವವರ ನೋಟಕ್ಕೆ ತಂದಿರುವೆವು." ಬಂಗಾಲ ಸರಕಾರದ ಈ ಹುಕುಮು ಯೋಗ್ಯವಾಗಿದೆ.

೬. ವಿಲಾಯತಿಯೊಳಗಿನ ಸಾಮ್ರಾಜ್ಯ ಯುದ್ಧಮಂಡಲಕ್ಕೆ ಇಲ್ಲಿಂದ ಹೋದ ಬಿಕಾನೇರದ ಮಹಾರಾಜರೂ, ಸತ್ಯೇಂದ್ರಸಿಂಹರೂ, ಮತ್ತು ಮೆಸ್ಟನ್ ದೊರೆಗಳೂ ಹಿಂದುಸ್ಥಾನಕ್ಕೆ ಬಂದು ಸೇರಿದರು. ಮುಂಬಯಿ ಬಂದರದಲ್ಲಿ ಈ ಸರ್‌ಗಳ ಸ್ವಾಗತಕ್ಕಾಗಿ ದೊಡ್ಡ ಜನಸಮುದಾಯವು ಸೇರಿತ್ತು. ಈ ಮೂವರು ಗೃಹಸ್ಥರು ಮುಂಬಯಿಯಿಂದ ತಂತಮ್ಮ ಸ್ಥಳಗಳಿಗೆ ಹೋದರು. ಆದರೆ ಮುಂಬಯಿ ಪಟ್ಟಣವನ್ನು ಬಿಡುವದಕ್ಕಿಂತ ಮುಂಚೆ ಅಲ್ಲಿಯ "ಟೈಮ್ಸ್ ಒಫ್ ಇಂಡಿಯಾ" ಪತ್ರದ ಬಾತಮಿದಾರನು ಬಿಕಾನೇರದ ಮಹಾರಾಜರ ಮತ್ತು ಸರ್. ಸಿಂಹರ ಭೇಟಿಯನ್ನು ತೆಗೆದುಕೊಂಡನು. ಅವನೊಡನೆ ಆದ ಸಂಭಾಷಣದಲ್ಲಿ ಬಿಕಾನೇರದ ಮಹಾರಾಜರು ಬಾದಶಹಾ ಪಂಚಮ ಜೋರ್ಜರ ಸಂದೇಶವನ್ನು ಶ್ರುತಪಡಿಸಿದರು: ಈ ಯುದ್ಧದಿಂದ ಹಿಂದುಸ್ಥಾನವೂ ಇಂಗ್ಲೆಂಡೂ ಹೆಚ್ಚು ಹತ್ತ ಹತ್ತರ ಬಂದಿವೆ. ಯುದ್ಧದಲ್ಲಿ ಹಿಂದೂ ದೇಶವು ತೋರಿಸಿದ ಉಜ್ವಲವಾದ ದೇಶಭಕ್ತಿ, ಹಿಂದಿ ಮಾತೆಯ ಪುತ್ರರು ಪ್ರಕಟಿಸಿದ ಶೌರ್ಯ ಇವುಗಳಿಂದ ಇಂಗ್ಲೆಂಡಿನಲ್ಲಿ ಈಗ ಉಂಟಾದಷ್ಟು ಆದರಭಾವವು ಈ ಮೊದಲು ಆಗಿರಲಿಲ್ಲ. ಇಂಗ್ಲೆಂಡಿನಲ್ಲಿ ಪ್ರತಿಯೊಂದು ಕಡೆ ಹಿಂದುಸ್ಥಾನದ ಕುರಿತು ಸದ್ಭಾವವು ಕಂಡುಬರುವದು. ಇದರಿಂದ ಯುದ್ಧಾಂತ್ಯದಲ್ಲಿ ಉತ್ತಮವಾದ ಫಲವು ಪ್ರಾಪ್ತವಾದೀತು. ಮಹಾರಾಜರ ಬಾಯಿಯಿಂದ ಬಂದ ಬಾದಶಹಾ ಸಂದೇಶವನ್ನು "ತಥಾಸ್ತು" ಎಂದು ಹೇಳುತ್ತಲೇ ನಾವು ಸ್ವೀಕರಿಸುವೆವು. [illegible] ಜಯಪ್ರಾಪ್ತಿಗಾಗಿ ಇಂಗ್ಲೆಂಡಿನ ಪ್ರತಿ ಬ್ರಿಟಿಷ್ ಮನುಷ್ಯನು [illegible]ವೇಚಾಡುವದನ್ನು ಹೇಳಿ ಮಹಾರಾಜರು ಮುಂದರಿಸಿದರು. "ಇಂಗ್ಲಿಷ್ ಮುತ್ಸದಿಗಳು ಹಿಂದುಸ್ಥಾನದ ಕಡೆಗೆ ಸಹಾನುಭೂತಿಯನ್ನೂ ಶುಭೇಚ್ಛೆಯನ್ನೂ ತೋರಿಸಲು ಎಂದೂ ಮರೆಯುವದಿಲ್ಲ. ಹಿಂದುಸ್ಥಾನದ ವಿಷಯದಲ್ಲಿ ಪ್ರತಿ ಒಬ್ಬ ಬ್ರಿಟಿಷ್ ಗೃಹಸ್ಥನು ಸಹಾನುಭೂತಿ ಪೂರ್ಣನಾಗಿದ್ದಾನೆ." ವಿಲಾಯತಿಯಲ್ಲಿ ಹಿಂದುಸ್ಥಾನದ ಬಗ್ಗೆ ಮಹಾರಾಜರು ಹೇಳುವಂತೆ ಇಷ್ಟು ಸ್ವಚ್ಛವಾದ ಅಭಿಪ್ರಾಯವು ಇರುವಾಗ ನಮ್ಮಲ್ಲಿ ಬೊ. ಪೆಂಟಲೆಂತರಂಥವರು ಮಾತ್ರ ಹಿಂದುಸ್ಥಾನದ ವಿಷಯದಲ್ಲಿ ಯಾಕೆ ಸಾಶಂಕರಾಗುತ್ತಾರೆ? ವಿಲಾಯತಿಯ ಮುತ್ಸದಿಗಳ ನೋಟಕ್ಕಿಂತಲೂ ಇಲ್ಲಿಯ ಅಧಿಕಾರಿಗಳ ನೋಟವು ವಿಶಾಲವೆ?

೭. ಇನ್ನೊಬ್ಬ ಪ್ರತಿನಿಧಿಗಳಾದ ಸರ್. ಸತ್ಯೇಂದ್ರ ಪ್ರಸನ್ನರು ಇಂಗ್ಲೆಂಡಿನಿಂದ ತಮ್ಮೊಟ್ಟಿಗೆ ತಂದ ಅನುಭವವನ್ನು ಮುಂಬಯಿಯ ಅದೆ "ಟೈಮ್ಸ್" ಪತ್ರಿಕೆಯ ಬಾತಮಿದಾರನೊಟ್ಟಿಗೆ ಹೇಳಿದರು. ವಸಾಹತುಗಳು ಹಿಂದುಸ್ಥಾನದೊಡನೆ ಅಸಮಭಾವ ಮತ್ತು ಕೇವಲ ಸ್ವಾರ್ಥದೃಷ್ಟಿಯಿಂದ ನಡಕೊಳ್ಳುತ್ತಿದ್ದ ಕಾರಣ, "ಅವುಗಳ ವಿಷಯದಲ್ಲಿ ಹಿಂದುಸ್ಥಾನದವರಿಗೆ ವಿಶೇಷವಾದ ಅಸಹಿಷ್ಣತೆಗಳು ಬರಗುತ್ತಿದ್ದವು. ಎಲ್ಲ ವಸಾಹತುಗಳ ವಿಷಯದಲ್ಲಿರುವ ಅಡಚಣೆಗಳು ಒಂದೆ ತರದವಲ್ಲ. ಆಯಾ ವಸಾಹತಿನ ಕುರಿತು ಪ್ರತ್ಯೇಕ ಪ್ರತ್ಯೇಕವಾದ ಅಡಚಣೆ ಇತ್ತು. ಹಿಂದಿ ಪ್ರತಿನಿಧಿಗಳಿಗೆ ಇಂಗ್ಲೆಂಡಿನಲ್ಲಿ ಹೋಗಿ ಆ ಬಗ್ಗೆ ಚರ್ಚಿಸಲು ಸಂದರ್ಭವು ದೊರಕಿದ ಕಾರಣ ವಸಾಹತುಗಳ ಮತದಲ್ಲಿ ಈಗ ಬದಲಾವಣೆಯಾಗಿದೆ." ಈ ಪ್ರಕಾರ ಸತ್ಯೇಂದ್ರ ಪ್ರಸನ್ನರು ಹೇಳಿ ವಸಾಹತುಗಳ ಮಂತ್ರಿಗಳೊಡನೆ ಆದ ಸಂಭಾಷಣಗಳಿಂದ ವಸಾಹತುಗಳ ಭೇದದೃಷ್ಟಿಯು ಕೆಲವಂಶದಿಂದಲಾದರೂ ಹೋಗುವದು ಸಾಧ್ಯವಿದೆಂದು ಅಭಿಪ್ರಾಯ ಪಟ್ಟರು. ಇಂಥ ಪರಿಷತ್ತುಗಳಿಂದ ಅವುಗಳಲ್ಲಿರುವ ಎಲ್ಲ ಭೇದಗಳು ನಷ್ಟವಾದಾವೆಂದು ಸರ್. ಸಿಂಹರಿಗೆ ಆಶೆ ಇದೆ; ಮಾತ್ರವಲ್ಲ, ಇಂಥ ಸಂಯುಕ್ತ ಪರಿಷತ್ತುಗಳು ವಸಾಹತುಗಳಿಗೂ, ಇಡೀ ಸಾಮ್ರಾಜ್ಯಕ್ಕೂ, ಭವಿಷ್ಯತ್ಕಾಲದಲ್ಲಿ ಹಿತಪ್ರದವಾದಾವೆಂತಲೂ, ಅವರು ನೆನೆಸುತ್ತಾರೆ. ಹಾಗು ಬರುವ ಪರಿಷತ್ತುಗಳಲ್ಲಿ ಪ್ರತಿನಿಧಿಯಾಗಿ ಬರುವ ಹಕ್ಕು ಹಿಂದಿಗಳಿಗೆ ಕೊಡಬೇಕೆಂದು ನಿರ್ಣಯ ಹೊಂದಾಗಿದೆಂದು ಸಮಾಚಾರವನ್ನು ಅವರು ಸಾರುತ್ತಾರೆ. ಒಟ್ಟಿನ ಮೇಲೆ ಬಿಕಾನೇರದ ಮಹಾರಾಜರಂತೆ ಸರ್. ಸತ್ಯೇಂದ್ರಸಿಂಹರಿಗೂ ಕೂಡ ವಸಾಹತುಗಳಲ್ಲಿ ಮತ್ತು ಇಂಗ್ಲಿಷ್ ಗೃಹಸ್ಥರಲ್ಲಿ ಹಿಂದುಸ್ಥಾನದ ವಿಷಯವಾಗಿ ತುಂಬಾ ಸಹಾನುಭೂತಿಯು ಕಂಡು ಬರುತ್ತಿದೆ; ಇದೊಂದು ಭಾರತ ವರ್ಷದ ಭಾಗ್ಯೋದಯವೇ ಸರಿ!

೮. ವಿದ್ಯಾತೃಷ್ಣೆಯು ಸರ್ವರಲ್ಲಿಯೂ ತೀಕ್ಷ್ಣವಾಗಿ ಉಂಟಾಗಿರುವದು. ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿವರ್ಗದವರಲ್ಲಿಯೂ ಹೆಚ್ಚುತ್ತಿದೆ. ಇಂಥಾ ಕಾಲದಲ್ಲಿ ಶಾಲೆಗಳಲ್ಲಿ ಫೀಸಿನ ದರವು ಹೆಚ್ಚಾಗಿ ಹೋಗಿರುವದು. ಪುಸ್ತಕ ಇತ್ಯಾದಿಗಳಿಗೆ ತಗಲುವ ಖರ್ಚು ವಿಪರೀತವಾಗಿದೆ. ಜೀವನ ಹೋರಾಟದಿಂದ ಪ್ರತಿ ಸಮಾಜದಲ್ಲಿಯೂ, ಬಡವರ ಸಂಖ್ಯೆಯು ದಿನೇ ದಿನೇ ವೃದ್ಧಿಯಾಗುತ್ತಿರುವದು. ಹೀಗಿಂದ ಮೇಲೆ ವಿದ್ಯಾರ್ಥಿಗಳಲ್ಲಿ ಬಡವರಾದವರೇ ಹೆಚ್ಚುತ್ತಿರುವರು. ಆಯಾ ಜಾತಿಯವರಿಂದ ಶಾಲೆಗಳು ಪ್ರತ್ಯಪ್ರತ್ಯೇಕವಾಗಿ ಸ್ಥಾಪಿಸಲ್ಪಟ್ಟಿರುವವಾದರೂ, ಸರಕಾರದ ಮಂಜೂರಾತಿಯನ್ನು ಇವುಗಳು ಪಡೆದ ಬಳಿಕ ಈ ಮಂಜೂರಾತಿಗೂ ವಿದ್ಯಾಖಾತೆಯ ಅಧಿಕಾರಿಗಳಿಗೂ ತೃಪ್ತಿಕರವಾದ ರೀತಿಯಲ್ಲಿ ಶಾಲೆಗಳನ್ನು ನಡಿಸಲು ಸಾಕಷ್ಟು ಹಣಸಹಾಯವಿಲ್ಲದರಿಂದ ಜಾತಿಯ ಬಡವರಿಗೆ ಬೇಕಾದಂತೆ ವಿದ್ಯಾದಾನವನ್ನು ಕೊಡಲು, ಇಂಥಾ ಶಾಲೆಗಳಲ್ಲಿ ಆಸ್ಪದವಿಲ್ಲ. ಹಣ ಸಹಾಯದ ಬಗ್ಗೆ ಇಂಥಾ ಶಾಲೆಗಳು ನಾನಾ ಫಂಡುಗಳ ರೂಪದಲ್ಲಿ ಸದಾಸರ್ವದಾ ಭಿಕ್ಷಾವೃತ್ತಿಯಲ್ಲಿಯೇ ಇರಬೇಕಾಗಿದೆ. ಇಂಥಾ ಸಂದರ್ಭದಲ್ಲಿ ಬಡ ವಿದ್ಯಾರ್ಥಿಗಳ ಗತಿಯೇನು? ಗೌಡಸಾರಸ್ವತರಲ್ಲಿ ವಿದ್ಯಾರ್ಥಿಗಳ ಸಹಾಯಾರ್ಥವಾಗಿ "ಅಪ್ಪೆಂಪೈ ಸುಬ್ರಾಯ ಶೈ ಮೆಮೊರಿಯಲ್ ಫಂಡು" ಇರುವದಾದರೂ ಈ ಫಂಡಿನಲ್ಲಿ ಸಾಕಷ್ಟು ಧನಸಂಗ್ರಹವಿಲ್ಲದ್ದರಿಂದಲೂ, ಸ್ಕೂಲ್ ಫ್ಯಾನಲ್ ಪರೀಕ್ಷೆ ಪಾಸಾದಂಥಾ ವಿದ್ಯಾರ್ಥಿಗಳಿಗೆ ಇದು ಕೊಡೋಣಾಗುವದರಿಂದಲೂ, ಸ್ಕೂಲ್ ಫ್ಯಾನಲ್ ತನಕ ವಿದ್ಯಾರ್ಥಿಗಳಿಗೆ ಸಹಾಯವು ಇರುವದಿಲ್ಲ. ದೊಡ್ಡ ಸಂಖ್ಯೆಗಳ ಹಣ ಸಹಾಯವನ್ನು ಪದೇ ಪದೇ ಕೇಳುವದು ಉಚಿತವೂ ಅಲ್ಲ. ಇಂಥಾ ಸಹಾಯವು ದೊರಕುವಂಥಾದ್ದು ಈಗಿನ ವಿದ್ಯಮಾನಗಳಲ್ಲಿ ಸಾಧ್ಯವೂ ಅಲ್ಲ. ಆದ್ದರಿಂದ ವಿವಾಹ, ಉಪನಯನ, ಗೃಹಪ್ರವೇಶ ಮೊದಲಾದ ಶುಭ ಕಾರ್ಯಗಳ ಕಾಲದಲ್ಲಿ ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಡ್ಯುವಾಗ ಈ ಬಡ ವಿದ್ಯಾರ್ಥಿಗಳ ಪರವಾಗಿ ಈ ದಕ್ಷಿಣೆಗಳನ್ನು ಪಡೆದು ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂಬ ಆಲೋಚನೆಯು ಕೆಲವು ಗೌಡಸಾರಸ್ವತ ಗೃಹಸ್ಥರಲ್ಲಿತ್ತು. ಕಳೆದ ತಾ. ೪ನೆ ದಿನ ಮಧ್ಯಾಹ್ನಕ್ಕೆ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಮ. ರಾ. ರಾ. ನಗರ ಗಣಪತಿರಾಯರ ಪುತ್ರಿ ಸೌ। ಸಂಜೀವಿ ಬಾಯಿ ಮತ್ತು ಮ. ರಾ. ರಾ. ಸಬ್‌ಜಡ್ಜರಾದ ಎಮ್. ಜಿ ಕೃಷ್ಣರಾಯರ ಪುತ್ರ ರಾ. ಗಿರಿಧರರಾವ್ ರವರ ವಿವಾಹಲಗ್ನಕಾಲದಲ್ಲಿ ದಂಪತಿಗಳ ಕಡೆಯಿಂದ ರಾ. ಗಣಪತಿರಾಯರೂ ರಾ। ಎಮ್. ಜಿ. ಕೃಷ್ಣರಾಯರೂ ರೂ. [illegible]ನ್ನು ದಕ್ಷಿಣೆಯಾಗಿ ಕೊಟ್ಟು ಕೆಲವು ಗೃಹಸ್ಥರಲ್ಲಿದ್ದ ಈ ಆಲೋಚನೆಯನ್ನು ಕಾರ್ಯರೂಪಕ್ಕೆ ಗೊಳಿಸಿರುವರೆಂಬುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಮ। ರಾ। ಎಮ್. ಜಿ. ಕೃಷ್ಣರಾಯರು ವಿದ್ಯಾರ್ಥಿಗಳಿಗೆ ಸಹಾಯ [illegible]

[illegible]

ಕಾನೂ ಸಹಕಾರಿಯಾಗುವನೆಂಬ ಭರವಸೆಯನ್ನು ಕೊಟ್ಟಿರುವರು. ಈ ಏರ್ಪಾಡಿನ ಮುಂದಿನ ವಿವರವನ್ನು ಕುರಿತು ಸರಿಯಾದ ವ್ಯವಸ್ಥೆಯನ್ನು ಮಾಡಲಿಕ್ಕೆ ಇದೇ ಆದಿತ್ಯವಾರ ತಾ. ೧೦ನೇ ಜೂನ್ ಶ್ಯಾಮ ಘಂಟೆ ೪-೩೦ಕ್ಕೆ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಗೌಡಸಾರಸ್ವತರ ಸಭೆಯು ಕೂಡಬೇಕೆಂತ ನಿಶ್ಚಯಿಸಿದೆ.

೯. ಶ್ರೀ ಚೆನ್ನಪುರಿ ಆಯುರ್ವೇದ ಪ್ರಚಾರಣೆ ಸಭೆ—ಈ ಸಭೆಯ ೪ನೇ ವರುಷದ ರಿಪೋರ್ಟಿನ ಪ್ರತಿಯು ನಮ್ಮ ಕಡೆ ಬಂದಿದೆ. ಈ ಸಭೆಯವರು ಮದ್ರಾಸಿನಲ್ಲಿ ಆಯುರ್ವೇದಿಕ ಕೋಲೇಜನ್ನು ಸ್ಥಾಪಿಸಿಕೊಂಡು, ಅಲ್ಲಿ ಉಚಿತವಾಗಿ ಶಿಕ್ಷಣವನ್ನು ಕೊಡುತ್ತಿರುವರು. ಔಷಧಗಳನ್ನು ಧರ್ಮಾರ್ಥವಾಗಿ ಕೊಡುವ ಒಂದು ಆಸ್ಪತ್ರೆಯು ಇದಕ್ಕೆ ಸೇರಿರುವದು. ರೋಗಿಗಳನ್ನು ಆಸ್ಪತ್ರೆಯಲ್ಲಿರಿಸಿ ಚಿಕಿತ್ಸೆ ಕೊಡುವ ಏರ್ಪಾಡನ್ನು ಮಾಡಬೇಕೆಂಬುವ ಅಪೇಕ್ಷೆಯು ಈ ಸಭೆಯವರಲ್ಲಿದ್ದರೂ ಮಹಾಜನರಿಂದ ಸಾಕಷ್ಟು ದ್ರವ್ಯಸಹಾಯವು ದೊರಕದೆ ಇರುವದರಿಂದ ಈ ತನಕ ಈ ಏರ್ಪಾಡನ್ನು ನೆರವೇರಿಸಲು ಆಗಲಿಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ಸುಪ್ರಸಿದ್ಧ ವೈದ್ಯರಾಗಿರುವಂಥ ವಿದ್ಯಾರತ್ನ ಪಂಡಿತ ಡಿ. ಗೋಪಾಲಾಚಾರ್ಯರವರು ಈ ಸಂಸ್ಥೆಗಳ ಮೆನೆಜಿಂಗ್ ಡಿರೆಕ್ಟರರೂ ಕೋಲೇಜಿನ ಪ್ರಿನ್ಸಿಪಾಲರೂ ಆಗಿರುತ್ತಾರೆ. ಸಭೆಗೂ ಕೋಲೇಜಿಗೂ ಬೇಕಾದ ಖರ್ಚಿನ ಬಹು ಭಾಗವನ್ನು ಇವರು ಸ್ವತಹ ವಹಿಸಿಕೊಳ್ಳುತ್ತಾರೆ. ಶಿಕ್ಷಣವು ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಕೊಡೋಣಾಗುತ್ತದೆ. ಯುನಿವರ್ಸಿಟಿಯ ವೈದ್ಯವಿದ್ಯೆಯಲ್ಲಿ ಪದವೀಧರರು ಈ ಕೋಲೇಜಿನ ವಿದ್ಯಾರ್ಥಿಗಳ ಅಧ್ಯಾಪಕ ವರ್ಗದಲ್ಲಿರುತ್ತಾರೆ. ಕೋಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ವೇತನಗಳು ದೊರಕುತ್ತವೆ. ಬೊಬ್ಬಿಲಿಯ ಮಹಾರಾಜರವರೂ ರಾವ್ ಸಾಹೇಬ ಕನ್ನನ್ ಚೆಟ್ಟಿಗಾರುರವರೂ ತಿಂಗಳು ಒಂದಕ್ಕೆ ರೂ. ೧೫೦ರ ವೇತನಗಳನ್ನು ಈ ವರುಷದಿಂದ ಕೊಡುವರೆ ಸಮ್ಮತಿಸಿರುವರು. ಬೊಡಗಾಡ ಮತ್ತು ಮಂಗಲದ ಮಹಾರಾಜರವರು ಈ ಸಭೆಯ ಪೋಷಕವರ್ಗವನ್ನು ಸೇರಿರುತ್ತಾರೆ. ಸರ್ ಎಸ್. ಸುಬ್ರಮಣ್ಯಯ್ಯರರವರೂ ಮದ್ರಾಸಿನ ಇನ್ನೂ ಹಲವು ಮಹನೀಯರೂ ಸಭೆಯ ಡಿರೆಕ್ಟರರಾಗಿರುವರು. ಈ ಸಭಿಕರ ಕೋಲೇಜಿನಷ್ಟು ಉತ್ತಮ ತರಗತಿಯ ಕೋಲೇಜು ಈ ಸಂಸ್ಥಾನದಲ್ಲಿ ಮತ್ತೊಂದಿರದು. ಆಯುರ್ವೇದದ ಪ್ರಸರಣೆಗೆ ಪ್ರೋತ್ಸಾಹವನ್ನು ಕೊಡಬೇಕೆಂಬುವ ವಿಷಯವು ಸರಕಾರದವರ ಪರ್ಯಾಲೋಚನೆಯಲ್ಲಿದೆ. ಇಂಥಾ ಸಂದರ್ಭಗಳಲ್ಲಿ ಮಹಾಜನರು ಈ ಸಂಸ್ಥೆಗಳಿಗೆ ತಮ್ಮಿಂದಾಗುವ ಸಹಾಯವನ್ನು ಮಾಡಿ ಈ ವಿದ್ಯಾಪ್ರಸರಣೆಯಲ್ಲಿ ತಮಗಿರುವ ಅಭಿಮಾನವನ್ನು ವ್ಯಕ್ತಗೊಳಿಸುವದು ಯುಕ್ತವಾಗಿದೆ.

ಸ್ಥಳಿಕ — ಮಂಗಳೂರು.

ಅಲ್ಲಹಾಬಾದಿನ ಕಾಯಸ್ತರ ಕೋಲೇಜಿನ ಪ್ರಿನ್ಸಿಪಲರಾದ ಮ। ರಾ। ಬಿ. ಸಂಜೀವರಾಯರು ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಇದೇ ತಾ. ೧೦ನೇ ಆದಿತ್ಯವಾರ ಶ್ಯಾಮ ಗಂಟೆ ೫ಕ್ಕೆ (The Religion of future India) 'ಹಿಂದೂಸ್ಥಾನದ ಭಾವೀಮತವು' ಎಂಬ ವಿಷಯ ಒಂದು ಉಪನ್ಯಾಸವನ್ನು ಮಾಡುವರು. ಈ ಉಪನ್ಯಾಸವನ್ನು ಕೇಳಲು ಬರಲಿಕ್ಕೆ ಎಲ್ಲರಿಗೂ ಸುಸ್ವಾಗತವಿದೆ.

ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು ಇದೇ ತಿಂಗಳ ತಾ. ೫ರಿಂದ ಪ್ರಾರಂಭವಾಗಿರುವದು.

ಇಲ್ಲಿಯ ಗವರ್ನಮೆಂಟು ಕೋಲೇಜಿನಿಂದ ಇಂಟರ್ ಮಿಡಿಯೇಟ್ ಪರೀಕ್ಷೆ ಕೊಟ್ಟ ೩೩ ವಿದ್ಯಾರ್ಥಿಗಳಲ್ಲಿ ೧೪ ಜನರು ಪಾಸಾಗಿರುವರು. ಇವರಲ್ಲಿ ಇಬ್ಬರು ಒಂದನೇ ತರಗತಿಯಲ್ಲಿ ಪಾಸಾಗಿರುತ್ತಾರೆ. ಸೈಂಟ್ ಅಲೋಸಿಯಸ್ ಕೋಲೇಜಿನಿಂದ ಪರೀಕ್ಷೆ ಕೊಟ್ಟ ೭೨ ವಿದ್ಯಾರ್ಥಿಗಳಲ್ಲಿ ೨೪ ಜನರು ಉತ್ತೀರ್ಣರಾಗಿರುವರು. ನಾಲ್ಕು ಜನರು ಇವರಲ್ಲಿ ಒಂದನೇ ತರಗತಿಯನ್ನು ಹೊಂದಿರುತ್ತಾರೆ.

ಚಕ್ರವರ್ತಿಗಳ ಜನನ ದಿನದ ಬಿರುದುಗಳ ಪಟ್ಟಿಯು ಪ್ರಕಟವಾಗಿರುವದು. ನಮ್ಮ ಜಿಲ್ಲೆಯಲ್ಲಿ ಪ್ರಕೃತ ಪುತ್ತೂರು ಡಿವಿಜನಿನ ಡಿಪ್ಯುಟಿ ಕಲೆಕ್ಟರರಾಗಿರುವ ಮ। ರಾ। ರಾ। ಪಿ. ನಾರಾಯಣ ಮೇನನರಿಗೆ ರಾವ್ ಬಹದ್ದೂರ್ ಬಿರುದೂ, ಈ ಜಿಲ್ಲೆಯವರಾದ ಸಿವಿಲ್ ಎಪೋತ್ಕೆರಿ ಮ। ರಾ। ರಾ। ಬಿ. ರಾಘವೇಂದ್ರರಾಯರಿಗೆ ರಾವ್ ಸಾಹೇಬ ಎಂಬ ಬಿರುದೂ, ಕೊಡೋಣಾಗಿರುತ್ತದೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಸರಕಾರದ ನೌಕರರಲ್ಲದ ಇತರ ಯಾರಿಗಾದರೂ ಈ ಸರ್ತಿಯ ಬಹುಮಾನಗಳು ನಮ್ಮ ಜಿಲ್ಲೆಯಲ್ಲಿ ದೊರಕಿರವು.

ಕಳೆದ ಬುಧವಾರ ದಿವಸ ಬೋಳಾರದ ಒಂದು ಮೊಗೇರರ ಮನೆಯಲ್ಲಿ ಹಳ್ಳಿಯ ಮಾಪಿಳ್ಳೆಯರ ದೋಣಿಯಿಂದ ಪಡಕೊಂಡ ಸೌದೆಯ ಸೂಡಿಗಳನ್ನು ತಂದು ಅಟ್ಟಕ್ಕೆ ಹಾಕುತ್ತಿರುವಾಗ [illegible] ತ್ತಿದ್ದ ಒಂದುವರೆ ವರುಷದ ಮಗು ಅಕಸ್ಮಾತ್ತಾಗಿ ಕೂಗಿಕೊಂಡಿತು. ಮನೆಯವರು ಗಾಬರಿಯಿಂದ ಬಂದು ನೋಡುವಾಗ ಮಗುವಿಗೆ ಮೂರ್ಛೆಯು ಬಂದು ಶರೀರವೆಲ್ಲಾ ಕೆಂಪಾಗಿ, ಹಲ್ಲುಗಳ ಎರಡು ಸಾಲೂ ಒಂದಕ್ಕೊಂದು ತಾಗಿ ನಾಲಿಗೆಯ ತುದಿಯು ಅವುಗಳ ಮಧ್ಯೆ ಸಿಕ್ಕಿಕೊಂಡಿತ್ತು. ಕೈಯಲ್ಲಿ ಘಾಯವಾಗಿ ರಕ್ತವು ಸೋರುತ್ತಿತ್ತು. ಇದು ಕಟ್ಟಿಗೆಯ ಸೂಡಿಯೊಂದಿಗೆ ಬಂದಿದ್ದ ವಿಷ ಜಂತುವಿನ ಹಲ್ಲೆಯನ್ನು ಕಂಡು ಮಗುವು ಹಿಡಿಯ ಹೋದಾಗ ಅದು ಕಚ್ಚಿರಬಹುದೆಂದು ಅನುಮಾನಿಸಿ ಕಟ್ಟಿಗೆಯ ಸೂಡಿಗಳನ್ನು ಪರೀಕ್ಷಿಸಿದ್ದಲ್ಲಿ ಅದರೊಳಗೆ [illegible] ಗೇಣು ಉದ್ದದ ಎರಡುವರೆ [illegible] ತೋರದ [illegible] ಒಂದು ಹಾವು ಸಿಕ್ಕಿತು. [illegible] ಬೋಳಾರದ ಮೊಗೇರ ಕೊರಗ ಪೂಜಾರಿಯು ಈ ಮಗುವಿಗೆ [illegible] ಕಲ್ಲಿನ ಮೂಲಕ ತಕ್ಷಣವೇ [illegible] ಮಾಡಿದ್ದರಿಂದ [illegible] ಮಗುವು ಚೇತರಿಸಿಕೊಂಡಿತು. [illegible] ಘಾಯವು ಹಲ್ಲುಗಳ [illegible] ನಾಲಿಗೆಯಾದ [illegible] ಹೊಂದಿತು.

[illegible]

...ಗಳು ಸಂಗ್ರಹಿಸಲ್ಪಡುವಕ್ಕಿಂತಲೂ ಆಹಾರ ಜೀನಸುಗಳು ಇನ್ನೂ ಕಡಮೆ ಬೆಳೆಯುವ ಸಂದರ್ಭವು ತೋರಬರುತ್ತದೆ. ಯುದ್ಧದ ದೆಸೆಯಿಂದ ಧಾನ್ಯಗಳ ಬೆಳೆಯು ೧೯೧೪ರಕ್ಕಿಂತ ೧೯೧೬ರಲ್ಲಿ ಸೇಕಡಾ ೨೫ರಂತೆ ಕಡಮೆಯಾಗಿದೆ. ಇಂಥಾ ಅಡಚಣೆಗಳ ಸಂದರ್ಭದಲ್ಲಿ ... ನಮ್ಮೆಲ್ಲರಿಗೆ ಪ್ರತ್ಯಕ್ಷವಾಗಿರುವದು. ಇಂಥಾ ವಿದ್ಯಮಾನಗಳಲ್ಲಿ, ಇಂಡಿಯಾ ಸರಕಾರವು ಸಾಮ್ರಾಜ್ಯ ಸರಕಾರದವರಿಗೆ ಸಹಾಯ ಮಾಡುವ ಸಂದರ್ಭಗಳನ್ನು ಯುದ್ಧಸಾಲದ ಮೂಲಕ ಒದಗಿಸಿಕೊಟ್ಟಿದೆ ಎಂತ ಗವರ್ನರ ದೊರೆಗಳವರು ಅಪ್ಪಣೆ ಕೊಟ್ಟಿರುತ್ತಾರೆ.

ಮುಲ್ಕಿ:— ಇಲ್ಲಿಯ ಯೂನಿಯನ್ ಕ್ಲಬ್ಬಿನಲ್ಲಿ ಇದೇ ಜೂನ್ ತಾ. ೪ರಲ್ಲಿ ಶ್ರೀಮಾನ್ ಮಹಾರಾಜಾ ಚಕ್ರವರ್ತಿಯವರ ಜನ್ಮದಿನೋತ್ಸವಾರ್ಥ ಸಭೆ ಕೂಡಿ ಸಾರ್ವಭೌಮರಿಗೆ ದೀರ್ಘಾಯುರಾರೋಗ್ಯ ಉಂಟಾಗಲೆಂದೂ, ಸಾಮ್ರಾಜ್ಯಕ್ಕೆ ಒದಗಿದ ಘೋರ ಯುದ್ಧದಲ್ಲಿ ಇವರಿಗೂ ಇವರ ಮಿತ್ರರಿಗೂ ಶೀಘ್ರ ಜಯಲಾಭವಾಗಿ ರಾಜರಿಗೂ ಪ್ರಜೆಗಳಿಗೂ ಸುಖಶಾಂತಿ ಸಮೃದ್ಧಿಯುಂಟಾಗಲೆಂದೂ ಪ್ರಾರ್ಥನೆ ಮಾಡಲ್ಪಟ್ಟಿತು. ಯೂನಿಯನ್ ಕ್ಲಬ್ಬಿನ ಫಂಡಿನಿಂದ ನೂರು ರೂಪಾಯಿ ಬಾಬತು ಪೋಸ್ಟಲ ಸರ್ಟಿಫಿಕೇಟುಗಳನ್ನು ಪಡಕೊಳ್ಳಬೇಕಾಗಿ ಸಹಾ ನಿರ್ಣಯಮಾಡಲಾಯಿತು.

ಮುಲ್ಕಿ ಯೂನಿಯನ್ ಕ್ಲಬ್ ಈಗ ಸ್ಥಾಪನೆಯಾಗಿ ೧೪ ವರುಷಗಳು ಕಳೆದು ಹೋದವು. ಈ ವರೆಗೆ ದೇವಾನುಗ್ರಹದಿಂದ ಸರಿಯಾಗಿ ನಡೆದದೆ— ಇನ್ನು ಸಹಾ ಇದು ಸಾರ್ವಜನಿಕ ಉಪಯೋಗಾರ್ಥವಾಗಿ ವೃದ್ಧಿಗೊಂಡು ಚಿರಾಯುವಾದೀತೆಂತ ತೋರುತ್ತೇನೆ. ಮುಲ್ಕಿಯ ಜನರ ಸಾರ್ವಜನಿಕ ಉಪಯೋಗಾರ್ಥವಾಗಿ ಈ ಕ್ಲಬ್ಬಿನಲ್ಲಿ ಒಂದು ಪುಸ್ತಕಾಲಯ ಸಹ ತೆರೆಯೋಣಾಗಿಯದೆ. ಹೊಸ ಪುಸ್ತಕಗಳನ್ನು ತರಿಸುವರೆ ಸಾಕಷ್ಟು ದ್ರವ್ಯಾನುಕೂಲತೆ ಇಲ್ಲದ್ದರಿಂದ ಮಹಾಜನರು, ಪ್ರೋತ್ಸಾಹಕರು, ಮೆಂಬರರು ಸಹಾ ಉಚಿತಾರ್ಥವಾಗಿ ಕೊಟ್ಟ ಪುಸ್ತಕಗಳಿಂದಲೇ ಇದು ಸಂಗ್ರಹಿಸಲ್ಪಟ್ಟಿದೆ. ಇನ್ನು ಹೆಚ್ಚಿನ ಪುಸ್ತಕಗಳನ್ನು ಅನೇಕರು ಕೊಡ ಬದಾಗಿ ವಾಗ್ದಾನ ಮಾಡಿರುತ್ತಾರೆ. ಮೆಂಬರರ ಪೈಕಿ ಒಬ್ಬರನ್ನು ಲ್ಯಾಬ್ರೇರಿಯನನಾಗಿ ಮಾಡಿರುತ್ತಾರೆ. ಈ ಕ್ಲಬ್ಬಿನ ಆಡಳಿತ ಮೆಂಬರರ ಚುನಾವಣೆಯು ೬ ತಿಂಗಳಿಗೊಮ್ಮೆ ನಡಿಯಬೇಕಾಗಿ ಕ್ಲಬ್ಬಿನ ಕಟ್ಟಳೆ ಇರುವದರಿಂದ ಹೊಸ ಚುನಾವಣೆಯು ನಿನ್ನೆ ತಾರೀಕಿನಲ್ಲಿ ನಡಿಯಿತು. ಈ ಚುನಾವಣೆಯಲ್ಲಿ ಬರೇ ನಾಲ್ಕಾರು ಜನ ಮಾತ್ರ ಮೆಂಬರರಾಗಿದ್ದ ಜಾತಿಯವರು ೪,— ಸುಮಾರು ೩೦ ಯಾ ೪೦ ಜನ ಮೆಂಬರರಿದ್ದ ಜಾತಿಯವರು ಬರೇ ೨ ಜನ, ಮತ್ತು ಬೇರೆ ಮೂವರು ಬೇರೆ ಬೇರೆ ಜಾತಿಯವರೊಟ್ಟಿಗೆ, ಹೀಗೆ ೯ ಮಂದಿ ಆಡಳಿತ ಮೆಂಬರರಾಗಿ ಚುನಾಯಿಸಲ್ಪಟ್ಟಿದ್ದಾರೆ. ಈ ಚುನಾಯಿಸಿದ ಮೆಂಬರರ ದಾಮಾಶಾಯಿಯು ಸರಿಯಾಗಲಿಲ್ಲವಾದ್ದರಿಂದ ಹೊಸ ಚುನಾವಣೆಯು ಆಗಬೇಕಾಗಿ ಕೆಲವರು ಮಾಡಿದ ಆಕ್ಷೇಪಣೆಯು ಸರಿಯಾದ್ದೆಂತ ತಿಳುಕೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ಹೊಸ ಅಧ್ಯಕ್ಷರು ಮನಸ್ಸುಕೊಡುವರಾಗಿ ನಂಬುತ್ತೇನೆ.

ಮೆಂಬರರಲ್ಲೊಬ್ಬ.

ಕಾರ್ಕಳ:— ಇದೇ ತಿಂಗಳ ತಾ. ೩ನೇ ಗುರುವಾರ ಕಾರ್ಕಳ ತಾಲೂಕು ಆಫೀಸು ಹೊಸ ಕಟ್ಟಡದ ಪ್ರವೇಶ ಉತ್ಸವವು ಬಹಳ ಸಂಭ್ರಮದಿಂದ ಸುಮುಹೂರ್ತದಲ್ಲಿ ಜರುಗಿತು. ಇದೇ ಪಟ್ಟಣವು ಅಲ್ಲಲ್ಲಿ ಗುಡಿ ತೋರಣಗಳಿಂದ ಶೃಂಗರಿಸಲ್ಪಟ್ಟು ನೋಟಕ್ಕೆ ರಮಣೀಯವಾಗಿ ಕಂಡಿತು. ಸರಕಾರಿ ಹುದ್ದೆದಾರರು ಭೂಮಾಲಿಕರು, ಸಾಹುಕಾರರು, ವಿದ್ಯಾರ್ಥಿಗಳು, ವ್ಯಾಪಾರಿಗಳು ಕೂಡಿ ಪುರನಿವಾಸಿಕರೆಲ್ಲರೂ ಶ್ರೀ ದೇವರನ್ನು ನವವಿಧ ಭಕ್ತಿಯಿಂದ ಸ್ತುತಿಸಿ, ಶ್ರೀ ಲಕ್ಷ್ಮೀ ಸರಸ್ವತೀ ಪ್ರಸನ್ನತೆಯಿಂದ ಹಳೆತಾಲೂಕು ಕಚೇರಿಯಿಂದ ಪಟ್ಟಣದಲ್ಲಿ ಮೆರವಣಿಗೆ ಹೊರಟು ಹೊಸ ಕಟ್ಟಡ ಪರಿಯೆಂತರ ವೇದಘೋಷಗಳಿಂದಲೂ, ನಾನಾ ವಿಧದ ವಾದ್ಯಘೋಷಗಳಿಂದಲೂ, ಗಾನನಾದಿಗಳಿಂದಲೂ ರಾಜದ್ವಾರವನ್ನು ಸಮೀಪಿಸಿದರು. ಅಲ್ಲಿ ನೆರೆದ ಮಹಾಜನರ ಕೀರ್ತನೆಗಳಿಂದ ನಮ್ಮ ಮಾನ್ಯರಾದ ಮ. ರಾ. ರಾ. ತಹಸೀಲ್ದಾರ ಟಿ. ಭವಾನಿಶಂಕರ ರಾವ್‌ರವರು ದ್ವಾರವನ್ನು ತೆರೆದ ಒಳಪ್ರವೇಶ ಮಾಡಿದರು. ಅಲ್ಲಿ ನೆರೆದ ಅಬಾಲವೃದ್ಧ ಸಭಿಕರೆಲ್ಲರೂ ಏಕೋಭಾವದಿಂದ ನಮ್ಮ ಚಕ್ರವರ್ತಿಯವರಿಗೂ, ಚಕ್ರವರ್ತಿನಿಯವರಿಗೂ, ನಮ್ಮ ರಾಜ್ಯಕ್ಕೂ ಶುಭೋದಯವಾಗುವಂತೆ, ಸರ್ವಶಕ್ತನೆಯಾದ ಭಗವಂತನನ್ನು ಧ್ಯಾನಿಸಿ, ಲಕ್ಷ್ಮೀಸರಸ್ವತಿ ಪ್ರತಿಷ್ಠಾ ಮಹೋತ್ಸವವು ಪೂರೈಸಿದಂತಾಯಿತು. ನಂತರ, ಕೂಡಿದ ಸಭಿಕರಿಗೆ ಮಿಠಾಯಿ, ಬಾಳೆಹಣ್ಣು, ಪಾನಕ, ಪಾನಸುಪಾರಿ, ಪನ್ನೀರು ಮೊದಲಾದವುಗಳನ್ನು ಹಂಚಿ ಸಂತೋಷ ಪಡಿಸಿದರು.

ನಮ್ಮ ಜಿಲ್ಲೆಯಲ್ಲಿ ಎತ್ತಲ್ಪಟ್ಟ ಯುದ್ಧ ಸಾಲಗಳ ವಿವರ.

ಬೆಳ್ತಂಗಡಿ:— ಮಹಾರಾಜಶ್ರೀಗಳಾದ ಧರ್ಮಸ್ಥಳ ಚಂದಯ್ಯ ಹೆಗ್ಗಡೆ ರೂ. ೭೦೦೦; ರತಿಯಾನೆ ನೇತ್ರಾವತಿ ಅಮ್ಮ ರೂ. ೧೦೦೦; ಕೃಷ್ಣ ಪಡಮಣ್ಣಾಯ ರೂ. ೫೦೦; ತಣ್ಣಿಯ್ಯ ಪಡಿವಣ್ಣಾಯ ರೂ. ೫೦೦; ಭೀಡೆ ವೆಂಕಟೇಶ ಭಟ್ಟ ರೂ. ೩೦೦; ಬಿ. ವೆಂಕಪ್ಪಶೆಟ್ಟಿ ರೂ. ೩೦೦; ನಾರಾಯಣ ಮುಡಣ್ಣಾಯ ರೂ. ೨೦೦; ಕೊಟ್ಯಣ್ಣ ಬಳಿಲ ರೂ. ೨೦೦; ಕೆರಮಂಡೆ ವೆಂಕಟರಮಣಯ್ಯ ರೂ. ೨೦೦; ಕಾಂತುಬುನ್ನ ರೂ. ೧೦೦; ಕುಡ್ಗಿ ಬರ್ದಪ್ಪ ಯಾನೆ ವೆಂಕಟೇಶ ಶ್ಯಾನುಭಾಗ ರೂ. ೧೦೦; ಅಪ್ಪುಪೂಜಾರಿ ರೂ. ೧೦೦; ಇ. ಇ. ಗೋನ್‌ಸಾಲ್ವಿಸ್ ರೂ. ೧೦೦; ಎಮ್. ಚೆಂದುನಂಬಿಯಾರ್ ರೂ. ೧೦೦; ಪಿ. ರಾಮಕೃಷ್ಣರಾಯ ರೂ. ೧೦೦; ಎ. ತಿಮ್ಮಪ್ಪ ಪುಂಡ ರೂ. ೩೦೦; ಎಮ್. ಗಣಪತಿ ಭಂಡಾರಿ ರೂ. ೧೦೦; ಜನ್ನಪ್ಪ ಶೆಟ್ಟಿ ರೂ. ೧೦೦; ಮಂಜಪ್ಪ ಕಡಂಬ ರೂ. ೧೦೦; ದಾರಪ್ಪ ಶೆಟ್ಟಿ ರೂ. ೧೦೦; ಕೆಯ್ಯೂರು ರಾಮಕೃಷ್ಣರಾಯ ರೂ. ೧೦೦; ಬಿ. ವೆಂಕಪ್ಪಶೆಟ್ಟಿ ರೂ. ೧೦೦; ಬಿ. ವಾಸುದೇವಯ್ಯ ಕಡಮಣ್ಣಾಯ ರೂ. ೧೦೦; ಶೇಷಯ್ಯ ಪಡಿವಾಳ ರೂ. ೧೦೦; ರುಕ್ಮಯ್ಯಬುನ್ನ ರೂ. ೧೦೦; ದೇವು ಬಳ್ಳಾಲ ರೂ. ೧೦೦; ಕಾಂತುಬುನ್ನ ರೂ. ೧೦೦; ಶ್ಯಾಮಸೆಂಪಿಗೆತ್ತಾಯ ರೂ. ೧೦೦; ರಾಮಸೆಂಪಿಗೆತ್ತಾಯ ರೂ. ೧೦೦; ಜನ್ನಪ್ಪ ಹೆಗ್ಗಡೆ ರೂ. ೧೦೦; ಅಮ್ಮು ಆಚಾರಿ ರೂ. ೧೦೦; ನಿಡ್ಲೆ ಪದ್ಮನಾಭಯ್ಯ ರೂ. ೧೦೦ ಒಟ್ಟಿಗೆ ಜುಮ್ಲಾ ರೂ. ೬೭೦೦.

ಉಪ್ಪಿನಂಗಡಿ ತಾಲೂಕು:— ರಾಜಶ್ರೀಗಳಾದ ಸಾಹುಕಾರ ಮಾಧವ ಭಟ್ಟ ರೂ. ೫೦೦; ಕೆ. ರಾಮನಾಯಕ ರೂ. ೪೦೦; ಕೆ. ನರಸಿಂಹ ನಾಯಕ ರೂ. ೧೦೦; ಯು. ಪುರುಷೋತ್ತಮ ಭಟ್ಟ ರೂ. ೨೦೦; ಯು. ಸರ್ವೋತ್ತಮ ಭಟ್ಟ ರೂ. ೨೦೦; ಮೊಯಿದೀನ ಅಹ್ಮದ್ ಬ್ಯಾರಿ ರೂ. ೨೦೦; ಇಸ್ಮಾಲಿ ಬ್ಯಾರಿ ಗುತ್ತಿಗಾರ್ ರೂ. ೧೦೦; ಅಬ್ದುಲ್ಲಬ್ಯಾರಿ ಕಲ್ಯಾರ್ ರೂ. ೧೦೦; ಸೋಮಪ್ಪ [illegible] ರೂ. ೧೦೦; ಸದಾಶಿವಯ್ಯ ದೇವಡಿಲ್ಲ ರೂ. ೨೦೦; [illegible] ಕೃಷ್ಣಯ್ಯ [illegible] ರೂ. ೧೦೦; ರಾಮಣ್ಣ ಹೆಬ್ಬಾರ ರೂ. ೧೦೦; ಲಕ್ಷ್ಮೀ [illegible] ರೂ. ೧೦೦; ಶ್ರೀನಿವಾಸ ಬೈಪಡಿತ್ತಾಯ ರೂ. ೧೦೦; [illegible] ರೂ. ೧೦೦; [illegible] ರೂ. ೧೦೦; [illegible] ರೂ. ೧೦೦; [illegible] ರೂ. ೧೦೦; ಕೆ. ವೆಂಕಟರಾವ್ [illegible] ರೂ. ೧೦೦; ಎಸ್. ಟಿ. [illegible] ರೂ. ೧೦೦; [illegible] ರೂ. ೨೦೦; [illegible] ಭಂಡಾರಿ ರೂ. ೨೦೦; [illegible] ರೂ. ೧೦೦; [illegible] ಉಪ್ಪಿನಂಗಡಿ ರೂ. ೧೦೦; [illegible]

[illegible]

ಮಂಗಳೂರು ತಾಲೂಕು ತಹಸೀಲ್ದಾರರ ಮೂಲಕ ಈ ತಿಂಗಳ ತಾ. ೨ನೇ ಅಂತ್ಯವಾಗುವ ವಾರದ ವರೆಗೆ ರೂ. ೧೦,೫೦೦.

ಮಂಗಳೂರು ಮಿಸಿಸ್. ಕೆ. ದೇವರಾವ್ ರೂ. ೪೫೦೦.

ಉಡುಪಿ:— ಉಡುಪಿ ತಾಲೂಕು ಪಡೆಹಳ್ಳಿ ಮಾಗಣೆ ಹೊಸಾಳ ಗ್ರಾಮದ ಬಾರ್ಕೂರು ಶ್ರೀ ಭಂಡಾರಿಕೆರೆ ಮಠದ ಶ್ರೀ ಮದ್ವಿದ್ಯಾವಾರಿಧಿತೀರ್ಥ ಶ್ರೀಪಾದಂಗಳವರು ಇತ್ತಲಾಗೆ ಸುಮಾರು ೬ ತಿಂಗಳಿಂದ ಕ್ಷಯರೋಗದಿಂದಿದ್ದು ಇದೇ ಜ್ಯೇಷ್ಠ ಶುದ್ಧ ೫ಯು ತಾ. ೨೫-೫-೧೯೧೭ನೇ ದಿನ ಮುದ್ರಾಡಿಯಲ್ಲಿ ಬಹು ಸಂಭ್ರಮದಿಂದ ಮಂಗಳೂರು ತಾಲೂಕು ಬಪ್ಪನಾಡು ಗ್ರಾಮದ ರಾಮಭಟ್ಟರ ಮಗ ಕೃಷ್ಣಭಟ್ಟರಿಗೆ ಆಶ್ರಮ ಕೊಟ್ಟು ವಿದ್ಯೇಶಧಿ ತೀರ್ಥರು ಎಂಬ ಹೆಸರಿಟ್ಟು ತನ್ನ ಉತ್ತರಾಧಿಕಾರಿಗಳನ್ನಾಗಿ ಮಾಡಿ ಔಷಧಿ ತೆಗೆದುಕೊಳ್ಳುವ ಬಗ್ಗೆ ಉಡುಪಿಗೆ ಬಂದು ಅದೇ ಜ್ಯೇಷ್ಠ [illegible] ತಾ. ೨೯-೫-೧೯೧೭ನೇ ದಿನ ಅನಾರೋಗ್ಯವಾದ ಈ ಭೂಲೋಕದಲ್ಲಿ ಉದಾಸೀನರಾಗಿ ಮೋಕ್ಷ ಸಾಧನ ಘೋರಚಕ್ರಗಳಾಗಿ ಪ್ರಯಾಣ ಮಾಡಿದ ಸಂಗತಿಯನ್ನು ತಿಳಿಸಲು ವಿಷಾದ ಪಡುತ್ತೇನೆ.

ಉಡುಪಿ ಪಟ್ಣ ನಿವಾಸಿಕ.

ಪತ್ರವ್ಯವಹಾರ.

ಕೊರಗರ ವಿಷಯ.

ಅಯ್ಯಾ ಪತ್ರಿಕಾಕರ್ತರೆ,

ಕೊರಗರ ವಿಷಯದಲ್ಲಿ ಒಂದೆರಡು ಭೂತುಗಳನ್ನು ಬರೆಯಬೇಕೆಂದಿದ್ದೇನೆ. ಅವಕ್ಕೆ ತಮ್ಮ ಪತ್ರದಲ್ಲಿ ಒಂದಿಷ್ಟು ಎಡೆ ಸಿಕ್ಕೀತೆಂದು ಭರವಸೆ ಇದೆ.

ಉತ್ತರದಿಂದ ಆರ್ಯರು ಬಂದು ವಾಸಿಸುವದಕ್ಕಿಂತ ಮುಂಚೆ ಈ ದೇಶದಲ್ಲಿ ವಾಸಿಸಿಕೊಂಡಿದ್ದ ಜನರು ಕೊರಗರು ಎಂದು ಹೇಳುತ್ತಾರೆ. ಈ ಮಾತು ಕೊರಗರನ್ನು ನೋಡುವಾಗ ಹಾಲ್ಪೆಂದು ಹೆಚ್ಚಾಗಿ ತೋರುತ್ತದೆ. ನಾನು ಈ ಊರಿಗೆ ಬರುವದಕ್ಕಿಂತ ಮುಂಚೆ ಇವರಿಕ್ಕೆ ವಿನೆವಸ್ತ್ರಗಳ ಮತ್ತು ಉಡಿಗೆ ತೊಡಿಗೆಗೆ ವಸ್ತ್ರಗಳ ಹೆಚ್ಚಿನ ಅವಶ್ಯಕತೆ ಇಲ್ಲದ ಜನರು. ಇನ್ನೂ ಹಿಂದೂಸ್ಥಾನದ ಕೆಲ ಕೆಲವೆಡೆಗಳಲ್ಲಿದ್ದಾರೆಂದು ಕೇಳಿದ್ದೆ. ಆದರೆ ಕೊರಗರನ್ನು ಪೇಟೆಯಲ್ಲಿ ತಿರುಗಾಡುವಾಗ ಪ್ರತ್ಯಕ್ಷ ನೋಡಿದ್ದಲ್ಲಿ ಕೇಳಿದ ಮಾತು ಸತ್ಯವೆಂತ ನೆನಸಬೇಕಾಯಿತು. ಇವರು ಅನಾರ್ಯಕುಲದವರೆಂಬುದಕ್ಕೆ ಅವರ ಭಾಷೆ, ಮುಖದ ಆಕಾರ, ವಾಸಸ್ಥಾನದ ರಚನೆ, ಆಭರಣ, ಭೂತಾರಾಧನ ಮತ್ತು ವಸ್ತ್ರ ಪ್ರಾಪ್ತಿಗೆ ಅನುಕೂಲವಾದ ವಸ್ತ್ರ ಹೀನತ್ವ ಮುಂತಾದವುಗಳು ಸಾಕ್ಷಿಯಾಗಿವೆ. ಹಿಂದಿನ ಕಾಲದಲ್ಲಿ ಹುಬ್ಬಾಸಿಗನೆಂಬ ಹೆಸರಿನ ಕೊರಗನು ಕೆಲವು ಗ್ರಾಮಗಳ ಮುಖ್ಯಸ್ಥನಾಗಿದ್ದನೆಂತಲೂ, ಅವನು ಕೆಲವು ಬ್ರಾಹ್ಮಣರನ್ನು ತರಿಸಿ ಅಲ್ಲಲ್ಲಿ ಇಟ್ಟನೆಂತಲೂ ದಂತಕಥೆಯು ರೂಢವಾಗಿ ಹೇಳುವದನ್ನು ಕೇಳಿದ್ದೇನೆ. ಕೊರಗ ಶಬ್ದದ ಮೂಲವೇನೆಂದು ಕೇಳಿದ್ದಲ್ಲಿ ಈ ಜನರು ಕೊಡಗು ದೇಶದಿಂದ ಬಂದಿರುವದರಿಂದ ಅವರಿಗೆ ಕೊಡಗರು ಎಂದು ವ್ಯವಹಾರವಿರಬೇಕಾದ್ದು; ಅದರಲ್ಲಿ ಸ್ವಲ್ಪ ಬದಲಾವಣೆಯಾಗಿ ಕೊರಗರು ಎಂದು ರೂಢವಾಯಿತೆಂದು ಹೇಳುವರು.

ಇವರು ಹಿಂದು ಮತಸ್ಥರೆ, ಕ್ರೈಸ್ತ, ಮಹಮ್ಮದಿ ಅಥವಾ ಕ್ರೈಸ್ತಮತಸ್ಥರಿಲ್ಲ. ಯಾಕೆಂದರೆ, (೧) ಇವರು ಈ ದೇಶದ ಮೂಲನಿವಾಸಿಗಳು, (೨) ಭೂತಾರಾಧಕರು, (೩) ಇವರಲ್ಲಿ ಗಂಡಸರಿಗೆ ಶಿಖೆ ಇರುವದು. ಈ ಮುಖ್ಯ ಮೂರು ಕಾರಣಗಳಲ್ಲದೆ ಇನ್ನು ಎಷ್ಟೋ ಕಾರಣಗಳನ್ನು ಇವರು ಹಿಂದುಗಳು ಎಂದು ಸಾಧಿಸಲು ತೋರಿಸಬಹುದು. ಆದರೆ ಈ ಕೊರಗರು ಮಹಮ್ಮದೀಯರಲ್ಲಿ ಹಾಗು ಕ್ರೈಸ್ತರಲ್ಲಿ ಅನ್ನವನ್ನು ತಕ್ಕೊಳ್ಳುವರಂತೆ, ಇದು ಮಹಾ ಆಶ್ಚರ್ಯವು. ಜಾತಿಭೇದದ ಕಲ್ಪನೆಯು ಇವರಲ್ಲಿ ಮೊದಲಿಲ್ಲವೆಂದು. ಶೀಲವೆಂದರೆ ಹಿಂದುಗಳಲ್ಲಿಯೇ ಎರಡು ಮೂರು ಕೀಳತರದ ಜಾತಿಗಳ ಅನ್ನವನ್ನು ಈ ಕೊರಗರು ತಕೊಳ್ಳುವದಿಲ್ಲ. ಹೀಗಿರುವಾಗ ಅವರು ಪರಕೀಯ ಧರ್ಮದ ಅನ್ಯಮತೀಯರ ಅನ್ನ ಸ್ವೀಕರಿಸುವದು ಹೇಗೆ?

ಇವರ ವೃತ್ತಿಯನ್ನು ನೋಡಿದರೆ ಅದು ಇವರ ವಸ್ತ್ರವನ್ನೇ ತೋರಿಸುವದು. ಬೆತ್ತಗಳಿಂದ ಅಥವಾ ಬಿದಿರಿನ ಸೂಕ್ಷ್ಮ ಮತ್ತು ಮೆತ್ತಗಾದ ಶೀಳುಗಳಿಂದ ಕುಕ್ಕೆ ಮುಂತಾದ್ದನ್ನು ತಯಾರಿಸುವದು ಇವರ ಕೆಲಸವಾಗಿದೆ. ಅಲ್ಲದೆ ಇವರು ಬೇರೆ ಯಾವ ವ್ಯವಸಾಯ ಮಾಡಿದ್ದು ಕಂಡುಬರುವದಿಲ್ಲ.

ನನ್ನಂಥ ಪರದೇಶಸ್ಥನಿಗೆ ಕೊರಗರ ವಿಷಯವು ಅಪೂರ್ವವಾಗಿ ಕಂಡರೂ ಏತದ್ದೇಶೀಯರಿಗೆ ಅದರಲ್ಲಿ ನೂತನವಾದ್ದು ಯಾವದೂ ಇರದು ಎಂಬುದು ಸತ್ಯ. ಆದರೆ ಕೊರಗರ ವಿಷಯದಲ್ಲಿ ಬರೆಯಲಿಕ್ಕಿದ್ದ ಎರಡು ಮಾತುಗಳು ಇವಲ್ಲ. ಬೇರೆ ದೇಶಗಳಲ್ಲಿ— ದಕ್ಷಿಣ ದೇಶದಲ್ಲ— ಉಚ್ಛಿಷ್ಟವನ್ನು ಹಕ್ಕಿನಿಂದ ಬಂದು ತಿನ್ನುವ ಜನರು ಯಾರೂ ಇದ್ದದ್ದು ಕಂಡುಬರುವದಿಲ್ಲ. ಊಟಮಾಡಿದ ಎಲೆಗಳನ್ನು ನಾಯಿ ಮುಂತಾದ ಪ್ರಾಣಿಗಳು ತಿನ್ನುವದಲ್ಲದೆ ಮನುಷ್ಯರಾದವರು ತಿನ್ನುವದು ಕೇವಲ ಜಿಹಾಸೆಯ ಸಂಗತಿಯು. ಮಾತ್ರವಲ್ಲ, ಹೀಗೆ ಎಲೆಗಳ ಮೇಲಿಂದ ಉಚ್ಛಿಷ್ಟವನ್ನು ಒಟ್ಟಿಗೆ ಕೂಡಿಸಿ ಊಟಮಾಡುವದನ್ನು ನೋಡಿ ಯಾರಿಗೆ ಮನಸ್ಸಿನಲ್ಲಿ ತಾಪವೂ ಬಾಯಿಯಲ್ಲಿ ವಾಂತಿಯೂ ಆಗಲಾರದು! ಇದರ ಸಂಗಡಲೆ ವಸ್ತ್ರವನ್ನು ಉಪಯೋಗಿಸದೆ ತಿರುಗಾಡುವದು ಪಟ್ಟಣದಲ್ಲಿ ಅಮಂಗಲಕರವು. ಈ ಎರಡು ಸಂಗತಿಗಳನ್ನು ಸಮಾಜ ಸುಧಾರಕರು ನಿಲ್ಲಿಸಲು ಯತ್ನಿಸುವದು ಅಗತ್ಯವಾಗಿದೆ. ಅನೇಕ ಕಾಲದಿಂದ ಉಚ್ಛಿಷ್ಟವನ್ನು ತಿನ್ನುತ್ತ ಬಂದ ಕಾರಣ ಅವರಿಗೆ (ಕೊರಗರಿಗೆ) ಇದು ಎಂದೂ ಒಪ್ಪಲಿಕ್ಕಿಲ್ಲ. ಆದರೆ ಈ ಉಚ್ಛಿಷ್ಟ ಭೋಜನದಿಂದ ರೋಗಸಂಕ್ರಮಗಳು ಹ್ಯಾಗಾಗುತ್ತವೆ, ಈ ವಿಷಯವು ಅವರಿಗೆ ತಿಳಿಸಿಕೊಡಬೇಕು. ಒಂದುವೇಳೆ ಆ ಜನರಿಗೆ ಈ ವಿಷಯವು ತಿಳಿಸಿಕೊಡುವದು ಕಷ್ಟಸಾಧ್ಯವಾಗಿ ತೋರುವ ಪಕ್ಷದಲ್ಲಿ ಸುಶಿಕ್ಷಿತರೇ ಈ ವಿಷಯದಲ್ಲಿ ಉಚ್ಛಿಷ್ಟ ಎಲೆಗಳನ್ನು ಅವರಿಗೆ ಅರ್ಪಿಸುವದನ್ನು ಬಿಟ್ಟುಬಿಡಬೇಕು. ಅವರ ಉಚ್ಛಿಷ್ಟ ಭೋಜನವನ್ನು ನೋಡುವದೇ ಇಷ್ಟು ಅಸಹ್ಯಕರವಾಗಿರುವಾಗ ಪ್ರತ್ಯಕ್ಷ ಅದನ್ನು ಊಟಮಾಡುವವರಿಗೆ ಎಷ್ಟು ಜಿಹಾಸೆಯದಾಗಿರಬೇಕು. ಆದರೆ ವಿಪರ್ಯಾಸಾನ್ಯಯದಿಂದ ಅವರಿಗೆ ಇದರಲ್ಲಿ ಸಂಕೋಚ ಅಥವಾ ಅಸಹ್ಯತೆ ತೋರುವದಿಲ್ಲ!

ಹಾಗೆಯೇ ಸಮಾಜೋದ್ಧಾರಕರ ಇನ್ನೊಂದು ಕರ್ತವ್ಯವೇನೆಂದರೆ— ಕೊರಗರಿಗೆ ವಿಶೇಷತಃ ಕೊರಗಸ್ತ್ರೀಯರಿಗೆ ಪೂರ್ಣ ವಸ್ತ್ರವಿಲ್ಲದೆ ಮನೆಯಿಂದ ಹೊರಗೆ ಬೀಳುವದು ಅಯೋಗ್ಯವಾದ್ದೆಂದು ತಿಳಿಸಿಕೊಡಬೇಕು. ಮತ್ತು ಹಿಂದುಗಳಲ್ಲಿ ಅಲ್ಲದೆ ಅನ್ಯಮತೀಯರ ಅನ್ನವನ್ನು ಅವರು ಸ್ವೀಕರಿಸುವದನ್ನು ನಿಲ್ಲಿಸುವಂತೆ ಮಾಡಬೇಕು. ಜಾತಿಯ ಹಗೆಯಿಂದ ಹೇಳುವ ಮಾತಲ್ಲ ಇದು. ಆದರೆ ಇದು ರಾಷ್ಟ್ರೀಯತೆ ಅಲ್ಲ. ಕೊರಗರ ವಿಷಯದಲ್ಲಿ ನನಗೆ ಇನ್ನೂ ಕೆಲವು ಮಾತುಗಳನ್ನು ಬರೆಯುವದಕ್ಕಿದೆ. ಅವುಗಳನ್ನು ಇನ್ನೊಮ್ಮೆ ಬರೆಯುವೆನು.

ದೂರದೇಶಸ್ಥ.

ಕೊಬರಿ.

ಪ್ರಪಂಚದಲ್ಲಿರುವ ಎಲ್ಲಾ ದೇಶಗಳ ಕೊಬರಿಗಿಂತಲೂ ಅಮೇರಿಕಾಕ್ಕೆ ಸೇರಿದ ಪನಾಮಾ ದೇಶದ ಕೊಬರಿಯು ಉತ್ಕೃಷ್ಟವಾದುದು. ಅಲ್ಲಿಯ ತೆಂಗುಗಳು [illegible]

[illegible]

...ಕಾಯಿಯ ಬೆಲೆಯು ಸಾಮಾನ್ಯವಾಗಿ ೧ ಸಾವಿರಕ್ಕೆ ೬೦ ರಿಂದ ೯೦ ರೂ. ಗಳ ವರೆಗೂ ಆಗುವುದು. ಇದನ್ನು ಕೊಂಡು ಹೊರಕ್ಕೆ ಸಾಗಿಸುವವರು ಕೊಬರಿಯನ್ನು ಪ್ರತ್ಯೇಕಿಸದೆ ಕರಟದ ಸಮೇತವಾಗಿಯೇ ಸಾಗಿಸುವರು. ಈಗ ಅಮೇರಿಕಾದ ನ್ಯೂಯಾರ್ಕ್ ಪಟ್ಟಣದಲ್ಲಿ ಈ ಕೊಬರಿಯು ಸಾವಿರಕ್ಕೆ ೧೦೦ ರೂ. ಗಳಿಗಿಂತಲೂ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿದೆ. ಪನಾಮಾದಲ್ಲೂ ಅದರ ಸುತ್ತುಮುತ್ತಣ ಸ್ಥಳಗಳಲ್ಲೂ ಕೆಂದೆಂಗು ಎಳೆಹಚ್ಚೆಯ ಬಣ್ಣದ ತೆಂಗು ಇವೆರಡು ಜಾತಿಗಳೇ ಹೆಚ್ಚು. ಈಗ ಇನ್ನು ೩-೪ ಜಾತಿಯ ಸಸಿಗಳನ್ನು ವೃದ್ಧಿಪಡಿಸುತ್ತಿದ್ದಾರೆ. ಸುಧಾರಿಸಿದ ರೀತಿಯ ವ್ಯವಸಾಯವಿಲ್ಲದೆ ಸಾಮಾನ್ಯ ತರದ ವ್ಯವಸಾಯವುಳ್ಳ ಮರಗಳಲ್ಲಿ ತಿಂಗಳೊಂದಕ್ಕೆ ಒಂದೊಂದು ಮರದಲ್ಲಿ ೬ರಿಂದ ೧೦ ಕಾಯಿಗಳ ವರೆಗೆ ಎಂದರೆ ವರ್ಷಕ್ಕೆ ೭೨ರಿಂದ ೧೨೦ ಕಾಯಿಗಳ ವರೆಗೆ ಫಲಿಸುವವು. ಅಲ್ಲಿಯ ಕೊಬರಿಗೆ ಗಿರಾಕಿಯೂ ಬೆಲೆಯೂ ತುಂಬಾ ಇರುವುದರಿಂದ ತೆಂಗಿನ ವ್ಯವಸಾಯವು ಬಹಳ ಅಭಿವೃದ್ಧಿ ದಶೆಯಲ್ಲಿದೆ. ಫೆಡರೇಟೆಡ್ ಮಲಯಾ ರಾಷ್ಟ್ರಗಳಲ್ಲಿ ೧೫೭,೬೦೦ ಎಕರೆಯ ತೆಂಗಿನ ತೋಟಗಳಿವೆ. ಫಿಲಿಪ್ಯಾನ್ ದ್ವೀಪಗಳಲ್ಲಿ ೫೫೦,೦೦೦ ಎಕರೆಗಳಿಂದ ೬೨೫,೦೦೦ ಎಕರೆಗಳಷ್ಟು ತೆಂಗಿನ ತೋಟಗಳಿವೆ. ಈಗ ಜಾವಾ ದ್ವೀಪದಿಂದಲೂ ಅದರಲ್ಲೂ ಮುಖ್ಯವಾಗಿ ಡಚ್ಚರ ಪೂರ್ವ ಇಂಡ್ಯಾ ದ್ವೀಪಗಳಿಂದಲೂ ಕೊಬ್ಬರಿಯ ಸಾಗಿಸುವಿಕೆಯು ಬಹಳ ವೃದ್ಧಿಯಾಗುತ್ತಿದೆ. ೧೯೧೨ನೆ ವರ್ಷದಲ್ಲಿ ಜಾವಾದ್ವೀಪವೊಂದರಿಂದಲೇ ೧ ಲಕ್ಷ ಟನ್ನುಗಳಿಗಿಂತ ಹೆಚ್ಚಾಗಿಯೇ ಕೊಬರಿಯು ಹೊರಕ್ಕೆ ಮಾರಾಟವಾಗಿ ಹೋಗಿದ್ದಿತು. ಯುದ್ಧಾರಂಭವಾಗುವುದಕ್ಕೆ ಮುಂಚೆ ಭರತಖಂಡದ ಕೊಬರಿಗೂ ವಿದೇಶದ ಗಿರಾಕಿಯು ಹೆಚ್ಚಾಗಿದ್ದುದರಿಂದ ಇದಕ್ಕೆ ಬೆಲೆ ಹೆಚ್ಚಾಗಿದ್ದಿತು. ಜರ್ಮನಿ ಆಸ್ಟ್ರಿಯಾಗಳಿಗೆ ಇಲ್ಲಿಯ ಕೊಬರಿಯೂ ಅದರ ಎಣ್ಣೆಯೂ ಸಾಗುವುದು ಕಟ್ಟಾದ ಬಳಿಕ ಇದರ ಬೆಲೆಯು ಬಿದ್ದುಹೋಗಿದ್ದಿತು. ಆದರೆ ಈಚೆಗೆ ಅಮೇರಿಕಾಕ್ಕೂ ಗ್ರೇಟ್‌ಬ್ರಿಟನಿಗೂ ಭಾರತಖಂಡದ ಕೊಬರಿಯು ಹೆಚ್ಚುಹೆಚ್ಚಾಗಿ ಸಾಗಲು ಉಪಕ್ರಮಿಸಿರುವುದರಿಂದ ಕೊಬರಿಯ ಬೆಲೆಯು ಮೊದಲಿನಂತೆ ಏರಲುಪಕ್ರಮಿಸಿದೆ. ಪ್ರಪಂಚಕ್ಕೆಲ್ಲಾ ತೆಂಗಿನ ಬೆಳಸಿನಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಫಿಲಿಪ್ಯಾನ್ ದ್ವೀಪಗಳವರೇ ಈ ತಮ್ಮಲ್ಲಿ ಬೆಳಸು ಇನ್ನೂ ಹೀನಸ್ಥಿತಿಯಲ್ಲಿರುವುದೆಂದೂ ಇದನ್ನು ಹೆಚ್ಚಿಸುವುದಕ್ಕೆ ಇನ್ನೂ ವಿಶೇಷ ಪ್ರಯತ್ನಗಳನ್ನು ಮಾಡಬೇಕೆಂದೂ ಸಂಕಲ್ಪಿಸಿರುವಾಗ, ವಿಶೇಷ ಲಾಭಪ್ರದವಾದ ಈ ಬೆಳಸನ್ನು ಅನುಕೂಲವಾದ ವಾಯುಗುಣವುಳ್ಳ ಭರತಖಂಡದ ನಾನಾ ಪ್ರದೇಶಗಳಲ್ಲಿ ಹೆಚ್ಚುಹೆಚ್ಚಾಗಿ ಮಾಡುವುದು ನಮ್ಮ ವ್ಯವಸಾಯಗಾರರಿಗೆ ಹಿತಕರವೆಂಬುದನ್ನು ಹೇಳಬೇಕಾಗಿಲ್ಲ.

ಮೈ. ಸ್ಟಾ.

NOTICE.

Is hereby given for the information of the public that owing to the dearth of the raw materials the price for tiles will be increased by Rs. 4/ per thousand for I and II class and Rs. 10/ per thousand for ridge tiles, from 1st July 1917.

Jeppo Tile Works,
MANGALORE,
12th May 1917.

J. H. Morgan & Son,

ಕುಮಠಾಚಾರ್ಯರ ಅರ್ಥಸಮೇತವಾದ

ಸಂಸ್ಕೃತಗ್ರಂಥಮಾಲೆ.

ಶ್ರೀಹರಿನೃಸಿಂಹಾಷ್ಟಕ ಸ್ತೋತ್ರ ೬ ಪೈ, ಕಾಳುಹ್ಯಾಷ್ಟಕ ೧ ಆಣೆ, ವ್ಯಾಸಾರಿವೇದಾಂತ ೯ ಪೈ, ವ್ಯಾಸಾದಿಧ್ಯಾನಯೋಗ ೧ ಆಣೆ, ಧನಲಕ್ಷ್ಮೀಸ್ತೋತ್ರಾಷ್ಟಕ ೧ ಆಣೆ, ಮಂಗಳೂರು ಶ್ರೀವೆಂಕಟರಮಣ ದೇವರ ಅಷ್ಟಕ ಮೂಲಮಾತ್ರ ೩ ಪೈ, ಅಶ್ವಧಾಟೀಸ್ತುತಿ ಕೌಂಕಣಾರ್ಥ ಸಮೇತ ೩ ಪೈ.

ವಿಳಾಸ:—

ನರಸಿಂಹ ವಾಸುದೇವ ಭಟ್ಟ,
ರಥಬೀದಿ, ಮಂಗಳೂರು.

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ	6— 6—0	ರಿಂದ	6—12—0
ಗುಡ್ಡು ಸುಗ್ಗಿ	5—10—0	,,	6— 2—0
ರಾತಿ	5— 4—0	,,	5— 8—0
ಅವ್ವಲ್ ಬೆಳ್ತಿಗೆ	6— 4—0	,,	6— 8—0
ಗುಡು ಬೆಳ್ತಿಗೆ	5—10—0	,,	5—14—0
ರಂಗೂನು ಬೆಳ್ತಿಗೆ ಗೋಣಿ ೧ರ	9— 8—0	,,	9—12—0
ಗೋದಿ ಗೋಣಿ ೧ರ	13— 0—0	,,	15— 0—0
ಹುರುಳಿ ಗೋಣಿ ೧ರ	6— 0—0	,,	7— 0—0
ಕಡಲೆ ಗೋಣಿ ೧ರ ಬೊಂಬ್ಯ	9— 4—0	,,	10— 0—0
ತೊಗರಿ ಗೋಣಿ ೧ರ			10—8—0
ತೊಗರಿ ಬೇಳೆ ಗೋಣಿ ೧ರ 11—0—0	12— 8—0	,,	15— 8—0
ಉದ್ದು ಗೋಣಿ ೧ರ	11— 8—0	,,	11—12—0
ಭೂರುಬಲು ಖಂಡಿ ೧ರ		,,	36—12—0
ಉಪ್ಪು ಗೋಣಿ ೧ರ	5— 4—0	,,	5—14—0
ಕೊಬ್ರಿ ಖಂಡಿ ೧ರ		,,	65— 0—0
ಕೊಬ್ರಿಹಿಂಡಿ ಖಂಡಿ ೧ರ			15— 8—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	28—12—0	,,	36— 4—0
ಕೊಬ್ರಿ ಎಣ್ಣೆ ಮಣ ೧ರ	5— 4—0	,,	6— 0—0
ಎಳ್ಳೆಣ್ಣೆ ಮಣ ೧ರ(ಕುಡಾಸಕ)		,,	4— 6—0
[illegible] ಎಣ್ಣೆ [illegible] ೧ರ	6—11—0	,,	7— 9—0
[illegible] ಸಕ್ಕರೆ ಮಣ ೧ರ	5—7—0	,,	5— 8—0
[illegible] ಖಂಡಿ ೧ರ	160—0—0		165—0—0
[illegible] ಖಂಡಿ ೧ರ	72— 0—0	,,	78— 0—0
[illegible] ಮಣ ೧ರ		,,	1—10—0
[illegible] ಖಂಡಿ ೧ರ	105—0—0	,,	110— 0—0
[illegible] ಮಣ ೧ರ	31— 0—0	,,	34— 8—0
[illegible] ಮಣ ೧ರ		,,	34— 0—0
[illegible] ೧ರ	23—8—0	,,	24— 0—0
[illegible] ಮಣ ೧ರ		,,	5— 4—0
[illegible]			235— 0—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪಕ 1888.

ಗಜಕರ್ಣ.

ಕಜ್ಜಿ, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳೆತ, ಕರಿ ಮತ್ತು ಹಟವಾರಿ ಗಜಕರ್ಣವು ಈ ಮುಲಾಮಿನ ಒಂದೇ ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೩೦—೩೫ ವರ್ಷಗಳ ಹಳೆತ, ತ್ರಾಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೮ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಸರಿಯಾಗಿ ತಿಳಿಸಿದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರೆಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ದಿಂದ ಮೈಮೇಲೆ ಉಬ್ಬುವ ಹಕ್ಕೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಜಡವೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಿರಿ ಕೈಕಾಲುಗಳುರಿಯೋಣ, ಕೈಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ಹೆಚ್ಚು ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕ್ಕೊಳ್ಳುವವರಿಗೆ ಧರಪ್ಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಶ್ರೇಷ್ಠ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ ೬ ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಎಣ್ಣೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನನ್ನ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನನ್ನ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟರವರಲ್ಲಿ ಕೂಡ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಶೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಪ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಶೀಸೆಯು ನಿಮ್ಮ ಮನೆಯಲ್ಲಿದ್ದರೆ ತಾತು ತಾಃತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೀನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರುತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಯೋಗ್ಯತಾ ಪತ್ರುಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಎ. ಎನ್. ಆಫ್ ದಿ ಸ್ಟ್ಯಾಟರ್ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಆಫೀಸ್, ಎಗಿಯಂವೇಸ್ ನಂ. 2, ಬೆಂಗಳೂರು ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿನೋಡಲಾಗಿ ಕ್ಷಾಸಕೋಶ್ಯ್ವ ಸರಳ ಮೈಕಾಸ, ಅಜೀರ್ಣ, ಮಲಬದ್ಧತೆ, ಹಕ್ಕೆಯ ನೋವು, ಹೊಟ್ಟೆನೋವು, ವಿಷಮಶೀತ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿಕೃತಿ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಸಂತೋಷವುಳ್ಳವನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಔಷಧಗಳ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ ಕೆಲವು ಔಷಧಗಳು.

ಇಕ್ಷಿಪ್ಸ್ ಡ್ರಾಪ್ಸ್ ಸೇವನೆಯಿಂದ ಹಲವು ಬಗೆಯ ರೋಗಿಗಳು ಚೇತರಿಸಿಕೊಂಡಿದ್ದಾರೆಂತ ಸಿದ್ಧಾಪುರದ ಮ॥ ಶ್ರೀನಿವಾಸರು ಬರದಿರುತ್ತಾರೆ.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗ ಹತ್ತಿಕೊಳ್ಳದು.

ಕ್ರಯ 50 ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-6-0. ವಿ. ಪಿ. ಬೇರೆ.

ಎಂಟಿಸ್ನೇಕ್ ಬೈಟ್:- ಈ ಔಷಧಿಯು ನಾಗರಹಾವು, ಕೊಳಕುಹಾವು ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡದವರು ಒಂದೇ ತಾಸಿನಲ್ಲಿ, ಚೇಳು ಕಡದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1 ವಿ. ಪಿ. ಬೇರೆ.

ಟೋರಕಟ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಕುರುಹುಗಳು ಕಂಡರೆ ತಿಳಿದು ಯಾ ತಿಳಿಯದ ರೀತಿಯಲ್ಲಿ ಧಾತು ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೋರಕಟ್ ಸೇವಿಸಿರಿ.

ಕ್ರಯ ಸೀಸೆ 1ಕ್ಕೆ ರೂ 1—8—0. ವಿ. ಪಿ. ಬೇರೆ.

ಇಕ್ಷಿಪ್ಸ್ ಡ್ರೊಪ್ಸ್:— ಇದು ಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳನ್ನು ತಪ್ಪದೆ ಗುಣ ಮಾಡುತ್ತದೆ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0—6—0. ವಿ. ಪಿ. ಬೇರೆ.

ಇಕ್ಷಿಪ್ಸ್ ಬಾಮ್, ಹೇರ ಯುಕಲಿಪ್ಟಸ್ ತೈಲ, ಮೂಲವ್ಯಾಧಿ, ಅಂಡ್ರವಾಯು, ಅಂಡವೃದ್ಧಿ ಮೊದಲಾದ ಹಲವು ರೋಗಗಳಿಗೆ ಬೇಕಾದ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಷಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯ ಪಾತವೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. "ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 3—0—0. ಟಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿಯಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, ದಸ್ತೈವಜ ವಿವರಣ ಮತ್ತು ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ, ಕೋರ್ಟ್‌ಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊರ್‍ಡಿ ಆಕ್ಟ್, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯೂ ಕೋಡ್, ಕ್ಯಾ. ಪಟೇಲರ ಕೋಡ್, ಗ್ರಾಮ [illegible] ಸ್ಮಾಲ್ ಕೋರ್ಟ್ ಕೋಡ್, ಸಹೋದರರು ಮನೆಗಳನ್ನು ಭಾಗ [illegible] ಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ [illegible] ನಮೂನೆಗಳು ಮತ್ತು ದಸ್ತೈವಜುಗಳ 40 ನಮೂನೆಗಳು ಇದರಲ್ಲಿ [illegible] ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. [illegible]

[illegible] 1—8—0. [illegible] 1—12—0.

ಯಂ. ಯಸ್. ನಂಜಪ್ಪನವರು,

[illegible]

11 [illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೩೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ಪ್ರಸಂಗ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 1 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರತರ್ಪಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿ ಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 1 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 1 ಆಣೆ.

—ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪ್ಪೊ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವುದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲ



ವಾರ್ಧಿಕ್ಯ ಇವುಗಳನ್ನು ನಿವಾರಣೆ ಮಾಡುವದರಲ್ಲಿ ಜ್ಞಾಪಕಶಕ್ತಿಯನ್ನು ವೃದ್ಧಿಮಾಡಿ ಬುದ್ಧಿಗೆ ತೀಕ್ಷ್ಣತ್ವವನ್ನುಂಟು ಮಾಡುವ

ಥಳ್ಳಿಯೂ, ಮಲಸಂಬಂಧವನ್ನು ನರಗಳ ಬಲಹೀನತೆಯನ್ನೂ ಹೋಗಲಾಡಿಸುವದು. 40 ಮಾತ್ರೆಗಳುಳ್ಳ ಡಬ್ಬಿಯ ಕ್ರಯ ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯ ಚಿಕಿತ್ಸೆಯು ಮುಫತ್ತಾಗಿ ದೊರೆಯುವದು.

144 ಪುಟಗಳ ವೈದ್ಯವಿದ್ಯಾ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಚೇನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಸೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದ ಸೆಟ್ಟಿಗೆ ೧ಕ್ಕೆ ३-೦-೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಕಾಬುಲಿ ಹಿಂಗು.

ಉತ್ತಮ ತರದ ರೂಪಾಯಿ ೧ಕ್ಕೆ ೪ ತೊಲೆ, ದ್ವಿಯಂ ರೂಪಾಯಿ ೧ಕ್ಕೆ ೮ ತೊಲೆ, ತೃತೀಯಂ ರೂಪಾಯಿ ಒಂದಕ್ಕೆ೧೦ ತೊಲೆ, ಚತುರ್ಥಂ ರೂಪಾಯಿ ೧ಕ್ಕೆ ೧೫ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾಗುವದು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Choukhambay.
BENARES CITY.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಫಲಹೊಂದಿ ತಮ್ಮ ಹಲ್ಲು ಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಕೂಡ್ದು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪಟ್ಟಣಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ| ಲಲ್ಲುಬಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:— ಪ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮಿ| ಜೋಜ್‌ಕಿಂಗ್ ಎಫ್. ಐ. ಎ. ಎಫ್. ಐ.ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಮಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ವಿಜ್ಞಸ್ತಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟೆಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಪೋಲಿಸಿಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಟ್ಟೆಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವರಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ದಸ್ತಾವೇಜನ್ನು ಸಂಗ್ರಹಿಸಿ ಕೊಟ್ಟೊಡನೆ ತಕ್ಷ ಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ರವರಿಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು. ವೀರಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟ್ ಪ್ಲೀಡರ್, ಸೇಲಂ.

"ತೋಮ್ಸನರ ಅಯೋಡೈಸಿಡ್ ಸರ್ಸಪರಿಲಾ."

ಈ "ಸರ್ಸಪರಿಲಾ"ಯಿಂದ ಮಾನವ ದೇಹದಲ್ಲಿಯ ರಕ್ತವು ಶುದ್ಧಿಗೊಂಡು, ದೇಹದಲ್ಲಿಯ ಸಕಲ ತರದ ಉಷ್ಣಕಾರಕವಾದ ದೋಷಗಳು ನಿರ್ಮೂಲವಾಗುವವು. ಹೆಚ್ಚು ಕಾಲಗಳಿಂದ ಶರೀರದಲ್ಲಿ ವ್ಯಾಪಿಸಿಕೊಂಡಿರುವ (Syphillis) ಉಪದಂಶ (ಉಷ್ಣ)ದಿಂದ ದೇಹದಲ್ಲಿ ಬರುವ ಬೊಬ್ಬೆಗಳು, ಜಖಂಗಳು, ಬಾಯಿಗೆ ಮತ್ತು ಅಂಗಗಳಿಗೆ ತೂತು ಬೀಳೋಣ, ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈ, ಕೈಸಂದು ನೋಯೋಣ, ಕೈಕಾಲುಗಳಿಗೆ ಘಾಯಬೀಳೋಣ; ಮೇಹದಿಂದ ಕೈಕಾಲು ಗಂಟುಗಳು ನೋಯುವದು, ಉಬ್ಬುವದು, ಕೈಗಳ ಮೇಲೆ ಕರೇ ಕಲೆ ಬೀಳುವದು ಮುಂತಾದ ಉಷ್ಣಪ್ರಕೃತಿಯ ರೋಗಗಳು ಗುಣವಾಗಿ, ರಕ್ತವು ಶುದ್ಧವಾಗಿ, ಶರೀರ ಪುಷ್ಟಿಯಾಗುವದಕ್ಕೆ ಈ "ಸರ್ಸಪರಿಲ"ಯು ಉತ್ತಮೋತ್ತಮ ಔಷಧಿಯಾಗಿದೆ.

ಇದಕ್ಕೆ ಬಾಟಲಿಗೆ ಕ್ರಯ ರೂ. 1—4—0. ಅಂಚೆ ವೆಚ್ಚ 0—4—0.

ದಿ. ಉಲನ್ ಫೂರ್,
ಮಂಗಳೂರು, ದ. ಕ.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತಂವುಚಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್ ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಆಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಎ ಕೋರ್ಸ್ ಆಫ್ ಇಂಡಿಯನ್ ಜುಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ನೂತಕಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡಗಳನ್ನು, ಬಸ್ಕಿಗಳನ್ನು ಸೇರಿದ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆಗಳನ್ನು, ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.



ಪ್ರತ್ಯೇಕ ಭಾಗಕ್ಕೆ ಕ್ರಯ ರೂ. 0—12—0. ವಿ. ಪಿ. ಚಾರ್ಜು 2 ಆಣೆ.
ಎರಡು ಭಾಗಗಳು ಸೇರಿ ಕ್ರಯ ರೂ. 1—4—0. „ 2 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,
ಜುಮ್ನಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಾಚ್ಯಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,
Senior Gymnastic Instructor,
Pachiyappa's College, MADRAS.

N. B.—ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರಿಯಬೇಕು. ಮತ್ತು ಕಾಗದಗಳನ್ನು ಇಂಗ್ಲಿಷಿನಲ್ಲಿಯೇ ಬರಿಯಬೇಕೆಂದು ಕೋರುವೆವು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ½ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ರ 0-12-0.
ವಿ. ಪಿ. ಚಾರ್ಜು 0—4—0 ಬೇರೆ.

ಶ್ರೀಮುಖ [illegible]—
ಎಚ್. ಆರ್. ಮೋದಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.
H. R. MODY & Co.,
10 Princess Street, Bombay.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಬೆಜಡ್ಡೀನ್ ರಸ್ತೆಯ ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ದವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಠ ಶೀರೆ, ಪಟ್ಟೆ ಪೀತಾಂಬರ, ಅಪ್ಪುದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ನನ್ನ ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಠಿ ಮುಂತಾದ ನಾನಾ ಭಾಷೆಯ, ನಾನಾ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ:**—ಕಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ನಿವಾರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ:**—ಪ್ರಸೂತವಾದ ಲಾಗಾಯಿತು 30 ದಿನಗಳವರೆಗೆ ಉಪಯೋಗಿಸುವದರಿಂದ ಜ್ವರ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹೆ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳಕೊಡ್ಡು ಇರುವವರೂ, ಉದರದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ವಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ **ಕಲ್ಯಾಣ** ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇದು ಹೆಚ್ಚು ಕಾಲದಿಂದ ಉಪಯೋಗಿಸಿ ಶಿಫಾರಸು ಹೊಂದಿದ್ದಾಗಿದೆ. ದರವನ್ನು ಇವರಡಿ ಸೂಚಿಸಿರುವರು.

	ಬಿಲ್ಲೆ 1ರ	ಡಜನ್ 1ರ
1. ಕಸ್ತೂರಿ ಸಾಬೂನು 3 ಬಿಲ್ಲೆಗಳಿರುವ ಪೆಟ್ಟಿಗೆ	0—8—0	5—0—0
2. ಮನೋಹರ „ „	0—5—0	3—8—0
ಅತ್ತರ ಸಾಬೂನುಗಳು.		
3. ಖಸ್ ಸಾಬೂನು	0—4—0	2—12—0
4. ಗುಲಾಬ್ „	0—4—0	2—12—0
5. ಹೀನಾ „	0—4—0	2—12—0
6. [illegible] „	0—4—0	2—12—0
7. [illegible] „	0—4—0	2—12—0
8. (ಬಾತ್ ಸೋಪ್) ಸ್ನಾನದ ಬಗ್ಗೆ ಉಪಯೋಗಿಸುವದು	0-1-6	1-1-0
ಡೈಮಂಡ್ [illegible]ದ ಸಾಬೂನು.		
9. [illegible]	0—[illegible]—0	1—1—0
10. [illegible]	0—2—0	1—7—0

[illegible]—[illegible], ಮಂಗಳೂರು, ದ. ಕ.

ಆರ್. ಮಾರ್ಟಿನ್ನರ

ಸಾರಸಾಪರಿಲ್ಲಾ.

ಈ ಸಾರ್ಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವದು, ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕ್ಕಿಸಾರ, ಬೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಬೆರಾಲಿಸಿಸ್ ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಏಂದರೆ ಪಾದರಸ ಮುಂತಾದ್ದರಿಂದ ಆದವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯೂ ಗಟ್ಟಿ ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ೧ಕ್ಕೆ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ನರ ಎಗ್ಯೂ ಮಿಕ್ಸಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಳಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹಿಡುಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ. ಬಾಟ್ಲಿ ೧ಕ್ಕೆ ರೂ. ೦—೧೨—೦.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಬ್ಬೆ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೆ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ೧ಕ್ಕೆ ರೂ. ೧—೮—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಜಳಕೂ ಮಾಯವಾಗುವವು.

ಇದಿಗೋ
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಆಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಬೇಸಿಗೆಕಾಲದಲ್ಲಿ ಅನುಕೂಲವಾದ ಶರಬತ್ತುಗಳು.

ಶ್ರೀಯುತ ಕರ್ನಲ್ ಬ್ರದರ್ಸ್‌ರವರು ಶಾಸ್ತ್ರೋಕ್ತ ಪರಿಶೋಧನೆಯಿಂದ ತಯಾರಿಸಿರುವರು. ಇದು ಎಂದಿಗೂ ಕೆಡಲಾರದಂತ ದ್ರಾವಕದಂತಿದೆ. ಇದು ಮಾಧುರ್ಯವಾಗಿ ತುಂಬಾ ಪರಿಮಳಿಸುವದು. ಈ ಕೆಳಗೆ ಕಾಣಿಸಿದ ಹೆಸರಿನಲ್ಲಿದೆ.

ಲೆಮನ್, ರೋಜ್‌ಬೆರಿ, ರೋಜ್ ಮತ್ತು ಪೊಮೆಗ್ರೆನೆಟ್ ಆಗಿರುವದು. 1 ಬಾಟ್ಲಿ ಸೋಡಾ ಯಾ 1 ಟಂಬ್ಲರ್ ನೀರಿನಲ್ಲಿ 1 ಚಮಚ ಈ ಶರಬತ್ತಿನ ದ್ರಾವಕವನ್ನು ಹಾಕಿದ್ದಲ್ಲಿ ಇದು ಮಧುರವಾಗಿ ದಾಹವನ್ನು ಶಮನಪಡಿಸುವದು. ಪ್ರತಿ [illegible] ಶೀಸೆ 1ರ ಕ್ರಯ ಆ. 9.

ಏಜಂಟರು:—
ದಿ ಊಲನ್ ಮಾರ್ಟ್,
ಮಂಗಳೂರು, ದ. ಕ.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. [illegible] ಮಿಶ್ರವಾದ ಈ ಮಿಶ್ರಣದ ಬರೇ 48 ದಿವಸಗಳ ಸೇವನೆಯಿಂದ [illegible], [illegible], ಧಾತುಕ್ಷಯ, ಕ್ಷಯರೋಗವೇ ಮೊದಲಾದ [illegible] ಸಂಬಂಧವಾದ ಎಲ್ಲಾ ರೋಗಗಳು ಮತ್ತು [illegible], ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ ಎಲ್ಲಾ [illegible] ನಿಸ್ಸಂದೇಹವಾಗಿ ಗುಣವಾಗುವವು. [illegible] ಸ್ತ್ರೀಯರು [illegible].

ಶೀಸೆ 1ರ ಕ್ರಯ 14 ಆಣೆ. [illegible]

[illegible]

ವಿಳಾಸ:—[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೂಕ್ಷ್ಮವಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಮಲೆಯಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದುವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, [illegible], [illegible], ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಬೇರೆರಿತು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. ಸಪ್ತಾರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ರೋಗಿನ ಪೆಟ್ಟಿಗೆ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರು. ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ.
ವೇಪರಿ ಪೋಸ್ಟು ಮದರಾಸು.

B. M NATH & CO. Ayurvedic Chemists
Vepery Post MADRAS,

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ
ರಾಜ ಸುಂದರಿ ರೋಜ
ಎಲ್ಲ ಮನೋಹರವೂ ಮೋಹಕವೂ ಆದ ತೈಲವು.
50 ಬಹುಮಾನಗಳ ಸಹಿತ ಶೀಸೆ 1-ಕ್ಕೆ ಒಂದೇ ರೂಪಾಯಿ.

ಕನಿಷ್ಠ ತರದ ತೈಲಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೈಯನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕಣ್ಣುಗಳೂ, ಉದ್ದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಂದರ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬೇಕಾದರೆ ಅವು ದಿನ್ನಂ ಶುದ್ಧವಾಗಿ ಕಂಗೊಳಿಸುತ್ತಿರಬೇಕು. [illegible]

ಈ ತೈಲವನ್ನು ಉಪಯೋಗಿಸುತ್ತಾ ಬಂದರೆ ಕೂದಲು ದಟ್ಟವಾಗಿಯೂ ಶೀಘ್ರವಾಗಿ ಬೆಳೆಯುವದಲ್ಲದೆ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. [illegible] ಕೂದಲುಗಳಿಗೆ ಈ ತೈಲವನ್ನು ನಿಯಮದಿಂದ [illegible] ಅವು ದಟ್ಟವಾಗಿ ಬೆಳೆಯುವವು. ಇದರ ಸುಗಂಧವು ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರೀರೋಜ ತೈಲವನ್ನು ಉಪಯೋಗಿಸುವದರಿಂದ ತಲೆ ಮಿದುಳಿಗೆ ಬಲವನ್ನು ಕೊಡುವದು. [illegible] ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. ಈ ತೈಲವನ್ನು ತಲೆಗೆ ನಿಯಮದಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು ಮಿದುಳಿಗೆ ತಂಪನ್ನುಂಟು ಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿ ರೋಜ ಹೇರಾಯಿಲ್ ದಿನದಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಿಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಜ 6, ಕಣ್ಣುಕನ್ನಡಿ ಭರಣಿ 1, ಕುಂಕುಮ ಭರಣಿ 1, ಅದ್ದು 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ಚಿತ್ರಿಸಿದ ಕಾರ್ನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ ಕಾರ್ಡು 6, ಮಹಾತ್ಮರ ಅಕ್ಷರ ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಕ್ರಯ 50 ಬಹುಮಾನಗಳ ಸಹಿತ ರೂ. 1—0—0

ವಿಳಾಸ:— ವಿ. ಎ. ಎಸ್. ಪಾಣಾ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ದಂತ ವೈದ್ಯರಾದ
ಡಾಕ್ಟರ್ ಪಿ. ಡಿ. ಲಿಮಾರವರು
ಚಿಕ್ಕಮಗಳೂರು ಹಾಸನ, ಉಪ್ಪಿನಂಗಡಿ ಅತ್ತಕಡೆ ಸರ್ಕಿಟು ಬೆಳಸಿ
ಈಗಲೇ ಹಿಂತಿರುಗಿ ಮಂಗಳೂರಿಗೆ ಬಂದಿರುವರು.
ಚಾರ್ಜು ಅತೀ ಸುಲಭ.
ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ಕೋಟಿನ ಬಳಿ,
ಮಂಗಳೂರು.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದ ಹೊಮಿಯೋಪತಿ, ಟಿಸ್ಯು, ಸ್ಪೆಸಿಪಿಕ್, ಇಲೆಕ್ಟ್ರೊ ಹೊಮಿಯೊಪತಿ ವ ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೊಮಿಯೊಪೆತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
ಧರ್ಮಸ್ಥಳ.

ಅಮೃತಾರ್ಣವ ಅವಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತಪುಷ್ಟಿಯುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತುಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೈಗೂಡಿಸುವದು. ಕ್ರಯ ಸುಲಭ! ಫಲವು ಅಧಿಕವು!!

೨೦ ತೊಲೆಗೆ ರೂ. ೩—೦—೦ ಮಾತ್ರವೇ

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: Raphael & Co.,
Mangalore.

ಹೊಮಿಯೊಪೆತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
ಧರ್ಮಸ್ಥಳ.

ಸುಮಾರು 10 ವರ್ಷದಿಂದೀಚೆಗೆ ಧರ್ಮಸ್ಥಳದ ಕೆ. ಕುಮಾರಯ್ಯನವರು ಅನೇಕ ರೋಗಿಗಳಿಗೆ ಹೊಮಿಯೊಪೆತಿಕ್ ಔಷಧಗಳಿಂದಲೂ, ಟಿಸ್ಯು, ಸ್ಪೆಸಿಪಿಕ್, ಇಲೆಕ್ಟ್ರೊ ಹೊಮಿಯೊಪೆತಿ ಮತ್ತು ಆಯುರ್ವೇದಿಕ್ ಔಷಧಗಳಿಂದಲೂ ಚಿಕಿತ್ಸೆ ನಡಿಸಿ ಗುಣಪಡಿಸುತ್ತಿರುವರು. ಇದಲ್ಲದೆ, ಅನೇಕ ಬಡಬಗ್ಗರಿಗೆ ಧರ್ಮಾರ್ಥವಾಗಿ ಔಷಧ ಕೊಟ್ಟು, ಗುಣಪಡಿಸಿದ್ದರಿಂದ ಪೋರ್ಕಳ ಗ್ರಾಮದ ಜನರು ಇವರಿಗೆ ಉಚಿತವಾಗಿ ಭಂಗಾರದ ಪದಕವನ್ನು ಕಳದ 1916ನೇ ಇಸವಿಯಲ್ಲಿ ಕೊಟ್ಟಿರುತ್ತಾರೆ. ಇವರು ಔಷಧ ಕೊಡುವದರಲ್ಲಿ ತಕ್ಕನುಟ್ಟಿಗೆ ಸಾಮರ್ಥ್ಯವಂತರು ಮತ್ತು ಧರ್ಮಸ್ಥಳದ ಅಜುಬಾಜಿನ ಜನರು ಇವರ ಕೈಯಲ್ಲಿ ಚಿಕಿತ್ಸೆ ಹೊಂದಲಿಕ್ಕೆ ಬಳ್ಳೇ ಅನುಕೂಲವಾಗಿರುತ್ತದೆ. ಇವರ ಸಹಾಯ ಬೇಕೆಂತ ಅಪೇಕ್ಷಿಸುವವರು ಇವರಲ್ಲಿ ಹೋಗಿ ಚಿಕಿತ್ಸೆ ವಗೈರೆ ಹೊಂದಬಹುದು.

ಹೊಸ ಪುಸ್ತಕ! 'ಹಿಂದೂ ಲಾ' ಹೊಸ ಪುಸ್ತಕ!

ಅನುಭವಿಗಳ ಪರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅಣ್ಣತಮ್ಮಂದಿರ ದಾಯಭಾಗ ಪಾಲು ಪಾರಿಖತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯದೋಗ್ಯ ಆಧಾರ ಅನ್ಯಾದಿಪತ್ರಗಳು, ಸ.ದ. ಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಬಕ್ಕಣಗಳು ವಿಶದವಾಗಿ ಅಚ್ಚು ಮಾಡಲ್ಪಟ್ಟಿದೆ. ಕ್ರಯ ರೂ. ೧—೮—೦.

ವಿಳಾಸ:—ಬಿ. ನರಶಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು ಸಿಟಿ.

ಪ್ರಖ್ಯಾತವಾದ ಪೊಜೀ ಗಾಸ್‌ದೀಪಗಳು:—
ಗಾಸ್‌ದೀಪಗಳಲ್ಲಿ ಅತಿ ಗಟ್ಟಿಯಾದವುಗಳು ಮತ್ತು ಉತ್ಕೃಷ್ಟವಾದವುಗಳು. ಹಿಲ್ ಫುಲೀಮೆಂಟೋಲ್ ಯಾ ಬತ್ತಿಗಳು, ಬಹಳ ಅಗ್ಗ. ಕೆಟಲೊಗ್ ಅಥವಾ ಸಾಮಾನು ಪಟ್ಟಿಯನ್ನು ಉಚಿತವಾಗಿ ಕಳುಹಿಸಿ ಕೊಡುವವು.

[illegible]— [illegible] ಕಂಪೆನಿ,
[illegible]

ಹಲ್ಲು ನೋವುಗಳಿಗೆ
ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
ಈ ಕೆಳಗಿನವರ

ಕೆಂಡಲ್ ಗಾರ್ಡನ್
ಮತ್ತು
ಹಂಪನ್‌ಕಟ್ಟೆ ಶೋಪುಗಳಲ್ಲ
ದೊರೆಯುವದು.

STANY BROTHERS
Sole Agents
M. C. G's. Toothache
Specific, Mangalore.

ಸರ್ವವಿಜಯೀಕರು ಬೇಕಾಗಿದೆ.

ಮೈಸೂರು ದಸರಾ 1916ನೇ ವರ್ಷದ ಸರ್ವ ವಸ್ತುಪ್ರದರ್ಶನ ಶಾಲೆಯಲ್ಲಿ ಬಿರದು ಬಿಲ್ಲೆಯನ್ನೂ ಮತ್ತು ಅನೇಕ ಡಾಕ್ಟರುಗಳಿಂದ ಯೋಗ್ಯತಾಪತ್ರವನ್ನೂ ಪಡೆದಿರುತ್ತದೆ.

ಇತ್ತ ನೋಡಿ! ಜಾಗ್ರತೆ ಮಾಡಿ!! ಬೆಲೆ ಸುಲಭ!!!
ರಿಕ್ಸ್ ರಾಮಕೃಷ್ಣಾಮೃತ.

ನೀವು ನಿಮ್ಮ ಅಮೂಲ್ಯವಾದ ಶರೀರವನ್ನು ವಿಪರೀತ ಯಾತನೆಗೂ ಸಂಕಟಕ್ಕೂ ಒಳಗುಮಾಡಿಕೊಂಡು ಕೃಶರಾಗಿರುವಿರಿ!

ಈಗ್ಗೆ ತಾನೇ ತಯಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ಸುಲಭ, ಪ್ರಯೋಜನ ಬಹಳ. ವಿದ್ಯಾರ್ಥಿಯರಿಗೂ, ಕ್ರಯಾರ್ಥಿಗೂ, ಸ್ತ್ರೀ ಕುಟುಂಬ ವರ್ಗದವರಿಗೂ, ಮುಖ್ಯವಾಗಿ ಎಲ್ಲಾ [illegible], ಬಹಳ ಪ್ರಯೋಜನಕರವಾದದ್ದು. ಒಂದಾವರ್ತಿ ಉಪಯೋಗಿಸಿದ್ದಲ್ಲಿ ಮತ್ತೆ ಇದನ್ನು ಬಿಡಲಾರಿರಿ. ಬೆಲೆ ಶೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5—4—0. [illegible]

ಎಲ್ಲಾ ಸ್ಥಳದಲ್ಲಿಯೂ ಏಜೆಂಟರು ಬೇಕು. [illegible]ಗಳಿಗೆ ಧಾರಾಳವಾದ ಕಮಿಷನ್ ದೊರೆಯುವದು.

ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

R. K. Depot,
273 CHAMRAJPET,
MYSORE.

ಚಂದಾನಿರ್ಣಯ:—ವರ್ಷ 1ಕ್ಕೆ ರೂ. 1—8—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೫ನೇ ಜೂನ್ ಶುಕ್ರವಾರ ೧೯೧೭. | ಸಂಚಿಕೆ ೨೪.

ಸಾಲದ ಅರ್ಜಿಗಳನ್ನು ಸ್ವೀಕರಿಸೋಣಾಗುವ ಅವಧಿಯು ಇನ್ನು ಸ್ವಲ್ಪ ದಿವಸಗಳಲ್ಲಿಯೆ ಮುಗಿಯುವದು.

ತ್ವರೆಮಾಡಿರಿ!

ಒಳಗಡೆ ಸಾಲ ಕೊಡಲು ವಾಗ್ದಾನ ಮಾಡಿದವರ ಹೆಸರು, ಪಟ್ಟಿಗಳನ್ನು ಓದಿ ನೋಡಿರಿ. ನಿಮ್ಮ ಹೆಸರು ಅದರಲ್ಲಿರುವದೋ ಎಂಬದನ್ನು ತಿಳಿಯಿರಿ.

ಸರ್ವರಿಗೂ ಸಾಧ್ಯ!

ಹನಿಗಳು ಕೂಡಿಯೆ ಹಳ್ಳವಾಗುವದು!

ಹಣವಂತರು ಮಾತ್ರ ಯುದ್ಧಸಾಲದಲ್ಲಿ ಹಣ ಹಾಕುವದೆಂಬ ತಪ್ಪು ಗ್ರಹಿಕೆಯು ಸರ್ವಥಾ ಇರಕೂಡದು. ಭಿಕ್ಷಾಪತಿಯೂ ಲಕ್ಷಾಧಿಪತಿಯೂ ತಮ್ಮ ಯಥಾನುಶಕ್ತಿ ಸಹಾಯಮಾಡಲು ಅವಕಾಶವಿದೆ.

ರೂ. 10, 20, 50 ಈ ಮೊಬಲಗುಗಳ ಲೆಕ್ಕವೇ ವಿಶೇಷವಾಗುವದು.

ಅಲ್ಪ ಮೊಬಲಗುಗಳ ಸಾಲ ಪಡಿಯೋಣಾಗುವದೋ ಎಂಬ ಅಂಜಿಕೆಯಿಂದ ಹಿಂಜರಿಯಬೇಡಿರಿ. ಸಾಮ್ರಾಜ್ಯದ ರಕ್ಷಣೆಗಾಗಿ ದೇಶದ ಭದ್ರತೆಗಾಗಿ ಈ ಸಾಲವು ಬೇಕಾಗಿರುವದು.

ಭದ್ರವಾದ ಜವಾಬ್ದಾರಿ. ಖಂಡಿತವಾದ ಬಡ್ಡಿ. ಈಗಲೇ ಬೇಕಾಗಿರುವದು.

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರರ ಕೋರ್ಟಿನಲ್ಲಿ.

ಡಿಸ್ಟ್ರಿಕ್ಟ್ ಕೋರ್ಟು I. P. 4/1916. I. P. ನಂಬ್ರ 39/1916.

ಪಿ. ಲಕ್ಷ್ಮೀನಾರಾಯಣ ಮಲ್ಯ—ಅರ್ಜಿದಾರ ಕ್ರೆಡಿಟರ್.

ಎದ್ರು

ಅಮ್ಮೆಂಬಳ ಬಾಲಕೃಷ್ಣ ಪೈ.—ರೆಸ್ಪೊಂಡೆಂಟ್, ಇನ್ಸಾಲ್ವೆಂಟ್.

ಮೇಲಿನ ದಿವಾಳಿ ಅರ್ಜಿಯಲ್ಲಿ ಇನ್ಸಾಲ್ವೆಂಟ್ ಎಂತ ಸ್ಥಾಪಿಸಲ್ಪಟ್ಟ ಅಮ್ಮೆಂಬಳ ಬಾಲಕೃಷ್ಣ ಪೈಗಳ ಬಾಬ್ತು ತಾ. ೨೦-೪-೧೯೧೭ರಲ್ಲು ಪ್ರಕಟಿಸಲ್ಪಟ್ಟ ಏಲಂ ಇಸ್ತಿಹಾರಿಯಿಂದ ತೋರುವ ಅಮ್ಮೆಂಬಳ ವಾಗಣೆ ಪಡೀರ ಗ್ರಾಮದ ಸ್ಥಿರಾಸ್ತಿಯನ್ನು ಕೆಳಗೆ ದಸ್ಕತುಮಾಡಿದವರು ಕದ್ರಿ ರಸ್ತೆಯಲ್ಲಿರುವ ಆಫೀಸಿನಲ್ಲಿ ತಾ. ೨೩-೬-೧೯೧೭ನೇ ಮಧ್ಯಾಹ್ನ ೨ ಘಂಟೆಯಿಂದ ಬಹಿರಂಗವಾಗಿ ಏಲಂ ಮಾಡುವರೆಂತಲೂ ಇಸ್ತಿಹಾರು ನಕ್ಷೆ ವ ಹೆಚ್ಚಿನ ಅನುಭವ ಅಪೇಕ್ಷಿಸುವವರು ಸದರಿ ಆಫೀಸಿನಲ್ಲಿ ಪಡಿಯಬಹುದೆಂತಲೂ ಈ ಮೂಲಕ ಪ್ರಕಟಿಸೋಣಾಗುತ್ತದೆ.

ಮಂಗಳೂರು } B. M. Hegade,
ತಾ. 9—6—1917. } *Official Receiver.*

ಒಳ್ಳೆ ಗೊಬ್ಬರ! ಅವ್ವಲ್ ಈಟು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನ ಗೊಬ್ಬರದಂತೆ ನಾತ ಬಡಿಯುವದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು, ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ.

ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಕುಂಬಳೆ ಪಾಂಡುರಂಗ ವಿಟ್ಠಲ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಛಾಪಿನ ಪಟ್ಟಿವಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೦ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವದು.

ಮನೋಲ್ಲಾಸಿನಿ ತೈಲ!

ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕಡಿಮೆಯಾಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದೆಂತಲೂ ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗಿರುವ ಕೂದಲನ್ನು ತಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆಂತಲೂ ಈ ತೈಲವನ್ನು ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ 1 ಸೀಸೆಗೆ ರೂ. 0—12—0. (ವಿ. ಪಿ. ಖರ್ಚು 4 ಆಣೆ)
" 3 ಸೀಸೆಗಳಿಗೆ " 2— 0—0. " " 8 "

ಬೆಲೆ ಸುಲಭ! ಚಿನ್-ಚಿನ್-ಬಾಂ. ಗುಣ ಅಧಿಕ!

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ಉಳುಕು, ಗಾಯ, ಚೇಳು ಕಡಿತ, ಕೃಮಿ ಮುಂತಾದ್ದು ತಕ್ಷಣ ಗುಣ. ಬೆಲೆ 1 ಡಬ್ಬಿಗೆ ಒಂದೇ ಆಣೆ, ಡಜನ್ 1ಕ್ಕೆ ರೂ. 0—10—0. ಅಂಚೆ ಹಾಸಲು ಬೇರೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್.

ಸೂಚನೆ:—ಅನೇಕ ತರದ ಮಾತ್ರೆಗಳು, ತೈಲಗಳು, ಕ್ಷಾರಗಳು, ಲೇಹ್ಯಗಳು, ಅರಿಷ್ಟಗಳು, ಇತ್ಯಾದಿ ಕ್ರಯಕ್ಕೆ ಸಿಕ್ಕುವವು.

ವಿಳಾಸ:—ಮನೋಲ್ಲಾಸಿನಿ ಕಂಪೆನಿ,
4, ... ಮಂಗಳೂರು.

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡವೆಯು ಒಳ್ಳೆಯದೊ ಕೆಡುಕೊ ಎಂಬದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೇಲಿನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ

ಅತ್ಯುತ್ತಮವಾದ ಗೊಬ್ಬರಗಳು.

1.	ನೈಟ್ರೇಟ್ ಒಫ್ ಸೋಡಾ	Nitrate of Soda.
2.	ಸುಪರ್ ಫೊಸ್‌ಫೆಟ್ಸ್	Super Phosphates.
3.	ಬೆಸಿಕ್ ಸ್ಲೆಗ್	Basic Slag.

ಇವುಗಳು ತೊಪ್ಪೆ ಸೆಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಖಂಡುಗ ಹಟ್ಟಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುವೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಸಿ ಹಾಕುವುದಕ್ಕಿಂತ ಒಂದು ಹರಳು ಸೌಳುವನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲ ಮಾಹಿತಿಯನ್ನು ಕೊಡುವ ಸೂಚನಾ ಪತ್ರಗಳು ಬೇಕಾದವರು ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. ಕೆಳಗೆ ಕಾಣಿಸಿದ ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ, ಸಾಕಷ್ಟು ರಖಮಾಗಿ ಪಡಕೊಳ್ಳಬಹುದು.

ಹೆಚ್ಚಿನ ಅನುಭವವನ್ನು ಕುರಿತು ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ತೇರಬೀದಿ, ಮಂಗಳೂರು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಟೋ. ಸ. ಟೆಕ್ಸ್ಟು 4 ಆಣೆ, ಡಿಟ್ಟೋ ನೋಟ್ಸು ಮ. ವೆಂಕಟಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟು 2½ ಆಣೆ, Rama & Sita 4 as., (Do Notes 6 as., General Eng. Questions & Answers from 1901-1917 6 as., by Mr. Pichamutta, B. A.), Gen. English by Mr. Chennakesaviah Rs. 1-2-0, ಭೂಗೋಲ I 5 ಆಣೆ, ಡಿಟ್ಟೋ IIನೇದು 5 ಆಣೆ, ಪ್ರಶ್ನೋತ್ತರ ಲೆಕ್ಕಬೋಧಿನಿ ರೂ. 1-8-0, ನವೀನ ಗಣಿತ 8 ಆಣೆ, ಹಿಂದೂ ಚರಿತ್ರಸಾರ 10½ ಆಣೆ, ಸರ್ಕಾರ Iನೇ ರೀಡರ್ 5 ಆಣೆ, ಡಿಟ್ಟೋ 2ನೇದು 7 ಆಣೆ, ಡಿಟ್ಟೋ 3ನೇದು 8½ ಆಣೆ, ಡ್ರಿಲ್ ಪುಸ್ತಕ 2½ ಆಣೆ, ವಾಕ್ಯದ ತಿದ್ದುವಿಕೆ 12 ಆಣೆ, ಲೆಕ್ಕಬೋಧಿನಿ 8½ ಆಣೆ, ಲೆಕ್ಕದ ಉತ್ತರ 6 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟ್ಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

ಈ ಪುಸ್ತಕದಲ್ಲಿ:—೧ ಪಿನಲ್‌ಕೋಡು, ೨ ರೂಪೀ ಆಕ್ಟು, ೩ ಎವಿಡೆನ್ಸ ರೆಗ್ಯುಲೇಶನ್, ೪ ಆಯುಧಗಳ ರೆಗ್ಯುಲೇಶನ್, ೫ ... ರೆಗ್ಯುಲೇಶನ್, ೬ ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಶನ್, ೭ ... ರೆಗ್ಯುಲೇಶನ್, ೮ ... ರೆಗ್ಯುಲೇಶನ್, ೯ ... ರೆಗ್ಯುಲೇಶನ್, ೧೦ ... ಆಕ್ಟು, ೧೧ ... ಆಕ್ಟು ... ಬೆಲೆ ರೂ. 2—3—0.

... ಎಸ್. ರಾವ್ ಬ್ರದರ್ಸ್,
...

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	...	300,000—0—0
Issued Capital	...	225,000—0—0
Subscribed Capital	...	225,000—0—0
Paid up Capital	...	201,275—0—0
Deposits	...	308,596—7—10
Reserve Fund	...	50,003—2—5

ನಿಯಮಿತ ಮೂಲ ಧನವು	ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	201,275—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		308,596—7—10
ರಕ್ಷಿತ ಧನವು	...	50,003—2—5

25% of the net profits are added annually to the Reserve Fund. Rs.29,490/- have been invested in Government Paper of the face value of Rs.30,800/-

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ನೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 29,490—0—0 ಸರಕಾರದ ರೂ. 30,800ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಸಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಈ 8 ವರುಷಗಳಲ್ಲಿ ಶೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5, 5½% and 6% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಹಾವು.

Short-notice Deposits requiring one week's notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಶೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4⅛%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಗಿತು. ಈ ಠೇವಣಾತಿಗಳಿಗೆ ಶೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಸೇರಿ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತವೆ.

Loans granted on proper securities and pledges.

Canara Bank Ltd.,
Mangalore, 1st. June 1917.

P. Gopal Naik,
Secretary

ಪಂಡಿತ್ ಎಂ. ಎಸ್. ಯವರ ಮದರಾಸ್ ಪುಡಿ ನಶ್ಯ.

ಈ ನಶ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ

ಪುಡಿಯನ್ನು ಉಪಯೋಗಿಸುವುದರಿಂದ ಪೀನಾಸಿ, ಅರತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣಮಾಡುವದು. ಈ ನಶ್ಯವು ಬೇರೆಯವರ ನಶ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮಿದುಳನ್ನು ಕೆಡಿಸುವದಿಲ್ಲ. ಈ ನಶ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5. ಆಣೆ.

ಒಂದೇ ಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್. ಪಿಟಿ. ಬಾಬು ಕಂಪನಿ,
ನಂಬ್ರ 7-25ನೇ ನಾರಾಯಣ ಬೀದಿ, ಮಿಂಟ್ ಬಿಲ್ಡಿಂಗ್ ಮದರಾಸ್.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ದಶಮೂಲಾ ಅಮೃತ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡ ಘೃತ, ಆನಂದವನ ವಿಲಾಸ, ಕುಟುಂಬ ಜೀವಿ ಮೊದಲಾದವುಗಳನ್ನು ಕಾಲ ಸಲ ವಿರೆಯಬೇಡಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠರೋಗ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ಪರ್ಶೇಂದ್ರಿಯ, ನಶ್ಯೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಆರೋಗ್ಯಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಪಡಿಸಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಬಿಳಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುಮ್ಮಾಸ್ ಎಂಬ ಬಿಕ್ಕಳಿಕೆಗೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1—0—0

N. B.— ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿ.

ಎವರ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಪ್ಲೇಗ್ ಔಷಧಗಳನ್ನು ... ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ... ಗುಣವಾಗುತ್ತವೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸೀಸೆ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ ... ಪ್ಲೇಗ್ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸೀಸೆ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:— "ಪಂಡಿಟ್" ಮದರಾಸ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಿಷಾ ಹೇರ್ ಆಯಿಲ್ ,,	1—0—0
ವಿ. ಪ್ರಾಣೇಶ ಹೇರಾಯಿಲ್ ,,	0—12—0
ಕಾಮಿನಿಯ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ ಕಳುಹಬೇಕು].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅದೃಷ್ಟಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರಫುಲ್ಲ ,, ,,	0—12—0
ಅಂಬಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಾಕ್ರಮ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಾಲಾ	1—0—0
ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
[illegible] ,,	1—2—0
ಚಂದ್ರವದನ	0—10—0
[illegible] 1ಕ್ಕೆ	0—1—0

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಸೀಸೆಯ ಬೆಲೆ 12 ಆಣೆ

ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಯೂರೋಪದ ಮಹಾ ಯುದ್ಧ.

ಪಶ್ಚಿಮ ರಣರಂಗದಲ್ಲಿ ಬ್ರಿಟಿಷರು ಯುದ್ಧದಲ್ಲಿ ಪುನಃ ಮುಂದುವರಿಯುವರೆ ಪ್ರಾರಂಭಿಸಿರುವರೆಂತ ಕಳೆದ ಸಂಚಿಕೆಯಲ್ಲಿ ಸೂಚಿಸಿದೆವು. ಈ ಸಾರೆ ಬ್ರಿಟಿಷರ ಮುಂದುವರಿಯುವ ವೀರ ಪ್ರಯತ್ನಗಳ ಕ್ಷೇತ್ರವಾದರೂ ಯುದ್ಧ ರಂಗದ ಬೇರೊಂದು ಕಡೆಯಲ್ಲಿ ಆಗಿದೆ. ಬೆಲ್ಜಿಯಮ್ ಪ್ರಾಂತ್ಯಗಳಲ್ಲಿ ಕಠಿಣ ಕದನಗಳಿಗೆ ಪ್ರಾರಂಭವಾಗಿರುವದು. ಈ ಯುದ್ಧ ಸನ್ನಾಹವನ್ನು ಬ್ರಿಟಿಷರ ಒಂದು ವರ್ಷದಿಂದ ಮಾಡುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ. ಜರ್ಮನರು ಕೈವಶಮಾಡಿಕೊಂಡಿರುವ ಕೋಟೆಗಳು ಬಿದ್ದುಹೋಗುವಂತೆ ಅನೇಕ ಮೈಲುಗಳ ವಿಸ್ತೀರ್ಣದ ಸುರಂಗಗಳನ್ನು ತೋಡಿಕೊಂಡು ಈ ಸುರಂಗಗಳಲ್ಲಿ ಸಿಡಿಮದ್ದನ್ನು ಜಡಿದು ಈ ಮದ್ದಿಗೆ ಇಲೆಕ್ಟ್ರಿಕ್ ವಾಯರುಗಳ ಮೂಲಕ ಬೆಂಕಿಕೊಟ್ಟು ಭೂಕಂಪಗಳೋಪಾದಿಯ ಉತ್ಪಾಟನೆಯನ್ನು ಶತ್ರುಭೂಮಿಯಲ್ಲಿ ಉಂಟುಮಾಡಿರುವರು. ಮದ್ದಿಗೆ ಬೆಂಕಿಬಿದ್ದು ಅದರಿಂದುಂಟಾದ ಪ್ರಕಾಶದಿಂದ ದಿಕ್ಕುಗಳೆಲ್ಲವೂ ಬೆಳಗಿದವು. ಸಾವಿರಾರು ಸಿಡಿಲು ಗರ್ಜನೆಗಳು ಉಂಟಾಗಿ ಆ ಪ್ರಾಂತ್ಯದ ಭೂಪ್ರಕೃತಿಯು ಸಂಪೂರ್ಣವಾಗಿ ಮಾರ್ಪಟ್ಟಿರುತ್ತದೆ. ಒಂದು ಮಿಲಿಯ ರಾತ್ತಲುಗಳಿಗೆ ಮಿಕ್ಕಿದ ಸಿಡಿಮದ್ದು ಈ ಸುರಂಗಗಳಲ್ಲಿ ಉಪಯೋಗಿಸಲ್ಪಟ್ಟಿತೆಂದು ತಿಳಿದುಬರುತ್ತದೆ. ವಿಟ್ಸ್‌ಚೆಟ್ ಮತ್ತು ಮೆಸ್ಸಿನಸ್ ಈ ಗ್ರಾಮಗಳು ನಿರ್ನಾಮವಾಗಿ ಹೋಗಿರುವವು. ಮತ್ತು ಹಿಲ್‌ಸಿಕ್ಸ್ಟಿಯ ಉತ್ತರದಿಂದ ಪ್ಲೋಯಗ್ ಸ್ಟ್ರೀಟಿನ ದಕ್ಷಿಣದವರೆಗೂ ಈ ವಿಕಾರ ಸ್ವರೂಪವೇ ಕಾಣಿಸುತ್ತಿರುವದು. ಈ ರೀತಿ ಶತ್ರುಗಳ ಸೇನಾನೆಲೆಗಳನ್ನು ವಿಧ್ವಂಸಿಸಿ ಬ್ರಿಟಿಷ ಸೈನಿಕರು ರಣರಂಗದಲ್ಲಿ ಮುಂದುವರಿದು ಇರುವರು. ಕಾಳಗವು ಈ ಪ್ರಾಂತ್ಯಗಳಲ್ಲಿ ಮುಂದೊತ್ತಿ ಬರುವದೆಂಬ ನಿರೀಕ್ಷಣೆಯು ಶತ್ರುಗಳಲ್ಲಿರಲಿಲ್ಲ. ಸುರಂಗಗಳ ಸಿಡಿತದಿಂದ ನಾಶವಾದ ಶತ್ರುಸೈನಿಕರ ಸಂಖ್ಯೆಯು ಇಂತಿಷ್ಟೆ ಎಂಬುದು ಗೊತ್ತಾಗುವದಿಲ್ಲ. ಬ್ರಿಟಿಷ ಸೈನಿಕರು ಜನರಲ್ ಸರ್ ಹರ್ಬರ್ಟ್ ಪ್ಲುಮ್ಮರರವರ ಸೇನಾಧಿಪತ್ಯದಲ್ಲಿ ಮುಂದುವರಿದುಹೋಗಿ ಸುಮಾರು ೭೩,೦೦೦ ಶತ್ರುಸೈನಿಕರನ್ನು ಸೆರೆಹಿಡಿದಿರುತ್ತಾರೆ. ಮೆಸ್ಸಿನಸ್ ಮತ್ತು ವಿಟ್ಸ್‌ಚೆಟ್ ಗ್ರಾಮಗಳು ಬ್ರಿಟಿಷರ ಸ್ವಾಧೀನವಾಗಿವೆ. ನಂತರದಲ್ಲಿ ನಡೆದ ಕದನಗಳಲ್ಲಿ ಊಸ್ಟವರ್ನ್ ಗ್ರಾಮವನ್ನು ಬ್ರಿಟಿಷರು ಹಿಡಿದಿರುತ್ತಾರೆ. ಶತ್ರುಗಳು ಈ ಪ್ರಾಂತ್ಯಗಳನ್ನಾದರೂ ಅನೇಕ ವಿಧಾನಗಳಿಂದ ಭದ್ರಗೊಳಿಸಿದ್ದರಿಂದ ಬ್ರಿಟಿಷ ಸೈನಿಕರಿಗೆ ಮುಂದುವರಿಯಲು ಬಹಳ ಪ್ರಯಾಸವಿದ್ದರೂ ಈ ಕಷ್ಟಗಳನ್ನೆಲ್ಲ ಸ್ವೀಕರಿಸಿ ಬಹಳ ಪರಾಕ್ರಮದಿಂದ ಈ ಸಾರೆಯ ಕದನಗಳನ್ನು ನಡಿಸಿರುತ್ತಾರೆ.

ಈ ರೀತಿ ಬ್ರಿಟಿಷರು ಬೆಲ್ಜಿಯಮಿನ ಕೆಲಪ್ರಾಂತ್ಯಗಳನ್ನು ಸ್ವಾಧೀನಮಾಡಿಕೊಂಡಿರುವರು. ಇಲ್ಲಿ ಸೇನಾನೆಲೆಗೆ ಬಹಳ ಅನುಕೂಲವಾದ ಸ್ಥಳವು ಯಾಪ್ರೆಸ್ ಸಮೀಪದಲ್ಲಿ ಸಿಕ್ಕಿರುವದರಿಂದ ಶತ್ರುಗಳ ಸಾಧನೆಗಳು ಬಿದ್ದುಹೋಗತಕ್ಕಂಥವುಗಳಾಗಿವೆ.

ಬ್ರಿಟಿಷ ಚಕ್ರವರ್ತಿಗಳವರು ಈ ಜಯವಾರ್ತೆಗಳನ್ನು ತಿಳಿದು ಸೈನಿಕರಿಗೂ ಸೇನಾಪತಿಗಳಿಗೂ ತಮ್ಮ ಸಂತೋಷವನ್ನು ಸೂಚಿಸಿರುವರು.

ವಿದೇಶ ವೃತ್ತಾಂತ.

ಅಮೇರಿಕದ ಸಂಯುಕ್ತ ಮಹಾ ಸಂಸ್ಥಾನಗಳಿಂದ ಯುದ್ಧನಾವೆಗಳು ಬಂದು ಫ್ರಾನ್ಸ್ ಬಂದರುಗಳಿಗೆ ತಲ್ಪಿರುತ್ತವೆ.

ಸಬ್‌ಮೆರೈನುಗಳ ಸುಳಿದಾಟವು ಅಸಾಧ್ಯವಾಗುವ ಏರ್ಪಾಡನ್ನು ಅಮೇರಿಕದ ವಿಚಕ್ಷಣರು ಬೇಗನೆ ಕಂಡುಹಿಡಿಯುವರೆಂಬ ಭರವಸೆಯನ್ನು ಅಮೇರಿಕದ ನೌಕಾಸೇನೆಗಳ ಮಂತ್ರಿಗಳು ಹೇಳಿರುತ್ತಾರೆ.

ಅಮೇರಿಕದ ಸಂಯುಕ್ತ ಮಹಾ ಸಂಸ್ಥಾನಗಳಲ್ಲಿ ಯುದ್ಧ ಸೇನೆಯ ಬಗ್ಗೆ ೧೦ ಮಿಲಿಯಕ್ಕೆ ಮಿಕ್ಕಿದ ಜನರು ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಂಡಿರುವರು.

ಬ್ರಿಟಿಷ ಪಾರ್ಲಿಮೆಂಟು ಸಭೆಯ ಮೆಂಬರರಾದ ಜೇಮ್ಸ್ ಒಗ್ರೇಡಿ ಎಂಬವರ ಅಳಿಯನಿಗೆ ಯುದ್ಧದಲ್ಲಿ ಒಂದು ಕೈಯು ಬಹಳ ಘಾಯವಾಗಿಹೋದದ್ದರಿಂದ ಆ ಕೈಯು ಗುಣವಾಗಲಿಕ್ಕೆ ಶಸ್ತ್ರಪ್ರಯೋಗವನ್ನು ಮಾಡಬೇಕಾಯಿತು. ಶಸ್ತ್ರಪ್ರಯೋಗದಿಂದ ಕೈಯನ್ನು ಎರಡು ತುಂಡುಮಾಡಿ ತಿರಿಗಿ ಜೋಡಿಸಿದ್ದಲ್ಲಿ ಎಲುಬು ಸಹ ಕೂಡಿಹೋಗಿ ಕೈಯು ಕೊಂಚ ಗುಣವಾಗಿದೆಂತ ತಿಳಿದುಬರುತ್ತದೆ. ತುಂಡಾದ ಎಲುಬು ಕೂಡಿಹೋಗುವಂಥಾ ಇಂಥಾ ಸಂದರ್ಭಗಳು ಬಹಳ ಅಪರೂಪವಾಗಿರುವವು.

ಸೋಶಿಯಲಿಸ್ಟ್ ಕನ್ಫರೆನ್ಸ್ ಎಂಬ ಆಯಾ ಜನಾಂಗಗಳ ಲೋಕಪಕ್ಷದವರ ಪರಿಷತ್ತಿಗೆ ಹೋಗುವ ವಿಷಯದಲ್ಲಿ ಫ್ರೆಂಚರು ಪೂರ್ಣ ವಿರೋಧವಾಗಿರುವರು. ಯುದ್ಧದ ಅಂತ್ಯವು ಸಮೀಪದಲ್ಲಿದ್ದು ಕಾಳಗಗಳು ಬಹಳ ರಭಸದಿಂದ ನಡೆಯುತ್ತಿರುವಾಗ ಈ ಪರಿಷತ್ತಿನ ಮಾತೇ ಬಹಳ ಪ್ರತಿಕೂಲವಾಗಿದೆ. ಫ್ರಾನ್ಸ್ ದೇಶದ ಪ್ರತಿನಿಧಿಗಳ ಸಭೆಯಲ್ಲಿ ಅಲ್ಲಿಯ ಪ್ರಧಾನ ಮಂತ್ರಿಗಳು ಅಪ್ಪಣೆಕೊಡಿಸಿದ ಈ ಮಾತುಗಳನ್ನು ಸರ್ವರೂ ಬಹಳ ಉತ್ಸಾಹದಿಂದ ಸ್ವೀಕರಿಸಿರುತ್ತಾರೆ. ಬ್ರಿಟಿಷರ ಮತವೂ ಇದಕ್ಕೆ ಅನುಕೂಲವೆ ಆಗಿರುವದು.

ಸೆರೆಯಲ್ಲಿದ್ದ ಇಟೆಲಿಯನ್ ಕೈದಿಗಳ ಬಗ್ಗೆ ಕಳುಹಿಸೋಣಾಗುವ ತಿಂಡಿಗಳ ಪಾರ್ಸಲುಗಳನ್ನು ಬಿಚ್ಚಿಕೊಂಡು ಹಸಿವಿನಿಂದ ಬಹಳ ಬಳಲುತ್ತಿರುವ ಒಸ್ಟ್ರಿಯನರ ಪ್ರಜಾ ಜನರಿಗೆ ಕೊಡುತ್ತಿರುವರು.

ರುಸ್ಯದ ಕ್ರೊನ್‌ಸ್ಟಡ್ಸ್ ಎಂಬಲ್ಲಿಯ ಗಲಿಬಿಲಿಯು ಪೂರ್ಣ ನಿಂತುಹೋಗಿದೆ ಅಲ್ಲದೆ ಅಲ್ಲಿಯ ಕೂಲಿಗಾರರ ಮತ್ತು ಸೈನಿಕರ ಪ್ರತಿನಿಧಿಗಳ ಕೌನ್ಸಿಲಿನವರು ರುಸ್ಯದ ಹೊಸ ಸರಕಾರವನ್ನು ಮನ್ನಿಸಿರುವರು.

ಉತ್ತರ ಹಿಂದೂಸ್ಥಾನ.

ಮದ್ರಾಸಿನ ಗವರ್ನರ ದೊರೆಗಳಾದ ಲೊರ್ಡ ಪೆಂಟಲೆಂಡ್ ಪ್ರಭುಗಳ ನ್ಯಾಯವಿಧಾಯಕ ಕೌನ್ಸಿಲಿನ ಸಮಾರೋಪದ ಭಾಷಣದಿಂದ ದೇಶದಲ್ಲಿ ಉಂಟಾದ ಅತೃಪ್ತಿಯು ಹಿಂದೀ ವೃತ್ತ ಪತ್ರಿಕೆಗಳಲ್ಲಿ ಇನ್ನೂ ಇನ್ನೂ ವ್ಯಕ್ತವಾಗುತ್ತಿರುವದು. ಬಂಗಾಳದ ಕೊಂಗ್ರೆಸ್ಸು ಕಮಿಟಿಯವರು ಸಭೆಸೇರಿ ಹಿಂದೀ ಜನರು ಸ್ವರಾಜ್ಯದ ಕಾಂಕ್ಷೆಗೆ ಪ್ರತಿಕೂಲವಾಗಿ ಪೆಂಟಲೆಂಡ್ ಪ್ರಭುಗಳು ಅಪ್ಪಣೆ ಕೊಡಿಸಿದ ಅಭಿಪ್ರಾಯಗಳನ್ನು ಸಭಾನಿರ್ಣಯದಲ್ಲಿ ನಿಷೇಧಿಸಿದ್ದಲ್ಲದೆ ಸ್ವರಾಜ್ಯ ಪ್ರಾಪ್ತಿಯ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟ್ ಸಭೆಗೆ ಮಹಾಜನರುಗಳ ಒಂದು ಮನವಿಯನ್ನು ತಯಾರಿಸಬೇಕೆಂದು ನಿರ್ಣಯಿಸಿರುತ್ತಾರೆ.

ಭಾರತ ಸಂರಕ್ಷಕ ಸೇನೆಯ ಏರ್ಪಾಡಿನ ಜಾರಿಯು ತೃಪ್ತಿಕರವಾಗಿ ನಡೆಯುವಂತೆ ಏನೇನೆಲ್ಲಾ ಮಾಡಬೇಕೆಂಬುವ ವಿಷಯವನ್ನು ಆಲೋಚಿಸಲು ಮಿ. ಬಿ. ಚಕ್ರವರ್ತಿಯವರ ಅಧ್ಯಕ್ಷತೆಯಲ್ಲಿ ಬಂಗಾಳದ ಕೆಲವು ಜನ ಪ್ರಮುಖರ ಸಭೆಯು ಕಲ್ಕತ್ತೆಯಲ್ಲಿ ಕೂಡಿತ್ತು. ಬಾಬು ಸುರೇಂದ್ರನಾಥ ಬೆನರ್ಜಿ, ಬಾಬು ಭೂಪೇಂದ್ರನಾಥ ಬಾಸು ಮೊದಲಾದವರ ಒಂದು ಕಮಿಟಿಯು ಈ ಬಗ್ಗೆ ಏರ್ಪಡಿಸಲ್ಪಟ್ಟಿರುವದು. ತ್ರೈಮಾಸಿಕಗಳ ಒಂದು ಮಹಾಸಭೆಯನ್ನು ಕೂಡಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಗಾಂಧಿಯವರು ಬಿಹಾರ ಪ್ರಾಂತ್ಯದ ಚಂಪಾರಣ್ಯ ಜಿಲ್ಲೆಯ [illegible] ಕೋಟೆಗಳಲ್ಲಿ ಕೆಲಸ ಮಾಡುತ್ತಿರುವ ಕೂಲಿಯವರ ದೀನಸ್ಥಿತಿನಿವಾರಣಾರ್ಥವಾಗಿ ಮಾಡಿದ ಪ್ರಯತ್ನಗಳು ಫಲಕಾರಿಯಾಗುತ್ತವೆ. ಆ ಪ್ರಾಂತ್ಯಗಳ ಲೆಫ್ಟಿನೆಂಟ ಗವರ್ನರರು ಗಾಂಧಿಯವರನ್ನು ಕರೆಸಿಕೊಂಡು ಅವರ ಅಭಿಪ್ರಾಯವನ್ನು ತಿಳಿದು ಕೆಲವು ಸಂಕಷ್ಟಗಳ ನಿವಾರಣೆಗೆ ಕೂಡಲೆ ಸರಕಾರದ ಅಪ್ಪಣೆಯನ್ನು ಕೊಡುವದರಲ್ಲಿದ್ದಾರೆ. ಕೂಲಿಯವರ ಸಂಕಷ್ಟ ಶೋಧನದ ಬಗ್ಗೆ ತೋಟಗಾರರ ಮತ್ತು ವರ್ತದಾರರ ಪ್ರತಿನಿಧಿಗಳೂ, ಸರಕಾರದ ಅಧಿಕಾರಿಗಳೂ, ಜನಸಾಮಾನ್ಯರ ಸಮಿತಿಯಿಂದ ಒಬ್ಬ ವಕೀಲರೂ, ಇರುವ ಒಂದು ಕಮಿಟಿಯು ಈ ಬಗ್ಗೆ ಶೀಘ್ರದಲ್ಲಿ ನೇಮಿಸಲ್ಪಡುವದೆಂಬುದಾಗಿ ತೋರುತ್ತದೆ.

ಕಳೆದ ಸಂಚಿಕೆಯಲ್ಲಿ ಸೂಚಿಸಲ್ಪಟ್ಟ ಪ್ರಕಾರ ದರ್ಭಂಗದ ಮಹಾರಾಜರವರು ಯುದ್ಧಸಹಾಯಾರ್ಥವಾಗಿ ದಾನಮಾಡಿದ ೨೦೦,೦೦೦ ರೂಪಾಯಿಗಳನ್ನು ಮಹಾರಾಜರ ಹೆಸರಲ್ಲಿ ವಾಯುವಿಮಾನಗಳನ್ನು ಕೊಂಡುಕೊಳ್ಳುವದರಲ್ಲಿ ವಿನಿಯೋಗಿಸಬಹುದೆಂತ ಚಕ್ರವರ್ತಿಯವರು ಅಪ್ಪಣೆ ಕೊಟ್ಟಿರುತ್ತಾರೆ.

ಬಂಗಾಳದ ಹೊಸ ಗವರ್ನರರಾದ ರೊನಾಲ್ಡ್ಸೆ ಪ್ರಭುಗಳವರು, ಗಲ್ಲಿಗೆ ಹಾಕೋಣಾಗುವ ಶಿಕ್ಷೆಗೆ ಗುರಿಮಾಡಲ್ಪಟ್ಟ ಒಬ್ಬ ಕೈದಿಯ ಶಿಕ್ಷೆಯನ್ನು ಜೀವಾಂತ್ಯ ಕಾಲ ಶಿಕ್ಷೆಯಾಗಿ ಬದಲು ಮಾಡಿರುತ್ತಾರೆ. ಈ ಕೈದಿಯ ಮೊಕದ್ದಮೆಯು ಎರಡುವರ್ತಿ ತನಿಖೆ ಮಾಡಲ್ಪಟ್ಟಿತ್ತು. ಪ್ರಥಮ ತನಿಖೆಯಲ್ಲಿ ಎಸ್ಸೆಸರು ಈ ಕೈದಿಯು ಅಪರಾಧಿಯಲ್ಲವೆಂಬ ತೀರ್ಮಾನವನ್ನು ಕೊಟ್ಟಿದ್ದರೂ, ಜಡ್ಜರವರು ಈ ತೀರ್ಮಾನವನ್ನು ಅಂಗೀಕರಿಸದೆ ಹೈಕೋರ್ಟಿಗೆ ಈ ಮೊಕದ್ದಮೆಯ ತೀರ್ಮಾನದ ವಿಷಯ ಬರಕೊಂಡರು. ಹೈಕೋರ್ಟಿನವರು, ಮೊಕದ್ದಮೆಯು ಮತ್ತೊಮ್ಮೆ ತನಿಖೆಯಾಗುವ ಅಗತ್ಯವೇನು ಕಾಣಿಸದೆ [illegible] ಅಪ್ಪಣೆ ಮಾಡಿದರು. ಈ ಸಾರೆ ಎಸ್ಸೆಸರಲ್ಲಿ ಕೆಲವರು, ಕೈದಿಯು ಅಪರಾಧಿಯಲ್ಲವೆಂತಲೂ, ಜಡ್ಜಿಯವರು ಅಪರಾಧಿಯೆಂತಲೂ, ಅಭಿಪ್ರಾಯಪಟ್ಟು [illegible] ಜಡ್ಜರವರು ಬಹುಮತದವರ ಅಭಿಪ್ರಾಯದ ಪ್ರಕಾರ ಮರಣಶಿಕ್ಷೆಯನ್ನು ವಿಧಿಸಿದರು. ಹೈಕೋರ್ಟಿನಲ್ಲಿಯೂ, ಇದೇ ಶಿಕ್ಷೆಯು ಕಾಯಂ ಆಗಿ [illegible] ಅಪರಾಧಿಯು ಕ್ಷಮೆ ಬಗ್ಗೆ ಗವರ್ನರ ಪ್ರಭುಗಳಿಗೆ ಬರಕೊಂಡನು. ಪ್ರಭುಗಳು ಮೊಕದ್ದಮೆಯ ವಿಸ್ತೃತ ಅಂಶಗಳನ್ನು ಆಲೋಚಿಸಿಕೊಂಡು ಮರಣಶಿಕ್ಷೆಯು ಕೈದಿಗೆ [illegible] ಜೀವಾಂತದ ಶಿಕ್ಷೆಯನ್ನು ಕೊಟ್ಟಿರುತ್ತಾರೆ.

ಸೇನೆಗೆ ಬೇಕಾದ ಜನಗಳ ಸಂಗ್ರಹದ ವಿಷಯದಲ್ಲಿ ಸಂಬಂಧಪಟ್ಟ ಕೆಲವು ಅಧಿಕಾರಿಗಳಲ್ಲಿ ಕೆಲವರು ಅತ್ಯಾಚಾರ ಮತ್ತು ಮೋಸದ ಕೆಲಸಗಳನ್ನು ಮಾಡಿದ್ದರಿಂದ ಇಂಥವರು ಕಠಿಣವಾದ ಶಿಕ್ಷೆಗೆ ಗುರಿಮಾಡಲ್ಪಟ್ಟು ಇವರ ಶಿಕ್ಷೆ ಮತ್ತು ಮಾಡಿದ ತಪ್ಪುಗಳ ವಿವರವು ಪ್ರಕಟವಾಗಿದೆ. ಲೆಫ್ಟಿನೆಂಟ್ ಸಿ. ಎಚ್. ಬಿ. [illegible] ಎಂಬವರು ತುಕ್ಕಡಿ ನಕ್ಷಾವಿಗಳ ದಂಡಿನಲ್ಲಿ ಲಾಭವನ್ನು ಪಡೆದದ್ದಲ್ಲದೆ [illegible] ಜನಗಳಿಂದ ಎರಡು ಸಾವಿರ ರೂಪಾಯಿಗಳನ್ನು ಪಡೆದ್ದರಿಂದ ಎರಡು ವರ್ಷಗಳ ಕಾರಾಗೃಹದ ಕಠಿಣ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವರು. ಸಬ್ ಕಂಡಕ್ಟರ್ ಬಿ. ಸ್ಕೀಟ್ಸ್ ಎಂಬವರಿಗೆ ಸರಕಾರ ಸಂಬಂಧಪಟ್ಟ ಒಡವೆಗಳನ್ನು ಮಾರಿದ ಮತ್ತು ಕೆಲವು ಜಾನುವಾರುಗಳ ಮಾರಾಟದಲ್ಲಿ ಕಮಿಷನ್ ಪಡೆದ ತಪ್ಪಿನ ಬಗ್ಗೆ ೭ ವರುಷಗಳ ಶಿಕ್ಷೆ ಇತ್ಯಾದಿ. ಸಬ್ ಕಂಡಕ್ಟರ್ ಸಿ. ಎಚ್. ಕೆಪ್ರಸ್ಸ್ ಸರಕಾರದ ಕೋಠಡಿಗಳಿಂದ ಒಡವೆಗಳನ್ನು ಮಾರಾಟ ಮಾಡಿದ್ದಕ್ಕೆ ೫ ವರುಷಗಳ ಸಜೆ ಇತ್ಯಾದಿ. ಇನ್ನೂ ಈ ರೀತಿ ದರವಾಯಿಸಾಕಷ್ಟು ಕೆಲವು ನೌಕರರು ಈ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವರು.

ಮುಂಬಾಯಿಯ ಸರ್ ಕರೀಮಭಾಯಿ ಇಬ್ರಾಹಿಮ್ ಎಂಡ್ ಸನ್ಸರವರು ಮತ್ತು ಅವರ ಪಾಲಿಗೆ ಸಂಬಂಧಪಟ್ಟ ಗಿರಣಿಯವರು ರೂ ೧೪,೦೦,೦೦೦ವನ್ನು ಯುದ್ಧಸಾಲವಾಗಿ ಕೊಡುವರು.

ಕಲ್ಕತ್ತೆಯ ಯುನಿವರ್ಸಿಟಿಯ ಸಿಂಡಿಕೇಟ್‌ನವರು ರೂ ೪೦,೦೦೦ವನ್ನು ಯುದ್ಧಸಾಲವಾಗಿ ಕೊಡುವರೆ ನಿಶ್ಚಯಿಸಿರುತ್ತಾರೆ.

ಈ ತಿಂಗಳ ತಾ. ೧೪ನೆಯ ದಿನ ಯುದ್ಧಸಾಲದ ದಿನಾಚರಣೆಯು ಬಹಳ ಸಂಭ್ರಮದಿಂದ ನಡೆಯಿತು. ಕ್ರೈಸ್ತ ದೇವಾಲಯಗಳಲ್ಲಿಯೂ ಹಿಂದೂ ದೇವಸ್ಥಾನಗಳಲ್ಲಿಯೂ ಆರಾಧನೆಗಳು ನಡೆಯಿತು. ಮುಂಬಾಯಿ ಗವರ್ನರ ದೊರೆಗಳವರು ಪತ್ನಿಸಹಿತ ಪೇಟೆ ಸವಾರಿಯನ್ನು ಮಾಡಿದರು. ಈ ಬಗ್ಗೆ ಬೀದಿಗಳ ಇಕ್ಕಡೆ ಗಳಲ್ಲಿ ರುವ ಮನೆ ಮಠಗಳು ಅಲಂಕರಿಸಲ್ಪಟ್ಟಿದ್ದವು.

ದಕ್ಷಿಣ ಹಿಂದೂಸ್ಥಾನ.

ಕಾಯಿದೆಸಾರ ರೀತಿಗಳ ರಾಜಕೀಯ ಚಳವಳವನ್ನು ನಿಲ್ಲಿಸಿ ಬಿಡುವ ಸೂಚನೆಗಳನ್ನು ಗವರ್ನರಪ್ರಭುಗಳು ನಡಿಸಕೂಡದೆಂಬುದಾಗಿ ಸೂಚಿಸಿ ಮದ್ರಾಸು ಗವರ್ನರ ಪ್ರಭುಗಳಿಗೆ ಒಂದು ಮನವಿಯು ಮದ್ರಾಸಿನಲ್ಲಿ ತಯಾರಾಗುತ್ತಿದೆ ಎಂಬುದಾಗಿ ತಿಳಿಯುತ್ತೇವೆ.

ಬಹುಮಾನಪಟ್ಟ ಕೆ. ಆರ್. ವಿ. ಕೃಷ್ಣರಾವ್, ಎನ್. ರಾಮಚಂದ್ರರಾವ್, ವಿ. ಸೂರ್ಯನಾರಾಯಣ ಮೂರ್ತಿ ಮತ್ತು ಈ ಮೂರು ಗೃಹಸ್ಥರು ತೆಲುಗು ಜಿಲ್ಲೆಗಳಿಂದ ಭಾರತ ಸಂರಕ್ಷಕ ಸೇನೆಗೆ ಸೇರಿದವರ ಸಂಖ್ಯೆಯು ಕಡಮೆಯಾಗಿರುವದೆಂದೂ, ಕನಿಷ್ಠ ಪಕ್ಷಕ್ಕೆ ತೆಲುಗು ಪ್ರಾಂತ್ಯಗಳಿಂದ ೮೦೦ ಮನವಿಗಳಾದರೂ ಈ ಬಗ್ಗೆ ಮಾಡೋಣಾಗಬೇಕೆಂತಲೂ, ತೆಲುಗು ಜಿಲ್ಲೆಗಳ ಮಹಾಜನರನ್ನು ವಿಜ್ಞಾಪಿಸಿಕೊಂಡು ಒಂದು ಪ್ರಕಟನೆಯನ್ನು ಹೊರಪಡಿಸಿದ್ದಾರೆ.

ಮೈಸೂರ ಸಂಪದಭಿವೃದ್ಧಿಯ ಪರಿಷತ್ತಿನಲ್ಲಿ ೬ರಿಂದ ೧೦ರ ವಯಸ್ಸಿನೊಳಗಿನ ಬಾಲಕಿಯರಿಗೆ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿಯೂ, [illegible] ಕೊಡಬೇಕೆಂಬುವ ನಿರ್ಣಯವು ಮಂಜೂರಾಗಿರುತ್ತದೆ.

ತಿರುಚಿನಾಪಳ್ಳಿಯ ಜಿಲ್ಲಾ ಪರಿಷತ್ತಿನೊಂದಿಗೆ ಎಲಂಬಳ್ಳಿಯಲ್ಲಿ ಸಾಮಾಜಿಕ ಪರಿಷತ್ತೂ ಸಹ ಕೂಡಿತ್ತು. ಈ ಸಾಮಾಜಿಕ ಪರಿಷತ್ತಿನಲ್ಲಿ ಒಂದು ವಿಶೇಷವಾದ ನಿರ್ಣಯವು ಸಭಿಕರ ಜಯಕಾರದೊಡನೆ ಮಂಜೂರಾಗಿರುತ್ತದೆ. ಈ ನಿರ್ಣಯವು ಹಿಂದೂ ಮಠಾಧಿಪತಿಗಳಿಂದ ಚೆನ್ನಾಗಿ ಪರ್ಯಾಲೋಚಿಸತಕ್ಕದ್ದಾಗಿರುವದು. ಮದ್ರಾಸಿನ ಪ್ರೊವಿನ್ಸಿಯಲ್ ಕೊಂಗ್ರೆಸ್ ಕಮಿಟಿಯ ಹಿಂದೂ ಸಭಾಸದರು ವಿದ್ವಾಂಸರೂ, ತ್ಯಾಗಶಾಲಿಗಳೂ, ನಿಷ್ಪಕ್ಷಪಾತಿಗಳೂ ಆದ ಐದು ಜನ ಮೆಂಬರರಿರುವ ಒಂದು ಕಮಿಟಿಯನ್ನು ಏರ್ಪಡಿಸಬೇಕು. ಜಾತಿಗಳ ತಾರತಮ್ಯವಿಲ್ಲದೆ ಏರ್ಪಡಿಸಲ್ಪಟ್ಟಂಥಾ ಈ ಕಮಿಟಿಯವರು ಈ ಸಂಸ್ಥಾನದಲ್ಲಿರುವ ಹಿಂದುಗಳ ಆಚಾರ ವಿಚಾರಗಳ ಕುರಿತು ಪರಿಶೋಧನಗಳನ್ನು ನಡಿಸಿ ಜನರು ಅಂಗೀಕರಿಸಿ ನಡೆಯಬೇಕಾದ ಕ್ರಮಗಳನ್ನು ಆಗ್ಗೆದಾಗ್ಗೆ ತಿಳಿಸಬೇಕು. ಮತ್ತು ಜನರ ಅಭಿವೃದ್ಧಿಗೆ ಈ ವಿಷಯದಲ್ಲಿ ಬೇಕಾದ ಕಾನೂನು ಮಸೂದೆಗಳು ಯಾವವೆಂದೂ ತೋರಿಸಿಕೊಡುವ ಅಧಿಕಾರವು ಸಹ ಈ ಕಮಿಟಿಯವರಿಗೆ ಇರಬೇಕು. ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಈ ಕಮಿಟಿಯವರು ಸೂಚಿಸುವ ಆಚಾರ, ಕ್ರಮ, ಇತ್ಯಾದಿಗಳನ್ನು ಜನರು ಸ್ವೀಕರಿಸಿ ನಡೆಯುವಂತೆ ಬೇಕಾದ ಏರ್ಪಾಡುಗಳನ್ನು ಮಾಡಬೇಕು, ಎಂಬ ನಿರ್ಣಯವು ಮಂಜೂರಾಗಿರುತ್ತದೆ. ಈ ನಿರ್ಣಯದ ಪರವಾಗಿ ಪರಿಷತ್ತಿನ ಅಧ್ಯಕ್ಷರು ಮಾತಾಡುತ್ತಾ [illegible] ಮೇಲೆ ಪ್ರಸ್ತಾಪಿಸಿರುವ ವಿಷಯಗಳಲ್ಲಿ ಮಠಾಧಿಪತಿಗಳಿಗೆ ಇನ್ನೂ ಅಧಿಕಾರವನ್ನು ಕಲ್ಪಿಸಿಕೊಡುವದು ಯುಕ್ತವಲ್ಲ. ಮಠಾಧಿಪತಿಗಳು ತಮಗೆ ಸಿಕ್ಕುವ [illegible] ಮೇಲೆ [illegible] ಹೆಚ್ಚಾದರೆ ತಮ್ಮ ಶಿಷ್ಯವರ್ಗದ ಮೇಲೆ ಮಾತ್ರ ಆಗ್ರಹವುಳ್ಳವರಾಗಿದ್ದು ಜನತೆಯ ಸಂಕಷ್ಟಗಳಲ್ಲಿ ಪೂರ್ಣ ಅಭಾವವುಳ್ಳವರಾದ್ದರಿಂದ ಆಚಾರವಿಚಾರಗಳ ಬಗ್ಗೆ ಈ ಕಮಿಟಿಯ ಏರ್ಪಾಡು ಆವಶ್ಯವಾಗಿರುವದು.

"ಇಂಡಿಯನ್ ಸಿಗ್ನಲ್" ಕಂಪೆನಿ ಎಂಬ ಹಿಂದೀ ಸೇನೆಗಳೊಡನೆ ಟೆಲಿಗ್ರಾಫ್ ಸಿಗ್ನಲುಗಳು, ಟಪ್ಪಾಲು, ಕಾಗದಗಳ ಬಟವಾಡೆ, ಯುದ್ಧರಂಗದಲ್ಲಿ ಸೇನಾಪತಿಗಳಿಗೂ ಸೇನಾಂಗಗಳಿಗೂ ವ್ಯವಹಾರ ಸೌಕರ್ಯಗಳಿರುವಂತೆ ಟೆಲಿಗ್ರಾಫು, ಟೆಲಿಫೋನ ಕಂಭಗಳನ್ನು ಹಾಕಿಸುವ ಬಗ್ಗೆ ಮತ್ತು ಇಂಥಾ ಇತರ ಕೆಲಸಗಳಿಗೂ ಶಿಕ್ಷಣ ಪಡೆದವರ ಒಂದು ಕಂಪೆನಿಯನ್ನು ಏರ್ಪಡಿಸುವರು. ಮುಂಬಯಿ, ಮದ್ರಾಸು ಮತ್ತು ಬಂಗಾಳ ಸಂಸ್ಥಾನಗಳಿಂದ ಈ ಕಂಪೆನಿಗೆ ಉಮೇದ್ವಾರರು ಬೇಕಾಗಿದ್ದಾರೆ. ಸಂಬಳವು ಸಾಧಾರಣ ರೂ. ೧೨೦ ರಿಂದ ೧೧೧ ಯಾ ೧೮೮ ವರೆಗೆ ಇದೆ. ಉಮೇದ್ವಾರರಾಗಿ ಸೇರತಕ್ಕವರ ಪ್ರಾಯವು ೧೮ ಮತ್ತು ೩೦ ವರುಷಗಳೊಳಗಿರಬೇಕು. ಇದರ ಹೆಚ್ಚಿನ ವಿವರಗಳು ಫೋರ್ಟ್ ಸೈಂಟ್ ಜೋರ್ಜ್ ಗಜೇಟು ಮತ್ತು ಜಿಲ್ಲಾ ಗಜೇಟುಗಳಲ್ಲಿ ಪ್ರಕಟಿಸಲ್ಪಟ್ಟಿರುವವು.

ಮೈಸೂರು ಸರಕಾರದವರಿಂದ ಮೆಕಾನಿಕಲ್ ಮತ್ತು ಇಲೆಕ್ಟ್ರಿಕಲ್ ಇಂಜಿನೀಯರಿಂಗ್ ಕಲಿಸುವ ಬಗ್ಗೆ ಒಂದು ಶಾಲೆಯು ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವದು. ಸ್ಕೂಲ್ ಫೈನಲ್ ಪರೀಕ್ಷೆಗಳಲ್ಲಿ ಗಣಿತ ಮತ್ತು ಭೌತಿಕ ಶಾಸ್ತ್ರಗಳ ಅಭ್ಯಾಸವನ್ನು ಮಾಡಿ ಪಾಸಾದವರು ಈ ಶಾಲೆಯಲ್ಲಿ ಮೇಲು ತರಗತಿಯ ದರ್ಜೆಗಳಿಗೂ ಈ ಪರೀಕ್ಷೆಯನ್ನು ಪಾಸಾಗದೆ ಇದ್ದವರು ಕೆಳ ತರಗತಿ ದರ್ಜೆಗಳಿಗೂ ಸೇರಬಹುದು. ೭೫ ಜನ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶವಿದೆ. ಈ ಪೈಕಿ ೨೫ ಜನರು ಮಾತ್ರ ಮೈಸೂರು ಸಂಸ್ಥಾನದ ಹೊರಪ್ರಾಂತ್ಯದವರಾಗಬಹುದು. ಹೊರಪ್ರಾಂತ್ಯಗಳ ವಿದ್ಯಾರ್ಥಿಗಳು ತಿಂಗಳು ಒಂದಕ್ಕೆ ರೂ ೩-೦-೦ ಪ್ರಕಾರ ಶಾಲಾಫೀಸು ಕೊಡಬೇಕಾಗಿದೆ. ಮೈಸೂರಿನವರಿಗೆ ಉಚಿತವಾಗಿಯೇ ಈ ಶಿಕ್ಷಣವು ಕೊಡೋಣಾಗುವದು.

ಆಭರಣಗಳನ್ನು ಕಳಕೊಂಡದದರಿಂದ ಸಂಕಟಪಟ್ಟು ಪ್ರಾಣಬಿಟ್ಟ ಒಬ್ಬ ಚೆಟ್ಟಿಯ ವೃತ್ತಾಂತವು ತಿರುಚಿನಾಪಳ್ಳಿಯಿಂದ ತಿಳಿದುಬರುತ್ತದೆ. ಸುಮಾರು ೫೦೦ ಸಾವಿರ ರೂಪಾಯಿಗಳ ಕ್ರಯ ಬಾಳುವ ಆಭರಣಗಳನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಇವುಗಳನ್ನು ಹೊರದೇಶಗಳಿಗೆ ಮಾರಲಿಕ್ಕೆ ಹೋಗಬೇಕೆಂದು ಕಾಂಡವನಂ ಚೆಟ್ಟಿ ಎಂಬವನ ಮಗನು ರೈಲ್ವೆ ಸ್ಟೇಶನಿಗೆ ಬಂದಿದ್ದನು. ಎರಡು ಜನ ಕೂಲಿಗಳಿಂದ ಈ ಪೆಟ್ಟಿಗೆಯನ್ನು ಹೊರಿಸಿಕೊಂಡು ಹೋಗಲು ಕೊಟ್ಟು, ತಾನು ಟಿಕೇಟು ಪಡಕೊಳ್ಳಲು ಹೋದನು. ಟಿಕೇಟು ಪಡೆದು ಬರುವಷ್ಟರಲ್ಲಿ ಪೆಟ್ಟಿಗೆಯು ಇರಲಿಲ್ಲ. ಪೆಟ್ಟಿಗೆ ತಂದ ಆಳುಗಳನ್ನು ವಿಚಾರಿಸಿದ್ದಲ್ಲಿ ತಾವು ಪೆಟ್ಟಿಗೆಯನ್ನು ಅಲ್ಲಿಯೆ ಇಟ್ಟುಹೋಗಿದ್ದೇವೆಂದು ಹೇಳಿದರು. ನಂತರ ಪೊಲೀಸಿನವರು ಶೋಧ ನಡಿಸಿದರು. ಪೆಟ್ಟಿಗೆಯು ಸಿಕ್ಕಲಿಲ್ಲ. ನಂತರ ಈ ವರ್ತಮಾನವು ತಂದೆಗೆ ಸಿಕ್ಕಿತು. ಆತನು ರೈಲ್ವೆ ಸ್ಟೇಶನಿಗೆ ಬಂದು ಆಳುಗಳನ್ನೂ ಪೊಲೀಸಿನವರನ್ನೂ ವಿಚಾರಿಸಿದನು. ಆದರೆ ಪತ್ತೆಯೇ ಇಲ್ಲದಿದ್ದನ್ನು ತಿಳಿದು ಬಹಳ ನಿರಾಶನಾಗಿ ಸಂಕಟಪಟ್ಟು, ಒಂದಿಷ್ಟು ಹಾಲು ಕುಡಿದು ಮಲಗಿದನು; ಸ್ವಲ್ಪ ಹೊತ್ತಿನಲ್ಲಿ ಈತನು ಮಲಗಿದ್ದಲ್ಲಿಯೆ ಪ್ರಾಣವನ್ನು ಬಿಟ್ಟನು.

ರಾ. ಬಿ. ವೆಂಕಟನಾರಾಣಪ್ಪ ಎಮ್. ಎ. ಎಂಬವರು ಬೆಂಗಳೂರಿನ ಕರ್ನಾಟಕ ಎಂಬ ಪತ್ರದಲ್ಲಿ ಕೊಲೇಜು ವಿದ್ಯಾರ್ಥಿಗಳ ಸ್ವಯಂ ಸಹಾಯಕ ಕ್ಲಬ್ಬನ್ನು ಸ್ಥಾಪಿಸುವ ವಿಷಯ ಒಂದು ಪ್ರಕಟನೆಯನ್ನು ಪ್ರಕಟಗೊಳಿಸಿರುತ್ತಾರೆ. ಬೆಂಗಳೂರಿಗೆ ಬರುವ ಬಡ ವಿದ್ಯಾರ್ಥಿಗಳಿಗೆ ಉಳಕೊಳ್ಳಲು ತಕ್ಕ ಸ್ಥಳವೂ ಊಟಕ್ಕೆ ತಕ್ಕ ವ್ಯವಸ್ಥೆಯೂ, ದೊರಕಿಸಿಕೊಡುವ ಉದ್ದೇಶದಿಂದ ಈ ಕ್ಲಬ್ಬನ್ನು ಪರೀಕ್ಷಾರ್ಥ ಸ್ಥಾಪಿಸಬೇಕೆಂದಿದ್ದಾರೆ. ಪ್ರಸ್ತುತಕ್ಕೆ ೧೨ ವಿದ್ಯಾರ್ಥಿಗಳನ್ನು ಮಾತ್ರ ಈ ಕ್ಲಬ್ಬಿಗೆ ಸೇರಿಸಿಕೊಳ್ಳುವರು. ಕ್ಲಬ್ಬಿಗೆ ಬೇಕಾದ ಮನೆಯೂ, ಅಡಿಗೆಪಾತ್ರ ಇತ್ಯಾದಿಗಳೂ, ಧರ್ಮಾರ್ಥವಾಗಿ ಕೊಡೋಣಾಗುವವು. ವಿದ್ಯಾರ್ಥಿಗಳು ಅಡಿಗೆ ಇತ್ಯಾದಿ ಕ್ಲಬ್ಬಿನ ಗೃಹಕೃತ್ಯದ ಇತರ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕಾಗಿದೆ. ಅಡಿಗೆ ಕೆಲಸಕ್ಕೆ ಸಮಯವು ಬಹಳವಾಗಿ ತಗಲದಂತೆ ಸ್ಟೌವ್ ಇತ್ಯಾದಿ ಸೌಕರ್ಯಗಳಿವೆ. ಕಾಫಿ, ಚಾ, ಇತ್ಯಾದಿಗಳನ್ನು ಈ ಕ್ಲಬ್ಬಿನಲ್ಲಿ ಉಪಯೋಗಿಸಕೂಡದು. ವಿದ್ಯಾರ್ಥಿಗಳು ತಮ್ಮ ತಮ್ಮ ಮತಾನುಷ್ಠಾನಗಳನ್ನು ಆಚರಿಸುತ್ತಿರಬೇಕೆಂಬುವ ಕ್ರಮವು ಈ ಕ್ಲಬ್ಬಿನಲ್ಲಿದೆ.

ಪೆಂಟಲೆಂಡ ಪ್ರಭುಗಳ ಭಾಷಣದಲ್ಲಿ ಸೆಲ್ಫ್ ಗವರ್ನಮೆಂಟ ಚಳವಳದ ಮೇಲೆ ಸೂಚಿಸೋಣಾದ ದಂಡೋಪಾಯಗಳ ಪ್ರಸ್ತಾಪಗಳನ್ನು ನಿಷೇಧಿಸುವದಕ್ಕೆ ಸೇಲಂದಲ್ಲಿ ಹೋಮ್‌ರೂಲ್ ಲೀಗಿನವರು ಅಲ್ಲಿಯ ಪುರಜನರ ಮಹಾದೊಡ್ಡ ಸಭೆಯನ್ನು ಇದೇ ತಿಂಗಳ ತಾ. ೯ರಲ್ಲಿ ಕೂಡಿಸಿದ್ದರು. ಈ ಸಭೆಯು ಈ ಬಗ್ಗೆ ಜರುಗಿಸಿದ ಎರಡನೆಯ ಸಭೆಯಾಗಿರುವದು. ಪೆಂಟಲೆಂಡ ಪ್ರಭುಗಳವರು ತಮ್ಮ ಭಾಷಣದಲ್ಲಿ ಸೂಚಿಸಿರುವ ದಂಡೋಪಾಯಗಳ ಸಿದ್ಧಾಂತವನ್ನು ಸಂಬಂಧಪಟ್ಟ ಅಧಿಕಾರಿಗಳು ಅಲ್ಲಗಳೆಯಬೇಕೆಂಬ ತಾತ್ಪರ್ಯವುಳ್ಳ ನಿರ್ಣಯವು ಬಹುಮಾನಪಟ್ಟ ಮ. ರಾ. ಟಿ. ವಿ. ನರಸಿಂಹ ಅಯ್ಯರವರಿಂದ ಸಭೆಯ ಮುಂದಿಡೋಣಾಗಿ ಸರ್ವಸಮ್ಮತವಾಗಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ಇಂಗ್ಲಾಂಡದಲ್ಲಿರುವ ಸ್ಟೇಟ್ ಸೆಕ್ರೆಟರಿಗಳವರಿಗೆ ಈ ಸಭಾನಿರ್ಣಯವನ್ನು ತಂತೀ ಮೂಲಕ ಕಳುಹಿಸಿಕೊಡಬೇಕೆಂತಲೂ, ಈ ವಿಷಯದಲ್ಲಿಯೇ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯವರಿಗೆ ಒಂದು ಮನವಿಯನ್ನು ಬರಕೊಳ್ಳಬೇಕೆಂತಲೂ, ನಿರ್ಣಯಿಸಲ್ಪಟ್ಟಿರುತ್ತದೆ.

ಮೊಟರಗಾಡಿಗಳ ಅಪಘಾತಗಳು ಆಗಿಂದಾಗ್ಗೆ ಕೇಳಬರುತ್ತವೆ. ಡಿಂಡಿಗಲ್‌ದಿಂದ ಪಾಲ್ನಿಗೆ ಹೋಗುವ ಮೊಟರಬಸ್ಸು ಇದಿರಿಗೆ ಒಂದು ಎತ್ತುಗಳ ಭಂಡಿಯು ಬರುತ್ತಿದೆಂಬುದನ್ನು ನೋಡಿಕೊಂಡು ಮಾರ್ಗದ ಎಡಭಾಗವನ್ನು ಸೇರುವಾಗ ಬಸ್ಸು ಮಾರ್ಗದಿಂದ ಕೆಳಗೆ ಬಿತ್ತು. ಪ್ರಯಾಣಿಕರಲ್ಲಿ ಇಬ್ಬರು ಮೃತಪಟ್ಟರು, ಆರು ಜನರು ವಿಶೇಷ ಘಾಯವಾಗಿದ್ದಾರೆ.

ಬಾತಮಿಗಳು.

ಪುತ್ತೂರು: — ಹಿಂದಿನ ವಾರದಲ್ಲಿ ಇಲ್ಲಿಯ ಕಲ್ಲರೆ ಮನೆಯಲ್ಲಿ ಬಿಡಾರ ಮಾಡಿಕೊಂಡಿದ್ದ ರಾ। ಶ್ರೀನಿವಾಸ ಬಾಳಿಗರಲ್ಲಿ ಅತಿಥಿಯಾಗಿ ಹೋಗಿ ಊಟಗೀಟ ಮಾಡಿ ಜಗಲಿಯಲ್ಲಿ ಮಲಗಿಕೊಂಡಿದ್ದ ಕರಂಬಾಡಿ ವೆಂಕ್ಟೇಶಪ್ಪಯ್ಯರೆಂಬವರು ಶ್ರೀನಿವಾಸ ಬಾಳಿಗರೆಂಬವರನ್ನು ಮುಖಕ್ಕೆ ಚೂರಿಯಿಂದ ತಿವಿದುಬಿಟ್ಟರೆಂಬುದಾಗಿ ಪೊಲೀಸ್ ತನಿಖೆ ನಡೆದು ವೆಂಕ್ಟೇಶಪ್ಪಯ್ಯರನ್ನು ಕೈದುಮಾಡಿ ರಿಮಾಂಡಿನಲ್ಲಿ ಇಟ್ಟಿರುವರು.

ಇಲ್ಲಿಯ ಮೆ। ದುವ್ವಾಂ ಸಾಲ್ವದೋರ ಲಾನದರಲ್ಲಿ ಒಡಿಗೆಲಿಕ್ಕೆ ಹಾಕಿದ್ದ ಸೀರೆಯನ್ನು ಪುತ್ತೂರು ಕಸಬಾ ಗ್ರಾಮದ ಬರೆಕರೆ ಘೋರಾಟ ಪುಟ್ಟ ಎಂಬವನು ಎತ್ತಿಕೊಂಡು ಓಡಿಹೋಗುವಾಗ್ಗೆ ಇಲ್ಲಿಯ ಪೋಲಿಸ್ ಕಾನ್ಸ್ಟೆಬಲು ಕೇಶಗಿರಿಯವರು ಕಂಡುಹಿಡಿಯಲ್ಪಟ್ಟವನನ್ನು ಇಲ್ಲಿಯ ರಿಮಾಂಡಿನಲ್ಲಿ ಇಟ್ಟಿರುವರು.

ಗೋಳಿಕಟ್ಟೆ ದರೋಡೆ ಕಳವು ಮೊಕದ್ದಮೆ ತನಗೆ ಕಮಿಟುಮಾಡಲ್ಪಟ್ಟಿವೆದು.

ಕೆಮ್ಮಿಂಜ ಗ್ರಾಮದ ಮುಂಡ ಸುಬ್ರಾಯನನ್ನು ಚೂರಿಯಿಂದ ತಿವಿದ [illegible] ದವನು [illegible] ಜೀಲಿನಲ್ಲಿ [illegible] ಏಜಾರಣೆ ಆಗಿ ಅವನ ಬಗ್ಗೆ ಮುಂದುವರಿಯುವದು.

ಅನುಕ್ರಮಣಿಕೆ.

ಅಗ್ರಲೇಖ:— ಪಾನು.
ರಾಷ್ಟ್ರೀಯ ಶಿಕ್ಷಣ ೪
ಸ್ಫುಟವಿಚಾರಗಳು:—
೧ ಜಿಲ್ಲೆಗಳ ಸಭೆಯಲ್ಲಿಯೂ ಸ್ವರಾಜ್ಯದ ಪ್ರಸ್ತಾಪ . . . . ,,
೨ ದಿವಾನಬಹದ್ದೂರ್ ಮೆನನರ ಪ್ರತ್ಯುತ್ತರ ೪-೫
೩ ಮಧ್ಯಪ್ರಾಂತದ ಪ್ಯೂರೆಕ್ಟ್ಲರ ಸರಕ್ಯುಲರು . . . . ,,
೪ "ಇದು ಅಣ್ಣನೂ ಹೌದು; ತಮ್ಮನೂ ಹೌದು" . . . . ,,
೫ ಮುಂಬಯಿ ಗವರ್ನರರ ಹೊಸ "ಪ್ರೆಸ್‌ನೋಟು" . . . . ,,
೬ ಬೆಂಕಿಶೆಟ್ಟಿಗೆಯು ಕೈಗಾಂಕೆ . . . . ,,
೭ ಸರ್ ಸುಬ್ರಹ್ಮಣ್ಯರ ಸಂದೇಶ . . . . ,,
ಸ್ಥಳಿಕ – ಮಂಗಳೂರು . . . . ,,
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ ೬
೨ ವಿದೇಶ ವೃತ್ತಾಂತ . . . . ,,
೩ ಉತ್ತರ ಹಿಂದುಸ್ಥಾನ . . . . ,,
೪ ದಕ್ಷಿಣ ಹಿಂದೂಸ್ಥಾನ . . . . ,,
೫ ಬಾತ್ಮಿ ಪತ್ರಗಳು, ಪತಕ್ರಿರು, ವ್ಯಲ್ಕ, ಕಾತ ೬-೭
೬ ಉಡುಪಿಯ ತರುಣ ಬ್ರಾಹ್ಮಣರ ಸಂಘ . . . . ,,
೭ ನಮ್ಮ ಜಿಲ್ಲೆಯಲ್ಲಿ ಎತ್ತಲ್ಪಟ್ಟ ಯುದ್ಧ ಸಾಲ . . . . ,,
ಕರ್ನಾಟಕ ಸಾಹಿತ್ಯ ಪರಿಷತ್ತು, ಮೈಸೂರ ಶ್ರೀಮಾನ್ ಯುವರಾಜರವರ ಭಾಷಣ . . ,,

ಸ್ವದೇಶಾಭಿಮಾನಿ.

ಶಕ ೧೮೪೦ ಜ್ಯೇಷ್ಠ ಬ. ೧೧ ಶುಕ್ರವಾರ.

ರಾಷ್ಟ್ರೀಯ ಶಿಕ್ಷಣ.

ಲೇಖಾಂಕ ೧.

ಶಿಕ್ಷಣವು ಜನಾಂಗದ ಏಳಿಗೆಯ ಮುಖ್ಯ ಸಾಧನವಾಗಿರುವದೆಂಬ ವಿಷಯದಲ್ಲಿ ಈಗ ಯಾರ ಮತಭೇದವೂ ಇಲ್ಲ. ರೀತಿಯಿಂದ ಹಿಂದುಳಿದ ದೇಶಕ್ಕೂ ಕೂಡ ಶಿಕ್ಷಣದ ಮಹತ್ವವು ಚೆನ್ನಾಗಿ ಗೊತ್ತಾಗಿದೆ. ಆಯುಷ್ಯ, ಆರೋಗ್ಯ, ಧನಸಂಪತ್ತಿ ಮುಂತಾದ ಸುಖಸಾಧನಗಳು ಶಿಕ್ಷಣದ ಮೇಲೆ ಹೊಂದಿಕೊಂಡಿರುವವೆಂದು ಹೇಳಿದರೆ ಅದು ಅತಿಶಯೋಕ್ತಿಯು ಮಾತಾಗಲಾರದು. ಅಮೇರಿಕಾ, ಯುರೋಪ ಖಂಡಗಳಲ್ಲಿ ಶಿಕ್ಷಣದ ಪ್ರಾಚುರ್ಯವು ಬೇರೆ ಖಂಡಗಳಲ್ಲಿಯದಕ್ಕಿಂತ ಎಷ್ಟೋ ಅಧಿಕವಾಗಿದೆ. ಆದ್ದರಿಂದ ಈ ಹೊತ್ತಿಗೆ ಇವೇ ಖಂಡಗಳು ಜಗತ್ತಿನಲ್ಲಿ ಪ್ರಮುಖವಾಗಿವೆ. ಆಸಿಯಾದೊಳಗಿನ ಜಪಾನವೂ ಪ್ರಮುಖ ರಾಷ್ಟ್ರಗಳ ಮಾಲಿಕೆಯಲ್ಲಿ ಕುಳಿತುಕೊಳ್ಳುತ್ತದೆ. ಅಲ್ಲಿಯೂ ಶಿಕ್ಷಣವೆ ಪ್ರಧಾನವಾಗಿರುವುದು. ಈ ಎಲ್ಲ ದೃಷ್ಟಾಂತಗಳ ಮೇಲಿಂದ ನಾವು ಸಮವ್ಯಾಪ್ತಿಯ ಮೂಲಕ ಹೀಗೊಂದು ವಿಧಾನವನ್ನು ಮಾಡುವುದು ಸಾಹಸವಾಗಲಾರದು. ಏನೆಂದರೆ ಶಿಕ್ಷಣವೆ, ರಾಷ್ಟ್ರದ ಆಹಾರವು. ಆದರೆ ಆ ಶಿಕ್ಷಣವು ಉತ್ತಮವಾದರೆನೇ ಅದು ಆಹಾರವಾದೀತು. ಅಲ್ಲವಾದರೆ ಅದೇ ಒಂದು ಪ್ರಹಾರವಾದೀತು. ಆದ್ದರಿಂದ ಶಿಕ್ಷಣವು ಹೇಗೆ ಉತ್ತಮವೊ ಹಾಗೆ ಅಪಾಯಕರವೂ ಆಗಿದೆ. ರಾಷ್ಟ್ರದೊಳಗಿನ ಜನತೆಯ ಅಂತಃಕರಣದಲ್ಲಿ ಮಾತೃದೇಶ, ಸ್ವಧರ್ಮ, ಸ್ವಸಮಾಜ ಮೊದಲಾದವುಗಳ ವಿಷಯದಲ್ಲಿ ಯೋಗ್ಯ ಆದರವೂ ಪ್ರೀತಿಯೂ ಮತ್ತು ಅಭಿಮಾನವೂ ಯಾವ ಶಿಕ್ಷಣದಿಂದ ಹುಟ್ಟಲಾರವೊ ಮತ್ತು ಆಯುಷ್ಯದ ೨೦-೨೫ ವರ್ಷಗಳನ್ನು ಖರ್ಚುಮಾಡಿ ಸಂಪಾದಿಸಿದ ಯಾವ ಶಿಕ್ಷಣದಿಂದ ತನ್ನ ಕಾಲುಗಳ ಮೇಲೆ ನಿಂತು ಎಂದರೆ ಸ್ವತಂತ್ರವಾಗಿ ಉಪಜೀವಿಸಲು ಸಾಧ್ಯವಾಗದೊ, ಮೇಲಾಗಿ ಬೇರೆಯವರ ಕೈಯಿಂದಲೆ ನೀರು ಕುಡಿಯುವ ಪ್ರಸಂಗವು ಬರುವುದೊ ಆ ಶಿಕ್ಷಣವು ಬಾಧಕರವಲ್ಲೆಂಬುದು ಸ್ಪಷ್ಟವಾಗುವುದು. ಇದೆ ದೃಷ್ಟಿಯಿಂದ ಶಿಕ್ಷಣವು ಅಪಾಯಕರವಾಗಿಯೂ ಇರುತ್ತದೆಂದು ಮೇಲೆ ಹೇಳಿದ್ದು. ನಮ್ಮಹಿಂದುಸ್ಥಾನದಲ್ಲಿ ಪಾಶ್ಚಾತ್ಯ ವಿದ್ಯಾಪೀಠಗಳು ಸ್ಥಾಪಿಸಲ್ಪಟ್ಟಿರುವವು. ಈ ಸಂಗತಿಗೆ ಈ ಹೊತ್ತು ೬೦ ವರ್ಷಗಳು ದಾಟಿಹೋದವು. ವಿಷಯ ಪ್ರತಿಪಾದನ ಸೌಕರ್ಯಕ್ಕೆ ಈ ಅವಧಿಯು ಒಂದು ಶತಮಾನದ್ದೆಂದು ನಾವು ಇಟ್ಟುಕೊಳ್ಳೋಣ. ಈ ಒಂದು ಶತಮಾನದ ಕಾಲದಲ್ಲಿ ನಮ್ಮ ಹಿಂದುಸ್ಥಾನದೊಳಗಿನ ವಿದ್ಯಾಪೀಠಗಳಿಂದ ಪ್ರತಿ ವರ್ಷ ವಿದ್ಯಾವಿಭೂಷಿತರಾದ ಸಾವಿರಾರು ತರುಣ ಪದವೀಧರರು ಹೊರಬೀಳುವರು. ವಿದ್ಯಾಪೀಠದೊಳಗಿನ ಶಿಕ್ಷಣಕ್ರಮವನ್ನು ಮುಗಿಸಿ ಈ ಪದವೀಧರರು ಮಾಡುತ್ತಿರುವ ವ್ಯವಸಾಯವು ಯಾವುದೆಂಬುದನ್ನು ಪರೀಕ್ಷಿಸಿದರೆ ಇವರು ಸರಕಾರಿ ಕೋರ್ಟುಕಚೇರಿಗಳಲ್ಲಿ ಗುಮಾಸ್ತರಾಗುವರು, ವಕೀಲರಾಗಿ ಕೋರ್ಟುಗಳಲ್ಲಿ ವ್ಯವಹಾರಗಳನ್ನು ವಾದಿಸುವರು, ದೊಡ್ಡ ದೊಡ್ಡ ಸಭೆಗಳಲ್ಲಿ ಇಂಗ್ಲಿಷಿನಿಂದ ವಕ್ತೃತ್ವವನ್ನು ಮಾಡುವರು, ಶಾಲೆಗಳಲ್ಲಿ ಶಿಕ್ಷಕರಾಗಿ ನಿಂತರೆ ತಾವು ಕಲಿತ ಪುಸ್ತಕದ ಬದನೆಕಾಯಿಗಳನ್ನು ಬಹು ಪ್ರೀತಿಯಿಂದ ಮತ್ತು ಅಭಿಮಾನದಿಂದ ಹುಡುಗರಿಗೆ ಗೊಜ್ಜುಮಾಡಿ ಕೊಡುವರು. ಈ ಪ್ರತಾಪಶಾಲಿಗಳಾದ ವಿದ್ಯಾವಂತರ ಮಹತ್ಕಾರ್ಯವನ್ನು ಹೇಳುವದಾದರೆ ಉದಾತ್ತ ಶಿಕ್ಷಣದ ಹೆಸರಿನಿಂದ ಸ್ವಸಮಾಜದ ಮತ್ತು ಸ್ವಧರ್ಮದ ನ್ಯೂನತ್ವಗಳನ್ನೂ ದೋಷಗಳನ್ನೂ ತೋರಿಸಿ ಆಸುಯಾಯುಗಳಲ್ಲಿ ಒಡಕನ್ನುಂಟುಮಾಡಿ ತಂಡಗಳನ್ನು ಬೆಳಸುವರು. ಇನ್ನಾವುದ ಚರಿತ್ರವು ಇನ್ನಾವದಿದೆ? ಈ ಪ್ರಶ್ನವನ್ನು ವಾಚಕರೆ ಆಲೋಚಿಸಬಹುದು. ಒಂದು ಶತಮಾನದ ಅವಧಿಯಲ್ಲಿ ಶಿಕ್ಷಣಾವ್ಯಾಪ್ತದ ಗುಟುಕುಗಳನ್ನು ಕುಡಿದು ಕುಡಿದು ಮಾಡುವ ಮಹತ್ಕಾರ್ಯಗಳು ಇವೆ ಅಲ್ಲದೆ ಬೇರೆ ಅಲ್ಲ, ಎಂದಾದಮೇಲೆ ಇಲ್ಲಿಯ ಶಿಕ್ಷಣವು ಎಷ್ಟರಮಟ್ಟಿಗೆ ಸರಸವಾಗಿಯೂ ಉಪಯುಕ್ತವಾಗಿಯೂ ಇದೆ ಎಂಬುದನ್ನು ಚಾಣಾಕ್ಷರಿಗೆ ಬೇರೆ ಹೇಳಬೇಕಾದ್ದಿಲ್ಲ. ಯುರೋಪ ಜಪಾನ ಮೊದಲಾದ ದೇಶದೊಳಗಿನ ವಿದ್ಯಾಪೀಠಗಳಿಂದ ಇದೆ ಅವಧಿಯಲ್ಲಿ ಎಷ್ಟು ಶಾಸ್ತ್ರಜ್ಞರೂ, ಶೋಧಕರೂ, ಸ್ವತಂತ್ರೋಪಜೀವಿಗಳೂ ಹೊರಟಿದ್ದಾರೆ ಮತ್ತು ಹೊರಡುತ್ತಿದ್ದಾರೆ? ಹಿಂದುಸ್ಥಾನದ ವಿದ್ಯಾಪೀಠಗಳಿಗೆ ಮಾತ್ರ ಇಂಥ ಅವಸ್ಥೆಗಳು ಯಾಕೆ ಬಂದಿವೆ? ನಮ್ಮ ಈ ವಿಧಾನವನ್ನು ಅಲ್ಲಗಳೆಯಲು ಕೆಲವರು ಕಲಕತ್ತೆಯ ಸುಪ್ರಸಿದ್ಧ ಶಾಸ್ತ್ರಜ್ಞರಾದ ಜಗದೀಶಚಂದ್ರಬೋಸರ ಅಥವಾ ಸೀನಿಯರ ರೆಂಗ್ಲರರಾದ ಪರಾಂಜಪೆ ಇಂಥವರ ಹೆಸರುಗಳನ್ನು ಹೇಳಬಹುದು. ಆದರೆ ಈ ಒಂದೆರಡು ಕೇಂಬಹುನಾ ನಾಲ್ಕೆಂಟು ಇಂಥ ಹೆಸರುಗಳು ಅಪವಾದದ ಕೋಟಿಯಲ್ಲಿಯೆ ಸೇರುವವಲ್ಲದೆ ಈ ವಿಶ್ವವಿದ್ಯಾಲಯಗಳ ಫಲಗಳಾಗಲಾರವು. ಈಗ ಹೀಗೊಂದು ಕಲ್ಪನೆಯನ್ನು ಮಾಡೋಣ. ಸರಕಾರವು ಆಕಸ್ಮಾತ್ತ ತನ್ನ ನೌಕರಿಕಾರಖಾನೆಯ ಬಾಗಿಲುಗಳನ್ನು ಮುಚ್ಚಿದೆ. ಆಗ ಆಧುನಿಕ ವಿದ್ಯಾವಂತರ ಅವಸ್ಥೆಯು ಏನಾಗಬೇಕಾಯಿತು? ಯುನಿವರ್ಸಿಟಿಯು ಅಚ್ಚಿನಿಂದ ಹೊರಟ ಈ ನಾಣ್ಯಗಳು ಎಲ್ಲಿಗೆ ಹೋಗಿ ಏನು ಮಾಡಬೇಕಾಯಿತು? ನಾವು ನೆನಸುವದಾದರೆ ಸರಕಾರವು ತನ್ನ ನೌಕರಿಕಾರಖಾನೆಯನ್ನು ಮುಚ್ಚಿದರೆ ನೇಕಡಾ ೯೯ ಪದವೀಧರರು ನಿರಾಶ್ರಿತರಾದಾರು! ಹಿಂದುಸ್ಥಾನದ ಕ್ಷೇತ್ರದಲ್ಲಿ ಈ ನೂತನ ಶಿಕ್ಷಣದ ಸಾಗುವಳಿಯು ನೂರು ವರ್ಷಗಳಿಂದ ನಡೆದಿದೆ. ಆದರೂ ಯುಕ್ತವಾದ ಫಲವು ತೋರುವುದಿಲ್ಲ ಎಂಬ ಸಂಗತಿಯು ಈಗ ಸಾಧಾರಣವಾಗಿ ಎಲ್ಲರ ಮನಸ್ಸಿಗೆ ಬಂದಿದೆ. ಈ ವಿಷಯದಲ್ಲಿ ಎಲ್ಲರ ಏಕವಾಕ್ಯತೆಯುಂಟಾಗಿದೆ. ಆಧುನಿಕ ಶಿಕ್ಷಣ ಕ್ರಮವು ಹಾಗು ಮನುಷ್ಯನ ಸ್ವಾವಲಂಬನದ ಜೀವನಕ್ಕೆ ಸಹ ಸಹಕಾರಿಯಾದುದಲ್ಲ, ಬರೆ ವಾಙ್ಮಯಾತ್ಮಕ ಪುಸ್ತಕೀಶಿಕ್ಷಣದಿಂದ ಮನುಷ್ಯನ ಕೊಂಚಮಟ್ಟಿಗೆ ಬುದ್ಧಿವಿಕಾಸವುಂಟಾದರೂ ಸ್ವತಂತ್ರ ಜೀವನಕ್ಕೆ ಬೇಕಾದ ಸಾಹಸ, ಕಸುವು, ಉದ್ಯೋಗ ಪ್ರಿಯತೆ ಮೊದಲಾದ ಯಾವ ಗುಣಗಳನ್ನೂ ಅದು ಪೋಷಿಸಲಾರದು. ಆಧುನಿಕ ಶಿಕ್ಷಣವು ಒಂದುವೇಳೆ ಉಪಾದೇಯವಾದರೂ ಅದರ ಕ್ರಮವು ಶಿಕ್ಷಣದ ಮುಖ್ಯ ಉದ್ದೇಶವನ್ನೆ ನಾಶನಮಾಡಿಬಿಡುವದು, ಶಿಕ್ಷಣದ ಜೀವತತ್ವವನ್ನೆ ಕಳೆದುಬಿಡುವದು. ಸಾರಾಂಶ ಆಧುನಿಕ ಶಿಕ್ಷಣದಲ್ಲಿ ಗುಣಗಳಿಗಿಂತ ದೋಷಗಳೆ ಅವಗುಣಗಳೆ ಹೆಚ್ಚಿಗೆ ಇರುವವೆಂಬ ಸಂಗತಿಯು ಪ್ರತಿದಿನವೂ ಪ್ರತ್ಯಕ್ಷ ಲಕ್ಷ್ಯದಲ್ಲಿ ಬಂದಿದೆ. ಪರದೇಶಿ, ಪರಕೀಯ ಮತ್ತು ಗೀರ್ವಾಣದ ಶಿಕ್ಷಣವನ್ನು ತರುಣರ ತಲೆಗೆ ಕಟ್ಟುವುದರಿಂದ ಅವರು ಮುಂದಿನ ಜೀವನದಲ್ಲಿ ನಿರುತ್ಸಾಹಿಗಳೂ, ಹತಬಲರೂ ಮತ್ತು ಪರಾವಲಂಬಿಗಳೂ ಆಗುತ್ತಾರೆ. ಇದು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಬಹು ಶೋಚನೀಯ. ಮಾತ್ರವಲ್ಲ, ಘಾತಕ ವಾದ್ದೆಂದು ಆಲೋಚಿಸಿ ನಮ್ಮ ಮುಖಂಡರು ಇತ್ತಿತ್ತ ಈ ಪರಾವಲಂಬಿ ಶಿಕ್ಷಣವು ನಮ್ಮ ತರುಣರಿಗೆ ಅಗತ್ಯವಿಲ್ಲೆಂದು ಹೇಳಿ "ರಾಷ್ಟ್ರೀಯ ಶಿಕ್ಷಣ"ವನ್ನು ಸ್ಥಾಪಿಸಲು ಯತ್ನಿಸುತ್ತಿದ್ದಾರೆ.

ಈಗಿನ ಶಿಕ್ಷಣ ಕ್ರಮದಲ್ಲಿರುವ ದೋಷಗಳೂ ಮತ್ತು ರಾಷ್ಟ್ರೀಯ ಶಿಕ್ಷಣದ ಪ್ರಶ್ನವೂ ನಮ್ಮ ಮುಖಂಡರಲ್ಲಿ ಎಂದಿನಿಂದ ಬಂದಿವೆಂಬುದನ್ನು ನೋಡಿದರೆ, ೧೯೧೧ನೇ ಇಸವಿಯ ನಂತರ ಯುನಿವರ್ಸಿಟಿ ಕಮಿಷನು ನೇಮಿಸಲ್ಪಟ್ಟಂದಿನಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಸ್ವಾತಂತ್ರ್ಯವು ದಿನೇದಿನೇ ಕಡಿಮೆಯಾಗುತ್ತ ಹೋಯಿತು, ಅವುಗಳ ಸುತ್ತಲೂ ಬಂಧನಗಳು ಹೆಚ್ಚಾಗುತ್ತ ಹೋದವು, ಆಗ ರಾಷ್ಟ್ರೀಯ ಶಿಕ್ಷಣದ ಆವಶ್ಯಕತೆಯು ಕಂಡುಬಂದು ಬಂಗಾಲದಲ್ಲಿ ಹಾಗು ಮುಂಬಯಿ ಪ್ರಾಂತದಲ್ಲಿ ರಾಷ್ಟ್ರೀಯ ಶಿಕ್ಷಣದ ಸಂಸ್ಥೆಗಳು ಅಸ್ತಿತ್ವದಲ್ಲಿ ಬಂದವು. ಆದರೆ ಆ ಕಾಲದಲ್ಲಿ ತಲೆದೋರಿದ ಉಗ್ರವಾದ ರಾಜಕೀಯ ವಾತಾವರಣದ ನಿಮಿತ್ತದಿಂದ ಮೇಲಿನ ಸಂಸ್ಥೆಗಳು ನಿಂತುಹೋದವು. ನಿಜವಾಗಿ ನೋಡಿದ್ದರೆ ರಾಷ್ಟ್ರೀಯ ಶಿಕ್ಷಣಪ್ರಶ್ನದ ಜೀವಮಾನವು ಈ ೧೦-೧೨ ವರ್ಷಗಳೊಳಗಿನದಲ್ಲ. ೧೮೮೨ನೆಯ ಇಸವಿಯಲ್ಲಿ ಹಿಂದುಸ್ಥಾನ ಸರಕಾರವು ಡಾ. ಹಂಟರ್ ದೊರೆಗಳ ಅಧ್ಯಕ್ಷತೆಯಲ್ಲಿ ಒಂದು ಶಿಕ್ಷಣ ಕಮಿಷನನ್ನು ನಿರ್ಮಿಸಿದ್ದಾಗಲೆ ಆ ಕಾಲದ ಸುಶಿಕ್ಷಿತರ ಆಕಾಂಕ್ಷೆಯಲ್ಲಿ ಈ ಪ್ರಶ್ನವು ಬಂದದ್ದು ಕಂಡುಬರುತ್ತದೆ. ಆ ಕಮಿಷನಿನಲ್ಲಿ ಎಷ್ಟೋ ಖಾಸಗಿ ಶಿಕ್ಷಣ ಸಂಸ್ಥೆಗಳ ಚಾಲಕರ ಸಾಕ್ಷಿಗಳು ಆಗಿವೆ. ಅವುಗಳಲ್ಲಿ ಅನೇಕರು ರಾಷ್ಟ್ರೀಯ ಶಿಕ್ಷಣದ ಆಕಾಂಕ್ಷೆಗಳನ್ನು ವ್ಯಕ್ತಗೊಳಿಸಿದ ಸಂಗತಿಯನ್ನು ಈಗಲೂ ಓದಬಹುದು. "ಪ್ರಚಲಿತ ಶಿಕ್ಷಣದಲ್ಲಿ ಧಾರ್ಮಿಕ ಶಿಕ್ಷಣದ ಅಭಾವವಿದೆ, ಪದ್ಧತಿಯಲ್ಲಿ ದೋಷವಿದೆ, ಅವನ್ನು ತೆಗೆಯಬೇಕಾದರೆ ಸ್ವಾತಂತ್ರ್ಯವು ಅವಶ್ಯವಿದೆ. ಪರಕೀಯ ಭಾಷೆಯಿಂದ ಶಿಕ್ಷಣವು ಪ್ರಚಲಿತವಿರುವ ಕಾರಣ ಅದನ್ನು ಬರೆ ಬಾಯಿಪಾಠದಿಂದಲೆ ಸಾಧಿಸಬೇಕಾಗುವುದು. ಇಂಥ ಶಿಕ್ಷಣವನ್ನು ಹೊಂದಿ ತಯಾರಾದ ಪದವೀಧರರು "ಹಿಂದೀ ನಾಗರಿಕ"ರಾಗುವದಿಲ್ಲ, ಬರೆ ಆಂಗ್ಲಮಯರಾಗುವರು." ಇತ್ಯಾದಿ ವಿಧಾನಗಳನ್ನು ನೋಡುವಾಗ ಆ ಕಾಲದಲ್ಲಿಯೂ, ಎಂದರೆ ೩೫ ವರ್ಷಗಳ ಹಿಂದೆಯು ರಾಷ್ಟ್ರೀಯ ಶಿಕ್ಷಣದ ಆಕಾಂಕ್ಷೆಯು ಹಿಂದೀ ಮುಖಂಡರಲ್ಲಿ ಉದ್ಭವಿಸಿದ್ದಿತ್ತೆಂದು ಗೊತ್ತಾಗುವುದು. ಪರಂತು ಅದು ಮೇಲೆ ಹೇಳಿದಂತೆ ಬಂಗಾಲದಲ್ಲಿ ಅಥವಾ ಮುಂಬಯಿಯಲ್ಲಿ ಆ ಬಗ್ಗೆ ಅಲ್ಪಸ್ವಲ್ಪ ಪ್ರಯತ್ನಗಳು ಕಾರ್ಯರೂಪದಿಂದ ನೆಲೆಗೊಳ್ಳಬೇಕಾದರೆ ಮಧ್ಯದಲ್ಲಿ ೨೦ ವರ್ಷಗಳ ಅವಧಿಯು ದಾಟಿ ಹೋಗಬೇಕಾಯಿತು. ೧೯೦೧ನೇ ... ಪ್ನವಾಗಿ ನಡಿಯಿತೆ! ಅದೂ ಮೇಲೆ ಹೇಳಿದಂತೆ ನಿಂತು ಹೋಯಿತ್ತು. ಆದರೆ ಸದ್ಭಾವನೆಯಿಂದ ಪ್ರೇರಿತವಾದ ಮತ್ತು ಸಾತ್ವಿಕವಾದ ಚಳವಳವು ಕೆಲವು ಸಮಯ ನಿಂತಂತೆ ತೋರಿದರೂ ಅದು ಸಕಾಲವನ್ನು ನಿರೀಕ್ಷಿಸಿ ಪುನಃದೃಶ್ಯ ಸ್ವರೂಪವನ್ನು ಹೊಂದುತ್ತದೆ. ಸಮುದ್ರದ ತೆರೆಗಳು ಕೆಲವು ಸಮಯ ಮುಂದೆ ಮುಂದಕ್ಕೆ ಹೋಗುವವು. ಪುನಃ ಕೆಲವು ಸಮಯ ಹಿಂದೆ ಹಿಂದಕ್ಕೆ ಬರುವವು. ತಥಾಪಿ ನಿಜವಾಗಿ ನೋಡಿದರೆ ಸಮುದ್ರವು ಇದ್ದಲ್ಲಿಯೆ ಇರುವುದು. ಪರಂತು ಸನದುಶೀರ ಮತ್ತು ಕಾಯದೇಶೀರಾದ ರಾಜಕೀಯ ಚಳವಳವು ಮಾತ್ರ ಕೆಲ ಸಮಯ ಸ್ತಬ್ಧವಾಗಿ ಬಿದ್ದರೂ ಪುನಃ ಏಳುವಾಗ ಹಿಂದಿನ ಅನುಭವವನ್ನು ಉಪಯೋಗಿಸಿಕೊಂಡು ಒಂದು ಹೆಜ್ಜೆಯನ್ನು ಮುಂದೆಯೆ ಇಡುವದು. ರಾಷ್ಟ್ರೀಯ ಶಿಕ್ಷಣದ ಚಳವಳವಂತು ಕೇವಲ ವಿದ್ಯಾವಿಷಯಕವಾದ ಸಾತ್ವಿಕ ಚಳವಳವು. ಅದೂ ಸಹ ಕೆಲವು ಸಮಯದ ಹಿಂದೆ ನಿಂತುಹೋಯಿತು. ಆದರೆ ಪುನಃ ಈಗ ಅದೆ ಪ್ರಶ್ನವು ದೇಶದಲ್ಲಿ ಉಪಸ್ಥಿತವಾಗಿದೆ. ಆದ್ದರಿಂದ ಈ ವಿಷಯದಲ್ಲಿ ರಾಷ್ಟ್ರೀಯ ಶಿಕ್ಷಣವೆಂದರೇನು ಅದನ್ನು ಸ್ಥಾಪಿಸುವ ವಿಷಯದಲ್ಲಿ ದೇಶದ ಮುಖಂಡರು ಯಾವ ಏರ್ಪಾಡುಗಳನ್ನು ಮಾಡುವದರಲ್ಲಿದ್ದಾರೆಂಬ ಸಂಗತಿಯನ್ನು ವಾಚಕರಿಗೆ ತಿಳಿಸುವುದು ಅಗತ್ಯವಾಗಿದೆ. ಅದನ್ನು ಬರುವ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಸ್ಫುಟವಿಚಾರಗಳು.

೧. ಜೂನ್ ತಿಂಗಳ ಮೊದಲನೆಯ ವಾರದಲ್ಲಿ ತಿರುಚಿನಾಪಳ್ಳಿಯ ಜಿಲ್ಲಾ ಪರಿಷತ್ತು ಜರಗಿತು. ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ದಿವಾನಬಹದ್ದೂರ್ ಕರುಣಾಕರ ಮೆನನರಂಥ ಶಾಂತಪಕ್ಷದ ಧುರೀಣ ಮತ್ತು ರಾಷ್ಟ್ರೀಯ ಸಭೆಯ ಅಕೃತ್ರಿಮ ಭಕ್ತರು ಅಲಂಕರಿಸಿದ್ದುದರಿಂದ ಅದಕ್ಕೆ ಒಂದು ಬಗೆಯ ಮಹತ್ವವು ಬಂದಿರುವುದು. ಅಧ್ಯಕ್ಷರ ಪ್ರಸಿದ್ಧವಾದ ಭಾಷಣದ ಸಾರಾಂಶವನ್ನು ನೋಡುವಾಗ ಈಗ ಇಡಿ ದೇಶದೊಳಗೆ ಸರ್ವತೋಮುಖಿಯಾದ "ಸೆಲ್ಫ್ ಗವರ್ನಮೆಂಟಿ"ನ ವಿಷಯವು ಪ್ರಮುಖತ್ವೇನ ಬಂದುದು ನಿಜವಾಗಿ ಆಶ್ಚರ್ಯವಲ್ಲ. ಯಾಕೆಂದರೆ, ಹಿಂದುಸ್ಥಾನಕ್ಕೆ ರಾಜ್ಯದಾಡಳಿತೆಯಲ್ಲಿ ಹೆಚ್ಚಿನ ಅಂಶವನ್ನು ಕೊಡಬೇಕು, ಹಿಂದೀದೇಶದ ವ್ಯಾಪಾರ, ಉದ್ಯೋಗ, ಕೈಗಾರಿಕೆ ಮುಂತಾದವುಗಳಿಗೆ ಉನ್ನತಿಯು ಪ್ರಾಪ್ತವಾಗಿ ದೇಶದ ಸ್ಥಿತಿಯು ಸರ್ವೋತ್ಕೃಷ್ಟವಾಗಬೇಕು ಎಂದರೆ ಒಂದೆ ಒಂದು ಮಾತಿನಿಂದ, 'ಸ್ವರಾಜ್ಯವು' ಹಿಂದುಸ್ಥಾನಕ್ಕೆ ಅಪರಿಹಾರ್ಯವಾದುದೆಂದು ಈಗ ಸಾಮಾನ್ಯ ತಿಳುವಳಿಕೆಯವನೂ ಕೂಡ ಹೇಳುವಾಗ ದಿವಾನಬಹದ್ದೂರ್ ಕರುಣಾಕರ ಮೆನನರಿಗೆ ಮಾತ್ರ ಅದು ಬೇಡವೆಂದು ಹೇಗೆ ತೋರೀತು? ಆದ್ದರಿಂದ ಅವರ ಮಾತಿನಲ್ಲಿ ಸೆಲ್ಫ್ ಗವರ್ನಮೆಂಟಿನ ವಿಷಯವೆ ಮುಖ್ಯವಾಗಿ ಹರಿದುಕೊಂಡು ಹೋಗಿದೆ. ಅಲ್ಲದೆ ಲಖನೌದಲ್ಲಿ ಕಳೆದ ವರ್ಷ ರಾಷ್ಟ್ರೀಯ ಸಭೆಯು ಮತ್ತು ಮೊಸ್ಲೆಮ್ ಲೀಗ್ ಸೇರಿ ಹಿಂದೀ ಸ್ವರಾಜ್ಯದ ಧ್ವಜವನ್ನು ಏರಿಸಿದಂದಿನಿಂದ ಪ್ರಾಂತಿಕ ಪರಿಷತ್ತುಗಳಲ್ಲಿಯೂ, ಜಿಲ್ಲಾ ಸಭೆಗಳಲ್ಲಿಯೂ, ಮುಖ್ಯವಾಗಿ ನಡಿಯುವ ಪ್ರಸ್ತಾಪವು 'ಸೆಲ್ಫ್ ಗವರ್ನಮೆಂಟ'ನದೆ ಆಗಿರುತ್ತದೆ. ಮಾತ್ರವಲ್ಲ, ಅನ್ಯಪ್ರಾಂತಿಯ ತಾಲೂಕು ಸಭೆಗಳಲ್ಲಿಯೂ ಕೂಡಾ ಕರುಣಾಕರ ಮೆನನರು ಬಡೆದಿರುವ ಸ್ವರಾಜ್ಯದ ಡಿಂಡಿಮವೆ ಕೇಳಿಸುತ್ತಿರುವುದು. ರಾಜನೀತಿ ಕುಶಲರಾದ ನಮ್ಮ ಬ್ರಿಟಿಷ್ ಸರಕಾರದವರು ಯಾವ ರೀತಿಯಿಂದ ಪ್ರಾಂತಗಳನ್ನೂ ಜಿಲ್ಲೆಗಳನ್ನೂ ತಾಲೂಕುಗಳನ್ನೂ ವಿಂಗಡಿಸಿ ಅಲ್ಲಲ್ಲಿ ಅಧಿಕಾರಿಗಳ ಶ್ರೇಣಿಗಳನ್ನು ರಚಿಸಿ ಅವರೆಲ್ಲರಿಗೆ ಒಂದೇ ಧ್ಯೇಯವನ್ನು ಹಾಕಿ ಕೊಟ್ಟಿರುವರೊ ಅದೇ ರೀತಿಯಿಂದ ರಾಷ್ಟ್ರೀಯ ಸಭೆ, ಪ್ರಾಂತಿಕ ಸಭೆ, ಜಿಲ್ಲಾ ಸಭೆ, ಇತ್ಯಾದಿ ಕ್ರಮದಿಂದ, ಸರಪಣಿಯ ಗೊಣಸುಗಳು ಒಂದಕ್ಕೊಂದು ನಿಗಡಿತವಾಗಿರುವಂಥ ಸಂಸ್ಥೆಗಳನ್ನು ರಚಿಸಿ ಅವುಗಗಳಿಗೆ ಒಂದೇ ಧ್ಯೇಯವನ್ನು ಹಾಕಿಕೊಟ್ಟಲ್ಲಿ ಮಾತ್ರ ಉತ್ತರಕ್ಕೆ ಪ್ರತ್ಯುತ್ತರವು ಸರಿಯಾಗುವದು. ಅಲ್ಲವಾದರೆ ಭಾಗವತನ ಪದವು ಒಂದು ಕಡೆಯಲ್ಲಿ, ರಾಗವು ಇನ್ನೊಂದು ಕಡೆಯಲ್ಲಿ, ಮತ್ತು ತಾಳವು ಮತ್ತೊಂದು ಕಡೆಯಲ್ಲಿ, ಈ ಮೇಳದ ಅವಸ್ಥೆಯಂತೆ ನಮ್ಮ ರಾಜಕೀಯ ಸಂಸ್ಥೆಯ ಪರಿಸ್ಥಿತಿಯು ಉಂಟಾಗುವದು. ರಾಷ್ಟ್ರೀಯ ಸಭೆಯಲ್ಲಿ ವಿದ್ಯಾವಂತರಾದ ದೊಡ್ಡ ದೇಶಭಕ್ತರು ಹಾಕಿಕೊಟ್ಟ ಧ್ಯೇಯಗಳನ್ನು ಜಿಲ್ಲೆಯೊಳಗಿನ ಮತ್ತು ತಾಲೂಕುಗಳೊಳಗಿನ ಸಾಮಾನ್ಯ ಜನರು ತಿಳಿದುಕೊಳ್ಳುವದಾದರೆ ಮಾತ್ರ ಆ ರಾಷ್ಟ್ರೀಯ ಸಭಾ ಭಕ್ತರ ಶ್ರಮವು ಸಾರ್ಥಕವಾಗುವದು. ಈ ಪವೇಜನಕ್ಕನುಸಾರವಾಗಿಯೇ ತಿರುಚಿನಾಪಳ್ಳಿಯ ಪರಿಷತ್ತಿನ ಅಧಿವೇಶನವು ಸರ್ವದೃಷ್ಟಿಯಿಂದಲೂ ಶ್ಲಾಘನೀಯವಾಗಿದೆ.

೨. ತಿರುಚಿನಾಪಳ್ಳಿಯ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾದ ದಿವಾನ ಬಹದ್ದೂರ್ ಕರುಣಾಕರ ಮೆನನ್ ಇವರ ಭಾಷಣವು ಇನ್ನೊಂದು ದೃಷ್ಟಿಯಿಂದಲೂ ಮಹತ್ವದ್ದಾಗಿತ್ತು. ಕಳೆದ ಮದ್ರಾಸ್ ಕೌನ್ಸಿಲಿನ ಅಧಿವೇಶನದ ಅಂತ್ಯದಲ್ಲಿ ಘೊ. ಪೆಂಟ್‌ಲೆಂಡ್ ದೊರೆಗಳು ಕೊಟ್ಟಿರುವ ಭೀಕರವಾದ ಭಾಷಣಕ್ಕೆ ಕರುಣಾಕರ ಮೆನನ್‌ರೂ ಸಮರ್ಪಕವಾದ ಪ್ರತ್ಯುತ್ತರವನ್ನು ಕೊಟ್ಟು ದೊರೆಗಳ ಅಪ್ರಬುದ್ಧತ್ವವನ್ನು ಯುಕ್ತವಾದಂಥ ಆದರೂ ಸೌಮ್ಯವಾದಂಥ ಶಬ್ದಗಳಿಂದ ಅವರ ಸೆರಗಿನಲ್ಲಿ ಕಟ್ಟಿರುವರು. ಕರುಣಾಕರ ಮೆನನರು ರಾಷ್ಟ್ರೀಯ ಸಭೆ ಮತ್ತು ಮೊಸ್ಲೆಮ್ ಲೀಗಿನ ಮತ್ತು ವರಿಷ್ಠ ಕೌನ್ಸಿಲಿನ ೧೯ ಸಭಾಸದರ ಸ್ವರಾಜ್ಯದ ವಿಷಯವೆ ತನ್ನ ಮಾತಿನ ಸ್ವರಾಜ್ಯಕ್ಕೆ ಅಭಿಮತವಾದದ್ದೆಂದು ಹೇಳಿ "ಈ ಸ್ವರಾಜ್ಯವು ಗವರ್ನರ ದೊರೆಗಳು ಅಭಿಪ್ರಾಯಪಡುವೊ

ಯಲ್ಲಿ ಕೊಡಬೇಕೆಂಬದಲ್ಲ. ಗವರ್ನರರು ತಿಳಿದದ್ದೆ ತಪ್ಪಾಗಿದೆ" ಎಂಬದನ್ನು ದಿವಾನಬಹದ್ದೂರ್ ಮೆನನರು ವಿವರಣಪೂರ್ವಕವಾಗಿ ವಿಶದೀಕರಿಸಿದರು. ಹಿಂದೀರಾಜ್ಯದಲ್ಲಿ ಉಂಟಾದ ಎಚ್ಚರವನ್ನು ಕುರಿತು ಪ್ರಸ್ತಾಪಿಸುವಾಗ ಕರುಣಾಕರ ಮೆನನರು ಹೀಗೆ ಎಂದರು: "ಹಿಂದೀ ಸುಶಿಕ್ಷಿತರಲ್ಲಿ ಈಗ ಒಂದು ತರದ ಜಾಗೃತಿಯುಂಟಾಗಿದೆ. ರಾಜ್ಯ ಕಾರಭಾರದಲ್ಲಿ ತಮಗೆ ಯೋಗ್ಯವಾದ ಭಾಗವು—ಕೈಯು—ಪ್ರವೇಶವು ಇರಬೇಕೆಂದು ಈಗಿನ ಸುಶಿಕ್ಷಿತರ ಆಕಾಂಕ್ಷೆಯು ಮತ್ತು ಅದು ಸರಿಯಾದ್ದೆ ಹೌದು. ಈ ತರದ ಜಾಗೃತಿಯು ಇಲ್ಲಿ ಉಂಟಾದ್ದು ಯಾರೊಬ್ಬನ ಪ್ರಯತ್ನದಿಂದಲ್ಲ. ಇಂಗ್ಲಿಷ್ ವಿದ್ಯೆ, ಇಂಗ್ಲಂಡಿನ ಪ್ರೋತ್ಸಾಹಕರವಾದ ಇತಿಹಾಸದ ವಾಚನ, ಇಂಗ್ಲಿಷ್ ಮುತ್ಸದಿಗಳು ಆಗಾಗ್ಗೆ ಕೊಟ್ಟ ವಚನಗಳು, ಈ ಪ್ರಚಂಡವಾದ ಮಹಾಯುದ್ಧ ಮತ್ತು ವಿಶೇಷತಃ ಇಡೀ ಲೋಕದಲ್ಲಿ ಆಗುತ್ತಿರುವ ಬದಲಾವಣೆ ಇವೆ ಹಿಂದುಸ್ಥಾನದ ಆಧುನಿಕ ಜಾಗೃತಿಗೆ ಕಾರಣಗಳು." ಅಧ್ಯಕ್ಷ ಸ್ಥಾನದಿಂದ ಈ ಪ್ರಕಾರ ದಿವಾನಬಹದ್ದೂರ್ ಮೆನನರು ಗವರ್ನರ ದೊರೆಗಳ ಭಾಷಣವನ್ನು ಪರ್ಯಾಲೋಚಿಸಿ ದೇಶದ ಅಭಿವೃದ್ಧಿಗೆ, ಕಾಂಗ್ರೆಸಿನ ಧ್ಯೇಯಸಿದ್ಧಿಗೆ ನಮ್ಮಲ್ಲಿ ರಾಷ್ಟ್ರೀಯ ಐಕ್ಯವು ಇರಬೇಕು; ಬ್ರಾಹ್ಮಣ ಬ್ರಾಹ್ಮಣೇತರ ಮುಂತಾದ ವಿಘಾತಕ ಸಂಗತಿಗಳನ್ನು ಹುಟ್ಟಿಸಿ ಮನಸ್ಸಿನಲ್ಲಿ ವೃಥಾ ದ್ವೇಷವನ್ನು ಬೆಳೆಯಿಸಿ ಪರಸ್ಪರ ಹಾನಿಯನ್ನು ಮಾಡಿಕೊಳ್ಳುವದು ಯುಕ್ತವಲ್ಲ, ಮುಂತಾದ ಯೋಗ್ಯ ಮಾತುಗಳನ್ನು ಹೇಳಿದರು. ಇರಲಿ. ಕರುಣಾಕರರು ಶಾಂತಪಕ್ಷದವರು; ದುಡುಕು ಸ್ವಭಾವದವರಲ್ಲ. ಅವರು ಕೂಡ ಲೊ. ಪೆಂಟಲೆಂಡರ ವಾಗ್ಘೋರಣವನ್ನು ಅನುಮೋದಿಸುವದಿಲ್ಲ. ಮಾತ್ರವಲ್ಲ, ಅವರಿಗೆ ಅದು ಮೆಚ್ಚುವದಿಲ್ಲ. ಇದೆ ಅವರ ಭಾಷಣದ ಮುಖ್ಯ ತಾತ್ಪರ್ಯವು.

೩. ಮದ್ರಾಸು ಸರಕಾರವು "ವಿದ್ಯಾರ್ಥಿಗಳೂ ರಾಜಕಾರಣವೂ" ಎಂಬದೊಂದು ಸುಪ್ರಸಿದ್ಧ ಸರಕ್ಯುಲರನ್ನು ಹೊರಡಿಸಿ ಕೆಲವು ದಿವಸಗಳಾಗುವಷ್ಟರೊಳಗೆ ಮಧ್ಯಪ್ರಾಂತದಲ್ಲಿಯೂ ಸ್ವಲ್ಪ ಹೆಚ್ಚುಕಡಿಮೆ ಇದೆ ಸ್ವಭಾವದ ಸರಕ್ಯುಲರು ಹೊರಟಿದೆ. ಶಾಲೆಯ ವಿದ್ಯಾರ್ಥಿಗಳು ಯಾವ ಸಾರ್ವಜನಿಕ ಸಭೆಗಳಿಗೂ ಹೋಗಕೂಡದೆಂದು ಈ ಸರಕ್ಯುಲರು ಪ್ರತಿಬಂಧಿಸುತ್ತದೆ. ಮಧ್ಯಪ್ರಾಂತದ ವಿದ್ಯಾಖಾತೆಯ ಡೈರೆಕ್ಟರರು ಕೊಟ್ಟಿರುವ ಈ ಸರಕ್ಯುಲರಿನ ವಿಷಯದಲ್ಲಿ ಮಾಹಿತಿಯನ್ನು ಪೂರೈಸುವಾಗ ಶಾಲಾ ಇನ್ಸ್‌ಪೆಕ್ಟರರು—"ವಿದ್ಯಾರ್ಥಿಗಳ ರಕ್ಷಕರಲ್ಲಿರುವ ಪಾಲಕತ್ವದ ಹಕ್ಕು ಅವರು ಹುಡುಗರ ಅಧ್ಯಾಪಕರಿಗೆ ಒಪ್ಪಿಸಿಕೊಡಬೇಕು, ಹೀಗೆ ಒಪ್ಪಿಸಲು ಒಪ್ಪಿಕೊಳ್ಳದವರ ಮಕ್ಕಳನ್ನು ಶಾಲೆಯಿಂದ ತಳ್ಳಿಹಾಕಬೇಕು. ಈ ವಿಷಯದಲ್ಲಿ ಶಾಲೆಯ ಹೆಡ್ ಮಾಸ್ತರನು ಪ್ರವೇಶಿಸಿ ಮೇಲೆ ಹೇಳಿದ ಅಧ್ಯಾಪಕರ ಮತ್ತು ಪಾಲಕರ "ಕಂಟ್ರಾಕ್ಟ"ನ್ನು ಜಾರಿಗೆ ತರತಕ್ಕದ್ದು." ಎಂಬ ಅರ್ಥದ ಸೂಚನೆಗಳನ್ನು ವಿದ್ಯಾರ್ಥಿಗಳ ಪಾಲಕರಿಗೆ ಕೊಟ್ಟಿರುತ್ತಾರೆಂತ ಅಲ್ಲಿಯ ಗ್ರ್ಯಾಜ್ಯುಯೇಟರು ತಾವು ಈ ವಿಷಯ ಸರಕಾರಕ್ಕೆ ಒದಗೊಂಡ ವಿಜ್ಞಾಪನೆಯಲ್ಲಿ ಹೇಳಿರುವರು.

೪. ಮಧ್ಯಪ್ರಾಂತದ ಡೈರೆಕ್ಟರರ ಸೂತ್ರಪ್ರಾಯವಾದ ಸರಕ್ಯುಲರು ಮತ್ತು ಅದರ ಮೇಲಿನ ಇನ್ಸಪೆಕ್ಟರರ ಭಾಷ್ಯ ಇವೆರಡನ್ನು ನೋಡುವಾಗ ಒಂದೇ ಸಮಯದಲ್ಲಿ ಆಶ್ಚರ್ಯವೂ, ವ್ಯಸನವೂ, ಉದ್ವೇಗವೂ, ಭಯವೂ ಈ ರೀತಿಯಿಂದ ಬೇರೆ ಬೇರೆ ಮನೋವೃತ್ತಿಗಳು ಒಟ್ಟಿನಲ್ಲಿ ಉತ್ಪನ್ನವಾಗದೆ ಇರವು. ಡೈರೆಕ್ಟರರು "ಪಬ್ಲಿಕ್ ಮೀಟಿಂಗ್" ಎಂಬ ಶಬ್ದದಿಂದ ಯಾವ ವಿಶೇಷಾರ್ಥವನ್ನೂ ಕೊಡದೆ ಕೇವಲ ಧಾರ್ಮಿಕ, ಸಾಮಾಜಿಕ ಇತ್ಯಾದಿ ನಿರುಪದ್ರವ ಸಭೆಗಳಲ್ಲಿ ಕೂಡ ಶಾಲಾವಿದ್ಯಾರ್ಥಿಗಳು ಹೋಗಕೂಡದೆಂದು ಧ್ವನಿಸುತ್ತಾರೆ. ಈಚೆಗೆ ಹಿಂದುಸ್ಥಾನದೊಳಗಿನ ಬೇರೆಬೇರೆ ಪ್ರಾಂತಗಳ ವಿದ್ಯಾಧಿಕಾರಿಗಳು ಈ ತರದ ಸರಕ್ಯುಲರುಗಳನ್ನು ಹೊರಡಿಸಿ ವಿದ್ಯಾರ್ಥಿಗಳ ಮತ್ತು ಪರಂಪರಯಾ ವಿದ್ಯಾರ್ಥಿಗಳ ಪಾಲಕರ ಸ್ವಾಭಾವಿಕವಾದ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದ್ದಾರೆ. ಇದು ವಿದ್ಯಾ ಇಲಾಖೆಗೆ ಒಪ್ಪತಕ್ಕ ಮಾತಲ್ಲ. "ಶಾಲಾ ವಿದ್ಯಾರ್ಥಿಗಳಿ"ಗೆ ಮಾತ್ರ ಮೇಲಿನಂತೆ ಪ್ರತಿಬಂಧ ಹಾಕಿದ್ದರಿಂದ ಇದು ಮದ್ರಾಸ ಸರಕಾರದ ಅಂಡರ್ ಗ್ರ್ಯಾಜ್ಯುಯೇಟರನ್ನೂ ಸಹ ಪ್ರತಿಬಂಧಿಸುವ ಸುಪ್ರಸಿದ್ಧ ಸರಕ್ಯುಲರಿನ ತಮ್ಮನಾಗಿದೆ. ಆದರೆ "ಪಬ್ಲಿಕ್ ಮೀಟಿಂಗ್ಸ್" ಎಂಬ ಶಬ್ದದಿಂದ ಎಲ್ಲ ತರದ ಸಾರ್ವಜನಿಕ ಕೂಟಗಳನ್ನು ಬಹಿಷ್ಕರಿಸುವದರಿಂದ ಇದು ಬರೆ ರಾಜಕೀಯ ವಿಷಯದಿಂದ ಪರಾವರ್ತಿಸುವ ಮದ್ರಾಸ ಸರಕ್ಯುಲರಿನ ಅಣ್ಣನಾಗಿದೆಂದು ಏನೂ ಸಂಕೋಚವಿಲ್ಲದೆ ಎನ್ನಬಹುದು. ಬೌದ್ಧಿಕ ವಿಕಾಸ, ಉದ್ಯೋಗಿಕ ಸಾಮರ್ಥ್ಯ, ಶಾಸ್ತ್ರೀಯ ಶೋಧದ ನೈಪುಣ್ಯ ಇತ್ಯಾದಿ ಆವಶ್ಯಕವಾದ ಒಂದೂ ಫಲವನ್ನು ಒದಗಿಸಿಕೊಡದ ಕೇವಲ ಗುಮಾಸ್ತತನದ ಪಾತ್ರತೆಯನ್ನು ಮಾತ್ರ ತಂದುಕೊಡುವ ಈ ಆಧುನಿಕ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸಲು ತಂದೆತಾಯಿಗಳು ಅಥವಾ ಪಾಲಕರು ಮಕ್ಕಳ ಮೇಲಿನ ಸ್ವಾಭಾವಿಕವಾದ ತಮ್ಮ ಸ್ವಾತಂತ್ರ್ಯವನ್ನು ಸಂಬಳದ ಉಪಾಧ್ಯಾಯರ ಕೈವಶಮಾಡಲು ಹೇಳುವ ಈ ಸರಕ್ಯುಲರಿನ ಅಥವಾ ಇನ್ಸಪೆಕ್ಟರಿನ ಇಶ್ಯಾರ್ಥವು ನಿಜವಾಗಿ ಶೋಚನೀಯವಾಗಿಯೆ ಇದೆ. ಶಾಲೆಗಳಲ್ಲಿಯ ಸಂಬಳದ ಕಿಂಚಿಹುನಾ ಬಾಡಿಗೆಯ ಉಪಾಧ್ಯಾಯರು ಈ ಸರಕ್ಯುಲರಿನ ಪ್ರಕಾರ ಊರೊಳಗಿನ ಮಕ್ಕಳ ಸಭಾಪ್ರವೇಶದ ಸ್ವಾತಂತ್ರ್ಯವನ್ನು ಪಡಕೊಳ್ಳುವಂತೆ ಅವರ ಊಟ ತಿಂಡಿಯ ಜವಾಬದಾರಿಯನ್ನೂ ಕೂಡ ಪಡಕೊಳ್ಳುವ ವಿಪರ್ಯಾಸವನ್ನು ಆ ಇನ್ಸಪೆಕ್ಟರರು ಒದಗಿಸಿ ಕೊಟ್ಟಿದ್ದಾದರೆ ಈ ಬರಗಾಲದ ಆಪತ್ತಿನಲ್ಲಿ ಮಧ್ಯಪ್ರಾಂತದಲ್ಲಿಯೂ ಆ ಇನ್ಸಪೆಕ್ಟರರಿಗೆ ನಿಜವಾಗಿ ಕೃತಜ್ಞರಾಗುತ್ತಿದ್ದರೆಂದು ನಮಗೆ ತೋರುತ್ತದೆ!

೫. ಯುದ್ಧಸಾಲವನ್ನು ಎತ್ತುವ ವಿಷಯದಲ್ಲಿ ಕೆಳಗಿನ ಅಧಿಕಾರಿಗಳು ಜನತೆಯ ಮೇಲೆ ಸ್ವಲ್ಪ ಹೆಚ್ಚಿನ ಒತ್ತಾಯವನ್ನು ನಡೆಯಿಸುತ್ತಾರೆಂದು ಹಲವು ದೂರುಗಳು ಬಂಗಾಲ ಸರಕಾರದ ಕಿವಿಯ ಮೇಲೆ ಬಿದ್ದದರಿಂದ ಬಂಗಾಲ ಸರಕಾರವು ಒಂದು ಠರಾವನ್ನು ಹೊರಡಿಸಿದ ಸಂಗತಿಯನ್ನು ನಾವು ಕಳೆದ ಸಂಚಿಕೆಯಲ್ಲಿ ವಾಚಕರಿಗೆ ತಿಳಿಸಿದ್ದೇವಷ್ಟೆ. ಮುಂಬಯಿ ಪ್ರಾಂತದಲ್ಲಿಯೂ ಇಂಥ ಕೆಲವು ಹೆಚ್ಚಿನ ಒತ್ತಾಯಗಳು ನಡೆದಿವೆಂದು ಮುಂಬಯಿಯ "ಕ್ರೊನಿಕಲ್" ಪತ್ರವು ಪ್ರಕಟಿಸಿ ಅಹಮದಾಬಾದ ಜಿಲ್ಲೆಯ ರಾಮಪುರವೆಂಬ ಹಳ್ಳಿಯಲ್ಲಿ ಯುದ್ಧಸಾಲವನ್ನೆತ್ತುವಾಗ ಕೆಳ ಅಧಿಕಾರಿಗಳು ಕೆಲವು ಅಯುಕ್ತ ಪ್ರಕಾರಗಳನ್ನು ಜಾರಿಯಲ್ಲಿ ತಂದಿದ್ದಾರೆಂದು ಸರಕಾರಕ್ಕೆ ಆ ಪತ್ರದ ಸಂಪಾದಕರು ಒಂದು ಪತ್ರವನ್ನು ಬರೆದಿದ್ದರು. ಅನಂತರ ಸರಕಾರವು ಈ ಪ್ರಕರಣವನ್ನು ವಿಚಾರಣೆಯ ಬಗ್ಗೆ ಸ್ಥಾನಿಕ ಅಧಿಕಾರಿಗಳ ಹತ್ತರ ಕಳುಹಿಸಿಕೊಟ್ಟಿತು. ಅವರು ವಿಚಾರಮಾಡಿ ಸರಕಾರಕ್ಕೆ ಒದಗೊಂಡಲ್ಲಿ ಆ ವಿಚಾರಣೆಯನ್ನು ಆದರಿಸಿ ಮುಂಬಯಿ ಸರಕಾರವು ಈಗ ಒಂದು ಠರಾವನ್ನು ಪ್ರಕಟಿಸಿದೆ. ರಾಮಪುರದಲ್ಲಿ ಸಾಲವನ್ನು ಒಟ್ಟುಗೂಡಿಸುವಾಗ ಮೂರು ನಾಲ್ಕು ಜನರು ತಪ್ಪಿಸಿಕೊಳ್ಳಲು ಯತ್ನಿಸಿದ್ದಕ್ಕಾಗಿ ಅವರ ಹೆಂಗಸರಿಗೆ ಸಾರ್ವಜನಿಕ ಬಾವಿಯಿಂದ ನೀರನ್ನು ತೆಗೆದುಕೊಳ್ಳಲು ಸ್ಥಾನಿಕ ಅಧಿಕಾರಿಗಳು ಪೇದೆಗಳ ಮೂಲಕ ಪ್ರತಿಬಂಧಿಸಿದರೆಂದು ಕ್ರೊನಿಕಲ ಪತ್ರವು ಹೇಳುವ ಆರೋಪಣೆಯು ಸುಳ್ಳಾಗಿದೆ. ರಾಮಪುರದಲ್ಲಿ ಈ ಬಗ್ಗೆ ಹೊಡೆಪೆಟ್ಟು ಆದದ್ದು ಕಂಡುಬರುವದಿಲ್ಲ. ಸ್ಥಾನಿಕ ಅಧಿಕಾರಿಗಳು ಒತ್ತಾಯ ಮಾಡಿದ್ದಾಗಿ ಕಂಡುಬರುವದಿಲ್ಲ. ಕ್ರೊನಿಕಲ ಪತ್ರದ ಸಂಪಾದಕರು ಕೊಟ್ಟಿರುವ ದೂರುಗಳು ಸಂಭವಿಸಲಿಲ್ಲೆಂದು ಸರಕಾರವು ಈ ಠರಾವಿನಲ್ಲಿ ಹೇಳುತ್ತದೆ. ಮತ್ತು ಕ್ರೊನಿಕಲ ಪತ್ರದ ತಲೆಯ ಮೇಲೆ ಮುಂಬಯಿ ಸರಕಾರವು ಒಂದು ತರದ ದೋಷವನ್ನಿಟ್ಟಿದೆ. ಇದೆ ಠರಾವಿನಲ್ಲಿ ಸಾಲವನ್ನು ಅಧಿಕಾರಿಗಳು ಒತ್ತಾಯದಿಂದ ಒಟ್ಟುಗೂಡಿಸಕೂಡದು, ಅನಾವಶ್ಯಕವಾಗಿ ತಮ್ಮ ಭಾರವನ್ನು ಜನರ ಮೇಲೆ ಉಪಯೋಗಿಸಿ ಅವರಿಂದ ಹಣವನ್ನೆತ್ತಕೂಡದು ಇತ್ಯಾದಿ ವಿಧಾನಗಳನ್ನು ಪ್ರಸಂಗತಃ ಮಾಡಿದರಾದರೂ ಈ ವಿಧಾನಗಳಿಗೆ ಸದರಿ ಠರಾವಿನಲ್ಲಿ ನಿಜವಾಗಿ ಇರಬೇಕಾದ ಪ್ರಾಮುಖ್ಯವು ಹೋಗಿಹೋಯಿತು. ಮುಂಬಯಿ ಸರಕಾರವು ತನ್ನ ಠರಾವಿನಲ್ಲಿ ರಾಮಪುರದೊಳಗೆ ಯಾವ ಗಲಭೆಯೂ ಆಗಲಿಲ್ಲವೆಂದು ಹೇಳಿದಾಗ್ಯೂ "ಕಥಮಸತಃ ಸತ್ ಜಾಯೇತ" ಎಂದರೆ ಏನೂ ಇಲ್ಲದೆ, ಅಭಾವದಿಂದ ಒಂದು ಸಂಗತಿಯು ಹ್ಯಾಗಾಗುವದೆಂಬ ಉಪನಿಷದ ಪ್ರಶ್ನವು ಜನರ ಮನಸ್ಸಿನಲ್ಲಿ ಒಂದೆ ಒರುವದು.

೬. ಹಿಂದುಸ್ಥಾನದಲ್ಲಿ ಚಿಕ್ಕ ಚಿಕ್ಕ ಕೈಗಾರಿಕೆಗಳನ್ನು ಹೊರಡಿಸುವ ಅನುಕೂಲತೆಗಳ ಧಾರಾಳತೆಗಿವೆಂಬ ವಿಷಯದಲ್ಲಿ ಈಚೆಗೆ ಒಂದು ಸಂಗತಿಯು ಪ್ರಸಿದ್ಧವಾಗಿದೆ. ಇಂಥ ಅನುಕೂಲತೆಗಳ ಉಪಯೋಗವೂ ನಮ್ಮ ಪೇಟೆಯಲ್ಲಿ ಮತ್ತು ಮನೆಗಳಲ್ಲಿ ಜಪಾನ ಮುಂತಾದ ಪರದೇಶೀಯ ವಸ್ತುಗಳ ತುಂಬಿಹೋಗುವವು. ಉದಾಹರಣಕ್ಕಾಗಿ ಬೆಂಕಿಪೆಟ್ಟಿಗೆಯ ವಿಷಯವನ್ನೆ ಇಟ್ಟುಕೊಂಡು ಆಲೋಚಿಸಿದರೆ ಬೆಂಕಿಪೆಟ್ಟಿಗೆಗೆ ಮುಖ್ಯವಾಗಿ ಬೇಕಾದ ಕಟ್ಟಿಗೆಯು ಹಿಮಾಲಯದಲ್ಲಿ ಬೇಕಷ್ಟಿದೆಂದು ಹೇಳುತ್ತಾರೆ. ಆದರೆ ನಮ್ಮ ಪೇಟೆಗಳಲ್ಲಿ ನುಗ್ಗುವ ಬೆಂಕಿಪೆಟ್ಟಿಗೆಗಳು ಜಪಾನಿನವು. ೧೯೧೫-೧೬ನೇ ಇಸವಿಯಲ್ಲಿ ಜಪಾನಿನಿಂದ ೧೧೩ ಲಕ್ಷ ರೂಪಾಯಿಯ ಬೆಂಕಿಪೆಟ್ಟಿಗೆಗಳು ಬಂದವೆಂದು ಪ್ರಸಿದ್ಧವಾಗಿದೆ. ಹಿಮಾಲಯದಲ್ಲಿ ಇದಕ್ಕೆ ಉಪಯುಕ್ತವಾದ ಕಟ್ಟಿಗೆಯು ಯಥೇಷ್ಟವಿದ್ದರೂ ಅಲ್ಲಿಂದ ಅದನ್ನು ತರುವದು ಸುಸಾಧ್ಯವಲ್ಲೆಂಬುದು ನಿಜ. ಆದ್ದರಿಂದ ಈ ಬಗ್ಗೆ ಕೆಲವರು "ಭೂಮಿ ಇದ್ದಲ್ಲಿಯೆ ಕೃಷಿ" ಎಂಬ ಮಾತಿನಂತೆ ಕಟ್ಟಿಗೆಯ ಅನುಕೂಲತೆ ಇರುವ ಹಿಮಾಲಯ ಮುಂತಾದ ಕಡೆಗಳಲ್ಲಿಯೆ ಇಂಥ ಕಾರಖಾನೆಗಳನ್ನು ಹೊರಡಿಸತಕ್ಕದೆಂದು ಸೂಚಿಸುವರು. ಈ ಸೂಚನೆಯಾದರೂ ಯುಕ್ತವೇ ಸರಿ. ಸದ್ಯ ರಂಗೂನಿನಲ್ಲಿ ಈ ಬೆಂಕಿಪೆಟ್ಟಿಗೆಯ ಕೆಲವು ಕಾರಖಾನೆಗಳನ್ನು ವಿಸ್ತೃತ ಪ್ರಮಾಣದಿಂದ ಹೊರಡಿಸಿದ್ದಾರೆ. ಮತ್ತು ಅಲ್ಲಿಂದ ಕಲಕತ್ತಾ ಮತ್ತು ಮದ್ರಾಸಿನಲ್ಲಿ ಕೆಲವು ಮಾಲುಗಳು ನಮೂನೆಗಾಗಿ ಬಂದಿವೆ. ಮೈಸರಾಯ ಪ್ರಭುಗಳೂ ಈ ಕಾರಖಾನೆಯಿಂದ ಕೆಲವು ಮಾಲುಗಳನ್ನು ಅಪೇಕ್ಷಿಸಿರುವರು. ಇರಲಿ. ನಮ್ಮ ಮದ್ರಾಸ ಪ್ರಾಂತ್ಯದಲ್ಲಿ ತ್ರಾವಣಕೋರ ಮತ್ತು ಕೊಚ್ಚಿನ ಸಂಸ್ಥಾನಗಳಲ್ಲಿ ಇದಕ್ಕೆ ಉಪಯುಕ್ತವಾದ ಕಟ್ಟಿಗೆಯ ಪುರವಠೆಯಾಗಬಹುದೆಂದು ತಜ್ಞರು ಅಭಿಪ್ರಾಯಪಡುವರು. ಹಾಗೆಯೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಇದರ ಕಟ್ಟಿಗೆಯು ಉಂಟೋ ಎಂಬುದನ್ನು ಉದ್ಯೋಗಿಕ ಮಂಡಲದವರು ಶೋಧಿಸಬಹುದಾಗಿದೆ.

೭. ಡೊ. ಸರ್. ಎಸ್. ಸುಬ್ರಮಣ್ಯಮ್ ಐರ್ ಕೆ. ಸಿ. ಐ. ಇ. ಎಲ್. ಎಲ್. ಡಿ., ಮದ್ರಾಸ ಹೈ ಕೋರ್ಟಿನ ಮಾಜಿ ಎಕ್ಟಿಂಗ್ ಚೀಫ್ ಜಡ್ಜರವರು ದೇಶಬಂಧುಗಳಿಗೆ ಒಂದು ಸಂದೇಶವನ್ನು ಬರೆದಿರುವರು. ಅದೇನೆಂದರೆ: ಮದ್ರಾಸ ಪ್ರಾಂತದ ಗವರ್ನರ ದೊರೆಗಳು ಕಾಯಿದೆ ಕೌನ್ಸಿಲಿನಲ್ಲಿ ಮಾಡಿರುವ ಭಾಷಣವನ್ನು ನೀವೆಲ್ಲರೂ ಓದಿದ್ದೀರಷ್ಟೆ. ಅವರು ಆ ಭಾಷಣದಲ್ಲಿ ಹೋಮ್-ರೂಲ್-ಚಳವಳವನ್ನು ತಗ್ಗಿಸಿ ಬಿಡುವ ಕಾರ್ಯದ ಪೂರ್ವ ಸೂಚನೆಯನ್ನು ಕೊಟ್ಟಿರುವರು, ಮತ್ತು ಈ ಕಾರ್ಯದಲ್ಲಿ ಸ್ವತಃ ವ್ಯಕ್ತಿಮೂಲಕವಾಗಲಿ, ಪರಂಪರೆಯಿಂದಾಗಲಿ ಪ್ರತಿಷ್ಠಿತರಾಗಿರುವ ಎಲ್ಲ ಜನರ ಸಹಾಯ್ಯವನ್ನು ಕೇಳಿರುವರು. ನಾನು ಜವಾಬುದಾರಿಯುಳ್ಳ ಒಬ್ಬ ಸಾರ್ವಜನಿಕ ಗೃಹಸ್ಥನಾಗಿದ್ದೇನೆ. [illegible] [illegible]

ಯಿಂದ ಬಹುಮಾನಿತನಾಗಿದ್ದೇನೆ, ಹಾಗು ಒಂದು ಸಂಗತಿಯನ್ನು ನಿರ್ಣಯಿಸುವದರಲ್ಲಿ ಪೂರ್ಣ ಜಾಗ್ರತೆಯುಳ್ಳ ಮತ್ತು ಪಕ್ವವಾದ ತೀರ್ಮಾನವನ್ನು ಕೊಡುವ ವೃದ್ಧಗೃಹಸ್ಥನಾಗಿದ್ದೇನೆ. ಈ ಕಾರಣಗಳಿಂದ ಗವರ್ನರರು ಮಾಡಿಕೊಂಡಿರುವ ವಿನಂತಿಗೆ ನಾನು ಉತ್ತರವನ್ನು ಕೊಡುವೆನು. ಯಾಕೆಂದರೆ (ಈ ವಿಷಯದಲ್ಲಿ) ನನ್ನ ಹೇಳಿಕೆ ಏನಿದೆ ಎಂಬುದನ್ನು ಸರಕಾರಕ್ಕೆ ತಿಳಿಸುವುದು ನನ್ನ ಕರ್ತವ್ಯವಾಗಿದೆ. ಹೈಕೋರ್ಟಿನ ನ್ಯಾಯಾಸನವನ್ನು ಸ್ವೀಕರಿಸುವ ಮೊದಲು ನಾನು ರಾಷ್ಟ್ರೀಯ ಸಭೆಯವನಾಗಿದ್ದೆನು, ಹೀಗಿರುವದರಿಂದ ಸೆಲ್ಫ-ಗವರ್ನಮೆಂಟಾಗಲಿ ಹೋಮ್-ರೂಲಾಗಲಿ ನನಗೆ ಹೊಸ ಸಂಗತಿ ಅಲ್ಲ. ಹೋಮ್-ರೂಲನ್ನು ಬೇಗನೆ ಸ್ಥಾಪಿಸುವುದು ಈ ದೇಶದ ಸ್ವಾಸ್ಥ್ಯಕ್ಕೂ, ಸಾಮ್ರಾಜ್ಯದ ಸ್ಥಿರತ್ವಕ್ಕೂ ಆವಶ್ಯಕವಾದ್ದೆಂದು ನಾನು ನಂಬುತ್ತೇನೆ; ಮತ್ತು ಹಾಗೆಯೆ ಬಹಳ ಸಮಯದಿಂದ ನಂಬಿಕೊಂಡು ಬಂದಿದ್ದೇನೆ. ಆದ್ದರಿಂದ ಹೋಮ್-ರೂಲಿನ ಸಲುವಾಗಿ ರಾಷ್ಟ್ರೀಯ ಸಭೆಯು ಕಳೆದ ಅಧಿವೇಶನದಲ್ಲಿ ನಿಶ್ಚಯಿಸಿದ್ದಂತೆ ಸನದಶೀರ ರೀತಿಯಿಂದಲೂ (ಜನತೆಯಲ್ಲಿ) ರಾಜಕೀಯ ಶಿಕ್ಷಣವುಂಟಾಗುವ ರೀತಿಯಿಂದಲೂ ಚಳವಳವನ್ನು ನಡೆಯಿಸುವುದು ಅಗತ್ಯವಾಗಿದೆ. ಈ ನಂಬಿಕೆಯಿಂದ "ಇಂಡಿಯನ ಹೋಮ್-ರೂಲ್-ಲೀಗಿನ" ಬಹುಮಾನದ ಅಧ್ಯಕ್ಷಸ್ಥಾನವನ್ನು ನಾನು ಆನಂದದಿಂದ ಸ್ವೀಕರಿಸಿದೆನು. ಈ ಸ್ಥಾನವನ್ನು ಬಹುಮಾನಾರ್ಥವಾಗಿಯೇ ಸ್ವೀಕರಿಸಿರುವ ಕಾರಣವೇನೆಂದರೆ, ನನ್ನ ಶರೀರ ಸ್ಥಿತಿಯು ಪ್ರತ್ಯಕ್ಷವಾದ ಕಾರ್ಯವನ್ನು ಮತ್ತು ಅವಿಶ್ರಾಂತ ಶ್ರಮವನ್ನು ಮಾಡಲು ಪ್ರತಿಬಂಧಿಸುತ್ತದೆ. ನಾನು ನನ್ನ ಹೆಜ್ಜೆಗಳನ್ನು ಹಿಂದಕ್ಕೆ ತೆಗೆಯಲಾರೆನು. ಹೋಮ್-ರೂಲ್ ಲೀಗಿನ ಸಂಸ್ಥೆಯು ಕಾಯಿದೆಶೀರಲ್ಲವೆಂದು ಸಾರಿ ಹೇಳಿದರೂ ನಾನು ನನ್ನ ಈ ಸ್ಥಾನವನ್ನು ಬಿಡಲಿಕ್ಕಿಲ್ಲ. ಈ ನನ್ನ ನಿಶ್ಚಯದ ಬಗ್ಗೆ ನನ್ನ ಮೇಲೆ ಯಾವ ಸಂಕಟವೇ ಬರಲಿ, ಅದಕ್ಕೆ ನಾನು ಸಿದ್ಧನಾಗಿದ್ದೇನೆ. ಕಾರಣವೇನೆಂದರೆ ಭೂಲೋಕದ ಎಲ್ಲ ರಾಜ್ಯಗಳ ಸೂತ್ರಗಳನ್ನು ನಡೆಯಿಸುವ ಈಶ್ವರನೇ ಹಿಂದುಸ್ಥಾನಕ್ಕೆ ತಾನು ಕೊಟ್ಟಿರುವ ಸ್ವಾತಂತ್ರ್ಯದ ಹಕ್ಕನ್ನೂ ರಾಷ್ಟ್ರೀಯ ಸಭೆಯು ಉಪಯೋಗಿಸಿದ ಶಬ್ದದಿಂದ ಸ್ವರಾಜ್ಯದ ಹಕ್ಕನ್ನೂ, ಯುದ್ಧಾಂತ್ಯದಲ್ಲಿ ಸಾಮ್ರಾಜ್ಯದ ಪುನರ್ಘಟನೆಯಲ್ಲಿ ಉಚ್ಚರಿಸಲು ಹಿಂದುಸ್ಥಾನಕ್ಕೆ ಹೇಳಿರುತ್ತಾನೆ. ಹೋಮ್-ರೂಲಿನ ಸಂರಕ್ಷಣವನ್ನು ಮಾಡುವುದು ನನ್ನ ಧಾರ್ಮಿಕ ಮತ್ತು ನಾಗರಿಕ ಕರ್ತವ್ಯವಾಗಿದೆ. ಮತ್ತು ಈ ಕರ್ತವ್ಯವನ್ನೆ ನಾನು ಮಾಡುತ್ತಿರುವೆನು; ನನ್ನ ದೇಶಬಂಧುಗಳೆ, ನೀವು ಕೂಡ ಇದೇ ಕರ್ತವ್ಯವನ್ನು ಮಾಡಬೇಕಾಗಿದೆ.

ಸ್ಥಳಿಕ — ಮಂಗಳೂರು.

ಇದೇ ತಿಂಗಳ ತಾ. ೭ರಲ್ಲಿ ಬಂಟ್ವಾಳ ಸರ್ಕಲಿನ ಬಗ್ಗೆ ಒಬ್ಬ ತಾಲೂಕು ಬೋರ್ಡು ಮೆಂಬರನನ್ನು ಆರಿಸಲು ಬಂಟವಾಳದಲ್ಲಿ ನಡೆದ ಚುನಾವಣೆಯಲ್ಲಿ ಮ| ರಾ| ನರಸಿಂಹ ಮರ್ಟಭಂಡಾರಿಯವರಿಗೆ ವೋಟುಗಳು ೬೮ ಮತ್ತು ಮ| ರಾ| ಎಲ್ಲೂರು ಸಂಜೀವರಾಯರಿಗೆ ವೋಟುಗಳು ೬೯ ಸಿಕ್ಕಿಯುವೆ. ಒಟ್ಟಿಗೆ ಕೊಡೋಣಾದ ೧೧೦ ವೋಟುಗಳಲ್ಲಿ ಮೂರು ವೋಟುಗಳು ಇನ್ವೆಲಿಡ್ ಆಗಿವೆ. ಉಮೇದ್ವಾರರಿಬ್ಬರಿಗೂ ನೋಟೀಸು ಕೊಡೋಣಾಗಿ ಇವರಿಬ್ಬರ ಪ್ರತಿನಿಧಿಗಳ ಸಮಕ್ಷದಲ್ಲಿ ವೋಟುಗಳ ಪೆಟ್ಟಿಗೆಯು ತಾ. ೯-೬-೧೭ರಲ್ಲಿ ಮಂಗಳೂರಲ್ಲಿ ಡಿವಿಜನಲ್ ಆಫೀಸರರಿಂದ ತೆರಿಯೋಣಾಯಿತು. ಎಂದೀ ವಿವರವುಳ್ಳ ಈ ಪ್ರಕಟಣೆಯನ್ನು ಮಂಗಳೂರು ರೆವಿನ್ಯು ಡಿವಿಜನಲ್ ಆಫೀಸರರವರು ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು.

ಮುಂಬಯಿಯಲ್ಲಿರುವ ಮ| ರಾ| ಹಟ್ಟಂಗಡಿ ನಾರಾಯಣರಾವ್ ಬಿ. ಎ. ಬಿ. ಎಲ್. ಇವರು "ಕೊಂಕಣೀಚೊ ಮೂಳಾದರ್ಶ" An Etymological Glossary of Southern Konkani" ಎಂಬ ಹೆಸರಿನ ಒಂದು ಪುಸ್ತಕವನ್ನು ರಚಿಸಿದ್ದಾರೆ. ಇದರಲ್ಲಿ ಕೊಂಕಣಿ ಶಬ್ದಗಳು ಸಂಸ್ಕೃತ ಭಾಷೆಯಿಂದ ಹ್ಯಾಗೆ ಉಂಟಾದವುಗಳೆಂಬದನ್ನು ವಿವರಿಸಿಯದೆ. ಕ್ರಯ ಆಣೆ ೨ ಮಾತ್ರ. ಈ ಪುಸ್ತಕದ ಮಾರಾಟದಿಂದ ಹುಟ್ಟಬರುವ ಹಣವನ್ನು ಗ್ರಂಥಕರ್ತರು ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘಕ್ಕೆ ದಾನವಾಗಿ ಕೊಟ್ಟಿರುವರು. ಈ ಸಂಘದ ಸೆಕ್ರೆಟರಿಗಳಾದ ಮ| ರಾ| ಕಾರ್ನಾಡ ಸದಾಶಿವರಾವ್ ಮತ್ತು ಮ| ರಾ| ಕುದ್ಮುಲ ರಂಗರಾವ್ ಮತ್ತು ಮಂಗಳೂರು ಕೋರ್ಟಗುಡ್ಡೆಯ ಪಂಡಮಠಾಲೆಯ ಮೆನೇಜರ್ ಕೆ. ಮಾಧವನವರು ಇವರಿಂದ ಈ ಪುಸ್ತಕದ ಪ್ರತಿಗಳನ್ನು ಕೊಂಡುಕೊಳ್ಳಬಹುದು.

ಕಳೆದ ವಾರದಲ್ಲಿ ಕೊಡಿಯಾಲ್ ಬೈಲ್‌ವಾರ್ಡಿನಲ್ಲಿ ಎರಡು ಪ್ಲೇಗು ಮರಣಗಳಿದ್ದುವು.

ಬೆಂಚು ಮೆಜಿಸ್ಟ್ರೇಟರುಗಳಾಗಿದ್ದ ಮ| ರಾ| ಬೊಳಾರ ಬಾಬುರಾವ್ ಮತ್ತು ಮಹಮ್ಮದ್ ಖಾನ್ ಸಾಹೇಬರವರ ಸ್ಥಾನಗಳಲ್ಲಿ ಮ| ರಾ| ರಾ| ಕುಳ್ಳಾಲ ಸಾಂತಯ್ಯ ಕಿಣಿ ಮತ್ತು ಡಿಸ್ಟ್ರಿಕ್ಟ ಬೋರ್ಡ ಮೆಂಬರರಾದ ಎಮ್. ಮಹಮ್ಮದ್‌ರವರು ಬೆಂಚು ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ರಾಮನಾಡು ಜಿಲ್ಲೆಯಲ್ಲಿ ಪೋಲೀಸು ಸುಪರಿಂಟೆಂಡೆಂಟರಾಗಿದ್ದು ಪ್ರಕೃತ ರಜೆಯ ಮೇಲಿರುವ ಮಿ. ಜಿ. ಎಸ್. ಪಿ. ಪರ್ಸಿವಲ್ ದೊರೆಗಳವರು ರಜೆಯ ನಂತರ ಈ ಜಿಲ್ಲೆಯ ಸುಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ಮಂಗಳೂರು ರೇಂಜಿನ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟರರಾಗಿರುವ ಮ| ರಾ| ಪಂಜೆ ಮಂಗೇಶರಾವ್‌ರವರು ಇಲ್ಲಿಯ [illegible] ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರರಾಗಿಯೂ, ಈ ಶಾಲೆಯ [illegible] ಮಾಸ್ತರರಾಗಿರುವ ಮ| ರಾ| ಎಸ್. [illegible] ರಾವ್‌ರವರು [illegible] ಊರು ರೇಂಜಿನ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟರರಾಗಿಯೂ [illegible] ಯಿಸಲ್ಪಟ್ಟಿರುವರು.

[illegible]

ಮುಲ್ಕಿ:— ಈ ವರ್ಷ ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಈ ಊರನಿವಾಸಿಗಳಾದ ಮ। ರಾ। ರಾ। ಪಡೀಘಟ್ಟು ದಯಾನಂದ ಕಿಣ್ಣಿ B. A. B. E., ರವರ ಪ್ರೋತ್ಸಾಹದಿಂದ, ಈ ಊರಿನ ಗೌಡಸಾರಸ್ವತ ಬಡ ವಿದ್ಯಾರ್ಥಿಗಳ ಸಹಾಯಕ್ಕಾಗಿ ಒಂದು ಸಂಸ್ಥೆಯನ್ನು ಏರ್ಪಡಿಸುವ ಕುರಿತು ಆಲೋಚಿಸುವರೆ ಇಲ್ಲಿಯ ಗೌಡಸಾರಸ್ವತ ಯುವಕರ ಸಭೆಯು ತಾ. ೯ನೇ ಶನಿವಾರ ದಿವಸ ಸದರಿಯವರ ಅಧ್ಯಕ್ಷತೆಯಲ್ಲಿ ನೆರೆಯಿತು. ಸಭೆಯಲ್ಲಿ ಈ ವಿಷಯ ಉತ್ಸಾಹಜನಕವಾದ ಒಂದೆರಡು ಭಾಷಣಗಳಾದ ತರುವಾಯ "Moolky Gowda Saraswath Student's Poor Fund" ಎಂಬ ಹೆಸರಿನ ಒಂದು ಸಂಸ್ಥೆಯು ಸ್ಥಾಪಿಸಬೇಕಾಗಿ ನಿರ್ಣಯಿಸಲ್ಪಟ್ಟಿತು. ಮತ್ತು ಆ ಸಂಸ್ಥೆಗೆ ಪ್ರಸಿಡೆಂಟ ಮೊದಲಾದ ಕಾರ್ಯನಿರ್ವಾಹಕ ಮೆಂಬರರ ಚುನಾವಣೆಯು ಮಾಡಲ್ಪಟ್ಟಿತು. ಸಭೆಯಲ್ಲಿ ಸೇರಿದವರು ಆಗಲೆ ತಮ್ಮ ಶಕ್ತ್ಯಾನುಸಾರವಾದ ಮೊಬಲಗುಗಳನ್ನು ಪಟ್ಟಿಯಲ್ಲಿ ಹಾಕಿ ಪ್ರತಿ ತಿಂಗಳಲ್ಲಿ ಕೊಡುತ್ತೇವಾಗಿ ವಾಗ್ದಾನ ಮಾಡಿದರು. ತಾ. ಅಧ್ಯಕ್ಷರವರು ತಮ್ಮ ಭಾಷಣದಲ್ಲಿ "ಈಗಿನ ಕಾಲದಲ್ಲಿ ಇಂಥಾ ಸಂಸ್ಥೆಯನ್ನು ಸ್ಥಾಪಿಸುವದು ಎಷ್ಟರ ಮಟ್ಟಿಗೆ ಅವಶ್ಯವುಂಟೆಂಬುದನ್ನೂ, ಈ ಸಂಸ್ಥೆಯಿಂದ ಉಂಟಾಗುವ ಪ್ರಯೋಜನವನ್ನೂ, ವಿವರಿಸಿ ಇಂಥಾ ಸಂಸ್ಥೆಗೆ ಎಲ್ಲರೂ ತಮ್ಮ ಉದಾರ ಹಸ್ತದಿಂದ ಸಹಾಯ ಮಾಡಿ ಇದರ ಅಭಿವೃದ್ಧಿಯನ್ನು ಸಾಧಿಸುವದು ಪ್ರತಿ ಒಬ್ಬನ ಕರ್ತವ್ಯವೆಂದು ಒತ್ತಿ ಹೇಳಿದರು. ಸಭೆಯವರ ಅಪೇಕ್ಷೆಯಂತೆ ಇಲ್ಲಿಯ ಶ್ರೀಮಂತ ಗೃಹಸ್ಥರೂ ತಾಲೂಕು ಬೋರ್ಡು ಮೆಂಬರರೂ ಆದ ಮ। ರಾ। ರಾ। ಬೋಳ ಮಾಧವರಾಯರು ಈ ಸಂಸ್ಥೆಯ ಪ್ರಸಿಡೆಂಟರಾಗಲಿಕ್ಕೆ ಸಮ್ಮತಿಸಿರುವರು. ಈ ಬಗ್ಗೆ ಮೆಂಬರರು ಅವರಿಗೆ ಕೃತಜ್ಞರಾಗಿರುತ್ತಾರೆ. ಇಲ್ಲಿಯ ಸಂಪನ್ನ ಗೃಹಸ್ಥರಲ್ಲಿ ಹಲವರು ಈ ಸಂಸ್ಥೆಗೆ ತಮ್ಮ ಉದಾರಹಸ್ತದಿಂದ ಸಹಾಯ ಮಾಡಿರುವರಾಗಿ ತಿಳಿಸಲಿಕ್ಕೆ ಹೆಚ್ಚಿನ ಸಂತೋಷಪಡುತ್ತೇವೆ. ಇತರ ಮಹಾನುಭಾವರೂ ಇದೆ ರೀತಿ ತಮ್ಮ ಉದಾರಾಶ್ರಯವನ್ನು ಕೊಡುವರಾಗಿ ಹಾರೈಸಿಕೊಂಡಿರುತ್ತೇವೆ. ಇಲ್ಲಿಯ ಗೌಡಸಾರಸ್ವತ ಮಂಡಲಿಯಲ್ಲಿ ವಿದ್ಯಾವಂತರಾಗಿ ದೊಡ್ಡ ದೊಡ್ಡ ಉದ್ಯೋಗಗಳನ್ನು ಹೊಂದಿದ ಮಹಾನುಭಾವರು ಹಲವರಿರುವರು. ಇವರು ಈ ಸಂಸ್ಥೆಯು ಅಭಿವೃದ್ಧಿಯನ್ನು ಹೊಂದುವಂತೆ ಈ ಬಾಲಸಂಸ್ಥೆಗೆ ಬೇಕಾದ ಬುದ್ಧಿವಾದವನ್ನೂ ತಮ್ಮ ಉದಾರಹಸ್ತದಿಂದ ಸಹಾಯವನ್ನೂ ಮಾಡಿ ಇದರ ಅಭಿವೃದ್ಧಿಯನ್ನು ಚಿಂತಿಸುವರಾಗಿ ನಂಬಿಕೊಂಡಿದ್ದೇವೆ. ಈ ಸಂಸ್ಥೆಗೆ ಕಾರಣಭೂತರಾದ ರಾ। ದಯಾನಂದ ಕಿಣ್ಣಿಯರಾಗಿ ಶ್ರೀ ದೇವರು ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನೂ ಶ್ರೇಯಸ್ಸನ್ನೂ ಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ರಾ। ದಯಾನಂದ ಕಿಣ್ಣಿಯರು ಬಿ. ಇ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸಂತೋಷಾರ್ಥವಾಗಿ ಇಲ್ಲಿಯ ಸಾಹುಕಾರ ರಾ। ಹರಿರಾಮ ಕಿಣ್ಣಿಯಿಂದ "ಸ್ಟುಡೆಂಟ್ಸ್ ಪುವರ್ ಫಂಡಿನ" ಮೆಂಬರರಿಗೆಲ್ಲಾ ಚಲೋದಾದ ಟೀಪಾರ್ಟಿಯು ಈ ದಿನ ಕೊಡಲ್ಪಟ್ಟಿತು.

ಕಾಪು.— ಪಾಂಗಾಳದಲ್ಲಿ ಒಬ್ಬ ಸೆಟ್ಟಿ ಮತ್ತು ಒಬ್ಬ ಕ್ರೈಸ್ತನ ಜತೆಯಿಂದ ಕೆಲವು ಕ್ಷತ್ರಿಯರು ಚಿನ್ನದ ನಗಗಳನ್ನು ಸಂಪಾದಿಸಿ ಒಬ್ಬ ಮೊಗೇರನ ಕೂಡೆ ಒತ್ತೆಯಿಟ್ಟು ರೂಪಾಯಿ ೪೦೦-೦-೦ ಸಾಲ ಕೇಳಲು, ನಗಗಳನ್ನು ನೋಡಿದ ಸದ್ರಿ ಮೊಗೇರನಿಗೆ ಸಂಶಯ ಹುಟ್ಟಿ ಅಕ್ಕಸಾಲಿಗನ ಕೂಡೆ ತೋರಿಸಿ ಪರೀಕ್ಷಿಸಿದಾಗ ಗುಟ್ಟು ಬಯಲಾಯಿತು. ಇಬ್ಬರೂ ಮೊಗೇರನ ಕೂಡೆ ಹೇಳದೆ ಪಲಾಯನ ಸೂತ್ರರಾದರು.

ಪಾಂಗಾಳದಲ್ಲಿ ಮುದ್ದು ಪೂಜಾರಿ ಎಂಬಾತನು ಶಿವನಿಗೆ ಬಾಯಿಯಿಂದ ಶಿವದ್ರೋಹಿಯಾಗಿರುವನೆಂದು ಒಬ್ಬ ಸ್ವದೇಶಾಭಿಮಾನಿಯಲ್ಲಿ ಸೂಚಿಸಿರುತ್ತದಷ್ಟೆ. ಪೋಲೀಸಿನವರು ಸದ್ರಿ ಪೂಜಾರಿಯನ್ನು ಪತ್ತೆಮಾಡಿ, ನಂಬ್ರ ತಸ್ಕಿ ಸಬ್ ಕಲೆಕ್ಟರರಲ್ಲಿ ನಡೆದು, ಪೂಜಾರಿಗೆ ೬ ತಿಂಗಳು ಕಠಿಣ ಶಿಕ್ಷೆ, ೧೫ ರೂಪಾಯಿ ಜುಲುಮಾನೆ ಆಗುವದಾಯಿತು.

ಉದ್ಯಾವರಕ್ಕೂ ಕಾಪಿಗೂ ಮಧ್ಯಸ್ಥಳವಾದ ಪಾಂಗಾಳ ಸಾಲೆಯ ಸಮೀಪ ಒಂದು ಮೋಟಾರು ಸ್ಟೇಶನ್ ಈಗಿನ ಕಂಪೆನಿಯವರು ಇಡಲು ಯೋಚಿಸಿದರೆ, ಜನರಿಗೆ ಎಷ್ಟೋ ಅನುಕೂಲವೂ ಉಪಕಾರವೂ ಆಗುತ್ತಿತ್ತು. ಹೇಗೆಂದರೆ ಪಾಂಗಾಳದಲ್ಲಿ ಇಳಿಯುವ ಮತ್ತು ಪಾಂಗಾಳದಿಂದ ಉಡ್ಪಿ, ಮಂಗಳೂರು ಕಡೆ ಹೋಗುವವರು ಕಾಪು ಯಾ ಉದ್ಯಾವರದ ಚಾರ್ಜು ಕೊಟ್ಟು ಕಷ್ಟ ನಷ್ಟ ಪಡಬೇಕಾಗುವದು. ಪಾಂಗಾಳದಿಂದ ಉಡ್ಪಿಗೂ, ಪಾಂಗಾಳದಿಂದ ಮಂಗಳೂರಿಗೂ ಪ್ರತ್ಯೇಕ ಚಾರ್ಜನ್ನು ಏರ್ಪಡಿಸಿ ತಕ್ಕ ಸವಲತ್ತನ್ನಿಡುವ ಯೋಚನೆ ಮೋಟಾರು ಕಂಪೆನಿಯವರು ಈ ಜಾಗಗಳ ಮಾಡಿ ನೆರವೇರಿಸಿದ್ದಾದರೆ ಎಷ್ಟೋ ಉಪಕಾರವಾಗುವದು.

ಇಲ್ಲಿಯ ಪೇಟೆಯಲ್ಲಿರುವ ನರಸಿಂಹ ಶ್ಯಾನುಭಾಗರ ಅಂಗಡಿಯಲ್ಲಿ ಗುಟ್ಟಿನಿಂದ ಅಫೀಮು ಮಾರಲ್ಪಡುವದೆಂತ ಅಬ್ಕಾರಿ ಪೋಲೀಸಿನವರಿಗೆ ಸುಳಿವು ಸಿಕ್ಕಿ ಸದ್ರಿಯವರ ಅಂಗಡಿ ಜಪ್ತಿ ಮಾಡಲು ಪತ್ತೆಯಾಗದೆ ನಿರಾಶರಾದರು.

ಇಲ್ಲಿಯ ಮೋಟರು ಏಜಂಟರ ಮನೆಯ ಜಗಲಿಯಲ್ಲಿದ್ದ ಅಂಗಿ, ವಾಚು ಕಳವು ಮಾಡಿದ ತಮ್ಮು ಎಂಬಾತನನ್ನು ಉಡ್ಪಿ ಪೋಲೀಸಿನವರು ಪತ್ತೆ ಹಚ್ಚಿ ಹಿಡಿದು ನಂಬ್ರ ಮಾಡಲು ಸದ್ರಿಯನಿಗೆ ೩ ತಿಂಗಳು ಸಜೆಯನ್ನು ಉಡ್ಪಿ ಮೆಜಿಸ್ಟ್ರೇಟರು ವಿಧಿಸಿರುವರು.

ಈ ಊರಲ್ಲಿರುವ ಬೋರ್ಡು ಪಂಚಮ ಶಾಲೆಯು ಈ ವರ್ಷದ ಮಳೆಗಾಲಿಗೆ ಅಧೋಗತಿಯನ್ನು ಹೊಂದಿತು. ಪಂಚಮ ಉಪಾಧ್ಯಾಯನು ತನ್ನ ಸ್ವಂತ ಮನೆಯಲ್ಲಿ ಕ್ಲಾಸು ಮಾಡಿ ಕಲಿಸುತ್ತಿರುವನು. ಮಳೆ ಬರುವ ಮೊದಲೇ ಬೋರ್ಡಿನವರು ಕಟ್ಟೋಣ ಯೋಗ್ಯ ರೀತಿಯಲ್ಲಿ ಕಟ್ಟಿಸುವ ಆಲೋಚನೆ ಮಾಡಿದ್ದಾದರೆ ಈ ಗತಿ ಎಂದಿಗೂ ಬರುತ್ತಿದ್ದಿಲ್ಲ. ಇನ್ನು ಎಂದಿಗೆ ಯಾವ ರೀತಿ ಆಗುವದು ಎಂದು ನೋಡಬೇಕಾಗಿದೆ.

ಉಡುಪಿಯ ತರುಣ ಬ್ರಾಹ್ಮಣ ಸಂಘ.

ಈ ಸಂಘದವರು ಸಂಘದ ೩ನೆಯ ವರ್ಷದ ವರ್ಧಂತಿಯನ್ನು ಗತಿಸಿದ ಶ್ರೀ ಶೀರೂರು ಶ್ರೀ ಪಾದಂಗಳವರು ಕಟ್ಟಿಸಿದ ಅತಿ ವಿಸ್ತಾರವಾದ ಮತ್ತು ಭವ್ಯವಾದ ಭೋಜನ ಸಾಲೆಯ ಮಹಡಿಯ ಮೇಲೆ ಮ। ರಾ। ಬಿ. ಶ್ರೀನಿವಾಸ ರಾವ್ ಬಿ. ಎ. ಬಿ. ಎಲ್., ಇವರ ಅಧ್ಯಕ್ಷತೆಯಲ್ಲಿ ಈ ತಾ. ೬ರಲ್ಲಿ ಬಹು ವಿಜೃಂಭಣೆಯಿಂದ ಆಚರಿಸಿದರು. ಪರ್ಯಾಯ ಶ್ರೀ ಸೋದೇ ಶ್ರೀ ಪಾದಂಗಳವರೂ ಶೀರೂರು ಶ್ರೀ ಪಾದಂಗಳವರೂ ಬಹುಮಂದಿ ಆಚಾರ್ಯರುಗಳೂ ಮಾನ್ಯ ಮುಖ್ಯಪ್ರಾಣ ದೇವರ ಮೊದಲಾಗಿ ಬಹು ಮಂದಿ ಲೌಕಿಕ ಗೃಹಸ್ಥರುಗಳೂ, ವಿದ್ಯಾರ್ಥಿಗಳೂ ಮೊದಲಾದವರು ನೆರೆದಿದ್ದರು. ಮ। ರಾ। ಇಂಟ್ಯರ್ ಭೋಜರಾಯರೆ ಮೊದಲಾದ ಪರಸ್ಥಳದ ಕೆಲವರು ಗೃಹಸ್ಥರು ಆ ದಿನದ ಸಭೆಗೆ ಬರುವರೆ ತಮಗಿದ್ದ ಅನಾನುಕೂಲತೆಯನ್ನೂ ಸಭೆಗೆ ಮಂಗಳವನ್ನೂ ತಂತಿಮೂಲಕ ಅಥವಾ ಪತ್ರಗಳ ಮೂಲಕ ಸೂಚಿಸಿದರು. ಮ। ರಾ। ಕೆರೋಡಿ ಸುಬ್ಬರಾಯರು, ಬ್ರ. ಶ್ರೀ ರಾಘವೇಂದ್ರಾಚಾರ್ಯರು ಇವರೇ ಮೊದಲಾದ ಗೃಹಸ್ಥರು ಸಂದರ್ಭೋಚಿತ ಭಾಷಣಗಳನ್ನು ಮಾಡಿದ ಮೇಲೆ ಈ ಸಂಘ ಸ್ಥಾಪಕರಲ್ಲಿ ಪ್ರಮುಖರಾದ ಸ. ಮ. ಸ. ಕೆ. ವೆಂಕಟರಮಣಾಚಾರ್ಯರು ಶ್ರೀ ಶಾಸ್ತ್ರೀಯ [illegible] ಬರೆದು ಕಳುಹಿದ ಉಪನ್ಯಾಸವನ್ನು ಓದಿದ್ದಾಯಿತು. ಇದನ್ನು ಕೇಳಿ [illegible] ರೋಮಾಂಚಿತರಾಯಿತು. ತರುವಾಯ ಸ್ವರ್ಗವಾಸಿಗಳಾದ ಮಾನ್ಯ [illegible] ಕೃತಿಯನ್ನ, ಬೇ. ಮೂ. ಶ್ರೀನಿವಾಸ ಭಟ್ಟರು ಸಂಸ್ಕೃತ [illegible] ಮ। ರಾ। ಬಿ. ಕೃಷ್ಣರಾಯರಿಂದ [illegible] ಕೊಡಲ್ಪಟ್ಟ ಆ ಭಟ್ಟಾಕ್ಷನ ಭಾವಚಿತ್ರವನ್ನು ಪ್ರದರ್ಶನ ಮಾಡಿದರು. ನಂತರ ಸಭಾ ವರದಿಯು ವೇ. ಮೂ. ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರಿಂದ ಓದಲ್ಪಟ್ಟಿತು. ಈ ವರದಿಯ ಪ್ರಕಾರ ಈ ಸಂಘವು ೧೯೧೪ನೆ ಅಕ್ಟೋಬರ ೩ರಲ್ಲಿ ಸ್ಥಾಪಿಸಲ್ಪಟ್ಟಿತೆಂತಲೂ, ಕೆ. ವೆಂಕಟರಮಣಾಚಾರ್ಯರು ಇಲ್ಲಿರುವಾಗ ಅಭಿವೃದ್ಧಿಯಾಗುತ್ತಲಿದ್ದಿತೆಂದೂ, ಅವರು ಶ್ರೀ ಕಾಶಿಗೆ ಹೊರಟುಹೋದ ಮೇಲೆ ಕೆಲವು ಕಾಲ ಮುಮುರ್ಷಾವಸ್ಥೆಯಲ್ಲಿದ್ದಿತೆಂದೂ, ಅದು ಪೂರ್ಣವಾಗಿ ಮರಣವನ್ನೈದದಂತೆ ವೇ. ಮೂ. ಕೆ. ವಾದಿರಾಜ ಉಪಾಧ್ಯಾಯರು ಪ್ರಯತ್ನಪಡುತ್ತಿದ್ದರೆಂತಲೂ, ಕಳೆದ ಡಿಸೆಂಬರ ತಿಂಗಳಲ್ಲಿ ನಮ್ಮ ಮಾನ್ಯ ಮುನ್ಸೀಫರಾದ ಮ। ರಾ। ಮು. ಅನಂತಗಿರಿ ರಾಯರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿಸಿ ಇದನ್ನು ಪುನರುಜ್ಜೀವಿಸುವಂತೆ ಆಯಿತೆಂತಲೂ, ಅಂದಿನಿಂದ ಈ ಸಂಘಕ್ಕೆ ಮ। ರಾ। ಅರೂರು ಲಕ್ಷ್ಮೀನಾರಾಯಣ ರಾಯರು ಅಧ್ಯಕ್ಷರಾಗಿಯೂ, ವಾದಿರಾಜ ಉಪಾಧ್ಯರು ಕೋಶಾಧ್ಯಕ್ಷರಾಗಿಯೂ ಪಿ. ವಾಸುದೇವ ಉಪಾಧ್ಯರು ಕಾರ್ಯದರ್ಶಿಗಳಾಗಿಯೂ ಇರುವರೆಂದೂ ಇವರ ಮತ್ತು ಕೆಲವರು ತರುಣ ವಿದ್ಯಾರ್ಥಿಗಳ ಪ್ರಯತ್ನಗಳಿಂದ ಇದು ದಿನೆ ದಿನೆ ಅಭಿವೃದ್ಧಿಯಾಗುತ್ತಿದೆ ಎಂದೂ, ಪ್ರಕೃತ ಇದರಲ್ಲಿ ೯೪ ಸಂಸ್ಕೃತ ಪುಸ್ತಕಗಳೂ, ೧೪೫ ಕನ್ನಡ ಪುಸ್ತಕಗಳೂ ೪೦೧ ಇಂಗ್ಲಿಷ್ ಪುಸ್ತಕಗಳೂ, ಇವುಗಳಲ್ಲದೆ ಕೆಲವು ಇಂಗ್ಲಿಷ್ ಸಂಸ್ಕೃತ, ಕನ್ನಡ ವರ್ತಮಾನ ಪತ್ರಿಕೆಗಳನ್ನೂ, ಮಾಸಪತ್ರಿಕೆಗಳನ್ನೂ ತರಿಸುತ್ತಿರುವದೆಂದೂ, ಕೆಲವರು ಇಂಥವನ್ನು ಉಚಿತವಾಗಿ ಕೊಡುತ್ತಿರುವರೆಂದೂ ವರ್ಷಾಂತ್ಯದಲ್ಲಿ ಜಮಾ ರೂಪಾಯಿ ೧೯೭-೭-೬ ಖರ್ಚಿನ ರೂಪಾಯಿ ೧೩೩-೦-೬ ಶಿಲ್ಕು ರೂಪಾಯಿ ೬೪-೭-೦ ಎಂದೂ ಈ ವರೆಗೆ ೩೦ ಸಂಸ್ಕೃತ ಸಭೆಗಳೂ ೩೧ ಕನ್ನಡ, ೩೧ ಇಂಗ್ಲಿಷ್ ಸಭೆಗಳೂ ನಡೆದು, ಉಪಯುಕ್ತಗಳಾದ ಅನೇಕ ವಿಷಯಗಳು ಚರ್ಚಿಸಲ್ಪಟ್ಟವೆಂದೂ ಅನೇಕ ಉಪನ್ಯಾಸಗಳಾದವೆಂದೂ ತಿಳಿದು ಬಂತು. ತರುವಾಯ ಅಧ್ಯಕ್ಷರ ಭಾಷಣವೂ ಸಭಿಕರಿಗೂ ಇದರ ಪೋಷಕರಿಗೂ ವಂದನೆಗಳು ಅರ್ಪಿಸಲ್ಪಟ್ಟವು. ಶ್ರೀ ಸೋದೇ ಶ್ರೀ ಪಾದಂಗಳವರೂ ವರ್ಷಕ್ಕೆ ರೂಪಾಯಿ ೧೦, ಶ್ರೀ ಶೀರೂರು ಶ್ರೀ ಪಾದಂಗಳವರು ವರ್ಷಕ್ಕೆ ರೂಪಾಯಿ ೬ರಂತೆ ಕೊಡುತ್ತ ಬರುವದಾಗಿ ಸಭೆಯಲ್ಲಿ ಅಪ್ಪಣೆ ಕೊಡಿಸಿದರು. ನಂತರ ಸಭೆಯ ಮುಕ್ತಾಯವಾಗಿ ಕೆಲವರು ತರುಣರು ಸಂಸ್ಕೃತದಲ್ಲಿ ಸಂಭಾಷಣ ನಾಟಕವನ್ನೂ ಬಹು ರಸವತ್ತಾಗಿ ಆಡಿ ತೋರಿಸಿ ಸಭಿಕರನ್ನು ಸಂತೋಷಪಡಿಸಿದರು. ಇವರಿಗೆ ಸರ್ವರೂ ಪುಸ್ತಕ ರೂಪಕವಾಗಿಯೂ ದ್ರವ್ಯ ರೂಪವಾಗಿಯೂ ಸಹಾಯ ಮಾಡಬೇಕಾಗಿ ಪ್ರಾರ್ಥಿಸಲ್ಪಟ್ಟಿತು.

ಮೆಂಬರರಲ್ಲೊಬ್ಬ.

ನಮ್ಮ ಜಿಲ್ಲೆಯಲ್ಲಿ ಎತ್ತಲ್ಪಟ್ಟ ಯುದ್ಧಸಾಲದ ವಿವರ.

ಏಟ್ಟು:—ಪಾದೆಕಲ್ಲು ಶಂಕರನಾರಾಯಣ ಭಟ್ಟ ರೂ ೨೦೦; ಮಡಿಮಾಲ ಶಂಭಭಟ್ಟ ರೂ. ೧೦೦; ಕೊಂಪೆಬಂಜೆ ಗೋವಿಂದ ಭಟ್ಟ ರೂ. ೨೦೦; ಪದ್ಮಮುಂಭಟ್ಟ ರೂ. ೧೦೦; ಅಲಂಗಾರು ಅಪ್ಪಣ್ಣ ಯಾನೆ ತಿಮ್ಮಣ್ಣ ಭಟ್ಟ ರೂ. ೧೦೦; ಮಂಕುಡೆ ಕೃಷ್ಣಾಚಾರ್ಯ ರೂ ೫೦೦; ಕಟ್ಟಿನ ಹಿತ್ಲು ಶಂಕರ ಭಟ್ಟ ರೂ ೨೦೦; ಪಾದೆಕಲ್ಲು ಕೃಷ್ಣಭಟ್ಟ ರೂ. ೧೦೦; ಹನುಮಂತ ಮಹಾಬಲ ಸೆಟ್ಟಿ ರೂ. ೫೦೦;

ಕಾರ್ಕಳ ತಾಲೂಕು ತಹಸೀಲದಾರರ ಮೂಲಕ ಎತ್ತಲ್ಪಟ್ಟ ಸಾಲಗಳ ಮೊಬಲಗು ತಾ ೭-೬-೧೭ಕ್ಕೆ ರೂ. ೩೦,೦೦೦ ಆಗಿದೆ.

ಕರ್ನಾಟಕ ಸಾಹಿತ್ಯ ಪರಿಷತ್ತು.

ಮೈಸೂರು ಶ್ರೀಮನ್ ಯುವರಾಜರವರ ಭಾಷಣ.

ಕನ್ನಡ ಭಾಷೆಯ ಅಭಿವೃದ್ಧಿಯಲ್ಲಿ ಉದ್ಯುಕ್ತರಾಗಿರುವ ನೀವುಗಳು ನಮ್ಮನ್ನು ಈ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸಭೆಯನ್ನು ಉಪಕ್ರಮಿಸಲು ಬರಮಾಡಿಕೊಂಡು ಸುಸ್ವಾಗತವನ್ನು ಬಯಸಿರುವುದಕ್ಕಾಗಿ ಬಹಳ ಸಂತೋಷಪಡುತ್ತೇವೆ.

ಸಾಮಾನ್ಯವಾಗಿ ಭರತಖಂಡದಲ್ಲಿ ಆಯಾ ಕಾಲದಲ್ಲಿ ನಡೆದ ವಿಪ್ಲವನಗಳಿಂದಲೂ ಇಂಗ್ಲಿಷ್ ವಿದ್ಯಾಪ್ರಚಾರದಿಂದಲೂ ಪಶ್ಚಿಮ ದೇಶದ ಗ್ರಂಥಶಾಸ್ತ್ರಾದಿಗಳಲ್ಲಿ ಉಂಟಾದ ಉತ್ಸಾಹದಿಂದಲೂ ದೇಶಭಾಷೆಗಳ ವ್ಯಾಸಂಗವು ಮಲಿನವಾದದ್ದು ಎಲ್ಲರಿಗೂ ತಿಳಿದೇ ಇದೆ. ಪ್ರಕೃತದಲ್ಲಿ ತಕ್ಕಮಟ್ಟಿಗೆ ಇಂಗ್ಲಿಷ್ ವಿದ್ಯಾವ್ಯಾಸಂಗವು ಇಂಡಿಯಾ ದೇಶದ ಏಳಿಗೆಗೆ ಅತ್ಯಂತ ಅವಶ್ಯಕವಾಗಿರುವ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಪ್ರಜಾಸಾಮಾನ್ಯಕ್ಕೆ ಶೀಘ್ರವಾಗಿ ಜ್ಞಾನೋದಯವನ್ನುಂಟುಮಾಡಲು ಇಂಗ್ಲಿಷ್ ಭಾಷೆಯು ದೇಶಭಾಷೆಗಳಂತೆ ಉಪಯೋಗವಾಗುವುದಿಲ್ಲ. ಈಗಿನ ನವೀನ ಶಾಸ್ತ್ರಗಳ ಜ್ಞಾನವನ್ನು ಪ್ರಜಾಸಾಮಾನ್ಯಕ್ಕೆ ಉಂಟುಮಾಡಬೇಕಾದರೆ ದೇಶಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿ ಅವುಗಳಲ್ಲಿ ಅವರಿಗೆ ಅಭಿರುಚಿ ಉಂಟಾಗುವಂತೆ ಮಾಡುವುದೇ ಸುಲಭೋಪಾಯವಾಗಿದೆ. ಈ ವಿಷಯವನ್ನು ತಿಳಿದು ನೀವು ಸಂಭವಿಸಿದ್ದ ಸಮಾಜವರ ಇಚ್ಛಾನುಸಾರವಾಗಿ ಈ ಪರಿಷತ್ತನ್ನು ಏರ್ಪಾಡು ಮಾಡಿ ನವೀನ ಗ್ರಂಥ ನಿಘಂಟುಗಳ ರಚನೆ ಮತ್ತು ಗ್ರಂಥಕರ್ತರಿಗೆ ಬಹುಮಾನ ಇವೇ ಮೊದಲಾದ ಭಾಷಾಪ್ರೋತ್ಸಾಹಕರವಾದ ಕಾರ್ಯಗಳಲ್ಲಿ ಉದ್ಯುಕ್ತರಾಗಿರುತ್ತೀರಿ. ಈ ಉದ್ದೇಶವನ್ನು ನೆರವೇರಿಸುವುದಕ್ಕಾಗಿಯೆ. ಸರಕಾರದವರೂ ಕೂಡ ಪಾಠಶಾಲೆಗಳಲ್ಲಿ ಪಾಠಕ್ರಮಗಳನ್ನು ತಿದ್ದುಪಾಟು ಮಾಡಿ ಗ್ರಂಥಕರ್ತರಿಗೂ ಈ ಪರಿಷತ್ತಿಗೂ ಸಹಾಯಮಾಡಿರುತ್ತಾರೆ. ಯಾವ ಒಂದು ಜನಾಂಗದವರು ಎಷ್ಟೆ ಕೆಳಗೆ ಬೀಳಬೇಕಾದರೆ ಆವರ ದೇಶಭಾಷೆಯೇ ಅದಕ್ಕೆ ಒಂದು ಮುಖ್ಯ ಕಾರಣವಾಗಿಯೂ ಚಿಹ್ನೆಯಾಗಿಯೂ ಇರುತ್ತದೆ. ಅದರಿಂದ ಪರಸ್ಪರ ಐಕಮತ್ಯವೂ ಸಾಭ್ರಾತೃತ್ವವೂ ಉಂಟಾಗುವುದು ಎಲ್ಲರಿಗೂ ತಿಳಿದೇ ಇದೆ.

ನಮ್ಮ ಕನ್ನಡ ದೇಶದ ಚರಿತ್ರೆಯಲ್ಲಿಯೂ ಪರಂಪರಾಗತವಾದ ಅಭಿಪ್ರಾಯದಲ್ಲಿಯೂ ಸ್ವಭಾವಿಕ ಗುಣಗಳಲ್ಲಿಯೂ ಪ್ರೀತಿಯುಳ್ಳ ಯಾವ ಹಿತೈಷಿಯೂ ಮೇಲ್ಕಂಡ ಸಭೆಯು ಸಕಾಲದಲ್ಲಿ ಹುಟ್ಟಿತೆಂದು ಹೇಳದೆ ಇರಲಾರನು.

ಇದುವರೆವಿಗೂ ನೀವು ಮಾಡಿರುವ ಕಾರ್ಯವು ವಿಶೇಷವಾಗಿ ಇಲ್ಲದೆ ಇದ್ದಾಗ್ಯೂ ನೀವು ಉತ್ಸಾಹಭಗ್ನರಾಗಲು ಕಾರಣವಿಲ್ಲ. ನೀವು ಹಿಡಿದಿರುವ ಕಾರ್ಯವು ಮಹತ್ತರವಾದದ್ದು. ಆದಕಾರಣ ಪ್ರಥಮತಃ ನೀವೆಲ್ಲರೂ ಏಕಮನಸ್ಕರಾಗಿ ಸುಲಭೋಪಾಯಗಳನ್ನು ಏರ್ಪಾಡು ಮಾಡಿಕೊಂಡು ಪ್ರಾರಂಭಮಾಡಬೇಕಾದರೆ ಸ್ವಲ್ಪಕಾಲ ಸ್ವಾಭಾವಿಕವಾಗಿ ಬೇಕಾಗಿರುವುದೇನೂ ಆಶ್ಚರ್ಯವಲ್ಲ.

ಸುಲಭವಾದ ಹೊಸ ಕನ್ನಡದ ಅಭಿವೃದ್ಧಿಗೆ ಕುಂದಕ ಬಾರದಂತೆ ಹಳೆಗನ್ನಡದ ರೂಪಗಳನ್ನು ಎಷ್ಟುಮಟ್ಟಿಗೆ ಪುನಃ ಉಪಯೋಗಕ್ಕೆ ತರಬಹುದು; ಕನ್ನಡ ಭಾಷೆಯು ಉಪಯೋಗದಲ್ಲಿರುವ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಅಲ್ಲಲ್ಲೆ ಮಾತ್ರ ವಾಡಿಕೆಯಾಗಿರುವ ಮಾತುಗಳನ್ನು ಹೊಂದಿಸಿ ಮಾಡಿ ಏಕರೀತಿಯಾಗುವದಕ್ಕೋಸ್ಕರ ಏನು ಮಾಡಬೇಕು; ಹ್ಯಾಗೆ ಗ್ರಂಥಗಳನ್ನು ಅಭಿವೃದ್ಧಿಪಡಿಸಬಹುದು; ನವೀನವಾದ ಅಭಿಪ್ರಾಯಗಳನ್ನು ತಿಳಿಯಪಡಿಸುವುದಕ್ಕೆ ಈಗ ತಕ್ಕ ಪುಸ್ತಕಗಳು ಇಲ್ಲದೆ ಇರುವ ಕೊರತೆಯನ್ನು ಹ್ಯಾಗೆ ಹೋಗಲಾಡಿಸಬಹುದು; ಗ್ರಂಥಗಳನ್ನು ಓದುವುದರಲ್ಲಿಯೂ ಬರೆಯುವುದರಲ್ಲಿಯೂ ಜನಗಳಿಗೆ ಆಸಕ್ತಿಯನ್ನು ಹ್ಯಾಗೆ ಹುಟ್ಟಿಸಿ ಅಭಿವೃದ್ಧಿಪಡಿಸಬೇಕು; ಬರೆದು ಪ್ರಕಟಿಸಿರುವ ಪುಸ್ತಕಗಳಿಗೆ ಗಿರಾಕಿ ಉಂಟಾಗುವುದಕ್ಕೋಸ್ಕರ ಏನು ಪ್ರಯತ್ನಗಳನ್ನು ಮಾಡಬೇಕು, ಇವೇ ಮೊದಲಾದ ವಿಷಯಗಳಿಗೆ ಪರಿಷತ್ತಿನವರು ಮುಂದೆ ವಿಶೇಷ ಗಮನ ಕೊಡುವರೆಂದು ನಂಬುತ್ತೇವೆ.

ಇತರ ಕರ್ನಾಟಕ ದೇಶಗಳಿಂದ ಪ್ರತಿನಿಧಿಗಳು ಬಂದು ಈ ಸಭೆಯಲ್ಲಿ ಸೇರಿರುವುದು ಬಹಳ ಸಂತೋಷಕರವಾಗಿದೆ. ಈ ಪರಿಷತ್ತಿನ ಉದ್ದೇಶಗಳು ನೆರವೇರುವುದಕ್ಕೆ ಅವರುಗಳ ಸಹಾಯವು ಆವಶ್ಯಕ. ಮೈಸೂರು ದೇಶದವರು ಇತರ ಕನ್ನಡ ದೇಶಗಳ ಜನಗಳೊಡನೆ ಸೇರಿ ಪರಸ್ಪರ ಸಂಬಂಧವು ಹೆಚ್ಚುವುದಕ್ಕಾಗಿಯೂ ಆ ದೇಶಗಳ ಜನಗಳ ಅನುಕೂಲ್ಯಕ್ಕಾಗಿಯೂ ಆ ಸ್ಥಳಗಳಲ್ಲಿ ಯುಕ್ತವಾದ ಪ್ರದೇಶಗಳಲ್ಲಿ ಕೆಲವು ವರುಷಗಳು ಈ ಸಭೆಯನ್ನು ನಡಿಸಬಹುದೇ ಎಂಬುವ ಅಂಶವನ್ನು ನೀವು ಯೋಚಿಸಬಹುದು.

ಆ ಸ್ಥಳಗಳ ಪ್ರತಿನಿಧಿಗಳ ಸಂಖ್ಯೆಯು ಕಡಿಮೆಯಾಗಿದೆ. ಇದು ದಿನೇ ದಿನೇ ಹೆಚ್ಚಿ, ಎಲ್ಲಾ ಕನ್ನಡ ಜನಗಳಿಗೂ ಉಪಯೋಗವಾಗಿರುವ ಈ ಕಾರ್ಯದಲ್ಲಿ ನಾನಾ ಕನ್ನಡ ಪ್ರಾಂತ್ಯಗಳ ಪರಸ್ಪರ ಸಹಾಯವು ಇತಃಪರ ವಿಶೇಷವಾಗಿ ಉಂಟಾಗದೇ ಕೆಂದು ನಾವು ಹಾರೈಸುತ್ತೇವೆ.

ಈ ಸಭೆಯವರು ಕೈಕೊಂಡಿರುವ ಮಹತ್ಕಾರ್ಯವು ಸಾಂಗವಾಗಿ ನೆರವೇರುವುದಕ್ಕೆ ನೀವು ಕೇಳುವಂತೆ ವಿಶೇಷವಾದ ದ್ರವ್ಯಸಹಾಯವು ಬೇಕಾಗಿರುವುದಲ್ಲದೆ, ತಮ್ಮ ಕಾಲವನ್ನೆಲ್ಲ ಈ ಸಭಾಕಾರ್ಯಕ್ಕೆ ಮನಃಪೂರ್ವಕವಾಗಿ ಉಪಯೋಗಿಸಿ ಉತ್ಸಾಹದಿಂದ ಕೆಲಸಮಾಡುವವರೂ ಬೇಕಾಗಿದೆ. ವರ್ಷಕ್ಕೊಂದಾವರ್ತಿ ಸಭೆಯು ಸೇರಿ ಒಳ್ಳೇ ತೀರ್ಮಾನಗಳನ್ನು ಮಾತ್ರ ಮಾಡಿ ತದನಂತರ ಆ ವರ್ಷದಲ್ಲೆಲ್ಲಾ ನಿರಂತರವಾಗಿ ಕೆಲಸಮಾಡದೆ ಹೋದರೆ ವಿಶೇಷ ಪ್ರಯೋಜನ ಉಂಟಾಗಲಾರದು. ಕರ್ನಾಟ ಜನಾಂಗದ ನಡೆನುಡಿಗಳ ವೃದ್ಧಿಸ್ಥಿತಿಯನ್ನು ತೋರ್ಪಡಿಸುವ ಸದ್ಗ್ರಂಥಗಳು ಕನ್ನಡ ಭಾಷೆಯಲ್ಲಿಯೇ ಇರುತ್ತವೆ. ದೇಶಾಭಿಮಾನಿಗಳಾಗಿಯೂ ವೃದ್ಧಾಚಾರಗಳಲ್ಲಿ ವಿಶ್ವಾಸವುಳ್ಳವರಾಗಿಯೂ ಇರುವ ಯಾರುತಾನೆ ಕನ್ನಡ ಭಾಷೆಯ ಅಭಿವೃದ್ಧಿಯಲ್ಲಿ ಉದಾಸೀನವಮಾಡುತ್ತಾರೆ. ನೀವು ಕೈಕೊಂಡಿರುವ ಕಾರ್ಯವು ಶ್ಲಾಘ್ಯವಾದದ್ದು. ಅದನ್ನು ನೆರವೇರಿಸುವ ವಿಷಯದಲ್ಲಿ ನಿಮಗೆ ಅನೇಕ ತೊಂದರೆಗಳು ಉಂಟಾಗಬಹುದು. ಆದಾಗ್ಯೂ ನೀವು ಅಧೈರ್ಯಪಡುವುದಕ್ಕೆ ಕಾರಣವಿಲ್ಲ. ಬಂಗಾಳ ಮತ್ತು ಮಹಾರಾಷ್ಟ್ರ ಭಾಷೆಗಳು ಕಾಲಾನುಸಾರವಾಗಿ ಅಭಿವೃದ್ಧಿ ಪಡಿಸಲ್ಪಟ್ಟಿವೆ. ಆಂಧ್ರರೂ ಕೂಡ ತಕ್ಕಮಟ್ಟಿಗೆ ತಮ್ಮ ಭಾಷೆಯನ್ನು ಅಭಿವೃದ್ಧಿಪಡಿಸಿರುತ್ತಾರೆ. ಹೀಗೆ ಇತರ ಪ್ರಾಂತ್ಯಗಳ ಜನಗಳು ಇಷ್ಟುಮಟ್ಟಿಗೆ ಕಾರ್ಯಸಾಧನೆಯನ್ನು ಮಾಡಿಕೊಂಡಿರುವಾಗ ನೀವು ಅವರಂತೆಯೇ ಕ್ರಮವಾದ ಏರ್ಪಾಡನ್ನು ಆಲೋಚಿಸಿಕೊಂಡು ಶ್ರದ್ಧೆಯಿಂದ ಕೆಲಸವನ್ನು ಮಾಡಿದರೆ ನಿಮ್ಮ ಉದ್ದೇಶವು ಸಿದ್ಧಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಮ। ರಾ। ಎಚ್. ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ನೀವು ಈಗ ಇರಬಹುದಾದ ನ್ಯೂನತೆಗಳಿಗೆ ಗಮನವನ್ನು ಕೊಟ್ಟು ಉತ್ತಮವಾದ ಏರ್ಪಾಡುಗಳನ್ನು ಮಾಡಿಕೊಂಡು ವಿಶೇಷ ದಕ್ಷತೆಯಿಂದ ಕಾರ್ಯಸಾಧನೆ ಮಾಡಲು ಶಕ್ತರಾಗಿ ಈಗಿನ ಮತ್ತು ಮುಂದಿನ ಕನ್ನಡಿಗರ ಶಾಶ್ವತವಾದ ಕೃತಜ್ಞತೆಗೆ ಪಾತ್ರರಾಗುವಿರೆಂಬ ಅಭಿಪ್ರಾಯದಿಂದ ನಾವು ಈ ಪರಿಷತ್ತಿನ ಪ್ರಾರಂಭ ಮಹೋತ್ಸವವನ್ನು ಬೆಳಸಿರುತ್ತೇವೆ.

NOTICE.

Is hereby given for the information of the public that owing to the dearth of the raw materials the price for tiles will be increased by Rs. 4/ per thousand for I and II class and Rs. 10/ per thousand for ridge tiles, from 1st July 1917.

Jeppo Tile Works,
MANGALORE,
12th May 1917.

J. H. Morgan & Son,

ಕುಮಠಾಚಾರ್ಯರ ಅರ್ಥಸಮೇತವಾದ

ಸಂಸ್ಕೃತಗ್ರಂಥಮಾಲೆ.

ಶ್ರೀಹರಿನೃಸಿಂಹಾಷ್ಟಕ ಸ್ತೋತ್ರ ೬ ಪೈ, ಕಾರುಣ್ಯಾಷ್ಟಕ ೧ ಆಣೆ, ವ್ಯಾಪಾರಿವೇದಾಂತ ೯ ಪೈ, ವ್ಯಾಪಾರಿಧ್ಯಾನಯೋಗ ೧ ಆಣೆ, ಧನಲಕ್ಷ್ಮೀಸ್ತೋತ್ರಾಷ್ಟಕ ೧ ಆಣೆ, ಮಂಗಳೂರು ಶ್ರೀವೆಂಕಟರಮಣ ದೇವರ ಅಷ್ಟಕ ಮೂಲಮಾತ್ರ ೩ ಪೈ, ಅಶ್ವಧಾಟೀಸ್ತುತಿ ಕೊಂಕಣಾರ್ಥ ಸಮೇತ ೩ ಪೈ.

ವಿಳಾಸ:—

ನರಸಿಂಹ ವಾಸುದೇವ ಭಟ್ಟ,
ರಥಬೀದಿ, ಮಂಗಳೂರು.

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ	6— 4—0	ರಿಂದ	6—10—0
ಗುಡ್ಡೆ ಸುಗ್ಗಿ	5—10—0	,,	6— 2—0
ರಾಶಿ	5— 4—0	,,	5— 8—0
ಅವ್ವಲ್ ಬೆಳ್ತಿಗೆ	6— 4—0	,,	6— 8—0
ಗುಡು ಬೆಳ್ತಿಗೆ	5—10—0	,,	5—14—0
ರಂಗೂನು ಬೆಳ್ತಿಗೆ ಗೋಣಿ ೧ರ	9— 8—0	,,	[illegible]—12—0
ಗೋಧಿ ಗೋಣಿ ೧ರ	14— 8—0	,,	15— 0—0
ಹುರುಳಿ ಗೋಣಿ ೧ರ	6— 0—0	,,	7— 0—0
ಕಡಲೆ ಗೋಣಿ ೧ರ ಬೊಂಬಾಯಿ	9— 8—0	,,	10— 0—0
ತೊಗರಿ ಗೋಣಿ ೧ರ			10—8—0
ತೊಗರಿ ಬೇಳೆ ಗೋಣಿ ೧ರ 11—0—0	12— 8—0	,,	15— 8—0
ಉದ್ದು ಗೋಣಿ ೧ರ	11— 8—0	,,	11—12—0
[illegible]		,,	33—12—0
ಉಪ್ಪು ಗೋಣಿ ೧ರ	5— 4—0	,,	5—14—0
ಮೆಣಸು ಖಂಡಿ ೧ರ		,,	65— 0—0
ಕೊಬ್ಬರಿ ಖಂಡಿ ೧ರ			16— 8—0
ಎಳ್ಳಿಂಡಿ ಖಂಡಿ ೧ರ ಬೊಂಬಾಯಿ	28—12—0	,,	36— 4—0
ಕೊಬ್ರಿ ಎಣ್ಣೆ ಮಣ ೧ರ	5— 4—0	,,	6— 0—0
ಎಳ್ಳೆಣ್ಣೆ ಮಣ ೧ರ (ಕುರಾಸನ)		,,	4— 6—0
[illegible] ಎಣ್ಣೆ ಬೆಟ್ಟಿಗೆ ೧ರ	6—11—0	,,	7— 9—0
ಮೋರಿಸ್ ಸಕ್ಕರೆ ಮಣ ೧ರ	5—7—0	,,	5— 8—0
ಕಾಫಿ ಖಂಡಿ ೧ರ	150—0—0		165—0—0
ಹೊಸಬೆಲ್ಲ ಖಂಡಿ ೧ರ	72— 0—0	,,	78— 0—0
ಗೇರುಬೀಜ ಮುಡಿ ೧ರ		,,	[illegible]—10—0
ಅಡಿಕೆ ಖಂಡಿ ೧ರ	105—0—0	,,	110— 0—0
[illegible] ಮುಡಿ ೧ರ	31— 0—0	,,	34— 8—0
[illegible] ಮುಡಿ ೧ರ		,,	34— 0—0
[illegible] ೧ರ	23—8—0	,,	24— 0—0
[illegible] ಮುಡಿ ೧ರ		,,	5— 4—0
[illegible] ಖಂಡಿಗೆ			235—0—0

K. B. RELE & Cos.,—BOMBAY

Estd—1888 ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೇ ... ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಕ್ಲೇಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚ ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ನಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಪ್ಪಿಗಳೂ, ಬಿಸುಮುಗಳೂ, ಬಾಯಿಗೆ ಮತ್ತು ಅಂಗೈಗೆ ಹೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈಕಾಲುಗಳುರಿಯೋಣ, ಕೈಮೇಲೆ ಕಪ್ಪು ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,
ಗಿರಗಾಂವ ನಂ. ೪ ಮುಂಬಯಿ.

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ ಕೆಲವು ಔಷಧಗಳು.

ಇಕ್ಲಿಪ್ಸ್ ಡ್ರಾಪ್ಸ್ ಸೇವನೆಯಿಂದ ಹಲವು ಬಗೆಯ ರೋಗಿಗಳು ಚೇತರಿಸಿಕೊಂಡಿದ್ದಾರೆಂತ ಸಿದ್ಧಾಪುರದ ವೆಂ. ಶ್ರೀನೀರರು ಬರೆದಿರುತ್ತಾರೆ. —

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗಕು ಹತ್ತಿಕೊಳ್ಳದು.

ಕ್ರಯ 50 ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-6-0. ವಿ. ಪಿ. ಬೇರೆ.

ಎಂಟಿಸ್ನೇಕ್ ಬೈಟ್:- ಈ ಔಷಧಿಯು ನಾಗರಹಾವು, ಕೊಳಕುಹಾವು ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಸಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡದವರು ಒಂದೇ ತಾಸಿನಲ್ಲಿ, ಚೇಳು ಕಡದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1. ವಿ. ಪಿ. ಬೇರೆ.

ಟೂರಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಕುರುಹುಗಳು ಕಂಡರೆ ತಿಳಿದು. ಯಾ ತಿಳಿಯದ ರೀತಿಯಲ್ಲಿ ಧಾತುನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೂರಕಬ್ ಸೇವಿಸಿರಿ.

ಕ್ರಯ ಸೀಸೆ 1ಕ್ಕೆ ರೂ 1—8—0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರಾಪ್ಸ್:— ಇದು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳನ್ನು ತಪ್ಪದೆ ಗುಣಮಾಡುತ್ತದೆ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0—6—0. ವಿ. ಪಿ. ಬೇರೆ.

☞ ಇಕ್ಲಿಪ್ಸ್ ಬಾಮ್, ಕಾಜಾ ಯುಕಲಿಪ್ಟಸ್ ತೈಲ, ಮೂಲವ್ಯಾಧಿ, ಅಂಡ್ರವಾಯು, ಅಂಡವೃದ್ಧಿ ಮೊದಲಾದ ಹಲವು ರೋಗಗಳಿಗೆ ಬೇಕಾದ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 10, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಎಣ್ಣೆಯನ್ನು ಶೇರು ಯಾವಾಗಲೂ ಕೆತದಂತೆ ಬಹಳ ಸುವಾಸನೆಯಾಗಿ ತಯಾರಿಸಿತ್ತು. 1 ಶೀಸೆ ಸುವಾಸ 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವಂಶಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರೀಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟಿನವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ" ಇದ ಸೇವನೆಯಿಂದ — ವೀರ್ಯ ಕ್ಷೀಣನಂತೆ ಇದ್ದರೂ, ಸ್ವರ್ಶೇಂದ್ರಿಯ ಬಾಧೆಯೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಯಾವ ವೇಳೆಗೂ ವೈದ್ಯರ ಸಮಯವನ್ನು ಕಾದು ತೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಇ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ಎಗಿಯರಿಪೇಟ್ ನಂ. 2, ಚೆಂಗ್ಲೆ ಇವರು ಬರೆದಿರುವುದು. ನಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದವರಲ್ಲಿ ... ಅಜೀರ್ಣ, ಮಲಬದ್ಧತೆ, ಹಕ್ಕೆಯ ನೋವು, ಹೊಟ್ಟೆನೋವು, ಬಹಳ ... ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ... ವುದುತ್ತಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ... [illegible]

... ರೋಗಗಳಿಗೆ ... ಆಯುರ್ವೇದೀಯ ... [illegible]

ವಿಳಾಸ— ಶ್ರೀ ... ವೈದ್ಯಶಾಲಾ, ... [illegible]

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನ ನಡೆಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ನೆಪ ಹೇಳುವುದಕ್ಕೆ ಕಡೆಯಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ಬೇಕಾದ ದೇಶಕಾದ ಪೆನಲ್ ಕೋಡು, ಕ್ರಿಮಿನಲ್ ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟು, ಸ್ವತ್ತುಗಳ ಪರಭಾರೆ ಆಕ್ಟ್, ರಿಜಿಸ್ಟ್ರೇಶನ್ ಆಕ್ಟ್ ಮತ್ತು ಲಿಮಿಟೇಶನ್ ಆಕ್ಟು, ಸ್ಟಾಂಪ್, ... ಆಕ್ಟ್, ಹಿಂದೂ ಲಾ, ... [illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚುಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಗಳಾದ ಸ್ತ್ರೀಯರಿಗೆ ಉಂಟಾಗುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ, ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ,

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಗುಳಿಗೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವುದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲದಲ್ಲಿಯೂ ಮಲಸಂಬಂಧವನ್ನು ... ವಾರ್ಧಕ್ಯ ಇವು ... ಕ್ರಯ ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯ... ಮುಫತ್ತಾಗಿ ದೊರೆಯುವದು.

144 ಪುಟಗಳ ವೈದ್ಯಪಿಸ್ತ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕೃಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಜೀನ್‌ಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಸೆಟ್ಟಿಗೆ ಗಳಿಗೆ ೧—೮—೦. ಮಧ್ಯಮ ತರದ ಸೆಟ್ಟು ಗಳಿಗೆ ೩—೦—೦. ದೊಡ್ಡ ಸೆಟ್ಟು ಉತ್ತಮ ತರಹ ಗಳಿಗೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪಾಯಿಗೆ ೪ ತೊಲೆ, ದ್ವಿಯಂ ರೂಪಾಯಿಗೆ ೭ ತೊಲೆ, ತೃಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿಗೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಂಬಾ, ಕಾಶಿ.

SIROMANI NARAYANA CHARYA & CO.,
Choukhambay.
BENARES CITY.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವವರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿ, ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ತ್ರಾಸವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲ್ಲಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಉಳಿಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಹು ಹೆಚ್ಚು!!

ಕ್ರಯ ಆಣೆ 5 ಮತ್ತು ಆಣೆ 9.

ಪಟ್ಟಣಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ಗಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಸಾರಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲೈಫ್ ಎಸ್ಯೂರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ| ಲಲ್ಲುಬಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:— ಫಿರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮಿ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಪ್ರತಿಯಲ್ಲಿ ರೂ. 100,000 ವನ್ನು ಠೇವಣಾತಿ ಮಾಗಿಟ್ಟಿರುವರು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿಗೆ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಬಾವತಿಯಾಗತಕ್ಕ ಹಣವನ್ನು ಪಡೆಯುವರೆಗೆ ಪ್ರಾಯಃ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ಸಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೆದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟ್ ಪ್ಲೀಡರ್, ಸೇಲಂ.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಕಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಕಣ್ಮನಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:—
ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
ಬೆಂಗಳೂರು ಸಿಟಿ.

ಮದರ್‍ಾಸ್ ಮೇಲ್ ವಾಚ್.

೬ ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ತರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧಾಳಿ, ಧೂಳಿ ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ತರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರವಣಿ 1, ಗಜ್ಜಿ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಹೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನ್ಯಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).



ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ಸೇರಿದ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆಗಳನ್ನು, ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷ, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ 0—12—0. ವಿ. ಪಿ. ಚಾರ್ಜ 2 ಆಣೆ
ಎರಡು ಭಾಗಗಳು ಸೇರಿ ಕ್ರಯ ರೂ. 1—4—0. „ 2 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,
ಜಿಮ್ನ್ಯಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಾಚ್ಚಿಯಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,
Senior Gymnastic Instructor,
Pachiyappa's College, MADRAS.

N. B.—ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರಿಯಬೇಕು. ಮತ್ತು ಕಾಗದಗಳನ್ನು ಇಂಗ್ಲೀಷಿನಲ್ಲಿಯೇ ಬರಿಯಬೇಕೆಂದು ಕೋರುವೆವು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ರೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ½ ಔನ್ಸ್ ಟ್ಯೂಬ್ 2-0-0. ಒಟ್ಟೊ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನ್ 1ರ 0-12-0.

ವಿ. ಪಿ. ಚಾರ್ಜ 0—4—0 ಜಾಸ್ತಿ.

ಪ್ರಾಪ್ರೈಟರು, ಏಜಂಟರು:—
ಎಚ್. ಆರ್. ಮೋದಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.
H. R. MODY & Co.,
10 Princess Street, Bombay.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ ರಸ್ತೆಯ ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬತ್ತೂರು, ಸೇಲಂ, ಮಧುರಾ, ಕೊನ್ನಾರ, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸುರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. ಚವನಪ್ರಾಶ ಲೇಹ್ಯ:—ಶರೀರವನ್ನು ಕ್ಷಯ ಮತ್ತು ಉಬ್ಬಸ ಇವುಗಳಿಂದ ಸಂರಕ್ಷಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ದೀರ್ಘಾಯುಸ್ಸನ್ನೂ, ಇಂದ್ರಿಯ ಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀದೇವತೆಗಳಿಂದ ಚ್ಯವನನಿಗಾಗಿ ಕೊಡಲ್ಪಟ್ಟು ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ [illegible] ಚ್ಯವನ [illegible] ನವಯೌವನವನ್ನು ಹೊಂದಿದನೆಂದು [illegible] ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. ಬಾಣಂತಿ ಮಾತ್ರೆ:—ಪ್ರಸೂತವಾದ ಬಾಣಂತಿಯರು 30 ದಿವಸಗಳವರೆಗೆ ಉಪಯೋಗಿಸುವದರಿಂದ [illegible] ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಸಿದ್ಧವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹ ಮಾತ್ರೆಗಳ, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಪತ್ರ್ಯ ವ್ಯವಹಾರದಿಂದ ಚಿಕಿತ್ಸೆ [illegible] ರೋಗವನ್ನು ತಿಳಿಸುವದರಿಂದ ಚಿಕಿತ್ಸಾಪದ್ಧತಿ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದ್ಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇದು ಹೆಚ್ಚು ಕಾಲದಿಂದ ಉಪಯೋಗಿಸಿ ಶಿಫಾರಸು ಹೊಂದಿದ್ದಾಗಿದೆ. ದರವನ್ನು ಇದರಡಿ ಸೂಚಿಸಿರುವರು.

	ಬಿಲ್ಲೆ 1ರ	ಡಜನ್ 1ರ
1. ಕಸ್ತೂರಿ ಸಾಬೂನು 3 ಬಿಲ್ಲೆಗಳಿರುವ ಪೆಟ್ಟಿಗೆ	0—8—0	5—0—0
2. ಮನೋಹರ „ „ „	0—5—0	3—8—0
ಅತ್ತರ ಸಾಬೂನುಗಳು.		
3. ಖಸ್ ಸಾಬೂನು	0—4—0	2—12—0
4. ಗುಲಾಬ್ „	0—4—0	2—12—0
5. ಹೀನಾ „	0—4—0	2—12—0
6. ಕೇವುಡಾ „	0—4—0	2—12—0
7. ಗುಲಾಬಿ „	0—4—0	2—12—0
8. (ಬಾತ್ ಸೋಪ್) ಸ್ನಾನದ ಬಗ್ಗೆ ಉಪಯೋಗಿಸುವದು	0-1-6	1-1-0
ಡೈಮಂಡ್ ಬಟ್ಟೆ ದ ಸಾಬೂನು.		
9. ಗುಲಾಬಿ, ಸ್ಯಾಂಡಲ್, [illegible] ಮತ್ತು [illegible]	0—1—6	1—1—0
10. [illegible]	0—2—0	1—7—0

ವಿಳಾಸ:—ಡಿ. [illegible], [illegible], ದ. ಕ.

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ ೨.

ಹಮಿಯೋಪ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ವಿಳ ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಸಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯವಶ್ಯಕವು. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧—೧೦—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಜಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೨—೦.

ಆರ್. ಮಾರ್ಟಿನ್ಸರ ಗ್ಲಿಟೋಡಾಯಿನ್.

ಗಂಡಸರ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೆ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುವಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ ೧—೧೪—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ತ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ

ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಯೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೋಮಿಯೊಪತಿ, ಟಿಸ್ಯು, ಸ್ಪೆಸಿಫಿಕ್, ಇಲೆಕ್ಟ್ರೊ ಹೋಮಿಯೊಪತಿ ವ ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೋಮಿಯೊಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
ಧರ್ಮಸ್ಥಳ.

ಪಂಡಿತ್ ಟಿ. [illegible]

ಲಂಗ್ "ಟೋನಿಕ್."

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿಯುವದಿಲ್ಲ. [illegible] ವಿಶ್ವಾಸದ ಈ ಔಷಧದ ಬರೇ 48 ದಿವಸಗಳ ಸೇವನೆಯಿಂದ [illegible] ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗ ಮೊದಲಾದ [illegible] ರೋಗ ಸಂಬಂಧವಾದ ಎಲ್ಲಾ ರೋಗಗಳು ಮತ್ತು [illegible] ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ [illegible] ನಿಸ್ಸಂದೇಹವಾಗಿ ಗುಣವಾಗುವು. [illegible] ಶ್ರೀಯುತ [illegible]

[illegible]

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾನಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. **ಪ್ರಮೇಹರಿಪು ಬಿಂದು.** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿನ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲ ವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. **ಸರಳಭೇದಿ ಮಾತ್ರೆ.** ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

೯. **ವಾಸಾವ ಲೇಹ.** ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದುವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. **ವಾತಮುರಾರಿ ಬಾಮ್.** ತಲೆ ನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. **ಸನ್ನೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉನ್ನುವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗ್ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರು ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. NATH & CO. *Ayurvedic Chemists*
Vepery Post MADRAS,

ದಂತ ವೈದ್ಯರಾದ,

ಡಾಕ್ಟರ್ ಪಿ. ಡಿ. ಲಿಮಾರವರು

ಚಿಕ್ಕಮಗಳೂರು ಹಾಸನ, ಉಪ್ಪಿನಂಗಡಿ ಅತ್ತಕಡೆ ಸರ್ಕೀಟು ಬೆಳಸಿ
ಈಗಲೇ ಹಿಂತಿರುಗಿ ಮಂಗಳೂರಿಗೆ ಬಂದಿರುವರು.

ಚಾರ್ಜು ಅತೀ ಸುಲಭ.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ಶೋಪಿನ ಬಳಿ,
ಮಂಗಳೂರು.

WANTED

A Writer for Kathlekhan Coffee Estate in Kadur District, 18 miles from Tarikere Railway Station; must have good knowledge of Coffee planting and Accounts etc.

For further particulars please apply to:—

Messrs. Peirce, Leslie & Co., Ltd.
MANGALORE.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾ ಜ ಸುಂ ಧ ರಿ ರೋ ಜ

ಎಂಬ ಮನೋಹರವೂ ಮೋಹಕರವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಡಮೆ ತರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಉದ್ದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬೇಕಾದರೆ ಅವು ರೇಶ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. [illegible]

ಈ ತೈಲ್ಯವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆಯಿಸಿ [illegible] ಸರ್ವ ವ್ಯಾಧಿಗಳನ್ನು [illegible] ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದ್ದು ದೊರೆಯಲಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ [illegible] ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ [illegible] ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸಿ ತಲೆ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕಂಚಾಗಿರುವ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವವರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು ಮೆದುಳಿಗೆ ತಂಪನ್ನುಂಟುಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿ ರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಗಿಜ 6, ಕಪ್ಪುಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅದ್ದಾ 1, ಕಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ಬಣ್ಣದ ಪೋಸ್ಟುಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಕ್ರಯ, 50 ಬಹುಮಾನಗಳ ಸಹಿತ ರೂ. 1—0—0.

ವಿಳಾಸ:— ವಿ. ಎ. ಎಸ್. ಪಾಣಿ, ಕಂಪನಿ,
ಸಾಹುಕಾರ ಪೇಟೆ, ಮದರಾಸು.

ಅಮೃತಾರ್ಣವ ಅವಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತಪುಷ್ಟಿಯುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತುಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೈಗೂಡಿಸುವದು. . ಕ್ರಯ ಸುಲಭ! ಫಲವು ಅಧಿಕವು!!

೨೦ ತೊಲೆಗೆ ರೂ. ೨—೦—೦ ಮಾತ್ರವೇ.

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Agents: **Raphael & Co.,**
Mangalore.

ಹೋಮಿಯೊಪೆತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,

ಧರ್ಮಸ್ಥಳ.

ಸುಮಾರು 10 ವರ್ಷದಿಂದೀಚೆಗೆ ಧರ್ಮಸ್ಥಳದ ಕೆ. ಕುಮಾರಯ್ಯನವರು ಅನೇಕ ರೋಗಿಗಳಿಗೆ ಹೋಮಿಯೊಪೆತಿಕ್ ಔಷಧಗಳಿಂದಲೂ, ಟಿಸ್ಯ್ಯು, ಸ್ಪೆಸಿಫಿಕ್, ಇಲೆಕ್ಟ್ರೊ ಹೋಮಿಯೊಪೆತಿ ಮತ್ತು ಆಯುರ್ವೇದಿಕ್ ಔಷಧಗಳಿಂದಲೂ ಚಿಕಿತ್ಸೆ ನಡಿಸಿ ಗುಣಪಡಿಸುತ್ತಿರುವರು. ಇದಲ್ಲದೆ, ಅನೇಕ ಬಡಬಗ್ಗರಿಗೆ ಧರ್ಮಾರ್ಥವಾಗಿ ಔಷಧ ಕೊಟ್ಟು ಗುಣಪಡಿಸಿದ್ದರಿಂದೆ ಪೋಕ್ಕಳ ಗ್ರಾಮಸ್ಥ ಜನರು ಇವರಿಗೆ ಉಚಿತವಾಗಿ ಭಂಗಾರದ ಪದಕವನ್ನು ಕಳೆದ 1916ನೇ ಇಸವಿಯಲ್ಲಿ ಕೊಟ್ಟಿರುತ್ತಾರೆ. ಇವರು ಔಷಧ ಕೊಡುವದರಲ್ಲಿ ತಕ್ಕಮಟ್ಟಿಗೆ ಸಾಮರ್ಥ್ಯವಂತರು ಮತ್ತು ಧರ್ಮಸ್ಥಳದ ಆಜುಬಾಜಿನ ಜನರು ಇವರ ಕೈಯಲ್ಲಿ ಚಿಕಿತ್ಸೆ ಹೊಂದಲಿಕ್ಕೆ ಒಳ್ಳೇ ಅನುಕೂಲವಾಗಿರುತ್ತದೆ. ಇವರ ಸಹಾಯ ಬೇಕೆಂತ ಅಪೇಕ್ಷಿಸುವವರು ಇವರಲ್ಲಿ ಹೋಗಿ ಚಿಕಿತ್ಸೆ ವಗೈರೆ ಹೊಂದಬಹುದು.

ಹೊಸ ಪುಸ್ತಕ! **'ಹಿಂದೂ ಲಾ'** ಹೊಸ ಪುಸ್ತಕ!

ಇದುವರವಿಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅಣ್ಣತಮ್ಮಂದಿರ ದಾಯಭಾಗ ಪಾಲು ಪಾರಿಖತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯಯೋಗ್ಯ ಆಧಾರ ಅನ್ಯಾದಿಪತ್ರಗಳು, ಗುರು ಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಒಕ್ಕಣೆಗಳು ವಿಶದವಾಗಿ ಅಚ್ಚುಮಾಡಲ್ಪಟ್ಟಿವೆ. ಕ್ರಯ ರೂ. ೧—೮—೦.

ವಿಳಾಸ:—ಬಿ. ನರಸಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು ಸಿಟಿ.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಶುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ದಿಂಡುಗಳು ಹಾಕಿದರಿಂದಲೇ ಗುಣಹೊಂದುವದು.

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪ್ಯಾ 1—4—0.
ಅಪ್ಪಾಲು ಹಾಸಲು ಪ್ರತ್ಯೇಕ.

[illegible]

STANY BROTHERS
Sole Agents
M. G. C's Toothache Specific, Mangalore.

[illegible]

ಪ್ರಖ್ಯಾತವಪ್ಪ [illegible] ಗ್ಯಾಸ್‌ದೀಪಗಳು:—

[illegible]

ಮೈಸೂರು ದಸರಾ 1916ನೇ ವರ್ಷದ ಸರ್ವ ವಸ್ತುಪ್ರದರ್ಶನ ಶಾಲೆಯಲ್ಲಿ ಬಿರದು ಬಿಲ್ಲೆಯನ್ನೂ ಮತ್ತು ಅನೇಕ ಡಾಕ್ಟರುಗಳಿಂದ ಯೋಗ್ಯತಾಪತ್ರವನ್ನೂ ಪಡೆದಿರುತ್ತದೆ.

ಇತ್ತ ನೋಡಿ! ಜಾಗ್ರತೆ ಮಾಡಿ!! ಬೆಲೆ ಸುಲಭ!!!

ರಿಕ್ಸ್ ರಾಮಕೃಷ್ಣಾಮೃತ.

ನೀವು ನಿಮಗೆ ಅಮೂಲ್ಯವಾದ ಶರೀರವನ್ನು ಏತಕ್ಕೆ ಯಾತನೆಗೂ ಸಂಕಟಕ್ಕೂ ಒಳಗುಮಾಡಿಕೊಂಡು ಕೃಶರಾಗಿರುವಿರಿ!

ಈಗಲಾನೇ ತಯಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ಸುಲಭ, ಪ್ರಯೋಜನ ಬಹಳ. ವಿದ್ಯಾರ್ಥಿಯರಿಗೂ, ಕ್ರಯಾಳುಗಳಿಗೂ, ಸ್ತ್ರೀ ಕುಟುಂಬ ವರ್ಗದವರಿಗೂ, ಮುಖ್ಯವಾಗಿ ಎಲ್ಲಾ [illegible] ಬಹಳ ಪ್ರಯೋಜನಕರವಾದದ್ದು. ಒಂದಾವರ್ತಿ ಉಪಯೋಗಿಸಿದ್ದಲ್ಲಿ ಮತ್ತೆ ಇದನ್ನು ಬಿಡಲಾರಿರಿ. ಬೆಲೆ ಬುಡ್ಡಿ 1ಕ್ಕೆ 8 ಆಣೆ. [illegible] 1ಕ್ಕೆ ರೂ 5—4—0. [illegible]

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು. [illegible] ವ್ಯಾಪಾರಿಗಳಿಗೆ [illegible] ಕಮಿಷನ್ ದೊರೆಯುವದು.

ಮತ್ತು ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

R. K. Depot,
373 CHAMRAJPET,
MYSORE.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೨೨ನೇ ಜೂನ್ ಶುಕ್ರವಾರ ೧೯೧೭. | ಸಂಚಿಕೆ ೨೫.

NOTICE.

Is hereby given for the information of the public that owing to the dearth of the raw materials the price for tiles will be increased by Rs. 4/ per thousand for I and II class and Rs. 10/ per thousand for ridge tiles, from 1st July 1917.

Jeppo Tile Works, MANGALORE, 15th May 1917. — **J. H. Morgan & Son.**

WANTED

Applications stating age, caste and all qualifications in detail from School final men or Matriculates for the post of a Supervisor of Co-operative Societies under the South Canara Central Co-operative Bank, Ltd. The candidate selected will have to undergo training at his own expense for three months, after which he will be entertained on probation for twelve months on a pay of Rs. 25 per month and a travelling allowance of Rs. 15 per month. Prospects of promotion. The candidate will be eligible after confirmation for the benefits of the provident Fund. Applications to reach the undersigned on or before the 30th of June 1917.

Puttur, S. Canara, 16th June 1917. — **M. Anantha Rau,** *Secretary.*

NOTICE.

Hindustan Co-operative Insurance Society Ltd.,

Know all persons whom it may concern that Policy No. 16988 issued on my life by the above society was with my husband the late Mr. P. Manjunath Pai and that it cannot be found since his death which took place on 16—2—1915. As this has apparently been stolen the said policy is now void and inoperative and any body dealing with the same will do so at his own risk

Dated 7 June 1917. — *(Sd)* **Soiri Paini.**

ನೋಟೀಸು

ನಮ್ಮ ವೈದ್ಯಾಲಯದಲ್ಲಿ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೊಮಿಯೊಪತಿ, ಟಿಸ್ಯು, ಸ್ಪೆಸಿಪಿಕ್, ಇಲೆಕ್ಟ್ರೊ ಹೊಮಿಯೊಪತಿ ವ ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— **ಕೆ. ಕುಮಾರಯ್ಯ,**
ಹೊಮಿಯೊಪತ್ ಮತ್ತು ಆಯುರ್ವೇದ [illegible],
ಧರ್ಮಸ್ಥಳ.

ಪ್ರಕಟಣೆ.

ಒಂದು ಜೋಡು ಎತ್ತುಗಳು ಗಾಡಿ ಸಹಿತವಾಗಿ ಮಾರಾಟಕ್ಕೆ ಇರುತ್ತವೆ. ಒಟ್ಟು ಕ್ರಯ ರೂಪಾಯಿ 300. ಬೇಕಾದವರು ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್ ಮೆನೇಜರರಿಗೆ ಬರಕೊಳ್ಳುವದು.

Mercantile Mission Branch.
MANGALORE

ಒಳ್ಳೆ ಗೊಬ್ಬರ! — ಅವ್ವಲ್ ಈಟು!!

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ ಯಾವದೆಂದರೆ

'ನೈಟ್ರೇಟ್ ಒಫ್ ಸೋಡಾ'

ಎಂಬ ಸೌಳು ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಕ್ಕಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಒಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಕ್ಕಿಗೊಬ್ಬರ ಒಂದು ಮುಡಿ ಬೇಕು.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

ಯಾವ ಪೈರಿಗೆ ಈ ಸೌಳು ಗೊಬ್ಬರವನ್ನು ಉಪಯೋಗಿಸಬೇಕು ಎಷ್ಟು ಉಪಯೋಗಿಸಬೇಕು ಎಂಬ ಎಲ್ಲಾ ಅನುಭವವನ್ನು ಕುರಿತು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಣೆಗಳು ಧರ್ಮಾರ್ಥವಾಗಿ ದೊರೆಯುತ್ತವೆ. ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಕರ್ಣಿಕ

ಎಗ್ಯುಮಿಕ್ಶ್ಚರ — Karnik's Ague Mixture.

ಚಳಿಜ್ವರ, ಮಲೆರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಪೆನೊ-ವಿನ್-ಕೊಲೆರ್, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣಾದಿ ಮುಲಾಮು:—ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ.

ಕರ್ಣಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

"ಪುರಾತನವೆಲ್ಲಾ ಒಳ್ಳೆಯದು, ನವೀನವೆಲ್ಲಾ ಕೆಟ್ಟದು ಹೀಗೆ ಏನೂ ಇರುವುದಿಲ್ಲ. ಒಂದು ಒಡವೆಯು ಒಳ್ಳೆಯದೊ ಕೆಡುಕೊ ಎಂಬದನ್ನು ಬುದ್ಧಿವಂತರು ಪರೀಕ್ಷಿಸಿ ತಿಳಿದುಕೊಳ್ಳುತ್ತಾರೆ."

ಮೋಹಿನವು ಮಹಾಕವಿ ಕಾಳಿದಾಸನ ಮಾತುಗಳು.

ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಹೊಗೆಸೊಪ್ಪು, ಮೆಣಸು, ಕಾಯಿಪಲ್ಯ ಮೊದಲಾದುವುಗಳ ಕೃಷಿಗೆ

ಅತ್ಯುತ್ತಮವಾದ ಗೊಬ್ಬರಗಳು.

1. ನೈಟ್ರೇಟ್ ಒಫ್ ಸೋಡಾ — Nitrate of Soda.
2. ಸುಪರ್ ಫ್ರೊಸ್‌ಫೆಟ್ಸ್ — Super Phosphates.
3. ಬೆಸಿಕ್ ಸ್ಲೆಗ್ — Basic Slág.

ಇವುಗಳು ತೊಪ್ಪೆ ಸೆಗಣಿಯಂತೆ ಹೊಲಸಲ್ಲ, ಕೊಳೆ ಮೀನಿನಂತೆ ನಾರುವುದಲ್ಲ, ಎಲುಬು ಹುಡಿಯಂತೆ ಮುಟ್ಟಬಾರದಂಥಾದ್ದಲ್ಲ. ಒಂದು ಖಂಡುಗ ಹಕ್ಕಿಯ ಗೊಬ್ಬರವೂ ಸಮ, ಒಂದು ಬಳ್ಳ ನೈಟ್ರೇಟ್ ಸೌಳುಪ್ಪೂ ಸಮ—ಅಷ್ಟು ಸತ್ವವುಳ್ಳದ್ದು. ಒಂದು ಹೆಡಗೆ ಊರಗೊಬ್ಬರವನ್ನು ರಾಶಿ ಹಾಕುವುದಕ್ಕಿಂತ ಒಂದು ಹರಳು ಸೌಳುಪ್ಪನ್ನು ಚೆಲ್ಲುವುದರಿಂದ ಪ್ರಯೋಜನವು ಹೆಚ್ಚು. ಇವನ್ನು ಹೊರುವ ಕಷ್ಟವಿಲ್ಲದೆ ಸಾಗಿಸಬಹುದು, ಸ್ಥಳದ ಇಕ್ಕಟ್ಟಿಲ್ಲದೆ ಕೂಡಹಾಕಬಹುದು, ಹಾಳಾಗುವುದೆಂಬ ಹೆದರಿಕೆ ಇಲ್ಲದೆ ದಾಸ್ತಾನು ಇಡಬಹುದು. ಬೇಕಾದಾಗ ಉಪಯೋಗಿಸಿಕೊಳ್ಳಬಹುದು.

ಇವುಗಳನ್ನು ಯಾವ ಯಾವ ಬೆಳೆಗೆ ಹೇಗೆ ಹೇಗೆ ಪ್ರಯೋಗಿಸಬೇಕೆಂಬ ಎಲ್ಲ ಮಾಹಿತಿಯನ್ನು ಕೊಡುವ ಸೂಚನಾ ಪತ್ರಗಳು ಬೇಕಾದ್ದಲ್ಲಿ ನಮ್ಮಿಂದ ಬೆಲೆ ಇಲ್ಲದೆ ಪಡಕೊಳ್ಳಬಹುದು. ಕೆಳಗೆ ಕಾಣಿಸಿದ ಗೊಬ್ಬರಗಳು ನಮ್ಮಿಂದ ಚಿಲ್ಲರೆಯಾಗಿ, ಇಲ್ಲವೆ, ಸಾಕಷ್ಟು ರಖಮಾಗಿ ಪಡಕೊಳ್ಳಬಹುದು.

ಹೆಚ್ಚಿನ ಅನುಭವವನ್ನು ಕುರಿತು ಕೆಳಗಿನ ವಿಳಾಸಕ್ಕೆ ಬರೆಯುವುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಕೇರಬೀದಿ, ಮಂಗಳೂರು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಲೋ. ಸೆ. ಟೆಕ್ಸ್ಟು 4 ಆಣೆ, ಡಿಟೋ ನೋಟ್ಸು ಮ। ವೆಂಕಟಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟು 2½ ಆಣೆ, Rama & Sita 4 as., (Do. Notes 6 as., General Eng. Questions & Answers from 1901-1917 6 as., by Mr. Pichamuttu, B. A.,) Gen. English by Mr. Chennakesaviah Rs. 1-2-0. [illegible] I 5 ಆಣೆ, ಡಿಟೋ IIನೇದು 5 ಆಣೆ, ಪ್ರಶ್ನೋತ್ತರ ಲೇಖ್ಯಬೋಧಿನಿ ರೂ. 1-8-0, ನವೀನ ಗಣಿತ 8 ಆಣೆ, ಹಿಂದೂ ಚರಿತ್ರಸಾರ 10½ ಆಣೆ, ಸೆಕಾರಿ 1ನೇ ರೀಡರ್ 5 ಆಣೆ, ಡಿಟೋ 2ನೇದು 7 ಆಣೆ, ಡಿಟೋ 3ನೇದು 8½ ಆಣೆ, ಡ್ರಿಲ್ ಪುಸ್ತಕ 3½ ಆಣೆ, ಮಕ್ಕಳ ಶಿಷ್ಯವಿಕೆ 12 ಆಣೆ, ಲೇಖ್ಯಬೋಧಿನಿ 8½ ಆಣೆ. ಲೇಖನ ಲಕ್ಷಣ 5 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

ಈ ಪುಸ್ತಕದಲ್ಲಿ—೧ ಕ್ರಿಮಿನಲ್ ಕೋಡು, ೨ [illegible] ಆಕ್ಟು, ೩ ಎವಿಡೆನ್ಸ ರೆಗ್ಯುಲೇಶನ್, ೪ ಆಯುಧಗಳ ರೆಗ್ಯುಲೇಶನ್, ೫ [illegible] ರೆಗ್ಯುಲೇಶನ್, ೬ ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಶನ್, ೭ [illegible] ರೆಗ್ಯುಲೇಶನ್, ೮ [illegible] ರೆಗ್ಯುಲೇಶನ್, ೯ [illegible] ರೆಗ್ಯುಲೇಶನ್, ೧೦ [illegible] ಆಕ್ಟು, ೧೧ [illegible] ಆಕ್ಟು [illegible] ಅನುವ ಪದ್ಧತಿಗಳು ಮತ್ತು [illegible] ಅಡಕವಾಗಿವೆ. ಕ್ರಯ ರೂ. 2—3—0.

ಎಸ್. ಎನ್. ರಾವ್ ಬ್ರದರ್ಸ್,
[illegible]

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

Authorised Capital Rs.	... ...	300,000—0—0
Issued Capital	... ...	225,000—0—0
Subscribed Capital	... ...	225,000—0—0
Paid up Capital	... ...	201,275—0—0
Deposits	... ...	308,596—7—10
Reserve Fund	... ...	50,003—2—5

25% of the net profits are added annually to the Reserve Fund. Rs.29,490/- have been invested in Government Paper of the face value of Rs.30,800/-

Dividends of not less than 6% paid during the past years and a bonus of 1% to 2% paid in addition during the last eight years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5, 5½% and 6% respectively at the discretion of the managing committee.

Short-notice Deposits requiring one week's notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Canara Bank Ltd.,
Mangalore, 1st June 1917.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

ನಿಯಮಿತ ಮೂಲ ಧನವು	ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	201,275—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		308,596—7—10
ರಕ್ಷಿತ ಧನವು	... ...	50,003—2—5

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 29,490—0—0 ಸರಕಾರದ ರೂ. 30,800ರ ಭದ್ರತಾಪತ್ರಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋದಕವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಪ್ಲೇಗಾದಿನಾಶಕ. ಪ್ಲೇಗಾದಿ ನಾಶಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಗಳಿಂದ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗೆಡ್ಡೆಯನ್ನೂ ಹುಚ್ಚುನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ:— "ಪಂಡಿಟ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರೆ ಕಂಪನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಪಂಡಿತ ಎಂ. ಎಸ್. ಯವರ ಮದರಾಸ್ ಪುಡಿ ನಶ್ಯ.

ಈ ನಶ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ ಪುಡಿಯನ್ನು ಉಪಯೋಗಿಸುವುದರಿಂದ ಪೀನಾಸಿ, ಅರತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣಮಾಡುವದು. ಈ ನಶ್ಯವು ಬೇರೆಯವರ ನಶ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮೆದುಳನ್ನು ಕೆಡಿಸುವದಿಲ್ಲ. ಈ ನಶ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5 ಆಣೆ.

ಒಂದೇಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್. ಸಿಟಿ. ಬಾಬು ಕಂಪನಿ,
ನಂಬ್ರ 7-9ನೇ ನಾರಾಯಣ ಬೀದಿ, ಮಿಂಟ್ ಬಿಲ್ಡಿಂಗ್ ಮದರಾಸ್.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ. ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಗುಪ್ತ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಿಕ್ಕೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್,

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್. ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	. . .	0—8—0
ಆಯೆಷಾ ಹೇರ್ ಆಯಿಲ್	,, . . .	1—0—0
ಮಹಾರಾಣೀ ಹೇರಾಯಿಲ್	,, . . .	0-12—0
ಕಾಮಿನಿಯಾ ಹೇರಾಯಿಲ್	,, . . .	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	. . .	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	. . .	0—8—0
ಅಮೃತ ಫಲ	,, . . .	0—10—0
ಇಂದಿರಾ ಕೃ. ಮು.	. . .	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).		
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	. . .	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	. . .	0—4—0
ಪ್ರಫುಲ್ಲ	,, ,, . . .	0—12—0
ಅಂಬಾಲಿಕೆ (ಹೊಸ ನಾವೆಲ್)	. . .	0—1—0
ಕುಸುಮ	,, . . .	0—1—0
ರಾಧಾನಾಥ	,, . . .	0—2—0
ಸುಭದ್ರೆ	,, . . .	0—5—0
ಚಂದ್ರಹಾಸ (ಹೊಸ ಕಥೆ)	. . .	0—1—0
ಧ್ರುವ	,, . . .	0—2—0
ಮಕ್ಕಳ ಶಿಕ್ಷಣ (School Discipline)	. . .	0—12—0
ಪುಷ್ಪರಚನ (Flower Making)	. . .	0—14—0
[illegible]	. . .	1—0—0
[illegible]	. . .	1—4—0
[illegible]	. . .	1—4—0
[illegible]	,, . . .	1—2—0
[illegible]	. . .	0—10—0
[illegible]	. . .	0—1—0

ಯೂರೋಪದ ಮಹಾ ಯುದ್ಧ.

ಇಂಗ್ಲಿಷರು ಮೆಸ್ಸಿನೆಯಿಂದ ಮುಂದರಿಸಿ ಹೋದಾಗ ಜರ್ಮನರು ಅತೀ ರಭಸದಿಂದ ಅವರೊಳಗೆ ಪ್ರತಿಕಾಳಗ ಕೊಟ್ಟರೂ ನಿಷ್ಫಲವಾಯಿತು. ಈ ಕಾಳಗದಲ್ಲಿ ಬ್ರಿಟಿಷ ವಿಮಾನ ಸಂಚಾರಿಗಳು ಎದುರಾಳಿಯ ಪಾಳ್ಯದ ಮೇಲೆ ಹಲವು ಟನ್ ಸಿಡಿಮದ್ದಿನ ಮಳೆಯನ್ನು ಸುರಿದು, ಬಹಳ ಹಾವಳಿಮಾಡಿದರು. ಜರ್ಮನರು ಈ ಭಾಗದಲ್ಲಿ ಇನ್ನೂ ಹಿಮ್ಮೆಟ್ಟುತ್ತಲಿದ್ದಾರೆ.

ಒಷ್ಟ್ರಿಯನರು ಇಟಲಿಯವರ ಮೇಲೆ ಮುಂದರಿಸಿ ಇಸೊಂಜೊವಿನ ಪೂರ್ವ ಭಾಗದಲ್ಲಿಯೂ ಕಾರ್ಸೊ ಪರ್ವತದ ದಕ್ಷಿಣದಲ್ಲಿಯೂ ಬಹಳ ಕಾದಾಡಿದರೂ ಇಟಲಿಯವರನ್ನು ಕದಲಿಸಲಾಗಲಿಲ್ಲ.

ಹಿಂಡನ್‌ಬರ್ಗನು ಸ್ವಲ್ಪಕಾಲದ ವರೆಗೆ ಹಂಗಾಮಿಯಾಗಿ ಯುದ್ಧದ ಕೈಬಿಡಬಹುದೆಂದು ರಷ್ಯದ ಜನರಲರೊಡನೆ ಕೇಳಿದರೂ ರಷ್ಯದವರು ಒಪ್ಪಲಿಲ್ಲ.

ಅಮೇರಿಕನ್ ಜನರಲ್ ಪರ್ಶಿಂಗರು ತಮ್ಮ ಸೇನೆಯೊಡನೆ ಬೆಲೋನ್ (ಫ್ರೆಂಚರ ಪಟ್ಟಣದಲ್ಲಿ) ಬಂದಿಳಿದರು.

ಗ್ರೀಕರಾಜನಾದ ಕೊನ್‌ಸ್ಟೆಂಟೈನನು ತನ್ನ ಎರಡನೆ ಮಗನಿಗೆ ರಾಜ್ಯವನ್ನು ಬಿಟ್ಟುಕೊಟ್ಟು ಪದಚ್ಯುತನಾದನು. ಇದಕ್ಕೆ ಇಂಗ್ಲಿಷ್ ಮತ್ತು ಫ್ರೆಂಚ ರಾಯಭಾರಿಯಾಗಿ ಎಥೆನ್ಸ್ (ಗ್ರೀಸರಾಜ್ಯದ ಮುಖ್ಯಪಟ್ಟಣ)ಗೆ ಹೋದ ಜೊನ್ನಾರ್ಟ್‌ರ ವಣಿದ ಒತ್ತಾಯವೆ ಕಾರಣವಾಯಿತು.

ಜೂನು ತಿಂಗಳ ಮೊದಲನೆ ವಾರದಲ್ಲಿ ಇಂಗ್ಲಿಷರ ೧೬೦೦ ಟನ್‌ಗಳಿಗೆ ಮಿಕ್ಕಿದ ೨೨ ಹಡಗಗಳು, ಅದಕ್ಕೆ ಕಡಿಮೆಯಾದ ೧೦ ಹಡಗಗಳು ಮುಳುಗಿಹೋದುವು. ಶತ್ರುಗಳ ಕಡೆಯ ಜಲಾಂತರ್ಗಾಮಿಗಳ ಹಾವಳಿಯು ಇನ್ನೂ ಕಡಿಮೆಯಾಗಲಿಲ್ಲ.

ಅಮೇರಿಕದ ಪೆಟ್ರೋಲಾಯ್ಟ್ ಎಂಬ ಹಡಗನ್ನು ಒಂದು ಜರ್ಮನ ಜಲಾಂತರ್ಗಾಮಿಯು ಮುಳುಗಿಸಿಬಿಟ್ಟಿತು.

ಶತ್ರುಕಡೆಯ ೧೫ ಎರೋಪ್ಲೇನುಗಳು ಲಂಡನ್ ನಗರದ ಮೇಲ್ಭಾಗದಲ್ಲಿ ಸಂಚರಿಸಿ ಸಿಡಿಮದ್ದಿನ ಮಳೆಯನ್ನು ಸುರಿದವು. ಇದರಿಂದ ೧೦೪ ಮಂದಿ ಮಡಿದರೆಂತಲೂ, ೧೫೪ ಜನರಿಗೆ ವಿಪರೀತ ಗಾಯವೂ, ೨೬೯ ಮಂದಿಗೆ ಸಾಧಾರಣ ರೀತಿ ಗಾಯವೂ ಉಂಟಾಯಿತೆಂದು ತಿಳಿದುಬರುತ್ತದೆ.

ಫ್ರಾನ್ಸಿನಲ್ಲಿ ಮಾರ್ಶಲ್ ಹೇಗರ ರಿಪೋರ್ಟಿನ ಮೇರೆಗೆ ಜರ್ಮನರು ಇನ್ನೂ ಮುಂದೊತ್ತಿಬರಲಾರದೆ ಹಿಮ್ಮೆಟ್ಟುತ್ತಲೆ ಇದ್ದಾರೆ.

ಜರ್ಮನರು ಸ್ವಿಜರ್‌ಲೆಂಡಿನ ರಾಜಕೀಯ ಕೌನ್ಸಿಲಿನ ಮೂಲಕ ರಾಜಿಯ ಪ್ರಸ್ತಾಪವನ್ನು ಬೇರೆಯಾಗಿ ರಷ್ಯವರೊಡನೆ ಎತ್ತಿದ್ದಾಗಿಯೂ ಅದನ್ನು ರಷ್ಯದವರು ತಿರಸ್ಕಾರಮಾಡಿದ್ದಾಗಿಯೂ ತಂತಿ ವರ್ತಮಾನದಿಂದ ತಿಳಿದುಬರುತ್ತದೆ.

ಎದುರಾಳಿಗಳ ಕಡೆಯ ಎರಡು ಜೆಪೆಲಿನ್‌ಗಳು ಇಂಗ್ಲೀಷು ತೀರದ ವರೆಗೆ ಬಂದು ಸಿಡಿಮದ್ದನ್ನು ಸುರಿಸಿದುವು.

ಫ್ರೆಂಚರ 'ಎನ್ನಾಂ' ಎಂಬ ನಾವೆಯು ಟೊರ್ಪಿಡೊ ತಗಲಿ ಒಡೆದು ಹೋಯಿತು.

ಎವೆಂಜರ್ ಎಂಬ ಬ್ರಿಟಿಷ್ ಡಿಸ್ಟ್ರೋಯರ್ ನಾವೆಯು ಉತ್ತರ ಸಮುದ್ರದಲ್ಲಿ ಟೊರ್ಪಿಡೊ ತಗಲಿ ಮುಳುಗಿತು.

ಅಮೇರಿಕದ ಸೀಮೆಎಣ್ಣೆ ತುಂಬಿಸಿದ್ದ ಮೊಹಿಕಿ ಎಂಬ ಹಡಗಿಗೆ ಬೆಂಕಿ ತಗಲಿ ಮುಳುಗಿತು.

ವಿದೇಶ ವೃತ್ತಾಂತ.

ಗ್ರೀಕರಾಜನು ಪದಚ್ಯುತನಾದ್ದರಿಂದ ಗ್ರೀಸರಾಜ್ಯದಲ್ಲಿ ಜರ್ಮನರ ಒಳಸಂಚು ಅಡಗಿಹೋಗಿ ಹಲವು ಮುಖ್ಯಪಟ್ಟಣಗಳಲ್ಲಿ ಇಂಗ್ಲಿಷ ಮತ್ತು ಫ್ರೆಂಚರ ಅಧಿಕಾರವು ಬಲಗೊಂಡಂತೆ ಕಾಣುವುದು.

ಎಷ್ಟನ್ ಅಂಡರ್‌ಲಿನ್ ಎಂಬಲ್ಲಿ ಸಿಡಿಮದ್ದಿನ ಒಂದು ಕಾರ್ಖಾನೆಯು ಮೇಲೆ ಸಿಡಿದು ೪೧ ಮಂದಿ ಸತ್ತರು; ೧೩೦ ಜನರಿಗೆ ಜಖಂ ಆಯಿತು. ಸಾಹಿತ್ಯ ಸಾಮಗ್ರಿಗಳು ಬಹಳ ನಾಶವಾದುವು.

ಸ್ಪೇನ್ ದೇಶದಲ್ಲಿ ಅಂತಃಕಲಹಗಳು ತಲೆದೋರಿವೆ. ತಂತೀ ವರ್ತಮಾನಗಳು ಸರಿಯಾಗಿ ಸಿಕ್ಕುವದಕ್ಕೆ ಆ ಸರಕಾರದ ಅಭ್ಯಂತರವಿರುವುದರಿಂದ ನಿಜಸ್ಥಿತಿ ಇನ್ನೂ ಬಯಲಿಗೆ ಬರಲಿಲ್ಲ.

ಚೀನದಲ್ಲಿ ಬೇರೆ ಬೇರೆ ಸಂಸ್ಥಾನಗಳ ಗವರ್ನರುಗಳು ಸೆಂಟ್ರಲ್ ಗವರ್ನಮೆಂಟಿನವರ ಅಧಿಕಾರವನ್ನು ಧಿಕ್ಕರಿಸಿ ಸ್ವತಂತ್ರ ಆಡಳಿತೆಯನ್ನು ಸ್ಥಾಪಿಸಿರುವರು.

ಉತ್ತರ ಹಿಂದೂಸ್ಥಾನ.

ಇಂಡಿಯಾ ಸರಕಾರದವರು ಕೃಷಿವಿದ್ಯಾವಿಷಯಕವಾದ ಒಂದು ಸಭೆಯನ್ನು ಸಿಮ್ಲಾದಲ್ಲಿ ಜರುಗಿಸುವರೆಂಬ ವಿಷಯವನ್ನು ಕೆಲವು ಸಮಯದ ಹಿಂದೆ ಪ್ರಕಟಿಸಿದ್ದೆವು. ಈ ಪರಿಷತ್ತು ಇದೇ ತಿಂಗಳ ತಾ. ೧೮ನೇ ದಿನ ಸಿಮ್ಲಾದಲ್ಲಿ ಕೂಡಿತು. ಬಹುಮಾನಪಟ್ಟ ಸರ್, ಕ್ಲೋಡ್‌ಹಿಲ್ಲ್‌ರವರು ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ಪ್ರತಿಒಂದು ಸಂಸ್ಥಾನಕ್ಕೆ ಒಂದು ಕೃಷಿಕೊಲೇಜು, ಮತ್ತು ಪ್ರತಿಒಂದು ಜಿಲ್ಲೆಗೆ ಒಂದು ಹ್ಯಾಸ್ಕೂಲನ್ನು ಸ್ಥಾಪಿಸುವ ಧ್ಯೇಯವನ್ನಿಟ್ಟುಕೊಂಡು ಈ ಉದ್ದೇಶದ ನೆರವೇರುವಿಕೆಯ ಬಗ್ಗೆ ಶಾಲೆಗಳಿಗೆ ಬೇಕಾದ ಶಿಕ್ಷಕರನ್ನು ಆಯಾ ಸಂಸ್ಥಾನಗಳಲ್ಲಿಯೆ ಕೊಲೇಜುಗಳಿಂದ ಸಿದ್ಧಗೊಳಿಸಬೇಕೆಂತಲೂ, ಹಳ್ಳಿ ಕೃಷಿ ಶಾಲೆಗಳನ್ನು ಸ್ಥಾಪಿಸುವದು ಪ್ರಸ್ತುತ ಅಗತ್ಯವಿಲ್ಲವೆಂಬುದಾಗಿಯೂ, ಈ ಪರಿಷತ್ತಿನವರು ನಿರ್ಣಯಿಸಿರುತ್ತಾರೆ.

ಮುಂಬಯಿಯಲ್ಲಿ ಬಹಾದ್ದೂರ ಮಾರ್ಕೆಟ್ ಎಂಬ [illegible] ಮಿಸ್ ಒಲ್ಲಿಯೆಂಬ ಆಂಗ್ಲೇಯ ಯುವತಿಯನ್ನು ಮುಂಬಯಿಯಲ್ಲಿ ವಿವಾಹಮಾಡಿಕೊಂಡರು. ವಿವಾಹದ ಮೊದಲು [illegible] ನಂತರ ವಿವಾಹವು ಆಯಿತು.

[illegible]

ಅದ್ವಾನಿಯೆಂಬವರನ್ನು ಗಾಡಿಯಿಂದ ಎಳೆದು ಹೊರಗೆ ಹಾಕಿದರು, ಎಂಬ ಸಬಬಿನ ಮೇಲೆ ಢಿಲ್ಲಿ ಇಲಾಖೆಯ ಇಬ್ಬರು ನೌಕರರ ಮೇಲೆ ಒಂದು ಕ್ರಿಮಿನಲ್ ಖಟ್ಲೆಯು ದಾಖಲು ಮಾಡಲ್ಪಟ್ಟಿತ್ತು. ಮೆಜಿಸ್ಟ್ರೇಟರು ಈ ನೌಕರರನ್ನು ತೆಗೆದು ಹಾಕಿದ್ದಲ್ಲದೆ ಮುದ್ದೆಯಾಳಿಗೆ ರೂ. ೫೦೦ ಪ್ರಕಾರ ಪರಿಹಾರ ದ್ರವ್ಯವನ್ನು ಸಹ ಕೊಡಿಸಿರುತ್ತಾರೆ.

ಮದ್ರಾಸು ಗವರ್ನರ ಪೆಂಟಲೆಂಡ ಪ್ರಭುಗಳು ಹಿಂದೀ ಸ್ವರಾಜ್ಯದ ಚಳವಳದ ಕುರಿತು ಮಾಡಿದ ಭಾಷಣವು ಕೊಂಗ್ರೆಸ್ಸು ಸಭೆಯು ಮಂಜೂರು ಮಾಡಿರುವ "ಸೆಲ್ಫ್ ಗವರ್ನಮೆಂಟ" ನಿರ್ಣಯಕ್ಕೆ ವಿರುದ್ಧವಾಗಿರುವದೆಂದೂ ನಂತರ ಮದ್ರಾಸು ಸರಕಾರದವರು ಈ ವಿಷಯದಲ್ಲಿಯೇ ಪ್ರಕಟಗೊಳಿಸಿದ ವಿವರಣೆಯು ಅತೃಪ್ತಿಕರವಾಗಿರುವದೆಂದೂ ಮುಂಬಯಿ ಪ್ರೆಸಿಡೆನ್ಸಿ ಎಸೋಸಿಯೇಶನ್ ಸಭೆಯವರು ಇದೇ ತಿಂಗಳ ತಾ. ೧೫ರಲ್ಲಿ ಸಭೆಕೂಡಿ ನಿರ್ಣಯಿಸಿರುತ್ತಾರೆ. ಮತ್ತು ಆಯಾ ಕಡೆಗಳಲ್ಲಿರುವ ಕೊಂಗ್ರೆಸ್ಸ್ ಕಮಿಟಿಯವರೂ, ಹೋಮ್‌ರೂಲ್ ಲೀಗಿನವರೂ, ಕೊಂಗ್ರೆಸ್ ಸಭೆಯು ನಿರ್ಣಯದ ಪ್ರಕಾರ ಸೆಲ್ಫ್‌ಗವರ್ನಮೆಂಟಿನ ಚಳವಳವನ್ನು ನಡಿಸುತ್ತಿರಬೇಕೆಂದು ಮುಂಬಯಿಯ ಈ ಸಂಘದವರು ಬೋಧಿಸಿರುತ್ತಾರೆ. ಮುಂಬಯಿ ಪ್ರೆಸಿಡೆನ್ಸಿ ಎಸೋಸಿಯೇಶನಿನವರು ತಮ್ಮ ಈ ನಿರ್ಣಯಗಳ ಪ್ರತಿಗಳನ್ನು ಇಂಡಿಯಾ ಸರಕಾರದವರಿಗೂ ಸ್ಟೇಟ್ ಸೆಕ್ರೆಟರಿಗಳವರಿಗೂ ಕಳುಹಿಸಿಕೊಡುವರು.

ಓರಿಯಂಟಲ್ ಲೈಫ್ ಇನ್ಶೂರೆನ್ಸ ಕಂಪೆನಿಯವರು ೧೦ಲಕ್ಷ ರೂಪಾಯಿಗಳನ್ನು ಈ ದೇಶದಿಂದ ಎತ್ತಿದ ಯುದ್ಧಸಾಲಕ್ಕೆ ಕೊಟ್ಟಿರುವರು. ಈ ಮೊದಲೆ ಈ ಕಂಪೆನಿಯವರು ಇಂಗ್ಲಂಡದಲ್ಲಿ ಎತ್ತಲ್ಪಟ್ಟ ಈ ಸಾಲಕ್ಕೆ ೧೫ಸಾವಿರ ಪವನುಗಳನ್ನು ಕೊಟ್ಟಿರುತ್ತಾರೆ.

ಪೆಂಟಲೆಂಡ್ ಪ್ರಭುಗಳು ಕೊಟ್ಟ ಇಂಟರ್ನಮೆಂಟ ಹುಕುಮಿನಿಂದ ಜನರಲ್ಲಿ ಹೋಮ್‌ರೂಲ್ ಲೀಗಿನ ಮೇಲೆ ಇನ್ನಷ್ಟು ಅಗ್ರಹವು ಮುಂಬಯಿ ಪ್ರಾಂತ್ಯಗಳಲ್ಲಿ ಉಂಟಾಗಿದೆ. ಈ ತನಕ ಈ ಲೀಗಿಗೆ ಕೂಡದೆ ಇದ್ದ ಜನರು ಈಗ ಇದರ ಮೆಂಬರಾಗಿ ಸೇರುತ್ತಿದ್ದಾರೆ. ಬಹುಮಾನಪಟ್ಟ ಮಿ॥ ಜಿನ್ನಾ ಮತ್ತು ಜಂಹಾಗಿರ್ ಪೆಟಿಟ್‌ರವರು ಈ ಲೀಗಿನ ಸದಸ್ಯರಾಗಿ ಸೇರಿದರು.

ಮದ್ರಾಸು ಸರಕಾರದವರು ಕೊಟ್ಟ ಇಂಟರ್ನಮೆಂಟ ಹುಕುಮನ್ನು ಹಿಂದಕ್ಕೆ ತೆಗಿಯಬೇಕೆಂದು ಸರಕಾರದವರನ್ನು ಕೇಳಿಕೊಳ್ಳಲು ಅಲಹಾಬಾದಿನಲ್ಲಿ ಮಹಾಜನರ ಸಭೆಯು ಸಧ್ಯದಲ್ಲಿ ಸೇರುವದೆಂತಲೂ ಬಹುಮಾನಪಟ್ಟ ಮದನಮೋಹನ ಮಾಲವಿಯಾರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೆಂತಲೂ ತಿಳಿಯುತ್ತೇವೆ.

ಹಿಂದುಸ್ಥಾನದ ಬೇರೆ ಬೇರೆ ಸಂಸ್ಥಾನಗಳಲ್ಲಿ ಪ್ರಜೆಗಳು ಯುದ್ಧದ ಖರ್ಚಿನ ಬಗ್ಗೆ ಕೊಟ್ಟ ಸಾಲದ ವಿವರ:—

ಬಂಗಾಳ ರೂ. ೧೦,೩೦,೪೯,೪೦೦; ಮುಂಬೈ ರೂ. ೯,೦೨೬,೩೫,೩೦೦; ಪಂಜಾಬು ರೂ. ೩,೭೯,೮೭,೬೦೦; (ಸಂಯುಕ್ತಸಂಸ್ಥಾನ) ಯುನೈಟೆಡ್‌ಪ್ರೊವಿನ್ಸ್ ರೂ. ೨,೯೩,೬೪,೯೦೦; ಮದ್ರಾಸು ರೂ. ೨,೧೧,೩೩,೦೩೦; ಬರ್ಮಾ ರೂ. ೧,೯೩,೫೫,೩೦೦; ಸೆಂಟ್ರಲ್‌ಪ್ರೊವಿನ್ಸ್ ರೂ. ೬೧,೧೨,೪೦೦; ಬಿಹಾರ ಮತ್ತು ಒರಿಸ್ಸ ರೂ. ೪೭,೦೫,೧೦೦, ಅಸ್ಸಾಮ್ ರೂ. ೮,೨೭,೦೦೦; ಗ್ವಾಲಿಯರದ ಮಹಾರಾಜರ ಕಡೆಯಿಂದ ರೂ. ೮೮,೭೯,೦೦೦; ಹೈದರಾಬಾದ ನಿಜಾಮರ ಕಡೆಯಿಂದ ರೂ. ೭೫,೦೦,೦೦೦; ಮೈಸೂರುರಾಜ್ಯ ರೂ. ೫೨,೩೦,೬೦೦; ಬರೋಡೆಯ ಗಾಯಕವಾಡರ ಕಡೆಯಿಂದ ರೂ. ೩೧,೫೭,೮೦೦; ಇತರ ಸಣ್ಣ ರಾಜ್ಯಗಳಿಂದ ರೂ. ೧,೬೪,೩೧,೭೦೦; ಜುಮಲಾ ರೂ. ೩೭,೨೪,೧೧,೨೦೦ ಇದಲ್ಲದೆ ಪೋಸ್ಟ ಆಫೀಸು ಮೂಲಕ ಎತ್ತಿದ ಸಾಲದ ರೂ. ೧,೫೭,೪೭,೨೦೦. ಮತ್ತು ಐದು ವರ್ಷ ಮಾಯದೆಯ ಸರ್ಟಿಫಿಕೇಟುಗಳ ಮೂಲಕ ೨,೮೫,೩೮,೮೮೭; ಸರ್. ವಿಲಿಯಮ್ ಮೇಯರರ ಅಂದಾಜಿನ ಮೇರೆಗೆ ೧೫ ಕೋಟಿ ರೂಪಾಯಿಗೆ ಮಿಕ್ಕಿ ಸಾಲದ ಹಣ ಜನರಿಂದ ಎತ್ತಲ್ಪಡಲಿಕ್ಕಿಲ್ಲವೆಂದಿದ್ದರೂ ಆ ಮೊಬಲಗಿನ ೨॥ ಪಾಲಷ್ಟು ಹೆಚ್ಚು ಬಂದು ಅದಷ್ಟು ಪ್ರಜಾಜನಗಳ ಭಕ್ತಿವಿಶ್ವಾಸಗಳನ್ನು ಸ್ಪಷ್ಟಗೊಳಿಸುತ್ತದೆ.

ದಕ್ಷಿಣ ಹಿಂದೂಸ್ಥಾನ.

ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರರಾದ ದಿವಾನ್ ಬಹದ್ದೂರ್ ಎಲ್. ಡಿ. ಸ್ವಾಮಿಕನ್ನುಪಿಳ್ಳೆಯವರು ಮಿ॥ ಹೆಮಿಂಗ್‌ವೆ. ದೊರೆಗಳವರಿಗೆ ಈ ತಿಂಗಳ ತಾ. ೧೮ರಲ್ಲಿ ತಮ್ಮ ಕೆಲಸದ ಚಾರ್ಜನ್ನು ಕೊಟ್ಟಿರುತ್ತಾರೆ.

ಮುಂಬಯಿಯ ಕ್ರೊನಿಕಲ್ ಪತ್ರದ ಸಂಪಾದಕರಾದ ಮಿ. ಬಿ. ಜಿ. ಹೊರ್ನಿಮನ್ 'ಮರಾಟಾಪತ್ರದ ಸಂಪಾದಕರಾದ ನರಸಿಂಹ ಚಿಂತಾಮಣಿ ಕೇಳ್ಕರ್ ಮತ್ತು 'ಯಂಗ್ ಇಂಡಿಯಾ' ಪತ್ರದ ಸಂಪಾದಕರಾದ ತಿಲಂಗರವರು ಅನಿಬಿಸೆಂಟರವರ ಭೇಟಿಬಗ್ಗೆ ಮದ್ರಾಸಿಗೆ ಬಂದಿರುತ್ತಾರೆ.

ಮಿಸಿಸ್ ಎನ್ನಿ ಬಿಸೆಂಟ್, ಮಿ॥ ಅರುಂಡೆಲ್ ಮತ್ತು ವಾಡಿಯರನ್ನು ಡಿಫೆನ್ಸ್ ಒಫ್ ಇಂಡಿಯಾ ಆಕ್ಟಿನನುಸಾರವಾಗಿ ಪ್ರತಿಬಂಧಿಸಿದ ವಾರ್ತೆಯನ್ನು ತಿಳಕೊಂಡು ಈ ಸಂಸ್ಥಾನದ ಆಯಾ ಕಡೆಗಳಲ್ಲಿ ಪ್ರಜಾ ಜನರು ಸಭೆಕೂಡಿಕೊಂಡು ತಮ್ಮ ಸಂತಾಪಗಳನ್ನು ಸೂಚಿಸುತ್ತಲಿದ್ದಾರೆ. ಡಾಕ್ಟರ್ ಸರ್. ಎಸ್. ಸುಬ್ರಮಣಿಯ್ಯರ್, ದಿವಾನ್ ಬಹದ್ದೂರ್ ಕೇಶವಪಿಳ್ಳೆ, ಬಹುಮಾನಪಟ್ಟ ರಾವ್ ಬಹದ್ದೂರ್ ರಾಮಚಂದ್ರರಾವ್ ಮೊದಲಾದ ಮದ್ರಾಸಿನ ಮುಖಂಡರು ಸಂಸ್ಥಾನದ ಮಹಾಜನರ ಸಭೆಯನ್ನು ಮದ್ರಾಸಿನಲ್ಲಿ ಆಮಂತ್ರಿಸಿರುವರು. ಇದೇ ತಿಂಗಳ ತಾ. ೨೧ನೇ ಗುರುವಾರ ಗೋಖಲೆ ಮಂದಿರದಲ್ಲಿ ಈ ಸಭೆಯು ಕೂಡುವದು. ವರಿಷ್ಠ ನ್ಯಾಯನಿರ್ಣಾಯ ಸಭೆಯ ಮೆಂಬರರಾದ ಬಹುಮಾನಪಟ್ಟ ಬಿ. ಎನ್. ಶರ್ಮಾರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು.

ಸರ್. ಎಸ್. ಸುಬ್ರಮಣ್ಯಯ್ಯರವರ ಸಂಬಂಧಕ್ಕೆ ಉತ್ತರವಿರುವ ಮದ್ರಾಸುಸರಕಾರದ ವರದಿಯನ್ನು ಇನ್ನೊಂದು ಕಡೆಯಲ್ಲಿ ಪ್ರಕಟಿಸಿರುತ್ತೇವೆ. ಇದಕ್ಕೆ ಸರ್. ಸುಬ್ರಮಣ್ಯಯ್ಯರವರು ಉತ್ತರವನ್ನು ಕೊಟ್ಟಿರುತ್ತಾರೆ. ಮಿಸೆಸ್ ಅನಿಬಿಸೆಂಟರವರ ಬಂಧನದ ಸರಕಾರದ [illegible] ಸರ್. ಎಸ್. ಸುಬ್ರಮಣ್ಯಯ್ಯರವರು [illegible] ಒಂದು [illegible]

[illegible]

ಅಕ್ಷಿಯಿಂದ ಈ ವ್ಯಕ್ತಿಗೆ ಕುಂದು ಉಂಟಾಗಿರುವದು. ಹಿಂದೂದೇಶಕ್ಕೆ ಮಹದುಪಕಾರವನ್ನು ಮಾಡಿರುವ ಈ ಮಹಾತ್ಮರುಗಳ ಪೋಷಣೆಗೆ ಬೇಕಾದ ಸಹಾಯವನ್ನು ಮಾಡುವದು ಹಿಂದೀ ಜನರ ಕರ್ತವ್ಯವಾಗಿರುವದು ಎಂದೀ ಡಿಕ್ಲಾರೇಶನೆಯನ್ನು ಸುಬ್ರಮಣ್ಯ ಅಯ್ಯರವರು ಪ್ರಕಟಿಸಿರುವರು. ಈ ಡಿಕ್ಲಾರೇಶನೆ ಪ್ರಕಾರ ಸಿ. ಪಿ. ರಾಮಸ್ವಾಮಿ ಅಯ್ಯರವರು ರೂ. ೩೦೦೦ವನ್ನು ಕೊಟ್ಟಿರುತ್ತಾರೆ. ಇನ್ನೊಬ್ಬರು ತಮ್ಮ ಹೆಸರನ್ನು ಕಾಣಿಸದೆ ರೂ. ೫೦೦ನ್ನು ಕೊಟ್ಟಿರುವರು.

"ನ್ಯೂ ಇಂಡಿಯಾ ಸೆಕ್ಯುರಿಟಿ" ಮೊಕದ್ದಮೆಯಲ್ಲಿ ಹೈಕೋರ್ಟಿನವರು ಕೊಟ್ಟ ತೀರ್ಮಾನದ ಮೇಲೆ ಪ್ರಿವಿಕೌನ್ಸಿಲಿಗೆ ಅಪೀಲು ಮಾಡುವರೆ ಅಪ್ಪಣೆಯು ದೊರಕಿರುವದು.

ಗೃಹಕೃತ್ಯದ ಉಪಯೋಗಕ್ಕೆ ಬೇಕಾದ ಒಡವೆಗಳ ಪ್ರದರ್ಶನವು ಮುಂಬಯಿಯಲ್ಲಿ ಏರ್ಪಡಿಸುವುದೆಂತ ಈ ಮೊದಲೆ ತಿಳಿಯ ಹೇಳಿರುತ್ತೇವೆ. ಇಂಥಾದೊಂದು ಏರ್ಪಾಡನ್ನು ಮದ್ರಾಸಿನಲ್ಲಿಯೂ ಸರಕಾರದವರು ಏರ್ಪಡಿಸುವದರಲ್ಲಿರುತ್ತಾರಾಗಿ ತಿಳಿಯುತ್ತೇವೆ. ಮದ್ರಾಸಿನಲ್ಲಿ ಈ ಏರ್ಪಾಡು ಇಂಡಸ್ಟ್ರಿಯಲ್ ಇಲಾಖೆಯವರಿಂದ ನಡಿಸಲ್ಪಡುವದು ಮತ್ತು ಬಿನ್‌ಸರಕಾರಿ ಮತ್ತು ಸರಕಾರಿ ನೌಕರರ ಒಂದು ಕಮಿಟಿಯು ಈ ಬಗ್ಗೆ ಸಧ್ಯದಲ್ಲಿ ಸ್ಥಾಪಿಸಲ್ಪಡುವದೆಂತ ಗೊತ್ತಾಗುತ್ತದೆ.

'ನ್ಯೂ ಇಂಡಿಯಾ ಪತ್ರದ ಮಾಲಿಕರಾದ ಮಿಸಿಸ್ ಎನ್ನಿಬಿಸೆಂಟರರಿಗೆ ಪ್ರತಿಬಂಧವು ಪ್ರಾಪ್ತವಾದ್ದರಿಂದ 'ನ್ಯೂ ಇಂಡಿಯಾ' ಛಾಪಖಾನೆಯಲ್ಲಿ ಅದನ್ನು ಅಚ್ಚು ಹಾಕಲು ಸಾಧ್ಯವಾಗದೆ ನಿಲ್ಲಿಸೋಣಾಗಿತ್ತು. ಮುಂಬಯಿಯ ಮಾಜಿ ಹೈಕೋರ್ಟ ಜಡ್ಜರವರ ಪುತ್ರ ಶ್ರೀ ಪಿ. ಕೆ. ತಿಲಂಗರವರು ಈ ಛಾಪಖಾನೆಯ ಮಾಲಿಕತ್ವವನ್ನು ಪಡೆದಿರುವದರಿಂದ ನ್ಯೂ ಇಂಡಿಯಾ ಪತ್ರವು ತಾ. ೨೧ರಿಂದ ಪುನಹ ಪ್ರಕಟವಾಗುವದು. ಎನ್ನಿಬಿಸೆಂಟರವರು ಈ ಛಾಪಖಾನೆಯ ಬಗ್ಗೆ ಇಟ್ಟ ಠೇವಣಾತಿಯು ಅವರಿಗೆ ತಿರುಗಿ ಕೊಡಲ್ಪಡಲಾಗಿರುವದು. ಪಿ. ಕೆ. ತಿಲಂಗರವರಿಂದ ರೂ. ೨೦೦೦ದ ಜಾಮೀನನ್ನು ಪಡಕೊಂಡಿರುತ್ತಾರೆ.

"ಸಿರವಾನಿ ಪೋಟರ್ ಸ್ಕೀಮ್" ಎಂಬ ಜಲಾಶಯವನ್ನು ಏರ್ಪಡಿಸುವ ಬಗ್ಗೆ ಮಲೆಬಾರಿನ ಮನ್ನಾರ್‌ಘಟ ನಾಯರರ ಕುಟುಂಬದಿಂದ ೧॥ ಲಕ್ಷ ಕ್ರಯಕೊಟ್ಟು ೩೦,೦೦೦ ಎಕ್ರೆಗಳ ವಿಸ್ತೀರ್ಣದ ಭೂಪ್ರದೇಶವನ್ನು ಸರಕಾರದವರು ಪಡೆದಿರುತ್ತಾರೆ. ಈ ೧॥ ಲಕ್ಷ ರೂಪಾಯಿಗಳ ಮೊಬಲಗನ್ನು ಯುದ್ಧಸಾಲವಾಗಿ ಕೊಡುವರೆ ಈ ನಾಯರ ಕುಟುಂಬದ ಮುಖ್ಯಸ್ಥರು ನಿರ್ಣಯಿಸಿರುತ್ತಾರೆ.

ವೈಸೂರಿನ ಸಂಪದಭಿವೃದ್ಧಿಯ ಪರಿಷತ್ತಿನಲ್ಲಿ ಸಂಸ್ಥಾನದಲ್ಲಿ ಛಾತ್ರವೃತ್ತಿಯನ್ನೂ ಇರಗೊಡಿಸಕೂಡದೆಂಬ ಅಭಿಪ್ರಾಯವು ಬಹುಜನರಿಂದ ಆದರತೆಯನ್ನು ಹೊಂದಿರುತ್ತದೆ.

ಎನ್ನಿಬಿಸೆಂಟ್, ಎರಂಡೆಲ್, ವಾಡಿಯಾ ಈ ಮೂವರ ಮೇಲೆಯೂ ಸರಕಾರದವರಿಂದ ಇಂಟರ್ನಮೆಂಟ್ ಆರ್ಡರು ಹೊರಟಿವೆ. ಇದರ ಪ್ರಕಾರ ಅವರು ಕಳನಿಮಲೆ, ಕೊಯಮತ್ತೂರು, ವಿಕಾರಾಬಾದ್ ಮ್ಯುನಿಸಿಪಾಲಿಟಿ, ಬಳ್ಳಾರಿಜಿಲ್ಲೆ ಅಥವಾ ಕೊಯಮುತ್ತೂರುಜಿಲ್ಲೆ ಈ ಪೈಕಿ ತಮಗೆ ಇಷ್ಟವಿದ್ದ ಸ್ಥಳದಲ್ಲಿ ಮಾತ್ರವೇ ವಾಸಮಾಡಬಹುದೆಂತಲೂ, ಇವರು ಯಾರೊಡನೆ ಕಾಗದಪತ್ರಗಳನ್ನು ನಡೆಸುವದಕ್ಕೂ ಈ ಸ್ಥಳಗಳನ್ನು ಬಿಟ್ಟು ಸ್ವೇಚ್ಛೆಯಾಗಿ ಅತ್ತಿತ್ತ ಹೋಗುವದಕ್ಕೂ ನಿಬಂಧವಿದೆಯೆಂದೂ ಗೊತ್ತಾಗುತ್ತದೆ.

ಜಿಲ್ಲಾ ಕಲೆಕ್ಟರುಗಳು, ಅವರ ಕೈಕೆಳಗಿನ ಡಿವಿಜನಲ್ ಆಫೀಸರರೂ, ತಹಸೀಲ್ದಾರರೂ ಕೃಷಿ ಇಲಾಖೆಯ ವಹಿವಾಟುಗಳ ಕಡೆಗೆ ಹೆಚ್ಚಿನ ಗಮನಕೊಡಬೇಕೆಂತಲೂ, ಸಾಧ್ಯವಿದ್ದಾಗ ಅವರು ಅಲ್ಲಲ್ಲಿ ಸರಕಾರದಿಂದ ಏರ್ಪಡಿಸಿದ ವ್ಯವಸಾಯ ಕ್ಷೇತ್ರಗಳಿಗೆ ಹೋಗಿ ಅಲ್ಲಿಯ ಕೆಲಸದ ಅನುಭವವನ್ನು ಪಡೆಯಬೇಕೆಂತಲೂ ನಂಬ್ರ, ೧೪೯೩ ರವಿನ್ಯೂ ಗವರ್ನಮೆಂಟ್ ಒರ್ಡರ ಬಂದಿದೆ.

ಪರಸ್ಪರ ಸಹಾಯಕ ಸಂಘಗಳ ವರ್ಷಾವಧಿ ಲೆಖ್ಖಗಳನ್ನು ತಯಾರಿಸುವಾಗ ಆಯಾ ವರ್ಷದ ಆಖೈರಿಗೆ ಹುಟ್ಟಬರುವ, ಆದರೆ ನಿಜವಾಗಿ ವಸೂಲಾಗದ ಬಡ್ಡಿಯನ್ನು ಜಮೆಗೆ ಎಣಿಸದ ಆದಾಯನಷ್ಟದ ಲೆಖ್ಖವನ್ನು ತಯಾರಿಸಬೇಕಾಗಿ ಈ ಮೊದಲು ಮದ್ರಾಸು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದರು. ಕಾಯಿದೆ-ಕಳೆದು ಹೋದ ಬಡ್ಡಿಯನ್ನೂ ಲೆಖ್ಖಕ್ಕೆ ಹಿಡಿಯದೆ ಇದ್ದರೂ ವಸೂಲಾಗಲಿಕ್ಕೆ ಇನ್ನೂ ಬಾಯಿದೆ ಇರುವ ಬಡ್ಡಿಯ ಅಂಶವನ್ನು ಜಮೆಗೆ ಹಿಡಿಯುದಿರುವದು ಸಕ್ರಮವಲ್ಲವೆಂದು ಪ್ರತಿಗಳ ಕಡೆಯಿಂದ ಬಹಳ ಮನವಿಗಳು ಸರಕಾರಕ್ಕೆ ಹೋಗಿದ್ದವು. ಆದರೆ ಸರಕಾರದವರು ಈ ವಿಷಯದಲ್ಲಿ ಸೆಂಟ್ರಲ್ ಬೇಂಕುಗಳಿಗೆ ಮಾತ್ರ ವಿನಾಯಿತಿ ಇದೆ ಎಂತಲೂ ಇತರ ಸಂಘಗಳು ಮೊದಲಿನ ಹುಕುಮಿನಂತೆ ವಸೂಲಾದ ಬಡ್ಡಿಯನ್ನು ಅದು ವಸೂಲಾಗುವಂಥದ್ದಾದರೂ ವರ್ಷಾಂತ್ಯಕ್ಕೆ ವಸೂಲಾಗದಿದ್ದಲ್ಲಿ ವಸೂಲಾಗದ ಸಾಲವೆಂಬಂತೆ ವಜಾಮಾಡಬೇಕೆಂದೂ ತಿಳಿಸಿರುವರು.

ಉತ್ತರ ಕೇರಳೀಯ ನಾಯರಸಮಾಜದ ೬ನೇ ಪರಿಷತ್ತು ಪಂಟಿರಾಯಿನಿ ಎಂಬಲ್ಲಿ (ಮಲೆಬಾರಜಿಲ್ಲೆ) ಕಳೆದ ವಾರದಲ್ಲಿ ಜರುಗಿತು. ಇದರಲ್ಲಿ ಮಲೆಬಾರ ಜಿಲ್ಲೆಯ ವಿಭಜನೆಯು [illegible] ಕೊನೆಯನ್ನು ಉತ್ತರ ಮಲೆಬಾರಜಿಲ್ಲೆಗೆ ಸೇರಿಸಬೇಕೆಂದು ಒಂದು ಠರಾವು ಮಂಜೂರು ಆಯಿತು.

ಮದ್ರಾಸು ಶಹರಿನಲ್ಲಿ ಕಾಲರಾದ ಉಪದ್ರವು ಹೆಚ್ಚುತ್ತಿರುವದನ್ನು ಕಂಡು ಅದನ್ನು ತಗ್ಗಿಸುವುದಕ್ಕೆ ಬೇಕಾದ ಏರ್ಪಾಡುಗಳನ್ನು ಆಲೋಚಿಸುವ ಬಗ್ಗೆ ಒಂದು ಕಮಿಟಿಯನ್ನು ಏರ್ಪಡಿಸಿರುವರು.

ಮದ್ರಾಸು ಸಂಸ್ಥಾನದ [illegible] ಜಿಲ್ಲೆಯಲ್ಲಿ [illegible]

[illegible]

ಅನುಕ್ರಮಣಿಕೆ.

ಅಗ್ರಲೇಖಗಳು:— ಪಾನು.
೧ ಮೊನ್ನೆಯ ಪ್ರತಿಬಂಧಗಳು . . . ೪
೨ ರಾಷ್ಟ್ರೀಯ ಶಿಕ್ಷಣ . . . ೪-೫
ಸ್ಫುಟವಿಚಾರಗಳು:—
೧ ಪಂಜಾಬಿನ ಐಕ್ಯಮತದ ಪ್ರಾಥಮಿಕ ಶಿಕ್ಷಣ . . . ,,
೨ ಹೈದರಾಬಾದಿನ 'ಉಸ್ಮಾನಿಯಾ' ಯುನಿವರ್ಸಿಟಿ . . .
೩ ವಿದ್ಯಾರ್ಥಿಗಳ ವಿಷಯದಲ್ಲಿ ಮುಂಬಯಿ ಸರಕಾರದ ಸರಕ್ಯುಲರು. ,,
೪ ವಸಾಹತುಗಳೂ ಹಿಂದುಸ್ಥಾನವೂ . . . ,,
೫ ಮದ್ರಾಸಿನ ಪ್ರದರ್ಶನ. . . . ,,
೬ [illegible] — ಮಂಗಳೂರು . . . ,,
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ . . . ೫
೨ ವಿದೇಶ ವೃತ್ತಾಂತ . . . ,,
೩ ಉತ್ತರ ಹಿಂದುಸ್ಥಾನ . . . ,,
೪ ದಕ್ಷಿಣ ಹಿಂದುಸ್ಥಾನ . . . ,,
೫ ಮದ್ರಾಸು ಸರಕಾರದ ವರದಿ . . . ,,
೬ ಬಾಹ್ಯ ಪತ್ರಗಳು: ಬಂಟವಾಳ, ಕುಂಬಳೆ . . . ೫-೬
೭ ನಮ್ಮ ಹಳ್ಳಿಯಲ್ಲಿ ಎತ್ತಲ್ಪಟ್ಟ ಯುದ್ಧ ಸಾಲ (ಕರ್ನಾಟಕ ಸಾಹಿತ್ಯ ಪರಿಷತ್ತು) . . . ,,

ಸ್ವದೇಶಾಭಿಮಾನಿ.

ಶಕ ೧೮೩೯ ಆಷಾಢ ಶು. ೩ ಶುಕ್ರವಾರ.

ಮೊನ್ನೆಯ ಪ್ರತಿಬಂಧಗಳು.

ಮದ್ರಾಸ್ ಸರಕಾರದ ಹುಕುಮಿನ ಅನುರೋಧದಿಂದ ಜೂನ್ ೧೬ ತಾರೀಕಿನ ದಿವಸ "ನ್ಯೂ ಇಂಡಿಯಾ" ಪತ್ರದ ಸಂಪಾದಕ ಮತ್ತು ಮಾಲಕರಾದ ಮಿಸೆಸ್ ಎನಿಬಿಝೆಂಟರವರನ್ನೂ, ಸಹಕಾರಿ ಸಂಪಾದಕರಾದ ಮಿ. ಅರುಂಡೇಲ ಹಾಗು ಮಿ. ವಾಡಿಯಾ ಇವರನ್ನೂ ಪ್ರತಿಬಂಧಿಸಿದ ಸುದ್ದಿಯು ಈಗ ಹಿಂದುಸ್ಥಾನದೊಳಗಿನ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಮಾತ್ರವಲ್ಲ, ಹಳ್ಳಿಹಳ್ಳಿಗಳಲ್ಲಿ ಕೂಡ ಹಬ್ಬಿಹೋಗಿದೆ. ಕಳೆದ ಕೌನ್ಸಿಲಿನ ಅಂತ್ಯದಲ್ಲಿ ಆದ ಲೊ. ಪೆಂಟಲೆಂಡರ ಭಾಷಣದ ಮೇಲಿಂದ, ಇಂಥ ಪ್ರಸಂಗವು ಬೇಗನೆ ಬಂದೀತೆಂದು ಸ್ವತಃ ಮಿಸೆಸ್ ಬಿಝೆಂಟರು ಮತ್ತು ಅವರ ಸ್ನೇಹಿತ ವರ್ಗದವರು ನೆನಸಿಕೊಂಡೆ ಇದ್ದರು. ಅವರ ನಿರೀಕ್ಷಣದಂತೆಯೆ ಮದ್ರಾಸ ಸರಕಾರದವರ ಹುಕುಮು ಹೊರಟು ಜಾರಿಮಾಡಲ್ಪಟ್ಟಿತು. ಸರಕಾರದ ಈ ಕೃತ್ಯವನ್ನು ಲೋಕಮತದ ದೃಷ್ಟಿಯಿಂದ ವಿಚಾರಮಾಡಿದರೆ ಅದು ಸಮಾಧಾನದ್ದಾಗಿಲ್ಲೆಂದು ಎಲ್ಲ ದೇಶಿಪತ್ರಿಕೆಗಳಲ್ಲಿ ಲೋಕಮತವು ವ್ಯಕ್ತವಾಗುತ್ತಿದೆ. ಅಲ್ಲಲ್ಲಿ ಸಭೆಗಳು ಕೂಡಿ ಜನರು ಸರಕಾರದ ಈ ಕೃತ್ಯಕ್ಕೆ ತಮ್ಮ ಅಸಮ್ಮತಿಯನ್ನು ತೋರಿಸುತ್ತಿದ್ದಾರೆ.

ಜೂನ್ ೧೬ನೆಯ ತಾರೀಕಿನ ದಿವಸ ನಡೆದ ಈ ಪ್ರತಿಬಂಧಗಳ ಕುರಿತು ನಮ್ಮಂಥವರು ಆಲೋಚಿಸಿದರೆ ಆಲೋಚಕನ ಮನಸ್ಸು ನಿಜವಾಗಿ ಗೊಂದಲದಲ್ಲಿ ಬೀಳದೆ ಇರದು. ಲೊ. ಪೆಂಟಲೆಂಡರು ಉದಾರ ತತ್ವವಾದಿಗಳಾದ್ದರಿಂದ ವಿಲಾಯತಿಯೊಳಗಿನ ಉದಾರಪಕ್ಷದವರ ಪಟ್ಟಿಯಲ್ಲಿ ಇವರ ಹೆಸರು ಇರುವುದು. ಇವರ ಜ್ಞಾನ, ಅನುಭವ, ಪದವಿ ಮುಂತಾದ ಸಹಕಾರ ಕಾರಣಗಳು ಉಚ್ಚತರಗತಿಯವು. ಸ್ವಾತಂತ್ರ್ಯವು ಸ್ವತಃ ಅವರಿಗೆ ಅತಿ ಪ್ರಿಯವಾದ್ದೆಂದು ಅವರ ಭಾಷಣದಿಂದಲೆ ಗೊತ್ತಾಗುವುದು. ಮಾತ್ರವಲ್ಲ, ಈ ಪ್ರತಿಬಂಧಗಳ ಮುಂಚಿನ ದಿನ ಅವರು ಕೊಟ್ಟಿರುವ 'ವರದಿ'ಯಲ್ಲಿ "ಸ್ವರಾಜ್ಯದ ಧ್ಯೇಯವು ತಪ್ಪಲ್ಲ, "ಕೊನ್‌ಸ್ಟಿಟ್ಯೂಶನಲ್" ಪದ್ಧತಿಯ ಚಳವಳವು ಆಕ್ಷೇಪಕರವಲ್ಲ" ಎಂದು ಮುಂದಾಗಿ ಹೇಳಿರುವರು. ಇವರ ಅಂತಃಕರಣವು ಸ್ವಾಭಾವಿಕವಾಗಿ ಮೃದುವಾದ್ದೆಂದು ಅವರ ಪರಿಚಯದವರನೇಕರು ಹೇಳುವರು. ಇಷ್ಟೆಲ್ಲ ವರ್ಣನವನ್ನು ಕೊಡುವುದಕ್ಕಿಂತ ಅವರು ಉದಾರ ತತ್ವವಾದಿಗಳೆಂದು ಒಂದೆ ಮಾತಿನಿಂದ ವರ್ಣಿಸುವುದು ಸಾಕಾಗಿದೆ. ಈಗ ಮಿಸೆಸ್ ಎನಿಬಿಝೆಂಟರ ವಿಷಯದಲ್ಲಿ ಹೇಳುವುದಾದರೆ ಪ್ರಥಮತಃ ಅವರು ಇಂಗ್ಲಿಷ್ ಜನಾಂಗದವರು. ಅವರ ರಾಜನಿಷ್ಠೆಯ ವಿಷಯದಲ್ಲಿ ಸಂದೇಹಪಡುವುದಕ್ಕೆ ಸ್ಥಳವಿಲ್ಲ. ಎರಡನೆಯದಾಗಿ, ಬಿಝೆಂಟರ ಉದ್ದೇಶವು ಲೊ. ಪೆಂಟಲೆಂಡರಿಗೆ ಅಭಿಮತವಾದ ಅಂತರ್ಗತ ಸ್ವರಾಜ್ಯವೆ ಅಲ್ಲದೆ ಬೇರೆ ಅಲ್ಲ. ಇದನ್ನು ಬಿಝೆಂಟರು ಲೇಖನದಲ್ಲಿಯೂ ಭಾಷಣದಲ್ಲಿಯೂ ಸಹಸ್ರಶಃ ವ್ಯಕ್ತಗೊಳಿಸಿದ್ದಾರೆ. ಈ ರಾಜಮಾನ್ಯವಾದ ಉದ್ದೇಶವನ್ನು ಕೈಗೂಡಿಸಲು ಅವರು ಕೈಕೊಂಡಿರುವ ಉಪಾಯಗಳು ಅರಾಜಕರವಾಗಿದ್ದವು, ಕಾಯಿದೆಯಿಂದ ಪ್ರಸ್ಥಾಪಿತವಾದ ಬ್ರಿಟಿಷರಾಜ್ಯಕ್ಕೆ ಬಾಧಕವಾಗಿದ್ದವು, ರಾಜ್ಯದ ಶಾಂತತೆಗಾಗಲಿ, ಯುದ್ಧದ ನಡೆಯುವಿಕೆಗಾಗಲಿ ತೊಂದರೆಯನ್ನುಂಟುಮಾಡುವವಿದ್ದವೆಂದು ಹೇಳಲು ಸರಕಾರಕ್ಕೆ ಸಾಧ್ಯವಿಲ್ಲ. "ನ್ಯೂ ಇಂಡಿಯಾ" ಆಗಲಿ ಹೋಮ್-ರೂಲ್-ಲೀಗ್ ಗೆ ಪ್ರಸ್ಥಾಪಿತವಾಗಿ ಎಷ್ಟೋ ಸಮಯವಾಯಿತು. ಆ ಅವಧಿಯಲ್ಲಿ ಈ ಎರಡು ಸಂಸ್ಥೆಗಳ ಮೂಲಕ ಈ ಪ್ರಾಂತದಲ್ಲಿ ಅಥವಾ ಅನ್ಯಪ್ರಾಂತ್ಯಗಳಲ್ಲಿ [illegible] ಗಲಭೆ, ಗದ್ದಲ ಮುಂತಾದ್ದು ಒಂದಾದರೂ [illegible] ಸಾಧ್ಯವಿಲ್ಲ; [illegible]

ಇಲ್ಲ. ಮತ್ತು ಅದನ್ನು ತೋರಿಸಿಕೊಡುವುದು ಹೇಗೆ? ತಾತ್ಪರ್ಯ, ಎನಿಬಿಝೆಂಟರು ರಾಜನಿಷ್ಠರು, ಅವರ ಸಂಸ್ಥೆಗಳೂ, ಪ್ರಯತ್ನಗಳೂ. ಕೊನ್‌ಸ್ಟಿಟ್ಯೂಶನಲ್ ಆಗಿ ಇದ್ದವು. ಮತ್ತು ಪೆಂಟಲೆಂಡರವರಂತು ಉದಾರಮನಸ್ಕರು. ಹೀಗಿರುವಾಗ ಈ ಪ್ರತಿಬಂಧಗಳು ಸರಕಾರದ ತಲೆಯಲ್ಲಿ ಯಾಕೆ ಬಂದವೊ ನಮಗನಕ ಗೊತ್ತಾಗದು. ಹೋಮ್ ರೂಲ್‌ವಾದಿಗಳು ಸರಕಾರಿ ಅಧಿಕಾರಿಗಳ ದೋಷಗಳನ್ನು ಬೈಲಿಗೆ ತರುವಾಗ ಅಸಭ್ಯಭಾಷೆಯನ್ನುಪಯೋಗಿಸಿ ಕುಟಿಲಟೀಕೆಯನ್ನು ಮಾಡುವರೆಂದು ಮೊದಲಿನ ದಿವಸ 'ವರದಿ'ಯಲ್ಲಿ ಹೇಳಿ ಇದರ ದೆಸೆಯಿಂದ ಮಿಸೆಸ್ ಬಿಝೆಂಟ ಪ್ರಭೃತಿಯರನ್ನು ಪ್ರತಿಬಂಧಿಸಿದ್ದಾರೆ, ಎಂದು ತಿಳಿದರೆ, ಲೊರ್ಡ ಪೆಂಟಲೆಂಡರಲ್ಲಿ ದೂರದರ್ಶಿತ್ವವೂ, ಸಹನಶೀಲತೆಯೂ ಸ್ವಲ್ಪ ಕಡಿಮೆಯೆಂದು ಬಹು ಕಷ್ಟದಿಂದ ಹೇಳಬೇಕಾಗುತ್ತದೆ. ಮಗುವು ಅತ್ಯಾಗ್ರಹದಿಂದ ಹಟವು ಹಿಡಿಯುತ್ತದಾದರೆ ಅದರ ತಂದೆಯು ಅದನ್ನು ಉಪಚಾರಮಾಡಿ, ಕೊನೆಗೆ ಯಾವುದಕ್ಕೂ ಕೇಳುವದಿಲ್ಲ ಎಂತಾದರೆ ಏನೊ ಕೊಂಚ ಗದರಿಸುವನು ಹೊರತು, ಆ ಮಗುವಿನ ಹೆಸರನ್ನೇ ಅಳಿಸಿಬಿಡನು. ಈ ಪಿತೃಕರ್ತವ್ಯವನ್ನು ನಾವು ಲೋಕದಲ್ಲಿ ದಿನಂಪ್ರತಿ ನೋಡುತ್ತಿರುತ್ತೇವೆ. ಬಿಝೆಂಟರವರು ತಮ್ಮ ಮತಪ್ರಸರಣೆಯಲ್ಲಿ ಅಸಭ್ಯಭಾಷೆ ಮತ್ತು ಕುಟಿಲಟೀಕೆಯನ್ನು ಉಪಯೋಗಿಸಿದ್ದು ಇದ್ದರೂ ಪಿತೃಕರ್ತವ್ಯದ ದೃಷ್ಟಾಂತಕ್ಕೆ ಅನುಸಾರವಾಗಿ ಸಹನಶೀಲತೆಯಿಂದಲೂ, ಸಕ್ರಿಯವಾದ ಸಹಾನುಭೂತಿಯಿಂದಲೂ ಮತ್ತು ಮುಖ್ಯತಃ ಪಯೋರ್ದ್ರಭಾವದಿಂದಲೂ ಇದನ್ನು ವಿಚಾರಕ್ಕೆ ತಂದುಕೊಳ್ಳಬೇಕಿತ್ತಲ್ಲದೆ ಸಹಸಾ ದಂಡೋಪಾಯವನ್ನವಲಂಬಿಸುವುದು ಒಳ್ಳೇದಲ್ಲ. ನಾವು ತೋರಿಸಿದ ಈ ಉದಾರ ಕ್ರಮವನ್ನು ವಿಲಾಯತಿಯೊಳಗಿನ ಮುತ್ಸದ್ದಿಗಳು ಸರಿಯಾಗಿ ಅನುವರ್ತಿಸುವರು. ಐರಿಶ್ ಹೋಮ್-ರೂಲವೆ ಇದಕ್ಕೆ ಸಾಕ್ಷಿಯು. ಪಾರ್ಲಿಮೆಂಟಿನ ಕಡೆಯಿಂದ ತಯಾರಿಸಿಕೊಟ್ಟ ಹೋಮ್-ರೂಲಿನ ಯೋಜನೆಯು ಐರ್ಲಂಡದವರಿಗೆ ಒಪ್ಪಿಗೆಯಿಲ್ಲಾದ ಮೇಲೆ ಅವರಿಗೆ "ನೀವೆ ನಿಮ್ಮ ಒಪ್ಪಿಗೆಯಂತೆ ಹೋಮ್-ರೂಲಿನ ಯೋಜನೆಯನ್ನು ತಯಾರಿಸಿಕೊಂಡು ಬನ್ನಿರಿ" ಎಂದು ಪ್ರಧಾನಮಂತ್ರಿಗಳಂಥವರೆ ಹೇಳುವರು. ಐರ್ಲಂಡಿನ ಚರಿತ್ರವನ್ನು ನೋಡಿದರೆ, ಅಲ್ಲಿ ಅರಾಜಕವರ್ಗ ಕೂಡ ಇದೆ. ಅಂಥವರ ಆಲೋಚನವು ಅಲ್ಲಿಯ ಹೋಮ್‌ರೂಲಿನ ಯೋಜನೆಯಲ್ಲಿ ಮೆರೆಯುವುದು. ಎಂದಮೇಲೆ ಇಂಥ ಅರಾಜಕವರ್ಗವನ್ನೂ ಕೂಡಾ ವಿಲಾಯತಿಯ ಸರಕಾರವು ಸಹಿಸಿಕೊಳ್ಳುತ್ತದೆ. ಇಲ್ಲಿ ಮಾತ್ರ ಬರೆ ರಾಜನಿಷ್ಠ ಚಳವಳವೂ ನಡೆಯಲು ಇಂಬಿಲ್ಲ. ನಮ್ಮ ಬಂಧುಗಳಾದ ಮದ್ರಾಸಿನ 'ಹಿಂದು' ಪತ್ರಕಾರರು ಹೇಳುವಂತೆ ಐರ್ಲಂಡಿನಲ್ಲಿ ರಾಜಕೀಯ ಕೈದಿಗಳನ್ನು ಯಾವ ದಿವಸ ಬಿಟ್ಟಿರುವರೊ ಆ ದಿನ ಇಲ್ಲಿ ದೇಶದ ಮುಖಂಡರಿಗೆ ಪ್ರತಿಬಂಧನವು ಪ್ರಾಪ್ತವಾಗಿದೆ. ಒಂದಕ್ಕೊಂದು ಎಷ್ಟು ಮಾತ್ರವೂ ತಾಳಬೀಳದ ಈ ಸಂಗತಿಗಳು ಒಂದೇ ಸಾಮ್ರಾಜ್ಯದಲ್ಲಿ ನಡೆಯುತ್ತವಲ್ಲ? ಇಲ್ಲಿಯ ಸರಕಾರದ ಉಗ್ರವರ್ತನವನ್ನು ನೋಡುವಾಗ ಅಚಲವಾದ ರಾಜನಿಷ್ಠ ಪ್ರಜೆಯೂ ಕೂಡ ಕಂಪಿಸಬೇಕಾಗುತ್ತದೆ. ಸರಕಾರವು ಸಮರ್ಥವಾದ್ದರಿಂದ ಅದಕ್ಕೆ ಯಾವುದೂ ಅಸಾಧ್ಯವಲ್ಲ. ಇಲ್ಲಿಯ ಈ ಚಳವಳವನ್ನು ನಿಲ್ಲಿಸುವದು ಒಂದು ದೊಡ್ಡ ಮಾತಲ್ಲ. ಆದರೆ ಪ್ರಜೆಗಳ ಮತ್ತು ಸರಕಾರದ ಹಿತದೃಷ್ಟಿಯಿಂದ ನಾವು ದೀನಪ್ರಜೆಗಳು ಹೇಳುವದೇನೆಂದರೆ ಇಂಥ ಉಗ್ರಕ್ರಮವನ್ನು ತಾಳುವುದು ದೂರದರ್ಶಿತ್ವವಲ್ಲ. ಇದೇ ನಮ್ಮ ನಮ್ರವಿಜ್ಞಾಪನೆಯು.

ಮಿಸೆಸ್ ಎನಿಬಿಝೆಂಟರು ಹಿಂದುಸ್ಥಾನದ ಮೇಲೆ ಮಾಡಿದ ಉಪಕಾರಗಳನ್ನು ಎಣಿಸಿದರೆ ನಿಜವಾಗಿ ಅವು ಇಂತಿಷ್ಟು ಎಂದು ಹೇಳಲು ಸಾಧ್ಯವಿಲ್ಲ. ಪ್ರತ್ಯಕ್ಷ-ವಾದ ಮತ್ತು ಜಡ-ವಾದ ಇವೆ ಪ್ರಧಾನವಾದ ಇಂಗ್ಲಿಷ್ ವಿದ್ಯೆಯನ್ನು ಓದಿಕೊಂಡು ವೈದಿಕ ಗ್ರಂಥಗಳ ಪರಿಶೀಲನವಿಲ್ಲದೆ 'ಧರ್ಮವೆ ಸುಳ್ಳು' ಎಂದು ತಿಳಿದು ಅದರ ಮೇಲೆ ಒಂದು ತರದ ಅವಿಶ್ವಾಸವನ್ನು ಪಡುವ ಸಮಯವು ಇಲ್ಲಿಯ ಸುಶಿಕ್ಷಿತರಲ್ಲಿ ಬಂದಿತ್ತು. ಆದರೆ ಮಿಸೆಸ್ ಎನಿಬಿಝೆಂಟರು ಥಿಯೊಸೊಫಿಯ ತತ್ವಗಳ ಬೋಧನದಿಂದ ನಮ್ಮ ನಾಸ್ತಿಕರ ಕಣ್ಣು ತೆರೆದು ಚಿಕಿತ್ಸಕ ದೃಷ್ಟಿಯಿಂದ ಧರ್ಮವನ್ನು ಅಭ್ಯಾಸಿಸುವ ಕ್ರಮವನ್ನು ತೋರಿಸಿಕೊಟ್ಟರು. ಹಿಂದೂಸ್ಥಾನದ ಮೇಲಿನ ಅವರ ಈ ಉಪಕಾರವು ಚಿರಸ್ಮರಣೀಯವಾದ್ದು. ರಾಜಕೀಯ ವಿಷಯದಲ್ಲಿ ಬಿಝೆಂಟರ ತತ್ವಗಳು ಎಷ್ಟೊ ಅಧಿಕಾರಿಗಳಿಗೆ ಸಮ್ಮತವಿರಲಾರವು. ಮತ್ತು ಇದು ಆಶ್ಚರ್ಯವೂ ಅಲ್ಲ. ಗೋಖಲೆಯವರಂಥವರಿಗೆ ಸಹ ತುಂಬಿದ ಕೌನ್ಸಿಲಿನಲ್ಲಿ ಕರ್ಝನ ದೊರೆಗಳಿಂದ ಎಷ್ಟೋ ಸಾರಿ ವಾಗ್ದಂಡನವನ್ನು ಸಹಿಸಬೇಕಾಗಿತ್ತು. ಅಧಿಕಾರಿಗಳ ಬೆದರಿಸುವಿಕೆಯನ್ನು ಸಹಿಸಬೇಕಾಗಿತ್ತು. ಹಾಗಿರುವಾಗ ಎನಿಬಿಝೆಂಟರ ಪಾಡೇನು? ತಥಾಪಿ ಅವರು ಯಾವ ಘಾತಕ ಮಾರ್ಗವನ್ನೂ ಉಪದೇಶಿಸದೆ ಕಾಯಿದೆ, ಸನದು ಮುಂತಾದ ರಾಜಮಾನ್ಯ ತತ್ವಗಳನ್ನವಲಂಬಿಸಿಯೆ ಹಿಂದಿ ಜನರಲ್ಲಿ ರಾಜಕೀಯ ಶಿಕ್ಷಣವನ್ನು ಕೊಡುತ್ತಿದ್ದರು. ಈ ಸಂಗತಿಗಳನ್ನಾಲೋಚಿಸಿಕೊಂಡು ಮದ್ರಾಸ ಸರಕಾರವೂ ಹಿಂದುಸ್ಥಾನ ಸರಕಾರವೂ ಮತ್ತು ವಿಲಾಯತಿಯೊಳಗಿನ ಸರಕಾರವೂ ಈ ಕಠೋರಮಾರ್ಗವನ್ನು—ದಂಡೋಪಾಯವನ್ನು ಬಿಟ್ಟುಬಿಡಬೇಕಾಗಿ ಈ ಎಲ್ಲ ರಾಜನಿಷ್ಠ ಪ್ರಜೆಗಳು ಬಯಸುತ್ತಿದ್ದಾರೆ. ಅಧಿಕಾರಿಗಳು ತಮ್ಮ ಮನಸ್ಸನ್ನು ಶಾಂತಪಡಿಸಿಕೊಳ್ಳಬೇಕು, ದೃಷ್ಟಿಯನ್ನು ನಿರ್ಮಲ ಮಾಡಿಕೊಳ್ಳಬೇಕು ಮತ್ತು ಈ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಬೇಕು. ಈ ಪ್ರತಿಕೂಲ ಧೋರಣವನ್ನು ಸರಕಾರವು [illegible] ಸಮಯದಲ್ಲಿ 'ರಾಜನಿಷ್ಠ ಪ್ರಜೆಗಳಲ್ಲಿ' [illegible]

ರಾಷ್ಟ್ರೀಯ ಶಿಕ್ಷಣ.

ಲೇಖಾಂಕ ೨.

ಹಿಂದಿನ ಸಂಚಿಕೆಯಲ್ಲಿ ಈಗಿನ ಶಿಕ್ಷಣದ ಅಪ್ರಯೋಜಕತ್ವ, ರಾಷ್ಟ್ರೀಯ ಶಿಕ್ಷಣದ ಅವಶ್ಯಕತೆ ಮತ್ತು ಅದರ ಇತಿಹಾಸ ಈ ಮೂರು ಸಂಗತಿಗಳನ್ನು ನಿರೂಪಿಸಿದ್ದೇವೆ. ಈ ಹೊತ್ತಿನ ಲೇಖದಲ್ಲಿ ರಾಷ್ಟ್ರೀಯ ಶಿಕ್ಷಣವೆಂದರೇನು, ಅದನ್ನು ಈಗ ಯಾವರೀತಿಯಿಂದ ಉಪಕ್ರಮಿಸಲು ದೇಶದ ಮುಖಂಡರು ಯತ್ನಿಸುತ್ತಿದ್ದಾರೆ ಈ ಎರಡು ಪ್ರಶ್ನೆಗಳನ್ನು ವಿವರಿಸಲಿದ್ದೇವೆ. ಆದರೆ ಮೊದಲು ಒಂದು ಮಾತನ್ನು ಹೇಳುವುದು ಅಗತ್ಯವಾಗಿದೆ. ಶಿಕ್ಷಣದ ವಿಷಯವು ರಾಜಕೀಯವಲ್ಲ, ಕೇವಲ ವಿದ್ಯಾವಿಷಯಕವಾದ್ದು. ಇದರಲ್ಲಿ ಪಕ್ಷಭೇದಗಳಾಗಲಿ, ಬ್ರಾಹ್ಮಣ-ಬ್ರಾಹ್ಮಣೇತರ ಮುಂತಾದ ಜಾತಿಭೇದಗಳಾಗಲಿ ಇರುವುದು ಸಂಭವವಿಲ್ಲ. ಶಿಕ್ಷಣಕ್ಕೆ ರಾಷ್ಟ್ರೀಯವೆಂಬ ವಿಶೇಷಣವನ್ನು ಕೊಟ್ಟು ಅದಕ್ಕನುಕೂಲವಾಗಿ ಅದರ ವ್ಯಾಖ್ಯೆಯನ್ನು ಮಾಡುವದರಿಂದಲೆ ಆ ಶಿಕ್ಷಣವು ಮತಭೇದಕ್ಕೆ ಆಸ್ಪದವಾದೀತೆಂದು ನಾವು ನೆನಸಲಾರೆವು. ಈ ದೃಷ್ಟಿಯಿಂದ ರಾಷ್ಟ್ರೀಯ ಶಿಕ್ಷಣದ ವ್ಯಾಖ್ಯೆಯು ಸರ್ವಸಮ್ಮತವಾಗುವಂತಿದೆ ಎನ್ನಲು ಬಾಧಕ ತೋರುವುದಿಲ್ಲ. ಆದುದರಿಂದ ರಾಷ್ಟ್ರೀಯ ಶಿಕ್ಷಣವೆಂದರೇನೆಂಬುದನ್ನು ನಾವು ನಿರೀಕ್ಷಿಸೋಣ. ಯಾವ ಶಿಕ್ಷಣವು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ರಾಷ್ಟ್ರೀಯ ವಿಚಾರಗಳ ಪ್ರತಿಬಿಂಬವನ್ನು ಮೂಡಿಸುವುದೊ, ಯಾವ ಶಿಕ್ಷಣವು ದೇಶಿಭಾಷೆಯಿಂದಲೆ ಕೊಡಲ್ಪಡುವುದೊ, ತನ್ನ ದೇಶ, ತನ್ನ ಧರ್ಮ, ತನ್ನ ದೇಶದ ಇತಿಹಾಸ, ತನ್ನ ಭೂವರ್ಣನ, ತನ್ನ ವಾಙ್ಮಯ ಇತ್ಯಾದಿಗಳ ವಿಷಯದಲ್ಲಿ ಯೋಗ್ಯ ಆದರವನ್ನೂ, ಅಭಿಮಾನವನ್ನೂ ಹುಟ್ಟಿಸಿ ವಿದ್ಯಾರ್ಥಿಯಲ್ಲಿ ಅವುಗಳ ಸಾಂಗೋಪಾಂಗವಾದ ಜ್ಞಾನವನ್ನುಂಟುಮಾಡಿಕೊಡುವುದೊ ಮತ್ತು ಯಾವ ಶಿಕ್ಷಣವು ದೃಢನಿಶ್ಚಯ, ನಿಗ್ರಹ, ಸ್ವಾವಲಂಬನ, ಸ್ವಾರ್ಥತ್ಯಾಗ, ಸ್ವಾಭಿಮಾನ ಮತ್ತು ಸ್ವದೇಶಾಭಿಮಾನ ಈ ರಾಷ್ಟ್ರೀಯ ಗುಣಗಳನ್ನು ಪೋಷಿಸುವುದೊ ಅದೆ ರಾಷ್ಟ್ರೀಯ ಶಿಕ್ಷಣವು. ಇಂಥ ಶಿಕ್ಷಣದಿಂದ ವಿದ್ಯಾರ್ಥಿಗಳಲ್ಲಿ ತಮ್ಮ ಚರಿತಾರ್ಥವನ್ನು ಸ್ವತಂತ್ರ ರೀತಿಯಿಂದ ಸಾಗಿಸಿಕೊಳ್ಳುವ ಪಾತ್ರತೆಯು ಬರುವುದಲ್ಲದೆ ಸಾರ್ವಜನಿಕ ಕೆಲಸದ ಮೂಲತತ್ವಗಳು ಅವರಿಗೆ ಮೊದಲಿನಿಂದಲೆ ಪರಿಚಿತವಾಗಿ ಹೋಗುವವು. ರಾಷ್ಟ್ರೀಯ ಶಿಕ್ಷಣದ ಈ ವ್ಯಾಖ್ಯೆಯನ್ನು ವಿಸ್ತರಿಸುವುದೆಂದರೆ ಅದೊಂದು ದ್ವಿರುಕ್ತಿಯೆ ಆಗುವುದು. ಆದರೆ ಆದರಾರ್ಥದಲ್ಲಿ ದ್ವಿರುಕ್ತಿಯು ದೋಷಾವಹವಲ್ಲೆಂದು ಭಾಷಾಪಂಡಿತರು ಹೇಳುವದರಿಂದ ಈ ಬಗ್ಗೆ ಪುನಃ ಒಂದೆರಡು ಮಾತುಗಳನ್ನು ಬರೆಯುತ್ತೇವೆ. ರಾಷ್ಟ್ರೀಯ ವಿಚಾರಗಳ ಪ್ರತಿಬಿಂಬವು ವಿದ್ಯಾವಂತರ ಎಂದರೆ ವಿದ್ಯಾರ್ಥಿಗಳ ಅಂತಃಕರಣದಲ್ಲಿ ಬೀಳಬೇಕಾದರೆ ಅವರ ಅಭ್ಯಾಸ ಕ್ರಮದಲ್ಲಿ ಭಾರತ, ರಾಮಾಯಣಗಳಂಥ ರಾಷ್ಟ್ರೀಯ ಗ್ರಂಥಗಳಿಗೆ ಎಡೆ ಸಿಗಬೇಕು. ಚಂದ್ರಗುಪ್ತ, ಅಶೋಕ, ಶಿವಾಜಿ, ಪ್ರತಾಪಾದಿತ್ಯ ಮೊದಲಾದ ಐತಿಹಾಸಿಕ ಪುರುಷರ ಚರಿತ್ರಗಳೂ ವ್ಯಾಸ, ಬುದ್ಧ, ಶಂಕರಾಚಾರ್ಯ ಮೊದಲಾದ ಅವತಾರಿಗಳ ವಿಚಾರಗಳೂ, ಮಹತ್‌ಕಾರ್ಯಗಳೂ ವಿದ್ಯಾರ್ಥಿಗಳ ಮನೋಭೂಮಿಯಲ್ಲಿ ಬೇರೂರುವಂತೆ ಶಿಕ್ಷಣವನ್ನು ರೂಪಿಸತಕ್ಕದ್ದು. ಸ್ಫೂರ್ತಿದಾಯಕವಾದ ಇಂಗ್ಲಂಡಿನ ಇತಿಹಾಸವನ್ನು ಕಲಿಸುವಾಗ ವಿದ್ಯಾರ್ಥಿಗಳ ಗ್ರಾಹಕ ಮತ್ತು ವಿವೇಚಕ ಶಕ್ತಿಯಲ್ಲಿ ಚಲನವನ್ನುಂಟುಮಾಡಿ ಇತಿಹಾಸವೆಂದರೇನು, ಅಂಥಾ ಇತಿಹಾಸವು ಹಿಂದೂಸ್ಥಾನದ ರಾಷ್ಟ್ರಕ್ಕೆ ಇರುವದೆ, ಪಾಶ್ಚಾತ್ಯ ಲೇಖಕರಿಗೂ ಅಜ್ಞೇಯವಾದ ಅನೇಕ ಸಂಗತಿಗಳು ನಮ್ಮ ಇತಿಹಾಸದಲ್ಲಿ ಹೇಗೆ ಅಡಗಿಹೋಗಿವೆ, ಇತ್ಯಾದಿ ಸಂಗತಿಗಳು ಸಪ್ರಮಾಣವಾಗಿ ವಿದ್ಯಾರ್ಥಿಗಳಿಗೆ ತಿಳಿದಿರುವದು ರಾಷ್ಟ್ರೀಯ ಶಿಕ್ಷಣದಲ್ಲಿ ಅವಶ್ಯವಾದ ವಿಷಯವು. ರಾಷ್ಟ್ರೀಯ ಶಿಕ್ಷಣದೊಳಗಿನ ಮಹತ್ವದ ಅಂಗವು ಶಾಸ್ತ್ರೀಯ ವಿಷಯಗಳ ಅಧ್ಯಯನವು. ಇದು ಈಗಿನ ಶಿಕ್ಷಣದಲ್ಲಿ ಏನೂ ಸಮಾಧಾನಕರವಾದ ರೀತಿಯಲ್ಲಿ ನಡೆಯುವದಿಲ್ಲ. ಶಾಸ್ತ್ರೀಯ ಶಿಕ್ಷಣವೆಂದು ಹೆಸರುಕೊಟ್ಟು ಕಲಿಸುವ ಪ್ರಮೇಯಗಳು ಅಷ್ಟೊಂದು ವ್ಯವಹಾರ್ಯವಲ್ಲ. ಶಾಸ್ತ್ರೀಯ ಶಿಕ್ಷಣದ ಕೋಣೆಯಲ್ಲಿ ಹೋಗಿ ನೋಡಿದರೆ ಆ ಕೋಣೆಯಲ್ಲಿ ಉಪಕರಣಗಳೆಲ್ಲ ವಿಲಾಯತಿಯವು. ಆ ಮಾನದಿಂದ ವಿದ್ಯಾರ್ಥಿಗಳ ಅಥವಾ ಅವರ ಗುರುಗಳ ಶಾಸ್ತ್ರೀಯ ಜ್ಞಾನವು ಬರೆ ತಾತ್ವಿಕವೆ ಅಲ್ಲದೆ ವ್ಯಾವಹಾರಿಕ ಅಥವಾ ಅನುಭವಾತ್ಮಕವಲ್ಲ. ಪ್ರಕೃತ ಶಿಕ್ಷಣದಲ್ಲಿರುವ ಈ ದೋಷವನ್ನು ರಾಷ್ಟ್ರೀಯ ಶಿಕ್ಷಣದಲ್ಲಿ ತೆಗೆದುಹಾಕುವದು ಅಗತ್ಯವಿದೆ. ರಾಷ್ಟ್ರೀಯ ಶಿಕ್ಷಣದಲ್ಲಿ ಶಾಸ್ತ್ರೀಯ ಶಿಕ್ಷಣದ ಅಂಗಕ್ಕೆ ಹೇಗೆ ಮಹತ್ವವನ್ನು ಕೊಡುವುದು ಅಗತ್ಯವೊ ಹಾಗೆಯೆ ಔದ್ಯೋಗಿಕ ಶಿಕ್ಷಣಕ್ಕೆ ಪ್ರಾಧಾನ್ಯಕೊಡುವುದು ಆವಶ್ಯಕವಾಗಿದೆ. ಹಿಂದೂಸ್ಥಾನದ ಔದ್ಯೋಗಿಕ ಪರಿಸ್ಥಿತಿಗೆ ಬಂದ ಹೀನತ್ವವನ್ನು ವರ್ಣಿಸಲು ಇದು ಸ್ಥಳವಲ್ಲ. ಆದರೂ ಪ್ರಸಂಗತಃ ಒಂದು ಮಾತನ್ನು ಹೇಳುವುದು ಕೇವಲ ಅಪರಿಹಾರ್ಯವಾಗಿದೆ. ೧೫-೨೦ ಈ ಎರಡು ಶತಮಾನಗಳ ಹಿಂದೆ ಹಿಂದೂಸ್ಥಾನದಲ್ಲಿ ಯಾವ ಯಾವ ಕೈಗಾರಿಕೆಗಳು ಊರ್ಜಿತ ಸ್ಥಿತಿಯಲ್ಲಿದ್ದವೊ; ಅವೆಲ್ಲ ಈಗಿನ ಯುಗದ ಯಾಂತ್ರಿಕ ಪ್ರತಿಸ್ಪರ್ಧೆಯಲ್ಲಿ ಮುಣುಗಿಹೋದವು. ಹೋದ ಕೈಗಾರಿಕೆಗಳಿಗೆ ಪುನಃ ಉತ್ತೇಜನ ಬರುವಂತೆ, ಹೊಸ ಹೊಸ ಯಾಂತ್ರಿಕ ಉದ್ಯಮಗಳು ಅಸ್ತಿತ್ವದಲ್ಲಿ ಬರುವಂತೆ ರಾಷ್ಟ್ರೀಯ ಶಿಕ್ಷಣದಲ್ಲಿ ಔದ್ಯೋಗಿಕ ಶಿಕ್ಷಣದ ಪೂರ್ಣ ಸಮಾವೇಶಮಾಡುವುದು ಮುಖ್ಯ ಅವಶ್ಯವಾಗಿದೆ. ಕೇವಲ ಪುಸ್ತಕೀ ಶಿಕ್ಷಣವು ಏನುಮಾಡಬಲ್ಲದು? ಹೊಟ್ಟೆಗೆ [illegible] ಇರಲಿ, ರಾಷ್ಟ್ರೀಯ ಶಿಕ್ಷಣದಲ್ಲಿ ಯಾವ ಯಾವ ಅಂಗಗಳ ಸಮಾವೇಶವನ್ನು [illegible]

ಮಾಡಬಹುದು ಎಂಬುದನ್ನು ಹೇಳಹೋದರೆ ಇನ್ನೂ ಅನೇಕ ವಿಷಯಗಳನ್ನು ಸೂಚಿಸಬಹುದು. ಆದರೆ ಅವುಗಳ ಪಟ್ಟಿಯನ್ನು ಕೊಡುವುದು ನಮ್ಮ ಈ ಲೇಖನದ ಉದ್ದೇಶವಲ್ಲ. ವಿದ್ಯಾಲಯದಲ್ಲಿ ಹೋಗಿ ಹತ್ತು ಹನ್ನೆರಡು ಅಥವಾ ಕೆಲವು ವರ್ಷಗಳನ್ನು ಕಳೆದು ಸಂಪಾದಿಸಿದ ವಿದ್ಯೆಯಿಂದ-ಶಿಕ್ಷಣದಿಂದ ಸ್ವಾಭಿಮಾನ, ಪೂರ್ವಗಳವಾಗಿಯೂ, ಆರ್ಯ ದೇಶದ ಕೀರ್ತಿಗೆ, ಮತ್ತು ಪೂರ್ವ ವೈಭವಕ್ಕೆ ಅನುರೂಪವಾಗಿಯೂ ಸ್ವತಂತ್ರ ಜೀವನವನ್ನು ಸಾಗಿಸಿಕೊಳ್ಳುವುದೆ ರಾಷ್ಟ್ರೀಯ ಶಿಕ್ಷಣದ ಮುಖ್ಯ ಲಕ್ಷಣವು. ನೂರಾರು ಶಬ್ದಗಳಿಂದ ಅಥವಾ ವ್ಯಾಖ್ಯೆಗಳಿಂದ ಅದನ್ನು ನಿರೂಪಿಸಿದರೂ "ಸಾವಿರ ಸುತ್ತು, ಒಂದೇ ಗಂಟು" ಎಂಬ ಮಾತಿನಂತೆ ಆ ಎಲ್ಲ ವ್ಯಾಖ್ಯಾನಗಳ ತಾತ್ಪರ್ಯವು ನಮ್ಮ ಮೇಲಿನ ಲಕ್ಷಣದಲ್ಲಿಯೆ ಸಮಾವಿಷ್ಟವಾಗುತ್ತದೆ.

ಈ ತರದ ರಾಷ್ಟ್ರೀಯ ಶಿಕ್ಷಣವನ್ನು ಕೊಡುವ ಸಂಸ್ಥೆಯು ಪ್ರತಿ ಒಂದು ಪ್ರಾಂತದಲ್ಲಿ ಕನಿಷ್ಠಪಕ್ಷಕ್ಕೆ ಒಂದಾದರೂ ಇರಬೇಕಾದ್ದು ಅವಶ್ಯವು. ಇತ್ತಿತ್ತ ಇಂಥ ಸಂಸ್ಥೆಯ ಆವಶ್ಯಕತೆಯು ಹೆಚ್ಚಾಗಿ ಕಂಡುಬರಲು ಕಾರಣವೇನೆಂದರೆ ಮದ್ರಾಸ ಸರಕಾರದ ವಿದ್ಯಾರ್ಥಿಗಳ ವಿಷಯದಲ್ಲಿ ಹೊರಟ ಸರಕ್ಯುಲರು ಮತ್ತು ಇದೆ ಸರಕ್ಯುಲರಿನ ಅನ್ಯ ಪ್ರಾಂತೀಯ ಸರಕಾರಗಳು ಮಾಡುತ್ತಿರುವ ಅನುಕರಣೆಯು. ಸರಕಾರಿ ಅಥವಾ ಈಗಿರುವ ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಭಾವನೆಗಳ ಶಿಕ್ಷಣವು ಸರಿಯಾಗಿ ಪ್ರಾಪ್ತವಾಗಲು ಉಪಾಯವಿಲ್ಲದ್ದರಿಂದ ಮಿಸೆಸ್ ಬಿಸೆಂಟರು ಸರ್ ರವೀಂದ್ರನಾಥ ಟಾಗೋರರಂಥವರನ್ನು ಸೇರಿಸಿಕೊಂಡು ಒಂದು ರಾಷ್ಟ್ರೀಯ ಶಿಕ್ಷಣ ಮಂಡಲವನ್ನು ಸ್ಥಾಪಿಸುವ ಉಪಕ್ರಮ ಮಾಡಿ ಅದರ ಮುಖ್ಯ ಚಾಲಕತ್ವವನ್ನು ಮಿ. ಜಿ. ಎಸ್. ಅರುಂಡೇಲ ಎಂಬ ಸುಪ್ರಸಿದ್ಧ ವಿದ್ವಾಂಸರ ಕೈಗೆ ಒಪ್ಪಿಸಿದರು. ಆದರೆ ಮೊನ್ನೆ ಸಂಭವಿಸಿದ ಪ್ರತಿಬಂಧಗಳಿಂದ ರಾಷ್ಟ್ರೀಯ ಶಿಕ್ಷಣದ ಏರ್ಪಾಡು ಅಸಾಧ್ಯವಾಯಿತು. ಆದ್ದರಿಂದ ಈ ವಿಷಯ ವೃಥಾ ಬರೆದು ಕಾಗದ ತುಂಬಿಸಬೇಕಾದ ಆಗತ್ಯವಿಲ್ಲ.

ಸ್ಫುಟ ವಿಚಾರಗಳು.

೧. ಪಂಜಾಬ ಸರಕಾರವು ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಖಡ್ಡಾಯದ್ದಾಗಿ ಮಾಡಲು ಆಲೋಚಿಸಿದ ಸಂಗತಿಯನ್ನು ನಾವು ಹಿಂದೆಯೆ ವಾಚಕರಿಗೆ ತಿಳಿಸಿದ್ದೇವೆ. ಪಂಜಾಬ ಸರಕಾರದ ಇಚ್ಛೆಗನುಸಾರವಾಗಿ ಒತ್ತಾಯದ ಮತ್ತು ಉಚಿತ ಶಿಕ್ಷಣವನ್ನು ಉಪಕ್ರಮಿಸಲು ಲೋಕಲ್ ಬೋರ್ಡು ಆ ಪ್ರಾಥಮಿಕ ಶಿಕ್ಷಣದ ಕೆಲಸದಲ್ಲಿ ಬರುವ ಖರ್ಚಿನ ಮೂರನೆಯ ಒಂದಂಶವನ್ನು ಕೊಡಲು ಒಪ್ಪಿಕೊಂಡಿದೆ. ಬಾಕಿ ಉಳಿದ ಮೂರನೆಯ ಎರಡು ಅಂಶಗಳನ್ನು ಸರಕಾರವು ತನ್ನ ಪ್ರಾಂತಿಕ ಕರದಿಂದ ನಿರ್ವಹಿಸತಕ್ಕದ್ದು. ಈ ರೀತಿಯಿಂದ ಪ್ರಾಥಮಿಕ ಶಿಕ್ಷಣದ ಒತ್ತಾಯದ ಕೆಲಸದಲ್ಲಿ ಸರಕಾರವು ಮತ್ತು ಜನರು ಈ ಉಭಯತರು ಪರಸ್ಪರ ಸಹಕಾರದಿಂದ ಕೆಲಸಕ್ಕೆ ಇಳಿದದ್ದು ಶ್ಲಾಘನೀಯವಲ್ಲೆಂದು ಯಾರೆನ್ನುವರು? ಪಂಜಾಬ ಪ್ರಾಂತದೊಳಗಿನ ಮುಲ್‌ತಾನಿನ ಮುನಿಸಿಪಾಲಿಟಿಯ ವೈಸ್-ಪ್ರೆಸಿಡೆಂಟರು ಈ ವಿಷಯದ ಒಂದು ಠರಾವನ್ನು ಕಮಿಟಿಯಲ್ಲಿ ಸಾದರಪಡಿಸಿರುವರು. ಈ ವಿಷಯದ ಕುರಿತು ವಿಚಾರ ಮಾಡುವುದಕ್ಕಾಗಿ ಒಂದು ಸಬ್ ಕಮಿಟಿಯನ್ನು ನೇಮಿಸಿ ಅದು ತನ್ನ ಯೋಜನೆಯನ್ನು (Scheme) ಸಾಧಾರಣ ಸಭೆಯ ಮುಂದಿಡಬೇಕೆಂದಾಗಿದೆ. ಈ ಯೋಜನೆಯು ಮುಲ್‌ತಾನ ಮುನ್ಸಿಪಾಲಿಟಿಯ ಸಾಧಾರಣ ಸಭೆಯಲ್ಲಿ ಪಾಸಾಗಿ ಖಡ್ಡಾಯದ ಪ್ರಾಥಮಿಕ ಶಿಕ್ಷಣವು ಜಾರಿಗೆ ಬಂದು ಅದು ಬೇರೆ ಕಡೆಗಳಲ್ಲಿಯೂ ಉದಾಹರಣೀಯವಾದೀತೆಂದು ನಾವು ಆಶಿಸುತ್ತೇವೆ.

೨. ಪಂಜಾಬಿನವರು ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಸ್ತುತ್ಯವಾದ ಏರ್ಪಾಡಿನಲ್ಲಿರುವಾಗ ಹೈದರಾಬಾದಿನ ನಿಜಾಮ ಸರಕಾರವು "ಉಸ್‌ಮಾನಿಯಾ-ಯುನಿವರ್ಸಿಟಿ"ಯನ್ನು ಸ್ಥಾಪಿಸಿ ತನ್ನ ಪ್ರಜೆಗಳಿಗೆ ಉಚ್ಚ ಶಿಕ್ಷಣವನ್ನು ದೇಶಿಭಾಷೆಯಿಂದಲೆ ಕೊಡುವ ಬಗ್ಗೆ ಜಾಹೀರು ಮಾಡಿದೆ. ನಿಜಾಮ ಸಾಹೇಬರ ವರ್ಧಂತಿಯ ಇದು ದಾನವೆಂದು ಪ್ರಸಿದ್ಧವಾಗಿದೆ. ಹಿಂದುಸ್ಥಾನದೊಳಗಿನ ದೇಶಿ ಸಂಸ್ಥಾನಗಳಲ್ಲಿ ಹೈದರಾಬಾದು ಸುಧಾರಣೆಯಲ್ಲಿ ಹಿಂದುಳಿದ್ದದೆಂದು ಅದರ ವಿಷಯದಲ್ಲಿ ಒಂದು ಪ್ರವಾದವಿತ್ತು. ಆದರೂ ಈಚೆಗೆ ಮೂರು ನಾಲ್ಕು ವರ್ಷಗಳಲ್ಲಿ ಆ ಸಂಸ್ಥಾನವು ಸುಧಾರಣೆಯ ಮಾರ್ಗವನ್ನು ಆಕ್ರಮಿಸಹತ್ತಿದೆ. ಮಾತ್ರವಲ್ಲ, ಶಿಕ್ಷಣ ಪ್ರಸಾರಣದ ಸುಧಾರಣೆಯಲ್ಲಿ ಆ ಸಂಸ್ಥಾನವು ಬಹು ಮುಂದೆ ಹೆಜ್ಜೆಯಿಟ್ಟಿದೆಂದರೆ ಅದು ಅತಿಶಯೋಕ್ತಿಯ ಮಾತಾಗಲಾರದು. ದೇಶಿಭಾಷೆಯಿಂದ ಮಧ್ಯಮ ಶಿಕ್ಷಣವು ಅಸಾಧ್ಯವೆಂದು ಆ ವಿಷಯವು ಬ್ರಿಟಿಷ್ ಹಿಂದುಸ್ಥಾನದಲ್ಲಿ ಆಲೋಚನದಲ್ಲಿಯೆ ಇರುವಾಗ ದೇಶಿ ಸಂಸ್ಥಾನಗಳಲ್ಲೊಂದಾದ ಹೈದರಾಬಾದು ಮಧ್ಯಮ ಮಾತ್ರವಲ್ಲ, ಉಚ್ಚ ಶಿಕ್ಷಣವನ್ನು ಕೂಡ ಪ್ರಯೋಗಾವಸ್ಥೆಯಲ್ಲಿ ತಂದು ತೋರಿಸುತ್ತದೆ. ಆದರೆ ಇಲ್ಲಿ ಒಂದು ವ್ಯಾತ್ರವ್ಯಂಗವು ತೋರುವುದು. ದೇಶೀಭಾಷೆಯೆಂದು ನಿಜಾಮಸರಕಾರವು ಉರ್ದುಭಾಷೆಯನ್ನು ಆಯ್ದುಕೊಂಡಿರುವುದು. ಪರಂತು ಅಲ್ಲಿ ಉರ್ದು ಮಾತೃಭಾಷೆಯವರು ನೇಕಡಾ ೩೦ ಜನರಿರುವರು. ಬಾಕಿ ಉಳಿದ ೭೦ ಜನರು ಇತರ ಭಾಷೆಯವರು. ಇತರ ಭಾಷೆಯ ಜನರು ಇಷ್ಟು ದೊಡ್ಡ ಪ್ರಮಾಣದಲ್ಲಿ ಇರುವಾಗ [illegible]

ಕೊಳ್ಳುವುದು ಚಿಂತ್ಯವಾಗಿದೆ. ಇನ್ನುಮುಂದೆಯಾದರೂ ಅನ್ಯಭಾಷೆಗಳಿಗೆ ಎಡೆ ಸಿಕ್ಕೀತೆಂದು ಭರವಸೆ ಇದೆ.

೩. ಕಳೆದ ಸಂಚಿಕೆಯಲ್ಲಿ ಶಾಲಾ ವಿದ್ಯಾರ್ಥಿಗಳ ಬಗ್ಗೆ ಮಧ್ಯಪ್ರಾಂತದ ಸರಕಾರವು ವಿದ್ಯಾರ್ಥಿಗಳು ಯಾವ ಸಾರ್ವಜನಿಕ ಸಭೆಗೂ ಹೋಗಕೂಡದೆಂಬುದಾಗಿ ಹೊರಪಡಿಸಿದ ಸರ್‌ಕ್ಯುಲರಿನ ವಿಷಯವನ್ನು ತಿಳಿಸಿದ್ದೇವೆ ಮಾತ್ರ, ಈ ವಾರದಲ್ಲಿ ಮುಂಬಯಿ ಸರಕಾರವು ಅದೆ ತರದ ಸರಕ್ಯುಲರನ್ನು ಹೊರಡಿಸಿದ ಸಂಗತಿಯನ್ನು ತಿಳಿಸುವುದು ನಮ್ಮ ಪಾಲಿಗೆ ಬಂದಿದೆ. ಮುಂಬಯಿಯ ಸರಕಾರವು ಹೊರಡಿಸಿದ ಸರಕ್ಯುಲರಿನ ಮುಖ್ಯ ತಾತ್ಪರ್ಯವು ವಿದ್ಯಾರ್ಥಿಗಳು ಯಾವ ಸಾರ್ವಜನಿಕ ಸಭೆಯಲ್ಲಿಯೂ ಪ್ರವೇಶಿಸಕೂಡದು. ಕೊಲೇಜಿನ ಪ್ರೌಢ ವಿದ್ಯಾರ್ಥಿಗಳು ಸಭೆಗಳಿಗೆ ಹೋಗಬೇಕಾದರೆ ಕೊಲೇಜ ಅಧಿಕಾರಿಗಳ ಅಪ್ಪಣೆಯನ್ನು ತೆಗೆದುಕೊಳ್ಳುವುದು ಈ ಸರಕ್ಯುಲರಿನಿಂದ ಅವಶ್ಯವಾಗಿದೆ. ಹೋಮ್-ರೂಲ್ ಮೊದಲಾದ ಸಂಸ್ಥೆಗಳ ಸಭೆಗಳಿಗೆ ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಕೂಡದೆಂದು ವಿಧಿಸೋಣಾಗಿದೆ. ಇದು ಇರಲಿ. ಆದರೆ ರಾಜಕೀಯ ಸ್ವಭಾವದ್ದಲ್ಲದಂಥ ಬೇರೆ ಸಾಮಾನ್ಯ ಸಭೆಗಳಲ್ಲಿ ಕೂಡ ವಿದ್ಯಾರ್ಥಿಗಳು ಪ್ರವೇಶಿಸ ಕೂಡದೆಂಬುದಾಗಿ ಮುಂಬಯಿ ಸರಕಾರವು ಪ್ರತಿಬಂಧಿಸಿದ್ದು ತೀರ ಕಠೋರವಾಗಿರುವುದು. ಇಂಥ ಕ್ರಮವು ಸುಧಾರಿಸಿದ ರಾಜ್ಯದಲ್ಲಿ ಇಲ್ಲೆಂದು ಹೇಳುತ್ತಾರೆ. ಆದರೆ ಇಲ್ಲಿ ಒಂದು ಪ್ರಶ್ನೆಯೆಂದರೆ ಮದ್ರಾಸು, ಮಧ್ಯಪ್ರಾಂತ, ಮುಂಬಯಿ ಮೊದಲಾದ ಬೇರೆ ಬೇರೆ ಸರಕಾರಗಳು ಪ್ರತ್ಯಪ್ರತ್ಯೇಕವಾಗಿ ಸ್ವಲ್ಪ ಹೆಚ್ಚು ಕಡಿಮೆ ಒಂದೆ ತರದ ಸರಕ್ಯುಲರಗಳನ್ನು ಹೊರಡಿಸುವುದಕ್ಕಿಂತ ಹಿಂದೂಸ್ಥಾನದ ವರಿಷ್ಠ ಸರಕಾರವೆ ಇಡಿ ಹಿಂದೂಸ್ಥಾನಕ್ಕೆ ಲಗಾವಾಗುವಂತೆ ಒಂದೆ ಸರಕ್ಯುಲರನ್ನು ಹೊರಡಿಸುವುದು ಲಾಘವ ಮತ್ತು ಸುಲಭವಲ್ಲವೆ? ಅದರಿಂದ ಪ್ರಾಂತಿಕ ಸರಕಾರದ ಶ್ರಮವನ್ನಾದರೂ ಉಳಿಸಿದಂತಾಗಲಿಕ್ಕಿಲ್ಲವೆ? ಆದರೆ ನಮ್ಮ ಈ ವಿನಂತಿಗೆ ಯಾರು ಕಿವಿಗೊಡುತ್ತಾರೆ?

೪. ಕೆನಡಾ ದೇಶದ ಪ್ರಧಾನರಾದ ಸರ್. ರೊಬರ್ಟ ಬೋರ್ಡನ್ ಇವರು ಇಂಗ್ಲಂಡಿನ ಪಾರ್ಲಿಮೆಂಟಿನಲ್ಲಿ ಮಾತಾಡುವಾಗ "ಯುದ್ಧ ಪರಿಷತ್ತಿನಲ್ಲಿ ಹಿಂದೂಸ್ಥಾನದ ಪ್ರತಿನಿಧಿಗಳು ಸಭ್ಯತೆಗೂ ನ್ಯಾಯಪ್ರಿಯತೆಗೂ ಉಚಿತವಾಗುವಂತೆ ನಡೆದುಕೊಂಡದರಿಂದ ಕೆನೆಡಿಯನ್ನರಿಗೆ ಹಿಂದೂಸ್ಥಾನದಲ್ಲಿ ಯಾವ ಹಕ್ಕುಗಳು ಇರುವವೊ ಆ ಹಕ್ಕುಗಳು ಹಿಂದಿಗಳಿಗೆ ಕೆನಡದಲ್ಲಿ ಕೊಡಬೇಕೆಂದು ಕೆನಡದ ಸರಕಾರವು ಯೋಚಿಸಿದೆ." ಎಂದು ಬಹು ನಯವಾಗಿ ಹೇಳಿಹೋದರು. ಆದರೆ ಬ್ರಿಟಿಷ್ ಕೊಲೊಂಬೊದಲ್ಲಿ ಹಿಂದಿ ಕೂಲಿಗಳು ಮತ್ತು ಕಲಾಭಿಜ್ಞರು ೧೯೧೬ನೇ ಸಪ್ಟಂಬರ ತಾ. ೩೦ ವರೆಗೆ ಕಾಲಿಡಕೂಡದೆಂದು ಆ ಕೆನಡಾ ಸರಕಾರವು ಜಾಹೀರ ಪಡಿಸಿದೆ. ಇದರ ಅರ್ಥವೇನು? ಹಿಂದೂಸ್ಥಾನದಲ್ಲಿ ಕೆನಡಿಯನ್ನರ ಪ್ರವೇಶವಾಗಕೂಡದೆಂದು ಕಾಯಿದೆ ಇದೆಯೆ? ಅದಿಲ್ಲ. ಹಾಗಾದರೆ ಈ ಹುಕುಮಿನ ಅರ್ಥವೇನು? ಮೇಲಿನ ಪ್ರಧಾನರ ಮಾತಿಗೂ ಮತ್ತು ಈ ಹುಕುಮಿಗೂ ತಾಳೆಬೀಳಿಸುವುದು ಹೇಗೆ? ಸಾಮ್ರಾಜ್ಯಾಂತರ್ಗತ ವಸಾಹತುಗಳು ಹಿಂದೂಸ್ಥಾನಕ್ಕೆ ಯಾವ ರೀತಿಯಿಂದ ನಡೆಯುತ್ತವೆ ಎಂಬುವನ್ನು ತಿಳಿದುಕೊಳ್ಳಲಿಕ್ಕೆ ಇದರ ಸಂಗಡಲೆ ಇಂಡಿಯನ್ ಒಪ್ಪೀನಿಯನ್ನಿನಲ್ಲಿ ಪ್ರಸಿದ್ಧವಾದ ಇನ್ನೊಂದು ದೃಷ್ಟಾಂತವನ್ನೂ ನಮೂದಿಸಬಹುದು. ದಕ್ಷಿಣ ಆಫ್ರಿಕದ ನಾತಾಳದಲ್ಲಿ ಒಬ್ಬ ಹಿಂದೀ ಗೃಹಸ್ಥನು ಟ್ರಾಮಗಾಡಿಯಲ್ಲಿ ಕುಳಿತು ಪ್ರಯಾಣ ಮಾಡುವಾಗ ಒಬ್ಬ ಯುರೋಪಿಯನ್ ಗೃಹಸ್ಥನು ಒಳನುಗ್ಗಿ ವೃಥಾ ಕೋಪಗೊಂಡು ಅವನನ್ನು ಗಾಡಿಯು ಹೋಗುತ್ತಿರುವಾಗಲೆ ಗಾಡಿಯಿಂದ ಹೊರಕ್ಕೆ ಬಿಸಾಡಿದನು! ಆ ಹಿಂದಿಯು ಮಾರ್ಗದ ಮೇಲೆ ಸ್ಮೃತಿತಪ್ಪಿ ಬಿದ್ದು ಅಲ್ಲಿಯೆ ಮೃತನಾದನು! ಗಾಡಿಯಂತು ಮುಂದರಿಸಿಯೆ ಬಿಟ್ಟಿತು!! ಇದೊಂದು ವ್ಯಕ್ತಿವಿಷಯಕ ಉದಾಹರಣವಾದರೂ ಇದರ ಕುರಿತು ಸದರಿ ಯುರೋಪಿಯನನಿಗೆ ಅಲ್ಲಿಯ ಸರಕಾರವು ಏನು ಮಾಡಿದೆ? ನಾತಾಳದವರ ಸಹಾನುಭೂತಿಯು ಹಿಂದೂಸ್ಥಾನದ ಮೇಲೆ ಎಷ್ಟಿದೆಂಬುದನ್ನು ಇದೇ

ಕುಂಬಳೆ:— ಇದೇ ಬರುವ ಜುಲಾಯಿ ತಿಂಗಳ ಶುರುವಿನಿಂದ ಮಂಗಳೂರಿನಿಂದ ಮೈಲ್‌ಗಾಡಿಯು ಬೆಳಗ್ಗೆ ಘಂಟೆ ೫-೩೦; ಮಿಕ್ಸಡ್ ಘಂಟೆ ೭-೩೦; ಪಾಸ್ಸೆಂಜರ್ ಸಾಯಂಕಾಲ ಘಂಟೆ ೫-೧೫ಕ್ಕೆ ಬಿಡುವದಾಗಿಯೂ, ಮೈಲ್‌ಗಾಡಿಯು ಸಾಯಂಕಾಲ ಘಂಟೆ ೬-೫೦; ಮಿಕ್ಸಡ್ ಘಂಟೆ ೫; ಪಾಸ್ಸೆಂಜರ್ ಮಾತ್ರ ಈಗಿನಂತೆ ಬೆಳಗ್ಗೆ ಘಂಟೆ ೯-೫೦ಕ್ಕೆ ಮಂಗಳೂರಿಗೆ ತಲಪುವದಾಗಿ ಪ್ರಕಟಿಸೋಣಾಗಿದೆ.

ಕೆಲವು ಕಾಲದಿಂದ ಮಂಗಳೂರಿಗಾಗಿ ಈ ಪ್ರಾಂತ್ಯ ಬರುವ ಕಾಗದಪತ್ರಗಳ ಪೈಕಿ ಹೆಚ್ಚಿನವುಗಳು ಮದ್ರಾಸ್ ಡೆಡ್‌ಲೆಟರ್ ಆಫೀಸಿಗೆ ಹೋಗಿಬರುವದರಿಂದ ಜನರಿಗೆ ಕಷ್ಟನಷ್ಟಗಳುಂಟಾಗುತ್ತವೆ. ಪೋಸ್ಟಲ್ ಡಿಪಾರ್ಟಮೆಂಟಿನವರು ಈ ಕುರಿತು ಸರಿಯಾದ ಏರ್ಪಾಡು ಕೂಡಲೇ ಮಾಡಬೇಕಾಗಿದೆ.

ಇಲ್ಲಿ ಈ ವರುಷ ಮಳೆಗಾಲದ ಪ್ರಥಮ ಸಮಯದಲ್ಲೇ ಅಂಗಡಿಗಳ ಬೀಗ ಮುರಿಯುವ ವ ಕನ್ನಕಳವುಗಳಾಗುವದು ನೋಡಿ ಮುಂದಿನ ದೀರ್ಘ ಮಳೆಗಾಲದ ಕುರಿತು ಹೆದರಿಕೆ ಉಂಟಾಗಿದೆ. ರಾತ್ರಿ ಪೋಲಿಸ ಬೀಟಿನಿಂದ ಎಷ್ಟರಮಟ್ಟಿಗೆ ಪ್ರತಿಕಾರವೋ ತಿಳಿಯದು!

ಇಲ್ಲಿಯ ಬೋರ್ಡು ಹೈಸ್ಕೂಲಿಗೆ [illegible]

[illegible]

[illegible]

ವಿಷಯದ ಹಿಂದಿನ ಒಂದು ಲೇಖದಿಂದಲೆ ವಾಚಕರು ಊಹಿಸಿರಬಹುದು. ಆದ್ದರಿಂದ ಇದನ್ನು ಹೆಚ್ಚಿಗೆ ಬೆಳೆಸುವುದು ಅಗತ್ಯವಿಲ್ಲ.

೫. ಮುಂಬಯಿಯಲ್ಲಿ ಒಂದು ವಸ್ತುಪ್ರದರ್ಶನವು ಆಗುವಂತೆ ಮದ್ರಾಸಿನಲ್ಲಿಯೂ ಒಂದು ಪ್ರದರ್ಶನವನ್ನು ಕೂಡಿಸುವ ಏರ್ಪಾಟುಗಳು ನಡೆದಿವೆ. ಮದ್ರಾಸು ಗವರ್ನರರು ಊಟಕಮಂಡಿನಿಂದ ಮೊನ್ನೆ ಮದ್ರಾಸ ಪಟ್ಟಣಕ್ಕೆ ದಯಮಾಡಿಸಿದ್ದರಲ್ಲಿ ಇದೂ ಒಂದು ಉದ್ದೇಶವಿತ್ತೆಂದು ಹೇಳುತ್ತಾರೆ. ಪರದೇಶದಿಂದ ಇಲ್ಲಿಗೆ ಬರುವ ಸರಕುಗಳು ಇಲ್ಲಿಯೆ ತಯಾರಾಗುತ್ತಿದ್ದರೆ ಅವುಗಳನ್ನು ಈ ಪ್ರದರ್ಶನದಲ್ಲಿಡುವುದೆ ಇದರ ಮುಖ್ಯ ಉದ್ದೇಶವಾಗಿದೆ. ಈ ಪ್ರದರ್ಶನದ ಪ್ರಯತ್ನಗಳೂ, ಉದ್ದೇಶವೂ ಸಫಲವಾದ್ದಾದರೆ ಪರದೇಶಗಳಿಂದ ತರಿಸುವ ಖರ್ಚು ಲಾಭವಾಗುವುದು. ಮಾತ್ರವಲ್ಲ, ಇಲ್ಲಿ ಸ್ವದೇಶಿ ವಸ್ತುಗಳಿಗೆ ಉತ್ತೇಜನ ಕೊಟ್ಟಂತಾಗುವುದು. ಅಲ್ಲದೆ ಹಡಗಗಳ ತಲೆಯಮೇಲಿನ ಈ ವಾಹಕತ್ವದ ಭಾರವನ್ನು ತಪ್ಪಿಸುವುದರಿಂದ ಈ ಯುದ್ಧ ಕಾಲದಲ್ಲಿ ಅವುಗಳನ್ನು ಬೇಕಾದಂತೆ ಉಪಯೋಗಿಸಿಕೊಳ್ಳಬಹುದಾಗಿದೆ. ಇರಲಿ. ಸದ್ಯಕ್ಕೆ ಈ ಪ್ರದರ್ಶನದ ವ್ಯವಸ್ಥೆಯು ಔದ್ಯೋಗಿಕ ಮಂಡಲದ ಕೈಗೆ ಒಪ್ಪಿಸುವುದು ಎಂತ ಮಾಡಿದೆ. ಆ ಮಂಡಲದ ಮುಖಾಂತರ ಬಿನ್-ಸರಕಾರಿ ಜನರ ಸಾಹಾಯ್ಯದಿಂದ ಈ ಪ್ರದರ್ಶನವು ಜರಗತಕ್ಕದಿದೆ. ಇದಕ್ಕೆ ಸಂಬಂಧಪಟ್ಟ ವಿಶೇಷ ಮಾಹಿತಿಗಳು ಪ್ರಸಿದ್ಧವಾದ ತರುವಾಯ ನಮ್ಮ ವಿಚಾರಗಳನ್ನು ಪ್ರಕಟಿಸುವೆವು.

ಸ್ಥಳಿಕ — ಮಂಗಳೂರು.

ಈ ಜಿಲ್ಲೆಯ ಹುಡುಗಿಯರ ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸಪೆಕ್ಟರರಾಗಿ ಮ| ರಾ| ರಾ| ಬಳಿಸಾವಿರ ನರಸಿಂಗರಾಯರು ನೇಮಿಸಲ್ಪಟ್ಟಿರುವರು.

ಗವರ್ನಮೆಂಟ ಕೊಲೇಜಿನ ಮ| ರಾ| ತ್ಯಾಗರಾಜ ಅಯ್ಯರರಿಗೆ ಸಬ್‌ಅಸಿಸ್ಟಾಂಟ್ ಇನ್ಸಪೆಕ್ಟರರಾಗಿ ವರ್ಗವಾಗಿರುವದರಿಂದ ಅವರ ಬದಲಿಗೆ ಮ| ರಾ| ಎಮ್. ರಾಮಚಂದ್ರ ಪೈಗಳವರು ಗವರ್ನಮೆಂಟ ಕೊಲೇಜಿನ ಅಸಿಸ್ಟಾಂಟ್ ಮಾಸ್ತರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮಿಸೆಸ್ ಬಿಜೆಂಟ, ಅರುಂಡೇಲ ಮತ್ತು ವಾಡಿಯಾರವರಿಗೆ ಸರಕಾರದವರಿಂದ ಪ್ರಾಪ್ತವಾದ ಪ್ರತಿಬಂಧದ ವಿಷಯ ತಮಗುಂಟಾದ ಸಂತಾಪವನ್ನು ಸೂಚಿಸಲು ಇಲ್ಲಿಯ ಹೋಮ್-ರೂಲ್-ಲೀಗಿನ ಸಭೆಯು ಕೂಡಿತ್ತೆಂಬುದಾಗಿ ತಿಳಿಯುತ್ತೇವೆ.

ಇಲ್ಲಿಯ ಹೋಮ್‌ರೂಲ್ ಲಿಗಿನ ಮೆಂಬರರಲ್ಲಿ ಕೆಲವರೂ ಬಹುಮಾನಪಟ್ಟ ಸದಾಶಿವಭಟ್ಟರು ಮೊದಲಾದವರೂ ಮದ್ರಾಸಿನಲ್ಲಿ ನಿನ್ನೆ ದಿನ ಕೂಡುವ ಮಹಾಸಭೆಗೆ ಹೋಗಿರುತ್ತಾರೆಂತ ಕೇಳುತ್ತೇವೆ.

ಈ ತಿಂಗಳ ತಾ. ೨೧ರಲ್ಲಿ ಅಂತ್ಯವಾಗುವ ವಾರದಲ್ಲಿ ಮೂರು ಪ್ಲೇಗು ಮರಣಗಳಿದ್ದವು.

ಪುತ್ತೂರು ತಾಲೂಕುಬೋರ್ಡಿಗೆ ಹೊಸದುರ್ಗ ಸರ್ಕಲಿನಿಂದ ಒಬ್ಬ ಮೆಂಬರನನ್ನು ಚುನಾಯಿಸುವ ಬಗ್ಗೆ ಮ| ರಾ| ರಾ| ಕೊಟೇಲ ಕುಂಬಬುನಂಬಿಯಾರ್ ಪಟೇಲ, ಪೂರ್ವಎಲೇರಿ ಇವರ ಹೆಸರು ಕಾಣಿಸಿದ ಶಿಫಾರಸು ಪತ್ರವು ಮಾತ್ರ ಬಂದು ತಲ್ಪಿರುವದೆಂದೂ ಈ ಶಿಫಾರಸುಪತ್ರದ ವಿಷಯ ಆಕ್ಷೇಪಗಳು ಇದ್ದರೆ ಇದೇ ತಿಂಗಳ ತಾ. ೨೬ನೇ ಜೂನ್ ಹೊಸದುರ್ಗದಲ್ಲಿ ಮಧ್ಯಾಹ್ನ ಒಂದು ಘಂಟೆಯಿಂದ ಸಾಯಂಕಾಲ ೫ಘಂಟೆಯೊಳಗೆ ಇಂಥಾ ಆಕ್ಷೇಪಗಳು ಕೇಳೋಣಾಗುವವೆಂದೂ ಪುತ್ತೂರು ರೆವೆನ್ಯು ಡಿವಿಜನಲ್ ಆಫೀಸರರವರು ಪ್ರಕಟಿಸಿರುವರು.

ಉಪ್ಪಿನಂಗಡಿಯ ಮ| ರಾ| ರಾ| ಸರಾವ ನರಸಿಂಹನ್ನಾಕರವರು ಯುದ್ಧಸಾಲಕ್ಕೆ ಕೊಟ್ಟ ಮೊಬಲಗು ರೂ. ೪೦೦ ಆಗಿರುವದು. ಈ ಮೊದಲು ಪ್ರಕಟಿಸಿರುವಂತೆ ಅದು ರೂ. ೧೦೦ ಅಲ್ಲವೆಂತ ತಿಳಿಯಬೇಕು.

ಇಲ್ಲಿಯ ಡಿಸ್ಟ್ರಿಕ್ಟ್ ಮತ್ತು ಸಬ್‌ಕೋರ್ಟುಗಳು ಇದೇ ಬರುವ ಸೋಮವಾರ ತಾ. ೨೪ರಿಂದ ಪ್ರಾರಂಭವಾಗುವವು, ಡಿಸ್ಟ್ರಿಕ್ಟ್ ಜಡ್ಜರಾದ ಮಿ| ಮೂರ ದೊರೆಗಳವರು ಆದಿತ್ಯವಾರದ ಸಾಯಂಕಾಲ ಮೈಲ್ ಬಂಡಿಯಲ್ಲಿ ಇಲ್ಲಿಗೆ ತಲ್ಪುವರೆಂತ ತಿಳಿಯುತ್ತೇವೆ.

ಜೂನ್ ೨೫ನೇ ತಾರೀಕಿಗೆ ಕೆಮರೋನ್ ಎಂಬ ಇಂಗ್ಲಿಷ ಹಡಗು ಯುದ್ಧ ಸಾಮಗ್ರಿಗಳನ್ನೂ ಸೈನ್ಯವನ್ನೂ ವೈಯ್ಯುವ ಕಾಲದಲ್ಲಿ ಟೋರ್ಪೆಡೋ ತಗಲಿ ಒಡೆದು ಹೋಯಿತು. ಸೈನಿಕರಲ್ಲಿ ೫೩ ಮಂದಿ ಮತ್ತು ಖಲಾಸಿಗಳಲ್ಲಿ ೧೧ ಮಂದಿಯ ಪತ್ತೆ ಸಿಕ್ಕಲಿಲ್ಲ. ಹಡಗಿನ ಕಪ್ತಾನನು ಇವರ ಪೈಕಿ ಒಬ್ಬನು.

ಸೌಸೆಜ(?) ನದಿಯ ಬಳಿಯಲ್ಲಿ ಫ್ರೆಂಚ ರಾಜ್ಯದಲ್ಲಿ ೩ ಸಲ ಜರ್ಮನ ಸೈನ್ಯವು ಇಂಗ್ಲಿಷರ ಮೇಲೆ ಬಂದು ಬಿದ್ದರೂ ಇಂಗ್ಲಿಷರ ವ್ಯೂಹವನ್ನು ಮುರಿಯಲಾಗಲಿಲ್ಲವೆಂದು ಮಾರ್ಶಲ್ ಹೇಗರು ತಿಳಿಸುತ್ತಾರೆ.

ಫ್ರೆಂಚ ಸೈನಿಕರು ಜರ್ಮನರಿಂದ ಸುಮಾರು ೫೦೦ ಮೀಟರ್ ವಿಸ್ತಾರದ ಒಂದು ಟ್ರೆಂಚ್ ಕಣೆಯನ್ನು ಹಿಡಿದರು.

ಇಟಲಿಯಾನರು ಅಲ್ಪಸ್ವಲ್ಪ ಮುಂದೊತ್ತುತ್ತಿದ್ದಾರೆ.

ಗ್ರೀಸ್ ದೇಶದಲ್ಲಿ ಪದಚ್ಯುತವಾದ ಕಾನ್‌ಸ್ಟಂಟೈನ್ನನ ಪಕ್ಷದ ಜನರು ಅಲ್ಲಲ್ಲಿ ಚಿಕ್ಕ ದೊಡ್ಡ ದಂಗೆಗಳನ್ನು ಎಬ್ಬಿಸಲಿಕ್ಕೆ ಪ್ರಯತ್ನಿಸಿದರೂ ಅವರ ಮುಖ್ಯ ಪಾಳ್ಯವಿರುವ ಪೊಲೊ(?) ಎಂಬಲ್ಲಿ ಒಂದು ಯುದ್ಧನಾವೆಯು ಮೂರು ದಿನಗಳ ವರೆಗೆ ರಾತ್ರೆ ಹಗಲು ಕಾದುಕೊಂಡಿದ್ದರಿಂದ ರಾಜನ ಪಕ್ಷದವರು [illegible] ಸುಮ್ಮನಿದ್ದರು.

ಸಲೋನಿಕಾ ಯುದ್ಧರಂಗದಲ್ಲಿ ಮುಂದರಿಸಿದ ಮಿತ್ರಮಂಡಳಿಯ ಸೈನ್ಯವು ಈಗ ಅಲ್ಲಿ ಮಲೆಜ್ವರವು ಹಬ್ಬಿದಕಾರಣ ಮುಂದರಿಸದೆ ಹಿಂದೆ ನಿಂತಿದೆ.

ಕಾನ್‌ಸ್ಟಂಟೈನ್ನನ ಕಡೆಯ ಪ್ರಮುಖರಾದ ೩೧ ಮಂದಿಯನ್ನು ಗ್ರೀಸ ದೇಶದಿಂದ ಹೊರಕ್ಕೆ ಕಳುಹಿಸಿದ್ದಲ್ಲದೆ ೧೦೩ ಮಂದಿಯನ್ನು ತಕ್ಕ ನಿರ್ಬಂಧದಲ್ಲಿಟ್ಟಿರುವರು.

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರದವರು ಇನ್ನೂ ೩೫ ಮಿಲ್ಲಿಯ ಡಾಲರುಗಳನ್ನು ಇಂಗ್ಲೆಂಡಿಗೆ ಸಾಲವಾಗಿ ಕೊಟ್ಟಿರುವರು.

ಇಟಲಿಯಾನರು ಎಸಿಯಾಗೋ ಪೀಠ ಭೂಮಿಯಲ್ಲಿ ಭಯಂಕರವಾದ ರೀತಿಯಲ್ಲಿ ಮುಂದೊತ್ತುತ್ತಿದ್ದಾರೆ.

ಜೂನ್ ೨೫ನೇ ವಾರದಲ್ಲಿ ೧೬೦೦ ಟನ್ನ್ ಮಿಕ್ಕಿದ ೨೭ ಹಡಗುಗಳೂ ೧೬೦೦ಕ್ಕೆ ಕಡಿಮೆ ಟನ್ನಿನ ೫ ಹಡಗುಗಳೂ ಜಲಂತರ್ಗಾಮಿಗಳ ಬಾಯಿಗೆ ಬಲಿಯಾದವು; ೩೧ ತಪ್ಪಿಸಿಕೊಂಡವು.

೧೬೦೦ ಟನ್ನಿಗೆ ಕಡಿಮೆಯಾದ ಬರೇ ೫ ಹಡಗುಗಳನ್ನು ಮಾತ್ರವೇ ಕಳೆದ ವಾರದಲ್ಲಿ ಫ್ರೆಂಚರು ಜಲಂತರ್ಗಾಮಿಗಳ ದೆಸೆಯಿಂದ ಕಳೆದುಕೊಂಡರು.

ಬಾಲ್ಕನ್ ರಣರಂಗದಲ್ಲಿ ಫ್ರೆಂಚರ ಯುದ್ಧವಿಮಾನಗಳಿಂದ ದೊಯ್ರಾನ್ ಸರೋವರದ ಬಳಿಯಲ್ಲಿ ಜರ್ಮನ್ ಆಸ್ಟ್ರಿಯನ್ ಮತ್ತು ಬಲ್ಗೇರಿಯನ್ ಮಿತ್ರ ಸೈನ್ಯವು ಬಹಳ ನಷ್ಟಹೊಂದಿತು.

ಬ್ರಿಟಿಷರ ಸೈನ್ಯವು ಈಗ ತನ್ನ ಪಾಳ್ಯವನ್ನು ವಿಸ್ತರಿಸುತ್ತಾ ಬೆಲ್ಜಿಯನ್ ಸಮುದ್ರ ಕರಾವಳಿಗೆ ತನ್ನ ಒಂದು ಕೈಯನ್ನು ಚಾಚಿದೆ ಎಂದು ತಿಳಿದುಬರುತ್ತದೆ. ಈ ಭಾಗದಲ್ಲಿ ಮೊದಲು ಬೆಲ್ಜಿಯನ್ ಸೈನ್ಯದ ಒಂದು ತುಂಡು ಬಹು ಪ್ರಯತ್ನದಿಂದ ಜರ್ಮನರಿಗೆ ಎದುರಾಗಿ ಕಾದಾಡುತ್ತಲಿತ್ತು.

ಚಿಂಪೆನಿನಲ್ಲಿ (ಫ್ರಾನ್ಸ್) ಜರ್ಮನರೂ ಫ್ರೆಂಚರೂ ಒಬ್ಬರ ಮೇಲೆ ಒಬ್ಬರು ಮಹತ್ತಾದ ಫಿರಂಗಿ ಗುಂಡುಗಳನ್ನು ಹಾರಿಸುತ್ತಾರೆ, ಜರ್ಮನರು ಫ್ರೆಂಚರ ಪಾಳ್ಯದ ಕೆಲವಂಶವನ್ನು ಕಸುಕೊಂಡರೂ ಕಡೆಗೆ ಫ್ರೆಂಚರಿಂದ ಹಿಮ್ಮೆಟ್ಟಿಸಲ್ಪಟ್ಟರು.

ಬೆಲ್ಜಿಯಮಿನ ಪಶ್ಚಿಮ ಭಾಗದಲ್ಲಿ ಬಂದು ಸೇರಿಕೊಂಡಿದ್ದ ಜರ್ಮನರ ಪೈಕಿ ಸೈನಿಕರಲ್ಲದ ಜನಗಳು ಆ ಭಾಗವನ್ನು ಬಿಟ್ಟು ತೆರಳಬೇಕಾಗಿ ಜರ್ಮನ ದಳಪತಿಯ ಹುಕುಂ ಆಗಿರುವುದನ್ನು ಕಂಡಾಗ ಜರ್ಮನರು ಇನ್ನೂ ತಮ್ಮ ಪಾಳ್ಯವನ್ನು ಹಿಂದೆಕೊಂಡು ಹೋಗುವ ಪ್ರಯತ್ನವು ಸ್ಪಷ್ಟವಾಗುತ್ತಿದೆ.

ರಷ್ಯದಿಂದ ಸರಕಾರದ ಕಡೆಯಿಂದ ಅಮೇರಿಕದ ಯುನೈಟೆಡ್ ಸ್ಟೇಟ್ಸ್‌ಗೆ ಹೋದ ಒಂದು ರಾಜಕೀಯ ಮಿಶ್ಯನಿನ ಮುಖ್ಯಸ್ಥನಾದ ಬಕ್‌ಮಿಟೆಫ್ ಎಂಬವರು ಅಮೇರಿಕದಲ್ಲಿ ಹೇಳಿದ ಮಾತಿನ ಮೇರೆಗೆ ಜರ್ಮನರ ಸೊಕ್ಕು ಮುರಿದವಿನಾ ರುಷ್ಯದವರು ಬೇರೆಯಾಗಿ ಸಂಧಿಗೆ ಒಪ್ಪಲಾರರು ಎಂದು ದೃಢವಾಗಿ ಹೇಳಿರುತ್ತಾನೆ.

ರುಷ್ಯದಲ್ಲಿ ಚಕ್ರವರ್ತಿಯನ್ನು ಪಟ್ಟದಿಂದ ಕಿತ್ತುಹಾಕಿದ ಮೇಲೆ ರಾಜ್ಯದಲ್ಲಿ ಉಂಟಾದ ಅವ್ಯವಸ್ಥೆಯು ಅಡಗುತ್ತಿದ್ದು ಸೈನ್ಯವು ಶಿಸ್ತುಮಟ್ಟಿಗೆ ಆಕ್ರಮಕ್ಕೆ ಒಳಗಾಗುತ್ತಿದೆ ಎಂದು ರುಷ್ಯದ ಜನರಲ್ ಬ್ರುಸಿಲೋಫರು ಹೇಳುತ್ತಾರೆ. ಅಮೇರಿಕದಿಂದ ಯುದ್ಧಸನ್ನಾಹವು ರುಷ್ಯದವರಿಗೆ ಈಗ ಸಿಕ್ಕಲಿಕ್ಕೆ ತೊಡಗಿದೆ.

ಗ್ರೀಕರಾಜನಾಗಿದ್ದ ಕಾನ್‌ಸ್ಟಂಟೈನ್ನನು ಈಗ ಸ್ವಿಜರ್‌ಲೆಂಡ್ ರಾಜ್ಯಕ್ಕೆ ಬಂದು ತಲಪಿರುವನು.

ಜರ್ಮನಿಯ ವೆಸ್ಟ್‌ಫಾಲಿಯ ಎಂಬ ಭಾಗದಲ್ಲಿ ಸಿಡಿಲುಬಿದ್ದು ಫಿಯಾರ್ಟ್(?) ಎಂಬಲ್ಲಿ ಸಿಡಿಮದ್ದಿನ ಕಾರ್ಖಾನೆಯು ನಾಶವಾಯಿತು.

ಇಟಲಿಯವರು ದೊಡ್ಡ ದೊಡ್ಡ ಸುರಂಗಗಳನ್ನು ಬೆಟ್ಟದ ಬದಿಗಳಲ್ಲಿ ಅಗಿದು ಅವುಗಳಲ್ಲಿ ಸಿಡಿಮದ್ದನ್ನು ತುಂಬಿಸಿ ಸುಟ್ಟು ಬೆಟ್ಟದ ಭಾಗಗಳೇ ಹಾರಿ ಬೀಳುವಂತೆ ಮಾಡಿ ಆಸ್ಟ್ರಿಯನರಿಂದ ಮೆಲ್ಲಮೆಲ್ಲಗೆ ಒಂದೊಂದು ಭದ್ರವಾದ ಸ್ಥಳವನ್ನು ಕೈವಶಮಾಡಿಕೊಳ್ಳುತ್ತಲಿದ್ದಾರೆ.

ಸಮುದ್ರದ ನೀರೊಳಗೆ ಹಾಕುತ್ತಿದ್ದ ಸಿಡಿಮದ್ದಿನ ಗುಂಡುಗಳನ್ನು ಎತ್ತುವ ಹಡಗೊಂದು ನೀರೊಳಗೆ ಗುಂಡನ್ನು ತಗಲಿ ಒಡೆದು ಮುಳುಗಿತು.

ಜೂನ್ ೧೬ನೇ ತಾರೀಕಿನವರೆಗೆ ಅಂತ್ಯವಾಗುವ ಒಂದು ವಾರದಲ್ಲಿ [illegible] ಉಗಿಹಡಗುಗಳೂ, ೫ ನಾವೆಗಳೂ ಟೋರ್ಪೆಡೊ ತಗಲಿ ಮುಳುಗಿದವು. [illegible] ಹಡಗುಗಳಿಗೆ ಅಪಾಯ ಬರಲಿಲ್ಲ.

[illegible]

ಇಟಲಿ ಮತ್ತು ಆಸ್ಟ್ರಿಯದ ಗಡಿಯ ಯುದ್ಧರಂಗದಲ್ಲಿ ಇಟಲಿಯವರು ೧೪೫ ಯುದ್ಧವಿಮಾನಗಳನ್ನು ಉಪಯೋಗಿಸಿ ೩೦ ಟನ್ ಭಾರದ ಸಿಡಿಮದ್ದನ್ನು ಆಸ್ಟ್ರಿಯರ ಮೇಲೆ ಚೆಲ್ಲಿದರು.

ಅಮೇರಿಕದ ಪಾರ್ಲಿಮೆಂಟಿನ ಮೆಂಬರ್ ರೂಟ್ ಎಂಬವರು ಅಮೇರಿಕದ ಕಡೆಯ ರಾಜಕೀಯ ಮಿಶ್ಯನಿನ ಜತೆಯಲ್ಲಿ ರುಷ್ಯದ ರಾಜಧಾನಿಯಾದ ಪಿಟ್ರೊಗ್ರಾಡಿಗೆ ಬಂದಿಳಿದರು.

೫೦ ಮಂದಿ ಅರಾಜಕತ್ವವಾದಿಗಳು ೩ ಮೆಶೀನ್‌ಗನ್ನ ಸಮೇತ ಪಿಟ್ರೊಗ್ರಾಡಿಗೆ ಬಂದು ಜನರಲ್ಲಿ ಗಲಭೆಹಬ್ಬಬೇಕೆಂದಿದ್ದರು. ಆದರೆ ಇವರನ್ನು ಕೂಡಲೇ ಸರಕಾರದವರು ನಿರ್ಬಂಧದಲ್ಲಿ ಇಟ್ಟರು.

ಪಶ್ಚಿಮ ರಣರಂಗದಲ್ಲಿ ಜರ್ಮನರು ಈ ಮೊದಲು ಬ್ರಿಟಿಷರಿಂದ ಕಸುಕೊಂಡ ಮೊಂಚೆಲಿಪ್ರೂ ಎಂಬ ಸ್ಥಳವು ಪುನಃ ಬ್ರಿಟಿಷರ ಕೈಗೆ ಸಿಕ್ಕಿತು.

ನವೀನ ಸೈನ್ಯವನ್ನು ಜತೆಗೂಡಿಸಿ ಜರ್ಮನರು ಫ್ರೆಂಚರ ಪಾಳ್ಯದ ಕೆಲವಂಶದ ಮೇಲೆ ಬಿದ್ದು ಫೊಕ್ಸಿಲಿಯಸ್(?) ಎಂಬಲ್ಲಿ ಜರ್ಮನರು ಅದನ್ನು ಹಿಡಿದರು. ಆದರೆ ಫ್ರೆಂಚರು ಬಹಳ ಪ್ರಯತ್ನಮಾಡಿ ಜರ್ಮನರನ್ನು ಹಿಂದಕ್ಕೆ ಅಟ್ಟಿದರು.

ಇಟಲಿ ರಣರಂಗದಲ್ಲಿ ಎಸಿಯಾಗೊ ಭಾಗದಲ್ಲಿ ಇಟಲಿಯವರು ಕೆಲವು ಸ್ಥಳವನ್ನು ಆಸ್ಟ್ರಿಯನರಿಂದ ಹಿಡಿದುಕೊಂಡರು.

ಪೂರ್ವ ಆಫ್ರಿಕದ ರಣರಂಗದಲ್ಲಿ ಬ್ರಿಟಿಷರ ನಾಯಕಸೇನೆಯ ಒಂದು ಅಂಶವು ಉಕೇಡಿನದಿಯ ಬಳಿಯಲ್ಲಿ ಜರ್ಮನರ ಒಂದು ಸೈನ್ಯವನ್ನು ಹಿಮ್ಮೆಟ್ಟಿಸಿತು.

ವಿದೇಶ ವೃತ್ತಾಂತ.

ಕಲ್ಲಿದ್ದಲು ಮತ್ತು ಗೋಧಿ ಇವೆರಡರ ವ್ಯಾಪಾರ ಚಲಾವಣೆಯನ್ನು ಯುನೈಟೆಡ್‌ಸ್ಟೇಟ್ಸ್ ಸರಕಾರದವರು ತಮ್ಮ ನಿರ್ಬಂಧದೊಳಗೆ ಇರುವ ಏರ್ಪಾಡು ಮಾಡಿರುವರು. ಇದರಿಂದ ಇಂಗ್ಲೆಂಡಿಗೆ ಲೋಹಾದಿಗಳನ್ನು ಒದಗಿಸದ ಯಾವ ಅಲಿಪ್ತದೇಶಕ್ಕೂ ಕಲ್ಲಿದ್ದಲು ಸಿಕ್ಕದ ಹಾಗಾಗುವುದು. ಮತ್ತು ಗೋಧಿಯು ಜರ್ಮನಿಗೆ ಸಿಕ್ಕದ ಹಾಗೆ ಪ್ರತಿಬಂಧಕವುಂಟಾಗುವುದು.

ಸ್ವಿಡನ್ ರಾಜ್ಯದ ಸ್ಟಾಕ್‌ಹೊಮ್ ಎಂಬಲ್ಲಿ ಯೂರೋಪಿನ ಪ್ರಮುಖ ರಾಜ್ಯಗಳ ಜನಸಮತ್ವವಾದಿಗಳ ಪ್ರತಿನಿಧಿಗಳ ಒಂದು ಪರಿಷತ್ತನ್ನು ಜರಗಿಸುವರು. ಅದಕ್ಕೆ ಜರ್ಮನ್ ದೇಶದ ಪ್ರತಿನಿಧಿಗಳು ಬಂದಿರುವರು. ಈ ಪರಿಷತ್ತಿನಲ್ಲಿ ಈಗ ನಡೆಯುವ ಯುದ್ಧದ ಉಭಯ ಶಕ್ತಿಗಳವರು ರಾಜಿಗೆ ಒಪ್ಪುವಂತೆ ಪ್ರಯತ್ನಿಸಬೇಕೆಂದೂ ಆಯಾಪಕ್ಷದವರಿಗೆ ತಗಲಿದ ಯುದ್ಧದ ಖರ್ಚನ್ನು ಅವರವರೇ ವಹಿಸಿಕೊಳ್ಳಬೇಕೆಂದೂ ಯುದ್ಧಕಾಲದಲ್ಲಿ ಒಬ್ಬರು ಇನ್ನೊಬ್ಬರಿಂದ ಕಿತ್ತುಕೊಂಡ ವಸಾಹತುಗಳನ್ನು ಆಯಾ ಮಾಲೀಕರಿಗೆ ಹಿಂದಕ್ಕೆ ಕೊಡಬೇಕೆಂದೂ ಚರ್ಚೆಗಳು ನಡೆಯುತ್ತಲಿವೆ. ಈ ಪರಿಷತ್ತಿಗೆ ಮಿತ್ರಮಂಡಳಿಯವರ ಪೈಕಿ ರುಷ್ಯದಿಂದ ಮಾತ್ರವೇ ಕೆಲವು ಪ್ರತಿನಿಧಿಗಳು ಹೋಗಿರುವರು. ಈ ಪರಿಷತ್ತಿನ ಸೂತ್ರವನ್ನು ಜರ್ಮನ್ ಮಂತ್ರಿಯು ಹಿಂದಿನಿಂದ ಹಿಡಿದಿರುವನೆಂದು ತಿಳಿಯುವುದಕ್ಕೆ ಕಾರಣಗಳಿವೆ. ಯುದ್ಧ ಮುಗಿದ ನಂತರ ಪ್ರತಿಯೊಂದು ರಾಜ್ಯವು ಇಟ್ಟುಕೊಳ್ಳುವ ಸೈನ್ಯಸನ್ನಾಹಕ್ಕೆ ಮಿತಿ ಇರಬೇಕು, ಚರ್ಚಾಸ್ಪದವಾದ ವಿಷಯಗಳನ್ನು ಆರ್ಬಿಟ್ರೇಶನ್ ಮೂಲಕ ಇತ್ಯರ್ಥಿಸಬೇಕು, ಪರಸ್ಪರ ವ್ಯಾಪಾರ ವೃದ್ಧಿಗೆ ತೊಡಕಾಗುವ ರೀತಿಯ ತೆರಿಗೆಗಳನ್ನು ತೆಗೆದುಹಾಕಬೇಕು, ಎಂಬ ಹಲವು ವಿಷಯಗಳು ಈ ಪರಿಷತ್ತಿನಲ್ಲಿ ಚರ್ಚೆಗೆ ಬಂದಿರುವವು.

ಸ್ಪೇನ್ ದೇಶದಲ್ಲಿ ಉಂಟಾದ ಚಳವಳದಲ್ಲಿ ರಾಜನನ್ನು ಪಟ್ಟದಿಂದ ಕಿತ್ತುಹಾಕಿ ದೇಶವನ್ನು ಪ್ರಜಾಪ್ರಭುತ್ವವಾಗಿ ಮಾಡಬೇಕೆಂಬ ಆಶಯವನ್ನು ಅಲ್ಲಿಯ ಪಾರ್ಲಿಮೆಂಟಿನ ಒಂದು ಪಕ್ಷವು ಪ್ರತಿಪಾದಿಸುತ್ತಲಿದೆ.

ಜರ್ಮನಿಯಿಂದ ಬರುವ ಬಣ್ಣಗಳು ಈಗ ನಿಂತ ಹೋದ್ದರಿಂದ ಇಂಗ್ಲೆಂಡಿನಲ್ಲಿ ಆ ವಿಧದ ಬಣ್ಣಗಳನ್ನು ತಯಾರಿಸುವ ಏರ್ಪಾಡುಗಳು ಈಗ ನಡೆಯುತ್ತಲಿವೆ. ಇದಕ್ಕೆ ಬೇಕಾದ ಸಹಾಯವನ್ನು ಸರಕಾರದವರೇ [illegible].

ಮಧ್ಯ ಅಮೇರಿಕದ ಬಳಿ ಇರುವ ವೆಸ್ಟ್ ಇಂಡಿಸ್ ದ್ವೀಪಗಳಿಗೆ ಸೇರಿದ ಹೆಯ್ತಿ ಎಂಬ ದ್ವೀಪದವರು ಜರ್ಮನಿಯೊಡನೆ ಎಲ್ಲಾ ವ್ಯವಹಾರಗಳನ್ನು ನಿಲ್ಲಿಸಿಬಿಟ್ಟಿರುವರು.

ಸ್ತ್ರೀಯರಿಗೂ ಪಾರ್ಲಿಮೆಂಟು ಮೆಂಬರರನ್ನು ಚುನಾಯಿಸುವ ವೋಟು ಕೊಡುವ ಅಧಿಕಾರ ಸಿಕ್ಕಬೇಕೆಂದು ಹೌಸ್ ಒಫ್ ಕೊಮನ್ಸ್ (ಪಾರ್ಲಿಮೆಂಟ್)ನಲ್ಲಿ ಮಂಜೂರಾಯಿತು.

ಇಂಗ್ಲೆಂಡಿಗೆ ಬರುವ ಹತ್ತಿಯ ಸರಬರಾಯಿ ಜಲಾಂತರ್ಗಾಮಿಗಳ ಹಾವಳಿಯ ದೆಸೆಯಿಂದ ವಿಪರೀತ [illegible]. ಆದ್ದರಿಂದ ಲಿವರ್‌ಪೂಲಿನ ಕಾರ್ಖಾನೆಯವರಿಗೆ ತೊಂದರೆ ಬಾರದ ಹಾಗೆ ಹತ್ತಿಯ ಕ್ರಯವಿಕ್ರಯಗಳನ್ನು ಮಾಡುವ ಅಥವಾ ನಿಲ್ಲಿಸುವ ಅಧಿಕಾರವನ್ನು ಸರಕಾರದವರು ಇಟ್ಟುಕೊಂಡಿದ್ದಾರೆ.

ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಎನ್ಡೆಂಚರ ಪ್ರತಿಬಂಧಕದ ವಿಷಯವಾಗಿ ಸವಾಲು ಕೇಳಿದ್ದಲ್ಲಿ ಇಂಡಿಯಾ ಸೆಕ್ರೆಟರಿಗಳಾದ ಚೆಂಬರ್ಲೇನರು ಬಹಳ ಅಸಮಾಧಾನಕರವಾದ ಉತ್ತರವನ್ನು ಕೊಟ್ಟರು. ಮದ್ರಾಸು ಗವರ್ನಮೆಂಟಿನವರು ಈ ವಿಷಯದಲ್ಲಿ ಕೂಲಂಕಷ ವಿಚಾರಣೆಮಾಡಿ ಈ ಪ್ರತಿಬಂಧವನ್ನು ಜರಗಿಸಿವರು ಎಂದು ಚೆಂಬರ್ಲೇನರ ಅಭಿಪ್ರಾಯ.

ಹಿಂದುಸ್ಥಾನದಲ್ಲಿ ಸುಮಾರು ೭೫,೦೦೦ ಟನ್ ಕಾಗದವು ಖರ್ಚಾಗುತ್ತಲಿದೆ. ಈ ಪೈಕಿ [illegible] ಮಾತ್ರವೇ ಈ ದೇಶದಲ್ಲಿ ತಯಾರಾಗುತಲಿದ್ದು ಉಳಿದ ಭಾಗವನ್ನು ಅಮೇರಿಕ ಮತ್ತು ವಿಲಾಯತಿಯಿಂದ ತರಿಸಬೇಕಾಗಿತ್ತು. ಈಗ ಅದಕ್ಕೆ ತೊಡಕುಗಳಿರುವುದರಿಂದ [illegible] ಬರುತ್ತದೆ. ಕಾಗದವನ್ನು ತಯಾರಿಸುವದಕ್ಕೆ ಬೇಕಾದ ಬಗೆಯ ಹುಲ್ಲು ಬಿದಿರೂ ಈ ದೇಶದಲ್ಲಿ ಯಥೇಷ್ಟವಾಗಿ ಸಿಕ್ಕುವುದರಿಂದ ನಮ್ಮ ಆವಶ್ಯಕತೆಗಳನ್ನು ಪೂರೈಸುವುದಕ್ಕೆ ನಾವೇ ಪ್ರಯತ್ನಪಟ್ಟು ಕಾರ್ಖಾನೆಗಳನ್ನು ಏರ್ಪಡಿಸುವುದು ಉಚಿತವು.

ಹೊಲ್ಲೆಂಡಿನಲ್ಲಿ ಕಲ್ಲಿದ್ದಲು ಗನಿಗಳಲ್ಲಿ ಕೆಲಸಮಾಡುವವರಲ್ಲಿ ೬೦,೦೦೦ ಮಂದಿ ತಮಗೆ ಸಂಬಳ ಹೆಚ್ಚಿಸಬೇಕೆಂದೂ ೮ ತಾಸುಗಳಿಗಿಂತ ಹೆಚ್ಚಿಗೆ ಕೆಲಸ ದಿನಂಪ್ರತಿ ಮಾಡಿಸ ಕೂಡದೆಂದೂ ಮುಷ್ಕರಹಿಡಿದು ಅದು ಇತ್ಯರ್ಥಿಸುವ ವರೆಗೆ ಕೆಲಸಕ್ಕೆ ಹೋಗುವುದಿಲ್ಲವೆಂದು ನಿಂತುಬಿಟ್ಟಿರುವರು.

ಪೆಟ್ರೊಗ್ರಾಡಿನಲ್ಲಿ ಸ್ವಿಜರ್‌ಲೆಂಡಿನ ಪರವಾಗಿ ರುಷ್ಯದವರೊಡನೆ ಸಂಧಿಪ್ರಸ್ತಾಪ ಮಾಡಿದ ವಿಷಯ ಮೊದಲೇ ಸೂಚಿಸಿರುವೆವು. ಅದರಲ್ಲಿ ಸ್ವಿಜರ್‌ಲೆಂಡಿನ ಪಾರ್ಲಿಮೆಂಟ ಸಭೆಯ ಅನುಮತಿಯು ಇತ್ತು ಎಂಬದಾಗಿ ರೂಢಿಯಾಗಿ ಹೇಳಲಾಯಿತು. ಆದರೆ ಈ ವಿಷಯದಲ್ಲಿ ಕೂಲಂಕಷ ವಿಚಾರ [illegible]

ಆಸ್ಟ್ರಿಯಾ ದೇಶದ ಬ್ಲಮ್‌ವೆಸ್(?) ಎಂಬಲ್ಲಿ ಸಿಡಿಮದ್ದಿನ ಕಾರ್ಖಾನೆಗೆ ಬೆಂಕಿ ತಗಲಿ ೧೩೭ ಮಂದಿ ಸತ್ತರು; ೧೬೦ ಜನರ ಪತ್ತೆ ಇಲ್ಲ; ೬೩೫ ಜನರಿಗೆ ಗಾಯವಾಗಿದೆ ಎಂದು ತಿಳಿದು ಬರುತ್ತದೆ.

ಆಹಾರ ಸಾಮಗ್ರಿಗಳು ತುಟ್ಟಿಯಾದ ಕಾರಣ ಸ್ವೀಡನ್ ರಾಜ್ಯದ ಸ್ಟೆಟ್ಟಿನ(?) ಎಂಬಲ್ಲಿ ಪ್ರಜಾ ಜನಗಳು ದಂಗೆ ಎದ್ದರು. ಆದರೆ ಸೈನ್ಯವನ್ನು ಕಳುಹಿಸಿ ಅದನ್ನು ಉಪಶಮನ ಮಾಡಿದರು.

೩೦೦ ಕೋಟಿ ಡಾಲರುಗಳಿಗೆ ಮಿಕ್ಕಿ ಯುದ್ಧಸಾಲವು ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿ ಈ ಯುದ್ಧವನ್ನು ಕೊನೆಗಾಣಿಸುವದಕ್ಕೆ ಪ್ರಜಾಜನರಿಂದ ಸಂಗ್ರಹವಾಗಿದೆ.

ಜರ್ಮನಿಯಲ್ಲಿ ಹೊಟ್ಟೆಗನ್ನವಿಲ್ಲದೆ ಅನೇಕರು ಕಷ್ಟಪಡುತ್ತಿರುವರು. ಆದುದರಿಂದ ಅಲ್ಲಿಯ ಕ್ರೈಸ್ತ ದೇವಮಂದಿರಗಳಲ್ಲಿ ಪಾದ್ರಿಗಳು ಮಿತವ್ಯಯದ ಮೇಲ್ಮೆಯನ್ನೂ ಇದ್ದುದರಲ್ಲಿಯೇ ತೃಪ್ತರಾಗಿರಬೇಕೆಂಬ ತತ್ವವನ್ನೂ ಬೋಧಿಸುತ್ತಿರುವರು. ಇದನ್ನು ಕೇಳಿ ಕಳ್ಳರು ಬಂದು ಆ ದೇವಮಂದಿರಕ್ಕೆ ಕನ್ನಹಾಕಿ ಅದರಲ್ಲಿ ಶೇಖರಿಸಿಟ್ಟಿದ್ದ ಪದಾರ್ಥಗಳನ್ನೂ ದವಸಧಾನ್ಯಗಳನ್ನೂ ದೋಚಿಕೊಂಡು ಹೋಗುವಾಗ ಒಂದು ಕಾಗದವನ್ನು ಬರೆದಿಟ್ಟರು. ಅದರಲ್ಲಿ "ಇನ್ನು ಮೇಲೆ ಮಿತವ್ಯಯದ ಮೇಲ್ಮೆಯನ್ನು ತಿಳಿದುಕೊಂಡು ಇದ್ದುದರಲ್ಲಿಯೇ ತೃಪ್ತರಾಗುವೆವು" ಎಂದು ಬರೆಯಲ್ಪಟ್ಟಿದ್ದಿತಂತೆ.

ಆಸ್ಟ್ರಿಯನ್ ಸೈನಿಕರು ದೇಶವಾತ್ಸಲ್ಯದಿಂದ ಯುದ್ಧಮಾಡುತ್ತಿಲ್ಲವೆಂಬುದಕ್ಕೆ ಒಂದು ನಿದರ್ಶನವು ಈಚೆಗೆ ಕಂಡು ಬಂದಿರುತ್ತದೆ. ಕೆಲವು ಮಂದಿ ಆಸ್ಟ್ರಿಯನ್ ಸೈನಿಕರು ಯುದ್ಧಮಾಡಲಾರದೆ ಒಂದು ಬಗೆಯ ದ್ರಾವಕವನ್ನು ಹೈಪ್ ಡಾರ್ಮಿಕ್ ಪಿಚಕಾರಿಯಿಂದ ದೇಹದೊಳಗೆ ಬಿಟ್ಟುಕೊಳ್ಳುವರು. ಅದರಿಂದ ಒಂದು ಬಗೆಯ ರೋಗವು ಹುಟ್ಟಿ ಅವರು ಯುದ್ಧಕಾರ್ಯಕ್ಕೆ ನಿಷ್ಪ್ರಯೋಜಕರಾಗುವರು. ಹೀಗೆ ಮಾಡಿದ ಕೆಲವು ಮಂದಿ ಸೈನಿಕರನ್ನು ಕಂಡುಹಿಡಿದು ಆಸ್ಟ್ರಿಯನ್ ಅಧಿಕಾರಿಗಳು ವಿಚಾರಣೆಯನ್ನು ನಡೆಸುತ್ತಿರುವರು.

ಬ್ರಿಟಿಷ ಸರಕಾರಕ್ಕೆ ಎಂದು ರವಾನೆಯಾಗುತ್ತಿದ್ದ ಬಟಾಟೆಯ ಗಾಡಿಗಳನ್ನು ಹೊಲ್ಲೆಂಡ್ ದೇಶದ ರೋಟರ್‌ಡಮಿನವರು ಹಿಡಕೊಂಡು ಬಟಾಟೆಯನ್ನು ತಮ್ಮೊಳಗೆ ಹಂಚಿಕೊಂಡಿರುವರೆಂಬ ವಾರ್ತೆಯು ಕೇಳಬರುತ್ತಿದೆ. ಡಚ್ಚ್ ಮತ್ತು ಬ್ರಿಟಿಷರೊಳಗೆ ಆದ ಕರಾರು ಪ್ರಕಾರ ಹೊಲ್ಲೆಂಡ ದೇಶದಲ್ಲಿ ಬೆಳೆದ ಬಟಾಟೆಯ ಬೆಳೆಯ ಅರ್ಧಾಂಶದಲ್ಲಿ ಸರಿಯಾಗಿ ಒಂದು ಪಾಲನ್ನು ಬ್ರಿಟಿಷರಿಗೂ ಮತ್ತೊಂದು ಪಾಲನ್ನು ಜರ್ಮನಿಗೂ ಕಳುಹಿಸಿಕೊಡಬಹುದೆಂತಿದೆ. ೧೯೧೬ನೇಯ ಈ ಕರಾರು ಪ್ರಕಾರ ಬ್ರಿಟಿಷರಿಗೆ ೧೯೧೬ನೆ ಬೆಳೆಯಿಂದ ೧೧,೦೦೦ ಟನ್ನುಗಳಷ್ಟು ಬಟಾಟೆಯು ಸಲ್ಲತಕ್ಕದಿರುವದು. ಈ ಬಟಾಟೆಯನ್ನು ಜರ್ಮನಿಗೆ ಅದು ಕೊಡೋಣವಾಗುವ ಮೊದಲೆ ತಮಗೆ ೧೯೧೬ನೆ ಬೆಳೆಯಿಂದಲೆ ಕೊಡೋಣವಾಗಬೇಕೆಂದು ಬ್ರಿಟಿಷರು ಹೇಳಿದ್ದರು. ಹೊಲ್ಲೆಂಡ್ ದೇಶದ ಅಧಿಕಾರಿಗಳು ಜರ್ಮನಿಗೆ ಬಟಾಟೆಯನ್ನು ಕಳುಹಿಸುವ ತಯ್ಯಾರಿಯನ್ನು ಮಾಡುವದನ್ನು ಬ್ರಿಟಿಷರು ತಿಳಕೊಂಡದ್ದರಿಂದ ಬ್ರಿಟಿಷರು ಈ ರೀತಿ ಹೇಳಿದ್ದಾಗಿದೆ. ಬಟಾಟೆಯನ್ನು ಉಪಯೋಗಿಸುವದರಲ್ಲಿ ಹೊಲ್ಲೆಂಡ ಅಧಿಕಾರಿಗಳು ತಮ್ಮ ದೇಶದಲ್ಲಿ ಮಿತಿಯನ್ನು ಮಾಡಿಬಿಟ್ಟದ್ದರಿಂದ ರೋಟರ್‌ಡಮಿನಲ್ಲಿ ಜನರು ಬಟಾಟೆಯ ರವಾನೆಯನ್ನು ತಡೆದಿರುತ್ತಾರೆ. ಹೊಲ್ಲೆಂಡಿನವರು ಬ್ರಿಟಿಷರ ಈ ಬಟಾಟೆಯ ವಾಗೀನುಗಳನ್ನು ಬಿಟ್ಟುಕೊಟ್ಟು ಕರಾರು ಪ್ರಕಾರ ನಡೆಯದಿದ್ದರೆ ವಿಶೇಷ ಪರಿಣಾಮಗಳು ಉಂಟಾಗಬಹುದೆಂಬದಾಗಿ ಡಚ್ಚ ಸರಕಾರಕ್ಕೆ ಸೂಚಿಸಿರುವರು.

ಆಹಾರ ಸಂಗ್ರಹದ ಜೋಪಾಸನೆಯ ಅಧೀಶರರಾದ ರೊಹೊಂಡಾ ಪ್ರಭುಗಳು ಬ್ರಿಟಿಷ ದ್ವೀಪಗಳಲ್ಲಿ ಆಹಾರ ಜೀನಸುಗಳ ಕ್ರಯಗಳನ್ನು ಮಿತಿಪಡಿಸುವ ಏರ್ಪಾಡನ್ನು ಮಾಡುತ್ತಿರುವರಾಗಿ ತಿಳಿದುಬರುತ್ತದೆ. ಜೀನಸುಗಳ ಬೆಳೆಗಳಿಗೆ ತಗಲುವ ಖರ್ಚಿನ ಲೆಕ್ಕವನ್ನೂ ಅವುಗಳ ತಯ್ಯಾರಿಯ ಇತರ ಖರ್ಚನ್ನೂ ತಿಳಕೊಂಡು ಯುದ್ಧ ಮೊದಲಿನ ಮುನಾಫೆಯ ದರವನ್ನು ನಿಶ್ಚಯಿಸಿಕೊಂಡು ಜೀನಸುಗಳ ಕ್ರಯವು ಇಲಾಖೆಯವರಿಂದಲೆ ನಿರ್ಧರಿಸಲ್ಪಡುವದು.

ಪಶ್ಚಿಮ ರಣರಂಗದಲ್ಲಿ ಶತ್ರುಗಳ ಸೇನಾನಷ್ಟ ಇತ್ಯಾದಿಗಳನ್ನು ಕುರಿತು ವಿವರವಾದ ಒಂದು ವರದಿಯು ಲಂಡನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವದು. ಕಳೆದ ಜನವರಿ ತಿಂಗಳ ಒಂಬತನೆ ತಾರೀಕಿನಿಂದ ಇದೇ ಜೂನು ತಿಂಗಳ ಅಂತ್ಯದ ವರೆಗಿನ ಸಮಯದ ವೃತ್ತಾಂತವು ಈ ವರದಿಯಲ್ಲಿ ಸಂಕ್ಷೇಪವಾಗಿ ಪರಿಶೀಲಿಸಲ್ಪಟ್ಟಿರುವದು. ಬ್ರಿಟಿಷರು ಮತ್ತು ಫ್ರೆಂಚರು ಕೂಡಿ ಒಟ್ಟಿಗೆ ೫೦,೦೦೦ ಜರ್ಮನ ಸೈನಿಕರನ್ನು ಈ ಸಮಯದಲ್ಲಿ ಸೆರೆಹಿಡಿದಿರುವರು. ಶತ್ರುಗಳ ೫೦೦ ಫಿರಂಗಿಗಳೂ ಇನ್ನೂ ಹಲವು ಮೆಶಿನ್‌ಗನ್ನ ಇತ್ಯಾದಿಗಳೂ ಮಿತ್ರರ ಕೈವಶವಾಗಿವೆ. ಎಪ್ರಿಲ ತಿಂಗಳ ಪ್ರಾರಂಭದಲ್ಲಿ ಜರ್ಮನರ ಕಾದಿಟ್ಟ ಸೇನಾಂಗಗಳು ಪಶ್ಚಿಮ ರಣರಂಗದಲ್ಲಿ ೫೨ ಇದ್ದವು. ಜೂನು ತಿಂಗಳ ಸುರುವಿನಲ್ಲಿ ಈ ಸಂಖ್ಯೆಯು ೧೩ಕ್ಕೆ ಬಂದು ತಗ್ಗಿದೆ. ಹಲವು ಸೇನಾಂಗಗಳು ನಾಶವಾಗಿ ಹೋಗಿರುವವು ಮತ್ತು ಕೆಲವನ್ನು ಹಿಂದಕ್ಕೆ ಸಾಗಿಸಿರುವರು. ರೀಮ್ಸ್ ಮತ್ತು ಯಪ್ರೆಸ್‌ಗಳ ನಡುವೆ ಶತ್ರುಗಳು ೧೯೧೪ರಿಂದ ಹಿಡಿದುಕೊಂಡಿದ್ದ ಮುಖ್ಯ ಮುಖ್ಯ ಸೇನಾನೆಲೆಗಳನ್ನು ಮಿತ್ರರು ಕೈವಶಮಾಡಿಕೊಂಡಿರುವರು. ರುಷ್ಯದಲ್ಲಿ ಉಂಟಾದ ಕ್ರಾಂತಿಯಿಂದ ಪೂರ್ವ ರಣರಂಗದಲ್ಲಿ ವಿಶೇಷ ಕದನಗಳಿಗೆ ಆಸ್ಪದವಿಲ್ಲದ ಸಂದರ್ಭದ ಪ್ರಯೋಜನವನ್ನು ಪಶ್ಚಿಮ ರಣರಂಗದಲ್ಲಿ ಶತ್ರುಗಳಿಂದ ಪಡೆಯಲು ಆಗಲಿಲ್ಲ. ಇಂಥಾ ಸಂದರ್ಭವು ಇನ್ನು ಎಂದಿಗೂ ಶತ್ರುಗಳಿಗೆ ದೊರಕದು. ರುಷ್ಯಯನರು ಇನ್ನೂ ಬೇಗನೆ ಮುಂದುವರಿದು ಕದನಕ್ಕೆ ಬರುವರು. ರುಮೇನಿಯದವರು ತಮ್ಮ ನಷ್ಟಗಳನ್ನು ಭರ್ತಿಮಾಡಿಕೊಂಡು ಬಲಿಷ್ಠರಾಗಿದ್ದಾರೆ. ಆದ್ದರಿಂದ ಜನವರಿ ತಿಂಗಳ ೧ನೇ ತಾರೀಕಿನ ಸ್ಥಿತಿಯನ್ನು ಜೂನು ತಿಂಗಳ ಸ್ಥಿತಿಯೊಂದಿಗೆ ಸರಿಹೋಲಿಸಿದರೆ ಸಂತೋಷಕ್ಕೆ ತುಂಬಾ ಆಸ್ಪದವಿದೆ.

ಪೌರ್ವಾತ್ಯ ಪ್ರಾಂತ್ಯಗಳಲ್ಲಿ ಸಹ ಬ್ರಿಟಿಷರು ಬಗ್ದಾದನ್ನು ಕೈವಶಮಾಡಿಕೊಂಡಿರುತ್ತಾರೆ. ಮೆಸೊಪೊಟೇಮಿಯದ ತುರ್ಕರ ಸೇನೆಯನ್ನು ಸೋಲಿಸಿರುವರು, ತಿಗ್ರಿಸ್ ನದಿಯ ಮೇಲು ಪ್ರಾಂತ್ಯಗಳನ್ನು ಪ್ರವೇಶಿಸಿ [illegible] ತುರ್ಕರನ್ನು ಓಡಿಸಿ ಪಲಿಸ್ತೀನವನ್ನು ಒಳನುಗ್ಗಿಕೊಂಡಿರುವರು. ಈ ವೃತ್ತಾಂತಗಳೆಲ್ಲಾ ಟೈಮ್ಸ್ ಪತ್ರಿಕೆಯ ವರದಿಯಲ್ಲಿವೆ.

ಉತ್ತರ ಹಿಂದೂಸ್ಥಾನ.

ಬಂಗಾಳ ಗವರ್ನಮೆಂಟಿನವರು [illegible] ಗಳನ್ನು ಮಾಡುವುದಕ್ಕೋಸ್ಕರ ಮಿಸ್. [illegible] ಗ್ರಾಂಟು ದ್ರವ್ಯಸಹಾಯ ಮಾಡಿದ್ದಾರೆ.

[illegible]

ಅನುಕ್ರಮಣಿಕೆ.

ಅಗ್ರಲೇಖಗಳು:— ಪಾನು.
೧ ಈ ಲೋಕಮತದಿಂದ ಏನನ್ನು ಊಹಿಸಬಹುದು? ... ೪
ಸ್ಫುಟವಿಚಾರಗಳು:—
೧ ತೋಟಿಗರೂ ಗಾಂಧಿಗಳೂ.—ಕಮಿಷನಿನಲ್ಲಿ ಗಾಂಧಿಗಳ ನೇಮಕ ... ೪-೫
೨ ರಾಷ್ಟ್ರೀಯ ಪ್ರತಿಬಂಧಗಳ ವಿಷಯದಲ್ಲಿ ಮಿ. ಚೇಂಬರಲೇನರ ಅಭಿಪ್ರಾಯ ... ,,
೩ ಕನ್ನಡ ಕೃಷಿ ಶಿಕ್ಷಣ ಪರಿಷತ್ತು ... ,,
೪ ಕಾಗದದ ಕಾರಖಾನೆ ... ,,
೫ ಇಂಡಿಯಾ ಕೌನ್ಸಿಲಿನ ನೇಮಕಗಳು ... ,,
ಸ್ಥಳೀಯ—ಮಂಗಳೂರು ... ,,
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ ... ೩
೨ ವಿದೇಶ ವೃತ್ತಾಂತ ... ,,
೩ ಉತ್ತರ ಹಿಂದುಸ್ಥಾನ ... ,,
೪ ದಕ್ಷಿಣ ಹಿಂದೂಸ್ಥಾನ ... ,,
೫ ಬಾಕಿ ಪತ್ರಗಳು: ಪತ್ರಿಕೆ ... ೩-೬
ಪತ್ರವ್ಯವಹಾರ. ... ,,

ಸ್ವದೇಶಾಭಿಮಾನಿ.

ಶಕ ೧೮೩೯ ಆಷಾಢ ಶು. ೯ ಶುಕ್ರವಾರ.

ಈ ಲೋಕಮತದಿಂದ ಏನನ್ನು ಊಹಿಸಬಹುದು?

ಮದ್ರಾಸ ಸರಕಾರವು ಮಿಸೆಸ್ ಎನಿಬಿಝುಂಟ ಪ್ರಭೃತಿ ಮೂವರನ್ನು ಪ್ರತಿಬಂಧಿಸಿದ್ದಕ್ಕಾಗಿ ಮದ್ರಾಸ ಸಂಸ್ಥಾನದ ಲೋಕಮತವನ್ನು ವ್ಯಕ್ತಗೊಳಿಸುವದಕ್ಕಾಗಿ ಕಳೆದ ಗುರುವಾರ ದಿವಸ ಮದ್ರಾಸಿನಲ್ಲಿ ಪ್ರಚಂಡವಾದ ಸಭೆಯು ಜರಗಿತು. ಈ ಸಭೆಯು ಡಾ. ಸರ್ ಸುಬ್ರಹ್ಮಣ್ಯ ಐಯರ್, ದಿವಾನಬಹದ್ದೂರ ಕೇಶವ ಪಿಳ್ಳೆ, ಮುಂತಾದ ೧೫-೨೦ ಪ್ರಮುಖ ಸದ್ಗೃಹಸ್ಥರ ಆಮಂತ್ರಣದಿಂದ ಸೇರಿತ್ತು. ಆ ಪ್ರಚಂಡ ಸಭೆಯಲ್ಲಿ ಮದ್ರಾಸಿನ ಸಾಮಾನ್ಯ ಎಲ್ಲ ಜಾತಿಮತಗಳ ಪ್ರಮುಖರು ಹಾಜರು ಇದ್ದದಲ್ಲದೆ ಈ ಸಂಸ್ಥಾನದೊಳಗಿನ ೧೪-೧೫ ಕಸಬೆಗಳಿಂದ ಅನೇಕ ಮುಖಂಡರು ಬಂದಿದ್ದರು. ನಮ್ಮ ಮಂಗಳೂರಿಂದ ಬಹುಮಾನಪಟ್ಟ ಸದಾಶಿವ ಭಟ್ಟರು, (ಪುತ್ತೂರಿನಲ್ಲಿರುವ) ಶ್ರೀಯುತ ಎಮ್. ಶಿವರಾವ್, ಮಂಗಳೂರಿನ ಡಾ. ಶಿವರಾವ್, ಮ| ರಾ| ಎಮ್. ಮಾಧವರಾವ್, ಮ| ರಾ| ಬಾಲಕೃಷ್ಣ ಶೆಟ್ಟರು ಮೊದಲಾದ ಮುಖಂಡರು ಹೋಗಿದ್ದರು. ಈ ನಿಷೇಧಪ್ರದರ್ಶಕ ಸಭೆಯ (ಪ್ರೊಟೆಸ್ಟ್ ಮೀಟಿಂಗಿನ) ಅಧ್ಯಕ್ಷಸ್ಥಾನವನ್ನು ವರಿಷ್ಠ ಕೌನ್ಸಿಲಿನ ಸಭಾಸದರಾದ ಬಹುಮಾನಪಟ್ಟ ಬಿ. ಎನ್. ಶರ್ಮರು ವಹಿಸಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮದ್ರಾಸ ಸರಕಾರದ ಈ ಕೃತ್ಯವನ್ನು ನಿಷೇಧಿಸುವಾಗ ಲಾ. ಪೆಂಟಲೆಂಡರ ಕೌನ್ಸಿಲಿನೊಳಗಿನ ಕೆಲವು ಸಂಗತಿಗಳನ್ನು ತಕ್ಕೊಂಡು ಅವು ಹ್ಯಾಗೆ ಸಮರ್ಪಕವಲ್ಲ, ಬಿಝುಂಟ ಮುಂತಾದವರು ಈಗ ಕೇಳುತ್ತಿರುವ ಮತ್ತು ಅದಕ್ಕಾಗಿ ಯತ್ನಿಸುತ್ತಿರುವ ಸ್ವರಾಜ್ಯವು ಕಳೆದ ಡಿಸೆಂಬರಿನಲ್ಲಿ ರಾಷ್ಟ್ರೀಯ ಸಭೆ ಮತ್ತು ಮೊಸ್‌ಲೆಮ್‌ಲೀಗ್ ಈ ಸಂಸ್ಥೆಗಳು ನಿರ್ಣಯಿಸಿ ಕೊಟ್ಟ ಅಂತರ್ಗತ ಸ್ವರಾಜ್ಯವೆ ಅಲ್ಲದೆ ಹ್ಯಾಗೆ ಬೇರೆಯಲ್ಲ, 'ಡಿಫೆನ್ಸ್ ಒಫ್ ಇಂಡಿಯಾ ಎಕ್ಟ್' ಈ ಕಾಯಿದೆಯಿಂದ, ಅಂಥ ಯಾವ ಪ್ರಸಂಗವೂ ಇಲ್ಲದೆ–ಪ್ರಾಂತದಲ್ಲಿ–ಇಡಿ ದೇಶದಲ್ಲಿ ಶಾಂತತೆಯು ಇರುವಾಗ ಅವರನ್ನು ಪ್ರತಿಬಂಧ ಮಾಡಿದ್ದು ಹ್ಯಾಗೆ ಯುಕ್ತವಲ್ಲ ಎಂಬಿತ್ಯಾದಿ ವಿಷಯಗಳನ್ನು ವಿವರಿಸಿ ಹೇಳಿದರು. ಕೊನೆಗೆ ಸರಕಾರದವರು ಜನರ ಸನದಶೀರ್ರಾದ ಮಾರ್ಗದಲ್ಲಿ ವಿಘ್ನಗಳನ್ನು ತಂದೊಡ್ಡುವದು ಯುಕ್ತವಲ್ಲವೆಂಬದನ್ನು ವಿಚಾರದಿಂದ ತಿಳಿದುಕೊಂಡಾರೆಂಬ ಆಶೆಯನ್ನು ಪ್ರದರ್ಶಿಸಿದರು. ದಿವಾನಬಹದ್ದೂರ ಕೇಶವ ಪಿಳ್ಳೆಯವರು ಪ್ರತಿಬಂಧಗಳ ವಿಷಯದಲ್ಲಿ ನಿಷೇಧಪ್ರದರ್ಶಕ ಠರಾವನ್ನು ತಂದರು. ಈ ಠರಾವು ಬಹುಮಾನಪಟ್ಟ ಮ| ರಾ| ಎಮ್. ರಾಮಚಂದ್ರರಾವ್, ಡಾ. ನಂಜುಂಡರಾವ್, ಗುರುಸ್ವಾಮಿಚೆಟ್ಟಿ, ಬಹುಮಾನಪಟ್ಟ ಸದಾಶಿವ ಭಟ್ಟರು, ಪೂನಾದಿಂದ ಬಂದಿರುವ ಶ್ರೀಯುತ ಕೇಳಕರ, ಮುಂಬಯಿಯ ಮಿ. ಹೊರ್ನಿಮನ್ ಮುಂತಾದ ಅನೇಕ ವಕ್ತೃಗಳ ಭಾಷಣಗಳಾದ ಮೇಲೆ ಪಾಸಾಯಿತು. ಈ ಸಭೆಯಲ್ಲಿ ನೆರೆದ ಲೋಕಸಮಾಜವು ಸಾಧಾರಣ ಎರಡು ಎರಡುವರೆ ಸಾವಿರಕ್ಕೂ ಮಿಕ್ಕಿರುವದೆಂದು ಮದ್ರಾಸಿನ ಪತ್ರಿಕೆಗಳು ಹೇಳುತ್ತವೆ. ಈ ಸಭೆಯ ಮುಖ್ಯ ಮುಖ್ಯ ಸಂಗತಿಗಳನ್ನು ಹೇಳುವಾಗ ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿ, ವಿ. ಪಿ. ಮಾಧವರಾವ್ ಮುಂತಾದ ಅನೇಕ ಮಾನ್ಯ ಮುಖಂಡರಿಂದ ಪತ್ರಗಳೂ ತಂತಿಗಳೂ ಬಂದಿದ್ದವೆಂಬದನ್ನು ತಿಳಿಸುವದು ಉಚಿತವಾಗಿದೆ.

ಪ್ರತಿಬಂಧಗಳನ್ನು ನಿಷೇಧಿಸಲು ಮದ್ರಾಸಿನಲ್ಲಿ ಮಾತ್ರ ಇಂಥ ಪ್ರಚಂಡ ಸಭೆಯು ಸೇರಿತೆಂದಲ್ಲ, ಈ ಸಂಸ್ಥಾನದೊಳಗಿನ ಸೇಲಮ್, [illegible], ಚೆಂಗಲಪಟ್ಟು?, [illegible], ಶ್ರೀರಂಗಂ?, [illegible], [illegible], [illegible], [illegible] ಇತ್ಯಾದಿ ಎಷ್ಟೋ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಸಭೆಗಳಾದವು, ಇನ್ನೂ ಆಗುತ್ತಲಿವೆ. ಹಾಗೆಯೆ ಈ ಸಂಸ್ಥಾನದ ಹೊರಗೆ ಮುಂಬಯಿ, ಪೂನಾ, ಬೆಳಗಾಂವ, ಹುಬ್ಬಳ್ಳಿ ಮುಂತಾದ ಮುಂಬಯಿ ಪ್ರಾಂತದಲ್ಲಿ, ಲಖನೌ, ಲಾಹೋರ್, ಅಲ್ಲಹಾಬಾದ್, ಕಲಕತ್ತಾ ಇತ್ಯಾದಿ ಉತ್ತರ ಹಿಂದೂಸ್ಥಾನದ ಬೇರೆ ಬೇರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇದೇ ವಿಷಯವಾಗಿ ಸಭೆಗಳು ಕೂಡಿ ಮದ್ರಾಸ ಸರಕಾರವು ಮಾಡಿದ ಸಂಗತಿಯು ದೂರದರ್ಶಿತ್ವದ್ದಲ್ಲವೆಂದು ತಂತಮ್ಮ ಅಸಮ್ಮತಿಯನ್ನು ತೋರಿಸುತ್ತಲಿದ್ದಾವೆ.

ಸಭೆಗಳ ಮೂಲಕದಿಂದ ವ್ಯಕ್ತವಾಗುವ ಸಾಂಘಿಕ ಅಭಿಪ್ರಾಯವನ್ನು ಒತ್ತಟ್ಟಿಗಿಟ್ಟು ಒಂದೊಂದೆ ವ್ಯಕ್ತಿಗಳು ಈ ಪ್ರತಿಬಂಧಗಳ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಪಡುತ್ತಾರೆಂಬದನ್ನು ನೋಡಿದರೆ ಈ ದೇಶದೊಳಗಿನ ಸಾಧಾರಣವಾಗಿ ಎಲ್ಲ ಮುಖಂಡರು, ಇಲ್ಲಿಂದ ಮದ್ರಾಸಿನ ಸಭೆಗೆ ಹೋಗಿ ಆ ಸಭೆಯಲ್ಲಿ ಕೊಟ್ಟ ಭಾಷಣದಲ್ಲಿ ತಮ್ಮ ಅಸಮ್ಮತಿಯನ್ನು ವ್ಯಕ್ತಗೊಳಿಸಿದ ನಮ್ಮ ಬಹುಮಾನಪಟ್ಟ ಸದಾಶಿವ ಭಟ್ಟರಂತೆಯೆ, ಮದ್ರಾಸ ಸರಕಾರದ ಹೆಜ್ಜೆಯು ತಪ್ಪಿಪದ್ದಿದೆಂದು ಹೇಳುತ್ತಿದ್ದಾರೆ. ಸುಪ್ರಸಿದ್ಧ ಮುಖಂಡರಾದ ಅಲಹಾಬಾದಿನ ಮಾನ್ಯ ಮದನಮೋಹನ ಮಾಲವೀಯರು ಇಲ್ಲಿಯ "ಲೀಡರ" ಎಂಬ ಪತ್ರದಲ್ಲಿ ಹಾಗು ಬಹುಮಾನಪಟ್ಟ ತೇಜ ಬಹದ್ದೂರ ಸಪ್ರು ಎಂಬವರು ಅದೆ ಪತ್ರದಲ್ಲಿ ತಮ್ಮ ಅಸಮ್ಮತಿಯನ್ನು ತೋರಿಸಿ "ಇಂಥ ಪ್ರಸಂಗಗಳಿಂದ ಹಿಂದಿ ಸ್ವರಾಜ್ಯದ ಹೆಜ್ಜೆಯು ಹಿಂದೆ ಬೀಳುವದರ ಬದಲು ಮುಂದೆಯೆ ಬೀಳುವದು ಮತ್ತು ಅದು ಹಾಗೆ ಬೀಳಬೇಕು" ಎಂಬದಾಗಿ ತಮ್ಮ ಆಶಯವನ್ನು ಹೇಳಿರುವರು. ನಾಮದಾರ ಸುರೇಂದ್ರನಾಥ ಬೆನರ್ಜಿಗಳು ತಮ್ಮ ಪತ್ರದ ಕಾಲಮುಗಳಲ್ಲಿಯೂ ಸಭೆಯ ಭಾಷಣಗಳಲ್ಲಿಯೂ ಹೀಗೇ ಹೇಳುವರು. ನಾಮದಾರ ಶ್ರೀನಿವಾಸ ಶಾಸ್ತ್ರಿಗಳಂತೂ ಪೂನಾಪಟ್ಟಣದೊಳಗಿನ ಜ್ಞಾನಪ್ರಕಾಶವೆಂಬ ಪತ್ರಿಕೆಯಲ್ಲಿ ಒಂದು ಪತ್ರವನ್ನು ಪ್ರಕಟಿಸಿ ಮದ್ರಾಸ ಸರಕಾರದ ತಪ್ಪನ್ನು ಸ್ಪಷ್ಟ ಶಬ್ದಗಳಿಂದ ತೋರಿಸಿರುವರು.

ವಿವಕ್ಷಿತ ಸಂಗತಿಯ ಕುರಿತು ಲೋಕಮತವನ್ನು ತಿಳಿದುಕೊಳ್ಳುವಾಗ ಅಲ್ಲಲ್ಲಿಯ ಸಭೆಗಳ ಮತ್ತು ದೇಶದೊಳಗಿನ ಪ್ರತಿಷ್ಠಿತ ಹಾಗು ಮಹತ್ತಾದ ವ್ಯಕ್ತಿಗಳ ವಿಚಾರಗಳನ್ನು ನಿರೀಕ್ಷಿಸುವಾಗಲೆ ವರ್ತಮಾನಪತ್ರಿಕೆಗಳ ಮತವನ್ನೂ ಅನುವಾದಿಸುವದು ತಪ್ಪಾಗಲಾರದು. ಹಿಂದು, ಸ್ವದೇಶಿ ಮಿತ್ರಮ್, ಕ್ರೊನಿಕಲ್, ಜ್ಞಾನಪ್ರಕಾಶ, ಇಂದುಪ್ರಕಾಶ, ಬಂಗಾಲಿ, ಅಮೃತಬಝಾರಪತ್ರಿಕೆ, ಪಂಜಾಬಿ ಮೊದಲಾದ ಶಾಂತ ಹಾಗು ರಾಷ್ಟ್ರೀಯ ಪಕ್ಷದ ಪತ್ರಿಕೆಗಳಿಗೆ ಮದ್ರಾಸ ಸರಕಾರದ ಇತ್ತಲಾಗಿನ ಕೃತ್ಯಗಳು ಲೇಶತೋಪಿ—ಎಳ್ಳಷ್ಟೂ ಒಪ್ಪುವದಿಲ್ಲ. 'ಸ್ವತಃ ಅಧಿಕಾರಿಗಳಾಗಲಿ ಇಲ್ಲವೆ ಅವರ ಆಲೋಚನಾಮಂಡಲದವರಾಗಲಿ ಹಿಂದೆ ಮುಂದೆ ನೋಡದೆ ಪ್ರವರ್ತಿಸುತ್ತಿದ್ದಾರೆ, ಮಿಂಟೋ-ಮೋರ್ಲೆ ಸುಧಾರಣೆಗಳ ಅವತಾರಕಾಲದಲ್ಲಿ ಇರುವ ಅಥವಾ ಲಾರ್ಡ ಹಾರ್ಡಿಂಜ ಪ್ರಭುಗಳ ಆಳಿಕೆಯಲ್ಲಿರುವ ಆ ಘನವಾದ ಔದಾರ್ಯವನ್ನೂ, ಹಿಂದಿಗಳ ಸ್ವಾಭಾವಿಕವಾದ ಆಕಾಂಕ್ಷೆಗಳ ಕುರಿತು ಅವರ ಆ ಸಕ್ರಿಯ ಸಹಾನುಭೂತಿಯನ್ನೂ, ಆದರವನ್ನೂ ತೋರಿಸುವದರ ಬದಲು ಈಗಿನ ಅಧಿಕಾರಿಗಳು ಶಾಂತತಾ ಪ್ರಿಯ ಹಾಗು ರಾಜನಿಷ್ಠ ಪ್ರಜೆಗಳಲ್ಲಿ ಭಯವುಂಟಾಗುವಂಥ ಮಾರ್ಗವನ್ನು ಸ್ವೀಕರಿಸುತ್ತಿದ್ದಾರೆ' ಎಂಬದನ್ನು ಹಿಂದಿ ಪತ್ರಿಕೆಗಳು ಹೇಳುತ್ತಿವೆ.

ಈಗ ಮೇಲೆ ತೋರಿಸಿದ ಲೋಕಮತಕ್ಕೆ ವಿರುದ್ಧವಾಗಿ ಬರೆಯುವಂಥ ಪತ್ರಿಕೆಗಳೂ ಇಲ್ಲೆಂದಿಲ್ಲ. ಮದ್ರಾಸ್ ಮೈಲ್, ಪಾಯೊನಿಯರ್, ಇಂಗ್ಲಿಷ್‌ಮನ್ ಮುಂತಾದ ಎಂಗ್ಲೊ ಇಂಡಿಯನ್ ಪತ್ರಿಕೆಗಳು "ಆದದ್ದು ಬಹಳ ಒಳ್ಳೆದಾಯಿತು, ಸರಕಾರದವರೂ ಎಷ್ಟರವರೆಗೆ ಸಹನ ಮಾಡೀತು? ಎನಿಬಿಝುಂಟರೂ ಮತ್ತು ಅವರ ತಂಡದವರೂ ಅಲ್ಲದ ಉಪದ್ವ್ಯಾಪವನ್ನು ಎಬ್ಬಿಸುತ್ತಿದ್ದಾರೆ." ಎಂದು ಮುಂತಾದ ಮತಗಳನ್ನು ಪ್ರದರ್ಶಿಸಿ ಮದ್ರಾಸ ಸರಕಾರದ ಬೆನ್ನು ತಟ್ಟುತ್ತಿದ್ದಾರೆ. ಇಂಥ ಮತವನ್ನು ಅನುವಾದಿಸುವ ಎಲ್ಲ ಪತ್ರಿಕೆಗಳ ಹೆಸರುಗಳನ್ನು ಕೊಡುವದರಲ್ಲಿ ಪುಣ್ಯವಿಲ್ಲ. ಅದೇನು ಪಾರಾಯಣಾರ್ಹವಾದ ವಿಷ್ಣುಸಹಸ್ರನಾಮಾವಳಿಯಲ್ಲ. ಇರಲಿ.

ಎಂಗ್ಲೊ ಇಂಡಿಯನ್ ಪತ್ರಗಳ ಮತವು ಹ್ಯಾಗೂ ಇರಲಿ, ಅವುಗಳನ್ನು ಪ್ರಕೃತ ನಾವು ಆಲೋಚಿಸಬೇಕಾದ ಅಗತ್ಯವಿಲ್ಲ. ಕಾರಣ, ಎಂಗ್ಲೊ ಇಂಡಿಯನ್ ಪತ್ರಿಕೆಗಳ ಧೋರಣವು ಬೇರೆ ಮತ್ತು ಹಿಂದೀ ಜನರ ಧೋರಣವು ಬೇರೆ. ಪರಂತು ಯಾವದೂ ಒಂದು ಸಂಗತಿಯಲ್ಲಿ ವಿಲಾಯತಿಯ ಲೋಕಮತವನ್ನು ಅಜಮಾಯಿಸಿ ನೋಡುವಾಗ ಅಲ್ಲಿಯ ಸಭೆಗಳು, ವ್ಯಕ್ತಿಗಳು, ಪತ್ರಿಕೆಗಳು ಏನು ಹೇಳುತ್ತವೆಂಬದನ್ನು ನೋಡಿ ಅದರ ಮೇಲಿಂದ ಅಲ್ಲಿಯ ಲೋಕಮತವು ಇಂಥದ್ದೆ ಎಂದು ಹೇಳುವ ಪಕ್ಷದಲ್ಲಿ ಹಿಂದೀ ಲೋಕಮತವನ್ನು ನೋಡುವಾಗ ಕೂಡ ಹಿಂದೀ ಜನರ ಮತವನ್ನೆ ಪ್ರಧಾನವಾಗಿ ವಿಮರ್ಶಿಸುವದು ಉಚಿತ, ಹೊರತು ಎಂಗ್ಲೊ ಇಂಡಿಯನರ ಮತವು ಈ ದೇಶದ ಮತವಲ್ಲೆಂದು ಯಾರೂ ಹೇಳಬಹುದಾಗಿದೆ. ಈ ದೃಷ್ಟಿಯಿಂದ ವಿಚಾರಮಾಡಿದ್ದಲ್ಲಿ ನಾವು ಮೇಲೆ ದಿಗ್ದರ್ಶಿಸಿದಂತೆ ನಮ್ಮ ಮದ್ರಾಸ ಸರಕಾರದ ಇತ್ತಲಾಗಿನ ಕೃತಿಗಳು ಪ್ರಶಂಸನೀಯವಲ್ಲೆಂದೆ ಹೇಳಬೇಕಾಗುತ್ತದೆ. ಈಗ ಇಡೀ ಹಿಂದೀ ಜನಾಂಗದಲ್ಲಿ ಈ ಸಂದರ್ಭದ ಕುರಿತು ವ್ಯಕ್ತವಾದ ಲೋಕಮತದೊಳಗಿನ ತೀವ್ರತೆಯನ್ನು ಬಿಟ್ಟುಬಿಟ್ಟು ಆಲೋಚಿಸುವದು ಉತ್ತಮ. ಪಕ್ಷವು ಯಾಕೆಂದರೆ ಅಕಲ್ಪಿತವಾಗಿ ಒಂದು ಅವಘಡವು ಸಂಭವಿಸಿದರೆ ಕಲ್ಪಕ ಮನಸ್ಸಿನ ಶಾಂತಿಯು ಭಗ್ನವಾಗಿ ಹೋಗುತ್ತದೆ. ಮತ್ತು ಅದರ ತೀವ್ರತೆಯ ಮೂಲಕ [illegible] [illegible] [illegible] [illegible] ತೀವ್ರವಿಚಾರಗಳು ಹೊರಡುತ್ತವೆ. ಇದು ಮನುಷ್ಯನ ಸ್ವಭಾವವು. ಆದರೆ ಆ ತೀವ್ರತೆಯನ್ನಾಗಲಿ, [illegible] [illegible]ವನ್ನಾಗಲಿ ವಿಚಾರಕ್ಕೆ ತಕ್ಕೊಳ್ಳದೆ ಅವುಗಳಲ್ಲಿ ನಿಜವಾಗಿ ಪ್ರತಿಬಿಂಬಿತವಾದ ಅಭಿಪ್ರಾಯವೇನು ಎಂಬದನ್ನು ನೋಡುವದೆ ಮುತ್ಸದಿಗಳ ಕರ್ತವ್ಯವು. ಇನ್ನೊಂದು ವಿಚಾರಮಾಡತಕ್ಕ ಅಂಶವು ಯಾವದಂದರೆ, ಎನಿಬಿಝುಂಟ ಮತ್ತು ಅವರ ಸಹಕಾರಿಗಳನ್ನು ಪ್ರತಿಬಂಧಿಸಿದ ಸಂಗತಿಯು ಅಷ್ಟೊಂದು ಮಹತ್ತ್ವದ್ದಲ್ಲ, ಅವು ವ್ಯಕ್ತಿಪರವಾದ ಸಂಗತಿಗಳು, ಈ ಹೊತ್ತು ಕೊಂಚ ಸಿಟ್ಟಿನಿಂದ ಅವರನ್ನು ಪ್ರತಿಬಂಧಿಸಿದ್ದಾದರೆ ಆ ಅಧಿಕಾರಿಗಳೆ ನಾಳೆ ಪ್ರಸನ್ನರಾಗಿ ಅವರನ್ನು ಬಿಟ್ಟುಬಿಡಲೂಬಹುದು. ಆದ್ದರಿಂದಲೆ ಇದಕ್ಕೊಂದು ಮಹತ್ವವನ್ನು ಕೊಡುವ ಅಗತ್ಯವಿಲ್ಲೆಂದು ನಾವು ಹೇಳಿದ್ದಾಗಿದೆ. ಸರಕಾರದ ಈ ಕ್ಷಣಿಕ ಕೃತ್ಯಗಳನ್ನೂ, ಲೋಕಮತದೊಳಗಿನ ತೀವ್ರತೆ, ಕಠೋರತ್ವ ಮುಂತಾದ್ದನ್ನೂ ಒತ್ತಟ್ಟಿಗಿಟ್ಟು ಬರೆ ಹಿಂದೀ ಜನರ ಸಾತ್ವಿಕ ಆಕಾಂಕ್ಷೆಗಳನ್ನೆ ವಿಚಾರದಲ್ಲಿ ತೆಕ್ಕೊಂಡು ನೋಡಿದರೆ ರಾಜ್ಯಭಾರದ ಪ್ರಕೃತ ಪದ್ಧತಿಯು ಸುಧಾರಣಾರ್ಹವಾಗಿದೆ, ರಾಜ್ಯಕಾರಭಾರದಲ್ಲಿ ಪ್ರಜೆಗಳಿಗೆ ಹೆಚ್ಚು ಹೆಚ್ಚು ಅಧಿಕಾರವೂ ಪ್ರವೇಶವೂ ಬೇಕಾಗಿದೆ, ಈ ಒಂದು ಮಾತನ್ನಂತು ಪ್ರಜೆಗಳೂ, ಸರಕಾರವೂ ಉಭಯತರೂ ಒಪ್ಪಿಕೊಳ್ಳಬೇಕಾದ್ದೆ. ಇದೆ ಈ ಲೋಕಮತದಿಂದ ತಿಳಿದುಕೊಳ್ಳತಕ್ಕ ಅಂಶವು. ಮದ್ರಾಸ ಸರಕಾರದ ಕೃತ್ಯದಿಂದ ಬೇಸರಪಟ್ಟ ಹಿಂದೀ ಜನಗಳಾಗಲಿ, ಪತ್ರಕಾರರಾಗಲಿ ಒಂದು ಕಡೆಯಲ್ಲಿ ಬೇಕಷ್ಟು ವಿಚಾರಗಳ ತೀವ್ರತೆಯನ್ನು ತೋರಿಸಲಿ, ಇನ್ನೊಂದು ಕಡೆಯಲ್ಲಿ ಎಂಗ್ಲೊ ಇಂಡಿಯನರು ಅವರನ್ನು ಬೈಯಲಿ, ಇವುಗಳನ್ನು ಲೆಕ್ಕಿಸದೆ ಅದರಿಂದ ಫಲಿತವಾದ ಲೋಕಮತವನ್ನೆ ಆದರಿಸುವದಾದರೆ ಜನಗಳಿಗೆ ಈಗ ಅಂತರ್ಗತ ಸ್ವರಾಜ್ಯದ ಅಧಿಕಾರಾಂಶವು ಅಪೇಕ್ಷಿತವಾಗಿದೆಂಬದು ನಿರ್ವಿವಾದವು. ಮತ್ತು ಅದನ್ನು ಅಧಿಕಾರಿಗಳು ಅಲ್ಲದ ಹಟಹಿಡಿಯದೆ ಮನಸ್ಸನ್ನು ವಿಶಾಲ ಮಾಡಿಕೊಂಡು ಜನಗಳಿಗೆ ಕೊಡುವದು ಯುಕ್ತವು. ಈ ತರದ ವಿಧಾನವನ್ನು ನಾವು ಮಾತ್ರ ಮಾಡುತ್ತೇವೆಂದು ನೆನಸಬಾರದು. ಎಂಗ್ಲೊ ಇಂಡಿಯನ್ ಪತ್ರಿಕೆಗಳಲ್ಲಿ ಪ್ರಮುಖವಾದ "ಟೈಮ್ಸ್ ಒಫ್ ಇಂಡಿಯಾ" ಎಂಬ ಪತ್ರಿಕೆಯು ಕೂಡಾ ಇದೆ ಮತವನ್ನು ಅನುವಾದಿಸಿದೆ. ಟೈಮ್ಸಕಾರರ ಆಶಯವೇನೆಂದರೆ:

"ಈ ಸಮಯದಲ್ಲಿ ಮದ್ರಾಸ ಸರಕಾರವು ಮಿಸೆಸ್. ಬಿಝುಂಟರ ರಾಜಕೀಯ ಚಳವಳವನ್ನು ನಿಲ್ಲಿಸಲು ನಿಶ್ಚಯಿಸಿದೆ, ಆದರೆ ಆ ಚಳವಳವು ಅಷ್ಟರಿಂದಲೆ ನಿಲ್ಲಲಾರದು. 'ಕೂಡದು' 'ಕೂಡದು' ಎಂದು ಬರೆ ನಿಷೇಧಿಸುವದರಿಂದ ಹಿಂದುಸ್ಥಾನದ ಆಕಾಂಕ್ಷೆಗಳು ಪೂರೈಸಲ್ಪಡಲಾರವು. ಈ ಹೊತ್ತು ವಿಲಾಯತ ಸರಕಾರವು ಐರ್ಲಂಡಿನ ಹೋಮ್ ರೂಲಿನ ಪ್ರಶ್ನವನ್ನು ಬಿಡಿಸುವದರಲ್ಲಿದೆ. ಆದರೆ ಇಲ್ಲಿಯ ನ್ಯಾಯ್ಯವಾದ ಕೋರಿಕೆಗಳನ್ನೂ ಮಹತ್ವಾಕಾಂಕ್ಷೆಗಳನ್ನೂ ಪೂರೈಸುವದು ನಮಗೆ (ರಾಜ್ಯ ಕರ್ತರಿಗೆ) ಸಾಧ್ಯವಾಗುವದಿಲ್ಲ. ಜವಾಬದಾರಿಯ ದೃಷ್ಟಿಯಿಂದ ಆಲೋಚಿಸಿದರೆ, ಹಿಂದುಸ್ಥಾನದ ಸರಕಾರವಾಗಲಿ, ಪ್ರಾಂತಿಕ ಸರಕಾರಗಳಾಗಲಿ ಈಗಿನ ಸಮಯಕ್ಕೆ ಅನುಕೂಲವಾಗಿ ನಡಕೊಳ್ಳುವದಿಲ್ಲೆಂದು ಹೇಳಬಹುದು. ಶಾಂತವಾದ ಬೆಟ್ಟಗಳ ತುದಿಯ ಮೇಲೆ ಕುಳಿತು ನಡಿಸುವಂಥ ಶಾಂತತೆಯಿಂದ ತುಂಬಿಹೋದ ದೇಶದ ಕಾರಭಾರದ ಕ್ರಮದಿಂದಲೆ ಬರೆ ಸಂತೋಷ ಹೊಂದುವದು ಈಗಿನ ಸಮಯಕ್ಕೆ ಸಾಲದು. ಹಿಂದುಸ್ಥಾನಕ್ಕೆ ಈ ಹೊತ್ತು ಅಂತರ್ಗತ ಸ್ವರಾಜ್ಯವನ್ನು ಕೊಡುವುದೆ ಬ್ರಿಟಿಷರ ಅಂತಿಮಧ್ಯೇಯವಾಗಿದೆ, ಮತ್ತು ಈ ಅಂತಿಮಧ್ಯೇಯವನ್ನು ಸಾಧಿಸಿಕೊಡುವದಕ್ಕಾಗಿ ಪ್ರಾಂತಿಕ ಸರಕಾರದವರು ಶಿಕ್ಷಣ ಪ್ರಸಾರಣ, ಸ್ಥಾನಿಕ ಸ್ವರಾಜ್ಯದ ವಿಸ್ತಾರ, ಪ್ರಾಂತಿಕ ಸ್ವಾಯತ್ತತೆಯ ಸ್ಥಾಪನೆ ಹಾಗು ಹಿಂದುಸ್ಥಾನ ಸರಕಾರದ ಸ್ವಾತಂತ್ರ್ಯ ಮುಂತಾದ ಸಂಗತಿಗಳನ್ನು ಆದಷ್ಟು ಬೇಗನೆ ಕೈಕೊಳ್ಳುವವೆಂದು ಸ್ಪಷ್ಟ ರೀತಿಯಿಂದ ಉಚ್ಚರಿಸುವ ಸಮಯವು ಈಗ ಬಂದೊದಗಿದೆ. ಸರಕಾರವು ಈ ತರದ ವಚನವನ್ನು ಒಮ್ಮೆ ಶ್ರುತಪಡಿಸಿ ಅದರಂತೆ ಪ್ರಾಮಾಣಿಕತನದಿಂದ ಮುಂದರಿಸಿದ್ದಾದರೆ ಸರಕಾರವನ್ನೆ ಮುರಿದುಬಿಡಬೇಕೆಂದು ಹೇಳುವವರ ಮಾತಿಗೆ ಯಾರೂ ಕಿವಿಕೊಡರು ಮಾತ್ರವಲ್ಲ ಹಿಂದುಸ್ಥಾನದ ದೇಶಭಕ್ತರೂ ಕೂಡ ಇಂಥವರ ಘಾತಕತ್ವವನ್ನು ಮುರಿಯಲು ಸರಕಾರದ ಒಟ್ಟಿಗನೆ ಉದ್ಯುಕ್ತರಾದಾರು."

ನಮ್ಮ ಬಂಧುಗಳಾದ ಟೈಮ್ಸಕಾರರಿಗಿಂತಲೂ ಯಾರಾದರೂ ಏನು ಹೆಚ್ಚು ಹೇಳುವರು? ಇವರ ಉಪದೇಶವನ್ನೆ ಈ ಹೊತ್ತು ಜವಾಬದಾರರಾದ ಅಧಿಕಾರಿಗಳು ಗ್ರಹಿಸಿದರೆ ಹಿಂದೀ ಜನರ ಕೆಲಸವಾಯಿತೆಂದು ಹೇಳಬಹುದು.

ಸ್ಫುಟವಿಚಾರಗಳು.

೧. ಬಿಹಾರ ಪ್ರಾಂತದೊಳಗಿನ ನೀಲಿ-ತೋಟಿಗರು ಮತ್ತು ಕೂಲಿಗಳು ಇವರೊಳಗೆ ನಡೆದಿರುವ ಅಸಮಾಧಾನಕಾರಕ ಸಂಬಂಧಗಳನ್ನೂ ಹೆಚ್ಚಾಗಿ ಕೂಲಿಗಳ ಸಂಕಷ್ಟಗಳನ್ನೂ ದೇಶಭಕ್ತಗಾಂಧಿಗಳು ಬೈಲಿಗೆ ತಂದುದರಿಂದ ತೋಟಿಗರು ಗಾಂಧಿಗಳ ಮೇಲೆ ಅನೇಕ ಕುತ್ಸಿತ ಟೀಕೆಯನ್ನು ಮಾಡಿ ಅವರನ್ನು ಆ ಪ್ರಾಂತದಿಂದಲೆ ಓಡಿಸುವುದು ಒಳ್ಳೆದೆಂದು ಕೂಡ ಸರಕಾರದ ಕಡೆಗೆ ಅರ್ಜಿಯನ್ನು ಮಾಡಿದರು! ಇನ್ನೊಂದು ಕಡೆಯಲ್ಲಿ ಕೂಲಿಗಳ ದುರವಸ್ಥೆಯ ಸಂಗತಿಗಳು ವಿಪರೀತ ಹೊರಗೆ ಬಂದಿದ್ದವು. ಅವುಗಳಿಗೆ ಕಿವಿಗೊಡದೆ ಇರುವದು ಸರಕಾರಕ್ಕೆ ಅಸಾಧ್ಯವಾಯಿತು. ಆಗ ಸರಕಾರವು ಒಂದು ಕಮಿಷನನ್ನು ನೇಮಿಸಿತು. ಈ ಕಮಿಷನಿನಲ್ಲಿ ಒಬ್ಬ ಅಧ್ಯಕ್ಷ, ಸರಕಾರದ ಕಡೆಯಿಂದ ಮೂವರು ಸಭಾಸದರು, ತೋಟಿಗರ ಕಡೆಯಿಂದ ಮತ್ತು ಜಮೀನುದಾರರ ಕಡೆಯಿಂದ [illegible] [illegible] ಕೂಲಿಗಳ ಕಡೆಯಿಂದ ದೇಶಭಕ್ತ ಗಾಂಧಿಗಳನ್ನು [illegible]

ರೀತಿಯಿಂದ ಏಳು ಜನರು ನೇಮಿಸಲ್ಪಟ್ಟಿದ್ದಾರೆ. ಕೂಲಿಗಳು, ತೋಟಿಗರು, ರೈತರು, ಜವಾನದಾರರು ಈ ಒಬ್ಬೊಬ್ಬರ ಕಡೆಯಿಂದ ಒಬ್ಬೊಬ್ಬ ಕಮಿಷನರನನ್ನೂ ಮತ್ತು ಒಬ್ಬ ಅಧ್ಯಕ್ಷನನ್ನೂ ನೇಮಿಸಿದರೆ ಸಾಕಿತ್ತು. ಸರಕಾರದ ಕಡೆಯಿಂದ ಮೂವರನ್ನೂ ನೇಮಿಸಿದ್ದು ಯಾಕೆ? ಅದ್ದರಿಂದ ಕಮಿಷನಿನ ಈ ರಚನೆಯು ಸದೋಷವಾಗಿರುವದು. ದೇಶಭಕ್ತ ಗಾಂಧಿಗಳನ್ನು ಕೂಲಿಗಳ ಕಡೆಯಿಂದ ನೇಮಿಸಿದ್ದರಿಂದ ಕೂಲಿಗಳಿಗೆ ಒಳ್ಳೆದಾಯಿತೆಂದು ಮೇಲಿಂದ ಮೇಲೆ ವಿಚಾರವಾಡುವವರಿಗೆ ತೋರುವದು. ಆದರೆ ಗಾಂಧಿಗಳು ಕಮಿಷನರುಗಳಾದ್ದರಿಂದ ಹಿಂದಿನ ಎಲ್ಲ ಸಂಗತಿಗಳನ್ನು ಮರೆತುಬಿಟ್ಟು ಕಮಿಷನಿನ ಮುಂದೆ ಬರುವ ಸಾಕ್ಷಿಗಳ ಮೇಲಿಂದಲೆ ನಿರ್ವಿಕಾರಬುದ್ಧಿಯಿಂದ ನಿರ್ಣಯವನ್ನು ಕೊಡಬೇಕಾಗುತ್ತದೆ. ಅಲ್ಲದೆ, ಕೂಲಿಗಳ ಕಡೆಯಿಂದ ಸಾಕ್ಷಿಗಳನ್ನು ಮುಂದಿಡಲು ಗಾಂಧಿಗಳಿಗೆನೆ ಸಂದರ್ಭವು ಒದಗುತ್ತಿದ್ದರೆ ಕೂಲಿಗಳಿಗೆ ತುಂಬಾ ಪ್ರಯೋಜನವಾಗುತ್ತಿತ್ತು. ಆದರೆ ಅವರು ಕಮಿಷನರುಗಳಲ್ಲಿ ಒಬ್ಬರಾದ್ದರಿಂದ ಈ ವಿಷಯದಲ್ಲಿ ಯತ್ನಿಸಲು ಅವರಿಗೆ ಸಾಧ್ಯವಿಲ್ಲಾಗಿದೆ. ಇದೆ ಕೂಲಿಗಳಿಗೆ ನಿಜವಾದ ಹಾನಿಯು. ಈಗ ಗಾಂಧಿಗಳ ಸ್ಥಾನವನ್ನು ಬೇರೆ ದೇಶಭಕ್ತರು—ಕೂಲಿಗಳ ದುಃಸ್ಥಿತಿಯಿಂದ ಮನಸ್ಸಿನಲ್ಲಿ ಕಳವಳಪಡುವವರು—ತುಂಬಿಸಬೇಕಾಗಿದೆ. ಮತ್ತು ಈ ನೂತನ ಕಮಿಷನಿನ ಮುಂದೆ ಆ ದೇಶಭಕ್ತರು ಕೂಲಿಗಳ ಪಕ್ಷವನ್ನೂ ಅವರಿಗುಂಟಾಗುವ ತೋಟಿಗರ ನಿರ್ಬಂಧಗಳನ್ನೂ, ಕಷ್ಟಗಳನ್ನೂ ತರುವದು ಅಗತ್ಯವಾಗಿದೆ.

೩. ಮದ್ರಾಸಿನ ಪ್ರತಿಬಂಧಗಳ ಸುದ್ದಿಯು ಹೆಚ್ಚಿನ ಆಯಾಸವಿಲ್ಲದೆ ಪಾರ್ಲಿಮೆಂಟಿನ ಕಿವಿಯಲ್ಲಿ ಹೋಗಿಬಿತ್ತು. ಜೂನ್ ತಾ. ೨೦ ರಲ್ಲಿ ಸರ್ ವಿಲ್ಯಮ್‌ಸನ್ ಇವರ ಪ್ರಶ್ನಕ್ಕೆ ಉತ್ತರಕೊಡುವಾಗ ಹಿಂದುಸ್ಥಾನದ ಸ್ಟೇಟ್‌ಸೆಕ್ರೆಟರಿಗಳಾದ ಮಿ. ಚೆಂಬರ್‌ಲೇನರು ಹೇಳಿದ್ದೇನೆಂದರೆ—"ಮಿಸೆಸ್ ಬಿಝುಂಟ್, ಮಿ. ಅರುಂಡೇಲ ಮತ್ತು ಮಿ. ವಾಡಿಯಾ ಇವರನ್ನು ಪ್ರತಿಬಂಧಿಸುವದು ಮದ್ರಾಸ ಸರಕಾರಕ್ಕೆ ಅವಶ್ಯವಾಗಿತ್ತು. ಮಿಸೆಸ್ ಬಿಝುಂಟರ ಮತ್ತು ಅವರ ಸಹಕಾರಿಗಳ ಕೃತ್ಯಗಳು ಶಾಂತತಾವಿಘಾತಕವಾಗಿದ್ದವೆಂದು ಮೊದಲೆ ಬೇರೆ ಪ್ರಾಂತಿಕ ಸರಕಾರದವರು ಕೂಡ ಖಚಿತಮಾಡಿಕೊಂಡಿದ್ದಾರೆ." ಮಿ. ಚೆಂಬರಲೇನರ ಈ ಉತ್ತರವನ್ನು ನೋಡುವಾಗ ಮೊನ್ನೆಯ ಪ್ರತಿಬಂಧಗಳು ವರಿಷ್ಠರ ಕಿಂಬಹುನಾ ವಿಲಾಯತಿಸರಕಾರದ ಅನುಮತಿಯಿಂದಲೆ ಮದ್ರಾಸ ಸರಕಾರವು ಮಾಡಿದೆಂಬ ಅನುಮಾನವನ್ನು ಹೊರಡಿಸಿದರೆ ಅದು ನಿರಾಧಾರವಾಗಲಾರದು. ಆದರೆ ವಿಲಾಯತಿಯಲ್ಲಿರುವ ಅಧಿಕಾರಿಗಳಿಗೆ ಇಲ್ಲಿಯ ಅಧಿಕಾರಿಗಳೆ ಕಣ್ಣುಗಳಾದ್ದರಿಂದ ಇಲ್ಲಿಯ ನಿಜವಾದ ಪರಿಸ್ಥಿತಿಯು ಅವರಿಗೆ ಗೊತ್ತಾಗುವದೊ ಇಲ್ಲವೊ ಇದೇ ಸಂದೇಹಾಸ್ಪದವಾಗಿದೆ. ಯಾಕೆಂದರೆ ಡಿಫೆನ್ಸ್ ಒಫ್ ಇಂಡಿಯಾ ಎಕ್ಟಿನ ಮೂಲಕ ಪ್ರತಿಬಂಧಿಸಲ್ಪಡಲಿಕ್ಕೆ ಅರ್ಹವಾದಂಥ ಕೃತ್ಯಗಳನ್ನು ಈಗ ಪ್ರತಿಬಂಧಿತರಲ್ಲಿ ಯಾರೂ ಮಾಡಿದ್ದಾಗಿ ಮದ್ರಾಸಸರಕಾರವು ಇನ್ನುವರೆಗೆ ತೋರಿಸಲಿಲ್ಲ. ಇಲ್ಲವೆ ತಂತಮ್ಮ ಪ್ರಾಂತಗಳಲ್ಲಿ ಕಾಲಿಡಕೂಡದೆಂದು ಹುಕುಮುಕೊಟ್ಟಿರುವ ಬೇರೆ ಪ್ರಾಂತಿಕ ಸರಕಾರದವರೂ ಈ ಮೊದಲು ಬಿಝುಂಟ ಪ್ರಭೃತಿಯರ ಅಪರಾಧಗಳನ್ನು ಜನರ ಮುಂದಿಡಲಿಲ್ಲ; ಆದರೂ ಪ್ರತಿಬಂಧಕ ಹುಕುಮುಗಳನ್ನು ಮಾತ್ರ ಕೊಡುತ್ತಲೆ ಇದ್ದಾರೆ. ಈ ಅಧಿಕಾರಿಗಳೆ ವಿಲಾಯತಿಯವರಿಗೆ ಕಣ್ಣುಗಳಾದಲ್ಲಿ ಮಿ. ಚೆಂಬರಲೇನರು ಮೇಲೆ ಹೇಳಿದ್ದಂತಲ್ಲದೆ ಬೇರೆ ಇನ್ನೇನು ಹೇಳಬಹುದಾಗಿದೆ?

೪. ಜೂನು ತಾ. ೨೧ರಲ್ಲು, ಸಿಮ್ಲದಲ್ಲಿ ಕೃಷಿ ಶಿಕ್ಷಣದ ಪರಿಷತ್ತು ಸೇರಿತು. ಈಚೆಗೆ ಒಂದೊಂದು ವಿಷಯಕ್ಕೆ ಒಂದೊಂದು ಪರಿಷತ್ತು ಸೇರುತ್ತಿರುತ್ತದೆ. ಇಂಥ ಪರಿಷತ್ತುಗಳು ಸರಕಾರದ ಕಡೆಯಿಂದ ಸೇರಿಸಲ್ಪಡುತ್ತವೆ. ಜನರ ಕಡೆಯಿಂದಲೂ ಸೇರಿಸಲ್ಪಡುತ್ತವೆ. ಪರಿಷತ್ತುಗಳನ್ನು ಸೇರಿಸುವದರಿಂದಲೆ ಒಂದು ವಿಷಯದ ಪ್ರಗತಿಯುಂಟಾಗುತ್ತದೆಂದು ನೆನೆಸುವದು ಸರಿಯಾಗಲಿಕ್ಕಿಲ್ಲ. ಪರಿಷತ್ತುಗಳಾಗಲಿ ಮಂಡಲಗಳಾಗಲಿ ಸೇರಿ ಹೆಸರಿಗೆ ತಕ್ಕ ಕೆಲವು ಠರಾವುಗಳನ್ನು ಪಾಸುಮಾಡುವದರಿಂದ ಫಲಿತಾಂಶವೇನೂ ಆಗದು. ಹೀಗಿದ್ದರೂ ಈ ಕ್ರಮವು ಈಚೆಗೆ ರೂಢವಾಗಿದೆ. ಅದರಂತೆಯೆ ಬೇಸಾಯ ಶಿಕ್ಷಣದ ಈ ಪರಿಷತ್ತು ಮೊನ್ನೆ ಕೆಲವು ನಿರ್ಣಯಗಳನ್ನು ಪಾಸುಮಾಡಿತು. ಪರಂತು ಈ ನಿರ್ಣಯಗಳಿಂದ ನಿಷ್ಪನ್ನವಾದ ಅಂಶವು ಮಾತ್ರ ಏನೂ ಇಲ್ಲೆಂದು ಅಭಿಪ್ರಾಯಪಡುತ್ತಾರೆ. ಈ "ಬೇಸಾಯ ಪರಿಷತ್ತಿ"ನಲ್ಲಿ ಬರಲಿಕ್ಕೆ ಅನೇಕ ವಿಷಯಗಳು ಚರ್ಚೆಗೆ ಬಂದಿದ್ದವು. ಆದರೆ ಪರಿಷತ್ತು ಅವುಗಳ ವಿಷಯದಲ್ಲಿ ಯಾವದೂ ಒಂದು ನಿಶ್ಚಿತ ಅಭಿಪ್ರಾಯವನ್ನು ಕೊಡಲಿಲ್ಲ, ಮಾತ್ರವಲ್ಲ ಸಾಮಾನ್ಯವಾದ ಶಿಫಾರಸನ್ನು ಕೂಡ ಕೊಡುವದು ಅದಕ್ಕೆ ಅಸಾಧ್ಯವಾಯಿತು. ಆಯಾ ಸ್ಥಳಿಕ ಸರಕಾರಗಳೆ ತಂತಮ್ಮ ಸ್ಥಿತಿಗನುಸಾರವಾಗಿ ಈ ಸಂಗತಿಗಳನ್ನು ನಿರ್ಣಯಿಸಿಕೊಳ್ಳಬೇಕು ಎಂದು ಹೇಳಿ ಈ ಕೊನ್ಫರನ್ಸು ಪವಿತ್ರವಾಗಿದೆ. ಈ ಪರಿಷತ್ತಿನ ಅಭಿಪ್ರಾಯದಂತೆ ಪ್ರತಿಯೊಂದು ಪ್ರಾಂತದಲ್ಲಿ ಬೇಸಾಯ ಶಿಕ್ಷಣದ ಪ್ರಾಥಮಿಕ ತರಬೇತನ್ನು ಹೊಂದಿದ ಶಿಕ್ಷಕರಿರುವದು ಅಗತ್ಯವಾಗಿದೆ. ವ್ಯವಸಾಯದ ಮಾದರಿಯ ಶಾಲೆಗಳನ್ನು ಬೇಸಾಯ ಕೊಲೇಜುಗಳಿಗೆ ಜೋಡಿಸುವ ವಿಷಯವು ಅನೇಕ ಪ್ರಿನ್ಸಿಪಾಲರಿಗೆ ಅಭಿಮತವಿರದು. ಪ್ರತಿಯೊಂದು ಜಿಲ್ಲೆಯಲ್ಲಿ ಬೇಸಾಯ ಶಿಕ್ಷಣದ ಒಂದೊಂದು ಹೈಸ್ಕೂಲು ಮತ್ತು ಅದಕ್ಕೆ ಅನುಗುಣವಾಗುವಂತೆ ಮಧ್ಯಮ ತರಗತಿಯ ಅಥವಾ ದೇಶಿಭಾಷೆಯ ಶಾಲೆಗಳೂ ಇರಬೇಕೆಂಬುದಾಗಿ ಒಂದು ಪ್ರಶ್ನೆಯು ಪರಿಷತ್ತಿನಲ್ಲಿ ವಿಚಾರಕ್ಕೆ ಬಂದಿತು. ಆದರೆ ಈ ರೀತಿಯಿಂದ ಹೈಸ್ಕೂಲುಗಳನ್ನು ಸ್ಥಾಪಿಸುವದರಿಂದ ಹೆಚ್ಚಿನ ಪ್ರಯೋಜನವಾಗಲಾರದು. ನಾಮ್ಮ ಮೊದಲು [illegible]

ವ್ಯವಸಾಯ ವೃತ್ತಿಯೆ ಮುಖ್ಯವಾಗಿರುವ ಜಿಲ್ಲೆಗಳಲ್ಲಿ ಇಂಥ ಶಾಲೆಗಳನ್ನು ಸ್ಥಾಪಿಸಿ ಅವುಗಳ ಸಮೀಪದಲ್ಲಿ ಮಾದರಿಗಾಗಿ ಕೆಲವು ಕೃಷಿಭೂಮಿಗಳನ್ನಿಡಬೇಕು. ಈ ಪರಿಷತ್ತಿನ ಚರ್ಚೆಯಲ್ಲಿ ಬಂದ ಇನ್ನೊಂದು ಮಹತ್ವದ ಪ್ರಶ್ನವು ಯಾವುದಿತ್ತೆಂದರೆ, ವ್ಯವಸಾಯ ಶಿಕ್ಷಣವು ಯುನಿವರ್ಸಿಟಿಗಳ ವಶದಲ್ಲಿ ಕೊಡಬಹುದೊ ಹ್ಯಾಗೆ? ಈ ವಿಷಯದಲ್ಲಿ ಕೆಲವರು ತೀರ ಅಭಿಪ್ರಾಯಗಳನ್ನು ಹೇಳಿದರು. ಆದರೆ ಪೂನೆಯ ಡೊ. ಮೆನರವರು ಪೂನೆಯ "ಎಗ್ರಿಕಲ್ಚರಲ್ ಕೊಲೇಜು"ನ್ನು ಯುನಿವರ್ಸಿಟಿಯ ವಿಚಾರಣೆಯ ಒಳಪಡಿಸಿದ್ದರಿಂದ ಯಾವ ತೊಡಕೂ ಉಂಟಾಗಿಲ್ಲ, ಪ್ರತ್ಯುತ ಅದರ ಸ್ಥಿತಿಯು ಉತ್ತರೋತ್ತರ ಒಳ್ಳೆದಾಗುತ್ತ ಬಂದಿದೆಂದು ಸೋದಾಹರಣವಾಗಿ ತೋರಿಸಿದರು. ಕೊನೆಗೆ ಈ ಪರಿಷತ್ತಿನಲ್ಲಿ ಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲೆಗಳಿಗಾಗಿ ಕ್ರಮಿಕ ಪುಸ್ತಕಗಳನ್ನು ತಯಾರಿಸಿ ಆ ಪುಸ್ತಕಗಳಲ್ಲಿ ಕೃಷಿ ಶಿಕ್ಷಣವು ಮುಖ್ಯವಾಗಿ ಸಿಗುವಂತೆ ಕೆಲವು ವಸ್ತುಪಾಠಗಳನ್ನು ಸೇರಿಸುವದು. ಅಗತ್ಯವೆಂತಲೂ, ಶಾಲೆಗಳಿಗೆ ಹೊಂದಿಕೊಂಡು ತೋಟಗಳಿರಬೇಕೆಂತಲೂ, ಶಿಕ್ಷಕರನ್ನು ತರಬೇತ ಮಾಡುವದು ಅವಶ್ಯವಿರುತ್ತದೆಂತಲೂ ಈ ರೀತಿಯಿಂದ ಕೆಲವು ನಿರ್ಣಯಗಳು ಪಾಸಾದವು. ಇದೇ ಈ ಪರಿಷತ್ತು ಮಾಡಿದ್ದು.

೫. ಈಗಿನ ಯುದ್ಧ ಸಮಯದಲ್ಲಿ ಕಾಗದವು ಅನ್ಯದೇಶಗಳಿಂದ ಹಿಂದುಸ್ಥಾನಕ್ಕೆ ಬರುವದು ಕಡಿಮೆಯಾಗಿದೆ. ಇಲ್ಲಿ ಕೆಲವು ಕಾಗದದ ಕಾರಖಾನೆಗಳಿದ್ದರೂ ಆ ಕಾಗದವನ್ನು ತಯಾರಿಸಲು ಬೇಕಾದ ಪದಾರ್ಥವು ವಿಲಾಯತಿ ಮುಂತಾದ ಕಡೆಗಳಿಂದಲೆ ಬರಬೇಕಾದ್ದು. ಕಾಗದವನ್ನು ವಸ್ತ್ರದ, ಮರದ ಅಥವಾ ಒಂದು ಜಾತಿಯ ಹುಲ್ಲಿನ ಪಾಕ (Pulp) ದಿಂದ ತಯಾರಿಸುವರು. ಹಿಂದುಸ್ಥಾನದ ಕಾಡುಗಳಲ್ಲಿ ಯಥೇಷ್ಟವಾಗಿ ಬೆಳೆಯುವ ಬಿದಿರಿನಿಂದಲೂ ಆನೆ ಹುಲ್ಲಿನಿಂದಲೂ (Elephant-grass) ಆ ಪಾಕವನ್ನು ಮಾಡಬಹುದೆಂದು ಅನುಭವದಿಂದ ಸಿದ್ಧವಾಗಿದೆ. ನಮ್ಮ ದಕ್ಷಿಣ ಕನ್ನಡಕ್ಕೆ ಬಿದಿರು ಬಹಳ ಬೆಳೆಯುತ್ತದೆ. ಮತ್ತು ಅದರಿಂದ ಕಾಗದ ಪಾಕವನ್ನೂ ಕಾಗದವನ್ನೂ ತಯಾರಿಸಲು ಯಾವ ಅಡ್ಡಿಯೂ ಇಲ್ಲ. ಈ ಯುದ್ಧ ಮೂಲಕ ಕಾಗದದ ಅಡಚಣೆಯು ಎಷ್ಟುಂಟಾಗಿದೆಂಬದನ್ನು ವರ್ಣಿಸುವದು ಅತಿಶಯೋಕ್ತಿಯ ಮಾತಾಗಿ ಕಂಡುಬಂದೀತು. ಆದರೆ ಇಲ್ಲಿ ಯಾರಾದರು ಉದ್ಯೋಗಪ್ರಿಯರು ಈ ವಿಷಯದಲ್ಲಿ ಸರಿಯಾದ ಮಾಹಿತಿಯನ್ನು ತಜ್ಞರಿಂದ ಪಡಕೊಂಡು ಕಾಗದದ ಕಾರಖಾನೆಯನ್ನು ಹೊರಡಿಸಿದ್ದಾದರೆ ಅದು ಈ ಹೊತ್ತು ದಕ್ಷಿಣ ಕನ್ನಡಕ್ಕೆ ಮಾತ್ರವಲ್ಲ, ಹಿಂದುಸ್ಥಾನಕ್ಕೆನೆ ಅಗತ್ಯವಿದೆ. ಇಷ್ಟು ಹೇಳುವದು ಖಂಡಿತ ಅತಿಶಯೋಕ್ತಿಯಾಗಲಾರದು.

೬. ಹಿಂದೂಸ್ಥಾನದ ಸ್ಟೇಟ ಸೆಕ್ರೆಟರಿಗಳ ಇಂಡಿಯಾ ಕೌನ್ಸಿಲಿನಲ್ಲಿ ಬಹುಮಾನಪಟ್ಟ ಭೂಪೇಂದ್ರನಾಥ ಬಾಸು ಮತ್ತು ಸರ್ ಪ್ರಭಾಶಂಕರ ಪಟ್ಟಣಿ ಇವರಿಬ್ಬರ ನೇಮಕವಾಗಿದೆಯೆ ವರ್ತಮಾನವನ್ನು ತಿಳಿಸಲು ನಾವು ಸಂತೋಷ ಪಡುತ್ತೇವೆ. ಭೂಪೇಂದ್ರನಾಥ ಬಾಸು ಇವರು ರಾಷ್ಟ್ರೀಯ ಸಭಾ ಭಕ್ತರಾಗಿದ್ದು ವಿಲಾಯತ ಸರಕಾರದ ಸಮಕ್ಷಮಕ್ಕೆ ಕಳುಹಿಸ ಕೊಟ್ಟ "ಹತ್ತೊಂಬತ್ತು ಜನರ ಪತ್ರಕ"ವನ್ನು ತಯಾರಿಸಿದವರಲ್ಲಿ ಒಬ್ಬರಾಗಿರುವರು. ರಾಷ್ಟ್ರೀಯ ಸಭೆಯ ಮತವನ್ನು ಪುರಸ್ಕರಿಸುವದರಲ್ಲಿ ಇವರು ಮುಂದಾಳುಗಳಾದ್ದರಿಂದ—ವಿಶೇಷವಾಗಿ ಈ ನಾಜೂಕಿನ ಸಮಯದಲ್ಲಿ—ಇವರ ಮತಗಳ ಭಾರವು ಇಂಡಿಯಾ ಕೌನ್ಸಿಲಿನ ಮೇಲೆ ಬಿದ್ದೀತೆಂದು ಹೇಳಲು ಸಂಕೋಚ ತೋರುವದಿಲ್ಲ. ಅಲ್ಲದೆ ಮೊದಲೆ ಇದ್ದ ಸಿಂಗ ಮತ್ತು ಈಗಿನ ಈ ಇಬ್ಬರು ಹೀಗೆ ಮೂವರು ಹಿಂದಿಗಳು ಇಂಡಿಯಾ ಕೌನ್ಸಿಲಿನಲ್ಲಿ ಮೆಂಬರುಗಳಾದ್ದರಿಂದ ಹಿಂದೀ ದೇಶದ ಆಕಾಂಕ್ಷೆಯು ಬೇಗನೆ ದೊಡ್ಡದಾಗುವದೆಂದು ಎಲ್ಲರು ಭಾವಿಸುತ್ತಿದ್ದಾರೆ.

ಸ್ಥಳಿಕ—ಮಂಗಳೂರು.

ಶ್ರೀ ಕಾಶೀಕ್ಷೇತ್ರದಿಂದ ಸುಮಾರು ೩೦ ಹರದಾರಿ ದೂರದಲ್ಲಿರುವ ಚಿತ್ರಕೋಟ ಎಂಬಲ್ಲಿಂದ ಪ್ರೊಫೆಸ್ಸರ್ ಕೃಷ್ಣಮೂರ್ತಿ ತಿಂಮವರು ತಮ್ಮ ಸಹೋದರ ಮತ್ತು ತಂದೆಯವರೊಡನೆ ಇಲ್ಲಿಗೆ ಬಂದಿರುವರು. ಇವರು ಪ್ರೊಫೆಸ್ಸರ್ ರಾಮಮೂರ್ತಿಯವರ ಶಿಷ್ಯರಾಗಿರುವರು. ರಾಮಮೂರ್ತಿಯವರಂತೆಯೇ ಇವರು ಸಹ ಬಗೆ ಬಗೆಯ ಸಾಹಸದ ಕೃತ್ಯಗಳನ್ನು ಮಾಡಬಲ್ಲರು. ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ತಮ್ಮ ದೇಹಶಕ್ತಿಯನ್ನು ತೋರಿಸಿ ದೊಡ್ಡ ದೊಡ್ಡ ಅಧಿಕಾರಿಗಳ ಮತ್ತು ಇತರ ಮುಖಂಡರ ಸರ್ಟಿಫಿಕೇಟುಗಳನ್ನು ಪಡೆದಿರುತ್ತಾರೆ. ಪ್ರಾಣಾಯಾಮದ ಅಭ್ಯಾಸವನ್ನು ಇವರು ಮಾಡುತ್ತಿದ್ದಾರೆ. ಪ್ರಾಣಾಯಾಮದ ವಿಷಯ ಇವರು ಇದೇ ಆದಿತ್ಯವಾರ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಒಂದು ಭಾಷಣವನ್ನು ಕೊಡುವರು. ಸರ್ವರೂ ಈ ಸಭೆಗೆ ದಯವಿಟ್ಟು ಬರಬೇಕೆಂತ ವಿಜ್ಞಾಪಿಸಿಕೊಂಡಿರುವರು. ಪ್ರೊಫೆಸ್ಸರ್ ಕೃಷ್ಣಮೂರ್ತಿಯವರು ಗೌಡಸಾರಸ್ವತ ಬ್ರಾಹ್ಮಣರು ಭರದ್ವಾಜ ಗೋತ್ರದವರಾಗಿರುವರು.

ಮಹಿಳಾ ಸಭೆಯ ವಾರ್ಷಿಕೋತ್ಸವವು ಕಳೆದ ಶನಿವಾರ ದಿನ ಬಹಳ ಸಂಭ್ರಮದಿಂದ ಆಚರಿಸಲ್ಪಟ್ಟಿತು. ದಿವಾನ್‌ಬಹದೂರ್ ವೆಂಕಟ್ರಮಣ ಪೈಗಳವರು ಸಭಾಧ್ಯಕ್ಷರಾಗಿದ್ದರು. ಮಹಿಳಾ ಸಭೆಯ ಮೆಂಬರರಲ್ಲದೆ ಇತರ ಕುಲಸ್ತ್ರೀಯರೂ ಈ ಸಮಾರಂಭದ ಬಗ್ಗೆ ಬಂದಿದ್ದರು. "ಭರತಭೂಮಿಯೊಳಿರುವುದೇ ನಮಗೊಂದು ಭಾಗ್ಯವಿದು" ಎಂಬ ಹಾಡನ್ನು ಅಭಿನಯದಿಂದ ಹಾಡಿಕೊಂಡು ಸಭಾ ಕಾರ್ಯಗಳು ಪ್ರಾರಂಭವಾದವು. ವಾರ್ಷಿಕ ವರದಿಯನ್ನು ಇಂಗ್ಲೀಷು ಭಾಷೆಯಲ್ಲಿ ಓದಲಾಯಿತು. [illegible]

ಹೇಳುವ ಕ್ರಮವನ್ನು ಮಹಿಳಾ ಸಭೆಯವರು ಚನ್ನಾಗಿ ನಡಿಸುತ್ತಿದ್ದಾರೆ. ಲೆಡಿ ಡಾಕ್ಟರರಾದ ಜಾನಕಿ ಅಮ್ಮನವರು ಸಭಾ ಸ್ತ್ರೀಯರಿಗೆ ಆಗಾಗ್ಯೆ ಶಿಶುಪಾಲನ ಆರೋಗ್ಯವಿಚಾರ ಮೊದಲಾದ ವಿಷಯಗಳ ಕುರಿತು ಉಪನ್ಯಾಸಗಳನ್ನು ಕೊಟ್ಟದ್ದಕ್ಕಾಗಿ ಇವರ ಪ್ರಸಂಶೆಯನ್ನೂ ಮಾಡಿ ಸಭೆಯವರಿಗೆ ಇತರ ವಿಷಯಗಳಲ್ಲಿಯೂ ಉಪನ್ಯಾಸಗಳನ್ನು ಹೇಳಿದ ಇತರ ಗೃಹಸ್ಥರನ್ನು ವರದಿಯಲ್ಲಿ ವಂದಿಸಿರುವರು. ಇಲ್ಲಿ ಕಳೆದ ಜನವರಿ ತಿಂಗಳಲ್ಲಿ ಜರುಗಿದ ಯುದ್ಧಸಹಾಯದ ಸಂತೆಯಲ್ಲಿ ಮಹಿಳಾ ಸಭೆಯವರ ಚಟುವಟಿಕೆಯ ಪ್ರಸ್ತಾಪವು ವರದಿಯಲ್ಲಿರುವದು. ಸಭೆಯವರಿಗೆ ಒಂದು ಕಟ್ಟೋಣವೂ ಅದಕ್ಕೋಸ್ಕರ ಒಂದು ಮಠಾರವೂ ಬೇಕಾಗಿರುವದೆಂತ ಸೂಚಿಸೋಣಾಗಿರುವದು. ಈ ರೀತಿ ವರದಿಯಲ್ಲಿ ಸಭೆಯ ಅಭಿವೃದ್ಧಿಯು ಕಾಣಬರುತ್ತಿರುವದು. ವರದಿಯು ಓದೋಣಾದನಂತರ ಸಭಾ ಕುಲಸ್ತ್ರೀಯರುಗಳ ವೀಣಾ, ಹಾರ್ಮೋನಿಯಮ್ ಇತ್ಯಾದಿಗಳ ಗಾಯನವಿತ್ತು. ಇಂಗ್ಲೀಷು ಭಾಷೆಯ ಪದ್ಯ ಪಠಣಗಳಿದ್ದವು. ಸೀತಾಲಕ್ಷ್ಮಣರ ಅರಣ್ಯದಲ್ಲಿಯ ಸಂವಾದದ ಅಂಶವನ್ನು ರಾಮಾಯಣದಿಂದ ಇಂಗ್ಲೀಷು ಭಾಷೆಯಲ್ಲಿ ನಟಿಸಿ ತೋರಿಸಿದರು. ನಂತರ ಕೆನರಾ ಬಾಲಿಕಾ ಪಾಠಶಾಲೆಯ ಹುಡುಗಿಯರ ಕೋಲಾಟವು ನಡೆಯಿತು. ಮಂಗಳೂರು ಮಾಧವರಾಯರ ಪತ್ನಿಯವರು ಇಂಗ್ಲೀಷಿನಲ್ಲಿ ಬರೆದು ಕಳುಹಿಸಿದ "ಹಿಂದೀ ಸ್ತ್ರೀಯರ ಪ್ರಬುದ್ಧತೆ"ಯ ಉಪನ್ಯಾಸವು ಸಭೆಯಲ್ಲಿ ಓದೋಣಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಹಿಳಾ ಸಭೆಯ ವೃದ್ಧಿಯನ್ನು ಪ್ರಸ್ತಾಪಿಸಿಕೊಂಡು ಗೃಹಕೃತ್ಯದಲ್ಲಿಯೂ ಸಹ ಎಚ್ಚರವುಳ್ಳವರಾಗಬೇಕೆಂಬ ಬೋಧೆಯನ್ನು ಕೊಟ್ಟಿರುತ್ತಾರೆ.

ವಿಶ್ರಾಂತ ಎಕೌಂಟೆಂಟ ಜನರಲರಾದ ಪೇಜಾವರ ಮೋಹನರಾವ್‌ರವರು ಕೆನರಾ ಹೈಸ್ಕೂಲಿನ ಸಿಲ್ವರ್ ಜುಬಿಲಿ ಫಂಡಿಗೆ ರೂ. ೨೦೦ನ್ನು ಕೊಟ್ಟಿರುವರು.

ಇಲ್ಲಿಯ ಗವರ್ನಮೆಂಟ ಸೆಕೆಂಡರಿ ಶಾಲೆಯಲ್ಲಿ ತರಬೇತಿ ಬಗ್ಗೆ ಇತರ ವರುಷಗಳಿಗಿಂತಲೂ ಈ ವರುಷದಲ್ಲಿ ೧೦ ಜನ ಉಮೇದ್ವಾರರನ್ನು ಹೆಚ್ಚಿಗೆ ತೆಕ್ಕೊಳ್ಳಬಹುದೆಂಬ ಹುಕುಮು ಡಿರೆಕ್ಟರರವರಿಂದ ಬಂದಿರುವದಾಗಿ ತಿಳಿಯುತ್ತೇವೆ.

ಪೆಂಟ್‌ಲೆಂಡ್ ಪೇಟೆಯ ಮಣ್ಣಾಗುಡ್ಡೆಯ ಕಡೆಗಳಲ್ಲಿ ಪೋಲೀಸಿನವರ ಹೆಚ್ಚಿನ ಜಾಗ್ರತಾವಸ್ಥೆಯು ಬೀಟು ಅಗತ್ಯವೆಂತ ಒಮ್ಮೆ ಸೂಚಿಸಿದ್ದೆವು. ಮೊನ್ನೆ ಮಣ್ಣಾಗುಡ್ಡೆಯ ಅಂತ್ಯದಲ್ಲಿರುವ ಅಂಗಡಿಯ ಬಾಗಿಲನ್ನು ಕಳ್ಳರು ಒಡೆದು ಅಂಗಡಿಯಲ್ಲಿರುವ ನಗದಿ ಇತ್ಯಾದಿ ಕೆಲವು ಸಾಮಾಗ್ರಿಗಳನ್ನು ಕೊಂಡುಹೋಗಿರುವರು.

ಪೆಂಟ್‌ಲೆಂಡ್ ಪೇಟೆಯ ಸಮೀಪದಲ್ಲಿರುವ ಇನ್ನೂ ಒಂದೆರಡು ಅಂಗಡಿಗಳ ಬಾಗಿಲುಗಳನ್ನು ರಾತ್ರಿಕಾಲ ಪರಚಿಕೊಂಡು ಹೋಗಿದ್ದಾರೆಂತ ಕೇಳಿತ್ತೇವೆ. ಮಳೆಗಾಲದ ಕಳ್ಳರ ಕಾಟವು ಈ ರೀತಿ ಪೆಂಟಲೆಂಡ್ ಪೇಟೆಯ ಸಮೀಪ ಪ್ರಾರಂಭಿಸಿರುವದು.

ಗೌಡಸಾರಸ್ವತ ಬ್ರಾಹ್ಮಣ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ನಾವು ಮೊದಲೊಮ್ಮೆ ಪ್ರಸ್ತಾಪಿಸಿದ ಫಂಡು ಇತ್ತಲಾಗೆ ಏರ್ಪಡಿಸಲ್ಪಟ್ಟಿರುವದು. ಇದಕ್ಕೆ ಈ ಜಾತೀಯ ೨೨ ಮಹನೀಯರುಗಳ ಒಂದು ಕಾರ್ಯನಿರ್ವಾಹಕ ಕಮ್ಮಿಟಿಯೂ ಈ ಕಮ್ಮಿಟಿಯವರಿಂದ ಒಂದು ಆಡಳಿತೆಯ ಕಮ್ಮಿಟಿಯೂ ನೇಮಿಸಲ್ಪಟ್ಟಿರುವದು. ಆಡಳಿತೆಯ ಕಮ್ಮಿಟಿಯ ಅಧ್ಯಕ್ಷರಾಗಿ ಮ॥ ರಾ॥ ರಾ॥ ಎಮ್. ಪಾಂಡುರಂಗ ಕಿಣಿಯವರೂ ಉಪಾಧ್ಯಕ್ಷರಾಗಿ ಮ॥ ರಾ॥ ರಾ॥ ನಗರ ಸರಾಫ ದಾಮೋದರ ಶ್ಯಾನಭಾಗ, ಮ॥ ರಾ॥ ರಾ॥ ಉಳ್ಳಾಲ ನರಹರಿ ಮಲ್ಯ, ಮುಸೋಲ ಮ॥ ರಾ॥ ರಾ॥ ಅಣ್ಣಪ್ಪ ನಾಯಕ ಮತ್ತು ಮ॥ ರಾ॥ ರಾ॥ ಉಳ್ಳಾಲ ಸಾಂತಯ್ಯ ಕಿಣಿಗಳವರೂ, ಖಜಾನೆದಾರರಾಗಿ ಮ॥ ರಾ॥ ರಾ॥ ಸಾವಕಾರ ಗಣೇಶ ಶ್ರೀನಿವಾಸ ಪೈಗಳವರೂ, ಕಾರ್ಯದರ್ಶಿಗಳಾಗಿ ಮ॥ ರಾ॥ ರಾ॥ ಎಮ್. ಮಾಧವರಾವ್ ಮತ್ತು ಮ॥ ರಾ॥ ರಾ॥ ಎ. ಶ್ರೀನಿವಾಸ ಕಾಮತರವರೂ ನೇಮಿಸಲ್ಪಟ್ಟಿರುತ್ತಾರೆ. ನಗರಕಾರರಲ್ಲಿ ದೊರಕಿದ ರೂ. ೫೦ಅಲ್ಲದೆ, ನಗರ ದಾಮೋದರ ಶ್ಯಾನಭಾಗರು ರೂ. ೧೦, ಮ॥ ರಾ॥ ರಾ॥ ಅಮ್ಮೆಂಬಳ ಶ್ರೀನಿವಾಸ ಪೈಗಳು ರೂ. ೫, ಮ॥ ರಾ॥ ರಾ॥ ಎಮ್. ಮಾಧವರಾಯರು ರೂ. ೫, ಈ ರೀತಿ ಈ ಫಂಡಿಗೆ ಸಹಾಯವಾಗಿ ಕೊಡಲು ವಾಗ್ದಾನ ಮಾಡಿರುವರು. ಮ॥ ರಾ॥ ರಾ॥ ಪೆನಶನು ಹೊಂದಿದ ಜಿಲ್ಲಾ ರಿಜಿಸ್ಟ್ರಾರರಾದ ಮ॥ ರಾ॥ ರಾ॥ ಮುಕುಂದ ರಾಯರು ತಿಂಗಳಿಗೆ ರೂ. ೧ರ ಹಾಗೆ ಕೊಡಲಿಕ್ಕೆ ಒಪ್ಪಿರುತ್ತಾರೆ. ಈ ಪಟ್ಟಣದ ಗೌಡಸಾರಸ್ವತರು ತಮ್ಮಲ್ಲಿ ಆಗಿಂದಾಗ್ಯೆ ಆಗುವ ಶುಭಾಶುಭ ಕೆಲಸಗಳ ಸಮಯದಲ್ಲಿ ಬ್ರಾಹ್ಮಣರಿಗೆ ದಾನದಕ್ಷಿಣೆಗಳನ್ನು ಕೊಡುವಾಗ ತಮ್ಮ ಜಾತಿಯ ದೀನ ವಿದ್ಯಾರ್ಥಿಗಳ ಸ್ಥಿತಿಯನ್ನು ಸ್ಮರಣೆಗೆ ತಂದುಕೊಂಡು ತಮಗೆ ಇಷ್ಟವಿರುವ ಸಹಾಯವನ್ನು ಮಾಡಬೇಕಾಗಿ ಈ ಕಮ್ಮಿಟಿಯವರ ಕಡೆಯಿಂದ ವಿಜ್ಞಾಪನೆ ಇದೆ. ಸಹಾಯವು ಬಹಳ ಸ್ವಲ್ಪವಾದರೂ ಅದು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವದು. ಶುಭಾಶುಭ ಕೆಲಸಗಳ ಸಮಯದಲ್ಲಿ ಈ ಹಣ ಸಹಾಯವನ್ನು ಪಡೆಯಲು ಅನುಕೂಲವಾಗುವಂತೆ ಅಂಥಾ ಸಂದರ್ಭಗಳನ್ನು ಆಡಳಿತೆಯ ಕಮ್ಮಿಟಿಯ ಕಾರ್ಯದರ್ಶಿಗಳಿಗೆ ದಯಮಾಡಿ ತಿಳಿಸಿದ್ದಲ್ಲಿ ಸೆಕ್ರೆಟರಿಯವರು ಸ್ವತಹ ಬಂದು ಅದನ್ನು ಪಡೆಯಲು ಸಿದ್ಧರಾಗಿದ್ದಾರೆಂಬುದನ್ನು ಸಹ ತಿಳಿಸಿರುತ್ತಾರೆ. ಈ ಫಂಡಿಗೆ ಸಬ್‌ಜಡ್ಜರಾದ ಮ॥ ರಾ॥ ರಾ॥ ಎಮ್. ಡಿ. ಕೃಷ್ಣರಾಯರು ತಮ್ಮ ನೂತನ ಗ್ರಹಪ್ರವೇಶದ ವೇಳೆ ರೂ. ೧-೦-೦ನ್ನು ಕಳುಹಿಸಿಕೊಟ್ಟಿರುವರು.

[illegible]

೧೯೧೬ನೇ ವರ್ಷದಲ್ಲಿ ಪಂಜಾಬುಸಂಸ್ಥಾನದ ಜೈಲುಗಳಿಂದ ಸುಮಾರು ೪೦೦೦ ಕೈದಿಗಳು ಯುದ್ಧರಂಗಕ್ಕೆ ಕೂಲಿಗಳಾಗಿ ಹೋಗಲಿಕ್ಕೆ ಒಪ್ಪಿಕೊಂಡರೆಂತಲೂ ಈ ಬಗ್ಗೆ ಅವರ ಸಜೆಯಲ್ಲಿ ರಿಯಾಯಿತಿಮಾಡಿ ಇವರನ್ನು ಆಯಾ ಯುದ್ಧರಂಗಕ್ಕೆ ಕರೆದುಕೊಂಡು ಹೋದಲ್ಲಿ ಇವರ ಕೆಲಸ ಸಮಾಧಾನಕರವಾಗಿತ್ತೆಂತ ತಿಳಿದು ಬರುತ್ತದೆ.

ಮಿಸ್ ಹಾಮಾಬಾಯಿ ಎಫ್. ಪೆಟಿಟ್ ಎಂಬವರು ಸುಬ್ರಮಣ್ಯಯ್ಯರವರು ಏರ್ಪಡಿಸಿದ ಬಿಸೆಂಟರ ಫಂಡಿಗೆ ರೂ. ೫೦೦೦ವನ್ನೂ ಮುಂಬಾಯಿಯ ಹೋಮ್ ರೂಲ್‌ಲೀಗಿಗೆ ರೂ. ೨೫೦೦ವನ್ನೂ ಕೊಟ್ಟಿರುತ್ತಾರೆ.

ವೃದ್ಧಮಹನೀಯರಾದ ದಾದಾಭಾಯಿ ನವರೋಜಿಯವರ ಅಸ್ವಸ್ಥವು ಘನಹ ವಿಶೇಷವಾಗಿದೆ. ಈ ಅಸ್ವಸ್ಥದಿಂದ ಪಾರಾಗುವಂಥಾದ್ದು ಬಹಳ ಕಷ್ಟವೆಂತ ಡಾಕ್ಟ ರರ ಅಭಿಪ್ರಾಯವಿರುವದು.

ಮುಂಬಯಿಯ ಬಹುಮಾನಪಟ್ಟ ಪಟಾಣಿ ಮತ್ತು ಕಲ್ಕತ್ತೆಯ ಭೂಪೇಂದ್ರ ನಾಥ ಬಾಸುರವರನ್ನು ಸ್ಟೇಟ್ ಸೆಕ್ರೆಟರಿಗಳವರು ಇಂಡಿಯಾ ಕೌನ್ಸಿಲಿನ ಮೆಂಬರ ರಾಗಿ ನೇಮಿಸಿರುತ್ತಾರೆ.

ಭಾರತ ಸಂರಕ್ಷಕ ಸೇನೆಗೆ ಈ ತಿಂಗಳ ತಾ. ೧೫ರ ತನಕ ಸೇರಲು ಅರ್ಜಿ ಮಾಡಿದವರ ಸಂಖ್ಯೆಯು ಇಡೀ ಹಿಂದೂಸ್ಥಾನದಲ್ಲಿ ೧೨೩೪ ಆಗಿರುವದು.

ಹುಬ್ಬಳ್ಳಿಯಲ್ಲಿ ಹೋಮ್‌ರೂಲ್ ಲೀಗಿಗೆ ೧೨ ಮಂದಿ ಸ್ತ್ರೀಯರು ಮೆಂಬರ ರಾಗಿ ಸೇರಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ತುತ್ತುಕುಡಿಯಲ್ಲಿ "ದಿ ಟ್ರಿವಂಕೂರು ಮಾರ್ಯ್ನಿಂಗ್ ಎಂಡ್ ಟ್ರೇಡಿಂಗ್ ಕಂಪೆನಿ ಲಿಮಿಟೆಡ್". ಎಂಬ ಒಂದು ಕಂಪೆನಿಯನ್ನು ಏರ್ಪಡಿಸಿದ್ದಾರೆ. ಒಂದು ಪಾಲಿಗೆ ೨೦ ರೂಪಾಯಿ ಮೇರೆ ೧೦,೦೦೦ ಶೇರುಗಳ ಮೂಲಕ ಬಂಡವಾಳವನ್ನು ಎತ್ತಿ ತಿರುವಾಂಕೂರಿನಲ್ಲಿ "ಪ್ಲಂಬೆಗೊ" ಎಂಬ ಖನಿಜವನ್ನು ಅಗಿದು ತೆಗೆಯು ವದಕ್ಕೂ ಬಗೆಬಗೆಯ ನೂಲನ್ನು ತಯಾರಿಸುವುದಕ್ಕೂ ಆಲೋಚಿಸುತ್ತಾರೆ. ಈ ಪ್ಲಂಬೆಗೊ ಎಂಬುದು ಪೆನ್ಸಿಲುಗಳನ್ನು ಮಾಡುವುದಕ್ಕೂ, ಇತರ ಹಲವು ಕೆಲಸ ಗಳಿಗೂ ಬೇಕಾಗುತ್ತದೆ.

ಕಲ್ಲಿಕೋಟೆಯಲ್ಲಿ ವಿಕ್ಟೋರಿಯಾ ಜುಬಿಲೀವನ್ ಹಾಲಿನಲ್ಲಿ ಮ. ರಾ. ರಾ ಕೆ. ಪಿ. ರಾಮನ್ ಮೆನ್ನನ್ ಬಿ. ಎ. ಬಿ. ಎಲ್., (ಒಂದು ಕಾಲದಲ್ಲಿ ಮಲ್ಬಾ ಜಿಲ್ಲೆಯ ಮತ್ತು ಮಲೆಬಾರಿನ ಪ್ರತಿನಿಧಿಗಳಾಗಿ ಮದ್ರಾಸಿನ ನ್ಯಾಯವಿಧಾಯಕ ಸಭೆಗೆ ಆರಿ ಸಲ್ಪಟ್ಟವರು) ಇವರ ಅಧ್ಯಕ್ಷತೆಯಲ್ಲಿ ದೊಡ್ಡ ಸಭೆ ಸೇರಿತು. ಮಿಸೆಸ್ ಎನಿ ಬಿಸೆಂಟ ಮತ್ತು ವಾಡಿಯಾ, ಅರುಂಡೇಲ್ ಇವರ ನಿರ್ಬಂಧದಿಂದಾಗಿ ಪ್ರಜಾಜನಗಳಲ್ಲಿ ಬಹಳ ಸಂತಾಪವಿರುವುದನ್ನು ಸೂಚಿಸಿ ಠರಾವು ಮಾಡಿದ್ದಲ್ಲದೆ ಈ ಠರಾವನ್ನು ಇಂಡಿಯಾ ಸ್ಟೇಟ್‌ಸೆಕ್ರೆಟರಿಗಳವರಿಗೆ ತಂತಿಮೂಲಕ ತಿಳಿಸಬೇಕೆಂತಲೂ, ಪ್ರಜಾ ಜನಗಳು ಈ ಪ್ರೆಸ್ಸುಆಕ್ಟು ಮತ್ತು ಡಿಫೆನ್ಸ್ ಒಫ್ ಇಂಡಿಯಾ ಆಕ್ಟುಗಳ ಶೀಘ್ರವು ಕಡಿಮೆಯಾಗುವ ವರೆಗೆ ಪರದೇಶಗಳ ಸರಕುಗಳ ಬದಲಾಗಿ ಸ್ವದೇಶಿ ಸರಕುಗಳನ್ನೆ ಕೊಂಡುಕೊಳ್ಳುವ ದೃಢಪ್ರತಿಜ್ಞೆಯನ್ನು ಮಾಡಬೇಕಾಗಿ ನಿರ್ಣಯವಾಯಿತು.

ಕೆಲವು ದಿನಗಳ ಹಿಂದೆ ಊಟಕಮಂಡಿನಲ್ಲಿ ವಿದ್ಯಾಇಲಾಖೆಯ ಡಿರೆಕ್ಟರರೂ ಮತ್ತು ಹತ್ತು ಹ್ಯಾಸ್ಕೂಲುಗಳ ಹೆಡ್‌ಮಾಸ್ತರರೂ ಕೂಡಿದ ಒಂದು ಸಭೆಯಲ್ಲಿ ನಿಶ್ಚಯಿಸಿದ ಮೇರೆಗೆ ಸ್ಕೂಲ್‌ಫೈನಲ್ ಪರೀಕ್ಷೆಯ A. ಗ್ರೂಪಿನ ಕೋಂಪೋಜಿಶನ್ ಮತ್ತು ಟ್ರಾನ್ಸಲೇಶನ್ ಭಾಗಕ್ಕೆ ಪ್ರತಿಯೊಂದು ದ್ವಿತೀಯಭಾಷೆಯ ಲ್ಲಿಯೂ (ಡಿಟೈಲಡ್‌ಸ್ಟಡಿ) ಸಂಪೂರ್ಣ ವಿಮರ್ಶೆಗೆ ಒಂದು ಪುಸ್ತಕ (ನೊನ್‌ಡಿಟೈಲಡ್‌ಸ್ಟಡಿ) ಮೇಲ್ಮೈಲೆ ಓದುವುದಕ್ಕೆ ಒಂದು ಅಥವಾ ಹೆಚ್ಚು ಅರ್ವಾಚೀನ ಗದ್ಯಗ್ರಂಥಗಳನ್ನು ಇಡ ಬೇಕೆಂದು ಡಿರೆಕ್ಟರರವರ ಹುಕುಂ ಬಂದಿದೆ.

ಹೈದರಾಬಾದು ನಿಜಾಮರ ಸರಕಾರದಿಂದ ೬೫ ಲಕ್ಷ ರೂಪಾಯಿ ಯುದ್ಧ ಸಾಲಕ್ಕೆ ಸಿಕ್ಕಿದ್ದಲ್ಲದೆ, ಆ ರಾಜ್ಯದ ಪ್ರಜೆಗಳು ೨೭,೮೨,೮೨೮ ರೂಪಾಯಿ ಸಾಲ ವನ್ನು ಕೊಟ್ಟಿರುವರು.

ಪಾಲ್ಘಾಟ್ ಸರ್ಕಲ್ ಅಬಕಾರಿ ಇನ್ಸ್‌ಪೆಕ್ಟರರಾದ ಮ. ರಾ. ರಾ. ಸಪ್ಪಾರ ರಾಮಚಂದ್ರರಾಯರಿಗೆ ಕಡಪೆಜಿಲ್ಲೆಯ ಜಮ್ಮಲಮಡಗು ಜಿಲ್ಲೆಗೆ ವರ್ಗವಾಯಿತು.

ಪಾಲ್ಘಾಟಿನಲ್ಲಿ ಯುದ್ಧಸಾಲಕ್ಕೆ ಸಂಗ್ರಹವಾದ ಹಣ ೧,೨೧,೬೦೦ ರೂಪಾಯಿ.

ಈಗಲೇ ಪ್ರಕಟವಾದ ಮೈಸೂರು ರೈಲ್ವೆ ರಿಪೋರ್ಟಿನಿಂದ ಶಿವಮೊಗ್ಗದಿಂದ ಭಟ್ಕಳಕ್ಕೂ, ಮೈಸೂರಿನಿಂದ ಕೊಡಗಿಗೂ ರೈಲ್‌ರಸ್ತೆ ಹಾಕಿಸುವ ಉದ್ದೇಶದಿಂದ ದಾರಿಯನ್ನು ಸರ್ವೆಮಾಡುತ್ತಲಿದ್ದಾರೆಂದು ಗೊತ್ತಾಗುತ್ತದೆ.

ಬರ್ಮಾದೇಶದ ಎಂಗ್ಲೋವರ್ನೆಕ್ಯುಲರ್ ಶಾಲೆಗಳಲ್ಲಿ ಸಾಯನ್ಸ್ ಕಲಿಸು ವಿಕೆಯ ಅಭಿವೃದ್ಧಿಗೆ ತಕ್ಕ ಏರ್ಪಾಡುಗಳನ್ನು ಸೂಚಿಸುವ ಬಗ್ಗೆ ಅಲ್ಲಿಯ ಡಿರೆಕ್ಟ ರರ ಅಧ್ಯಕ್ಷತೆಯಿಂದ ಒಂದು ಕಮಿಟಿಯನ್ನು ಸರಕಾರದವರು ನೇಮಿಸಿರುವರು.

ಕಲ್ಕತ್ತೆಯ ಒಂದು ಭಾಗದಲ್ಲಿ ಕಾಲೇಜುಗಳೂ ಹೈಸ್ಕೂಲುಗಳೂ ಇದ್ದುದ ರಿಂದ ಆ ಭಾಗದಲ್ಲಿರುವ ಸಾರಾಯಿ ಸರಾಬುಗಳ ಅಂಗಡಿಗಳನ್ನು ಮುಚ್ಚಿಸಬೇಕಾಗಿ ಅಲ್ಲಿಯ ಜನರು ಮನವಿ ಮಾಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾಗಿದ್ದ ಮತ್ತು ಪ್ರಸ್ತುತ ರೆವಿನ್ಯೂ ಬೋರ್ಡು ಮೆಂಬರರಾಗಿರುವ ಬಹುಮಾನಪಟ್ಟ ಖಾನ್ ಬಹದ್ದೂರ್ ಅಜೀಜು ದ್ದೀನ್ ಸಾಹೇಬರವರ ಅಳಿಯ ಅಜೀಜುದ್ದೀನ್ ಅಹಮ್ಮದ್ ಎಂಬ ಬಿ. ಎ ಪಾಸಾದ ಯುವಕರು ತಮ್ಮ ಅಬ್ಕಾರಿ ಇಲಾಖೆಯಲ್ಲಿ ದೊರಕಿದ ಇನ್ಸಪೆಕ್ಟರ ಹುದ್ದೆಗೆ ರಾಜಿನಾಮೆ ಕೊಟ್ಟು ಪೂನೆಯಲ್ಲಿರುವ ಭಾರತ ಸೇನಾಸಂಘದ ಮೆಂಬರ ರಾಗಿದ್ದಾರೆ.

ದಕ್ಷಿಣ ಹಿಂದೂಸ್ಥಾನದಿಂದ ಇದೇ ತಿಂಗಳ ತಾ. ೨೩ರ ವರೆಗೆ ಭಾರತ ಸಂರಕ್ಷಕ ಸೇನೆಗೆ ಸೇರಲು ಬರಕೊಂಡ ಅರ್ಜಿಗಳ ಸಂಖ್ಯೆಯು ೬೯೦ ಆಗಿರು ವದು. ಇವರಲ್ಲಿ ಬ್ರಾಹ್ಮಣರ ಅರ್ಜಿಗಳು ೩೯೪, ನಾಯರರದು ೬೩, ಮುದಲಿ ಯರ್, ವೆಳ್ಳಳರು ಪಿಳ್ಳೆಗಳು ೯೨, ನ್ಯಾಡು, ಬಾರ್ಬಿಸ್ ಮತ್ತು ರಡ್ಡಿಯರದು ೩೯, ತೀಯರು ೩೧, ಕ್ರೈಸ್ತರು ೨೬, ಮಹಮ್ಮದೀಯರು ೧೦, ಚೆಟ್ಟಿಗಳು ೪, ರಾಜ ಪುತರು ೨. ಜಿಲ್ಲೆಗಳ ಪ್ರಕಾರ ಈ ಸಂಖ್ಯೆಯನ್ನು ವಿಭಜಿಸಿದರೆ ಈ ರೀತಿಯಾಗಿದೆ, ಗಂಜಾಮು ೧೩, ವಿಶಾಖಪಟ್ನ ೧, ಗೋದಾವರಿ ೯, ಗುಂಟೂರು ೧೫, ಕೃಷ್ಣ ೬, ನೆಲ್ಲೂರು ೫, ಕಡಪೆ ೧, ಕರ್ನೂಲು ೩, ಬಳ್ಳಾರಿ ೧೪, ಅನಂತಪುರ ೧೦, ಮದ್ರಾಸು ೧೦೩, ಚಂಗಲ್ಪಟ್ಟು ೨೩, ಉತ್ತರ ಆರ್ಕಾಡು ೧೮, ದಕ್ಷಿಣ ಆರ್ಕಾಡು ೬, ತಂಜಾವೂರು ೪, ಸೇಲಂ ೧೧, ಕೊಯಂಬತ್ತೂರು ೨೧, ತಿರುಚಿನಾಪಳ್ಳಿ ೧೩೨, ತಿರುನೆಲ್ವೇಲಿ ೩೧, ಮಧುರಾ ೨೬, ರಾಮ್ನಾಡು ೭, ನೀಲಗಿರಿ ೮, ಮಲಬಾರು ೧೯೩, ದಕ್ಷಿಣ ಕನ್ನಡ ೧೨, ಬೆಂಗಳೂರು ೩, ಮೈಸೂರು ೧, ಕೊಡಗು ೧೦, ತಿರುವಾಂಕೂರು ೧.

ಬಂಗಾಳದ ರಂಗಪುರ ಜಿಲ್ಲೆಯ ರಂಗಪುರ ಗ್ರಾಮದಲ್ಲಿ ಸಿರಿಯಾತುಲ್ಲಾ ಎಂಬ ಒಬ್ಬ ಮಹಮ್ಮದೀಯನ ಮನೆಗೆ ಸುಮಾರು ರಾತ್ರಿ ಗಂಟೆ ೧೧ಕ್ಕೆ ಕೆಲವರು ಬಂದು ಬಾಗಿಲು ತಟ್ಟಿದರು. ಸರಿಯಾತುಲ್ಲಾರ ಮಗನು ಬಂದು ಬಾಗಿಲು ತೆರೆ ದೊಡನೆ ದರೋಡೆ ಕಳ್ಳರ ಗುಂಪು ಕೈಗಳಲ್ಲಿ ರಿವೊಲ್ವರ್ ಇತ್ಯಾದಿಗಳನ್ನು ಹಿಡಿ ಕೊಂಡು ಒಳನುಗ್ಗಿತು. ಸತ್ಯಾತುಲ್ಲಾರ ಮಗನು ಕೋವಿಯನ್ನು ತರಲು ಓಡು ವದನ್ನು ನೋಡಿಕೊಂಡು ಕಳ್ಳರು ಈತನ ಮೇಲೆ ರಿವೊಲ್ವರಿನಿಂದ ಗುಂಡುಹಾರಿಸಿ ಕೂಡಲೆ ಕೊಂದರು. ಸಥ್ಯಾತುಲ್ಲಾರಿಗೆ ಸಹ ಬಹಳ ಜಖಮು ಆಗಿರುತ್ತದೆ. ಮನೆಯ ಇತರ ನಿವಾಸಿಗಳನ್ನು ಹೆದರಿಸಿ ಸುಮಾರು ೪೦,೦೦೦ ರೂಪಾಯಿ ನಗದಿಯನ್ನೂ ರೂ. ೩೦೦೦ ಕ್ರಯಬಾಳುವ ಆಭರಣಗಳನ್ನೂ ಬಲಾತ್ಕಾರದಿಂದ ಕೊಂಡುಹೋಗಿರುವರಾಗಿ ತಿಳಿದುಬಂದಿದೆ. ಕಳ್ಳರು ಯಾರೆಂಬುದು ಈ ತನಕ ಪತ್ತೆಯಾಗಲಿಲ್ಲ.

ಹುಬ್ಬಳ್ಳಿಯಲ್ಲಿ ಕಳೆದ ಆದಿತ್ಯವಾರ ಸ್ತ್ರೀಯರ ಒಂದು ಸಭೆಯು ಸೇರಿತ್ತು. ಸರ್. ಎಸ್. ಜಿ. ಚಂದಾವರಕಾರರವರ ಪುತ್ರಿಯವರು ಈ ಸಭೆಯ ಅಧ್ಯಕ್ಷತೆ ಯನ್ನು ವಹಿಸಿಕೊಂಡಿದ್ದರು. ಸಭೆಯಲ್ಲಿ ಸುಮಾರು ೧೫೦ ಸ್ತ್ರೀಯರು ನೆರೆದಿದ್ದರು ಮಿಸಿಸ್ ಬಿಸೆಂಟರವರನ್ನು ನಿರ್ಬಂಧ ವಾಸಕ್ಕೆ ಗುರಿಮಾಡಿದ ಮದ್ರಾಸು ಸರಕಾರದ ಆಜ್ಞೆಯನ್ನು ವಜಾಮಾಡಬೇಕೆಂದು ಇಂಡಿಯಾ ಸರಕಾರದವರನ್ನು ಕೇಳಿಕೊಳ್ಳ ಬೇಕೆಂದು ಈ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿರುವದು.

ಕಳೆದ ಮೇ ತಿಂಗಳ ತಾ. ೩ರಲ್ಲಿ ಲಂಡನಿನಿಂದ ಮುಂಬಾಯಿಗೆ ಹೊರಟ ಮಂಗೋಲಿಯ ಎಂಬ ಟಪ್ಪಾಲುಗಳನ್ನು ತರುವ ಹಡಗವು ಮುಂಬಾಯಿ ಬಳಿಗೆ ಇದೇ ತಿಂಗಳ ತಾ. ೨೩ರಲ್ಲಿ ಬರುತ್ತಿರುವಾಗ ಸಮುದ್ರದಲ್ಲಿ ತೂಗಾಡುತ್ತಿದ್ದ ಸಿಡಿ ಮದ್ದಿನ ಕೋಟೆಗೆ ತಗಲಿ ಮುಳುಗಿಹೋದ್ದರಿಂದ ನಷ್ಟವಾಗಿಹೋದ ಸಾಮಾಗ್ರಿಗ ಳಲ್ಲಿ ಟಪ್ಪಾಲು ತುಂಬಿರುವ ೧೭ ಚೀಲಗಳು ದೊರಕಿರುವವು ಇನ್ನೂ ಕೆಲವು ಸಿಗಬಹುದೆಂಬ ಭರವಸೆ ಇದೆ.

ರೈಲ್ವೆ ಗಾಡಿಗಳು, ಇಂಜೀನಗಳು ಮೊದಲಾದ ಸಾಮಾಗ್ರಿಗಳು ಯುದ್ಧದ ಬಗ್ಗೆ ಉಪಯೋಗಿಸಲ್ಪಡುವದೆ ಪರದೇಶಗಳಿಗೆ ಕಳುಹಿಸೋಣಾಗಿರುವದರಿಂದಲೂ ಹೊಸ ಗಾಡಿಗಳು ಇಂಜೀನು ಇತ್ಯಾದಿಗಳು ಅಂಗ್ಲಂಡದಿಂದ ಇಲ್ಲಿಗೆ ತರಿಸಲು ಆಗದೆ ಇರುವದರಿಂದಲೂ ಹಿಂದೂಸ್ಥಾನದಲ್ಲೆಲ್ಲಾ ರೈಲ್ವೆಗಳ ಮೂಲಕ ಸಾಮಾನು ಗಳನ್ನು ಒಯ್ಯುವದರಲ್ಲಿ ಬಹಳ ಅಡಚಣೆಯು ಬಂದೊದಗಿರುವದು ಆಯಾ ಭಾಗದಲ್ಲಿರುವ ರೈಲ್ವೆ ಕಂಪೆನಿಗಳು ಪ್ರತ್ಯೇಕಪ್ರತ್ಯೇಕವಾಗಿ ಇರುವದರಿಂದ ಒಂದು ಕಡೆ ಯಿಂದ ಇನ್ನೊಂದು ಕಡೆಗೆ ಇಂಥಾ ಅಡಚಣೆಗಳನ್ನು ಸಾಧ್ಯವಾದಷ್ಟು ನಿವಾರಿಸುವ ಬಗ್ಗೆ ಗಾಡಿ ಇತ್ಯಾದಿಗಳನ್ನು ಕೊಡುವದು ಸಾಧ್ಯವಿರದೆ ಪ್ರತಿಯೊಂದು ರೈಲ್ವೆ ಕಂಪೆ ನಿಯವರು ತಮತಮಗೆ ಅನುಕೂಲವಿರುವಂತೆ ಈ ಸಂದರ್ಭದಲ್ಲಿ ಸ್ವತಂತ್ರವಾಗಿ ವರ್ತಿಸುತ್ತಿರುವರು. ಇಂಥಾ ವರ್ತನೆಯಿಂದ ಈ ಅಡಚಣೆಗಳು ವಿಶೇಷವಾಗಿರು ವದರಿಂದ ಎಲ್ಲಾ ಕಂಪೆನಿಗಳ ಗಾಡಿಗಳನ್ನು ಆಯಾ ಭಾಗಗಳಲ್ಲಿ ಯುಕ್ತವಾದ ರೀತಿಯಲ್ಲಿ ಉಪಯೋಗಿಸಲ್ಪಡುವಂತೆಯೂ ಸಾಮಾನುಗಳ ಪ್ರಯೋಜನವನ್ನು ಅವು ಗಳ ಆವಶ್ಯಕತೆಯ ಪ್ರಕಾರ ವ್ಯವಸ್ಥೆಗೊಳಿಸಲಿಕ್ಕೂ ರೈಲ್ವೆ ಟ್ರಾಫಿಕ್ ಕೆಂಟ್ರೊಲರ್ ಎಂಬ ಒಂದು ನವೀನ ಹುದ್ದೆಯು ರೈಲ್ವೆ ಇಲಾಖೆಯಲ್ಲಿ ಸಿಮ್ಲಾದಲ್ಲಿ ಏರ್ಪಡಿಸಲ್ಪ ಟ್ಟಿರುತ್ತದೆ.

ಮಂಗಳೂರಿನಿಂದ ರಾಮ್ನಾಡು ಜಿಲ್ಲೆಯ ಜಡ್ಜರಾಗಿ ವರ್ಗಾಯಿಸಲ್ಪಟ್ಟ ರಾವ್‌ಬಹದ್ದೂರ್ ಕೃಷ್ಣಸ್ವಾಮಿರಾವ್‌ರವರು ಎರಡು ವಾರಗಳ ಪ್ರಿವಿಲೇಜು ರಜೆ ಯನ್ನು ಪಡೆದಿರುವರು.

ಬಂಗಾಡಿ ಪೊಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟರಾಗಿದ್ದ ಮ॥ ರಾ॥ ರಾ॥ ಕೆ. ಪಿ. ಜನಾರ್ಧನರಾವ್‌ರವರು ಕಾಯಂ ಡಿಪ್ಯುಟಿ ಪೊಲೀಸು ಸುಪರಿಂಟೆಂಡೆಂಟ ರಾಗಿ ನೇಮಿಸಲ್ಪಟ್ಟಿರುವರು.

ಗಾಜಿನ ಕೈಗಾರಿಕೆಯ ವಿಷಯ ಸರಕಾರದ ಕೈಗಾರಿಕೆ ಇಲಾಖೆಯವರು ನಡೆಸಿದ ಪ್ರಯತ್ನಗಳ ವಿವರವು ಇತ್ತಲಾಗೆ ಪ್ರಕಟವಾಗಿರುವದು. ಈ ಇಲಾಖೆಯ ವರು 'ಸೋಡಾ ವಾಟರ್' ಬಾಟ್ಲಿಗಳನ್ನು ತಯ್ಯಾರಿಸುವದರಲ್ಲಿ ಶೋಧಗಳನ್ನು ಮಾಡಿ ದರು. ಅದರ ಇಷ್ಟರಿಂದ ಈ ತನಕ ಏನೂ ಫಲದೊರಕದೆ ಇದೆ. ಈ ಸಾಧ ನೆಯು ಫಲಸಿಲ್ಲದೆ ಹೋದುದನ್ನು ಮದ್ರಾಸು ಸರಕಾರದವರು ನೋಡಿಕೊಂಡು, ಈ ಶೋಧಗಳನ್ನು ಇನ್ನೂ ನಡೆಸುವ ಯುಕ್ತಾಯುಕ್ತತೆಗಳನ್ನು ಮತ್ತು ಗಾಜಿನ ಇತರ ಸಾಮಾಗ್ರಿಗಳನ್ನು ತಯ್ಯಾರಿಸುವ ವಿಷಯವನ್ನೂ ಪರ್ಯಾಲೋಚಿಸಿಕೊಂಡು ಒಂದು ವರದಿಯನ್ನು ಬರಕೊಳ್ಳುವರೆ ಒಂದು ಕಮಿಟಿಯನ್ನು ಏರ್ಪಡಿಸಿದರು. ಕೈಗಾರಿ ಕೆಯ ಇಲಾಖೆಯ ಆಫೀಸರರಾದ ಮಿ. ಸಿ ಎ ಇನ್ಸ್ ದೊರೆಗಳು ಈ ಕಮಿಟಿಯ ಅಧ್ಯಕ್ಷರಾಗಿದ್ದರು ಈ ಕಮಿಟಿಯವರು ಮದ್ರಾಸಿನ ಎಲ್ಲಾ ವಿದ್ಯಮಾನಗಳನ್ನು ವಿಚಾರಿಸಿಕೊಂಡು, ಸೋಡಾ ಬಾಟ್ಲಿಗಳನ್ನು ತಯ್ಯಾರಿಸುವ ಸಾಧನೆಯನ್ನು ಬಿಟ್ಟು ಬಿಡುವದು ಯುಕ್ತವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುವರು. ಗಾಜಿನ ಇನ್ನು ಬೇರೆ ಒಡವೆಗಳನ್ನು ತಯ್ಯಾರಿಸಬಹುದೆಂಬ ವಿಷಯದಲ್ಲಿ ಗಾಜಿನ ಬಳೆಗಳ ತಯ್ಯಾರಿಯನ್ನು ಪ್ರಯತ್ನಿಸಬಹುದೆಂದ ಹೇಳಿರುತ್ತಾರೆ. ಗಾಜಿನ ಬಳೆ ಗಳು ಬಹಳ ಪುರಾತನ ಕಾಲದಿಂದ ತಯ್ಯಾರು ಮಾಡುತ್ತಿರುವ ಕಸಬಿನವರು ಈ ಸಂಸ್ಥಾನದಲ್ಲಿ ಇನ್ನೂ ಇರುವದರಿಂದ ಇಂಥವರ ವೃತ್ತಿ ಸ್ಥಿತಿಗತಿಯನ್ನು ಪ್ರಥಮ ದಲ್ಲಿ ನಿರ್ಣಯಿಸಿಕೊಂಡು ಈ ಕೈಗಾರಿಕೆಯ ಪ್ರಯತ್ನವನ್ನು ಮಾಡಬಹುದೆಂತ ಸೂಚಿಸೋಣಾಗಿದೆ. ಇತರ ಗಾಜಿನ ಸಾಮಾಗ್ರಿಗಳನ್ನು ತಯ್ಯಾರಿಸುವದಕ್ಕೆ ಮದ್ರಾಸು ಯುಕ್ತವಾದ ಸ್ಥಳವಲ್ಲವೆಂತ ಈ ಕಮಿಟಿಯವರು ಅಭಿಪ್ರಾಯಪಟ್ಟಿರು ತ್ತಾರೆ.

ಪುತ್ತೂರು: — ಪುತ್ತೂರು ಕಸಬೆಯಲ್ಲಿರುವ ಶ್ರೀನಿವಾಸಬಾಳಿಗರನ್ನು ಕರಿಂಜಾಡ ವೆಂಕಟರಮಣಯ್ಯರವರು ಚೂರಿಯಿಂದ ತಿವಿದ್ದಾಗಿ ಇಲ್ಲಿಯ ಮೆಜಿಸ್ಟ್ರೇಟು ಕೋರ್ಟಿನಲ್ಲಿ ತನಿಖೆ ನಡೆದು ಇದೇ ತಾ. ೨೮ರಲ್ಲು ಮೆಜಿಸ್ಟ್ರೇಟರವರು, ಸರ್ಕಲ್ ಇನ್ಸಪೆಕ್ಟರವರು, ಸಬ್ ಅಸಿಸ್ಟಾಂಟ್ ಸರ್ಜನರವರು, ಪ್ರೋಸೆಕ್ಯೂಟರ್ ಇನ್ಸಪೆಕ್ಟರ ರವರಿಂದೊಡಗೂಡಿ ತಕ್ಸೀರು ನಡೆದ ಕಲ್ಲರೆ ಮನೆಗೆ ಹೋಗಿ ಸ್ಥಳತನಿಖೆ ನಡಿಸಿದರು. ಈ ತನಿಖೆಸಮಯ ಸುಮಾರು ೨೦೦ ಜನಸಮೂಹ ಕೂಡಿತ್ತು. ತಾ ೨೭ರಲ್ಲು ಮೊಕದ್ದಮೆಯು ಸೆಶನ್‌ಕೋರ್ಟಿಗೆ ಕಮಿಟ್ ಮಾಡಲ್ಪಟ್ಟಿರುವದು.

ಇಲ್ಲಿಯ ಮೆ. ಜುವಾಂ ಸಾಲ್ಡೋನರಾಸರಾಕರವರಲ್ಲಿಂದ ಸೀರೆ ಕಳವು ಮಾಡಿದ್ದಾಗಿ ನಾರಾಯಣ ಪುಟ್ಟ ಎಂಬವನ ಮೇಲೆ ಇಲ್ಲಿಯ ಮೆಜಿಸ್ಟ್ರೇಟ್‌ಕೋರ್ಟಿನಲ್ಲಿ ತನಿಖೆ ನಡೆದು ಮುದ್ದೆಯಾಲಿ ಪುಟ್ಟನಿಗೆ ೩ ತಿಂಗಳ ಕಠಿಣಸಜಾ ವಿಧಿಸಲ್ಪಟ್ಟಿತು.

ಇಲ್ಲಿಯ ಅರ್ಟಿಜನ (ಪಂಪಿನ ಬಾವಿಯು) ಉಪಯೋಗಕ್ಕೆ ತಂದ ಒಂದು ಪಂಪುನಳಿಗೆಯು ಬೋಳ್ಯಾರ ಸಾವಕಾರ ಉಪೇಂದ್ರಪೈಗಳವರಿಗೆ ವಿಕ್ರಯವಾಗಿದ್ದು ಇಲ್ಲಿಯ ಸಬ್‌ಇನ್ಸಪೆಕ್ಟರ ರಾ॥ ಸಂಜೀವರಾಯರು ಇದೇ ತಾ. ೨೪ರಲ್ಲು ಅದ ನ್ನು ಹಿಡಿದಿರುವರು.

ಇಲ್ಲಿ ಕೆಲವು ದಿವಸಗಳ ವರೆಗೆ ಮಳೆ ವಿಶೇಷ ಸುರಿದು ಕೆಲವು ದಿವಸ [illegible]

[illegible]

ಮಂಗಳೂರು ಪುಷ್ಪೇರಿ ರಸ್ತೆಯಲ್ಲಿ ೩೬-೩೮-೩೯ರ ಮಧ್ಯಸ್ಥಳಗಳಲ್ಲಿ ರಸ್ತೆಯು ಹೊಡಿ ಖತ್ತಡಕ್ಕೆ ಸಿದ್ಧಪಡಿಸಿದಂತಿರುವದು. ರಸ್ತೆಯಲ್ಲಿ ನಡೆಯಲಿ ಕ್ಕೆಂತು ಅಸಾಧ್ಯ. ಹಗಲಲ್ಲಿ ರಸ್ತೆಬಿಟ್ಟು ಒಳದಾರಿ ಹುಡುಕಬೇಕು. ರಾತ್ರಿಕಾಲ ವೆಂತೂ ಸಾಷ್ಟಾಂಗ ನಮಸ್ಕಾರ ಮಾಡಲೇ ಬೇಕು. ಡಿಸ್ಟ್ರಿಕ್ಟಬೋರ್ಡಿನ ಅಧಿಕಾರಿ ಗಳು ಇದಕ್ಕೆ ಗಮನಕೊಡುವದುತ್ತಮ.

ಪತ್ರವ್ಯವಹಾರ.

ಮಹಾಮ್ಮಾಯಿ ದೇವಸ್ಥಾನದಲ್ಲಿ 'ದರ್ಶನ.'

ಪತ್ರಾಧಿಪರೇ.

ಮಂಗಳೂರು ಪ್ರಾಂತ್ಯದಲ್ಲಿರುವ ಗೌಡ ಸಾರಸ್ವತ ಬ್ರಾಹ್ಮಣರಲ್ಲಿ ಈ ದೇವ ಸ್ಥಾನವು ಬಹಳ ಪುರಾತನಕಾಲದ್ದು. ಗೋವೆಯಲ್ಲಿ ಪೋರ್ತುಗೀಸರ ಕಾಲದಲ್ಲಿ ಬ್ರಾಹ್ಮಣರನ್ನು ಬಲಾತ್ಕಾರದಿಂದ ಕ್ರೈಸ್ತಮತಕ್ಕೆ ಮತಾಂತರಗೊಳಿಸುವ ಕಾಲದಲ್ಲಿ ಗೋವೆಯಲ್ಲಿರುವ ಗೌಡ ಸಾರಸ್ವತರು ಅಲ್ಲಿಂದ ಓಡಿಬಂದು, ಭಟ್ಕಳ ಹೊನ್ನಾವರ ಕುಮಟಾ, ಮಂಗಳೂರು ಕೊಚ್ಚಿ ಮೊದಲಾದ ಪಶ್ಚಿಮ ಕರಾವಳಿಯ ಪ್ರಾಂತ್ಯ ಗಳಲ್ಲಿ ಬಂದು ನೆಲಸಿದರು. ಹಾಗೆ ಬರುತ್ತಿದ್ದಾಗ ತಮ್ಮ ತಮ್ಮ ಕುಲದೇವತೆಗಳ ಮೂಲಪ್ರತಿಮೆಗಳನ್ನು ಹಿಡಕೊಂಡು ಬಂದು, ಬಂದಂಥಾ ಪ್ರಾಂತ್ಯಗಳಲ್ಲಿ ಕ್ರಮೇಣ ದೇವಸ್ಥಾನಗಳನ್ನು ಕಟ್ಟಿಸಿಕೊಂಡರು. ಮಂಗಳೂರು ಮಹಾಮ್ಮಾಯಿ ದೇವ ಸ್ಥಾನವು ಈ ರೀತಿ ಸ್ಥಾಪನೆಯಾದದ್ದೆಂಬ ವಿವರವು ಗೌಡ ಸಾರಸ್ವತರಲ್ಲಿ ಅನೇಕರಿಗೆ ಗೊತ್ತಿರುವ ವಿಷಯವಾಗಿರುತ್ತದೆ. ಇಂಥಾ ದೇವಸ್ಥಾನಗಳಲ್ಲಿ ಆವೇಶವು ಪಾತ್ರಿ ಗಳ ಮೇಲೆ ಬರಿಸಿಕೊಂಡು ಭಜಕರಿಗೆ ಸಂಕಷ್ಟಕಾಲಗಳಲ್ಲಿ ಉದಾಹರಣೆಗಳನ್ನು ಹೇಳಿ ಆ ಮೂಲಕ ಈ ದೇವಸ್ಥಾನಗಳು ಜನರ ಶ್ರದ್ಧಾಭಕ್ತಿಗಳಿಗೆ ಮತ್ತಷ್ಟು ಪಾತ್ರವಾಗಿ ಬಂದುವು. ದರ್ಶನದ ಈ ರೂಢಿಯು ಪೂರ್ವಾರಭ್ಯ ಇಲ್ಲಿಯ ಮಹಾ ಮ್ಮಾಯಿ ದೇವಸ್ಥಾನದಲ್ಲಿತ್ತು. ಆದರೆ ಕೆಲವು ಹತ್ತಿಪ್ಪತ್ತು ವರುಷಗಳಿಂದ ಈ ರೂಢಿಯು ಲೋಪವಾಗಿತ್ತು. ಈಗ ಎರಡು ಮೂರು ತಿಂಗಳುಗಳಿಂದ ಆವೇಶವು ಈ ದೇವಸ್ಥಾನದ ಅರ್ಚಕರಲ್ಲೊಬ್ಬರಿಗೆ ಬರಲು ಪ್ರಾರಂಭವಾಗಿ ಪ್ರತಿ ಮಂಗಳ ವಾರವೂ ಜನರು ಈ ಆವೇಶಕಾಲದಲ್ಲಿ ತಮ್ಮ ಹಾಲುಹವಾಲುಗಳನ್ನು ಹೇಳಿ ಕೊಂಡು ಮನಃತೃಪ್ತಿಯನ್ನು ಹೊಂದಲು ಬರುತ್ತಿರುವರು. ಇತ್ತ ಈ ಆವೇಶವು ಹೀಗೆ ನಡಿಯುತ್ತಿರುವಾಗ ಕೆಲವು ಅದ್ಭುತ ವೃತ್ತಾಂತಗಳು ಕೇಳಬರುತ್ತಿರುವವು. ಇಲ್ಲಿಯ ಗೋಕರ್ಣಮಠ ಶಾಲೆಗೆ ಹೋಗುತ್ತಿರುವ ಒಬ್ಬ ಗೌಡಸಾರಸ್ವತ ಜಾತಿಯ ೪ ಯಾ ೫ ವರುಷಗಳ ಪ್ರಾಯದ ಚಿಕ್ಕ ಹುಡುಗಿಗೆ ಏನೋ ಒಂದು ಸ್ತ್ರೀರೂಪವು ಕಂಡುಬಂದಂತಾಗಿ ಇವಳಿಗೆ ಬೇಕಾದ ಹಾಗೆ ಕೆಲವು ಹಣವನ್ನೂ ಸ್ಲೇಟು ಇತ್ಯಾದಿ ಗಳನ್ನೂ ತಂದುಕೊಟ್ಟಿತೆಂತಲೂ ಈ ಚಿಕ್ಕ ಹುಡುಗಿಯು ಅವುಗಳನ್ನೆ ತನ್ನ ಸಂಗಾ ತಿಯವರಿಗೆ ಹಂಚಿಕೊಟ್ಟಳೆಂತಲೂ ಈ ರೀತಿ ಈ ರೂಪು ಕಾಣಸಿಕೊಳ್ಳುವಂಥಾದ್ದು ಎರಡು ಮೂರು ದಿವಸವರೆಗೆ ಕಾಣಿಸಿಕೊಂಡು ನಂತರ ಮಾಯವಾಗಿ ಹೋಗಿ ಹೋಯಿತೆಂತಲೂ ಸುದ್ದಿಯು ಊರಲೆಲ್ಲಾ ಹಬ್ಬಿಕೊಂಡಿತ್ತು. ಕೆಲವರು ಇದು ಸುಳ್ಳು ಮತ್ತು ಕೆಲವರು ಇದು ನಿಜವೆಂತ ಹೇಳಿಕೊಳ್ಳುತ್ತಿದ್ದರು. ತನ್ನದ್ದ ಈ ಆಶ್ಚರ್ಯವನ್ನು ಹುಡುಗಿಯ ತಂದೆಯೇ ಬಂದು ದೇವದರ್ಶನದಲ್ಲಿ ಹೇಳಿಕೊಳ್ಳಲು ಈ ಸ್ತ್ರೀರೂಪು ದುರ್ಗಾದೇವತೆಯು ಬಂದು ಕೆಲೆಯಾಗಿತ್ತೆಂಬದಾಗಿ ಗೊತ್ತಾಗಿದೆ. ಇಂಥಾ ಅದ್ಭುತಗಳು ಒಂದೊಲ್ಲದಿದ್ದರೆ ಮತ್ತೊಂದು ವಿಧಾನದಲ್ಲಿ ಕಾಣಿಸಿಕೊಳ್ಳು ತ್ತಿವೆಯಂತೆ. ಸರ್ವರ ತಿಳುವಳಿಕೆ ಬಗ್ಗೆ ಈ ವೃತ್ತಾಂತವನ್ನು ತಮಗೆ ಬರಕೊಂಡ ರುವೆನು.

ದೇವಸ್ಥಾನದ ಭಜಕ.

ಸ್ವೀಕಾರ.

ಭೂವಿುಶಾಸ್ತ್ರ:—ಈ ಪುಸ್ತಕವು ಮ॥ ರಾ॥ ಶ್ರೀಯುತ ಎಚ್. ನಾರಾ ಯಣರಾವ್, ಎಮ್. ಎ. ಪ್ರೆಸಿಡೆನ್ಸಿ ಕೋಲೇಜಿನ ಪ್ರೊಫೆಸರ ಇತ್ಯಾದಿ. ಇವ ರಿಂದ ರಚಿತವಾದ್ದು ಈ ಪುಸ್ತಕದಲ್ಲಿ ಏಳು ಅಧ್ಯಾಯಗಳಿದ್ದು ಭೂಗೋಳದ ವಿಷಯದಲ್ಲಿ ಸಾಂಗೋಪಾಂಗವಾದ ಮಾಹಿತಿಯು ಕೊಟ್ಟಿದೆ. ಅಲ್ಲಲ್ಲಿ ಪ್ರತಿ ಪಾದ್ಯ ವಿಷಯವು ಸುಲಭವಾಗುವಂತೆ ಚಿತ್ರಗಳನ್ನು ಕೊಟ್ಟಿರುವದರಿಂದ ವಿಷ ಯವು ಸುಗಮವಾಗಿದೆ. ಪುಸ್ತಕದ ಭಾಷೆಯು ಶುದ್ಧವಾಗಿಯೂ ಸುಲಭವಾ ಗಿಯೂ ಇದೆ. ಈ ಪುಸ್ತಕದ ಕ್ರಯವು 10 ಆಣೆ. ಪುಸ್ತಕವು ಇದರ ಪ್ರಕಾಶ ಕರಾದ ಬಾಸೆಲ್ ಮಿಶನ್ ಬುಕ್ ಡಿಪೋದಲ್ಲಿ ಸಿಕ್ಕುವದು.

ಜೀನಸು ಧಾರಣೆ.

(ರಖಂ).

ಮುಸ್ಸಿ ಅಕ್ಕಿ		6— 5—0 ರಿಂದ	6—10—0
ಗುಡ್ಡು ಸುಗ್ಗಿ		5—10—0 „	6— 2—0
ರಾಶಿ		5— 4—0 „	5— 8—0
ಅವ್ವಲ್ ಬೆಳ್ತಿಗೆ		6— 4—0 „	6— 8—0
ಗುಡು ಬೆಳ್ತಿಗೆ		5—10—0 „	5—14—0
ರಂಗೂನು ಬೆಳ್ತಿಗೆ ಗೋಣಿ ೧ರ		9— 8—0 „	9—12—0
ಗೋಧಿ ಗೋಣಿ ೧ರ		14— 8—0 „	16— 0—0
ಹುರುಳಿ ಗೋಣಿ ೧ರ		5—10—0 „	7— 0—0
ಕಡಲೆ ಗೋಣಿ ೧ರ ಬೊಂಬ್ಬ		9—12—0 „	19— 0—0
ತೊಗರಿ ಗೋಣಿ ೧ರ			10—8 —0
ತೊಗರಿ ಬೇಳೆ ಗೋಣಿ ೧ರ	11—0—0	12— 8—0 „	15— 8—0
ಉದ್ದು ಗೋಣಿ ೧ರ		11— 8—0 „	11—12—0
ಊರುಬೆಲ್ಲ ಖಂಡಿ ೧ರ		„	36—12—0
ಉಪ್ಪು ಗೋಣಿ ೧ರ		5— 8—0 „	5—14—0
ಕೊಬ್ರಿ ಖಂಡಿ ೧ರ		„	70— 0—0
ಕೊಬ್ರಿಹಿಂಡಿ ಖಂಡಿ ೧ರ			10— 0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಬ		28—12—0 „	36— 4—0
ಕೊಬ್ರಿ ಎಣ್ಣೆ ಮಣ ೧ರ		5—10—0 „	6— 0—0
ಎಳ್ಳೆಣ್ಣೆ ಮಣ ೧ರ(ಕುರಾಸನ)		„	4— 6—0
ಬಿಳುವ ಎಣ್ಣೆ ಪೆಟ್ಟಿಗೆ ೧ರ		6—11—0 „	7— 9—0
ಮೋರಿಸ್ ಸಕ್ಕರೆ ಮಣ ೧ರ		5—6—0 „	5— 7—0
ಕಾಫಿ ಖಂಡಿ ೧ರ		160—0—0	165—0—0
[illegible] ಖಂಡಿ೧ರ		72— 0—0 „	78— 0—0
[illegible] ಮಣ ೧ರ		„	1—12—0
[illegible] ಖಂಡಿ ೧ರ		105—0—0 „	110— 0—0
[illegible] ಮಣ ೧ರ		31— 0—0 „	34— 8—0
[illegible] ಮಣ ೧ರ		„	34— 0—0
[illegible]		23—8—0 „	34— 0—0
[illegible]		„	5— 4—0
[illegible]		„	236—0—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಸಿನಾರಿ ಗಜಕರ್ಣವು ಈ ಮಲಮಿನಿಂದ ಒಂದು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೩೦ ವರ್ಷಗಳ ಹಳತ, ಕ್ಷಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಿಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ಐದೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಾ ಗಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಮುಂದ ಮೈಮೇಲೆ ಉಬ್ಬುವ ಹುಣ್ಣುಗಳೂ, ಬಾಯಿಗೆ ಮತ್ತು ಅಂಗಳಿಗೆ ಕೂತು ದೀಕೋಣ, ಬಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ದೀಳೋಣ, ಮೈಯು ಸಂದು ನೋವೋಣ, ಕೈಕಾಲು ಬಾಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ದೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಿಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ಕಳೆಯ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ನಿಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಎಣ್ಣೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತೆಗೆದಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನನ್ನ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರ್ಷಕ್ಕೆ ಒಂದಾವರ್ತಿ ಬಹುಮಾನ ಕೊಡಲ್ಪಡುತ್ತೆ. ಈ ಸಾಮಾನುಗಳೆಲ್ಲಾ ಮೈಸೂರು ನನ್ನ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟರವರಲ್ಲಿ ಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್, ಸೋಲ್ ಏಜಂಟ್, ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,

ಸುಗಂಧಕಾರಿ, ಮೈಸೂರು.

ಪಾಳ್ಯದವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಶಾ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮೊಹು ವಾಡಿಗೂ ವೈದ್ಯರ ಸಮಯವನ್ನು ಈ ಮಾತ್ರೆಯದುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದಾಗುವ ವಿಕಾರ, ಮಕ್ಕಳ ಎಳವು, ಸ್ತ್ರೀ ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಟ್ರ್ಯಾಡಮಾರ್ಕ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಸರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ಎಂ. ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಯೂನಿವರ್ಸಿಟಿ ಆಫ್ ಅಮೇರಿಕಾ, ಎ. ಎಸ್. ಆಫ್ ದಿ ಸ್ಕಾಟಿಷ್ ಆಸ್ಪತ್ರೆ, ಲಂಡನ್ ಕನ್ಸರ್ವಿಂಗ್ ಕೆಮಿಸ್ಟ್, ಎಗ್ಮೋರವೇಸ್ ನಂ. 2 ಚೆಂಗಲ್ಪಟ್ಟ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ನೋಡಿದರಲ್ಲಿ ತ್ವಾಸಕೋಶ್ಯಾಸನೆಗಳ ವ್ಯಾಕ್ಷ, ಅಜೀರ್ಣ, ಮಲಬದ್ಧತೆ, ಪಕ್ಕದ ನೋವು, ಶ್ವಾಸನೋವು, ವಿನಕಟ್ಟಿದ ಜ್ವರ, ಸಿಕ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಕಸ್ತೂರಿ ಮಾತ್ರೆಗಳಿಗೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಸಾಮಾನ್ಯವಾಗಿ ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ತೋರಿಸಿವೆ ಎಂಬುದಾಗಿ ತಿಳಿಸಲು ನನಗೆ ಬಹಳ ಸಂತೋಷವಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಔಷಧಿಗಳ ಮೊದಲಿನಂತೆಯೇ ನಾವು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸಿದ್ಧಾಯುರ್ವೇದ ವೈದ್ಯಶಾಲಾ, ಮೈಸೂರು.

ಕೆಲವು ಔಷಧಗಳು.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ, ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗ ಹತ್ತಿಕೊಳ್ಳದು.

ಕ್ರಯ 50 ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-8-0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರಾಪ್ಸ್ ... ಯುದ ಹಲವು ಬಗೆಯ ರೋಗಗಳು ... ಸದ್ಯಾಪರದ ಪತ್ರಿಕೆ ... ದಿರುತ್ತಾರೆ.

ಎಂಟಿಸ್ನೇಕ್ ಬೈಟ್:— ಈ ಔಷಧಿಯು ನಾಗರಹಾವು, ಕೊಳಕುಹಾವು ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ... ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡಿದು ಒಂದೇ ತಾಸಿನಲ್ಲಿ, ಚೇಳು ಕಡದವರು ಹತ್ತೇ ನಿಮಿಷದಲ್ಲಿ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1. ವಿ...

ಟೋರಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ... ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ... ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಒಡಿಯುವದು ... ಲಾದ ಕುರುಹುಗಳು ಕಂಡರೆ ತಿಳಿದು ಯಾ ತಿಳಿಯದ ರೀತಿಯ... ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೋರಕಬ್ ಸೇವಿ...

ಕ್ರಯ ಸೀಸೆ 1ಕ್ಕೆ ರೂ 1—8—0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರಾಪ್ಸ್:— ಇದು ನರಸಂಸಾರವನ್ನು ... ವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳನ್ನು ತಪ್ಪಿ... ಮಾಡುತ್ತದೆ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0—6—0. ವಿ. ಪಿ. ಬೇರೆ.

ಇತ್ಯಾ ಇಕ್ಲಿಪ್ಸ್ ಬಾಮ್, ಕಾಜಾ ಯುಕಲಿಪ್ಟಸ್ ತೈಲ ... ವ್ಯಾಧಿ, ಅಂಧ್ರವಾಯು, ಅಂಡವೃದ್ಧಿ ಮೊದಲಾದ ಹಲವು ರೋಗಗಳ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಮಂ...

ರೂ. 1,000 ಬಹುಮಾನ...

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮು...ನಿ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ)

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ದ ಸೇವನೆಯಿಂದ— ವೀರ್ಯಧ್ವಂಸಿನೀ ಇದ್ದರೂ, ಸ್ವಪ್ನೇಂದ್ರಿಯ ... ವಧನನ್ನು ಇಟ್ಟಲ್ಲಿ ಉರಿಯುತ್ತಿದ್ದ ... ಗರುಡನನ್ನು ... ವೀರ್ಯವು ಹೋಗುತ್ತಿ ... ತೊಲಗಿದಂತೆ ಮತ್ತು ಸೊಂಟದಲ್ಲಿ ನೆ... ಇಲ್ಲದಿದ್ದರೂ, ಮಲ... ನಿಮಿಷದಲ್ಲಿ ... ಯಾಗಿ ಆಗದಿದ್ದರೂ, ... ಳಕೂ ಮಾಯ ... ಕೆಟ್ಟುಹೋಗಿದ್ದರೂ, ಮುರಬ್ಬಾ ಸೇವನೆಯ... ರವನ್ನು ಒಳ್ಳೇ ಸ್ಥಿ... ಮುರಬ್ಬಾವು ... ಷಧದಲ್ಲಿ ಗುಣ... ಪಡಿಸುವ ವರಿಗೆ— ... ರೂಪಾಯಿ ಕೊಡುವೆವು.

1,000 ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ... ನಡೆದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ... ನನ್ನಿಂದ ಪಡೆಯಬಹುದು. ... 1ಕ್ಕೆ 8 ಆಣೆ. ... ಕ್ಕೆ ರೂ. 5.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ... ಕಂಪನಿ, ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಮದರಾಸು. ವಿಧ ಡಬ್ಬಿಯ ಜೊತೆಯಲ್ಲಿರುವುದು. ವಿರಚಿತವಾದ

ಡಿ. ಮನ್ನಾಲಾಲ್, ಡಿಲ್ಲಿಯು.

೫ ಅವೆನ್ಯೂ ರೋಡ್ ...ಯ ಮತ್ತು ವ್ರತ

ನ್ಯಾಯದರ್ಪಣ...

...ಸುಲಭ ಶೈಲಿಯಾ ... ಪಾರಾಯಣಕ್ಕೆ

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕೆ ಪುಸ್ತಕಗಳು. ದೇಶಾ ... ಶಾಸನಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ... ಕಾನೂನೆಂತ ಅನೇಕ ಹೆಸರುಗಳು. ಇವು ... ದೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ... ಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ... ಯಾರೂ ಹೇಳಕೂಡದುಹಾಗೆ ಹೇಳುವುದ ... ವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ... ಕನ್ನಡ ... ಬೇಕಾದ ಪೆನಲ್ ಕೋಡು, ಕ್ರಿ... ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್ ... ಲಿಮಿಟೇಶನ್ ಆಕ್ಟ್, ಸ್ಟಾಂಪ್ ... ಹಿಂದೂ ಲಾ, ದೊಡ್ಡಿ ಆಕ್ಟ್, ... ಆಕ್ಟ್, ರೆವಿನ್ಯು ಕೋಡ್, ... ಸಿವಿಲ್ ಪ್ರೊಸೀಜರ್ ಕೋಡ್, ... ಕೊಳ್ಳುವ ಕೋಡ್, ಮುಂತಾದ್ದುಗಳ ... ನಮೂನೆಗಳು ಮತ್ತು ... ಇದು ಪ್ರತಿಯೊಬ್ಬನ ... —8—0 ...

ಯು. ಯ...

11 ...

... ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೩೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಎರಡು ವರ್ಷಗಳ ಹಿಂದೆ ಬ್ರಿಟಿಷ್‌ಕಾರ್ಖಾನೆಗಳಲ್ಲಿ ತಯಾರಾಗುತಲಿದ್ದ ಮೆಶೀನ್‌ಗನ್ನುಗಳ ೨೦ ಪಾಲಷ್ಟು ಈಗ ಹೆಚ್ಚು ಗನ್ನುಗಳು ತಯಾರಾಗುತ್ತವೆ ಎಂತಲೂ, ೧೯೧೫ನೇ ಮಾರ್ಚತಿಂಗಳಲ್ಲಿ ಪೈದಾಸ್ತು ಆಗುತ್ತಿದ್ದ ಸಿಡಿಮದ್ದು ಮುಂತಾದವುಗಳ ೨೮ ಪಾಲಷ್ಟು ಹೆಚ್ಚು ಕೇವಲ ಈಗ ಬ್ರಿಟಿಷ್‌ಕಾರ್ಖಾನೆಗಳಲ್ಲಿ ತಯಾರಾಗುತ್ತದೆ ಎಂತಲೂ ಪಾರ್ಲಿಮೆಂಟಿನಸಭೆಯಲ್ಲಿ ವಿವರಿಸಲ್ಪಟ್ಟಿತು.

ಫ್ರೆಂಚರ ಕ್ಲೆಬರ್ ಎಂಬ ಯುದ್ಧನಾವೆಯು ನೀರಲ್ಲಿ ಹೊತ್ತಿದ್ದ ಸಿಡಿಮದ್ದಿನ ಗುಂಡುತಗಲಿ ಬ್ರೆಸ್ಟ್ ಎಂಬ ಸ್ಥಳದ ಬಳಿಯಲ್ಲಿ ಮುಳುಗಿಹೋಯಿತು. ೩ ಆಫೀಸರುಗಳೂ ೩೫ ಕಲಾಸಿಗಳೂ ಮುಳುಗಿದವರ ಪತ್ತೆ ಸಿಕ್ಕಲೇ ಇಲ್ಲ.

ಕೇಪ್‌ಟೌನಿನಲ್ಲಿ ಪಾರ್ಲಿಮೆಂಟಿನವರು ದಕ್ಷಿಣಆಫ್ರಿಕದ ಕಡೆಯಿಂದ ಬ್ರಿಟಿಷ್‌ಸರಕಾರಕ್ಕೆ ಒಂದು ಮಿಲಿಯನ್ ಪೌಂಡ ಯುದ್ಧದ ಖರ್ಚಿಗಾಗಿ ಕೊಟ್ಟುಬಿಡುವುದಾಗಿ ನಿಶ್ಚಯಿಸಿದರು.

ರುಷ್ಯದಲ್ಲಿ ಕ್ರಾಂತಿಯಾಗುವುದಕ್ಕೆ ಕಾರಣಭೂತರಾದ ಸೋಲ್ಜರ್ ಮತ್ತು ವರ್ಕ್‌ಮೆನ್ಸ್ ಕಮಿಟಿಯವರು ಈಗಿನ ರುಷ್ಯದ ಸರಕಾರದ ವಹಿವಾಟುಗಳನ್ನು ನಡೆಸುವುದಕ್ಕೆ ಮುಂದಾಳುಗಳು. ಅಲ್ಲಿನ ಪಾರ್ಲಿಮೆಂಟು ಸಭೆ (ಡೂಮ) ಯು ಈಗ ಕೆಲಸದಿಂದ ನಿವೃತ್ತಿಹೊಂದಬೇಕೆಂದು ಈ ಕಮಿಟಿಯ ಪ್ರತಿನಿಧಿಗಳು ಸೂಚಿಸಿದ್ದಕ್ಕೆ ಡೂಮಾದವರು ಒಪ್ಪಲಿಲ್ಲ.

ಈ ಕಮಿಟಿಯ ಪ್ರತಿನಿಧಿಗಳಲ್ಲಿ ಕೆಲವರು ಬ್ರಿಟನ್, ಫ್ರಾನ್ಸ್, ಇಟಲಿ ಮುಂತಾದ ರಾಜ್ಯಗಳಲ್ಲಿರುವ ಸೋಶಿಯಲಿಸ್ಟ್ (ಪ್ರಜೆಗಳಲ್ಲಿ ಸಮಾನಅಧಿಕಾರಗಳೂ ಹಕ್ಕುಗಳೂ ಇರಬೇಕೆಂದು ವಾದಿಸುವವರು) ಪಂಗಡದವರೊಡನೆ ಪ್ರಜಾಜನಗಳ ಹಕ್ಕು ಮೊದಲಾದ್ದನ್ನು ಚರ್ಚಿಸುವುದಕ್ಕೆ ಹೋಗಿರುವರು.

ಪೊಟೆರ್‌ಡೆಮ್ ಎಂಬಲ್ಲಿಂದ ಡೆನ್‌ಮಾರ್ಕರಾಜ್ಯದ ರಾಜಧಾನಿಯಾದ ಕೋಪನ್‌ಹೇಗನ್ ಎಂಬಲ್ಲಿಗೆ ಪ್ರಯಾಣಮಾಡುವ ಒಂದು ಜರ್ಮನ್‌ಹಡಗು ಸಮುದ್ರದೊಳಗಿನ ಕೋಟೆತಗಲಿ ಒಡೆಯಿತು.

ರುಷ್ಯದ ನೈಋತ್ಯಭಾಗದಲ್ಲಿ ಗೆಲಿಶಿಯ ಎಂಬ ಪ್ರಾಂತ್ಯದಲ್ಲಿ ಜರ್ಮನ್ ಮತ್ತು ಒಸ್ಟ್ರಿಯನ್ ಸೈನ್ಯವು ಪುನಃ ಕಾದುವುದಕ್ಕೆ ಆರಂಭಿಸಿದಂತೆ ತಿಳಿದುಬರುತ್ತದೆ.

ರುಷ್ಯ ಮತ್ತು ಏಸಿಯಾಟಿಕ್ ಟರ್ಕಿಪ್ರದೇಶಗಳು ಒಟ್ಟುಕೂಡುವ ಭಾಗದಲ್ಲಿ ರುಷ್ಯದ ಸೈನ್ಯವು ಮುಂದೆ ತುರ್ಕರ ಸೈನ್ಯವು ಹಿಮ್ಮೆಟ್ಟುತ್ತಲಿ ಇತ್ತು. ಈಗ ಅದರ ಸಹಾಯಕ್ಕಾಗಿ ಜರ್ಮನ್‌ದಳಪತಿಗಳು ಕಳುಹಿಸಲ್ಪಟ್ಟದ್ದರಿಂದ ಟ್ರೆಬಿಜೊಂಡ್ ಮತ್ತು ಎರ್‌ಜೆರೂಮ್ ಕಡೆಗೆ ಯುದ್ಧವು ಪುನಃ ಪ್ರಾರಂಭವಾಗುವಂತಿದೆ.

ವಿದೇಶ ವೃತ್ತಾಂತ.

ಇಂಗ್ಲೆಂಡಿನಲ್ಲಿ ವಸ್ತ್ರದ ಕಾರ್ಖಾನೆಗಳಿಗೆ ಬೇಕಾದಷ್ಟು ಅರಳೆಯು ಈಗ ಬರುವುದಿಲ್ಲವಾದ್ದರಿಂದ ಈ ವರ್ಷದ ಬೆಳೆಯು ಕೈಗೆ ಸಿಕ್ಕುವ ವರೆಗೆ ಕಾರ್ಖಾನೆಗಳನ್ನು ಮುಚ್ಚದೆ ಹೇಗೆ ಚಲಾವಣೆಮಾಡಬಹುದು ಎಂಬ ವಿಷಯವಾಗಿ ಇತ್ಯರ್ಥಿಸುವುದಕ್ಕೆ ಒಂದು ಸಮಿತಿಯು ಏರ್ಪಟ್ಟಿದೆ. ಈಗ ಅರಳೆ ಬರುವ ರೀತಿಯಲ್ಲಿ ಹೊಸ ಫಸಲು ಬರುವ ವರೆಗೆ ಹಲವು ಕಾರ್ಖಾನೆಗಳು ಮುಚ್ಚಿಹೋಗುವ ಸಂದರ್ಭವಿದೆ.

ಆಹಾರ ಕುಟ್ಟಿಯಾದ್ದರಿಂದ ಇಂಗ್ಲೆಂಡಿನಲ್ಲಿ ೩,೬೦೦,೦೦೦ ಎಕ್ರೆ ಹುಲ್ಲುಗಾವಲುಗಳನ್ನು ಉತ್ತು ಬೀಜಬಿತ್ತುವುದಕ್ಕೆ ಏರ್ಪಾಡುಮಾಡಿ ಈ ಕೆಲಸಕ್ಕೆ ಹೆಚ್ಚಾಗಿ ಯುದ್ಧದಲ್ಲಿ ಸೆರೆಹಿಡಿದವರನ್ನು ಹಚ್ಚುತ್ತಿರುವುದಾಗಿ ಲೋರ್ಡ್ ಮಿಲ್ನರು ಹೇಳುತ್ತಾರೆ.

ದಕ್ಷಿಣ ಅಮೇರಿಕದ ಬ್ರೆಜಿಲ್ ಎಂಬ ರಾಜ್ಯವು ಯುದ್ಧದಲ್ಲಿ ಅಲಿಪ್ತತೆಯ ಮಾರ್ಗವನ್ನು ಬಿಟ್ಟು ಒಂದು ಪಕ್ಷವನ್ನು ಹಿಡಿಯುವ ತವಕದಲ್ಲಿದೆ.

ಹತ್ತಿಯ ವ್ಯಾಪಾರಕ್ಕೆ ಬೋರ್ಡ್ ಒಫ್‌ಟ್ರೇಡ್ (ವ್ಯಾಪಾರದ ಇಲಾಖೆ) ನಿಂದ ಲೈಸೆನ್ಸ್ ಪಡೆಯಬೇಕಾಗಿ ಇಂಗ್ಲೆಂಡಿನಲ್ಲಿ ಸರಕಾರದ ನಿರ್ಣಯವಾಗಿರುವುದು. ಇದರಲ್ಲಿ ಬೆಲೆಗಳ ದರ, ತೇದಿ ಮುಂತಾದ್ದನ್ನು ಸ್ಪಷ್ಟವಾಗಿ ಕಾಣಿಸುವುದಲ್ಲದೆ ಸರಕಾರದ ಅನುಜ್ಞೆಗೆ ಒಳಪಟ್ಟು ಸರಕು ಕೊಂಡುಕೊಳ್ಳಬೇಕಾಗುವುದು. ಈಗ ಪೈದಾಸ್ತು ಇರುವ ನೂಲು, ಬಟ್ಟೆ ಮುಂತಾದವುಗಳ ಲೆಕ್ಕ ನೋಡಿ ಇನ್ನು ಮುಂದೆ ಪೈದಾಸ್ತು ಆಗಬೇಕಾದ ಸರಕಿಗೆ ಮಿತಿ ಇಡಬೇಕೆಂದು ಸರಕಾರದವರು ಆಲೋಚನೆಯಲ್ಲಿದ್ದಾರೆ.

ಉತ್ತರ ಹಿಂದೂಸ್ಥಾನ.

ಜಿ. ಐ ಪಿ. ರೈಲ್ವೇಯ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸಮಾಡುವ ಕೂಲಿಯಾಳುಗಳು ತಾವು ಕೆಲಸಮಾಡುವುದಿಲ್ಲವೆಂದು ಮುಷ್ಕರಹಿಡಿದು ನಿಂತುಬಿಟ್ಟರು. ಅವರ ಕಡೆಯ ವಕೀಲರಾಗಿ ಬೆರಿಸ್ಟರ್ ಮಿ ಬಾಪ್ಟಿಸ್ಟರು ರೈಲ್ವೆ ಏಜಂಟರಾದ ಮಿ ಹೆಪ್ಪರ್‌ರ ಮನವಿಮಾಡಿದ್ದಕ್ಕೆ ಅವರ ಸಂಕಷ್ಟಗಳನ್ನು ವಿಚಾರಿಸಿ ನಿವಾರಿಸುತ್ತೇನೆಂದು ಮಿ ಹೆಪ್ಪರರು ವಾಗ್ದತ್ತ ಮಾಡಿದಕಾರಣ ಮುಷ್ಕರ ಹಿಡಿದವರು ಪುನಃ ಕೆಲಸಮಾಡಲೊಪ್ಪಿದರು.

ಎನ್ನಿಬೆಸೆಂಟು ವಗೈರೆರ ಪ್ರತಿಬಂಧಕ್ಕಾಗಿ ಅಸಮಾಧಾನವನ್ನೂ ವ್ಯಾಕುಲವನ್ನೂ ತೋರ್ಪಡಿಸಿ ಬೊಂಬೈ ಪ್ರೆಸಿಡೆನ್ಸಿ ಎಸೋಸಿಯೇಶನ್ ಕಡೆಯಿಂದ ಬಹುಮಾನಪಟ್ಟ ಸರ್. ದಿನ್‌ಶಾ ಇಡಲಜಿವಾಚಾ ಎಂಬವರು ವಿಲಾಯತಿಯಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಮುಖ್ಯಮಂತ್ರಿಗಳಿಗೂ ಇಂಡಿಯನ್ ಸ್ಟೇಟ್‌ಸೆಕ್ರೆಟರಿಗಳವರಿಗೂ ತಂತಿಯನ್ನು ಕಳುಹಿಸಿರುವರು.

ದಕ್ಷಿಣ ಹಿಂದೂಸ್ಥಾನ.

ಬೊಂಬೈಯ ಗವರ್ನರರಾದ ಲೋರ್ಡ್ ವಿಲ್ಲಿಂಗ್‌ಡನ್ನರೂ ಮದ್ರಾಸಿನ ಗವರ್ನರಾದ ಲೋರ್ಡ್ ಪೆಂಟ್‌ಲೆಂಡರೂ ಅವರ [illegible] ತೀರಿದ [illegible] ಇನ್ನೂ [illegible] ೪ ಅಧಿಕಾರವನ್ನು [illegible] ಚಕ್ರವರ್ತಿಗಳವರ [illegible]

ಈಗ ಪ್ರಯಾಣ [illegible] ಕಡಿಮೆಯಾಗಿರುವುದರಿಂದ [illegible] ಹಿಂದುಸ್ಥಾನವನ್ನು ಬಿಟ್ಟು ತೆರಳಲಿಕ್ಕೆ ಅಸಾಧ್ಯವಾಗಿ [illegible] ಆಯಿತು ಎಂದು ತಿಳಿದುಬರುತ್ತದೆ.

ಮಿಸೆಸ್ ಎನಿಬೆಸೆಂಟರವರ ಸಹಾಯಾರ್ಥವಾಗಿ ಮದ್ರಾಸಿನ ಮಾಜಿ ಹೈಕೋರ್ಟುಜಡ್ಜರಾದ ಸರ್. ಸುಬ್ರಮಣ್ಯ ಅಯ್ಯರ್ ಮುಂತಾದವರು ಏರ್ಪಡಿಸಿದ ಫಂಡಿಗೆ ೩೦೦೦ ರೂಪಾಯಿಗೆ ಮಿಕ್ಕಿ ವಂತಿಗೆ ದಸೂಲಾಯಿತು.

ಈ ಮೊದಲು ಮೈಸೂರಿನ ರೆಸಿಡೆಂಟರಾಗಿದ್ದ ಸರ್ ಹ್ಯೂಡೇಲಿಯವರ ಸ್ಮಾರಕವಾಗಿ ಮೈಸೂರಿನ ಶ್ರೀಮಾನ್ ಹಾರೋಹಳ್ಳಿ [illegible]ರವರು ೪೦೦೦ ರೂಪಾಯಿಗಳನ್ನು ಮೈಸೂರು ಯೂನಿವರ್ಸಿಟಿಯಲ್ಲಿ ೩ನೇ ವರ್ಷದ ಕ್ಲಾಸಿನ ವಿದ್ಯಾರ್ಥಿಗೆ ತಿಂಗಳು ಒಂದಕ್ಕೆ ೧೦ ರೂಪಾಯಿ ವೇತನ ಸಿಕ್ಕುವಂತೆ ದತ್ತಮಾಡಿರುವರು. ಈ ವೇತನವನ್ನು ವಿದ್ಯೆಯಲ್ಲಿ ಹಿಂದುಳಿದ ಜಾತಿಯ ಹುಡುಗನಿಗೆ ಕೊಡಿಸಬೇಕಾಗಿ ಅವರು ನಿಯಮ ಮಾಡಿರುವರು.

ದಕ್ಷಿಣ ಕನ್ನಡ.

ಪುತ್ತೂರು:— ಮೂಡ್ನೂರು ಗ್ರಾಮದಲ್ಲಿ ಮೈಲಿಗೆ ರೋಗವು ವಿಶೇಷವಾಗಿ ಪ್ರಬಲಿಸಿರುವದು.

ಇತ್ತಕಡೆ ಕೆಲವು ದಿವಸಗಳಿಂದಲೂ ಮಳೆಯು ನಿಂತುಹೋಗಿ ಬಿಸಲಿನ ತಾಪವು ಅತಿ ವಿಶೇಷವಾಗಿರುವದು. ಮುಳ್ಳುಬಿಟ್ಟ ಗದ್ದೆಗಳಿಗೆ ನೀರು ಇಲ್ಲದೆ ನಾಟುವ ಕೆಲಸ ಮುಂದರಿಸುವರೆ ಉಪಾಯವಿಲ್ಲದೆ ಅತ್ಯಂತರ ಉಂಟಾಗಿಯದೆ. ಬೈಲು ಗದ್ದೆಗಳ ನೀರು ಬತ್ತಿಹೋಗುತ್ತಾ ಬರುತ್ತದೆ.

ಕೆಮ್ಮಿಂಜೆ ಗ್ರಾಮದ ಮರಿಲು ಸುಬ್ರಾಯ ಎಂಬವನನ್ನು ಹಿಂಸೆಪಡಿಸುವರೆ ಕೆಮ್ಮಿಂಜೆ ಗ್ರಾಮದ ಬೆದ್ರಹಳ್ಳ ಗುತ್ತೆದಾರ ಫಕೀರ ಪೂಜಾರಿ, ಪರಿವಾರ ನಾರಾಯಣ ಮತ್ತು ಕೆಮ್ಮಿಂಜೆ ಪಟೇಲ ಶೇಷಪ್ಪಯ್ಯ ವಗೈರೆರು ಕೂಡಿದ್ದಾಗಿ ಇಲ್ಲಿಯ ಮೇಜಿಸ್ಟ್ರೇಟು ಕೋರ್ಟಿನಲ್ಲಿ ತನಿಕೆ ನಡಿಯುವ ಮೊಕದ್ದಮೆಯಲ್ಲಿ ಫಿರ್ಯಾದಿ ಕಡೆ ಕೆಲವು ಸಾಕ್ಷಿ ವಿಚಾರಣೆ ನಡದು ತನಿಕೆ ಬಗ್ಗೆ ಮುಂದರಿಸಿಟ್ಟಿರುವರು.

ಉಡುಪಿ:— ಭಂಡಾರಿಕೇರಿ ಮಠದ ದ್ವಂದ್ವದ ಹಕ್ಕಿನ ಕುರಿತು ಈಗ ಸುಮಾರು ೧೬ ವರ್ಷಗಳಿಂದಲೂ ಉಡುಪಿ ಅಷ್ಟಮಠಗಳಿಗೂ ಭೀಮನಕಟ್ಟೆ ಮಠಕ್ಕೂ ನಡಿಯುತ್ತಿದ್ದ ವಿವಾದವು ಮದ್ರಾಸ್ ಹೈಕೋರ್ಟಿನಲ್ಲಿ ಅದು ಭೀಮನಕಟ್ಟೆ ಮಠದ ಹಕ್ಕಿನದೇ ಎಂತ ತೀರ್ಮಾನವಾದ ಮೇಲೆ ಭೀಮನಕಟ್ಟೆ ಮಠದ ಶ್ರೀ ಪಾದಂಗಳವರು ಕಾರ್ಕಳ ತಾಲೂಕು ಕಾಂತಾವರ ದೇವಸ್ಥಾನದ ಅರ್ಚಕ ವೆಂಕಟರಮಣ ಭಟ್ಟರವರ ಮಕ್ಕಳು ಪೂರ್ವಾಶ್ರಮದಲ್ಲಿ ನರಸಿಂಹ ಭಟ್ಟರು ಎಂಬವರಿಗೆ ಇದೇ ಕಳದ ಜೂನ್ ತಾ. ೩ರಲ್ಲು ಭೀಮನಕಟ್ಟೆಯಲ್ಲಿ ವಿಧಿಪ್ರಕಾರ ಆಶ್ರಮ ಕೊಟ್ಟು ವಿದ್ಯಾರ್ಣವ ತೀರ್ಥರೆಂಬ ಹೆಸರನ್ನು ಕೊಡುವವರಾದರು. ಈ ವಿದ್ಯಾರ್ಣವ ಶ್ರೀ ಪಾದಂಗಳವರಿಗೆ ವಿದ್ಯಾಭ್ಯಾಸ ಮಾಡಿಸುವದು, ಶ್ರೀ ಅದಮಾರು ಶ್ರೀ ಪಾದಂಗಳವರೆಂತಲೂ ಅವರ ಭಂಡಾರಿಕೇರಿ ಮಠದ ಆಡಳಿತೆಯನ್ನು ಈ ವರೆಗೆ ವಹಿಸಿಕೊಂಡಿದ್ದ ಮಿ ರಾ ಕುಂಜೂರು ವ್ಯಾಸರಾಯರೇ ನಡಿಸುತ್ತಾ ಬರುವದೆಂತ ಕೂಡ ವ್ಯವಸ್ಥೆಯಾಗಿರುವದರಿಂದ ಈ ಊರ ಮಹಾಜನರೆಲ್ಲರು ಸೇರಿ ನೂತನ ಯತಿಗಳನ್ನು ಬಹು ಸಂಭ್ರಮದಿಂದ ಇದೇ ಜೂನ್ ತಾ. ೨೯ನೇ ಶುಕ್ರವಾರ ದಿವಸ ಪಟ್ಟಪ್ರವೇಶ ಮಾಡಿಸಿ ಶ್ರೀ ಕೃಷ್ಣದರ್ಶನಾದಿಗಳನ್ನು ಮಾಡಿಸಿ ಶ್ರೀ ಅದಮಾರು ಶ್ರೀ ಪಾದಂಗಳವರ ಕಾಬೆಗೆ ಒಪ್ಪಿಸುವವರಾದರು. ಈ ಬಗ್ಗೆ ಇದರಿಂದ ಮೊದಲೆ ಋಗ್ವೇದ ಯಜುರ್ವೇದ ಅಧ್ಯಯನಗಳನ್ನೂ ಕೆಲವು ಶಾಸ್ತ್ರ ಗ್ರಂಥಗಳನ್ನೂ ಅಭ್ಯಸಿಸಿರುವ ಈ ಶ್ರೀ ಪಾದಂಗಳವರು ಪೂರ್ಣ ವಿದ್ಯಾವಂತರೂ ಶಮದಮನಾದಿ ಗುಣಗಳುಳ್ಳವರೂ ಆದಾರೆಂಬದಾಗಿಯೂ, ಅವರ ಸಂಸ್ಥಾನವು ಎಲ್ಲಾ ಭಾಗದಲ್ಲಿಯೂ ಅಭಿವೃದ್ಧಿಯಾಗುವದರಲ್ಲಿ ಸಂದೇಹವಿರದೆಂಬದಾಗಿಯೂ ನಿರೀಕ್ಷಿಸಲ್ಪಟ್ಟಿದೆ. ಇದೇ ಕಳದ ಮೇ ತಾ. ೨೫ರಲ್ಲು ಕಾಲವಾದ ಇವರ ಪೂರ್ವಾಧಿಕಾರಿಗಳಾಗಿದ್ದ ವಿದ್ಯಾನಾರಿಧಿ ತೀರ್ಥರ ಆರಾಧನೆಯು ಕಳದ ತಾ. ೩ನೇ ದಿವಸ ಬಹು ವಿಭವದಿಂದ ನಡೆಯಿತು. ಈ ತಾ. ೨ನೆ ಸೋಮವಾರ ದಿವಸ ಎಲ್ಲಾ ಶ್ರೀ ಪಾದಂಗಳವರಿಗೆ (ಪರ್ಯಾಯ ಸೋದೆ ಮತ್ತು ಸೀರೂರು ಶ್ರೀ ಪಾದಂಗಳವರು ವಿನಾ) ಪಾದಪೂಜೆಮಾಲಿಕೆ ಮಂಗಳಾರತಿ ಕಾಣಿಕೆಗಳು ನಡೆದವು. ಈ ವ್ಯವಸ್ಥೆಯಿಂದ ಪ್ರಾಯಶಃ ಮಹಾಜನರೆಲ್ಲರೂ ತೃಪ್ತರಾದರು.

ಮಂಗಳೂರು ತಾಲೂಕಿನ ಇನ್ನ ಗ್ರಾಮದಿಂದ:— ಈ ಪತ್ರಿಕೆಯಲ್ಲಿ ಕಳದ ಮಾರ್ಚ ತಾ. ೯ರಲ್ಲು ಪ್ರಕಟಿಸಿದ ಇನ್ನ ಗ್ರಾಮಸ್ಥರ ಹಾಲಹವಾಲಿಯನ್ನು ಮಿ ಕಲೆಕ್ಟರ್ ದೊರೆಗಳವರು ಪರಾಂಬರಿಸಿ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರ ಮುಖಾಂತರ ಕಾಲುದಾರಿ ಸಂಕದ ಎಸ್ಟಿಮೇಟಿನ ಬಗ್ಗೆ ಇಂಜನೀಯರ್ ಇಲಾಖೆಯವರನ್ನು ಕಳುಹಿಸಿದ ಪ್ರಕಾರ ಕಳದ ತಾ. ೩ನೇ ಮಂಗಳವಾರ ತನಿಖೆಗೆ ಬಂದಿರುವರು. ಆ ದಿವಸ ಮಳೆಯೂ ಸಾಧಾರಣವಿತ್ತು. ಅನೇಕ ಪ್ರಯಾಣಿಕರು ಅಡೆತಡೆ ಪಾರಾಗುವ ಕಷ್ಟವನ್ನು ಇಂಜನಿಯರರು ಪ್ರತ್ಯಕ್ಷ ನೋಡಿ ಅಳತೆಮಾಡಲು ಪಡೆದ ಕಷ್ಟವನ್ನು ಸ್ವತಃ ಅನುಭವಿಸಿ ಸಂಕ ಅಗತ್ಯವೆಂತ ಅಭಿಪ್ರಾಯಪಟ್ಟಿದ್ದರು. ಪಡೆಯ ಒಂದು ಕಡೆಯಲ್ಲಿ ಶಿಲೆಕಲ್ಲು ಸ್ವಾಭಾವಿಕವಾಗಿಯೇ ಇದೆ. ೪೦॥ ಫೀಟ್ ಅಗಲಬೇಕಾದ ಶಿಲೆಕಲ್ಲು ಒಂದು ಸಂಕ್ಷ ಫಾಸಲೆ ಒಳಗೆ ಉಂಟು— ಹೊಯ್ಗೆ ಬೇಕಷ್ಟು ಅಪರಲ್ಲೇ ಇದೆ. ಸಾಮಾನು ತರಲಿಕ್ಕೆ ಫ್ಲೂಲ್ಗಿಯಿಂದ ಇಲ್ಲಿ ಬುಡದವರೆಗೂ ದೋಣಿಗಳು ಬರುತ್ತವೆ. ಮತ್ತು ಕಾಲಮರಗಳು ಹತ್ತಿರದಲ್ಲೇ ಬೇಕಷ್ಟು ಸಿಕ್ಕುವವು. ಇತ್ಯಾದಿ ಅನುಭವವನ್ನು ಪಟೇಲ್ ಗ್ರಾಮಸ್ಥರೊಂದಿಗೆ ಬರಕೊಂಡು ಹೋಗಿದ್ದರು.

ಹೇಗೂ ಇದನ್ನು ನೆರವೇರಿಸಿಕೊಡಬೇಕಾಗಿ ಮಿ ಕಲೆಕ್ಟರ್ ದೊರೆಗಳವರನ್ನೂ ಪ್ರೆಸಿಡೆಂಟರವರನ್ನೂ ಈ ಗ್ರಾಮಸ್ಥರು ನಿರಂತರ ಪ್ರಾರ್ಥಿಸುತ್ತಿರುವರು.

ಈ ತಾಲೂಕು ಬೋರ್ಡಿನ ಉತ್ತರ ಪಾರ್ಶ್ವದಲ್ಲಿ ಅನೇಕ [illegible] ಮೈಲುಗಳ ಫಾಸಲೆಯಲ್ಲಿ ಒಂದು [illegible] ಇಲ್ಲ. ಗ್ರಾಮಸ್ಥರು [illegible] ಜನವರಿ ಮೊದಲುಗೊಂಡು ಪ್ರತಿವರ್ಷವೂ ಇಲಾಖೆಯವರಿಗೂ, ಸ್ಥಳೀಕ ಬೋರ್ಡು ಪ್ರೆಸಿಡೆಂಟರಿಗೂ ಒಂದೆರಡು ಮನವಿಯನ್ನು ಮಾಡುವರು. [illegible] ಆಗುವುದೆಂದೂ, ಪ್ರಕೃತ ಹಣವಿಲ್ಲವೆಂದೂ, [illegible] ದೆಂದೂ ಇಬ್ಬರು ಸಬ್-ಅಸಿಸ್ಟೆಂಟ್ ಇನ್ಸ್‌ಪೆಕ್ಟರವರೂ, ಇಬ್ಬರು ಅಸಿಸ್ಟೆಂಟ್ ಇನ್ಸ್‌ಪೆಕ್ಟರರೂ, ಇಬ್ಬರು ಪ್ರೆಸಿಡೆಂಟರವರೂ ಪ್ರತಿವರ್ಷವೂ ಆಗ್ಗಾಗ್ಗೆ [illegible] ದಯಪಾಲಿಸುವರು. ಈ ವರ್ಷದಿಂದಲೂ [illegible] ಇಲ್ಲ' ಎಂಬ ಗ್ರಾಮಸ್ಥರ ತಮ್ಮ ಅಭಿಪ್ರಾಯವನ್ನು [illegible] ಡಿಸಿ ಒಂದು ಬೋರ್ಡು [illegible] ಅಲ್ಲಿ [illegible] ತಮ್ಮ [illegible] ಒಮ್ಮೆ ಪ್ರಾರ್ಥಿಸುವರು. [illegible] ರುವರು.

ಈ ವರ್ಷದ [illegible], ಮಿ [illegible] ದೊರೆಗಳವರೂ ಮಿ [illegible] ಬೋರ್ಡು ಪ್ರೆಸಿಡೆಂಟರವರೂ, ಗ್ರಾಮದ [illegible] [illegible] ಬೋರ್ಡು ಪ್ರೆಸಿಡೆಂಟರವರೂ [illegible] ರೆಂದೂ [illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು.
೧ ಮಹರ್ಷಿಗಳಾದ ದಾದಾಭಾಯಿಗಳ ಮೃತ್ಯು . . . ೪
ಸ್ಫುಟವಿಚಾರಗಳು:—
೧ ಸಕ್ಕರೆ ಕೈಗಾರಿಕೆಗೆ ಇರುವ ಸಾಧ್ಯತೆಗಳು . . . ೪-೫
೨ [illegible] ಪ್ರಶ್ನೆಗಳ ಪ್ರತಿಬಂಧಕ್ಕೆ ಸ್ಟೇಟ್ ಸೆಕ್ರೆಟರಿಗಳ ಮನ್ನಣೆ . . . ,,
೩ ಪ್ರತಿಬಂಧಶೋಧಕ ಸಭೆಯ ವೃತ್ತಾಂತ ಪ್ರಕಟನೆಗೆ ಸಹ ಪಂಜಾಬಿನಲ್ಲಿ ಪ್ರತಿಬಂಧ . . . ,,
೪ ಅಂತರ್ಗತ ಸ್ವರಾಜ್ಯದ ಪ್ರಯತ್ನಗಳೂ ಮದ್ರಾಸಿನ ಕೆಲವು ಅವಿಚಾರಿ ಸುಧಾರಕರೂ . . . ,,
೫ 'ಮಂಗಲ'ದ ಜಮೀನುದಾರರ ಪ್ರಸಂಗದ ಗತ್ಯ . . . ,,
೬ ಮದ್ರಾಸು ಮತ್ತು ಮುಂಬಯಿ ಗವರ್ನರರುಗಳ ಕೆಲಸದ ಅವಧಿಯನ್ನು ಹೆಚ್ಚಿಸಿರುವರು. . . . ,,
ಸ್ಥಳೀಕ — ಮಂಗಳೂರು . . . ,,
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ . . . ೩
೨ ವಿದೇಶ ವೃತ್ತಾಂತ . . . ,,
೩ ಉತ್ತರ ಹಿಂದುಸ್ಥಾನ . . . ,,
೪ ದಕ್ಷಿಣ ಹಿಂದೂಸ್ಥಾನ . . . ,,
೫ ಟಪ್ಪಾಲಪತ್ರಗಳು: ಪುತ್ತೂರು, ಉಡುಪಿ, ಇನ್ನ ಗ್ರಾಮ . . . ,,
೬ ಮಹರ್ಷಿ ದಾದಾಭಾಯಿಯವರ ಮೃತ್ಯು . . . ೬
೭ ಸಾಲುಮರಗಳ ಗೋಳು . . . ,,
೮ ಕೊಳ್ಳಿಹಾಕ . . . ,,

ಸ್ವದೇಶಾಭಿಮಾನಿ.

ಶಕ ೧೮೩೯ ಆಷಾಢ ಬ. ೨ ಶುಕ್ರವಾರ.

ಮಹರ್ಷಿಗಳಾದ ದಾದಾಭಾಯಿಗಳ ಮೃತ್ಯು.

ಪರಮಪೂಜ್ಯರಾದ ದಾದಾಭಾಯಿಯವರು ಕಳೆದ ಶನಿವಾರ ಇಹಲೋಕವನ್ನು ಬಿಟ್ಟುಹೋದರೆಂಬ ಅತ್ಯಂತ ದುಃಖಕರವಾದ ವರ್ತಮಾನವು ಇಡೀ ಹಿಂದುಸ್ಥಾನದಲ್ಲಿ ಈಗ ತುಂಬಿಹೋಗಿದೆ. ಈಚೆಗೆ ಒಂದೆರಡು ವಾರಗಳಿಂದ ಅವರ ಪ್ರಕೃತಿಯು ಅಸ್ವಸ್ಥವಾಗಿದ್ದದರಿಂದ ಇಂಥ ದುರ್ವಾರ್ತೆಯು ಬೇಗನೆ ಬಂದೀತೆಂದು ಎಲ್ಲರಿಗೆ ಭಯವಿತ್ತು; ಮಾತ್ರವಲ್ಲ, ಅವರ ಮರಣದ ನಾಲ್ಕೈದು ದಿವಸಗಳ ಮುಂಚೆಯೇ "ದಾದಾಭಾಯಿಗಳು ಮೃತರಾದರೆಂಬ ಸುದ್ದಿಯು ಹಬ್ಬಿಹೋಗಿ ಕರಾಚಿ ಮೊದಲಾದ ಕಡೆಗಳಲ್ಲಿ ದುಃಖಪ್ರದರ್ಶಕ ಕೂಟಗಳು ಕೂಡ ನಡೆದುಹೋದವು! ದಾದಾಭಾಯಿಗಳಂಥ ಹಿಂದೀರಾಷ್ಟ್ರದ ಪಿತಾಮಹರ ವಿಷಯದಲ್ಲಿ ಇಂಥ ಪ್ರಕಾರಗಳು ನಡೆದದ್ದು ಶಾಕುಂತಲದಲ್ಲಿ "ಅತಿಸ್ನೇಹಃ ಪಾಪಶಂಕೀ" ಎಂದು ಹೇಳಿದಂತೆ ಅಸ್ವಾಭಾವಿಕವಲ್ಲ. ದಾದಾಭಾಯಿಗಳಿಗೆ ಪ್ರಾಪ್ತವಾದ "ಹಿಂದೀರಾಷ್ಟ್ರದ ಪಿತಾಮಹತ್ವ"ವಾಗಲಿ, ಮಹಾಪುರುಷತ್ವವಾಗಲಿ ಅಥವಾ ಮಹರ್ಷಿಪದವಾಗಲಿ ಅವರ ಜನ್ಮದಿಂದ ಬಂದದ್ದಲ್ಲ. ಅವರ ಉಜ್ವಲದೇಶಭಕ್ತಿ, ಅವಿರತಉದ್ಯೋಗ, ಉನ್ನತ ಧ್ಯೇಯ ಇವುಗಳಿಂದಲೇ ಇಡಿ ಹಿಂದುಸ್ಥಾನಕ್ಕೆ ಅವರು ಪೂಜನೀಯರಾದರು. ದಾದಾಭಾಯಿಗಳ ಜನ್ಮಕಥೆಯನ್ನು ನೋಡಿದರೆ ಅವರು ಈ ಸನ್ಮಾನ್ಯಪದವಿಯನ್ನು ಹೊಂದಿದ್ದು ಬಹು ಆಶ್ಚರ್ಯಕರವಾಗಿ ತೋರುವುದು. ಕಾರಣ, ಅವರು ಶ್ರೀಮಂತಕುಟುಂಬದಲ್ಲಿ ಜನಿಸಿದವರಲ್ಲ. ಮುಂಬಯಿಯೊಳಗಿನ ಪುರೋಹಿತವರ್ಗಕ್ಕೆ ಸೇರಿದ ಒಂದು ಬಡ ಪಾರ್ಸಿ ಕುಲದಲ್ಲಿ ೧೮೨೫ನೆಯ ಸಪ್ಟಂಬರತಿಂಗಳಲ್ಲಿ ಇವರ ಜನ್ಮವಾಯಿತು. ಇವರಿಗೆ ನಾಲ್ಕುವರ್ಷಗಳು ತುಂಬುವಷ್ಟರೊಳಗೆ ತಂದೆಯವರು ಮೃತಪಟ್ಟಕಾರಣ ಅವರ ಆರೈಕೆ, ವಿದ್ಯಾಭ್ಯಾಸ ಮೊದಲಾದ ಸಂಗತಿಗಳೆಲ್ಲವೂ ದಾದಾಭಾಯಿಗಳ ತಾಯಿಯವರಿಂದಲೇ ಆಗಬೇಕಾಯಿತು. ಸುಮಾರು ೮೦ ವರ್ಷಗಳ ಹಿಂದೆ ದೊರಕುತ್ತಿದ್ದ ವಿದ್ಯಾಭ್ಯಾಸವನ್ನು ಉತ್ತಮರೀತಿಯಿಂದ ಪಡೆದು ಅನಂತರ ದಾದಾಭಾಯಿಗಳು ಕೆಲಸಮಯ ಶಾಲಾಕಾಲೇಜುಗಳಲ್ಲಿ ಅಧ್ಯಾಪಕತನವನ್ನು ನಡಿಸಿಕೊಂಡಿದ್ದರು. ಆದರೆ ಯಾರಲ್ಲಿ ಸ್ವಯಂಪ್ರೇರಣೆಯೂ, ಅಸಾಮಾನ್ಯಸಾಮರ್ಥ್ಯವೂ, [illegible] ಕಲ್ಪಕತೆಯೂ ಇರುವವೋ ಅಂಥವನಿಗೆ ಸರಕಾರಿಹುದ್ದೆಯು ಕಾರ್ಯಕ್ಷೇತ್ರವಲ್ಲ. ಸೇವಾಧರ್ಮದಲ್ಲಿ ನಿಂತು ಅದರ ಬಲದಿಂದ ತಮ್ಮ ಉಚ್ಚ ಮತ್ತು ಸ್ವತಂತ್ರವಿಚಾರಗಳನ್ನು ಕುಗ್ಗಿಸಿಬಿಡುವವರ ವರ್ಗದಲ್ಲಿ ದಾದಾಭಾಯಿಗಳು ಸೇರಿದವರಲ್ಲದ್ದರಿಂದ ಅವರು ಈ ಶಿಕ್ಷಣಖಾತೆಯೊಳಗಿನ ದೊಡ್ಡ ಹುದ್ದೆಯನ್ನೂ ಹಾಗು ಮುಂದೆ ಲಭಿಸಿದ ಬಡೋದಾ ಸಂಸ್ಥಾನದ ಮಂತ್ರಿತ್ವವನ್ನೂ ಬಿಟ್ಟು ಸ್ವದೇಶಹಿತದಲ್ಲಿ ಇಳಿದರು. ಇವರು ಸೇವಾಧರ್ಮವನ್ನು ಕುರಿತು ಒಂದು ಕಡೆಯಲ್ಲಿ ಹೇಳುತ್ತಾರೇನೆಂದರೆ, "ಸರಕಾರಿಕೆಲಸವನ್ನು ಬಿಡುವದರಿಂದ ಉಂಟಾದಷ್ಟು ಲಾಭವು ನನಗೆ ಇನ್ನಾವದರಿಂದಲೂ ಆಗಲಿಲ್ಲ."

ದಾದಾಭಾಯಿಗಳು ಸ್ವತಂತ್ರರೀತಿಯಿಂದ ದೇಶಸೇವೆಯನ್ನು ಮಾಡಲು ನಿಶ್ಚಯಿಸಿದನಂತರ ಮೊದಲು ಸಮಾಜಸುಧಾರಣೆ, ಸಾಮಾಜಿಕ ಶಿಕ್ಷಣ ಮೊದಲಾದ ಸಂಗತಿಗಳನ್ನು ಕೈಕೊಂಡರು. ತರುವಾಯ ಸ್ಥಾನಿಕಸ್ವರಾಜ್ಯ, ರಾಷ್ಟ್ರೀಯಶಿಕ್ಷಣ ಇತ್ಯಾದಿ ವ್ಯಾಪಕವಿಷಯಗಳಲ್ಲಿ ಯಥಾಯೋಗ್ಯ ಪರಿಶ್ರಮವನ್ನು ಮಾಡಿ ಮುಂಬಯಿಯೊಳಗಿನ ತತ್ಕಾಲದ ಪ್ರಮುಖರಲ್ಲಿ ದಾದಾಭಾಯಿಗಳು ಖ್ಯಾತಿಗೊಂಡರು. ಇಷ್ಟು ಸಮಯದ ಅವರ ಪರಿಶ್ರಮವೂ ಮುಂಬಯಿಯ ಪ್ರಮುಖರ ಮಾಲಿಕೆಯಲ್ಲಿ ಉಂಟಾದ ಅವರಗಣನೆಯೂ ವಿಲಾಯತಿಗೆ ಪ್ರಯಾಣಬೆಳೆಸಲು ಅವರಿಗೆ ಸಹಾಯಕವಾದವು. ಅವರು ವಿಲಾಯತಿಗೆ ಹೋದದ್ದು ಒಂದು ವ್ಯಾಪಾರಕಂಪನಿಯ ಕೆಲಸದಮೇಲೆಯಾಗಿದ್ದರೂ ಅವರು ಅಲ್ಲಿಗೆ ಹೋಗಿ ಲಂಡನ್ ಇಂಡಿಯನ್ ಸೊಸೈಟಿ, ಈಸ್ಟ್ ಇಂಡಿಯನ್ ಎಸೋಸಿಯೇಶನ್ ಮೊದಲಾದ ಸಂಸ್ಥೆಗಳನ್ನು ಉರ್ಜಿತಪಡಿಸಿದರು, ಹಿಂದಿಗಳಿಗೆ ವರಿಷ್ಠತರಗತಿಯ ಸರಕಾರಿಕೆಲಸಗಳು ದೊರೆಯುವ ವಿಷಯದಲ್ಲಿ ಕೂಡಿದಷ್ಟು ಯತ್ನಿಸಿದರು, ಮತ್ತು ಶಿಕ್ಷಣಕ್ಕೋಸ್ಕರ ವಿಲಾಯತಿಗೆ ಹೋಗುವ ವಿದ್ಯಾರ್ಥಿಗಳ ಸೌಕರ್ಯವನ್ನು ಒದಗಿಸಿಕೊಟ್ಟರು. ಇಷ್ಟು ಮಹತ್ಕಾರ್ಯಗಳನ್ನು ಸಂಪಾದಿಸಿದ್ದಕ್ಕಾಗಿ ಮುಂಬಯಿಯ ನಾಗರಿಕರು ಅವರಿಗೆ ೧೮೬೯ರಲ್ಲಿ ಕೃತಜ್ಞತೆಯಿಂದ ಒಂದು ಮಾನಪತ್ರವನ್ನು ಸಮರ್ಪಿಸಿದರು.

ಸ್ವತಂತ್ರ ಮತ್ತು ಪಕ್ವವಿಚಾರದ ಮನುಷ್ಯನು ಒಮ್ಮೆ ದೇಶಸೇವೆಯ ಗಂಗೆಯಲ್ಲಿ ಇಳಿಯುವುದೇ ಅವಕಾಶ, ಅವನನ್ನು ಆ ಪ್ರವಾಹವು ಎಷ್ಟರವರೆಗೆ ಮುಂದೆಕೊಂಡುಹೋದೀತೆಂದು ಹೇಳಲು ಸಾಧ್ಯವಿಲ್ಲ. ಮಹರ್ಷಿದಾದಾಭಾಯಿಗಳ ಸ್ಥಿತಿಯೂ ಹೀಗೆಯೇ. ಸರಿ ಸಮಾಜಸುಧಾರಣೆ, ಶಿಕ್ಷಣ ಮೊದಲಾದ ವಿಷಯಗಳಲ್ಲಿ ಅವರ ಆಸಕ್ತಿ ಇತ್ತಾದರೂ ಅವರು ಹಿಂದುಸ್ಥಾನವು ದಿನೇದಿನೇ ಬಡಸ್ಥಿತಿಗೆ ಬರುತ್ತಿದೆ, ಇದು ಯಾಕೆ ಎಂಬ ಪ್ರಶ್ನವನ್ನು ಸೂಕ್ಷ್ಮದೃಷ್ಟಿಯಿಂದ ಅಭ್ಯಾಸಿಸಿದರು. ಈ ಅಭ್ಯಾಸದಿಂದ ಅವರು ಸ್ವತಂತ್ರವಾಗಿ ಹೊರಡಿಸಿದ ಸಿದ್ಧಾಂತಗಳು ಈಗ ಯಾರಿಂದಲೂ ಅಲ್ಲಗಳೆಯದ ಹಾಗಾಗಿವೆ. ಹಿಂದುಸ್ಥಾನದ ಮೇಲೆ ಪರಕೀಯ ರಾಜ್ಯವಿದ್ದರೂ ಅದು ಸ್ವರಾಜ್ಯದ ತತ್ವದಮೇಲೆ ನಡೆಯತಕ್ಕದ್ದು. ಹಿಂದುಸ್ಥಾನದ ಅಂತರ್ಗತಕಾರಭಾರವು ಹಿಂದಿಗಳ ಕೈಯಲ್ಲಿ ಒಪ್ಪಿಸುವದು ಹಿಂದುಸ್ಥಾನಕ್ಕೆ ಕ್ಷೇಮಕರವು ಹಾಗು ಬ್ರಿಟಿಷ ಸಾಮ್ರಾಜ್ಯದ ಕೇಂದ್ರಸ್ಥಾನವಾದ ಇಂಗ್ಲೇಂಡಕ್ಕೂ ಇಡಿ ಸಾಮ್ರಾಜ್ಯಕ್ಕೂ ಹಿತವಾದದ್ದು, ಎಂಬುದೇ ಅವರ ಸಿದ್ಧಾಂತವಿತ್ತು. ಅಲ್ಲದೆ ಬ್ರಿಟಿಷರ ನ್ಯಾಯಬುದ್ಧಿಯಮೇಲೆ ದಾದಾಭಾಯಿಗಳ ತುಂಬಾ ವಿಶ್ವಾಸವಿದ್ದದರಿಂದ ಅವರು ಸನದೀ ಚಳವಳಿ ಮುಖ್ಯ ಪುರಸ್ಕರ್ತರಾಗಿದ್ದರು. ಅದ್ದರಿಂದ ಅವರು ಬ್ರಿಟಿಷರ ನ್ಯಾಯಬುದ್ಧಿಯನ್ನು ಎಚ್ಚರಿಸುವುದಕ್ಕಾಗಿ ವಿಲಾಯತಿಯಲ್ಲಿಯ ಪಾರ್ಲಿಮೆಂಟಿನಲ್ಲಿ ತಮ್ಮ ಪ್ರವೇಶವನ್ನು ಪಡಕೊಂಡರು. ಅವರು ಕೆಲವು ವರ್ಷಗಳನ್ನು ವಿಲಾಯತಿಯಲ್ಲಿಯೇ ಕಳೆದು ಅಲ್ಲಿಯ ಜನರಲ್ಲಿ ಹಿಂದುಸ್ಥಾನದ ವಿಷಯದಲ್ಲಿ ಆದಷ್ಟು ಜಾಗ್ರತೆಯನ್ನೂ ಕನಿಕರವನ್ನೂ ಹುಟ್ಟಿಸಿ ಇಲ್ಲಿಯ ಆಡಳಿತೆಯ ದೋಷಗಳನ್ನು ಪರಿಹಾರಿಸಲು ಅನೇಕ ಕಮಿಷನುಗಳನ್ನೂ ಕಮಿಟಿಗಳನ್ನೂ ನೇಮಿಸುವಂಥ ಪ್ರಸಂಗಗಳನ್ನು ಬ್ರಿಟಿಷ್ ಮುತ್ಸದ್ದಿಗಳಿಗೆ ತಂದುಕೊಟ್ಟರು. ಕಮಿಷನುಗಳು ನೇಮಿಸೋಣಾದವು, ಕಮಿಟಿಗಳು ಬಂದು ಕೂತವು. ಅವುಗಳಲ್ಲಿ ಬೇಕಷ್ಟು ಸಾಕ್ಷಿಗಳಾಗಿ ಇಂಥಿಂಥ ದೋಷಗಳಿಂದ ಇಂಥಿಂಥ ಕೆಡುಕುಗಳು ಬರುತ್ತವೆಂದು ಬೈಲಿಗೆ ಬಂದೂಹೋಯಿತು. ಆದರೆ ದಾದಾಭಾಯಿಗಳ ಅಪೇಕ್ಷೆಯಂತೆ ರಾಜ್ಯಕಾರಭಾರದಲ್ಲಿ ಕಾರ್ಯರೂಪದಿಂದ ಸುಧಾರಣೆ ಮಾತ್ರ ಆಗಲಿಲ್ಲ! ನಾವು ಮೇಲೆ ತೋರಿಸಿಕೊಟ್ಟಂತೆ ದಾದಾಭಾಯಿಗಳು ಸನದಶೀರ ಚಳವಳದ ಖ್ಯಾತ ಪುರಸ್ಕರ್ತರೂ ಹಾಗೆಯೇ ತನ್ನ ಅನುಭವದಿಂದ ದೃಢವಾದ ಸಿದ್ಧಾಂತವನ್ನು ಮತ್ತು ತನ್ನ ಮನಸಾಕ್ಷಿಗೆ ಒಪ್ಪುವ ತತ್ವವನ್ನು ಯಾರ ದಾಕ್ಷಿಣ್ಯವಿಲ್ಲದೆ ಸ್ಪಷ್ಟವಾಗಿ ಹೇಳುವದರಲ್ಲಿ ಧೀರರಾಗಿದ್ದರು. ಈ ಗುಣಗಳಿಂದಲೇ ಅವರಿಗೆ ದೇಶಬಂಧುಗಳಿಂದಲೂ ರಾಜ್ಯಕರ್ತರಿಂದಲೂ ಬಹುಮಾನವು ದೊರಕುತ್ತಿತ್ತು. ಈ ದೇಶವು ಅವರನ್ನು ಎಷ್ಟು ಬಹುಮಾನಿಸುತ್ತಿತ್ತು ಎಂಬುದನ್ನು ನೋಡುವದಿದ್ದರೆ ಅವರಿಗೆ ಮೂರು ಸಾರೆ ಸಿಕ್ಕಿದ ರಾಷ್ಟ್ರಸಭೆಯ ಅಧ್ಯಕ್ಷಸ್ಥಾನವೇ ನಿದರ್ಶನವಾಗಿದೆ. ಮೂರುಸಾರಿ ಅವರು ಅಧ್ಯಕ್ಷಪದವನ್ನು ವಹಿಸಿ ಮಾಡಿದ ಭಾಷಣಗಳು ಉತ್ತರೋತ್ತರ ಅನುಭವ ಪೂರ್ಣವಾಗಿದ್ದವು. ದಾದಾಭಾಯಿಗಳು ಮೊದಲನೆಯಸಾರಿ ಮಾಡಿದ ಭಾಷಣದಲ್ಲಿ ಬ್ರಿಟಿಷ್ ಜನತೆಯ ಔದಾರ್ಯ, ನ್ಯಾಯಪ್ರಿಯತೆ ಇವುಗಳನ್ನು ಕೊಂಡಾಡಿದರು. ಎರಡನೆಯಸಾರೆ ಲಾಹೋರಿನ ಭಾಷಣದಲ್ಲಿ ಅವರ ವಿಶ್ವಾಸಬುದ್ಧಿಯು ಕೊಂಚ ಇಳಿತಕ್ಕೆ ಬಂತು. ಪುನಃ ಕಲ್ಕತ್ತೆಯಲ್ಲಿ ರಾಷ್ಟ್ರೀಯಸಭೆಯು ನೆರೆದು ಅದರ ಅಧ್ಯಕ್ಷಸ್ಥಾನವನ್ನು ಇವರು ಅಲಂಕರಿಸಿದಾಗಂತೂ "ನಾನು ನಿರಾಶೆಯ ಪ್ರಸಂಗಗಳನ್ನು ಎಷ್ಟು ತಾಳಿದ್ದೇನೆಂಬುದು ಹೇಳಿ ಪ್ರಯೋಜನವಿಲ್ಲ. ನನ್ನ ಬದಲು ಬೇರೆಯವನಿಗೆ ಇಂಥಾ ನಿರಾಶೆಯ ಪ್ರಸಂಗಗಳು ಬರುತ್ತಿದ್ದರೆ ಅವನ ಎದೆಯು ಒಡೆದುಹೋಗಿ ಅವನು ಆ ಭರದಲ್ಲಿ ಏನೇನೂ ಮಾಡುತ್ತಿದ್ದನು." ಎಂಬದಾಗಿ ಉದ್ಗರಿಸಿದರು.

ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ದಾದಾಭಾಯಿಗಳ ದೆಸೆಯಿಂದ ಕಲ್ಕತ್ತೆಯ ಈ ಅಧಿವೇಶನವು ಸುಪ್ರಸಿದ್ಧವಾಗಿದೆ. ೧೯೦೬ನೆ ಇಸವಿ ಎಂದರೆ ಕರ್ಜನ ದೊರೆಗಳ ಆಳಿಕೆಯ ಯೌವನದ ಅನುಭವವು ಜನಗಳಿಗೆ ಬಂದ ಸಮಯವು. ಸುಪ್ರಸಿದ್ಧವಾದ ವಂಗಭಂಗವಾಗಿ ಹೋದ್ದರಿಂದ ಕಲಕತ್ತೆಯಲ್ಲಿ [illegible] ರಾಷ್ಟ್ರೀಯ ಸಭೆಯು [illegible] ಅದರ ಅಧ್ಯಕ್ಷಸ್ಥಾನವು ವೃದ್ಧ ಪಿತಾಮಹರಾದ ದಾದಾಭಾಯಿಗಳ ಕೈಗೆ ಬಂತು. ಅವರು ತಮ್ಮ ಹಿಂದಿನ ಅನುಭವದಿಂದ ಗ್ರಥಿಸಿದಂಥ ಒಂದೆ ಸಿದ್ಧಾಂತವನ್ನು ಹಿಂದಿ ಪುತ್ರರಿಗೆ ಶ್ರುತಪಡಿಸಿದರು. ಸಹಸ್ರಮುಖಿಯಾಗಿ ಪೇಳುವಂಥ ಈ ಪವಿತ್ರ ಗಂಗೆಯ ತಟಾಕದಲ್ಲಿ ನಿಂತು ರಾಷ್ಟ್ರೀಯ ಸಭೆಯ ವ್ಯಾಸಪೀಠದಿಂದ ಇದೆ ದಾದಾಭಾಯಿಗಳು ಅಂತರ್ಗತ ಸ್ವರಾಜ್ಯದ ಮಹಾಮಂತ್ರವನ್ನು ಉಪದೇಶಿಸಿದರು; ಬಿರೊಕ್ರಸಿಯನ್ನು ಸಂತೋಷಪಡಿಸುವ ಎಲ್ಲ ವಿಧಾನಗಳನ್ನು ತಾನು ಮಾಡಿ ಆಯಿತು. ಆದರೂ ಒಂದಕ್ಕೂ ಫಲವು ಬರಲಿಲ್ಲ ಎಂಬುದಾಗಿಯೂ ಅದಿ ತೋರಿಸಿದರು. ದಾದಾಭಾಯಿಗಳ ಚಳುವಳಿಕೆಯ ಚರಿತ್ರವನ್ನು ನಿರೀಕ್ಷಿಸುವವರಿಗೆ ಅವರ ಸಾರ್ವಜನಿಕ ಕರ್ತವ್ಯವು ಇಲ್ಲಿಗೆ ಮುಗಿಯಿತೆಂದು ತೋರಿದರೂ ಅವರು ಮಧ್ಯಮಧ್ಯದಲ್ಲಿ ತನ್ನ ಜನ್ಮದಿವಸದ ಸಂದರ್ಭದಲ್ಲಿ ಒಂದೊಂದು ಸಂದೇಶವನ್ನು ಭಾರತೀಯರಿಗೆ ಕಳುಹಿಸುತ್ತಿದ್ದರು. ವಸ್ತುತಃ ವಿಚಾರಮಾಡಿದರೆ ದಾದಾಭಾಯಿಗಳಂಥ ಮಹಾಪುರುಷರು ದೇಶಕ್ಕೋಸ್ಕರ ಆಮರಣ ನಿಷ್ಕಾಮಕರ್ಮವನ್ನು ಮಾಡತಕ್ಕದ್ದು ಬಹು ನಿಜವಾದ ಮಾತಾದರೂ ಅವರು ತಮ್ಮ [illegible] ದೇಹವು ಬಿದ್ದು ಹೋಗುವವರೆಗೆ ಮಾಡಬೇಕಾದ ಮಾತ್ರವಲ್ಲ, ಅನಂತರವೂ ಬೇರೆಯವರು ಮಾಡಿದರೂ ಅದರಿಂದ ತಾದೃಶ ಫಲವುಂಟಾಗದು ಇಂಥ ಮಹತ್ವದ ಕಾರ್ಯವನ್ನು ಅವರು ಇತ್ತಲಾಗಿನ ವಾನಪ್ರಸ್ಥಾಶ್ರಮದ ಪೂರ್ವದಲ್ಲಿ ಮಾಡಿದ್ದದರಿಂದ ಈಚೆಗೆ ೧೦-೧೨ ವರ್ಷಗಳಲ್ಲಿ ಅವರ ವಿಶ್ರಾಂತಿಯು ದೇಶಕ್ಕೆ ಸ್ಪೃಹಣೀಯವಾದ್ದಿತ್ತು. ಇವರು ಮಾಡಿದ ಕಾರ್ಯವನ್ನು ಸಂಕ್ಷೇಪದಿಂದ ಹೇಳುವುದಾದರೆ ಯಾವುದೊ ಒಂದು ಶಕ್ತಿಯಿಂದ ಮೋಹಮಯ ನಿದ್ರೆಯ ಸ್ವಾಧೀನವಾಗಿ ಹೋದ ಈ ದೇಶವನ್ನು ಅವರು ಆ ತಮ್ಮ ಅಸಾಮಾನ್ಯ ಬುದ್ಧಿಬಲದಿಂದಲೂ, ಉಜ್ವಲ ದೇಶಭಕ್ತಿಯಿಂದಲೂ, ಅವಿಶ್ರಾಂತ ಪರಿಶ್ರಮದಿಂದಲೂ ಕಾರ್ಯಕ್ಷಮವನ್ನಾಗಿ ಮಾಡಿಬಿಟ್ಟರು. ಇದೇ ಕಾರಣದಿಂದ ಅವರು ಈ ಹೊತ್ತು ಮಹಾಪುರುಷರಾದರು, ಮಹಾತ್ಮರಾದರು, ಹಿಂದೂಸ್ಥಾನದ ಪಿತಾಮಹರಾದರು. ಮಹರ್ಷಿ ಪದವನ್ನು ಅಲಂಕರಿಸಿದರು. ದಾದಾಭಾಯಿಗಳ ದೇಶಸೇವೆಯಿಂದ ದೇಶವು ಕೃತಜ್ಞವಾಗಿ ಅವರನ್ನು ಅಧ್ಯಕ್ಷತ್ವದ ಮಾನಕೊಟ್ಟು ವಂದಿಸಿದ್ದಂತೆ ಸರಕಾರದ ಯುನಿವರ್ಸಿಟಿಯು ಅವರಿಗೆ ಎಲ್. ಎಲ್. ಡಿ ಎಂಬ ಪದವಿಯನ್ನು ಕೊಟ್ಟು ಅವರನ್ನು ಮನ್ನಿಸಿತು. ಇದು ಹಿಂದೂಸ್ಥಾನದಲ್ಲಿ ಅಪ್ರತಿಮವಾದ ಉದಾಹರಣವು. ಇಷ್ಟೆ ಅಲ್ಲ, ದಾದಾಭಾಯಿಗಳ ಚರಿತ್ರದಷ್ಟು ಗಂಭೀರ ಮತ್ತು ಉತ್ಸಾಹಕರವಾದ ಜೀವನವು ಬೇರೆ ಕಡೆಗಳಲ್ಲೂ ದುರ್ಲಭವೆ ಎನ್ನಬಹುದು. ಡಾ. ದಾದಾಭಾಯಿಗಳ ಚರಿತ್ರವನ್ನು ಸ್ಥೂಲ ದೃಷ್ಟಿಯಿಂದಲೆ ನಿರೀಕ್ಷಿಸಿದರೂ ಅವರಂಥ ಅಪ್ರತಿಮ ದೇಶಭಕ್ತರು ಸದ್ಯಃಕಾಲದ ಹಿಂದುಸ್ಥಾನದಲ್ಲಿ ಇನ್ನಾರು ಆಗಲಿಲ್ಲೆನ್ನಲು ಸಂಕೋಚ ತೋರುವದಿಲ್ಲ. ಇಂಥ ಮಹಾಪುರುಷರು ಮೃತರಾಗುವುದು ದೇಶದ ಮಹಾ ಹಾನಿಯೆ ಸರಿ. ಇಂಥವರು ಇನ್ನೂ ನಾಲ್ಕೆಂಟು ವರ್ಷಗಳತನಕ ಬದುಕಿ ಅವರ ಜನ್ಮದಿನ ಮಹೋತ್ಸವವನ್ನು ನೆರವೇರಿಸುತ್ತಿರುವ ಆಕಾಂಕ್ಷೆಯನ್ನು ದೇಶಭಕ್ತರು ಕಟ್ಟಿಕೊಂಡಿದ್ದರೆ ಅದು ಕೇವಲ ಉಚಿತವೆ. ಈ ದೃಷ್ಟಿಯಿಂದ ದಾದಾಭಾಯಿಗಳು ೯೧ ವರ್ಷಗಳನ್ನು ದಾಟಿದರೂ ಇನ್ನೂ ಬದುಕಿ ಅವರು ಉಚ್ಚರಿಸಿದ ಸ್ವರಾಜ್ಯದ ಕೆಲವು ಹೆಚ್ಚಿನ ಭಾಗಗಳು ಹಿಂದಿರಾಷ್ಟ್ರದ ಸೆರಗಿನಲ್ಲಿ ಬಿದ್ದಿದ್ದನ್ನು ನೋಡಿ ಸಂತೋಷಪಡಬೇಕಿತ್ತೆಂದು ನಾವು ಎಷ್ಟು ಹಾರೈಸಿಕೊಂಡಿದ್ದರೂ ಕಾಲನಿಯಮವು ಅನುಲಂಘ್ಯವಾದ್ದರಿಂದ ದಾದಾಭಾಯಿಗಳಿಗೆ ಈ ಮೃತ್ಯುದೇಹವನ್ನು ಬಿಟ್ಟುಹೋಗಬೇಕಾಯಿತು. ಉಪಾಯವಿಲ್ಲ. ದಾದಾಭಾಯಿಗಳು ಹೋದರು. ಅದೆ ಹಾದಿಗೆ ಇಂದು, ಅಲ್ಲ, ನಾಳೆಯಾದರೂ ನಾವು ಹೋಗಬೇಕಾದ್ದೆ. ಆದರೆ ಅವರು ಆರಂಭಿಸಿದ ಕಾರ್ಯವು ನಮ್ಮೆದುರು ಉಂಟು, ನಮಗಾಗಿ ಉಂಟು, ನಮ್ಮಿಂದಾಗತಕ್ಕದ್ದನ್ನು ನಾವೆಲ್ಲ ದೇಶಬಂಧುಗಳು ಕೂಡಿ ಅದನ್ನು ಸಾಧಿಸೋಣ ಮತ್ತು ಅವರ ಆತ್ಮಕ್ಕೆ ಪರಲೋಕದಲ್ಲಿ ಶಾಂತಿ ಲಭಿಸಲೆಂದು ಚಿಂತಿಸೋಣ.

ಸ್ಫುಟವಿಚಾರಗಳು.

೧. ಪರದೇಶದಿಂದ ಇಲ್ಲಿಗೆ ಬರುವ ಸಕ್ಕರೆಯು ದಿನೇ ದಿನೇ ಕಡಿಮೆಯಾಗಿ ಇಲ್ಲಿಯೆ ಸಕ್ಕರೆಯು ಹೆಚ್ಚಿನ ಪ್ರಮಾಣದಿಂದ ಮಾಡಲ್ಪಡತಕ್ಕದ್ದೆಂಬ ಉದ್ದೇಶಕ್ಕೆ ಹಿಂದುಸ್ಥಾನದ ಕೋಶಮಂತ್ರಿಗಳಾದ ಸರ್ ವಿಲ್ಯಂ ಮೆಯರ್ ಇವರು ೧೯೧೭-೧೮ನೆಯ ವರ್ಷದ ಜಮಾ ಖರ್ಚಿನಲ್ಲಿ ಪರದೇಶದಿಂದ ಬರುವ ಸಕ್ಕರೆಯ ಮೇಲಿನ ಕರವನ್ನು ಸೇಕಡಾ ೫ ಇದ್ದದ್ದು ೧೦ ಮಾಡಿದ್ದರಿಂದ ಸಹಾಯವು ದೊರಕಿತು. ಇದರ ಸುಪರಿಣಾಮವು ಕಳೆದ ೧ ವರ್ಷದೊಳಗೆ ಕಂಡುಬರುವದು ಅಸಾಧ್ಯವು. ಹಿಂದುಸ್ಥಾನದಲ್ಲಿ ಬೇರೆ ಕಡೆಗಳಿಂದ ಬಹಳ ಸಕ್ಕರೆ ಬರುವುದು. ಈ ದೇಶದಲ್ಲಿ ಸಕ್ಕರೆಯ ಖರ್ಚು ಧಾರಾಳವಾಗಿರುವಾಗಲೂ ಮತ್ತು ಬೇರೆ ಎಲ್ಲಾ ದೇಶಗಳಿಗಿಂತ ಇಲ್ಲಿ ಕಬ್ಬಿನ ಬೆಳೆಯು ಹೆಚ್ಚಿದ್ದುದರಿಂದಲೂ ನಮಗೆ ಬೇಕಾದ ಸಕ್ಕರೆಯ ಪೂರವಣೆಯು ಕೂಡಾ ಇಲ್ಲಿಂದಲೇ ಆಗುವದು ಯುಕ್ತವಿತ್ತು. ಆದರೆ ಖೇದದ ಮಾತೇನೆಂದರೆ ಜಾವಾ ಮೊದಲಾದ ಕಡೆಗಳಿಂದಲೆ ನಾವು ಸಕ್ಕರೆಯನ್ನು ತರಿಸಿಕೊಳ್ಳಬೇಕಾಗಿದೆ. ನಮ್ಮಲ್ಲಿ ಕಬ್ಬು ಬೆಳೆಸುವ ಜಾಗೆಯ ಪ್ರಮಾಣವು ಅಧಿಕವಾಗಿದ್ದರೂ ಜಾವಾ ಮೊದಲಾದ ಕಡೆಗಳಲ್ಲಿ ಕಡಿಮೆ ಸ್ಥಳದಲ್ಲಿ ಕಬ್ಬು ಹೆಚ್ಚು ಬೆಳೆಯುವದು; ಮತ್ತು ಇಲ್ಲಿಗಿಂತ ಕಬ್ಬುಗಳಿಂದ ಸಕ್ಕರೆ ತಯಾರಾಗುವ ಪ್ರಮಾಣವು ಕೂಡಾ ಅಲ್ಲಿ ಹೆಚ್ಚಿರುವದು. ನಮ್ಮ ಮದ್ರಾಸ ಪ್ರಾಂತದಲ್ಲಿ ಕಬ್ಬು ಬೇಕಷ್ಟು ಬೆಳೆಯುತ್ತದೆ, ಬೆಲ್ಲವು ತಯಾರಾಗುತ್ತದೆ ಮತ್ತು ಸ್ವಲ್ಪ ಸಕ್ಕರೆಯೂ ಆಗುತ್ತದೆ. ಆದರೆ ಇದೆಲ್ಲ ಪ್ರಾಯಶಃ ಹೊರಗೆ ಹೋಗುತ್ತದೆ. ಇಲ್ಲಿ ಸಕ್ಕರೆಯನ್ನು ಶುದ್ಧ ಮಾಡುವ ಯಂತ್ರಗಳ ಅನುಕೂಲತೆ ಕಡಿಮೆ ಇದ್ದದರಿಂದ ಅದರ ಪೈರವಣಿಯಾಗುವದಿಲ್ಲ. ಇನ್ನೊಂದು ಸಂಗತಿಯೇನೆಂದರೆ ಕಬ್ಬಿನ ಬೆಳೆಯು ಕೂಡಾ ಸಮೃದ್ಧರೀತಿಯಲ್ಲಿಯೂ ಲಾಭಕರವಾಗುವಂತೆಯೂ ವರ್ಧಿಸುವ ಹಾಗೆ ಯತ್ನಿಸಬೇಕು. ಈ ಸಂದರ್ಭದಲ್ಲಿ ನಮ್ಮ ದಕ್ಷಿಣ ಕನ್ನಡದ ಬೇಸಾಯ ಬಂಧುಗಳಿಗೆ ಸೂಚನೆಯು ಒಂದೆರಡು ಮಾತುಗಳನ್ನು ಹೇಳಿದರೆ ಅವು ವ್ಯರ್ಥವಾಗಲಾರವು. ಇಲ್ಲಿ ಕಬ್ಬಿನ ಬೆಳೆಯಾಗಲಿ ಬೆಲ್ಲವಾಗಲಿ ಸಾಕಷ್ಟು ಆಗುವಾಗ ಅದರಿಂದ ಸಕ್ಕರೆಯನ್ನು ಕೂಡಾ ಯಾಕೆ ಮಾಡಕೂಡದೆಂದು ಗೊತ್ತಾಗದು. ದೇಶಹಿತೈಷಿಗಳೆನ್ನಿಸಿಕೊಳ್ಳುವವರು ಶುಷ್ಕವಾದ ರಾಜಕಾರಣದಲ್ಲಿ ತಲೆ ಹಾಕುವಾಗಲೇ ಸ್ಥಳೀಯ ಉದ್ಯೋಗಗಳ ವ್ಯವಸಾಯದಲ್ಲಿ ಮನಸ್ಸು ಹಾಕಿದರೆ ಬಹಳ ಒಳ್ಳೆದಾಗುವದು.

೨. ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಗಳು ಹೌಸ್ ಆಫ್ ಕಾಮನ್ಸಿನಲ್ಲಿ ಎಂದರೆ ಲೋಕಸಭೆಯಲ್ಲಿ ಮದ್ರಾಸಿನ ಪ್ರತಿನಿಧಿಗಳ [illegible]

ಕುರಿತು ಉತ್ತರ ಕೊಡುವಾಗ ಮದ್ರಾಸ ಸರಕಾರವು ಮಾಡಿದ್ದು ಆವಶ್ಯಕವಾದ ಸಂಗತಿಯಾಗಿತ್ತೆಂದು ಹೇಳಿದ್ದರಷ್ಟೆ. ಪುನಃ ಕಳೆದ ವಾರದಲ್ಲಿ ಅವರು ಪ್ರಸಿದ್ಧಮಾಡಿದ್ದಾರೇನೆಂದರೆ, "ಈ ಪ್ರತಿಬಂಧಗಳು ತನಗೆ ಕೇಳಿ ಆದದ್ದಲ್ಲ; ಆದರೂ ಅವು ತನಗೆ ಮಾನ್ಯವಿವೆ." ಸ್ಟೇಟ್ ಸೆಕ್ರೆಟರಿಗಳನ್ನು ಕೇಳಿಯೇ ಮಾಡಿದರೇನು, ಕೇಳದೆ ಮಾಡಿದರೇನು, ಅವರಿಗೆ ಆ ಪ್ರತಿಬಂಧಗಳು ಮಾನ್ಯವಿವೆಂಬುದೆ ಮುಖ್ಯವಾದ ಸಂಗತಿಯು. ಇಷ್ಟು ಮಾತ್ರವಲ್ಲ, "ಮಿಸೆಸ್ ಬಿಝೆಂಟರು ಹಿಂದುಸ್ಥಾನಕ್ಕೆ ಅನರ್ಥಾವಹವಾದ ಭಯಂಕರ ರಾಜಕೀಯ ಚಳವಳದಲ್ಲಿ ತೊಡಗಿದ್ದರು" ಎಂಬುದಾಗಿ ಮಿ॥ ಚೆಂಬರಲೇನರು ಒತ್ತಿಹೇಳಿದರು! ಆದರೆ ಚೆಂಬರಲೇನರು ಬಿಝೆಂಟರ ಇಂಥಿಂಥ ಚಳವಳಗಳು "ಅನರ್ಥಾವಹ ಮತ್ತು ಭಯಂಕರ" ವಾದವುಗಳೆಂದು ಸ್ಪಷ್ಟವಾಗಿ ನಿರ್ದೇಶಿಸಿ ಹೇಳಿದ್ದಾದರೆ ಬಹಳ ಒಳ್ಳೆದಾಗುತ್ತಿತ್ತು. ಬಿಝೆಂಟರು ನಿರ್ದೋಷಿಗಳು, ಅವರ ಚಳವಳವು ಸನದುಶೀರ ಮತ್ತು ಕಾಯಿದೆಶೀರ ಆಗಿದೆ ಎಂದು ಒಂದು ಕಡೆಯಲ್ಲಿ ಪ್ರಜೆಗಳು ಹೇಳೋಣ, ಇನ್ನೊಂದು ಕಡೆಯಲ್ಲಿ ಸರಕಾರಿ ಅಧಿಕಾರಿಗಳು ಅವರು "ಭಯಂಕರವಾದ ಚಳವಳವನ್ನು ಎಬ್ಬಿಸುತ್ತಾರೆಂದು ಸುಮ್ಮನೆ ಹೇಳೋಣ ಎಂದಮೇಲೆ ಇದು ಯಾವಾಗಲೂ ಮುಗಿಯತಕ್ಕ ವಾದವಲ್ಲ. "ಬಿಝೆಂಟರು ಹಾಗು ನೀವು ಹೋಮ್‌ರೂಲ್ ಬೇಡುವಿರಿ. ಇದೆ "ಭಯಂಕರ" ಮತ್ತು "ಅನರ್ಥಾವಹ"ವಾದ್ದು" ಎಂದು ಅಧಿಕಾರಿಗಳು ಸ್ಫುಟವಾಗಿ ಹೇಳಿಬಿಟ್ಟರೆ ಅಧರಷ್ಟು ಒಳ್ಳೆ, ಉತ್ತರವು ಇನ್ನು ಯಾವದೂ ಇಲ್ಲ.

೩. ಮದ್ರಾಸಿನ ಪ್ರತಿಬಂಧದ ವಿಷಯದಲ್ಲಿ ಈಗ ಎರಡು ಮೂರು ವಾರಗಳಿಂದ ಇಡಿ ಹಿಂದುಸ್ಥಾನದೊಳಗಿನ ಸಾಮಾನ್ಯ ಎಲ್ಲ ಪಟ್ಟಣಗಳಲ್ಲಿ ನಿಷೇಧಪ್ರದರ್ಶನ ಸಭೆಗಳು ಕೂಡುತ್ತವಷ್ಟೆ. ಆ ಸಭೆಗಳ ವೃತ್ತಾಂತವು ವರ್ತಮಾನ ಪತ್ರಿಕೆಗಳಲ್ಲಿ ಒಂದುಕ್ರಮ! ಇದೇ ಕ್ರಮದಂತೆ ಪಂಜಾಬದ ಪತ್ರಿಕೆಗಳಲ್ಲಿಯೂ ಸಭೆಗಳ ವೃತ್ತಾಂತವು ಬರುತ್ತಿತ್ತು. ಆದರೆ ಕಳೆದ ತಿಂಗಳ ತಾ. ೨೬ನೆಯ ದಿವಸ ಪಂಜಾಬ ಸರಕಾರವು 'ಇಂಥಾದ್ದೊಂದು ಸಭೆಯು ಎಂದರೆ ಮದ್ರಾಸ ಪ್ರತಿಬಂಧಗಳ ನಿಷೇಧಕ ಸಭೆಯ ಸುದ್ದಿಯು ಪತ್ರಿಕೆಗಳಲ್ಲಿ ಪ್ರಕಟಿಸಕೂಡದು' ಎಂದು ಒಂದು ಹುಕುಮು ಕೊಟ್ಟಿದೆ. ಬೇರೆ ಪ್ರಾಂತಿಕ ಸರಕಾರಗಳು ಇಷ್ಟರವರೆಗೆ ಇಂಥ ಹುಕುಮನ್ನು ಕೊಡಲಿಲ್ಲ. ಇದಾದರೂ ಒಂದು ಸುದೈವವೆ. ಇಂಥ ಸಭೆಗಳಲ್ಲಿಯ ಭಾಷಣಗಳಾಗಲಿ, ಠರಾವುಗಳಾಗಲಿ ಪ್ರಕಟಿಸಲ್ಪಡುವದರಿಂದ ಜನರಲ್ಲಿ ಚಳವಳವು ಹುಬ್ಬುತ್ತ ಹೋಗುತ್ತದೆ, ಆದ್ದರಿಂದ ಪತ್ರಿಕೆಗಳಲ್ಲಿ ಅಂಥ ವೃತ್ತಾಂತಗಳೆ ಇರಕೂಡದೆಂದು ಅಧಿಕಾರಿಗಳಿಗೆ ತೋರುವದು ಸಹಜವು ಮತ್ತು ಇದು ಬುದ್ಧಿವಂತಿಕೆಯ ಲಕ್ಷಣವೂ ಹೌದು. ಆದರೆ ಇಂಥ ಪ್ರತಿಬಂಧಗಳನ್ನೆ ಮಾಡದೆ ಇದ್ದರೆ ನಿಜವಾಗಿ ಯಾವ ಚಳವಳಗಳೂ ಆಗುತ್ತಿದ್ದಿಲ್ಲ. ಇವನ್ನು ಆಲೋಚಿಸಿದರೆ ಪ್ರತಿಬಂಧಗಳನ್ನು ಮಾಡದೆ ಇರುವದೆ ಹೆಚ್ಚಿನ ಬುದ್ಧಿವಂತಿಕೆಯ ಲಕ್ಷಣವೆಂದು ಯಾರೂ ಹೇಳಬಹುದು. ಕಾರಣ, 'ಮೂಲಾಭಾವೇ ಕುತೋವೃಕ್ಷಃ' ಬುಡವನ್ನೆ ತೆಗೆದರೆ ಮರವೆಲ್ಲಿಯದು? ಎಂದು ಹೇಳಿದಹಾಗೆ ಪ್ರತಿಬಂಧಗಳನ್ನು ಮಾಡದಿದ್ದರೆ ಯಾವ ಸಭೆಗಳೂ ಆಗುತ್ತಿರಲಿಲ್ಲ.

೪. ಮಹಾಯುದ್ಧದ ಅವಾಂತರಗಳು ಯುರೋಪದಲ್ಲೂ ಈ ದೇಶದಲ್ಲೂ ಅನೇಕ ವಿಧದಿಂದಾಗುತ್ತಿವೆ. ಈ ಅವಾಂತರಗಳ ವಿಷಯವನ್ನು ವಿಸ್ತಾರದಿಂದ ಪ್ರಸ್ತಾಪಿಸಬೇಕಾದ ಅಗತ್ಯವಿಲ್ಲ. ಪೋಲಂಡದ ಸ್ವರಾಜ್ಯ, ರಶಿಯದ ಪ್ರಜಾಸತ್ತೆ ಹಾಗು ಐರ್ಲಂಡಿನ ಹೋಮ್‌ರೂಲ್ ಇಂಥ ಎರಡು ಮೂರು ಸಂಗತಿಗಳನ್ನು ಸ್ಮರಣಕ್ಕೆ ತಂದುಕೊಟ್ಟರೆ ಈ ಅವಾಂತರಗಳ ಸ್ವರೂಪವು ಕೊಂಚಮಟ್ಟಿಗೆ ಗೊತ್ತಾಗುತ್ತದೆ. ಈಗ ಇಡಿ ಲೋಕವೆ ಎಚ್ಚತ್ತಾಗಿದೆ. ಹಾಗೆಯೆ ಹಿಂದಿಗಳು ಸ್ವಲ್ಪ ಕಣ್ಣು ತೆರೆದು ಬ್ರಿಟಿಷ್ ಮುತ್ಸದಿಗಳ ಹತ್ತರ ತಮಗೂ ಅಂತರ್ಗತ ಸ್ವರಾಜ್ಯದನ್ನು ಕೊಡಿರಿ ಎಂದು ಬೇಡಿಕೊಳ್ಳುವ ಕಾಂಕ್ಷೆಯನ್ನು ತೋರಿಸಿಕೊಂಡರು. ಹಾರ್ಡಿಂಜ್ ಪ್ರಭುಗಳಂಥವರು ಆ ಆಕಾಂಕ್ಷೆಯನ್ನು ತಮ್ಮ ಉದಾರಭಾವದಿಂದ ಸ್ವಾಗತೀಕರಿಸಿದರು. ಇದೆಲ್ಲ ಪ್ರಕಾರವು ಸಾಹಜಿಕವಾಗಿಯೆ ಆಯಿತೆನ್ನೋಣ. ಪರಂತು ಈಚೆಗೆ ನಿರ್ಮಲವಾಗಿದ್ದ ಈ ವಾತಾವರಣವು ಅಧಿಕಾರಿಗಳ ಕ್ರೋಧಾಗ್ನಿಯ ಹೊಗೆಯಿಂದ ಕೊಂಚ ಮಲಿನವಾಗಹತ್ತಿದೆಂಬುದು ನಿಜ. ಇದಕ್ಕೆ ದೃಷ್ಟಾಂತಗಳನ್ನು ಕೊಡಬೇಕಾದ ಅಗತ್ಯವಿಲ್ಲ. ಇರಲಿ, ಮುಖ್ಯವಾಗಿ ಹೇಳುವದೇನೆಂದರೆ, ಯುದ್ಧದ ಅವಾಂತರದಲ್ಲಿ ಹೋಮ್‌ರೂಲು ಒಂದು. ಆ ಹೋಮ್‌ರೂಲಿನ ಅವಾಂತರದಲ್ಲಿ ಈಗ ಎಷ್ಟೊ ಸಂಗತಿಗಳು ನಡೆಯುತ್ತಿವೆ. ಮದ್ರಾಸ ಕಡೆಯ ಕೆಲವು ಜಮೀನದಾರರು ಕೂಡಿ ತಮಗೆ ಹೋಮ್-ರೂಲಿನ ಪ್ರಕೃತ ಚಳವಳವು ಇಷ್ಟವಿಲ್ಲೆಂದು ಹೇಳಲು ಮುಂದಬಂದಿದ್ದಾರೆ. ಮತ್ತು ಹಾಗೆಯೆ ಹೇಳುತ್ತಲಿದ್ದಾರೆ. ಈ ಅಭಿಪ್ರಾಯವು ಸ್ವತಃ ಜಮೀನದಾರರದೆ ಆಗಿರಲಿ, ಇಲ್ಲವೆ ಅನ್ಯರ ಪ್ರೇರಣೆಯಿಂದ ಅವರ ಬಾಯಿಗೆ ಈ ಮಾತು ಬಂದದ್ದಿರಲಿ, ಅದನ್ನು ಪರೀಕ್ಷಿಸುವದು ನಮಗೆ ಅಗತ್ಯವಿಲ್ಲ, ಮತ್ತು ಹಾಗೆ ಪರೀಕ್ಷಿಸುವದರಿಂದ ಲಭ್ಯಾಂಶವೂ ಇಲ್ಲ. ಆದರೆ ಒಂದು ಸಂಗತಿಯು ನಿರ್ವಿವಾದವಾದ್ದು. ಬ್ರಿಟಿಷರಂಥ ಸ್ವಾತಂತ್ರ್ಯ ಪ್ರಿಯ ಮತ್ತು ವಿಚಕ್ಷಣ ಗುರುಗಳ ಕೈಯಲ್ಲಿ ಸಾಧಾರಣ ನೂರು ವರ್ಷಗಳನ್ನು ಕಳೆದು ತರಬೇತು ಹೊಂದಿದ ಈ ಹಿಂದೀ ಜನಾಂಗದಲ್ಲಿ ಇನ್ನೂ ಹೋಮ್‌ರೂಲ್—ಅಂತರ್ಗತ ಸ್ವರಾಜ್ಯದ ಪ್ರಯತ್ನಗಳಿಗೆ ವಿರೋಧಿಗಳಾದಂಥ ಜಮೀನದಾರರು ಇರುವರಷ್ಟೆ! ಇಂಥ 'ಲಕ್ಷ್ಮೀಪುತ್ರ'ರು ಎಷ್ಟರ ವರೆಗೆ ನಮ್ಮ ದೇಶದಲ್ಲಿರುವರೊ ಅಷ್ಟರವರೆಗೆ ಸರಕಾರವು ನಮಗೆ ಸ್ವರಾಜ್ಯವನ್ನು ಕೊಟ್ಟರೂ ಫಲವಿಲ್ಲ! ಹೋಮ್‌ರೂಲಿಗೆ ವಿರೋಧಿಗಳಾಗಿ ನಿಂತ ಈ ಕೆಲವು ಜಮೀನದಾರರ ವಾದಗಳು ಯಾವವು, ಅವುಗಳಿಗೆ ಸರ್. ಸುಬ್ರಹ್ಮಣ್ಯ ಐಯರಂಥ ಸನ್ಮಾನ್ಯ ಮುಖಂಡರೂ, ವರಿಷ್ಠ ಕೌನ್ಸಿಲಿಗೆ ಜಮೀನದಾರರ ಕಡೆಯಿಂದ ಆರಿಸಲ್ಪಟ್ಟ ಮಾ॥ ರಂಗಸ್ವಾಮಿ ಐಯ್ಯಂಗಾರರಂಥ ಸಭಾಸದರೂ ಏನು ಉತ್ತರಕೊಟ್ಟಿದ್ದಾರೆ, ಮುಂತಾದ ಸಂಗತಿಗಳನ್ನು ಹೇಳುವದರಲ್ಲಿ ನಮಗನ್ನೊಂದು ಸಂತೋಷವಿಲ್ಲ. ಆದರೆ ಈಚೆಗೆ ಬಹಳ ಪ್ರಸಿದ್ಧಿಗೆ ಬಂದಿರುವ ಡಾ. ಟಿ. ಎಮ್. ನಾಯರರಿಗೆ ಮದ್ರಾಸ ಕಾರ್ಯನಿರ್ವಾಹಕ ಸಭೆಯ ನಾಲ್ಕನೆಯ ಮೆಂಬರರನ್ನಾಗಿ ಮಾಡಬೇಕೆಂದು ಬಂದಿರುವ ಸೂಚನೆಯನ್ನು ಪ್ರಕಟಿಸಲು ನಮಗೆ ಕುಂಬಾ ಸಂತೋಷವಿದೆ!

೫. ಹೋಮ್-ರೂಲಿಗೆ ವಿರೋಧಿಗಳಾದ ಜಮೀನದಾರರ ಮೇಲಿನ ಸಂಗತಿಯನ್ನು ಓದಿ ಎಲ್ಲ ಜಮೀನದಾರರು ಹೋಮ್-ರೂಲಿಗೆ ವಿರೋಧಿಗಳೆ ಇದ್ದಾರೆಂದು ವಾಚಕರು ತಿಳಿಯಬೇಕಾದ ಅಗತ್ಯವಿಲ್ಲ. 'ಮಂಗಲ'ದ ಜಮೀನದಾರರೂ ರಡ್ಡೀ ಪರಿಷತ್ತಿನ ಅಧ್ಯಕ್ಷರಾಗಿ ಭಾಷಣ ಮಾಡುವಾಗ ಹೇಳಿದ ತತ್ವಗಳು ಲಕ್ಷ್ಮೀ ಪುತ್ರರು ಮಾತ್ರವಲ್ಲ, ಎಲ್ಲ ಜಾತಿ ಸುಧಾರಕರು ಸಹ ಅವಶ್ಯವಾಗಿ ಮನನಮಾಡತಕ್ಕವುಗಳಾಗಿವೆ. "ಯುದ್ಧಾಂತ್ಯಕಾಲದಲ್ಲಿ ಹಿಂದುಸ್ಥಾನಕ್ಕೆ ಅದರ ಪೂರ್ವಸಂಸ್ಕೃತಿಗೂ, ಮಹತ್ವಕ್ಕೂ ಒಪ್ಪುವಂತೆ ಮತ್ತು ಈ ಸಾಮ್ರಾಜ್ಯದಲ್ಲಿ ಸ್ವಾಯತ್ತ ರಾಜ್ಯಭಾರವನ್ನು ನಡಿಸುವಂಥ ಬೇರೆ ದೇಶಗಳಿರುವಂತೆಯೆ ಅಧಿಕಾರವು ಸಿಗಬೇಕು. ಇದೆ ನಮ್ಮ ಹಿಂದಿಗಳ ಅಂತಿಮಧ್ಯೇಯವು. ಈ ಧ್ಯೇಯವನ್ನು ಕಣ್ಣೆದುರಿಟ್ಟುಕೊಂಡು ನಮ್ಮ ನಮ್ಮ ಜಾತಿ ಸುಧಾರಣೆಗಳನ್ನು ಮಾಡಬೇಕು. ಈ ಸುಧಾರಣೆಗಳು ಸಾಮಾಜಿಕ ಹಾಗು ಶಿಕ್ಷಣ ವಿಷಯವಾಗಿಯೆ ಇರಬೇಕು. ರಾಜಕೀಯ ವಿಷಯದಲ್ಲಿ ಆಯಾ ಜಾತಿಗಳಿಗೆ 'ಹಿಂದೀ ರಾಷ್ಟ್ರ ಸಭೆ' ಮತ್ತು ಅದರ ಛತ್ರದಲ್ಲಿ ಕೆಲಸ ಮಾಡುವ ಸಂಘಗಳೆ ಮಾರ್ಗದರ್ಶಕಗಳಾಗಿರಬೇಕು. ಈ ರೀತಿಯಿಂದ, ಈ ತತ್ವಕ್ಕನುಸಾರವಾಗಿ ಜಾತಿಸಂಘಗಳೂ, ಜಾತಿಸಂಸ್ಥೆಗಳೂ ಕೆಲಸಮಾಡ ಹತ್ತಿದರೆ ದೇಶದ ಧ್ಯೇಯವು ಬೇಗನೆ ಕೈಗೂಡುವದು." ಎಂದು ಮಂಗಲದ ಜಮೀನದಾರರ ತಾತ್ಪರ್ಯವು. ಇವರ ಈ ತಾತ್ಪರ್ಯವನ್ನು ನೋಡುವಾಗ ಬೇರೆ ಲಕ್ಷ್ಮೀ ಪುತ್ರರಂತೆ ಈ ಜಮೀನದಾರರ ದೃಷ್ಟಿಯು ಸಂಕುಚಿತವಾಗಿಲ್ಲ, ರಾಷ್ಟ್ರಕ್ಕೆ ಅವಶ್ಯಕವಾದ ಸಾಂಘಿಕ ಶಕ್ತಿಯ ಮಹತ್ವವು ಇವರ ಲಕ್ಷ್ಯದಲ್ಲಿ ಬಂದಿದೆ. ಎಂಬುದು ಸ್ಪಷ್ಟವಾಗುತ್ತದೆ. ಈ ತರದ ವಿಶಾಲಮನಸ್ಕರ ಸಂಖ್ಯೆಯು ಹೆಚ್ಚಾಗುತ್ತ ಹೋಗಬೇಕು, ಮಾತ್ರವಲ್ಲ, ಮೇಲೆ ಹೇಳಿದ ನಮೂನೆಯ ವಿಚಾರಗಳು ಇಲ್ಲದಂತಾಗಬೇಕು, ಈ ಸ್ವಹಸ್ತೇಯ ಸ್ಥಿತಿಯು ಈ ಹಿಂದೀ ದೇಶದಲ್ಲಿ ಇರುವ ತನಕ ನಮಗೆ ಸ್ವರಾಜ್ಯದ ಆಶೆಯು ಬೇಡ!

೬. ನಮ್ಮ ಮದ್ರಾಸ ಸಂಸ್ಥಾನದ ಗವರ್ನರರಾದ ಲಾ. ಪೆಂಟ್‌ಲಂಡರ ಆಳಿಕೆಯ ಅವಧಿಯು ಕ್ರಮದಂತೆ ಈಗ ಬೇಗನೆ ಮುಗಿಯುತ್ತದಷ್ಟೆ. ಆದರೆ ಸದ್ಯದಲ್ಲಿ ಊಟಕಮಂಡದಿಂದ ಹೊರಟ "ಜಾಹೀರಪತ್ರಕ"ದಿಂದ ತಿಳಿದುಬರುತ್ತದೇನೆಂದರೆ, 'ಪ್ರಕೃತ ಕಾಲದಲ್ಲಿ ಒದಗಿರುವ ಇಕ್ಕಟ್ಟಿನ ಧೆಸೆಯಿಂದ ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿಗಳು ಬಾದಶಹರ ಸಮ್ಮತಿಯನ್ನು ಪಡಕೊಂಡು ಮದ್ರಾಸ ಗವರ್ನರರ ಮತ್ತು ಮುಂಬಯಿಯ ಗವರ್ನರರಾದ ಲಾ. ವಿಲಿಂಗಡನರ ಸಮಯವನ್ನು ಹೆಚ್ಚಿಸಿದ್ದಾರೆ' 'ಪ್ರಕೃತಕಾಲದ ಇಕ್ಕಟ್ಟು' ಯಾವುದು ಎಂಬುದಾಗಿ ಒಂದುವೇಳೆ ಯಾರಿಗಾದರೂ ಸಂಶಯ ಬಂದೀತು. ಆದರೆ ಪ್ರಕೃತ ಕಾಲದ ಇಕ್ಕಟ್ಟು ಪ್ರಮಾಣದ ಬಗ್ಗೆಯಾಗಿದೆ ಎಂದು ಬಾತಮಿ ಕೊಡುವ ರೊಯ್ಟರನು ಆ ಸಂಶಯವನ್ನು ಪರಿಹರಿಸುವನು. ಈ ಯುದ್ಧಕಾಲದಲ್ಲಿ ಗವರ್ನರರಂಥ ವಿಶಿಷ್ಟ ತರಗತಿಯ ಅಧಿಕಾರಿಗಳು ಇಲ್ಲಿಂದ ಅಲ್ಲಿ ಹೋಗುವುದಾಗಲಿ ಅಥವಾ ಅಲ್ಲಿಂದ ಇಲ್ಲಿ ಬರುವುದಾಗಲಿ ಅಷ್ಟೊಂದು ಒಳ್ಳೆದಲ್ಲ. ಇನ್ನು ಸ್ವಲ್ಪ ಸಮಯ ಮಾತ್ರವಲ್ಲ, ಬರುವ ಐದೈದು ಹತ್ತು ವರ್ಷಗಳ ತನಕ ಈ ಪ್ರಭುದ್ವಯವು ಮುಂಬಯಿ ಮದ್ರಾಸ ಸಂಸ್ಥಾನಗಳನ್ನು ಆಳಿದರೂ ಯಾರೂ ಗುಣಗುಟ್ಟಲು ಅವಕಾಶವಿಲ್ಲ. ರಾಜ್ಯಕಾರಭಾರವು ಪ್ರಜಾಪ್ರತಿನಿಧಿಗಳ ಮತಕ್ಕೆ ಒಳಗಾಗಿದ್ದು ಇಂಥಿಂಥ ಅಧಿಕಾರಿಗಳನ್ನೆ ಬೇಡಿಕೊಳ್ಳುವ ಹಕ್ಕು ಎಷ್ಟರ ತನಕ ಪ್ರಜೆಗಳಿಗಿಲ್ಲವೊ ಅಷ್ಟರ ವರೆಗೆ ಲಾರ್ಡ ಹಾರ್ಡಿಂಜ್ ಕಾರಮ್ಯಾಯಿಕಲ್‌ರಂಥ ಸಕ್ರಿಯ ಸಹಾನುಭೂತಿಯುಳ್ಳ ಅಧಿಕಾರಿಗಳೆ ತಮ್ಮ ಪಾಲಿಗೆ ಒದಗಿಬರಲೆಂದು ಬಯಸುವುದು ತೀರಾ ತಪ್ಪಾಗಲಾರದು. ತಥಾಪಿ ಆಶಾವಾದಿಗಳಾದ ನಾವು ಈಗಿನ ಸ್ಥಿತಿಯಲ್ಲಿ ಒಂದು ಸಂಗತಿಯನ್ನು ಆಶಿಸುವುದು ಅನುಚಿತವಾಗಲಾರದು. ಯುದ್ಧದ ಅನಂತರ ನಮ್ಮ ಪಾಲಿಗೆ ಹೆಚ್ಚಿನ ಹಕ್ಕುಗಳೂ, ಅಧಿಕಾರಿಗಳೂ ಬಂದು 'ಅರಸರ ಪ್ರತಿನಿಧಿಗಳಾದ ಈ ಅಧಿಕಾರಿಗಳು ಪ್ರಜೆಗಳ ಪ್ರತಿನಿಧಿಗಳೂ ಆಗುವ ಸುಯೋಗವು ಒಂದಲ್ಲಿ ಲಾ. ಪೆಂಟ್‌ಲಂಡ್ ಮತ್ತು ಲಾ. ವಿಲಿಂಗ್ಡನರು ಸಂಸ್ಥಾನಾಧಿಪತಿಗಳಾಗಿ ಎಷ್ಟು ಸಮಯ ನಿಂತರೂ ಅವರಲ್ಲಿ ನಿಜವಾಗಿ ಏನೂ ಆಕ್ಷೇಪವಿಲ್ಲ.

ಸ್ಥಳಿಕ—ಮಂಗಳೂರು.

ಸಿವಿಲ್ ಅಸಿಸ್ಟಾಂಟ ಸರ್ಜನ್ ಮಾ॥ ರಾ॥ ಸಿ. ರಾಮಕಾಮತ್ ಎಮ್. ಬಿ. ಸಿ. ಯಮ್ ಇವರಿಗೆ ಕಾಸರಗೋಡಿನಿಂದ ಕಂಜೀವರಂ ಎಂಬಲ್ಲಿಗೆ ವರ್ಗವಾಯಿತು. ಅವರ ಬದಲಾಗಿ ಸಿವಿಲ್ ಅಸಿಸ್ಟಾಂಟ ಸರ್ಜನ್ ಮಿ॥ ಸಿ. ಕೆ. ಜೊಸೆಫ್ ಎಮ್. ಬಿ. ಸಿ. ಯಮ್. ಎಂಬವರು ಈ ಜಿಲ್ಲೆಗೆ ನೇಮಕವಾಗಿದ್ದಾರೆ.

ಮ॥ ರಾ॥ ರಾ॥ ಬಿ. ಸುಬ್ರಾಯ ಬಾಳಿಗಾ ಎಲ್. ಎಮ್. ಎಸ್. ಇವರಿಗೆ ಕಲ್ಲಿಕೋಟೆಯ ಮೆಡಿಕಲ್ ಸ್ಕೂಲಿನ ೩ನೆ ಉಪಾಧ್ಯಾಯರಾಗಿ ನೇಮಕವಾಗಿಯದೆ.

ಮೆ॥ ಎಚ್. ಆರ್. ಮೊರ್ಗನರನ್ನು ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ ಬೋರ್ಡಿನ ಮೆಂಬರರಾಗಿಯೂ, ಮ॥ ರಾ॥ ಎಮ್. ಗೋವಿಂದ ಪೈಗಳವರನ್ನು ಪುತ್ತೂರು ತಾಲೂಕು ಬೋರ್ಡಿನ ಮೆಂಬರರಾಗಿಯೂ ಮ॥ ರಾ॥ ಎನ್. ರಾಜಗೋಪಾಲ ಕೃಷ್ಣರಾಯರನ್ನು ಕುಂದಾಪುರ ತಾಲೂಕು ಬೋರ್ಡಿನ ಮೆಂಬರರಾಗಿಯೂ ಮಂಜೂರು ಮಾಡಿರುವರು. ಈ ಸ್ಥಳಕ್ಕೆ ಪತಕು ಇದ್ದರು ಮೆಂಬರರು ಪೋಟರುಗಳಿಂದ ಚುನಾಯಿಸಲ್ಪಟ್ಟ ಮೆಂಬರರು. ರೆವರೆಂಡ್ ಟಿ. ಎಸ್. ಸಿ. ತಾಸರನ್ನು ಮಂಗಳೂರು ತಾಲೂಕು ಬೋರ್ಡಿನ ಮೆಂಬರರಾಗಿ ನೇಮಕ ಮಾಡಿರುವರು. ಮ॥ ರಾ॥ ಬಿ. ವೆಂಕಟಕೃಷ್ಣರಾಯರು ಪುತ್ತೂರು ತಾಲೂಕು ಬೋರ್ಡಿನ ಕಡೆಯಿಂದ ಡಿಸ್ಟ್ರಿಕ್ಟ ಬೋರ್ಡಿಗೆ ಮೆಂಬರರಾಗಿ ಚುನಾಯಿಸಲ್ಪಟ್ಟಿರುವರು.

ಮೂಳ್ಕಿಯ ತಂಕು ಎಂಬ ಮೊಗೇರ ಹೆಂಗಸು ಮೂಡಬಿದ್ರೆ ಅತ್ತಕಡೆಗೆ ಮೀನು ಮಾರಾಟಕ್ಕೆ ಹೋದಾಗ ಅವಳನ್ನು ವಂಚಿಸಿ ೧೫೦ ಬಂಗುಡೆ ಮೀನನ್ನು ಬಲತ್ಕಾರದಿಂದ ಕೊಂಡುಹೋದ ಹಳೆ ಅಪರಾಧಿ ಮಲೆಯಾಳಿ ರಾಮ ಎಂಬವನಿಗೆ ಕಳೆದ ತಾ. ೩೦ರಲ್ಲಿ ಸೆಶ್ಯನ್ ಜಡ್ಜರು ೩ ವರ್ಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ಮಿಸಿಸ್ ಬಿಝೆಂಟ, ವಾಡಿಯಾ ಮತ್ತು ಅರುಂಡೇಲರವರುಗಳ ಪ್ರತಿಬಂಧ ನಿಷೇಧಾರ್ಥವಾಗಿ ಕಳೆದ ಆದಿತ್ಯವಾರ ಇಲ್ಲಿಯ ಪುರಜನರ ಸಭೆಯು ಗಣಪತಿ ಸೆಕೆಂಡರಿ ಶಾಲೆಯ ಮಾಜಿ ಕಟ್ಟೋಣದಲ್ಲಿ ಕೂಡಿತ್ತು. ಇಲ್ಲಿ ಇತ್ತಲಾಗೆ ಏರ್ಪಡಿಸಿದ ಜಿಲ್ಲಾ ಸಂಘದ ಕಾರ್ಯದರ್ಶಿಗಳಾದ ಮ॥ ರಾ॥ ರಾ॥ ಕಾರ್ನಾಡ ಸದಾಶಿವರಾವ್ ಮತ್ತು ಮ॥ ರಾ॥ ರಾ॥ ಅತ್ತಾವರ ಬಾಲಕೃಷ್ಣ ಸೆಟ್ರಂಬರು ಪುರಜನರ ಈ ಸಭೆಯನ್ನು ಜಿಲ್ಲಾ ಸಂಘದ ಪರವಾಗಿ ಜರುಗಿಸಿದ್ದರು. ಸಾಯಂಕಾಲ ೫ ಘಂಟೆಗೆ ಕೂಡುವ ಈ ಸಭೆಯ ನೋಟೀಸು ಅದೇ ದಿನದ ಮುಂಜಾನೆ ಹಂಚೋಣಾಗಿ ಸಭೆಯನ್ನು ಅತಿ ಅವಸರದಿಂದ ಬರಮಾಡಿಕೊಂಡರೂ ಕೂಡಿದ ಜನರ ಸಂಖ್ಯೆಯು ಕಡಮೆಯಾಗಿದ್ದಿಲ್ಲ. ಬಹುಮಾನಪಟ್ಟ ಮ॥ ರಾ॥ ರಾ॥ ಕೆ. ಸದಾಶಿವ ಭಟ್ಟರೂ, ರಾಜೇಶ್ರಿಗಳವರಾದ ಈ ಕೆಳಗಿನ ಗೃಹಸ್ಥರೂ ಸಭೆಯಲ್ಲಿ ಹಾಜರಿದ್ದರು:—ಗಂಗೊಳ್ಳಿ ಕೃಷ್ಣರಾವ್, ಬಿ. ಎ. ಎಲ್. ಎಲ್. ಬಿ; ಯು. ಸಿ. ಕೃಷ್ಣಭಟ್, ಬಿ. ಎ. ಬಿ. ಬಿಲ್; ಆರ್. ಎಮ್. ರೈ ಬ್ಯಾರಿಷ್ಟರರು; ಎಮ್. ನಾರಾಯಣರಾವ್, ಬಿ. ಎ. ಬಿ. ಎಲ್; ಮಣೇಲ ವೆಂಕಟರಾಯ ನಾಯಕ್ ವರ್ತದಾರರು ಮತ್ತು ಸಾವುಕಾರರು, ಎನ್. ವೆಂಕಟರಾಯರು ಸಾವುಕಾರರು ಮತ್ತು ಮುನ್ಸಿಪಲ್ ಕೌನ್ಸಿಲರರು; ಎಸ್. ಎನ್. ಸ್ವರ್ಣಾ ಬಿ. ಎ. ಬಿ. ಎಲ್; ರಂಗನಾಥ ಪುಂಜ ಬಿ. ಎ. ಬಿ. ಎಲ್; ಎ. ಬಿ. ಶೆಟ್ಟಿ ಬೆಂಚ್ ಮೇಜಿಸ್ಟ್ರೇಟರು, ಮೋಹನಪ್ಪ ತಿಂಗಳಾಯರು, ಕೆ. ರಾಮಯ್ಯ ಹೆಗ್ಗಡರು ವರ್ತದಾರರು, ಸುಜೀರ ನಾಗಪ್ಪ ನ್ಯಾಕರು ಬೆಂಚ್ ಮೇಜಿಸ್ಟ್ರೇಟ ಮತ್ತು ಸಾವುಕಾರರು, ಮಿರ್ ಜುಮುಲಾದ್ದೀನ್ ಸಾಹೇಬ ಬಹದ್ದೂರ್; ಪೇಜಾವರ ಭೋಜರಾವ್ ಮುನ್ಸಿಪಲ್ ಕೌನ್ಸಿಲರರು; ಪಿ. ವಾಸುದೇವರಾವ್ ಬಿ. ಎ. ಬಿ. ಎಲ್; ವಿ. ಶ್ರೀನಿವಾಸ ಕಾಮತ್, ಮುನ್ಸಿಪಲ್ ಕೌನ್ಸಿಲರ್, ಮತ್ತು ಸಂಪಾದಕ ಸ್ವದೇಶಾಭಿಮಾನಿ; ಡಾಕ್ಟರ್ ಎಮ್. ಶಿವರಾವ್, ಮುನ್ಸಿಪಲ್ ಕೌನ್ಸಿಲರರು; ಡಾಕ್ಟರ್ ಕತ್ರಿ ಶಿವರಾವ್, ಪಿ. ಎಮ್. ಕಾಮತ್; ಉಳ್ಳಾಲ ನರಹರಿಮಲ್ಯ ಸಾವುಕಾರರು; ಬೋಳಾರ ವಿಟ್ಠಲರಾಯರು; ನಗರ್ ಶ್ರೀನಿವಾಸರಾವ್ ಸಾವುಕಾರರು; ಕಸ್ತೂರಿ ಪುಂಡರಿಕ ಪೈ, ಕುಡ್ವ ಗೋಪಾಳ ಕೃಷ್ಣ ಶೆಣೈ ಮತ್ತು ಹಲವು ಅಂಗಡಿಗಾರರೂ ವೈದಿಕರೂ ಇತರರೂ ಮಿಸಿಸ್ ಎಮ್. ಎಸ್. ಮಾಧವರಾವ್ ಮತ್ತವರಾರು ಜನ ಕುಲಸ್ತ್ರೀಯರುಗಳೂ ಸಹ ಬಹುಮಾನಪಟ್ಟ ಸದಾಶಿವ ಭಟ್ಟರು ಸಭಾಧ್ಯಕ್ಷರಾಗಬೇಕೆಂದು ಸೂಚಿಸೋಣಾದ ಮೇರೆಗೆ ಭಟ್ಟರವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡರು. ಆಂಗ್ಲೊ ಇಂಡಿಯನ್ ಪತ್ರಕಾರರು ಮತ್ತು ಕೆಲವು ಸ್ವಾರ್ಥಪರವ್ಯಕ್ತಿಗಳಲ್ಲದೆ ದೇಶವೆಲ್ಲವು ಏಕಕಂಠದಿಂದ ಮಿಸೆಸ್ ಬಿಝೆಂಟ ಪ್ರಭೃತಿಗಳಿಗೆ ಪ್ರಾಪ್ತವಾದ ಪ್ರತಿಬಂಧ ಬಗ್ಗೆ ವಿಷಾದವನ್ನೂ ಸಂತಾಪವನ್ನೂ ಸೂಚಿಸುತ್ತಿರುವದು. ಇಂಥಾ ಸಭೆಯನ್ನು ಕೂಡಿಸಿ ನಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸುವದು ಕರ್ತವ್ಯವಾಗಿದೆ ಎಂಬಿತ್ಯಾದಿ ಭಾಷಣವನ್ನು ಅಧ್ಯಕ್ಷರು ಮಾಡಿದ ನಂತರ ಮ॥ ರಾ॥ ರಾ॥ ಗಂಗೊಳ್ಳಿ ಕೃಷ್ಣರಾಯರು ಪ್ರತಿಬಂಧಗಳ ನಿಷೇಧ ಸೂಚಕ ನಿರ್ಣಯವನ್ನು ಸಭೆಯ ಮುಂದಿಟ್ಟರು. ಬ್ಯಾರಿಷ್ಟರ ಆರ್. ಎಮ್. ರೈ, ಮ॥ ರಾ॥ ಎಮ್. ರಾಮಚಂದ್ರ ಬಿ. ಎ. ಬಿ. ಎಲ್. ಮ॥ ರಾ॥ ರಾ॥ ಜೆ. ಎಚ್. ಎ. ಮಸ್ಕರೇಂಞಸ್ ಬಿ. ಎ. ಎಲ್. ಎಲ್. ಬಿ, ಮ॥ ರಾ॥ ರಾ॥ ಯು. ಸಿ. ಕೃಷ್ಣಭಟ್ಟ ಬಿ. ಎ. ಬಿ ಎಲ್, ಮಿ॥ ಜಮಲ್ ಉದ್ದೀನ್ ಸಾಹೇಬರವರು ಇದನ್ನು ಅನುಮೋದಿಸಿ ನಂತರ ಅದು ಸಭೆಯಲ್ಲಿ ಸರ್ವರಿಂದಲೂ ಮಂಜೂರು ಮಾಡಲ್ಪಟ್ಟಿತು." ಈ ನಿರ್ಣಯದ ಮಸ್ತು ಬಿಝೆಂಟ ಪ್ರಭೃತಿಗಳನ್ನು ಬಿಡುಗಡೆಮಾಡಿ ಸರಕಾರದವರು ಈ ದಂಡೋಪಾಯದ ಮಾರ್ಗವನ್ನು ತ್ಯಜಿಸಬೇಕೆಂಬ ಸೂಚನೆಯ ಸಾರಾಂಶವನ್ನು ಬ್ರಿಟಿಷ ಸಾಮ್ರಾಜ್ಯದ 'ಮಂತ್ರಿ, ವ್ಹೈಸರಾಯಿ ಪ್ರಭು, ಪೆಂಟ್‌ಲಂಡ್ ಪ್ರಭುಗಳಿಗೆ ಸಹ ತಂತೀಮೂಲಕ ತಿಳಿಸಬೇಕೆಂದು ಸಭೆಯಲ್ಲ ನಿರ್ಣಯವಾಗಿದೆ. ಸರ್. ಎಸ್. ಸುಬ್ರಮಣಯ್ಯರವರು ಏರ್ಪಡಿಸಿರುವ ಬಿಝೆಂಟ ಫಂಡಿಗೆ ಪ್ರಥಮ ಕಂತಾಗಿಯೂ ಮತ್ತು ಟೆಲಿಗ್ರಾಮುಗಳ ಖರ್ಚಿಗೂ ರೂ. ೧೦೦ನ್ನು ಸಭೆಯಲ್ಲಿ ಚಂದಾ ಎತ್ತಿದ್ದಾರೆ.

ಇಲ್ಲಿಂದ ವರ್ಗಾಯಿಸಲ್ಪಟ್ಟಿರುವ ಪೋಲೀಸು ಸುಪರಿಂಟೆಂಡೆಂಟ್ ಮ॥ ರಾ॥ ರಾ॥ ಆರ್ಣಿ ಸುಬ್ಬರಾವ್ ಬಿ. ಎ ಇವರನ್ನು ಇಲ್ಲಿಯ ಕೊಸ್ಮೊಪೋಲಿಟನ್ ಕ್ಲಬ್ಬಿನಲ್ಲಿ ಕಳೆದ ಸೋಮವಾರ ಸಾಯಂಕಾಲ ಇವರ ಮಿತ್ರರು ಒಂದು 'ಟಿಪಾರ್ಟಿ' ಮೂಲಕ ಸನ್ಮಾನಿಸಿದರು.

ಚಿತ್ರಕೂಟದಿಂದ ಇಲ್ಲಿಗೆ ಬಂದಿರುವ ಕೃಷ್ಣಮೂರ್ತಿಯವರು ಕಳೆದ ಭಾನುವಾರ ಕೆನರಾ ಹ್ಯಾಸ್ಕೂಲಿನಲ್ಲಿ ಕೊಟ್ಟ ಭಾಷಣಕ್ಕೆ ಉತ್ತರರೂಪವಾಗಿ ಇಲ್ಲಿಯ ಎನ್. ಶೇಷಪ್ಪನವರು ಪ್ರಕಟಿಸಿರುವ ನೋಟೀಸನ್ನು ಈ ಸಂಚಿಕೆಯೊಂದಿಗೆ ಸಪ್ಲಿಮೆಂಟಾಗಿ ಇಟ್ಟಿರುತ್ತೇವೆ.

ಈ ತಿಂಗಳ ಅಂತ್ಯಭಾಗದಲ್ಲಿ ಕೊಂಗ್ರೆಸ್ ಸಭೆಯ ಮತ್ತು ಮುಸ್ಲಿಮ್ ಲೀಗಿನ ಸಂಯುಕ್ತ ಪರಿಷತ್ತು ಮುಂಬಯಿಯಲ್ಲಿ ಕೂಡುವದಾಗಿ ತಿಳಿಯುತ್ತದೆ.

ವ್ಹೈಸರಾಯಿ ಪ್ರಭುಗಳವರು ಇದೇ ಬರುವ ಸಪ್ಟಂಬರ ತಿಂಗಳ ತಾ. ೫ರಿಂದ ೧೦ರ ವರೆಗೆ ಆಶ್ರಿತ ಸಂಸ್ಥಾನಗಳ ಅರಸರ ಒಂದು ಸಭೆಯನ್ನು ಸಿಮ್ಲದಲ್ಲಿ ಜರುಗಿಸುವರೆ ನಿಶ್ಚಯಿಸಿರುವರು.

[illegible]

ಮಹರ್ಷಿ ದಾದಾಭಾಯಿಯವರ ಮೃತ್ಯು.

ಭಾರತಿ,

ಹೋದುದೇ ಮಾಣಿಕವು ಭಾರತ ।
ಮೇದಿನಿಯು ಹೊಸ ಜೀವನವುಗಿಂ ।
ತಾದುದೇ ಬಹುದುಃಖದಾಯಕ ವರ್ತನದಲ್ಲಿಲ್ಲ ॥
ಹೋದೆ ಇಂಗ್ಲೆಂಡಕ್ಕೆ ದಾದಾ ।
ಸಾಧಿಸಲು ತೋರಿದೆ 'ಸ್ವರಾಜ್ಯ'ಕೆ ।
ಭೇದಿಸಿದೆ ಮನ್ನಣೆಗಳಿಲ್ಲದ ಜನದ ಕ್ಲೇಶಗಳ ॥ ೧ ॥

ಹುಟ್ಟಿದೂರಿನ ಸೇವೆಗಾಗಿಯೆ ।
ಕಷ್ಟವನು ಸ್ವೀಕರಿಸಿದೆ ಬಹುಪರಿ ।
ಬಿಟ್ಟೆ ತೊಂಬತ್ತೆರಡು ವರುಷದಿ ವೃದ್ಧ್ಯಯದ ದೇಹ್ಯ ॥
ಎಷ್ಟು ನಿನ್ನನು ಹೊಗಳಲೆನಗದು ।
ತುಷ್ಟಿಯೆನಿಸದು ಮನಕೆ, ಕಾರಣ ।
ಸೃಷ್ಟಿಗಿಂಡಿಯದಲ್ಲಿ ನಿನ್ನುವ ಹೆಸರಪಡೆದಿರುವೆ ॥ ೨ ॥

ಮಾತೃದೇಶದ ಭಕ್ತರಲಿ ।
ಖ್ಯಾತರಾರ್ ನಿನ್ನತೆರದಲಿ ।
ಸೇತುವಿಂದ ಹಿಮಾಲಯದ ಪರ್ಯಂತ ನೋಡಿದರೆ ॥
ನೂತನವಲಾ ನಿನ್ನ ಮಹಿಮೆಯು ।
ಹಾ ತೊರೆದ ಬಂಧುಗಳನೆಮ್ಮನು ।
ನೀ ತೊರೆದು ಪರಲೋಕಕ್ಕೈದಿದೆ ವಿಶ್ರಮದ ಕೊರಲು ॥ ೩ ॥

ಒರಗಿದವರ ನ್ನೆಬ್ಬಿಸುತ್ತಲಿ ।
ತೆರೆಯಿಸಿದೆಯ್ಯ ಕಣ್ಣುಗಳನೀ ।
ಹೊರಗೆ ಹೋಗುವ ಸರಕುಗಳ ಕೈಯಿತ್ತು ತೋರಿಸಿದೆ ॥
ಸರುವವೂ 'ಸ್ವರಾಜ್ಯ'ದಿಂದಲೆ ।
ಬರುವುದೆಂಬೀ ಮೂಲಮಂತ್ರವ ।
ಸರುಹಿ ಕಲಿಸಿದೆ ಮುದುಕರಿಂಬಾಲಕರ ವರೆಗೆಲ್ಲ ॥ ೪ ॥

ಅಳಿದು ಹೋಗುವ ಶಾರೀರದೇಹಕೆ ।
ಅಳುವವರು ಮತಿಹೀನರೆಂಬುದ ।
ತಿಳುಹಲೀ ಭೌತಿಕ ಶರೀರವತ್ಯಜಿಸಿದು ಹೋದವಂಟೆ ॥
ಉಳಿವುದೊಂದೇ ಕೀರ್ತಿಯೆನ್ನುತ ।
ಇಳೆಗೆ ಬೋಧಿಸುತೆರದಿ ಜನವನು ।
ಸುಳಿಯ ಬಿಟ್ಟಹೆ ಲೋಕಲೋಕಕೆ ಧನ್ಯ ನೀ ಧನ್ಯ ॥ ೫ ॥

ಮು. ಶಂಕರಭಟ್ಟ.

ಸಾಲುಮರಗಳ ಗೋಳು.

ಪೂರ್ವಿಕರು ಮಾರ್ಗಸ್ಥರಿಗೆ ನೆರಲು ಸಿಕ್ಕುವಂತೆ ಮಾರ್ಗಗಳ ಇಕ್ಕಡೆಯಲ್ಲಿಯೂ ನಮ್ಮನ್ನು ನಟ್ಟು ಸಾಕಿದರು. ಮತ್ತು ನಮ್ಮೊಳಗೆ ನೆರಳಿಗೆ ಪ್ರಖ್ಯಾತಿ ಪಟ್ಟ ಆಲ, ದೂಪ ಮೊದಲಾದ ಜಾತಿಯವರನ್ನೇ ತಂದಿಟ್ಟರು. ಇದು ಸಾಲದೆ ಕೆಲವು ಪುಣ್ಯಾತ್ಮರು ಬಿಸಿಲಿನಿಂದ ಬಸವಳಿದ ಜನರಿಗೆ ವಿಶ್ರಾಂತಿಕೊಡುವ ಬಗ್ಗೆ ನಮ್ಮೊಡಿಗೆ ಕಟ್ಟೆಕಟ್ಟಿ ನೆಲ ಚನ್ನಾಗಿ ಅರಮ ಚಪ್ಪರವನ್ನು ಕೂಡ ಕಟ್ಟಿಸಿದರು. ಇನ್ನು ಕೆಲವರು ಪ್ರಯಾಣಸ್ಥರ ದಾಹಪರಿಹರಿಸಲಿಕ್ಕೆ ಬೆಲ್ಲ ನೀರು ಮೊಸರು ಮಜ್ಜಿಗೆ ಚಪ್ಪರದಲ್ಲಿಟ್ಟು ಅವರಿಗೆ ಹಂಚಿದರು. ನಾವಾದರೊ ವರ್ಷ ಹೋಗುತ್ತಾ ಹೋಗುತ್ತಾ ಪುಷ್ಟಿಯಾಗಿ ದೊಡ್ಡ ಎಲೆಗಳಿಂದ ತುಂಬಿದ ನಮ್ಮ ಉದ್ದವಾದ ಕೈಗಳನ್ನು ಚಾಚಿ ಕೆಲವು ಕಡೆಯಲ್ಲಿ ಬಿಸಿಲೇ ಬೀಳದಂತೆ ಮಾಡಿದ್ದಲ್ಲದೆ ಪಾಪ ದೇವರು ಸಹಾಯಕ್ಕೆ ಸಿಕ್ಕಿದಾಗ ಪ್ರಯಾಣಸ್ಥರಿಗೆ ನಮ್ಮ ಕೈಕಳಿಂದ ಫಲ ... ... ನಮ್ಮನ್ನು ನಟ್ಟವರ ಉದ್ದಿಷ್ಟವನ್ನು ಸಫಲಗೊಳಿಸಿದೆವು. ಈಗಿನ ಸರಕಾರದವರು ಕೂಡಾ ನಮ್ಮ ಪ್ರಯೋಜನವನ್ನು ಕಂಡು ಹೊಸತಾಗಿ ಮಾರ್ಗದ ಇಕ್ಕೆಲ ಬದಿಯಲ್ಲಿ ನಮ್ಮನ್ನು ಇಟ್ಟು ಪೋಷಿಸುತ್ತಾರೆ. ಇತ್ತಲಾಗಿ ನಡಬೇಕಾದ ಜಾತಿ ಬೆಳೆಸುವಾಗ್ಗೆ ಫಲಗಳ ಕಡೆಗೆ ಹೆಚ್ಚು ಲಕ್ಷಕೊಟ್ಟು ಮಾವು ಹಲಸು ಮೊದಲಾದವುಗಳನ್ನು ಬೆಳೆಸಿದರು. ಹಲಸಿನ ಎಲೆಗಳಾದರೂ ಸಣ್ಣವು ಮತ್ತು ಬಾಲ್ಯಾವಸ್ಥೆಯಲ್ಲಿ ಅವುಗಳನ್ನು ದನಕರುಗಳ ಮತ್ತು ಮೇಕೆಗಳ ಉಪದ್ರದಿಂದ ಕಷ್ಟ. ಮಾವುಗಳ ಸಂಕಟಕ್ಕೆ ಸಹಾ ... ಕಷ್ಟ ವಿರುವದಲ್ಲದೆ ಹಣ್ಣು ಕೊಡಲಿಕ್ಕೆ ಪ್ರಾರಂಭವಾದಾಗ್ಗೆ ಹುಡುಗರು ದೊಡ್ಡವರು ಕಲ್ಲು ಎಸದು ಗೆಲ್ಲು ಮುರಿದು ಕೆಡಕು ಮಾಡುತ್ತಾರೆ. ಇದಲ್ಲದೆ ಫಲಕೊಡುವ ಸಾಲುಮರಗಳನ್ನು ನಟ್ಟ ಮೇಲೆ ಫಲಗಳನ್ನು ಏಲಮ್ ಮಾಡಬೇಕಾಯಿತು. ಮತ್ತು ವರ್ಷವರ್ಷವೂ ಎಲ್ಲಾ ಮರಗಳು ಫಲಕೊಡುವದಿಲ್ಲವಾದ್ದರಿಂದ ಯಾವ ಮರದಲ್ಲಿ ಫಲ ಉಂಟು ಎಂತ ಪ್ರತಿ ವರ್ಷ ನೋಡಿ ಅದರ ಲೆಕ್ಕವಿಟ್ಟು ಪರಿಶೋಧನೆ ನಡಿಯಬೇಕಾಯಿತು. ಈ ಫಲದೋರಜದವರಿಂದ ಸಿಕ್ಕುವ ಲಾಭ ಇಷ್ಟೆಲ್ಲಾ ಶ್ರಮಕ್ಕೆ ತಕ್ಕವಾಗಿರುತ್ತದೋ ಏನೆಂಬದು ಸರಕಾರದವರಿಗೆ ಗೊತ್ತು.

ಈ ವರೇಗೆ ನಾವು ಮಾರ್ಗದ ಉಪಕಾರಿಗಳೆಂದು ಹೆಸರುಗೊಂಡಿದ್ದವು. ಇತ್ತಲಾಗೆ ನಾವು ಮಾರ್ಗಗಳ ಶತ್ರುಗಳೆಂತಾಗಿ ಮಾರ್ಗಕ್ಕೆ ನೆಳಲು ಕೊಡಲಿಕ್ಕೆ ನಾವು ನೀಡಿದ ಕೈಗಳನ್ನೆ ಕಡದು ಅಂಗಹೀನ ಮಾಡಿದ್ದಾರೆ. ಪಟ್ಟಣಗಳಲ್ಲಿ ಮಾತ್ರವಲ್ಲ ಹಳ್ಳಿಊರುಗಳಲ್ಲಿ ಸಹಾ ನಮ್ಮನ್ನು ಬೋಳಿಸಲಿಕ್ಕೆ ಹುಕುಂ ಹೊರಟಿದೆ ಎಂತ ಗಾಡಿಗಳಲ್ಲಿಯೂ, ಸಾರಟುಗಳಲ್ಲಿಯೂ, ಮೋಟಾರಬಸ್ಸುಗಳಲ್ಲಿಯೂ. ಪ್ರಯಾಣ ಮಾಡುವವರಿಗೆ ನಮ್ಮ ಆಶ್ರಯ ಬಹುಶಾ ಬೇಡ. ಈಗ ಗಾಡಿಸಾರಟು ವಗೈರೆ ಸಂಖೆ ಬಹಳ ಹೆಚ್ಚಾದರೂ ನಡದು ಹೋಗುವವರ ಸಂಖೆ ಎಷ್ಟೊ ಅಧಿಕವೆಂಬದು ಈಗ ಖಾನೆಷುಮಾರಿ ಮಾಡಿದರೂ ಕಂಡು ಬಂದೀತು. ಇವರಿಗೂ ಕಾಲ್ನಟ್ಟೆ ನಡಸುವ ಗಾಡಿಯಲ್ಲಿ ಹೋಗುವವರಿಗೂ ನಮ್ಮಿಂದ ಎಷ್ಟ ಪ್ರಯೋಜನವೆಂದು ಹೇಳಬೇಕಾದ್ದಿಲ್ಲ. ಇವರಿಗೋಸ್ಕರವಾದರೂ ನಮ್ಮನ್ನು ರಕ್ಷಿಸಬೇಕಾಗಿ ಪ್ರಾರ್ಥಿಸುತ್ತೇವೆ. ನಮ್ಮಿಂದ ಮಾರ್ಗಗಳಿಗೆ ಬಾಧಕವೇ ಎಂತಾದರೆ ಖರ್ಚು ಮಾಡಿ ನಮ್ಮನ್ನು ... ನೆಲದ ... ಕಡಿಯುವ ಸ್ಥಳ ಬಂದಾಗ್ಗೆ ನಮಗೆ ಅಂಗಹೀನ ಮಾಡುವದಕ್ಕೆ ಬೋಳಿಸುವ ಹುಕುಂ ಹೊರಟ ಕೂಡಲೇ ನಾವು ಕಂಗೆಟ್ಟು ಬಿಸುಸುಯ್ದೆವು. ಕೈಯಲ್ಲಾಡಿಸಿ ಸಂಜ್ಞೆ ಮಾಡಿದೆವು ಕೇಳುವವರಿಲ್ಲ. ನಿಮ್ಮ ಪತ್ರದಲ್ಲಿಯಾದರೂ ನಮ್ಮ ಗೋಳು ಪ್ರಕಟಿಸಿದರೆ ನಿವೃತ್ತಿಯಾದೀತೂ ಎಂಬದರಿಂದ ಇದನ್ನು ನಿಮ್ಮೊಡಿಗೆ ಬರೆಸಿರುತ್ತೇವೆ. ಇನ್ನು ದೇವರ ಇಚ್ಛೆ.

ಸಾಲ್ಮರ.

ಕೊಲ್ಲಿಪಾಕಿ.

ಕೊಮ್ಮರಸಕವಿಯು ವರ್ಣಿಸಿದ ಪ್ರಕಾರ ಬರೀ ಶಿವಕ್ಷೇತ್ರವಾಗಿರದೆ ಒಂದು ಕಾಲಕ್ಕೆ ಜಿನಕ್ಷೇತ್ರವೂ ಮತ್ತೊಂದು ಕಾಲಕ್ಕೆ ಧರ್ಮವಿಷ್ಣುಕ್ಷೇತ್ರವೂ ಆಗಿದ್ದ, ಚಾಳುಕ್ಯಾಧಿರಾಜರಾದ ೬ನೆಯ ವಿಕ್ರಮನ ಅಧೀನಕ್ಕೆ ಒಳಪಟ್ಟ ಏಳುಸಾವಿರ ಗ್ರಾಮಗಳುಳ್ಳ ಒಂದು ಪ್ರಾಂತದ ರಾಜಧಾನಿಯಾಗಿದ್ದ, ಪಶ್ಚಿಮಚಾಳುಕ್ಯರೂ ಮತ್ತು ಚೋಳರೂ ಇವರ ನಡುವೆ ಆದ ಅನೇಕ ಯುದ್ಧಗಳ ಭಯಾನಕ ರಣಭೂಮಿಯಾಗಿದ್ದ ಕೊಲ್ಲಿಪಾಕಿ ನಗರವು ಮೊನ್ನೆವರೆಗೆ ಕತ್ತಲೆಗಿಂಗೆ ಕಣ್ಮರೆಯಾಗಿದ್ದದ್ದು ಬಹು ಶೋಚನೀಯ ಸಂಗತಿಯು. ಇಸವಿ ೧೮೫೭ನೇ ನವಾಬರ ವರೆಗೆ ನೈಜಾಮರ ಆಳ್ವಿಕೆಯ ಪ್ರಾಂತ ಗಳ ಸೀಮೆಯಲ್ಲಿರುವ ಕುಲ್ಪಾಕಿ ಗ್ರಾಮವೇ ಕೊಲ್ಲಿಪಾಕಿಯೆಂದು ಜನರ ತಿಳುವಳಿಕೆಯಾಗಿತ್ತು. ಈಗ ನೈಜಾಮರ ರೇಲುಮಾರ್ಗದಲ್ಲಿಯ ಆಲೇರ ಸ್ಟೇಶನದಿಂದ ನಾಲ್ಕು ಮೈಲಿನ ಮೇಲಿರುವ ಕೊಲ್ಲಿಪಾಕ ಹಳ್ಳಿಯೇ ಪ್ರಾಚೀನ ಕೊಲ್ಲಿಪಾಕಿ ನಗರವೆಂದು ಪ್ರಾಚೀನ ವಸ್ತುಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ.

ಈ ಕ್ಷೇತ್ರದ ಈಗಿನ ಸ್ಥಿತಿಯ ವರ್ಣನೆಯನ್ನು ಇಂಡಿಯನ್ನ ಆಂಟಿಕ್ವೇರಿ ಮತ್ತು ನಿಜಾಮಹೈದರಾಬಾದಿನಲ್ಲಿ 'ಪ್ರಾಚೀನವಸ್ತು ಸಂಶೋಧಕ ಸಂಘದಿಂದ ಪ್ರಕಟಿಸಲ್ಪಡುವ ಮಾಸಿಕ ಪುಸ್ತಕಗಳ ಆಧಾರದಿಂದ ನಮ್ಮ ವಾಚಕರ ಸಲುವಾಗಿ ಇಲ್ಲಿ ಕೊಡಲಿಚ್ಛಿಸುತ್ತೇವೆ. ಈಗಿನ ವರ್ಣನೆಯ ಮೇಲಿಂದ ಈ ನಗರದ ಪ್ರಾಚೀನ ವೈಭವವು ಎಷ್ಟಿರಬಹುದೆಂಬದನ್ನ ವಾಚಕರೇ ಊಹಿಸಬಹುದು.

ಈ ಗ್ರಾಮದಲ್ಲಿ ಅಲ್ಲಲ್ಲಿಗೆ ಭಗ್ನವಾದ ಶಿಲಾಮಯ ಕಂಭಗಳೂ ದೇವತಾ ಮೂರ್ತಿಗಳೂ, ಲಿಂಗಗಳೂ, ನಂದಿಗಳೂ ದೊರೆಯುವದರಿಂದ ಈ ಗ್ರಾಮವು ಒಂದು ಕಾಲಕ್ಕೆ ಅನೇಕ ಬಸ್ತಿಗಳಿಂದಲೂ, ಶಿವಾಲಯಗಳಿಂದಲೂ, ವಿಷ್ಣುಮಂದಿರಗಳಿಂದಲೂ, ಗಗನಚುಂಬಿತವಾದ ಪ್ರಾಸಾದ ಶಿಖರಗೋಪುರಗಳಿಂದಲೂ ಶೋಭಿಸುತ್ತಿತ್ತೆಂದು ಹೇಳಲಿಕ್ಕೆ ಏನೂ ಅಡ್ಡಿ ಇಲ್ಲ.

ಈ ಗ್ರಾಮದ ಉತ್ತರ ಪಶ್ಚಿಮ ದಿಕ್ಕಿನಲ್ಲಿ ಸೋಮೇಶ್ವರನ ಗುಡಿಯಿರುತ್ತದೆ. ಈ ಗುಡಿಯ ಪೂರ್ವದಿಕ್ಕಿಗೆ ಒಂದು ಮಹಾದ್ವಾರವಿರುತ್ತದೆ. ಗುಡಿಯ ಮುಂದೆ ಬೈಲಂಗಳವಿದ್ದು ಅದರ ಮಧ್ಯಭಾಗದಲ್ಲಿ ಒಂದು ಧ್ವಜಸ್ತಂಭವಿರುತ್ತದೆ. ಸ್ತಂಭದ ಮೇಲ್ಭಾಗದಲ್ಲಿ ನಂದಿಯ ಮೂರ್ತಿಯಿರುತ್ತದೆ. ಅಂಗಳದ ದಕ್ಷಿಣೋತ್ತರ ದಿಕ್ಕುಗಳಲ್ಲಿ ಕಂಬಗಳುಳ್ಳ ಕಟ್ಟೆಗಳಿರುತ್ತವೆ. ಈ ಕಟ್ಟೆಗಳ ಮೇಲೆ ಅಲ್ಲಲ್ಲಿ ಲಿಂಗಗಳು ಪ್ರತಿಷ್ಠಿಸಲ್ಪಟ್ಟಿರುವವು. ಉತ್ತರದಿಕ್ಕಿನ ಕಟ್ಟೆಯ ಒಂದು ಬಾಗಕ್ಕೆ ವಜ್ರಾಸನವನ್ನು ಹಾಕಿಕೊಂಡು ಕುಳಿತ ಒಂದು ಸ್ತ್ರೀದೇವತಾ ಮೂರ್ತಿಯಿರುವದು. ಇದರ ಮುಂಭಾಗದಲ್ಲಿ ಒಂದು ಶಿಲಾಮಯ ಚಕ್ರವಿದ್ದು ಅದು ಎರಡೂ ಪಾರ್ಶ್ವಗಳ ಬಗೆಬಗೆ ಸಿಂಹಗಳಿಂದ ಅಲಂಕರಿಸಲ್ಪಟ್ಟಿರುತ್ತದೆ. ಗರ್ಭಗುಡಿಯ ಸ್ಥಾನದ ... ಅದರಲ್ಲಿಯ ಲಿಂಗವಂತೂ ಬಹಳೇ ಮಟ್ಟಿಗಿರುತ್ತದೆ. ಈ ಲಿಂಗವು 'ಸ್ವಯಂಭು' ಯೆಂದು ಭಾವಿಕರ ನಂಬಿಗೆಯುಂಟು. ಈ ಲಿಂಗದಿಂದಲೇ ಶ್ರೀರೇವಣಸಿದ್ಧೇಶ್ವರನು ಉದ್ಭವಿಸಿದನೆಂದು ಕೊಮ್ಮರಸಕವಿಯು ಹೇಳುತ್ತಾನೆ.

> ಅಂಗದಲೊಳಮರ್ದ ಕಲ್ಲಿನ್ದ್ಯಾದೊಳಲದನೆರೆ ।
> ಲಿಂಗದೊಳು ಕಣ್ಣ ಸಿಲು ಸಂಭವಿಸಿದಂತೆ ಶಿವ ।
> ಲಿಂಗದೊಳವತರಿಸಿ ರೇವಣಸಿದ್ಧೇಶನವತರಿಸಿದನೊಲ್ಲಾಸನ. ॥

ಈ ಗುಡಿಯ ಹತ್ತರ ಮತ್ತೊಂದು ದೇವಾಲಯವಿದ್ದು ಅದಕ್ಕೆ ಕೋಟಿಲಿಂಗನ ಗುಡಿಯೆಂದೆನ್ನುತ್ತಾರೆ. ಇದರಲ್ಲಿಯ ಲಿಂಗವು ೧-೪ ಎತ್ತರವಾಗಿಯೂ ೩-೧೧ ಪರಿಘವುಳ್ಳದ್ದಾಗಿಯೂ ಇರುತ್ತದೆ. ಲಿಂಗವನ್ನು ಹೆಡೆ ತೆಗೆದ ನಾಗರಹಾವು ಸುತ್ತಿರುತ್ತದೆ. ಈ ಲಿಂಗದ ವಿಶೇಷವೇನಂದರೆ—ಇದರ ಮೈಮೇಲೆಲ್ಲ ಸರಿಯಾಗಿ ಒಂದು ಸಾವಿರ ಲಿಂಗಗಳು ಇರುತ್ತವೆ. ಇದಕ್ಕಾಗಿಯೇ ಈ ಗುಡಿಗೆ ಕೋಟಿಲಿಂಗನ ಗುಡಿಯನ್ನುತ್ತಿರಬಹುದು. ಮಹಾಲಿಂಗದ ಪ್ರಮಾಣವನ್ನೂ ಚಿಕ್ಕಲಿಂಗಗಳ ಪ್ರಮಾಣವನ್ನೂ ಚನ್ನಾಗಿ ಪರೀಕ್ಷಿಸಿ ನೋಡಿದರೆ ಲಿಂಗವನ್ನು ಮಾಡಿದವನು ಗಣಿತಶಾಸ್ತ್ರದಲ್ಲಿ ಅತುಲ ಪಾಂಡಿತ್ಯವನ್ನು ಹೊಂದಿದವನೆಂದು ತೋರುತ್ತದೆ.

ಸೋಮೇಶ್ವರ ಗುಡಿಯ ನೆರೆಬದಿಯಲ್ಲಿ ಪ್ರಕಾಶರುದ್ರ ಗುಡಿಯಿರುತ್ತದೆ. ಇದೂ ಶಿವಾಲಯವೇ. ಇದರಲ್ಲಿಯ ಕಲ್ಲಿನ ಕೆಲಸವು ಅತಿ ಪ್ರೇಕ್ಷಣೀಯವಾಗಿರುತ್ತದೆ. ಮಹಾದ್ವಾರದಲ್ಲಿರುವ ದ್ವಾರಪಾಲಕರ ಮೂರ್ತಿಯನ್ನು ಕೊಡೆದವನ ಶಿಲ್ಪಕಲಾಪ್ರವೀಣತೆಯನ್ನು ಎಷ್ಟು ಹೊಗಳಿದರೂ ಸಾಲದು.

ಈ ಗುಡಿಯಿಂದ ಸ್ವಲ್ಪ ಅಂತರದಲ್ಲಿ ಒಂದು ವಿಸ್ತೀರ್ಣ ದಿಬ್ಬದ ಮೇಲೆ ಭವ್ಯವಾದ ಮೂರು ಪಾದಗಳು ಕಣ್ಣಿಗೆ ಬೀಳುತ್ತವೆ. ಇವುಗಳಲ್ಲಿ ಎರಡು ಬಲಪಾದಗಳು ಇರುತ್ತವೆ; ಇವು ಯಾವ ಮೂರ್ತಿಯ ಪಾದಗಳೋ, ಮೂರು ಪಾದಗಳು ... ಸ್ಥಾನದಲ್ಲಿ ... ದೇವರೇ ಬಲ್ಲ.

ಈ ಗ್ರಾಮದಲ್ಲಿ ಒಂದು ಜೈನ ಬಸ್ತಿಯಿರುತ್ತದೆ. ಅದನ್ನು ಒಬ್ಬ ಸಾವುಕಾರನು ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿದ್ದಾನೆ. ಇದರಲ್ಲಿ ಆದಿನಾಥ, ಮಹಾವೀರ, ಮತ್ತು ನೇಮಿನಾಥ ಹೀಗೆ ಮೂರು ತೀರ್ಥಂಕರರ ಮೂರ್ತಿಗಳುಂಟು.

ಇಲ್ಲಿ ಒಂದು ಹಳ ಮಹಾದೇವರ ಗುಡಿಯಿರುತ್ತದೆ, ಈ ಗುಡಿಯ ಒಂದು ಮೂಲೆಯಲ್ಲಿ ವಿಷ್ಣುವಿನ ಒಂದು ... ಮೂರ್ತಿಯು ದೊರೆತಿರುತ್ತದೆ. ಈ ಗ್ರಾಮದ ಮಧ್ಯಭಾಗದಲ್ಲಿ ಶ್ರೀ ನಾರಾಯಣಸ್ವಾಮಿಯ ಗುಡಿಯಿರುತ್ತದೆ. ಇದರ ಮಹಾದ್ವಾರವು ಪೂರ್ವದಿಕ್ಕಿಗೆ ಇರದೆ ಉತ್ತರದಿಕ್ಕಿಗೆ ಇರುತ್ತದೆ. ಕಾರಣವು ತಿಳಿಯದು. ಗುಡಿಯ ... ದೊಡ್ಡ ಧ್ವಜಸ್ತಂಭವಿರುತ್ತದೆ. ನಾರಾಯಣನ ಮೂರ್ತಿಯು ಒಂದು ಸುಲಕ್ಷಣವಾಗಿರುತ್ತದೆ ಇದಕ್ಕೆ ಪ್ರಭಾವಳಿಯುದ್ದು ಅದರಲ್ಲಿ ದಶಾವತಾರಗಳು ಬಹು ಸೂಕ್ಷ್ಮವಾಗಿಯೂ ... ಕೊರೆಯಲ್ಪಟ್ಟಿವೆ. ದೇವಾಲಯದಲ್ಲಿ ೧೧ನೇ ಶತಮಾನದಿಂದ ಶಿಲಾಲೇಖಗಳು ದೊರೆಯುತ್ತವೆ. ಇಲ್ಲಿ ಒಂದು ಮನೆಯ ಹತ್ತಿರಲ್ಲಿ ಕೋದಂಡರಾಮನ ಮೂರ್ತಿಯು ಸಿಕ್ಕಿರುತ್ತದೆ. ಮೂರ್ತಿಯ ಬಲಗೈಯಲ್ಲಿ ಚಕ್ರವೂ ಎಡಗೈಯಲ್ಲಿ ಶಂಖವೂ ಇರುತ್ತವೆ. ಊರಲ್ಲಿ ಬೇರೆ ಆಯಾ ಮನೆಗಳ ಇಪ್ಪತ್ತೆರಡು ಮನೆಗಳು. ಇದ್ದ ಅವುಗಳನ್ನು ಪ್ರಾಚೀನ ಗುಡಿಗಳ ಕಲ್ಲುಗಳಿಂದ ಕಟ್ಟಿರುತ್ತಾರೆ.

ಇಲ್ಲಿಯ ಪ್ರತಿಒಂದು ದೇವಾಲಯದಲ್ಲಿ ಎರಡು ಮೂರು ಶಿಲಾಶಾಸನಗಳು ದೊರೆಯುತ್ತವೆ. ಅವುಗಳ ಆಧಾರದಿಂದ ಈ ಪಟ್ಟಣದ ಪ್ರಾಚೀನ ಇತಿಹಾಸವನ್ನು ಸಾರಾಂಶದಿಂದ ಇಲ್ಲಿ ಕೊಡುತ್ತೇವೆ.

ಕ್ರಿ. ಶಕದ ೧೦೦೦ದ ಸುಮಾರಕ್ಕೆ ಈ ಪಟ್ಟಣವು ಪಶ್ಚಿಮ ಚಾಳುಕ್ಯರ ಅಧೀನದಲ್ಲಿತ್ತು. ಆ ಕಾಲಕ್ಕೆ ರಾಜೇಂದ್ರ ಚೋಳನು ಈ ಪಟ್ಟಣದ ಮೇಲೆ ಸಾಗಿ ಮುತ್ತಿದನು. ಕೋಟೆಯು ಕೈವಶವಾಗಲಿಲ್ಲ. ಆದ ಮೇಲೆ ಚೋಳರಾಜನು ಸುಂಕ ಎಂಬ ಕಂಬಿಗಳನ್ನು ಕೋರಿಸಿ ಸತ್ತ ಇಟ್ಟು ಕೋಟೆಯನ್ನು ಸುಟ್ಟನು. ಕ್ರಿ. ಶಕದ ೧೦೩೩-೪೦ರ ಕಾಲಕ್ಕೆ ಪಶ್ಚಿಮ ಚಾಳುಕ್ಯ ರಾಜನಾದ ಜಗದೇಕಮಲ್ಲನು (೨ನೆಯ ಜಯಸಿಂಹ) ಈ ಪಟ್ಟಣವನ್ನು ಕೆಲಕಾಲ ತನ್ನ ರಾಜಧಾನಿಯಾಗಿ ಮಾಡಿಕೊಂಡು ಅಲ್ಲಿ ವಾಸಿಸುತ್ತಿದ್ದನು.

ಪುನಃ ಕ್ರಿ. ಶಕದ ೧೦೪೬ರಲ್ಲಿ ಚೋಳರಾಜನಾದ ರಾಜಾಧಿರಾಜನು ಚಾಳುಕ್ಯ ೧ನೆಯ ಸೋಮೇಶ್ವರನಕೂಡ ಯುದ್ಧವನ್ನು ಹೂಡಿ ಈ ಪಟ್ಟಣವನ್ನು ಸುಟ್ಟು ಬೂದಿಮಾಡಿದನು. ಆ ಮೇಲೆ ಕೆಲವು ವರುಷಗಳ ವರೆಗೆ ಚೋಳಮಾಂಡಲೀಕನಾದ ನಂಬಿಯನ್ನನು ಕೊಲ್ಲಿಪಾಕ ಪುರಾಧೀಶ ಎಂಬ ಬಿರುದನ್ನು ಧರಿಸಿ ೭೦೦೦ ಹಳ್ಳಿಗಳುಳ್ಳ ಪ್ರಾಂತದ ರಾಜಧಾನಿಯಾದ ಈ ಪಟ್ಟಣವನ್ನು ಆಳುತ್ತಿದ್ದನು.

ಇಲ್ಲಿಯ ಜೈನಬಸ್ತಿಯಲ್ಲಿ ಚಾಳುಕ್ಯ ಭೂಪಾಲನಾದ ೧ನೆಯ ಸೋಮೇಶ್ವರನ ಕಾಲದ (೧೦೬೬-೬೮) ಒಂದು ಶಿಲಾಶಾಸನವು ದೊರೆತಿರುತ್ತದೆ. ಇದನ್ನು ಇನ್ನೂ ಯಾರೂ ಚೆನ್ನಾಗಿ ಓದಿನೋಡಿಲ್ಲ.

ಕ್ರಿ. ಶಕದ ೧೦೭೬ರಲ್ಲಿ ಸಿಂಹಾಸನವನ್ನು ಏರಿದ ಚಾಳುಕ್ಯ ೬ನೆಯ ವಿಕ್ರಮನ ಆಡಳಿತಕ್ಕೆ ಈ ಪಟ್ಟಣವು ಒಳಪಟ್ಟಿತ್ತು. ಇವನ ಮಗನು ಈ ಪ್ರಾಂತದ ಅಧಿಪತಿಯಾಗಿ ಇದೇ ಪಟ್ಟಣದಲ್ಲಿ ವಾಸಿಸುತ್ತಿದ್ದನು. ಇವನ ಕಾಲದಲ್ಲಿ ಸ್ವಯಂಭು ಸೋಮೇಶ್ವರ ದೇವರು ಲಿಂಗಭೋಗಕ್ಕಾಗಿಯೂ, ಅಂಗರಂಗವೈಭವಕ್ಕಾಗಿಯೂ ಅನೇಕ ಭೂಮಿಯನ್ನು ದತ್ತಿಯಾಗಿ ಕೊಟ್ಟಿದ್ದಂತೆ ಶಿಲಾಶಾಸನಗಳ ಮೇಲಿಂದ ತಿಳಿಯ ಬರುತ್ತದೆ.

ವೀರನಾರಾಯಣ ಅಥವಾ ಜಗದ್ದೇವನಾರಾಯಣ ದೇವರ ಗುಡಿಯಲ್ಲಿ ಮೂರು ಶಿಲಾಲೇಖಗಳು ಇರುತ್ತವೆ. ೧ನೆಯದು ಕ್ರಿ. ಶ. ೧೧೦೫-೬ನೆಯ ಇಸವಿಯದು. ೨ನೆಯದು ಕ್ರಿ. ಶ. ೧೧೦೭-೮ರ ಇಸವಿಯದು. ೩ನೆಯದು ೧೧೧೦-೧೧ನೆಯ ವರುಷದ್ದು. ಇದು ಇತಿಹಾಸದ ದೃಷ್ಟ್ಯಾ ಒಳ್ಳೇ ಮಹತ್ವವುಳ್ಳದ್ದಿರುತ್ತದೆ. ಈ ಕಾಲಕ್ಕೆ ಚಾಳುಕ್ಯ ೬ನೆಯ ವಿಕ್ರಮನ ಮಗನಾದ ಶ್ರೀ ಮಹಾಮಂಡಲೇಶ್ವರ ಸೋಮೇಶ್ವರ ದೇವನು ಕೊಲ್ಲಿಪಾಕಿಯಲ್ಲಿ ಅಧಿಪತಿಯಾಗಿದ್ದನೆಂದು ಇದರಲ್ಲಿ ಉಲ್ಲೇಖವಿರುತ್ತದೆ. ಮತ್ತು ಈ ಚಾಳುಕ್ಯರ ರಾಜಧಾನಿಯು ಈ ಕಾಲಕ್ಕೆ ಕಲ್ಯಾಣವಿರದೆ ಮಾನ್ಯಖೇಟ ನಗರವಿತ್ತೆಂದೂ ಹಾಗೂ ದಕ್ಷಿಣಾಪಥದಲ್ಲಿ ಚಾಳುಕ್ಯ ರಾಜ್ಯವನ್ನು ಪ್ರತಿಷ್ಠಾಪನೆ ಮಾಡಿದ ತೈಲಪನಿಂದ (ಕ್ರಿ. ಶ. ೯೭೩) ಕಡೆಯ ವರೆಗೆ ಚಾಳುಕ್ಯ ರಾಜವಂಶಾವಳಿಯು ಗೊತ್ತಾಗುತ್ತದೆ. ಜೈನರ ಗುಡಿಯಲ್ಲಿಯ ಶಿಲಾಶಾಸನದ ಆಧಾರದಿಂದ ಈ ಪಟ್ಟಣವು ೧೨ನೆಯ ಶತಮಾನದ ಉತ್ತರಭಾಗದಿಂದ ೧೪ನೆಯ ಶತಮಾನದ ಆದಿಯ ವರೆಗೆ ವಾರಂಗಲದ ಕಾಕತೀಯರ ವಶದಲ್ಲಿತ್ತೆಂದೂ, ಈ ಕಾಕತೀಯರು ರಾಷ್ಟ್ರಕೂಟರ ಮಾಂಡಲಿಕರಿದ್ದರೆಂದೂ ತಿಳಿಯಬರುತ್ತದೆ. ಬ್ರಿಟಿಷ ಮ್ಯೂಜಿಯಮದಲ್ಲಿಯ ಒಂದು ತಾಮ್ರ ಶಾಸನದಿಂದ ಕಾಕತೀಯರ ತರುವಾಯ ತಾಳೀಕೋಟೆ ಕಾಳಗದ ವರೆಗೆ ಈ ಪಟ್ಟಣವು ವಿಜಯನಗರದ ರಾಜರ ವಶದಲ್ಲಿತ್ತೆಂದು ಹೇಳಬಹುದು. ಆ ಮೇಲೆ ಈ ಪಟ್ಟಣವು ಮುಸಲ್ಮಾನರ ಕೈವಶವಾಗಿ ಈಗ್ಗೂ ಒಬ್ಬ ಮುಸಲ್ಮಾನ ಜಹಾಗೀರದಾರರ ಅಧೀನದಲ್ಲಿರುತ್ತದೆ. ಈ ಪ್ರಕಾರ ರಾಜಕೀಯ ದೃಷ್ಟಿಯಿಂದಲೂ, ಜೈನ, ವೀರಶೈವ, ವೈಷ್ಣವಧರ್ಮದೃಷ್ಟಿಯಿಂದಲೂ ಒಂದು ಕಾಲಕ್ಕೆ ಪ್ರಖ್ಯಾತವಾದ ಈ ಸ್ಥಳವನ್ನು ಕನ್ನಡಿಗರು ಈ ವರೆಗೂ ಕಣ್ಣೆತ್ತಿ ನೋಡದಿರುವದು ಒಳ್ಳೇ ಲಜ್ಜಾಸ್ಪದವಾದ ಸಂಗತಿಯು. ಈಗೀಗ ನಿಜಾಮ ಹೈದರಾಬಾದಿನಲ್ಲಿ ಸ್ಥಾಪಿಸಲ್ಪಟ್ಟ ಪ್ರಾಚೀನ ವಸ್ತುಸಂಶೋಧಕ ಸಂಘದವರು ಈ ಪಟ್ಟಣದ ಪ್ರಾಚೀನ ಇತಿಹಾಸವನ್ನು ಶೋಧಿಸಲಿಕ್ಕೆ ಬಹಳ ಪ್ರಯತ್ನ ಮಾಡುತ್ತಾರೆಂಬುವದು ಒಳ್ಳೇ ಸಂತೋಷಜನಕವಾದ ಮಾತು.

(ವಾಗ್ಭೂಷಣ).

ನೋಟೀಸು.

ದಕ್ಷಿಣ ಕನ್ನಡಾ ಒಫಿಶಿಯಲ್ ರಿಸೀವರರ ಕೋರ್ಟಿನಲ್ಲಿ.

ದಿವಾಳಿ ಅರ್ಜಿನಂಬ್ರ 22/1917

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ I. P. 3/17

ಬೇಕ್ರಂಗ, ಮುಳ್ಳಿಕಾರ್ನವನ ಅಳಿಯ ಕಾಸರಗೋಡ ತಾಲೂಕು ಪಳ್ಳಿಕೆರೆ ಗ್ರಾಮದ ಅಗಸರ ಹೊಳೆ ಎಂಬಲ್ಲಿರುವವ ... ... } ಅರ್ಜಿದಾರ.

ಎದ್ರಿಬು

ಬೆಂಗೆಯಿಲ್ ಕಣ್ಣನ್ನಾಯರ್ ಕೂಡಾ—ಕ್ರೆಡಿಟರರು.

ಮದ್ರಾಸ್ ಪ್ರೊವಿನ್ಸಿಯಲ್ ಇನ್ಸಾಲ್ವೆನ್ಸಿ 3ನೇ ಆಕ್ಟಿನ ಸೆಕ್ಷನ್ 12 ಕ್ಲಾಜು 2ರ ಪ್ರಕಾರ ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ತಾರೀಕು 28-7-1917ಕ್ಕೆ ತನಕಿಗೆ ಇಟ್ಟಿದೆ. ಎದುರಾದ ಅಪೇಕ್ಷಿಸುವ ಕ್ರೆಡಿಟರರು ಖುದ್ದಾಗಲಿ ಅಥವಾ ವಕೀಲ್‌ದ್ವಾರವಾಗಲಿ ಈ ಕೋರ್ಟ ಮುಂದೆ ಬೆಳಿಗ್ಗೆ 8 ಘಂಟೆಗೆ ಹಾಜರಾಗಿ ವ್ಯವಹರಿಸಬಹುದು ಎಂತ ಈ ಮೂಲಕ ಪ್ರಕಟಿಸೋಣಾಗುತ್ತದೆ.

ಒಫಿಶಿಯಲ್ ರಿಸೀವರರ ಕೋರ್ಟ
ಮಂಗಳೂರು ತಾ. 30—6—17.

B. M. Hegade.
ಒಫಿಶಿಯಲ್ ರಿಸೀವರ.

ಜೀನಸು ಧಾರಣೆ.

(ರಖಂ).

ಮುಕ್ಕತಿ ಅಕ್ಕಿ	6—2—0	ರಿಂದ	6—10—0
ಗುಡ್ಡು ಸುಗ್ಗಿ	5—8—0	„	6—2—0
ನಾತಿ	5—4—0	„	5—8—0
ಅವ್ವಲ್ ಬೆಳ್ತಿಗೆ	6—4—0	„	6—8—0
ಗುಡು ಬೆಳ್ತಿಗೆ	5—10—0	„	5—14—0
ರಂಗೂನು ಬೆಳ್ತಿಗೆ ಗೋಣಿ ೧ರ	9—8—0	„	9—12—0
ಗೋದಿ ಗೋಣಿ ೧ರ	15—8—0	„	16—0—0
ಹುರುಳಿ ಗೋಣಿ ೧ರ	5—10—0	„	7—0—0
ಕಡಲೆ ಗೋಣಿ ೧ರ ಬೊಂಬ್ಲ	9—12—0	„	10—0—0
ತೊಗರಿ ಗೋಣಿ ೧ರ			10—8—0
ಕೊಗಂಬೇಳೆ ಗೋಣಿ೧ರ 11—0—0	12—8—0	„	15—8—0
ಉದ್ದು ಗೋಣಿ ೧ರ	11—8—0	„	11—12—0
ಊರುಬೆಲ್ಲ ಖಂಡಿ ೧ರ		„	38—12—0
ಉಪ್ಪು ಗೋಣಿ ೧ರ	5—10—0	„	5—14—0
ಕೊಬ್ಬರಿ ಖಂಡಿ ೧ರ	70—0—0	„	75—0—0
ಕೊಬ್ಬರಿಹಿಂಡಿ ಖಂಡಿ ೧ರ			18—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಲ	28—12—0	„	35—0—0
ಕೊಬ್ಬರಿ ಎಣ್ಣೆ ಮುಡಿ ೧ರ	5—10—0	„	6—0—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		„	4—6—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	6—11—0	„	7—9—0
ಮೋರಿಸ್ ಸಕ್ಕರೆ ಮುಡಿ೧ರ	5—4—0	„	5—6—0
ಕಾಫಿ ಖಂಡಿ ೧ರ	150—0—0	„	165—0—0
ಹೊಸ್ಪೇಟೆಗೋಟು ಖಂಡಿ೧ರ	72—0—0	„	78—0—0
ಗೇರುಬೀಜ ಮುಡಿ ೧ರ.	1—12—0	„	1—13—0
ಕಲ್ಮೆಣಸು ಖಂಡಿ ೧ರ	105—0—0	„	110—0—0
ಹಾಂಬ್ರ ಹಗಡು ಮುಡಿ ೧ರ	31—0—0	„	34—8—0
ಹಾಂಬ್ರ ಪಾತ್ರಗಳು ಮುಡಿ ೧ರ		„	34—0—0
ಹೀಜ ಹತ್ತಿ ಹೇರು ೧ರ	23—8—0	„	24—0—0
ಪತ್ತೆ ಹೆಸರು ಮುಡಿ ೧ರ		„	5—2—0
ಅಡಕೆ ಖಂಡಿಗೆ		„	235—0—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನೀಕೃತ **ಸ್ಥಾಪನೆ 1888.**

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಒರೆ ಮತ್ತು ಹಟವಾದಿ ಗಜಕರ್ಣವು ಈ ಮಲಮಿನ ಒಂದೆ ೧ಯು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತದೆ. ೩೦—೪೦ ವರ್ಷಗಳ ಹಳೆತ, ಕ್ರಿಮಿನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ಕ್ಕೆ ೪ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ತಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾದ ದೋಷಗಳು ನಷ್ಟವಾಗುತ್ತವೆ. ಒಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಮುಂದ ಮೈಮೇಲೆ ಉಬ್ಬುವ ತಪ್ಪೆಗಳು, ಇಜಿಮುಗಳು, ಬಾಯಿಗೆ ಮತ್ತು ಅಂಗಗಳಿಗೆ ಹುಣ್ಣು ಬೀಳೋಣ, ಏನಿಸಪಂಜ ಮೂಗಿನ ಹೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲ ಕೈಕಾಲುಗಳುರಿಯೋಣ, ಕೈಮೇಲೆ ಕಪೆ ಕಲೆ ಬೀಳೋಣ, ಮುಂತಾದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಏನೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೯—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕ್ಕೊಳ್ಳುವವರಿಗೆ ಭರ್ಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಸುಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯುಳ್ಳದ್ದಾಗಿ ತಯಾರಿಸಿರುತ್ತೆ. 1 ಶೀಸೆ ಸುವಾಸನೆ 100 ಜನಕ್ಕೆ ಸಾಕಾಗುತ್ತೆ.

ವರ್ತಕರಿಗಾಗಿ ನನ್ನ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಒಂದಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ದೇಶದ ಸಾಮಾನುಗಳಲ್ಲಿ ಮೈಸೂರು ನನ್ನ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟಿನವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್, ಸೋಲ್ ಏಜಂಟ್ಸ್, ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್, ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಾಲಬೇನೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವೆ, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 200 ಮಾತ್ರೆಗಳುಳ್ಳ ಕುಪ್ಪಿಗೆ ೯ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ! ರಾ! ಶಾಸ್ತ್ರಿ ಪ್ರಭಾಕರ ಶರ್ಮ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ... ಇನ್‌ಸ್ಟಿಟ್ಯೂಟ್, ಲಂಡನ್ ... ಎಂಬುವರು ... ಈ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ... ಅಜೀರ್ಣ, ಮಲಬದ್ಧ, ಕೆಮ್ಮು, ... ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ... ವಾಯು ... ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಮಾತ್ರೆಗಳನ್ನೇ ... ವರದಿಯಾಗಿ ... ತಿಳಿಸಿರುತ್ತಾರೆ.

ಮ! ರಾ! ಪಿ. ಎಸ್. ... ಗವರ್ನ್‌ಮೆಂಟ್ ... ಇವರು ಬರೆಯುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ... ಉಪಯೋಗಿಸಿದ್ದೇನೆ. ... ಪ್ರಖ್ಯಾತಿ ... ಅನೇಕ ... ಉಪಯೋಗಿಸಿ ... ಮೂಲಿಕೆಗಳಿಂದಲೇ ... ಮಾಡಲ್ಪಟ್ಟಿರುತ್ತದೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ಏಜಂಟ್— ಶ್ರೀ ಸಿದ್ಧಾಯುರ್ವೇದ ವೈದ್ಯಶಾಲಾ, ಮೈಸೂರು.

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ ಕೆಲವು ಔಷಧಗಳು.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ಸೋಂಕು ಹತ್ತಿಕೊಳ್ಳದು.

ಇಕ್ಸಿರ್ ಡ್ರಾಪ್ಸ್ ಸೇವನೆಯಿಂದ ಬಹಳ ಬಗೆಯ ರೋಗಗಳು ಹೋಗಿರುವೆಂದಿದ್ದಾರೆ. ... ತ್ರಿಸೇರರು ...

ಕ್ರಯ 50 ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-6-0. ವಿ. ಪಿ. ಬೇರೆ.

ಎಂಟಿಸ್ನೇಕ್ ಬೈಟ್:— ಈ ಔಷಧಿಯು ನಾಗರ ಹಾವು, ಕೊಳಕುಹಾವು ಚೇಳು ಮೊದಲಾದ ವಿಷಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡಿದವರು ಒಂದೇ ತಾಸಿನಲ್ಲಿ, ಚೇಳು ಕಡಿದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1 ವಿ. ಪಿ. ಬೇರೆ.

ಟೊರಕಟ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೊದಲಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಒಡೆಯುವ ಮೊದಲಾದ ಕುರುಹುಗಳು ಕಂಡರೆ ತಿಳಿದು ಯಾ ತಿಳಿಯದ ರೀತಿಯಲ್ಲಿ ಧಾತು ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೊರಕಟ್ ಸೇವಿಸಿರಿ. ಕ್ರಯ ಸೀಸೆ 1ಕ್ಕೆ ರೂ 1—8—0. ವಿ. ಪಿ. ಬೇರೆ.

ಇಕ್ಸಿರ್ ಡ್ರಾಪ್ಸ್:— ಇದು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳನ್ನು ತಪ್ಪದೆ ಗುಣಮಾಡುತ್ತದೆ. ವಿಶೇಷ ಮಾಹಿತಿಗೆ ಬರಕೊಳ್ಳಿರಿ. ಕ್ರಯ ಸೀಸೆ 1ಕ್ಕೆ 0—6—0. ವಿ. ಪಿ. ಬೇರೆ.

ಶ್ರೀ ... ಬಾವಸ್, ಕಾಜಾ ... ಕೈಲ, ನೂಲ ... ಮೊದಲಾದ ಹಲವು ರೋಗಗಳಿಗೆ ಬೇಕಾದ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಸಿರ್ಸ್ ಏಜನ್ಸಿ, ಕಂಕನಾಡಿ ಪೋಸ್ಟ್, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಈ ಸಾಲಾಬ್‌ಮಿಸ್ರಿ ಮುರಬ್ಬಾ ದಿನ ಸೇವನೆಯಿಂದ ... ನರಶಕ್ತಿ ಕಡಿಮೆಯಾಗಿದ್ದರೂ, ಸ್ವಪ್ನಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ತಲೆಸುತ್ತುವಿಕೆಯು ಇದ್ದರೂ, ... ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವು ಒಳ್ಳೇ ಸ್ಥಿತಿಯಲ್ಲಿ ಬರುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸಿದವರಿಗೆ

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುವು. ಹಾಗೆ ವ್ಯಕ್ತಪಡಿಸಿದ್ದೂ ಬಹುಮಾನದ ಹಣವನ್ನು ನಾನು ಕೊಡದೆ ಸತಾಯಿಸುವುದಾದರೆ ಸರಕಾರದ ಮೂಲಕ ವಸೂಲ್ ಮಾಡಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪಾಲು ಖರ್ಚು ೧ ಡಬ್ಬದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡೆಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನು ಎಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಸಿವಿಲ್ ಪ್ರೊಸೀಜರ್ ಕೋಡು, ಕಂಟ್ರ್ಯಾಕ್ಟ್ ಆಕ್ಟ್, ಸ್ವತ್ತುಗಳ ವರ್ಗಾವಣೆ ಆಕ್ಟ್, ಡೈವೋರ್ಸ್ ವಿವಾಹ ಮತ್ತು ಲಿಮಿಟೇಶನ್ ಆಕ್ಟ್, ಸ್ಟಾಂಪು, ಕೋರ್ಟುಫೀ, ರಿಜಿಸ್ಟ್ರೇಷನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಪ್ರೊಬೇಟ್ ಆಡ್ಮಿನಿಸ್ಟ್ರೇಷನ್ ಮತ್ತು ಮದುವೆ ಆಕ್ಟ್, ರೆವಿನ್ಯು ಕೋಡ್, ಗ್ರಾಮ ಪೊಲೀಸರ ಕೋಡ್, ಗ್ರಾಮ ಮುನಸೀಫ್ ಕೋರ್ಟ್ ಕೋಡ್, ... ಕೋಡ್, ಮುಂತಾದವುಗಳ ಸಂಗ್ರಹಗಳು, ... ನಮೂನೆಗಳು ಮತ್ತು ವಿಷಯಸೂಚಿಗಳು 40 ಸಚಿತ್ರಗಳು. ಇದರಲ್ಲಿವೆ. ಇದು ಪ್ರತಿಯೊಬ್ಬನ ಮನೆಯಲ್ಲಿರತಕ್ಕದ್ದು. ಅವಶ್ಯಕವಾದದ್ದು.

... 1—8—0. ... 1—12—0.

ಯು. ಯಸ್. ನಂಜುಂಡಯ್ಯ ...

... 11 ...

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾವುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವುದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲದಲ್ಲಿಯೂ, ಮಲಸಂಬಂಧವನ್ನು ನರಗಳ ಬಲಹೀನತೆಯನ್ನೂ ಹೋಗಲಾಡಿಸುತ್ತವೆ. ... ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0. ಶಾರೀರಿಕ್ಯ ಅವಗಳನ್ನು ನಿವಾರಣೆ ಮಾಡುವದರಲ್ಲಿ ಬಲ್ಲಿಷ್ಠಕ ಶಕ್ತಿಯನ್ನು ವೃದ್ಧಿಮಾಡಿ ... ಜ್ಞಾನವನ್ನುಂಟು ಮಾಡುವದ

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯಸಲಹೆಯು ಮುಫತ್ತಾಗಿ ದೊರೆಯುವದು.

144 ಪುಟಗಳ ವೈದ್ಯವಿದ್ಯಾ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಚೀನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದಸೆಟ್ಟು ೧ಕ್ಕೆ ೨—೦—೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದುಯಂ ರೂಪ್ಯಾ ೧ಕ್ಕೆ ೮ ತೊಲೆ, ತೀಯಂ ರೂಪ್ಯಾ ಒಂದಕ್ಕೆ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಖಂಬಾ, ಕಾಶಿ.

SIROMANI NARAYANA CHARYA & CO.,
Choukhambay,
BENARES CITY.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವದೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವದೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.	ಮ್ಯಾನೇಜರ್,
Avenue Road,	ವೇದಪಾಠಶಾಲಾ,
BANGALORE CITY.	ಶೀರ್ಥಮುತ್ತೂರು, ಶೀರ್ಥಹಳ್ಳಿ.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ ಲಲ್ಲುಬಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ.ಎ.

ಇಂಡಿಯಾ ಸರಕಾರದ ಧಪ್ತರೆಯಲ್ಲಿ ರೂ. 200,000ವನ್ನು ಠೇವಣಾತಿ ಮಾಡಿಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೊಟ್ಟ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ವರ ರಾವ್ ದಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಒಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಕಣ್ಮನಗಳನ್ನು ಕಂಟಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಟಿಕೇಟು ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:—

ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
ಬೆಂಗಳೂರು ಸಿಟಿ.

ಮದರಾಸ್ ಮೇಲ್ ವಾಚ್.

6 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವವಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಪೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರೀಯ 1, ಗಟ್ಟಿ ಅಷ್ಟಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮ್ಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಆಂಡ್ ಕೊ.,

3. ಇರುಳಪ್ಪನ ಬೀದಿ, ಮದರಾಸ್.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಅಂಗೀಕರಿಸಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ಸೇರಿದ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆಗಳನ್ನು, ಆಯಾಯ



ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷ, ತಮಿಳ, [illegible] ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ 1—12—0 ವಿ. ಪಿ. ಚಾರ್ಜ 2 ಆಣೆ. ಎರಡು ಭಾಗಗಳು ಸೇರಿ ಕ್ರಯ ರೂ 1—4—0 „ 2 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,

ಜಿಮ್ನಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಾಚ್ಯಪ್ಪಾಸ್ ಕಾಲೇಜ್, ಮದರಾಸು

B. RAGHAVULU NAIDU,
Senior Gymnastic Instructor,
Pachiyappa's College, MADRAS.

N. B.—ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರಿಯಬೇಕು. ಮತ್ತು ಕಾಗದಗಳನ್ನ ಇಂಗ್ಲೀಷಿನಲ್ಲಿಯೇ ಬರಿಯಬೇಕೆಂದು ಕೋರುವೆವು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ¼ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ¼ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1ರ0-12-0.

ವಿ. ಪಿ. ಚಾರ್ಜ 0—4—0 ಬೇರೆ.

ಪ್ರಾಮುಖ್ಯ ಏಜಂಟರು:—

ಎಚ್.ಆರ್. ಮೋದಿ ಎಂಡ್ ಕೊ.,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.

H. R. MODY & Co.,
10 Princess Street, BOMBAY.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,

ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.

ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯ ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ್ಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಚಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಬಾಡಿ ತೀರ್ಥ[illegible], ವಸತಿ, ಸ್ನಾನ ಮತ್ತು ಆಹಾರ ಸಾಮಗ್ರಿ[illegible] ಕೊರತೆ, ಸೋಗಕಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅನಾನುಕೂಲತೆಗಳು ಇದ್ದೇ ಇರುವವಷ್ಟೆ! ನಾನು ಕಳೆದ [illegible] ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಠಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ

ನನ್ನ ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,

ಪುರೋಹಿತ, ಧರ್ಮಪುರೀ ಛತ್ರಂ,

ಪೋಸ್ಟ್ ಆಫೀಸು ಎದುರು,

ರಾಮೇಶ್ವರಮ್

ಮೈಸೂರು ದಸರಾ ಪ್ರದರ್ಶನದಲ್ಲಿ

ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. ಚವನಪ್ರಾಶ ಲೇಹ್ಯ:—ಕೆಳಕಣ್ಣು, ಕ್ಷಯ ಮತ್ತು ಉಬ್ಬಸ ರೋಗಗಳನ್ನು ನಾಶಮಾಡುವದು. ದೇಹಕಾಂತಿಯನ್ನು, ಆರೋಗ್ಯವನ್ನು, ಧೈರ್ಯವನ್ನು, ಇಂದ್ರಿಯ ಬಲವನ್ನು, ಜೀರ್ಣಶಕ್ತಿಯನ್ನೂ ಕೊಡುತ್ತದೆ. [illegible] ಬಹು ಸುಲಭವಾಗಿ [illegible] ಈ ರಸಾಯನ ಸೇವನೆಯಿಂದ [illegible] ನವಯೌವನವನ್ನು ಹೊಂದಿದರೆಂದು [illegible] ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಕ್ರಯ ಡಬ್ಬಿಗೆ ರೂ. 3—0—0.

೨. ಬಾಣಂತಿ ಮಾತ್ರೆ:—ಪ್ರಸವವಾದ ಬಾಣಂತಿಯರು 30 ದಿನಗಳವರೆಗೆ ಉಪಯೋಗಿಸುವದರಿಂದ ಬೇರೆ ಔಷಧ ಗಳ ಆವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರದ ಮಾತ್ರೆಗಳು, ಲೇಹ್ಯಗಳು, ತೈಲಗಳು, ಆಸ್ವಗಳು ಸಿಕ್ಕುತ್ತವೆ. ಸ್ತ್ರೀ ವ್ಯಾಧಿಯಿಂದ ಪೀಡಿತರಾದವರೂ, ಬೇರೆಯವರು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,

ಎಂ. ಎ. ಎಸ್. ಎಸ್. ಎ. ವಿ. ಎಸ್. ವೈದ್ಯಶೇಖರ,

ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರಿಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇವು ಹೆಚ್ಚು ಕಾಲದಿಂದ ಉಪಯೋಗಿಸಿ ಶಿಫಾರಸು ಹೊಂದಿದ್ದಾಗಿದೆ. ದರವನ್ನು ಇದರಡಿ ಸೂಚಿಸಿರುವರು.

	ಬಿಲ್ಲೆ 1ರ	ಡಜನ್ 1ರ
1. ಕಸ್ತೂರಿ ಸಾಬೂನು 3 ಬಿಲ್ಲೆಗಳುಳ್ಳ ಪೆಟ್ಟಿಗೆ	0—8—0	5— 0—0
2. ಮನೋಹರ „ „ „	0—5—0	3— 8—0
ಅತ್ತರ ಸಾಬೂನುಗಳು.		
3. ಖಸ್ ಸಾಬೂನು	0—4—0	2—12—0
4. ಗುಲಾಬ್ „	0—4—0	2—12—0
5. ಹೀನಾ „	0—4—0	2—12—0
6. ಕೇವ್ಡಾ „	0—4—0	2—12—0
7. ಗುಲಾಬಿ „	0—4—0	2—12—0
8. (ಬಾತ್ ಸೋಪ್) ಸ್ನಾನದ ಬಗ್ಗೆ ಉಪಯೋಗಿಸುವದು.	0-1-6	1- 1-0
ಡೈಮಂಡ್ ಬಣ್ಣದ ಸಾಬೂನು.		
9. ಗುಲಾಬಿ, ಸಾಲ್ಮಂಡ್, ಹಾಕಿ ಮತ್ತು ಹಳದಿ	0—1—6	1—1—0
10. ಹಸ್ರು, ಹಾಲಿ, ನೇರಳೆ, ಹಸುರು, ಕೆಂಪು	0—2—0	1—7—0

ಏಜಂಟರು:—ಡಿ. [illegible], ಮಂಗಳೂರು, ದ. ಕ.

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ.

ಈ ಸಾರ್ಸಾಪರೀಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ನೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯುಕ್ತಿಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ಪಿತ್ತಕಾಠಿಣ್ಯದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದವ್ಯಥೆಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ ೧ಕ್ಕೆ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸ್ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಬಾಂಜ್ವರ, ಸನ್ನಿಪಾತ, ಕೆಟ್ಟ ವಾಯು ವಿಕಾರದಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣವಾಗದೆ ಇದ್ದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ ೧ಕ್ಕೆ ರೂ. ೦—೧೨—೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉರಿ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥಾ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವನಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ೧ಕ್ಕೆ ರೂ. ೧—೮—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,

ನಂಬ್ರ ಡಿ. ಫ್ರಿಯರ್ ರೋಡ್,

ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ತ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ

ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ.

ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,

ಸಾಹುಕಾರಪೇಟೆ, ಮದರಾಸು.

ಕುಂಬಳೆ ನರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನದೊಡನೆ ಒಂದು ಅಧ್ಯಾಯ ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಧಾಮಿನಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೨ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,

ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವುದು.

ಪಂಡಿತ್ ಟಿ. [illegible]ಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಮಿಶ್ರಣದ ಒರೇ 48 ದಿವಸಗಳ ಸೇವನೆಯಿಂದ ಶ್ವಾಸ[illegible], ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ಮೇಹ, ಸಿಹಿಮೂತ್ರ, ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. ವೃದ್ಧರುಗಳು ದೃಢಕಾಯರಾಗುವರು. ಬಂಜೆ ಸ್ತ್ರೀಯರು ಪುತ್ರವತಿಯರಹರು.

ಶೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಿಗಳು [illegible] ಇರುವದರಿಂದ ನಮ್ಮ ಕೆಟಲಾಗಿಗೆ ಬರಿಯಿರಿ.

ವಿಳಾಸ:—[illegible] ಡಿಪೋ,

[illegible] ಮಂಗಳೂರು.

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತ್ಶೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳೆಯ ಮೂಲ ವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಪೀಗು, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. ಸರ್ವ್ವೇರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M. NATH & CO. *Ayurvedic Chemists*
Vepery Post MADRAS.

ದಂತ ವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮಾರವರು

ಸದ್ಯದಲ್ಲಿಯೇ ಇಲ್ಲಿಂದ ಇತರ ಪ್ರಾಂತ್ಯಗಳಿಗೆ ಹೋಗುವರೆಂದು ನಿಶ್ಚಯಿಸಿರುತ್ತಾರೆ. ಆದ್ದರಿಂದ ಕೃತಕ ಹಲ್ಲುಗಳನ್ನು ಇಡಲಿಚ್ಛಿಸುವವರೂ ವ ದಂತ ಚಿಕಿತ್ಸೆ ಮಾಡಬೇಕೆಂದಿರುವವರು ಈ ಸಂದರ್ಭವನ್ನು ಬಿಡಬಾರದು.

ಚಾರ್ಜು ಅತೀ ಸುಲಭ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ಶೋಪಿನ ಬಳಿ,
ಮಂಗಳೂರು.

ಅಮೃತಾರ್ಣವ ಅವಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತಪುಷ್ಟಿಯುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತುಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೈಗೂಡಿಸುವದು. ಕ್ರಯ ಸುಲಭ! ಫಲವು ಅಧಿಕವು!!

೨೦ ತೊಲೆಗೆ ರೂ. ೨—೦—೦ ಮಾತ್ರವೇ

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂದರಿ ರೋಜ

ಅಂದ ಮನೋಹರವೂ ಮೋಹಕರವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಪ್ಪು ತರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಹೊತ್ತನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಂದರ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬೇಕಾದರೆ ಅವುಗಳು ಸ್ತ್ರೀಯರಂತೆ ವೃದ್ಧಿಯಾಗಿ ಕಂಗೊಳಿಸುತ್ತಿರಬೇಕು. ಇನ್ನು ಕೆ ಕೂದಲನ್ನು ಯಾವ ರೀತಿಯಿಂದ ... ಕಪ್ಪು ನಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಬನ್ನಾಗಿಯೂ ತ್ವರೆಯಾಗಿ ಬೆಳೆಯಿಸಿ ತಲೆಯ ಸರ್ವ ವ್ಯಾಧಿಗಳನ್ನು ಹೋಗಲಾಡಿಸುವದು. ನಿದ್ರಾಭಂಗವನ್ನು ಪರಿಹರಿಸುವದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ನಿತ್ಯವೂ ಉಪಯೋಗಿಸಿದರೆ ಎಂದಿಗೂ ಬಿಳುಪುಗೊಳ್ಳುವದಿಲ್ಲ. ಅದರ ಅವು ದಟ್ಟವಾಗಿ ಬೆಳೆದು ನಯವಾಗುವವು. ಇದರ ಸುಗಂಧವಾದರೊ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸುವ ... ಕೂದಲನ್ನು ಕೊಡುವದು. ಕೂದಲನ್ನು ಕಾಂತಿಗೊಳಿಸಿ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವದು, ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟು ಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿ ರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಿಲ್ ಶೀಶೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರ ಧರಿಸಿಕೊಳ್ಳುವ ಕೊಂಡಿಗಳ 6, ಕಣ್ಣುಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜಾರಾಣಿ ಕಾರ್ಡಿನ ಪೆಟ್ಟಿಗೆ 1, ದಿವಿತವಾದ ಪೌಡರು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1. ಕ್ರಯ 50 ಬಹುಮಾನಗಳ ಸಹಿತ ರೂ. 1—0—0

ವಿಳಾಸ:— ವಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಮನೋಲ್ಲಾಸಿನಿ ತೈಲ!

ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕುಂದಿಹೋಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದೆಂತಲೂ ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗಿರುವ ಕೂದಲನ್ನು ತಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆಂತಲೂ ಈ ತೈಲವನ್ನು ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ 1 ಸೀಸೆಗೆ ರೂ. 0—12—0. (ವಿ. ಪಿ. ಖರ್ಚು 4 ಆಣೆ).
,, 3 ಸೀಸೆಗಳಿಗೆ ,, 2— 0—0. ,, ,, 8 ,,

ಬೆಲೆ ಸುಲಭ! ಚಿನ್-ಚಿನ್-ಬಾಂ. ಗುಣ ಅಧಿಕ!

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ದಕ್ಕು, ಘಾಯ, ಚೇಳು ಕಡಿತ, ಕೃಕ್ಕ ಮುಂತಾದ್ದು ತಕ್ಷಣ ಗುಣ. ಬೆಲೆ 1 ಡಬ್ಬಿಗೆ ಒಂದೇ ಆಣೆ. ಡಜನ್ 1ಕ್ಕೆ ರೂ. 0—10—0. ಅಂಚೆ ಹಾಸಲು ಬೇರೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್.

ಸೂಚನೆ:—ಅನೇಕ ತರದ ಮಾತ್ರೆಗಳು, ತೈಲಗಳು, ಘೃತಗಳು, ಲೇಹ್ಯಗಳು, ಅರಿಷ್ಟಗಳು, ಸಿಕ್ಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
4, ಕಂಕನಾಡಿ ಪೋಸ್ಟು, ಮಂಗಳೂರು.

ಹೊಸ ಪುಸ್ತಕ! **'ಹಿಂದೂಲಾ'** ಹೊಸ ಪುಸ್ತಕ!

ಇದುವರೆಗಿಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲಿಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅಣ್ಣತಮ್ಮಂದಿರ ದಾಯಭಾಗ ಪಾಲು ಪಾರಿಖತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯದೋಗ್ಯ ಆಧಾರ ಅನ್ನಾಧಿಪತ್ರಗಳು, ಗುರುಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಬಕ್ಕಣೆ ... ವಿಶದವಾಗಿ ಅಚ್ಚುಮಾಡಲ್ಪಟ್ಟಿದೆ. ಕ್ರಯ ರೂ. ೧—೮—೦.

ವಿಳಾಸ:—ಬಿ. ನರಸಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು, ಸಿಟಿ.

ಪ್ರಖ್ಯಾತಪಟ್ಟ ಪೋಜೀ ಗಾಸ್‌ದೀಪಗಳು:—
ಗಾಸ್‌ದೀಪಗಳಲ್ಲಿ ಅತಿ ಗಟ್ಟಿಯಾದವುಗಳು ಮತ್ತು ಉತ್ಕೃಷ್ಟವಾದವುಗಳು. ಬಿಲ್ ಫೋಜಿಮೆಂಟಲ್ ಯಾ ಭಿಕ್ಕಿಗಳು, ಬಹಳ ಅಗ್ಗ, ಕೆಟಲಾಗು ಅಥವಾ ಸಾಮಾನು ಪಟ್ಟಿಯನ್ನು ಉಚಿತವಾಗಿ ಕಳುಹಿಸಿ ಕೊಡುವೆವು.

ಸೋಲ್ ಏಜೆಂಟರು— ... ಸನ್ ಕಂಪೆನಿ,
ತಂಜಾವೂರು.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ
ಡಾಕ್ಟರರ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗೆಸುವದು ಅನಾವಶ್ಯಕ
ಶೀಘ್ರಫಲದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವರು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂದ್ರಲ್ ಗಾರ್ಡನ್ ಮತ್ತು ಹಂಪನಕಟ್ಟೆ ಶೋಪುಗಳಲ್ಲಿ ದೊರೆಯುವದು: **STANY BROTHERS**
Sole Agents
M. C. C's. Toothache Specific, Mangalore.

ಸಬ್ ಏಜಂಟರು ಬೇಕಾಗಿವೆ.

ಮೈಸೂರು ದಸರಾ 1916ನೇ ವರ್ಷದ ಸರ್ವ ವಸ್ತುಪ್ರದರ್ಶನ ಶಾಲೆಯಲ್ಲಿ ಬಿರುದು ಬಿಲ್ಲೆಯನ್ನೂ ಮತ್ತು ಅನೇಕ ಡಾಕ್ಟರುಗಳಿಂದ ಯೋಗ್ಯತಾಪತ್ರವನ್ನೂ ಪಡೆದಿರುತ್ತದೆ.

ಇತ್ತ ನೋಡಿ! ಜಾಗ್ರತೆ ಮಾಡಿ!! ಬೆಲೆ ಸುಲಭ!!!

ರಿಕ್ಸ್ ರಾಮಕಷಾಮೃತ.

ನೀವು ನಿಮ್ಮ ಅನುಕೂಲವಾದ ಕಾಲವನ್ನು ಏತಕ್ಕೆ ಯೋಚನೆಗೂ ಸಂಕಟಕ್ಕೂ ಒಳಗುಮಾಡಿಕೊಂಡು ಕೃಶರಾಗಿರುವಿರಿ!

ಈಗಿನಿಂದ ತಯಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಕೊಡುವುದಕ್ಕೆ ಸಿದ್ಧವಾಗಿದೆ. ಬೆಲೆ ಸುಲಭ, ಪ್ರಯೋಜನ ಬಹಳ. ವಿದ್ಯಾರ್ಥಿಯರಿಗೂ, ಪ್ರಯಾಣಿಕರಿಗೂ, ಪ್ರಜೆ, ಕುಟುಂಬ ವರ್ಗದವರಿಗೆ, ಮುಖ್ಯವಾಗಿ ಎಲ್ಲಾ ಜನಾಂಗಕ್ಕೂ ಬಹಳ ಪ್ರಯೋಜನಕರವಾದದ್ದು. ಒಂದುಸಾರಿ ಉಪಯೋಗಿಸಿದ್ದಲ್ಲಿ ಮತ್ತೆ ಇದನ್ನು ಬಿಡಲಾರಿರಿ. ಬೆಲೆ ಸೀಸೆ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ 5—4—0 ವಿ. ಪಿ. ಬೇರೆ.

ಎಲ್ಲಾ ಸ್ಥಳದಲ್ಲಿಯೂ ಏಜಂಟರು ಬೇಕು. ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ದೊರೆಯುವದು.

ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

R. K. DEPOT,
272 Chamrajpet, [B]NGORE.

Agents in Mangalore—
The Mangalore Cycle Stores, Mangalore.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೩ನೇ ಜುಲಾಯಿ ಶುಕ್ರವಾರ ೧೯೧೭. | ಸಂಚಿಕೆ ೨೮.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 38/17.

ವಾಣಿಕೆಹೊಳಲು ಮ್ಯೊರಿನ್ ಸಾಹೇಬ—ಅರ್ಜಿದಾರ.

ಮತ್ತು

ಬಿಬಿ ಫಾತಿಮಾಬಿ ಕೂಡಾ—ಎಪ್ರಿ ಅರ್ಜಿದಾರರು.

ಇವರೊಳಗೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

ಉತ್ತರ ಕನ್ನಡಾ ಜಿಲ್ಲಾ ಹೊನ್ನಾವರ ತಾಲೋಕು ಮುರ್ಡೇಶ್ವರದಲ್ಲಿ ಇತ್ತಲಾಗೆ ಮೃತನಾದ ತನ್ನ ತಂದೆ ಕೋಟೇಶ್ವರ ಅಬ್ದುಲ್ ಮಹಮ್ಮದ ಸಾಹೇಬನ ಸಾಲಗಳ ವಸೂಲಿ ಬಗ್ಗೆ ಅರ್ಜಿದಾರನು ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಕೊಟ್ಟ ಸದರಿ ಅರ್ಜಿ ತನಕೆಯು ಸದರಿ ಕೋರ್ಟಿನಲ್ಲಿ ತಾ. 25-7-17ಕ್ಕೆ ಇಟ್ಟಿರುವದರಿಂದ ಸದರಿ ಅರ್ಜಿಗೆ ಆಕ್ಷೇಪ ಹೇಳುವವರು ಸದರಿ ಕೋರ್ಟು ಮುಂದೆ ತನಕೆ ವ್ಯಾದೆ ಒಳಗೆ ಜಾಹೀರು ಮಾಡತಕ್ಕದ್ದು.

ಕುಂದಾಪುರ,
ತಾ. 5-7-17.

K. K. Bhandari,
Pleader for Petitioner.

ಬಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಯಕ್ಷಗಾನ.

ತುಳು ಪಂಚವಟಿ ರಾಮಾಯಣ	...	ಕ್ರಯ ರೂ. 0—3—0
ಕನ್ನಡ ದುಂದುಭಿ ಆಖ್ಯಾನ	...	,, ,, 0—4—0
ಕನ್ನಡ ಚಂದ್ರಮೌಳಿ ಕಾಳಗ	...	,, ,, 0—4—0

ಈ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಳ್ಳುವವರಿಗೆ ಕ್ರಯ ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕೆಟಲಾಗು ಮುಫತ್ತು.

ವಿಳಾಸ:— ಕೆ. ಸುಬ್ರಾಯ ನಾಯಕ ಎಂಡ್ ಸನ್ಸ್,
ಜಿ. ಟಿ. ಏಜನ್ಸಿ,
ವಿಟ್ಲ, ದ. ಕ.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಯೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೋಮಿಯೋಪತಿ, ಟಿಸ್ಯೂ, ಸ್ಪೆಸಿಫಿಕ್, ಇಲೆಕ್ಟ್ರೋ ಹೋಮಿಯೋಪತಿ ವ ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೋಮಿಯೋಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
ಧರ್ಮಸ್ಥಳ.

A Kannada Popular Science Monthly.

"ವಿಜ್ಞಾನ" ವೆಂಬ ಕನ್ನಡ ಮಾಸಪತ್ರಿಕೆ.

ಇದರಲ್ಲಿ ಜನರಿಗೆ ಉಪಯುಕ್ತವಾದ ಆಧುನಿಕ ವಿಜ್ಞಾನದ ವಿಷಯಗಳು, ಸಾಮಾನ್ಯ ಜನರಿಗೆ ತಿಳಿಯುವಂತೆ, ಸುಲಭವಾದ ಕನ್ನಡದಲ್ಲಿ ಸ್ವಾರಸ್ಯವಾಗಿ, ಅನೇಕ ಚಿತ್ರಗಳೊಡನೆ ವಿವರಿಸಲ್ಪಡುವುವು. ಸಂಚಿಕೆಗೆ ೩೨ ಪುಟಗಳು. ಈ ವರುಷದ ಚೈತ್ರಮಾಸ ಮೊದಲ್ಗೊಂಡು ಹನ್ನೆರಡು ಸಂಚಿಕೆಗಳಿಗೆ, ಚಂದಾ ಮೊಬಲಗು, ಮೂರು ರೂಪಾಯಿಗಳು.

ಅಪೇಕ್ಷಿಸಿದಲ್ಲಿ ಮಾದರಿ ಪುಟಗಳನ್ನು ಉಚಿತವಾಗಿ ಕಳುಹಿಸುವೆವು.

ಬಿ. ವೆಂಕಟನಾರಣಪ್ಪ ಎಂ. ಎ.,
ಮ್ಯಾನೇಜರ್, "ವಿಜ್ಞಾನ"
ಬಸವನಗುಡಿ, ಬೆಂಗಳೂರು ಸಿಟಿ.

ಪ್ರಕಟಣೆ.

ಒಂದು ಜೋಡು ಎತ್ತುಗಳು ಗಾಡಿ ಸಹಿತವಾಗಿ ಮಾರಾಟಕ್ಕೆ ಇರುತ್ತವೆ. ಒಟ್ಟು ಕ್ರಯ ರೂಪಾಯಿ 300. ಬೇಕಾದವರು ಮರ್ಕೆಂಟೈಲ್ ಮಿಶನ್ ಬ್ರಾಂಚ್ ಮೆನೇಜರರಿಗೆ ಬರಕೊಳ್ಳುವದು.

Mercantile Mission Branch,
MANGALORE.

ಒಳ್ಳೆ ಗೊಬ್ಬರ! ಅವ್ವಲ್ ಈಡು!!

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಒಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಕರ್ಣಿಕ ಎಗ್ಯೂಮಿಕ್ಸ್ಚರ

Karnik's Ague Mixture.

ಚಳಿಜ್ವರ, ಮಲೇರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಪೆನೊ-ಪಿನ್:— ಕೋಲೆರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು:— ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಮುಕ್ತಟೆ.

ಕರ್ಣಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು

ಇತರರಿಂದ ಏಕೆ ಪಡೆಯಬೇಕು?

ಬಾಟ್ಲಿ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು

ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ

ಗಜಕರ್ಣದ ಮುಲಾಮು.

ಡಬ್ಬಿ 1ಕ್ಕೆ ಆಣೆ 6.

ಮಕ್ಕಳ ಎಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಕೇರಬೀದಿ, ಮಂಗಳೂರು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಲೋ. ಸ. ಟೆಕ್ಸ್ಟು 4 ಆಣೆ, ಡಿಟೋ ನೋಟ್ಸು ಮ ವಂಶಿ ಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟು 2½ ಆಣೆ, Rama & Sita 4 as., (Do Notes 6 as., General Eng. Questions & Answers from 1901-1917 6 as., by Mr. Pichamuttu, B. A.,) Gen. English by Mr. Chennakesaviah Rs. 1-2-0, ಛಂದಸ್ಸು 15 ಆಣೆ, ಡಿಟೋ 11ನೇದು 5 ಆಣೆ, ಪ್ರಶ್ನೋತ್ತರ ಲೇಖ್ಯಬೋಧಿನಿ ರೂ. 1-8-0 ನವೀನ ಗಣಿತ 8 ಆಣೆ, ಹಿಂದೂ ಚರಿತ್ರಸಾರ 10½ ಆಣೆ, ಸಂಸಾರ 1ನೇ ರೀಡರ 5 ಆಣೆ, ಡಿಟೋ 2ನೇದು 7 ಆಣೆ, ಡಿಟೋ 3ನೇದು 8½ ಆಣೆ, ಡ್ರಿಲ್ ಪುಸ್ತಕ 2½ ಆಣೆ, ಮಕ್ಕಳ ಕಿಂದರ್ಗಾರ್ಟನ್ 12 ಆಣೆ, ಲೇಖ್ಯಬೋಧಿನಿ 8½ ಆಣೆ, ಲೇಖನ ಲಕ್ಷಣ 5 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

ಈ ಪುಸ್ತಕದಲ್ಲಿ:— ೧ ಏನರ್ಜಕೋಡು, ೨ ದಂಡನೀ ಆಕ್ಟು, ೩ ಎಕ್ಸೈಜ ರೆಗ್ಯುಲೇಶನ್, ೪ ಆಯುಧಗಳ ರೆಗ್ಯುಲೇಶನ್, ೫ ದತ್ತವಿಧಾನದ ರೆಗ್ಯುಲೇಶನ್, ೬ ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಶನ್, ೭ ಪ್ರಾಣಿ ಹಿಂಸೆ ... ಕೂಡದೆಂಬ ರೆಗ್ಯುಲೇಶನ್, ೮ ಬಾಲ್ಯವಿವಾಹಗಳ ರೆಗ್ಯುಲೇಶನ್, ೯ ... ರೆಗ್ಯುಲೇಶನ್, ೧೦ ಟೆಲಿಗ್ರಾಫ್ ಆಕ್ಟು, ೧೧ ... ಆಫೀಸ್ ಆಕ್ಟು ... ಆಗುವ ತಪ್ಪುಗಳೂ ಮತ್ತು ಶಿಕ್ಷೆಗಳೂ ಅಕಾರಾದಿ ... ವಿವರಿಸಲಾಗಿದೆ. ಕ್ರಯ ರೂ. 2—8—0.

ಎಚ್. ಎನ್. ರಾವ್ ಬ್ರದರ್ಸ್,
... ಬೆಂಗಳೂರು ಸಿಟಿ.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital	Rs. ...	300,000—0—0
Issued Capital	...	225,000—0—0
Subscribed Capital	...	225,000—0—0
Paid up Capital	...	201,775—0—0
Deposits	...	310,261— 3—10
Reserve Fund	...	50,003—2—5

ನಿಯಮಿತ ಮೂಲ ಧನವು	ರೂಪಾಯಿ	300,000—0—0
ಹುಟ್ಟಿಸಿದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	201,775—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		310,261— 3—10
ರಕ್ಷಿತ ಧನವು	...	50,003—2—5

25% of the net profits are added annually to the Reserve Fund. Rs. 27,349-11-2 have been invested in Government Paper

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 27,349-11-2 ಸರಕಾರದ ರೂ. 30,800ರದ ಪ್ರಾಮಿಸರಿ ನೋಟು ಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರ ದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5, 5½% and 6 respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕ... ಮೊಬಲಗುಗಳು ಮೆನೇಜಿಂಗ್ ಕಮಿಟಿ ಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one week's notice of withdrawal after one month received @ 2½% per annum at the discretion of the managing committee

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4⅛%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.,
Mangalore, 1st July 1917.

P. Gopal Naik,
Secretary.

ಪ್ಲೇಗನ್ನು ನಿರ್ಮೂಲವಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಪ್ಲೇಗ್ ನಿವಾರಕ... ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವವರಿಗೆ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಪಡಿಸುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂ. ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಗಳು. ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂ. ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ: — "ಪಂಡಿಟ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವುದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ತೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರೆ ಕಂಪನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ. ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಪಂಡಿತ ಎಂ. ಎಸ್. ಯವರ ಮದರಾಸ್ ಪುಡಿ ನಶ್ಯ.

ಈ ನಶ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ

ಪುಡಿಯನ್ನು ಉಪಯೋಗಿಸುವುದರಿಂದ ಪೀನಾಸಿ, ಅರತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣ ಮಾಡುವದು. ಈ ನಶ್ಯವು ಬೇರೆಯವರ ನಶ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮಿದುಳನ್ನು ಕೆಡಿಸುವದಿಲ್ಲ. ಈ ನಶ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5 ಆಣೆ.

ಒಂದೇಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್ ಸಿಟಿ. ಬಾಬು ಕಂಪನಿ
ನಂಬ್ರ 7-2ನೇ ನಾರಾಯಣ ಬೀದಿ, ಪಿಂಟ್-ಬಿಲ್ಡಿಂಗ್ ಮದರಾಸ್.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ ಆತುರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿಶ, ಗರುಡಪೃಷ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧ ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುಷ್ಟತೆಯುಳ್ಳವರನ್ನಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟೀಕರಣ. ಇದು ಸ್ತ್ರೀಯರ ಎಲ್ಲಾ ಚಿಪ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1-8-0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣದ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0-8-0

೮. ಜನ್ಮಾಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಡಿಕೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1-0-0

N. B. — ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಆಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0-12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ —

ಉನ್ಮಾದಿನಿ	0— 6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0— 8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0

(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).

ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0— 4—0
ಪ್ರತಿಜ್ಞೆ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0— 1—6
ಕುಸುಮ ,,	0— 1—0
ರಾಧಾನಾಥ ,,	0— 2—0
ಸುಭದ್ರೆ ,,	0— 5—0
ಚಂದ್ರಹಾಸ (ಹೊಸ ಕಥೆ)	0— 1—0
ಧ್ರುವ ,,	0— 2—0
ಮಕ್ಕಳ ತಿದ್ದುಗೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1— 0—0
,, ಸಂಗೀತ ಸಮಯಸಾರ	1— 4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1— 4—0
ವಿಕ್ರಮ	1— 2—0
ಚಂದ್ರವದನಾ	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18×28ಕ್ಕೆ	0— 1—0

ಯೂರೋಪದ ಮಹಾ ಯುದ್ಧ.

ಯುನೈಟೆಡ್ ಸ್ಟೇಟ್ಸಿನಿಂದ ಈ ವರೆಗೆ ಬ್ರಿಟಿಷ ಸರಕಾರದವರು ೧೧೭ ಮಿಲ್ಲಿಯ ಪೌಂಡು ಸಾಲ ಪಡೆದರು.

ಜರ್ಮನಿಯಲ್ಲಿ ಆಹಾರ ಕುಟ್ಟಿಯಾಗಿ ಅಲ್ಲಲ್ಲಿ ಜನರು ದಂಗೆ ಏಳುತ್ತಿದ್ದಾರೆಂದು ವರ್ತಮಾನ ಪತ್ರಿಕೆಗಳಿಂದ ಗೊತ್ತಾಗುತ್ತದೆ.

ಎಯಿಲೆ-ಶೆಯಿಸ್ಸಿ ರಸ್ತೆಗೆ ಸಮೀಪದಲ್ಲಿ ಫ್ರೆಂಚ ಮತ್ತು ಜರ್ಮನರೊಳಗೆ ಭಯಂಕರ ಯುದ್ಧ ನಡೆಯಿತು. ಜರ್ಮನರ ಪ್ರಯತ್ನಗಳು ನಿಷ್ಫಲವಾಗಿ ಅವರು ಮುಂದರಿಸಲಾಗಲಿಲ್ಲ.

ರುಶ್ಯ ಮತ್ತು ತುರ್ಕಿಯ ಸೈನ್ಯಗಳಿಗೆ ಕೆಪಿಸಿಯುಕಿ ಎಂಬಲ್ಲಿ ಮಹಾ ಯುದ್ಧ ನಡೆಯಿತು. ತುರ್ಕಿಯರ ೬ ಫಿರಂಗಿಗಳೂ ೭೩೬೪ ಮಂದಿ ಸೈನಿಕರೂ ರುಶ್ಯದವರಿಗೆ ಸೆರೆಸಿಕ್ಕಿದರು. ಬೈಜಾನಿ ಎಂಬಲ್ಲಿ ತುರ್ಕರು ಬಲಪಡಿಸಿದ ಕೆಲವು ಚಿಕ್ಕ ಕೋಟೆಗಳು ರುಶ್ಯದವರ ಕೈಸೇರಿದುವು. ಶೆಂಡವಿನ ಎಂಬಲ್ಲಿ ತುರ್ಕಿಯರು ಹಿಮ್ಮೆಟ್ಟುತ್ತಲಿದ್ದಾರೆ. ಅಲ್ಲಿಂದ ಮುಂದೆ ರುಶ್ಯದ ಸೈನ್ಯವು ಜೊಲೊಕೆವ್ ಎಂಬಲ್ಲಿಗೆ ತುರ್ಕಿಯರನ್ನು ಹಿಂದಕ್ಕೆ ಓಡಿಸಲು ತೊಡಗಿ ೬೩೦೦ ಮಂದಿ ಸೈನಿಕರನ್ನೂ ೨೧ ಫಿರಂಗಿಗಳನ್ನೂ ೧೭ ಮೆಶಿನ್ ಗನ್‌ಗಳನ್ನೂ ವಶಪಡಿಸಿಕೊಂಡಿತು. ಪ್ರೆಸೊಸ್ಟೇ ಎಂಬ ಊರು ರುಶ್ಯದವರ ಕೈಸೇರಿತು. ತುರ್ಕಿಯ ಸೈನ್ಯವು ಸ್ಟೆಹಾನದಿ ದಾಟಿ ಹಿಂದಕ್ಕೆ ಸರಳಿತು.

ರಿಗಾ ಮತ್ತು ಸ್ಮೊರ್ಗನ್ ಬಳಿಯಲ್ಲಿಯೂ ಸ್ವಿಲ್‌ಹೊಡ್ ಮತ್ತು ಜೊಟಲಿವಾ ಎಂಬ ಸ್ಥಳಗಳ ಬಳಿಯಲ್ಲಿಯೂ ಜರ್ಮನರಿಗೂ ರುಶ್ಯದವರಿಗೂ ಜೋರಾಗಿ ಯುದ್ಧ ನಡೆಯುತ್ತಲಿದೆ.

ಯುದ್ಧದಲ್ಲಿ ರುಶ್ಯರು ಉತ್ಸಾಹಭರಿತರಾಗಿ ಪುನಃ ಯುದ್ಧಮಾಡುವುದನ್ನು ಕಂಡು ಲಂಡನ್ ಮತ್ತು ಪೆರಿಸ್ ಪಟ್ಟಣಗಳಲ್ಲಿ ತುಂಬಾ ಸಂತೋಷ ಉಂಟಾಗಿದೆ.

ನೋರ್ವೆ ರಾಜ್ಯದವನಾದ ಆಲ್ಪ್ರೆಡ್‌ಹೆಗ್ಗ ಎಂಬವನು ಜರ್ಮನಿಯ ಪರವಾಗಿ ಗೂಢಚಾರನಾಗಿ ವರ್ತಮಾನ ಸಂಗ್ರಹಿಸುತ್ತಿದ್ದನೆಂದು ಗೊತ್ತಾಗಿ ಅವನನ್ನು ಲಂಡನಿನಲ್ಲಿ ಸೆರೆಹಿಡಿದಿರುವರು.

ಫ್ರೆಂಚರೂ ಜರ್ಮನರೂ ಕಾದಾಡುತ್ತಿರುವ ಮ್ಯೂಸ್ ನದಿಯ ಬಳಿಯಲ್ಲಿ ಜರ್ಮನರು ಪುನಃ ಹಿಮ್ಮೆಟ್ಟಿದರು. ಜರ್ಮನರ ಸೈನ್ಯವು ತರಂಗ ತರಂಗವಾಗಿ ಬಂದು ಮೇಲೆ ಬಿದ್ದರೂ ಫ್ರೆಂಚರ ಕಡೆಯ ಫಿರಂಗಿಗಳ ಹತಾಹತಿಯಲ್ಲಿ ಸೋತು ಮುಗ್ಗರಿಸಿದರು.

ಹೊಲ್ಲೆಂಡಿನಲ್ಲಿ ಜನರು ಪುನಃ ಎದ್ದುಬಿದ್ದು ಬ್ರಿಟಿಷ ಸರಕಾರದ ಬಗ್ಗೆ ಕಳುಹಿಸಲು ನಾವೆಗಳಲ್ಲಿ ತುಂಬಿಸಿದ ಬಟಾಟೆಯ ಚೀಲಗಳನ್ನು ತಸುಕೊಳ್ಳಲಾಗಿ ಪೋಲಿಸಿನವರಿಗೂ ಅವರಿಗೂ ಹೊಡದಾಟವಾಯಿತು. ಈ ಮುಷ್ಕರದಲ್ಲಿ ಸ್ತ್ರೀಯರೂ ಕೈಹಾಕಿದರು. ಕಡೆಗೆ ಫೌಜು ಬಂದು ಒಬ್ಬಿಬ್ಬರಿಗೆ ಕೋವಿಗಳಿಂದ ಗಾಯಪಡಿಸಿದ್ದರಿಂದ ದಂಗೆಯು ಅಲ್ಲಲ್ಲಿಯೇ ಶಾಂತವಾಯಿತು.

ಟೊರ್ಪೆಡೊ ಉಪಟಳದಿಂದಲೂ ನೀರಿನೊಳಗೆ ಅಡಗಿಸಿಟ್ಟ ಗುಂಡುಗಳ ಪೆಟ್ಟಿನಿಂದಲೂ ನೋರ್ವೆ ರಾಜ್ಯಕ್ಕೆ ಸೇರಿದ ೪೩ ಹಡಗುಗಳು ನಾಶವಾದುವು. ಅವುಗಳು ಸುಮಾರು ೬೦,೦೦೦ ಟನ್ ಭಾರವುಳ್ಳವುಗಳಾಗಿದ್ದವು.

ಶತ್ರುಕಡೆಯ ೧೪ ಯುದ್ಧ ವಿಮಾನಗಳು ಇಂಗ್ಲೆಂಡಿನ ಪೂರ್ವ ಕರಾವಳಿಯಲ್ಲಿದ್ದ ಎಸ್ಸೆಸ್ ಪ್ರಾಂತ್ಯದಲ್ಲಿ ಮೇಲೆ ಸಂಚರಿಸಿ ಸಿಡಿಮದ್ದಿನ ತೋಟೆಗಳ ಮಳೆಯನ್ನು ಸುರಿಸಿದುವು. ಅಷ್ಟರಲ್ಲಿ ವಿಮಾನಗಳಿಗೆ ನಾಶಕಾರಿಯಾದ ಫಿರಂಗಿಗಳು ಆಕಾಶದ ಕಡೆಗೆ ಸುಟ್ಟದ್ದರಿಂದ ಆ ವಿಮಾನಗಳು ಹಿಂದಕ್ಕೆ ಪಲಾಯನ ಮಾಡಿದುವು. ಇವುಗಳ ಪೈಕಿ ಎರಡು ಸುಟ್ಟು ಕೆಳಕ್ಕೆ ಉರುಳಿದುವು.

ಇದಕ್ಕೆ ಪ್ರತಿಯಾಗಿ ಜರ್ಮನರ ಬಾರೂದುಖಾನೆಗಳಾಗಿರುವ ಬ್ರೂಜಸ್ ಸೊಕ್ಸ್, ಲಾಯ್ಟರ್‌ವಲ್ಟ್ ಮುಂತಾದ ಸ್ಥಳಗಳ ಮೇಲೆ ಬ್ರಿಟನ ವಿಮಾನಗಳು ಸಿಡಿಮದ್ದನ್ನು ಚೆಲ್ಲಿದವು.

ಎಟ್ಲಾಂಟಿಕ್ ಸಾಗರದಲ್ಲಿ ಅಮೇರಿಕದ ಅರ್ಜಂಟಾಯ್ನ ರಾಜ್ಯಕ್ಕೆ ಸೇರಿದ ಟೋರೊ ಎಂಬ ನಾವೆಗೆ ಗುಂಡುಗಳು ಬಡಿದು ಒಡೆದುಹೋಯಿತು.

ಗತವಾರದಲ್ಲಿ ೧೬೦೦ ಟನ್ನಿಗೆ ಮೀರಿದ ೧೫ ನಾವೆಗಳೂ ೧೬೦೦ ಟನ್ನಿಗೆ ಕಡಿಮೆಯಾದ ೫ ನಾವೆಗಳೂ ೧೧ ಬೆಸ್ತರ ನಾವೆಗಳೂ ಟೋರ್ಪೆಡೊಗಳಿಗೆ ತುತ್ತಾದವು. ಇವು ಬ್ರಿಟಿಷರಿಗೆ ಸೇರಿದುವುಗಳು. ಇಟಲಿಗೆ ಸೇರಿದ ೧ ಹಡಗು, ೮ ಸಣ್ಣ ಹಾಯಿಹಡಗುಗಳು, ೪ ಬೆಸ್ತರ ನಾವೆಗಳೂ ಮುಳುಗಿಹೋದುವು.

ಮೆಡಿಟರೇನಿಯನ್ ಸಮುದ್ರದಲ್ಲಿ ಒಂದು ಟೋರ್ಪೆಡೊ ಬೋಟ್ ಡಿಸ್ಟ್ರೋಯರ್ (ಯುದ್ಧದ ಹಡಗು) ಮುಳುಗಿತು.

ಅಮೇರಿಕದಿಂದ ಮಿತ್ರಮಂಡಳಿಯವರ ಸಹಾಯಾರ್ಥವಾಗಿ ಕಳುಹಿಸಲ್ಪಟ್ಟ ಸೈನ್ಯವು ಹಡಗುಗಳಲ್ಲಿ ಬರುವಾಗ ಜರ್ಮನರ ಜಲಾಂತರ್ಗಾಮಿಗಳು ಅದನ್ನು ಎರಡು ಸ್ಥಳಗಳಲ್ಲಿ ಮುಳುಗಿಸುವುದಕ್ಕೆ ಪ್ರಯತ್ನಮಾಡಿದುವು. ಆದರೆ ಸೈನ್ಯವನ್ನು ಸಾಗಿಸುವ ಹಡಗುಗಳ ಬೆಂಬಲಕ್ಕೆ ಅಮೇರಿಕದ ಯುದ್ಧನಾವೆಗಳು ಇದ್ದು ಈ ಜಲಾಂತರ್ಗಾಮಿಗಳ ಸುಳಿವು ಕಂಡೊಡನೆ ಅವುಗಳ ಮೇಲೆ ತೋಪುಗಳನ್ನು ಹಾರಿಸಿ ಒಂದೆರಡನ್ನು ಮುಳುಗಿಸಿಬಿಟ್ಟುವು. ಸೈನ್ಯವು ಸುರಕ್ಷಿತವಾಗಿ ಫ್ರೆಂಚ ರೇವಿಗೆ ಬಂದು ತಲ್ಪಿತು.

ಜೂನ ತಿಂಗಳಲ್ಲಿ ಮಿತ್ರಮಂಡಲಿಯವರು ಶತ್ರುಗಳ ೩೯೩ ಯುದ್ಧವಿಮಾನಗಳನ್ನು ನೆಲಕ್ಕೆ ಕೆಡವಿದರೆಂದೂ ಆ ಪೈಕಿ ಬ್ರಿಟಿಷ ಸೈನ್ಯದವರೇ ೧೩೧ನ್ನು ನಾಶ ಮಾಡಿದರೆಂದೂ ತಿಳಿದು ಬರುತ್ತದೆ.

ಜರ್ಮನರು ಇನ್ಸ್ಕಿವೆಲ್ಲ ವೆರ್ಡನ್ ಬಳಿಯಲ್ಲಿ ಸೈನ್ಯವನ್ನು ಭಯಂಕರ ರೀತಿಯಿಂದ ಕಾದಾಡಿ ಫ್ರೆಂಚರ ಪಾಳ್ಯದ ಒಂದಂಶವನ್ನು ಕಿತ್ತುಕೊಂಡರು. ಕಡೆಗೆ ಫ್ರೆಂಚರು ಪುನಃ ಜೊತೆಗೂಡಿ ಜರ್ಮನರ ಮೇಲೆ ಬಿದ್ದಾಗ ಕಿತ್ತುಕೊಂಡ ಟ್ರೆಂಚುಗಳಲ್ಲಿ ಕೆಲವಂಶ ಮಾತ್ರ ಬಿಟ್ಟು ಉಳಿದ ಅಂಶವು ಫ್ರೆಂಚರ ವಶಕ್ಕೆ ಪುನಃ ಸೇರಿತು.

ಇಟಲಿಯವರು ಎಸಿಯಾಗೊ ಪೀಠಭೂಮಿಯಲ್ಲಿ ಎಗ್ರೆಲ್ಲಾ ಕಣಿವೆಯ ಒಂದಂಶವನ್ನು ಆಸ್ಟ್ರಿಯದ ಸೈನ್ಯಕ್ಕೆ ಬಿಟ್ಟುಕೊಟ್ಟು ಸ್ವಲ್ಪ ಹಿಂಜರಿಯಬೇಕಾಯಿತು.

ಬಟಾಟೆಯ ಬೆಳೆಯೂ ಇಂಗ್ಲೆಂಡಿನಲ್ಲಿ ಈ ಸಲ ಚೆನ್ನಾಗಿ ಆದದ್ದು ವಿನಹಾ ದಕ್ಷಿಣ ಆಫ್ರಿಕ, ಜರ್ಸಿ, ಹೊಲ್ಲೆಂಡ್ ಮತ್ತು ಸ್ಪೇನ್ ದೇಶಗಳಿಂದ ಸಾಕಷ್ಟು ಸೀದಾ ಬಂದಿರುವುದರಿಂದ ಬಟಾಟೆಯ ಬೆಲೆಯು ಕಡಿಮೆಯಾಗಿ ಆಹಾರದ ಮುಟ್ಟು ಸ್ವಲ್ಪ ಕಡಿಮೆಯಾಯಿತು.

ಪೋರ್ತುಗೀಸರ ಪೊಂಟಾಡೆಲ್ ಗಾರ್ಡ ಎಂಬ ಬಂದರದ ಬಳಿಗೆ ಜರ್ಮನರ ಒಂದು ಜಲಾಂತರ್ಗಾಮಿಯು ಬಂದು ಅಲ್ಲಿಯ ಕೋಟೆಯ ಮೇಲೆಯೆ ಕೆಲವು ತೋಪುಗಳನ್ನು ಹಾರಿಸಿತು. ಒಂದು ಸಣ್ಣ ಹುಡುಗಿಯು ಇದರ ಪೆಟ್ಟು ತಗಲಿ ಸತ್ತಳು; ಕೆಲವರಿಗೆ ಗಾಯವಾಯಿತು. ಕೋಟೆಯ ಫಿರಂಗಿಗಳು ಜಲಾಂತರ್ಗಾಮಿಯ ಕಡೆಗೆ ತೋಪುಗಳನ್ನು ಹಾರಿಸಿದುವು.

ಬ್ರಿಟಿಷರ ಒಂದು ಹಳೇ ಡಿಸ್ಟ್ರೋಯರ್ ಯುದ್ಧನಾವೆಯು ಸಮುದ್ರದೊಳಗಿನ ತೋಟೆಗೆ ತಗಲಿ ಒಡೆದುಹೋಯಿತು. ಅದರಲ್ಲಿದ್ದವರ ಪೈಕಿ ೧೮ ಮಂದಿ ಮಾತ್ರ ಉಳಿದರು.

ಅಮೇರಿಕದಲ್ಲಿ [illegible] ಮಿಲ್ಲಿಯ ಡಾಲ್ಲರ್ [illegible] ಯುದ್ಧ[illegible] ಸೈನ್ಯ [illegible]

ಯುದ್ಧದ ಖರ್ಚಿನ ಮೊಬಲಗನ್ನು ತಾರದೆ ವಿಷಯ ಪಾರ್ಲಿಮೆಂಟಿನಲ್ಲಿ ಚರ್ಚೆ ಎತ್ತಿದಾಗ ಅದರ ಬಗ್ಗೆ ಒಂದು ಕಮಿಟಿಯನ್ನು ನೇಮಕಮಾಡೋಣಾಗುವದೆಂದು ಮಿ। ಬೋನರ್‌ಲೊ ಹೇಳಿದರು.

ಐರ್ಲಾಂಡಿನ ರಾಜ್ಯವ್ಯವಸ್ಥೆಯನ್ನು ಸರಿಗೊಳಿಸಲಿಕ್ಕೆ ಸೇರುವ ಸಭೆಯು ಜುಲಾಯಿ ೨೫ರಿಂದ ಪ್ರಾರಂಭಿಸುವುದೆಂದು ತಿಳಿದುಬರುತ್ತದೆ.

ಎನವರ್ ಪಾಶರು ಮೆಸೊಪೊಟಾಮಿಯಕ್ಕೆ ಹೋಗಿದ್ದಾರಂತೆ.

ರುಶ್ಯದ ಸೈನ್ಯವು ಜೆಲೊಂಟಿವ್ ಎಂಬಲ್ಲಿ ೩ ಟ್ರೆಂಚುಗಳ ಸಾಲುಗಳನ್ನು ಹಿಡಿದರು ಆದರೆ ಎದುರು ಪಕ್ಷದವರು ಪುನಃ ಮೇಲೆ ಬಿದ್ದದರಿಂದ ಸ್ವಲ್ಪ ಹಿಂದೆಗೆದರು.

ಕೊನಿಯುಖಿ ಎಂಬಲ್ಲಿ ಹಲವುಸಲ ಇತ್ತಂಡದವರು ಒಂದೊಂದು ಸ್ಥಳವನ್ನು ಒಬ್ಬರಿಗೊಬ್ಬರು ಕಿತ್ತುಕೊಂಡರು. ಪಿನ್ಸ್ಕ ಎಂಬಲ್ಲಿ ಭಯಂಕರ ಯುದ್ಧ ಇವರಿಬ್ಬರೊಳಗೆ ನಡೆಯುತ್ತದೆ. ಜರ್ಮನರು ತಂದ ಸೈನ್ಯಕ್ಕೆ ಸಹಾಯಾರ್ಥವಾಗಿ ಪಶ್ಚಿಮ ರಣರಂಗದಿಂದ ಕೆಲವು ಸೈನ್ಯ ತಂದದ್ದಲ್ಲದೆ ನೂತನ ತಯಾರಾದ ಸೈನ್ಯದ ಕೆಲವಂಶವನ್ನು ಸಹಾ ಕಳುಹಿಸಿದರು.

ಬಾಲ್ಟಿಕ್ ಸಮುದ್ರದಲ್ಲಿ ಜರ್ಮನರ ನೌಕಾಸೈನ್ಯವು ಯುದ್ಧಕ್ಕೆ ತಯಾರಾಗುತ್ತಿದೆ.

ಕೊವೆಲ್ ಮತ್ತು ಪೊಲಪೊರಸ್ಕ ಎಂಬಲ್ಲಿ ಜರ್ಮನರು ವಿಷವಾಯು ಪದಾರ್ಥಗಳನ್ನು ರುಶ್ಯದ ಸೈನ್ಯದ ಮೇಲೆ ಚೆಲ್ಲಿದರು. ಪ್ರೊಜಾನ ಎಂಬಲ್ಲಿ ಇನ್ನೂ ಯುದ್ಧವು ಮುಗಿಯಲಿಲ್ಲ.

ಮೊಲ್ಸೆಲ್ಟ್ಯಾನ್ ಎಂಬಲ್ಲಿ ಇಟಲಿಯ ಸೈನ್ಯದ ಮುಂಭಾಗವು ಸೇರಿಕೊಂಡಿದ್ದ ಕೆಲವಂಶವನ್ನು ಆಸ್ಟ್ರಿಯದ ಸೈನ್ಯವು ಕಿತ್ತುಕೊಳ್ಳಲಿಕ್ಕೆ ನೋಡಿದರೂ ಸಾಧ್ಯವಾಗಲಿಲ್ಲ. ಇಟಲಿಯ ಪಕ್ಷದ ಯುದ್ಧವಿಮಾನಗಳು ೨೨ ಟನ್ ಸಿಡಿಮದ್ದನ್ನು ಶತ್ರು ಸೈನ್ಯದ ಪಡಾವುಗಳ ಮೇಲೆ ಚೆಲ್ಲಿ ಬಹಳ ಹಾನಿ ಮಾಡಿದುವು.

ಜರ್ಮನರ ಕಡೆಯಿಂದ ಒಂದು ಯುದ್ಧವಿಮಾನಗಳ ಗುಂಪು ರಾತ್ರಿ ಹೊತ್ತಿನಲ್ಲಿ ಇಂಗ್ಲೆಂಡಿನ ಒತ್ತಾಗಿರುವ ಥೆನೆಟ್ ಎಂಬ ದ್ವೀಪದ ಮೇಲೆಯೂ ಎಸ್ಸೆಕ್ಸಿನ ಪ್ರಾಂತ್ಯದಲ್ಲಿಯೂ ಎರಡು ತಂಡವಾಗಿ ಬಂದು ಕವಿಯಿತು. ಈ ವಿಧದಲ್ಲಿ ದೊಡ್ಡ ಗುಂಪು ಈ ವರೆಗೆ ಬಂದದ್ದಿಲ್ಲ. ಈ ಗುಂಪು ಬೆಳಗ್ಗೆ ೯½ ಗಂಟೆಗೆ ಬಂದದ್ದರಿಂದ ಕೂಡಲೆ ದೊಡ್ಡ ಫಿರಂಗಿಗಳನ್ನು ಅವುಗಳ ಕಡೆಗೆ ತಿರುಗಿಸಿ ಸುಟ್ಟರು. ಆದರೂ ಲಂಡನ್ ಪಟ್ಟಣದ ಮೇಲೆಯೇ ಆ ಗುಂಪು ಸುಮಾರು ೧೨ ನಿಮಿಷಗಳ ವರೆಗೆ ಸಂಚರಿಸಿತು. ಅವರು ಚೆಲ್ಲಿದ ಸಿಡಿಮದ್ದಿನಿಂದ ೩೭ ಮಂದಿ ಗಂಡಸರು, ೬ ಹೆಂಗಸರು, ೩ ಮಕ್ಕಳು ಮಡಿದರು. ೭೪ ಗಂಡಸರು, ೩೦ ಹೆಂಗಸರು, ೩೭ ಮಕ್ಕಳು ಗಾಯಹೊಂದಿದರು. ಇಂಗ್ಲಿಷರ ಕಡೆಯ ವಿಮಾನಗಳು ಈ ಜರ್ಮನರ ವಿಮಾನಗಳನ್ನು ಬೆನ್ನಟ್ಟಿಹೋಗಿ ೭ ವಿಮಾನಗಳನ್ನು ಭೂಮಿಗೆ ಇಳಿಸಿಬಿಟ್ಟವು. ಉಳಿದವು ಹಿಂದಕ್ಕೆ ಬೆಲ್ಜಿಯಮ್ ದೇಶಕ್ಕೆ ಹೋದವು.

ಫ್ರೆಂಚರ ಒಂದು ಜಲಾಂತರ್ಗಾಮಿಯನ್ನು ಜರ್ಮನರು ಮುಳುಗಿಸಿಬಿಟ್ಟರು. ಜುಲೈ ೧ನೇ ತಾರೀಕಿಗೆ ಅಂತ್ಯವಾಗುವ ಒಂದು ವಾರದಲ್ಲಿ ಫ್ರೆಂಚರ ೧೬೦೦ ಟನ್ನಿಗೆ ಮಿಕ್ಕಿದ ೪ ಹಡಗುಗಳು, ೧೬೦೦ ಟನ್ನಿಗೆ ಕಡಿಮೆಯಾದ ೪ ನಾವೆಗಳು ಮಾತ್ರವೇ ಟೋರ್ಪೆಡೊಗಳಿಗೆ ತುತ್ತಾದುವು.

ನೀರಿನೊಳಗೆ ಕಟ್ಟಿದ ಸಿಡಿಮದ್ದಿನ ತೋಟೆಗಳನ್ನು ಕಿತ್ತುಹಾಕುವ ಇಂಗ್ಲಿಷರ ಒಂದು ಯುದ್ಧನಾವೆಯು ತೋಟೆ ತಗಲಿ ಮುಳುಗಿತು.

ಇಂಗ್ಲಿಷರ ೧೬೦೦ ಟನ್ನಿಗೆ ಮಿಕ್ಕಿದ ೧೫ ಹಡಗುಗಳು, ೧೬೦೦ ಟನ್ನಿಗೆ ಕಡಿಮೆಯಾದ ೫ ನಾವೆಗಳು ಮಾತ್ರ ಕಳೆದ ವಾರದಲ್ಲಿ ಮುಳುಗಿಹೋದುವು.

ಯುನೈಟೆಡ್ ಸ್ಟೇಟ್ಸ್ ರಾಜ್ಯದವರು ಬ್ರಿಟನಿಗೆ ೨೦ ಮಿಲ್ಲಿಯ ಪೌಂಡು, ಇಟಲಿಗೆ ೧೨ ಮಿಲ್ಲಿಯ ಪೌಂಡು ಪುನಃ ಸಾಲಕೊಟ್ಟಿದ್ದಾರೆ.

ಫ್ರೆಂಚ ಬಂದರುಗಳಲ್ಲಿ ಇಳಿದ ಅಮೇರಿಕದ ಸೈನ್ಯವು ಯುದ್ಧರಂಗಗಳಿಗೆ ಹೋಗಿ ಸೇರುವ ಏರ್ಪಾಡು ಮಾಡಿರುವುದು.

ಸ್ಪೇನ್ ರಾಜ್ಯಕ್ಕೆ ಸಂಬಂಧಪಟ್ಟ ಹಲವು ಸಣ್ಣ ನಾವೆಗಳನ್ನು ಜರ್ಮನರು ಮುಳುಗಿಸಿರುವರು.

ಸ್ಟನಿಸ್‌ಲೊ ಎಂಬಲ್ಲಿ ರುಶ್ಯದವರು ಸ್ವಲ್ಪ ಮುಂದೊತ್ತಿರುವರು.

ಬ್ರಿಟಿಷರ ಒಂದು ಯುದ್ಧನಾವೆಯನ್ನು ನೋರ್ಥಸೀ ಸಮುದ್ರದಲ್ಲಿ ಜರ್ಮನರ ಜಲಾಂತರ್ಗಾಮಿಯು ಮುಳುಗಿಸಿಬಿಟ್ಟಿತು.

ವಿದೇಶ ವೃತ್ತಾಂತ.

ಚೀನ ಸಾಮ್ರಾಜ್ಯದಲ್ಲಿ ಅಪ್ರಾಯಸ್ಥನಾದ ಪಟ್ಟದ ಚಕ್ರವರ್ತಿಯನ್ನು ಒಂದೆರಡು ವರ್ಷಗಳ ಹಿಂದೆ ತಳ್ಳಿಹಾಕಿ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಿದ್ದರು. ಈಗ ಅಲ್ಲಿ ಪ್ರೆಸಿಡೆಂಟರಾಗಿರುವವರ ಅಧಿಕಾರವನ್ನು ಬೇರೆ ಬೇರೆ ಪ್ರಾಂತಗಳ ಗವರ್ನರುಗಳು ಉಲ್ಲಂಘನೆ ಮಾಡುತ್ತಲಿದ್ದಾರೆಂದು ಈ ಮೊದಲು ತಿಳಿಸಿರುವೆವು. ಈಗ ಜನರಲ್ ಚಂಗ್‌ಸನನು ಆ ಅಪ್ರಾಯಸ್ಥನಾದ ಪದಚ್ಯುತನಾದ ಚಕ್ರವರ್ತಿಯನ್ನು ಪುನಃ ಪಟ್ಟದಮೇಲಿರಿಸಿ ಅವನ ಪ್ರಾಯಕ್ಕೆ ಬರುವ ವರೆಗೆ ದೇಶದ ಆಡಳಿತೆಯನ್ನು ನೋಡುವುದಕ್ಕೆ ಒಂದು ಕೌನ್ಸಿಲ್ ಏರ್ಪಡಿಸಿರುವನು. ಉತ್ತರ ಪ್ರಾಂತ್ಯದಲ್ಲಿ ಈ ನಿಲಿವಾರಿಯು ಜನಸಮ್ಮತವಾಗಿದೆ ಎಂತಲೂ ದಕ್ಷಿಣ ಪ್ರಾಂತ್ಯದವರು ತಮ್ಮ ಮತವನ್ನು ಇನ್ನೂ ಬಹಿರಂಗವಾಗಿ ತೋರ್ಪಡಿಸಲಿಲ್ಲವೆಂತಲೂ ಗೊತ್ತಾಗುತ್ತದೆ. ಆದರೆ ಈ ಅರಸುತನವು ಚಿರಕಾಲ ಬಾಳುವುದೆಂಬ ಭರವಸೆ ಇನ್ನೂ ಇಲ್ಲ. ಚೀನದಲ್ಲಿ ಪ್ರೆಸಿಡೆಂಟ್ ಆಗಿ ಆಳುತ್ತಿದ್ದ ಲಿಯೂಂಗಹುಂಗನು ಜಪಾನು ರೇಯಭಾರಿಯ ಮರೆ ಸೇರಿರುವನು.

ಜರ್ಮನ್ ಪಾರ್ಲಿಮೆಂಟಿನಲ್ಲಿ ಎರ್ಜಬರ್ಗರ್ ಎಂಬ ಮೆಂಬರನೊಬ್ಬನು ಜರ್ಮನ ಯಂತ್ರ ಕ್ರಮವನ್ನೂ ಜರ್ಮನರ ದುರಾಭಿಲಾಷೆಯಿಂದ ಪ್ರಪಂಚಕ್ಕೆ ಉಂಟಾದ ಕೋಲಾಹಲವನ್ನು ಕುರಿತು ತುಂಬಾ ಚರ್ಚಿಸಿದನಂತೆ. ಪ್ರಧಾನ ಮಂತ್ರಿ ಬೆತ್‌ಮನ್ ಹೊಲ್‌ವೆಗ್ ಮತ್ತು ಇತರ ಕೆಲವು ಸರಕಾರಿ ಮೆಂಬರರು ಇದಕ್ಕೆ ವಿರೋಧವಾಗಿ ಮಾತನಾಡಿದರೂ ಮೆಂಬರರಲ್ಲಿ ಅನೇಕರಿಗೆ ಇವರ ಉದ್ಧಾರಹರಣೆ ಸಮರ್ಪಕವಾಗಲಿಲ್ಲ.

ಹಿಂದೂಸ್ತಾನದಲ್ಲಿ ಕ್ರಾಂತಿಯನ್ನು ಉಂಟುಮಾಡುವುದಕ್ಕಾಗಿ ಜರ್ಮನ ಕೆಲವು ಆಫೀಸರರ ಸಹಾಯದಿಂದ ಅಮೇರಿಕದ ಸೆನ್‌ಫ್ರಾನ್ಸಿಸ್ಕೊ ಎಂಬಲ್ಲಿ ಗುಪ್ತ ಆಲೋಚನೆಯಿಂದ ಪ್ರಯತ್ನಮಾಡುತ್ತಿದ್ದ ೫೮ ಮಂದಿ ಹಿಂದೀ ಜನರನ್ನು ಸೆರೆಹಿಡಿದಿರುವರು.

ಬ್ರಿಟಿಷರ ಮತ್ತು ಫ್ರೆಂಚರ ೩೦೦ ಸಿಪಾಯಿಗಳು ರೈಲುರಸ್ತೆಯನ್ನು ಸರಿಗೊಳಿಸಿ ಜನಸಂಚಾರದ ಚಳುವಳಿಗೆ ತೊಡಕಾಗದಂತೆ ಮಾಡಲಿಕ್ಕೆ ಪೆಕಿಂಗಿನ ಕಡೆಗೆ ಹೊರಟಿರುವರು. ಆದರೆ ಲೆಂಗ್‌ಫೆಂಗನು ತಲ್ಪಿದೊಡನೆ ಪ್ರಜಾಪ್ರಭುತ್ವವಾದಿಗಳ ಜನರಲನು ಅಲ್ಲಿಂದ ಮುಂದೆ ಅಪಾಯವುಂಟೆಂತ ತಿಳಿಸಿ ಆ ಸೈನ್ಯವನ್ನು ಹಿಂದಕ್ಕೆ ಕಳುಹಿಸಿದನು.

ಜನರಲ್ ಚಂಗ್‌ಸನನು ಚೀನದ ರಾಜಧಾನಿಯಾದ ಪೆಕಿಂಗ್‌ನಿಂದ ಟಿಯನ್‌ಸಿನ್‌ಗೆ ಹೋಗುವ ರೈಲುರಸ್ತೆಯನ್ನು ವಶಪಡಿಸಿದನು. ಪ್ರಜಾಪ್ರಭುತ್ವದ [illegible] ಜನಸಂಚಾರದ [illegible]

ಮತ್ತು ನವೀನ ರಾಜಪಕ್ಷದ ಸೈನ್ಯದ ಮೇಲೆ ಪ್ರಾಂತ್ಯದ ಗವರ್ನರ್ [illegible] ಎಂಬವನ ಸೈನ್ಯಕ್ಕೆ ಎದುರಾಗಿ ಭದ್ರವಾದ ಸ್ಥಳಗಳನ್ನು ಹಿಡಿದುಕೊಂಡು [illegible]

ನಾನ್‌ಕಿಂಗ್ ಪ್ರಾಂತ್ಯದ ಗವರ್ನರ್ ಮತ್ತು ಪೂರ್ವದ ರಾಜ್ಯಭಾರದಲ್ಲಿ ವೈಸಪ್ರೆಸಿಡೆಂಟ ಆಗಿದ್ದವನು ಈಗ ಹಂಗಾಮಿಯಾಗಿ ಪ್ರೆಸಿಡೆಂಟ ಅಧಿಕಾರವನ್ನು ವಹಿಸಿಕೊಂಡು ಹಂಗಾಮಿಯಾಗಿ ನೆನ್‌ಕಿಂಗಿನಲ್ಲಿ ಪ್ರಜಾಪ್ರಭುತ್ವವಾದಿಗಳ ಕಡೆಯಿಂದ ಅಧಿಕಾರವನ್ನು ಸ್ಥಾಪಿಸಿರುವನು.

ದೇಶದಲ್ಲಿ ಪ್ರಬಲವಾದ ೩ ಯಾ ೪ ತಂಡಗಳಿರುವುದರಿಂದ ಶಾಂತತೆಯನ್ನು ಬೇಗನೆ ನೆಲೆಗೊಳಿಸುವುದು ಕಷ್ಟಸಾಧ್ಯವಿದೆ.

ಲೆಂಗ್‌ಫೆಂಗಿನ ಯುದ್ಧದಲ್ಲಿ ರಾಜಪಕ್ಷದವರು ಸೋತುಹೋಗಿ ಎದುರು ಪಕ್ಷದವರು ಅವರನ್ನು ಪೆಕಿಂಗಿನ ಕಡೆಗೆ ಸುಮಾರು ೧೦ ಮೈಲುಗಳ ವರೆಗೆ ಓಡಿಸಿಬಿಟ್ಟರು.

ಪಟ್ಟವನ್ನೇರಿದ ಚಕ್ರವರ್ತಿಯು ತಾನು ರಾಜ್ಯಭಾರವನ್ನು ಬಿಟ್ಟಿರುವುದಾಗಿ ತಿಳಿಸಿರುವನು.

ಪ್ರಜಾಪ್ರಭುತ್ವವಾದಿಗಳ ಸೈನ್ಯವು ಪೆಕಿಂಗಿನ ಬಳಿಯಲ್ಲಿ ಬಲವಾದ ಪಾಳ್ಯವನ್ನು ಮಾಡಿಕೊಂಡಿರುವುದು.

ಉತ್ತರ ಹಿಂದೂಸ್ತಾನ.

ಈ ವರೆಗೆ ಯುದ್ಧ ಸಾಲದ ಫಂಡಿಗೆ ಜಮೆ ಆದ ಮೊಬಲಗು:—

ಸಿಂದಾಜಮೆ	ರೂ.	೩೮,೨೩,೧೩,೨೦೦
ಪೋಸ್ಟ್ ಆಫೀಸ್ ಮೂಲಕ	ರೂ.	೨,೦೨,೦೧,೦೦೦
ಕೇಷ್ ಸರ್ಟಿಫಿಕೇಟು	ರೂ.	೩,೧೬,೬೪,೬೪೬
ಜುಮುಲಾ	ರೂ.	೪೩,೯೧,೮೮,೯೪೬.

ಬರುವ ನವಂಬರ ತಿಂಗಳ ೫ನೇ ತಾರೀಕಿನಿಂದ ೧೦ನೇ ತಾರೀಕಿನ ವರೆಗೆ ಡಿಲ್ಲಿಯಲ್ಲಿ ಹಿಂದೂಸ್ತಾನದ ಸಾಮಂತರಾಜರ ಒಂದು ಸಭೆಯು ಬಹುಮಾನಪಟ್ಟ ವೈಸರಾಯಿಯವರ ಅಧ್ಯಕ್ಷತೆಯಲ್ಲಿ ಜರಗುವುದು.

ಬಿಹಾರ ಮತ್ತು ಒರಿಸ್ಸಾ ಸರಕಾರದ ಸೂಚನಾ ಪತ್ರದ ಮೇರೆಗೆ ತಿಳಿಯುವುದೇನೆಂದರೆ:— ಮಯೂರಭಂಜವೆಂಬ ದೇಶೀಯ ರಾಜ್ಯದಿಂದ ಕಳೆದ ಮೇ ತಿಂಗಳಲ್ಲಿ ಫ್ರಾನ್ಸಿಗೆ ಯುದ್ಧದ ಪಾಳ್ಯದಲ್ಲಿ ಕೂಲಿಕೆಲಸಕ್ಕೆ ಜನರನ್ನು ಚುನಾಯಿಸುತ್ತಿದ್ದಾರೆಂಬ ನೆವನದಿಂದ ಮಯೂರಭಂಜದ ಸಂತಾಳರೆಂಬ ಮೂಲ ನಿವಾಸಿಗಳು ದಂಗೆ ಎದ್ದರು. ಆದರೆ ಪೋಲಿಸ್ ಮತ್ತು ಸಿಪಾಯಿ ಫೌಜು ಅಲ್ಲಿಗೆ ಕೂಡಲೆ ಬಂದು ಈ ಹಾವಳಿಯನ್ನು ಅಡಗಿಸಿತು. ಪುನಃ ಈ ಚಳವಳಿವು ಕರೆಮೂರಿ ಬ್ರಿಟಿಷ ಸರಕಾರಕ್ಕೆ ಸೇರುವ ಸಿಂಗಭೂಮ್ ಡಿವಿಜನ ವರೆಗೆ ಇದರ ಹಾವಳಿಯು ಹಬ್ಬಿಕೊಂಡಿತು. ಇವರು ಕೆಲವು ಹಳ್ಳಿಗಳಲ್ಲಿ ಲೂಟಿಮಾಡಲಾರಂಭಿಸಿದೊಡನೆ ಫೌಜು ಪುನಃ ಅಲ್ಲಿಗೆ ಹೋಗಿ ಮುಖಂಡರಾದವರನ್ನು ಸೆರೆಹಿಡಿದು ಉಪಟಳವನ್ನು ತಗ್ಗಿಸಿತು. ಈ ಉಪಟಳದ ಕಾರಣವು ಈಗ ಸರಕಾರದ ವಿಚಾರದಲ್ಲಿದೆ.

ಕಲ್ಕತ್ತೆಯಲ್ಲಿ 'ಹೋಮ್ ಇಂಡಸ್ಟ್ರೀಸ್ ಡಿಪೊ' ಎಂಬ ದೇಶಿಯ ಕೈಗಾರಿಕೆಯನ್ನು ಉತ್ತೇಜಿಸುವ ಸಂಸ್ಥೆಯೊಂದು ಏರ್ಪಟ್ಟಿದೆ. ಇಂಥ ಸಂಸ್ಥೆಗಳು ಹಿಂದೂಸ್ಥಾನದಲ್ಲಿ ಅಲ್ಲಲ್ಲಿ ಸ್ಥಾಪಿಸೋಣಾದರೆ ಬೇರೆ ದೇಶಗಳಿಂದ ಬರುವ ಸಾಮಾನು ಕೊಂಡುಹೋಗಿ ತೊಂದರೆಗೊಳಗಾಗುವ ಜನರಿಗೆ ಅಂಥಾ ವಸ್ತುಗಳನ್ನು ನಮ್ಮ ದೇಶದಲ್ಲಿಯೇ ತಯಾರಿಸಿ ಒದಗಿಸಿಕೊಡುವುದಲ್ಲದೆ ಇಲ್ಲಿಯ ಬಡಬಗ್ಗರಿಗೂ ಮನೆಯನ್ನು ಬಿಟ್ಟು ಹೊರಗೆ ಚಲಿಸದಿರುವ ಸ್ತ್ರೀಯರಿಗೂ ದೇಶಿಯ ಕೈಗಾರಿಕೆಯ ಅಭಿವೃದ್ಧಿಯಿಂದ ಜೀವನ ಸಂಕಷ್ಟವು ಕಡಿಮೆಯಾಗ ಬಹುದು.

ರಂಗೂನಿನಲ್ಲಿ ಜುಲೈ ೫ನೇ ತಾರೀಕಿಗೆ ಎರಡು ಭೂಕಂಪಗಳು ಆದವು. ಚಂದ್ರಗ್ರಹಣ ಕಾಲದಲ್ಲಿ ಈ ಕಂಪನವು ತಿಳಿದುಬಂತು; ಆದರೆ ಏನೊಂದು ಬಾಧಕ ಉಂಟಾಗಲಿಲ್ಲ.

ಬರೋಡೆಯ ಗಾಯಕವಾಡರು ಜುಲೈ ೮ನೇ ತಾರೀಕಿಗೆ ಬರೋಡೆಯಿಂದ ಮೈಸೂರಿಗೆ ಪ್ರಯಾಣ ಬೆಳಸಿದರು. ಅಲ್ಲಿ ಮೂರು ದಿನ ಉಳಿದು ಅನಂತರ ಅವರು ಪೂನೆಯಲ್ಲಿ ಗಣೇಶಖಂಡದಲ್ಲಿ ಬಹುಮಾನಪಟ್ಟ ಮುಂಬಯಿ ಗವರ್ನರರ ಅತಿಥಿಯಾಗುವರು.

ದಕ್ಷಿಣ ಹಿಂದೂಸ್ಥಾನ.

ಬಿಸೆಂಟರ ಫಂಡಿಗೆ ರೂ. ೯೯೬೧—೦—೮ ಜಮೆ ಆಯಿತು.

ಮುಂಬಾಯಿಯ ಲೋಟ್ಟರಿಯಲ್ಲಿ (ಚೀಟಿಯಲ್ಲಿ) ಕೊಲ್ಲತ್ತೂರಿನ ಎಲ್ಲಯವಾರಿಯರ್ ಎಂಬವರಿಗೆ ೬೨,೦೦೦ ರೂಪಾಯಿಯ ಇನಾಮು ಸಿಕ್ಕಿತಂತೆ.

ದಕ್ಷಿಣ ಕನ್ನಡದಲ್ಲಿಯೂ ಮಧುರೆ, ಬಳ್ಳಾರಿ, ನೆಲ್ಲೂರು ಈ ಮೂರು ಜಿಲ್ಲೆಗಳಲ್ಲಿಯೂ ಡಿಸ್ಟ್ರಿಕ್ಟ್ ಬೋರ್ಡಿನ ವೈಸ ಪ್ರೆಸಿಡೆಂಟರನ್ನು ಚುನಾವಣೆಯಿಂದ ನೇಮಕ ಮಾಡುವುದಾಗಿ ಸರಕಾರದವರು ಮಂಜೂರು ಮಾಡಿರುವರು.

ಇಲ್ಲಿ ಕೆಲವು ಕಾಲ ಹಿಂದೆ ಬಂದಿರುವ ಪ್ರೊಫೆಸರ್ ಶಾ, ಅವರ ಸಹೋದರ ಇವರಿಬ್ಬರಿಗೂ ಟ್ರಾವಂಕೂರಿನ ಮಹಾರಾಜರು ಎರಡು ವೀರ ಶೃಂಖಲೆಗಳನ್ನು ಇನಾಮಾಗಿ ಕೊಟ್ಟಿರುವರು.

ದಕ್ಷಿಣ ಕನ್ನಡ.

ಫೋರ್ಟ ಸೆಂಟ್‌ಜೋರ್ಜ ಗೆಜೇಟಿನಿಂದ—

ಮಂಗಳೂರು ದಕ್ಷಿಣ ಡಿವಿಜನಿನ I ಗ್ರೇಡ್ ರೇಂಜರ್ ಮ। ರಾ। ಆರ್. ಗುರುಸ್ವಾಮಿ ಅಯ್ಯಂಗಾರರಿಗೆ ಜುಲೈ ೧ನೇ ತಾರೀಕಿನಿಂದ ಅವರು ಅವರನ್ನು ಕೆಲಸದಿಂದ ಬಿಡುಗಡೆ ಮಾಡಿದ ತಾರೀಕಿನಿಂದ ೨೫ ತಿಂಗಳ ಪ್ರಿವಿಲೇಜ ರಜೆ ಸಂಕ್ಷನ್ ಆಗಿಯದೆ. ಇವರ ಗೈರಹಾಜರಿಯ ಕಾಲದಲ್ಲಿ IIನೇ ಗ್ರೇಡ್ ಡೆಪ್ಯುಟಿ ರೇಂಜರರಾದ ಮ। ರಾ। ಆರ್. ರಾಮಯ್ಯರು ಆಸರಗೋಡು ರೇಂಜಿನ ಚಾರ್ಜ ನೋಡುವರು.

ಪೂರವ್ಪ ಕಾಲೇಜನಲ್ಲಿ ವಿದ್ಯಾರ್ಥಿಯಾಗಿದ್ದ ಮ। ರಾ। [illegible] ಅವರನ್ನು ಮಂಗಳೂರು ಉತ್ತರ ಡಿವಿಜನ ಕಂಕನಾಡಿ ರೇಂಜಿಗೆ [illegible] ರೇಂಜರರಾಗಿ ನೇಮಕಮಾಡಿರುವರು.

IIನೇ ಗ್ರೇಡ್ ಡೆಪ್ಯುಟಿ ರೇಂಜರ್ ಮ। ರಾ। ರಾಮಯ್ಯ [illegible] ಮಂಗಳೂರು ದಕ್ಷಿಣ ಡಿವಿಜನ [illegible] ರೇಂಜಿಗೆ ಡೆಪ್ಯುಟಿ ರೇಂಜರ್ [illegible] ಮಾಡಿರುವರು.

[illegible]

ಅನುಕ್ರಮಣಿಕೆ.

	ಪಾನು
ಅಗ್ರಲೇಖ:—	
೧ ನಾಣ್ಯಗಳ ಇಕ್ಕಟ್ಟು	೪
ಸ್ಫುಟವಿಚಾರಗಳು:—	
೧ ಹಿಂದೀ ಸುಧಾರಣೆಯ ಸಂಗತಿಗಳು.	೪
೨ ಬಂಗಾಲದ ಗವರ್ನರರು ಮಾತನಾಡಿದರು.	೪ ೫
೩ ಮುಂಬಯಿಯ ಶಿಕ್ಷಣ ಪರಿಷತ್ತು	,,
೪ ಮೆಸಪೊಟೇಮಿಯದ ಪ್ರಕರಣ	,,
೫ ಮುಂಬಯಿಯ ಪ್ರಾಥಮಿಕ ಶಿಕ್ಷಣ	,,
ವರ್ತಮಾನ ಸಂಗ್ರಹಗಳು:—	
೧ ಯುರೋಪದ ಮಹಾಯುದ್ಧ	೬
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದುಸ್ಥಾನ	,,
೪ ದಕ್ಷಿಣ ಹಿಂದೂಸ್ಥಾನ	,,
೫ ದಕ್ಷಿಣ ಕನ್ನಡ	,,
೬ ಖಾಸ್ಗಿ ಪತ್ರಗಳು: ಹೊಸದುರ್ಗ, ವೇಣೂರು, ಕಾಪು, ಉಡುಪಿ,	೭
೭ ಪತ್ರವ್ಯವಹಾರ: ಅಧಿಕಮಾಸ ನಿರ್ಣಯ,	,,
೮ ಶ್ರೀಜ್ಞಾನೋದಯ ಸಮಾಜದ ಸಭಾಮಂದಿರದ ಬಗ್ಗೆ ದಾನಕೊಟ್ಟವರು.	,,
೯ ಬಂಟರ ಯಾನೆ ನಾಡವರ ಸಂಘ	,,

ಸ್ವದೇಶಾಭಿಮಾನಿ.

ಶಕ ೧೮೪೦ ಆಷಾಢ ಬ. ೯ ಶುಕ್ರವಾರ.

ನಾಣ್ಯಗಳ ಇಕ್ಕಟ್ಟು.

ಸ್ವಲ್ಪ ದಿವಸಗಳ ಹಿಂದೆ ಹಿಂದುಸ್ಥಾನ ಸರಕಾರವು ಚಿನ್ನದ ನಾಣ್ಯಗಳನ್ನು ಕರಗಿಸಕೂಡದು; ಅಥವಾ ರೂಪಾಂತರಗೊಳಿಸಕೂಡದು ಎಂಬುದಾಗಿ ಭಾರತಸಂರಕ್ಷಣದ ಕಾಯಿದೆಯ ಪ್ರಕಾರ ವಿಧಿಸಿರುತ್ತದೆ. ಸರಕಾರವು ಈ ಪ್ರಕಾರದ ಹುಕುಮನ್ನು ಪ್ರಕಟಿಸಲು ಕಾರಣವೇನೆಂಬುದನ್ನು ತಿಳಿದುಕೊಳ್ಳುವುದು ಅವಶ್ಯಕವು.

ಹಿಂದುಸ್ಥಾನಕ್ಕೂ ವಿಲಾಯತಿಗೂ ದ್ರವ್ಯವ್ಯವಹಾರವು ಹೇಗೆ ನಡೆದಿದೆ ಎಂಬುದನ್ನು ಮೊದಲು ನೋಡೋಣ. ಹಿಂದುಸ್ಥಾನದ ರಾಜ್ಯಕಾರಭಾರದ ಸಂಬಂಧದಿಂದ ವಿಲಾಯತಿಯಲ್ಲಿ ಕೆಲವು ಹಣವನ್ನು ಖರ್ಚುಮಾಡಬೇಕಾಗುತ್ತದೆ. ಸಿವಿಲಿಯನ್ ಅಧಿಕಾರಿಗಳು ಪೆನ್ಶನ್ ಪಡೆದು ವಿಲಾಯತಿಗೆ ಹೋದನಂತರ ಅವರ ಪೆನ್ಶನನ್ನು ಹಿಂದುಸ್ಥಾನ ಸರಕಾರವು ಸಲಾಯಿಸತಕ್ಕದ್ದು. ಹಾಗು ಇಲ್ಲಿಯ ರಾಜ್ಯಕಾರಭಾರವನ್ನು ನಡಿಸುವ ವಿಷಯದಲ್ಲಿ ಸ್ಟೇಟ ಸೆಕ್ರೆಟರಿ ಎಂಬವನೊಬ್ಬ ಉದ್ಯೋಗಸ್ಥನು ಅಲ್ಲಿ ಇರುವನು, ಇವನ ಸಂಬಳವನ್ನು ಹಿಂದುಸ್ಥಾನದ ಖಜಾನೆಯೆ ಕೊಡಬೇಕಾದ್ದು. ಅಲ್ಲದೆ, ಈ ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಗೆ ಒಂದು ಕೌನ್ಸಿಲಿದ್ದು ಆ ಕೌನ್ಸಿಲ್ ಮೆಂಬರರ ಸಂಬಳವಾದರೂ ಇಲ್ಲಿಂದಲೆ ಹೋಗಬೇಕಾಗಿದೆ ಎಂದ ಮೇಲೆ, ನಿವೃತ್ತ ಸಿವಿಲಿಯನರ ಪೆನ್ಶನ್, ಸ್ಟೇಟ ಸೆಕ್ರೆಟರಿಯ ಹಾಗು ಅವನ ಆಫೀಸಿನ ಸಂಬಳ, ಖರ್ಚು ಮುಂತಾದ್ದನ್ನೆಲ್ಲ ಹಿಂದುಸ್ಥಾನವು ಕೊಡತಕ್ಕದ್ದೆಂಬ ವ್ಯವಸ್ಥೆಯು ಮೊದಲಿನಿಂದಲೆ ಇದೆ. ಈ ಎಲ್ಲ ಕೆಲಸಗಳ ಬಗ್ಗೆ ಇಲ್ಲಿಂದ ವಿಲಾಯತಿಗೆ ಹೋಗಬೇಕಾದ ಹಣವನ್ನು ಹಿಂದುಸ್ಥಾನ ಮತ್ತು ವಿಲಾಯತ ಸರಕಾರ ಈ ಉಭಯ ಸರಕಾರಗಳು ಕೂಡಿ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದವು. ಹಿಂದುಸ್ಥಾನದಿಂದ ದೊರಗುಜೀನಸು ಯುರೋಪಕ್ಕೆ ಧಾರಾಳವಾಗಿ ಹೋಗುತ್ತದೆ. ಈ ಜೀನಸಿನ ಕ್ರಯವನ್ನು ವಿಲಾಯತಿಯವರು ಸ್ಟೇಟ ಸೆಕ್ರೆಟರಿಯ ಕೈಗೆ ಕೊಡುವುದು ಮತ್ತು ಅವನು ಆ ಹಣವನ್ನು ಅಲ್ಲಿಯೆ ಮೇಲೆ ತೋರಿಸಿರುವ ಖರ್ಚಿಗಾಗಿ ಇಟ್ಟುಕೊಂಡು ಹಿಂದುಸ್ಥಾನ ಸರಕಾರಕ್ಕೆ ಇಲ್ಲಿಂದ ಹೋದ ಜೀನಸಿನ ಮೊಬಲಗಿಗೆ ಹುಂಡಿ ಕಳುಹಿಸುವನು. ಆ ಹುಂಡಿಯ ಆಧಾರದಿಂದ ಇಲ್ಲಿಯ ವ್ಯಾಪಾರಿಗಳಿಗೆ ಹಿಂದುಸ್ಥಾನ ಸರಕಾರದ ಖಜಾನೆಯಿಂದಲೆ ಹೊರಗೆ ಕಳುಹಿಸಿದ ಜೀನಸಿನ ಕ್ರಯವು ಬರುವುದು. ಇದನ್ನು ಒಂದೆ ಮಾತಿನಿಂದ ಹೇಳುವುದಾದರೆ ಇಲ್ಲಿಂದ ವಿಲಾಯತಿಗೆ ಹೋಗುವ ಸಾಮಾನುಗಳ ಕ್ರಯವು ವಿಲಾಯತಿಯಲ್ಲಿಯೆ ಉಳಿದು ಹಿಂದುಸ್ಥಾನದ ವ್ಯಾಪಾರಿಗಳಿಗೆ ಹಿಂದುಸ್ಥಾನದ ಖಜಾನೆಯಿಂದಲೆ ಅದರ ಪ್ರತಿಫಲವು ಸಿಗುತ್ತದಾದರೂ ವ್ಯವಹಾರದ ಸೌಕರ್ಯಕ್ಕಾಗಿ ಈ ವ್ಯಾಪಾರಿ ತತ್ವವು ಅವಲಂಬಿಸಲ್ಪಟ್ಟಿದೆ. ಈ ಮಧ್ಯದಲ್ಲಿ ಇನ್ನೊಂದು ವಾದವಿದೆ. ಹಿಂದುಸ್ಥಾನದಲ್ಲಿ ಯೌವನವನ್ನು ಕಳೆದು ಕಾರಭಾರ ಮಾಡಿ ಹೋದ ಸಿವಿಲಿಯನರಿಗೆ ಪೆನ್ಶನವು ಹಿಂದುಸ್ಥಾನದಿಂದಲೆ ಸಿಗಬೇಕಾದ್ದು ನ್ಯಾಯವೆಂತ ಹೇಳೋಣ. ಆದರೆ ಸ್ಟೇಟ ಸೆಕ್ರೆಟರಿಗೂ ಅವನ ಕೌನ್ಸಿಲಿಗೂ ಹಿಂದುಸ್ಥಾನವು ಯಾಕೆ ವೇತನವನ್ನು ಕೊಡತಕ್ಕದ್ದು? ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯು ಕೆಬಿನೆಟಿದ ಒಬ್ಬ ಮೆಂಬರನಾದ್ದರಿಂದ ಬೇರೆ ಮೆಂಬರರಿಗಲ್ಲ, ವಿಲಾಯತ ಸರಕಾರವು ಹೇಗೆ ಸಂಬಳವನ್ನು ಕೊಡುವುದೊ ಹಾಗೆಯೆ ಇವನಿಗೂ ಅದೆ ಕೊಡುವುದು ಉಚಿತ ಮತ್ತು ಸಮಂಜಸವಲ್ಲವೊ? ಇದಕ್ಕೆ ಸಮರ್ಪಕವಾದ ಉತ್ತರವು ಸರಕಾರದವರ ಕಡೆಗೆ ಇಲ್ಲ. ಪ್ರಕೃತ ವಿವೇಚನಕ್ಕೆ ಈ ವಾದವು ಅನಾವಶ್ಯಕವು. ಇರಲಿ. ಯುದ್ಧದ ಪ್ರಲಯದಿಂದ ಈಗ ಬಂದಿರುವ ತೊಂದರೆ ಯಾವುದೆಂದರೆ, ಹಿಂದುಸ್ಥಾನದಿಂದ ದೊರಗುಸಾಮಾನು ಮಾತ್ರ ವಿಪರೀತ ಹೋಗುತ್ತದೆ; ಆದರೆ ಅದಕ್ಕೆ ಪ್ರತಿಫಲವಾಗಿ ಬರಬೇಕಾದ ಯುರೋಪದ ಮಾಲುಗಳು ಬರುವುದಿಲ್ಲ; ಹಿಂದುಸ್ಥಾನದಿಂದ ನಿರ್ಗತವಾಗುವ ವ್ಯಾಪಾರದ ಪ್ರತಿಫಲವನ್ನು ಆಯಾತ ವ್ಯಾಪಾರದಿಂದ ತುಂಬಿಸಿ ಬಾಕಿ ಉಳಿದ ಅಂಶವನ್ನು ನಾವು ಮೇಲೆ ತೋರಿಸಿದಂತೆ ಸ್ಟೇಟ ಸೆಕ್ರೆಟರಿಯು ಹುಂಡಿಯ ಮೂಲಕ ಭರಾಯಿಸುತ್ತಿದ್ದನು. ಈಗ ಆಯಾತವೆ ಕಡಿಮೆ, ಆದ ಮೇಲೆ ... ನಿರ್ಗತಕ್ಕೆ ಹುಂಡಿಚೀಟಿ ಕೊಡಬೇಕಾಗಿ ಬಂತಲ್ಲವೆ? ಆದರೆ ಅನು... ಸ್ಟೇಟ ಸೆಕ್ರೆಟರಿ ಕೊಡುವ ... ಒಂದು ಮಿತಿ ಬೇಕು. ಕಾರಣ, ಅವನಿಂದ ಹಿಂದ ಹುಂಡಿ ... ಹಿಂದುಸ್ಥಾನದ ಖಜಾನೆಯಲ್ಲಿ ಇರಬೇಕಷ್ಟೆ! ಪರಂತು ಹಿಂದುಸ್ಥಾನ ಸರಕಾರವು ವಿಲಾಯತಿಯವರಿಂದ ಪಡಕೊಂಡ ಸಾಲದ ಬಡ್ಡಿ, ಸ್ಟೇಟ ಸೆಕ್ರೆಟರಿಯ ಮತ್ತು ಅವನ ಆಫೀಸಿನ ಸಂಬಳ ಮುಂತಾದ್ದೆಲ್ಲದರ ಮೇಲು ಮಿತಿಮೀರಿ ಹೋಗಿದೆ, ಪ್ರತ್ಯಕ್ಷ ಹಿಂದುಸ್ಥಾನದ ಸರಕಾರವು ಖಜಾನೆಯು ಬುಡಕ್ಕೆ ಬಂದಿದೆ! ಆದ್ದರಿಂದ ಈ ಪರಿಸ್ಥಿತಿಯಲ್ಲಿ ಹುಂಡಿಗಳ ಚಲಾವಣೆಯನ್ನು ನಿಲ್ಲಿಸುವುದು ಕ್ರಮಪ್ರಾಪ್ತವಾಯಿತು. ಇದರಿಂದ ವ್ಯಾಪಾರವು ಅನಾನುಕೂಲ ಸ್ಥಿತಿಗೆ ಬಂದು ಕುಂಠಿತವಾಯಿತು.

ವ್ಯಾಪಾರಕ್ಕೆ ನಿಕೃಷ್ಟ ಸ್ಥಿತಿಯು ಬರಬೇಕಾದರೆ ಇದರಂತೆಯೆ ನಾಣ್ಯಗಳ ಚಲಾವಣೆಯ ಸಂಕೋಚವೂ ಒಂದು ಸಹಕಾರಿಯಾಗಿದೆ, ಮತ್ತು ಇದೆ ಕಾರಣದಿಂದ ಹೇಳುತ್ತಾರೆ ಏನೆಂದರೆ, ಹಿಂದುಸ್ಥಾನ ಸರಕಾರಕ್ಕೆ ಸ್ಟೇಟ ಸೆಕ್ರೆಟರಿಯು ಹಚ್ಚಿ ಹೋದ ಬಿಲನ್ನು ಭರಾಯಿಸುವುದು ಅಸಾಧ್ಯವಾಯಿತು. ಹಿಂದುಸ್ಥಾನದಿಂದ ನಿರ್ಗತವಾಗಿ ಹೋಗುವ ವ್ಯಾಪಾರದ ಕೆಲವಂಶದಿಂದ ಪ್ರತಿಫಲರೂಪವಾಗಿ ವಿಲಾಯತಿಯು ಆಯಾತ ವ್ಯಾಪಾರವು ಈಗ ನಿಂತುಹೋದ್ದರಿಂದ ಆ ಕಾಲದ ಪ್ರತಿಫಲವೂ, ಬಾಕಿ ಉಳಿದ ಭಾಗವೂ ಎಲ್ಲ ಹಣದಿಂದಲೆ ನಿರ್ವಹಿಸಬೇಕಾಗಿ ಬಂತು. ಯುದ್ಧದ ಸಲುವಾಗಿ ಇಲ್ಲಿಂದ ಸಾಮಾನುಗಳು ಹೋಗುವುದು ಅಧಿಕವಾದ ಕಾರಣ ಈ ಅಡಚಣೆಯಂತು ಅಪರಿಹಾರ್ಯವೆ ಆಯಿತು. ಹೊಸದಾಗಿ ಹಣವನ್ನು ಕಲ್ಪಿಸುವುದರಿಂದಲೆ ಈ ಅಡಚಣೆಗಳಿಂದ ಪಾರಾಗಬಹುದಲ್ಲದೆ ಇದಕ್ಕೆ ಬೇರೆ ಉಪಾಯವಿಲ್ಲ. ಇಷ್ಟರವರೆಗೆ ಸಾಧ್ಯವಿದ್ದಷ್ಟು ಬೆಳ್ಳಿಯನ್ನು ಟಂಕಸಾಲೆಯಲ್ಲಿ ಹಾಕಿ ನಾಣ್ಯಗಳನ್ನು ತಯಾರಿಸಿ ಆಯಿತು. ಹಾಗೆ ಸರಕಾರದ ಜವಾಬುದಾರಿಯ ಮೇಲೆ ಕಾಗದದ ನೋಟುಗಳನ್ನೂ ಕೂಡ ಹೊರಡಿಸಿ ಆಯಿತು. ಹೊಸ ನಾಣ್ಯಗಳನ್ನು (ದ್ರವ್ಯವನ್ನು) ಒದಗಿಸಿಕೊಡುವ ಈ ಎಲ್ಲ ಸಾಧನಗಳು ಸಾಕಷ್ಟು ಆಕಾರದಲ್ಲಿ ಒಂದುಹೋದ್ದರೂ ಅದರಿಂದ ಹಣದ ಅಡಚಣೆ ಕಡಿಮೆಯಾಗಲಿಲ್ಲ. ಈ ಕ್ರಮದಿಂದ ಹಣ ಚಲಾವಣೆಯ ... ಅಡಚಣೆಗಳು ಕಡಿಮೆಯಾಗುವದಂತು ಹೋಯಿತು, ಪ್ರತ್ಯುತ ಮುಂದೆ ಈ ಅಡಚಣೆಗಳು ಭಯಾವಹವಾಗುವವೋ ಎಂದು ತೋರುವುದು. ನಾಲ್ಕುನೂರು ಕೋಟಿಗಿಂತಲೂ ಹೆಚ್ಚಿನ ಧನವು ... ತೊಡಗಿಹೋದ್ದರಿಂದ ಇದು ಬೆಂಕಿಗಳ ಮೂಲಧನಕ್ಕೆ ... ಒಂದು ದಾರಿಯೆ ಆದೆ. ಈ ಕಾರಣದಿಂದ ಹಣದ ಚಲಾವಣೆಯು ಇನ್ನೂ ಇಕ್ಕಟ್ಟಿಗೆ ಬೀಳಗಾಗುವದೆಂದು ಊಹಿಸಬಹುದಾಗಿದೆ.

ಈ ಹಣ ಚಲಾವಣೆಯ ತೊಂದರೆಗಳನ್ನು ನಿವಾರಿಸಲು, ಹಣವನ್ನು ಹೆಚ್ಚಿಸುವುದು ಒಂದೆ ಉಪಾಯವೆಂಬುದಾಗಿ ಯಾರೂ ಹೇಳಬಹುದು. ಆದರೆ ಹಣ ಹೆಚ್ಚಿಸುವುದಕ್ಕಾಗಿ ಬೆಳ್ಳಿಯ ನಾಣ್ಯಗಳನ್ನು ಇನ್ನಷ್ಟು ತಯಾರಿಸಬಹುದೆಂದರೆ ೧೯೧೮ನೆಯ ಇಸವಿಯಿಂದಲೆ ಅತ್ಯಾಪತ್ತಿಯೋಗದಲ್ಲಿ ಬಂದ ಬೆಳ್ಳಿ ನಾಣ್ಯಗಳನ್ನು ಸ್ವಲ್ಪ ಸಮಯದ ಅಡಚಣೆಗಾಗಿ ಮುದ್ರಿಸುವುದು ಯುಕ್ತವಾಗಲಾರದು, ಇದನ್ನು ಕೈಕೊಂಡರೆ ಅದರಿಂದ ಒಂದುವೇಳೆ ತೊಡಕುಂಟಾಗುವ ಸಂದರ್ಭವೆ ತೋರುವುದು. ಬೆಳ್ಳಿಯ ನಾಣ್ಯಗಳನ್ನು ಹೊಡೆಯುವದು ಅಷ್ಟೊಂದು ಹಿತಕರವಲ್ಲ ಎಂದಾದ ಮೇಲೆ ಚಿನ್ನದ ನಾಣ್ಯಗಳ ಪ್ರಚಾರ ಹಾಗು ಕಾಗದದ ನೋಟುಗಳನ್ನು ತಯಾರಿಸುವುದು ಈ ಎರಡು ಸಂಗತಿಗಳು ಬಾಕಿ ಉಳಿಯುತ್ತವೆ. ಈ ಪ್ರಸಂಗದಲ್ಲಿ ನಮ್ಮ ಹಿಂದುಸ್ಥಾನ ಸರಕಾರಕ್ಕೆ ತೋರಿರಬಹುದೇನೆಂದರೆ, ಅನ್ಯದೇಶಗಳಿಂದ ಬರುವ ಚಿನ್ನವು ಜನರ ಕೈಗೆ ಸಿಕ್ಕಿದರೆ ಅವರು ಅದನ್ನು ಆರ್ಥಿಕದೃಷ್ಟಿಯಿಂದ ಉಪಯುಕ್ತವಾದ ಕೆಲಸಗಳಲ್ಲಿ ಉಪಯೋಗಿಸಲಿಕ್ಕಿಲ್ಲ. ಈ ತಿಳಿವಿನಿಂದ, ಸರಕಾರವು ಪರದೇಶದಿಂದ ಇಲ್ಲಿಗೆ ಬರುವ ಎಲ್ಲ ಚಿನ್ನವನ್ನು ತಾನೆ ಕೊಂಡುಕೊಳ್ಳಲು ನಿಶ್ಚಯಿಸಿದೆ, ಹಾಗು ಸ್ವಾಭಾವಿಕವಾದ ಚಲನಕ್ಕೆ ಲೈಸನ್ಸನ್ನು ಹೊಂದಿಯೆ ಪರದೇಶದವರು ಇಲ್ಲಿ ಚಿನ್ನವನ್ನು ಕಳಿಸಬಹುದೆಂದು ಅಭಿಪ್ರಾಯಪಟ್ಟಿದೆ; ಅಲ್ಲದೆ, ಈ ಲೇಖದ ಮುಖದಲ್ಲಿ ಹೇಳಿದ ಹಾಗೆ ಸರಕಾರವು ಚಿನ್ನದ ನಾಣ್ಯಗಳನ್ನು ಕರಗಿಸುವುದಾಗಲಿ ರೂಪಾಂತರಗೊಳಿಸುವುದಾಗಲಿ ಭಾರತ ಸಂರಕ್ಷಣದ ಕಾಯಿದೆಯ ಮೇರೆಗೆ ಕೂಡದೆಂದು ವಿಧಿಸಿರುತ್ತದೆ. ಈ ಉಪಾಯಗಳಿಂದ ನಾಣ್ಯಗಳ ಓಡಾಟವು ತಕ್ಕಮಟ್ಟಿಗೆ ನಡಿಯಲು ಅಡ್ಡಿಯಿಲ್ಲೆಂದು ಹೇಳುತ್ತಾರೆ. ಪರದೇಶದಿಂದ ಬರುವ ಎಲ್ಲ ಚಿನ್ನವು ಸರಕಾರದ ಕೈಗೆಯೆ ಸೇರಿಹೋದರೆ ಹಿಂದು ಜನರ ಕೆಲವು ಧಾರ್ಮಿಕ ಸಂಸ್ಕಾರಗಳಲ್ಲಿ—ಉದಾಹರಣಾರ್ಥವಾಗಿ, ವಿವಾಹವನ್ನು ವಧುವಿಗೆ ಚಿನ್ನದ ಮಂಗಲಸೂತ್ರವಿಲ್ಲದೆ ಮಾಡುವುದಿಲ್ಲ, ಅಂಥ ಕಡೆಗಳಲ್ಲಿ— ಈ ಹೊಸ ಕಟ್ಟಳೆಯಿಂದ ಅನಾನುಕೂಲವು ... ಬೇಕಾದ ಆಗತ್ಯವಿಲ್ಲ. ಸ್ವಾಭಾವಿಕವಾಗಿ ಬೇಕಾಗಿರುವಂಥ, ಅಗತ್ಯವಾದ ಅಲಂಕಾರಗಳನ್ನು ತಯಾರಿಸಲು ಗುರುತು ಹಾಕಿದ ಚಿನ್ನದ ಗಟ್ಟಿಗಳು ಬರುವವು, ಅವುಗಳಿಂದ ಆಭರಣಗಳನ್ನು ಮಾಡಿಕೊಳ್ಳಬಹುದು. ಈ ಕಾರಣದಿಂದ ಚಿನ್ನದ ಧಾರಣೆಯು ಹೆಚ್ಚಾದೀತೆಂಬುದು ನಿಜ. ಆದರೆ ಇದು ಉಪಾಯವಿಲ್ಲದ ಸಂಗತಿಯು. ಇರಲಿ. ನಾಣ್ಯಗಳನ್ನು ಕರಗಿಸಕೂಡದೆಂದು ವಿಧಿಸಿರುವುದರಿಂದ ಸರಕಾರದ ಕೈಯಲ್ಲಿ ಚಿನ್ನದ ನಾಣ್ಯಗಳ ಸಂಗ್ರಹವು ಯಥೇಷ್ಟವಾದೀತು. ಆಗ ಆ ಸಂಗ್ರಹಕ್ಕೆ ಅನುಗುಣವಾಗಿ ಕಾಗದದ ನೋಟುಗಳನ್ನು ಹೊರಡಿಸಬಹುದಾಗಿದೆ. ಬೆಳ್ಳಿಯ ನಾಣ್ಯಗಳನ್ನು ಹೆಚ್ಚಿಸುವುದು ಆರ್ಥಿಕದೃಷ್ಟಿಯಿಂದ ಸರಿಯಲ್ಲ. ೧೦ ಆಣೆಯ ಬೆಳ್ಳಿಗೆ ೧೬ ಆಣೆಯ ಕ್ರಯ ಕಟ್ಟುವುದೆ ಕೃತ್ರಿಮ ಬೆಲೆಯಾಗಿರುವುದು. ಈಗಿನ ಚಲಾವಣೆಯ ಇಕ್ಕಟ್ಟು ಯುದ್ಧಾಂತ್ಯದಲ್ಲಿ ಪರಿಹೃತವಾದಲ್ಲಿ ಬೆಳ್ಳಿಯ ನಾಣ್ಯಗಳನ್ನು ಕರಗಿಸುವುದು ಬಹಳ ಲುಕಸಾನಿಯ ಕೆಲಸವಾಗುವುದು. ಆದರೆ ಈಗ ಕಾಗದದ ನಾಣ್ಯಗಳನ್ನು ಸಂಗ್ರಹೀತ ಮೊಬಲಗದಷ್ಟು ಹೊರಡಿಸುವುದಾಗಲಿ, ಇಲ್ಲವೆ ಮುಂದೆ, ಅವುಗಳನ್ನು ರದ್ದುಪಡಿಸುವುದಾಗಲಿ ಅಷ್ಟೊಂದು ಲುಕಸಾನಿಯ ಕೆಲಸವಾಗದು. ಆದ್ದರಿಂದಲೆ ಸರಕಾರವು ಈಗಿನ ನಾಣ್ಯಗಳ ನ್ಯೂನತೆಯನ್ನು ತುಂಬುವುದಕ್ಕಾಗಿ ಚಿನ್ನದ ನಾಣ್ಯಗಳನ್ನು ಅನ್ಯಥಾ ಉಪಯೋಗಿಸಕೂಡದೆಂತಲೂ ಕರಗಿಸಕೂಡದೆಂತಲೂ ವಿಧಿಸಿದ್ದು ಆರ್ಥಿಕದೃಷ್ಟಿಯಿಂದ ಪ್ರಕೃತ ಕಾಲಕ್ಕೆ ಹಿತಾವಹವಲ್ಲೆಂದು ವಾದಿಸುವುದು ಯುಕ್ತವಾಗಲಾರದೆಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಇದರಿಂದ ನಾಣ್ಯಗಳ ಚಲಾವಣೆಯು ಸಾಧಾರಣವಾಗಿಯಾದರೂ ಸರಾಗವಾಗಿ ನಡೆದು ಈಗ ಬಿದ್ದಿರುವ ವ್ಯಾಪಾರದಮೇಲೆ ತಕ್ಕಮಟ್ಟಿಗೆ ಸುಪರಿಣಾಮವುಂಟಾದೀತೆಂದು ಬಯಸಬಹುದಾಗಿದೆ.

ಸ್ಫುಟವಿಚಾರಗಳು.

೧ ಹಿಂದೀ ರಾಜ್ಯಕಾರಭಾರದ ಭಾವಿ ಸುಧಾರಣೆಯ ಪ್ರಶ್ನವು ಬ್ರಿಟಿಷ್ ಮುತ್ಸದ್ದಿಗಳ ಮುಂದೆ ಬಂದಿದೆಂದು ತೋರುತ್ತದೆ. ಈ ಸಂಬಂಧದಿಂದ ಕೆಲವು ವಿಲಾಯತಿ ಪತ್ರಗಳ ಅಭಿಪ್ರಾಯವನ್ನು ನೋಡುವಾಗ ಆಗಲಿಕ್ಕಿದ್ದ ಈ ಸುಧಾರಣೆಗಳು ಅಷ್ಟೊಂದು ಪ್ರಗಮನಶೀಲವಲ್ಲೆಂದು ಹೇಳಲು ಯಾವ ಸಂಕೋಚವೂ ತೋರುವುದಿಲ್ಲ. ಹಿಂದೀ ರಾಷ್ಟ್ರದ ಪ್ರತಿನಿಧಿಗಳು ಯುದ್ಧಾಂತ್ಯದಲ್ಲಿ ಇಂಥಿಂಥ ಸುಧಾರಣೆಗಳೆ ನಮಗೆ ಬೇಕಾಗಿವೆ ಎಂದು ಕೇಳಿದ್ದಾರಷ್ಟೆ. ಆದರೆ ಬ್ರಿಟಿಷ್ ಮುತ್ಸದ್ದಿಗಳು ಈ ಸೂಚಿತ ಸುಧಾರಣೆಗಳನ್ನು ಎಷ್ಟರಮಟ್ಟಿಗೆ ಮಾನ್ಯಮಾಡುವರು, ಇವುಗಳಲ್ಲಿ ಯಾವುದೂ ಮಾನ್ಯವಾಗದಿದ್ದರೆ ಸ್ವತಃ ಅವರು ಯಾವುದನ್ನು ಕೊಡಲು ಇಚ್ಛಿಸಿರುವರು ಇವೆ ಮೊದಲಾದ ಸಂಗತಿಗಳನ್ನು ಲೋಕಮತದ ಮುಂದೆ ಚರ್ಚೆಗೆ ತರುವುದು ಬ್ರಿಟಿಷ್ ಮುತ್ಸದ್ದಿಗಳ ಕರ್ತವ್ಯವಾಗಿದ್ದರೂ ಅವರು ಇಷ್ಟರವರೆಗೆ ಈ ಸಂಬಂಧದಿಂದ ಮೌನವನ್ನೆ ತಾಳಿದ್ದಾರೆ, ಒಂದುವೇಳೆ ಬಾಯಿಬಿಡುವ ಪ್ರಸಂಗ ಬಂದರೆ, 'ಅದು ಕೂಡದು, ಇದು ಕೂಡದು' ಎಂದು ಒತ್ತಾಟದ ಉಪದೇಶವನ್ನೆ ಮಾಡುವರು! ಆಗ ಜನರ ಸ್ಥಿತಿಯು ಏನಾಗಬೇಕಾಯಿತು? ರಾಜಕಾರಣದಲ್ಲಿ ಗೋಪನವು ಅವಶ್ಯವಾದ್ದೆ. ಆದರೆ ಬರಲಿಕ್ಕಿದ್ದ ಸುಧಾರಣೆಗಳು ಜನರ ಆಕಾಂಕ್ಷೆಗಳನ್ನು ಅದಷ್ಟು ಸಮೀಪಿಸುತ್ತವೆಂದಿದ್ದರೆ ಅವುಗಳನ್ನು ಬಚ್ಚಿಡುವುದರಿಂದ ಸಾಧ್ಯಫಲವೇನು? ಪರಂತು ಅವುಗಳನ್ನು ಗುಪ್ತವಿಡುವುದರಿಂದ ಬ್ರಿಟಿಷ್ ಮುತ್ಸದ್ದಿಗಳ ಮುಂದಿರುವ ಹಿಂದೀ ಸುಧಾರಣೆಗಳು ಹಿಂದೀ ಲೋಕಮತದ ದೃಷ್ಟಿಯಿಂದ ಪ್ರಗಮನಶೀಲವಲ್ಲೆಂಬುದು ಲಂಡನ್ ಟೈಮ್ಸಕಾರನ ಅಭಿಪ್ರಾಯದಿಂದಲೂ ಅನುಮಾನಿಸಬಹುದು. ಸದರಿ ಪತ್ರದ ಆಶಯದಂತೆ, ಹಿಂದೀ ಸುಧಾರಣೆಯ ವಿಷಯದಲ್ಲಿ ಮುಖ್ಯವಾಗಿ ಮೂರು ಸಂಗತಿಗಳು ಬ್ರಿಟಿಷ ಮುತ್ಸದ್ದಿಗಳ ದೃಷ್ಟಿಯ ಮುಂದಿರುವವು. ೧ ಲಷ್ಕರ (ಸೈನ್ಯ)ವನ್ನು ಕುರಿತು ಇದ್ದ ಕಠಿನದಪದ್ಧತಿಯನ್ನು ತಿದ್ದುವುದು, ೨. ಇದು ಹಿಂದುಸ್ಥಾನದ ರಾಜ್ಯಕಾರಭಾರವು ಹಿಂದುಸ್ಥಾನ ಸರಕಾರದ ಕೈಯಲ್ಲಿ ಕೇಂದ್ರೀಭೂತವಾಗಿದೆ; ಅದನ್ನು ಕೊಂಚಮಟ್ಟಿಗೆ ಸಂಕೋಚಿಸಿ ಪ್ರಾಂತಿಕ ಸರಕಾರಗಳ ಕೈಯಲ್ಲಿ ಕೊಡಬಹುದೊ ಹ್ಯಾಗೆ ಎಂಬೀ ವಿಷಯವು ಮತ್ತು ಇದೆ ಕ್ರಮದಿಂದ ನೋಡಿದರೆ ವಿಲಾಯತಿಯಲ್ಲಿ ಇದ್ದ ಇಂಡಿಯಾಆಫೀಸಿನ ಸಂಬಂಧದಿಂದಲೂ ಈ ವಿಚಾರಸರಣಿಯನ್ನೆ ಆದರಿಸಬಹುದೊ ಹ್ಯಾಗೆ ಎಂಬದೊಂದು ವಿಷಯವು, ೩. ಹಿಂದೀಜನರಿಗೆ ಕಾರಭಾರದಲ್ಲಿ ಸ್ವಲ್ಪ ಹೆಚ್ಚು ಹೆಚ್ಚು ಅಂಶವನ್ನು ಕೊಡಬೇಕು. ಆದರೆ ಅದನ್ನು ಹಾಗೆ ಮೆಲ್ಲಮೆಲ್ಲನೆ ಕೊಡುವಾಗ ಸಾಕಷ್ಟು ತನಖಿ ನಡಿಸಿಕೊಡಬೇಕು.' ಟೈಮ್ಸ್‌ಪತ್ರಿಕೆಯು ಸೂಚಿಸಿದ ಈ ಮೂರು ಸುಧಾರಣೆಗಳಿಂದ ಹಿಂದೀಲೋಕಮತದ ಮೇಲೆ ತೃಪ್ತಿಕರ ಪರಿಣಾಮವಾದೀತೆಂದು ತಿಳಿಯಲು ಸಾಧ್ಯವಿಲ್ಲ.

೨. ಹಿಂದೀ ಸ್ವರಾಜ್ಯವನ್ನು ಕುರಿತು ಮುಂಬಯಿಯ ಗವರ್ನರರು ತಮ್ಮ ಅಭಿಪ್ರಾಯವನ್ನು ಹೊರಚೆಲ್ಲಿದರು, ಮದ್ರಾಸಿನ ಗವರ್ನರರು ಅಡಿಯಿಟ್ಟರು, ಪಂಜಾಬದವರೂ ಈ ಕ್ರಮವನ್ನು ಅನುಸರಿಸಿದರು, ಮಾತ್ರವಲ್ಲ, ವೈಸರಾಯರು ಕೂಡ ತಮ್ಮ ಇಂಗಿತವನ್ನು ಹೊರಪಡಿಸಿದರು. ಈ ಪ್ರಕಾರ ಸಾಮಾನ್ಯವಾಗಿ ಎಲ್ಲ ಅಧಿಕಾರಿಗಳು ಒಂದೆ ರಾಗವನ್ನು ಎಳೆಯುವಾಗ ಈಗಿನ ಬಂಗಾಲದ ಗವರ್ನರರಾದ ಲೊ. ರೊನಾಲ್ಡ್‌ಶೆಯವರಿಗೂ ಅದಕ್ಕೆ ಸ್ವರಕೊಡುವ ಆಲೋಚನೆ ಹುಟ್ಟಿದ್ದು ಅಸ್ವಾಭಾವಿಕವೆಂದು ಯಾರು ಹೇಳಬಹುದು? ಗವರ್ನರ ದೊರೆಗಳಿಗೆ ... ಸ್ವಾಗತಮಾಡಿದಾಗ ದೊರೆಗಳು ತಮ್ಮ ಪ್ರತ್ಯುತ್ತರದಲ್ಲಿ

ಹೇಳಿದ್ದೇನೆಂದರೆ, "ನೀವು ಹವಣಿಸಿದ್ದಷ್ಟು ಸ್ವರಾಜ್ಯದ ದೊಡ್ಡ ಭಾಗವು ನಿಮ್ಮ ಕೈಗೆ—ಅದೂ ನನ್ನ ಆಳಿಕೆಯಂಥ ಸ್ವಲ್ಪ ಸಮಯದೊಳಗಾಗಿಯೆ—ಸಿಕ್ಕೀತೆಂದು ನೆನೆಸುವುದು ಅವ್ಯವಹಾರ್ಯವು. ಇಂಥ ಆಲೋಚನೆಗಳನ್ನು ಕಟ್ಟಿಕೊಳ್ಳುವವರಿಗೆ ಈ ಮಾರ್ಗದಲ್ಲಿ ಎಷ್ಟು ತೊಂದರೆಗಳಿರುವವೆಂಬುದು ಗೊತ್ತಾಗುವುದಿಲ್ಲ. 'ಉದ್ದಿಷ್ಟ ಸ್ಥಾನವನ್ನು ಹೊಂದಬೇಕಾದರೆ ನಾವು ಮಾರ್ಗಕ್ರಮಣದಿಂದ ದಣಿದು ದಣಿದು ಸೋತುಹೋಗಬೇಕು.' ಎಂದು ಎರಡು ವರುಷಗಳ ಹಿಂದೆ ಮುಂಬಯಿಯ ರಾಷ್ಟ್ರೀಯ ಸಭೆಯ ಅಧ್ಯಕ್ಷರು ಹೇಳಿದ ಮಾತನ್ನು ಈಗಿನ ಸ್ವರಾಜ್ಯವಾದಿಗಳು ನೆನಪಿಗೆ ತರಬೇಕಾಗಿದೆ." ಲೋರ್ಡ್ ರೊನಾಲ್ಡ್‌ಶೆಯುವರ ಆಶಯವು ಸರ್. ಸತ್ಯೇಂದ್ರರ ಮಾತಿಗೆ ಸರಿಹೋಗುತ್ತದಾದರೂ ಲೋರ್ಡ್ ಹಾರ್ಡಿಂಜರ ಮತಕ್ಕೆ ಒಪ್ಪುವದಿಲ್ಲ. ಸತ್ಯೇಂದ್ರ ಪ್ರಸನ್ನರನ್ನು ತೋರಿಸಿ ನಮ್ಮನ್ನು ಒದ್ದಿವಾದ ಹೇಳುವಾಗ ನಾವು ಈ ಅಧಿಕಾರಿಗಳಿಗೆ ಲೋರ್ಡ್ ಹಾರ್ಡಿಂಜರ ಔದಾರ್ಯದ ಸ್ಮರಣವನ್ನು ತಂದುಕೊಡುವುದು ಅಕ್ರಮವಾಗಲಾರದು. ಒಂದು ಸಮಯ ಲೋಕಪಕ್ಷದ ಮುಖಂಡರಾಗಿದ್ದವರ ಮಾತು ಲೋಕಪಕ್ಷವು ಮನ್ನಿಸಬೇಕೆಂಬುದು ಎಷ್ಟು ನಿಜವೊ ಅಷ್ಟೆ, ಒಮ್ಮೆ ಅಧಿಕಾರಿಗಳ ಶಿರೋಭಾಗದಲ್ಲಿ ವಿರಾಜಮಾನರಾಗಿದ್ದ ಲೋರ್ಡ್ ಹಾರ್ಡಿಂಜರಂಥವರ ಉಪದೇಶವನ್ನು ಅಧಿಕಾರಿಗಳು ಮನ್ನಿಸುವುದು—ಅದರಂತೆ ನಡೆದುಕೊಳ್ಳುವುದು ವಿಹಿತವಾದ್ದು. ಅಲ್ಲದೆ, ಅದೆ ಸರ್. ಸಿಂಹರು ಮುಂಬಯಿಯ ರಾಷ್ಟ್ರಸಭೆಯ ಅಧ್ಯಕ್ಷರಾದಾಗ ಸೂಚಿಸಿರುವ ಬೇರೆ ರಾಜ್ಯಕಾರಭಾರದ ಬದಲಾವಣೆಗಳನ್ನು ಲೋರ್ಡ್ ರೊನಾಲ್ಡ್‌ಶೆಯುವರು ಮನ್ನಿಸಿಕೊಡುವರೊ? ಒಂದು ವಿಷಯದಲ್ಲಿ ಅವರ ಆಧಾರವನ್ನು ತೆಕ್ಕೊಳ್ಳುವಾಗ ಬೇರೆ ಎಲ್ಲ ಸಂಗತಿಗಳಲ್ಲೂ ಅವರ ಅನುವರ್ತನವನ್ನು ಯಾಕೆ ಮಾಡಕೂಡದು? ಈ ಪ್ರಶ್ನವು ಬರುತ್ತದೆ.

೩. ಕೆಲವು ದಿವಸಗಳ ಹಿಂದೆ ಮುಂಬಯಿಯಲ್ಲಿ ಸರ್ ನಾರಾಯಣರಾವ್ ಚಂದಾವರಕರ ಇವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಪರಿಷತ್ತು ಜರಗಿತು. ಅಧ್ಯಕ್ಷರ ಭಾಷಣವು ಸುವಿಚಾರಪರಿಪ್ಲುತವಾಗಿತ್ತು. ಅವರು ತಮ್ಮ ಭಾಷಣದಲ್ಲಿ ಮುಖ್ಯತಃ ರಾಷ್ಟ್ರೋನ್ನತಿಗೆ ಸಾಧನವಾದ ಶಿಕ್ಷಣವು ಪ್ರಗತಿಯನ್ನು ಹೊಂದಬೇಕಾದರೆ ಏನು ಮಾಡತಕ್ಕದು, ಹಾಗು ಕನಿಷ್ಠ ಮತ್ತು ವರಿಷ್ಠ ಶಿಕ್ಷಣಗಳ ಪ್ರಸಾರವು ಯಾವ ಉಪಾಯದಿಂದಾದೀತು ಮುಂತಾದ ಸಂಗತಿಗಳನ್ನು ವಿಸ್ತೃತವಾಗಿ ಉಪಪಾದಿಸಿದರು. ಅಲ್ಲದೆ, ಶಿಕ್ಷಣದಂಥ ನಿರುಪದ್ರವ ಖಾತೆಯಲ್ಲಿ ಕೂಡ ಹಿಂದಿ, ಯುರೋಪಿಯನ್ ಈ ದುಷ್ಟ ಭೇದಗಳನ್ನು ಸರಕಾರವು ವರಿಷ್ಠ ಅಧಿಕಾರಿಗಳನ್ನು ಕೊಡುವಾಗ ಅನುವರ್ತಿಸುವದರಿಂದ ಹಿಂದೀ ಪ್ರೊಫೆಸರರ ಮಹತ್ವಾಕಾಂಕ್ಷೆಯು ಹೇಗೆ ಕುಂದಿಹೋಗುವುದೆಂಬುದನ್ನು ಅಧ್ಯಕ್ಷರು ಬಹು ಚೆನ್ನಾಗಿ ಸಮರ್ಥಿಸಿ ತೋರಿಸಿದರು. ಹಾಗೆಯೆ, ಈ ಭೇದದಿಂದ ಪ್ರೊಫೆಸರರು ಕೈಕೊಂಡ ವೃತ್ತಿಯಲ್ಲಿ ಉತ್ಸಾಹವನ್ನು ತೋರಿಸಲು ಅಸಮರ್ಥರಾಗುತ್ತಾರೆ, ಮಾತ್ರವಲ್ಲ, ಈ ದುಷ್ಟ ಭೇದದ ನಿಮಿತ್ತ ಶಿಕ್ಷಣದ ಶುದ್ಧ ವಾತಾವರಣದಲ್ಲಿಯೂ ಹೇಗೆ ರಾಜಕಾರಣವು ಬಂದು ಬಿಡುವುದು ಮತ್ತು ಯುರೋಪಿಯನ್ ಪ್ರೊಫೆಸರರು ಹಿಂದೀ ರಾಜಕಾರಣವನ್ನು ವೃಥಾ ದ್ವೇಷಿಸುವುದರಿಂದಲೆ ಹಿಂದೀ ಪ್ರೊಫೆಸರರಾಗಲಿ ವಿದ್ಯಾರ್ಥಿಗಳಿಗಾಗಲಿ ಅದನ್ನು ಹೇಗೆ ಅವಲಂಬಿಸಬೇಕಾಗುತ್ತದೆ ಮುಂತಾದ ಮಹತ್ವದ ಸಂಗತಿಗಳನ್ನು ಸರ್. ನಾರಾಯಣರಾಯರು ಅಧಿಕಾರವಾಣಿಯಿಂದ ಶ್ರುತಪಡಿಸಿದರು. ಅಧ್ಯಕ್ಷರ ಭಾಷಣದ ಅನಂತರ ನಡೆದ ಕಾರ್ಯಕ್ರಮದಲ್ಲಿ ಎರಡು ಮೂರು ಸಂಗತಿಗಳು ಬಹು ಮುಖ್ಯವಾಗಿದ್ದವು. ಮೆಟ್ರಿಕ್ ಪರೀಕ್ಷೆಯ ಪ್ರಶ್ನೋತ್ತರಗಳನ್ನು ದೇಶೀಯ ಭಾಷೆಯಿಂದಲೆ ಬರಿಯಬೇಕೆಂದೂ ಭಾಷೆಗನುವಾಗಿ ಯುನಿವರ್ಸಿಟಿಗಳನ್ನು ಸ್ಥಾಪಿಸಬೇಕೆಂದೂ ಮಹತ್ವದ ಠರಾವುಗಳು ಪರಿಷತ್ತಿನ ಕಾರ್ಯಕ್ರಮದಲ್ಲಿದ್ದವು. ಈ ಎಲ್ಲ ವಿಷಯಗಳನ್ನು ಆಲೋಚಿಸುವಾಗ ಮುಂಬಯಿಯ ಶಿಕ್ಷಣಪರಿಷತ್ತು ಯಶಸ್ವಿ ರೀತಿಯಿಂದ ಕೊನೆಗಾಣಿತೆನ್ನಲು ಅಡ್ಡಿ ಇಲ್ಲ.

೪. ಈ ವಾರದ ವರ್ತಮಾನ ಪತ್ರಿಕೆಗಳಲ್ಲಿ "ಮೆಸಪೊಟೆಮಿಯಾ ಪ್ರಕರಣ"ವೇ ಮುಖ್ಯವಾಗಿ ಪತ್ರಿಕೆಗಳ ಜಾಗೆಯನ್ನು ಆಕ್ರಮಿಸಿರುತ್ತದೆ. ಇದರ ಪೂರ್ವವೃತ್ತಾಂತವನ್ನು ಸಂಕ್ಷೇಪದಿಂದ ಹೀಗೆ ವಿವರಿಸಬಹುದು. ಯುದ್ಧವು ಪ್ರಾರಂಭವಾದ ನಂತರ ಗೆಲಿಪೋಲಿಯಲ್ಲಿ ಎರಡು ವರ್ಷಗಳ ಹಿಂದೆ ಟರ್ಕರು ಬ್ರಿಟಿಷ್ ಫೌಜನ್ನು ಸಾವಿರಗಟ್ಟಲೆಯಿಂದ ಕತ್ತರಿಸಿದರು. ಮುಂದೆ ಇಲ್ಲಿಂದ ಪುನಃ ಸೈನ್ಯವು ಮೆಸಪೊಟೆಮಿಯಕ್ಕೆ ಹೋಗಿ ಅಲ್ಲಿ ಯುದ್ಧ ನಡದು ಟರ್ಕರನ್ನು ಅವಜಯಗೊಳಿಸಿದರು. ಈ ಸಂಗತಿಯು ಯುದ್ಧವಾರ್ತೆಯ ವಾಚಕರಿಗೆ ಸರಿಯಾಗಿ ಗೊತ್ತಿರುವದಷ್ಟೆ. ಈ ಮೆಸಪೊಟೆಮಿಯದೊಳಗೆ ಶತ್ರುಗಳು ಅಕಸ್ಮಾತ್ತಾಗಿ ಬ್ರಿಟಿಷ್ ಫೌಜನ್ನು ಅಮಾನುಷರೀತಿಯಿಂದ ಕತ್ತರಿಸುವಷ್ಟರ ವರೆಗಿನ ಪ್ರಸಂಗವು ಯಾರಿಂದಾಗಿ ಬಂತು? ಎಂಬೀ ಪ್ರಶ್ನವು ಪಾರ್ಲಿಮೆಂಟಿನಲ್ಲಿ ಬಂದು ಆ ಬಗ್ಗೆ ತನಖಿ ನಡಿಸುವುದಕ್ಕಾಗಿ ಒಂದು ಕಮಿಷನ್ ನೇಮಿಸಲಾಯಿತು. ಆ ಸಂಬಂಧದ ಎಲ್ಲ ತನಖಿಯನ್ನು ನಡಿಸಿ ಕಮಿಷನವು ಈಗ ಪಾರ್ಲಿಮೆಂಟಿಕ್ಕೆ ರಿಪೋರ್ಟು ಬರೆದುಕೊಂಡಿದೆ. ಮೆಸಪೊಟೆಮಿಯದ ಅನರ್ಥವು ಲೊರ್ಡ ಹಾರ್ಡಿಂಜರ ಆಳಿಕೆಯಲ್ಲಾದ್ದರಿಂದ ಅವರನ್ನು ಪಾರ್ಲಿಮೆಂಟದ ಲೋಕಸಭೆಯಲ್ಲಿ ಈ ಬಗ್ಗೆ ಉಪಾಹರಣವನ್ನು ಕೊಡಲು ಕರೆದರು. ಲೊರ್ಡ ಹಾರ್ಡಿಂಜರು ಸ್ವಪಕ್ಷವನ್ನು ಸಮರ್ಥಿಸುವಾಗ ಹೇಳಿದ್ದೇನೆಂದರೆ, 'ಮೆಸಪೊಟೆಮಿಯದ ಪ್ರಕರಣವು ಉದ್ಭವಿಸುವ ಮುಂಚೆಯು ಯುರೋಪದೊಳಗಿನ ಫ್ರಾನ್ಸದ ರಣಭೂಮಿಗೂ ಆಫ್ರಿಕದಲ್ಲೂ ಹಿಂದುಸ್ಥಾನದಿಂದ ಸೈನ್ಯವನ್ನು ಕಳುಹಿಸಿ ಹಿಂದುಸ್ಥಾನದಲ್ಲಿ ವಿಲಾಯತಿಯಿಂದ ಹೊಸ ಸೈನ್ಯ ಬರುವ ವರೆಗೆ ಹಿಂದಿಗಳ ರಾಜನಿಷ್ಠೆಯ ಮೇಲೆ ಪೂರ್ಣ ಭರವಸೆಯನ್ನಿಟ್ಟು ಆ ದೇಶವನ್ನು ಬರೆ ೧೫ ಸಾವಿರ ಸೈನ್ಯದಿಂದ ಕಾಪಾಡಬೇಕಾಯಿತು. ಹಿಂದಿಗಳ ಮೇಲೆ ಇಟ್ಟ ಭರವಸೆಯು ಕೊನೆತನಕ ವಿಫಲವಾಗಲಿಲ್ಲ. ಈ ಯುದ್ಧದಲ್ಲಿ ಹಿಂದುಸ್ಥಾನವು ದ್ರವ್ಯ, ಯುದ್ಧೋಪಯುಕ್ತ ಸಾಹಿತ್ಯ, ಹಾಗು ಸೈನ್ಯ ಮೊದಲಾದ ರೂಪಗಳಿಂದ ವರಿಷ್ಠ ಸರಕಾರಕ್ಕೆ ಸಾಹಾಯ್ಯ ಮಾಡಿದೆ. ಈ ಕಮಿಷನದ ರಿಪೋರ್ಟದ ಮೇರೆಗೆ ಹಿಂದುಸ್ಥಾನವು ಯುದ್ಧದಲ್ಲಿ ಹೇಳುವಷ್ಟು ಮದತನ್ನು ಮಾಡಲಿಲ್ಲ, ಎಂದು ಯಾರಾದರೂ ಭಾವಿಸುವ ಸಂದರ್ಭವಿದ್ದರೆ ಆ ರಿಪೋರ್ಟವನ್ನು ಪ್ರಸಿದ್ಧಪಡಿಸುವುದು ಒಳ್ಳೇದು. ಇದಲ್ಲದೆ ಲೊರ್ಡ ಹಾರ್ಡಿಂಜ ಪ್ರಭುಗಳು ಹಿಂದಿಗಳ ಅಭಿಪ್ರಾಯಕ್ಕೆ ನಿಜವಾಗಿ ಎಷ್ಟು ಮಹತ್ವ ಕೊಡಬೇಕಾಗಿದೆ ಈ ಸಂಗತಿಯನ್ನೂ ವಿವರಿಸಿದರು. ಮತ್ತು ಮೆಸಪೊಟೆಮಿಯದ ವಿಷಯದಲ್ಲಿ ಮಿ. ಚೆಂಬರಲೇನರಿಗೂ ತಮಗೂ ಆ ಕಾಲದಲ್ಲಿ ನಡೆದ ಸಂಗತಿಗಳನ್ನೂ, ಬೇರೆ ವ್ಯವಸ್ಥೆಗಳನ್ನೂ ಕುರಿತು ಸಾಕಷ್ಟು ಹೇಳಿ ತಮ್ಮ ಸ್ಮರಣೀಯವಾದ ಭಾಷಣವನ್ನು ಮುಗಿಸಿದರು. ಈ ಪ್ರಕರಣದ ವಿಷಯದಲ್ಲಿ ನಮಗೆ ಹೇಳಬೇಕಾದ ಒಂದೆರಡು ಮಾತುಗಳನ್ನು ಮುಂದೆ ಇಷ್ಟರಲ್ಲಿ ಹೇಳುವೆವು.

೫. ಮುಂಬಯಿ ಸಂಸ್ಥಾನದ ಪ್ರಾಥಮಿಕ ಶಿಕ್ಷಣದ ಕಾಯಿದೆಯ ಮಸೂದೆಯು ಈಚೆಗೆ ಪ್ರಸಿದ್ಧವಾಗಿದೆ. ಈ ಮಸೂದೆಯ ಮುಖ್ಯ ಉದ್ದೇಶವೇನೆಂದರೆ, ಮುನ್ಸಿಪಾಲಿಟಿಗಳ ಗಡಿಯೊಳಗೆ ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯದಿಂದ ಕೊಡತಕ್ಕದು. ಈ ಮಸೂದೆಯಲ್ಲಿ ಅದಕ್ಕೆ ಜಾಗ್ರತೆಯು ತೆಕ್ಕೊಳ್ಳಲ್ಪಡಲಾಗಿದೆ. ಮತ್ತು ಮುನಿಸಿಪಾಲಿಟಿಗಳು ಅವಸರದಿಂದ ಇಲ್ಲವೆ ಪೂರ್ಣ ವಿಚಾರಮಾಡದೆ ಮುಂದರಿಸಕೂಡದೆಂಬುದಕ್ಕೆ ತಕ್ಕನ್ನು ಸಂಗತಿಗಳು ಸೂಚಿಸಲ್ಪಡಲಾಗಿವೆ. ಒಂದು ಮುನಿಸಿಪಾಲಿಟಿಯು ತನ್ನ ಗಡಿಯಲ್ಲಿ ಖಡ್ಡಾಯ ಶಿಕ್ಷಣವನ್ನು ಜಾರಿಯಲ್ಲಿ ತರುವದಕ್ಕಾಗಿ ಸರಕಾರಿ ಮಂಜೂರಾತಿಯನ್ನು ಪಡಕೊಳ್ಳಬೇಕಾದರೆ ಮೊದಲು ಅದು ಮುನಿಸಿಪಲ್ ಗಡಿಯೊಳಗಿನ ಎಲ್ಲ ಹುಡುಗರಿಗೆ ಶಿಕ್ಷಣದ ವಿಷಯದಲ್ಲಿ ಅನುಕೂಲತೆಯನ್ನು ಒದಗಿಸಿಕೊಡುವ ತನ್ನ ಪಾತ್ರೆಯನ್ನು ಶಿಕ್ಷಣದ ಖಾತೆಗೆ ತೋರಿಸಿಕೊಡತಕ್ಕದು. ಅಲ್ಲದೆ ಈ ಕೆಲಸಕ್ಕೆ ವಿದ್ಯಾಖಾತೆಯ ಸಮ್ಮತಿಯನ್ನು ಪಡಕೊಳ್ಳುವ ಮೊದಲು, ಮುನಿಸಿಪಾಲಿಟಿಯು ತನ್ನ ಮೆಂಬರರ ಒಂದು ಸರ್ವಸಾಧಾರಣ ಸಭೆಯನ್ನು ಕರೆಯಿಸಿ ಅದರಲ್ಲಿ ಖಡ್ಡಾಯ ಶಿಕ್ಷಣದ ಠರಾವನ್ನು ಪಾಸು ಮಾಡಿಕೊಳ್ಳುವುದು. ಈ ಸಭೆಯಲ್ಲಿ ೧/೨ ಸಭಾಸದರಾದರೂ ಹಾಜರಿರತಕ್ಕದು. ಇದೆ ರೀತಿಯಿಂದ ಕೆಲವು ನಿಯಮಗಳನ್ನು ಮಾಡಿ ಈ ಮಸೂದೆಯನ್ನು ತಯಾರಿಸಿದೆ. ಪ್ರಾಥಮಿಕ ಶಿಕ್ಷಣದ ಉಪಯುಕ್ತತೆಯನ್ನು ಈಗ ಉಪಪಾದಿಸಿ ತೋರಿಸಬೇಕಾದ ಅವಶ್ಯಕತೆಯು ಉಳಿದಿಲ್ಲ. ಅದು ಸೂರ್ಯಪ್ರಕಾಶದಂತೆ ಸ್ಪಷ್ಟವಾಗಿದೆ. ಕಥಾಪಿ ಮುಂಬಯಿ ಸರಕಾರದಂತೆಯೆ ಅನ್ಯ ಸರಕಾರಗಳು ಈ ವಿಷಯದಲ್ಲಿ ತಂತಮ್ಮ ಪ್ರಯತ್ನಗಳನ್ನು ಮಾಡಿ ವಿದ್ಯಾದಾನದ ಪುಣ್ಯವನ್ನು ಬೆರಗಿನಲ್ಲಿ ಹಾಕಿಕೊಂಡರೆ ಲೋರ್ಡ್ ಪೆಂಟಲೇಂಡರ ಉದ್ದೇಶವೆ ಸಫಲವಾದೀತು.

ಸ್ಥಳಿಕ — ಮಂಗಳೂರು.

ಕಳೆದ ಫೆಬ್ರವರಿ ತಿಂಗಳ ತಾ. ೭ರಲ್ಲಿ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಬಹುಮಾನಪಟ್ಟ ಕೆ. ಆರ್. ವಿ. ಕೃಷ್ಣರಾಯರು ಮಾಡಿದ ಸೂಚನೆಯನ್ನು ಅಂಗೀಕರಿಸಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ವೈಸ್ ಪ್ರೆಸಿಡೆಂಟರನ್ನು ಚುನಾಯಿಸುವ ಹಕ್ಕನ್ನು ಪರೀಕ್ಷಾರ್ಥವಾಗಿ ದಕ್ಷಿಣಕನ್ನಡ, ಬಳ್ಳಾರಿ, ನೆಲ್ಲೂರು ಮತ್ತು ಮಧುರಾ ಈ ನಾಲ್ಕು ಜಿಲ್ಲೆಗಳಿಗೆ ಕೊಟ್ಟಿರುವರು. ಈ ನವೀನ ಹಕ್ಕಿಗೆ ಅನುಗುಣವಾಗಿ ಇಲ್ಲಿ ಕಳೆದ ವಾರ ಕೂಡಿದ ಡಿಸ್ಟ್ರಿಕ್ಟ್‌ಬೋರ್ಡಿನ ಸಭೆಯಲ್ಲಿ ವೈಸ್ ಪ್ರೆಸಿಡೆಂಟರ ಚುನಾವಣೆಯು ನಡಿಯಿತು. ಬಹುಮಾನಪಟ್ಟ ಕೆ. ಸದಾಶಿವ ಭಟ್ಟರವರು ರಾವ್ ಬಹದ್ದೂರ್ ಎನ್. ಸುಬ್ಬರಾಯರನ್ನು ವೈಸ್ ಪ್ರೆಸಿಡೆಂಟರನ್ನಾಗಿ ಆರಿಸಬಹುದೆಂದು ಸೂಚಿಸಿದರು. ಮ. ರಾ. ರಾ. ಕೆ. ಪಿ ಅಚ್ಯುತಯ್ಯನವರು ಭಟ್ಟರವರ ಸೂಚನೆಯನ್ನು ಅನುಮೋದಿಸಿದ ನಂತರ ವೋಟು ಕೊಡುವ ಪತ್ರಗಳು ಹಂಚೋಣವಾದವು. ರಾವ್ ಬಹದ್ದೂರ್ ಸುಬ್ಬರಾಯರಿಗೆ ೨೧ ವೋಟುಗಳು ದೊರೆತಿದ್ದರಿಂದ ಇವರೆ ವೈಸ್‌ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುತ್ತಾರೆ. ಮೆಂಬರರ ಪೈಕಿ ಒಬ್ಬರು ವೋಟುಪತ್ರದಲ್ಲಿ ಹೆಸರು ಬರೆಯದೆ ಖಾಲಿಕಾಗದವನ್ನೆ ಕೊಟ್ಟಿದ್ದರೆಂಬದಾಗಿ ತಿಳಿಯುತ್ತೇವೆ.

ಮಂಗಳೂರು ತಾಲೂಕಿನಲ್ಲಿ ರಸ್ತೆ ಕಿನಾರೆಗಳಲ್ಲಿ ಸಾಲುಮರಗಳ ಬಗ್ಗೆ ರೂ. ೪೪೦ನ್ನು ಈ ಸರ್ತಿಯ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಸಂಕ್ರನಿಸಿರುವರು.

ಇಲ್ಲಿಯ ಜಾನುವಾರುಗಳ ಆಸ್ಪತ್ರೆಯಲ್ಲಿ ಇದೇ ಜೂನು ತಿಂಗಳಿಂದ ಒಂದು ವರುಷದ ವರೆಗೆ ಜಾನುವಾರುಗಳ ಚಿಕಿತ್ಸೆಯನ್ನು ಫೀಸು ತಕ್ಕೊಳ್ಳದೇನೆ ಮಾಡಬೇಕೆಂತ ಡಿಸ್ಟ್ರಿಕ್ಟ್ ಬೋರ್ಡಿನವರು ನಿರ್ಣಯಿಸಿರುತ್ತಾರೆ.

ರೈಲ್ವೆ ಸೆಸ್ಸಾಗಿ ಸಂಗ್ರಹಿಸಲ್ಪಟ್ಟ ಹಣದ ಪೈಕಿ ರೂ. ೩೬,೮೦೦ನ್ನು ಸೇಕಡಾ ೫॥ ದರದ ಮತ್ತು ಲೋಕಲ್ ಫಂಡು ಪ್ರೊವಿಡೆಂಟ ಫಂಡಿನ ರೂ. ೫೪೬೩ನ್ನು ಸೇಕಡಾ ೫೨ ದರದ ಸಾಲಪತ್ರಗಳಲ್ಲಿ ವಿನಿಯೋಗಿಸಿರುವರು.

ಇಲ್ಲಿ ದೀಜದ ಎರಡು ಕೋರಿಗಳನ್ನು ತಂದಿರಿಸಿಕೊಳ್ಳುವ ಪ್ರಸ್ತಾವವು ಡಿಸ್ಟ್ರಿಕ್ಟ್ ಬೋರ್ಡು ಸಭೆಯ ಮುಂದೆ ಬಂದಿತ್ತು. ಇಲ್ಲಿಯ ಮಾಜಿ ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಎಸೋಸಿಯೇಶನಿನ ಸೆಕ್ರೆಟರಿಗಳಾದ ಮ। ರಾ। ರಾ। ಸುಜೀರ ರಘುನಾಥಯ್ಯನವರಿಗೆ ಈ ಪ್ರಸ್ತಾಪಕ್ಕೆ ಸಂಬಂಧಪಟ್ಟ ಪತ್ರಗಳನ್ನು ಕಳುಹಿಸಿಕೊಡಬೇಕೆಂತ ನಿರ್ಣಯವಾಗಿದೆ.

ಮಹರ್ಷಿ ದಾದಾಭಾಯಿ ನವರೋಜಿಯವರ ಮರಣದಿಂದ ಉಂಟಾದ ಸಂತಾಪ ಸೂಚನಾರ್ಥವಾಗಿ ಇಲ್ಲಿಯ ಡಿಸ್ಟ್ರಿಕ್ಟ್ ಎಸೋಸಿಯೇಶನಿನ ಸೆಕ್ರೆಟರಿಗಳು ಪುರಜನರ ಮಹಾಸಭೆಯೊಂದನ್ನು ಜರುಗಿಸಿದ್ದರು. ಮಾಜಿ ಡಿಪ್ಯುಟಿ ಕಲೆಕ್ಟರರಾದ ದಿವಾನ್. ಬಹದ್ದೂರ್ ಎ. ಪಿಂಟೊರವರು ಈ ಸಭೆಯ ಅಧ್ಯಕ್ಷರಾಗಿದ್ದರು. ಸಭೆಗೆ ಸರಕಾರದ ನೌಕರರು ಮಾತ್ರವಲ್ಲ, ಪೆನ್ಶನದಾರರೂ ಬರದಿದ್ದರು. ಸಭೆಯು ಕೊಸ್ಮೊಪೊಲಿಟನ್ ಕ್ಲಬ್ ಮಂದಿರದಲ್ಲಿಯೆ ಕೂಡಿತ್ತು. ಸ್ವರಾಜ್ಯಧ್ಯೇಯಪ್ರೇರೇಪಕ ಸ್ವರ್ಗಸ್ಥ ಮಹನೀಯರುಗಳಾದ ದಾದಾಭಾಯಿಯವರ ಜೀವನ ಚರಿತೆಯ ಕೆಲವು ಮುಖ್ಯ ತತ್ವಗಳನ್ನು ಪ್ರಸ್ತಾಪಿಸಿಕೊಂಡು ಮ. ರಾ। ರಾ। ಆ. ಬಾಲಕೃಷ್ಣ ಸೆಟ್ಟಿಯವರೆ ಮೊದಲಾದವರು ಮಾತಾಡಿದರು. ನಂತರ ದಾದಾಭಾಯಿಯವರ ಮರಣದಿಂದ ಉಂಟಾದ ದುಃಖವನ್ನೂ ನಷ್ಟವನ್ನೂ ವ್ಯಕ್ತಗೊಳಿಸಿ ಒಂದು ನಿರ್ಣಯವನ್ನು ಸಭಿಕರೆಲ್ಲರೂ ಎದ್ದುನಿಂತು ಮೌನದಿಂದ ಮಂಜೂರು ಮಾಡಿದರು. ಸಭೆಯ ಸಹಸಂತಾಪವನ್ನು ದಾದಾಭಾಯಿಯವರ ಸಂಬಂಧಿಗಳಿಗೆ ತಿಳಿಸಬೇಕೆಂತ ಸಹ ನಿಶ್ಚಯಿಸಲ್ಪಟ್ಟಿರುತ್ತದೆ. ಮ। ರಾ। ರಾ। ವಕೀಲ ಎಮ್. ಮಾಧವರಾಯರ ಸೂಚನೆ ಮೇರೆಗೆ ಮೃತರ ಸ್ಮಾರಕವನ್ನು ಏರ್ಪಡಿಸಲಿಕ್ಕೆ ಒಂದು ಕಮ್ಮಿಟಿಯು ಏರ್ಪಡಿಸಲ್ಪಟ್ಟಿರುತ್ತದೆ.

ಇದೇ ಕಳೆದ ತಾ. ೧೦ನೇ ಮಂಗಳವಾರ ಇಲ್ಲಿ ಮ। ರಾ। ಉಳ್ಳಾಲ ಕೃಷ್ಣರಾಯರು ಮೃತಪಟ್ಟರೆಂಬುದನ್ನು ತಿಳಿಸಲು ಬಹಳ ವ್ಯಸನಪಡುತ್ತೇವೆ. ಸಾರಸ್ವತರ ಬಡವಿದ್ಯಾರ್ಥಿಗಳ ಸಹಾಯಕ ಫಂಡಿನ ಪರವಾಗಿಯೂ ಇಲ್ಲಿಯ ಉಮಾಮಹೇಶ್ವರ ದೇವಸ್ಥಾನದ ವೃದ್ಧಿಯ ಬಗ್ಗೆಯೂ ಇವರು ವಿಶೇಷ ಶ್ರಮಪಟ್ಟು ಈ ಎರಡು ಸಂಸ್ಥೆಗಳ ಸಹಾಯಾರ್ಥವಾಗಿ ಹೆಚ್ಚಿನ ದ್ರವ್ಯಸಂಗ್ರಹವನ್ನು ಕೂಡಿಸಿಕೊಟ್ಟು ತನ್ನ ಸ್ವಜಾತಿಬಾಂಧವರನ್ನು ಉಪಕೃತರನ್ನಾಗಿ ಮಾಡಿದ್ದಲ್ಲದೆ ಇತರ ಜಾತಿಯವರಿಗೂ ತಮ್ಮ ವರ್ತನೆಯ ಉದಾಹರಣೆಯನ್ನು ತೋರಿಸಿಕೊಟ್ಟಿರುವರು. ಇವರು ವಿಶೇಷವಾಗಿ ಇಂಗ್ಲೀಷು ಕಲಿತವರಲ್ಲ, ಆದ್ದರಿಂದ ಇವರ ಕಾರ್ಯಸಾಧನೆಗಳಲ್ಲಿ ಈಗಿನ ಆಡಂಬರವು ಕಾಣಬರುತ್ತಿದ್ದಿಲ್ಲ. ಆದರೆ ಸಮಾಜದಲ್ಲಿ ಪ್ರಕೃತ ಇರತಕ್ಕ ದೋಷಗಳು ಯಾವವು, ಇವುಗಳ ನಿವಾರಣೆಗೆ ಯಥಾರ್ಥವಾದ ಮಾರ್ಗಗಳು ಯಾವವು ಎಂಬುದನ್ನು ಪರ್ಯಾಲೋಚಿಸಿಕೊಂಡು ಸಮರ್ಥವಾದ ಉಪಾಯಗಳನ್ನು ತೋರಿಸಿ ಕೊಡುವಷ್ಟು ವಿದ್ವತ್ತಿಕೆಯು ಇವರಲ್ಲಿತ್ತು. ದೇವಸ್ಥಾನಗಳನ್ನು ನಿರ್ಮೂಲವಾಗಿ ನಾಶಪಡಿಸಿ, ಅವುಗಳ ಭಸ್ಮರಾಶಿಯ ಮೇಲೆ ನೂತನ ಸುಧಾರಣಾ ಮಂದಿರಗಳನ್ನು ಏರ್ಪಡಿಸಿ ಆ ಮೂಲಕ ಸುಧಾರಣ ತತ್ವಗಳನ್ನು ಸಾರುವಂಥ ಮಾರ್ಗಗಳಲ್ಲಿ ಇವರಿಗೆ ಸಮ್ಮತಿಯಿರಲಿಲ್ಲ. ದೇವಸ್ಥಾನಗಳಲ್ಲಿ ಈಗಿನ ವಿದ್ಯಮಾನಕ್ಕನುಸಾರವಾಗಿ ಎಂಥೆಂಥಾ ಏರ್ಪಾಡುಗಳನ್ನು ಮಾಡಬಹುದು, ಒಮ್ಮೆ ಸಮಾಜಕ್ಕೆ ಬಹಳ ಸಹಕಾರಿಗಳಾದಂಥ ಈ ಸಂಸ್ಥೆಗಳನ್ನು ಈಗಲೂ ಇವುಗಳು ಅದೇ ರೀತಿ ಸಹಕಾರಿಗಳಾಗುವಂತೆ ಏನೇನು ಮಾಡಬೇಕಾದೀತು ಎಂಬೀ ವಿಚಾರಗಳು ಇವರಲ್ಲಿ ಯಾವಾಗಲೂ ತುಂಬಾ ಇದ್ದವು. ಆಯಾ ಜಾತಿಯವರು ತಂತಮ್ಮ ಸಾಂಪತ್ತಿಕ ಅಭಿವೃದ್ಧಿಯ ಪ್ರಯತ್ನಗಳನ್ನು ನಡೆಸಿ ಈ ಜಿಲ್ಲೆಯ ಅಭಿವೃದ್ಧಿಯನ್ನು ಹೇಗೆ ಸಾಧಿಸಬಹುದು, ಜಿಲ್ಲೆಯ ಸ್ಥಿತಿಗತಿಯೇನು, ಉತ್ಪತ್ತಿ ಮೂಲಗಳು ಯಾವವು, ವ್ಯಾಪಾರವೇನು, ಅವುಗಳಿಗೆ ಎಂಥೆಂಥಾ ಸೌಕರ್ಯಗಳಿವೆ—ಈ ಎಲ್ಲ ವಿಷಯಗಳಲ್ಲಿ ಕೃಷ್ಣರಾಯರಲ್ಲಿ ಸ್ವತಂತ್ರ ಅಭಿಪ್ರಾಯಗಳಿದ್ದವು. ಈ ಅಭಿಪ್ರಾಯಗಳಲ್ಲಿ ಕೆಲವನ್ನು ವ್ಯಕ್ತಗೊಳಿಸಿ ಆಗಿಂದಾಗ್ಯೆ ಸ್ವದೇಶಾಭಿಮಾನಿಗೆ ಲೇಖಗಳನ್ನು ಬರೆಯುತ್ತಿದ್ದರು. ಇಷ್ಟರಲ್ಲಿಯೇ ಇವರಿಗೆ ತೃಪ್ತಿಯಿದ್ದಿಲ್ಲ. ತನ್ನ ಅಭಿಪ್ರಾಯಗಳಿಗನುಸಾರವಾಗಿ ಕಾರ್ಯಗಳನ್ನು ಸಾಧಿಸಬೇಕೆಂಬ ಉತ್ಸಾಹವು ಇವರಲ್ಲಿ ಇತ್ತಿತ್ತ ಬಹಳವಾಗಿ ತಲೆದೋರಿತ್ತು. ಈ ಉತ್ಸಾಹಕ್ಕೆ ತಕ್ಕಂಥಾ ಆರೋಗ್ಯಭಾಗ್ಯವು ಇವರಿಗೆ ಇಲ್ಲದೆ ಹೋದುದರಿಂದ ಯೌವನಪ್ರಾಯದಲ್ಲಿಯೆ ಇವರು ಗತಿಸಿಹೋದರು. ಇತ್ತಲಾಗೆ ಕೆಲವು ತಿಂಗಳುಗಳಿಂದ ಮೂತ್ರವ್ಯಾಧಿಯು ಇವರಿಗೆ ಪ್ರಾಪ್ತವಾಗಿತ್ತು. ಈ ವ್ಯಾಧಿಗೆ ತಕ್ಕ ಚಿಕಿತ್ಸೆಯನ್ನು ಬಹುಕಾಲ ನಡಿಸಿದರೂ ಫಲವಿಲ್ಲದೆ ಹೋಯಿತು. ದೇಹದಲ್ಲಿ ಪ್ರಾಪ್ತವಾದ ಅಶಕ್ತಿಯೇ ಹೆಚ್ಚಾಗಿ ಕೃಷ್ಣರಾಯರಿಗೆ ಅಕಾಲಮೃತ್ಯುವು ಇವರ ೩೫ನೇ ವಯಸ್ಸಿನಲ್ಲಿ ಈ ವ್ಯಾಧಿಯಿಂದ ಪ್ರಾಪ್ತವಾಯಿತು. ಇವರ ವಿಯೋಗದಿಂದ ದುಃಖಿತರಾದ ಇವರ ಇಲ್ಲಿಯ ಬಂಧುಗಳೊಡನೆ ನಮ್ಮ ಸಹಸಂತಾಪವನ್ನು ಈ ಮೂಲಕ ಸೂಚಿಸಿರುತ್ತೇವೆ.

ದಾದಾಭಾಯಿ ನವರೋಜಿಯವರ ಜೀವನಚರಿತ್ರೆಯ ಉಪನ್ಯಾಸವನ್ನು ಮ. ರಾ. ರಾ. ವಕೀಲ ಎಸ್. ಎಸ್. ಸುವರ್ಣ ಬಿ. ಎ. ಬಿ. ಎಲ್.ರವರು ಇಲ್ಲಿಯ ಸ್ಟೂಡೆಂಟ್ಸ್ ಬ್ರದರ್‌ಹುಡ್ಡಿನ ವಿದ್ಯಾರ್ಥಿ ಸಂಘದವರ ಸಭೆಯಲ್ಲಿ ಇದೇ ತಿಂಗಳ ತಾರೀಖು ೨೨ನೇ ಆದಿತ್ಯವಾರ ಸಾಯಂ ಘಂಟೆ ೫ಕ್ಕೆ ಬಂಟರ, ವಿದ್ಯಾರ್ಥಿಭವನದಲ್ಲಿ ಮಾಡುವರಾಗಿ ತಿಳಿಯುತ್ತೇವೆ. ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸೀಫರಾದ ಮ. ರಾ. ರಾ. ಜಗನ್ನಾಥರಾಯರು ಬಿ. ಎ. ಬಿ. ಎಲ್., ಇವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು. ಇನ್ನೂ ಹಲವು ವಿದ್ವಾಂಸರ ಭಾಷಣಗಳು ಆ ಸಂದರ್ಭದಲ್ಲಿರುವವು.

ಕಳೆದ ವಾರ ಕೋರ್ಟುವಾರ್ಡಿನಲ್ಲಿ ಒಂದು ಶ್ರೀಗಂಧಮರ [illegible]

ಹೊಸದುರ್ಗ:—ಇಲ್ಲಿಯ ಕೃಷ್ಣ ಸ್ಟೇಶನಿನ ರಾಷ್ಟಂಗಾದ ಕೃಷ್ಣ ಸ್ಟೇಶನಿಂದ ತೀರಾ ಮೂಡುಭಾಗಕ್ಕೆ ಇರುವ ಪನ್ನಡಿ ರಸ್ತೆಗೆ ಬುಡವಾದ ಮಾವಿಂಗಾಲ್ ಎಂಬಲ್ಲಿಗೆ ಸುಮಾರು ೧೮ ಮೈಲಷ್ಟು ದಾಸ್ತಿಯಿಂದ, ಒಳರಸ್ತೆಯನ್ನು ಕಾಣಿಸಿ ಇದು ಪನ್ನಡಿ ರಸ್ತೆಯನ್ನು, ಖಾಸಾ ಉಪಯೋಗಪಡಿಸಿ ಇಡಬೇಕಾಗಿ ಪುಲ್ಲೂರು, ಅಯ್ಯ, ವೇಳೂರು, ಕಳ್ಯಾರು ಪನ್ನಡಿ ವಗೈರೆ ನಿವಾಸಿಕರು, ಜಿಲ್ಲಾ ಕಲೆಕ್ಟರವರ ಸನ್ನಿಧಾನಕ್ಕೆ ಅರ್ಜಿ ಮಾಡಿಕೊಂಡಲ್ಲಿ ಇಂಜಿನಿಯರ್ ಇಲಾಖೆಯವರು, ಬಂದು—ಅಲ್ಲಿ ಗ್ರಾಮದ ಒಂದು ಕಡೆ ಅಜಾನೂರು ಗ್ರಾಮದ ಇನ್ನೊಂದು ಕಡೆ ದಾರಿನೋಡಿ ಈ ೨ ಗ್ರಾಮಗಳ ಮಧ್ಯಕ್ಕಾಗಿ ಒಂದು ರಸ್ತೆ ಅಗತ್ಯವೆಂದೆಣಿಸಿ, ಈ ರಸ್ತೆ ಬಗ್ಗೆ ಅಲ್ಲಲ್ಲಿ ಮಾರ್ಕು ಮಾಡಿಸಿ ನಂತರ ಅದರ ಹಂಬಲವೇ ಕಾಣದಿರುವದರಿಂದ ಪ್ರಯಾಣಿಕರಾವನೇಕರು ವಿಷಾದದಿಂದಿರುತ್ತಾರೆ. ಪನ್ನಡಿ ರಸ್ತೆಯ ಬುಡವಾದ ಮಾವಿಂಗಾಲ್ ಎಂಬಲ್ಲಿಂದ ಈ ಮೊದಲು ಮಾರ್ಕು ಮಾಡಿಸಿದ ದಾರಿಯಲ್ಲಿ ಸುಮಾರು ೧ ಮೈಲಷ್ಟು ಪಡುಪಾರ್ಶ್ವಕ್ಕೆ ಗಾಡಿಗಳು ಹ್ಯಾಗೂ ಕಷ್ಟಸಾಧ್ಯವಾಗಿ ಕೋಕಂಠದ ಮುಚಿಲೋಟು ಎಂಬಲ್ಲಿಯ ವರೆಗೂ ಹಾದು ಬರುತ್ತವೆ. ನಂತರ ಸುಮಾರು ಅರ್ಧ ಮೈಲಷ್ಟು ಸಮೀಪವಿರುವ ಪಡುಮಾರ್ಗದ ಕೃಷ್ಣ ಸ್ಟೇಶನಿಗೆ ಮುಂದು ಹೋಗುವದಕ್ಕೆ ಸಾಧ್ಯವಿಲ್ಲದ್ದರಿಂದ, ಇದನ್ನಾದರೂ ದುರುಸ್ತು ಪಡಿಸಿದರೆ ತಕ್ಕ ಮಟ್ಟಿಗೆ ಸಾರ್ವಜನ ಪಶು-ಗಾಡಿಗಳಿಗೂ ತಕ್ಕಷ್ಟು ಕಷ್ಟ ನಿವಾರಣೆಯಾಗುವದರಿಂದ ಪದೆಯಾಳ್ ಸರಕಾರದವರು ಸದ್ಯದ್ಯೋಗಸ್ಥರು ಸತ್ಕೃಷ್ಟಿಯಿಂದ ಸನ್ಮಾನವಿಟ್ಟು ಈ ಸುಲಭ ರಸ್ತೆಯನ್ನು, ಸಾಧಿಸಿಕೊಟ್ಟು ಸಂರಕ್ಷಿಸಬೇಕಾಗಿ ಸವಿನಯದಿಂದ ಅಪೇಕ್ಷಿಸುತ್ತೇನೆ.

ವೇಣೂರು:—ಇಲ್ಲಿಯ ಗ್ರಾಮಸ್ಥರು ಕೂಡಿ ಕುಂದಾಪುರ ತಾಲೂಕು ಬೋರ್ಡಿಗೆ ಒಂದು ಅರ್ಜಿ ಮಾಡಿರುತ್ತಾರೆ. ಪ್ರತಿವಾರದಲ್ಲಿ ಇಲ್ಲಿ ಸಂತೆಯನ್ನು ಏರ್ಪಡಿಸಬೇಕೆಂದು ಈ ಅರ್ಜಿಯಲ್ಲಿ ವಿಜ್ಞಾಪಿಸಲಾಗಿದೆ. ಬೇಗನೆ ಗ್ರಾಮಸ್ಥರ ಈ ಅಪೇಕ್ಷೆಯನ್ನು ನೆರವೇರಿಸಿಕೊಟ್ಟರೆ ಉಪಕಾರವಾಗುತ್ತಿತ್ತು.

ಕಾಪು:—ಇತ್ತಲಾಗೆ ಒಂದು ವಾರದಿಂದ ಬೇಸಿಗೆಯಲ ವನ್ನು[illegible]ಸಿದಂತೆ ಕಾಣುತ್ತದೆ. ಗದ್ದೆಗಳೆಲ್ಲ ಹಸುರು ವರ್ಣವಾಗಿ ತೋರುವ ಬದಲಿಗೆ ಸ್ವೀತ ವರ್ಣದಂತಾಗಿವೆ.

ಉಪ್ಪಿ ರೇಂಜು ಸ್ಕೂಲುಗಳ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರಾದ ಎಂ. ರಾ. ಕೋಟೆಕಾರ ರಾಮರಾಯರವರು ಇಲ್ಲಿಯ ಬೋರ್ಡು ಕನ್ನಡ ಶಾಲೆಯನ್ನು ಮತ್ತು ಕ್ರೈಸ್ತ ಅಸ್ಥಾನಿನ ಶಾಲೆಗಳನ್ನು ಸಂದರ್ಶಿಸುತ್ತಾ ಮುಂತಾದವರು. ಇಲ್ಲಿಯ ಕನ್ನಡ ಶಾಲೆಯಲ್ಲಿ IVನೇ ದರ್ಜೆಗೆ ಸರ್ಟಿಫಿಕೇಟು ಪರೀಕ್ಷೆಗೆ ನಿಂತ ಸರ್ವರೂ ಪಾಸಾಗಿರುವರು.

ಇಲ್ಲಿಯ ಹೊಸ ಶಾಲಾ ಕಟ್ಟೋಣದ ಕೆಲಸ ಇನ್ನೂ ಮುಗಿಯದೆ ಇದ್ದದ್ದರಿಂದ ಕನ್ನಡ ಶಾಲೆಯ II ಕ್ಲಾಸುಗಳು ದೇವಸ್ಥಾನದ ಗೋಪುರದಲ್ಲಿ ಇವೆ

ಇಲ್ಲಿಯ ಸಮೀಪ ಉದ್ಯಾವರ ಹೊಳೆಯ ಅಡಿ ಕಿನಾರೆಯ ೧ ದಲ್ಲಗಳು ಮುಂದೆ ಕಳೆದವಾರ ಮೋಟಾರು ಅಪಘಾತ ಆಗುವದಾಯಿತು. ರಾತ್ರಿ ೧೦ ಗಂಟೆಗೆ ಸುಮಾರು ೭-೩ಂಕ್ಕೆ ಥಕ್ಕನೆ ನೀರು ತುಂಬಾ ಇರುವ ಒಂದು ಹಳ್ಳಕ್ಕೆ ಮೋಟಾರು ಮಗುಚಿ ಬೀಳುವದಾಯಿತು. ಕೂತಂಥಾ ಪ್ರಯಾಣಿಕರು ಪಟ್ಟ ಭಯಕಷ್ಟಗಳನ್ನು ಬರೆದು ಪೂರೈಸದು. ಪ್ರಯಾಣಿಕರೆಲ್ಲರ ದೆಸೆಯನ್ನು ಹಸೆಯಲ್ಲಿ ಒಪ್ಪಿಸಿದ ಬ್ರಹ್ಮನ ಬರಹ್ವರಿಂದಲೇ ಅಂದಿನ ಎಲ್ಲರ ಪ್ರಾಣ ಉಳಿಯುವದಾಯಿತು. ಪ್ರಯಾಣಿಕರಲ್ಲಿ ಕೆಲವರು ನೀರಲ್ಲಿ ಮುಳುಗಿ ಬಿದ್ದರು. ಇನ್ನು ಕೆಲವರು ಅರ್ಧ ಒದ್ದೆಯಾದರು. ಒಬ್ಬನ ಜುಟ್ಟು ಕಾಲ್ಲ ಕ್ಕೊದು ಕೆಗೆದು ಮೇಲಕ್ಕೆ ಎಳೆಯದೆ ಇರುತ್ತಿದ್ದರೆ ಯಮನ ಆಲಯಕ್ಕೆ ಹೋಗುತ್ತಿದ್ದನು. ಅಂತೂ ಎಲ್ಲರೂ ಬಚಾವಾದರು. ನಂತರ ಸುಮಾರು ೭೦ ಜನರನ್ನು ಮ॥ ರಾ॥ ಕೃಷ್ಣಾಚಾರ್ಯರವರು ಕೂಡಿಸಿ, ಬಿದ್ದ ಹೋದ ಮೋಟಾರನ್ನು ಎಬ್ಬಿಸಿ ಉಪ್ಪಿಗೆ ರಾತ್ರಿ ೧ ಗಂಟೆಗೆ ಹ್ಯಾಗೂ ಕಳುಹಿಸಿದರು.

ತಾ. ೭-೭-೧೭ರಲ್ಲಿ ಬೆಳಗ್ಗೆ ಮಂಗಳೂರಿಗೆ ಹೋಗುವ ಮೋಟಾರು ಹೋಗದೆ ಇರಲು ಕಾರಣವೇನೋ ತಿಳಿಯದು.

ತಾ. ೨೩-೬-೧೭ರಲ್ಲು ಇಲ್ಲಿಯ ಬೋರ್ಡು ಕನ್ನಡ ಶಾಲೆಯಲ್ಲಿ ಉಪಾಧ್ಯಾಯರ ಕೂಟವು ಕಾರ್ಕಳ ರೇಂಜಿನ ಸುಪ್ರವೈಜರವರ ಅಧ್ಯಕ್ಷತೆಯಲ್ಲಿ ಆಗುವದಾಯಿತು. ಬರುವ ಕೂಟ ಇದೇ ತಿಂಗಳ ತಾ. ೨೦ಕ್ಕೆ ಎಮಾರ ಕನ್ನಡ ಶಾಲೆಯಲ್ಲಿ ಜರಗುವದು.

ಉಡುಪಿ:—ಇಲ್ಲಿಯ ರಥಬೀದಿಗೆ ಸಮೀಪ "ಶ್ರೀಕೃಷ್ಣ ಪ್ರೆಸ್" ಎಂಬ ಹೆಸರಿನಿಂದ ಇನ್ನೊಂದು ಮುದ್ರಾಕ್ಷರಶಾಲೆಯು ತೆರೆಯಲ್ಪಟ್ಟಿರುವದು. ಕಳೆದ ವರ್ಷ ಬಂದು ಛಾಪಖಾನೆಯಿಂದ ಒಂದು ಪಂಚಾಂಗವು ಹೊರಟು ಗೌರಾಗ ಪರ್ವ ಕರ್ಮವನ್ನು ಒಂದೇ ದಿವಸ ಮಾಡಿಕೊಂಡರೆ ಸಾಕಿತ್ತು. ಈ ಪಿಂಗಳ ಸಂವತ್ಸರದಲ್ಲಿ ಇಲ್ಲಿಯ ಎರಡು ಛಾಪಖಾನೆಗಳಿಂದ ಎರಡು ಪಂಚಾಂಗಗಳ ಹೊರಟು ಗೌರಿ ಹಬ್ಬವೂ ಎರಡು ದಿವಸಗಳಲ್ಲಿ ವಿಧಿಸಲ್ಪಟ್ಟಿರುವದು. ದೇವಾನುಗ್ರಹದಿಂದ ಬರುವ ಕಾಲಾಯುಕ್ತಿ ಸಂವತ್ಸರದಲ್ಲಿ ಈ ಕ್ಷೇತ್ರದಿಂದ ಮೂರು ಪಂಚಾಂಗಗಳು ಪ್ರಕಟಿಸಲ್ಪಟ್ಟು ಅನೇಕ ವಿಷಯಗಳು ಮೂರು ಮೂರು ಪ್ರಕಾರವಾಗಿ ಇರಬಹುದೆಂಬುದರಲ್ಲಿ ಸಂದೇಹವಿಲ್ಲ.

ಈ ಊರಲ್ಲಿ ಮನೆಮನೆಗಳಿಂದ ಪಾತ್ರಪದಾರ್ಥಗಳನ್ನು ಕಳವು ಮಾಡುವ ಕಳ್ಳರೂ, ಜುಜ್ಜರೂ ಜಾಸ್ತಿಯಾಗುತ್ತಾ ಬರುತ್ತಾರೆ

ಪತ್ರವ್ಯವಹಾರ.

ಅಧಿಕಮಾಸ ನಿರ್ಣಯ.

ಅಯ್ಯಾ, ಪ್ರಿಯಪಾಠಕ ಮಹಾಶಯರೇ!

ಈ ಪಿಂಗಲ ಸಂವತ್ಸರದ ಅಧಿಕಮಾಸ ವಿಷಯದಲ್ಲಿ ಉದ್ಯಾವರ ಪಂಚಾಂಗ ಕರ್ತರು ಬರೆದ ಮಾತೇ ಅಧಿಕವಾಗಿರುವದು. ಈ ಅಧಿಕ ಪ್ರಸಂಗವು ಕೇವಲ ಪಂಚಾಂಗ ಕರ್ತರನ್ನೇ ಅಲ್ಲ, ಗಣಿತಜ್ಞರಾದ ಇತರ ಜೋತಿಷ್ಯರನ್ನೂ, ಧರ್ಮಶಾಸ್ತ್ರಜ್ಞರನ್ನೂ, ಸಹ ಪತ್ರವ್ಯವಹಾರದಲ್ಲಿ ಒತ್ತಾಯಪಡಿಸುತ್ತದೆ. 'ಅಸಂಕ್ರಾಂತಿ ಮಾಸೋಧಿ ಮಾಸಃ' ಎಂಬ ಪ್ರಕಾರ ಸಂಕ್ರಾಂತಿ ಇಲ್ಲದ ಚಾಂದ್ರಮಾಸವು ಅಧಿಕಮಾಸವೆಂಬುದು ಎಲ್ಲರಿಗೂ ಗೊತ್ತಿ ಇರುವದು. ಇದರಲ್ಲಿ ಪಂಡಿತರು ತರ್ಕಿಸಲಿಕ್ಕೆ ಕಾರಣವೂ ಇಲ್ಲ ಆದರೆ ಈ ಪಿಂಗಲ ಸಂವತ್ಸರದಲ್ಲಿ ಸಂಕ್ರಾಂತಿ ರಹಿತವಾದ ಚಾಂದ್ರಮಾಸವು ಭಾದ್ರಪದವೋ? ಆಶ್ವೀಜವೋ? ಎಂಬುದು ಮಾತ್ರ ವಿವಾದಿಸತಕ್ಕದ್ದು. ಈ ವಿವಾದವಾದರೂ ತೀರುವ ವಿಷಯದ್ದಲ್ಲವೆಂತ ನಾವೇ ಹೇಳಬಲ್ಲೆವು. ಯಾಕೆಂದರೆ ಸೂರ್ಯಸಿದ್ಧಾಂತಾನುಸಾರವಾದ ಕರಣಗ್ರಂಥಗಳಿಂದ ಕನ್ಯಾ ಸಂಕ್ರಮಣವನ್ನೂ ಭಾದ್ರಪದ ಬಹುಳ ಅಮಾವಾಸ್ಯೆಯನ್ನೂ ಗುಣಿಸಿದರೆ ಭಾದ್ರಪದವೇ ಸಂಕ್ರಾಂತಿ ರಹಿತವಾದ (ಅಧಿಕ) ಮಾಸವಾಗುತ್ತೆ. ಆರ್ಯಸಿದ್ಧಾಂತಾನುಸಾರವಾದ ಕರಣ ಗ್ರಂಥಗಳಿಂದ ಭಾದ್ರಪದ ಅಮಾವಾಸ್ಯೆ ಮತ್ತು ಕನ್ಯಾಸಂಕ್ರಮಣ ಇವೆರಡನ್ನು ಗುಣಿಸಿ ನೋಡಿದರೆ ಆಶ್ವೀಜವೇ ಅಧಿಕಮಾಸವಾಗುತ್ತೆ. ಇನ್ನು ಈಗಿನ ಕಾಲಕ್ಕೆ ಪ್ರತ್ಯಕ್ಷ ಪರೀಕ್ಷೆಗಳಿಂದ ದೃಕ್ತುಲ್ಯವಾದ ಕರಣಗ್ರಂಥಗಳಿಂದ ಗುಣಿಸಿದಾಗ ಆಶ್ವೀಜವೇ ಅಧಿಕಮಾಸವಾಗುವದಲ್ಲದೆ ಎಂತೂ ಭಾದ್ರಪದವಾಗುವದಿಲ್ಲ. ಇದೆಲ್ಲರೂ [illegible] ಒಪ್ಪತಕ್ಕ ವಿಷಯವೆ. ಆದರೆ ಅಂಥ ಕರಣಗ್ರಂಥದಿಂದಲೇ ಪಂಚಾಂಗವನ್ನು ಗುಣಿಸಬೇಕೆಂಬ ಪಕ್ಷಯೂ ಈ ವರೆಗೆ ನಿರ್ಣಯಿಸಲ್ಪಡದ ಕಾರಣ ಈ ವಿವಾದವು ತೀರುವ ಬಾಬಿನದಲ್ಲವೆಂತ ಮೊದಲೇ ಹೇಳಿರುವೆವು. ಅದನ್ನು ತೀರಿಸಲು ಹೊರಟವರೂ ನಾವಲ್ಲ. ಈ ಸಂವತ್ಸರದ ಅಧಿಕಮಾಸ ವಿಷಯದಲ್ಲಿ ಹಾಗೂ ಉದ್ಯಾವರ ಪಂಚಾಂಗ ವಿಷಯದಲ್ಲಿ ನಮ್ಮ ಬುದ್ಧಿಗೆ ತೋರಿದ ಒಂದೆರಡು ಮಾತುಗಳನ್ನು ಬರೆದು ನಮ್ಮ ವಾಚಕರ ಮುಂದಿಡುವದು ಅಗತ್ಯವೆಂತ ಕಂಡು ಬರುವ ಕಾರಣ ಆ ಎರಡು ಮಾತುಗಳನ್ನು ಈ ಪತ್ರಿಕೆಯ ಮೂಲಕ ಹೊರಪಡಿಸುವೆವು. ಇದು ಸಕ್ಯವಾದ ಮತ್ತು ಧರ್ಮಸಂಬಂಧದ ಮಾತಾದ ಕಾರಣ ನಮ್ಮ ಮೇಲೆ ಯಾರೂ ಕೋಪಿಸಲು ಕಾರಣವಿಲ್ಲ.

ಉದ್ಯಾವರ ಪಂಚಾಂಗ ಕರ್ತರು ನಿತ್ಯ ಪಂಚಾಂಗ ಗಣಿತಕ್ಕೆಂತಲೂ ಅತಿ ಸೂಕ್ಷ್ಮವಾದ ನೂತನ ದೃಕ್ಸಿದ್ಧಾಂತ ಪ್ರಕಾರ ಗಣಿತ ಮಾಡಿದ್ದಲ್ಲಿ ಭಾದ್ರಪದ ಅಮಾವಾಸ್ಯೆಯು ಘ [illegible] ಈ ದಿನ ಕನ್ಯಾಸಂಕ್ರಮಣ ಘ. [illegible] ಸಹಾ ಬರುವ ಕಾರಣ ಭಾದ್ರಪದ ಮಾಸವೆ ಸಂಕ್ರಾಂತಿ ರಹಿತವಾದ (ಅಧಿಕ) ಮಾಸವೆಂತ ಬರೆದಿರುವರು. ಇವರು ಹೇಳುವ ದೃಕ್ಸಿದ್ಧಾಂತವಾದರೂ ಈಗಿನ ಕಾಲಕ್ಕೆ ಸರಿಯೊ ಎಂತ ವಿಚಾರಿಸಿದರೆ ಈಗಿನ ಕಾಲಕ್ಕೆ ಸರಿ ಬರುವ ದೃಕ್ಸಿದ್ಧಾಂತಕ್ಕೂ ಇವರು ಹೇಳುವ ಅತಿಸೂಕ್ಷ್ಮವಾದ ದೃಕ್ಸಿದ್ಧಾಂತಕ್ಕೂ [illegible]. ಅದಿರಲಿ, ಇವರು ಈ ವರೆಗೆ ಆರ್ಯಸಿದ್ಧಾಂತ ಪ್ರಕಾರ ಪಂಚಾಂಗಗಳನ್ನು ಗುಣಿಸಿ ಬರೆಯುತ್ತಿದ್ದವರು, ಈ ವರ್ಷ [illegible] ಒಂದನ್ನು ಮಾತ್ರ ಅತಿಸೂಕ್ಷ್ಮವಾದ ನೂತನ ದೃಕ್ಸಿದ್ಧಾಂತವೆಂದು [illegible] ಒಂದು ಗಣಿತ ಗ್ರಂಥದಿಂದ ಗುಣಿಸಿ ಬರೆದಿರುತ್ತಾರೆ. ಇವರ ಪಂಚಾಂಗದಲ್ಲಿಯೇ ಬರೆದ ಕನ್ಯಾಸಂಕ್ರಮಣ ದಿವಸ ಹಾಗೂ ತತ್ಪೂರ್ವದಿನದ [illegible] ನಕ್ಷತ್ರ ಘಟಿಗಳನ್ನು ನೋಡಿದರೆ ಸಂಕ್ರಮಣವು ಸರಾಸರಿ [illegible] ಘಟಿಯಲ್ಲಿಯೇ ಬರುತ್ತದೆಂಬುದನ್ನು ಗಣಿತಜ್ಞರು ತಿಳಿಯುವರು. ಭಾದ್ರಪದ ಅಮಾವಾಸ್ಯೆಯು [illegible] ಘಟಿ ಎಂತ ಪಂಚಾಂಗದಲ್ಲಿ ಕಾಣುತ್ತೆ. ಇದನ್ನು ನೋಡಿದರೆ ಆಶ್ವೀಜವೇ ಸಂಕ್ರಾಂತಿ ರಹಿತವಾದ ಮಾಸವೆಂತ ಉದ್ಯಾವರ ಪಂಚಾಂಗದಲ್ಲಿ [illegible]. ಆದಕಾರಣವೇ ಇವರು ನಿತ್ಯ ಪಂಚಾಂಗ ಗಣಿತಕ್ಕೆಂತಲೂ ಅತಿಸೂಕ್ಷ್ಮವಾದ ನೂತನ ದೃಕ್ಸಿದ್ಧಾಂತ ಪ್ರಕಾರ ಗುಣಿಸಿದರೆ ಭಾದ್ರಪದವೇ ಅಧಿಕಮಾಸ ಬರುತ್ತದೆಂದು ಬರೆದಿರುವರು. [illegible] ಇವರ ನಿತ್ಯ ಪಂಚಾಂಗದ ತಿಥಿ, ನಕ್ಷತ್ರ, ಯೋಗ ಮುಂತಾದವುಗಳೂ ಇವರ ನೂತನ ದೃಕ್ಸಿದ್ಧಾಂತದ ತಿಥಿ, ನಕ್ಷತ್ರ ಮುಂತಾದವುಗಳೂ ಸುಮಾರು [illegible] ಘಟಿಗಳ ವ್ಯತ್ಯಾಸವಿರುವ [illegible] ಈ ವರ್ಷದ ಪಂಚಾಂಗವನ್ನೇ ಆ ಸೂಕ್ಷ್ಮ ಗಣಿತದಿಂದ [illegible] ತಿಥಿ, ಸಂಕ್ರಮಣಗಳೂ ವ್ರತೋಪವಾಸಾದಿ ದಿನಗಳೂ ವ್ಯತ್ಯಾಸವಾಗುತ್ತಿದ್ದವು. [illegible] ವಿಷ್ಣು ಸಂಕ್ರಮಣ [illegible] ಪಂಚಾಂಗದಲ್ಲಿ ಬರೆದಂತೆ ಮುಕ್ತ್ವಾರಂಭ [illegible] ಅಧಿಕವಾಗುತ್ತಿದ್ದವು ಎಂದು ನಂಬುವ [illegible]. ಆದರೆ ಇವರು ಹಾಗೆ ಮಾಡದೆ ಕೇವಲ ಅಧಿಕಮಾಸಕ್ಕೆ ಮಾತ್ರ ಆ ಸೂಕ್ಷ್ಮ ದೃಕ್ಸಿದ್ಧಾಂತವನ್ನು ತಕ್ಕೊಂಡದ್ದಕ್ಕಾಗಿ ಕೆಲವರು ಅನ್ಯಾಯವೆನ್ನುತ್ತಿದ್ದಾರೆ [illegible] ಅನ್ಯಾಯವೆನ್ನಲು ಕಾರಣವಿಲ್ಲ. ಯಾಕೆಂದರೆ ಇವರಿಗೆ ನಿತ್ಯಕ್ಕೊಂದು ಗಣಿತ ನೈಮಿತ್ತಿಕಕ್ಕೊಂದು ಗಣಿತ. ಸ್ಮೃತಿ ಪಂಚಾಂಗ ಗುಣಿಸಲಿಕ್ಕೆ ಇಂಥ [illegible] ನಿಯಮವಿಲ್ಲ. ಕಳೆದ ನಂದನಸಂವತ್ಸರದ ಪಂಚಾಂಗದಲ್ಲಿ ಆರ್ಯಸಿದ್ಧಾಂತಾನುಸಾರ ಗುಣಿಸಲ್ಪಟ್ಟ ಪಂಚಾಂಗವೆಂದು ಬರೆದಿತ್ತು. ವಿಜಯ ಸಂವತ್ಸರದ ಪಂಚಾಂಗದಲ್ಲಿ [illegible] ಅನೇಕ ಕರಣ ಗ್ರಂಥಗಳನ್ನು. ಆದರೆ ಈಗ ಅವರ ಸ್ಥಿತಿ ಯಾವುದು ಉತ್ತಮ ದೃಕ್ಸಿದ್ಧಾಂತ [illegible] ಆಲೋಚಿಸದೆ [illegible] ಪಂಚಾಂಗವನ್ನು ಸ್ವೀಕರಿಸಿ [illegible] ಸಂವತ್ಸರದ ಪಾಕ್ಷಿಕ ಪಂಚಾಂಗದಲ್ಲಿ ಶ್ರಾವಣ ಪೂರ್ಣಿಮೆಯ ಗ್ರಹಣವು [illegible] ದಿವಸ ಬರದೆ ಹೋಗಿದ್ದಿದೆ. [illegible] ದಿವಸ ನವಮಿ [illegible] ಪ್ರತಿದಿನ ಲೋಪವಾಗುತ್ತವೆ. ಅಧಿಕಮಾಸ ಸಹಾ ವ್ಯತ್ಯಾಸ ಬರೆದಿದ್ದರು. ಹೀಗೆ ಅವರಾಲೋಚನೆಯಲ್ಲಿ ಆಲೋಚಿಸದೆ ಇದ್ದರೆ ಇನ್ನು ಮುಂದೆ ಗಣಿತದಲ್ಲಿ ಅಮಾವಾಸ್ಯೆ ದಿವಸ ಗ್ರಹಣವೂ ಸಂಭವಿಸೀತು. ಇಂಥಾ ವ್ಯತ್ಯಾಸವನ್ನು ಕಂಡು ಈ ಪಂಚಾಂಗವನ್ನು ಸೂರ್ಯಸಿದ್ಧಾಂತಕ್ಕೂ ಆರ್ಯಭಟೀಯಕ್ಕೂ ಸರಿಯಾದ ಸಿದ್ಧಾಂತ ಗಣಿತರೀತ್ಯಾ ಗುಣಿಸಿರುತ್ತೇವೆ." ಈ ಪ್ರಕಾರ ಪ್ರಕಟಿಸಿರುವರು. ನಂತರ ಕೆಲವರ್ಷಗಳ ಮೇಲೆ "ವಿದ್ಯಾವಿಜ್ಞಾನಾಂಕ ಅಪ್ಪೀನಿದೇವಃ ನಿರ್ಣಯಃ" ಎಂಬ ವಚನವನ್ನು ಬರೆದು ಆ ವರ್ಷದ ಪಂಚಾಂಗವನ್ನು ಆರ್ಯಭಟ ಪ್ರಕಾರದ ಗುಣಿಸಿದ್ದರು. ಈಗ ಕೆಲವರ್ಷಗಳಿಂದೀಚೆ ಆರ್ಯಸಿದ್ಧಾಂತ ಪಂಚಾಂಗದ ತಿಥ್ಯಾದಿಗಳಿಗೂ ಇವರ ಪಂಚಾಂಗದ ತಿಥ್ಯಾದಿಗಳಿಗೂ ೨-೩ ಘಟಿಗೆ ವ್ಯತ್ಯಾಸ ಕಾಣುವ ಕಾರಣ ಯಾವುದೋ ಬೇರೊಂದು ಕರಣಗ್ರಂಥದಿಂದ ಪಂಚಾಂಗವನ್ನು ಗುಣಿಸ ತೊಡಗಿದ್ದಾರೆ. ಸೂರ್ಯಚಂದ್ರ ಗ್ರಹಣಗಳನ್ನು ಈಗಿನ ಕಾಲಕ್ಕೆ ಸರಿಯಾದ ಗಣಿತ ಪ್ರಕಾರವೇ ಗುಣಿಸ [illegible] ಗ್ರಹಣಗಳು ಯಾವಾಗಲೂ ಇವರ ಪಂಚಾಂಗದಲ್ಲಿ ಬರೆದಂತೆಯೆ [illegible] ವ್ಯತ್ಯಾಸವಾಗುವದಿಲ್ಲ. ಆದ್ದರಿಂದಲೇ ಉದ್ಯಾವರ ಪಂಚಾಂಗದ [illegible] ಭಾವನೆ ಜನರಿಗೆ ಉಂಟಾದದ್ದು. ಈ ಒತ್ತಾಯಿಗೆ ಸುವರ್ಣದ ಗಿಲೀಟು ಹಾಕಿದ್ದು ಯಾರಿಗಾದರೂ ತಿಳಿಯುತ್ತದೆಯೇ? ಇಲ್ಲ. ವಿಪ್ರಮಾರ್ಧ್ವಾದಿಗಳನ್ನು ಗ್ರಹಣಾದಿಗಳನ್ನೂ ಮತದ ಕಲಹಗಳನ್ನೂ ಹೀಗೆಯೆ ವ್ಯತ್ಯಾಸಪಡಿಸುತ್ತಾರೆ. ವ್ರತೋಪವಾಸಾದಿಗಳ ವಿಷಯವೂ ಹೀಗೆಯೆ. ಕಳೆದ ಪಕ್ಷೈದ ವರ್ಷಗಳ ಆರ್ಯಸಿದ್ಧಾಂತ ಪಂಚಾಂಗಗಳನ್ನೂ ಇವರ ಪಂಚಾಂಗಗಳನ್ನೂ ಈಗಿನ ಕಾಲಕ್ಕೆ ಸರಿಯಾದ ದೃಕ್ಸಿದ್ಧಾಂತ ಪಂಚಾಂಗಗಳನ್ನೂ ಹೋಲಿಸಿ ನೋಡಿದರೆ ಈ ವಿಷಯಗಳೆಲ್ಲಾ ತಿಳಿಯಬರುತ್ತವೆ. ಆರ್ಯಸಿದ್ಧಾಂತ ಪಂಚಾಂಗದ ಸಂಕ್ರಮಣಕ್ಕೂ ಇವರ ಪಂಚಾಂಗದ ಸಂಕ್ರಮಣಕ್ಕೂ ಒಂದು ಘಟಿಯಾದರೂ ಈ ವರೆಗೆ ವ್ಯತ್ಯಾಸವಾಗಿರಲಿಲ್ಲ. ಈ ವರ್ಷದಲ್ಲಿಯಾದರೂ ಕನ್ಯಾಸಂಕ್ರಮಣ ಹೊರತು ಬಾಕಿ ಇರುವ ಹನ್ನೊಂದು ಸಂಕ್ರಮಣಗಳೂ ಸಹ ಆರ್ಯಸಿದ್ಧಾಂತ ಪಂಚಾಂಗಕ್ಕೆ ಸರಿಯಾಗಿಯೆ ಇವರ ಪಂಚಾಂಗದಲ್ಲಿಯೂ ಕಾಣುತ್ತದೆ. ಇಂಥ ಗ್ರಂಥ ಪ್ರಕಾರ ಈ ಪಂಚಾಂಗವು ಗುಣಿಸಲ್ಪಟ್ಟದ್ದೆಂತ ಪಂಚಾಂಗದ ಮೇಲೆ ಯಾವಾಗಲೂ ಇವರು ಬರೆಯದ ಕಾರಣ ಪ್ರತಿವರ್ಷದಲ್ಲಿಯೂ ಇವರ ಪಂಚಾಂಗವು ಬಗೆ ಬಗೆಯ ಮಾರ್ಪಾಟುಗಳನ್ನು ಹೊಂದುತ್ತದೆ. ಇಂಥಾ ಕಾರಣವಿಲ್ಲದ ಬದಲಾವಣೆಗಳನ್ನು ಸಾಮಾನ್ಯರಿಂದ ತಿಳಿಯಲಾಗುವದಿಲ್ಲ. ನನಗಾದರೆ ನಲವತ್ತು ವರ್ಷಗಳಿಂದ ಈ ವರೆಗೆ ಇವರು ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ ಈ ವಿಷಯವು ಗಲಾಟೆಮಾಡಿದ್ದಿಲ್ಲ. ಈಗ ಸುಮಾರು ಹತ್ತು ವರ್ಷಗಳಿಂದೀಚೆ ಇವರ ಪಂಚಾಂಗದ ಗುಟ್ಟನ್ನು ತಿಳಿದಿದ್ದರೂ ಈ ವರೆಗೆ ಹೊರಪಡಿಸಲಿಲ್ಲ. ಅಯ್ಯಾ ಪಂಚಾಂಗ ಕರ್ತರೇ? ಧರ್ಮಶಾಸ್ತ್ರಜ್ಞರೇ? ಜ್ಯೋತಿಷ್ಯರೇ? ನೀವು ಈ ವರೆಗೆ ಬಾಯಲ್ಲಿ ಅವಲಕ್ಕಿ ಹಾಕಿಕೊಂಡಿದ್ದರೂ ಚಿಂತೆ ಇಲ್ಲ. ಗಣೇಶ ಚತುರ್ಥಿ, ಋಷಿ ಪಂಚಮಿ, ಅನಂತ ಚತುರ್ದಶಿ ಮೊದಲಾದ ವ್ರತಗಳೇ ಒಂದು ತಿಂಗಳಿಗೆ ಅಭ್ಯಂತರ ಬಂದ ಈ ಕಾಲದಲ್ಲಿಯಾದರೂ ಬಾಯಿ ತೆರೆಯದಿದ್ದರೆ ನಿಮ್ಮ ಧರ್ಮಗಳೆಲ್ಲಾ ಕಾಡಿಗೆ ಓಡುತ್ತಿರುವೆ. ನೋಡಿರಿ. ಈಗ ಕೆಲದಿನಗಳ ಹಿಂದೆ ಕೇಸರಿ ಪತ್ರದಲ್ಲಿ ಪುಣೆಯ ಅನೇಕ ಪ್ರಸಿದ್ಧ ಧೀಮಂತರು ಸೇರಿ ಕಳೆದ ಮೇಷ ಸಂಕ್ರಮಣವನ್ನು ಪ್ರತ್ಯಕ್ಷ ವೇಧದಿಂದ ಪರೀಕ್ಷಿಸಿದ್ದರೆಂತಲೂ, ಆ ಪ್ರತ್ಯಕ್ಷ ವೇಧಾಮರೀಶದರಾದ ಗಣಿತದಿಂದ ಕನ್ಯಾಸಂಕ್ರಮಣವನ್ನು ಗುಣಿಸಿದರೆ ಆಶ್ವೀಜವೇ ಅಧಿಕಮಾಸವಾಗುವದೆಂತಲೂ, ಗ್ರಹಲಾಘವ ಮೊದಲಾದ ಪ್ರತ್ಯಕ್ಷಯುಕ್ತ ಬಾರದ ಗಣಿತದಿಂದ ಗುಣಿಸಿದ ಪಂಚಾಂಗಗಳಲ್ಲಿ ಭಾದ್ರಪದ ಮಾಸವೆ ಅಧಿಕವೆಂದು ಬರೆದಿದ್ದರೂ ಅದು ತಪ್ಪೆಂತಲೂ ಪ್ರಕಟಿಸಿರುವರು. ಈಗ ನಮ್ಮ ವಾಚಕರು ಮುಖ್ಯವಾಗಿ ತಿಳಿಯಬೇಕಾದ ವಿಷಯ ಯಾವುದೆಂದರೆ, ನಮ್ಮ ಪ್ರಾಂತದಲ್ಲಿ ಈಗ ಕೆಲಕಾಲದಿಂದ [illegible] ಸಿದ್ಧಾಂತ ಪ್ರಕಾರವಾಗಿಯೂ ಅಥವಾ ಈಗಿನ ಕಾಲಕ್ಕೆ ದೃಕ್ತುಲ್ಯವಾದ ನೂತನ ದೃಕ್ಸಿದ್ಧಾಂತ ಪ್ರಕಾರವಾಗಿಯೂ ಈ ಪಿಂಗಲ ಸಂವತ್ಸರದ [illegible] ನಡೆದುಬರುವ ಜ್ಯೋತಿಷ ಸಿದ್ಧಾಂತಗಳ ಪ್ರಕಾರವಾಗುವದಲ್ಲದೆ ಎಷ್ಟು ಕ್ಕಾದರೂ ಭಾದ್ರಪದವು ಅಧಿಕಮಾಸವಾಗುವದಿಲ್ಲ. ಮತ್ತು ಉದ್ಯಾವರ ಪಂಚಾಂಗ ಕರ್ತರು ಅವರ ಪಂಚಾಂಗದಲ್ಲಿ "ಗ್ರಹಣ, ಅಧಿಕಮಾಸ, ವ್ರತಗಳು, ಮುಹೂರ್ತ ವಗೈರೆ ನಿಶ್ಚೈಸಲು ತಿಳಿಯದೆ ತಿಥಿಪಂಚಾಂಗ ಗುಣಿಸಲು ತಿಳಿದ ಮಾತ್ರವೆ ಪಂಚಾಂಗವನ್ನು ಮುದ್ರಿಸಿ ಜನಾಂಗಕ್ಕೆ ಉಪದ್ರವನ್ನೀಯುವದು ಬಹು ಕೂಟನೀಯಾಂಶವು." ಎಂತ ಬರೆದ ವಚನವು ಅಧಿಕವಾಗಿರುವದು.

ಪಿಂಗಲ ಸಂವತ್ಸರದ ಆಷಾಢ ಶು. ೩ ಶನಿವಾರ.	ಇಂತಿ ಧರ್ಮಚಿಂತಕ, ಕೆ. ರಘುನಾಥ ಶಾಸ್ತ್ರಿ.

ಶ್ರೀ ಜ್ಞಾನೋದಯ ಸಮಾಜದ ಸಭಾಮಂದಿರದ ಬಗ್ಯೆ ದಾನ ಕೊಟ್ಟವರು.

ರಾ॥ ಬ್ರಹ್ಮ ತಿಮ್ಮಂಣ್ಣ ಕರ್ಕೇರರು ರೂ ೬೬—೧೦—೪; ಮಂಗಳೂರು ಮೊಗೇರ ಪರಸ್ಪರ ಸಹಾಯ ಸಂಘದವರಿಂದ ರೂ. ೬೭—೮—೯; ರಾ॥ ಹೊಗೆಬಜಾರ ಶುಕ್ರ ತಿಂಗಳಾಯರು ರೂ. ೧೫—೦—೦; ರಾ॥ ಬೊಕ್ಕಪಟ್ಣ ಅಮ್ಮು ಸುವರ್ಣರು ರೂ. ೫—೦—೦; ರಾ॥ ಬೊಕ್ಕಪಟ್ಣ ತಿಮ್ಮಪ್ಪ ಪುತ್ರನ್ನರು ರೂ. ೩—೦—೦; ರಾ॥ ಬೊಕ್ಕಪಟ್ಣ ಬೈಕರ್ ಗುರುವಪ್ಪನವರು ರೂ ೩—೦—೦; ರಾ॥ ಬೋಳೂರು ಶಂಕರ ಕರ್ಕೇರರು ರೂ. ೩—೦—೦; ರಾ॥ ಬಿ ಮೋಹನಪ್ಪ ತಿಂಗಲಾಯರು ರೂ. ೧೮೩—೫—೮; ರಾ॥ ಯು ಗೋಪಾಲರಾಯರು ರೂ ೧—೦—೦; ಒಟ್ಟು ಮುಸಿಲ್ಯಾನ ಬಂಧುವಿನ ಗುಪ್ತದಾನ ರೂ ೧—೦—೦. ಈ ಮೊದಲು ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಲ್ಪಟ್ಟದ್ದು ರೂ. ೨೭೨—೦—೧೧; ಜುಮುಲಾ ರೂ ೬೨೦—೮—೧೧.

ಮಂಗಳೂರು,	(ಸಹಿ)
ತಾ. 5—7—1917.	B. M. Thingalaya, ಕಾರ್ಯದರ್ಶಿ.

ಬಂಟರ ಯಾನೆ ನಾಡವರ ಸಂಘ.

ಸಂ ೧೯೧೭-೧೮ನೇ ವರ್ಷದ ವಿದ್ಯಾರ್ಥಿವೇತನಗಳು.

ರಾ॥ ಮರಕಡ ಅಪ್ಪಯಸೆಟ್ಟಿ ವಿದ್ಯಾರ್ಥಿವೇತನದ ಮೊಬಲಗು ರೂಪಾಯಿ ೭೫ನ್ನು ಸೈಂಟ್ ಅಲೋಸಿಯಸ್ ಕಾಲೇಜಿನಲ್ಲಿ III ಫೋರ್ಮಿನಲ್ಲಿ ಕಲಿಯುವ ಕೂಷ್ಣ ತೀನಪ್ಪ ಸೆಟ್ಟಿಗೆ, ಅಕ್ಕಾತರ ಉಂಜಕ್ಕೆ ಸೆಟ್ಟಿಯರ ವಿದ್ಯಾರ್ಥಿವೇತನದ ಮೊಬಲಗು ರೂಪಾಯಿ ೪೮ನ್ನು ಕೆನರಾ ಹೈಸ್ಕೂಲಿನಲ್ಲಿ V ಫೋರ್ಮಿನಲ್ಲಿ ಕಲಿಯುವ ಎಚ್. ರಾಮಣ್ಣನವರಿಗೆ.

ಮಂಗಳೂರು ಡಾಕ್ಟರ್ ಎ. ಎಲ್. ನಾಯರವರ ವಿದ್ಯಾರ್ಥಿವೇತನದ ಮೊಬಲಗು ರೂಪಾಯಿ ೩೦ನ್ನು ಉಡುಪಿ ಮಿಶನ್ ಹೈಸ್ಕೂಲಿನಲ್ಲಿ IV ಫೋರ್ಮಿನಲ್ಲಿ ಕಲಿಯುವ ಕೊಡಂಗೆರಪಾಡಿ ದೇವಯ್ಯ ಹೆಗ್ಗಡೆಗೆ. ರಾ॥ ಎಕ್ಕರೆ ಅಣ್ಣಪ್ಪಸೆಟ್ಟಿ ವಿದ್ಯಾರ್ಥಿವೇತನದ ಮೊಬಲಗು ರೂಪಾಯಿ ೨೫ನ್ನು ಮಿಶನ್ ಹೈಸ್ಕೂಲಿನಲ್ಲಿ V ಫೋರ್ಮಿನಲ್ಲಿ ಕಲಿಯುವ ಕೇ. ರಾಮಣ್ಣ ಸೆಟ್ಟಿಗೆಯೂ, ರಾ॥ ಅಕ್ಕಾತರ ವೆಂಕಪ್ಪ ಶ್ರಾಂಡರವರ ಹೆಸರಿನ ವಿದ್ಯಾರ್ಥಿವೇತನದ ಮೊಬಲಗು ರೂಪಾಯಿ ೨೪ನ್ನು II ಫೋರ್ಮಿನಲ್ಲಿ ಮಿಶನ್ ಹೈಸ್ಕೂಲಿನಲ್ಲಿ ಕಲಿಯುವ ಕೊಡಿಯಾಲಬೈಲ್ ಪಕೀರಸೆಟ್ಟಿ ಮಗ ನಾರಾಯಣ ಸೆಟ್ಟಿಗೆ ಕೊಡುವುದಾಗಿ ನಿರ್ಣಯಿಸಿದೆ.

ಕಳೆದ ಮೇ ತಿಂಗಳ ಆಖೈರಿಗೆ ಅಂತ್ಯವಾಗುವ ಒಂದು ವರ್ಷಕ್ಕೆ ಬಡ ವಿದ್ಯಾರ್ಥಿಗಳ ಸಹಾಯಕ ಫಂಡಿನಿಂದ ೧೦ ಜನ ಬಡವಿದ್ಯಾರ್ಥಿಗಳಿಗೆ ರೂಪಾಯಿ ೩೪೨—೧೧—೩ ಖರ್ಚಿಗೆ ಕೊಟ್ಟಿರುತ್ತದೆ. ಈ ವರ್ಷ ಬಡ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದ್ದರಿಂದ ಫಂಡಿಗೆ ವರ್ಷಂಪ್ರತಿ ಸಹಾಯ ಮಾಡಲು ವಾಗ್ದಾನ ಮಾಡಿರುವ ಗೃಹಸ್ಥರು ತಮ್ಮ ವಂತಿಗೆ ಐವಜನ್ನು ಬೇಗನೇ ಕಳುಹಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಮುಲ್ಕಿ ರಾಮಣ್ಣ ಸೆಟ್ಟಿ,
ಸುಪರಿಂಟೆಂಡೆಂಟ್,
ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನ.

ಜೀನಸು ಧಾರಣೆ.

(ರೂಮಂ).

ಮುಸ್ಸಿ ಅಕ್ಕಿ	6— 2—0	ರಿಂದ	6— 8—0
ಗುಡ್ಡು ಮುಗ್ಗಿ	5— 8—0	,,	6— 0—0
ಡಾಶಿ	5— 4—0	,,	5— 8—0
ಅಮ್ಮರ್ ಬೆಳ್ತಿಗೆ	6— 4—0	,,	6— 8—0
ಗುರು ಬೆಳ್ತಿಗೆ	5—10—0	,,	5—14—0
ರಂಗೂನು ಬೆಳ್ತಿಗೆ ಗೋಣಿ ೧ರ	9— 8—0	,,	9—12—0
ಗೋಧಿ ಗೋಣಿ ೧ರ	15— 8—0	,,	16— 0—0
ಹುರುಳಿ ಗೋಣಿ ೧ರ.	5—10—0	,,	6—14—0
ಕಡಲೆ ಗೋಣಿ ೧ರ ಬೊಂಬ್ಯ	9—12—0	,,	10— 0—0
ಕೊಗಂ ಗೋಣಿ ೧ರ			10— 8—0
ತೊಗರಿಬೇಳೆ ಗೋಣಿ೧ರ 11—0—0	12— 8—0	,,	15— 8—0
ಉದ್ದು ಗೋಣಿ ೧ರ	11— 8—0	,,	11—12—0
ಊರುಬೆಲ್ಲ ಖಂಡಿ ೧ರ		,,	38—12—0
ಉಪ್ಪು ಗೋಣಿ ೧ರ	5—10—0	,,	5—12—0
ಕೊಬ್ರಿ ಖಂಡಿ ೧ರ	70— 0—0	,,	75— 0—0
ಪೊಣ್ಣೆಹಿಂಡಿ ಖಂಡಿ ೧ರ.			18— 0—0
ಎಳ್ಳಿಂಡಿ ಖಂಡಿ ದರ ಬೊಂಬ್ಯ	23—12—0	,,	35— 0—0
ಕೊಬ್ರಿ ಎಣ್ಣೆ ಮಣ ೧ರ್	5—10—0	,,	5—12—0
ಎಳ್ಳೆಣ್ಣೆ ಮಣ ೧ರ(ಕುರಾಸನ)		,,	4—10—0
ಆಮುಣ ಎಣ್ಣೆ ಪೆಟ್ಟಿಗೆ ೧ರ	6—11—0	,,	7— 0—0
ಮೋರಿಸ್ ಸಕ್ಕರೆ ಮಣ ೧ರ		,,	5— 0—0
ಕಾಫಿ ಖಂಡಿ ೧ರ	150— 0—0	,,	165— 0—0
ಹೊಸಅಡಿಕೆ ಗೋಟು ಖಂಡಿ೧ರ	72— 0—0	,,	78— 0—0
ಗೇರುಬೀಜ ಮುಡಿ ೧ರ.	1—12—0	,,	1—14—0
ಕಲ್ಲಿ[illegible] ಖಂಡಿ ೧ರ	105— 0—0	,,	110— 0—0
ಮಂಚ್ಚಿ ಸಗಟು ಮಣ ೧ರ	31— 0—0	,,	34— 8—0
ಮಂಚ್ಚಿ ಪಾಕೃಗಟು ಮಣ ೧ರ		,,	34— 0—0
[illegible] ಮಣ ೧ರ	23— 8—0	,,	24— 0—0
[illegible] ಮಣ ೧ರ		,,	5— 2—0
[illegible]		,,	235— 0—0

K. B. RELE & Cos.,—BOMBAY

Estd. 1888 ಕೆ. ಬಿ. ರೇಳೆ ಕಂಪೆನಿಕೃತ **ಸ್ಥಾಪನೆ 1888.**

ಗಜಕರ್ಣಾರಿ.

ಕದ್ದು, ಇಸಬು, ಇವುಗಳ [illegible] ಮಲಮು

ಎಷ್ಟೋ ಕಾಲದ, ಕರೆ ಮತ್ತು ಹಟ್ಟೀನಾದ ಗಜಕರ್ಣವು ಈ ಮಲಮಿನ ಒಂದೇ ಸಾರಿ ಹಚ್ಚುವದರಿಂದಲೇ ನಷ್ಟವಾಗುತ್ತದೆ. ೫೦–೬೦ ವರ್ಷಗಳ ಹಳೆ, ಸ್ವಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಒಂದಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ಒಂದೇ ಆಣೆ.

ವಿಶೇಷ ಸೂಚನೆ—ದೇಶಿ ಅನೇಕ ಮದ್ದುಗಳ ಸಲುವಾಗಿ ನಿಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾಸಾರ್ ಪರಿಲ್ಲೆಯು.

ಇದರಲ್ಲಿ ಪಾರದವಿಲ್ಲ!

ಈ ಸಾಸಾರ್ ಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ದಿಂದ ಮೈಮೇಲೆ ಉಬ್ಬುವ ಚಪ್ಪಿಗಳೂ, ಬಾಯು, ಗಂಟಲು, ಬಾಯಿಗೆ ಮತ್ತು ಅಂಗಗಳಿಗೆ ತೂತು ಬೀಳೋಣ, ವಿಷದಿಂದ ಮೂಗಿನ [illegible] ಗಂಟಲೊಳಗೆ ವ್ರಣ ಬೀಳೋಣ, ಮೈಯಂದು ನೋವೋಣ, ಕೈಕಾಲು [illegible]ಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕರೆ ಕೈಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಎಂದರೆ ಇದೇ ಸಾಸಾರ್ ಪರಿಲ್ಲೆಯು. ಕ್ರಯ ಬಾಟ್ಲಿ ಒಂದಕ್ಕೆ ರೂ. ೧–೪–೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ದೊಡ್ಡ ಕಮಿಷನ್.

ಕೆ. ಬಿ. ರೇಳೆ ಆಣ್ಡ ಕಂಪೆನಿ.

ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ, ತೂಕದ ಸೇರು 1ಕ್ಕೆ ರೂ. 12, 5, 3, 2–8–0, 1–0–0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಎಣ್ಣೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿದೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೊಂದಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟಿನಲ್ಲಿ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ ಕೆಲವು ಔಷಧಗಳು.

ಇಕ್ಲಿಪ್ಸ್ ಡ್ರಾಪ್ಸ್ ಸೇವನೆಯಿಂದ ಹಲವು ಬಗೆಯ ರೋಗಿಗಳು ಚೇತರಿಸಿಕೊಂಡಿದ್ದಾರೆಂತ ಸಿದ್ಧಪುರದ ವಳ ಪ್ರಸೀದರು ಬರದಿರುತ್ತಾರೆ.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗಕ್ಕೆ ಹತ್ತಿಕೊಳ್ಳದು.

ಕ್ರಯ 50 ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1–6–0. ವಿ. ಪಿ. ಬೇರೆ.

ಎಂಟಿಸ್ನೇಕ್ ಬೈಟ್:— ಈ ಔಷಧಿಯು ನಾಗರಹಾವು, ಕೊಳಕುಹಾವು, ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಸಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡದವರು ಒಂದೇ ತಾಸಿನಲ್ಲಿ, ಚೇಳು ಕಡದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1 ವಿ. ಪಿ. ಬೇರೆ.

ಟೂರಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಚಿಹ್ನೆಗಳು ಕಂಡರೆ ತಿಳಿದು ಯಾ ತಿಳಿಯದ ರೀತಿಯಿಂದ ಧಾತು ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೂರಕಬ್ ಸೇವಿಸಿರಿ.

ಕ್ರಯ ಸೀಸೆ 1ಕ್ಕೆ ರೂ. 1–8–0 ವಿ. ಪಿ. ಬೇರೆ

ಇಕ್ಲಿಪ್ಸ್ ಡ್ರಾಪ್ಸ್:— ಇದು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳನ್ನು ತಪ್ಪದೆ ಗುಣ ಮಾಡುತ್ತದೆ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0–6–0. ವಿ. ಪಿ. ಬೇರೆ

ಶ್ರೀ ಇಕ್ಲಿಪ್ಸ್ ಬಾಮ್, ಕಾಜಾ ಯುಕಲಿಪ್ಟಸ್ ತೈಲ. ವಾಳ ವ್ಯಾಧಿ, ಶೀತವಾಯು, ಅಂತರ್ವೃದ್ಧಿ ಮೊದಲಾದ ಹಲವು ರೋಗಗಳಿಗೆ ಬೇಕಾದ ವಿಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟ್,
ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್ ಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್ ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ —

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನಮ್ಮಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು 1 ಡಬ್ಬಿಯಿಂದ 4 ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ವಹಳ ರಾತ್ರಿಗೂ ವೈದ್ಯರ ಸಮಯವನ್ನು ಕಾದು ತೊರೆಯುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಟೀನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಶಾಸ್ತ್ರಿ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಐ. ಎಸ್. ಆಫ್ ದಿ ಸ್ಕೂಲ್ ಇನ್‌ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಬೆಂಗಳೂರು ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ನಮರಲ್ಲಿ ಅನೇಕರಿಗೆ ಶೀತ, ಅಜೀರ್ಣ, ಮಲಬದ್ಧತೆ, ಹೊಟ್ಟೆ ನೋವು, ಹೊಟ್ಟೆಯುಬ್ಬರ, ವಿಷಮಶೀತಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ನಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡತಕ್ಕದೆಂದು ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಸಂತೋಷಪಡುತ್ತೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಔಷಧಗಳನ್ನು ಮೂಲಿಕೆಗಳಿಂದಲೇ ವಿಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡೆಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನು ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯೂ (ಮುಲ್ಕಿ) ಎಂಬ ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನೂ ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಕೋರ್ಟಿನ ಮುಂದೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟು, ಸ್ವತ್ತುಗಳ ಪರಭಾರೆ ಆಕ್ಟು, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟು, ಸ್ಟ್ಯಾಂಪ, ಕೋರ್ಟುಫೀ, ರಿಜಿಸ್ಟ್ರೇಷನ್ ಆಕ್ಟು, ಹಿಂದೂ ಲಾ, ದತ್ತು ಆಕ್ಟು, ಬ್ರೀಚ್ ಆಫ್ ಕಂಟ್ರಾಕ್ಟ್, ಮಕ್ಕಳ ಮದುವೆ ಆಕ್ಟು, ರೆವಿನ್ಯೂ ಕೋಡ್, ಕ್ಷಾ. ಪಟೇಲರ ಕೋಡ್, ಗ್ರಾಮ ಮುನ್ಸೀಫ್ ಕೋರ್ಟು ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು ದಸ್ತಾವೇಜುಗಳ 40 ನಮೂನೆಗಳು ಇದರಲ್ಲಿವೆ. ಇದು ಪ್ರತಿಯೊಬ್ಬನ ಸಮೀಪದಲ್ಲಿರತಕ್ಕದ್ದು. ಅವಶ್ಯಕವಾದದ್ದು.

ಬೆಲೆ 1—8—0. ವಿ. ಪಿ. 1—12—0.

ಯು. ಯಸ್. ನಂಜಪ್ಪನವರು,
[illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಅಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನೆಯಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು-ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನು, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿಒಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿ ಮಾಡಿ ಅದನ್ನು ವೃದ್ಧಿಗೊಳಿಸುವುದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲ

ವಾರ್ಧಿಕ್ಯ ಕಷ್ಟಗಳನ್ನು ನಿವಾರಣೆ ಮಾಡುವದರಲ್ಲಿ ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡಿ ಬುದ್ಧಿಗೆ ತೀಕ್ಷ್ಣತ್ವವನ್ನುಂಟು ಮಾಡುವದ

ರಲ್ಲಿಯೂ, ಮಲಸಂಬಂಧವನ್ನು [illegible] ಕ್ರಯ ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯಸಲಹೆಯು ಮುಫತ್ತಾಗಿ ದೊರೆಯುವದು.

144 ಪುಟಗಳ ವೈದ್ಯವಿದ್ಯ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಜೀನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದಸೆಟ್ಟು ೧ಕ್ಕೆ ೩-೦-೦. ದೊಡ್ಡ ಸೆಟ್ಟು ಉತ್ತಮತರಹ ೧ಕ್ಕೆ ರೂ. ೪—೦—೦.

ಕಾಬುಲ ಇಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದುಯಂ ರೂಪ್ಯಾ ೧ಕ್ಕೆ ೮ ತೊಲೆ, ತೀಯಂ ರೂಪ್ಯಾ ಒಂದಕ್ಕೆ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೬ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಕರ್ಚು ಬೇರೆ.

ನಮ್ಮ ವಿಳಾಸ:—.

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಕಾಂಬಾ, ಕಾಶಿ.

SIROMANI NARAYANA CHARYA & CO,
Chowkhamby,
BENARES CITY.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೋಗುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಸ್ಥಳಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲ್ಯಾಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮೆ| ಲಲ್ಲುಭಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮ್ಯಾನೇಜಿಂಗ್ ಡಿರೆಕ್ಟರರು:—ಫ್ರಮ್ ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮೆ| ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ.ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಮಾಡಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ವೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವರಿಗೆ ನ್ಯಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮದುರ್ ಥಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಒಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಕಣ್ಮನಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:—

ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
[illegible]

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಂಮಣಿ 1, ಗಜ್ಜೆ ಅದ್ದಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,

3 ಇರುಳಪ್ಪನ ಬೀದಿ, ಮದರಾಸ್.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(1ನೇ ಭಾಗ ಮತ್ತು 2ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ಸೇರಿದ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆಗಳನ್ನು, ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ: ರೂ 0—12—0. ವಿ. ಪಿ. ಚಾರ್ಜ 2 ಆಣೆ.
ಎರಡು ಭಾಗಗಳು ಸೇರಿ ಕ್ರಯ ರೂ. 1—4—0. „ 2 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,

ಜಿಮ್ನಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಾಚ್ಚೈಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,
Senior Gymnastic Instructor,
Pachiyappa's College, MADRAS.

N. B.—ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರೆಯಬೇಕು. ಮತ್ತು ಕಾಗದಗಳನ್ನು ಇಂಗ್ಲಿಷಿನಲ್ಲಿಯೇ ಬರೆಯಬೇಕೆಂದು ಕೋರುವೆವು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಮಾನ್.

(ರಿಜಿಸ್ಟರ್ಡ್)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0, ½ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಬಹಮಾನ್ ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0-12-0.

ವಿ. ಪಿ. ಖರ್ಚು 0—4—0 ಬೇರೆ.

ಪ್ರಾಮುಖ್ಯ ಏಜಂಟರು:—

ಎಚ್. ಆರ್. ಮೋದಿ ಎಂಡ್ ಕೊ,

10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princess Street, BOMBAY.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜೆಜ್ಜಿನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊರ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಸೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗವಸ್ತ್ರ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಿಗೆ ಬರುವ ಕನ್ನಡ, ತುಳು, ಮರಾಠಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ—ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್

ಮೈಸೂರು ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

1. ಚವನಪ್ರಾಶ ಲೇಹ್ಯ:—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ರೋಗಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ದೀರ್ಘದ ಆಯುಸ್ಸನ್ನೂ, ಇಂದ್ರಿಯಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹು ಪೂರ್ವವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತನಾದ ಚ್ಯವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿದ್ದಾರೆ. ಕ್ರಯ ಡಬ್ಬಿಗೆ ರೂ. 3—0—0.

2. ಬಾಣಂತಿ ಮಾತ್ರೆ:—ಪ್ರಸೂತವಾದ ಬಾಣಂತಿಯು 30 ದಿನಗಳ ವರೆಗೆ ಉಪಯೋಗಿಸುವದರಿಂದ ಬೇರೆ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಆಸವಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೇಕೆಂದಲ್ಲಿ ಇರುವವರೂ, ಉದರರೋಗದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,

ಎಂ. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರಿಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇದು ಹೆಚ್ಚು ಕಾಲದಿಂದ ಉಪಯೋಗಿಸಿ ಶಿಫಾರಸು ಹೊಂದಿದ್ದಾಗಿದೆ. ದರವನ್ನು ಇದರಡಿ ಸೂಚಿಸಿರುವರು.

	ಪೆಟ್ಟಿ 1ಕ್ಕೆ	ಡಜನ್ 1ಕ್ಕೆ
1. ಕಸ್ತೂರಿ ಸಾಬೂನು 3 ಬಿಲ್ಲೆಗಳಿರುವ ಪೆಟ್ಟಿಗೆ	0—8—0	5— 0—0
2. ಮನೋಹರ „ „ „	0—5—0	3— 8—0
ಅತ್ತರ ಸಾಬೂನುಗಳು.		
3. ಖಸ್ ಸಾಬೂನು	0—4—0	2—12—0
4. ಗುಲಾಬ್ „	0—4—0	2—12—0
5. ಹೀನಾ „	0—4—0	2—12—0
6. ಕೇವಡಾ „	0—4—0	2—12—0
7. ಗುಲಾಬಿ „	0—4—0	2—12—0
8. (ಬಾತ್ ಸೋಪ್) ಸ್ನಾನದ ಬಗ್ಗೆ ಉಪಯೋಗಿಸುವದು.	0-1-6	1- 1-0
ಡೈಮಂಡ್ ಬಣ್ಣದ ಸಾಬೂನು.		
9. ಗುಲಾಬಿ, ಸಾಲ್ಮಂಡ್, ಕಾಕಿ ಮತ್ತು ಹಳದಿ	0—1—6	1— 1—0
10. [illegible]	0—2—0	1— 7—0

ಏಜಂಟರು:—ಡಿ [illegible], ಮಂಗಳೂರು, ದ. ಕ.

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ 2.

ದಮಿಯಾನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಎಲ್ಲಾ ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ತಲೆಸಿಡಿತ, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮಿದುಳು ಕೆಲಸ ಮಾಡುವವರಿಗೆ ಅತ್ಯವಶ್ಯ. ಪ್ರತಿ ಬಾಟ್ಲಿಯಲ್ಲಿ ೮೦ ಮಾತ್ರೆಗಳಿವೆ. ಬಾಟ್ಲಿಗೆ ರೂ-೧—೧೦—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೆಷ್ಟೆಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಳಿಯದ್ದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೨—೦.

ಆರ್. ಮಾರ್ಟಿನ್ಸರ ಗ್ಲಿಟೋಡಾಯಿನ್.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸದಾಗಿದ್ದರೂ ಸರಿ ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೧೪—೦.

ವಿಳಾಸ:—

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಜಳಕೂ ಮಾಯವಾಗುವವು.

ಇದಿಗೋ
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಕುಂಬಳೆ ನರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೨ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚ ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವುದು.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಕಸ್ತೂರಿ ಮಿಶ್ರವಾದ ಈ ಮಿಶ್ರಣದ ಬರೇ 48 ದಿವಸಗಳ ಸೇವನೆಯಿಂದ ಶ್ವಾಸಕಾಸ, ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗವೇ ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ಮೇಹ, ಸೀಮೂತ್ರ, ಮೂತ್ರಕೃಚ್ಛ್ರ, ಉರಿಮೂತ್ರ ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು ನಿಸ್ಸಂದೇಹವಾಗಿ ಗುಣವಹವು. [illegible]

ಸೀಸೆ 1ಕ್ಕೆ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

[illegible] ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:—[illegible]

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾನಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. **ಪ್ರಮೇಹರಿಪು ಬಿಂದು.** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲ ವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. **ಸರಳಬೇದಿ ಮಾತ್ರೆ.** ಆಯಾಸವನುಂಟು ಮಾಡದ

೯. **ವಾಸ್ತಾವ ಲೇಹ.** ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯೆಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. **ವಾತಮುರಾರಿ ಬಾಮ್.** ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. **ಸನ್ನೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ರವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ.

ದಂತ ವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮಾರವರು

ಸಧ್ಯದಲ್ಲಿಯೇ ಇಲ್ಲಿಂದ ಇತರ ಪ್ರಾಂತ್ಯಗಳಿಗೆ ಹೋಗುವರೆ ನಿಶ್ಚಯಿಸಿದ್ದಾರೆ. ಆದ್ದರಿಂದ ಕೃತಕ ಹಲ್ಲುಗಳನ್ನು ಇಡಲಿಚ್ಛಿಸುವವರು ವ ದಂತ ಚಿಕಿತ್ಸೆ ಮಾಡಬೇಕೆಂದಿರುವವರು ಈ ಸುಸಂದರ್ಭವನ್ನು ಬಿಡಬಾರದು.

ಚಾರ್ಜು ಅತೀ ಸುಲಭ.

ವಿಳಾಸ: — ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ತೋಪಿನ ಬಳಿ,
ಮಂಗಳೂರು.

ಅಮೃತಾರ್ಣವ ಅವಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತವೃದ್ಧಿವುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತು ಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕ್ಕೆ ಸೂಚಿಸುವದು. ಕ್ರಯ ಸುಲಭ! ಫಲವು ಅಧಿಕವು!!

೨೦ ತೊಲೆಗೆ ರೂ. ೩—೦—೦ ಮಾತ್ರವೇ

ವಿಳಾಸ: —

ಚಂದಾದಾರಿಕೆ:— ವರ್ಷ 1ಕ್ಕೆ ರೂ. 1—8—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೯ | ಮಂಗಳೂರು, ತಾರೀಕು ೨೦ನೇ ಜುಲಾಯಿ ಶುಕ್ರವಾರ ೧೯೧೭. | ಸಂಚಿಕೆ ೨೯.

Rs. 3,000. Cash in Prizes.

Two yearly Agricultural Competitions are instituted by the Delegation of the Chilean Nitrate Committee, on the best essays on Indian Agriculture and original ideas how to improve it.

First Competition.		Second Competition.	
1st Prize Rs	1000	1st Prize Rs.	600
2nd ,, ,,	500	2nd ,, ,,	300
3rd ,, ,,	250	3rd ,, ,,	130
		4th ,, ,,	60 each (2 Prizes)
		5th ,, ,,	10 each (10 Prizes).

RULES.

Open to all interested in Agriculture. Two of the 3 Judges to be elected by ballot. Names of Competitors will not be known by the Judges until all papers have been marked. Copies of Prize essays and names and addresses of winners will be furnished on request. Commencing from July 1st 1917 closes June 1st 1918. Further details supplied by

THE DELEGATE OF
The Chilean Nitrate Propaganda,
1 Royal Exchange Place,
CALCUTTA.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
ಕ್ರಮನಂಬ್ರ 351/1917

ಮಹಾದೇವ ಯಾನೆ ಪುಟ್ಟಣ್ಣಭಟ್ಟಾ—ವಾದಿ.

ವಿರುದ್ಧ

ಗೋಪಾಲ ಕೃಷ್ಣಕುಡ್ವ ಸಹಾ—ಪ್ರತಿವಾದಿರ.

ಇವರೊಳಗೆ

ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರರಿಗೆ, ವ ಭಜಕರಿಗೆ ಇದರ ಮೂಲಕ ತಿಳಿಯಪಡಿಸುವದೇನೆಂದರೆ:—

ಮಂಗಳೂರು ತಾಲೂಕು ಅತ್ತೂರ. ಕಸಬಾ ಗ್ರಾಮದ ಪಟ್ಟಾ ನಂಬ್ರ 1ನೇ ವ ಕೆಮ್ರಾಲ್ ಗ್ರಾಮದ ಪಟ್ಟಾ ನಂಬ್ರ 35ಕ್ಕೆ ಸಹಾ ಒಪ್ಪಿದ ಆಸ್ತಿಗಳ ಸ್ವಾಧೀನತೆ ಬಗ್ಯೆ ಮೇಲ್ಕಂಡ ವಾದಿಯು ತನ್ನ ಹಕ್ಕು ಆಧರಿಸಿ ಮುಲ್ಕಿ ಶ್ರೀ ವೆಂಕಟರಮಣ ದೇವರ ಭಂಡಾರದ ಮೇಲೆ 1, 2ನೇ ಪ್ರತಿವಾದಿರು ಮೊಕ್ತೇಸರರಾಗಿ ದಾವಾ ತರುವರೆ ಅನುಮತಿ ಕೊಡಬೇಕಾಗಿ ಅರ್ಜಿಕೊಟ್ಟಿರುವದರಿಂದ ಆ ಕುರಿತು ಆಕ್ಷೇಪ ಇದ್ದವರು ಇದೇ ಬರುವ ಅಗೋಸ್ತು ತಾರೀಕು 11ನೇ ಹಗಲು ಹತ್ತು ಘಂಟೆಗೆ ಈ ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

ತಾ. 14—7—1917.

E. Vasudevaiya
Pleader.

A Kannada Popular Science Monthly.
"ವಿಜ್ಞಾನ" ವೆಂಬ ಕನ್ನಡ ಮಾಸಪತ್ರಿಕೆ.

ಇದರಲ್ಲಿ ಜನರಿಗೆ ಉಪಯುಕ್ತವಾದ ಆಧುನಿಕ ವಿಜ್ಞಾನದ ವಿಷಯಗಳು, ಸಾಮಾನ್ಯ ಜನರಿಗೆ ತಿಳಿಯುವಂತೆ, ಸುಲಭವಾದ ಕನ್ನಡದಲ್ಲಿ ಸ್ವಾರಸ್ಯವಾಗಿ, ಅನೇಕ ಚಿತ್ರಗಳೊಡನೆ ವಿವರಿಸಲ್ಪಡುವುವು. ಸಂಚಿಕೆಗೆ ೩೨ ಪುಟಗಳು. ಈ ವರುಷದ ಚೈತ್ರಮಾಸ ಮೊದಲ್ಗೊಂಡು ಹನ್ನೆರಡು ಸಂಚಿಕೆಗಳಿಗೆ, ಚಂದಾ ಮೊಬಲಗು, ಮೂರು ರೂಪಾಯಿಗಳು.

ಅಪೇಕ್ಷಿಸಿದಲ್ಲಿ ಮಾದರಿ ಪುಟಗಳನ್ನು ಉಚಿತವಾಗಿ ಕಳುಹಿಸುವೆವು.

ಬಿ. ವೆಂಕಟನಾರಣಪ್ಪ ಎಂ. ಎ.,
ಮ್ಯಾನೇಜರ್, "ವಿಜ್ಞಾನ",
ಬಸವನಗುಡಿ, ಬೆಂಗಳೂರು ಸಿಟಿ.

ಒಳ್ಳೆ ಗೊಬ್ಬರ! ಅವ್ವಲ್ ಊಟು!!

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಒಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಯೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೊಮಿಯೊಪತಿ, ಟಿಷ್ಯು, ಸ್ಪೆಸಿಫಿಕ್, ಇಲೆಕ್ಟ್ರೊ ಹೊಮಿಯೊಪತಿ ವ ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೊಮಿಯೊಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
ಧರ್ಮಸ್ಥಳ.

ಕರ್ಣಿಕ ಎಗ್ಯೂಮಿಕ್ಶ್ಚರ
Karnik's Ague Mixture.

ಚಳಿಜ್ವರ, ಮಲೇರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಪೆನೊ-ವಿನ್:— ಕೋಲರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು:— ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ.

ಕರ್ಣಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು
ಇತರರಿಂದ ಏಕೆ ಪಡೆಯಬೇಕು?

ಬಾಟ್ಲಿ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು

ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ
ಗಜಕರ್ಣದ ಮುಲಾಮು.
ಡಬ್ಬಿ 1ಕ್ಕೆ ಆಣೆ. 6.

ಮಕ್ಕಳ ಎಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ತೇರಬೀದಿ, ಮಂಗಳೂರು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಲೋ. ಸ. ಟೆಕ್ಸ್ಟ್ 4 ಆಣೆ, ಡಿಟೋ ನೋಟ್ಸು ಪಿ. ವೆಂಕಟಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟ್ 2½ ಆಣೆ, Rama & Sita 4 as., (Do Notes 6 as., General Eng. Questions & Answers from 1901-1917 6 as., by Mr. Pichamuttu, B. A.,) Gen. English by Mr. Chennakesaviah Rs. 1-2-0, ಭೂಗೋಳ 1 5 ಆಣೆ, ಡಿಟೋ 11ನೇದು 5 ಆಣೆ, ಪ್ರಶ್ನೋತ್ತರ ಲೆಕ್ಕಬೋಧಿನಿ ರೂ. 1-8-0, ಬೀಜಗಣಿತ 8 ಆಣೆ, [illegible] 10½ ಆಣೆ, [illegible] 1ನೇ ರೀಡರ್ 5 ಆಣೆ, ಡಿಟೋ 2ನೇದು 7 ಆಣೆ. ಡಿಟೋ 3ನೇದು 8½ ಆಣೆ, ಡ್ರಿಲ್ ಪುಸ್ತಕ 2½ ಆಣೆ, ಮಕ್ಕಳ ತಿದ್ದುವಿಕೆ 13 ಆಣೆ, ಲೆಕ್ಕಬೋಧಿನಿ 8½ ಆಣೆ, ಲೇಖನ ಲಕ್ಷಣ 5 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

—ಈ ಪುಸ್ತಕದಲ್ಲಿ:—೧ [illegible], ೨ [illegible], ೩ [illegible] ರೆಗ್ಯುಲೇಶನ್, ೪ ಆಯುಧಗಳ ರೆಗ್ಯುಲೇಶನ್, ೫ [illegible] ರೆಗ್ಯುಲೇಶನ್, ೬ ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಶನ್, ೭ [illegible] ರೆಗ್ಯುಲೇಶನ್, ೮ [illegible] ರೆಗ್ಯುಲೇಶನ್, ೯ [illegible] ರೆಗ್ಯುಲೇಶನ್, ೧೦ [illegible] ಆಕ್ಟ್, ೧೧ [illegible] ಆಕ್ಟ್ [illegible] ಕ್ರಯ ರೂ. 2—3—0.

ಎಚ್. ಎಸ್. ರಾವ್ ಬ್ರದರ್ಸ್,
[illegible]

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು	ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು	,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು	,,	225,000—0—0
Paid up Capital	201,775—0—0	ಆಗತ ಮೂಲ ಧನವು	,,	201,775—0—0
Deposits	310,261—3—10	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		310,261—3—10
Reserve Fund	50,003—2—5	ರಕ್ಷಿತ ಧನವು		50,003—2—5

25% of the net profits are added annually to the Reserve Fund. Rs. 27,349—11—2 have been invested in Government Paper

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 27,349-11-2 ಸರಕಾರದ ರೂ. 30,800ರ ಧಪ್ರಾಮಿಸರಿ ಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5, 5½% and 6% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one week's notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges

Canara Bank Ltd.,
Mangalore, 1st July 1917.

P. Gopal Naik,
Secretary.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ್ಧ

ಪ್ಲೇಗ ನಿವಾರಕ. ... ಪ್ರತಿನಿತ್ಯವೂ ಹೇಳಿದ ಪ್ರಕಾರ ತಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಗಳಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ: — "ಪಂಡಿಟ್" ಮದರಾಸ್.

ಡೊಂಗರ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4 ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:— ದಿ ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಪಂಡಿತ ಎಂ. ಎಸ್. ಯವರ ಮದರಾಸ್ ಪುಡಿ ನಶ್ಯ.

ಈ ನಶ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ

ಪುಡಿಯನ್ನು ಉಪಯೋಗಿಸುವುದರಿಂದ ಪೀನಾಸಿ, ಅರೆತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣಪಡಿಸುವದು. ಈ ನಶ್ಯವು ಬೇರೆಯವರ ನಶ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮೆದುಳನ್ನು ಕೆಡಿಸುವದಿಲ್ಲ. ಈ ನಶ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5 ಆಣೆ.

ಒಂದೇಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್. ಸಿಟಿ. ಬಾಬು ಕಂಪನಿ,
ನಂಬ್ರ 7-2ನೇ ಸಾಬಾಯಿ ಬೀದಿ, ಪಿಂಟ್ ಬಿಲ್ಡಿಂಗ್ ಮದರಾಸ್.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ ಅಮೃತ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಜಾತಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನು ಸುಪುತ್ರನನ್ನು ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0.

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ... ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎನ್. ವಿ. ಶಂಕರ್, ಉಗ್ರಾಣಕರ್, ಮೆನೇಜರ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್ಸ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಶೀಸೆ 1ಕ್ಕೆ	0—8—0
ಆಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಶೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಲಿನ ,,	0—10—0
ಇಂದಿರಾ ಕೃ. ಮು.	0—6—0

(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).

ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರಕೃತಿ ,, ,,	0—12—0
ಅಂದಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಾವಿಧಿ (School Discipline)	0—12—0
ಪುಷ್ಪರಚನ (Flower Making)	0—14—0
ಕನ್ನಡ ಅಕ್ಷರ ಮಾಲಾ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ (18"×28")	0—1—0

ಯೂರೋಪದ ಮಹಾ ಯುದ್ಧ.

ನ್ಯೂಪೋರ್ಟ ಬಳಿಯಲ್ಲಿ ೩೬ ತಾಸುಗಳ ವರೆಗೆ ಜರ್ಮನ ಸೈನ್ಯವು ಭಯಂಕರ ರೀತಿಯಲ್ಲಿ ಫಿರಂಗಿ ಗುಂಡುಗಳ ಮಳೆಯನ್ನು ಸುರಿಸುತ್ತಿದ್ದು ಇಂಗ್ಲಿಷರ ಪಾಳ್ಯದ ಒಂದು ಭಾಗವನ್ನು ಕಿತ್ತುಕೊಂಡಿತು. ಆದರೆ ಪುನಃ ಇಂಗ್ಲಿಷ ಸೈನ್ಯವು ಅವರ ಮೇಲೆ ಬಿದ್ದು ಅವರನ್ನು ಹಿಮ್ಮೆಟ್ಟಿಸಿತು.

ಏಮ್ಸ ಬಳಿಯಲ್ಲಿ ಫ್ರೆಂಚರ ಮೇಲೆ ಹಠಾತ್ತಾಗಿ ಬಂದು ಬಿದ್ದರೂ ಜರ್ಮನರ ಪ್ರಯತ್ನವು ಸಫಲವಾಗಲಿಲ್ಲ.

ಫ್ರೆಂಚರ ಕೆಲವು ಯುದ್ಧವಿಮಾನಗಳು ಜರ್ಮನರ ಸಿಡಿಮದ್ದಿನ ಕಾರ್ಖಾನೆಗಳ ಕೇಂದ್ರಸ್ಥಾನವಾದ ಎಸ್ಸೆನ್ ಊರಿನ ಮೇಲೆ ಸಿಡಿಮದ್ದಿನ ಜಡಿಮಳೆಯನ್ನು ಸುರಿಸಿ ಹಿಂದೆರಡರ ಹೊರತು ಸುರಕ್ಷಿತವಾಗಿ ಬಂದುವು.

ರೀಗಾ, ಡ್ವಿನ್ಸ್ಕ, ಮತ್ತು ಸ್ಮೊರ್ಗನ್ ಎಂಬ ರುಷ್ಯದ ಭಾಗಗಳಲ್ಲಿ ಯುದ್ಧವು ಜೋರಿನಿಂದ ನಡೆಯುತ್ತಲಿದೆ.

ರುಷ್ಯರು ಹೆಲಿಚ್ ಎಂಬ ಊರನ್ನು ಜರ್ಮನರಿಂದ ಹಿಂದಕ್ಕೆ ಪಡೆಕೊಂಡರು. ಈ ಸಂದರ್ಭದಲ್ಲಿ ಜನರಲ್ ಕೋರ್ನಿಲೋಫರ ಸಾಹಸವೂ ದಳವಾಯಿತನವೂ ಚೆನ್ನಾಗಿ ಮೆರೆದುವು. ಈ ಯುದ್ಧರಂಗವು ೩೦ ಮೈಲು ದೂರದ ವರೆಗೆ ವಿಸ್ತರಿಸಿತ್ತು.

ಜನರಲ್ ಕೋರ್ನಿಲೋಫರು ಹೆಲಿಚನ್ನು ಹಿಡಿದನಂತರ ಜನರಲ್ ಕರ್ಜಿಚಕನ ಸೈನ್ಯವನ್ನು ಬೆನ್ನಟ್ಟಿಕೊಂಡು ಲುಕೊವಿಟ್ಸಾ ನದಿಯ ವರೆಗೆ ಹೋದನು. ಈ ಹೊಳೆಯನ್ನು ದಾಟುವುದಕ್ಕೆ ಅಡ್ಡಕಟ್ಟುವಷ್ಟು ಸಾಮರ್ಥ್ಯವು ಎದುರಾಳಿಗಳ ಸೈನ್ಯಕ್ಕೆ ಇರಲಾರದು ಎಂದು ತಿಳಿದುಬರುತ್ತದೆ.

ಇಲ್ಲಿ ರುಷ್ಯರಿಗೆ ಜಯಸಿಕ್ಕಿದ ಕಾರಣ ನೀಸ್ಟರ್ ಹೊಳೆಗೆ ಒತ್ತಾಗಿ ಲೆಂಬರ್ಗಗೆ ಹೋಗುವ ರೈಲ್ ರಸ್ತೆಯು ಜನರಲ್ ಬ್ರುಸಿಲೊಫನ (ರುಷ್ಯದ ಸೇನಾಧಿಪತಿ) ಕೈಸೇರಿದಂತಾಗುವುದು. ಅದರ ನಂತರ ಬ್ರಜಜಾನಿ ಊರನ್ನು ಸಹ ಹಿಡಿದರೆ ಲೆಂಬರ್ಗಗೆ ಹೋಗುವ ಇನ್ನೊಂದು ರೈಲ್ ರಸ್ತೆ ಸಹಾ ಮಿತ್ರಮಂಡಲಿಯವರ ಅಧಿಕಾರದೊಳಗೆ ಬರುವುದು.

ಮಿತ್ರಮಂಡಲಿಯ ನೌಕಾ ಇಲಾಖೆಯ ವಿಮಾನಗಳು ಕೊನ್‌ಸ್ಟಂಟಿನೋಪಲ್ ಬಳಿಯಲ್ಲಿ ಕಡಲಲ್ಲಿದ್ದ ಹಲವು ಯುದ್ಧ ಹಡಗುಗಳ ಮೇಲೆ ಸಿಡಿಮದ್ದನ್ನು ಚೆಲ್ಲಿದರು. ಗೋಬೆನ್ ಎಂಬ ತುರ್ಕಿ ಹಡಗಿನ ಮೇಲಿಂದ ಸುಡುಗಿನಂತಹ ಪಟ್ಟವೂ ಭಯಂಕರವಾದ ಜ್ವಾಲೆಯೂ ಮೇಲಕ್ಕೆ ಎದ್ದಿತು. ಕೊನ್‌ಸ್ಟಂಟಿನೋಪಲಿನ ಯುದ್ಧದ ಇಲಾಖೆಯ ಕಟ್ಟಡದ ಮೇಲೆ ಸಹ ಸಿಡಿಮದ್ದನ್ನು ಚೆಲ್ಲಿದರು

ಆಯ್ರಲೆಂಡ್ ಎಂಬ ಒಂದು ಇಂಗ್ಲಿಷ ನಾವೆಯು ಎರಡು ಜರ್ಮನ್ ವಿಮಾನಗಳನ್ನು ನೆಲಕ್ಕೆ ಉರುಳಿಸಿಬಿಟ್ಟಿತು.

ಕಳೆದ ಸಂಚಿಕೆಯಲ್ಲಿ ವಿವರಿಸಿದಂತೆ ಲಂಡನಿನ ಮೇಲೆ ಯುದ್ಧವಿಮಾನಗಳು ಮಾಡಿದ ಹಾವಳಿಯ ವಿಷಯವಾಗಿ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಚರ್ಚೆ ಎದ್ದಿತು. ಕಡೆಗೆ ಬಹಿರಂಗವಾಗಿ ಅದನ್ನು ಚರ್ಚಿಸುವುದು ಸರಿಯಲ್ಲವೆಂದು ನಿಶ್ಚಯಿಸಿ ಗುಪ್ತ ರೀತಿಯಿಂದ ಅದನ್ನು ಚರ್ಚಿಸಿದಾಗ ವಿಮಾನಗಳನ್ನು ಎದುರಿಸಲಿಕ್ಕೆ ಮಾಡಿದ ಏರ್ಪಾಡು ಸ್ವಲ್ಪವು ಸಮಾಧಾನಕರವಿಲ್ಲ ಎಂದು ಹಲವರು ವಾದಿಸಿದರು. ಮಿ|| ಲೋಯ್ಡ ಜೋರ್ಜರು ಈ ವಿಷಯವಾಗಿ ಸಭೆಯಲ್ಲಿ ಹೇಳಿದ ಮಾತಿನಿಂದ ಪ್ರತಿಪಕ್ಷಿಗಳು ಸಮಾಧಾನಪಟ್ಟಂತೆ ತೋರಲಿಲ್ಲ. ಈ ಏರ್ಪಾಡಿನ ಮೇಲ್ವಿಚಾರದಲ್ಲಿ ಸ್ವಲ್ಪ ಬಿಗಿ ಇಲ್ಲವೆಂತ ಹಲವರ ಅಭಿಪ್ರಾಯ.

ಜರ್ಮನಿಯ ಪಾರ್ಲಿಮೆಂಟ ಸಭೆಯಲ್ಲಿ ಯುದ್ಧ ಫಲಾಂಶದಲ್ಲಿ ಆಶಾಭಂಗರಾದ ಪಂಗಡದವರು ಮುಖ್ಯ ಮಂತ್ರಿಯಾದ ಮಿ|| ಬೆತ್‌ಮನ್ ಹೋಲ್‌ವೆಗ್ಗರ ಯುದ್ಧ ಏರ್ಪಾಡುಗಳನ್ನು ಚರ್ಚಿಸಿ ತುಂಬಾ ಆಕ್ಷೇಪಿಸಿದ್ದಾರೆ. ಬೆತ್‌ಮನರ ಬದಲಾಗಿ ಹಿಂಡನ್‌ಬರ್ಗ್ ಈ ಕೆಲಸಕ್ಕೆ ನೇಮಕವಾಗುವದಾಗಿ ವದಂತಿ ಇದೆ.

ಈ ಚಳವಳದೊಂದಿಗೆ ಜರ್ಮನಿಯ ರಾಜಕೀಯ ಸಂಸ್ಥೆಯನ್ನೇ ಮಾರ್ಪಡಿಸಿ ಚಕ್ರವರ್ತಿಯ ಮತ್ತು ಅವನ ಮುಖ್ಯ ಮಂತ್ರಿಯ ಸ್ವೇಚ್ಛಾನುವರ್ತನೆಯ ಕ್ರಮವನ್ನು ಮುರಿದು ಪ್ರಜಾಮತವನ್ನು ಒಳಕೊಳ್ಳುವ ಸಾಂಘಿಕ ಪ್ರಭುತ್ವವನ್ನು ಸ್ಥಾಪಿಸಬೇಕೆಂದು ಒಂದು ತಂಡವು ಪ್ರಯತ್ನಿಸುತ್ತಿದೆ. ಇದರಲ್ಲಿ ಎರ್ಜಬರ್ಗರ್ ಎಂಬವನು ಮುಂದಾಳಾಗಿರುವನು.

ಆಸ್ಟ್ರಿಯದ ಪಾರ್ಲಿಮೆಂಟ ಸಭೆಯಲ್ಲಿಯೂ ಜನಸಾಮಾನ್ಯದ ಆಹಾರಗಳಿಗೆ ಉಂಟಾದ ದುರ್ಗತಿಯನ್ನು ಕುರಿತು ಬಹಳ ಚರ್ಚೆ ನಡೆಯುತ್ತಲಿದೆ. ಬೆಳೆಯು ಸಾಕಷ್ಟು ಇಲ್ಲದ್ದರಿಂದಲೂ, ಬಟಾಟೆಯು ಮೈದಾಸ್ತಿ ಕಡಿಮೆಯಾದ್ದರಿಂದಲೂ, ಆಸ್ಟ್ರಿಯಕ್ಕೆ ಆಹಾರದ ಕಣಜದಂತಿರುವ ಗೆಲಿಶಿಯ ಪ್ರಾಂತ್ಯವು ಕೈಬಿಟ್ಟು ಬಂದಾಗಿರುವುದರಿಂದಲೂ ಜನರ ಎದೆಯಲ್ಲಿ ಉರಿಯುಂಟಾಗಿದೆ.

ಫಿಸ್ಡಾಲ್ಫನ ಸಿಕ್ಕ ಎಂಬಲ್ಲಿಂದ ಇಂಗ್ಲೆಂಡಿಗೆ ಹೋಗುತ್ತಿರುವ ೯೦೦೦ ಟನ್ನಿನ ಕಂಬರ್‌ಲೆಂಡ್ ಎಂಬ ಹಡಗಿನಲ್ಲಿ ಎರಡು ದೊಡ್ಡ ಸಿಡಿಮದ್ದಿನ ಸ್ಫೋಟನಗಳು ಆಗ ಹಡಗು ದಡಕ್ಕೆ ಬಂದು ಬಿತ್ತು.

ಕೊನಸ್ಟಂಟಾಯ್ನನ ಪೆನ್ಶನ್ನು ರುಷ್ಯದ ಈಗಿನ ಸರ್ಕಾರಕ್ಕೆ ಒಪ್ಪದಿದ್ದರೂ ಕೊನಸ್ಟಂಟಾಯ್ನನನ್ನು ಬಲಾತ್ಕಾರದಿಂದ ಪಟ್ಟದಿಂದ ಕೆಳಹಾಕಿದ ಕ್ರಮವು ರುಷ್ಯದ ಸರಕಾರಕ್ಕೆ ಇನ್ನಷ್ಟು ರುಚಿಸಲಿಲ್ಲವೆಂದು ತೋರುತ್ತದೆ. ಗ್ರೀಸ್ ರಾಜ್ಯದಲ್ಲಿ ಯಾವ ಬಗೆ ಆಡಳಿತೆಯಿರಬೇಕೆಂಬುದು ಗ್ರೀಸ್ ಜನಾಂಗಕ್ಕೆ ಸಂಬಂಧಪಟ್ಟ ವಿಷಯವಲ್ಲದೆ ಇತರರು ಕೈಹಾಕುವಂಥಾದ್ದು ಸರಿಯಲ್ಲವೆಂದು ರುಷ್ಯದವರು ನಿರ್ಧರಿಸಿ, ಕೊನಸ್ಟಂಟಾಯ್ನನ ಪಕ್ಷವನ್ನು ಮುರಿಯಲಿಕ್ಕೆ ಮಿತ್ರಮಂಡಳಿಯವರು ಕಳುಹಿಸಿದ ಸೈನ್ಯದೊಡನೆ ಸೇರಿನಡೆಯಲಿಕ್ಕೆ ತಮ್ಮ ಸೈನ್ಯವನ್ನು ಕಳುಹಿಸಲಿಲ್ಲ. ಈಗ ಬಾಲ್ಕನ್ ಪ್ರಾಂತ್ಯದಲ್ಲಿನ ಚರ್ಚಾಸ್ಪದವಾದ ವಿಷಯಗಳನ್ನು ಸರಿಗೊಳಿಸಲಿಕ್ಕೆ ಮಿತ್ರಮಂಡಲಿಯವರ ಒಂದು ಸಭೆಯನ್ನು ರುಷ್ಯಸರಕಾರದವರು ಕರೆದಿರುವರು.

ಗತವಾರದಲ್ಲಿ ಬ್ರಿಟಿಷರ ೧೬೦೦ ಟನ್ನಿಗೆ ಮಿಕ್ಕಿದ ೧೪ ಮತ್ತು ೧೬೦೦ ಟನ್ನಿಗೆ ಕಡಿಮೆಯಾದ ೩ ಹಡಗುಗಳು ಮಾತ್ರ ಟೋರ್ಪೆಡೊ ತಗಲಿ ಕಡಲಿನ ಪಾಲಾದುವು.

ಇಟೆಲಿಯವರ ೩ ಹಡಗುಗಳು, ೧೨ ಸಣ್ಣ ಹಾಯಿಹಡಗುಗಳು, ಮತ್ತು ಇನ್ನೊಂದು ಹಡಗು ಸಹಾ ಮುಳುಗಿಹೋದುವು.

ಗೆಲಿಶಿಯದಲ್ಲಿ ಜರ್ಮನರಿಗೆ ಎದುರಾಗಿರುವ ರುಷ್ಯದ ಪಾಳ್ಯವು ಸುಮಾರು ೧೦೦ ಮೈಲು ವಿಸ್ತಾರವಾಗಿದೆ. ಹೆಲಿಚನ್ನು ಹಿಡಿದ ಮೇಲೆ ರುಷ್ಯರು ಜರ್ಮನ್ ಸೈನ್ಯವನ್ನು ಹಿಂದಕ್ಕೆ ಅಟ್ಟಿ ನೀಸ್ಟರ್ ನದಿಯ ಎಡದಡಕ್ಕೆ ದಾಟಿ ಲೊಮ್ನಿಟ್ಸಾ ಎಂಬ ಪ್ರದೇಶವನ್ನು ಸೇರಿ, ಬ್ಲುಡ್ನಿಕಿ ಮತ್ತು ಬೆಲಿನ್ ಎಂಬ ಹಳ್ಳಿಗಳನ್ನು ಹಿಡಿದರು. ಸುಮಾರು ೧೧,೦೦೦ ಜರ್ಮನರು ಸೆರೆಯಾದರು. ೮೦ ದೊಡ್ಡ ಫಿರಂಗಿಗಳೂ ಇನ್ನೂ ಅನೇಕ ಸಾಮಾನು ರುಷ್ಯದ ಕೈಸೇರಿತು. ಈಗ ಕೆಲುಸಜ್ ಎಂಬ ಊರು ಜರ್ಮನರು ಚೆನ್ನಾಗಿ ಭದ್ರಪಡಿಸಿದ್ದರೂ ರುಷ್ಯರ ಕೈಗೆ ಸೇರಿತು.

ಅರಬ್ಬದಲ್ಲಿ ಹೆಜ್ಜಾದ ಅರಸನ ಅರಬ್ಬಿಯರ ಸೈನ್ಯವು ಮಿತ್ರಮಂಡಲಿಯವರ ಪರವಾಗಿ ತುರ್ಕಸ್ಥಾನದೊಡನೆ ಕಾದಾಡಿ ತಬೂಕ ಮತ್ತು ಅಕಾಬಾ ಎಂಬ ಊರುಗಳನ್ನು ಹಿಡಿದು, ೬೦೦ ಮಂದಿ ತುರ್ಕರನ್ನು ಕೊಂದು, ೬೦೦ ಮಂದಿಯನ್ನು ಸೆರೆಹಿಡಿದರು. [illegible] ಒಂದು ಚಿಕ್ಕ ಸೈನ್ಯವನ್ನು [illegible] ಹೋಗುವ ರೈಲುರಸ್ತೆಯನ್ನು ಅನೇಕ ಕಡೆಗಳಲ್ಲಿ ಹಾಳುಮಾಡಿತು.

[illegible]

ವಿದೇಶ ವೃತ್ತಾಂತ.

ಚೀನದಲ್ಲಿ ಚಾಂಗಸೀಅನ ಸೈನ್ಯವು ರಾಜಧಾನಿಯೊಳಗೆ ಅಡಗಿಕೊಂಡಿದೆ; ಪ್ರಜಾಪ್ರಭುತ್ವ ವಾದಿಗಳ ಕಡೆಯವರು ಈ ಪೆಕಿನ್ ರಾಜಧಾನಿಯನ್ನು ಮುತ್ತಿಕೊಂಡಿರುವರು. ಆದರೆ ರಾಜಧಾನಿಯಲ್ಲಿ ದಂಗೆ ಎದ್ದಾರು ಎಂಬ ಅನುಮಾನದಿಂದ ನಗರಪ್ರವೇಶ ಮಾಡಲಿಲ್ಲ.

ಹಿಂದುಸ್ಥಾನದಲ್ಲಿ ಕ್ರಾಂತಿಯನ್ನು ಉಂಟುಮಾಡಲಿಕ್ಕೆ ಜರ್ಮನರಿಂದ ಪ್ರೇರಿತವಾಗಿದ್ದ ೯೮ ಮಂದಿಯನ್ನು ಸೆನ್‌ಫ್ರಾನ್ಸಿಸ್ಕೊ ಎಂಬಲ್ಲಿ ಸೆರೆಹಿಡಿದಿರುವುದಾಗಿ ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದೆವು. ಈ ಜನಗಳು ವಿಲಾಯತಿಯಲ್ಲಿ ಯುದ್ಧಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ತಮ್ಮ ಸನ್ನಾಹವನ್ನು ಮಾಡುತ್ತಲಿದ್ದಂತೆಯೂ, ಯುದ್ಧಪ್ರಾರಂಭವಾದೊಡನೆ ತಮ್ಮ ಕಡೆಯಿಂದ ಕೆಲವರನ್ನು ಬರ್ಲಿನ್ (ಜರ್ಮನಿಯ ರಾಜಧಾನಿ) ಪಟ್ಟಣಕ್ಕೆ ಕಳುಹಿಸಿದ್ದರೆಂತಲೂ, ಯುನೈಟೆಡ್ ಸ್ಟೇಟಿನ ಡಿಸ್ಟ್ರಿಕ್ಟ ಎಟೊರ್ನಿಯವರು ಪ್ರಕಟಿಸಿದ್ದಾರೆ. ಚೀನ, ಜಾಪಾನ ರಾಜ್ಯಗಳ ದಾರಿಯಾಗಿ ಯುದ್ಧಸಾಮಗ್ರಿಗಳನ್ನು ಕಳ್ಳಹಾದಿಯಿಂದ ಹಿಂದುಸ್ಥಾನಕ್ಕೆ ಸಾಗಿಸುವುದಕ್ಕೂ ಹಿಂದುಸ್ಥಾನದಲ್ಲಿ ಯುದ್ಧದ ಅಥವಾ ದಂಗೆಯ ಕೋಲಾಹಲವನ್ನು ಹುಟ್ಟಿಸಿ ತನ್ಮೂಲಕ ಹಿಂದುಸ್ಥಾನದಲ್ಲಿರುವ ಸೈನ್ಯದಸಹಾಯವು ಬ್ರಿಟಿಷರಿಗೆ ನಿಶ್ಶಂಕೆ ಮಾಡುವುದಕ್ಕೂ ಸಾಹಸಪ್ರಯತ್ನಗಳು ನಡೆಯುತ್ತಲಿದ್ದುವು ಎಂದು ಗೊತ್ತಾಗುತ್ತಲಿದೆ

ಯುನೈಟೆಡ್ ಸ್ಟೇಟ್ಸಿನವರು ಈ ವರೆಗೆ ಜರ್ಮನಿಯೊಡನೆ ಯುದ್ಧಕ್ಕೆ ಹೊಂದಿರುವಲ್ಲದೆ ಆಸ್ಟ್ರಿಯ, ಟರ್ಕಿ, ಬಲ್ಗೇರಿಯ ಈ ರಾಜ್ಯಗಳೊಡನೆ ತಮಗಿರುವ ರಾಜಕೀಯ ಸಹವಾಸವನ್ನು ಮುರಿಯಲಿಲ್ಲವೆಂದು ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಆದ ಚರ್ಚೆಯಿಂದ ಗೊತ್ತಾಗುತ್ತದೆ.

ಹಿಂದುಸ್ಥಾನದ ಸೆಕ್ರೆಟರಿಗಳಾದ ಮಿ|| ಎ. ಚೆಂಬರಲೇನರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರು.

ಮೆಸೊಪೊಟೆಮಿಯದಲ್ಲಿ ಇಂಗ್ಲಿಷರ ಸೈನ್ಯವು ಕುತ್ತಿಯಿಂದ ಪೆಟ್ಟು ತಿನ್ನಲಿಕ್ಕೆ ಇಂಡಿಯಾ ಗವರ್ನಮೆಂಟಿನವರ ಮುಖ್ಯವಾಗಿ ಲೋರ್ಡ ಹಾರ್ಡಿಂಜರ ಅಜಾಗ್ರತೆಯು ಕಾರಣವಾಯಿತು, ಎಂಬದಾಗಿ ಮೆಸೊಪೊಟೆಮಿಯ ಕಮಿಶನ್ನಿನವರು ರಿಪೋರ್ಟ ಮಾಡಿದ ಸಂದರ್ಭದಲ್ಲಿ ಸರಿಯಾದ ಜುಡಿಶಿಯಲ್ ಕೋರ್ಟ ವಿಚಾರಣೆಯಾಗಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ವಿಧಿಸುವುದು ಅಗತ್ಯವೆಂದು ಪಾರ್ಲಿಮೆಂಟಿನಲ್ಲಿ ಚರ್ಚೆ ಬಂತು. ಈ ವಿಷಯದಲ್ಲಿ ಲೋರ್ಡ ಹಾರ್ಡಿಂಜರು ಕೊಟ್ಟ ಹೇಳಿಕೆಯಲ್ಲಿ ತನ್ನ ಜವಾಬ್ದಾರಿಯನ್ನು ತಾನು ಸರಿಯಾಗಿ ತಿಳಿದಿದ್ದರೂ ಮಿಲಿಟರಿಯ ಅಧಿಕಾರಿಗಳ ಏರ್ಪಾಡುಗಳಲ್ಲಿ ಮಿಲಿಟರಿಯ ಇಲಾಖೆಯ ಅನುಭವವಿಲ್ಲದ ಸಂಕೀರ್ಣನಾದ ತಾನು ಕೈಹಾಕುವುದು ಸರಿಯಲ್ಲವೆಂದು ಮಿಲಿಟರಿ ಅಧಿಕಾರಸ್ಥರ ಸೂಚನೆಗಳನ್ನೇ ಒಪ್ಪಿಕೊಂಡನೆಂದೂ, ಹಿಂದುಸ್ಥಾನದ ಸೈನ್ಯದಲ್ಲಿ ಬರೆ ೧೫,೦೦೦ ವಿನಹಾ ಇತರ ಎಲ್ಲಾ ಸೈನ್ಯವು ಯುದ್ಧದ ಹಲವು ರಣರಂಗಗಳಿಗೆ ತನ್ನಿಷ್ಟದ ಧೈರ್ಯದಿಂದಲೂ ತನಗೆ ಹಿಂದೀಜನರ ಮೇಲಿರುವ ವಿಶ್ವಾಸದಿಂದಲೂ ಕಳುಹಿಸಲ್ಪಟ್ಟಿತು, ಎಂತ ಲೋರ್ಡ ಹಾರ್ಡಿಂಜರು ಹೇಳಿದರು. ಇದಲ್ಲದೆ ತಾನು ವಿಲಾಯತಿಗೆ ಕಳುಹಿಸಿದ ಕೆಲವು ತಂತೀವರ್ತಮಾನಗಳು ಈ ವಿಚಾರಣೆಯ ಕಾಲದಲ್ಲಿ ದಾಖಲಾಗಲಿಲ್ಲವೆಂತಲೂ ಅವರು ಹೇಳಿದರು. ಇದರಿಂದ ಈ ವಿಷಯದಲ್ಲಿ ಮಿ|| ಚೆಂಬರಲೇನರಿಗೂ ವಿಚಾರಣೆಯಾಗಬೇಕಾದ್ದರಿಂದ ಅವರು ತಮ್ಮ ಕೆಲಸಕ್ಕೆ ರಾಜಿನಾಮೆಕೊಟ್ಟರೆಂದ ತಿಳಿಯುತ್ತದೆ.

ಚೀನದಲ್ಲಿ ಜರ್ಮನರ ಲಂಚದ ಹಾವಳಿಯ ಅನೇಕ ರುಜುವಾತುಗಳು ಕಂಡುಬರುತ್ತಿವೆ. ಜರ್ಮನಿಯೊಡನೆ ವ್ಯವಹಾರ ನಿಲ್ಲಿಸಬಾರದೆಂದು ಪ್ರಯತ್ನ ಪಡುವ ಪ್ರತಿಯೊಬ್ಬ ಚೀನದ ಪಾರ್ಲಿಮೆಂಟ ಮೆಂಬರನಿಗೆ ೩೦೦೦ ಡೊಲ್ಲರು ಕೊಡುವುದಾಗಿ ಜರ್ಮನರ ಕಡೆಯವರು ನಂಬಿಕೆ ತೋರಿಸಿದ್ದರು.

ಲೋರ್ಡ ಹಾರ್ಡಿಂಜರು ಮೂರುಸಲ ರಾಜಿನಾಮೆಕೊಟ್ಟರೂ ಅದನ್ನು ಅಂಗೀಕರಿಸಲಿಲ್ಲವೆಂಬದರಿಂದ ಅವರ ಮೇಲೆ ಬ್ರಿಟಿಷ್‌ಕೆಬಿನೆಟ್ ಕೌನ್ಸಿಲಿನವರಿಗೆ ತುಂಬಾ ವಿಶ್ವಾಸವಿದೆ ಎಂದು ಸ್ಪಷ್ಟವಾಗುತ್ತಿದೆ.

ಇಂಗ್ಲೆಂಡಿನಲ್ಲಿ ಹತ್ತಿಯ ಮೈದಾಸ್ತಿ ಬಹಳ ಕಡಿಮೆಯಾಗಿ ಕಂಡು ಬರುವುದರಿಂದ ವಾರಕ್ಕೆ ಎರಡು ದಿನ ಮಾತ್ರವೇ ಹತ್ತಿಕಾರ್ಖಾನೆಗಳಲ್ಲಿ ಕೆಲಸ ನಡೆಸಬೇಕೆಂದು ನಿಶ್ಚಯಿಸುವ ಸಂಭವವಿದೆ. ಇದರಿಂದ ಸುಮಾರು ಒಂದುಲಕ್ಷ ಕೂಲಿಯಾಳುಗಳಿಗೆ ಕೆಲಸ ತಪ್ಪಿಹೋಗಬಹುದು.

ಉತ್ತರ ಹಿಂದೂಸ್ಥಾನ.

ಜುಲೈ ೧೧ನೇ ತಾರೀಕಿಗೆ ಇಂಡಿಯಾ ಸರಕಾರದವರು ಕೊಟ್ಟ ಇಸ್ತಿಹಾರ ನಾಮೆ ಮೇರೆಗೆ ಇನ್ನು ಮುಂದೆ ಹಿಂದುಸ್ಥಾನಕ್ಕೆ ಬರುವ ಬೆಳ್ಳಿಯ ಸರಕಾರಿ ನಾಣ್ಯವಲ್ಲದೆ ಇತರ ಎಲ್ಲಾ ಬಗೆಯ ಬೆಳ್ಳಿಯನಾಣ್ಯ ಮತ್ತು ಬೆಳ್ಳಿಯಗಟ್ಟಿಗಳನ್ನು ಸರಕಾರದವರ ಆ ಖಾಸಗಿ ಮಾಲೀಕರಿಂದ ಕ್ರಯಕ್ಕೆ ಪಡೆಕೊಳ್ಳುವುದಾಗಿ ನಿರ್ಣಯಮಾಡಿರುವರು. ಯಾವ ದಿನಕ್ಕೆ ಸರಕಾರದವರು ಅದನ್ನು ಬೆಲೆಗೆ ಪಡೆಕೊಳ್ಳುತ್ತಾರೊ ಆ ದಿನ ಲಂಡನಿನಲ್ಲಿರುವ ಧಾರಣೆಗೆ ಸೇಕಡಾ ೫ರಂತೆ ಬೆಲೆ ಮಾಹಾಮಾಡಿ ಉಳಿದ ಹಣವನ್ನು ಮಾತ್ರ ಮಾಲೀಕನು ಪಡಕೊಳ್ಳಬೇಕಾಗುವುದು. ಅಮೇರಿಕದಿಂದ ಬೆಳ್ಳಿಯನ್ನು ನೆಟ್ಟಗೆ ಹಿಂದುಸ್ಥಾನಕ್ಕೆ ಸಾಗಿಸುವಾಗ ಬೀಳುವ ಬೆಲೆ, ಲಾಗವಾಡು ಇನ್ಶೂರೆನ್ಸ್, ಕೂಡಿದ ಮೊಬಲಗಿಗಿಂತ ಲಂಡನಿನ ಧಾರಣೆ ಸೇಕಡಾ ೫ರಷ್ಟು ಹೆಚ್ಚಾಗಿರುವುದರಿಂದ ಸರಕಾರದವರು ಈ ವಿಲೆವಾರಿ ಮಾಡಿದಂತಿದೆ. ಮಾಲಿಕರು ಈ ಬೆಳ್ಳಿಯನ್ನು ತಮ್ಮ ಸ್ವಂತ ಜವಾಬ್ದಾರಿಯಿಂದ ಲಂಡನಿಗೆ ಸಾಗಿಸಿಕೊಡಬೇಕಾಗಿ ನಿಯಮವಿದೆ

ಯುನೈಟೆಡ್‌ಪ್ರಾವಿನ್ಸುಗಳ (ಸಂಯುಕ್ತ ಸಂಸ್ಥಾನ) ಲೆಫ್ಟಿನೆಂಟ್ ಗವರ್ನರ ಬಹುಮಾನಪಟ್ಟ ಸರ್. ಜೇಮ್ಸ್ ಮೆಸ್ಟನರ ಅಧಿಕಾರ ಅವಧಿಯನ್ನು ೧೯೧೮ನೇ ಜನವರಿ ೧೫ನೇ ತಾರೀಕು ವರೆಗೆ ಮುಂದರಿಸಲಾಯಿತು.

ಹಿಂದುಸ್ಥಾನದ ವಾಯುವ್ಯಭಾಗದಲ್ಲಿ ಮಹಸೂದರೆಂಬ ಮಹಮ್ಮದೀಯ ತಕ್ಕೆ ಸೇರಿದ ಜನರು ಯಾತ ಆಡಳಿತೆಯೊಳಗೂ ಇಲ್ಲದೆ ಆಗಾಗ ಹಿಂದುಸ್ಥಾನದೊಳನುಗ್ಗಿ ಲೂಟಿಮಾಡುತ್ತಿದ್ದರು. ಅವರಿಗೆ ಸಾಕಷ್ಟು ಕೋವಿಗಳೂ ಮದ್ದೂ ಸಿಕ್ಕಿತು. ಅವರ ದಂಗೆಯನ್ನು ಕಟಿಗೆ ಅಡಗಿಸಲಿಕ್ಕೆ ಸರಕಾರದವರು ಒಂದು ಸಣ್ಣ ಸೈನ್ಯವನ್ನು ಕಳುಹಿಸಿದ್ದರು. ಇವರ ಪೆಟ್ಟನ್ನು ತಾಳಲಾರದೆ ಮಹಸೂದರು ತಮ್ಮಲ್ಲಿರುವ ಆಯುಧಗಳನ್ನು ಒಪ್ಪಿಸಿ ಶರಣುಬಂದರು.

ಹಿಂದುಸ್ಥಾನದಿಂದ ವಿಲಾಯತಿಗೆ ಹೋಗುವ ಟಪ್ಪಾಲು ಹಡಗವು ಇನ್ನು ಮುಂದೆ ಎಂದಿನಂತೆ ವಾರಕ್ಕೊಂದು ಸಲ ಹೊರಡುವುದೊ ಅಥವಾ ಎರಡು ವಾರಕ್ಕೊಂದು ಸಲ ಹೊರಡುವುದೊ ಎಂಬ ವಿಷಯವು ಆಲೋಚನೆಯಲ್ಲಿದೆ.

ದಕ್ಷಿಣ ಹಿಂದೂಸ್ಥಾನ.

[illegible]

ಬಂದಾಗ, [illegible] ರಿಪೋರ್ಟನ್ನು ತಯಾರಿಸುವುದಾಗಿಯೂ ಇದನ್ನು [illegible] ಸುತ್ತಲಿರುವರೆಂದೂ ತಿಳಿದುಬರುತ್ತದೆ.

ಕಡಪೆ, ನೆಲ್ಲೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಲೇರಿಯಕ್ಕೆ ಈಡುಮನೆಯಾದ ಭಾಗಗಳಲ್ಲಿ ಮಲೇರಿಯದಿಂದ ಪೀಡಿತರಾದವರ ಆರೋಗ್ಯಕ್ಕಾಗಿ ೩ ಸರ್ಕಾರಿ ಆಸ್ಪತ್ರೆಗಳನ್ನು ಏರ್ಪಡಿಸಿ ಅವುಗಳಿಗೆ ತಕ್ಕ ಅನುಭವವುಳ್ಳ ಅಸಿಸ್ಟಂಟ್ ಸರ್ಜನರನ್ನು ನೇಮಿಸಬೇಕಾಗಿ ಮದ್ರಾಸು ಸರಕಾರದವರು ಸರ್ಜನ್ ಜನರಲರಿಗೆ ಹುಕುಂ ಕೊಟ್ಟಿರುವರು.

ಮದ್ರಾಸಿನಲ್ಲಿ ಸ್ತ್ರೀಯರ ಬಗ್ಗೆ ಒಂದೆರಡು ವರ್ಷಗಳ ಹಿಂದೆ ಸ್ಥಾಪಿಸಿದ ಕೋಲೆಜಿಗೆ ಶ್ರೀಮನ್ಮಹಾರಾಣಿಯವರು ತನ್ನ ಹೆಸರನ್ನು ಕೊಡಲಿಕ್ಕೆ ಅಪ್ಪಣೆ ದಯಪಾಲಿಸಿದ್ದರಿಂದ ಆ ಕೋಲೆಜು ಇನ್ನು ಮುಂದೆ 'ಕ್ವೀನ್ ಮೇರಿಕೋಲೆಜು' ಎಂದು ಕರೆಯಲ್ಪಡುವುದು.

ಇದೇ ಗುರುವಾರ ದಿನ ಜಮೀನುದಾರರ ಮಕ್ಕಳಿಗೋಸ್ಕರ ಬೇರೆ ಒಂದು ಕೋಲೆಜನ್ನು ಸ್ಥಾಪಿಸುವ ವಿಷಯವನ್ನು ಚರ್ಚಿಸುವುದಕ್ಕಾಗಿ ಬಹುಮಾನಪಟ್ಟ ಮದ್ರಾಸ ಗವರ್ನರರವರು ಪ್ರಮುಖ ಜಮೀನುದಾರರ ಒಂದು ಸಭೆಯನ್ನು ಕರೆದಿರುವರು.

ದಕ್ಷಿಣ ಕನ್ನಡ.

ಫೋರ್ಟಸೇಂಟ್‌ಜೋರ್ಜ ಗೆಜೇಟಿನ ಉತಾರು:—

ಅಬಕಾರಿ ಇಲಾಖೆಯ ಇನ್ಸಪೆಕ್ಟರ್ ಮಿ|| ಪಿಟ್ಟರಿಗೆ ಉಡುಪಿಯಿಂದ ಕನ್ನಾನೂರು ಸರ್ಕಲಿಗೆ ವರ್ಗವಾಯಿತು.

ಕನ್ನಾನೂರು ಸರ್ಕಲ್ ಜವರ್‌ನಲ್ಲಿರುವ ಮ|| ರಾ|| ರಾ|| ಕೆ ಜಿ ವೆಂಕಟರಮಣ ಅಯ್ಯರರಿಗೆ ಕನ್ನಾನೂರಿನಿಂದ ಉಡುಪಿಗೆ ವರ್ಗವಾಯಿತು.

ಮ|| ರಾ|| ನರಸಿಂಹ ಮಹಾಲ್ಪಂತಾರಿಗಳಿಗೆ ಮಂಗಳೂರು ತಾಲೂಕು ಬೋರ್ಡಿಗೆ ಮೆಂಬರಾಗಿ ಆದ ಚುನಾವಣೆ ಮಂಜೂರಾಯಿತು.

ಪುತ್ತೂರು:— ಇಲ್ಲಿಯ ಸಂಘ ಮ|| ರಾ|| ಕೃಷ್ಣ ಕೃಷ್ಣಯ್ಯನವರ ಬಾಬತು ಮೆಲಂಕಟೆ, ಚಾಕ್ರಸರ್ಗಿ ಕಳವಾದ ಒಂದು ವಾಚು ಕಡೆಶಾಲ್ಲ್ಯ ಶೇಕ್ ಅಬ್ದುಲ ಮುಕ್ರಿ ಎಂಬವನು ಮುಕ್ತೆ ಬಗ್ಗೆ ವಾಚುವೇರಾ ವೆಂಕಟ್ರಾಯರಲ್ಲಿಗೆ ತಂದದ್ದನ್ನು ಹಿಡಿದು ಇಲ್ಲಿಯ ಪೋಲೀಸಿನವರು ಅವನನ್ನು ಪಡಿಸಿರುವರು, ಸದರಿ ಮುಕ್ರಿಯ ಕೂಡೆ ಇನ್ನು ೩ ವಾಚುಗಳು ಸಿಕ್ಕಿರುತ್ತವೆ.

ಇದೇ ತಿಂಗಳ ತಾ|| ೧೫ರಲ್ಲು ಇಲ್ಲಿಯ "ಪರಸ್ಪರಸಹಾಯ ಸಂಘದ" ವರುಷಾವಧಿ ಮಹಾ ಸಭೆಯು ಜರಗಿತು. ಈ ಸಭೆಗೆ ೧೦೦ ಮೆಂಬರರಿಗೆ ಮೇಲ್ಪಟ್ಟು ಕೂಡಿದ್ದರು. ಸಂಘದ ಆದಾಯ ವೆಚ್ಚಗಳ ವರದಿಯನ್ನು ಸಂಘದ ಪ್ರೆಸಿಡೆಂಟರಾದ ಮ|| ರಾ|| ಬೈಂದೂರ ಆನಂದರಾಯರು ಓದಿ ತಿಳಿಸಿದರು. ಈ ಮಹಾ ಸಭೆಗೆ ಮ|| ರಾ|| ವಕೀಲ ಬಿ. ದಾಸಪ್ಪ ಮತ್ತು ಮ|| ರಾ|| ವಕೀಲ ಬಿ. ಆನಂದರಾಯರಲ್ಲದೆ ಮೆಂಬರರಾದ ಯಾವ ವಕೀಲರಾದರೂ ಬಾರದೆಯಿರಲಿಕ್ಕೆ ಕಾರಣವೇನೊ ತಿಳಿಯದು. ಸಭೆಯಲ್ಲಿ ೭ ಜನ ಪಂಚಾಯತಿ ಮೆಂಬರರನ್ನು, ಓಟು ಮೂಲಕ ಚುನಾಯಿಸುವರೆ ಚೀಟುಗಳು ಹಂಚಲಾಯಿತು. ಓಟುಗಳಲ್ಲಿ ೫ ಜನ ಮುಂಚಿನ ಮೆಂಬರರಿಗೆ ಓಟುಗಳು ದೊರಕಿದಲ್ಲದೆ ೬೧ ಓಟುಗಳಿಂದ ಮ|| ರಾ|| ಕುಪ್ಪುಂಜೆ ತಿಮ್ಮಪ್ಪ ಶೆಟ್ಟಿ ಮತ್ತು ೪೬ ಓಟುಗಳಿಂದ ಮಿ|| ಎ. ಜೆ. ಪೈಸ ಇವರನ್ನು ಹೊಸ ಮೆಂಬರರಾಗಿ ಚುನಾಯಿಸಿದ್ದಾರೆ. ಸಭೆಯ ವರುಷಾವಧಿ ರಿಪೋರ್ಟನ್ನು ಛಾಪಿಸಿ ಮೆಂಬರರಿಗೆ ಕೊಡಬೇಕಾಗಿ ಇಲ್ಲಿಯ ಉಪದೇಶಿಯರಾದ ಮಿ|| ಜಾನ್ಸನ್ ಸಾಂಕ್ಷನರವರು ಚರ್ಚಿಸಿದ್ದಕ್ಕೆ ಇನ್ನೊಂದು ಮಹಾಸಭೆಯಲ್ಲಿ ಆಲೋಚಿಸುವ ಬಗ್ಗೆ ಬಾಕಿ ಇಟ್ಟಿರುವರು.

ಇಲ್ಲಿ ಅಲ್ಲಲ್ಲಿ ಟೌನಿನಲ್ಲಿಯೂ ಹಳ್ಳಿಹಳ್ಳಿಗಳಲ್ಲಿ ಜನರು ಜ್ವರದ ಬಾಧೆಯಿಂದ ಪೀಡಿತರಾಗಿರುವರು.

ಇದೇ ತಾ|| ೧೬ರ ಆರಭ್ಯ ಮಂಗಳೂರಿನಿಂದ ಇಲ್ಲಿಗೂ ಇಲ್ಲಿಂದ ಮಂಗಳೂರಿಗೂ ಹೋಗುವ ಮೈಲ್ ಟಪ್ಪಾಲು ಹಿಂದು ಟ್ರಾನ್ಸಿಟ್ ಕಂಪೆನಿಯ ಟ್ರಾನ್ಸಿಟು ಬಂಡಿಯ ಮೇಲೆ ಒಯ್ಯುವರೆ ಆರಂಭಿಸಿರುವರು.

ಮ|| ರಾ|| ಶ್ರೀನಿವಾಸರಾವ್‌ರನ್ನು ಚಾರಿಯಿಂದ ತಿರಿದ ಸ್ವೀಕರು ತಪ್ಪಸ್ ಕೋರ್ಟಿಗೆ ಕವಿಟ್ ಆದ ಕರೆಂಬಾಡಿ ವೆಂಕಟೇಶನ್ನಾಯರನ್ನು ಜಾಮೀನ ಮೇಲೆ ಬಿಡುಗಡೆಪಡಿಸಿರುವರು.

ಇಲ್ಲಿ ಇದೇ ತಿಂಗಳ ತಾ|| ೧೬ನೇ ಸೋಮವಾರ ದಿವಸ ಕೂಡಿದ ಸಭೆಗೂಡಿ ಈ ಕೆಳಗಿನ ನಿರ್ಣಯಗಳು ಮಾಡಲಾದವು:—

ಯುದ್ಧಕಾಲದಲ್ಲಿ ದೇಶದ ಭದ್ರತೆಯಗೋಸ್ಕರ ಜಾರಿಗೆ ತಂದಿದ್ದ ಡಿಫೆನ್ಸ ಆಫ್ ಇಂಡಿಯಾ ಆಕ್ಟ ಎಂಬ ಕಾನೂನನ್ನು ರಾಜ್ಯದ ಒಳಗಿನ ರಾಜಕೀಯ ಕಾರಣಗಳಿಗೆ ಉಪಯೋಗಿಸಿ, ನಮ್ಮ ದೇಶೋದ್ಧಾರಕ್ಕಾಗಿ ಸತ್ಪ್ರಯತ್ನಗಳನ್ನು ಮಾಡುತ್ತಿದ್ದ ಮಿಸೆಸ್ ಎನ್ನಿಬಿಸೆಂಟ್, ಜಿ. ಎಸ್. ಅರಂಡೆಲ್, ಮತ್ತು ಬಿ. ಪಿ. ವಾಡಿಯಾ ಈ ಮೂರು ಮಹಾತ್ಮರುಗಳ ಸ್ವಾತಂತ್ರ್ಯವನ್ನು ನಿರ್ಬಂಧಪಡಿಸಿದ ನಿರಂಕುಶ ಕೃತ್ಯಕ್ಕೆ ನಮ್ಮ ಖಂಡಿತವಾದ ಪ್ರತಿವಾದಗಳನ್ನು ಸರಕಾರಕ್ಕೆ ಮಾಡತಕ್ಕದ್ದೆಂದು ನಿರ್ಣಯಿಸಲಾಯಿತು.

ಪುತ್ತೂರಲ್ಲಿ ಒಂದು ಹೋಮ್‌ರೂಲ್ ಲೀಗ್ ಎಂಬ ಸಂಸ್ಥೆಯ ಶಾಖೆಯನ್ನು ಸ್ಥಾಪಿಸಬೇಕಾಗಿಯೂ ಆ ಉದ್ದೇಶಾರ್ಥವಾಗಿ ಕ್ರಿಯಾರೂಪವಾಗಿ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿಯೂ ನಿರ್ಣಯಿಸಲಾಯಿತು.

ಮಿಸೆಸ್ ಬಿಸೆಂಟ್ ನಿಧಿಗೆ ಹಣವನ್ನು ಸಂಗ್ರಹಿಸಿ ಅದನ್ನು ಆಗಾಗ್ಗೆ ಆ ನಿಧಿಯ ಅಧ್ಯಕ್ಷರಾದ ಕಾಶ್ಮೀರ ಸರ್. ಸುಬ್ರಮಣ್ಯಯ್ಯರವರಿಗೆ ಕಳುಹಿಸತಕ್ಕದ್ದೆಂದು ನಿರ್ಣಯಿಸಲಾಯಿತು.

ಅನಂತರ ಸಭಿಕರ ಪೈಕಿ ೧೫ ಜನರು ತಾವು ಹೋಮ್‌ರೂಲ್ ಲೀಗಿನ ಮೆಂಬರರಾಗುತ್ತೇವೆ ಎಂದು ತಮ್ಮ ಅಪೇಕ್ಷೆಯನ್ನು ತಿಳಿಸಿದರು. ಸಭಿಕರೆಲ್ಲರೂ ತಾವು ಹಿಂದುಸ್ಥಾನದಲ್ಲಿ ಮಾಡಿದ ವಸ್ತ್ರಾದಿಸಮಸ್ತ ವಸ್ತುಗಳನ್ನೇ ಇನ್ನು ಮುಂದೆ ಉಪಯೋಗಿಸುತ್ತೇವೆ ಎಂದು ಪ್ರತಿಜ್ಞಾಪೂರ್ವಕವಾಗಿ ಹೇಳಿದರು.

ವಿಟ್ಲ:— ಇದೇ ಕಳೆದ ತಾ|| ೧೩ನೇ ಮಧ್ಯಾಹ್ನ ಸುಮಾರು ೩ ಘಂಟೆಗೆ ಇಲ್ಲಿಯ ಮೇಲಿನ ಪೇಟೆಯಲ್ಲಿ ಒಂದು ಮನೆಗೆ ಬೆಂಕಿತಗಲಿ ಇನ್ನೊಂದು ಮನೆಯು ಬೆಂಕಿಯ ಪಾಲಾಯಿತು. ಗಾಳಿಯು ಸ್ವಲ್ಪ ಕಡಿಮೆಯಿದ್ದುದರಿಂದ ಬಾಕಿ ಹತ್ತರವಿದ್ದ ಹತ್ತುಹನ್ನೆರಡು ಮನೆಗಳು ಈ ಕಂಟಕದಿಂದ ಪಾರಾದವು.

ಸುಮಾರು ಒಂದು ತಿಂಗಳಿಂದೀಚೆಗೆ ಇಲ್ಲಿಂದ [illegible] ಯಾಗುತ್ತಿದ್ದ "ಹಿಂದು ಟ್ರಾನ್ಸಿಟ್ ಕಂಪೆನಿಯವರ" [illegible] ಹಿಂದೆಗಿಂತ ಬಹಳ ಅನಾನುಕೂಲತೆಯು ಉಂಟಾಗಿರುತ್ತದೆ. [illegible] ಸಾಧಾರಣ ಟಪ್ಪೆ ತಿಂಗಳ ಬಂದಿರುವುದರಿಂದ [illegible] ಮಾಡಿದರೆ ಉಪಕಾರವಾಗುವದು.

ಅನುಕ್ರಮಣಿಕೆ.

ಅಗ್ರಲೇಖ:— ಪಾನು:

೧ ಮಹಾ ಯುದ್ಧವು ೪

ಸ್ಫುಟವಿಚಾರಗಳು:—

೧ ಮಿ. ಚೆಂಬರ್ಲೇನರ ರಾಜಿನಾಮೆ ೪

೨ ಮಿ. ಮೊಂಟೇಗರವರ ನೇಮಕ . . . . . . ,,

೩ ವಿಲ್ಲೇಜ ಕೋರ್ಟುಗಳ ಬಿಲ್ಲು . . . . . . ,,

೪ ಮಿತ್ರರ ಪ್ರಯತ್ನಗಳು . . . . . . ೪—೫

೫ ಯುದ್ಧದ ಭವಿಷ್ಯತ್ತು . . . . . . ,,

೬ ಬಹುಮಾನಪಟ್ಟ ಕೃಷ್ಣರಾವ್‌ರವರ ಕಡ್ಡಾಯ ಶಿಕ್ಷಣದ ಮಸೂದೆ ,,

೭ ಮೈಸೂರಿನ ಶಿಕ್ಷಣ ವೃತ್ತಾಂತ . . . . . . ,,

೮ ಮದ್ರಾಸು ಹೈಕೋರ್ಟ ವಕೀಲರ ಸಂಗ್ರಹಗಳು . . . . ,,

ವರ್ತಮಾನ ಸಂಗ್ರಹಗಳು;—

೧ ಯೂರೋಪದ ಮಹಾಯುದ್ಧ ೫

೨ ವಿದೇಶ ವೃತ್ತಾಂತ . . . . . . ,,

೩ ಉತ್ತರ ಹಿಂದುಸ್ಥಾನ . . . . . . ,,

೪ ದಕ್ಷಿಣ ಹಿಂದುಸ್ಥಾನ . . . . . . ,,

೫ ದಕ್ಷಿಣ ಕನ್ನಡ . . . . . . ,,

೬ ಡಾಕ್ ಪತ್ರಗಳು: ಪುತ್ತೂರು, ವಿಟ್ಲ, ಬಂಟ್ವಾಳ, ಸುಳ್ಯ, ಮುಲ್ಕಿ, ಇ ೬

ಬೆಳ್ತಂಗಡಿ . . . . . . ,,

೭ ಪತ್ರವ್ಯವಹಾರ: ಬಾಲಕರ ಶಿಕ್ಷಣದ ವೆಚ್ಚ . . . . ,,

ಸ್ವದೇಶಾಭಿಮಾನಿ.

ಶಕ ೧೮೩೯ ಶ್ರಾವಣ ಶು. ೧ ಶುಕ್ರವಾರ.

ಮಹಾ ಯುದ್ಧವು.

ಇತ್ತಲಾಗೆ ಎರಡು ಮೂರು ವಾರಗಳಿಂದ ಯುದ್ಧ ಸ್ಥಿತಿಯು ಚೆನ್ನಾಗಿ ಮಾರ್ಪಟ್ಟಿರುವದು. ಪೂರ್ವರಣರಂಗದಲ್ಲಿ ರುಶ್ಯದ ಜನರಲ್ ಬ್ರುಸಿಲೊಫ್‌ನ ಕೈಕೆಳಗೆ ರುಶ್ಯಯನರು ಶತ್ರುಗಳ ಎದೆ ಬಿರಿಯುವಂತೆ ಪರಾಕ್ರಮವನ್ನು ತೋರಿಸಿಕೊಂಡು ಮುಂದೊತ್ತುತ್ತಿರುವರು. ರುಶ್ಯಯನರು ಸುಮಾರು ೫೦,೦೦೦ ಸಾವಿರ ಶತ್ರುಸೇನಿಕರನ್ನು ಸೆರೆಹಿಡಿದಿರುವರು. ಶತ್ರುಗಳ ಸೇನಾಮುಖವನ್ನು ಬಿರಿದು ಒಸ್ಟ್ರಿಯನರ ಸೇನಾಸೇನೆಯ ಮಧ್ಯಭಾಗಕ್ಕೂ ಬಲಭಾಗಕ್ಕೂ ಇರುವ ಸಂಬಂಧವನ್ನು ಕಡಿದುಬಿಟ್ಟಿದ್ದಾರೆ. ಶತ್ರುಗಳು ಆಕ್ರಮಿಸಿದ್ದ ೨೦ ಮೈಲುಗಳಷ್ಟು ವಿಸ್ತೀರ್ಣದ ಯುದ್ಧಭೂಮಿಯು ರುಶ್ಯಯನರು ಕೈವಶಮಾಡಿಕೊಂಡಿರುವರು. ಇದೇ ರೀತಿ ರುಶ್ಯಯನರ ನುಗ್ಗಾಟವು ಮುಂದುವರಿದು ಒಂದರೆ ಒಸ್ಟ್ರಿಯನರಿಗೆ ಲೆಂಬರ್ಗನ್ನು ಬಿಟ್ಟುಹೋಗದೆ ನಿರ್ವಾಹವಿರದು. ಲೆಂಬರ್ಗ್ ಪಟ್ಟಣವು ರುಶ್ಯಯನರ ಸ್ವಾಧೀನವಾದ ನಂತರ ಹಂಗೇರಿಯ ಮೇಲೆ ದಾಳಿ ಇಡುವದು ರುಶ್ಯಯನರಿಗೆ ಸುಲಭಸಾಧ್ಯವಾಗುವದು. ಆದರೆ ಜರ್ಮನರು ಉತ್ತರ ಪ್ರಾಂತ್ಯದಲ್ಲಿ ಸೇನೆಸಾಗಿಸಿಕೊಂಡು ಬಂದರೆ ರುಶ್ಯಯನರ ನುಗ್ಗಾಟಕ್ಕೆ ತಡೆಯುಂಟು ಮಾಡಬಹುದೆಂಬ ಸಂಶಯವು ರುಶ್ಯಯನರಲ್ಲಿದೆ. ಪಶ್ಚಿಮರಣರಂಗದಲ್ಲಿಯೂ ಪೂರ್ವರಣರಂಗದಲ್ಲಿಯೂ ಕಾಳಗಗಳು ಬಹಳ ಕಠಿಣವಾಗಿ ನಡಿಯುವದರಿಂದ ಈಗ ಜರ್ಮನರಿಗೆ ರುಶ್ಯದೇಶದ ಉತ್ತರದಿಂದ ನುಗ್ಗಿಬರುವಷ್ಟು ಸೇನಾಬಲವು ಇರದು. ಅದ್ದರಿಂದ ರುಶ್ಯನರಿಗೆ ಈ ಭಾಗದಲ್ಲಿ ಶಂಕೆಯಿರಲು ಕಾರಣವಿಲ್ಲ. ಇಟಲಿಯನರೂ ಪ್ರೆಂಚರೂ ಬ್ರಿಟಿಷರೂ ಈಗ ಏಕಕಾಲದಲ್ಲಿ ಯುದ್ಧ ಕೆಣಕಿಸಿಕೊಂಡು ಮುಂದೊತ್ತಿರುವದರಿಂದ ಶತ್ರುಗಳು ಬಹಳ ನಿರಾಶರಾಗಿರುವರು. ಇಷ್ಟೇ ಅಲ್ಲ. ಜರ್ಮನ್ ಮತ್ತು ಒಸ್ಟ್ರಿಯನ್ ಪ್ರಜೆಗಳ ಮನೋಸ್ಥಿತಿಯು ಪಲ್ಲಟವಾಗಿದೆ. ಜರ್ಮನ್ ಮತ್ತು ಒಸ್ಟ್ರಿಯನರ ರಾಜ್ಯಸ್ಥಾನಗಳೊಳಗೆ ಭೇದಗಳ ಪ್ರಸ್ತಾಪಗಳು ಕೇಳಿಸುತ್ತಿವೆ. ಅಮಾನುಷವೃತ್ತಿಯಾದ ಈ ಯುದ್ಧ ವ್ಯಾಪಾರದ ಪ್ರಾರಂಭದಲ್ಲಿ ತಮಗೆ ಪ್ರಾಪ್ತವಾದ ಜಯಲಾಭದಿಂದ ಹಿಗ್ಗಿಹೋದ ಜರ್ಮನ ಮತ್ತು ಒಸ್ಟ್ರಿಯನ್ ಚಕ್ರವರ್ತಿಗಳೊಳಗೆ ಭೇದಬುದ್ಧಿಗೆ ಅವಕಾಶ ದೊರಕುತ್ತಿದ್ದಿಲ್ಲ. ಈಗ ಸಂಧಿ ಸಂಧಿಯಲ್ಲಿ ಅಪಜಯಗಳು ಪ್ರಾಪ್ತವಾಗುವದರಿಂದ ಇವರೊಳಗಿನ ಸ್ನೇಹಪಾಶವು ಶಿಥಿಲಾಗುತ್ತ ಬಂದಿರುವದು. ಶತ್ರುಗಳು ತಮ್ಮ ಪ್ರಜಾವರ್ಗದವರಿಗೂ ಈ ತನಕ ಜಯಲಾಭವನ್ನೆ ಕಾಣಿಸುತ್ತಿದ್ದರು. ಸಬ್ ಮೆರಾನುಗಳ ಮೂಲಕ ಸಿಕ್ಕಿದ ಹಡಗಗಳನ್ನೆಲ್ಲಾ ನಾಶಗೊಳಿಸಿ ಪ್ರಪಂಚದ ವ್ಯಾಪಾರ ವ್ಯವಾಟಗಳನ್ನು ನಿಲ್ಲಿಸಿ ಬಿಡುವ ಮೂಲಕ ಈ ಯುದ್ಧವನ್ನು ಸಮಾಪ್ತಿಗೊಳಿಸುವೆವೆಂಬ ಆಶೆಯು ಜರ್ಮನರಲ್ಲಿ ಬಹಳವಾಗಿತ್ತು. ಸಬ್ ಮೆರಾನುಗಳ ಮೂಲಕ ಬಹಳ ಹಾವಳಿಯನ್ನುಂಟುಮಾಡಿದರೂ ಈಗ ಸಬ್ ಮೆರಾನುಗಳಿಂದ ನಾಶವಾಗುವ ಹಡಗುಗಳ ಸಂಖ್ಯೆಯು ಕಡಮೆಯಾಗುತ್ತ ಬಂದಿದೆ. ಯುದ್ಧವನ್ನು ಕೊನೆಗಾಣಿಸಲು ಆಗಲಿಲ್ಲ. ಇದರ ಬದಲಾಗಿ ಮಿತ್ರರ ಪಕ್ಷವು ಈ ಸಾಧನದಿಂದ ಇನ್ನಷ್ಟು ಬಲಗೊಂಡಿತು. ಅಮೇರಿಕದ ಸಂಯುಕ್ತ ಮಹಾಸಂಸ್ಥಾನದವರು ಮಿತ್ರರ ಪಕ್ಷವನ್ನು ಸೇರಿದರು. ಮತ್ತೊಂದು ವಿಧಾನದಲ್ಲಿಯೂ ಜರ್ಮನರಿಗೆ ಅಪಜಯವೇ ಪ್ರಾಪ್ತವಾಗಿದೆ. ರುಶ್ಯದೇಶದಲ್ಲಿ ಕ್ರಾಂತಿಯು ಉಂಟಾದಾಗ ಶತ್ರುಗಳಲ್ಲಿ ಉಲ್ಲಾಸವು ಉಂಟಾಗಿತ್ತು. ರುಶ್ಯಯನರು ತಮ್ಮೊಳಗೆ ಕಲಹಗಳನ್ನು ಬೆಳಸಿಕೊಂಡಿದ್ದಾರು. ಅಲ್ಲದೆ ಇಷ್ಟು ಬೇಗನೆ ಯುದ್ಧಸನ್ನದ್ಧರಾಗಿ ಕಾದಾಡಲು ಬರುವರೆಂತ ಶತ್ರುಗಳು ಸ್ವಪ್ನದಲ್ಲಿಯಾದರೂ ನಿರೀಕ್ಷಿಸಲಿಲ್ಲ. ಇದರೊಂದಿಗೆ ಕಾಲಸ್ಥಿತಿಯೂ ಬದಲಾಗಿದೆ. ಸ್ವಾತಂತ್ರ್ಯದ ಸುಖವು ಸರ್ವರಲ್ಲಿಯೂ ಒಂದೇ ರೀತಿ ಇರಬೇಕೆಂಬ ಆಕಾಂಕ್ಷೆಯು ಲೋಕದ ಎಲ್ಲಾ ಜನಾಂಗಗಳಲ್ಲಿ ಹುಟ್ಟಿದೆ. ಯಾರ ಆಪ್ಪಣೆ ಪ್ರಕಾರ ಯುದ್ಧವನ್ನು ನಡಿಸುತ್ತಿದ್ದೇವೆ, ಯಾರ ಬಗ್ಗೆ ಈ ಯುದ್ಧವು ನಡಿಯುವದು, ಇದರ ಉದ್ದೇಶವೇನು, ಇದರಿಂದ ಉಂಟಾಗುವಂಥ ಭಯಂಕರ ಪರಿಣಾಮಗಳನ್ನು ಇನ್ನೂ ಎಷ್ಟುಕಾಲ ಅನುಭವಿಸುತ್ತಿರಬೇಕು? ಎಂಬೀ ವಿಚಾರಗಳು ಶತ್ರುಗಳ ಪ್ರಜಾವರ್ಗಗಳಲ್ಲಿ ಮೂಡಿ ಹೆಚ್ಚಿನ ಅಸಾಮಾಧಾನವೂ ಅತೃಪ್ತಿಯೂ ಶತ್ರುರಾಷ್ಟ್ರಗಳಲ್ಲಿ ವ್ಯಾಪಿಸುತ್ತಿರುವದು. ಈ ರೀತಿ ಒಳಗೂ ಹೊರಗೂ ಶತ್ರುಗಳಿಗೆ ಒದ್ದಾಟವೇ ಗತಿ! ಸಾರಾಂಶ—ಕೈಸರರಿಗೆ ಯುದ್ಧರಂಗದಲ್ಲಿಯ ಕಾಳಗಗಳನ್ನು ಮಾತ್ರವಲ್ಲ, ಸ್ವಾತಂತ್ರ್ಯದ ಭಾವನೆಯಿಂದ ಪ್ರೇರಿತರಾದ ತನ್ನ ಪ್ರಜಾವರ್ಗಗಳನ್ನು ನಡಿಸುವ ಬಹುಭಾರವು ಬಂದು ಬಿದ್ದಿರುವದರಿಂದ ಇಂಥಾ ಸಂಧಿಕಾಲದಲ್ಲಿ ಶತ್ರುಗಳ ಸಂಧಾನಪ್ರಯತ್ನಗಳು ಹೊರಬಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇರದು.

ಸ್ಫುಟವಿಚಾರಗಳು.

೧. ಮೆಸೊಪೊಟೊಮಿಯದ ಕಮಿಶನಿನ ರಿಪೋರ್ಟನ್ನು ಕುರಿತು ನಾನಾಪ್ರಕಾರವಾದ ಟೀಕೆಗಳು ಆಂಗ್ಲ ಪತ್ರಿಕೆಗಳಲ್ಲಿಯೂ ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿಯೂ ಹೊರಬರುತ್ತಿವೆ. ಪತ್ರಕಾರರು ಗಲಾಟೆಯನ್ನೆಬ್ಬಿಸಿ ಈ ಕಮಿಶನನ್ನು ಏರ್ಪಡಿಸುವಂತೆ ಮಾಡಿದರು. ವಿನಹ ಕಮಿಶನಿನ ಅಗತ್ಯವೇ ಇರಲಿಲ್ಲವೆಂತ ಕೆಲವರು ವಾದಿಸುತ್ತಾರೆ. ಯುದ್ಧಸನ್ನಾಹಗಳು ಪೂರ್ಣವಾಗಿ ಇಲ್ಲದಕಾಲದಲ್ಲಿ ಏನಾದರೂ ಅವಘಡವು ನಡೆದು ಹೋದರೆ ಅದನ್ನೇ ಹಿಡಿದು ಸಂಬಂಧಪಟ್ಟ ಅಧಿಕಾರಸ್ಥರ ಮೇಲೆ ಅಸ್ತ್ರಗಳನ್ನು ಹೂಡುವದು ಸರಿಯಲ್ಲ. ಈ ಅವಘಡದ ಅನುಭವದಿಂದ ನಡೆದ ಮುಂದಿನ ಏರ್ಪಾಡಿನಿಂದ ಜಯವೇ ಪ್ರಾಪ್ತವಾದ್ದರಿಂದ ಈ ಅವಘಡದ ದೋಷವನ್ನು ಪ್ರಸ್ತಾಪಿಸಿಕೊಂಡು ಸಾಮ್ರಾಜ್ಯಸೇವೆಯಲ್ಲಿ ತಮ್ಮ ತನುಮನಧನಗಳನ್ನರ್ಪಿಸಿ ಮನ್ನಣೆಗೆ ಪಾತ್ರರಾದಂಥಾ ರಾಷ್ಟ್ರಭಕ್ತರನ್ನು ಹೀಯಾಳಿಸುವದು ತಕ್ಕದ್ದಲ್ಲವೆಂತ ಮತ್ತೊಂದು ವರ್ಗವು ವಾದಿಸುವದು. ಟರ್ಕ್ ಪ್ರಾಂತ್ಯದಲ್ಲಿ ಆದ ಸೇನಿಕರ ಪ್ರಾಣಹಾನಿಯಿಂದ ಇಷ್ಟೆಲ್ಲ ಗಲಾಟೆಯು ಆಯಿತು. ಮೆಸೊಪೊಟೊಮಿಯದ ಕಮಿಶನಿನ ಈ ಕೋಲಾಹಲದ ಕೆಲವು ದಿವಸಗಳ ಮುಂಚೆ ಹಿಂದುಸ್ಥಾನದಲ್ಲಿ ನಡೆದಿರುವ ಕೈಕೊಂಡ ದಂಡೋಪಾಯಗಳ ನಿವಾರಣೆಯನ್ನು ಸ್ಟೇಟ ಸೆಕ್ರೆಟರಿಗಳಾದ ಮಿ। ಚೆಂಬರ್ಲೇನರ ಕೂಡ ಇಲ್ಲಿಯ ಪ್ರಜಾವರ್ಗಗಳು ಕೇಳಿದ್ದರು. ಕಮಿಶನಿನ ರಿಪೋರ್ಟಿನ ಫಲವು ಹೇಗಾಗಿ ಹೋದರೂ ಹಿಂದುಸ್ಥಾನಕ್ಕೆ ಇದರಿಂದ ಅನಿರೀಕ್ಷಿತ ಫಲವು ಪ್ರಾಪ್ತವಾಗಿದೆ. ಸ್ಟೇಟ ಸೆಕ್ರೆಟರಿಗಳು ಹಿಂದೀ ಪ್ರಜೆಗಳ ಮಾತಿಗೆ ಕಿವಿಕೊಡದ್ದರಿಂದ ಸಂತಾಪದಿಂದ ಹಿಂದೀ ಪ್ರಜೆಗಳ ಅಂತಃಕರಣವು ಕುಗ್ಗಿಹೋಗಿತ್ತು. ಇಂಥಾ ಕಾಲದಲ್ಲಿ ಹಿಂದೀ ಪ್ರಜಾಪ್ರಿಯರಾದ ಹಾರ್ಡಿಂಗ್ ಪ್ರಭುಗಳು ಕಮಿಶನಿನವರ ರಿಪೋರ್ಟನ್ನು ಅಲ್ಲಗಳೆಯುವಾಗ ಭಾರತೀಯರಲ್ಲಿ ಇವರಿಗೆ ಅಕುಂಠಿತವಾಗಿರುವ ಗೌರವಾಭಿಮಾನಗಳನ್ನು ವ್ಯಕ್ತಗೊಳಿಸಿದ್ದರಿಂದ ಹಿಂದೀಗಳ ಮನೋವ್ಯಥೆಗೆ ಸ್ವಲ್ಪ ಉಪಶಮನವು ದೊರಕಿದಂತಾಯಿತು. ಇಷ್ಟೆ ಅಲ್ಲ. ಈ ಸಂದರ್ಭದಲ್ಲಿಯೇ ಮಿ। ಚೆಂಬರ್ಲೇನರು ಹಿಂದುಸ್ಥಾನದ ಸ್ಟೇಟ್ ಸೆಕ್ರೆಟರಿ ಹುದ್ದೆಗೆ ರಾಜಿನಾಮೆಯು ಕೊಡುವ ಪ್ರಸಂಗವು ಒದಗಿದ್ದರಿಂದ ಹಿಂದೀಗಳಲ್ಲಿ ಮತ್ತಷ್ಟು ತೃಪ್ತಿಯು ಉಂಟಾಗಲಿಕ್ಕೆ ಕಾರಣವಿದೆ. ಆಂಗ್ಲಪತ್ರಗಳು ಚೆಂಬರ್ಲೇನರ ಗುಣಾತಿಶಯಗಳನ್ನು ಬಹಳವಾಗಿ ಕೊಂಡಾಡಿಕೊಂಡು ರಾಜೀನಾಮೆಯನ್ನು ಕೊಡುವ ಅಗತ್ಯವು ಇದ್ದಿಲ್ಲವೆಂತ ಹೇಳುತ್ತಿವೆ. ನಮಗಾದರೊ ಚೆಂಬರ್ಲೇನರು ತಮ್ಮ ಈ ಗುಣಾತಿಶಯಗಳಿಂದ ಕೊಂಡಾಟಕ್ಕೆ ಅಷ್ಟವೇ ಕೆಡಹಲಿಲ್ಲ. ನಮ್ಮಗಳ ಅಭಿಪ್ರಾಯಗಳಿಗೆ ಇವರ ಮನ್ನಣೇ ಇದ್ದಿಲ್ಲ. ಹಿಂದೂಸ್ಥಾನದ ಮುಂದಿನ ಆಡಳಿತೆಯ ಸುಧಾರಣೆಯು ಪರ್ಯಾಲೋಚಿಸಲ್ಪಡುತ್ತಿರುವ ಈ ಕಾಲದಲ್ಲಿ ಈ ದೇಶದ ಮಂತ್ರಿಪ್ರಭುತ್ವವನ್ನು ಚೆಂಬರ್ಲೇನರು ಬಿಟ್ಟುಕೊಟ್ಟದ್ದು ಹಿಂದೂಸ್ಥಾನದ ಶುಭೋದಯ ಚಿಹ್ನೆಯಾಗಿದೆಂತ ಹೇಳಬಹುದು.

೨. ಚೆಂಬರ್ಲೇನರು ಇಂಡಿಯಾ ಆಫೀಸಿನಿಂದ ಹೋದರು. ಆದರೆ ಇವರು ಈ ಸ್ಥಾನವನ್ನು ಬಿಟ್ಟುಹೋಗುವ ಮೊದಲು ಹಿಂದೂಸ್ಥಾನದ ಆಡಳಿತೆಯ ಭಾವೀಸುಧಾರಣೆಯ ವಿಷಯ ಕೆಲವು ಮಾತುಗಳನ್ನು ಆಡಿಹೋಗಿದ್ದಾರೆ. ಮೆಸೊಪೊಟೊಮಿಯ ಯುದ್ಧವಿಚಾರಕ ಮಂಡಳಿಯವರ ರಿಪೋರ್ಟನ್ನು ವಾದಿಸುವಾಗ ಪಾರ್ಲಿಮೆಂಟ ಸಭಿಕರೆಲ್ಲರೂ ತಮ್ಮ ತಮ್ಮ ಮನೋಭಾವನೆಗಳನ್ನು ವ್ಯಕ್ತಗೊಳಿಸಿ ಮಾತಾಡಿರುವರು. ಮೊದಲೊಮ್ಮೆ ಹಿಂದುಸ್ಥಾನದ ಪರವಾಗಿ ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಅಂಡರ್ ಸೆಕ್ರೆಟರಿಗಳಾಗಿದ್ದ ಮಿ। ಮೊಂಟೇಗರವರು ಕೆಲವು ಮಾತುಗಳನ್ನು ಆಡಿಬಿಟ್ಟಿರುವರು. ಹಿಂದೂಸ್ಥಾನದ ಸರಕಾರವನ್ನು ಹಿಂದೀ ಪ್ರಜಾವರ್ಗಕ್ಕನೆ ಹೆಚ್ಚೆಚ್ಚಾಗಿ ಜವಾಬುದಾರಿಯಾಗಿ ಮಾಡುವದು ಅಗತ್ಯವೆಂತ ಮೊಂಟೇಗರವರು ಹೇಳಿರುತ್ತಾರೆ. ಆದರೆ ಈ ಮಾತುಗಳಲ್ಲಿ ಚೆಂಬರ್ಲೇನರಿಗೆ ಒಪ್ಪಿಗೆ ಇರಲಿಲ್ಲ. ಹಿಂದೂಸ್ಥಾನದ ಆಡಳಿತೆಯ ಸುಧಾರಣೆಗಳು ಇನ್ನು ಸದ್ಯದಲ್ಲಿಯೆ ಹೊರಬೀಳುವದರಿಂದ ಇಂಥಾ ಕಾಲದಲ್ಲಿ ಮೊಂಟೇಗರವರು ಬಾಯಿಬಿಟ್ಟು ಮಾತಾಡುವುದು ಸರಿಯಲ್ಲವೆಂತ ಎದುರಾಡಿದ್ದಾರೆ. ಚೆಂಬರ್ಲೇನರ ಈ ಮಾತುಗಳ ಅರ್ಥವೇನು! ಸುಧಾರಣೆಗಳು ಎಂಥವುಗಳಿರುವ ಈ ಮೊದಲೇ ಅಂದರೆ ಚೆಂಬರ್ಲೇನರು ತಮ್ಮ ಪದವಿಯನ್ನು ಬಿಟ್ಟುಕೊಡುವ ಕೂಡಲೆ ನಿಶ್ಚಿತವಾಗಿ ಹೋಗಿರುವವೋ? ಈ ಅನುಮಾನವು ಮಾತ್ರ ನಮ್ಮಲ್ಲಿರುವದು. ಈ ಸಂಚಿಕೆಯು ಈ ದಿನ ಹೊರಡಲಿಕ್ಕಿರುವಾಗಲೆ ಮಿ। ಮೊಂಟೇಗರವರು ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟಿರುವದೆಂಬ ರೊಯಿಟರನ ಸುದ್ದಿಯು ಬಂದಿರುವದು. ನಾವು ಮೇಲೆ ಪ್ರಸ್ತಾಪಿಸಿರುವ ಮೊಂಟೇಗರೇ ಇವರು. ಇವರು ಬ್ರಿಟಿಷ ರಾಜಕೀಯ ತಂಡಗಳಲ್ಲಿ ಉದಾರತತ್ವವಾದಿಗಳ ಪಕ್ಷದವರು. ಹಿಂದೂಸ್ಥಾನದ ಅಂಡರ್ ಸೆಕ್ರೆಟರಿಗಳಾಗಿದ್ದವರು. ಈ ದೇಶವನ್ನು ಸ್ವತಹ ಬಂದು ನೋಡಿ ಹೋಗಿರುವರು. ಹಿಂದೂಸ್ಥಾನದ ಮಂತ್ರಿಪ್ರಭುತ್ವವನ್ನು ಇವರಿಗೆ ವಹಿಸಿಕೊಟ್ಟಿರುತ್ತಾರೆ. ಇವರಲ್ಲಿ ಇನ್ನೊಂದು ವಿಶೇಷವಾದ ಯೋಗ್ಯತೆಯು ಇರುವದು. ಅದು ಯಾವದೆಂದರೆ, ಅಂಗ್ಲೊ ಇಂಡಿಯನರ ಪಕ್ಷದ ಮೆಚ್ಚಿಗೆಗೆ ಇವರು ಬಹಳವಾಗಿ ಪಾತ್ರರಾಗಿರರು!

೩. ೧೮೮೮ನೇ ಇಸವಿಯ ಗ್ರಾಮಕೋರ್ಟು ಆಕ್ಟಿನ ತಿದ್ದುಪಡಿಯನ್ನು ಸೂಚಿಸಿ "ವಿಲ್ಲೆಜ್ ಕೋರ್ಟುಗಳ ಬಿಲ್ಲು" ಎಂಬ ಕಾನೂನು ಮಸೂದೆಯನ್ನು ಸರಕಾರದವರು ಪ್ರಕಟಿಸಿರುತ್ತಾರೆ. ಈ ತಿದ್ದುಪಡಿಯ ಕಾರಣಗಳು ಕಾನೂನು ಮಸೂದೆಯಲ್ಲಿ ಪ್ರಕಟಿಸಲ್ಪಟ್ಟಿರುವವು. ಮದ್ರಾಸ ಸಂಸ್ಥಾನದಲ್ಲಿ ಗ್ರಾಮಕೋರ್ಟುಗಳು ಕಳೆದ ಒಂದು ಶತಮಾನದಿಂದ ಅಸ್ತಿತ್ವದಲ್ಲಿವೆ. ಗ್ರಾಮಕೋರ್ಟುಗಳಿಗೆ ಅವುಗಳ ಈಗಿನ ರೂಪವು ೧೮೮೮ನೇ ಇಸವಿಯ ಆಕ್ಟು ಪ್ರಕಾರ ಬಂದಿರುವದು. ಈಗಿನ ಕ್ರಮದಲ್ಲಿ ಗ್ರಾಮಮುನ್ಸಿಫರೇ ಸ್ವತಹ ತನಿಖಿ ನಡಿಸುವದು ಮತ್ತು ಬೆಂಚುಗಳನ್ನು ಏರ್ಪಡಿಸಿ ತನಿಖಿ ನಡಿಸುವದು ಎಂಬ ಎರಡು ವಿಧಾನಗಳಿವೆ. ಗ್ರಾಮಮುನ್ಸಿಫರೇ ವರುಷ ಬಂದಕ್ಕೆ ೧೫೦,೦೦೦ ದಾವೆಗಳನ್ನು ಇತ್ಯರ್ಥಿಸುವಾಗ ಬೆಂಚುಕೋರ್ಟುಗಳು ತೀರ್ಮಾನಿಸುವ ದಾವೆಗಳು ೭೦೦೦ ಆಗಿರುವವು. ಬೆಂಚುಕೋರ್ಟುಗಳಲ್ಲಿ ಜನರಿಗೆ ಅಷ್ಟೊಂದು ವಿಶ್ವಾಸವಿಲ್ಲವೆಂತ ಇದರಿಂದ ವ್ಯಕ್ತವಾಗುತ್ತದೆ. ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟುಗಳಲ್ಲಿ ತನಖಿಯಾಗುವ ದಾವೆಗಳಲ್ಲಿ ಸುಮಾರು ೭೦,೦೦೦ ದಾವೆಗಳು ಗ್ರಾಮಕೋರ್ಟುಗಳಲ್ಲಿ ದಾಖಲಾಗುವ ಸ್ವಭಾವದವುಗಳಾಗಿರುವವು. ಆದ್ದರಿಂದ ಬೆಂಚುಕೋರ್ಟುಗಳಲ್ಲಿ ಬೇಕಾಗಿರುವ ತಿದ್ದುಪಡಿಯನ್ನು ಮಾಡಿದರೆ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟುಗಳಲ್ಲಿ ದಾಖಲಾಗುವ ಹಲವು ದಾವೆಗಳು ಗ್ರಾಮಕೋರ್ಟುಗಳಲ್ಲಿಯೇ ದಾಖಲಾಗುವವು. ಪ್ರಕೃತ ಬೆಂಚುಗಳಿಗೆ ಗ್ರಾಮ ಮುನ್ಸೀಫರ ವಿನಹಾ ಪ್ರತಿವಾದಿ ಮತ್ತು ವಾದಿಯರು ತಂತಮ್ಮ ಕಡೆಯಿಂದ ಒಬ್ಬೊಬ್ಬ ಪಂಚಾಯತರನ್ನು ಆರಿಸಿ ಈ ಮೂವರು ದಾವೆಗಳ ತನಖಿಯನ್ನು ನಡಿಸುವರು. ಈ ಕ್ರಮವು ತೃಪ್ತಿಕರವಾಗಿ ಕಂಡುಬಾರದೆ ಇದ್ದದ್ದರಿಂದ ಬೆಂಚುಮೇಜಿಸ್ಟ್ರೇಟರಂತೆಯೇ ಕೆಲವು ನಿಯಮಗಳಿಗನುಸಾರವಾಗಿ ಪಂಚಾಯತರನ್ನು ಜಿಲ್ಲಾ ಕಲೆಕ್ಟರರು ಅಥವಾ ಊರಿನ ಜನರ ಅಭಿಪ್ರಾಯಕ್ಕನುಸಾರವಾಗಿ ನೇಮಿಸುವರು. ಬೆಂಚುಮೇಜಿಸ್ಟ್ರೇಟರಂತೆಯೇ ಇವರೆಲ್ಲರು ಹಾಜರಿದ್ದು ದಾವೆಗಳನ್ನು ತೀರ್ಮಾನಿಸಬಹುದು ಅಥವಾ ದಾವೆ ತನಖಿಗೆ ಮೂರು ಜನ ಪಂಚಾಯಿತರಿದ್ದರೂ ಸಾಕಾಗಿರುತ್ತದೆ. ಈ ಪಂಚಾಯತ ಕೋರ್ಟುಗಳಲ್ಲಿ ದಾವಾ ಮೌಲ್ಯದ ಮಿತಿಯು ರೂ. ೨೦ರಿಂದ ರೂ. ೫೦ಕ್ಕೆ ಹೆಚ್ಚಿಸೋಣಾಗುವದು. ಇದೇ ರೀತಿ ಕೆಲವು ಕ್ರಿಮಿನಲ್ ಮೊಕದ್ದಮೆಗಳ ತನಖಿಯ ಅಧಿಕಾರವು ಸಹ ಈ ಪಂಚಾಯತ ಕೋರ್ಟಿನವರಿಗೆ ಕೊಡೋಣಾಗುವದು. ಈ ಪಂಚಾಯತ ಕೋರ್ಟುಗಳಲ್ಲಿ ದಾಖಲಾಗಬಹುದಾದ ದಾವೆಗಳು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟುಗಳಲ್ಲಿ ದಾಖಲಾಗುವಂಥಾದ್ದು ಕಡಮೆಯಾಗುವಂತೆ ಮುನ್ಸಿಫಕೋರ್ಟುಗಳಲ್ಲಿ ದಾಖಲಾದ ಇಂಥಾ ದಾವೆಗಳಲ್ಲಿ ಡಿಕ್ರಿ ಹೊಂದುವ ವಾದಿಗೆ ಖರ್ಚು ಕೊಡಿಸೋಣಾಗಬಾರದೆಂಬುವಂಥಾ ಸೂಚನೆಗಳು ಈ ನವೀನ ಕಾನೂನು ಮಸೂದೆಯಲ್ಲಿರುವವು.

೪. ಯುದ್ಧವು ಪ್ರಾಪ್ತವಾಗುವ ಮೊದಲು ಬ್ರಿಟನ್ ಮತ್ತು ಜರ್ಮನ್ ಈ ದೇಶಗಳಲ್ಲಿಯ ವಸ್ತ್ರಕಾರಖಾನೆಗಳಲ್ಲಿ ತಯ್ಯಾರಾಗುತ್ತಿದ್ದ ವಸ್ತ್ರರಾಶಿಗಳಿಗೆ ಹಿಂದೂಸ್ಥಾನವೇ ದೊಡ್ಡ ಗಿರಾಕಿಯಾಗಿತ್ತು. ಪ್ರಕೃತ ಈ ವ್ಯಾಪಾರವನ್ನು ಅಮೇರಿಕ ಮತ್ತು ಜಪಾನ್ ದೇಶದವರು ತಮ್ಮ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನಗಳನ್ನು ನಡಿಸುತ್ತಿದ್ದಾರೆ. ಈ ಪ್ರಯತ್ನಗಳಲ್ಲಿ ಈ ಎರಡು ದೇಶದವರಿಗೆ ಅವರವರ ಸರಕಾರಗಳ ಬೆಂಬಲವು ಸಂಪೂರ್ಣವಾಗಿ ಇದೆ. ಜಪಾನದೇಶವು ಹತ್ತಿಯನ್ನು ಹಿಂದೂಸ್ಥಾನದಿಂದ ಈಗ ಕೊಂಡುಕೊಳ್ಳುತ್ತಿದೆ. ಇನ್ನು ಕೆಲವು ಸಮಯದಲ್ಲಿ ಈ ದೇಶದಿಂದ ಪಡಿಯುತ್ತಿರುವ ಹತ್ತಿಯನ್ನು ಜಪಾನಿನಲ್ಲಿಯೇ ಬೆಳಸುವ ಹಂಚಿಕೆಯನ್ನು ಮಾಡುತ್ತಿದ್ದಾರೆ. ಅಕ್ಕಿ ಬೆಳಸುವ ಗದ್ದೆಗಳಲ್ಲಿ ಹತ್ತಿಯನ್ನು ಬೆಳಸುವ ಏರ್ಪಾಡು ಆಗಿರುವದು. ಅಮೇರಿಕದವರು ಹಿಂದೂಸ್ಥಾನದಲ್ಲಿ ಬೇಕಾದ ವಸ್ತ್ರಗಳ ನಮೂನೆಗಳನ್ನು ಗೊತ್ತುಮಾಡಿಕೊಂಡಿರುವರು. ಬಂಗಾಳದಲ್ಲಿ ೭ ಮಿಲಿಯ ಪವನುಗಳ ಮೌಲ್ಯದ ವಿದೇಶಿ ಧೋತ್ರಗಳು ರಪ್ತಾಗುತ್ತಿರುವದರಿಂದ ಇಂಥ ಧೋತ್ರಗಳನ್ನು ಅಮೇರಿಕದ ವಸ್ತ್ರಕಾರಖಾನೆಯವರು ತಯ್ಯಾರಿಸಬೇಕೆಂದು ಸೂಚಿಸೋಣಾಗಿದೆ. ಈ ರೀತಿ ಈ ದೇಶದ ವಸ್ತ್ರವ್ಯಾಪಾರವನ್ನು ಜಪಾನ ಮತ್ತು ಅಮೇರಿಕದವರು ಕೈವಶಮಾಡಿಕೊಳ್ಳಬೇಕೆಂತ ಪ್ರಯತ್ನಿಸುತ್ತಿರುವರು. ಹಿಂದೂದೇಶಕ್ಕೆ ರಪ್ತಾಗುವ ವಸ್ತ್ರದ ಮೇಲೆ ಕರವು ಪ್ರಕೃತ ಇರುವದಾದರೂ ಅಮೇರಿಕ ಮತ್ತು ಜಪಾನ ದೇಶದವರು ಈ ಕರದ ಪ್ರತಿಬಂಧಕವನ್ನು ಸಹಿಸಿಕೊಂಡು ತಮ್ಮ ವ್ಯಾಪಾರವನ್ನು ಈ ದೇಶದಲ್ಲಿ ಮುಂದೊತ್ತುವಷ್ಟು ಸಮರ್ಥರಿದ್ದಾರೆ. ಹತ್ತಿಯ ಕಾರ್ಖಾನೆಗಳನ್ನು ಹಿಂದೂಸ್ಥಾನದಲ್ಲಿ ಹೆಚ್ಚೆಚ್ಚಾಗಿ ಶೀಘ್ರದಲ್ಲಿ ಸ್ಥಾಪಿಸುವದು ಮತ್ತು ನಮಗೆ ಬೇಕಾದ ವಸ್ತ್ರಗಳನ್ನು ಇಲ್ಲಿಯ ಕಾರ್ಖಾನೆಗಳಿಂದಲೇ ಸಂಗ್ರಹಿಸುವದು, ಇಂಥಾ ಪ್ರಯತ್ನಗ

ಳಿಗೆ ಇಲ್ಲಿಯ ಧಡವಾಳಿಕರು ತಮ್ಮಿಂದಾಗುವ ಸಹಾಯವನ್ನು ಮಾಡುವದು—ಈ ಮೂಲಕ ಜಪಾನ ಮತ್ತು ಅಮೇರಿಕದದಲ್ಲಿಯ ಮಿತ್ರರು ಮಾಡುವಂಥ ಪ್ರಯತ್ನಗಳನ್ನು ಹಿಂದಿಗಳು ಅಭಿಮಾನಪೂರ್ವಕ ಇದಿರಾಡುವದು ಅಗತ್ಯವಾಗಿರುವದು.

೫. ಯುದ್ಧ ಪ್ರಾರಂಭವಾದಂದಿನಿಂದ ಹಲವರು ಯುದ್ಧದ ಭವಿಷತ್ತನ್ನು ಹಲವು ವಿಧಾನಗಳಲ್ಲಿ ಹೇಳಿರುತ್ತಾರೆ. ಆದರೆ ಇಂಥಾ ಭವಿಷತ್ತುಗಳಲ್ಲಿ ಹೇಳೋಣಾದ ಸಂಗತಿಗಳಿಗೂ ಯುದ್ಧದಲ್ಲಿ ನಡೆದ ಸಂಗತಿಗಳಿಗೂ ತಾಳೆಯಿದ್ದಿಲ್ಲ. ಈಗ ಭವಿಷತ್ತನ್ನು ಹಿಡಿದು ಮುಂದೆ ಬಂದಿರುವ ಪಂಡಿತನು ಜಪಾನು ದೇಶದವನಾಗಿರುವನು. ಈತನು ಸಾಮಾನ್ಯನಲ್ಲ. ಗಣಿತದಲ್ಲಿಯೂ ಜೋತಿಷದಲ್ಲಿಯೂ ಪಂಡಿತನು. ಜಪಾನಿನ ನಾಗಸಾಕಿಯ ಕಲಾಶಾಲೆಯೊಂದರಲ್ಲಿ ಧ್ಯರೆಕ್ಟರನಾಗಿದ್ದವನು. ಈ ಯುದ್ಧವು ಪ್ರಾಪ್ತಿಸುವದೆಂತ ೧೯೧೫ನೇ ವರುಷದಲ್ಲಿ ಹೇಳಿದ್ದನಂತೆ. ಈ ಪಂಡಿತನು ಈಗ ಹೇಳುವದೇನೆಂದರೆ—ಇದೇ ಬರುವ ಆಗೋಸ್ತು ತಿಂಗಳಿನಿಂದ ಬರುವ ನವಂಬರ ತಿಂಗಳ ಅಂತ್ಯದೊಳಗಿನ ಮಧ್ಯಕಾಲದಲ್ಲಿ ಯುದ್ಧವು ಸಮಾಪ್ತವಾಗುವದು. ಆಗೋಸ್ತು ತಿಂಗಳಿನಿಂದ ಜರ್ಮನರ ಪರಾಜಯಕ್ಕೆ ಪ್ರಾರಂಭವಾಗುವದು. ಜರ್ಮನರು ಯುದ್ಧದಲ್ಲಿ ಸೋತುಹೋಗುವ ಮೊದಲೇ ಟರ್ಕಿಯು ಪರಾಧೀನವಾಗುವದು. ಸಂಧಿಕಾಲದಲ್ಲಿ ಬಹಳ ಚರ್ಚೆಯು ನಡೆದು ಸ್ಪೈನ್ ಮತ್ತು ಹೊಲ್ಲಂಡ್ ದೇಶಗಳ ಮಧ್ಯಸ್ಥಿಕೆಯಿಂದ ಸಂಧಾನವಾಗುವದು. ಬೆಲ್ಜಿಮಿಗೆ ಐಶ್ವರ್ಯವು ಪ್ರಾಪ್ತವಾಗುವದು. ಅಲ್ಸಸ್ಸ ಲೋರೈನ್ ಫ್ರೆಂಚರಿಗೆ ದೊರಕುವದು. ಜಪಾನೀಯರ ಸ್ವಾಧೀನವಿರುವ ದಕ್ಷಿಣ ಸಮುದ್ರದಲ್ಲಿರುವ ಸಣ್ಣ ದ್ವೀಪಗಳು ಜರ್ಮನಿಗೆ ಕೊಡೋಣಾಗುವವು. ಮಿತ್ರಮಂಡಳಿಯವರ ಯುದ್ಧದ ಖರ್ಚು ಪೂರ್ಣವಾಗಿ ಜರ್ಮನಿಯಿಂದ ದೊರೆಯಲಾರದು. ನಿರಾಶರಾದ ಜರ್ಮನ್ ಪ್ರಜಾ ವರ್ಗದವರು ಪ್ರಜಾ ಪ್ರಭುತ್ವವನ್ನು ಸಾಧಿಸುವರು. ಕೈಸರನು ಸ್ವದೇಶವನ್ನು ಬಿಟ್ಟು ಸಬ್ ಮೆರ್ರೈನದಲ್ಲಿ ಕುಳಿತು ಹೋಗುವಾಗ ಬ್ರಿಟಿಷ ನಾವೆಗಳು ಈ ಸಬ್ ಮೆರೈನನ್ನು ಮುಳುಗಿಸಿ ಬಿಡುವರು. ಕಿಚ್ನರ್ ಪ್ರಭುಗಳಿಗೆ ಪ್ರಾಪ್ತವಾದ ಮರಣವೇ ಕೈಸರನಿಗೂ ಪ್ರಾಪ್ತವಾಗುವದು. ಪ್ರಜಾಸತ್ತೆಯ ಸರಕಾರವು ಜರ್ಮನಿಯಲ್ಲಿ ಸ್ವಲ್ಪಕಾಲ ನಡೆದ ಮೇಲೆ ಜರ್ಮನ್ ಯುವರಾಜನು ಪುನಹ ಸಿಂಹಾಸನವನ್ನೇರುವನು. ಪುನಹ ೧೯೩೦ರಲ್ಲಿ ಮಹಾ ಯುದ್ಧವು ಪ್ರಾರಂಭವಾಗುವದು. ಬ್ರಿಟಿಷರ ಹಣವೆಲ್ಲವೂ ಈ ಯುದ್ಧದಲ್ಲಿ ಹಾಳಾಗುವದು. ಜಪಾನು ಮಿತ್ರಮಂಡಳಿಯ ಪಕ್ಷದಲ್ಲಿಯೇ ಇರುವದು. ಈ ಯುದ್ಧದಲ್ಲಿ ಜರ್ಮನಿಗೆ ಸಂಪೂರ್ಣ ನಾಶವು ಉಂಟಾಗಿ ನಂತರ ಶಾಂತಿಯು ನೆಲಗೊಳ್ಳುವದು. ಇದು ಜಪಾನಿನ ಪಂಡಿತನ ಭವಿಷ್ಯತ್ತು. ಆಗೋಸ್ತು ನವಂಬರ ತಿಂಗಳ ಕಾಲವೆಂದರೆ ಅದು ಸಮೀಪವವೇ ಇದೆ. ಈ ಭವಿಷತ್ತು ಹ್ಯಾಗಾಗುವದೆಂದು ನೋಡಬೇಕು.

೬. ಮುಂಬಯಿಯ ಸಂಸ್ಥಾನದ ಮುನಿಸಿಪಾಲಿಟಿಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿಕೊಡುವ ಬಗ್ಗೆ ಬಹುಮಾನಪಟ್ಟ ಮಿ. ಪಟೇಲರವರ ಕಾನೂನು ಮಸೂದೆಯ ವಿಷಯವು ವಾಚಕರಿಗೆ ಗೊತ್ತಿರಬಹುದು. ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ ಬಹುಮಾನಪಟ್ಟ ಮಿ. ಎ. ಎಸ್. ಕೃಷ್ಣರಾವ್‌ರವರು ಮದ್ರಾಸು ಸಂಸ್ಥಾನದ ಮುನಿಸಿಪಾಲಿಟಿಗಳಲ್ಲಿ ಇದೇ ಏರ್ಪಾಡನ್ನು ಜಾರಿಗೆ ತರುವ ಉದ್ದೇಶದಿಂದ ಒಂದು ಕಾನೂನು ಮಸೂದೆಯನ್ನು ತಯಾರಿಸಿ ಮದ್ರಾಸು ಸರಕಾರದವರಿಗೆ ಕಳುಹಿಸಿಕೊಟ್ಟಿರುವರು. ಬರುವ ಸರ್ತಿ ಕೂಡಲಿಕ್ಕಿರುವ ನ್ಯಾಯವಿಧಾಯಕ ಸಭೆಯ ಮುಂದೆ ಈ ಕಾನೂನು ಮಸೂದೆಯನ್ನಿಡಲು ಕೃಷ್ಣರಾವ್‌ರವರು ಸರಕಾರದ ಅನುಮತಿಯನ್ನು ಕೇಳಿರುತ್ತಾರೆ. ಗೋಖಲೆಯವರ ಪ್ರಾಥಮಿಕಶಿಕ್ಷಣ ಮಸೂದೆಗೆ ಅನುಗುಣವಾಗಿ ಇದು ತಯ್ಯಾರಿಸಲ್ಪಟ್ಟಿರುವದಾದರೂ ಹಲವು ಮುಖ್ಯ ಮುಖ್ಯ ಸಂಗತಿಗಳಲ್ಲಿ ಕೃಷ್ಣರಾಯರ ಮಸೂದೆಯಲ್ಲಿ ಗೋಖಲೆಯವರ ಮಸೂದೆಯಲ್ಲಿ ಇಲ್ಲದ ದೋಷಗಳಿವೆ. ಗೋಖಲೆಯವರು ಮುನಿಸಿಪಾಲಿಟಿಗಳ ಮಾತ್ರವಲ್ಲ ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕವೂ ಕಡ್ಡಾಯದ ಶಿಕ್ಷಣದ ಜಾರಿಯನ್ನು ನಡಿಸಬೇಕೆಂದು ಉದ್ದೇಶಿಸಿದ್ದರು. ಈ ವಿದ್ಯಾಪ್ರಸರಣೆಗೆ ಬೇಕಾದ ದ್ರವ್ಯಸಂಗ್ರಹದ ವಿಷಯ ಗೋಖಲೆಯವರ ಮಸೂದೆಯಲ್ಲಿ ಸಮರ್ಪಕವಾದ ಸೂಚನೆಗಳಿದ್ದವು. ಪ್ರಾಥಮಿಕಶಿಕ್ಷಣದ ಖರ್ಚನ್ನು ಪ್ರಜಾಪ್ರತಿನಿಧಿ ಸಂಸ್ಥೆಗಳಾದ ಲೋಕಲ್ ಬೋರ್ಡುಗಳೂ ಮತ್ತು ಸಂಸ್ಥಾನಿಕ ಸರಕಾರದವರೂ ಸರಿಯಾಗಿ ವಹಿಸಿಕೊಳ್ಳಬೇಕು. ತಾವು ಕೊಡಬೇಕಾದ ಖರ್ಚಿನ ಮೊಬಲಗು ಈ ಬಗ್ಗೆ ಸಾಲದೆ ಹೋದರೆ ವಿದ್ಯಾತೆರಿಗೆಯನ್ನು ಲೋಕಲ್ ಬೋರ್ಡುಗಳು ವಿಧಿಸಬಹುದು. ಮತ್ತು ಸಂಸ್ಥಾನಿಕ ಸರಕಾರದವರು ತಮ್ಮ ಪಾಲಿಗೆ ಖರ್ಚನ್ನು ವಹಿಸಿಕೊಳ್ಳುವಂತೆ ವರಿಷ್ಠ ಸರಕಾರದವರು ದ್ರವ್ಯಸಹಾಯವನ್ನು ಸಂಸ್ಥಾನಿಕ ಸರಕಾರದವರಿಗೆ ಕೊಡುತ್ತಿರಬೇಕೆಂದು ಗೋಖಲೆಯವರ ಅಭಿಪ್ರಾಯವಿತ್ತು. ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟ ಸಭೆಯು ಅಲ್ಲಿಯ ಪ್ರಾಥಮಿಕ ಶಿಕ್ಷಣದ ಖರ್ಚಿನ ಮೂರನೇ ಎರಡಂಶವನ್ನು ವಹಿಸಿಕೊಳ್ಳುತ್ತದೆ. ಸ್ಕೊಟ್‌ಲೇಂಡ್‌ನಲ್ಲಿ ಇದಕ್ಕಿಂತಲೂ ಅಧಿಕವಾದ ಅಂಶವನ್ನು ಸರಕಾರದವರು ವಹಿಸಿಕೊಳ್ಳುವರು. ಐಯರ್‌ಲೇಂಡ್‌ನಲ್ಲಿ ಪೂರ್ಣಖರ್ಚನ್ನು ಸರಕಾರವೇ ಕೊಡುತ್ತಿರುವದು. ಹೀಗಿರುತ್ತಾ ಹಿಂದೂಸ್ಥಾನದಲ್ಲಿ ಈ ಕಡ್ಡಾಯ ಶಿಕ್ಷಣದ ಖರ್ಚಿನ ಮೂರು ಪಾಲುಗಳಲ್ಲಿ ಎರಡು ಪಾಲುಗಳನ್ನು ಸರಕಾರದವರು ಕೊಡುವದು ಯುಕ್ತವಾಗಿದೆ ಎಂತ ಪ್ರಾಥಮಿಕ ಶಿಕ್ಷಣಕ್ಕೆ ಬೇಕಾದ ಖರ್ಚಿನ ಆದಾಯ ಮೂಲಗಳನ್ನು ಸ್ವರ್ಗಸ್ಥ ಗೋಖಲೆಯವರು ಸೂಚಿಸಿದ್ದರು. ಮಿ. ಕೃಷ್ಣರಾಯರ ಮಸೂದೆಯಲ್ಲಿ ಇಂಥಾ ಸೂಚನೆಗಳ್ಯಾವವೂ ಇರವು. ಕಡ್ಡಾಯಶಿಕ್ಷಣಕ್ಕೆ ಬೇಕಾದ ಖರ್ಚನ್ನು ಪೂರ್ಣವಾಗಿ ಮುನ್ಸಿಪಾಲಿಟಿಯವರೇ ವಹಿಸಿಕೊಳ್ಳಬಹುದೆಂದು ಹೇಳಿದರೆ ಇದಕ್ಕೆ ಬೇಕಾದ ಸಂಪನ್ನಸ್ಥಿತಿಯು ಈ ಸಂಸ್ಥಾನದ ಎಲ್ಲಾ ಮುನ್ಸಿಪಾಲಿಟಿಗಳಲ್ಲಿಯೂ ಇರದು. ಜನರ ಆರೋಗ್ಯಪಾಲನೆ ವಿಷಯಗಳಲ್ಲಿ ಮುನಿಸಿಪಾಲಿಟಿಯವರು ಕೈಕೊಳ್ಳಬೇಕಾಗಿರುವ ಏರ್ಪಾಡುಗಳು ಬಹಳವಾಗಿರುವವು. ಆದ್ದರಿಂದ ಶಿಕ್ಷಣಕ್ಕೆ ಹಣವೆಲ್ಲಿಂದ? ವರಿಷ್ಠ ಸರಕಾರದವರ ಮತವನ್ನು ಈ ಬಾಬಿನಲ್ಲಿ ನಿರ್ಣಯಿಸಿಕೊಂಡು ಇವರ ಸಹಾಯವು ನಿರಂತರವಾಗಿ ಸಂಸ್ಥಾನಿಕ ಸರಕಾರಗಳಿಗೆ ದೊರಕುವಂತೆ ಸಾಧಿಸಿಕೊಳ್ಳುವದು ಕಡ್ಡಾಯ ಶಿಕ್ಷಣ ಪ್ರಸರಣೆಯ ಪ್ರಥಮ ಪ್ರಯತ್ನವಾಗಿರುವದು. ಯುದ್ಧವು ಪ್ರಾರಂಭವಾದಂದಿನಿಂದ ಶಿಕ್ಷಣದ ಬಾಬಿನಲ್ಲಿ ಬ್ರಿಟಿಷ ಸರಕಾರದವರು ರಾಶಿ ರಾಶಿಯಾಗಿ ಹಣವನ್ನು ಖರ್ಚುಮಾಡಲು ನಿರ್ಣಯಿಸಿದ್ದಾರೆ. ಬ್ರಿಟಿಷ ಸರಕಾರದ ಸುಧಾರಣೆಯ ಈ ತತ್ವವನ್ನು ಮನಸ್ಸಿಗೆ ತಂದುಕೊಂಡರೆ 'ದೋಣಿ ಬಂದರೆ ಕಾಯಿ ಕೊಡುವದು' ಎಂಬೀ ಆಚರಣೆಯು ಶಿಕ್ಷಣ ಪ್ರಸರಣೆಯಲ್ಲಿ ಹಿಂದೂಸ್ಥಾನದಲ್ಲಿ ಸಹ ಸಲ್ಲದೆಂಬುವದು ವ್ಯಕ್ತವಾಗುವದು.

೭. ಹೇಗಾದರೂ ಕಡ್ಡಾಯಶಿಕ್ಷಣದ ಏರ್ಪಾಡಿನ ಜಾರಿಯನ್ನು ಸರಕಾರದವರಿಂದ ಅತ್ಯಲ್ಪರೂಪದಲ್ಲಿಯಾದರೂ ನಡೆಸಬೇಕೆಂಬ ಪ್ರಯತ್ನಗಳು ಬ್ರಿಟಿಷ್ ಇಂಡಿಯಾದಲ್ಲಿ ಪ್ರಜಾಮುಂದಾಳುಗಳು ಇನ್ನೂ ನಡೆಸುತ್ತಿರುವಾಗ ಶಿಕ್ಷಣದ ಸ್ಥಿತಿಯು ಆಶ್ರಿತಸಂಸ್ಥಾನಗಳಲ್ಲಿ ಹೇಗಿದೆ. ಮೈಸೂರುಸಂಸ್ಥಾನದ ಗತವರುಷದ ಶಿಕ್ಷಣವರದಿಯನ್ನು ಪರಿಶೋಧಿಸಿದರೆ ಇದು ಚೆನ್ನಾಗಿ ಗೊತ್ತಾಗುವದು. ಹಿಂದೀಪ್ರಜೆಗಳಲ್ಲಿ ಸರ್ವತ್ರವೂ ಶಿಕ್ಷಣಾಭಿಲಾಷೆಯು ವ್ಯಾಪಕವಾಗಿರುವುದೆಂಬುವದಕ್ಕೆ ನಿದರ್ಶನಗಳು ಬೇಕಾದರೆ ಅವು ಮೈಸೂರಿನಲ್ಲಿ ಕಣ್ಣುತುಂಬಾ ನೋಡಸಿಕ್ಕುವವು. ೧೯೧೩-೧೪ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಕೊಡುವ ಏರ್ಪಾಡು ಸಂಸ್ಥಾನದ ೧೧ಪ್ರಾಂತ್ಯಗಳಲ್ಲಿ ಜಾರಿಯಲ್ಲಿತ್ತು. ಗತವರುಷದಲ್ಲಿ ಇದು ಒಟ್ಟಿಗೆ ೩೭ಪ್ರಾಂತ್ಯಗಳಲ್ಲಿ ನಡೆಯಿತು. ಮುಂದಿನ ವರುಷದಲ್ಲಿ ಶಿಕ್ಷಣವನ್ನು ಕಡ್ಡಾಯವಾಗಿ ಕೊಡುವ ಏರ್ಪಾಡನ್ನು ಇನ್ನೂ ೧೦೦ಕಡೆಗಳಲ್ಲಿ ಜಾರಿಗೆ ತರಬೇಕೆಂದು ಮೈಸೂರಿನ ನ್ಯಾಯವಿಧಾಯಕ ಸಭೆಯಲ್ಲಿ ಪ್ರಸ್ತಾಪವಿದೆ. ಜಿಲ್ಲಾ ಮತ್ತು ತಾಲೂಕು ಪ್ರಾಂತ್ಯಗಳಲ್ಲಿ ಶಿಕ್ಷಣದ ಈ ಏರ್ಪಾಡು ನಡಿಯುತ್ತಿದೆ. ಇನ್ನು ಹಳ್ಳಿಪ್ರಾಂತ್ಯಗಳಲ್ಲಿ ಮಾತ್ರ ಇದರ ಜಾರಿಯು ನಡಿಯಲಿಕ್ಕಿರುವದೆಂದು ತಿಳಿಯುತ್ತೇವೆ. ಸಾಕಷ್ಟು ಉಪಾಧ್ಯಾಯರೂ ಶಾಲೆಗಳೂ ಇಲ್ಲದ್ದರಿಂದ ಹೆಚ್ಚು ಕಡಿಮೆ ೨೦,೦೦೦ ಮಂದಿ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಪ್ರವೇಶವು ದೊರಕಲು ಸಾಧ್ಯವಾಗಲಿಲ್ಲ. ಜನರಿಗೆ ವಿದ್ಯೆಯಲ್ಲಿ ಅಭಿರುಚಿಯಿಲ್ಲವೆಂತ ವಾದ ಎತ್ತುವವರು ಮೈಸೂರಿನ ಈ ವಿದ್ಯಮಾನವನ್ನು ಸರಿಯಾಗಿ ಪರ್ಯಾಲೋಚಿಸಿಕೊಳ್ಳಬಹುದು. ಹಿಂದುಸ್ಥಾನದ ಸರಕಾರದವರು ಅನುಸರಿಸಬೇಕಾದ ಇನ್ನೂ ಹಲವು ದೃಷ್ಟಾಂತಗಳು ಮೈಸೂರು ಸರಕಾರದ ಶಿಕ್ಷಣ ವೃತ್ತಾಂತದಲ್ಲಿರುವವು.

೮. ಮದ್ರಾಸು ಹೈಕೋರ್ಟಿನ ಟೆಂಪೊರೆರಿ ಜಡ್ಜರಾದ ಬಹುಮಾನಪಟ್ಟ ಕೆ. ಶ್ರೀನಿವಾಸ ಅಯ್ಯಂಗಾರರವರು ಇನ್ನು ಹಂಗಾಮಿ ಜಡ್ಜರಾಗಿ ಹೈಕೋರ್ಟಿನಲ್ಲಿರುವದಕ್ಕೆ ನಿರಾಕರಿಸಿರುವರೆಂತಲೂ ಹಂಗಾಮಿ ಜಡ್ಜರ ಕೆಲಸವನ್ನು ಬಿಟ್ಟು ಇನ್ನು ತಮ್ಮ ವಕೀಲ ವೃತ್ತಿಯನ್ನೆ ಕೈಕೊಳ್ಳಲು ನಿಶ್ಚಯಿಸಿರುವರೆಂತಲೂ ತಿಳಿದುಬರುತ್ತದೆ. ಮದ್ರಾಸು ಗವರ್ನರರವರ ಭೇಟಿಕಾಲದಲ್ಲಿ ಗವರ್ನರ ದೊರೆಗಳವರಿಗೆ ಶ್ರೀನಿವಾಸ ಅಯ್ಯಂಗಾರರವರು ಈ ತಿರಸ್ಕಾರದ ಉತ್ತರವನ್ನು ಕೊಟ್ಟಿರುವರೆಂತ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿರುವದು. ಹೈಕೋರ್ಟಿನಲ್ಲಿ ಬಹಳವಾಗಿ ಬಾಕಿ ಬಿದ್ದ ದಾವೆ ಅಪೀಲು ಇತ್ಯಾದಿಗಳು ಬೇಗನೆ ಇತ್ಯರ್ಥಿಸಲ್ಪಡುವಂತೆ ಸರಕಾರದವರು ಇತ್ತಲಾಗೆ ಕೆಲವು ವರುಷಗಳಿಂದ ಹಂಗಾಮಿ ಜಡ್ಜರನ್ನು ನೇಮಿಸುತ್ತಿದ್ದರು. ಆದರೆ ಅತಿ ಶ್ರೇಷ್ಠವಾದ ನ್ಯಾಯಸ್ಥಾನವಾಗಿರುವ ಹೈಕೋರ್ಟುಗಳಿಗೆ ಹಂಗಾಮಿ ಜಡ್ಜರನ್ನು ಆಗಿಂದಾಗ್ಯೆ ನೇಮಿಸುವ ರೂಢಿಯನ್ನು ಕಟ್ಟಿಕೊಳ್ಳುವದು ಯುಕ್ತವಲ್ಲವೆಂತ ಸರಕಾರದವರಿಗೆ ತಿಳಿದುಬಂದುದರಿಂದ ಜಡ್ಜರ ಸಂಖ್ಯೆಯನ್ನು ಏರಿಸಬೇಕೆಂಬ ಸೂಚನೆಯು ಸ್ಟೇಟ್ ಸೆಕ್ರೆಟರಿಗಳಿಗೆ ಮಾಡೋಣಾಗಿತ್ತು. ಮದ್ರಾಸು ಹೈಕೋರ್ಟಿನಲ್ಲಿರುವ ವ್ಯವಸ್ಥಾಕ್ರಮ ಪ್ರಕಾರ ಜಡ್ಜರ ಸಂಖ್ಯೆಯ ತ್ರಿನೇಯವರು ಸಿವಿಲ್ ಸರ್ವಿಸಿನವರು ಮತ್ತು ತ್ರಿನೇಯವರು ಬ್ಯಾರಿಷ್ಟರರಾಗಬೇಕು. ಬಾಕಿ ಉಳಿದ ಸಂಖ್ಯೆಯನ್ನು ಹೈಕೋರ್ಟು ವಕೀಲರುಗಳಿಂದ ಭರ್ತಿಮಾಡಿಕೊಳ್ಳುವರು. ಕೆ. ಶ್ರೀನಿವಾಸ ಅಯ್ಯಂಗಾರರವರಿಗೆ ಈ ಹಂಗಾಮಿ ಕೆಲಸವನ್ನು ವಹಿಸಿಕೊಳ್ಳಬೇಕೆಂದು ವಿಜ್ಞಾಪಿಸಿಕೊಳ್ಳುವಾಗ ಬೇಗನೆ ಅವರಿಗೆ ಈ ಹುದ್ದೆಯು ಕಾಯಂ ಮಾಡೋಣಾಗುವದೆಂತ ಹೇಳೋಣಾಗಿತ್ತು. ೧೯೧೫ನೇ ಜುಲಾಯಿ ತಿಂಗಳ ತಾ. ೧೫ರಿಂದ ಪ್ರತಿ ಆರು ತಿಂಗಳಿಗೊಮ್ಮೆ ಈ ಹಂಗಾಮಿ ಹುದ್ದೆಯ ಅವಧಿಯನ್ನು ಆರು ತಿಂಗಳ ಕಾಲಕ್ಕೆ ಮುಂದರಿಸುತ್ತಿದ್ದರೂ ಶ್ರೀನಿವಾಸ ಅಯ್ಯಂಗಾರರವರು ಸಮಾಧಾನದಿಂದ ಇದನ್ನು ವಹಿಸಿಕೊಂಡರು. ಈ ಹುದ್ದೆಯ ಬಗ್ಯೆ ಶ್ರೀನಿವಾಸ ಅಯ್ಯಂಗಾರರವರು ಹೈಕೋರ್ಟ ಜಡ್ಜಗಿರಿಗಿಂತಲೂ ಲಾಭಕರವಾಗಿದ್ದ ತಮ್ಮ ವೃತ್ತಿಯನ್ನು ಬಿಟ್ಟಿದ್ದು ಮಾತ್ರವಲ್ಲ, ಹೈಕೋರ್ಟಿನಲ್ಲಿ ಬಹಳ ಕಾಲದಿಂದ ಬಾಕಿ ಬಿದ್ದಿದ್ದ ವ್ಯವಹರಣೆಗಳನ್ನು ಬೇಗ ಬೇಗನೆ ತೀರಿಸುತ್ತ ಬಂದರು. ಆದರೆ ಇಷ್ಟೆಲ್ಲ ಶ್ರಮಕ್ಕೆ ಇವರಿಗೆ ಉದುಗೊರೆ ಏನು? ಇನ್ನು ಇನ್ನೂ ಹಂಗಾಮಿ ಜಡ್ಜರಾಗಿಯೇ ಇರುವಂಥಾದ್ದು. ಹೈಕೋರ್ಟು ವಕೀಲರುಗಳನ್ನು ಹೈಕೋರ್ಟು ಜಡ್ಜರಾಗಿ ನೇಮಿಸುವ ಸಂದರ್ಭಗಳಲ್ಲಿ ಅನ್ಯಾಯವು ಪ್ರಾಪ್ತವಾಗುವ ಸಂಭವವಿರುವದರಿಂದ ಈ ಬಾಬಿನಲ್ಲಿ ಬೇಕಾದ ವ್ಯವಸ್ಥೆಯನ್ನು ಮಾಡಬೇಕೆಂತ ಇಂಡಿಯಾ ಬಿಲ್ಲು ಕಳೆದ ೧೯೧೫ರಲ್ಲಿ ಬ್ರಿಟಿಷ ಪಾರ್ಲಿಮೆಂಟಿನವರಿಂದ ಪರ್ಯಾಲೋಚಿಸಲ್ಪಡುವಾಗ ಹಿಂದೀ ಮುಖಂಡರಿಂದ ಸೂಚಿಸೋಣಾಗಿತ್ತು. ನಂತರ ನ್ಯಾಯವಿಧಾಯಕ ಸಭೆಗಳಲ್ಲಿ ಇದೇ ಪ್ರಶ್ನೆಯನ್ನು ಆಗಿಂದಾಗ್ಯೆ ಕೇಳಿಕೊಂಡರೂ ಅದೂ ಸಹ ಫಲವಿಲ್ಲದೆ ಹೋಯಿತು. ಪ್ರಕೃತ ಸ್ಟೇಟ್ ಸೆಕ್ರೆಟರಿಗಳು ಕಾಯಂ ಜಡ್ಜರ ಸಂಖ್ಯೆಯು ೧೦ ಎಂತಲೂ ಬಾಕಿಬಿದ್ದ ಕೆಲಸವು ತೀರುವ ವರೆಗೆ ೨ ಜನ ಹಂಗಾಮಿ ಜಡ್ಜರನ್ನು ನೇಮಿಸಬಹುದೆಂತಲೂ ತೀರ್ಮಾನಿಸಿದ್ದಾರೆಂಬುದಾಗಿ ಆಂಗ್ಲೋ-ಇಂಡಿಯನ್ ಪತ್ರಗಳಲ್ಲಿ ಸೂಚಿಸೋಣಾಗುತ್ತದೆ. ಇದರ ಪ್ರಕಾರ 4 ಜನ ಬ್ಯಾರಿಷ್ಟರ್ ಜಡ್ಜರು, 4 ಜನ ಸಿವಿಲಿಯನ್ ಜಡ್ಜರು, 2 ಜನ ವಕೀಲ ಜಡ್ಜರು, ಅಂದರೆ ಶ್ರೀನಿವಾಸ ಅಯ್ಯಂಗಾರರವರು ಇನ್ನೂ ಹಂಗಾಮಿ ಜಡ್ಜರಾಗಿರಬೇಕು. ಕಾಯಂ ಜಡ್ಜರಾಗಿ ನೇಮಿಸಲ್ಪಡುವ ಭರವಸೆಯನ್ನು ಇವರಿಗೆ ಕೊಡಲಾರರು. ಆದ್ದರಿಂದಲೇ ಗವರ್ನರ ದೊರೆಗಳವರ ಕೂಡೆ ಈ ಹುದ್ದೆಯನ್ನು ಅಯ್ಯಂಗಾರರವರು ತಿರಸ್ಕರಿಸಿರುತ್ತಾರೆ.

ಸ್ಥಳಿಕ—ಮಂಗಳೂರು.

ಇದೇ ಬರುವ ಶನಿವಾರ ೨೧ನೇ ತಾರೀಕಿನಿಂದ ಶ್ಯಾಮ ಘಂಟೆ ೬-೩೦ಕ್ಕೆ ಪ್ರತಿ ಶನಿವಾರವೂ ಇಲ್ಲಿಯ ನಾದವರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಮ॥ ರಾ॥ ರಾ॥ ಪಿ. ಆರ್. ರಂಗನಾಥ ಪೂಂಜ ಬಿ. ಎ. ಬಿ. ಎಲ್ ಇವರು ಮೇಜಿಕ್ ಲೆಂಟರ್ನಿನ ಚಿತ್ರಪ್ರದರ್ಶನಗಳೊಡನೆ ಮಾನುಷ ಶರೀರ ಶಾಸ್ತ್ರದಲ್ಲಿ ಉಪನ್ಯಾಸಗಳನ್ನು ಕೊಡುವರು. ವಿದ್ಯಾರ್ಥಿಗಳೆಲ್ಲರಿಗೂ ಸುಸ್ವಾಗತವಿದೆ.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ವಾರ್ಷಿಕ ವೃತ್ತಾಂತವನ್ನು ಮಂಜೂರು ಮಾಡಲಿಕ್ಕೆ ಪಾಲುಮಾರಿಕರ ಸಭೆಯು ಇದೇ ತಿಂಗಳ ತಾ. ೫ರಲ್ಲಿ ಮ॥ ರಾ॥ ರಾ॥ ನೆಲ್ಲಿಕಾಯಿ ವೆಂಕಟರಾಯರ ಮನೆಯಲ್ಲಿ ಶ್ಯಾಮ 3 ಘಂಟೆಗೆ—ಕೂಡುವದು.

ಈ ತಿಂಗಳ ತಾ. ೧೯ಕ್ಕೆ ಅಂತ್ಯವಾಗುವ ವಾರದಲ್ಲಿ ೮ ಪ್ಲೇಗು ಮರಣಗಳಿದ್ದವು. ಸೆಂಟ್ರಲ್ ವಾರ್ಡಿನಲ್ಲಿ ೪, ಕೊಡಿಯಾಲಬೈಲ್ ವಾರ್ಡು ೧, ಪೋರ್ಟುವಾರ್ಡು ೧, ಜೆಪ್ಪುವಾರ್ಡು ೧, ಕೋರ್ಟು ವಾರ್ಡು ೧.

ಇಲ್ಲಿ ಐಶ್ವರ್ಯವಂತ ವರ್ಗದಾರರೂ ಕಾಫಿ ಸಾಹುಕಾರರೂ ಆಗಿದ್ದ ಮ॥ ರಾ॥ ರಾ॥ ನೆಲ್ಲಿಕಾಯಿ ಶ್ರೀನಿವಾಸರಾಯರು ಇದೇ ತಿಂಗಳ ತಾರೀಕು ೧೮ರಲ್ಲಿ ಮೃತಪಟ್ಟರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ.

ಸ್ವೀಕಾರ. 'ಸೊಬಗಿನ ಬಳ್ಳಿ' ಕಾದಂಬರೀಸಂಗ್ರಹ ಗ್ರಂಥಮಾಲೆಯಲ್ಲೊಂದಾಗಿ ಇದು ಪ್ರಕಟಿಸಲ್ಪಟ್ಟಿರುವದು. ಕೆನರಾ ಹ್ಯಾಸ್ಕೂಲಿನ ಪಂಡಿತರೂ, ಕನ್ನಡ ಕೋಗಿಲೆಯ ಸಂಪಾದಕರೂ ಆದ ಮ॥ ರಾ॥ ಶಿವಪ್ಪಯ್ಯನವರು ಇದರ ಗ್ರಂಥಕರ್ತರಾಗಿರುವರು. ಭಾಗವತದಲ್ಲಿ ಹೇಳಿರುವ ಪ್ರದ್ಯುಮ್ನನ ಉತ್ಪತ್ತಿ, ಶಂಬರಾಸುರ ಸಂಹಾರ ಇದನ್ನು ವೃತ್ತರೂಪವಾಗಿ ಬರೆದಿರುವರು. ಗ್ರಂಥವನ್ನು ಕೆಲವು ಕಡೆಗಳಲ್ಲಿ ಪ್ರಾಸರಹಿತವಾಗಿಯೇ ಬರೆದಿರುತ್ತಾರೆ. ವೃತ್ತಗಳ ಇಂಪಿಗೆ ಇದರಿಂದ ತೊಡಕು ಉಂಟಾದದ್ದಿಲ್ಲ. ಗ್ರಂಥವು ಓದಲಿಕ್ಕೆ ಮನೋಹರವಾಗಿರುವದು. ಕ್ರಯವು ಪ್ರತಿ ಒಂದಕ್ಕೆ ಆಣೆ ೨.

ಗೊಬ್ಬರಗಳನ್ನು ಉಪಯೋಗಿಸುವದರಲ್ಲಿ ಬೇಕಾದ ಮಾಹಿತಿ ಮಣ್ಣಿನ ಗುಣ ಮತ್ತು ಪೈರುಗಳು—ಈ ಎರಡು ಪುಸ್ತಕಗಳನ್ನು ಕಲ್ಕತ್ತೆಯ ಚಿಲಿಯನ್ ನ್ಯಾಟ್ರೇಟ್ ಪ್ರೊಪೆಗೆಂಡಾದವರು (The Chilean Nitrate Propaganda) ನಮ್ಮ ಬಳಿ ಕಳುಹಿಸಿರುತ್ತಾರೆ. ನ್ಯಾಟ್ರೇಟ್ ಒಫ್ ಸೋಡಾ ಮೊದಲಾದ ಗೊಬ್ಬರಗಳ ಉಪಯೋಗದಿಂದ ಪೈರನ್ನು ಹೇಗೆ ಸಮೃದ್ಧಿಪಡಿಸಬಹುದು ಎಂಬೀ ಅನುಭವಗಳನ್ನು ಮಾದರಿ ಹೊಲಗಳಿಂದ ಸಂಗ್ರಹಿಸಿಕೊಂಡು ಈ ಪುಸ್ತಕಗಳ ರೂಪವಾಗಿ ಪ್ರಕಟಿಸಿರುವರು. ತರಕಾರಿ, ಹೊಗೆಸೊಪ್ಪು, ತೆಂಗು, ಮಾವು ಹಲಸು, ವೀಳ್ಯದ ಎಲೆ, ಭತ್ತ, ಸೂರ್ಣ ಇತ್ಯಾದಿಗಳೆಲ್ಲಕ್ಕೆ ಎಂಥೆಂಥಾ ಗೊಬ್ಬರಗಳನ್ನು ಹೇಗೆ ಉಪಯೋಗಿಸಬೇಕೆಂಬ ವಿಧಾನಗಳು ಈ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿರುವವು. ಪುಸ್ತಕಗಳು ಇಂಗ್ಲಿಷಿನಲ್ಲಿ ಬರೆಯಲ್ಪಟ್ಟಿರುವವು. ನಮ್ಮ ಜಿಲ್ಲೆಯ ಸಾಗುವಳಿಗಾರರಿಗೆ ಉಪಯುಕ್ತವಾದ ಸೂಚನೆಗಳು ಇವುಗಳಲ್ಲಿರುವವು. ಇಂಥವುಗಳನ್ನು ಕನ್ನಡದಲ್ಲಿ ಪ್ರೊಪೆಗೆಂಡಾ ಸಂಘದವರು ಪ್ರಕಟಿಸಿದರೆ ಉಪಕಾರವಾಗಬಹುದು. ಇಂಗ್ಲಿಷ ಗೊತ್ತಿದ್ದವರು ಈ ಸಂಘದವರಿಗೆ ಬರೆಕೊಂಡು ಈ ಪುಸ್ತಕಗಳನ್ನು ತರಿಸಿಕೊಳ್ಳಬಹುದು. ಪುಸ್ತಕಗಳ ಹೆಸರು ಇಂಗ್ಲಿಷಿನಲ್ಲಿ ಈ ರೀತಿ ಇರುವದು:—A Guide to Manuring of Field and Garden Crops. ಮತ್ತು Soil Fertility and Crop production.

ಕರ್ಣಾಟಕ ಸಂಗೀತ ಮೃಚ್ಛಕಟಿಕ ನಾಟಕವು—ಕೊಂಕಣಿ ಭಾಷೆಯಲ್ಲಿ ಸಂಗೀತ ಚಂದ್ರಹಾಸ ನಾಟಕವನ್ನು ರಚಿಸಿದ ರಾ॥ ಬೋಳಂತೂರ ಕೃಷ್ಣಪ್ರಭುಗಳಿಂದ ಇದು ರಚಿಸಲ್ಪಟ್ಟಿರುತ್ತದೆ. ಬೆಲೆ ಪ್ರತಿ ಒಂದಕ್ಕೆ ಆಣೆ 5.

ನೋಟೀಸು.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಮಂಗಳೂರು.

ಈ ಮೂಲಕ ತಿಳಿಯಪಡಿಸುವದೇನೆಂದರೆ—ಮಂಗಳೂರ ... ರಥವೀದಿಯಲ್ಲಿ ಶಾರದಾ ಛಾಪಖಾನೆಯ ಎದುರಿನಲ್ಲಿರುವ ... ಮನೆಯನ್ನು ಈ ಕಂಪೆನಿಯವರು ಕ್ರಯಕ್ಕೆ ... ಇದೇ ಬರುವ ಆದಿತ್ಯವಾರ ತಾ. 22ನೇ ... ಈ ಆಫೀಸಿನಲ್ಲಿರುವ ... ಏಲಂ ಹಾಕುವರು.

... ನಗಡಿ.

ಬಂಟ್ವಾಳ:— ಇಲ್ಲಿಯ ಟಪ್ಪಾಲಾಧೀಶರು ಬದಲಾಯಿಸಲ್ಪಟ್ಟಿರೂ ನಮಗೇನೂ ಅಷ್ಟೊಂದು ಕೊರತೆಯುಂಟಾಗಿಲ್ಲ. ಪರಂತು, ಈಗ ೫೦ ವರ್ಷಗಳಿಂದೀಚೆಗೆ ಇಲ್ಲದ ಮಹಾದಾಶತ್ತು ಸಂಭವಿಸಿರುವುದು. ಮಂಗಳೂರಿಗೆ ರೈಲು ಬರುವ ಮುಂಚೆ ಇಲ್ಲಿಗೆ ೩ ದಿನಗಳಲ್ಲಿ ಮದ್ರಾಸಿನ ಟಪ್ಪಾಲು ಬೆಳಿಗ್ಗೆ ೭ ಗಂಟೆಗೆ ಬಟ್ವಾಡೆಯಾಗುತ್ತಿತ್ತು. ರೈಲು ಬಂದನಂತರ ೩ ದಿನಗಳಲ್ಲಿ ಬೆಳಿಗ್ಗೆ ದೊರಕುತ್ತಿತ್ತು. ಈಗ ಮಂಗಳೂರಿಗೆ ರೈಲೇ ಬಂದಿಲ್ಲವೊ ಎಂಬಂತೆ ಟಪ್ಪಾಲು ೩ ದಿನಗಳಲ್ಲಿ ಸಂಜೆಹೊತ್ತಿಗೆ ದೊರಕುವಂತ ಹೊಸ ಏರ್ಪಾಡು ಈ ವಾರದಿಂದ ಜ್ಯಾರಿಗೆ ಬಂದಿರುವುದು. ಈ ನವೀನತೆಗೆ ಯಾರನ್ನು ಶ್ಲಾಘಿಸಬೇಕೋ ಗೊತ್ತಾಗಿಲ್ಲ. ಮಳೆಗಾಲದ ಆರಂಭದಲ್ಲಿ ಪಾಪದ 'ರನ್ನರು'ಗಳು ಅನೇಕರನ್ನು ಮೂಲೆಗೊತ್ತಿ, ಜಟ್ಕಾ ಕುದುರೆಗಳನ್ನು ಸಾಕುವ ಪುಣ್ಯವು ಟಪ್ಪಾಲು ಇಲಾಖೆಗೆ ಬಂದಿರುವುದು. ಜಟ್ಕಾವಾದರೂ ಬಂದಾಗಲೇ ಬರುವುದು. ಮದ್ರಾಸಿನಿಂದ ೫೫೦ ಮೈಲು ದೂರಕ್ಕೆ ಮಂಗಳೂರಿಗೆ ೨೪ ತಾಸುಗಳಲ್ಲಿ ಬಂದ ಟಪ್ಪಾಲನ್ನು ಬರೇ ಹದಿನೆಂಟು ಮೈಲು ದೂರಕ್ಕೆ ೩೦ ತಾಸುಗಳಲ್ಲಿ ಬಟ್ವಾಡೆ ಮಾಡುವರು! ಸುಧಾರಣೆಕೆಯಲ್ಲಿ ಬರ್ಬರತೆಯು ತುಂಬಿದಂತಾಯಿತು. ಮೊದಲಾದರೆ ಬೆಳಿಗ್ಗೆಯ ಟಪ್ಪಾಲಿನಲ್ಲಿ ಮಂಗಳೂರಿನಿಂದ ಬಂದ ಕಾಗದಕ್ಕೆ ಸರಿಯಾಗಿ ೯ ಗಂಟೆಯ ಮೋಟಾರಿನಲ್ಲಿ ಮಂಗಳೂರಿಗೆ ಅಗತ್ಯ ಕೆಲಸಕ್ಕೆ ಹೋಗಬಹುದಾಗಿತ್ತು; ಇನ್ನು ಮಂಗಳೂರಿನವರು ನಮಗೆ ಕಾಗದ ಬರೆಯುವ ಅಗತ್ಯವಿಲ್ಲ. ಅವರೇ ಹೊರಟು ಬಂದರೂ ಟಪ್ಪಾಲಿಗಿಂತ ಮೊದಲೇ ಮುಟ್ಟಬಹುದಾಗಿದೆ. ಇಂಥಾ ಶನೀಶ್ವರನಂತೆ ಮಂದಗತಿಯುಳ್ಳ ಟಪ್ಪಾಲು ಏರ್ಪಾಡಿಗೆ ಯಾವನು ಕೃತಜ್ಞನಾದಾನು? ವ್ಯಾಪಾರಿಯವರಂತೂ ವಿಪರೀತ ಆಕ್ಷೇಪ ಮಾಡುತ್ತಿರುವರು. ಒಂದು ಮೆಮೋರಿಯಲ್ ಹೊರಟು ಹಿಂದಿನ ಏರ್ಪಾಡಾಗುವ ಹಾಗೆ ಬೇಡಿಕೊಳ್ಳುತ್ತಿದೆ.

ಸುಳ್ಯ:— ಇಲ್ಲಿಯ ಎಲಿಮೆಂಟ್ರಿ ಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳಿದ್ದು ನಾಲ್ಕನೇ ಕ್ಲಾಸು ಮತ್ತು ಇಂಗ್ಲಿಷ್ ಅಭ್ಯಾಸ ಕೂಡಾ ಇಲ್ಲದೆ ಜನರು ಬಹು ಪೇಚಾಟಪಟ್ಟು ಆ ಕುರಿತು ಮನವಿಪತ್ರಿಕೆಯಿಂದ ಪ್ರಕಾರ ದಯಾಳು ಸರಕಾರದವರು ನಾಲ್ಕನೇ ಕ್ಲಾಸು ಮತ್ತು ಇಂಗ್ಲಿಷ್ ಅಭ್ಯಾಸ ಕೂಡಾ ಈ ಶಾಲೆಯಲ್ಲಿ ಇರಗೊಡಿಸಿದ್ದು ಕೇಳಿ ತುಂಬಾ ಸಂತೋಷಭರಿತರಾಗಿದ್ದೇವೆ. ಇನ್ನು ಮುಂದೆ ಈ ಶಾಲೆಯ ವಿದ್ಯಾರ್ಥಿಗಳಿಗೆ ಮೂರನೇ ಕ್ಲಾಸಿನಿಂದಲೇ ಇಂಗ್ಲಿಷ್ ಅಭ್ಯಾಸ ಕೂಡಾ ಕ್ರಮದಂತೆ ಕಲಿಸುವದಾಗಿ ಹುಕುಂ ಕೊಟ್ಟಿರುವದರಿಂದ ನಾಲ್ಕನೇ ಕ್ಲಾಸಿನ ವರೆಗೆ ಕಲಿತು ಮುಂದಿನ ಕ್ಲಾಸು ಕಲಿಯಲಿಕ್ಕೆ ಬೇರೆ ಶಾಲೆಗೆ ಹೋಗಲಿಕ್ಕೆ ಮನಸ್ಸುಳ್ಳ ವಿದ್ಯಾರ್ಥಿಗಳಿಗೆ ಕೂಡಾ ಈ ಶಾಲೆಯು ಬಹು ಅನುಕೂಲವಿರುವದರಿಂದ ಈ ಪ್ರಾಂತ್ಯದ ವಿದ್ಯಾರ್ಥಿಗಳು ಆದಷ್ಟು ಬೇಗನೆ ಬಂದು ಸೇರಿಕೊಳ್ಳುವಂತೆ ಪಾಲಕರು ಚಿಕ್ಕ ಚಿಕ್ಕ ವಿದ್ಯಾರ್ಥಿಗಳಿಗೆ ಅಲ್ಲಲ್ಲಿ ಸೂಚಿಸುವರಾಗಿ ಕೋರುತ್ತೇನೆ.

ಇದೇ ಎಲಿಮೆಂಟ್ರಿ ಶಾಲೆಯನ್ನು ಹಯರ್ ಎಲಿಮೆಂಟ್ರಿ ಶಾಲೆಯಾಗಿ ಸ್ಥಾಪಿಸಬೇಕಾಗಿ ಊರ ಪ್ರಮುಖರು ದಯಾಳು ಸರಕಾರಕ್ಕೆ [illegible] ಕೂಡಾ ಬರಕೊಂಡಿರುವದಾಗಿ ಕೇಳುತ್ತೇನೆ. ಬೇಕ್‌ವಾರ್ಡ್ ಕ್ಲಾಸಿನವರಾದ ಗೌಡಜಾತಿಯವರೇ ಹೆಚ್ಚಾಗಿ ಇರುವ ಈ ಊರಲ್ಲಿ ಮುಂದಾಗಿ ಜನರ ಅಪೇಕ್ಷೆಯು ಕೈಗೂಡಿತು ಎಂಬವರಲ್ಲಿ ಅನುಮಾನವೇ ಇಲ್ಲ.

ಮುಲ್ಕಿ:— ಇಲ್ಲಿಂದ ವರ್ಗವಾದ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಮಿಸ್ಟರ್ ಸಾಲ್ಡಾನ್ಹಾ ಮತ್ತು ಸಬ್ ಪೋಸ್ಟ್‌ಮಾಸ್ತರ್ ರಾ। ಹೆಬ್ಬಾರರವರಿಗೆ ಸಹ ಅವರ ಗೌರವಾರ್ಥವಾಗಿ ಇಲ್ಲಿಯ ಯೂನಿಯನ್ ಕ್ಲಬ್ಬಿನಲ್ಲಿ ಕಳೆದ ಆದಿತ್ಯವಾರ ಒಂದು ಟೀಪಾರ್ಟಿಯು ಕೊಡಲ್ಪಟ್ಟಿತು. ಮಿ। ಸಾಲ್ಡಾನ್ಹಾರವರು ಇಲ್ಲಿಗೆ ವರ್ಗವಾಗಿ ಬಂದು ಸುಮಾರು ೩-೩½ ವರುಷಗಳಾದವು— ಇವರು ನಿಷ್ಪಕ್ಷಪಾತಿಗಳೂ ನಿರಹಂಕಾರಿಗಳೂ ಆಗಿದ್ದರು. ದೊಡ್ಡವ, ಬಡವ, ಜಾತಿ, ಮತ ಎಂಬ ಭೇದಭಾವನೆಯು ಇವರಲ್ಲಿರಲಿಲ್ಲ. 'ಪೋಲಿಸ ಡಿಪಾರ್ಟುಮೆಂಟ್' ಎಂಬ ಪ್ರಜಾರಕ್ಷಕ ಖಾತೆಯ ಶ್ರೇಷ್ಠ ಕರ್ತವ್ಯವಾದ ದುಷ್ಟನಿಗ್ರಹ, ಶಿಷ್ಟಪಾಲನೆಯನ್ನು ಇವರು ದೊಡ್ಡವರಲ್ಲಿ ಅಂಜಿಕೆಯೂ ಬಡವರಲ್ಲಿ ಅಸೂಯೆಯೂ ಇಡದೆ ನಿಷ್ಪಕ್ಷಪಾತದಿಂದ ನಡಸಿ ಈ ಪ್ರಜೆಗಳ ಪ್ರೇಮ ಕೃತಜ್ಞತೆಗಳಿಗೆ ಪಾತ್ರರಾಗಿರುವರು. ಮಾಮೂಲಿಯ ಸೋಂಕು ಇವರಿಗೆ ಲೇಶಮಾತ್ರವೂ ತಟ್ಟಲಿಲ್ಲ. ಇವರ ವಿಯೋಗದಿಂದ ಊರಜನರೆಲ್ಲಾ ವ್ಯಥಿತರಾಗಿರುವರು. ಪೋಲಿಸ ಇಲಾಖೆಯು ಸುಧಾರಣೆಗೊಳ್ಳಲು ಈ ಮೊದಲು ಇಂಡಿಯ ಸರಕಾರದವರಿಂದ ನೇಮಿಸಲ್ಪಟ್ಟ ಕಮಿಶನಿನವರ ಶಿಫಾರಸ್ ಪ್ರಕಾರ ಸಬ್ ಇನ್ಸ್‌ಪೆಕ್ಟರ ಹುದ್ದೆಗಳು ಜಾರಿಗೆ ಬಂದಿರುವವು. ಸಬ್ ಇನ್ಸ್‌ಪೆಕ್ಟರ ಕೆಲಸಕ್ಕೆ ಮಿ। ಸಾಲ್ಡಾನ್ಹಾರಂಥವರೇ ನೇಮಿಸಲ್ಪಟ್ಟರೆ ಪೋಲಿಸ ಸುಧಾರಣೆಯಿಂದ ನಿರೀಕ್ಷಿಸೋಣಾದ ಫಲಿತಾಂಶಗಳು ಪ್ರಜಾ ವರ್ಗಕ್ಕೆ ಲಭಿಸುವದರಲ್ಲಿ ಏನೂ ಸಂದೇಹವಿಲ್ಲ. ನಮ್ಮ ಸಬ್ ಪೋಸ್ಟ್‌ಮಾಸ್ತರ ರಾ। ಹೆಬ್ಬಾರರವರು ಸಹಾ ಸ್ವತಂತ್ರ ಸ್ವಭಾವದವರೂ ನಿಃಸ್ಪೃಹಿಗಳೂ ಆಗಿದ್ದರು. ಉದ್ಯೋಗವು ಪ್ರಾಪ್ತವಾಗುವದು ಜನೋಪಯೋಗಕ್ಕಾಗಿ ಕೆಲಸವನ್ನು ಮಾಡುವದಕ್ಕಲ್ಲದೆ ದರ್ಪಶಾಲಿಗಳಾಗಿ ವರ್ತಿಸುವದಕ್ಕಲ್ಲ" ಎಂಬದನ್ನು ಇವರು ತಮ್ಮ ವರ್ತನದಿಂದ ತೋರಿಸಿದವರು. ಪಬ್ಲಿಕ್ ಸರ್ವಂಟ್ ಎಂಬ ನಾಮಧೇಯವು ಇಂಥವರಿಗೇ ಸಲ್ಲುವದು. ಟೀಪಾರ್ಟಿ ದಿನ ಇವರು ಮಾಡಿದ ಭಾಷಣದಲ್ಲಿ ಇವರ ಪ್ರೇಮಳ ಅಂತಃಕರಣದಿಂದ ಹೊರಟ ವಿನಯಯುಕ್ತವಾದ ಉದ್ಗಾರಗಳು ಅಧಿಕಾರಿವರ್ಗಕ್ಕೆಲ್ಲಾ ಅನುಕರಣೀಯವಾಗಿರುವವು. ಶ್ರೀ ದೇವರು ಇವರಿಬ್ಬರಿಗೂ ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನೂ ಶ್ರೇಯಸ್ಸನ್ನೂ ದಯಪಾಲಿಸಲಿ. ಟೀಪಾರ್ಟಿಗಳೆಂದರೇನು? ಆ ವಿಷಯ ಉದ್ದ ಉದ್ದ [illegible]ವನ್ನು ವೃತ್ತಪತ್ರಿಕೆಗೆ ಬರೆಯುವದೆಂದರೇನು? ಎಂದು ಪತ್ರಿಕಾ ವಾಚಕರ್ಯಾರೂ ನನ್ನ ಮೇಲೆ ಆಗ್ರಹಪಡಬಾರದು. ಯಾಕೆಂದರೆ ಗುಣಜ್ಞರಾದ ವ್ಯಕ್ತಿಗಳನ್ನು ಟೀಪಾರ್ಟಿ ವಗೈರೆ ಮೂಲಕ ಗೌರವಿಸುವದಾಗಲೀ ಯಾ ಅವರ ಗುಣಗಣಗಳನ್ನು ವೃತ್ತಪತ್ರಿಕೆಗಳಲ್ಲಿ ವರ್ಣಿಸುವದಾಗಲೀ ಅದರ ಉದ್ದೇಶವು— ಅಂಥಾ ಗುಣಗಳಿಗೆ ಸಮಾಜದಲ್ಲಿ ಪ್ರೋತ್ಸಾಹ ಸಿಕ್ಕಿ ಸಮಾಜದ ಅಂಗಗಳಲ್ಲಿ ಅಂಥಾ ಗುಣಗಳು ಅಭಿವೃದ್ಧಿಗೊಳ್ಳಬೇಕು, ಮತ್ತು ಸಮಾಜವನ್ನು [illegible]ಮಯವನ್ನಾಗಿ ಮಾಡಬೇಕೆಂಬುದೇ ಅದರ ಮುಖ್ಯ ಉದ್ದೇಶವು ವಿನಹ ಬರೇ ವ್ಯಕ್ತಿಗೌರವಕ್ಕಾಗಿ ಮಾತ್ರ ಹಾಗೆಮಾಡುವದಲ್ಲ. ಆದುದರಿಂದ ಸೂಕ್ಷ್ಮರಾದ ವಾಚಕರು ಇದನ್ನು ಅಧಿಕಪ್ರಸಂಗವೆಂದು ತಾತ್ಸಾರ ಮಾಡದೆ ನನ್ನನ್ನು ಮನ್ನಿಸುವರಾಗಿ ನಂಬುತ್ತೇನೆ.

ಇಲ್ಲಿಯ ಯೂನಿಯನ್ ಕ್ಲಬ್ಬಿನಲ್ಲಿ ಕಳೆದ ತಿಂಗಳಲ್ಲಿ ಜರುಗಿದ ಜನರಲ್ ಮೀಟಿಂಗಿನಲ್ಲಿ ನಡೆದ ಆಡಳಿತ ಮೆಂಬರರ ಆರಿಸುವಿಕೆಯು ಸಮರ್ಪಕವಾಗಿ ನಡೆಯಲಿಲ್ಲವೆಂತಲೂ, ಆ ಕುರಿತು ಇನ್ನೊಂದು ಜನರಲ್ ಸಭೆಯನ್ನು ಆಮಂತ್ರಿಸಿ ಮೆನೇಜಿಂಗ ಕಮ್ಮಿಟಿಮೆಂಬರರನ್ನು ಆರಿಸಬೇಕೆಂತ ಮೆಂಬರರು ಆಡಿಕೊಳ್ಳುತ್ತಾರೆಂತ [illegible] ಮೆಂಬರರಲ್ಲೊಬ್ಬರು ತಮ್ಮ ಪತ್ರಿಕೆಯಲ್ಲಿ ಬರೆದಿರುವರು. ಆ ವಿಷಯ [illegible] ವರೆಗೆ ನಾನು ಪರಿಶೋಧಿಸಿದ್ದಲ್ಲಿ ಅಂಥಾ ಆಕ್ಷೇಪಗಳು ನನ್ನ ತಿಳುವಳಿಕೆಗೆ ಬರಲಿಲ್ಲ: ಮೆನೇಜಿಂಗ ಕಮಿಟಿಯಲ್ಲಿ ಆರಿಸಲ್ಪಡುವ ಮೆಂಬರರು ತಪ್ಪದೆ [illegible] ಹಾಜರಾಗಿ ಉತ್ಸಾಹದಿಂದ ಕೆಲಸವನ್ನು ಮಾಡುವವರಾಗಬೇಕು. ವಿನಹ ಸಭೆಗೆ [illegible]ರಾಗಲಿಕ್ಕೆ ಸಹ ಅನುಕೂಲವಿಲ್ಲದವರಿಗೆ ಜಾತಿಸಂಖ್ಯೆಯ ದಾಮಾಶಾಯಿ [illegible] ಮೆಂಬರರಾಗಿ ಆರಿಸಲಿಕ್ಕೆ ಅದೇನೂ [illegible] ಮರ್ಯಾದೆಯಲ್ಲ. [illegible] ಕೂಡಾ, ಕೊಡುವವನಿಗೆ ಬಿಡಾ' ಎಂಬ ನ್ಯಾಯದಂತೆ [illegible] ಉತ್ಸಾಹದಿಂದ ಕೆಲಸಮಾಡಲಿಕ್ಕೆ ತನಗೆ ಅನನುಕೂಲವಾದರೂ ಹಾಗೆ ಉತ್ಸಾಹದಿಂದ ಕೆಲಸಮಾಡುವವರ ಮೇಲೆ ಅಲ್ಲದ ಸಲ್ಲದ ದೋಷಾರೋಪಣೆಗಳನ್ನು ಮಾಡಿ ಅಂಥವರಿಗೆ ಸಾರ್ವಜನಿಕ ಕೆಲಸಗಳಲ್ಲಿರುವ ಉತ್ಸಾಹವನ್ನು ಭಂಗಪಡಿಸುವದು— ಅದೊಂದು ತರದ ಪಾಪವೆಂದೇ ಹೇಳಬೇಕು.

ಮಿಸೆಸ್ ಬೆಸೆಂಟ್ ಮತ್ತು ಅವರ ಸಹಕಾರಿಗಳಾದ ಮಿಸ್ಟರ್ ಅರುಂಡೇಲ್ ಮತ್ತು ವಾಡಿಯ ಮೊದಲಾದ ಭಾರತೀಯ ಹಿತೈಷಿಗಳನ್ನು ಇಂಟರ್ನ್‌ಮಾಡಿ ಭಾರತೀಯರ ಹೃದಯದಲ್ಲಿ ತಿರಸ್ಕರಣೀಯವಾಗಿರಿಸಿದ ದಿನವಾದ ತಾ. [illegible] ಇಲ್ಲಿಯ ಸಾಹುಕಾರ್ ಮ। ರಾ। [illegible] ಕಮ್ತಿಯವರ ಮಾಳಿಗೆಯ ಮೇಲೆ ಈ ಊರಿನ ಹಲವು ಗೃಹಸ್ಥರ ಸಭೆಯು ನೆರೆಯಿತು. ಇಲ್ಲಿಯ ಬ್ರಾಹ್ಮಣೇತರ (Non-Brahmin) ಸಂಘದ ಮುಂದಾಳುಗಳೂ ದೊಡ್ಡ ಸುಶಿಕ್ಷಿತ ವರ್ಗದವರೂ ಆದ ಮ। ರಾ। ಎಮ್. ರಾಮಕೃಷ್ಣ ಪುಂಜರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಸಭೆಯಲ್ಲಿ ಇಲ್ಲಿ ಒಂದು ಹೋಮ್ ರೂಲ್ ಲೀಗನ್ನು ಸ್ಥಾಪಿಸುವುದಾಗಿ ನಿರ್ಧರಿಸಿ ಇಂದಿನ ಸಭೆಯ ಅಧ್ಯಕ್ಷರನ್ನು ಪ್ರೆಸಿಡೆಂಟರಾಗಿಯೂ ತಾಲೂಕು ಬೋರ್ಡು ಮೆಂಬರು [illegible] ಭವಾನಿರಾಯರು ಮ। ಮ। ರಾ। ಸುಂದರರಾಯರನ್ನು ಕಾರ್ಯದರ್ಶಿಗಳಾಗಿಯೂ, ಮ। ರಾ। [illegible] ಕಮ್ತಿಯರನ್ನು ಕೋಶಾಧಿಕಾರಿಗಳಾಗಿಯೂ ಆರಿಸಿದರು. ನೆರೆದ ಸಭಿಕರಲ್ಲಿ ಆರು ಜನರು ಆಗಲೇ ಮೆಂಬರರಾಗಿ ಸೇರಿದರು. ಇನ್ನು ಈ ಸಂಘಕ್ಕೆ ಅನೇಕರು ಮೆಂಬರರಾಗಿ ಸೇರುವ ಆತುರದಲ್ಲಿರುವರು.

ಬೆಳ್ತಂಗಡಿ:— ಇದೇ ತಿಂಗಳ ತಾ। ೧೫ರಿಂದ ಮಂಗಳೂರಿನಿಂದ ಬರುವ ಟಪ್ಪಾಲು [illegible] ಮೇಲೆ ಬರುತ್ತದೆ. ಇದು ಜನರಿಗೆ ಬಹಳ ಪ್ರಯೋಜನವೆ ಸರಿ. ಮರುದಿವಸ ಸಿಕ್ಕುವ ಕಾಗದವು ಮುಂಚಿನ ದಿವಸ ಸಾಯಂಕಾಲ ೫ ಘಂಟೆಗೆ ಸಿಕ್ಕುವದರಿಂದ ಜನರಿಗೆ ಬಹಳ ಉಪಕಾರವಾಯಿತು. ಮಂಗಳೂರಿನಿಂದ ೧೦ ಘಂಟೆಗೆ ಟಪ್ಪಾಲು ಘಂಡಿ ಬಿಡುವದರಿಂದ ೧ ಘಂಟೆಗೆ ಬಂಟ್ವಾಳಕ್ಕೆ ತಲ್ಪಿ, ೫ ಘಂಟೆ ಒಳಗೆ ಇಲ್ಲಿಗೆ ತಲ್ಪುತ್ತದೆ. ಇಲ್ಲಿಂದ ಟಪ್ಪಾಲು ಘಂಡಿ ೬½ ಘಂಟೆಗೆ ಬಿಡುತ್ತದೆ. ೧೧ ಘಂಟೆಗೆ ಬಂಟ್ವಾಳಕ್ಕೂ ೨ ಘಂಟೆಗೆ ಮಂಗಳೂರಿಗೂ ತಲ್ಪುವದು.

ಇಲ್ಲಿಯ ಕೋಓಪರೇಟಿವ್ ಸೊಸೈಟಿಯ ವರುಷಾವಧಿಯ ಮೆಂಬರರ ಜನರಲ್ ಮೀಟಿಂಗ್ ಇದೇ ತಿಂಗಳ ೧೫ನೇ ಆದಿತ್ಯವಾರ ಜರಗಿತು. ಪಂಚಾಯತ ಮೆಂಬರರನ್ನು [illegible] ಹೊಸ ಮೆಂಬರರ ನೇಮಕವಾಯಿತು. ಪಟೇಲ್ ಅಪ್ಪುಪೂಜಾರಿಯವರಿಗೆ ಅಧ್ಯಕ್ಷಸ್ಥಾನವು ಮೊಕ್ತಾ [illegible] ಮೆಂಬರರಲ್ಲಿ ಕೆಲವರು ಹೇಳಿದರು. ಆದರೆ [illegible] ಮೆಂಬರರಲ್ಲಿ [illegible] ಅವರಿಗೆ ಆಗ ಕೂಡದಾಗಿ ಬಹಳ ಚರ್ಚೆ ಮಾಡಿದರು. ಸಭೆಯಲ್ಲಿ ಕೆಲವು ಮೆಂಬರರುಗಳು ಈ ಸಮ್ಮಂದ ಸಭೆಯನ್ನು ಬಿಟ್ಟುಹೋಗುತ್ತೇವೆಂದು ಉಳಿದವರು, ಪೂಜಾರಿಗಳಿಗೆ ಬೆಂಬಲಿಸಿದರು. ಈ ಸಭೆಯಲ್ಲಿ ಶೇರು ೧ಕ್ಕೆ ರೂ. ೨೫ ಇದ್ದದನ್ನು ೫೦ಕ್ಕೆ ಏರಿಸಬೇಕಾಗಿಯೂ, ಒಂದು ಪಾಲಿಗೆ ೧ ರೂಪಾಯಿಯಂತೆ ಪ್ರಾವಿಡೆಂಟ್ ಫಂಡಿಗೆ ಕಟ್ಟಬೇಕಾದ ಮೊಬಲಗನ್ನು ೧ಕ್ಕೆ ಮಾಸಿ ವರುಷ ೧ಕ್ಕೆ ಒಂದೊಂದೆ ರೂಪಾಯಿಯಂತೆ ಕಟ್ಟಿ ಕೊಡುವಂತೆ ಪ್ರಾವಿಡೆಂಟ್ ರೂಲನ್ನು ಸಹಾ ಜ್ಯಾರಿಗೆ ತರಬೇಕಾಗಿ ನಿರ್ಧರಿಸಿದೆ. ಅಲ್ಲದೆ, ಈ ಸೊಸೈಟಿಗೆ ಇದ್ದ ೪ ಸಾವಿರ ರೂಪಾಯಿ ಮಿತಿಯನ್ನು ೭ ಸಾವಿರಕ್ಕೆ ಏರಿಸಬೇಕಾಗಿ ನಿರ್ಧರಿಸಲಾಯಿತು. ಬ್ಯಾಂಕಿನಲ್ಲಿ ೪ ಸಾವಿರ ಮಿತಿಯ ವರೆಗೆ ಇದ್ದಾಗ್ಯೂ, ಹಾಲಿ ೩ ಸಾವಿರ ಚಿಲ್ಲರೆ ಮಾತ್ರ ವ್ಯವಹಾರ ಇದ್ದು ಇದು ಕಸುಬೆಯಾಗಿ ಹೆಚ್ಚಿನ ಹಣಗಳು ಬೇಕೆಂಬುದು ಅಗತ್ಯ ಕಂಡುಬಂದದರಿಂದ ೭ ಸಾವಿರಕ್ಕೆ ಏರಿಸುವ ಹಾಗೆ ಏರ್ಪಾಡು ಆಗಿಯದೆ.

ಪತ್ರವ್ಯವಹಾರ.

ಬಾಲಕರ ಶಿಕ್ಷಣದ ವೆಚ್ಚ.

ಪತ್ರಾಧಿಪತೇ,

ಇದರಲ್ಲಿ ಜನರಿಗೆ ಉಪಯುಕ್ತವಾದ ಆಧುನಿಕ ವಿಜ್ಞಾನದ ವಿಷಯಗಳು, ಸಾಮಾನ್ಯ ಜನರಿಗೆ ತಿಳಿಯುವಂತೆ, ಸುಲಭವಾದ ಕನ್ನಡದಲ್ಲಿ ಸ್ವಾರಸ್ಯವಾಗಿ, ಅನೇಕ ಚಿತ್ರಗಳೊಡನೆ ವಿವರಿಸಲ್ಪಡುವುವು. ಸಂಚಿಕೆಗೆ ೩೨ ಪುಟಗಳು. ಈ ವರುಷದ ಚೈತ್ರಮಾಸ ಮೊದಲ್ಗೊಂಡು ಹನ್ನೆರಡು ಸಂಚಿಕೆಗಳಿಗೆ, ಚಂದಾ ಮೊಬಲಗು, ಮೂರು ರೂಪಾಯಿಗಳು. ಅಪೇಕ್ಷಿಸಿದಲ್ಲಿ ಮಾದರಿ ಪುಟಗಳನ್ನು ಉಚಿತವಾಗಿ ಕಳುಹಿಸುವೆವು.

ಪಿ. ವೆಂಕಟನಾರಣಪ್ಪ, ಎಂ. ಎ.,
ಮ್ಯಾನೇಜರ್, "ವಿಜ್ಞಾನ",
[illegible]

ಒಳ್ಳೆ ಗೊಬ್ಬರ! ಅವ್ವಲ್ ಈಟು!!

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಭತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಒಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾಗುವಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೋಮಿಯೊಪತಿ, ಟಿಸ್ಯು ಸ್ಪೆಸಿಫಿಕ್, ಇಲೆಕ್ಟ್ರೊ ಹೋಮಿಯೊಪತಿ ವ ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೋಮಿಯೊಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
ಧರ್ಮಸ್ಥಳ.

ಕರ್ಣಿಕ ಜ್ವರಮುಕ್ತ — Karnik's Ague Mixture.

ಚಳಿಜ್ವರ, ಮಲೆರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಪೆನೋ-ವಿನ್:— ಕೋಲರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು:— ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ.

ಕರ್ಣಿಕ ಬ್ರದರ್ಸ್,
[illegible]

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಪತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು
ಇತರರಿಂದ ಏಕೆ ಪಡೆಯಬೇಕು?
ಬಾಟ್ಲಿ 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು

ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನಮ್ಮ ಅನುಭವಸಿದ್ಧವಾದ
ಗಜಕರ್ಣದ ಮುಲಾಮು.
ಡಬ್ಬಿ 1ಕ್ಕೆ ಆಣೆ 6.

ಮಕ್ಕಳ ಎಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಕಾರ ಬೀದಿ, ಮಂಗಳೂರು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಲೋ. ಸೆ. ಟೆಕ್ಸ್ಟು 4 ಆಣೆ, ಡಿಟೋ ನೋಟ್ಸು ಮ್ ವೆಂಕಟ ಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟು 2½ ಆಣೆ, Rama & Sita 4 as., (Do Notes 6 as., General Eng. Questions & Answers from 1901-1917 6 as., by Mr. Piphamuttu, B. A.,) Gen. English by Mr. Chennakesariah Rs. 1-2-0, ಭೂಮಿಕೆ 1 5 ಆಣೆ, ಡಿಟೋ IIನೇದು 5 ಆಣೆ, ಪ್ರಶ್ನೋತ್ತರ ಲೇಖ್ಯಬೋಧಿನಿ ರೂ. 1-8-0, ನವೀನ ಗಣಿತ 8 ಆಣೆ, [illegible] 10½ ಆಣೆ, [illegible] 1ನೇ [illegible] 5 ಆಣೆ, ಡಿಟೋ 2ನೇದು 7 ಆಣೆ, ಡಿಟೋ 3ನೇದು 8½ ಆಣೆ, ಡ್ರಿಲ್ ಪುಸ್ತಕ 2½ ಆಣೆ, ಮಕ್ಕಳ ತಿದ್ದುಪಡಿ 13 ಆಣೆ, ಲೇಖ್ಯಬೋಧಿನಿ 8½ ಆಣೆ, ಲೇಖನ ಲಕ್ಷಣ 5 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

[illegible] ರೂ. 2—3—0.

[illegible]

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

Authorised Capital Rs.	...	300,000—0—0
Issued Capital	...	225,000—0—0
Subscribed Capital	...	225,000—0—0
Paid up Capital	...	201,775—0—0
Deposits	...	310,261—3—10
Reserve Fund	...	50,003—2—5

25% of the net profits are added annually to the Reserve Fund. Rs. 27,349—11—2 have been invested in Government Paper

Dividends of not less than 6% paid during the past years and a bonus of 1% to 2% paid in addition during the last eight years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5, 5½% and 6% respectively at the discretion of the managing committee.

Short-notice Deposits requiring one week's notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges

Canara Bank Ltd.,

Mangalore, 1st July 1917.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

ನಿಯಮಿತ ಮೂಲ ಧನವು	ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	201,775—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		310,261—3—10
ರಕ್ಷಿತ ಧನವು		50,003—2—5

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 27,349—11—2 ಸಂಕಾರದ ರೂ. 30,800ರ ಪ್ರಾಮಿಸರಿ ನೋಟುಗಳಲ್ಲಿ ಠೇವಣಾತಿ ಮಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಳೆದ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ನಿಯಮಿತ ಠೇವಣಾತಿಗೆ ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮೇಲ್ಪಟ್ಟ ಮೊಬಲಗು ಮೆನೇಜಿಂಗ್ ಕಮಿಟಿ ಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚ ನಾ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿ ಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿ ದಾರರ ಅನುಕೂಲತೆಗಾಗಿ ದೇಂತನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಗುವುದು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,
Secretary.

ಪಂಡಿತ ಎಂ. ಎಸ್. ಯವರ ಮದರಾಸ್ ಪುಡಿ ನಶ್ಯ.

ಈ ನಶ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ ಪುಡಿಯನ್ನು ಉಪಯೋಗಿಸುವುದರಿಂದ ಪೀನಾಸಿ, ಅರತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣ ಮಾಡುವದು. ಈ ನಶ್ಯವು ಬೇರೆಯವರ ನಶ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮಿದುಳನ್ನು ಕೆಡಿಸುವದಿಲ್ಲ. ಈ ನಶ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5 ಆಣೆ.

ಒಂದೇಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್. ಸಿಟಿ. ಬಾಬು ಕಂಪನಿ,
ನಂಬ್ರ 7-2ನೇ ನಾರಾಯಣ ಬೀದಿ, ಪಿಂಟ್ ಬಿಲ್ಡಿಂಗ್ ಮದ್ರಾಸ್.

ಪ್ಲೇಗನ್ನು ನಿರ್ಮೂಲನಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಪ್ಲೇಗನಿವಾರಕ. ಪ್ಲೇಗಿನ ಕಾಲದಲ್ಲಿ ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಸಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಾಖ್ಯ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಸಾಜು ಆಣೆ 6. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಪಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:—"ಪಂಡಿಟ್" ಮದರಾಸ್.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಶನ್!!

ನವಮಾಲಿಕಾ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಘೃತ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠರೋಗ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 10 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮನಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಆವಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಪ್ರಸೂತಿ ಮಾತ್ರೆ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ಪಬಾಕ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಗ್ನಿತುಂಡ. ಇದು ವಾಯು ಮುಸ್ಸಾನ್ ಎಂಬ ಒಂದು ರೋಗಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೆಪಲ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಔಷಧಗಳು ಸಿದ್ಧವಾಗಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಿಸಾ ಹೇರ್ ಆಯಿಲ್ ,,	1—0—0
ವನ ನಾಗಕೇಶರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಲಿನ ,,	0—10—0
ಇಂದಿರಾ ದ್ವಿ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರತುಲೆ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾನಾಥ ,, ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ವಿದ್ಯಾ ನೀತಿ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಶ್ರಮ ,,	1—2—0
ಚಂದ್ರವದನಾ	0—10—0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18×28	0—1—0

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:— ದಿ. ಯುನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಯೂರೋಪದ ಮಹಾ ಯುದ್ಧ.

ಮ್ಯೂಸ್ ನದಿಯ ಎಡತೀರದಲ್ಲಿ ವೂಶ್ಚೇ ಮತ್ತು ಕ್ವಾನೋನ್ ಪ್ರದೇಶಗಳಲ್ಲಿ ಜರ್ಮನರು ಒಂದು ದಿನದ ವರೆಗೆ ಭಯಂಕರವಾದ ರೀತಿಯಲ್ಲಿ ಫಿರಂಗಿ ಗುಂಡುಗಳನ್ನು ಹಾರಿಸುತ್ತ ಸೆಂಟ್‌ಮೈಂಟಿನನ ದಕ್ಷಿಣ ಭಾಗದಲ್ಲಿ ಫ್ರೆಂಚರ ಮೇಲೆ ಬಿದ್ದು ಅವರ ಖಾಳ್ಯದ ಮೊದಲನೆ ಸಾಲನ್ನು ವಶಮಾಡಿಕೊಂಡರು. ಆದರೆ ಫ್ರೆಂಚರು ಪುನಃ ಸೈನ್ಯ ಜತೆಗೂಡಿಸಿ ಅವರ ಮೇಲೆ ಬಿದ್ದು ಅವರು ಹಿಡಿದ ಕೆಲವಂಶವನ್ನು ಬಿಡಿಸಿಕೊಂಡರು. ಎಪೋಕೋರ್ಟ ಎಂಬಲ್ಲಿ ಜರ್ಮನರ ಪ್ರಯತ್ನವು ಕೈಸಾಗಲಿಲ್ಲ.

ಪಶ್ಚಿಮ ರಣರಂಗದ ಕರಾವಳಿ ಭಾಗದಲ್ಲಿ ಇಸಾರ್‌ನಿಂದ ಲಾಬೆಸ್ಸೆ ಕಾಲುವ ವರೆಗೆ ಫ್ರೆಂಚರು ಜರ್ಮನರ ಮೇಲೆ ಬಿದ್ದು ಅವರ ಖಾಳ್ಯದೊಳಗೆ ಕೆಲವಂಶಕ್ಕೆ ಹೊಕ್ಕರು.

ಲೋಂಬಾರ ಜಾಯ್ಸಿನ ದಕ್ಷಿಣದಲ್ಲಿ ಇಂಗ್ಲಿಷರ ಖಾಳ್ಯದ ಒಂದು ಭಾಗದಲ್ಲಿ ಜರ್ಮನರು ಬಹು ಪ್ರಯತ್ನದಿಂದ ಪ್ರವೇಶಮಾಡಿದರು; ಆದರೆ ಅಲ್ಲಿ ಹೆಚ್ಚು ಸಮಯ ನಿಲ್ಲಲಿಕ್ಕೆ ಅವರಿಗೆ ಇಂಗ್ಲಿಷರ ಏಟುಗಳು ಬಿಡಲಿಲ್ಲ.

ಇಸೊಂಜೊ ಮತ್ತು ಕಾರ್ಸೋ ಪ್ರದೇಶಗಳಲ್ಲಿ ಆಸ್ಟ್ರಿಯನರ ಸೈನ್ಯದ ಕೆಲವಂಶವು ಹಿಂದಕ್ಕೆ ಕಳುಹಿಸಲ್ಪಡುವುದು ಕಂಡುಬಂದಿದೆ ಎಂದೂ ಇದರಿಂದ ಈ ಸೈನ್ಯವು ರುಶ್ಯದಲ್ಲಿ ನಡೆಯುವ ಯುದ್ಧ ಸೈನ್ಯದ ಸಹಾಯಾರ್ಥವಾಗಿ ಹೋಗುತ್ತದೆಂದೂ ತಂತೀ ವರ್ತಮಾನವು ತಿಳಿಸುತ್ತದೆ.

ರುಶ್ಯದಲ್ಲಿ ಈಗ ರಾಜಕಾರ್ಯ ನಡೆಸುವ ಅಧಿಕಾರಕ್ಕೆ ವಿರೋಧವಾಗಿ ಸೈನ್ಯದ ಒಂದು ಅಂಶವು ಗಲಭೆ ಎಬ್ಬಿಸಿದರು. ಈ ಮೊದಲು ದಂಗೆ ಎದ್ದ ಸೈನ್ಯವನ್ನು ಡಿಸ್‌ಮಿಸ್ ಮಾಡಿದ್ದು ಇದಕ್ಕೆ ಕಾರಣವಂತೆ. ಈ ಗಲಭೆಯು ಕೆಲವರಿಗೆ ಪೆಟ್ಟು ಬೀಳಲಿಕ್ಕೂ ಎಡೆಕೊಟ್ಟಿತು. ಸೈನ್ಯದ ಮತ್ತು ಕಾಯಕಷ್ಟ ವ್ಯಕ್ತಿಯವರ ಪ್ರತಿನಿಧಿ ಸಭೆಯ ಕಾರ್ಯನಿರ್ವಾಹಕರು ಈ ಗಲಭೆಯ ದುರಾಭಿಲಾಷೆಯನ್ನು ಖಂಡಿಸಿ ಪ್ರಕಟನೆಗಳನ್ನು ಕೊಟ್ಟಿರುವರು.

ರುಶ್ಯದ ಗವರ್ನಮೆಂಟಿನ ಕೆಬಿನೆಟ್ ಸಭೆಯವರು (ಕಾರ್ಯನಿರ್ವಾಹಕರು) ಪೆಟ್ರೋಗ್ರೇಡನ್ನು ಬಿಟ್ಟು ಮೊಸ್ಕೋವನ್ನು ತಾತ್ಕಾಲಿಕ ರಾಜಧಾನಿಯಾಗಿ ಮಾಡಿ ಅಲ್ಲಿ ರಾಜಕೀಯ ಕೆಲಸಗಳನ್ನು ನಿರ್ವಹಿಸಬೇಕೆಂದು ಆಲೋಚಿಸುತ್ತಿರುವರಂತೆ.

ಜರ್ಮನರಿಗೆ ಪರರಾಜ್ಯದ ಕಾಂಕ್ಷೆ ಇಲ್ಲವೆಂತಲೂ ತಮ್ಮ ಸ್ವಾತಂತ್ರ್ಯ, ತಮ್ಮ ವಸಾಹತುಗಳ ಭದ್ರತೆ, ಇತರ ಚಿಕ್ಕದೊಡ್ಡ ಜನಾಂಗಗಳೊಡನೆ ರಾಜಿ, ಎಲ್ಲಾ ಕಡಲುಗಳ ಮೇಲೆಯೂ ನಿರಾತಂಕವಾಗಿ ಚಲಾವಣೆಯ ಹಕ್ಕು ಸಿಕ್ಕುವಂತೆ ತಾವು ಈ ಯುದ್ಧಕ್ಕೆ ಕೈಹಾಕಿರುವೆವೆಂತಲೂ ಈಗ ಶತ್ರುಗಳಾಗಿರುವವರು ತಮಗೆ ಹೆದರಿಸುವುದನ್ನು ನಿಲ್ಲಿಸುವ ತನಕ ತಾವು ಯುದ್ಧದಿಂದ ಕೈ ಹಿಂದೆಗೆಯುವುದಿಲ್ಲವೆಂತಲೂ ಜರ್ಮನ್ ಪಾರ್ಲಮೆಂಟಿನಲ್ಲಿ ಠರಾವಾಯಿತು.

ಯುಫ್ರೆಟಿಸ್ ನದಿಯ ಮೇಲಿರುವ ದಮೂನಿಯಾ ಎಂಬಲ್ಲಿ ತುರ್ಕರನ್ನು ಯುದ್ಧದಲ್ಲಿ ಹಿಮ್ಮೆಟ್ಟಿಸಿ ಬ್ರಿಟಿಷ ಸೈನ್ಯವು ಕಳೆದ ೧೦ ದಿನಗಳಲ್ಲಿ ೧೨ ಮೈಲು ಮುಂದರಿಸಿತೆಂದು ತಿಳಿದುಬರುತ್ತದೆ.

ಇಟಲಿಯ ಯುದ್ಧವಿಮಾನಗಳು ಪೋಲಾ ಎಂಬ ಊರಿನಮೇಲೆ ಸಿಡಿಮದ್ದನ್ನು ಚೆಲ್ಲಿದ್ದಲ್ಲದೆ ೧೮ ವಿಮಾನಗಳು ಡ್ಯುರಾಜೊ ಎಂಬಲ್ಲಿ ಬಹಳ ಹಾವಳಿಯನ್ನುಂಟುಮಾಡಿದುವು.

ವೆನ್‌ಗಾರ್ಡ ಎಂಬ ಇಂಗ್ಲಿಷರ ಯುದ್ಧನಾವೆಯು ಮುಳುಗಿಹೋಗಿ ೮೦೪ ಮಂದಿ ಸತ್ತರು.

ನೋರ್ತ್‌ಸೀ ಸಮುದ್ರದಲ್ಲಿ ಓಡಾಡುತ್ತಿರುವ ೬ ಜರ್ಮನ ಹಡಗುಗಳ ಪೈಕಿ ೩ ನಾದುರುಸ್ತಾಗಿ ಡಚ್ಚ ತೀರವನ್ನು ಸೇರಿದುವು. ಉಳಿದ ೮ನ್ನು ಸೆರೆಹಿಡಿದು ಇಂಗ್ಲೆಂಡಿಗೆ ತಂದರು.

ಜೀಬ್ರೂಜಿನ ಮೇಲೆ ಹಲವು ಟನ್ ಸಿಡಿಮದ್ದಿನ ಮಳೆಯನ್ನು ಇಂಗ್ಲಿಷರ ವಿಮಾನಗಳು ಚೆಲ್ಲಿದುವು.

ರೀಗಾ ಮತ್ತು ಡ್ವಿನ್‌ಸ್ಕ್ ಎಂಬಲ್ಲಿ ಯುದ್ಧವು ಜರ್ಮನರಿಗೂ ರುಶ್ಯನರಿಗೂ ಜೋರಾಗಿ ನಡೆಯುತ್ತಲಿದೆಯಂತೆ.

ಕಾಲೂಸಜ ಎಂಬ ಊರಿನ ಈಶಾನ್ಯದಲ್ಲಿ ಜರ್ಮನರು ರುಶ್ಯರನ್ನು ಹಿಂದಕ್ಕೆ ಲೊಮ್ನೀಕಕ್ಕೆ ಓಡಿಸಬೇಕೆಂದು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ.

ಆದರೆ ಲೊಛಯಾನಿ ಎಂಬಲ್ಲಿ ಒಸ್ಟ್ರಿಯರು ಒಂದು ಸಲ ಹಿಮ್ಮೆಟ್ಟಿದರೂ ತಂಡತಂಡವಾಗಿ ಹೊಸ ಸೈನ್ಯವನ್ನು ತಂದು ಮೇಲೆ ಬಿದ್ದದರಿಂದ ರುಶ್ಯದವರು ಸ್ವಲ್ಪ ಹಿಂಜರಿಯಬೇಕಾಯಿತು.

ಗುನಿಕಾಖಾನೆ ಎಂಬಲ್ಲಿ ತುರ್ಕಿಯರು ಮೂರು ಸಲ ರುಶ್ಯದಮೇಲೆ ಬಂದು ಬಿದ್ದರೂ ಹಿಮ್ಮೆಟ್ಟಬೇಕಾಯಿತು. ಹೀಗಾಗಿ ಅವರು ಪೆಂಡಜಿವಿನ್ ಎಂಬಲ್ಲಿಗೆ ಹೋಗುವ ಅಭಿಲಾಷೆಯು ಕೊನೆಗಾಣಲಿಲ್ಲ.

ನಮ್ಮ ಚಕ್ರವರ್ತಿಗಳೂ ಚಕ್ರವರ್ತಿನಿಯವರೂ ಫ್ರಾನ್ಸಿನ ಪಶ್ಚಿಮ ಯುದ್ಧರಂಗಕ್ಕೆ ಹೋಗಿ ಅಲ್ಲಿಯ ಯುದ್ಧದ ಸ್ಥಿತಿಯನ್ನು ನೋಡಿ ಪೂರ್ಣ ಸಮಾಧಾನಪಟ್ಟು ಬಂದಿರುವರು.

ಬೆಲ್ಜಿಯಮ್ ಕರಾವಳಿಯಿಂದ ಒಳಪ್ರಾಂತ್ಯದವರೆಗೆ ತೋಫುಗಳ ಕಠಿಣವಾದ ನಾದವು ಕೇಳಿಸುತ್ತಲೇ ಇದೆ. ಆಗಾಗ ಬ್ರಿಟಿಷ ಯುದ್ಧವಿಮಾನಗಳು (ಒಂದೊಂದು ಸಲ ೩೦) ಜೀಬ್ರೂಜ ಮುಂತಾದ ಸುರಕ್ಷಿತಪಡಿಸಿದ ಸ್ಥಳಗಳಮೇಲೆ ಸಿಡಿಮದ್ದನ್ನು ಚೆಲ್ಲುತ್ತಲೇ ಇವೆ. ಮೆಸ್ಸಿನೆಯ ಈಶಾನ್ಯಕ್ಕೆ ಇಂಗ್ಲಿಷರು ಸ್ವಲ್ಪ ಮುಂದೊತ್ತುತ್ತಲೇ ಇದ್ದಾರೆ.

ಫ್ರೆಂಚರ ಖಾಳ್ಯವಿದ್ದ ಕಡೆಯಲ್ಲಿ ಯುದ್ಧವು ಜೋರಾಗಿ ನಡೆಯುತ್ತಲೇ ಇದೆ. ಜರ್ಮನರು ಎಮೆನ್ ಗುಡ್ಡದ ಬಳಿಯಲ್ಲಿಯೂ ಫ್ರೆಂಚರು ಚೆಂಪೆನದಲ್ಲಿಯೂ ಸಾಹಸಗಳನ್ನು ಮಾಡುತ್ತಿರುವರು. ಸರ್ನೆ ಎಂಬಲ್ಲಿ ಫ್ರೆಂಚರು ೫೦೦ ಗಜ ಹಿಂದಕ್ಕೆ ಬರಬೇಕಾಯಿತು. ಇಲ್ಲಿಯೂ ಚೆಂಪೆನದಲ್ಲಿಯೂ ಒಂದು ಸಲ ಫ್ರೆಂಚರೂ ಒಂದು ಸಲ ಜರ್ಮನರೂ ಹಿಮ್ಮೆಟ್ಟುತ್ತಲಿದ್ದಾರೆ.

ರೀಮ್ಸ್ ಕಡೆಗೆ ಜರ್ಮನರು ತೋಫುಗಳನ್ನು ಹಾರಿಸುತ್ತಲೇ ಇದ್ದಾರೆ.

ರುಶ್ಯರು ಲೊಮ್ನಿಟ್ಸಾ ಮತ್ತು ಡೀಸ್ಟರ್ ನದಿಗಳ ಸಂಗಮದಲ್ಲಿ ಆ ನದಿಗಳನ್ನು ದಾಟಿ ಮುಂದರಿಸಿ ಹಾಲಿಚಾ ಎಂಬಲ್ಲಿಗೆ ೧೫ ಮೈಲು ಆಗ್ನೇಯಕ್ಕಿರುವ ಒಂದು ಬಲವಾದ ಸ್ಥಳವನ್ನು ಹಿಡಿದರು. ರುಶ್ಯರು ಈ ಸಲ ಮುಂದರಿಸಲು ಆರಂಭಿಸಿದನಂತರ ೩೮,೦೦೦ ಜನರನ್ನೂ ೯೩ ಫಿರಂಗಿಗಳನ್ನೂ ಹಿಡಿದರು.

ಈ ಮೊದಲು ಹಿಡಿದ ಕೆಲೂಸನ್ನು ಕಾರಣಾಂತರದಿಂದ ಬಿಟ್ಟುಕೊಟ್ಟು ರುಶ್ಯರು ಲೊಮ್ನಿಟ್ಸಾ ನದಿಯ ಬಲದಡಕ್ಕೆ ಸೇರಿದರು. ಕೈತಪ್ಪಿಹೋದ ಕೋಪೆಚಿ ಎಂಬ ಊರನ್ನು ರುಶ್ಯರು ಪುನಃ ಹಿಡಿದರು.

ಬ್ರಿಟಿಷರ ೧೬೦೦ಕ್ಕೆ ಮಿಕ್ಕಿದ ೧೪ ಹಡಗುಗಳೂ ೧೬೦೦ಕ್ಕೆ ಕಡಿಮೆಯಾದ ೪ ಹಡಗುಗಳೂ ಕಡಲುಪಾಲಾದವು. ೮ ಬೆಸ್ತರ ಹಡಗುಗಳೂ ಮುಳುಗಿಹೋದವು.

[illegible]

ಎಯಿಸ್ನೆಯ ಉತ್ತರಭಾಗದಲ್ಲಿ ಜೋರಾಗಿ ಯುದ್ಧ ನಡೆಯುತ್ತದೆ. ಒಂದೆರಡು ಕಡೆಗಳಲ್ಲಿ ಇಂಗ್ಲಿಷರು ಶತ್ರುಸೈನ್ಯದ ಖಾಳ್ಯವನ್ನು ಒಳನುಗ್ಗಿ ಕೆಲವು ಪ್ರದೇಶಗಳನ್ನು ಹಿಡಿದರು.

ಜುಲಾಯಿ ೨೨ನೆ ತಾರೀಕಿಗೆ ಜರ್ಮನರ ಸುಮಾರು ೧೫ರಿಂದ ೨೦ ವರೆಗಿನ ಯುದ್ಧವಿಮಾನಗಳು ಇಂಗ್ಲೆಂಡಿನ ಫೆಲಿಕ್ಸ್‌ಟೊ ಮತ್ತು ಹಾರ್ವಿಚ್ ಪಟ್ಟಣಗಳ ಮೇಲೆ ಬೆಳಗ್ಗೆ ೮ ಗಂಟೆಗೆ ಸಂಚರಿಸ ತೊಡಗಿ ಸಿಡಿಮದ್ದನ್ನು ಚೆಲ್ಲಿದುವು. ಅಷ್ಟರೊಳಗೆ ಬ್ರಿಟಿಷರ ಫಿರಂಗಿಗಳು ಸಿದ್ಧವಿದ್ದರಿಂದ ಈ ಯುದ್ಧವಿಮಾನಗಳು ಎರಡು ಗುಂಪಾಗಿ ಚೆದರಿ ಒಂದು ನೆಟ್ಟಗೆ ಸಮುದ್ರವನ್ನು ದಾಟಿ ಹಿಂದೆ ಸರಿಯಿತು. ಇನ್ನೊಂದು ದಕ್ಷಿಣಕ್ಕೆ ಎಸೆಕ್ಸ್ ಕಡೆಗೆ ಹೋಯಿತು. ನಮ್ಮ ವಿಮಾನಗಳು ಮೇಲೆ ಎದ್ದು ಅದನ್ನು ಓಡಿಸಿಬಿಟ್ಟವು. ೮ ಮಂದಿ ಸತ್ತರು; ೨೯ ಮಂದಿಗೆ ಗಾಯ ತಗಲಿತು.

ಹೊಲ್ಲೆಂಡಿನ ಅಧಿಕಾರಕ್ಕೆ ಸಂಬಂಧಪಟ್ಟ ಸಮುದ್ರಭಾಗದಲ್ಲಿ ಕೆಲವು ಜರ್ಮನ್ ಹಡಗುಗಳನ್ನು ಹಿಡಿದು ಬ್ರಿಟಿಷರು ತಮ್ಮ ಬಂದರುಗಳಿಗೆ ಕೊಂಡು ಹೋಗಿದ್ದರು. ಅದು ಇಂಟರ್‌ನೇಶನಲ್ ಲೊ (ಪರರಾಜ್ಯಗಳೊಡನೆ ವ್ಯವಹಾರದ ಕಾನೂನು) ಮೇರೆಗೆ ವಿರೋಧವೆಂದೂ ಅಂಥ ತಪ್ಪಿಗೋಸ್ಕರ ತಕ್ಕ ಪ್ರಾಯಶ್ಚಿತ್ತ ಕೇಳಬೇಕೆಂದೂ ಜರ್ಮನರು ಹೊಲ್ಲೆಂಡಿನವರಿಗೆ ಒತ್ತಾಯಪಡಿಸಿದ್ದರಿಂದ ಅವರು ಬ್ರಿಟಿಷ ಗವರ್ನಮೆಂಟಿನವರಿಗೆ ಆ ವಿಷಯವಾಗಿ ಸೂಚನೆ ಮಾಡಿರುವರು.

ಕಾಲುಸಜ್ ಎಂಬಲ್ಲಿ ರುಶ್ಯರ ಒಂದು ರೆಜಿಮೆಂಟು ಹಿಂದೆ ಸರಿಯುತ್ತಿರುವಾಗ ಅವರಿಗೆ ಸಹಾಯಕ್ಕಾಗಿ ಜನರಲ್ ಪ್ರಿನ್ಸ್ ಗೆರೀನನು ಸೈನ್ಯವನ್ನು ತಂದಿದ್ದರಿಂದ ಹಿಮ್ಮೆಟ್ಟಲಿಕ್ಕಿದ್ದವರು ಮೇಲೆ ಬಿದ್ದು ಜರ್ಮನ ಮತ್ತು ಆಸ್ಟ್ರಿಯನ್ ಸೈನ್ಯವನ್ನು ಚೆದರಿಸಿಬಿಟ್ಟರು.

ಇಟಲಿಯವರು ಹಲವು ಸುರಂಗಗಳನ್ನು ಅಗೆದು ಅವುಗಳಲ್ಲಿ ತೋಟೆಗಳನ್ನು ತುಂಬಿಸಿ ಪರ್ನಾಕ್ ಎಂಬಲ್ಲಿ ಒಸ್ಟ್ರಿಯನರನ್ನು ಹಿಂದಕ್ಕೆ ಅಟ್ಟಿದರು.

ಪ್ರಿನ್ಸ್ ಲಿಯೊಫರ ರುಶ್ಯರ ಮುಖ್ಯ ಮಂತ್ರಿತ್ವಕ್ಕೆ ರಾಜಿನಾಮೆ ಕೊಟ್ಟು ಕಾರಣ ಕೆರೆನ್‌ಸ್ಕಿಯವರೇ ಈಗ ಆ ಚಾರ್ಜು ನೋಡುತ್ತಾರೆ. ಅವರನ್ನು ಕೊಲ್ಲಲಿಕ್ಕೆ ಪೊಲೊಕ್ಸ ಎಂಬಲ್ಲಿ ಒಬ್ಬ ಗುಂಡನ್ನು ಸುಟ್ಟನಾದರೂ ದೈವವಶಾತ್ ಅದು ತಪ್ಪಿಹೋಯಿತು.

ಇನ್ನೊಮ್ಮೆ ಕ್ರಾಂತಿಯನ್ನುಂಟುಮಾಡಲಿಕ್ಕೆ ಪ್ರಯತ್ನಿಸಿದ ಲೆನಿನನು ತನ್ನ ಪ್ರಯತ್ನ ಕೈಸಾಗದೆ ಹತಾಶನಾಗಿ ಒಬ್ಬ ನಾವಿಕನ ವೇಷಧರಿಸಿ ತಲೆತಪ್ಪಿಸಿ ಹೋಗಿರುವನು.

ರುಶ್ಯದ ವಾಯವ್ಯಭಾಗದಲ್ಲಿರುವ ಫಿನ್‌ಲೆಂಡಿನ ಪಾರ್ಲಮೆಂಟು ತಮಗೆ ಸ್ವತಂತ್ರ ರಾಜ್ಯಪರಿಪಾಲನದ ಹಕ್ಕು ಸಿಕ್ಕುವಂತೆ ಒಂದು ಕಾಯಿದೆಯನ್ನು ಮಂಜೂರು ಮಾಡಿತು.

ರುಶ್ಯದ ಪೈಕಿ ಇಲಾಖೆಯ ಮಂತ್ರಿಯೂ ರಾಜಿನಾಮೆ ಕೊಟ್ಟಿರುವನು. ಯುದ್ಧರಂಗದಿಂದ ಸೈನ್ಯದ ಒಂದು ಭಾಗವು ಪೆಟ್ರೊಗ್ರೇಡಿಗೆ ಬಂದಿರುವುದು.

ಸ್ಮೊರ್ಗನ್ ಬಳಿಯಲ್ಲಿ ಜರ್ಮನ್ ಫಿರಂಗಿಗಳ ನಾದವು ಕೇಳಿಸುತ್ತದೆಂದು ತಿಳಿದುಬರುತ್ತದೆ.

ಮಿ॥ ಕೆರೆನ್‌ಸ್ಕಿಯು ಯುದ್ಧರಂಗದಿಂದ ಪೆಟ್ರೊಗ್ರೇಡಿಗೆ ಬಂದಾಗ ಅಲ್ಲಿಯ ಗಲಭೆಯನ್ನು ನೋಡಿ ಪೆಟ್ರೊಗ್ರೇಡಿನ ಗವರ್ನರನನ್ನು ಕೆಲಸದಿಂದ ನಿವೃತ್ತಿಪಡಿಸಬೇಕೆಂದಿದ್ದನು. ಆದರೆ ಕಡೆಗೆ ಕೆಲವು ಮಂತ್ರಿಗಳ ಅಸ್ಪಷ್ಟತೆಯೇ ಇದಕ್ಕೆ ಕಾರಣವಾಗಿರಬಹುದೆಂದು ತಿಳಿದು ಆ ಗವರ್ನರನಿಗೆ ರಿಯಾಯತಿಮಾಡಿ, ದಂಗೆ ಎದ್ದ ರೆಜಿಮೆಂಟುಗಳನ್ನು ಮುರಿದು ಅದರಲ್ಲಿ ಪ್ರಮುಖರಾದವರಿಗೆ ನಿಲಿಟರಿ ಕೆಲಸದಿಂದ ತೆಗೆದುಹಾಕಿದನು. ಕೆಲವರ ಮನೆಗಳನ್ನು ಶೋಧಿಸಿದಾಗ ಜರ್ಮನರಿಂದ ಈ ಗಲಭೆಗೆ ಒಳ್ಳೆತನ್ನು ಬಯಸಿ ಬರೆದ ಪತ್ರಗಳು ಸಿಕ್ಕಿದುವು. ಜರ್ಮನರ ಒಳಸಂಚಿಗೆ ಸೇರಿದ್ದಾಗಿ ಗುಮಾನಿಸಿದವರನ್ನೆಲ್ಲ ಸೆರೆಹಿಡಿದಿರುವರು.

ವಿಲಾಯತಿಯ ಮಹಾ ಮಂಡಲದಲ್ಲಿ ಅಮೇರಿಕದ ಯುನೈಟೆಡ್ ಸ್ಟೇಟ್ಸಿನವರು ಮಿತ್ರಮಂಡಳಿಯವರ ಪರವಾಗಿ ಯುದ್ಧಕ್ಕೆ ಸೇರಿದ್ದು ತಮಗೆ ವಿಶೇಷ ಬಾಧಕಕರವಲ್ಲವೆಂದು ಜರ್ಮನ ಮುಖ್ಯ ಮಂತ್ರಿಯಾದ ಡಾ॥ ಮಾಯ್ಕೆಲಿಯವರು ಜರ್ಮನ್ ರೀಕ್‌ಸ್ಟೆಗ್ (ಪಾರ್ಲಮೆಂಟ)ನಲ್ಲಿ ಬಹಳವಾಗಿ ಹೇಳಿದರು. ಅಂಥ ಸೈನ್ಯವನ್ನು ಅಮೇರಿಕದಿಂದ ಯುದ್ಧರಂಗಕ್ಕೆ ಸಾಗಿಸಲಿಕ್ಕೆ ಎಷ್ಟು ಹಡಗುಗಳು ಬೇಕಾಗಲಿಕ್ಕು ಎಂಬುದು ಮಿತ್ರಮಂಡಳಿಯವರು ಚೆನ್ನಾಗಿ ಆಲೋಚಿಸಬೇಕಾದ ವಿಷಯವೆಂತಲೂ ಈ ರೀತಿಯಾಗಿ ಸಾಗಿಸುವುದು ಸುಲಭಸಾಧ್ಯವಲ್ಲವೆಂತಲೂ ಅವರ ಅಭಿಪ್ರಾಯ. ಫ್ರಾನ್ಸ್ ಇಂಗ್ಲೆಂಡ ದೇಶದ ಸೈನ್ಯಗಳಿಗೆ ಬೇಕಾದ ಆಹಾರವನ್ನು ಒದಗಿಸುವುದೇ ಈ ಮಿತ್ರಮಂಡಳಿಯವರಿಗೆ ಕಷ್ಟಸಾಧ್ಯವಾದ ಕೆಲಸವೆಂದೂ ತಮ್ಮ ನಂಬಿಕೆಯಾಗಿ ಡಾ॥ ಮಾಯ್ಕೆಲಿಯವರು ತಿಳಿಯುತ್ತಾರೆ. ಈ ಯುದ್ಧದಲ್ಲಿ ಕೈಹಾಕಿದಾಗ ರಾಜ್ಯವಿಸ್ತಾರವೇ ಉದ್ದೇಶವಾಗಿರಲಿಲ್ಲವೆಂತಲೂ ತಮ್ಮ ಗೌರವವನ್ನು ಕಾಪಾಡುವ ರೀತಿಯ ಶರ್ತಗಳಿಂದ ರಾಜಿಮಾಡಲಿಕ್ಕೆ ತಮಗೆ ಪೂರ್ಣ ಒಪ್ಪಿಗೆಯಿದೆ ಎಂದೂ ಜರ್ಮನಿಯ ಗಡಿಗಳನ್ನು ಭದ್ರಪಡಿಸುವುದೂ ಬೇರೆ ಖಂಡಗಳಲ್ಲಿ ತಮಗಿರುವ ವಸಾಹತುಗಳನ್ನು ವಾಪಸು ಪಡೆಯುವುದೂ ಎಲ್ಲಾ ಕಡಲುಗಳಲ್ಲಿಯೂ ನಿರಾತಂಕವಾಗಿ ತಮ್ಮ ವ್ಯಾಪಾರ ಹಡಗುಗಳ ಚಲಾವಣೆಯ ಸ್ವಾತಂತ್ರ್ಯ ಪಡೆಯುವುದು ಇವೇ ಈ ಯುದ್ಧದ ಮುಖ್ಯ ಉದ್ದೇಶವೆಂದು ಅವರು ತಿಳಿಯುತ್ತಾರೆ. ಇವು ಕೈಗೂಡಿದರೆ ಯುದ್ಧವನ್ನು ಮುಂದರಿಸುವ ಆಸೆ ತಮಗಿಲ್ಲವೆಂತಲೂ ತಮ್ಮ ಜನಾಂಗದ ಅಸ್ತಿತ್ವವನ್ನೇ ಈಗ ನಿರ್ಮೂಲಮಾಡಬೇಕೆಂಬ ದುರಾಶೆಯು ಮಿತ್ರಮಂಡಲಿಯವರಲ್ಲಿ ಇರುವವರೆಗೆ ತಾವು ಯುದ್ಧವನ್ನು ನಿಲ್ಲಿಸಲಾರೆವೆಂದೂ ಅವರು ದೃಢವಾಗಿ ಹೇಳುತ್ತಾರೆ. ತಮ್ಮ ದೇಶದಲ್ಲಿಯೂ ಆಹಾರದ ಕುಟ್ಟಿ ಇದೆ ಎಂದು ಅವರು ಒಪ್ಪುತ್ತಾರೆ.

ಫ್ಲೋರೆಂಡಿನಲ್ಲಿ ಜರ್ಮನರು ಪೊಲ್‌ಜನರ ಮೇಲೆ ನಡೆಸಿದ ಅತ್ಯಾಚಾರಗಳನ್ನು ಎದುರಿಸಿ ಪೊಸೋ ಪಟ್ಟಣದಲ್ಲಿ ಸ್ವಲ್ಪ ಗಲಭೆಯುಂಟಾಗಿದೆ.

ಇಟಲಿಯ ಯೂರೋಪ್ ಎಂಬ ಹೆಸರಿನ ಹಡಗು ಕ್ರೆಸ್ಲೈನ ಒಂದು ಹಡಗಿಗೆ ತಗಲಿ ಆ ಎರಡನೇ ಹಡಗು ಮುಳುಗಿಹೋಯಿತು. ಯೂರೋಪು ನಾದುರುಸ್ತಾಗಿ ಜಿಬ್ರಾಲ್ಟರಿಗೆ ಬಂದುಮುಟ್ಟಿತು.

ಸ್ಪೇನ್ ದೇಶದಲ್ಲಿ ಈಗಿನ ಪಾರ್ಲಮೆಂಟಿಗೆ ವಿರೋಧವಾಗಿ ಬಾರ್ಸಲೋನದಲ್ಲಿ ನಿರ್ವಹಿಸಬೇಕೆಂದಿರುವ ಪಾರ್ಲಮೆಂಟು ಸಭೆಯನ್ನು ಅಲ್ಲಿಯ ಗವರ್ನರರು ಚೆದರಿಸಿಬಿಟ್ಟರು. ರಾಜಧಾನಿಯಾದ ಮೆಡ್ರಿಡ್‌ದಲ್ಲಿಯೂ ಬಾರ್ಸಲೋನದಲ್ಲಿಯೂ ಇಂಜಿನಿಯರ್ ಆಫೀಸರುಗಳೇ ರೈಲು ಬಂಡಿಗಳನ್ನು ನಡಿಸುತ್ತಾರೆ. ಇದರಿಂದ ರೈಲ್ವೇ ಕಾಮಗಾರಿಯವರ ಮುಷ್ಕರವಿದೆ ಎಂದು ತಿಳಿಯಬೇಕಾಗಿದೆ.

ವಿದೇಶ ವೃತ್ತಾಂತ.

ಬೆತ್‌ಮನ್ ಹೊಲ್‌ವೆಗನು ಪ್ರಧಾನ ಮಂತ್ರಿತ್ವದಿಂದ ಹೊರಗಡೆಯಾದನು. ಇದಕ್ಕೆ ಜರ್ಮನ್ ಪಾರ್ಲಮೆಂಟಿನಲ್ಲಿ ಅನೇಕ ಮೆಂಬರರು ಹೊಲ್‌ವೆಗನ [illegible]

[illegible]

ನರು ಹಿಡಿದ ರಾಜ್ಯಗಳನ್ನು ಹಿಂದೆ ಕೊಡುವ ಅಭಿಪ್ರಾಯವನ್ನು ಸೋಷಡಿಸಲಿಲ್ಲವೆಂದು ಒಂದು ಕಡೆಯಿಂದ ಬವೇರಿಯದವರು ಇನ್ನೊಂದು ಕಡೆಯಿಂದ ಆಸ್ಟ್ರಿಯದವರು ಇವರನ್ನು ದೂಷಿಸತೊಡಗಿದರು. ಹೀಗಾಗಿ ಹೊಲ್‌ವೆಗ ಕಥೆಯು ಸಮಾಪ್ತಿಯಾಯಿತು. ಡಾ॥ ಮಾಯಕೆಲಿಸ ಎಂಬವರು ಈ ಕೆಲಸಕ್ಕೆ ಈಗ ನೇಮಕವಾಗಿದ್ದಾರೆ.

ಹಿಂದೂಸ್ಥಾನದ ಸೆಕ್ರೆಟರಿ ಒಫ್ ಸ್ಟೇಟರಾಗಿದ್ದ ಮಿ॥ ಎ. ಚೆಂಬರಲೇನರು ರಾಜೀನಾಮೆ ಕೊಟ್ಟಿದ್ದರಿಂದ ಅವರ ಬದಲಾಗಿ ಮಿ॥ ಮೊಂಟೆಗರು ಚಾರ್ಜ ಪಡಕೊಂಡರು. ಇವರು ಹಿಂದೂಸ್ಥಾನದ ಸೆಕ್ರೆಟರಿಗಳ ಕೆಳಗೆ ಒಂದುಕಾಲ ಅಸಿಸ್ಟಂಟ ಸೆಕ್ರೆಟರಿ ಆಗಿದ್ದು ಹಿಂದೂಸ್ಥಾನಕ್ಕೆ ಸಹ ಬಂದಿದ್ದರು. ಇವರು ಉದಾರಪಕ್ಷದವರಾದ್ದರಿಂದ ಹಿಂದೂಸ್ಥಾನಕ್ಕೆ ಇವರ ಆಡಳಿತೆಯು ಪ್ರಯೋಜನಕಾರಿಯಾಗಬಹುದೆಂದು ನಂಬಿಕೆ ಇದೆ.

ಚೀನದಲ್ಲಿ ಪುನಃ ಪ್ರಜಾಪ್ರಭುತ್ವವೇ ಸ್ಥಾಪನೆಯಾಯಿತು. ಚಕ್ರವರ್ತಿಯ ಪಕ್ಷದವರು ಅಡಗಿಹೋದಂತಿದೆ. ಟುವಾಂಟಿಜಯು ಮುಖ್ಯ ಮಂತ್ರಿತ್ವವನ್ನು ಕೈಕೊಂಡಿರುವನು. ಮೊದಲು ಪ್ರೆಸಿಡೆಂಟರಾಗಿದ್ದ ಲಿಯೂವಾಹೂ ತಾನು ಆ ಕೆಲಸವನ್ನು ಪುನಃ ತೆಗೆದುಕೊಳ್ಳುವದಿಲ್ಲವೆಂದು ಹೇಳಿರುವನು.

ನೋರ್ವೆಯ ಟ್ರೊಂಡಜನ್ ಎಂಬಲ್ಲಿ ರುಶ್ಯರ ಪರವಾಗಿ ಬ್ರಿಟಿಷರು ಸಂಗ್ರಹಿಸಿಟ್ಟ ಸಾಮಗ್ರಿಗಳಿರುವ ಬಂಡಸಾಲೆಗೆ ಬೆಂಕಿಬಿದ್ದು ೨॥ ಮಿಲಿಯ ಪೌಂಡು ಬೆಲೆಯ ಸಾಮಗ್ರಿಗಳು ನಾಶವಾದುವು.

ಕೊನ್‌ಸ್ಟೆಂಟಾಯ್ನನು ಅನುಸರಿಸಿಕೊಂಡಿದ್ದ ರಾಜಕೀಯ ಮಂತ್ರವನ್ನು ಮುರಿದುಬಿಟ್ಟು, ಹೊಸ ದಾರಿಯನ್ನೆ ಅವಲಂಬಿಸಬೇಕೆಂದು ಗ್ರೀಸ್ ರಾಜ್ಯದಲ್ಲಿ ಮುಖ್ಯ ಮಂತ್ರಿಯಾದ ವೆನೆಜುಲೊಸನು ಸಂತೋಷವಾಗಿ ಹೇಳಿದ್ದಕ್ಕೆ ಈಗಿನ ರಾಜನು ಸಮ್ಮತಿಸಲಿಲ್ಲ. ಅಲ್ಲಿಯ ಪಾರ್ಲಮೆಂಟ ಸಭೆಸೇರಿಸಲಿಕ್ಕೆ ಹುಕುಂ ಕೊಡಬೇಕೆಂದು ಕೇಳಿದಾಗ ಅದನ್ನೂ ಕೊಡಲಿಲ್ಲ.

ಒಸ್ಟ್ರಿಯದಲ್ಲಿ ಈಗ ಕೈದಾಸ್ತು ಆಗುವ ಬೆಳೆಯಿಂದ ಎರಡು ಮೂರು ತಿಂಗಳಿಗೆ ಮಾತ್ರವೇ ಜನರ ಉದರ ನಿರ್ವಾಹವು ಆದೀತೆಂತಲೂ ಅದರ ನಂತರ ಆಹಾರ ಸಾಮಗ್ರಿಗಳ ಕುಟ್ಟಿಯಿಂದ ಅನೇಕ ತೊಂದರೆಗಳು ಬರಬಹುದೆಂದೂ ತಿಳಿದು ಬರುತ್ತದೆ. ಪರರಾಜ್ಯಗಳಿಂದ ಆಹಾರಸಾಮಗ್ರಿಗಳನ್ನು ಕೊಂಡುಕೊಳ್ಳಲಿಕ್ಕೆ ಹಣವೂ ಸಾಲವಾಗಿ ದೊರಕುವುದು ದುರ್ಲಭವಾಗಿಯದೆಯಂತೆ.

ಮೆಸೊಪೊಟಾಮಿಯ ಕಮಿಶನಿನ ರಿಪೋರ್ಟ ಮೇರೆಗೆ ಕೋರ್ಟ ಮೂಲಕ ಜವಾಬಿಯವರ ವಿಚಾರವಾಗಬೇಕೆಂಬ ಸೂಚನೆಯನ್ನು ಈಗ ಮನ್ನಾಮಾಡಿಯದೆ ಎಂದು ಮಿ॥ ಬೊನರ್‌ಲೊ ಪಾರ್ಲಮೆಂಟಿನಲ್ಲಿ ತಿಳಿಸಿರುವರು.

ಸ್ಪೇನ್ ದೇಶದಲ್ಲಿ ಪ್ರಜಾಪ್ರಭುತ್ವವಾದಿಗಳ ಗಲಭೆಯು ಪುನಃ ಕಲೆದೋರಿದೆ. ಇವರ ಪೈಕಿ ಅನೇಕ ಪಾರ್ಲಮೆಂಟ ಮೆಂಬರುಗಳು ಬಾರ್ಸಲೋನಕ್ಕೆ ಹೋಗಿ ಅಲ್ಲಿ ಈಗಿನ ಪಾರ್ಲಮೆಂಟಿಗೆ ವಿರೋಧವಾಗಿ ಇನ್ನೊಂದು ಪಾರ್ಲಮೆಂಟನ್ನು ನಿರ್ಮಿಸುವುದರಲ್ಲಿ ಇದ್ದಾರೆ. ಇವರ ಪೈಕಿ ಕೆಲವರನ್ನು ಸರಕಾರದವರು ನಿರ್ಬಂಧಿಸಿರುವರು. ಮುಖ್ಯ ಮಂತ್ರಿಯು ಈ ವಿಷಯದಲ್ಲಿ ಆಲೋಚಿಸಿ ಹುಕುಂ ಪಡಕೊಳ್ಳಲಿಕ್ಕೆ ರಾಜನಿದ್ದಲ್ಲಿಗೆ ಹೋಗಿರುವನು.

ಹೊಲ್ಲೆಂಡಿನಿಂದ ಜರ್ಮನಿಗೆ ಚಲಾವಣೆ ಆಗುತ್ತಿರುವ ಕೆಲವು ಜರ್ಮನ್ ಹಡಗುಗಳನ್ನು ೨೦ ಬ್ರಿಟಿಷ್ ಡಿಸ್ಟ್ರೋಯರ್ ಹಡಗುಗಳು ಹಿಡಿದುಬಿಟ್ಟವು. ಈ ಜರ್ಮನ್ ಹಡಗುಗಳಲ್ಲಿ ಪ್ರತಿಯೊಂದು ೧೦೦೦ ಟನ್ನಿಗೆ ಮಿಕ್ಕಿದ ಧಾರಣೆಯದಾಗಿತ್ತು.

ಪೋರ್ತುಗಲ್ಲಿನ ರಾಜಧಾನಿಯಾದ ಲಿಸ್ಬನ್ನಿನಲ್ಲಿ ಬೀದಿಗಳಲ್ಲಿ ಜನರ ದಂಗೆ ಉಂಟಾಯಿತು. ಸಿಡಿಮದ್ದನ್ನು ಒಂದು ಟ್ರೇಮುಬಂಡಿಯ ಮೇಲೆ ಎರಚಿದ್ದರಿಂದ ಅನೇಕರಿಗೆ ಗಾಯವಾಯಿತು. ಪಾರ್ಲಮೆಂಟಿನವರು ಮಾರ್ಶಲ್‌ಲೋ ಅಂದರೆ ಮಿಲಿಟರಿ ಅಧಿಕಾರವನ್ನು ಇನ್ನೂ ಒಂದು ತಿಂಗಳ ವರೆಗೆ ಜಾರಿಯಲ್ಲಿಡುವರು. ಇದರಿಂದ ಎಲ್ಲಾ ಬಗೆಯ ತಕ್ಷೀರುಗಳು ಮಿಲಿಟರಿ ಕಾನೂನಿಗೆ ಒಳಪಟ್ಟು ಇರುವುವು.

ಉತ್ತರ ಹಿಂದೂಸ್ಥಾನ.

ಬರ್ಮಾ:— ಬರ್ಮ ಸಂಸ್ಥಾನದಲ್ಲಿ ಕಾಗದದ ತಯಾರಿಗೆ ಬೇಕಾಗುವ ಅಂಬಲಿಯನ್ನು ಸರಕಾರ ಕಾಡುಗಳಲ್ಲಿರುವ ಬಿದಿರಿನಿಂದ ಮಾಡುವ ಗುತ್ತಿಗೆಯನ್ನು ಜಮಾಲ ಬ್ರದರ್ಸ್ ಎಂಬ ಕಂಪನಿಗೆ ಇದೇ ಬರುವ ಸಪ್ಟಂಬರ ೧ನೇ ತಾರೀಕಿನಿಂದ ಕೊಡುವುದಾಗಿ ಸರಕಾರದವರು ನಿಶ್ಚಯಿಸಿರುವರು.

ಬರ್ಮ ಒಯಿಲ್ ಕಂಪೆನಿಯವರಿಗೆ ಗತವರ್ಷದಲ್ಲಿ ೫,೯೨,೭೧೩ ಪವನುಗಳು ಕ್ಷೇಮನಿಧಿಗೂ ಇತರ ಅಗತ್ಯವಾದ ಏರ್ಪಾಡುಗಳಿಗೂ ವಜಾಮಾಡಿ ೧೩,೭೫,೫೫೮ ಪವನುಗಳು ಮುನಾಫೆ ಉಳಿಯಿತು. ಸೇಕಡಾ ೩೦ರ ಮೇರೆಗೆ ಶೇರುದಾರರಿಗೆ ಹಂಚಲಿಕ್ಕೆ ಹಣ ಸಿಕ್ಕುವುದು ಎಂದು ತಿಳಿದುಬರುತ್ತದೆ.

ಇದೇ ಹಿಂದುಸ್ಥಾನದಿಂದ ದೇಶಿಯರ ಪೈಕಿ ಇಂಡಿಯದ ರಕ್ಷಣೆಯ ಸೈನ್ಯದಲ್ಲಿ ೧೯೧೭ನೇ ಜುಲಾಯಿ ೧೬ನೇ ತಾರೀಕುವರೆಗೆ ದಾಖಲಾದವರು ೧೬೭೬ ಮಾತ್ರವೇ ಎಂದು ತಿಳಿದುಬರುತ್ತದೆ.

ದಕ್ಷಿಣ ಹಿಂದೂಸ್ಥಾನ.

ಮಲಬಾರಜಿಲ್ಲೆಯಲ್ಲಿ ಮನ್ನಾರಘಾಟ ಎಂಬಲ್ಲಿ ಕೆಲವು ಕಲ್ಲುಕುಟಿಗರು ಕಲ್ಲು ಅಗೆಯುವಾಗ ಆಶ್ಚರ್ಯಕರವಾದ ಒಂದು ಗುಹೆಯು ಕಂಡುಬಂತು. ಮೊದಲು ಅವರು ಒಂದು ಶಿಲೆಯ ಹಾಸುಕಲ್ಲನ್ನು ಕಂಡರು. ಅದನ್ನು ಎತ್ತಿದಾಗ ಅದರ ಅಡಿಯಲ್ಲಿ ೪ ಮಂದಿಗೆ ಸಾಕಾಗುವಷ್ಟು ಒಂದು ಗವಿಯ ಬಾಗಿಲು ಸಿಕ್ಕಿತು. ಆ ಗುಹೆಯ ತಳಕ್ಕೂ ಶಿಲೆಯ ಕಲ್ಲನ್ನು ಹಾಸಿದ್ದರು. ಈ ಗುಹೆಯ ಒಳಗೆ ಕೆಲವು ಪೂಜೆಯ ಪಾತ್ರೆಗಳು, ಒಂದು ದೀಪ, ಒಂದು ಗದೆ, ಕುಡುಗೋಲಿನ ಹಾಗಿರುವ ಒಂದು ಕತ್ತಿ ಇಷ್ಟು ಕಂಡುಬಂದವು. ಈ ಸ್ಥಳವು ಬಹು ಪುರಾತನ ಯಾವುದೋ ಒಂದು ವೀರನ ಸಮಾಧಿಸ್ಥಳವಾಗಿರಬೇಕು. ಈ ರೀತಿಯ ಹಾಸುಗಲ್ಲು ಅಡಿಯ ಗುಹೆಗಳು ಪಶ್ಚಿಮಘಟ್ಟಗಳ ಪಶ್ಚಿಮಭಾಗದಲ್ಲಿ ಅಲ್ಲಲ್ಲಿ ಸಿಕ್ಕುತ್ತವೆ. ಇವುಗಳಿಗೆ "ಪಾಂಡವಪಾರೆ" ಪಾಂಡವರಕಲ್ಲು ಎಂತಲೂ ಹೆಸರಿದೆ. ಅಂದರೆ ಪಾಂಡವರು ಹಾಸಿದ ಕಲ್ಲು ಎಂಬ ಅಭಿಪ್ರಾಯ. [illegible] ಯಲ್ಲಿ ಮಹಾತ್ಮರುಗಳಿಗೆ ಈ ರೀತಿಯಾಗಿ ಸಮಾಧಿ [illegible]

[illegible]

ಅನುಕ್ರಮಣಿಕೆ.

ಪಾನು.

ಅಗ್ರಲೇಖ—

೧ ರಾಜಕಾರಣವೂ ಹಿಂದೀಕ್ರೈಸ್ತರೂ ... ೪

ಸ್ಫುಟವಿಚಾರಗಳು:—

೧—೨ ಮದ್ರಾಸ ಶಿಕ್ಷಣವ್ಯವಸಾಯಿಗಳ ಪರಿಷತ್ತು, ಗವರ್ನಮೆಂಟ್ ಸರ್‌ಕ್ಯುಲರೂ ... ೪

೩ ಲೊ. ಹಾರ್ಡಿಂಜರ ಬಗ್ಗೆ ಸಹಾನುಭೂತಿ. ... "

೪ ಕೊಚ್ಚಿ ಸಂಸ್ಥಾನದ ಸುಧಾರಣೆ ... ೪—೫

೫ "ರಾಜಪ್ರತಿನಿಧಿಯು ಮಧ್ಯಸ್ಥಿಗೆಯು" ... "

೬ ಮು. ಮೊಂಟೆಗರ ಮೇಲಿನ ಹಿಂದಿಗಳ ಆಶೆ ... "

೭ ದೇವಸ್ಥಾನದ ಎದುರು ಮಾಂಸಮಾರಾಟ ... "

ವರ್ತಮಾನ ಸಂಗ್ರಹಗಳು:—

೧ ಯೂರೋಪದ ಮಹಾಯುದ್ಧ ... ೫

೨ ವಿದೇಶ ವೃತ್ತಾಂತ ... "

೩ ಉತ್ತರ ಹಿಂದುಸ್ಥಾನ ... "

೪ ದಕ್ಷಿಣ ಹಿಂದೂಸ್ಥಾನ ... "

೫ ದಕ್ಷಿಣ ಕನ್ನಡ ... "

೬ ಪತ್ರವ್ಯವಹಾರ: ಅಧಿಕಮಾಸದ ಸಿದ್ಧಾಂತ, ಕಳವಾದವರಿಗೆ ಕಳವಿನ ಫಲವೇನು, ಸೌರ ಉಪಾಕರ್ಮವಿಚಾರ ... "

ಸ್ವದೇಶಾಭಿಮಾನಿ.

ಶಕ ೧೮೩೯ ಶ್ರಾವಣ ಶು. ೮ ಶುಕ್ರವಾರ.

ರಾಜಕಾರಣವೂ ಹಿಂದೀ ಕ್ರೈಸ್ತರೂ.

ಹಿಂದೂಸ್ಥಾನದ ರಾಜಕಾರಣದ ಅದೃಷ್ಟವೇ ವಿಚಿತ್ರ. ೧೮೫೭ನೇ ಇಸವಿಯಲ್ಲಿ ಸಿಪಾಯಿಗಳ ದಂಗೆಯಾಗಿ ಅನಂತರ ಹಿಂದುಸ್ಥಾನದ ರಾಜಕಾರಭಾರವನ್ನು ಪರಲೋಕನಿವಾಸಿನಿಯಾದ ಮಹಾರಾಣಿಯವರು ಕೈಕೊಂಡು ಆ ಮೂಲಕ ದೇಶದಲ್ಲಿ ಸರ್ವತ್ರ ಶಾಂತತೆ ಆಯಿತು. ಮಿ. ಹ್ಯೂಮ, ಲೊ. ರಿಪನ್ ಮೊದಲಾದ ಇಂಗ್ಲಿಷ್ ಸದ್ಗೃಹಸ್ಥರ ಪ್ರೇರಣೆಯಿಂದ ಆ ಕಾಲದ ಹಿಂದೀ ಸುಶಿಕ್ಷಿತರು ರಾಜಕೀಯ ಹಕ್ಕುಗಳನ್ನು ಸಂಪಾದಿಸುವುದಕ್ಕಾಗಿ ರಾಷ್ಟ್ರೀಯಸಭೆ ಎಂಬುದನ್ನು ಸ್ಥಾಪಿಸಿದರು. ಈ ಸಂಗತಿಗೆ ೩೦-೩೫ ವರ್ಷಗಳಾದವು. ರಾಷ್ಟ್ರೀಯಸಭೆಯ ಕಾರ್ಯವೇನೆಂದರೆ ವರ್ಷದಲ್ಲಿ ೩-೪ ದಿವಸ ಯಾವುದಾದರೊಂದು ದೊಡ್ಡ ಪಟ್ಟಣದಲ್ಲಿ ನೆರೆದು ಆ ವರ್ಷದ ರಾಜಕೀಯ ಸಂಕಟಗಳನ್ನು ಒಟ್ಟುಗೂಡಿಸಿ ಚರ್ಚಿಸುವುದು. ಸರಕಾರದ ಮುಂದೆ ಇಡುವುದು. ಮತ್ತು ಅವುಗಳ ನಿವಾರಣೆ ಬಗ್ಗೆ ಪ್ರಾರ್ಥಿಸಿಕೊಳ್ಳುವುದು. ಇದಕ್ಕಿಂತ ಹೆಚ್ಚಿನ ಕೆಲಸವು ರಾಷ್ಟ್ರೀಯಸಭೆಗಿರಲಿಲ್ಲ. ರಾಷ್ಟ್ರೀಯಸಭೆಯ ಪ್ರಥಮದ ಇತಿಹಾಸವನ್ನು ನೋಡಿದರೆ, ರಾಷ್ಟ್ರೀಯಸಭೆಯು ಆಗ ಬಹು ಸೌಮ್ಯವಾದ ಮಾತುಗಳನ್ನು ಉಪಯೋಗಿಸುತ್ತಿತ್ತು. ಕಾಯಿದೆ, ನಿಯಮ, ಕಾನೂನು, ಮರ್ಯಾದೆ, ಡಿಸಿಪ್ಲಿನ ಅಥವಾ ಕ್ರಮ ಮುಂತಾದ ಯಾವುದನ್ನೂ ಬಿಟ್ಟು ಎಳ್ಳಷ್ಟು ಅದು ಮುಂದುವರಿದಿರಲಿಲ್ಲ. ಆದರೂ ನಾವು ಮೇಲೆ ಹೇಳಿದಂತೆ ಹಿಂದೀ ರಾಜಕಾರಣದ ಅದೃಷ್ಟವು ವಿಚಿತ್ರವೆಂಬುದು ಆಗಲೂ ಕಂಡುಬಂತು. ವಿಘ್ನಸಂತೋಷಿಗಳಾದ ಎಂಗ್ಲೊ ಇಂಡಿಯನರು ರಾಷ್ಟ್ರೀಯಸಭೆಯ ಮೇಲೆ ರಾಜದ್ರೋಹದ ಆರೋಪಣವನ್ನಿಡಹತ್ತಿದರು. ಆ ಕಾಲದ ವೈಸರಾಯರಂಥ ವರಿಷ್ಠ ಅಧಿಕಾರಿಗಳೂ ಕೂಡ ಎಂಗ್ಲೊ ಇಂಡಿಯನರ ಈ ಗಾರುಡೀಮಂತ್ರದಿಂದ ವಿಚಾರಭ್ರಷ್ಟರಾಗಿ ಅದೇ ಆರೋಪವನ್ನು ರಾಷ್ಟ್ರೀಯ ಸಭೆಯ ತಲೆಯ ಮೇಲೆ ಹೊರಿಸಲು ಹಿಂಜರಿಯಲಿಲ್ಲ. ಸರಕಾರದ ಅವಕೃಪೆಗೆ ಈ ರಾಜಕೀಯ ಸಂಸ್ಥೆಯು ಈ ಪ್ರಕಾರ ಪಾತ್ರವಾಗಲು ಅರ್ಥಾತ್ ಹಿಂದುಗಳಿಗಿಂತಲೂ ತಾವು ರಾಜನಿಷ್ಠರೆಂದು ತೋರಿಸಿಕೊಳ್ಳುವ ನಮ್ಮ ಮುಸಲ್ಮಾನ ಬಂಧುಗಳು ಈ ಸಂಸ್ಥೆಯಿಂದ ತಮ್ಮ ವೈತೆಗೆದರು. ಹೀಗೆ ತಂಡದಿಂದ ಈ ಸಂಸ್ಥೆಯು ಏಕಾಂಗಿಯಾಯಿತು. ಇದೆ ಅವಸ್ಥೆಯಲ್ಲಿ ಕೆಲಸಮಯ ಕಳೆಯಿತು. ಇನ್ನೂ ಪಕ್ಷಭೇದಗಳಾದವು. ರಾಷ್ಟ್ರೀಯಸಭೆಯ ಇದಿ ವರ್ಷದ ನಿದ್ದೆ, ಮತ್ತು ಮೂರೆ ದಿವಸದ ಕೆಲಸ ಇವು ಕೆಲವು ಯಾಕೆ, ಅನೇಕ ರಾಷ್ಟ್ರಭಕ್ತರಿಗೆ ಒಪ್ಪುತ್ತಿರಲಿಲ್ಲ. ಯಾವುದಾದರೊಂದು ನಿಶ್ಚಿತ ಧ್ಯೇಯವನ್ನಿಟ್ಟುಕೊಂಡು ಅದರ ಉದ್ದಿಶ್ಯ ಇಡಿ ವರ್ಷ ರಾಷ್ಟ್ರಸಭೆಯು ಕೆಲಸ ಮಾಡತಕ್ಕದ್ದು ಎಂಬುದಾಗಿ ಒಂದು ಕಡೆಯವರು ಹೇಳೋಣ, ಇನ್ನೊಂದು ಕಡೆಯವರು ರಾಷ್ಟ್ರಸಭೆಯ ಜನ್ಮದ ಕಾಲದಲ್ಲಿ ಇದ್ದ ಕ್ರಮವನ್ನೆ ಮುಂದರಿಸಿದರೆ ಸಾಕು, ಹೆಚ್ಚಿನ ಪ್ರಯತ್ನವು ಅಗತ್ಯವಿಲ್ಲ ಎಂಬುದಾಗಿ ವಾದಿಸೋಣ, ಈ ಮಧ್ಯದಲ್ಲಿ ಪುನಃ ಎಂಗ್ಲೊ ಇಂಡಿಯನರು ಜಹಾಲ ಬಿರುಸು ತಂಡ, ಸಪ್ಪೆ ತಂಡ ಮುಂತಾದ ಪಕ್ಷಗಳನ್ನು ಹುಟ್ಟಿಸಿ ಅವರವರಲ್ಲಿ ಒಡಕು ತಂದುಬಿಟ್ಟರು. ಎಂತು ಹಿಂದೂಸ್ಥಾನದಲ್ಲಿ ಹೀಗೆ ಎರಡು ಮೂರು ತಂಡಗಳಾದವು. ಹಿಂದೂಸ್ಥಾನದ ರಾಜಕೀಯ ... ಬೇರೆ ಬೇರೆ ತಂಡಗಳಾದುದಕ್ಕಾಗಿ ... ಈಗ ... ಕೇವಲ ... ಉಂಟು ನಮ್ಮ ... ಸ್ವದೇಶ ... ... ಮುಸಲ್ಮಾನರು ... ಮು...

...ಲ್ಮಾನರಾದರೇನು, ಸಪ್ಪೆತಂಡದವರಾದರೇನು, ಬಿರುಸುವರ್ಗದವರಾದರೇನು ಎಲ್ಲರಿಗೂ ಈ ದೇಶವು ಮಾತೃಸ್ಥಾನೀಯವಾಗಿದೆ. ಅವರು ರಾಜಕೀಯ ಉನ್ನತಿಯನ್ನು ಸಾಧಿಸುವುದರಲ್ಲಿ ಬೇರೆ ಬೇರೆ ತಂಡಗಳನ್ನು ಬೆಳಸಿಕೊಂಡು ಒಬ್ಬರಿಗೊಬ್ಬರು ಕಿರಿ ಅಂಕೆಯಾಗಿರುವುದು ಉಚಿತವಲ್ಲ. ಇದು ರಾಜಕಾರಣದೊಳಗಿನ ಪ್ರಧಾನವಾದ ತತ್ವವು. ಈ ತತ್ವವು ಮೇಲಿನ ತಂಡಗಳ ಮನಸ್ಸಿನಲ್ಲಿ ಬರಬೇಕಾದರೆ ಅನೇಕ ವರ್ಷಗಳು ದಾಟಿದವು. ತಾವೆಲ್ಲರೂ ಒಂದೆ ನಾವೆಯಲ್ಲಿದ್ದೇವೆಂಬ ಸಂಗತಿಯು ಮೇಲಿನ ತಂಡಗಳಿಗೆ ಗೊತ್ತಾಗಿ ತಂತಮ್ಮ ಕ್ಷುಲ್ಲಕ ಮತಭೇದಗಳನ್ನು ಬಿಟ್ಟು ರಾಷ್ಟ್ರೀಯ ಸಭೆಯ ಗಂಗಾಪ್ರವಾಹಕ್ಕೆನೆ ಬಂದು ಸೇರಿದವು. ಈಗ ಹಿಂದೀ ರಾಜಕಾರಣವು ನಿರಾತಂಕವಾಯಿತೆಂದು ನೆನಸುವ ಸುಲಗ್ನವು ಬಂದೊದಗಿತು. ಮುಸಲ್ಮಾನ ಬಂಧುಗಳು, ಶಾಂತಪಕ್ಷದವರು, ಉಗ್ರವರ್ಗದವರು ಎಲ್ಲರೂ ರಾಷ್ಟ್ರೀಯರಾದರು. ಈ ಸ್ನೇಹಯೋಗದ ದೇಖಾವೆಯು ತ್ರಯಸ್ಥಪ್ರೇಕ್ಷಕನ ಮನಸ್ಸನ್ನು ಒಂದೆರಡುಗಳಿಗೆ ರಂಜಿಸುವಷ್ಟರಲ್ಲಿ ಪುನಃ ಒಡಕಿನ ಪರದೆಯು ಬಿತ್ತು! ಬ್ರಾಹ್ಮಣ—ಬ್ರಾಹ್ಮಣೇತರರ ವಾದಾಟವು ಅಂಕುರಿಸಿತು. ಈ ಹೊಸ ಪಕ್ಷಭೇದವು ಭೂತಕಾಲಿಕವಲ್ಲ. ಇನ್ನೂ ಯಥಾಪ್ರಕಾರ ನಡೆದುಕೊಂಡೆ ಇದೆ. ಕಿಂಬಹುನಾ "ಅಧಿಕಸ್ಯಾಧಿಕಂ ಫಲಂ" ಎಂಬ ನ್ಯಾಯದಂತೆ ಅದರ ಸ್ವರೂಪವು ಉತ್ತರೋತ್ತರ ಅಧಿಕಾಧಿಕ ಭೀಭತ್ಸವಾಗುತ್ತ ನಡೆದಿದೆ.

ಹಿಂದು ದೇಶದ ಇತ್ತಲಾಗಿನ ರಾಜಕೀಯ ಇತಿಹಾಸವನ್ನು ಮೇಲಿನಂತೆ ವಿಹಂಗಮ ದೃಷ್ಟಿಯಿಂದ ನೋಡಿದ್ದಲ್ಲಿ ಈ ಲೇಖನ ಪ್ರಾರಂಭದಲ್ಲಿ ಹೇಳಿದ ಹಾಗೆ ಹಿಂದೀ ರಾಜಕಾರಣದ ಅದೃಷ್ಟವು ಪದೇಪದೇ ಒಡಕಾಗುತ್ತದೆ. ಈ ಮಾತನ್ನು ಯಾವ ಪ್ರಾಜ್ಞನೂ ನಿರಾಕರಿಸಲಿಕ್ಕಿಲ್ಲ. ಇತ್ತಲಾಗೆ ಉದ್ಭವಿಸಿದ ಬ್ರಾಹ್ಮಣ ಬ್ರಾಹ್ಮಣೇತರರ ಹೊಸ ಭೇದವು ಇಂದಿಲ್ಲ, ನಾಳೆ ಇಲ್ಲ. ಕೆಲವು ಸಮಯದ ನಂತರವಾದರೂ ನಾಮಶೇಷವಾದೀತೆಂದು ಹಿಂದಿನ ಅನುಭವದಿಂದ ನೆನೆಸೋಣ. ಪರಂತು ಅಷ್ಟರಿಂದ ಹಿಂದೀ ರಾಜಕಾರಣದ ದೌರ್ಭಾಗ್ಯವು ಕಡೆಗೊಳ್ಳದು. ಹಿಂದೀ ಬಾಂಧವರು ತಮ್ಮ ಮಾತೃಭೂಮಿಯ ರಾಜಕೀಯ ಹಕ್ಕುಗಳನ್ನು ಸಂಪಾದಿಸಬೇಕೆಂದು ೩೦-೩೫ ವರ್ಷಗಳಿಂದ ಸನದಶೀರ ಉಪಾಯಗಳನ್ನು ಅವಲಂಬಿಸಿ ಹೋರಾಡುತ್ತಿದ್ದಾರೆ. ಮಾತೃಭೂಮಿಯ ಸೇವೆಯನ್ನು ಮಾಡುತ್ತಿರುವ ಈ ದೇಶಭಕ್ತರ ಸಮಾಜದಲ್ಲಿ ಹಿಂದು, ಪಾರ್ಸಿ, ಮುಸಲ್ಮಾನ, ಈ ಸಮಾಜಗಳ ಜನರೆ ಕಾಣುವರಲ್ಲದೆ ಹಿಂದೀ ಕ್ರೈಸ್ತಸಮಾಜದವರು ಹೆಚ್ಚಾಗಿ ಕಾಣುವುದಿಲ್ಲ. ಅವರು ನಿರ್ಲಿಪ್ತರಾಗಿರುವರು. ಇದು ಯಾಕೆ? ಮಾತೃಭೂಮಿಯ ಸೇವೆಯು ಕ್ರಿಸ್ತಮತಕ್ಕೆ ಪರಿಶುದ್ಧವಲ್ಲವೊ? ನಾವು ತಿಳಿದಮಟ್ಟಿಗೆ ಹೇಳುವುದಾದರೆ, ಮಾತೃಭೂಮಿಯ ಸೇವೆ, ಸ್ವದೇಶಭಕ್ತಿ ಮುಂತಾದ ಉದಾತ್ತತತ್ವಗಳನ್ನು ಕ್ರಿಸ್ತಧರ್ಮವು ಬೋಧಿಸುವಂತೆ ಬೇರೆ ಧರ್ಮಗಳು ಬೋಧಿಸುತ್ತವೊ ಇದು ಚಿಂತ್ಯವಾಗಿದೆ. ಕ್ರಿಸ್ತಧರ್ಮದ ಸಂಗತಿಯನ್ನು ಒತ್ತಟ್ಟಿಗಿಟ್ಟು ನಮ್ಮ ಹಿಂದುಸ್ಥಾನವನ್ನೆ ಬಿಟ್ಟು ... ಕ್ರಿಸ್ತಧರ್ಮವು ಬಂತೊ ಅಂಥ ಪಾಶ್ಚಾತ್ಯ ದೇಶಗಳ ಇತಿಹಾಸವನ್ನು ನೋಡಿದರೆ ಮಾತೃಭೂಮಿಯ ಸೇವೆಗಾಗಿ ಸ್ವಾರ್ಥತ್ಯಾಗ ಮಾಡಿದ ಅಪ್ರತಿಮ ಮಹಾತ್ಮರು ನಿಜವಾಗಿ ಪಾಶ್ಚಾತ್ಯ ದೇಶಗಳಲ್ಲಿಯೆ ಅನ್ಯದೇಶಗಳಲ್ಲಿ ದೊರಕಲಾರರು. ಈ ವಿಷಯವನ್ನು ಸೋದಾಹರಣವಾಗಿ ಎಷ್ಟು ಬೆಳಸಿದರೂ ಅಷ್ಟು ಬೆಳೆಯಬಹುದು. ಆದರೆ ನಮಗೆ ಈ ಸಂಬಂಧದಲ್ಲಿ ಮುಖ್ಯವಾಗಿ ಹೇಳಬೇಕಾದ ಮಾತು ಯಾವುದೆಂದರೆ ಸ್ವದೇಶ ಸೇವೆಯು ಕ್ರೈಸ್ತಧರ್ಮಕ್ಕಾಗಲಿ ಯುರೋಪ ಕ್ರೈಸ್ತರ ಇತಿಹಾಸಕ್ಕಾಗಲಿ ಸಮ್ಮತವಾದ್ದೆ ವಿಷಯವು. ಇಷ್ಟೆ ಅಲ್ಲ, ಸ್ವದೇಶಪ್ರೀತಿಯು ಅವುಗಳ ಜೀವನವೆನ್ನಬಹುದು. ಹಿಂದಿಕ್ರೈಸ್ತರಿಗೆ ಮಾತ್ರ ಸ್ವದೇಶಪ್ರೀತಿಯು ಬೇಡವೊ? ಇವರು ಸ್ವೀಕರಿಸಿರುವ ಧರ್ಮವು ಹಿಂದುಸ್ಥಾನದ ಹೊರಗಿನದಾದರೂ ಇವರ ಮಾತೃಭೂಮಿಯೂ ಅದರೊಟ್ಟಿಗೆ ಹೊರಗಿನದೆ ಆದೀತೊ? ಧರ್ಮಾಂತರದ ದೆಸೆಯಿಂದ ಹಿಂದು ಸಮಾಜದಿಂದ ಇವರು ಹೊರಗೆ ಹೋದವರಾದರೂ ಹಿಂದುಸ್ಥಾನದಿಂದ ಬಹಿಷ್ಕೃತರೊ? ಅಲ್ಲ. ಹಾಗಾದರೆ ಇವರು ಹಿಂದೀ ರಾಜಕಾರಣದಲ್ಲಿ ಯಾಕೆ ಮನಸ್ಸಿಡುವುದಿಲ್ಲ? ಹಿಂದುಸ್ಥಾನದಲ್ಲಿ ಹಿಂದೀಕ್ರೈಸ್ತರ ಸಮಾಜವು ಅಲ್ಪಸಂಖ್ಯಾಕವಾದ್ದೆಂಬುದು ನಿಜ. ಆದರೆ ಆ ಮಾನದಿಂದಲಾದರೂ ಅವರು ಕೆಲಸ ಮಾಡಬಾರದೊ? ಇಲ್ಲಿಯ ರಾಜಕಾರಣದಲ್ಲಿ ಕ್ರೈಸ್ತರು ಮನಸ್ಸನ್ನು ಕೊಡದೆ ಇರಲು ಕಾರಣವೇನಾಗಿರಬಹುದೆಂದು ಊಹಿಸಿದರೆ ಇವರ ಧರ್ಮಗುರುಗಳು ಇವರನ್ನು ಪ್ರತಿಬಂಧಿಸುತ್ತಾರೊ ಏನೊ? ಕ್ರೈಸ್ತಧರ್ಮದ ಪ್ರಸಾರಣಕ್ಕಾಗಿ ಯುರೋಪ ಮುಂತಾದ ಕಡೆಗಳಿಂದ ಬಂದಿರುವ ರೆವರೆಂಡ್ ಬಿಶೊಪ್ ಮೊದಲಾದ ಕ್ರಿಸ್ತಭಟ್ಟರು ತಮ್ಮ ಸ್ವಂತ ಮಾತೃದೇಶವನ್ನು ಪ್ರೀತಿಸುವುದು ಸಹಜ. ಅದರಂತೆಯೆ ಅವರ ಶಿಷ್ಯಗಣವು ತನ್ನ ಮಾತೃದೇಶವನ್ನು ಪ್ರೀತಿಸಬೇಕಲ್ಲವೆ? ಹಿಂದೀ ರಾಜಕಾರಣದ ಸಂಬಂಧವು ಬಿಳಿ ಪಾದ್ರಿಗಳಿಗೆ—ಅವರು ಅನ್ಯದೇಶಿಯರಾದ್ದರಿಂದ—ತಟ್ಟುವುದಿಲ್ಲವಾದರೂ ಇಲ್ಲಿಯವರಿಗೆ ಅದರ ಹಿತಾಹಿತವು ತಟ್ಟುವುದಿಲ್ಲವೊ? ಕ್ರೈಸ್ತರ ಧಾರ್ಮಿಕ ಜೀವನದ ಮೇಲೆ ನಡೆಸುವಂತೆಯೆ ರಾಜಕೀಯಾದಿ ವ್ಯಾವಹಾರಿಕ ಜೀವನದ ಮೇಲೂ ಈ ಮಿಶನರಿಗಳು ತಮ್ಮ ಸತ್ತೆಯನ್ನು ನಡೆಸಲುಪಕ್ರಮಿಸಿ ಅವರನ್ನು ಹಿಂದೀ ರಾಜಕಾರಣದಿಂದ ಪರಾವರ್ತಿಸಹತ್ತಿದರೆ, ನಾಳೆ ಇಲ್ಲಿಯ ಎಲ್ಲ ಕ್ರೈಸ್ತ ಸಮಾಜವನ್ನು ಅವರು ಯುರೋಪದ ದೇಶಗಳಿಗೆ ... ? ... ಕ್ರೈಸ್ತರಾದರೂ ... ಹಿಂದುಸ್ಥಾನ ... ಈ ಮಾತನ್ನು ಆ ಗುರುಗಳಾಗಲಿ, ಈ ಶಿಷ್ಯರಾಗಲಿ ... ಕ್ರೈಸ್ತಗುರುಗಳು ... ಇಲ್ಲಿಯ ... ಒಂದುವೇಳೆ ಸ್ವಲ್ಪ ಸಮಯದ ನಂತರ ರಾಜ್ಯಕರ್ತರು ಹಿಂದುಸ್ಥಾನಕ್ಕೆ ಹೋಮ್‌ರೂಲ್ ಕೊಟ್ಟರೆ ಅದರಲ್ಲಿ ಇವರಿಗೆ ಪಾಲು ಬೇಡವೊ? ಹಾಗಾದರೆ ಈ ಹೊತ್ತು ದೂರದಲ್ಲಿ ನಿಂತಿದ್ದರ ಫಲವೇನಾಯಿತು? ಈ ಸಂಗತಿಗಳನ್ನು ವಿದೇಶದಿಂದ ಇಲ್ಲಿ ಬಂದ ಕ್ರಿಸ್ತಿ ಗುರುಗಳು ಆಲೋಚಿಸುವುದಿಲ್ಲವಾದರೂ ನಮ್ಮ ಹಿಂದೀ ಕ್ರೈಸ್ತಬಂಧುಗಳು ಅವಶ್ಯ ವಿಚಾರದಲ್ಲಿ ತಕ್ಕೊಳ್ಳಬೇಕು. ನಮ್ಮ ಮಾತೃದೇಶದ ಅಭಿಮಾನವು ನಮಗಿರಬೇಕಲ್ಲದೆ ಅನ್ಯದೇಶೀಯರಿಗಿರದು. ಅವರು ಕಾರಣಾಂತರದಿಂದ ಹಿಂದೀ ಕ್ರೈಸ್ತರನ್ನು ರಾಜಕೀಯ ವಿಷಯದಿಂದ ಬಿಡಿಸುತ್ತಾರಿರಬಹುದು. ಮತ್ತು ಅದೆ ಕಾರಣದಿಂದ ರಾಜಕೀಯ ವಿಷಯದಲ್ಲಿ ಕೂಡ ಕ್ರಿಸ್ತೇತರರು ಬೇರೆ, ತಾವು ಬೇರೆ; ಈ ಬುದ್ಧಿಯು ದೇಶೀಯ ಕ್ರೈಸ್ತರಲ್ಲಿ ಹುಟ್ಟಿದೆ. ನಮ್ಮ ಈ ಅನುಮಾನವು ನಿರಾಧಾರವಾದ್ದೆಂದು ನೆನೆಸಬಾರದು. ಮದ್ರಾಸಿನ ಕಡೆಗೆ ಈಚೆಗೆ ನಡೆದ ಒಂದು ಸಂಗತಿಯಿಂದ ನಮ್ಮ ಮೇಲಿನ ಅನುಮಾನವು ದೃಢವಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಸಂತೋಷದ ಮಾತೇನೆಂದರೆ 'ಕ್ರಿಶ್ಚನ್ ಪೇಟ್ರಿಯಟ್'ದಂಥ ಪತ್ರಿಕೆಯು ಉದಾರ ವಿಚಾರಗಳನ್ನು ಪ್ರಕಟಿಸಿದೆ. "ಧಾರ್ಮಿಕ ಗುರುಗಳು ಧಾರ್ಮಿಕ ವಿಷಯದಲ್ಲಿ ಅಧಿಕಾರವನ್ನು ನಡಿಸಬೇಕಲ್ಲದೆ ಬೇರೆ ವಿಷಯದಲ್ಲಿ ಅವರ ಸತ್ತೆಯು ಮಾನ್ಯಮಾಡತಕ್ಕದ್ದಲ್ಲ. ರಾಜಕೀಯ ಮೊದಲಾದ ಸಂಗತಿಗಳಲ್ಲೂ ನಾವು (ಕ್ರೈಸ್ತರು) ಬಿಶೊಪರ ಆಜ್ಞೆಯನ್ನೆ ಅನುವರ್ತಿಸಹೋದರೆ ನಮ್ಮ ವೈಶಿಷ್ಟ್ಯವು ಅಳಿದುಹೋಗುವುದು. ಧರ್ಮಗುರುಗಳಿಗೆ ಶಿಷ್ಯರ ಎಲ್ಲ ವಿಷಯಗಳಲ್ಲಿ ತಮ್ಮ ನಿರಂಕುಶ ಅಧಿಕಾರವು ನಡಿಯಬೇಕೆಂದು ತೋರುತ್ತದಾದರೂ ಶಿಷ್ಯರಾದ ನಾವು ಈ ಗುರುಗಳಿಗೆ ಯಾವ ವಿಷಯದಲ್ಲಿ ಎಷ್ಟು ಮನ್ನಣೆಯನ್ನು ಕೊಡತಕ್ಕದ್ದು ಇದನ್ನು ಸಾರಾಸಾರ ವಿಚಾರದಿಂದ ತಿಳಿದುಕೊಳ್ಳುವುದು ನಮ್ಮ ಕೆಲಸ." ಕ್ರಿಶ್ಚನ್ ಪೆಟ್ರಿಯಟದ ಅಭಿಪ್ರಾಯವನ್ನು ಪ್ರತಿ ಒಬ್ಬ ಕ್ರೈಸ್ತನು ಮನನಿಸತಕ್ಕದ್ದಾಗಿದೆ. ಅದರ ಅಭಿಪ್ರಾಯದಂತೆ—ಬರೆ ಗುರುಗಳು ಹೇಳುವುದರಿಂದ ನಾವು ಹೀಗೆಯೆ ಮಾಡಬೇಕೆಂದು ವಾದಿಸುವುದು ಅಂಧಶ್ರದ್ಧೆಯ ಲಕ್ಷಣವಾಗಿರುವುದು. ಮಾತೃಭೂಮಿಯನ್ನು ಪ್ರೀತಿಸುವುದನ್ನು ಬಿಟ್ಟರೆ ದೇಶಭಕ್ತಿ ಎಂಬ ಉದಾತ್ತಗುಣಕ್ಕೆ ಕ್ರೈಸ್ತರು ಕೇವಲ ಪರಕೀಯರಾಗುವರು. ದೇಶಭಕ್ತಿಹೀನರಾಗಿ ಜೀವಿಸುವುದು ಯಾರಿಗೂ ಭೂಷಣಾವಹವಲ್ಲ. ಆದ್ದರಿಂದ ನಮ್ಮ ಕ್ರೈಸ್ತಬಂಧುಗಳು ಹಿಂದೀ ರಾಜಕಾರಣದಲ್ಲಿ ಯೋಗ್ಯ ಕೆಲಸವನ್ನು ಕೈಕೊಂಡು ಮಾತೃಭೂಮಿಯ ಋಣವನ್ನು ಸಲಾಯಿಸುವರೆಂದು ನಾವು ನಂಬುತ್ತೇವೆ. ಈ ವಿಷಯದಲ್ಲಿ ಇನ್ನೂ ಒಂದೆರಡು ಮಾತುಗಳು ಬರೆಯಲಿಕ್ಕಿವೆ. ಆದರೆ ಅವುಗಳನ್ನು ಯಥಾವಕಾಶ ಪ್ರಕಟಿಸುವೆವು.

ಸ್ಫುಟವಿಚಾರಗಳು.

೧. ಲೋರ್ಡ್ ಪೆಂಟಲೆಂಡ್ ದೊರೆಗಳು ಕಳೆದ ಮೇ ತಿಂಗಳ ಕೌನ್ಸಿಲಿನ ಮುಕ್ತಾಯದಲ್ಲಿ ಮಾಡಿದ ಸುಪ್ರಸಿದ್ಧವಾದ ಭಾಷಣದಲ್ಲಿ "ವಿದ್ಯಾರ್ಥಿಗಳೂ ರಾಜಕಾರಣವೂ" ಈ ವಿಷಯವನ್ನು ಕುರಿತು ಹೊರಟ ಗವರ್ನಮೆಂಟ್ ಒರ್ಡರನ್ನು ಸಮರ್ಥಿಸುವಾಗ ಈ "ಸರಕ್ಯುಲರಿಗೆ ಲೋಕಮತದಂತೆಯೆ ಶಿಕ್ಷಣಖಾತೆಯೊಳಗಿನ ಜನರ ಬೆಂಬಲವೂ ಇದೆ" ಎಂಬುದಾಗಿ ಒಂದು ವಿಧಾನವನ್ನು ಮಾಡಿದ್ದರು. ಗವರ್ನರರ ಈ ವಿಧಾನದ ಅಸತ್ಯತೆಯು ಲೋಕಮತದ ಕಡೆಯಿಂದ ಪದೇಪದೇ ವ್ಯಕ್ತವಾಗುತ್ತಲೇ ಇತ್ತು. ಮೇಲಿನ ಸರ್‌ಕ್ಯುಲರು ಹೊರಟ ಕೂಡಲೆ ಜರಗಿದ ಕಡಲೂರ ಪ್ರಾಂತಿಕ ಪರಿಷತ್ತಿನಲ್ಲಿ ಈ ಸರಕ್ಯುಲರು ಏಕಮತದಿಂದ ನಿಷೇಧಿಸಲ್ಪಟ್ಟಿತು, ಬೇರೆಬೇರೆ ಜಿಲ್ಲಾ ಪರಿಷತ್ತುಗಳು ಇದನ್ನು ನಿಷೇಧಿಸಿದವು, ಹಿಂದೀ ಪತ್ರಗಳು ಈ ಸರ್‌ಕ್ಯುಲರಿನ ಘಾತಕತ್ವವನ್ನು ತೋರಿಸಿ, ತಮ್ಮ ಪೂರ್ಣ ಅಸಮ್ಮತಿಯನ್ನು ವ್ಯಕ್ತಗೊಳಿಸಿದರು. ತಥಾಪಿ ಸರಕಾರವು ನೆನೆಸಿಕೊಳ್ಳುತ್ತಿದ್ದುದೇನೆಂದರೆ, ವಿದ್ಯಾಖಾತೆಯವರ ಹಾಗು ಲೋಕಮತದ ಬೆಂಬಲವು—ಆಶ್ರಯವು ತನ್ನ ಕಡೆಗೆಯೆ ಇದೆ!! ಸರಕಾರಿ ಅಧಿಕಾರಿಗಳ ಈ ಕರುಣಾಸ್ಪದ ಸ್ಥಿತಿಯನ್ನು ನೋಡುವಾಗ— ಲೋಕವೂ ತನ್ನಂತೆಯೆ ಕಣ್ಣುಮುಚ್ಚಿಕೊಂಡಿದೆ ಎಂದು ನೆನಸಿ ಕಣ್ಣುಮುಚ್ಚಿ ಹಾಲುಕುಡಿಯುವ ಬೆಕ್ಕಿನ ಸಂಗತಿಯು ನೆನಪಿಗೆ ಬಾರದೆ ಇರದು. ಸುಧಾರಿಸಿದ ಸರಕಾರಕ್ಕೆ ಕೇವಲ ಅವಮಾನಕರವಾದ ಈ ಸರ್‌ಕ್ಯುಲರನ್ನು ಹೊರಡಿಸಿಯೆ ಸರಕಾರವು ಸುಮ್ಮನಾಯಿತೊ? ಇಲ್ಲ. ಅದನ್ನು ಪುನಃ ಸಮರ್ಥಿಸತೊಡಗಿತು. ಹೀಗೆ ಸಮರ್ಥಿಸಿದ್ದರಿಂದ ಫಲವೇನು? ಈ ಸರ್ಕ್ಯುಲರಿಗೆ ಇರುವ ಆದರಣೆಯ ಪರಿಮಿತಿಯು ಪ್ರಕಟವಾಗುತ್ತ ಬಂತು, ಇಂಥಾ ಫಲಪ್ರಾಪ್ತಿಯ ನಿದರ್ಶನವೇನು?

೨. ಇದಕ್ಕೆ ೮-೧೦ ದಿವಸಗಳ ಹಿಂದೆ ನಮ್ಮ ಗವರ್ನರ ದೊರೆಗಳ ಆಶ್ರಯದಲ್ಲಿ ನೆರೆದ ಈ ಸಂಸ್ಥಾನದೊಳಗಿನ ಕೊಲೇಜ ಪ್ರಿನ್ಸಿಪಾಲರ ಪರಿಷತ್ತೆ ನಿದರ್ಶನವಾಗಿದೆ. ಈ ಪರಿಷತ್ತಿನ ವರದಿಯು ಸರಕಾರದ ಕಡೆಯಿಂದ ಇನ್ನೂ ಹೊರಗೆ ಬೀಳಲಿಲ್ಲವಾದರೂ ಮದ್ರಾಸಿನ ವೃತ್ತಪತ್ರಿಕೆಗಳಲ್ಲಿ ಅದನ್ನು ಕುರಿತು ಸಾಕಷ್ಟು ಮಾಹಿತಿಯು ಪ್ರಕಟವಾಗಿದೆ. ಈ ಪರಿಷತ್ತಿನಲ್ಲಿ ಒಂದನೆ ಮತ್ತು ಎರಡನೆ ತರಗತಿಯ ಕೊಲೇಜ ಅಧಿಕಾರಿಗಳು ಹಾಜರಿದ್ದರೆಂಬುದಾಗಿ ಗೊತ್ತಾಗುತ್ತದೆ. ವಿದ್ಯಾರ್ಥಿ ವಸತಿಗೃಹ, ಕ್ರೀಡಾಂಗಣ ಮುಂತಾದ ಕೊಲೇಜುಗಳಿಗೆ ಸಂಬಂಧಪಟ್ಟ ವಿಷಯಗಳಲ್ಲದೆ ಅಧ್ಯಾಪಕವೃತ್ತಿ, ರಾಜಕಾರಣದಲ್ಲಿ ಅಧ್ಯಾಪಕರ ... ವಿದ್ಯಾರ್ಥಿಗಳ ... ಮುಂತಾದ ... ಪರಿಷತ್ತಿನಲ್ಲಿ ... ಆದರೆ ... ಪ್ರಿನ್ಸಿಪಾಲರ ...

ಸಂಗತಿಗಳಲ್ಲಿ ಯಾರ ಮತಗಳನ್ನೂ ತೆಗೆದುಕೊಳ್ಳಲಿಲ್ಲ, ನಿರ್ಣಯಗಳೂ ಆಗಲಿಲ್ಲ. ಆದರೂ ಈ ಪರಿಷತ್ತಿನೊಳಗಿನ ರಾಜಕಾರಣವನ್ನು ಕುರಿತು ನಡೆದ ಬಿಸಿಬಿಸಿಚರ್ಚೆಯಿಂದ ಲೊ. ಪೆಂಟಲೆಂಡರ ಮನಸ್ಸಿನಮೇಲೆ ಹಿತಕರ ಪರಿಣಾಮವುಂಟಾಗಿದೆಯೆಂದು ನೆನೆಸುವುದು ಪೂರ್ಣ ತಪ್ಪಾಗಲಾರದು. ರಾಜಕೀಯ ಕೂಟಗಳಿಗೆ ಕಾಲೇಜ ವಿದ್ಯಾರ್ಥಿಗಳು ಹೋಗಕೂಡದು, ಕಾಲೇಜ ಪ್ರಿನ್ಸಿಪಾಲರು ಸಭೆಯ ಉದ್ದೇಶ ಮಾತ್ರವಲ್ಲ, ಅದರಲ್ಲಿಯ ವಕ್ತನ ಸ್ವಭಾವವನ್ನೂ ಉದ್ದೇಶವನ್ನೂ ಚೆನ್ನಾಗಿ ನಿರೀಕ್ಷಿಸತಕ್ಕದ್ದು. ಇವೆ ಮೊದಲಾದ ಸಂಗತಿಗಳನ್ನು ಒಳಕೊಂಡಿರುವ ಸರ್ಕ್ಯುಲರಿನ ವಿಷಯವು ಮೇಲಿನ ಪರಿಷತ್ತಿನಲ್ಲಿ ಯಾವಾಗ ಚರ್ಚೆಗೆ ಬಂತೋ ಆಗ ಒಬ್ಬನಲ್ಲದೆ, ಬೇರೆ ಎಲ್ಲ ಪ್ರಿನ್ಸಿಪಾಲರು ಬೇರೆಬೇರೆ ಕಾರಣಗಳನ್ನು ಕೊಟ್ಟು ಆ ಸರ್ಕ್ಯುಲರನ್ನು ನಿಷೇಧಿಸಿದರು! ಪರಿಷತ್ತಿನಲ್ಲಿ ನೆರೆದವರು ಕಾಲೇಜ ಅಧಿಕಾರಿಗಳೂ, ಅಧ್ಯಾಪಕರೂ ಮೇಲಿನ ಶರ್ತಗಳನ್ನು ಅನುಸರಿಸುವುದು ಕೇವಲ ಅಸ್ವಹಾರ್ಯವು. (Impracticable.) ಈ ಮಾತನ್ನು ಪೆಂಟಲೆಂಡ ದೊರೆಗಳ ಲಕ್ಷ್ಯಕ್ಕೆ ಬರುವಂತೆ ಮಾಡಿದರು. "ಈ ಸುಪ್ರಸಿದ್ಧ ಸರ್ಕ್ಯುಲರನ್ನು ಕಾಲೇಜ ಅಧ್ಯಾಪಕರು ಅನುಸರಿಸುವುದೆಂದರೆ ಅವರು ಗುಪ್ತಪೋಲೀಸರ ಕೆಲಸವನ್ನೆ ಕೈಕೊಳ್ಳಬೇಕಾಗುವುದು. ಇಂಥ ಕೆಲಸವನ್ನು ಅವರು ಕೈಕೊಂಡನಂತರ ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ ಸ್ವಾಭಾವಿಕವಾಗಿ ಕೊಡುತ್ತಿರುವ ಬಹುಮಾನವನ್ನು ಕೊಡಲಿಕ್ಕಿಲ್ಲ. ಅಲ್ಲದೆ ವಿದ್ಯಾರ್ಥಿಗಳು ರಾಜಕೀಯ ಸಭೆಗಳಿಗೆ ಹೋಗದಂತೆ ಅಧ್ಯಾಪಕರು ನೋಡಿಕೊಳ್ಳತಕ್ಕದ್ದು. ಈ ಮಾತಿನ ಅರ್ಥವೇನು? ದಾದಾಭಾಯಿಯಂಥವರ ಮರಣದ ದುಃಖಪ್ರದರ್ಶಕ ಸಭೆಯಲ್ಲಿ ವಕ್ತನು ತನ್ನ ಭಾಷಣದಲ್ಲಿ ಮರಣಪಟ್ಟ ವ್ಯಕ್ತಿಯ ರಾಜಕೀಯ ಮತವನ್ನು ಪ್ರದರ್ಶಿಸಹೋದರೆ ಆಗ ವಿದ್ಯಾರ್ಥಿಗಳನ್ನು ಕೂಡಲೇ ಅಲ್ಲಿಂದ ಹೊರಡಿಸುವುದೊ? ಈ ಯಾತಾಯಾತಕ್ಕಿಂತ ಇಂಥಿಂಥ ವಕ್ತರ ಭಾಷಣಗಳನ್ನು ವಿದ್ಯಾರ್ಥಿಗಳು ಕೇಳಕೂಡದೆಂಬುದಾಗಿ ಸರಕಾರವೆ ಒಂದು ಲಿಸ್ಟನ್ನು ತಯಾರಿಸಿ ವಿದ್ಯಾರ್ಥಿಗಳ ಕೈಯಲ್ಲಿ ಕೊಟ್ಟರೆ ಬಹಳ ಒಳ್ಳೇದಾಗುವುದು! ವಿದ್ಯಾರ್ಥಿಗಳು ತಮ್ಮ ಯೋಗ್ಯ ಕರ್ತವ್ಯಗಳಲ್ಲಿ ಪೂರ್ಣ ಮಗ್ನರಾಗಿರುವಾಗ ಇಂಥ ನಿಯಮಗಳನ್ನು ಹೊರಪಡಿಸುವುದು ಅವ್ಯವಸ್ಥೆಗೆನೆ ಕಾರಣವಾಗುವುದು. ನ್ಯಾಯದೃಷ್ಟಿಯಿಂದ ನೋಡಿದರೆ ವಿದ್ಯಾರ್ಥಿಗಳನ್ನು ಪ್ರಕೃತ ರಾಜಕೀಯ ಸಭೆಗಳಿಂದ ಪರಾವರ್ತಿಸಿ ಮಡಿಯಾಗಿಡಲು ಯತ್ನಿಸುವುದು ಜಾಣತನದ್ದಲ್ಲ" ಈ ಪ್ರಕಾರ ಅಲ್ಲಿ ನೆರೆದವರು ಸ್ಪಷ್ಟವಾಗಿ ಆಡಿತೋರಿಸಿದರು. ಸಾರಾಂಶ, ಪರಿಷತ್ತಿಗೆ ಬಂದಿರುವ ಸರಕಾರಿ, ಮಿಶನರಿ ಮತ್ತು ಖಾಸಗಿ ಕಾಲೇಜುಗಳ ಅಧಿಕಾರಿಗಳು ಮೇ ತಿಂಗಳಲ್ಲಿ ವಿದ್ಯಾರ್ಥಿಗಳ ವಿಷಯದಲ್ಲಿ ಹೊರಟ ಸರಕಾರಿ ಸರ್ಕ್ಯುಲರಿನ ನಿಷೇಧವನ್ನು ಮಾಡಿರುವರು. ಈ ಸಂಗತಿಯನ್ನು ಮನಸ್ಸಿಗೆ ತಂದು ತಮ್ಮ ಸರ್ಕ್ಯುಲರಿಗೆ ಲೋಕಮತದ ಮತ್ತು ಶಿಕ್ಷಣ ವ್ಯವಸಾಯಿಗಳ ಬೆಂಬಲವಿದೆ ಎಂಬ ನಿರರ್ಥಕ ಮಾತನ್ನು ಹೇಳುವುದು ಯುಕ್ತವಲ್ಲೆಂಬುದು ಇನ್ನಾದರೂ ಲೊ. ಪೆಂಟಲೆಂಡರು ಗ್ರಹಿಸಲಿ. ಲೊರ್ಡ ದೊರೆಗಳು ಲೋಕಮತದ ಬೆಂಬಲವಿದೆ, ಶಿಕ್ಷಣವ್ಯವಸಾಯಿಗಳ ಸಮ್ಮತಿಯಿದೆ, ಎಂದು ಮುಂತಾದ ಮಾತುಗಳನ್ನಾಡುವುದಕ್ಕಿಂತ ಬೇರೆ ಪ್ರಾಂತಿಕ ಸರಕಾರಬಂಧುಗಳ ಸಮ್ಮತಿಯಿದೆ, ಬೆಂಬಲವಿದೆ, ಇತ್ಯಾದಿ ವಿಧಾನಗಳನ್ನು ಮಾಡಿದ್ದರೆ ಅವು ನಿಜವಾಗಿ ಯಥಾರ್ಥವಾಗುತ್ತಿದ್ದವು. ಯಾಕೆಂದರೆ, ಬೇರೆ ಸರಕಾರಗಳು ಇದನ್ನೆ ಅನುಕರಿಸಿದ್ದಾರೆ!

೩. ಮೆಸೆಪೊಟೆಮಿಯಾ ಪ್ರಕರಣದ ಸಂಬಂಧದಿಂದ ಮಾಜಿ ಲೋಕಪ್ರಿಯ ವೈಸರಾಯರಾದ ಲೊರ್ಡ ಹಾರ್ಡಿಂಜ ಪ್ರಭುಗಳ ಮೇಲೆ ವೃಥಾ ಆರೋಪವು ಬಂದು ಪಾರ್ಲಿಮೆಂಟಿನ ಲೋಕಸಭೆಯಲ್ಲಿ ವಿಚಾರವು ನಡೆಯಿತೆಂಬ ಸಂಗತಿಯನ್ನು ನಾವು ಸ್ವದೇಶಾಭಿಮಾನಿಯ ವಾಚಕರಿಗೆ ೧೫ದಿವಸಗಳ ಹಿಂದೆಯೆ ಸ್ಫುಟವಿಚಾರಗಳಲ್ಲಿ ತಿಳಿಸಿದ್ದೇವೆ. ಲೋಕಸಭೆಯಲ್ಲಿ ಆತ್ಮಪಕ್ಷವನ್ನು ಸಮರ್ಥಿಸುವಾಗ ಲೋರ್ಡ ಹಾರ್ಡಿಂಜರು ಮೆಸೆಪೊಟೆಮಿಯಾ ಅಪಘಾತದ ವಿಷಯದಲ್ಲಿ ಸಾಕಷ್ಟು ವಿವರಣವನ್ನು ಕೊಟ್ಟು ಕೊನೆಗೆ "ಸಾಮ್ರಾಜ್ಯಹಿತದ ಬಗ್ಯೆ ನಾನು ಮೊದಲು ಮಾಡಿರುವ ಸೇವೆಯನ್ನೂ ವಿಶೇಷವಾಗಿ ಹಿಂದುಸ್ಥಾನದಲ್ಲಿಯ ಸೇವೆಯನ್ನೂ ಮನಸ್ಸಿನಲ್ಲಿ ತನ್ನಿರಿ" ಎಂದು ಉದ್ಗರಿಸಿರುವರು. ಮಾತ್ರವಲ್ಲ "ನಿಮ್ಮ ದೃಷ್ಟಿಗೆ ನನ್ನ ಹಿಂದುಸ್ಥಾನದ ಆಳಿಕೆಯು ಗೌರವಾಸ್ಪದವಾಗದಿದ್ದರೂ ಹಿಂದಿಜನರಿಗಾದರೂ ಅದು ಮಾನ್ಯವಾಗಿಯೆ ಇದ್ದೀತು" ಎಂಬುದಾಗಿ ಅವರು ನುಡಿದರು. ಲೊರ್ಡ ಹಾರ್ಡಿಂಜರಂಥ ಉದಾರ ಮತದ ಮುತ್ಸದಿಗಳ ಮೇಲೆ ಇಂಥ ನಿರುಪಾಯದ ಮಾತುಗಳನ್ನು ಆಡಿ ತೋರಿಸುವ ಪ್ರಸಂಗವು ಬರುವುದೆಂದರೆ ಬ್ರಿಟಿಷ್ ನ್ಯಾಯದೇವತೆಯ ಕಠೋರತೆಯೆ ವ್ಯಕ್ತವಾಗುವುದು. ಲೊರ್ಡ ಹಾರ್ಡಿಂಜರು ಇಲ್ಲಿಂದ ಉದ್ಯೋಗನಿವೃತ್ತರಾಗಿ ಸ್ವದೇಶಕ್ಕೆ ಹೋಗುವಾಗ ಅವರ ವಿಷಯದಲ್ಲಿ "ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ" ಎಂಬುದಾಗಿ ನಾವು ಅಗ್ರಲೇಖದಲ್ಲಿ ಬರೆದಿದ್ದೆವು. ಅದನ್ನೆ ಈ ಹೊತ್ತು ಪುನಃ ನಮಗೆ ಹೇಳಬೇಕಾಗುತ್ತದೆ. ಮೆಸೆಪೊಟೆಮಿಯಾದಲ್ಲಿ ವಿಶೇಷತಃ ಯುದ್ಧದಲ್ಲಿ ಹಿಂದುಸ್ಥಾನವು ಸರ್ವಪ್ರಕಾರದಿಂದಲೂ ಸಹಾಯಮಾಡಿದೆಂದು ಲೋರ್ಡಪ್ರಭುಗಳು ಹೇಳುವಂತೆಯೆ ನಾವು ಕೂಡ ಹೇಳುತ್ತೇವೆ. ಅವರ ಆಳಿಕೆಯು ಉದಾರತತ್ವಪ್ರೇರಿತವಾಗಿದ್ದು ಅವರ ವಿಷಯದಲ್ಲಿ ಇಡೀ ಹಿಂದುಸ್ಥಾನವು ಪೂರ್ಣ ಸಹಾನುಭೂತಿಪರವಾಗಿದೆ ಎಂಬುದನ್ನು ನಾವು ತಿಳಿಸುತ್ತೇವೆ. ಲೋರ್ಡ ಹಾರ್ಡಿಂಜರ ಬಗ್ಯೆ ತಮ್ಮ ಸಹಾನುಭೂತಿಯನ್ನೂ ಕಮಿಷನ್ ಆರೋಪದ ನಿಷೇಧವನ್ನೂ ವ್ಯಕ್ತಗೊಳಿಸಲು ಹಿಂದುಸ್ಥಾನದ ಬೇರೆಬೇರೆ ಭಾಗಗಳಲ್ಲಿ ಸಭೆಗಳಾಗುತ್ತಿವೆ. ನಮ್ಮ ಮಂಗಳೂರಲ್ಲೂ ಅದೆ ರೀತಿಯಿಂದ ಹೋಮ್-ರೂಲ್-ಲೀಗಿನವರದಾಗಲಿ ಡಿಸ್ಟ್ರಿಕ್ಟ್ ಎಸೊಸಿಯೇಷನದಾಗಲಿ ಸಭೆಸೇರಿ ಹಾರ್ಡಿಂಜ ಪ್ರಭುಗಳ ಬಗ್ಯೆ ಸಹಾನುಭೂತಿಯನ್ನು ವ್ಯಕ್ತಗೊಳಿಸಬೇಕೆಂದು ನಾವು ಸೂಚಿಸುವೆವು.

೪. ಬ್ರಿಟಿಷ ಹಿಂದುಸ್ಥಾನದಲ್ಲಿ ವಿದ್ಯಾವಿಷಯದಲ್ಲಾಗಲಿ ಆರೋಗ್ಯ ವಿಷಯದಲ್ಲಾಗಲಿ ಒಂದು ಸುಧಾರಣೆಯನ್ನು ಮಾಡುವುದಾದರೆ ಸರಕಾರಕ್ಕೆ ಅನೇಕ ತೊಂದರೆಗಳೂ, ನೆವಗಳೂ ಬಂದೊದಗುವವು. ಆದರೆ ಸಂಸ್ಥಾನಗಳು ಸ್ವತಂತ್ರವಾದ ಪತ್ರಿಕೆಗಳು... ತಮಗೆ ಬೇಕಾದಷ್ಟು ... ಸುಧಾರಣೆಗಳನ್ನು ಮಾಡುತ್ತವೆ. ... ಅಭಿನಂದನೀಯವಾದ ಮಾತು. ... [illegible]

ತ್ತಿದ್ದಾವೆಂಬುದನ್ನು ನಾವು ಆಗಾಗ್ಯೆ ವಾಚಕರಿಗೆ ತಿಳಿಸುತ್ತಲೆ ಇದ್ದೇವೆ. ಆದರೂ ಕೊಚ್ಚಿ ಸಂಸ್ಥಾನದಲ್ಲಿ ಈಚೆಗೆ ಆದ ಕೆಲವು ಮಾರ್ಪಾಟುಗಳನ್ನು ನಮೂದಿಸುವುದು ಅಗತ್ಯವಾಗಿದೆ. ಕೊಚ್ಚಿಯಲ್ಲಿ ಗ್ರಾಮ ಪಂಚಾಯತಿಯ ಸಂಸ್ಥೆಗಳು ಸ್ಥಾಪಿತವಾಗಿವೆ. ಪ್ರಾಥಮಿಕ ಶಿಕ್ಷಣವು ಉಚಿತವಾಗಿ ಕೊಡಲ್ಪಡುತ್ತದೆ. ಈ ಸಾಮಾನ್ಯ ಸುಧಾರಣೆಗಳಲ್ಲದೆ, ಬೇರೆ ಕೆಲವು ವಿಶೇಷತರದ ಸುಧಾರಣೆಗಳನ್ನು ಅಲ್ಲಿಯ ಸಂಸ್ಥಾನಾಧಿಪತಿಗಳು ಮಾಡಲುಪಕ್ರಮಿಸಿರುವರು. ಅಲ್ಲಿ ಈಗ ರೂಢವಾಗಿರುವ ಶಿಕ್ಷಣದ ಪ್ರಯೋಜನವನ್ನು ಪಡಕೊಳ್ಳಲು ಅಸಾಧ್ಯವಿರುವವರಿಗೆ ಉದಾಹರಣಾರ್ಥವಾಗಿ—ಬೇಸಾಯಗಾರರಿಗೆ, ಕೂಲಿಗಳ ಮಕ್ಕಳಿಗೆ ಮತ್ತು ಶಿಕ್ಷಣದ ವಯಸ್ಸು ದಾಟಿಹೋದವರಿಗೆ—ಅನುಕೂಲವಾಗುವಂತೆ ಆರೋಗ್ಯ ವ್ಯವಸಾಯ, ಪರಸ್ಪರ ಸಹಕಾರಿತ್ವ, ವ್ಯಾಪಾರ ಮುಂತಾದ ಉಪಯುಕ್ತ ವಿಷಯಗಳನ್ನು ಅಲ್ಲಲ್ಲಿ ಉಪನ್ಯಾಸಗಳ ಮೂಲಕ ತಿಳಿಸಿಕೊಡುವ ಏರ್ಪಾಟನ್ನು ಕೊಚ್ಚಿಸರಕಾರವು ಮಾಡಿದೆ. ಇದಕ್ಕಾಗಿ ಒಂದೊಂದು ಬೋರ್ಡನ್ನು ನೇಮಿಸಿ ಆ ಬೋರ್ಡು ಮೇಲೆ ಹೇಳಿದ ವಿಷಯಗಳನ್ನು ಕುರಿತು ಉಪನ್ಯಾಸಗಳನ್ನು ತಯಾರಿಸತಕ್ಕದ್ದು, ವಿಷಯವು ಅಪ್ರಬುದ್ಧರಿಗೂ ಸುಲಭವಾಗಿ ಗೊತ್ತಾಗುವಂತೆಯೆ ಉಪನ್ಯಾಸಗಳನ್ನು ಸಿದ್ಧಪಡಿಸತಕ್ಕದ್ದು, ಅಲ್ಲದೆ ಪ್ರಸಂಗವಿಶೇಷದಲ್ಲಿ ಮೆಜಿಕ್-ಲಾಂಟರ್ನ ಮುಂತಾದ್ದನ್ನು ತೋರಿಸಿ ಪ್ರತಿಪಾದ್ಯವಿಷಯಕ್ಕೆ ಸೌಲಭ್ಯವನ್ನು ತರತಕ್ಕದ್ದು. ಸಾರಾಂಶ—ಉಚಿತವಾಗಿ ಕೊಡಲ್ಪಡುವ ಪ್ರಾಥಮಿಕ ಶಿಕ್ಷಣದ ಲಾಭವನ್ನು ಹೊಂದಲು ಸಾಧ್ಯವಿಲ್ಲದವರು ಕೇವಲ ಅಜ್ಞಾನಿಗಳಾಗಿರಬೇಕೆಂದಿಲ್ಲ, ಈ ವಿಧದಿಂದಲಾದರೂ ವ್ಯಾವಹಾರಿಕ ಮತ್ತು ಆರೋಗ್ಯ ವಿಷಯಕ ಶಿಕ್ಷಣವನ್ನು ಪಡೆದು ಸಂಸ್ಥಾನದ ಪ್ರಜೆಗಳೆಲ್ಲರೂ ನಿಜವಾದ ನಾಗರಿಕರಾಗಬೇಕೆಂಬ ಶುಭಮಹತ್ವಾಕಾಂಕ್ಷೆಯು ಸಂಸ್ಥಾನಾಧಿಪತಿಗಳಲ್ಲಿ ಮೂಡಿ ತದನುಸಾರ ಅವರು ಪ್ರಯತ್ನಿಸುತ್ತಿದ್ದಾರೆ; ಇದು ಶುಭಲಕ್ಷಣವೇ ಸರಿ.

೫. "ರಾಜಪದವು ಮೂರು ಗಳಿಗೆಯದು" ಎಂಬ ಮಾತಿನ ಸತ್ಯತೆಯು ಮೊದಲು ಯಾರಿಗೂ ಬಂದುದಿರಲಿ, ಆದರೆ ಮೊನ್ನೆ ಇತ್ತಲಾಗೆ ಚೀನಾದೇಶದ ಮಂಚೂ ಮನೆತನದ ಅರಸನ ಅನುಭವಕ್ಕೆ ಅದು ಬಂತೆಂಬುದನ್ನು ಯಾರೂ ಒಪ್ಪಿಕೊಳ್ಳಬಹುದು. ಚೀನದಲ್ಲಿ ಮೊದಲು ಎಷ್ಟೊ ಸಾರಿ ರಾಜ್ಯಕ್ರಾಂತಿಯಾಗಿ ಕೊನೆಗೆ ಬಾದಶಹನನ್ನು ಓಡಿಸಿ, ರಾಜಸತ್ತೆಯ ಬದಲು ಪ್ರಜಾಸತ್ತಾಕ ರಾಜ್ಯಪದ್ಧತಿಯು ಅಸ್ತಿತ್ವದಲ್ಲಿ ಬಂದಿತ್ತು. ಪರಂತು ಸದ್ಯ ಇನ್ನೊಮ್ಮೆ ರಾಜ್ಯಕ್ರಾಂತಿಯಾಗಿ ಅದರಿಂದ ಲೋಕಮತದ ಅಧ್ಯಕ್ಷನಿಗೆ ರಾಜೀನಾಮೆ ಕೊಡಬೇಕಾಯಿತು. ಈ ಕ್ರಾಂತಿಯನ್ನು ಮಾಡಿದ ಸೇನಾಪತಿ ಚಂಗಸೇನನ ಬಲದಿಂದ ಮಂಚೂ ಮನೆತನದವನು ಬಾದಶಹನಾಗಿ ಬಂದನು. ಇವನು ಎಳೆಯ ಪ್ರಾಯದವನು. ಇವನು ಸೇನಾಪತಿಯ ಸಹಾಯದಿಂದ ಬಾದಶಹನಾಗಿ ಬಂದರೂ ಚೀನಾದೇಶದೊಳಗಿನ ಪ್ರಾಂತಿಕ ಅಧಿಕಾರಿಗಳು ಲೋಕಸತ್ತಾವಾದಿಗಳಾದ್ದರಿಂದ ಬಾದಶಹನ ಎದುರುನಿಂತು ಹೋರಾಡಲುಪಕ್ರಮಿಸಿದರು. ಬಾದಶಹನ ಸೈನ್ಯಕ್ಕೂ ಮಿಕ್ಕವರ ಸೈನ್ಯಕ್ಕೂ ದ್ವಂದ್ವವು ನಡೆದು ಹೊಸ ಬಾದಶಹನ ಸೈನ್ಯವು ಬಿತ್ತು, ಸಿಂಹಾಸನವೂ ಬಿತ್ತು. ಅರ್ಥಾತ್ ಮೂರು ಗಳಿಗೆಯ ರಾಜಪದವನ್ನು ಬಿಟ್ಟು ಹೊಸ ಬಾದಶಹನಿಗೆ ಓಡಿಹೋಗಬೇಕಾಯಿತು! ಈಗ ಪುನಃ ಅಲ್ಲಿ ಮೊದಲಿನಂತೆ ಲೋಕಸತ್ತೆಯೆ ಪ್ರಾರಂಭವಾಗಿದೆ.

೬. ಚೆಂಬರಲೇನರು ಹೋಗಿ ಭಾರತ ಮಂತ್ರಿತ್ವದ (ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿತನದ) ಸ್ಥಾನದಲ್ಲಿ ಮಿ. ಮೊಂಟೆಗರು ಬಂದಿರುವರೆಂಬ ಸುದ್ದಿಯನ್ನು ನಾವು ಕಳೆದ ಸಂಚಿಕೆಯಲ್ಲಿ ತಿಳಿಸಿರುವೆವು. ಹೋದ ಮಂತ್ರಿಗಳನ್ನೂ ಎಂದರೆ ಮಿ. ಚೆಂಬರ್‌ಲೇನರನ್ನೂ ಇವರನ್ನೂ ಹೋಲಿಸಿ ನೋಡಿದರೆ "ನಗದಾಪೇಕ್ಷಾಂ ವೀಟ ಮವೂ" ಎಂದರೆ ಕಲ್ಲಿಗಿಂತಲೂ ಇಟ್ಟಿಗೆ ಮೃದು ಎಂಬ ನ್ಯಾಯದಂತೆ ಇವರು ಒಳ್ಳೆಯವರೆಂಬುದಕ್ಕೆ ಅಡ್ಡಿ ಇಲ್ಲ. ಮೊದಲೊಮ್ಮೆ ಇವರು ಹಿಂದುಸ್ಥಾನದ ಅಂಡರ್ ಸೆಕ್ರೆಟರಿಗಳಾಗಿದ್ದಾಗ ಹಿಂದುಸ್ಥಾನದ ವಿಷಯದಲ್ಲಿ ಕೂಡಿದಷ್ಟು ಸಹಾನುಭೂತಿಯನ್ನು ತೋರಿಸಿದ್ದಾರೆ. ಮಧ್ಯಮಧ್ಯದಲ್ಲೂ ಹಿಂದುಸ್ಥಾನದ ಪಕ್ಷವನ್ನು ವಹಿಸಿ ಎಷ್ಟೊ ಸಾರಿ ವಾದಿಸಿದ್ದಾರೆ. ಮೊನ್ನೆಯ ಮೆಸೆಪೊಟೆಮಿಯಾ ಪ್ರಕರಣದಲ್ಲೂ ತಮ್ಮ ಸತ್ಯಪ್ರಿಯತೆಯನ್ನೆ ವ್ಯಕ್ತಗೊಳಿಸಿದ್ದಾರೆ. ಇವರು ಉದಾರಪಕ್ಷದವರಾದ ಕಾರಣ ಇವರ ಆಳಿಕೆಯು ಹಿಂದುಸ್ಥಾನಕ್ಕೆ ಹಿತಾವಹವಾದೀತೆಂದು ಹಿಂದಿಗಳು ಆಶಿಸುತ್ತಿದ್ದಾರೆ. ಅಲ್ಲದೆ, ಇವರು ಮೊದಲು ಹಿಂದುಸ್ಥಾನಕ್ಕೆ ಬಂದು ದೇಶವನ್ನೆಲ್ಲ ಸಂಚರಿಸಿ ಇಲ್ಲಿಯ ಸ್ಥಿತಿಗತಿಗಳನ್ನು ಕಣ್ಣಾರೆನೋಡಿಕೊಂಡು ಹೋದವರಾದ್ದರಿಂದ ಆ ಅನುಭವವು ಇವರಿಗೆ ಸಹಾಯಕವೆ ಆದೀತು. ಹಿಂದುಸ್ಥಾನದೊಳಗಿನ ವರಿಷ್ಠ ಅಧಿಕಾರಿಗಳು ಸದ್ಯಃಕಾಲದಲ್ಲಿ ಹಿಂದೀಜನರ ಸಾತ್ವಿಕ ಆಕಾಂಕ್ಷೆಗಳನ್ನು ತಗ್ಗಿಸಿಬಿಡುವುದಕ್ಕಾಗಿ ತಮ್ಮ ಪ್ರತಿಗಾಮಿ ಧೋರಣದ ಒತ್ತಾಟವನ್ನು ಕೈಕೊಂಡಿರುವ ಈ ನಾಜೂಕ ಸಮಯದಲ್ಲಂತೂ ಮಿ. ಮೊಂಟೆಗರಂಥ ಒಬ್ಬ ಅಧಿಕಾರಿಯು ಇಲ್ಲಿಯವರ ತಲೆಯ ಮೇಲೆ ಇರುವುದು ಅತಿ ಆವಶ್ಯಕವು, ಆದರೆ ಮೊಂಟೆಗರದೊರೆಗಳು ಸ್ವತಃ ಉದಾರಮನಸ್ಕರಾಗಿ ಸಹಾನುಭೂತಿ ಪ್ರೇರಿತರಾಗಿದ್ದರೂ ಇಲ್ಲಿಯ ಎಂಗ್ಲೊ ಇಂಡಿಯನ್ ಪತ್ರಿಕೆಗಳು ತಮ್ಮ ವಕ್ರ ಲೇಖಣಿಯ ಪೆಟ್ಟಿನಿಂದ ಅವರನ್ನು ಹದಗೊಳಿಸುತ್ತಿದ್ದಾರೆ! ಇನ್ನೊಂದು, ಒಬ್ಬ ಮನುಷ್ಯನು ಅಧಿಕಾರ ಬರುವ ವರೆಗೆ ನ್ಯಾಯನೀತಿ ಪ್ರಿಯನಾಗಿಯೆ ಇರುವನು. ಆದರೆ ಅಧಿಕಾರವು ಕೈವಶವಾದ ಮೇಲೆ ಅವನಲ್ಲಿ ಕೊಂಚವಾದರೂ ಚಲನವುಂಟಾಗುತ್ತದೆಂದು ಅನುಭವಿಕರು ಹೇಳುತ್ತಾರೆ. ಈ ದೃಷ್ಟಿಯಿಂದ ಮತ್ತು ಎಂಗ್ಲೊ ಇಂಡಿಯನರ ಮೇಲಿನ ಪ್ರಯತ್ನದ ಕಾರಣದಿಂದ ನೋಡುವಾಗ ಮಿ. ಮೊಂಟೆಗರು ತಮ್ಮ ಮೇಲಿನ ಹಿಂದಿ ಜನರ ನಂಬಿಕೆಯನ್ನು ಹಾಗೆಯೆ ಇಡುವರೊ ಅಥವಾ ಅದನ್ನು ಕಲಕಿಸುವರೊ ಎಂಬುದನ್ನು ಮಾತ್ರ ನಿರೀಕ್ಷಿಸಬೇಕಾಗಿದೆ.

೭. ಇಲ್ಲಿಯ ಕರಂಗಲಪಾಡಿ ದೇವಸ್ಥಾನದ ಎದುರು ಮಾಂಸ ಮಾರಾಟದ ಮಾರ್ಕೆಟನ್ನಿಡಬೇಕೆಂದು ನಮ್ಮ ಮಂಗಳೂರು ಮುನ್ಸಿಪಾಲಿಟಿಯಲ್ಲಿ ಒಂದು ಸೂಚನೆಯು ಬಂದಿದೆಂಬುದಾಗಿ ಕೇಳುತ್ತೇವೆ. ಮುನ್ಸಿಪಾಲಿಟಿಯ ಕಳೆದ ಅಧಿವೇಶನದಲ್ಲಿ ಮೇಲಿನ ಸೂಚನೆಯು ... [illegible]

ಕ್ರಿಸ್ತರೂ, ಅಪವಾದಕ್ಕೆ ಒಬ್ಬ ಹಿಂದು ಸಭಾಸದರೂ ದೇವಸ್ಥಾನದ ಎದುರು ಮಾಂಸ ವಿಕ್ರಯ ಮಾಡಬೇಕೆಂಬುದಾಗಿ ವಾದಿಸಿದರು. ಬೇರೆ ಹಿಂದು ಸಭಾಸದರು ಕೂಡದೆಂಬುದಾಗಿ ನಿಷೇಧಿಸಿದರು. ಮುನ್ಸಿಪಾಲಿಟಿಯಂಥ ಸಾರ್ವಜನಿಕ ಸಂಸ್ಥೆಗಳು ಕ್ರಿಸ್ತ, ಹಿಂದು, ಮುಸಲ್ಮಾನ ಇತ್ಯಾದಿ ಒಂದೊಂದೆ ವಿವಕ್ಷಿತ ಸಮಾಜದ ಹಿತಕ್ಕಾಗಿ ಬಂದ ಸಂಸ್ಥೆಗಳಲ್ಲ. ಈ ಮಾತು ಎಷ್ಟು ನಿಜವೊ ಅಷ್ಟೆ ಕೆಂಬಹುದಾ ಇದಕ್ಕಿಂತಲೂ ಹೆಚ್ಚು ಮಹತ್ವದ ಮತ್ತು ನಿಜವಾದ ತತ್ವವು ಯಾವುದೆಂದರೆ, ಒಂದು ಸಮಾಜದ ಧಾರ್ಮಿಕ ವಿಶ್ವಾಸಕ್ಕೆ ತೊಡಕು ಹುಟ್ಟಿಸುವಂಥ ಅಕ್ಷಮ್ಯ ಕೃತ್ಯಗಳನ್ನು ಇಂಥ ಸಂಸ್ಥೆಗಳು ಮಾಡಕೂಡದು. ಮುಸಲ್ಮಾನ ಮಸೀದಿಗಳ ಎದುರು ಹಂದಿಗಳ ಮಾಂಸವನ್ನು ವಿಕ್ರಯಿಸುವದಾಗಲಿ, ಕ್ರಿಸ್ತ ದೇವಾಲಯಗಳಲ್ಲಿ ವೇಶ್ಯಾಸ್ತ್ರೀಯರಿಗೆ ಬಿಡಾರ ಕೊಡುವುದಾಗಲಿ ಅವರವರ ಧಾರ್ಮಿಕ ತಿಳಿವಿನಂತೆ "ಹರಾಮ" ಅಥವಾ ಅಶುದ್ಧಕರವಾಗಿರುವುದು. ಸಾರಾಸಾರ ವಿವೇಕವಿರುವವನು ಇಂಥ ಕೃತ್ಯಗಳನ್ನು ಮಾಡಿ ಅನ್ಯಧರ್ಮ ಬಾಂಧವರ ಮನಸ್ಸನ್ನು ಅಕಾರಣವಾಗಿ ನೋಯಿಸುವ ಪಾಪವನ್ನು ತನ್ನ ಸೆರಗಿನಲ್ಲಿ ಎಂದೂ ಕಟ್ಟಿಕೊಳ್ಳನು! ಮೇಲಿನ ಸೂಚನೆಯು ಬಂದು ಸಭಾಸದರ ಅನುಕೂಲ ಪ್ರತಿಕೂಲ ಮತಗಳು ಹೊರಬಿದ್ದ ಮೇಲೆ ಅಧ್ಯಕ್ಷರು ಈ ಪ್ರಶ್ನದ ಆಲೋಚನದ ಬಗ್ಗೆ ಒಳಕಮಿಟಿಯನ್ನು ನೇಮಿಸಲು ಸೂಚಿಸಿ ಆ ಪ್ರಕಾರ ಒಂದು ಒಳಕಮಿಟಿಯನ್ನು ನೇಮಿಸಿದ್ದಾರೆಂದು ಕೇಳುತ್ತೇವೆ. ಈ ಪ್ರಶ್ನವನ್ನು ಸಜೀವದಲ್ಲಿಟ್ಟು ಅದರ ವಿಮರ್ಶೆಯನ್ನು ಮಾಡುತ್ತಿರುವುದಕ್ಕಿಂತ ಮಾಂಸ ಮಾರಾಟದ ಏರ್ಪಾಟವನ್ನೆ ಬೇರೆ ಕಡೆಯಲ್ಲಿ ಮಾಡಿದ್ದರೆ ಒಳ್ಳೇದಾಗುತ್ತಿತ್ತಲ್ಲವೆ? ಇಷ್ಟು ಉದ್ದ ಎಳೆಯುವುದು ಅಗತ್ಯವಿದ್ದಿಲ್ಲ. ಆದರೆ ನಗರದ ಹಿತಕ್ಕಾಗಿಯೆ ಈ ಕೆಲಸಗಳು ನಡೆಯುತ್ತವಲ್ಲ! ಇರಲಿ. ಈ ವಿಷಯವನ್ನು ಕುರಿತು ನಮಗೆ ಹೇಳಬೇಕಾದ ಮುಖ್ಯ ಮಾತು ಯಾವುದೆಂದರೆ; ಕ್ರಿಸ್ತರಾಗಲಿ, ತನ್ನೀಯರಾಗಲಿ ಈ ಪ್ರಶ್ನವನ್ನು ಪರಮತ ಸಹಿಷ್ಣುತ್ವದ ದೃಷ್ಟಿಯಿಂದ ಆಲೋಚಿಸಿ ವಿನಾಕಾರಣ ಹಿಂದುಗಳ ಮನಸ್ಸನ್ನು ನೋಯಿಸಬಾರದು. ಅದರಲ್ಲಿ ಯಾರಿಗೂ ಪುರುಷಾರ್ಥವಿಲ್ಲ.

ಸ್ಥಳಿಕ — ಮಂಗಳೂರು.

ಥಿಯೊಸೊಫಿಕಲ್ ಸೊಸೈಟಿಯ ಬ್ರಹ್ಮಶ್ರೀ ಕೆ. ನಾರಾಯಣಸ್ವಾಮಿ ಅಯ್ಯರರವರು ಇಲ್ಲಿಗೆ ಬಂದು ಇತ್ತಲಾಗೆ ಕೆಲವು ದಿವಸಗಳಿಂದ ಉಪನ್ಯಾಸಗಳು ಗಣಪತಿ ಸೆಕೆಂಡರಿ ಕಾಲೆಯಲ್ಲಿಯೂ, ಕೆನರಾ ಹೈಸ್ಕೂಲಿನಲ್ಲಿಯೂ ಇವರಿಂದ ಕೊಡೋಣಾಗುತ್ತವೆ. ಮಂಗಳೂರಿನಲ್ಲಿ ಸರ್ವರಿಗೂ ಅನುಕೂಲವಾದ ಸ್ಥಳದಲ್ಲಿ ಥಿಯೊಸೊಫಿಕಲ್ ಸೊಸೈಟಿಯ ಬಗ್ಯೆ ಒಂದು ಮಂದಿರವನ್ನು ಸ್ಥಾಪಿಸಬೇಕೆಂಬುವ ಉದ್ದೇಶವು ನಾರಾಯಣಸ್ವಾಮಿ ಅಯ್ಯರರಲ್ಲಿರುವುದು. ಇದರ ನೆರವೇರಿಕೆಯ ಬಗ್ಯೆ ಇವರು ಬಹಳವಾಗಿ ಪ್ರಯತ್ನಿಸುತ್ತಿರುವರು. ಈ ಸೊಸೈಟಿಯ ಧ್ಯೇಯಗಳು ಇಲ್ಲಿ ಬಲವಾಗಿ ಬೇರೂರಿ ಈ ಸಂಘದವರ ಉದ್ದಿಷ್ಟ ಹೇತುಗಳು ಇಲ್ಲಿ ಫಲಿಸಬೇಕಾದರೆ ಈ ಸಂಘದ ಬಗ್ಯೆ ಒಂದು ಮಂದಿರವು ಇಲ್ಲಿ ಅಗತ್ಯವಾಗಿರುವದು.

ಇದೇ ಬರುವ ಆದಿತ್ಯವಾರ ಇಲ್ಲಿಯ ಮಾಜಿ ಗಣಪತಿ ಸೆಕೆಂಡರಿ ಶಾಲೆಯ ಕಟ್ಟಡದಲ್ಲಿ ರಾ. ಎಸ್. ಶೇಷಪ್ಪನವರು ತಮ್ಮ ಬಾಹುಬಲದ ಸಾಧನೆಗಳನ್ನು ಆಡಿತೋರಿಸುವರು. ಆಟವು ಶ್ಯಾಮ ಘಂಟೆ ೪ಕ್ಕೆ ಪ್ರಾರಂಭವಾಗುವದು.

ಇಲ್ಲಿಯ ಪೋಲೀಸ ಸಬ್ ಇನ್ಸಪೆಕ್ಟರರಾದ ರಾ. ಸಿಬಾಡ ಅಮೃತರಾವ್ ಹೆಡ್‌ಕೊನ್ಸ್ಟೇಬಲ್ ಮೋನಪ್ಪ ಮತ್ತು ದೂಮಲ್ಪೊ ಈ ಮೂವರನ್ನು ಕೆಲಸದಿಂದ ತತ್ಕಾಲಕ್ಕೆ ಅಮಾನತುಪಡಿಸಿರುವರು. ಒಂದು ಕಳವಿನ ಮೊಕದ್ದಮೆಯಲ್ಲಿ ಪುತ್ತಳಿ ನಾಯಕಸ್ತಾನಿಯೆಂಬಾಕೆಯನ್ನು ಪೀಡನೆಗೆ ಗುರಿಪಡಿಸಿದರೆಂಬ ಆರೋಪಣೆಯು ತಕ್ಷೀರು ಇವರ ಮೇಲೆ ದಾಖಲು ಆಗಿರುವದರಿಂದ ಇವರನ್ನು ಹೀಗೆ ಅಮಾನತುಪಡಿಸಿರುವರೆಂಬುದಾಗಿ ಕೇಳುತ್ತೇವೆ.

ಇದೇ ತಿಂಗಳ ತಾ. ೨೬ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೬ ಪ್ಲೇಗು ಮರಣಗಳಿದ್ದವು. ಕೊಡಿಯಾಲ ಬೈಲ್‌ವಾರ್ಡಿನಲ್ಲಿ ೧, ಸೆಂಟ್ರಲ್‌ವಾರ್ಡಿನಲ್ಲಿ ೧, ಕೋರ್ಟವಾರ್ಡಿನಲ್ಲಿ ೧, ಪೋರ್ಟವಾರ್ಡಿನಲ್ಲಿ ೨, ಗೋಳಿಕಟ್ಟೆವಾರ್ಡಿನಲ್ಲಿ ೧.

ಮಂಗಳೂರು ಮುನ್ಸಿಪಾಲಿಟಿಯ ವಾರ್ಡುಗಳ ವಿಭಜನೆ ಮತ್ತು ಇವುಗಳಿಗೆ ಕೌನ್ಸಿಲರರು ಎಷ್ಟೆಷ್ಟು ಜನರು ಆರಿಸಲ್ಪಡಬೇಕೆಂಬುವ ಬಗ್ಗೆ ಮುನ್ಸಿಪಲ್ ಕೌನ್ಸಿಲಿನಿಂದ ಸೂಚಿಸೋಣಾದ ಬದಲಾವಣೆಗಳು ಫೋರ್ಟ ಸೆಂಟ್ ಜೋರ್ಜಗಜೇಟಿನಲ್ಲಿ ಪ್ರಕಟಿಸಲ್ಪಟ್ಟಿರುವವು. ಈ ಪ್ರಕಟಣೆ ಮೇರೆಗೆ ಕೊಡಿಯಾಲಬೈಲು ವಾರ್ಡನ್ನು ಪೂರ್ವ ಮತ್ತು ಪಶ್ಚಿಮದ ಎರಡು ವಾರ್ಡುಗಳನ್ನಾಗಿ ಮಾಡಿ ಪ್ರತಿ ವಾರ್ಡಿಗೆ ಎರಡೆರಡು ಜನ ಮೆಂಬರರನ್ನು ಆರಿಸುವ ಹಕ್ಕು ಕೊಡೋಣಾಗಿರುವದು. ಗೋಳಿಕಟ್ಟೆ ವಾರ್ಡಿಗೆ ಪ್ರಕೃತ ಮೂರು ಕೌನ್ಸಿಲರರ ಸಂಖ್ಯೆಯನ್ನು ೨ಕಮ್ಮಿ ಮಾರ್ಕೆಟ್ ವಾರ್ಡಿನ ೨ ಕೌನ್ಸಿಲರರ ಸಂಖ್ಯೆಯನ್ನು ೧ಕಮ್ಮಿ ಪೋರ್ಟ ವಾರ್ಡಿನ ೨ ಕೌನ್ಸಿಲರರ ಸಂಖ್ಯೆಯನ್ನು ೧ಕಮ್ಮಿ ತಗ್ಗಿಸಿರುವರು. ಜಪ್ಪು ವಾರ್ಡಿಗೆ ಈಗೆ ಒಬ್ಬ ಕೌನ್ಸಿಲರಿದ್ದದ್ದು ೨ ಜನರು, ಕೋರ್ಟ ವಾರ್ಡಿಗೆ ೨ ಇದ್ದಲ್ಲಿ ೩ ಜನರು, ಈ ರೀತಿ ಬದಲಾವಣೆ ಸೂಚಿಸೋಣಾಗಿರುವವು. ಇದೇ ಬರುವ ಆಗೋಸ್ತು ತಿಂಗಳ ಅಂತ್ಯದೊಳಗೆ ಇದಕ್ಕೆ ಆಕ್ಷೇಪಗಳು ಮುನ್ಸಿಪಲ್ ಪುರಜನರಿಂದ ಬಾರದೆ ಇದ್ದರೆ ಸಪ್ಟಂಬರ ತಿಂಗಳಿಂದ ಇವುಗಳು ಜ್ಯಾರಿಗೆ ಬರುವವು.

ಪುತ್ತೂರು— ... [illegible]

...ದಕ್ಕೆ ಸ್ವಲ್ಪ ... ಹಿಂತೆಗೆದಿರುವರಂತೆ. ತಲಚೇರಿಯಲ್ಲಿ ಒಬ್ಬ ...ಯು ರೂ. ೧೫,೦೦೦ ಸಾಲ ಮತ್ತು ಅದರ ಅರ್ಧದಷ್ಟು ಮಾತ್ರವೇ ... ಇರುವುದರಿಂದ ದಿವಾಳಿಯಾದನು ಎಂಬ ವರ್ತಮಾನ ಕೇಳಿಸುತ್ತದೆ.

ಪ್ಲೀಡರ್‌ಶಿಪ್ ಪರೀಕ್ಷೆಯು ಇನ್ನು ಮುಂದೆ ವರ್ಷಕ್ಕೆ ಎರಡುಸಲ ಮಾಡಲ್ಪಡುವುದಾಗಿ ಮದ್ರಾಸು ಸರಕಾರದವರು ನಿಶ್ಚಯಿಸಿರುವುದರಿಂದ ಇದೇ ಬರುವ ಒಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಆಗಬಹುದಾದ ಪರೀಕ್ಷೆಯ ಅರ್ಜಿಗಳನ್ನು ಬರುವ ಓಗೋಸ್ತು ೧೫ನೇ ತಾರೀಕಿನೊಳಗೆ ಆಯಾಯಾ ಜಿಲ್ಲೆಯ ಡಿಸ್ಟ್ರಿಕ್ಟ್ ಜಡ್ಜರ ಬಳಿಗೆ ರವಾನಿಸಬೇಕಾಗಿ ಹೈಕೋರ್ಟಿನ ಡಿಪ್ಯುಟಿ ರಿಜಿಸ್ಟ್ರಾರರವರು ತಿಳಿಸಿರುವರು.

ಜಿ. ಐ. ಪಿ. ರೈಲ್ವೇಯ ಕಬ್ಬಿಣದ ಕಾರ್ಖಾನೆಯಲ್ಲಿ ಕೆಲಸಮಾಡುವ ಸುಮಾರು ೫,೦೦೦ ಮಂದಿ ತಮಗೆ ಮುಂಗೈಬತ್ತ ಕೊಡಬೇಕೆಂದು ಮುಷ್ಕರಹಿಡಿದು ಕೆಲಸವನ್ನು ಮನ್ನಾಮಾಡಿದರು. ಈ ಮೊದಲು ೧೫ರೂಪಾಯಿಗೆ ಮಿಕ್ಕಿ ೩೦ ರೂಪಾಯಿ ವರೆಗೆ ಸಂಬಳ ಇರುವವರು ಒಂದುಸಲ ತಮಗೆ ನಿಶ್ಚಯಿಸಿದ್ದ ಮುಂಗೈಬತ್ತ ನಿಲ್ಲಿಸಿದಕಾರಣ ಮುಷ್ಕರಹಿಡಿದನ್ನು ಅವರ ಹೇಳಿಕೆಮೇರೆಗೆ ಆ ಬತ್ತ ಕೊಡಲ್ಪಟ್ಟಿತು. ಈಗ ಅದೇ ರಿಯಾಯತಿಯನ್ನು ೫೦ರೂಪಾಯಿ ಸಂಬಳದ ವರೆಗೆ ಕೊಡಿಸಬೇಕೆಂದು ಈಗಿನ ಮುಷ್ಕರದವರ ಹೇಳಿಕೆ. ಇವರು ಕಡೆಗೆ ಬೊಂಬಾಯಿಗೆ ಬಂದು ತಮ್ಮ ಅಹವಾಲುಗಳನ್ನು ರೈಲ್ವೇ ಏಜಂಟರ ಬಳಿ ಹೇಳಿಕೊಂಡದ್ದಕ್ಕೆ ೩೦ರೂಪಾಯಿಗೆ ಮೇಲ್ಪಟ್ಟ ಸಂಬಳ ಸಲ್ಲುವವರಿಗೆ ಮುಂಗೈಬತ್ತ ಕೊಡುವುದಕ್ಕೆ ಸರಕಾರ ಮಂಜೂರಾತಿಯಿಲ್ಲವೆಂತಲೂ ಈಗಿರುವ ಗ್ರೇಡುಗಳನ್ನು ತಖ್ತೀಲುಮಾಡಿ ಎಲ್ಲವರಿಗೆ ಅಲ್ಪಸ್ವಲ್ಪ ಸಂಬಳ ಹೆಚ್ಚಿಸಬೇಕೆಂಬ ಆಲೋಚನೆಯುಂಟಾಗಿದೆಯೆಂತಲೂ ಏಜಂಟರು ತಿಳಿಸಿದರು. ಹೀಗಾಗಿ ಮುಷ್ಕರಹಿಡಿದವರು ತಮ್ಮ ಮನೆಗಳಿಗೆ ಹಿಂದೆರಳಿದರು.

ಏಜಂಟರ ಹುಕುಂ ಕೇಳಿ ಹಿಂದೆಹೋದ ಜಿ. ಐ. ಪಿ. ರೈಲ್ವೇ ಕೆಲಸದವರು ಮರುದಿನ ಎಂದಿನಂತೆ ಬೆಳಗ್ಗೆ ಕೆಲಸಕ್ಕೆ ತೊಡಗಿದರು. ಆದರೆ ಲೋಕೋ ಸುಪರಿಂಟೆಂಡೆಂಟರಾದ ಮಿ. ಬೊನ್ನರು ಕೊಟ್ಟ ಪ್ರಕಟನಪತ್ರದಲ್ಲಿ ದಿನಕೂಲಿಯವರಿಗೆ ಬರುವ ಓಗೋಸ್ತು ೧ನೇ ತಾರೀಕಿನಿಂದ ಸೇಕಡಾ ೧೦ರಂತೆ ಹೆಚ್ಚಿಗೆ ಕೂಡಿಸಿ ಕೊಡಬಹುದೆಂದೂ ಪ್ರತಿಯೊಂದು ಗ್ರೇಡಿನಲ್ಲಿ ಮುಖ್ಯವಾಗಿ ಮೇಲಿನ ಗ್ರೇಡುಗಳಲ್ಲಿ ಸಂಖ್ಯೆ ಹೆಚ್ಚಿಸುವರೆಂದೂ ಸೂಚಿಸಿದ ಮಾತು ಕೆಲವರಿಗೆ ಇನ್ನೂ ಸಮಾಧಾನಕರವಾಗಲಿಲ್ಲ. ಮಧ್ಯಾಹ್ನ ಊಟಕ್ಕೆಂದು ಕಟ್ಟೋಣದ ಹೊರಗೆ ಹೋದವರು ನೆಟ್ಟಗೆ ಮನೆಯಕಡೆಗೆ ನಡೆದುಬಿಟ್ಟರು. ಅಷ್ಟರಲ್ಲಿ ಸ್ವಲ್ಪ ಪೋಲೀಸ್ ಫೌಜು ಮತ್ತು ಪೋಲೀಸ್ ಕಮಿಷನರರೂ, ಡಿಪ್ಯುಟಿ ಕಮಿಷನರರೂ ಆ ಸ್ಥಳಕ್ಕೆ ಬಂದು ತಲಪಿದರು. ಮುಷ್ಕರಹಿಡಿದವರು ತಮ್ಮ ಅಹವಾಲುಗಳನ್ನು ಹೇಗೆ ಇತ್ಯರ್ಥಿಸಬೇಕೆಂದು ಸೂಚಿಸುವ ಬಗ್ಗೆ ಆಲೋಚನೆಗೆ ಹೋದವರು ಆ ದಿನ ಬರಲಿಲ್ಲ.

ಎನ್ನಿಬಿಸೆಂಟ್ ಮುಂತಾದವರ ಪ್ರತಿಬಂಧಕದಿಂದ ಆದ ತೊಂದರೆಗಳನ್ನು ಚರ್ಚಿಸುವುದಕ್ಕಾಗಿ ಹಿಂದುಸ್ಥಾನದ ಕೊಂಗ್ರೆಸ್ ಕಮಿಟಿಯ ಒಂದು ಸಭೆಯು ಇದೇ ೨೭ನೇ ತಾರೀಕಿಗೆ ಬೊಂಬಾಯಿಯಲ್ಲಿ ಕೂಡುವುದೆಂದು ಕೊಂಗ್ರೆಸ್ ಜನರಲ್ ಸೆಕ್ರೆಟರಿಗಳು ತಿಳಿಸುತ್ತಾರೆ.

ವಣಿಯಂಬಾಡಿಯಲ್ಲಿ ಸ್ಥಾಪಿಸಬೇಕಾಗಿ ಆಲೋಚಿಸಿದ ಉಸ್ಮಾನಿಯಾ ಕಾಲೇಜನ್ನು ಈಗ ಮದ್ರಾಸಿನಲ್ಲಿಯೇ ಸ್ಥಾಪಿಸುವುದು ಒಳ್ಳೆಯದು ಎಂತಲೂ ಈಗಿನ ದ್ರವ್ಯಾನುಕೂಲ ಕಡಿಮೆಯಾದ ಸ್ಥಿತಿಯಲ್ಲಿ ಸಾಧ್ಯವಿದ್ದಷ್ಟು ಸಹಾಯವನ್ನು ಮಾಡಬಹುದೆಂತಲೂ ಮದ್ರಾಸು ಸರಕಾರದವರು ಸೂಚಿಸಿದ ಮೇರೆಗೆ ಉಸ್ಮಾನಿಯಾ ಕಾಲೇಜು ಮದ್ರಾಸಿನಲ್ಲಿಯೇ ತೆರೆಯಲ್ಪಡುವುದು. ಇದು ಮಹಮ್ಮದೀಯರಿಗೆ ಇಂಗ್ಲೀಷು ವಿದ್ಯಾಭ್ಯಾಸ ಮಾಡಿಸುವುದಕ್ಕೆ ಹೈದರಾಬಾದಿನ ನಿಜಾಮರು ಉದಾರ ಹಸ್ತದಿಂದ ಕೊಟ್ಟ ದ್ರವ್ಯಸಹಾಯದಿಂದ ಈ ಕೆಲಸವನ್ನು ನಡಿಸುವರು.

ಜಿ. ಐ. ಪಿ. ರೈಲ್ವೇಯ ನೌಕರರು ಪರೇಲದಲ್ಲಿ ಮುಷ್ಕರಹಿಡಿದ ವರ್ತಮಾನವನ್ನು ಕೇಳಿ ಮಾತುಂಗ ಎಂಬಲ್ಲಿ ಅದೇ ಕಂಪೆನಿಯ ನೌಕರರು ಸಹ ಮುಷ್ಕರ ಹಿಡಿದಿರುವರು.

ಮೈಸೂರು ಬೇಂಕಿನ ಡಿರೆಕ್ಟರರು ೩೦ನೇ ಜೂನಿಗೆ ದಾಟಿದ ವರ್ಷಾರ್ಧದ ವಹಿವಾಟಿನ ರಿಪೋರ್ಟಿನಲ್ಲಿ ಹೀಗೆಂದು ಬರೆದಿರುತ್ತಾರೆ:—ಈ ಅರ್ಧವರ್ಷದಲ್ಲಿ ರೂ. ೧,೧೧,೫೭೧—೮—೫; ಮುನ್ನಾಣೆ ಉಳಿಯಲಾಗಿ ೩೧ನೇ ದಿಸಂಬರ (೧೯೧೬) ವರೆಗೆ ಉಳಿದ ರೂ. ೧,೩೨,೪೯೩—೮—೩ ಅದಕ್ಕೆ ಕೂಡಿಸಿಬಂದ ಹಣದಿಂದ ಶೇರುದಾರರಿಗೆ ಸೇಕಡಾ ೮ರ ಮೇರೆಗೆ ಮುನಾಫೆ ಹಂಚುವುದಕ್ಕೆ ರೂ. ೮೦,೦೦೦, ರಿಜರ್ವ್ ಫಂಡಿಗೆ ೫೦,೦೦೦ ರೂಪಾಯಿ ವಿಂಗಡಿಸಿಟ್ಟು, ೩,೨೯೩—೮—೩ನ್ನು ಬರುವ ಅರ್ಧವರ್ಷಕ್ಕೋಸ್ಕರ ಶಿಲ್ಕು ಇಟ್ಟಿರುತ್ತೇವೆ. ಈ ಕಂಪೆನಿಯ ರಿಜರ್ವ್ ಫಂಡು ಈಗ ೨,೨೫,೦೦೦ರೂಪಾಯಿ ಆಗಿದೆ.

ತಿರುಚಿನಾಪಳ್ಳಿ ಜಿಲ್ಲೆಯಿಂದ ೨೧೨ ಮಂದಿ ಡಿಫೆನ್ಸ್ ಫೋರ್ಸಿಗೆ (ದೇಶರಕ್ಷಕ ಸೈನ್ಯ) ಸೇರಿದ್ದಲ್ಲದೆ ಅಲ್ಲಿಯ ರೈಲವೇ ಕಾರ್ಖಾನೆಗಳಿಂದ ೨೧೫ ಮಂದಿ ದಾಖಲಾಗುವುದಕ್ಕೆ ತಮ್ಮ ಹೆಸರುಗಳನ್ನು ಕೊಟ್ಟಿರುವರು.

ಕುಂಭಕೋಣದಲ್ಲಿ ಸಾಗುವಳಿಯ ಬಿತ್ತನೆಯನ್ನು ಒದಗಿಸಿಕೊಡುವ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪನೆಯಾಗಿ ಸುಮಾರು ೨೮ ಚೀಲ ಸುಪರ್ ಫೋಸ್ಫೇಟ ಎಂಬ ಲವಣವನ್ನು ಅಗ್ಗ ಕ್ರಯದಲ್ಲಿ ತರಿಸಿ ಮೆಂಬರರಿಗೆ ಒದಗಿಸಿ ಕೊಟ್ಟಿತು. ನಡಮಂಗಲದಲ್ಲಿ ಒಂದು ಸಂಘವು ಬೇರೆಬೇರೆ ಬಗೆಯ ಗೊಬ್ಬರಗಳನ್ನು ತಯಾರಿಸುತ್ತಿದೆ.

ಮಧುರೆಯಲ್ಲಿ ಡಿಫೆನ್ಸ್ ಫೋರ್ಸ್ ಬಗ್ಗೆ ಜನರನ್ನು ಉತ್ತೇಜನಗೊಳಿಸುವುದಕ್ಕಾಗಿ ಏರ್ಪಟ್ಟ ಮೀಟಿಂಗಿನಲ್ಲಿ ಅಲ್ಲಿಯ ಕಲೆಕ್ಟರರು ಅಧ್ಯಕ್ಷರಾಗಿದ್ದು ಸರ್ ಶಿವಸ್ವಾಮಿ ಅಯ್ಯರು ಭಾಷಣ ಮಾಡಿದಮೇಲೆ ಸುಮಾರು ೧೦೦ ಮಂದಿ ಸೇರಲಿಕ್ಕೆ ಮುಂದೆ ಬಂದರು ಇನ್ನೂ ಅನೇಕರು ಸೇರುವುದರಲ್ಲಿದ್ದಾರೆ.

ಲಂಡನ್ ಯುನಿವರ್ಸಿಟಿಗೆ ಮುಂಬಾಯಿಯ ಸಾಹುಕಾರ ಸರ್ ರತನ್ ಟಾಟರು ೫ ವರ್ಷಗಳ ವರೆಗೆ ಇನ್ನೂ ೧೪೦೦ ಪೌಂಡು (೨೧,೦೦೦ ರೂಪಾಯಿ) ವರ್ಷಂಪ್ರತಿ ಕೊಡುವುದಾಗಿ ವಾಗ್ದತ್ತ ಮಾಡಿರುವರು. ದಾರಿದ್ರ್ಯವನ್ನು ತಗ್ಗಿಸುವ ಉಪಾಯವನ್ನು ಕಂಡುಹಿಡಿಯುವ ಸಾಧನೆಗೆ ಈ ಹಣವನ್ನು ವಿನಿಯೋಗಿಸಬೇಕೆಂದು ಅವರ ಅಭಿಪ್ರಾಯ.

ದಕ್ಷಿಣ ಕನ್ನಡ.

ಫೋರ್ಟ್ ಸೇಂಟ್ ಜೋರ್ಜ್ ಗೆಜೆಟಿನಿಂದ

IIನೇ ಗ್ರೇಡ್ ಡಿಪ್ಯುಟಿ ರೇಂಜರ್ ಮ. ರಾ. ಎನ್. ರಾಮರಾವ್ ಶಿಪೆಯರು ಸಬ್ ಪ್ರೊಬೇಷನ್ VIನೇ ಗ್ರೇಡ್ ರೇಂಜರರಾಗಿ ನೇಮಿಸಲ್ಪಟ್ಟಿರುವರು.

IIನೇ ಗ್ರೇಡ್ ಡಿಪ್ಯುಟಿ ರೇಂಜರ್ ಮತ್ತು ಆಕ್ಟಿಂಗ್ VIನೇ ಗ್ರೇಡ್ ರೇಂಜರರಾಗಿದ್ದ ಮ. ರಾ. ... ರಾಮಚಂದ್ರ ಎಂಬವರನ್ನು ಮಂಗಳೂರು ದಕ್ಷಿಣ ... ಮಂಗಳೂರು ಉತ್ತರ ... ವರ್ಗಾಯಿಸಿಯದೆ.

ಸಿವಿಲ್ ಅಸಿಸ್ಟೆಂಟ್ ಸರ್ಜನ್ ಮ. ರಾ. ... ರಾಮಸ್ವಾಮಿಯವರನ್ನು ... (ಮದ್ರಾಸು) ಆಸ್ಪತ್ರೆ ಮತ್ತು ... ವರ್ಗಮಾಡಿದೆ. ಆ ಕೆಲಸ ... ನೋಡುತ್ತಿದ್ದ ಸಿವಿಲ್ ಅಸಿಸ್ಟೆಂಟ್ ಸರ್ಜನ್ ಮ. ರಾ. ... ... ರಜೆ ... ನೋಡುವರು.

ಪತ್ರವ್ಯವಹಾರ.

ಅಧಿಕ ಮಾಸದ ಸಿದ್ಧಾಂತವು.

ವಾಚಕ ಮಹಾಶಯರೇ,

ಇದೇ ಕಳೆದ ಜೂನ್ ತಾ. ೧ನೇ ಸ್ವದೇಶಾಭಿಮಾನಿಯಲ್ಲಿ "ಧರ್ಮಭೀರು" ಎಂಬ ಹೆಸರನ್ನಿಟ್ಟುಕೊಂಡು, ಆಷಾಢ ಅಧಿಕವೆಂದು ಪ್ರಕಟಿಸಿದ ಪಂಚಾಂಗಕರ್ತರೊ ಯಾ ಪಂಚಾಂಗ ಕರ್ತರ ಕಡೆಯವರೊ ತನ್ನ ಹೆಸರನ್ನಡಗಿಸಿಟ್ಟು ಬರೆದಿರುವ ಆ ಪ್ರಕಟನೆಯು ಈ ಮುಂಚೆ ವಾಚಕರು ಓದಿರಬಹುದು. ಈ ಪ್ರಕಟನೆಯ ಉದ್ದೇಶವೇನೆಂದರೆ—ಗಣಿತಕರ್ತರ ಹೆಸರು ಇತ್ಯಾದಿ ಇಲ್ಲದಿರುವ ಕೆಲವು ದೈವಿಗಳನ್ನೂ ಮಿಶ್ಯನ್ ಪಂಚಾಂಗವನ್ನೂ ಹೆಚ್ಚಿನ ಒಂದು ಸಂಖ್ಯೆಯನ್ನೂ ಸಹ ಸೇರಿಸಿ ಹ್ಯಾಗೂ ಹತ್ತಕ್ಕೆ ಭರ್ತಿಮಾಡಿಕೊಂಡು, ಬಹಳ ಪಂಚಾಂಗಗಳಲ್ಲಿ ಅಧಿಕ ಆಷಾಢವಿದೆ, ಉಡುಪಿಯೊಂದರ ಒಂದು ಪಂಚಾಂಗದಲ್ಲಿ ಮಾತ್ರ ಅಧಿಕ ಭಾದ್ರಪದವಿರುವದು; ಇದೇನಾಶ್ಚರ್ಯವೆಂದು, ಪಂಚಾಂಗಗಳ ಸಂಖ್ಯಾಬಲದಿಂದಲೇ ಬಹುಪಕ್ಷವನ್ನು ತೋರಿಸಿ, ಜನರಿಗೆ ನಮ್ಮ ಪಂಚಾಂಗದಲ್ಲಿ ಅನುಮಾನವೂ ಅಪನಂಬಿಕೆಯೂ ಉಂಟಾಗುವಂತೆಯೂ, ಮತ್ತು ತಮ್ಮ ಸಿದ್ಧಾಂತಪ್ರಕಾರವೇ ಅದನ್ನು ಹೆಚ್ಚಿನ ಜನರಿಂದ ಅಧಿಕ ಆಷಾಢವನ್ನೇ ಆಚರಿಸಲ್ಪಡಬೇಕೆಂಬ ಇರಾದೆಯಿಂದಲೂ ಈ ತರದ ಪ್ರಕಟನ ಪ್ರಕಟಿಸಿದ್ದಾಗಿರುವದು.

ಕೇರಳದಿಂದ ಪೂನಾದವರೆಗೂ ಪಂಚಾಂಗಗಳನ್ನು ತಲಾಸಿಮಾಡಿದ ಇವರಿಗೆ ಈ ಕನ್ನಡಾ ಜಿಲ್ಲೆಯಲ್ಲಿಯೇ ಅಧಿಕ ಭಾದ್ರಪದವೆಂದು ಮುದ್ರಿಸಿ ಇರುವ ಇನ್ನೂ ಹಲವು ಪಂಚಾಂಗಗಳು ಇರುವವು. ಇವುಗಳಲ್ಲಿ ಒಂದರದನ್ನಾದರೂ ಹೆಸರು ಇವರು ಉಲ್ಲೇಖಿಸಲಿಲ್ಲ. ಮುಂಬಯಿ, ಪೂನಾ, ಮದರಾಸು, ಮೈಸೂರು, ಬೆಂಗಳೂರು ಇವೇ ಮೊದಲಾದ ಅನೇಕ ಊರುಗಳಲ್ಲಿ ಅಧಿಕ ಭಾದ್ರಪದವೆಂದು ಪ್ರಕಟಿಸಿರುವ ಪಂಚಾಂಗಗಳನ್ನೆಲ್ಲಾ ಎಂತೂ ಅಡಗಿಸಿಟ್ಟಿರುವರು. ಈ ಪ್ರಕಾರ ಕೇವಲ ಪಂಚಾಂಗಗಳ ಬಲವನ್ನೇ ಪ್ರಮಾಣವಾಗಿ ಗ್ರಹಿಸಿದ ಇವರಿಗೆ ನಾವು ಶಾಸ್ತ್ರರೀತ್ಯಾ ಉತ್ತರಕೊಡುವದು ಉಚಿತವಲ್ಲವೆಂತ ಈವರೆಗೂ ಸುಮ್ಮನಿದ್ದೆವು. ಆದರೂ ಪುನಃ ಚಕ್ರಕೋಡಿ ಪಂಚಾಂಗ ಕರ್ತರ ಕಡೆಯಿಂದ ಬ್ರಹ್ಮಶ್ರೀ, ಕೆ. ನರಸಿಂಹ ಶಾಸ್ತ್ರಿ ಎಂಬವರು ಇದೇ ಜುಲೈ ತಾ. ೧೪ನೇ ಸ್ವದೇಶಾಭಿಮಾನಿಯಲ್ಲಿ ಅಧಿಕಮಾಸದ ನಿರ್ಣಯವನ್ನು ಪ್ರಕಟಿಸಿರುವರು. ಅದರಲ್ಲಿ ಇವರು ನಮ್ಮ ಪಂಚಾಂಗದ ಗುಟ್ಟು ಹೊರಪಡಿಸುವರೆ ಪಂಚಾಂಗಕರ್ತರೆಲ್ಲರೂ ಬಾಯಿಯಲ್ಲಿ ಅವಲಕ್ಕಿ ಹಾಕಿಕೊಂಡಿದ್ದರೂ ನಾನೊಬ್ಬನಾದರೂ ಬಾಯಿ ತೆರೆದಿರುವೆನೆಂದು ಎದುರುಬಂದಿರುವರು. ಈ ಮುಂಚೆಯೇ ಅಧಿಕಮಾಸ ನಿರ್ಣಯವನ್ನು ನಮ್ಮ ಪಂಚಾಂಗದಲ್ಲಿ ಒಂದುಸಾರೆ ಬರೆದಿದ್ದರೂ ಪುನಃ ಇವರ ಪ್ರಕಟನೆಯಿಂದ ಉತ್ತರ ಕೊಡಲು ಆಗತ್ಯವಾಯಿತು.

ಅಧಿಕವು ಯಾವ ಗಣಿತದಿಂದ ನಿಶ್ಚಯಿಸತಕ್ಕದ್ದೆಂಬದು ಒಂದನೇ ಪ್ರಶ್ನೆ. ಆಮೇಲೆ ನಿಶ್ಚಯಿಸಲ್ಪಟ್ಟ ಆ ಗಣಿತದಿಂದ ಈ ವರ್ಷ ಅಧಿಕವು ಭಾದ್ರಪದವೋ ಆಷಾಢವೋ ಎಂಬದು ಎರಡನೇ ಪ್ರಶ್ನೆ. ಈ ಎರಡು ಪ್ರಶ್ನೆಗಳಿಗೆ ಉತ್ತರ ಬರೆದರೆ ಕಡೇ ಸಿದ್ಧಾಂತದ ಉತ್ತರವು ಅಧಿಕ ಭಾದ್ರಪದವೆಂತಲೇ ಸಿದ್ಧವಾಗುವದು.

೧ನೇ ಪ್ರಶ್ನೆಗೆ—ಸಿದ್ಧಾಂತ ಭಾಗದಲ್ಲಿ ಬ್ರಹ್ಮ, ಸೌರ, ಆರ್ಯ ಎಂಬ ಈ ಮೂರು ಮಹಾ ಸಿದ್ಧಾಂತಗಳೂ ಮತ್ತು ವಾಸಿಷ್ಠ, ರೋಮಕ, ಪೌಲಿಶ ಎಂಬ ಬೇರೆ ಕೆಲವು ಸಿದ್ಧಾಂತಗಳೂ ಸಹ ಇರುವವು. ಕರಣಗ್ರಂಥಗಳಲ್ಲಿ ಕರಣರತ್ನ, ಕರಣಪ್ರಕಾಶ, ಕರಣಕುತೂಹಲ, ಗ್ರಹಲಾಘವ, ಮಕರಂದ, ಪರಹಿತವಾಕ್ಯ ಕರಣ ಎಂಬೀ ಮೊದಲಾದ ನೂರಾರು ತರದ ಕರಣಗ್ರಂಥಗಳಿರುವವು. ಈ ಪೈಕಿ ಸೂರ್ಯಸಿದ್ಧಾಂತದಿಂದಲೇ ಅಧಿಕಮಾಸವನ್ನು ನಿಶ್ಚಯಿಸತಕ್ಕದ್ದೆಂದು ಈ ಕೆಳಗೆ ಬರೆದ ನಿರ್ಣಯ ಗ್ರಂಥಗಳಲ್ಲಿ ಕಂಡುಬರುವದು.

ಶ್ಲೋಕ—ವ್ರತಾನಾಮೇವ ಸರ್ವೇಷಾಂ ಸೌರೇಣೈವ ವಿನಿರ್ಣಯಃ ।
ದಶಮ್ಯಾದಿ ತ್ರಯಾಣಾಂ ತು ಆರ್ಯೇಣೈವ ವಿನಿರ್ಣಯಃ ॥

ತಾತ್ಪರ್ಯ—ದಶಮಿ, ಏಕಾದಶಿ, ದ್ವಾದಶಿ ಈ ಮೂರನ್ನು ಮಾತ್ರ ಆರ್ಯಭಟ ಸಿದ್ಧಾಂತದಿಂದ ನಿಶ್ಚಯಿಸತಕ್ಕದ್ದು ಹೊರತು, ಮಿಕ್ಕ ವ್ರತಾದಿ ಸಮಸ್ತ ಕಾರ್ಯಗಳನ್ನು ಸೂರ್ಯಸಿದ್ಧಾಂತ ಗಣಿತದಿಂದಲೇ ನಿಶ್ಚಯಿಸತಕ್ಕದ್ದೆಂದು ನಿರ್ಣಯಸಾರವೆಂಬ ಗ್ರಂಥದಲ್ಲಿರುವದು.

ಶ್ಲೋಕ—ಬ್ರಾಹ್ಮೇಣ ಪೈತೃಕಾದೀನಿ ದೇವಕಾರ್ಯಾಣಿ ಸೌರತಃ ।
ದಶಮ್ಯಾದಿವ್ರತಂ ತತ್ರ ಆರ್ಯೇಣೈವ ತು ಕಾರಯೇತ್ ॥

ತಾತ್ಪರ್ಯ—ಪಿತೃಕಾರ್ಯಗಳನ್ನೆಲ್ಲಾ ಬ್ರಹ್ಮಸಿದ್ಧಾಂತದಿಂದಲೂ, ದೇವಕಾರ್ಯಗಳನ್ನೆಲ್ಲಾ ಸೂರ್ಯಸಿದ್ಧಾಂತದಿಂದಲೂ, ದಶಮ್ಯಾದಿ ದಿನತ್ರಯವ್ರತವನ್ನು ಆರ್ಯಭಟ ಸಿದ್ಧಾಂತದಿಂದಲೂ ನಿಶ್ಚಯಿಸತಕ್ಕದ್ದೆಂದು ಶ್ರೀಮಧ್ವಾಚಾರ್ಯರಿಂದ ಮಾಡಲ್ಪಟ್ಟ ಕೃಷ್ಣಾಮೃತ ಮಹಾರ್ಣವವೆಂಬ ಗ್ರಂಥದ ವ್ಯಾಖ್ಯಾನದಲ್ಲಿರುವದು.

ಶ್ಲೋಕ—ಆರ್ಯಭಟೀಯ ಗಣನಂ ದಶಮ್ಯಾದಿ ದಿನತ್ರಯೇ ।
ಇತರತ್ರ ತು ಸೌರೇಣ ನಿಶ್ಚಿತಂ ಬ್ರಹ್ಮವಿತ್ತಮೈಃ ॥

ತಾತ್ಪರ್ಯ—ದಶಮಿ, ಏಕಾದಶಿ, ದ್ವಾದಶಿ ಈ ದಿನತ್ರಯ ವ್ರತವಿಷಯದಲ್ಲಿ ಆರ್ಯಸಿದ್ಧಾಂತದಿಂದ ಗುಣಿಸತಕ್ಕದ್ದು. ಇತರ ಸಮಸ್ತ ಕಾರ್ಯಗಳನ್ನು ನಿಶ್ಚಯಿಸುವದು ಸೂರ್ಯಸಿದ್ಧಾಂತದಿಂದ ಎಂದು ನಿರ್ಣಯಾಮೃತವೆಂಬ ಗ್ರಂಥದಲ್ಲಿ ಬ್ರಹ್ಮಜ್ಞಾನಿಗಳಿಂದ ಈ ಮೊದಲೇ ನಿಶ್ಚಯಿಸಲ್ಪಟ್ಟಿರುತ್ತದೆ.

ಈ ವಚನಗಳೇ ಕೃಷ್ಣಾಚಾರ್ಯಸ್ಮೃತಿ ಎಂಬ ಸ್ಮೃತಿರತ್ನಾವಳಿಯಲ್ಲಿಯೂ, ಸ್ಮೃತಿಮುಕ್ತಾವಳಿಯಲ್ಲಿಯೂ, ಸ್ಮೃತ್ಯರ್ಥಸಾರವೆಂಬ ಇವೇ ಮೊದಲಾದ ಅನೇಕ ಗ್ರಂಥಗಳಲ್ಲಿರುವವು.

ಈ ಮೇಲಿನ ಎಲ್ಲಾ ಶ್ಲೋಕಗಳಲ್ಲಿಯೂ "ದಶಮ್ಯಾದಿ ದಿನತ್ರಯೇ ಆರ್ಯೇಣ" ದಶಮಿ, ಏಕಾದಶಿ, ದ್ವಾದಶಿ ಈ ದಿನತ್ರಯ ವ್ರತಕ್ಕೆ ಮಾತ್ರ ಆರ್ಯಸಿದ್ಧಾಂತ ಗಣಿತವು ಗ್ರಾಹ್ಯವಾಗಬೇಕು ಹೊರತು, ಇತರ ಪಿತೃ ಕಾರ್ಯಗಳಿಗೆ ಸೂರ್ಯಸಿದ್ಧಾಂತ ಗಣಿತವೇ ಆಗಬೇಕೆಂದು ತೋರುವದರಿಂದ ನಿತ್ಯನೈಮಿತ್ತಿಕ ಕರ್ಮಾನುಷ್ಠಾನಗಳಿಗೆಲ್ಲಾ ಸೂರ್ಯಸಿದ್ಧಾಂತಾನುಸಾರ ಗುಣಿಸಿರುವ ಪಂಚಾಂಗಗಳೇ ಪ್ರಾಮಾಣ್ಯವು. ದಶಮ್ಯಾದಿ ಮೂರು ದಿವಸಗಳಿಗಾಗಿ ಇಡೀ ಪಂಚಾಂಗವನ್ನು ಆರ್ಯರೀತ್ಯಾ ಗುಣಿಸುವದರಿಂದ ಸಮಸ್ತ ಕರ್ಮಗಳು ವ್ಯತ್ಯಸ್ತವಾಗುವವು. ಅದ್ದರಿಂದ ಆರ್ಯಭಟ ಪಂಚಾಂಗವು ನಿತ್ಯೋಪಯೋಗಕ್ಕೆ ಎಷ್ಟು ಮಾತ್ರವೂ ಪ್ರಯೋಜನವಿಲ್ಲವೆಂದು ಗ್ರಂಥಾಭಿಪ್ರಾಯವು ತೋರುವದರಿಂದ ಇದು ನಮ್ಮ "ಪೂರ್ವಪದ್ಧತಿ" "ನಮ್ಮ ಸಾಂಪ್ರದಾಯ" ಎಂದು ಧರ್ಮಶಾಸ್ತ್ರಗಳಿಗೆ ವಿರೋಧವಾಗಿ "ಅಂಧಪಂಧಪ್ರದಾನಸಾಂಪ್ರದಾಯ" ಎಂದು ಹೇಳುವಂತೆ ಈ ರೀತಿ ಆಚರಿಸುತ್ತಾ ಬಂದರೆ ಅಂಥವರಿಂದ ಆಚರಿಸಲ್ಪಟ್ಟಿರುವ ನಿತ್ಯನೈಮಿತ್ತಿಕ ಕರ್ಮಗಳಿಗೆ ವ್ಯವಸ್ಥೆಯಿಲ್ಲದೆ ಧರ್ಮಗಳು ಹಾದಿಗೆ ಓಡುವವು ಎಂಬುದು ಈ ನಮ್ಮ ಶಾಸ್ತ್ರಗಳು ಹೇಳುವಂತೆ ನಿಜವಾಗಿರುವದು. ಇತಿ.

ಉದ್ಯಾವರ ನಾರಾಯಣಾಚಾರ್ಯ.

"ಕಳವಾದಮೇಲೆ ಕಳವಳಿಸಿ ಫಲವೇನು"

"ಮುಂಜೂರಾತಿಯ ನಿರೀಕ್ಷಣೆ" ಎಂಬ ... ...

ನಕ್ಕೆ ಎಡೆಕೊಟ್ಟು ಮೆಂಬರರೊಳಗೂ ಇಂಥ ಸಂಸ್ಥೆಗಳ ಪ್ರೆಸಿಡೆಂಟರೊಳಗೂ ಇರಬೇಕಾದ ಪರಸ್ಪರ ವಿಶ್ವಾಸಗಳನ್ನು ಕಡಿಮೆಮಾಡುವುದಕ್ಕೆ ಒಂದು ದಾರ್ಷ್ಟ್ಯಾಂತವು ಕಳೆದ ೧೮ನೇ ತಾರೀಕಿಗೆ ಮದ್ರಾಸ್ ಮ್ಯುನಿಸಿಪಲ್ ಕೋರ್ಪೊರೇಶನ್ನಿನಲ್ಲಿ ಆದ ಚರ್ಚೆಗಳಿಂದ ವ್ಯಕ್ತವಾಗುತ್ತಿದೆ. ಅಲ್ಲಿ ಕೆಲವು ವರ್ಷಗಳ ಹಿಂದೆ ಪೀಪಲ್ಸ್ ಪಾರ್ಕಿನಲ್ಲಿ ಹಲವು ಲಕ್ಷ ರೂಪಾಯಿ ಖರ್ಚು ತಗಲಿಸಿ ಮ್ಯುನಿಸಿಪಲ್ ಕೋರ್ಪೊರೇಶನ್ನಿನ ಬಗ್ಗೆ ಚೆಲುವಾದ ಕಟ್ಟಡವೊಂದನ್ನು ಕಟ್ಟಿಸಿರುವರು. ಅಲ್ಲಿ ಸಾಕಷ್ಟು ಸ್ಥಳವಿದ್ದರೂ ಕೋರ್ಪೊರೇಶನ್ನಿನ ಸ್ಪೆಶಲ್ ಇಂಜಿನಿಯರರ ಆಫೀಸು ಬೇರೆ ಒಂದು ಬಾಡಿಗೆಯ ಕಟ್ಟೋಣದಲ್ಲಿತ್ತು. ಅದನ್ನು ಹೊಸ ಕಟ್ಟೋಣದಲ್ಲಿಯೇ ಇರಗೊಡಿಸುವುದು ಯೋಗ್ಯವೆಂತ ಮ್ಯುನಿಸಿಪಾಲಿಟಿಯ ಮೆಂಬರರೊಳಗಿಂದ ಆರಿಸಲ್ಪಟ್ಟ ಒಂದು ಕಮ್ಮಿಟಿಯವರು ರಿಪೋರ್ಟ ಮಾಡಿದರು. ಇದು ಯೋಗ್ಯವಲ್ಲವೆಂದು ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮಿ| ಮೊಲೊನಿಯವರ ಅಭಿಪ್ರಾಯವಿತ್ತು. ಮೀಟಿಂಗಿನಲ್ಲಿ ಆದ ಚರ್ಚೆಯಲ್ಲಿ ಇಂಜಿನಿಯರ್ ಆಫೀಸನ್ನು ಮ್ಯುನಿಸಿಪಲ್ ಆಫೀಸಿನಲ್ಲಿ ಇರಗೊಡಿಸಬೇಕೆನ್ನುವವರ ಮತ್ತು ಅವರ ವಿರೋಧ ಪಕ್ಷದವರ ಓಟು ಸಮಬಲವಾಯಿತು. ಆಗ ಪ್ರೆಸಿಡೆಂಟರು ತಮ್ಮ ಎರಡನೆಯ ಓಟನ್ನು (ಇತ್ಯರ್ಥದ ಓಟು) ಎದುರುಪಕ್ಷದ ಕಡೆಗೆ ಕೊಟ್ಟಕಾರಣ ಈ ಚರ್ಚೆಯು ಕಳೆದ ಜೂನು ತಿಂಗಳ ೧೯ನೇ ತಾರೀಕಿನ ಮೀಟಿಂಗಿನಲ್ಲಿ ಬಿದ್ದುಹೋಯಿತು. ಮೊದಲನೆಯ ಪಕ್ಷದವರು ಇದನ್ನು ಅಲ್ಲಿಯೇ ಬಿಡಲಿಲ್ಲ. ಅವರ ಪೈಕಿ ೧೦ ಮಂದಿಯ ಸಹಿ ಇರುವ ಒಂದು ವಿನಂತಿ ಪತ್ರವು ಪ್ರೆಸಿಡೆಂಟರಿಗೆ ಬೇಗನೆ ಬರುವುದೆಂತಲೂ, ಅದರ ಮೇರೆಗೆ ಈ ವಿಷಯವನ್ನು ಚರ್ಚಿಸುವುದಕ್ಕೋಸ್ಕರ ಒಂದು ಮೀಟಿಂಗು ಸೇರಬೇಕೆಂತಲೂ ಇಬ್ಬರು ಮೆಂಬರುಗಳು ಬರಹಮೂಲಕ ತಿಳಿಸಿದರು. ಹೀಗಿದ್ದರೂ ಪ್ರೆಸಿಡೆಂಟರು ಇಂಜಿನಿಯರ್ ಆಫೀಸು ಇರುವ ಬಾಡಿಗೆ ಕಟ್ಟೋಣದ ಬಗ್ಗೆ ಬಾಡಿಗೆಚೀಟನ್ನು ಪುನಃ ಮಾಡಿಸಿದರು. ಅದೇ ತಿಂಗಳ ೧೮ನೇ ತಾರೀಕಿಗೆ ಈ ವಿಷಯವು ಮ್ಯುನಿಸಿಪಲ್ ಮೀಟಿಂಗಿನಲ್ಲಿ ಚರ್ಚೆಗೆ ಬಂದು ಮೆಂಬರರಲ್ಲಿ ಹಲವರು ಪ್ರೆಸಿಡೆಂಟರ ಈ ಉದ್ಧಟ ನಡತೆಯ ಬಗ್ಗೆ ಆಕ್ಷೇಪಿಸಿದರು. ಆದರೆ "ಕಳವಾದಮೇಲೆ ಕಳವಳಿಸಿ ಫಲವೇನು", ಎಂಬಂತೆ ಬಾಡಿಗೆಚೀಟು ಆದ ಮೇಲೆ ಈಗ ಪುನಃ ಮೀಟಿಂಗಿನಲ್ಲಿ ಚರ್ಚಿಸಿ ಫಲವಿಲ್ಲೆಂದು ಪ್ರೆಸಿಡೆಂಟರು ಬಾಯಿಬಿಟ್ಟು ಹೇಳಿದರು. ಮ್ಯುನಿಸಿಪಾಲಿಟಿಯ ಮೆಂಬರರ ಕಡೆಯಿಂದ ಮುಕ್ತದ್ಧಿಯಾಗಿ ನಡಿಸಬೇಕಾದ ಕಾರ್ಯಗಳಲ್ಲಿ ಅವರ ಅಭಿಪ್ರಾಯಗಳಿಗೆ ಪ್ರತಿಕೂಲಿಸಿ ನಡೆಯಬೇಕೆಂಬ ಉದ್ಧಟತನವು ಒರಟುತನವೂ ಲೋಕಲ್ ಸೆಲ್ಫ್ ಗವರ್ನಮೆಂಟಿಗೆ (ಸ್ವಕೀಯ ರಾಜ್ಯಭಾರಕ್ಕೆ) ಆದರ್ಶಸ್ಥಾನವಾಗಿರಬೇಕಾದ ಪರಿಷ್ಯ ಮ್ಯುನಿಸಿಪಾಲಿಟಿಯ ವಹಿವಾಟುಗಳಲ್ಲಿಯೇ ಕಣ್ಣಿಗೆ ಹೊಡೆಯುವ ರೀತಿಯಲ್ಲಿ ತೋರಿಬರುವುದಾದರೆ ನಮ್ಮ ಜಿಲ್ಲೆಯಂಥ ಸಂದುಗೊಂದುಗಳಲ್ಲಿ ಅಂಥ ವರ್ತನವು ಆಶ್ಚರ್ಯಕರವಾಗಲಾರದು. ವೋಟುಗಳು ಸಮಬಲವಾದನಂತರ ಪ್ರೆಸಿಡೆಂಟರು ಇತ್ಯರ್ಥದ ವೋಟನ್ನು ಕೊಡುವುದು ಕಾಯಿದೆಗೆ ಅನುಸಾರಿಯೇ ಇದ್ದರೂ ಅದು ಪ್ರಜಾಪ್ರತಿನಿಧಿಗಳ ಮತಕ್ಕೆ ವಿರೋಧವಾಗಿ ಪ್ರಯೋಗಿಸಲ್ಪಟ್ಟರೆ ಪ್ರಜಾಪ್ರತಿನಿಧಿತ್ವ ಮುಂತಾದ ದೊಡ್ಡ ಮಾತುಗಳು ಬಣಮಾತುಗಳಲ್ಲವೇ? ಮ್ಯುನಿಸಿಪಾಲಿಟಿಯಲ್ಲಿ ಆದಾಯವು ಕಡಿಮೆಯಾದಾಗ ವಹಿಸಿಕೊಂಡ ಖರ್ಚಿನ ಬವಾಬ್ದಾರಿಗಳು ಉದ್ಭವಿಸಿದ್ದ ಹೆಚ್ಚಿಗೆಗಳನ್ನಿಟ್ಟು ಮುಂದೆ ಹಾಯ್ದು ಬರುವಾಗ ಕಂದಾಯ ಕೊಡುವವರ ಮತ್ತು ಅವರ ಪ್ರತಿನಿಧಿಗಳ ವಿನಂತಿಯನ್ನು ಮ್ಯುನಿಸಿಪಾಲಿಟಿಯ ಆಫೀಸರರು ಕೃಪಾಪ್ರಾಯವಾಗಿ ಎಣಿಸಿದರೆ ಆ ಪ್ರತಿನಿಧಿಗಳ ಗೌರವವಲ್ಲಿ ಉಳಿಯುವುದು?

ಇದೇ ವಿಧದ "ಮಾಮೂಲ್" ಅನೇಕ ತಾಲೂಕು ಬೋರ್ಡುಗಳ ಮತ್ತು ಮ್ಯುನಿಸಿಪಾಲಿಟಿಗಳ ವಹಿವಾಟುಗಳಲ್ಲಿ ಕಂಡುಬರುತ್ತಿದೆ. ಈಚೆಗೆ ಮಂಗಳೂರು ತಾಲೂಕು ಬೋರ್ಡಿನಲ್ಲಿ ಕೆಲಸವು ಹೆಚ್ಚಿದೆ ಎಂದು ಪ್ರೆಸಿಡೆಂಟರು ಅಭಿಪ್ರಾಯಪಟ್ಟರು. ಶಾಲೆಗಳಿಗೆ ಸಂಬಂಧಪಟ್ಟ ಬಿಲ್ ಮುಂತಾದ್ದನ್ನು ಮಾಡುವ ಕೆಲಸವು ವಿದ್ಯಾ ಇಲಾಖೆಯವರಿಂದ ಲೋಕಲ್ ಬೋರ್ಡುಗಳಿಗೆ ಕಳೆದ ಸಪ್ಟಂಬರದಲ್ಲಿ ಒಪ್ಪಿಸಿದಕಾರಣ ಹೀಗೆ ಕೆಲಸವು ಹೆಚ್ಚಾಗುತ್ತ ಬಂತೆಂದು ಅವರ ಅಭಿಪ್ರಾಯ. ಇದಕ್ಕೋಸ್ಕರ ನಿಬಂಧಿಯನ್ನು ಹೆಚ್ಚಿಸಬೇಕೆಂಬ ಆವಶ್ಯಕತೆಯು ಪ್ರೆಸಿಡೆಂಟರಿಗೆ ಕಂಡುಬಂತು. ಹೊಸ ಅಫಿಶಿಯಲ್ ವರ್ಷದಲ್ಲಿ ಹೆಚ್ಚಿನ ನಿಬಂಧಿಯನ್ನು ಇಡುವುದಾದರೆ ಈ ವಿಷಯದಲ್ಲಿ ಮಂಜೂರಾತಿಯನ್ನು ಕಳೆದ ಮಾರ್ಚಿಯ ಮೀಟಿಂಗಿನಲ್ಲಿಯೇ ಕೇಳಬಹುದಿತ್ತು. ಆದರೆ ಅದು ಹೇಗೆ ಆ ಮೀಟಿಂಗಿನಲ್ಲಿ ಬರಲಿಲ್ಲವೋ ಅದರ ಕಾರಣವು ಸ್ಪಷ್ಟವಾಗಲಿಲ್ಲ. ಆದರೆ ಎಪ್ರಿಲ್ ತಿಂಗಳ ಮೊದಲನೆಯ ವಾರದಲ್ಲಿಯೇ ಒಂದು ಇಸಮನ್ನು 'ಮಂಜೂರಾತಿಯ ನಿರೀಕ್ಷಣೆ'ಯಿಂದ ಪ್ರೆಸಿಡೆಂಟರು ಸೆಂಕ್ಷನ್ ಮಾಡಿ ಒಬ್ಬ ಗುಮಾಸ್ತನನ್ನು ನೇಮಿಸಿದರು. ಕೆಲಸದ ಧಾವತಿಯು ಹೆಚ್ಚಾದಕಾರಣ ಫಸ್ಟ ಫಾರಂ ಸಿಕ್ಸದ್ದರಿಂದ್ಲೂ ... ಟ್ರೈನಿಂಗ್ ಶಾಲೆಯಲ್ಲಿ ಸ್ಟೈಪೆಂಡ ಹೊಂದಿ ಕಲಿಯುವ ವಿದ್ಯಾರ್ಥಿಯೊಬ್ಬನನ್ನು ನೇಮಿಸುವ ಅಗತ್ಯವಾಯಿತು. ಎಪ್ರಿಲ್ ತಿಂಗಳಲ್ಲಿ ಜಾರಿಗೆ ತಂದ ಈ ಇಸಮನ್ನು ಸೆಂಕ್ಷನ್ ಮಾಡಿಸುವುದಕ್ಕೆ ಮೇ ತಿಂಗಳ ಮೀಟಿಂಗಿನಲ್ಲಿ ಇತ್ಯರ್ಥಿಸಬೇಕಾದ ವಿಷಯಗಳ ಪಟ್ಟಿಯಲ್ಲಿ ಕೂಡಾ ಸೇರಿಸುವುದಕ್ಕೆ ತಾಲೂಕು ಬೋರ್ಡು ಆಫೀಸಿನ ಕೆಲಸದ ಭಾರವು ಮರವೆಯನ್ನು ಉಂಟುಮಾಡಿತ್ತು. ಆದರೂ ಮೀಟಿಂಗಿನ ಕಾಲದಲ್ಲಿ ಅದು ಚರ್ಚೆಗೆ ಬಂದಾಗ ವಿಷಯಗಳ ಪಟ್ಟಿಯಲ್ಲಿ ಅದಕ್ಕೆ ಅವಕಾಶ ದೊರೆಯಲಿಲ್ಲವೆಂಬ ಮಾತಿನ ಮೇಲೆ ಅದನ್ನು ಮುಂದರಿಸಿಡಲಾಯಿತು. ಕಡೆಗೆ ಜೂನು ತಿಂಗಳ ಮೀಟಿಂಗಿನಲ್ಲಿ ಸರ್ವಾನುಮತದಿಂದ ಅದು ಮಂಜೂರಾಯಿತು. ಇದು ಪ್ರೆಸಿಡೆಂಟರ ಮೇಲೆ ಮೆಂಬರರಿಗೆ ಇರುವ ವಿಶ್ವಾಸವನ್ನು ತೋರ್ಪಡಿಸುತ್ತದೋ ಅಥವಾ "ಕಳವಾದಮೇಲೆ ಕಳವಳಿಸಿ ಫಲವೇನು" ಎಂಬ ಸಮಾಧಾನವನ್ನು ಮನಸ್ಸಿಗೆ ತಂದು ಮೆಂಬರರು ಈ ಚರ್ಚೆ ಎತ್ತಲಿಲ್ಲವೋ ಎಂಬದನ್ನು ಗೊತ್ತುಹಚ್ಚುವುದು ಕಷ್ಟಸಾಧ್ಯವಿಲ್ಲ. ಅಂತೂ ಈ ರೀತಿಯ ವರ್ತನಗಳನ್ನು ಪ್ರಜೆಗಳಿಗೆ ಇನ್ನೂ ಹೆಚ್ಚಿನ ಹಕ್ಕುಗಳು ಸಿಕ್ಕಬೇಕೆಂದು ವಾದಿಸುವವರು ಚೆನ್ನಾಗಿ ಆಲೋಚನೆಗೆ ತೆಕ್ಕೊಳ್ಳುವುದು ಆವಶ್ಯಕ.

ಸೌರ ಉಪಾಕರ್ಮ ವಿಚಾರ.

ಉಪಾಕರ್ಮವನ್ನು ಚಾಂದ್ರಮಾನ ರೀತಿಯಿಂದ ಶ್ರಾವಣ ಅಥವಾ ಕರ್ಕಟಕ ಮಾಸದಲ್ಲಿಯೂ, ಸೌರಮಾನರೀತ್ಯಾ ಸಿಂಹಮಾಸದಲ್ಲಿಯೂ ಆಚರಿಸುವದು ಧರ್ಮಶಾಸ್ತ್ರ ಸಮ್ಮತವಾದದ್ದು. ಅದರಂತೆ ಸೌರ ಯಜುಶಾಖೆಯವರು ಸಿಂಹಮಾಸದ ಪೂರ್ಣಿಮಾ ದಿವಸವೂ ಸೌರ ಋಕ್ಶಾಖೆಯವರು ಸಿಂಹಮಾಸದ ಶ್ರವಣ ನಕ್ಷತ್ರದಲ್ಲಿಯೂ ಆಚರಿಸತಕ್ಕದ್ದಿತ್ತು. ಈ ವರ್ಷದ ಸಿಂಹಮಾಸದ ಶ್ರವಣಕ್ಕೆ ವೇಧ ಬಂದುದರಿಂದ ಆ ಮಾಸದ ಹಸ್ತಯುಕ್ತವಾದ ಪಂಚಮಿ ತಿಥಿಯಲ್ಲಿ ಅಥವಾ ಪಂಚಮಿ ತಿಥಿಯಲ್ಲಿಯೇ ಆಗಲಿ ಆಚರಿಸಬೇಕೆಂಬುದಕ್ಕೆ ಪ್ರಮಾಣಗಳಿರುವವು. "ಚತುರ್ಥೀ—ಸಂಯುತಾಕಾರ್ಯಾ ಪಂಚಮೀ ಪರಯಾಸಹ ॥ ... ... ॥ ಪಂಚಮೀ ಚತುರ್ಥಾಕಾರ್ಯಾ ಚತುರ್ಥ್ಯಾ ಸಂಯುತಾ ತಿಥೀಃ ॥ ... ... ಕರ್ತವ್ಯಾ ಸಂಯುತಾ" ॥ ಎಂಬ ಸ್ಮೃತಿ ಶ್ಲೋಕಗಳು, ವೃದ್ಧನಾರದೀಯ ಮೊದಲಾದ ಧರ್ಮಶಾಸ್ತ್ರಗಳಿಂದ ಅಂಥ ಪಂಚಮಿಗೆ ವೇಧ ಬಂದಾಗ (ಶ್ರಂದೋಪಾಯುತಕ್ಕೆ ವಿನಹಾ) ಚತುರ್ಥೀ ಯುಕ್ತವಾದ ಪಂಚಮಿ ತಿಥಿಯಲ್ಲಿಯೇ ... ಕರ್ಮಗಳನ್ನು ಆಚರಿಸತಕ್ಕದ್ದೆಂಬದು ಸ್ಪಷ್ಟವಾಗುತ್ತದೆ. ಆದಕಾರಣ ಈ ವರ್ಷ ಸೌರ ಋಗುಪಾಕರ್ಮವು ಉಡುಪಿ ... ... ಉಪಾಧ್ಯಾಯರಿಂದ ಪ್ರಕಟಿಸಲ್ಪಟ್ಟಿರುವ ... ... ಗ್ರಂಥಾಧಾರದಿಂದ ಪ್ರಕಟಿಸಲ್ಪಟ್ಟಿರುವ ಪಂಚಾಂಗದಲ್ಲಿ ತೋರುವಂತೆ ಸಿಂಹಮಾಸ ... ಚತುರ್ಥೀ ಯುಕ್ತ ಪಂಚಮಿ ... ... ಆಚರಿಸುವದು ಶಾಸ್ತ್ರಸಮ್ಮತ.

ಧರ್ಮಾಭಿಮಾನಿ.

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾದಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೩೦ ವರ್ಷಗಳ ಹಳತ, ಸ್ಥಿಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ಕಷ್ಟಕ್ಕೆ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾಯು.

ಇದರಲ್ಲಿ ಪಾರವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಒಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಪ್ಪೆಗಳೂ, ಜಿಬುಮಗಳೂ, ಬಾಯಿಗೆ ಮತ್ತು ಅಂಗಳಿಗೆ ಹೂತು ಬೀಳೋಣ, ಮೂಗಿನ ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಾತೋಣ, ಪ್ರಮೇಹ (ಪರಮೆ) ಯಿಂದ ಕೈಕಾಲುಗಳ ಸಂದುಗಳು ನೋವೋಣ, ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಅಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧–೪–೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ಕೊಳ್ಳುವವರಿಗೆ ಧರಪ್ರಕಾರ ಕಮಿಷನ್.

ಕೆ. ಬಿ. ರೇಳೆ ಆಣ್ಣ ಕಂಪೆನಿ.

ಗಿರಗಾಂವ ನಂ. ೪ ಮುಂಬಯಿ.

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ

ಕೆಲವು ಔಷಧಗಳು.



ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗ ಹತ್ತಿಕೊಳ್ಳದು.

ಕ್ರಯ ೫೦ ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-6-0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರಾಪ್ಸ್ ಸೇವನೆಯಿಂದ ಹಲವು ಬಗೆಯ ರೋಗಿಗಳು ಚೇತರಿಸಿಕೊಂಡಿದ್ದಾರೆಂತ ಸಿದ್ಧಾಪುರದ ಪಂಡಿತರು ಬರೆದಿರುತ್ತಾರೆ.

ಎಂಟಿಸ್ನೇಕ್ ಬೈಟ್:— ಈ ಔಷಧಿಯು ನಾಗರ ಹಾವು, ಕೊಳಕು ಹಾವು ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಚ್ಚಿದವರು ಒಂದೇ ತಾಸಿನಲ್ಲಿ, ಚೇಳು ಕಡಿದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1. ವಿ. ಪಿ. ಬೇರೆ.

ಟೋರಿಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಕುರುಹುಗಳು ಕಂಡರೆ ತಿಳಿದು ಬಾರ ತಿಳಿಯದ ರೀತಿಯಲ್ಲಿ ಧಾತು ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೋರಿಕಬ್ ಸೇವಿಸಿರಿ.

ಕ್ರಯ ಸೀಸೆ 1ಕ್ಕೆ ರೂ 1–8–0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರೊಪ್ಸ್:— ಇದು ನರಸಂಬಂಧವಾದ ಕಾಯಿಲೆಗಳನ್ನು ತಪ್ಪದೆ ಗುಣಮಾಡುತ್ತದೆ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0–6–0. ವಿ. ಪಿ. ಬೇರೆ.

[illegible] ಇಕ್ಲಿಪ್ಸ್ ಬಾಮ್, ಶುದ್ಧ ಯೂಕಲಿಪ್ಟಸ್ ತೈಲ, ಮೂಲವ್ಯಾಧಿ, ಅಂಧ್ರವಾಯು, ಅಂತವೃದ್ಧಿ ಮೊದಲಾದ ಹಲವು ರೋಗಗಳಿಗೆ ಬೇಕಾದ ವಿವಿಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟ್, ಮಂಗಳೂರು.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ಸಿದ್ಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಸೀಸೆ 1ಕ್ಕೆ ೪ ಆಣೆ.

ರಾಯಲ್ ಸುಗಂಧಿ. ಸೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಸೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನನ್ನ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟ್‌ರವಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮ್ಯಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ಮಾತಿಗೂ ವೈದ್ಯರ ಸಮಯವನ್ನು ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಕ್ಷಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ [illegible] ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ [illegible] ಅಮೆರಿಕಾ, ಡಿ. ಎಸ್. [illegible] ಲಂಡನ್ [illegible] ಏಗಮೆಂಟ್ ನಂ. 2 [illegible]

ಮ॥ ರಾ॥ ಬಿ. ಎಸ್. [illegible]

[illegible]

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡೆಯುವದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಸಿವಿಲ್ ಪ್ರೊಸೀಜರ್ ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, [illegible] ಮತ್ತು ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ್, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, [illegible]

[illegible]

ಬೆಲೆ 1—8—0. ವಿ. ಪಿ. 1—12—0.

[illegible]

[illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರಿಬ್ಬರ ನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರ [illegible] ಸ್ತ್ರೀಯರಿಗೆ ಉಂಟಾಗುವ ಹಾನಿಯನ್ನು, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನು [illegible] ಕಥೆಗಳಿಂದ ತೋರಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ [illegible] ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಛಾಯಚಿತ್ರಗಳಿಂದ [illegible] ಅಚ್ಚು ಹಾಕಿಸಿದೆ. ಆದ್ದರಿಂದ ಪ್ರತಿಒಂದು ಕುಟುಂಬದವರು ಸಂಗ್ರಹಿಸಲು [illegible]

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯು [illegible] ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ [illegible] ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ [illegible] ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಪಡಿಸಿ ಕೆಟ್ಟುಹೋದ ರಕ್ತವನ್ನು ಶುದ್ಧಿ ಮಾಡಿ ಅದನ್ನು ವೃದ್ಧಿಗೊಳಿಸುವದರಿಂದ ಮೂತ್ರ ಸ್ವಪ್ನ ಸ್ಖಲಿತ, ಅಕಾಲ [illegible]

ವಾರ್ಧಿಕ್ಯ ಇವು [illegible]

ರಲ್ಲಿಯೂ, ಮಲಸಂಬಂಧವನ್ನು [illegible] ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ವಿಶೇಷ ಅಸಲ್ಲು [illegible] ದೊರೆಯುವದು.

111 [illegible]

ಎಂಬ ವೈದ್ಯ ಪುಸ್ತಕವು [illegible] ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಚೀನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳಿ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಿಕೆಗೆ ಯೋಗ್ಯವಾದಂಥಾ ೩೦ ಸಾಮಾನುಗಳು ಇರುವ ಪೆಟ್ಟಿಗೆಗೆ ೧—೮—೦. ಮಧ್ಯಮ ತರದ ಸೆಟ್ಟು ಗೆ ೩-೦-೦. ದೊಡ್ಡ ಸೆಟ್ಟು ಉತ್ತಮತರದ್ದಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರದ ರೂಪಾಯಿಗೆ ೪ ತೋಲೆ, ದ್ವಿಯಂ ರೂಪಾಯಿಗೆ ೮ ತೋಲೆ, ತೃಯಂ ರೂಪಾಯಿ ಒಂದಕ್ಕೆ೧೦ ತೋಲೆ, ಚಾರಂ ರೂಪಾಯಿಗೆ ೧೨ ತೋಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮಾಗಿ ಕಳುಹಿಸಲಾದೀತು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
[illegible]

SIROMANI NARAYANA CHARYA & CO.,
Chickmagalur,
[illegible] CITY.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕಗಳಿಗೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲ್ಯಾಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ। ಲಲ್ಲುಭಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:— ಫ್ರೆಮ್ ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮಿ। ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಯೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:— ಮ್ಯಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ಪಾವತಿ ಕೊಟ್ಟು ಆ ಬಗ್ಯೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವರಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಕೊಟ್ಟ ಬಗ್ಯೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರಿ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಳ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಒಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ-ಕಣ್ಮನಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್ ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:—

ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
[illegible]

ಮದರಾಸ್ ಮೇಲ್ ವಾಚ್.

೬ ವರುಷಗಳ ಗ್ಯಾರಂಟಿ.

15 ಬಹುಮಾನ್ನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಧೂಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ \ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗೆಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಅಪ್ಪಣೆ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ಸೇರಿದ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆಗಳನ್ನು, ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ. 0—12—0. ವಿ. ಪಿ. ಚಾರ್ಜು 2 ಆಣೆ.
ಎರಡು ಭಾಗಗಳು ಸೇರಿ ಕ್ರಯ ರೂ. 1— 4—0. „ 2 ಆಣೆ.

ವಿಳಾಸ:— ಬಿ. ರಾಘವುಲು ನಾಯಡು,
ಜಿಮ್ನಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಾಚ್ಯಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,
Senior Gymnastic Instructor,
Pachiyappa's College, MADRAS.

N. B.—ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರಿಯಬೇಕು. ಮತ್ತು ಅಂಗದಗಳನ್ನು ಇಂಗ್ಲೀಷಿನಲ್ಲಿಯೇ ಬರಿಯಬೇಕೆಂದು ಕೋರುವೆವು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಟ್ಟರೆ ಆದರೆ ೮ ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0–8–0. 1 ಡ್ರಾಮ್ ಟ್ಯೂಬ್ ರೂ. 0–12–0. ½ ಡಜನ್ ಟ್ಯೂಬ್ 2-0-0 [illegible] 100-12-0. ವಿ. ಪಿ. [illegible] 0—4—0 [illegible]

[illegible]—
ಎನ್. ಆರ್. ಮೋದಿ ಎಂಡ್ ಕೊ.,
10 [illegible]
[illegible] MODY & Co.
[illegible]

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜಿಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬುತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಚಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟು ಆಫೀಸು ಎದುರು,
ರಾಮೇಶ್ವರಮ್.

ಮೈಸೂರು ದಸರಾ ಪ್ರದರ್ಶನದಲ್ಲಿ ಭಂಗಾರದ ಮೆಡಲ್ ಪಡದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. ಚವನಪ್ರಾಶ ಲೇಹ್ಯ:—ಹಳೆಕೆಮ್ಮು, ಕ್ಷಯ ಮತ್ತು ಉಬ್ಬಸ ಇವುಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ಹೆಚ್ಚಾದ ಆಯುಸ್ಸನ್ನೂ, ಇಂದ್ರಿಯಬಲವನ್ನೂ, ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತನಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವಿ ಭಾಗವತದಲ್ಲಿ ಹೇಳಿರುತ್ತದೆ. ಕ್ರಯ ಡಬ್ಬಿಗೆ ರೂ. 3—0—0.

೨. ಬಾಲಕಾಂತಿ ಮಾತ್ರೆ:—ಪ್ರಸವವಾದ ಬಾಣಂತಿಯರು 30 ದಿನಗಳ ವರೆಗೆ ಉಪಯೋಗಿಸುವದರಿಂದ ಪಾಕ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹೆ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ಪಾರ್ಶ್ವ ವಾಯುವಿನಿಂದ ಪೀಡಿತರಾದವರೂ, ಬೀಳುಕೊನ್ನು ಇರುವವರೂ, ಉಪದಂಶದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಮ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇವು ಹೆಚ್ಚು ಕಾಲದಿಂದ ಉಪಯೋಗಿಸಿ ಶಿಫಾರಸು ಹೊಂದಿದ್ದಾಗಿದೆ. ದರವನ್ನು ಇದರಡಿ ಸೂಚಿಸಿರುವರು.

	ಬಿಲ್ಲೆ 1ರ	ಡಜನ್ 1ರ
1. ಕಸ್ತೂರಿ ಸಾಬೂನು 3 ಬಿಲ್ಲೆಗಳಿರುವ ಪೆಟ್ಟಿಗೆ	0—8—0	5— 0—0
2. ಮನೋಹರ „ „	0—5—0	3— 8—0
ಅತ್ತರ ಸಾಬೂನುಗಳು.		
3. [illegible] ಸಾಬೂನು	0—4—0	2—12—0
4. ಗುಲಾಬ್	0—4—0	2—12—0
5. [illegible] „	0—4—0	2—12—0
6. [illegible] „	0—4—0	2—12—0
7. ಗುಲಾಬಿ „	0—4—0	2—12—0
8. ([illegible]) [illegible]	0-1-6	1—1-0
ಡೈಮಂಡ್ [illegible] ಸಾಬೂನು.		
9. [illegible]	0—1—6	1—1—0
10. [illegible]	0—2—0	[illegible]

[illegible]

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ ೨.

ಕಮಿಯೊನ ಮತ್ತು ಕಂಪೌಂಡ್ ಫೋಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಅಧುಳದಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಯಿ ಹುಣ್ಣು, ತಲೆತಿರುಗು, ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯವಶ್ಯಕ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧—೧೦—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಕ್ಷಯ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವರು. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೨—೦.

ಆರ್. ಮಾರ್ಟಿನ್ಸರ ಗ್ಲಿಟೋಡಾಯಿನ್.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೧೪—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co Fort Bombay

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಕುಂಬಳೆ ನರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇವರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿಯ್ದು ಭಾಮಿನಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೨ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವದು.

ಪಂಡಿತ್ ಟಿ. [illegible]

ಲಂಗ್ [illegible]

ಇದರಲ್ಲಿ ಯಾವ ತರದ [illegible] 48 [illegible] ಕೆಮ್ಮು, ದಮ್ಮು, [illegible] ಸಂಬಂಧವಾದ ಎಲ್ಲಾ ರೋಗಗಳು [illegible] ಮೂತ್ರಕೃಚ್ಛ್ರ, [illegible]

[illegible]

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾನಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. **ಪ್ರಮೇಹರಿಪು ಬಿಂದು.** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. **ಪ್ಲೀಹೋದರಾರಿಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. **ಸರಳಭೇದಿ ಮಾತ್ರೆ.** ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವಿಷಮಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. **ವಾಸಾವ ಲೇಹ.** ಕೆಮ್ಮು, ಗುಲ್ಮುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಳಿಗೆ ೨ ರೂ.

೧೦. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದುವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. **ವಾತಮುರಾರಿ ಬಾಮ್.** ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. **ಸನ್ನೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ರವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರು ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪೆರಿ ಪೋಸ್ಟು ಮದರಾಸು.

B. M NATH & CO. *Ayurvedic Chemists*
Vepery Post MADRAS,

ದಂತ ವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮಾರವರು

ಸದ್ಯದಲ್ಲಿಯೇ ಇಲ್ಲಿಂದ ಇತರ ಪ್ರಾಂತ್ಯಗಳಿಗೆ ಹೋಗುವದೆ ನಿಶ್ಚಯಿಸಿರುತ್ತಾರೆ. ಆದ್ದರಿಂದ ಕೃತಕ ಹಲ್ಲುಗಳನ್ನು ಇಡಲಿಚ್ಛಿಸುವವರು ವ ದಂತ ಚಿಕಿತ್ಸೆ ಮಾಡಬೇಕೆಂದಿರುವವರು ಈ ಸುಸಂದರ್ಭವನ್ನು ಬಿಡಬಾರದು.

ಚಾರ್ಜು ಅತೀ ಸುಲಭ.

ವಿಳಾಸ:— **ಪಿ. ಡಿ. ಲೀಮಾ,**
ಡೆಂಟಲ್ ಸರ್ಜನ್,
ಒಡೆಯರರ ತೋಟದ ಬಳಿ,
ಮಂಗಳೂರು.

ಅಮೃತಾರ್ಣವ ಅವಲೇಹ,

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತಪುಷ್ಟಿವುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತುಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೈಗೂಡಿಸುವದು. ಕ್ರಯ ಸುಲಭ! ಫಲವು ಅಧಿಕವು!!

೨೦ ತೊಲೆಗೆ ರೂ. ೨—೦—೦ ಮಾತ್ರವೇ

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂದರಿರೋಜ

ಎಂಬ ಮನೋಹರವೂ ಮೋಹಕವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಡಮೆ ತರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಿದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ ಅಂಥವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬರಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇದಲ್ಲದೆ ತುರುಬನ್ನು ಯಾವ ರೀತಿಯಿಂದಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಲಾಡಿಸುವುದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಅದರೆ ಅವು ದಟ್ಟವಾಗಿ ಬೆಳೆದು ನಮ್ಮನ್ನವಾಗುವವು. ಇದರ ಸುಗಂಧವಾದರೊ ಮನೋಹರವೂ ಮೋಹಕವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸುತಲೆ ಮಿದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿಡದ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು, ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು ಮಿದುಳಿಗೆ ತಂಪನ್ನುಂಟು ಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿ ರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಿಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿಗಳು 6, ಕಣ್ಣುಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅದ್ದಾ 1, ತಾಂಬೂಲ ಮೊತ್ತ 30, ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರನೇಷನ್ ಪೆಟ್ಟಿಗೆ 1, ಬಣ್ಣದ ಪೋಸ್ಟುಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೋಚ್ 1. ಕ್ರಯ 50 ಬಹುಮಾನಗಳ ಸಹಿತ ರೂ. 1—0—0.

ವಿಳಾಸ:— ವಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಮನೋಲ್ಲಾಸಿನಿ ತೈಲ!

ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಹುರಿ, ಕಣ್ಣುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕುಂದಿಹೋಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದಂತಲೂ ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗಿರುವ ಕೂದಲನ್ನು ತಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆಂತಲೂ ಈ ತೈಲವನ್ನು ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ 1 ಸೀಸೆಗೆ ರೂ. 0—12—0. (ವಿ. ಪಿ. ಖರ್ಚು 4 ಆಣೆ).
,, 3 ಸೀಸೆಗಳಿಗೆ,, 2— 0—0. ,, ,, 8 ,,

ಬೆಲೆ ಸುಲಭ! **ಚಿನ್-ಚಿನ್-ಬಾಂ.** ಗುಣ ಅಧಿಕ!

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ದಡಿಂ, ಘಾಯ, ಚೇಳು ಕಡಿತ, ಕೀಟಕ ಮುಂತಾದ್ದಕ್ಕೆ ತಕ್ಷಣ ಗುಣ. ಬೆಲೆ 1 ಡಬ್ಬಿಗೆ ಒಂದೇ ಆಣೆ, ಡೆಜನ್ 1ಕ್ಕೆ ರೂ. 0—10—0. ಅಂಚೆ ಹಾಸಲು ಬೇರೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್.

ಸೂಚನೆ:—ಅನೇಕ ತರದ ಮಾತ್ರೆಗಳು, ತೈಲಗಳು, ಘೃತಗಳು, ಲೇಹ್ಯಗಳು, ಅರಿಷ್ಟಗಳು, ಸಿಕ್ಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
4, ಕಂಕನಾಡಿ ಪೋಸ್ಟು, ಮಂಗಳೂರು.

ಮೈಸೂರು ದಸರಾ 1916ನೇ ವರ್ಷದ ಸರ್ವ ವಸ್ತುಪ್ರದರ್ಶನ ಶಾಲೆಯಲ್ಲಿ ಬಿರುದು ಬಿಲ್ಲೆಯನ್ನೂ ಮತ್ತು ಅನೇಕ ಡಾಕ್ಟರುಗಳಿಂದ ಯೋಗ್ಯತಾಪತ್ರವನ್ನೂ ಪಡೆದಿರುತ್ತದೆ,

ಪತ್ರ ನೋಡಿ! ಜಾಗ್ರತೆ ಮಾಡಿ!! ಬೆಲೆ ಸುಲಭ!!!

ರಿಕ್ಸ್ ರಾಮಕೃಷ್ಣಾಮೃತ.

ನೀವು ನಿಮ್ಮ ಅಮೂಲ್ಯವಾದ ಶರೀರವನ್ನು ಏತಕ್ಕೆ ಯಾತನೆಗೂ ಸಂಕಟಕ್ಕೂ ಒಳಗುಮಾಡಿಕೊಂಡು ಕೃಶರಾಗಿರುವಿರಿ!

ಈಗಹಾನೇ ತಯಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ಸುಲಭ, ಪ್ರಯೋಜನ ಬಹಳ. ವಿದ್ಯಾರ್ಥಿಯರಿಗೂ, ವೃದ್ಧಾಪ್ಯರಿಗೂ, ಸ್ತ್ರೀ ಪುರುಷ ವರ್ಗದವರಿಗೂ, ಮುಖ್ಯವಾಗಿ ಎಲ್ಲಾ ಜನಾಂಗಳಿಗೂ, ಬಹಳ ಪ್ರಯೋಜನಕಾರವಾದದ್ದು. ... ಬೆಲೆ ... 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5—4—0. ಟ. ಮ. ಬೇರೆ.

ಎಲ್ಲಾ ಸ್ಥಳದಲ್ಲಿಯೂ ಏಜಂಟರು ಬೇಕು. ವ್ಯಾಪಾರಗಳಿಗೆ ಧಾರಾಳವಾದ ಕಮಿಶನ್ ದೊರೆಯುವದು.

... ಕೆಳಗಿನ ವಿಳಾಸಕ್ಕೆ ಬರೆಯಿರಿ.

R. K. DEPOT,
... Chamrajpet, MYSORE.

ಹೊಸ ಪುಸ್ತಕ! 'ಹಿಂದೂಲಾ' ಹೊಸ ಪುಸ್ತಕ!

ಇದುವರಿವಿಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅಣ್ಣತಮ್ಮಂದಿರ ದಾಯಧಾಗ ಪಾಲು ಪಾರಿಭತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯಬೋಗ್ಯ ಆಧಾರ ಅನ್ವಾದಿಪತ್ರಗಳು, ಗುರು ಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಬಕ್ಕಣೆಗಳು ವಿಶದವಾಗಿ ಅಚ್ಚು ಮಾಡಲ್ಪಟ್ಟಿದೆ. ಕ್ರಯ ರೂ. ೧—೮—೦.

ವಿಳಾಸ:—ಟಿ. ನರಸಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು ಸಿಟಿ.

ಪ್ರಖ್ಯಾತವಾದ ... ಗ್ಯಾಸ್‌ದೀಪಗಳು:—

ಗ್ಯಾಸ್‌ದೀಪಗಳಲ್ಲಿ ... ಮತ್ತು ... ಬಹಳ ... ಸನ್ ಕಂಪೆನಿ, ...

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಶೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.

... **STANY BROTHERS**
Sole Agents
M. C. C. Toothache
... **Mangalore.**

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೪ನೇ ಆಗೋಸ್ತು ಶನಿವಾರ ೧೯೧೭. | ಸಂಚಿಕೆ ೩೧.

ಒಂದು ತಿಂಗಳ ಕಾಲಕ್ಕೆ ಮಾತ್ರ!

ಅರ್ಧ ಕ್ರಯಕ್ಕೆ ಮಾರಲ್ಪಡುವವು.

ಫ್ಲುಟ್ ಹಾರ್ಮೋನಿಯಮ್‌ಗಳು.



ಎಲ್ಲಾ ನಮೂನೆಯ ಗಾಯನಗಳಿಗೆ ತಕ್ಕಂಥವುಗಳು, ಯಾವ ಹವಾಗುಣಗಳಲ್ಲಿ ಯಾದರೂ ಬಾಳುವಂಥವುಗಳು. ಒಳ್ಳೆ ಮಾಗಿದ ಸಾಗವಾನಿ ಮರದ ಹಲಿಗೆಗಳಿಂದ ತಯಾರಿಸಲ್ಪಟ್ಟವುಗಳು. ಇವುಗಳಲ್ಲಿ [illegible] ರೀಡ್ಸ್‌ಗಳು ಉತ್ತಮ [illegible] ಸಮ್ಮತವಾಗದ ಈ ಹಾರ್ಮೋನಿಯಮ್‌ಗಳನ್ನು [illegible] ದಿವಸಗಳಲ್ಲಿ ಹಿಂತಿರುಗಿ ಕಳುಹಿಸಿದರೆ ವಾಪಸು ತೆಗೆದುಕೊಳ್ಳುತ್ತೇವೆ. ಸಿಂಗಲ್ ರೀಡ್ ಇರುವಂಥವುಗಳಿಗೆ ರೂ. 40, 45, 50 ಕ್ರಯದವುಗಳು ರೂ. 20, 22—8—0, 25—0—0 ಕ್ಕೆ ದೊರೆಯುವವು. ಡಬ್ಬಲ್ ರೀಡ್ ಇದ್ದವುಗಳು ರೂ. 75, 80, 90 ಕ್ರಯದವುಗಳನ್ನು ರೂ. 35, 40, 45ಕ್ಕೆ ಈಗ ಕೊಡುತ್ತೇವೆ. ಕೈಗಳಿಂದಲೂ ಕಾಲುಗಳಿಂದಲೂ ಬಾರಿಸಬಹುದಾದ ಅತ್ಯುತ್ತಮ ಡಬ್ಬಲ್ ರೀಡ್ ವಾಸಬುವಂಥ ರೂ. 130ರ ಹಾರ್ಮೋನಿಯಮ್‌ಗಳು ಈಗ ರೂ 65ಕ್ಕೆ ದೊರೆಯುತ್ತವೆ. ಹಾರ್ಮೋನಿಯಮ್‌ಗಳು ಬೇಕಾದವರು ಕ್ರಯದ ಕಾಲು ಅಂಶವನ್ನು ಮುಂಗಡವಾಗಿ ಕಳುಹಿಸಬೇಕು, ಮತ್ತು ತಮಗೆ ಸಮೀಪವಿರುವ ರೈಲ್ವೆ ಸ್ಟೇಶನನ್ನು ಸಹ ತಿಳಿಸಬೇಕು. ಪತ್ರವ್ಯವಹಾರವನ್ನು ಇಂಗ್ಲಿಷ್ ಭಾಷೆಯಲ್ಲಿಯೆ ಬರೆಯಬೇಕಾಗಿದೆ

ನೆಷನಲ್ ಹಾರ್ಮೋನಿಯಮ್ ಕಂಪೆನಿ,
10/8 ಲೋವರ್ ಚಿತ್‌ಪುರ ರೋಡು.

ಟೆಲಿಗ್ರಾಮುಗಳ ಬಗ್ಗೆ ವಿಳಾಸ:— ಮ್ಯುಜಿಸಿಯನ್ಸ್, ಕಲ್ಕತ್ತಾ.

ಬಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಯಕ್ಷಗಾನ.

ತುಳು ಪಂಚವಟಿ ರಾಮಾಯಣ ...	ಕ್ರಯ ರೂ. 0—3—0
[illegible]ಡ ದುಂದುಭಿ ಆಖ್ಯಾನ ...	,, ,, 0—4—0
ಕನ್ನಡ ಚಂದ್ರಮೌಳಿ[illegible]ಳಗ ...	,, ,, 0—4—0

ಈ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಕ್ರಯ ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕೆಳಲಾಗು ಮುಫತ್ತು.

ವಿಳಾಸ:— ಕೆ. ಸುಬ್ರಾಯ ನ್ಯಾಕ್ ಎಂಡ್ ಸನ್ಸ್,
ಟಿ. ಟಿ. ಏಜನ್ಸಿ, ವಿಟ್ಲ, ದ. ಕ.

ಉಚಿತ! ಉಚಿತ! ಉಚಿತ!

ಕ್ರಯ 5 ರೂ. ಉಳ್ಳ ಇಂಗ್ಲಿಷ್ ಲಿವರ್ ವಾಚು ಉಚಿತ.



ಈ ಪೆನ್ನಿಯಲ್ಲಿ [illegible]

[illegible] — [177.?]

ವಿಳಾಸ—[illegible]

ಒಳ್ಳೆ ಗೊಬ್ಬರ! ಅವ್ವಲ್ ಊಟು!!

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಬೆಲೆ ಕಡಿಮೆ! ಬಲ ಹೆಚ್ಚು! ಸಾರ ಹೆಚ್ಚು! ಭಾರ ಕಡಿಮೆ!

ಈ ಗೊಬ್ಬರ ಒಂದು ಹಿಡಿ ಸಾಕಾದ್ದಕ್ಕೆ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಬೂದಿ ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಟವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು,

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೆಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೋಮಿಯೋಪತಿ, ಟಿಸ್ಯು, ಸ್ಪೆಸಿಫಿಕ್, ಇಲೆಕ್ಟ್ರೊ ಹೋಮಿಯೋಪತಿ ವ ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೋಮಿಯೋಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
ಧರ್ಮಸ್ಥಳ.

ಹೊಸ ಪುಸ್ತಕ! **'ಹಿಂದೂ ಲಾ'** ಹೊಸ ಪುಸ್ತಕ!

ಇದುವರೆಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅಣ್ಣತಮ್ಮಂದಿರ ದಾಯಭಾಗ ಪಾಲು ಪಾರಿಖತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯಬೋಗ್ಯ ಆಧಾರ ಅನ್ನಾದಿಪತ್ರಗಳು, ಗುರುಶಿಷ್ಯರು [illegible] ವಿಶದವಾಗಿ ಅಚ್ಚುಮಾಡಲ್ಪಟ್ಟಿದೆ. ಕ್ರಯ ರೂ. ೧—೮—೦.

ವಿಳಾಸ:—ಬಿ. ನರಸಿಂಗರಾವ್, ಎಡಿಟರ್,
ಲಾ-ಗಜೆಟ್, ಬೆಂಗಳೂರು ಸಿಟಿ.

A Kannada Popular Science Monthly.

"ವಿಜ್ಞಾನ" ವೆಂಬ ಕನ್ನಡ ಮಾಸಪತ್ರಿಕೆ.

ಇದರಲ್ಲಿ ಜನರಿಗೆ ಉಪಯುಕ್ತವಾದ ಆಧುನಿಕ ವಿಜ್ಞಾನದ ವಿಷಯಗಳು, ಸಾಮಾನ್ಯ ಜನರಿಗೆ ತಿಳಿಯುವಂತೆ, ಸುಲಭವಾದ ಶೈಲಿಯಲ್ಲಿ [illegible]

[illegible]

ನೋಟೀಸು.

ಈ ಕೆಳಗೆ ದಸ್ಕತು ಮಾಡಿರುವ ಡಿ. ಹಸನೆಬ್ಯಾರಿಯಾದ ನಾನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವದೇನೆಂದರೆ—ಕಾರ್ಕಳ ಡಿ[illegible] ಮುನ್ಸೀಫ್ ಕೋರ್ಟಿನಲ್ಲಿ ಕ್ರಮ ನಂಬ್ರ [illegible]ನೇಗೆ ನಾನು ವಾದಿಯಾಗಿ ಮತ್ತು ಜಿಯಾಉದ್ದಿನ್ ಅಸದಿ ಕೂಡಾ ಪ್ರತಿವಾದಿಯಾಗಿ ದಾಖಲಾದ ವ್ಯಾಜ್ಯದಲ್ಲಿ 1ನೇಯ ಪ್ರತಿವಾದಿಯಾದ ಜಿಯಾಉದ್ದಿನ್ ಅಸ್ಸದಿರು ತನ್ನ ಸಾಧನೆಯ ಸತ್ಯತ್ವದ ಕುರಿತು ಸ್ಥಳಾಂತರ ಪ್ರಮಾಣ ಮಾಡುವರೆ ಒಪ್ಪಿಕೊಂಡದ್ದರಿಂದ ಕೋರ್ಟಿನವರು ನಿಶ್ಚಯಿಸಿದ ತಾ. 20-7-17ನೇ ಶುಕ್ರವಾರ ದಿವಸ ಹಳೆಯಂಗಡಿ ಗ್ರಾಮದ ಬೋಳ್ಳೂರು ಜುಮಾಮಸೀದಿಯಲ್ಲಿ ಸದರಿ ಮಸೀದಿಯ ಕೆರೆಯಲ್ಲಿ ಒಂದು ಮಧ್ಯಾನದ ಬಾಂಕು ಕೊಟ್ಟ ನಂತರ ಕುತ್ಬಾವ್ ಓದುವ ಮೊದಲು ದಾವೆಯಲ್ಲಿ 1ನೇ ಪ್ರತಿವಾದಿಯು ಹಾಜರುಮಾಡಿದ ಗೇಣಿ ಪಾವತಿ ರಶೀದಿಗಳು 3ನ್ನು ತನ್ನ ಎಡಕೈಯಲ್ಲಿ ಹಿಡಿದು ತನ್ನ ಬಲಕೈಯನ್ನು ಖುರಾನಶಾಸ್ತ್ರ ಪುಸ್ತಕದ ಆನ್ ಆಮ್ ಎಂಬ ಸುರಾತಿನ ಮೇಲೆ ಇಟ್ಟು ಅಲ್ಲಿಯ ಸ್ಥಳ ರಿವಾಜು ಮೇರೇಗೆ ಕೋರ್ಟಿನಲ್ಲಿ ನಿಶ್ಚಯಿಸೋಣಾದ ವಾಕ್ಯಗಳನ್ನು ಮೂರಾವರ್ತಿ ಉಚ್ಚರಿಸಿ ಅಘೋರ ಪ್ರಮಾಣ ಮಾಡಿದ್ದರಿಂದ ನಾನು 1ನೇ ಪ್ರತಿವಾದಿಯಾದ ಜಿಯಾಉದ್ದಿನ್ ಅಸದಿಯರ ಮೇಲಣ ಆಸ್ತಿ ಸ್ವಾಧೀನತೆ ಮಟ್ಟಿನ ನನ್ನ ದಾವೆಯನ್ನು ಬಿಟ್ಟು 1ನೇ ಪ್ರತಿವಾದಿ ಸಾಧನೆಯ ಪ್ರಕಾರ 1ನೇ ಪ್ಲೈಂಟು 1ನೇ ಪ್ರತಿವಾದಿ ಗುಣಕ್ಕೇನೆ ತೀರ್ಮಾನಿಸುವರೆ ನನ್ನ ಪೂರ್ಣ ಸಮ್ಮತಿಯನ್ನು ಕೊಟ್ಟ ವಿವರವನ್ನು ಸರ್ವರೂ ತಿಳಿಯಬೇಕಾಗಿರುವದು.

ಡಿ. ಹಸನೆಬ್ಯಾರಿ ರುಜು.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಲೋ. ಸೆ. ಟೆಕ್ಸ್ಟ 4 ಆಣೆ, ಡಿಟೋ ನೋಟ್ಸು ಮ. ವೆಂಕಟ ಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟ 2½ ಆಣೆ, Rama & Sita 4 as., (Do Notes 6 as., General Eng. Questions & Answers from 1901-1917 6 as., by Mr. Pichamuttu, B. A.) Gen. English by Mr. Chennakesaviah Rs. 1-2-0, [illegible] I 5 ಆಣೆ, ಡಿಟೋ II ನೇದು 5 ಆಣೆ, ಪ್ರಶ್ನೋತ್ತರ ಲೇಖ್ಯಬೋಧಿನಿ ರೂ. 1-8-0, ನವೀನ ಗಣಿತ 8 ಆಣೆ, ಹಿಂದೂ ಚರಿತ್ರಸಾರ 10½ ಆಣೆ, [illegible] 1ನೇ ರೀಡರ್ 5 ಆಣೆ, ಡಿಟೋ 2ನೇದು 7 ಆಣೆ, ಡಿಟೋ 3ನೇದು 8½ ಆಣೆ, [illegible] 2½ ಆಣೆ, ವಾಕ್ಯರ ತಿದ್ದುವಿಕೆ 12 ಆಣೆ, ಲೇಖ್ಯಬೋಧಿನಿ 8½ ಆಣೆ, [illegible] ಲಕ್ಷಣ 5 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

ಈ ಪುಸ್ತಕದಲ್ಲಿ—[illegible]

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital	Rs. ...	300,000—0—0
Issued Capital	... ...	225,000—0—0
Subscribed Capital	... ...	225,000—0—0
Paid up Capital	... ...	201,775—0—0
Deposits	... ...	310,261—3—10
Reserve Fund	... ...	50,003—2—5

ನಿಯಮಿತ ಮೂಲ ಧನವು	ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು	,,	225,000—0—0
ಪ್ರತಿಜ್ಞಾತ ಮೂಲ ಧನವು	,,	225,000—0—0
ಆಗತ ಮೂಲ ಧನವು	,,	201,775—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		310,261—3—10
ರಕ್ಷಿತ ಧನವು	...	50,003—2—5

25% of the net profits are added annually to the Reserve Fund. Rs. 27,349—11—2 have been invested in Government Paper

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಶೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ 27,349-11-2 ಸರಕಾರದ ರೂ. 30,800ರ ಧರ್ಮಪತ್ರಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಳೆದ 8 ವರುಷಗಳಲ್ಲಿ ಶೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5, 5½% and 6% respectively at the discretion of the managing committee.

ಖಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ 50 ಯಾ 5ರಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one week's notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಶೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವಿದೆ. ಆ ಠೇವಣಾತಿಗಳಿಗೆ ಶೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

Loans granted on proper securities and pledges

Canara Bank Ltd.,
Mangalore, 1st July 1917.

P. Gopal Naik,
Secretary.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಪ್ಲೇಗ್‌ನಿವಾರಕ. ಪ್ರತಿದಿನ ಚಿಕಿತ್ಸೆ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.
ಬೆಲೆ 6 ಡೋಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ. ಇದು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಕೋಣವಾಯಿಸುತ್ತದೆ. ಬೆಲೆ 1 ಡೋಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಸಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತೀ ವಿಳಾಸ: — "ಪಂಡಿಟ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಸೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ, ಪೂರ್ವದ ಬಿಲ್ಡಿಂಗ್

ಪಂಡಿತ ಎಂ. ಎಸ್. ಯವರ ಮದರಾಸ್ ಪುಡಿ ನಶ್ಯ.

ಈ ನಶ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ

ಪುಡಿಯನ್ನು ಉಪಯೋಗಿಸುವುದರಿಂದ ಪೀನಾಸಿ, ಅರತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣಮಾಡುವದು. ಈ ನಶ್ಯವು ಬೇರೆಯವರ ನಶ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮೆದುಳನ್ನು ಕೆಡಿಸುವದಿಲ್ಲ. ಈ ನಶ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5 ಆಣೆ.

ಒಂದೇಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್ ಸಿಟಿ. ಬಾಬು ಕಂಪನಿ,
ನಂಬ್ರ 7-2ನೇ ನಾರಾಯಣ ಬೀದಿ, ಮಿಂಟ್ ಬಿಲ್ಡಿಂಗ್ ಮದರಾಸ್.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮೀಷನ್!!

ಶತಮೂಲಿಕಾ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಶರಶ್ಚಿರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ಕರ್ಮೇಂದ್ರಿಯವನ್ನು ಬಲಪಡಿಸುತ್ತದೆ. ಕುಪ್ಪಿ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುಷ್ಟಿಯುತರನ್ನಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಬಸಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ಕೊಳೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಲಾಮಿನಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಪ್ರಾಶ್. ಇದು ವಾಯು ದುಮ್ಮಾನ ಎಂಬ ಬಿಡಿ ರೋಗಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಲೆ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಸ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಯಂ. ಯಸ್. ರಾವ್ ಕಂಪೆನಿ,
ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 6 ಆಣೆ ಪ್ರತ್ಯೇಕ. ಮತ್ತು ಅಧ್ಯಾಪ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಲ್	0—4—0
ಪ್ರಕೃತಿ ,, ,,	0—12—0
ಅಂಬಾಲಿಕೆ (ಹೊಸ ನಾವಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ	0—2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
[illegible]	1—0—0
[illegible]	1—4—0
[illegible]	1—4—0
[illegible]	1—2—0
[illegible]	0—10—0
[illegible]	0—1—0

ಯೂರೋಪದ ಮಹಾ ಯುದ್ಧ.

ಜರ್ಮನರ ಫಿರಂಗಗಳ ಪ್ರಹಾರವು ಡ್ವಿನ್ಸ್ಕ ಊರಿಗೆ ಸಮೀಪದಲ್ಲಿ ಜೋರಾಗಿತ್ತು. ಅಲ್ಲಿಂದ ಟಾರ್ನೋಪೋಲ್ ವರೆಗೆ ವಿಸ್ತರಿಸಿ ಕಡೆಗೆ ಅವರು ಅದನ್ನು ಹಿಡಿದರು. ರುಷ್ಯರ ಸಾಹಸವು ಫಲಿಸಲಿಲ್ಲ. ರುಷ್ಯದ ನೈಋತ್ಯ ಭಾಗದಲ್ಲಿ ಅದ ಹಾಗೆಯೇ ಸೈರೆತ್ ದಲ್ಲಿಯೂ ಸರೆಥ್ ಬಳಿಯಲ್ಲಿ ರುಷ್ಯರು ಹಿಂಜರಿದು ಕಾರ್ಪೇತಿಯನ್ ಬೆಟ್ಟಗಳನ್ನು ಆಶ್ರಯಿಸಬೇಕಾಯಿತು. ಡೀಸ್ಟರ್ ನದಿಯನ್ನು ದಾಟಿ ಜರ್ಮನರು ಮುಂದರಿಸಿ ರುಷ್ಯರ ಸಾಹಸವನ್ನು ತಿರಸ್ಕರಿಸಿ ಯುದ್ಧಮಾಡುತ್ತಲಿದ್ದಾರೆ.

ರುಷ್ಯರು ವಿಲ್ನಾ ಬಳಿಯಲ್ಲಿ ಜರ್ಮನರ ಪಾಳ್ಯವನ್ನು ಸ್ವಲ್ಪಮಟ್ಟಿಗೆ ಪ್ರವೇಶಿಸಿ ಸುಮಾರು ೧೦೦೦ ಜನರನ್ನು ಸೆರೆಹಿಡಿದರು. ಆದರೆ ಸೈನ್ಯದಲ್ಲಿ ಚಿತ್ತ ಚಾಂಚಲ್ಯ ಉಂಟಾದ್ದರಿಂದ ರುಷ್ಯರ ಕೈಕಟ್ಟಿದಂತಾಗಿದೆ. ಹೀಗಾಗಿ ಸೆರೆತ್ ಮತ್ತು ಸ್ಟ್ರೀಪಾ ಬಳಿಯಲ್ಲಿ ೪ ಊರುಗಳು ಜರ್ಮನರ ಕೈವಶವಾದುವು. ರುಷ್ಯದ ಅನೇಕ ನಾಯಕರು ಮಡಿದರು.

ಇದಕ್ಕಿಂತಲೂ ರುಷ್ಯದ ರಾಜಧಾನಿಯಾದ ಪೆಟ್ರೋಗ್ರೇಡಿನಲ್ಲಿ ಜನರ ವರ್ತನವೇ ವಿಷಾದಕ್ಕೆ ಕಾರಣವಾಗಿದೆ. ಅರಾಯಕತ್ವವು ಅಲ್ಲಿ ಬಹಳ ಮಟ್ಟಿಗೆ ಇರುವುದರಿಂದ ಸೈನ್ಯವು ಯುದ್ಧರಂಗದಲ್ಲಿ ಮಾಡಿದ ಸಾಹಸಕ್ಕೆ ನೀರು ಎರೆದಂತಾಗುತ್ತದೆ. ಸೋಲ್ಜರರ ಮತ್ತು ಕಾಯಕಷ್ಟದಿಂದ ಜೀವಿಸುವವರ ಪ್ರತಿನಿಧಿಗಳು ಈಗಿನ ಸರಕಾರವನ್ನು ಸಾಕಷ್ಟು ಸಹಾಯ ಮಾಡುತ್ತಿದ್ದರೂ ಚಳವಳವು ಇನ್ನೂ ನಿಲ್ಲಲಿಲ್ಲ. ಈಗ ಹಂಗಾಮಿಯಾಗಿ ಆಡಳಿತ ನಡಿಸುವ ಕಮ್ಮಿಟಿಯವರು ಕೆಟ್ಟ ಶಿಸ್ತಿನಾಚಾರವೇ ಮೇರೆಗೆ ರುಷ್ಯದ ಸೈನ್ಯದಲ್ಲಿ ಇರುವ ಅಸಮಾಧಾನದ ನಿಮಿತ್ತ ಕೆಲವು ರೆಜಿಮೆಂಟುಗಳು ಯುದ್ಧಮಾಡದೆ ಜರ್ಮನರಿಗೆ ಆಯುಧಗಳನ್ನು ಕೊಟ್ಟರೆಂತಲೂ ಇಂಥ ಕೃತಕಕ್ಕೆ ದಾರಿಕೊಟ್ಟ ದುರ್ಮಂತ್ರಿ ದಾಜದ್ರೋಹಿಗಳೆಂದು ಭಾವಿಸಿ ಅವರಿಗೆ ತಕ್ಕ ದಂಡನೆಯಾಗಬೇಕೆಂತಲೂ ತಿಳಿದುಬರುತ್ತದೆ. ರುಷ್ಯದಲ್ಲಿ ಪ್ರಜಾಸತ್ತೆಯನ್ನು ಸ್ಥಿರವಾಗಿ ನೆಲೆಗೊಳಿಸುವುದೂ ಮಿತ್ರಮಂಡಲಿಯವರಿಗೆ ಈ ಯುದ್ಧದಲ್ಲಿ ಇರುವ ಉದ್ದೇಶಗಳನ್ನು ಬರ್ಲಿನ ನಗರಕ್ಕೆ ಒಂದು ಅಧಿವೇಶನವನ್ನು ಏರ್ಪಡಿಸುವುದೂ ಇವೇ ವಿಷಯಗಳು. ಈ ಇಸ್ತಿಹಾರುವಾರಿಯಲ್ಲಿ ಸ್ಪಷ್ಟವಾಗಿ ಕಾಣುತ್ತಿವೆ.

ಜರ್ಮನ ಕೈಸರನು ರುಷ್ಯದ ನೈರುತ್ಯ ರಣರಂಗದಲ್ಲಿ ಪ್ರಯಾಣ ಬೆಳಸಿ ಬಾರಿಯಲ್ಲಿ ಪೊಡ್ವೊಲೊಚಿಸ್ಕಾ ಎಂಬಲ್ಲಿ ಒಸ್ಟ್ರಿಯನ್ ಚಕ್ರವರ್ತಿಗೆ ಭೇಟಿಯಾದನು.

ರುಷ್ಯದ ನೈರುತ್ಯ ಭಾಗದಲ್ಲಿ ಯುದ್ಧವನ್ನು ನಡಿಸುವ ರುಷ್ಯನ್ ದಳವಾಯಿಗಳು ಅಲ್ಲಿಯ ಸೈನ್ಯದ ರಾಜದ್ರೋಹವನ್ನು ಸಹಿಸಲಾರದೆ ಅವರಮೇಲೆ ಕಠಿಣತರದ ಶಿಕ್ಷೆ ನಡಿಸಬೇಕೆಂದು ರುಷ್ಯದ ಯುದ್ಧ ಮಂತ್ರಿಗೆ ತಂತಿಮೂಲಕ ಕೇಳಿಕೊಂಡಿರುವರು. ಯುದ್ಧಕ್ಕೆ ಮುಂದೊತ್ತಿಬಂದ ರುಷ್ಯದ ಒಂದು ಸೈನ್ಯವು ಪಲಾಯನ ಮಾಡಿತು. ಹಲಿಕ್ ಮತ್ತು ಕಾಲೂಸನ್ನು ಹಿಡಿದ ಸೈನ್ಯವು ಸಹಾಯ ಕೊನ್ನವಾಗಿ ಹಿಂಜರಿಯಬೇಕಾಯಿತು. ಕ್ರೆವೊ ಎಂಬ ಸ್ಥಳಕ್ಕೆ ಉತ್ತರದಿಕ್ಕಿನಲ್ಲಿ ಜರ್ಮನರ ಆಘಾತಿಯನ್ನು ಸಹಿಸಲಾರದೆ ರುಷ್ಯರು ಹಿಮ್ಮೆಟ್ಟಬೇಕಾಯಿತು. ಒಲಿಶಾ ಎಂಬಲ್ಲಿಯೂ ಜರ್ಮನರ ಪೆಟ್ಟನ್ನು ಸಹಿಸಲಿಕ್ಕೆ ರುಷ್ಯರಿಗೆ ಕೂಡಲಿಲ್ಲ. ನೀಸ್ಟರ್ ನದಿಯ ದಕ್ಷಿಣಕ್ಕೂ ಕಾರ್ಪೇತಿಯನ್ ಪರ್ವತಗಳವರೆಗೆ ಇದೇ ಸ್ಥಿತಿಯು ಆಯಿತು.

ಆದರೆ ರುಮೇನಿಯ ರಾಜ್ಯದ ಗಡಿಯಲ್ಲಿ ರುಮೇನಿಯರೂ ರುಷ್ಯರೂ ಜತೆಯಾಗಿ ೧೦೦೦ ಜರ್ಮನರನ್ನು ಸೆರೆಹಿಡಿದು ೩೩ ಫಿರಂಗಿ, ೧೭ ಮೆಶಿನ್‌ಗನ್ ಮುಂತಾದ್ದನ್ನು ವಶಮಾಡಿಕೊಂಡರು. ಟಾರ್ನೋಪೋಲ್ ಮತ್ತು ಟ್ರೆಂಬೋವ್ಲಾ ಬಳಿಯಲ್ಲಿ ರುಷ್ಯರು ಹಿಮ್ಮೆಟ್ಟುವ ದೃಶ್ಯವನ್ನು ಕೈಸರನು ಸ್ವತಃ ನೋಡಿ ಸಂತೃಪ್ತನಾದನು. ಸ್ಟಾನಿಸ್‌ಲೊ ನೆನಪೂರ್ವಸ್ಥಳಗಳ ಜರ್ಮನರ ವಶವಾದುವು. ಜನಾಂಗದಲ್ಲಿ ವಿನೋದ ಭಕ್ತಿಯನ್ನು ಉತ್ತೇಜಿಸುವ ವರ್ತಮಾನ ಪತ್ರಿಕೆಗಳನ್ನು ಅಡಗಿಸಿ, ದಂಗೆ ಎದ್ದವರಿಗೆ ತಕ್ಕ ಸಜೆ ಕೊಡಲಿಕ್ಕೆ ಮಾರ್ಶಲ್ ಕೋರ್ಟುಗಳ ಯುದ್ಧರಂಗದಲ್ಲಿಯೇ ಸ್ಥಾಪಿಸಲ್ಪಟ್ಟಿವೆ.

ಎಯಿನ್ಸ್ ಪೀಠಭೂಮಿಯಲ್ಲಿ ಈಗ ಫ್ರೆಂಚರಿಗೂ ಜರ್ಮನರಿಗೂ ನಡೆಯುವ ಯುದ್ಧವು ಈ ಮೊದಲು ವರ್ಡನಿನಲ್ಲಿ ಆದ ಯುದ್ಧದ ಸ್ಥಿತಿಯನ್ನೆ ಅನುಸರಿಸುವಂತಿದೆ. ಜರ್ಮನರ ರಾಜಕುಮಾರನು ತನ್ನ ಹಟಸಾಧನೆಗಾಗಿ ಬಲಿ ಕೊಟ್ಟ ಸಾದ ಚಲೋ ಸೈನ್ಯವನ್ನು ಹೀಗಮಾಡಿ ಬಿಟ್ಟರೂ ಬಲಿ ಇತ್ಯಾದಿ ಸಂದರ್ಭವು ಕಾಣುತ್ತದೆ. ಹೆಸರುವಾಸಿಯಾದ ಹೈಂಡನ್‌ಬರ್ಗ್ ರೆಜಿಮೆಂಟು ತೀರಾ ಹಾಳಾಯಿತು. ಕ್ರಾಫೊನ್ ಪೀಠಭೂಮಿಯಲ್ಲಿ ಇದೇ ರೀತಿಯಾಗಿ ಜರ್ಮನರು ೪ ದಿನ ಸಾಹಸಮಾಡಿ ಹಿಡಿದ ಸ್ಥಳಗಳನ್ನು ಒಂದೇ ತಾಸಿನಲ್ಲಿ ಫ್ರೆಂಚರ ವಾಪಸು ಸೆಳೆಕೊಂಡರು.

ಹುರ್ಟಿಬಿಸ ಎಂಬ ಸ್ಥಳದ ವಾಯುದಿಕ್ಕಿನಲ್ಲಿ ದೊಡ್ಡ ಸೈನ್ಯವನ್ನು ಜರ್ಮನರು ಜತೆಗೂಡಿಸಿ ಬಹು ಪ್ರಯತ್ನದಿಂದ ಎಯಿಲ್ಲೆ ಎಂಬ ಸ್ಥಳದ ದಕ್ಷಿಣ ಭಾಗದಲ್ಲಿರುವ ಫ್ರೆಂಚರ ಪಾಳ್ಯದ ಮೊದಲನೆ ಸಾಲನ್ನು ಹಿಡಿದರು. ಆದರೆ ಹೆಚ್ಚಿಗೆ ಮುಂದರಿಸುವುದಕ್ಕೆ ಫ್ರೆಂಚರು ಅವರನ್ನು ಅಡ್ಡಗಟ್ಟಿದರು.

ರುಷ್ಯದ ಸಿಪಾಯರ ಮತ್ತು ಕಾಯಕಷ್ಟ ಮಾಡುವವರ ಪ್ರತಿನಿಧಿಗಳ ಕಾರ್ಯನಿರ್ವಾಹಕ ಸಭೆಯು ರುಷ್ಯದಲ್ಲೆಲ್ಲ ಪ್ರಕಟಿಸಿದ ಪ್ರಕಟಣಾಪತ್ರದ ಮೇರೆಗೆ ರುಷ್ಯದ ಅಸ್ತಿತ್ವಕ್ಕೆ ಈಗಿನ ಸೈನ್ಯದ ಚಳವಳವೂ ಅರಾಯಕತ್ವವೂ ರಾಜದ್ರೋಹವೂ ಅಪಾಯಕರವೆಂತಲೂ ಈ ಅರಾಯಕತ್ವ ಮತ್ತು ಕ್ರಾಂತಿಯನ್ನು ನಿಷ್ಠುರ ಹಸ್ತದಿಂದ ಅಡಗಿಸುವುದಕ್ಕೆ ತಮ್ಮ ಪೂರ್ಣ ಸಹಕಾರವುಂಟೆಂತಲೂ ತಿಳಿದುಬರುತ್ತದೆ. ಈ ಸರ್ಕಲರನ್ನು ಅನುಸರಿಸಿ ಜನರಲ್ ಕೊರ್ನಿಲೊಫನು ರಾಜದ್ರೋಹಿಯಾದ ಡಿವಿಜನನ್ನು ಫಿರಂಗಿಯ ಬಾಯಿಯಿಂದ ಸುಡಿಸಿಬಿಟ್ಟನು.

ಸೀಸ್ಟರ್ ನದಿಯ ಉತ್ತರದಲ್ಲಿ ಬ್ರೂಜೇನ್, ಮೊದಲಾದ ಸ್ಥಳಗಳು ಜರ್ಮನರಿಗೆ ಸಿಕ್ಕಿದ್ದಲ್ಲದೆ ಕಾರ್ಪೇತಿಯನ್ ಪರ್ವತಗಳ ಬಳಿಯಲ್ಲಿರುವ ರುಷ್ಯರ ಸೈನ್ಯವು ಬಹಳ ಅಬಲವಾಯಿತು. ಜನೋವಿಟ್ಜ ಕಡೆಗೆ ರುಷ್ಯರು ಕಾಲು ಹಿಂದಕ್ಕೆ ತೆಗೆಯುತ್ತಿದ್ದಾರೆ. ಕಿರ್ಲಿಬಾಬಾ ವರೆಗೆ ಕಾರ್ಪೇತಿಯನ್ ಬೆಟ್ಟಗಳ ಬಳಿಯಲ್ಲಿರುವ ಯುದ್ಧರಂಗವನ್ನು ಬಿಟ್ಟುಹೋದಂತೆ ಕಾಣುತ್ತದೆ.

ಒಂದು ಜರ್ಮನ್ ಜಲಾಂತರ್ಗಾಮಿಯು ಕೆಲ್ಟ ಊರಿನ ಬಳಿಯಲ್ಲಿ ದಡಕ್ಕೆ ಬಂದು ಬಿತ್ತು. ಅದರ ಕಲಾಸಿಗಳನ್ನು ಸೆರೆಹಿಡಿದರು; ಅವರ ಈ ಜಲಾಂತರ್ಗಾಮಿಯಲ್ಲಿರುವ ಎಣ್ಣೆಗೆ ಬೆಂಕಿ ಹೊತ್ತಿಸಿ ಎಲ್ಲವನ್ನೂ ಸುಟ್ಟುಬಿಟ್ಟಿದ್ದರು.

ರುಮೇನಿಯದ ಯುದ್ಧರಂಗದಲ್ಲಿ ರುಮೇನಿಯರೂ ರುಷ್ಯರೂ ಶತ್ರುಪಡೆಯನ್ನು ಸೋಲಿಸಿ ೧,೦೦೦ ಸೈನಿಕರನ್ನೂ ೩೩ ಫಿರಂಗಿಗಳನ್ನೂ ಹಿಡಿದಿರುವರು.

ಪೆಟ್ರೋಗ್ರೇಡಿನಲ್ಲಿಯೂ ರುಷ್ಯದ ಸೈನ್ಯವಿರುವ ಇತರ ಪಾಳ್ಯಗಳಲ್ಲಿಯೂ ಕ್ರಾಂತಿಯನ್ನೆಬ್ಬಿಸಲು ಮೂಲಕಾರಣನಾದ ಲೆನಿನ್ ಎಂಬವನನ್ನು ರುಷ್ಯ ಸರಕಾರದವರು ಸೆರೆಹಿಡಿದಿರುವರು.

ಎಯ್ಪ್ರೆ ಬಳಿಯಲ್ಲಿ ಇಂಗ್ಲಿಷರಿಗೂ ಜರ್ಮನರಿಗೂ ಭಾರಿಯ ಯುದ್ಧ ನಡೆಯುತ್ತಿದೆ. ಫ್ರೆಂಚರು ಜರ್ಮನರಿಂದ ಕಿತ್ತುಕೊಂಡ ಭಾಗಗಳನ್ನು ಪುನಃ ಹಿಡಿಯಲಿಕ್ಕೆ ಜರ್ಮನರು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ.

೧,೬೦೦ ಟನ್ನಿಗೆ ಮಿಕ್ಕಿದ ೧೫ ಬ್ರಿಟಿಷ್ ಹಡಗುಗಳೂ ೧,೬೦೦ಕ್ಕೆ ಕಡಿಮೆಯಾದ ೩ ಹಡಗುಗಳೂ ಸಮುದ್ರದಲ್ಲಿ ಮುಳುಗಿಸಲ್ಪಟ್ಟವು.

[illegible] ಬ್ರಿಟಿಷರ [illegible] ಹಡಗುಗಳನ್ನು [illegible]

ಸಣ್ಣ ಹಡಗುಗಳು ಜಲಾಂತರ್ಗಾಮಿಗಳನ್ನು ತಡೆಯುವುದಕ್ಕೆ ಹಾಕಿದ ಬಲೆಗಳನ್ನು ಕಾದುಕೊಂಡಿದ್ದುವು. ಒಂದೊಂದು ಹಡಗದಲ್ಲಿ ೧೦ ಜನರು ಮತ್ತು ಒಂದು ಫಿರಂಗಿ ಮಾತ್ರವೇ ಇದ್ದವು. ಈ ಜನರು ಬಹಳ ಸಾಹಸದಿಂದ ಕಾದಾಡಿದರು. ಒಸ್ಟ್ರಿಯನ್ ಯುದ್ಧಹಡಗುಗಳು, ಬ್ರಿಟಿಷ್ ಯುದ್ಧಹಡಗುಗಳ ಆಗಮನವನ್ನು ಕಂಡೊಡನೆ ಪಲಾಯನ ಮಾಡಿದುವು.

ಜರ್ಮನರ 'ಬೆಲ್ ಬಟಾವಿಯರ್' ಎಂಬ ಹಡಗನ್ನು ಬ್ರಿಟಿಷರ ಒಂದು ಜಲಾಂತರ್ಗಾಮಿಯು ಹಿಡಿದು ತಡಿಸಿತು. ಅಷ್ಟರಲ್ಲಿ ಆ ಹಡಗಿಗೆ ಬೆಂಕಿ ಹಚ್ಚಿದ್ದರಿಂದ ಅದರ ಕಲಾಸಿಗಳನ್ನು ಮಾತ್ರವೇ ಸೆರೆಹಿಡಿದರು.

ಜಪಾನಿಯರ ಯುದ್ಧ ಹಡಗುಗಳು ಬ್ರಿಟಿಷ ಯುದ್ಧಸಾಮಾನವನ್ನು ಸಾಗಿಸುವ ಹಡಗಿಗೆ ಕಾವಲಾಗಿ ಮೆಡಿಟರೇನಿಯನ್ ಸಮುದ್ರದಲ್ಲಿ ಹೋಗುವಾಗ ಜರ್ಮನ್ ಜಲಾಂತರ್ಗಾಮಿಯೊಂದು ಎದುರು ಸಿಕ್ಕಿತು. ಅದನ್ನು ಜಪಾನಿಯರು ಕಡೆದು ಮುಳುಗಿಸಿ ಬಿಟ್ಟಂತೆ ತಿಳಿದುಬರುತ್ತದೆ.

ಬ್ರಿಟನ್, ಫ್ರಾನ್ಸ್, ರುಷ್ಯ, ಇಟಲಿ, ಬೆಲ್ಜಿಯಮ್ ಈ ದೇಶಗಳ ಸೈನ್ಯದಲ್ಲಿ ಗಾಯಹೊಂದಿದವರ ಸಹಾಯಾರ್ಥವಾಗಿ ಒಂದೊಂದು ರಾಜ್ಯಕ್ಕೆ ೩೬,೦೦೦ ಪೌಂಡು, ಸರ್ಬಿಯ ಮತ್ತು ರುಮೇನಿಯವರ ಬಗ್ಗೆ ಒಂದೊಂದಕ್ಕೆ ೭೦೦೦ ಪೌಂಡು ಮೇರೆಗೆ ಜಪಾನಿಯರು ದ್ರವ್ಯಸಹಾಯವನ್ನು ಮಾಡಿರುವರು.

ಸಯಾಮ್ ಈ ಮೊದಲು ಜರ್ಮನರ ಮೇಲೆ ಯುದ್ಧ ಮಾಡುವುದಾಗಿ ನಿರ್ಣಯಿಸಿದಂತೆ ಈಗ ಲೈಬೀರಿಯದವರ ಮೇಲೂ ಯುದ್ಧ ಮಾಡುವುದಾಗಿ ತಿಳಿಸಿರುವರು.

ಅರ್ಮೆಂಟಿಯರ್ಸ್ ಮತ್ತು ಲೆನ್ಸ್ ಬಳಿಯಲ್ಲಿ ಕೆಲವು ನಾಡಿನಿಂದ ಬೊಂಬಾಯಿ [illegible] ಯುವ ಫಿರಂಗಿಗಳ ಜನ್ಮವು ಉಂಟಾಗಿ [illegible] ವರೆಗೆ ಕೇಳಿಸುವಷ್ಟು ಭಯಂಕರವಾಗಿದೆ ಎಂತಲೂ ಜರ್ಮನರು ಫ್ರೆಂಚ ಮತ್ತು ಬೆಲ್ಜಿಯಮ್ ಕಾಲುವೆಯಲ್ಲಿ ಅಪೂರ್ವ ಪ್ರಯತ್ನಗಳನ್ನು ಮಾಡುತ್ತಿದ್ದಾರೆಂದು ತಿಳಿದುಬರುತ್ತದೆ.

ಲೆನ್ಸ್ ನಗರದ ಬಳಿಯಲ್ಲಿ ಯುದ್ಧವು ನಡೆಯುತ್ತಲೇ ಇದೆ.

ಜರ್ಮನರ ೧೫ ಯುದ್ಧವಿಮಾನಗಳು ನಾಶವಾದುವು. ಇಂಗ್ಲಿಷರು ಈ ಸಂದರ್ಭದಲ್ಲಿ ೪ ಏರು ವಿಮಾನಗಳನ್ನು ಕಳಕೊಂಡರು.

ಇಂಗ್ಲಿಷರ ಪಡೆಯು ೨೭ ಎಂಬಲ್ಲಿ ಜರ್ಮನರ ಪಾಳ್ಯವನ್ನು ಪ್ರವೇಶಿಸಿ ಕೆಲವು ಜನರನ್ನು ಸೆರೆಹಿಡಿಯಿತು.

ಹರ್ಟಬಿಸ ಎಂಬಲ್ಲಿ ಫ್ರೆಂಚರ ಮೇಲೆ ಜರ್ಮನರು ನಡೆಸಿದ ಯುದ್ಧಪ್ರಯತ್ನಗಳು ಸಾರ್ಥಕವಾಗಲಿಲ್ಲ.

ಬಾಲ್ಕನ್ ರಾಜ್ಯಗಳ ವಿಷಯದಲ್ಲಿ ಪೇರಿಸ್ ಪಟ್ಟಣದಲ್ಲಿ ಜರಗಿದ ಮಿತ್ರಮಂಡಲಿಯವರ ಅಧಿವೇಶನದಲ್ಲಿ ಗ್ರೀಸ್‌ರಾಜ್ಯವನ್ನು ಸಾಧ್ಯವಿದ್ದಷ್ಟು ಬೇಗನೆ ಇಂಗ್ಲಿಷ ಫ್ರೆಂಚ ಮತ್ತು ಇಟಲಿಯ ಸೈನ್ಯಗಳು ಬಿಟ್ಟು ಹೋಗಬೇಕೆಂದೂ ಕೊಫ್ರ ಎಂಬಲ್ಲಿ ಮಾತ್ರ ಇಟಲಿ, ಫ್ರಾನ್ಸ್ ಮತ್ತು ಬ್ರಿಟನ ಒಂದು ಸೈನ್ಯವು ಗ್ರೀಸ್‌ರಾಜನ ಅನುಮತಿಯಿಂದ ಇರಗೊಡಿಸಬೇಕೆಂದೂ ಇತ್ಯರ್ಥವಾಯಿತು.

ವಿದೇಶ ವೃತ್ತಾಂತ.

ಜರ್ಮನ್ ಚಾನ್ಸಲರ್ (ಪ್ರಧಾನ ಮಂತ್ರಿ) ಡಾ। ಮಾಯ್ಕೆಲಿಸ್ ಪಾರ್ಲಿಮೆಂಟಿನಲ್ಲಿ ಹೇಳಿದ ಮಾತುಗಳ ಅಭಿಪ್ರಾಯವನ್ನು ಖಂಡಿಸಿ ಲೋಯ್ಡ ಜೋರ್ಜರು (ಇಂಗ್ಲಿಷರ ಪ್ರಧಾನಮಂತ್ರಿ) ಒಂದು ದೊಡ್ಡ ಭಾಷಣ ಕೊಟ್ಟರು. ಅದರಲ್ಲಿ ಬೆಲ್ಜಿಯಮ್ ರಾಜ್ಯವು ಈಗ ೩ ವರ್ಷಗಳಿಂದಲೂ ಜರ್ಮನರ ಪೆಟ್ಟಿಗೆ ಬಲಿಬಿದ್ದು ಸ್ವಾತಂತ್ರ್ಯದೊಂದಿ ತಲೆಬಾಗಿಸದೆ ಎಂತಲೂ ಅದರ ಪೂರ್ವ ಗೌರವವನ್ನು ಹೊಂದಿಸತಕ್ಕ ಎಲ್ಲಾ ಸಹಾಯವು ಸಮೀಪಿಸಿದಂತೆ ಆತುರಗಳು ಕಾಣುತ್ತವೆ ಎಂತಲೂ ಅವರು ಹೇಳಿದರು. ಜರ್ಮನ್ ಚಾನ್ಸಲರನ ಮಾತುಗಳಲ್ಲಿ ಕುಟಿಲ ವಾಕ್ಚಾತುರ್ಯವೇ ಕಾಣಬರುವುದಲ್ಲದೆ ಕೆಟ್ಟಹಾದಿಯನ್ನು ಹಿಡಿದು ಗೋಡಾಮುರಿಯುವಾಗ ಕಲ್ಕೇರ ಸುರಿಯುತ್ತಲಿರುವ ಕೋಳಿನ ವರ್ತನವು ಜರ್ಮನರ ಚಮರ್ನರಲ್ಲಿ ಕಾಣುತ್ತಿದೆಯೆಂದು ಲೋಯ್ಡ್ ಜೋರ್ಜರ ಅಭಿಪ್ರಾಯ. ಜರ್ಮನ್ ಜನಾಂಗದೊಡನೆ ಮಿತ್ರಮಂಡಲಿಯವರಿಗೆ ವಿರೋಧವಿಲ್ಲವಿದ್ದರೂ ನಿಜವಾದ ಪ್ರಜಾಸತ್ತೆಯು ಜರ್ಮನಿಯಲ್ಲಿ ಸ್ಥಾಪನೆಯಾಗುವವರೆಗೆ ಜರ್ಮನರಿಗೂ ಮಿತ್ರಮಂಡಲಿಯ ರಾಜ್ಯಗಳಿಗೂ ಸ್ನೇಹಿತಿಯ ದಿನಗಳು ಬರಲಾರವು ಎಂತಲೂ ಅವರು ವಿವರಿಸಿದರು. ಜರ್ಮನ್ ಚಾನ್ಸಲರ್ ಹೇಳುವ ಮಾತಿನ ಮೇರೆಗೆ ಜರ್ಮನ್ ರಾಜ್ಯದ ಗಡಿಗಳನ್ನು ಭದ್ರಪಡಿಸುವುದೆಂದರೆ ಈ ಮೊದಲು ಫ್ರೆಂಚರಿಂದ ಕಿತ್ತುಕೊಂಡ ಆಲ್ಸೇಸ್ ಲೊರೈನ್ ಮತ್ತು ಬೆಲ್ಜಿಯಮ್ ಇವೇ ರಾಜ್ಯವು ಜರ್ಮನರ ವಶವಾಗಬೇಕಾಗುತ್ತದೆಂದೂ ಇಟಲಿಯವರ ಸ್ವಾತಂತ್ರ್ಯಕ್ಕೆ ನೀರು ಎರೆಯುವ ಯಾವ ಶರ್ತಗಳಿಗೂ ಮಿತ್ರಮಂಡಲಿಯವರು ಒಪ್ಪಲಾರರೆಂದೂ ಲೋಯ್ಡಜೋರ್ಜರು ಖಂಡಿತವಾಗಿ ಹೇಳಿದರು. ಜರ್ಮನರು ತಮ್ಮ ಜಲಾಂತರ್ಗಾಮಿಗಳಿಂದ ಬ್ರಿಟಿಷರ ಆಹಾರಸಾಮಗ್ರಿಗಳು ಬರುವುದನ್ನು ಅಡ್ಡಗಟ್ಟಿ ಬ್ರಿಟಿಷರನ್ನು ತಗ್ಗಿಸಬೇಕೆಂದು ಮಾಡಿದ ಪ್ರಯತ್ನದಿಂದ ಇವರೆಗೆ ಬರತಕ್ಕ ಪ್ರಾಪ್ತಿಯಾಗಲಿಲ್ಲವೆಂತಲೂ ಇನ್ನು ಯುದ್ಧಸಾಮಾಗ್ರಿಗಳನ್ನೂ ಆಹಾರಸಾಮಗ್ರಿಗಳನ್ನೂ ಹೆಚ್ಚಿಸಲಿಕ್ಕೆ ಮಾಡಿದ ಬ್ರಿಟಿಷರ ನಾಕ ಸರ ಪೂರ್ಣ ಫಲವು ಸಿಕ್ಕಿದಾಗ ಅದಕ್ಕೆ ಸಹಾಯಕವಾಗಿ ಅಮೇರಿಕದ ಸಂಪೂರ್ಣ ಅನುವರ್ತನವು ದೊರೆತಾಗ ಇಂಗ್ಲಿಷರನ್ನು ಅಡಗಿಸಬೇಕೆಂದಿರುವ ಜರ್ಮನರ ದುರಾಗ್ರಹವು ಎಂದೆಂದಿಗೂ ಕೈಗೂಡಲಿಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳಿದರು.

ಸಯಾಮ್ ರಾಜ್ಯವು ಜರ್ಮನರ ಮೇಲೆ ಯುದ್ಧಮಾಡುವುದಾಗಿ ಪ್ರಕಟಿಸಿ ಅಲ್ಲಿರುವ ಜರ್ಮನರನ್ನು ಸೆರೆಹಿಡಿದು ಜರ್ಮನರ ಸುಮಾರು ೧೯೦೦೦ ಟನ್ನಿನ ಹಡಗುಗಳನ್ನು ವಶಪಡಿಸಿಕೊಂಡಿರುವರು. ಆದರೆ ಜರ್ಮನರು ಈ ಸೈನ್ಯಕ್ಕೆ ಹಲವು ಹಡಗುಗಳ ಯಂತ್ರಗಳನ್ನು ಹಾಳುಮಾಡಿ ಒಪ್ಪಿಸಿಕೊಟ್ಟಿರುವರು.

ಗ್ರೀಸ್ ರಾಜ್ಯದಲ್ಲಿ ಪಾರ್ಲಿಮೆಂಟು ಸಭೆಯನ್ನು ಜರಗಿಸುವುದಕ್ಕೆ ಹೊಸ ಅರಸನು ಅಪ್ಪಣೆ ಕೊಟ್ಟಿರುವನು.

ಜರ್ಮನರು ಮೊದಲಿನ ಗ್ರೀಸ ಸರಕಾರಕ್ಕೆ (೧। ಅಥವಾ ೧ ಫ್ರಾಂಕ್) ೮೦,೦೦೦,೦೦೦ ಫ್ರಾಂಕ್ ಕೊಟ್ಟಿದ್ದರೆಂದು ತಿಳಿದುಬರುತ್ತದೆ.

ಅಮೇರಿಕದಲ್ಲಿ ಯುದ್ಧದ ಪ್ರಥಮ ವರ್ಷದ ಖರ್ಚಿಗೆ ೧೦,೭೩೪ ಮಿಲ್ಲಿಯ ಡೊಲ್ಲರ್ (೧ ಡೊಲ್ಲರ್ ೩ ರೂ. ೨ ಆ) ಸಂಕ್ಷನ್ ಮಾಡಿರುವರು. ಇದಲ್ಲದೆ ಮಿತ್ರಮಂಡಲಿಯವರಿಗೆ ಸಾಲಕೊಡುವುದಕ್ಕಾಗಿ ೭೦೦೦ ಮಿಲ್ಲಿಯ ಡೊಲ್ಲರ್ ಹೆಚ್ಚಿಗೆ ಬೇಕಾಗುವುದು.

ಚೀನದಲ್ಲಿ ಚಕ್ರವರ್ತಿಯನ್ನು ಹಿಡಿಯಬೇಕೆಂದು ಎರಡು ಕಡೆಯ ಸೈನ್ಯಗಳು ಪ್ರಯತ್ನಮಾಡಿ ಪೇಂಗ್‌ಟೈ ಎಂಬಲ್ಲಿ ಯುದ್ಧ ಮಾಡಿದುವು. ಆ ಪಟ್ಟಣಕ್ಕೆ ಬೆಂಕಿ ಹಚ್ಚಿದ್ದರಿಂದ ಜನರೆಲ್ಲರೂ ಓಡಿಹೋಗುತ್ತಲಿರುವರು.

ಉತ್ತರ ಹಿಂದೂಸ್ಥಾನ.

ಸೆಂಟ್ರಲ್ ಇಂಡಿಯಾ ಇಂಡಿಯನ್ ರಿಲೀಫ್ ಫಂಡು (ಇದು ಯುದ್ಧದಿಂದ ನಷ್ಟಹೊಂದಿದವರ ಸಹಾಯಾರ್ಥವಾಗಿ ಮೊದಲು ಸ್ವಯಂಸೇವಕರಿಂದ ಲೋಕದ ಜನರಿಂದ ಸ್ಥಾಪಿತವಾದ ಫಂಡು) ಆರಂಭವಾದಂದಿನಿಂದ ಈ ತನಕ ಕೂಡಿಕೊಂಡುದು ರೂ. ೧,೫೩,೬೭೦೦೦ ಇದು ಉಳಿದು [illegible] ಮೇಲೂ ಬಡ್ಡಿ ರೂ. ೬,೩೩,೦೦೦ ಕೂಡಿ ಈಗ ರೂ. ೧,೩೫,೦೬,೦೦೦ ಆಗಿದೆ. ಆದರಲ್ಲಿ ರೂ. ೭೬,೫೩,೦೦೦ ಯಷ್ಟು ದ್ರವ್ಯಸಹಾಯವನ್ನು ಯುದ್ಧದಲ್ಲಿ ನಷ್ಟ ಹೊಂದಿದವರಿಗೆ ಕೊಟ್ಟಿದೆ ಎಂದು ತಿಳಿದುಬರುತ್ತದೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸು ಸಂಸ್ಥಾನದಲ್ಲಿರುವ ಜಮೀನುದಾರರ ಮುಕ್ಕಳಿಗೋಸ್ಕರವೇ ಬೇರೆ ಒಂದು ಕೊಲೇಜನ್ನು ಸ್ಥಾಪಿಸುವ ಉದ್ದೇಶದಿಂದ ಜಮೀನುದಾರರ ಒಂದು ಅಧಿವೇಶನವು ಬಹುಮಾನಪಟ್ಟ ಲೋರ್ಡ ಪೆಂಟ್‌ಲೆಂಡರ ಅಧ್ಯಕ್ಷತೆಯಲ್ಲಿ ಕೆಲವು ದಿನಗಳ ಹಿಂದೆ ಮದ್ರಾಸಿನಲ್ಲಿ ಆಗಿ ಜಮೀನುದಾರರು ಈ ಬಗ್ಗೆ ಸಂಗ್ರಹ ಮಾಡಬೇಕಾಗುವ ಹಣವನ್ನು ಉಳಿಸುವುದು ಎಂದು ಗೊತ್ತುಮಾಡಬೇಕೆಂದೂ ಈ ಬಗ್ಗೆ ಸರಕಾರದವರೂ ಉದಾರತ್ವದಿಂದ ಸಹಾಯಮಾಡಬಹುದೆಂದೂ ನಿಶ್ಚಯವಾಗಿ ಇನ್ನೊಮ್ಮೆ ಇದೇ ಸಭೆಯು ಈ ವರ್ಷದ ಅಕ್ಟೋಬರಿಗೆ ಸೇರಿ ಈ ವಿಷಯದಲ್ಲಿ ಪೂರ್ಣ ಇತ್ಯರ್ಥ ಮಾಡಬಹುದೆಂದು ನಿರ್ಣಯವಾಯಿತು.

ಜುಲೈಯ ೨೬ನೇ ತಾರೀಕಿಗೆ ಜರಗಿದ ಬೊಂಬಾಯಿ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಮ್ಯುನಿಸಿಪಾಲಿಟಿಗಳ ಗಡಿಯೊಳಗಿರುವ ಸ್ಥಳಗಳಲ್ಲಿ ಕಡ್ಡಾಯದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದು ಬಹುಮಾನಪಟ್ಟ ವಿ. ಜೆ. ಪಟೇಲರು ತಂದ ಬಿಲ್ ಮಸೂದೆಯು ಓದಲ್ಪಟ್ಟು ಅದನ್ನು ವಿಮರ್ಶಿಸಲಿಕ್ಕೆ ಒಂದು ಕಮಿಟಿಯನ್ನು ನಿರ್ಮಿಸಿದರು. ಈ ಸಂದರ್ಭದಲ್ಲಿ ಬಹುಮಾನಪಟ್ಟ ಲೋರ್ಡ ವಿಲ್ಲಿಂಗ್ಡನರು (ಬೊಂಬಾಯಿಯ ಗವರ್ನರ್) ಮಾಡಿದ ಭಾಷಣದಲ್ಲಿ ಈಗಿನ ಯುದ್ಧವು ಸರಕಾರದ ಕೈ ಕಟ್ಟಿದ್ದರಿಂದ ಹಾಸ, ಮುಂದಿನ ವಿದ್ಯಾಭ್ಯಾಸದ ಕ್ರಮವು ಯುದ್ಧ ಮುಗಿದಬಳಿಕ ಇಂಥ ವಿಚಾರಗಳು ಒಂದು ಸ್ಥಾನದಲ್ಲಿಲ್ಲ, ನಮಗಿಲ್ಲ ಇತ್ಯರ್ಥವಾಗುವುದು ಅಸಾಧ್ಯವೆಂದೂ ಹೇಳಿದರು.

ಈಗಿನ ವರ್ಷಾವಧಿ ಖರ್ಚನ್ನು ಪರಿಶೀಲಿಸಿ ನೋಡುವುದಕ್ಕೆ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದು ಅದೇ ಪಟೇಲರು ತಂದ ಚರ್ಚೆಯು ಬಹುಮತದಿಂದ ಬಿದ್ದುಹೋಯಿತು. ಈ ನಮೂನೆಯ ಚರ್ಚೆಯು ಸರಕಾರದ ವಹಿವಾಟುಗಳನ್ನು ಮೀರಿಸಿ ಒಂದು ತಪ್ಪು ಆರೋಪಿಸುವ ಚರ್ಚೆಯೆಂದೂ ಇಂಥ ಚರ್ಚೆಗಳು ಈಚೀಚೆಗೆ ಆಗಾಗ ಬರುತ್ತಲಿದ್ದುದು ಅನಾವಶ್ಯಕವೆಂಬಂತೆ ಗವರ್ನರರ ಭಾಷಣದಿಂದ ತೋರಿತು.

ದಕ್ಷಿಣ ಕನ್ನಡ.

ಪುತ್ತೂರು: — ಇಲ್ಲಿಯ ಸ್ಟೇಷನ ಮೇಜಿಸ್ಟ್ರೇಟರಾದ ಮ। ರಾ। ತಿಮ್ಮಪ್ಪ ಶೆಟ್ಟಿಯವರು ಒಂದು ತಿಂಗಳ ರಜೆಪಡಕೊಂಡದ್ದರಿಂದ ಇವರ ಜಾಗೆಯನ್ನು ಕಳದ ತಿಂಗಳ ೩೦ರಲ್ಲಿ ಮ। ರಾ। ಬಿ. ರಘುನಾಥ ಭಂಡಾರಿಗಳ ವಹಿಸಿಕೊಂಡಿರುವರು.

ಇಲ್ಲಿಯ ಪರ್ಲಡ ಬೋಳಿಗೆಯ ಬಳಿ ಈಗ ಎರಡು ತಿಂಗಳ ಮೊದಲು ಒಂದು ಮನೆಯನ್ನು ಬಾಡಿಗೆಗೆ ಮಾಡಿಕೊಂಡು ಇರುತ್ತಿದ್ದ ಹಸನ್‌ಬ್ಯಾರಿ ಎಂಬವನು ಜೋಗಿಗಳಿಗೆ ಮಾಡ್ಸಿಕೊಡುವದಾಗಿ ಪ್ರತಿಯೊಬ್ಬರಿಂದ ಕೋಳಿ ಏಡು ಮೊಳದ ಕೊಡತಕ್ಕವು ಪಡಕೊಳ್ಳುತ್ತಾ ಮುಚ್ಚಿಕೊಡುತ್ತಿದ್ದು ಕಡೆಗೆ ಮನೆಯಾಕಿಲ್ಲಾದ ಮಮುಗೆ ತಾನು ಬಾಡಿಗೆ ಇದ್ದ ಮನೆಯಲ್ಲಿ ನಿಕ್ಷೇಪ ಇರುವದನ್ನು ತೆಗೆದು ಕೊಡುತ್ತೇನೆಂದು ಕೆಲವು ಎರಡು ನೆರೆಕರೆಯವರಿಂದ ಸಾಲಪಡೆದು ಅಂಗಡಿಗಾರರಿಂದ ವ್ಯಾಪಾರ ಸಾಲ ಪಡೆದು ನಿಕ್ಷೇಪ ತೆಗೆದು ಕೊಡುವ ವಾಯಿದೆಯಾದ ಕಳದ ಶುಕ್ರವಾರದ ೧೩ನೇ ದಿವಸಗಳ ಮೊದಲು ರಾತ್ರೆ ಯಾರಿಗೂ ತಿಳಿಯದಂತೆ ತನ್ನ ಹೆಂಡತಿ ಮಕ್ಕಳನ್ನು ತೆಗೆದುಕೊಂಡು ಪರಾರಿಯಾಗಿದಾನಂತೆ. ನಿಕ್ಷೇಪವೂ ಇಲ್ಲ, ಹಣವೂ ಇಲ್ಲ, ಬಾಡಿಗೆಯೂ ಇಲ್ಲ, ಮಾಡಿದ್ದೂ ಇಲ್ಲ. ಈ ಮಾಪಿಳೆಯು ಬಂಗಾಳಿ ಅಕ್ಷರದ ಇರುವದಾಗಿ ಪರಂತಿ ಇರುವದು.

ಇಲ್ಲಿಯ ಸಾಹುಕಾರ ಮ। ರಾ। ಮೊಹಿದ್ದಿನ್ ಇಸ್ಮಾಯಿಲ್ ಸಾಹೇಬರಲ್ಲಿ ರಮಜಾನ್ ಬ್ಯಾರಕಾರ್ಥವಾಗಿ ಜುಲೈ ತಾ। ೧೭ರಲ್ಲಿ ೫೦೦ ಬಡಬಗ್ಗರಿಗೆ ಮಹಮ್ಮದೀಯರಿಗೆ ರಾತ್ರೆ ೧೦ ಗಂಟೆ ತಾ। ೧೮ರಲ್ಲಿ ಕೆಲಸಮಾಡಲು ಶಕ್ತರಾದ ಮಹಮ್ಮದೀಯ ಸ್ತ್ರೀಪುರುಷರಿಗೆ ೫ ಮೊಳ ಕೋರಾ ಮತ್ತು ೨ ಆಣೆ ನಗದು ಇತರರಿಗೆ ನಗದು ೨ ಆಣೆ, ಮಕ್ಕಳಿಗೆ ಒಂದು ಆಣೆಯಂತೆ ಸುಮಾರು ೫೦೦ ಜನರಿಗೆ ಹಂಚಿದರು.

ಸುಳ್ಯ: — ಸಂಪಾಜೆಯಿಂದ ಸುಳ್ಯದ ವರೆಗೆ ಈ ಮುಂಚೆ ಮಡಿಕೇರಿಯ ಟಪ್ಪಾಲು ಬೆಳಗ್ಗೆ ಗಂಟೆ ೧೦ಕ್ಕೆ ಬರುತ್ತಿದ್ದ ಸಮಯ ಸುಳ್ಯ ಪೋಸ್ಟ್ ಆಫೀಸಿಗೆ ಟಪ್ಪಾಲು ತಲ್ಪಲಿಕ್ಕೆ ರಾತ್ರೆ ೮ ಯಾ ೯ ಗಂಟೆ ಆಗುತ್ತಿತ್ತು. ಆದರೆ ಈಗ ಮಡಿಕೇರಿಯಿಂದ ಬೆಳಗ್ಗೆ ಗಂಟೆ ೧೧ಗೆ ಬಿಡುವದರಿಂದ ಆ ಟಪ್ಪಾಲು ಸುಳ್ಯ ಪೋಸ್ಟು ಆಫೀಸಿಗೆ ಬಂದು ತಲ್ಪಲಿಕ್ಕೆ ರಾತ್ರೆ ೧೧ ಯಾ ೧೨ ಘಂಟೆ ಆಗುತ್ತದೆ. ಸಂಪಾಜೆಯಿಂದ ಸುಳ್ಯಕ್ಕೆ ಬರುವ ಮಾರ್ಗವು ಘೋರವಾದ ಕಾಡು. ಈ ಕಾಡುಗಳಲ್ಲಿ ಮಳೆಗಾಲ ಸಮಯ ಅಲ್ಲಲ್ಲಿ ಆನೆಗಳ ಹಿಂಡು ಆಗಾಗ್ಗೆ ಕಲೆದೋರುತ್ತದೆ. ಇಂಥಾ ಮಾರ್ಗದಲ್ಲಿ ಟಪ್ಪಾಲು ರನ್ನರನು ಒಂಟಿಯಾಗಿ ಟಪ್ಪಾಲು ಒಯ್ಯುವದು ಅಪಾಯವೇ ಸರಿ. ಆದ್ದರಿಂದ ಕಾಲೂರು ಪೋಸ್ಟ್ ಮಾಸ್ಟರ ಜನರಲ್ ಡಿಪಾರ್ಟಮೆಂಟಿನವರು ತಿಳುವಳಿಕೆಗೆ ಈ ಸಂಗತಿಯನ್ನು ತಂದು ತಕ್ಕ ಏರ್ಪಾಡು ಮಾಡುವರೆಂದು ಕೋರುತ್ತೇನೆ.

ನಾಚಿಕೆ ಮುಳ್ಳು (Touch me not) ಎಂಬ ಗಿಡಗಳು ಹುಟ್ಟಿಕೊಂಡು ಹರಡುವದರಿಂದ ಜನರ ಆಮದು ರಫ್ತಿಗೂ ಬಹಳ ತೊಂದರೆ ಆಗಿದೆ.

ಇಲ್ಲಿಯ ಆಸ್ಪತ್ರೆಗೆ ಬಂದು [illegible] ವರ್ತಮಾನ ಕೇಳಿ ಹುಂಬಾ ಸಂತೋಷ ಪಡಬೇಕಾಗಿದೆ. ಆದ್ದರಿಂದ ಈ ಪ್ರಾಂತ್ಯದ ಎಲ್ಲಾ ವಾಚಕರು ಅಲ್ಲಲ್ಲಿ ಬರುವವರಿಗೆ ತಿಳಿಸಿ ಇದರ ಪ್ರಯೋಜನವನ್ನು ಪಡೆಯ ತಿಳಿಸಬೇಕಾಗಿ ಹಾರೈಸುತ್ತೇನೆ.

ಇಲ್ಲಿಯ ಕೆಲವೊಬ್ಬ ಪೇಟೆಯಲ್ಲಿ ಹಗಲೂ ರಾತ್ರಿಯಲ್ಲೂ ಜಾನುವಾರುಗಳನ್ನು ಕಟ್ಟಿಹಾಕದೆ ಮಾರ್ಗದ ಮಧ್ಯೆ ರಸ್ತೆಯಲ್ಲೇ ಮಲಗಿಕೊಂಡು ಇರುವದರಿಂದ ಮಾರ್ಗದ ಪ್ರಯಾಣಸ್ಥರಿಗೆ ಬಹಳ ತೊಂದರೆ ಆಗಿಯದೆ. ಆದ್ದರಿಂದ ಈ ಜಾನುವಾರುಗಳನ್ನು ದೊಡ್ಡಿಗೆ ದಾಖಲು ಮಾಡಿಸುವರೆ ಗ್ರಾಮ ಅಧಿಕಾರಿಗಳಿಗೆ ಹುಕುಮ ಮಾಡಿದರೆ ಮಾರ್ಗದ ಪ್ರಯಾಣಿಕರ ಕಷ್ಟವು ನಿವೃತ್ತಿ ಆಗುತ್ತಿತ್ತು.

ಸ್ವಕೀಯ ರಾಜ್ಯಭಾರದ ಸೂತ್ರಧಾರ.

ಮ. ತಿಲಕರಾಯರು ಮದ್ರಾಸು ಮ್ಯುನಿಸಿಪಾಲಿಟಿಯು ಅರ್ಪಿಸಿದ ಉದ್ದೇಶವನ್ನು ಕಳೆದ ಸಂಚಿಕೆಯಲ್ಲಿ ಸಂಕ್ಷೇಪವಾಗಿ [illegible] ಮಾಡಿದಾದಿಗೆಯಲ್ಲಿಯೂ [illegible] ಆತ್ಮಾರ್ಥ ಹಿಂದೂಗಳಿಗೆ ಕೆಲವು ಸ್ವಾತಂತ್ರ್ಯವು [illegible] ಕೆಯಿಂದ ಯಾವುದೊಂದು [illegible] ಒಂದು [illegible] [illegible]

ಅನುಕ್ರಮಣಿಕೆ.

	ಪುಟ.
[illegible]—	
ನೀವು ಆ ತುದಿಗೆ, ನಾವು ಈ ತುದಿಗೆ!	೪
ಸ್ಫುಟವಿಚಾರಗಳು:—	
೧ ಸರ್. ಅರುಣಾಚಲಂ ಇವರ ಮತ	೪
೨ [illegible] ಸಭೆ	,,
೩ [illegible] ನ್ಯಾಯನಿರ್ಣಯ	,,
೪ [illegible] ಮುಗಿಯಲಿಲ್ಲ	೪—೫
೫ [illegible] ಅಧಿವೇಶನ	,,
೬ ಮುಂಬಯಿ [illegible] ಮಸೂದೆ	,,
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೩
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದುಸ್ತಾನ	,,
೪ ದಕ್ಷಿಣ ಹಿಂದೂಸ್ತಾನ	,,
೫ ದಕ್ಷಿಣ ಕನ್ನಡ	,,
೬ ಪತ್ರಿಕೆ, ಸುದ್ದಿ	,,
೭ ಸ್ಥಳೀಯ ರಾಜ್ಯಭಾರದ ಸೂತ್ರದಾರ	,,
೮ ಮಂಜೇಶ್ವರದಲ್ಲಿ ಜರಗಿದ ಮದ್ಯಪಾನ ನಿಷೇಧಕ ಸಭೆಯು	,,
೯ ಶಕ್ತ್ಯನುವೆಹಾರ: ಅಧಿಕಮಾಸದ ಸಿದ್ಧಾಂತ, ಸೌರ ಉಪಾಕರ್ಮ ವಿಚಾರ	,,

ಸ್ವದೇಶಾಭಿಮಾನಿ.

ಶಕ ೧೮೩೯ ಶ್ರಾವಣ ಬ. ೧ ಶುಕ್ರವಾರ.

ನೀವು ಆ ತುದಿಗೆ, ನಾವು ಈ ತುದಿಗೆ!

ಹಿಂದೀ ರಾಜಕಾರಣದಲ್ಲಿ ದೇಶೀಕ್ರೈಸ್ತರು ಯಾಕೆ ಅಭಿಮಾನ ವಿಂದ ಮನಸ್ಸನ್ನು ಹಾಕುವದಿಲ್ಲ, ಪರಿಶ್ರಮಪಡುವದಿಲ್ಲ, ಇದನ್ನು ತೋರಿಸುವಾಗ ಕಳೆದಸಾರಿ ಅವರ ಧರ್ಮಗುರುಗಳ ಈ ವಿಷಯದಲ್ಲಿ ಅವರಿಗೆ ಅಡ್ಡಬರುತ್ತಾರೆ ಎಂಬುದೊಂದು ವಿಧಾನವನ್ನು ಮಾಡಿದ್ದೆವು. ನಮ್ಮ ಈ ವಿಧಾನಕ್ಕೆ ಇದೆ ವಾರದಲ್ಲಿ ಇನ್ನೊಂದು ಪ್ರತ್ಯಕ್ಷ ಪ್ರಮಾಣವು ಉಪಲಬ್ಧವಾಗಿದೆ. ಹಿಂದುಸ್ಥಾನದಲ್ಲಿ ಕೆಲಸಮಾಡುತ್ತಿರುವ ಬೇರೆ ಬೇರೆ ಮಿಶನುಗಳ ಪಾದ್ರಿಗಳು ಅಥವಾ ಸರಕಾರಿ ಧರ್ಮಗುರುಗಳು ಎಂತು ಕ್ರೈಸ್ತಧರ್ಮಗುರುಗಳು ಇಲ್ಲಿಯ ರಾಜಕಾರಣದಲ್ಲಿ ಕೈಹಾಕಿ ಜನತೆಯ ಪ್ರಗತಿಮಾರ್ಗವನ್ನು ಕುಂದಿಸಲು ಯತ್ನಿಸುವುದು ನಿಜವಾಗಿ ವಿಷಾದಕರ ಸಂಗತಿಯು! ಜನರಿಗೆ ಕಾಣುವ ಹಾಗೆ ಇವರು ಮೈಮೇಲೆ ಕಾಲುತನಕ ಧಾರ್ಮಿಕ ಕರ್ತವ್ಯದ ಧರ್ಮ-ಕೋಟನ್ನು ಹಾಕಿಕೊಂಡರೂ ರಾಜಕಾರಣದಲ್ಲೂ ಅನೇಕಸಾರೆ ತಮ್ಮ ಕೈಗಳನ್ನು ನಡಿಸುವರು. ಒಬ್ಬನು ಒಂದು ಕರ್ತವ್ಯವನ್ನು ಮುಖ್ಯವಾಗಿ ಕೈಕೊಂಡ ಮೇಲೆ ಸಾಧ್ಯವಿದ್ದರೆ, ಬೇರೊಂದು ಕೆಲಸವನ್ನು ಮಾಡಕೂಡದು ಎಂಬುದಾಗಿ ಯಾರೂ ನಿಷೇಧಿಸರು. ಈ ದೃಷ್ಟಿಯಿಂದ ನೋಡುವಾಗ ಈ ಧಾರ್ಮಿಕ ಪುರುಷರು ರಾಜಕೀಯವಿಷಯದಲ್ಲಿ ತಮ್ಮ ಮತಗಳನ್ನು ಹೊರಪಡಿಸುವುದು ಅಕ್ಷಮ್ಯವಲ್ಲ. ತಥಾಪಿ ಅಂಥ ವಿಷಯದಲ್ಲಿ ತಮ್ಮ ಮತಗಳನ್ನು ಕೊಡುವಾಗ, ಸೂಚನೆಗಳನ್ನು ಹೇಳುವಾಗ ಅಥವಾ ರಾಜ್ಯಕಾರಭಾರದ ಬದಲಾವಣೆಗಳನ್ನು ಸೂಚಿಸುವಾಗ ಲೋಕಮತದ ಸಾತ್ವಿಕ ಆಕಾಂಕ್ಷೆಗಳನ್ನು ಒತ್ತಿಬಿಡುವಂತೆ, ಮುರಿದುಬಿಡುವಂತೆ ಇವರು ಯತ್ನಿಸುವುದು ತುಂಬಾ ಅಕ್ಷಮ್ಯವಾಗಿರುವುದು. ಈ ಎಲ್ಲ ಕ್ರೈಸ್ತವೈದಿಕರು ಈ ದಿಕ್ಕಿನಿಂದಲೆ ಯತ್ನಿಸುತ್ತಾರೆ ಎಂದು ನಮ್ಮ ಲೇಖನದ ಅರ್ಥವಲ್ಲ. ಪ್ರಚಲಿತ ಹಿಂದೀ ರಾಜಕಾರಣದ ಮೇಲೆ ಆದಷ್ಟು ಸಹಾನುಭೂತಿಪರವಾದ ತಮ್ಮ ಮತವನ್ನು ಪ್ರಕಟಿಸಿ 'ಹಿಂದೀ ರಾಷ್ಟ್ರದ ತಾವು ವಿರೋಧಿಗಳಲ್ಲ' ಎಂಬ ಮಾತನ್ನು ಕೆಲವು ಸಮಯದ ಹಿಂದೆ ನಿರ್ಭ್ರಾಂತವಾಗಿ ವ್ಯಕ್ತಗೊಳಿಸಿದ ಮದ್ರಾಸ ಬಿಶೋಪರಂಥ ಉದಾರಧಿಗಳು ಅಪವಾದ ಕೋಟಿಯಲ್ಲಿ ಸೇರತಕ್ಕವರೂ ಇದ್ದಾರೆ. ಪರಂತು ಇಂಥವರು ವಿರಳರು. ಇಲ್ಲಿಯ ರಾಜಕಾರಣದ ಉಪರೋಧಿಗಳಾದವರೆ ಅನೇಕರು. ಈ ಮಾತು ಮೇಲೆ ಹೇಳಿದಂತೆ ಇದೆ ವಾರದಲ್ಲಿ ಹಿಂದೀ ರಾಜಕರಣವನ್ನು ಕುರಿತು ತಮ್ಮ ವಿರೋಧಿಮತಗಳನ್ನು ವ್ಯಕ್ತಗೊಳಿಸಿದ ಮುಂಬಯಿ ಬಿಶಪರ ಸಂಗತಿಯಿಂದ ದೃಢವಾಗುತ್ತದೆ. ಅವರು ಕಳೆದವಾರ ಒಂದು ಪತ್ರಿಕೆಯಲ್ಲಿ ಹಿಂದುಸ್ಥಾನದ ಸದ್ಯಃಸ್ಥಿತಿಯನ್ನು ಕುರಿತು ಒಂದು ಲೇಖವನ್ನು ಬರೆದಿದ್ದಾರೆ. ಅದರ ಸಾರಾಂಶವೇನೆಂದರೆ: "ಹಿಂದುಸ್ಥಾನಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವುದೆ ಬ್ರಿಟಿಷ್ ಜನಾಂಗದ ಉದ್ದೇಶ. ಆದರೆ ಅದು ನಾಳೆಯೆ ಎಂದರೆ ಯುದ್ಧಮುಗಿದ ಮಾರನೆ ದಿನವೆ ಸಿಗಬೇಕೆಂದು ನೆನೆಸುವುದು ತಪ್ಪು. ಸ್ವರಾಜ್ಯದ ಪಾತ್ರತೆಯು ಬಾರದೆ ಸ್ವರಾಜ್ಯವನ್ನು ಕೊಡುವುದೆಂದರೇನು? ಸ್ಥಾನಿಕ ಸ್ವರಾಜ್ಯದ ಹಕ್ಕುಗಳು ಹಿಂದಿಗಳಿಗೆ ಕೊಟ್ಟು ಎಷ್ಟೊ ಸಮಯವಾಯಿತು. ಆದರೆ ಈಗ ಆ [illegible] ಸ್ವರಾಜ್ಯಸಂಸ್ಥೆಗಳ ಪರಿಸ್ಥಿತಿಯು ಎಷ್ಟಾಗಿದೆ? ಇವರಿಗೆ ಕೊಟ್ಟ [illegible] ಎಷ್ಟು ತೊಂದರೆಗಳಲ್ಲಿ! [illegible] [illegible] ಇವರಲ್ಲಿ [illegible] ಸಂಗತಿ [illegible]

ವಾಗಿದೆಯೊ? ಇವರಲ್ಲಿಯ ಭೇದಗಳು ಹೋಗಿ ಸಮಭಾವನೆಯು ಹುಟ್ಟಿದೆಯೊ? ಇಂಥ ಒಂದೂ ಸಂಗತಿಯ ಗುರುತು ಇವರಲ್ಲಿ ಕಾಣುವುದಿಲ್ಲ. ಸ್ವರಾಜ್ಯವು ಮಾತ್ರ ನಾಳೆ ಬೇಕೆಂದು ಹೇಳುವುದು ಹೇಗಾದೀತು. ಇಂಗ್ಲಂಡಿನ ಅಧಿಕಾರಿಗಳಿಗೆ ಪ್ರಕೃತ ಯುದ್ಧದಲ್ಲಿ ಜಯಪ್ರಾಪ್ತಿಯು ಹೇಗಾದೀತೆಂಬ ಆಲೋಚನೆಯು ಈಗ ಪ್ರಧಾನವಾಗಿರುವಾಗ ಇಲ್ಲಿಯ ಜನರು ಇಂಥ ಅವ್ಯಾಪಾರೇಷು ವ್ಯಾಪಾರವನ್ನು ಮಾಡುವುದು ಸರಿಯಲ್ಲ." ಬಿಶಪಸಾಹೇಬರ ಈ ಮತಗಳನ್ನು ಖಂಡಿಸುವುದೆಂದರೆ ಪುನರುಕ್ತಿಯ ದೋಷವನ್ನ ಸೆರಗಿನಲ್ಲಿ ಹಾಕಿಕೊಳ್ಳುವುದಾಗಿದೆ. ಕಾರಣ, ಇಂಥ ಆಕ್ಷೇಪಗಳನ್ನು ಸ್ವದೇಶಾಭಿಮಾನಿಯು ಮೊದಲು ಅನೇಕಸಾರೆ ಖಂಡಿಸಿದೆ. ಆದರೂ 'ಕೃತೇಪ್ರತಿಕೃತಂ ಕುರ್ಯಾತ್' ಎಂದರೆ 'ಮಾತಿಗೆ ಮಾತು' ಈ ನ್ಯಾಯದಂತೆ ಬಿಶಪರ ಮತಕ್ಕೆ ಪ್ರತ್ಯುತ್ತರ ಕೊಡುವುದು ನಮ್ಮ ಕರ್ತವ್ಯವಾಗಿದೆ. ಈ ಮತಗಳು ಬರೆ ಬಿಶಪರದೆ ಎಂದಲ್ಲ. 'ನಿಮ್ಮ ಅಂತಿಮಧ್ಯೇಯವು ಸ್ವರಾಜ್ಯವಾಗಿದ್ದರೂ ಅದು ಅಷ್ಟು ಬೇಗನೆ ದೊರತಕ್ಕದ್ದಲ್ಲ' ಎಂಬುದಾಗಿ ಲೊ. ಪೆಂಟಲೆಂಡರು ಹಾಗು ಬಂಗಾಲದ ಗವರ್ನರರು ಮುಂತಾದ ಮುಖ್ಯ ಮುಖ್ಯ ಅಧಿಕಾರಿಗಳು ಈಚೆಗೆ ಮಾತಾಡುವ ಒಂದು ಕ್ರಮವನ್ನೆ ಇಟ್ಟುಕೊಂಡಿದ್ದಾರೆ. ಆ ಮಹಾ ಮಂತ್ರವನ್ನೆ ಈ ಧರ್ಮಗುರುಗಳು ಕೂಡ ಉಚ್ಚರಿಸಿದ್ದಾರೆ. "ಅಂತರ್ಗತ ಸ್ವರಾಜ್ಯವೆ ಅಂತಿಮಧ್ಯೇಯ" ಈ ಮಂಗಲಾಚರಣವನ್ನು ಮಾಡುವದರಿಂದ ಇವರ ಮಾತಿಗೆ ರುಚಿಬರುತ್ತದಾದರೂ ಮುಂದಿನ ಉಚ್ಚಾರದಿಂದ ಹಿಂದೀ ದೇಶಭಕ್ತರ ಮನಸ್ಸು ಕುಗ್ಗಿಹೋಗುತ್ತದೆ. ಪಾತ್ರತೆ ಬಂದ ಮೇಲೆ ಸ್ವರಾಜ್ಯವನ್ನು ಕೊಡತಕ್ಕುದೆಂಬ ವಿಧಾನವು ಕೇಳಕಿಕ್ಕೆ ಎಷ್ಟೊ ಮನೋಹರವಾಗಿದ್ದರೂ ಆ ಪಾತ್ರತೆಯು ಬರಬೇಕಾದರೆ ಅಧಿಕಾರವನ್ನೆ ಕೊಡಬೇಕು ಈ ಸಿದ್ಧಾಂತವು ಸತ್ಯಪೂರ್ಣವಾದ್ದೆ. ಮುಂಬಯಿಯ ಬಿಶಪರಿಗೆ ಈ ಸಿದ್ಧಾಂತವು ಗೊತ್ತಿದ್ದರೂ ಅದನ್ನು ಅವರು ಅಡಿ ತೋರಿಸುವುದಿಲ್ಲ. ಪ್ರತ್ಯುತ ಯುದ್ಧಮುಗಿದ ಮರುದಿನವೆ ಸ್ವರಾಜ್ಯದ ದೊಡ್ಡ ಕಂತನ್ನು ಹಿಂದೀ ಮುಖಂಡರು ಕೇಳುವುದು ಅವರಿಗೆ ಮಹದಪರಾಧವಾಗಿ ಕಂಡುಬರುತ್ತದೆ. ಆದರೆ ಇದರಲ್ಲಿ ಹಿಂದೀ ಜನರ ಅಪರಾಧವು ಯಾವುದೆಂಬುದು ನಮಗನಕ ಗೊತ್ತಾಗದು. ಸ್ವರಾಜ್ಯದ ಹಕ್ಕುಗಳನ್ನು ಒಂದೆಸಾರಿ ಕೊಡುವುದು ನಿಮಗೆ ಅಪಾಯಕರವೆಂದು ಕಂಡುಬಂದರೆ ಅದನ್ನು ಕಂತುಕಂತಾಗಿ ಕೊಡಿರಿ ಎಂದು ಜನರು ಹೇಳಿದರೆ ಆ ಮಾತಿಗೆ ಕಿವಿಗೊಡದೆ ನೀವು ಹೇಳುವ ಯುಕ್ತಿವಾದವು ಯಾವುದೆಂದರೆ—ನಿಮ್ಮಲ್ಲಿ ಪಾತ್ರತೆ ಬರಬೇಕು. ಅದು ಬಂದ ಮೇಲೆ ಕೊಡೋಣ. ಆದರೆ ಇದೆ ವಿಧಾನವನ್ನು ನೀವು ಯಾವಾಗಲೂ ಮಾಡುತ್ತ ಕುಳಿತರೆ ನಾವು ನಿಮ್ಮ ಮತದಂತೆ ಸ್ವರಾಜ್ಯಕ್ಕೆ ಯಾವಾಗ ಪಾತ್ರರಾಗಬೇಕಾಯಿತು? ಇಂತಿಷ್ಟು ಸಮಯವೆಂದು ನಿರ್ದೇಶಿಸದೆ ಕೇಳಿಕೇಳಿದಾಗ ನಿಮ್ಮಲ್ಲಿ ಪಾತ್ರತೆ ಬರಬೇಕೆಂದು ಹೇಳಿದರೆ ಅದರ ಅರ್ಥವೇನಾಯಿತು? ನೀವು ಮಾತ್ರ ಅನವಧಿಕಕಾಲವನ್ನು ಹೇಳುವುದು—ಇಂತಿಷ್ಟು ಸಮಯವೆಂದು ನಿರ್ದೇಶಿಸಲಿಕ್ಕಿಲ್ಲ. ಒಂದ ವೇಳೆ ಜನತೆಯು ನಾಳೆಯೆ ಸ್ವರಾಜ್ಯವನ್ನು ಕೊಡಿರಿ ಎಂದು ಕೇಳಿಕೊಂಡರೆ ಅದರಲ್ಲಿ ಅವರ ಅಪರಾಧ ಉಂಟೊ? ನೀವು ಒಂದು ತುದಿಗೆ ಹೋಗುವಾಗ ಜನತೆಯು ಇನ್ನೊಂದು ತುದಿಗೆ ಹೋಗುವುದು ಸಹಜವಲ್ಲವೊ? ಈ ಸಂಗತಿಯನ್ನು ನಮ್ಮ ಬಿಶಪರು ಆಲೋಚಿಸುವುದಿಲ್ಲ. ಯುದ್ಧಾಂತ್ಯದಲ್ಲಿ ಆಗತಕ್ಕ ಅನೇಕ ಮಹತ್ವದ ಬದಲಾವಣೆಗಳು ಈಗಲೆ ವಿಲಾಯತಿಯ ಮುತ್ಸದಿಗಳ ಮುಂದೆ ನಿಂತುಕೊಂಡಿವೆ. ಅವುಗಳಲ್ಲಿ ಹಿಂದುಸ್ಥಾನದ ಸುಧಾರಣೆಯು ಒಂದು ಪ್ರಶ್ನವು. ಇದರಿಂದ ಅವರಿಗೆ ಒಂದು ದೊಡ್ಡ ತೊಂದರೆಯು ಬರುವುದೆಂದು ನಮ್ಮ ಬುದ್ಧಿಗೆ ತೋರದು. ಯುದ್ಧಮುಗಿದ ಕೂಡಲೆ ಸಾಮ್ರಾಜ್ಯದ ಅನೇಕ ಸಂಗತಿಗಳಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲು ವಿಲಾಯತಿಯ ರಾಜಕಾರಣ ಧುರೀಣರು ಕಟಿಬದ್ಧರಾಗಿ ನಿಂತಿರುವಾಗ ಅವರಿಗೆ ಹಿಂದುಸ್ಥಾನದ ಪ್ರಶ್ನವು ಒಂದು ದೊಡ್ಡ ವಿಷಯವಲ್ಲ. ನಮ್ಮ ಇಂಗ್ಲಂಡದ ಮುತ್ಸದಿಗಳು ಯುದ್ಧವನ್ನೂ ಜಯಿಸುವರು. ಅದೆ ಸಮಯದಲ್ಲಿ ಸಾಮ್ರಾಜ್ಯದ ಪ್ರಶ್ನವನ್ನೂ ಬಿಡಿಸುವರು. ಮತ್ತು ಮನಸ್ಸು ಮಾಡಿದರೆ ಹಿಂದೀಜನರ ಆಕಾಂಕ್ಷೆಗಳನ್ನೂ ಪೂರೈಸುವರು. ಅವರು ಸಮರ್ಥರಿದ್ದಾರೆ. ಹಿಂದುಸ್ಥಾನದ ಪ್ರಶ್ನದಿಂದ ಅಲ್ಲಿಯ ಮುತ್ಸದಿಗಳಿಗೆ ಏನು ತೊಂದರೆ ಆದೀತೊ ಈ ಯೋಚನೆಯು ನಮ್ಮ ಬಿಶಪ ಸಾಹೇಬರಿಗೆ ಯಾಕೆ? ಸಾರಾಂಶ ಮುಂಬಯಿಯ ಬಿಶಪರು ಹಿಂದೆಮುಂದೆ ನೋಡದೆ ಅವ್ಯಾಪಾರೇಷು ವ್ಯಾಪಾರವನ್ನು ಮಾಡಿದ್ದಾರೆ. ಇವರು ತಮ್ಮ ಲೇಖದಲ್ಲಿ ಹಿಂದಿ ಜನರ ಅಪಾತ್ರತೆಯನ್ನು ತೋರಿಸುವ ಉದ್ದೇಶದಿಂದ ಸ್ಥಾನಿಕ ಸ್ವರಾಜ್ಯದ ಮತ್ತು ಮತದಾರ ಸಂಘದ ದೃಷ್ಟಾಂತವನ್ನು ಎತ್ತಿ ಹೇಳಿದ್ದು ನಿಜವಾಗಿ ಉಪಹಾಸಾಸ್ಪದವಾಗಿದೆ. ಇಂಥ ಒಂದೆರಡು ಸಂಗತಿಗಳಿಂದ ನಮ್ಮಲ್ಲಿ ಸ್ವರಾಜ್ಯದ ಪಾತ್ರತೆಯು ಇಲ್ಲೆಂದು ಹೇಳುವುದಾದರೆ ಇಡಿಲೋಕಕ್ಕೆ ಅನರ್ಥಾವಹವಾದ ಈ ಮಹಾಯುದ್ಧವನ್ನು ನಡಿಸುವಂಥ ರಾಷ್ಟ್ರಗಳಿಗೆ ಮಾತ್ರ ರಾಜ್ಯಕಾರಭಾರದ ಪಾತ್ರತೆಯು ಬರುವದೊ? ಇರಲಿ. ರಾಷ್ಟ್ರೀಯ ಸಭೆ ಮತ್ತು ಮೊಸ್‌ಲೆಮ್-ಲೀಗ ಇವುಗಳ ಸಂಯುಕ್ತ ಸಮ್ಮತಿಯಿಂದ ಕಳೆದವರ್ಷ ಭಾವಿಸುಧಾರಣೆಯ ಯೋಜನೆಯು ಪ್ರಕಟವಾಗಿದೆ. ವರಿಷ್ಠ ಕೌನ್ಸಿಲಿನ ೧೯ ಸಭಾಸದರು ತಮ್ಮ ಯೋಜನೆಯನ್ನು ಸರಕಾರದ ಮುಂದೆ ಇಟ್ಟಿರುವರು. ಅಲ್ಲದೆ ಇನ್ನು ಎಷ್ಟೋ ಮುಖಂಡರು ತಂತಮ್ಮ ಮತದಂತೆ ಹಿಂದುಸ್ಥಾನದ ಭಾವಿಸುಧಾರಣೆಯನ್ನು ಸರಕಾರ ಮತ್ತು ಜನತೆಯ ಮುಂದೆ ಇಟ್ಟಿರುವರು. ಆದರೂ ಯುದ್ಧ ಮುಗಿದ ಕೂಡಲೆ ಅಂತರ್ಗತ ಸ್ವರಾಜ್ಯದ [illegible]

ಯಾರೂ ಕೇಳಿದ್ದು ಕಂಡು ಬರುವದಿಲ್ಲ. ಈ ಸಂಗತಿಯು ಮೊನ್ನೆ ಮುಂಬಯಿಯಲ್ಲಿ—ಬಿಶೋಪ ದೊರೆಗಳ ಬಂಗಲೆಯ ನೆರೆಯಲ್ಲೆ ನೆರೆದ ಒಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಮತ್ತು ಮೊಸ್‌ಲೆಮ್ ಲೀಗಿನ ಜೋಡು ಸಭೆಯ ನಿರ್ಣಯದಿಂದಲೂ ಸ್ಪಷ್ಟವಾಗುತ್ತದೆ. ಈ ಎಲ್ಲರೂ ಸ್ವರಾಜ್ಯದ ಹಕ್ಕುಗಳನ್ನು ಕೇಳಿದ್ದಾರೆ, ಆದರೆ ಅದು ಕ್ರಮಕ್ರಮದಿಂದಲೆ ಕಂತುಕಂತಿನಿಂದಲೆ ಸಿಗಬೇಕೆಂದು ಕೇಳಿದ್ದಾರೆ. ಇದು ನಿಜಸ್ಥಿತಿ. ತಥಾಪಿ ಬಿಶಪರು ಮಾತ್ರ ನೆನೆಸುತ್ತಾರೆ, ಹಿಂದಿಗಳು ನಾಳೆಯೆ ಸ್ವರಾಜ್ಯಬೇಕೆಂದು ಹೇಳುತ್ತಾರೆ; ಒಂದು ವೇಳೆ ಹೀಗೆ ನೆನೆಸಿದರೂ ಅದು ತಪ್ಪು ಅಲ್ಲ. ಯಾಕೆಂದರೆ ನೀವು ಆ ತುದಿಗೆ, ನಾವು ಈ ತುದಿಗೆ!

ಸ್ಫುಟವಿಚಾರಗಳು.

೧. ಸಿಲೋನಿನ ಸರ್. ಪೊನ್ನಂಬಾಲಂ ಅರುಣಾಚಲಂ ಇವರ ಹೆಸರೂ ಮತವೂ ನಮ್ಮ ವಾಚಕರಿಗೆ ಅಪರಿಚಿತವಲ್ಲ. ಸ್ವಲ್ಪ ಸಮಯದ ಹಿಂದೆ ಒಂದು ಅಗ್ರಲೇಖದಲ್ಲಿ ಇವರ ರಾಜಕೀಯಮತಗಳನ್ನು ನಾವು ತೋರಿಸಿದ್ದೇವೆ. ಈಚೆಗೆ ಸರ್. ಪೊ. ಅರುಣಾಚಲಂ ಇವರು ತಮ್ಮ ಒಂದು ಭಾಷಣದಲ್ಲಿ ಹೇಳಿದ್ದೇನೆಂದರೆ, "ಪಬ್ಲಿಕ್ ಸರ್ವಿಸಿನಲ್ಲಿ ಜನರಿಗೆ ಉಚ್ಚತರಗತಿಯ ನೌಕರಿಗಳು ಸಿಗುವ ವರೆಗೆ ಅಥವಾ ಈ ಸ್ಥಾನಗಳ ಅವರ ಪಾತ್ರತೆಯನ್ನು ಮನ್ನಿಸುವ ವರೆಗೆ ಯಾವ ಸುಧಾರಣೆಯೆ ಬರಲಿ, ಅದು ಮಾನ್ಯವಾಗಲಾರದು. ಉಚ್ಚ ವರ್ಗದ ಉದ್ಯೋಗಗಳು ಇಂಗ್ಲಂಡಿನಿಂದಲೆ ಎಷ್ಟರ ತನಕ ಭರಿತಯಿಸಲ್ಪಡುವವೊ ಅಷ್ಟರ ತನಕ ಬುದ್ಧಿಮತ್ತೆಯ ಮತ್ತು ಸುಸ್ವಭಾವದ ಜನರು ಎಷ್ಟು ಇದ್ದರೂ—ಅವರಿಗೆ ಮೇಲುತರಗತಿಯ ಉದ್ಯೋಗಗಳ ಬಾಗಿಲುಗಳನ್ನು ತೆರೆದುದ್ದಲ್ಲ." ಐ. ಸಿ. ಎಸ್. ಪರೀಕ್ಷೆಯ ವಿಷಯದಲ್ಲಿ ಸರ್. ಅರುಣಾಚಲಂ ಹೇಳುವದೇನಂದರೆ: ಸಿವಿಲ್ ಸರ್ವಿಸಿನ ಪರೀಕ್ಷೆಯು ಇಲ್ಲಿಯೂ ಇಂಗ್ಲಂಡಿನಲ್ಲಿಯೂ ಏಕಕಾಲದಲ್ಲಿಯೆ ಆಗಬೇಕೆಂದು ಸಾರ್ವಜನಿಕವಾಗಿ ಎಲ್ಲರೂ ಆಗ್ರಹದಿಂದ ಕೇಳಿಕೊಂಡರು. ಆದರೆ, ಪಬ್ಲಿಕ ಸರ್ವಿಸ್ ಕಮಿಶನಿನ ವರದಿಯಂತು ಪ್ರತಿರೋಧಕವಾಗಿದೆ. ಸುಶಿಕ್ಷಿತ ಹಿಂದಿಗಳಿಗೆ ತಮ್ಮ ದೇಶದ ರಾಜ್ಯಕಾರಭಾರಗಳಲ್ಲಿ ಪ್ರವೇಶವೂ ಹಕ್ಕೂ ಇರಬೇಕಾದುದು ನ್ಯಾಯ್ಯವು. ಹಿಂದೂಸ್ಥಾನದ ಲೋಕಮತಕ್ಕೆ ಮಹತ್ವವನ್ನು ಕೊಡುವುದು ಅಗತ್ಯವಾಗಿದೆ. ಮಾತ್ರವಲ್ಲ, ಇನ್ನುಮುಂದೆ ಅಲ್ಲಗಳೆಯುವುದು ಸಾಧ್ಯವೂ ಇಲ್ಲ." ಈ ಪ್ರಕಾರ ಸರ್. ಪೊ. ಅರುಣಾಚಲಂರು ಬಹು ಸ್ಪಷ್ಟವಾಗಿ ಮಾತಾಡಿದರು. ಕೆಲವು ವರ್ಷಗಳ ಹಿಂದೆ ಲೊ. ಮೊರ್ಲೆ ಇವರು ಸ್ಟೇಟ್ ಸೆಕ್ರೆಟರಿಗಳಾಗಿದ್ದಾಗ ಹಿಂದೂಸ್ಥಾನದ ಕೆಲವು ಸುಧಾರಣೆಗಳನ್ನು ಮಾಡಿದ್ದಾರೆ. ತಥಾಪಿ ಎಷ್ಟೊ ಅಂಶಗಳನ್ನು ಅವರು ಮುಟ್ಟಲೆ ಇಲ್ಲ. ಆದ್ದರಿಂದ ಸರ್ ಅರುಣಾಚಲಂರ ಸೂಚನೆಯು ಹೀಗಿರುತ್ತದೆ: "ಲೊ. ಮೊರ್ಲೆಯವರು ಬಿಟ್ಟ ಅಂಶಗಳನ್ನು ಈಗಿನ ಸೆಕ್ರೆಟರಿಗಳಾದ ಮಿ| ಮೊಂಟೆಗ್ಯೂ ಇವರು ಕೈಕೊಂಡು ಸಾಧಿಸಬೇಕು. ಇವರ ಸೂಚನೆಯು ನಿಜವಾಗಿ ಯಥಾರ್ಥವಾದ್ದು. ಲೊ. ಮೊರ್ಲೆಯವರ ಸುಧಾರಣೆಯು ವಿಶ್ರಾಂತಿಯ ಸ್ಥಾನವಲ್ಲ. ಅದು ಕೇವಲ ಸ್ವಾಯತ್ತ ಕಾರಭಾರದ ಪ್ರಸ್ತಾವನೆ ಅಥವಾ ಶ್ರೀಗಣೇಶವೆನ್ನಬಹುದು. ಬಾಕಿ ಉಳಿದದ್ದನ್ನು ಮಿ| ಮೊಂಟೆಗ್ಯೂ ಇವರು ಹಿಂದೀ ಜನರ ಕೈಗೆ ಹಾಕಬೇಕು, ಇದೆ ಅರುಣಾಚಲಂರ ಕೋರಿಕೆ.

೨. ಪರಂತು ಇಲ್ಲಿಯ ಅಧಿಕಾರಿಗಳ ಕೋರಿಕೆಯು ಹಾಗಿದ್ದಂತೆ ಕಾಣುವುದಿಲ್ಲ. 'ಹಿಂದಿಗಳಿಗೆ ಪ್ರಕೃತ ಇರುವ ಅಧಿಕಾರಗಳೆ ಹೆಚ್ಚು, ಸಭಾಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ಲೇಖನ ಸ್ವಾತಂತ್ರ್ಯ ಇವುಗಳೆಲ್ಲ ಇವರಿಗೆ ಯಾಕೆ?' ಎಂಬುದಾಗಿಯೆ ಇಲ್ಲಿಯ ಅಧಿಕಾರಿಗಳಿಗೆ ತೋರುವುದು. ಎಂದರೆ, ಇದರ ಅರ್ಥವು ಈ ಅಧಿಕಾರಿಗಳು ಈ ಅರ್ಥದ ತಮ್ಮ ಮತಗಳನ್ನು ಬಾಯಿದೆರೆ ವ್ಯಕ್ತಗೊಳಿಸಿದ್ದಾರೆ ಎಂದಲ್ಲ. ಆದರೆ ಬಾಯಿದೆರೆ ಹೇಳದಿದ್ದರೂ ಅವರು ಆ ಅರ್ಥದ ಕೆಲಕೆಲವು ಕೃತ್ಯಗಳನ್ನು ಮೇಲಿಂದ ಮೇಲೆ ಮಾಡುತ್ತಲೆ ಇದ್ದಾರೆ. ಇಂಥ ಕೃತ್ಯಗಳೊಳಗಿನ ಬಂಗಾಲ ಸರಕಾರದ ಮೊನ್ನೆಯ ಒಂದು ಕೃತ್ಯವನ್ನು ದೃಷ್ಟಾಂತಕ್ಕಾಗಿ ಉದಾಹರಿಸ ಬಹುದು. ಕಲ್ಕತ್ತೆಯ ನಾಗರಿಕರು ಅಲ್ಲಿಯ ಟೌನಹೋಲಿನಲ್ಲಿ ಮದ್ರಾಸಿನ ಸುಪ್ರಸಿದ್ಧ ಪ್ರತಿಬಂಧಗಳನ್ನು ನಿಷೇಧಿಸುವುದಕ್ಕಾಗಿ ಒಂದು ಸಭೆಯನ್ನು ಸೇರಿಸಲಿದ್ದರು. ಅದರ ಅಧ್ಯಕ್ಷಸ್ಥಾನವನ್ನು ಸುಪ್ರಸಿದ್ಧ ಕಾಯಿದೆಪಂಡಿತರಾದ ಮತ್ತು ಶಾಂತಪಕ್ಷದವರ ಮುಕುಟಮಣಿಗಳಾದ ಸರ್. ರಾಶಬಿಹಾರಿಘೋಷ್ ಇವರು ವಹಿಸುವವರಿದ್ದರು. ಪರಂತು ಬಂಗಾಲ ಅಧಿಕಾರಿಗಳಿಗೆ ಇಂಥ ಸಭೆಗೆ ಅವಕಾಶವನ್ನು ಕೊಡುವುದು ಅವಶ್ಯವಾಗಿ ಕಂಡುಬರಲಿಲ್ಲ. ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿ ಸಭೆಗಳಾಗಿ ಮದ್ರಾಸ ಸರಕಾರದ ಕೃತ್ಯವನ್ನು ಎಲ್ಲರೂ ನಿಷೇಧಿಸಿದರು. ಸ್ವತಃ ಬಂಗಾಲದಲ್ಲಿಯೆ ಕೆಲವು ದಿವಸಗಳ ಹಿಂದೆ ಬೇರೆ ಬೇರೆ ಸಂಘಗಳ ಮುಖಾಂತರ ಕೂಟಗಳು ಜರಗಿ ಅವು ಮದ್ರಾಸ ಪ್ರತಿಬಂಧವನ್ನು ನಿಷೇಧಿಸಿದ್ದವು. ಆದರೂ ಮೊನ್ನೆಯ ಟೌನಹೋಲ್ ಮೀಟಿಂಗು ಬಂಗಾಲ ಸರಕಾರಕ್ಕೆ ದಿನ್‌ಸನದ ಕೇರಾಗಿ ಕಂಡುಬಂತು. ಮತ್ತು ಒಂದು ನೋಟೀಸಿನ ಮೂಲಕ ಬಂಗಾಲ ಸರಕಾರವು ಆಗಲಿಕ್ಕಿದ್ದ ಸಭೆಯನ್ನು ನಿಲ್ಲಿಸುವ ಶ್ರೇಯಸ್ಸನ್ನು ಪಡೆಯಿತು. "ಬೇರೆ ಸರಕಾರಗಳು ಕಾಯಿದೆಯ ಆಧಾರದಿಂದ ಒಂದು ಕೃತ್ಯವನ್ನು ಮಾಡಿರುವಾಗ ಅದನ್ನು ಟೀಕಿಸುವದೆ ಉದ್ದೇಶವಾಗಿ ಇಟ್ಟು [illegible] ಸಭೆ [illegible] ಸರಕಾರ [illegible] ಇಲ್ಲ" ಎಂಬುದಾಗಿ [illegible]

ವನ್ನು ವಿಮರ್ಶಿಸುವಾಗ 'ನಮ್ಮ ಸರಕಾರವು ಸುಧಾರಿಸಿದ್ದು' ಅಧಿಕಾರಿಗಳ ಸುಧಾರಿಸಿದವರು, ಎಂದು ವಾಡಿಕೆಯಾಗಿ ಹೇಳಿಕೊಂಡಿರುವ ಪಕ್ಷಾತಿನೊಳಗಿನ 'ಸುಧಾರಣೆ'ಯ ಅರ್ಥವೇನೆಂಬುದೆ ನಮ್ಮಂಥವರಿಗೆ ಗೊತ್ತಾಗದು. ಯಾವ ಸರಕಾರದ ಯಾವ ಕೃತ್ಯವೆ ಇರಲಿ, ಅದು ಸರಕಾರದ ದೃಷ್ಟಿಯಿಂದ ಕಾಯಿದೆಶೀರಾಗಿಯೆ ಇರುವುದು. ಅಂಥದ್ದನ್ನು ನಿಷೇಧಿಸಕೂಡದೆಂದ ಮೇಲೆ ಸರಕಾರದ ಯಾವ ಕೃತ್ಯವನ್ನೂ ಜನರು ಟೀಕಿಸಕೂಡದೆಂದಾಯಿತು. ಎಂದಮೇಲೆ ವಾಕ್‌ಸ್ವಾತಂತ್ರ್ಯವೆಲ್ಲಿ, ಮುದ್ರಣ ಸ್ವಾತಂತ್ರ್ಯವೆಲ್ಲಿ! ಪುನಃ ಬಂಗಾಲ ಸರಕಾರವು ಅದೆ ನೋಟೀಸಿನಲ್ಲಿ ಹೇಳುವದೇನಂದರೆ: "ಸನದಶೀರ ಬದಲಾವಣೆಗಳನ್ನು ವಕ್ತರು ಅನುದ್ವೇಗಕರ ಮಾತುಗಳಿಂದ ಸೂಚಿಸುವುದಕ್ಕೆ ಸಭೆಗಳನ್ನು ಸೇರಿಸುವುದು ನಮಗೆ ನಿರಾಕ್ಷೇಪಕರವು"! ಈ ಮಾತನ್ನೂ ಮೇಲಿನ ವಿಧಾನವನ್ನೂ ಹೇಗೆ ಒಂದಕ್ಕೊಂದು ಜೋಡಿಸಬಹುದು ಇದು ಗೊತ್ತಾಗದು. ಹಿಂದೀ ಜನರುಯಾವ ಬಿನ್ ಸನದಶೀರ ಚಳವಳವನ್ನು ಕೈಕೊಂಡಿದ್ದಾರೆ ಎಂಬುದನ್ನು ನಿರ್ದೇಶಿಸಿ ಒಬ್ಬ ಅಧಿಕಾರಿಯೂ ತೋರಿಸುವುದಿಲ್ಲ. ಬಾಯಿಯಿಂದ ಮಾತ್ರ 'ಸನದಶೀರಾಗಬೇಕು' ಎಂಬುದನ್ನು ಅಧಿಕಾರಿಗಳು ಜಪಿಸುತ್ತಾರೆ. ಇದರ ಅರ್ಥವು ಅವರಿಗೆ ಗೊತ್ತು!

೩. ಬ್ರಿಟಿಷ್ ಸಾಮ್ರಾಜ್ಯದ ಸಂಬಂಧದಿಂದ ನಿಗದಿತವಾದ ವಿಭಿನ್ನ ಜನಾಂಗಗಳು ಪರಸ್ಪರ ಬಂಧುಭಾವದಿಂದಲೆ ಇರಬೇಕು, ವರ್ಣದ್ವೇಷಕ್ಕೆ ಎಡೆಕೊಡಬಾರದು ಎಂದು ಎಲ್ಲರೂ ಅಭಿಪ್ರಾಯಪಡುತ್ತಾರೆ ಮತ್ತು ಸದ್ಯದಲ್ಲಿಯೆ ಆಗಿಹೋದ ಸಾಮ್ರಾಜ್ಯ ಪರಿಷತ್ತಿನಲ್ಲಿ ಮಿ. ಸ್ಮಟ್ಸ್‌ರಂಥ ದಕ್ಷಿಣ ಆಫ್ರಿಕದ ಮಂತ್ರಿಗಳು ಮೇಲಿನ ಸೊಗಸಾದ ವಿಧಾನವನ್ನು ಅಡಿಯೂ ತೋರಿಸಿದ್ದಾರೆ. ಸ್ಮಟ್ಸರ ಅಭಿಪ್ರಾಯವು ಮೇಲಿನಂತೆ ಉದಾರ ಭಾವದಿದ್ದರೂ ದಕ್ಷಿಣ ಆಫ್ರಿಕದೊಳಗಿನ ಸಮಾಚಾರವು ಅಷ್ಟೊಂದು ಉದಾರಭಾವದ್ದಿಲ್ಲ, ಸಹಾನುಭೂತಿಪರವಾದ್ದಿಲ್ಲ, ಪ್ರತ್ಯುತ ಹಿಂದಿಗಳಲ್ಲಿ ಉದ್ವೇಗವನ್ನು ಹುಟ್ಟಿಸುವುದಾಗಿದೆ ಎಂಬುದು ಸ್ವದೇಶಾಭಿಮಾನಿಯ ವಾಚಕರಿಗೆ ಗೊತ್ತಿಲ್ಲದ ವಿಷಯವಲ್ಲ. ದಕ್ಷಿಣ ಆಫ್ರಿಕದೊಳಗಿನ ಜೊಹಾನಸಬರ್ಗಿನಲ್ಲಿ ಒಬ್ಬ ಯುರೋಪಿಯನನು ಟ್ರಾಮಗಾಡಿಯಲ್ಲಿ ಪ್ರಯಾಣಮಾಡುವಾಗ ಒಬ್ಬ ಹಿಂದೀ ಗೃಹಸ್ಥನನ್ನು ಗಾಡಿಯು ಹೋಗುತ್ತಿರುವಾಗಲೆ ಗಾಡಿಯಿಂದ ಕೆಳಗೆ ದಬ್ಬಿದನು. ಕೆಳಗೆ ಬಿದ್ದ ಹಿಂದಿಯು ಅನಂತರ ಮೃತಪಟ್ಟನು. ಈ ಸಂಗತಿಯನ್ನು ನಾವು ಹಿಂದೆಯೆ ಪ್ರಸ್ತಾಪಿಸಿರುವೆವು. "ಮುಂದೆ ಏನಾಯಿತು?" ಇದನ್ನು ತಿಳಿಕೊಳ್ಳುವುದು ವಾಚಕರಿಗೆ ತುಂಬಾ ಕುತೂಹಲವಿರಬಹುದು. ಆದುದರಿಂದ ನಾವು ಅಭಿಮಾನದಿಂದ ತಿಳಿಸುವುದೇನೆಂದರೆ, ಈ ವಿಷಯದಲ್ಲಿ ನಂಬರು ಆಗಿ ಅದು ಅಲ್ಲಿಯ ನ್ಯಾಯಸ್ಥಾನದ ಮುಂದೆ ನಡೆಯಿತು. ನಡೆದ ತನಖಿಯಲ್ಲಿ ಯುರೋಪಿಯನನು ಅಪರಾಧಿ ಎಂಬುದು ಸಿದ್ಧವಾಯಿತು. ಆಗ ನ್ಯಾಯಾಧೀಶರಿಗೆ ಏನು ಮಾಡುವುದೆಂಬುದೆ ಗೊತ್ತಾಗುವುದಿಲ್ಲ! ಆದರೂ ನ್ಯಾಯಾಧೀಶರು, ಬಹು ನ್ಯಾಯಪ್ರಿಯತೆಯಿಂದ ನಿರಪರಾಧಿಯ ಪ್ರಾಣವನ್ನು ತಕ್ಕೊಂಡ ಈ ಅಪರಾಧಿಯನ್ನು ೫೦ ಪೌಂಡು ದಂಡದ ಅಥವಾ ಒಂಭತ್ತು ತಿಂಗಳು ಸಜೆಯ ಶಿಕ್ಷೆಯನ್ನು ವಿಧಿಸಿದರು! ಶಾಬಾಸ! ನ್ಯಾಯಾಧೀಶರ ನ್ಯಾಯಪ್ರಿಯತೆಯೆ! ಸಾಮ್ರಾಜ್ಯದೊಳಗಿನವರೆಲ್ಲರೂ ಪರಸ್ಪರ ಬಂಧುಭಾವದ ಭಾವನೆಯಿಂದ ಇರಬೇಕು ಎಂದು ಮುಂತಾದ್ದನ್ನ ಮಿ. ಸ್ಮಟ್ಸರು ಸಾಮ್ರಾಜ್ಯ ಪರಿಷತ್ತಿನಲ್ಲಿ ಹೇಳುವುದಕ್ಕಿಂತ ಸ್ವಂತ ತನ್ನ ದೇಶದ ಜನರಿಗೆ ಮತ್ತು ಮೇಲಿನ ನ್ಯಾಯಾಧೀಶರಂಥ ಅಧಿಕಾರಿಗೆ ಹೇಳುವುದು ಯುಕ್ತಮಾತ್ರವಲ್ಲ, ಅಗತ್ಯವಾದ್ದು.

೪. ಮದ್ರಾಸ್ ಸರಕಾರವು ಲೋಕಮತವನ್ನು ಅಕಾರಣವಾಗಿ ಒತ್ತಿಬಿಡುವ ಕ್ರಮವನ್ನು ಇನ್ನೂ ಬಿಡಲಿಲ್ಲೆಂದು ತೋರುತ್ತದೆ. ಮದ್ರಾಸಿನ ನ್ಯೂ ಇಂಡಿಯಾ ಒಫೀಸಿನಲ್ಲಿರುವ ಶ್ರೀ. ವಿಷ್ಣು ರಘುನಾಥ ಕರಂದೀಕರ ಎಂಬ ಮುಂಬಯಿ ಸಂಸ್ಥಾನದ ಗೃಹಸ್ಥರಿಗೆ ೪೮ ತಾಸಿನೊಳಗೆ ಮದ್ರಾಸ ಸಂಸ್ಥಾನವನ್ನು ಬಿಟ್ಟು ಹೋಗಬೇಕೆಂದು ಸರಕಾರದ ನೋಟೀಸು ಬಂದಿದೆ. ಡಿಫೆನ್ಸ ಒಫ್ ಇಂಡಿಯಾ ಎಕ್ಟಿನ ಆಧಾರದಿಂದ ಶ್ರೀ. ಕರಂದೀಕರರ ಮೇಲೆ ಜಾರಿಮಾಡಿದ ಈ ನೋಟಿಸಿನಲ್ಲಿ ಕರಂದೀಕರರು ಸಾರ್ವಜನಿಕ ಸುಸ್ಥಿತಿಗೆ ಬಾಧಕವಾದ ವರ್ತನವನ್ನು ಮಾಡುವುದರಲ್ಲಿದ್ದ ಕಾರಣ ಈ ಸಂಸ್ಥಾನವನ್ನು ಅವರು ಬೇಗನೆ ಬಿಡಬೇಕೆಂಬುದಾಗಿ ಸರಕಾರವು ಹೇಳುತ್ತದೆ. ಇದು ನಿಜವಾಗಿ ಆಶ್ಚರ್ಯವು. ಮ. ರಾ. ಕರಂದೀಕರರು ಇಷ್ಟರವರೆಗೆ ಅಂಥ ವರ್ತನವನ್ನು ಮಾಡಿದ್ದಾಗಿ ಎಲ್ಲೂ ಪ್ರಕಟವಾಗಲಿಲ್ಲ. ಆದರೆ ಸರಕಾರಕ್ಕೆ ಮಾತ್ರ ಇದು ಹೇಗೆ ಗೊತ್ತಾಗುವುದೊ? ಡಿಫೆನ್ಸ ಒಫ್ ಇಂಡಿಯಾ ಎಕ್ಟೆಂಬುದು ಸರಕಾರಕ್ಕೆ ಒಂದು ಒಳ್ಳೆ ಆಯುಧವಾಗಿದೆ. ಅದರ ಹೆಸರಿನಿಂದ ಅಧಿಕಾರಿಗಳು ಬೇಕಾದ ಹುಕುಮನ್ನು ಹೊರಡಿಸಬಹುದು. 'ಇದು ಹೀಗೆ ಯಾಕೆ!' ಎಂದು ಕೇಳಲೂ ಯಾರಿಗೆ ಉಪಾಯವಿಲ್ಲ. ಒಂದುವೇಳೆ ಜನರು ಕೇಳಿದರೂ ಅಧಿಕಾರಿಗಳಿಗೆ—ಈ ಕಾಯಿದೆಯ ಆಧಾರದಿಂದ ಮಾಡಿದ ಕೃತ್ಯಗಳ ಸ್ಪಷ್ಟೀಕರಣವನ್ನು ಕೊಡಬೇಕಾದ ಅಗತ್ಯವೂ ಇಲ್ಲ. ಇದು ನಿಜವಾಗಿ ಶೋಚನೀಯ ಸ್ಥಿತಿಯು.

೫. ಇದು ಎಷ್ಟು ಶೋಚನೀಯ ಸ್ಥಿತಿಯೆಂದರೆ, ಇತ್ತ ಕೆಲವು ಸಮಯದಿಂದ ಹಿಂದುಸ್ಥಾನದ ಪ್ರಾಂತಿಕ ಅಧಿಕಾರಿಗಳಂಥ ವರಿಷ್ಠರು ದಿನೇ ದಿನೇ [illegible] ಕ್ರಮವನ್ನು ಕೈಕೊಂಡು ಪ್ರಜೆಗಳ ಸನದಶೀರ ಹಕ್ಕುಗಳನ್ನೂ ಹಿತಗಳನ್ನೂ ಮುರಿಯಲುಪಕ್ರಮಿಸಿದರಿಂದ ಒಟ್ಟು [illegible] ಮತ್ತು [illegible] ಈ ಪ್ರಮುಖ [illegible]

ಕೂಡಿಸಬೇಕಾಗಿ ಬಂತು. ಮುಂಬಯಿ ಪಟ್ಟಣದಲ್ಲಿ ಜುಲಾಯಿ ತಾ. ೨೮-೨೯ ದಿವಸ ಮೇಲಿನ ಸಂಸ್ಥೆಗಳ ಜೋಡು ಸಭೆಯು ಮಿ. ಸುರೇಂದ್ರನಾಥ ಬಾನರ್ಜಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಮದ್ರಾಸ, ಬಂಗಾಲ ಬಿಹಾರ, ಸಂಯುಕ್ತಪ್ರಾಂತ್ಯ ಮೊದಲಾದ ಎಲ್ಲ ಕಡೆಗಳಿಂದ ಸಭಾಸದರು ಸಭೆಗೆ ಬಂದಿದ್ದರು. ರಾಷ್ಟ್ರೀಯಸಭೆ ಮತ್ತು ಮೊಸ್‌ಲೆಮ್ ಲೀಗಿನ ಕಡೆಯಿಂದ ಕೂಡಿದ ಈ ಸಭಾಸದರ ಸಂಖ್ಯೆಯು ಸಾಧಾರಣ ೭೦ ಇತ್ತೆಂದು ಹೇಳುತ್ತಾರೆ. ಹಿಂದುಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯನ್ನು ಆಲೋಚಿಸಿ ಈ ವಿಷಯದಲ್ಲಿ ಜನತೆಯೂ ಸರಕಾರವೂ ಹೇಗೆ ನಡಕೊಳ್ಳುವುದು ಯುಕ್ತವಾಗಿದೆ ಎಂಬುದನ್ನು ನಿರ್ಣಯಿಸಲು ಕೂಡಿಬಂದ ಈ ಸಂಯುಕ್ತ ಅಧಿವೇಶನದಲ್ಲಿ ನಡೆದ ಕಾರ್ಯಕ್ರಮವಾದರೂ ಅನ್ವರ್ಥವಾಗಿಯೆ ಇತ್ತು. ಮಹರ್ಷಿಗಳಾದ ದಾದಾಭಾಯಿ ನೌರೋಜಿಯವರ ಮರಣದ ವಿಷಯದಲ್ಲಿ ದುಃಖಪ್ರದರ್ಶನ, ಪ್ರಕೃತ ರಾಜಕೀಯ ಕಾರ್ಯಗಳನ್ನು ಮುಂದರಿಸುವ ವಿಷಯದಲ್ಲಿ ಸತ್ಯಾಗ್ರಹವನ್ನು (Passive resistance) ಹಿಡಿಯುವುದು ಹೇಗೆ ಅವಶ್ಯವಿದೆ, ಮತ್ತು ಅದನ್ನು ಯಾವ ದಾರಿಯಿಂದ ಹಿಡಿಯಬಹುದು, ಈ ಸಂಗತಿಗಳನ್ನು ಪ್ರಾಂತಿಕ ಕೊಂಗ್ರೆಸ್ ಕಮಿಟಿಗಳೂ ಮೊಸ್‌ಲೆಮ್ ಲೀಗಿನ ಕೌನ್ಸಿಲೂ ಚೆನ್ನಾಗಿ ಆಲೋಚಿಸಿ ತಿಳಿಸಬೇಕೆಂಬ ವಿಷಯ, ಬಂಗಾಲ ಸರಕಾರವು ಟೌನ್‌ಹೊಲ್ ಮೀಟಿಂಗನ್ನು ನಿಲ್ಲಿಸಿದ್ದಕ್ಕಾಗಿ ನಿಷೇಧ, ಮೆಸೊಪೊಟೆಮಿಯಾ ಪ್ರಕರಣದ ಸಂಬಂಧ ಲೊ. ಹಾರ್ಡಿಂಜರ ವಿಷಯದಲ್ಲಿ ಸಹಾನುಭೂತಿ, ಪ್ರಕೃತ ರಾಜಕೀಯ ಪರಿಸ್ಥಿತಿಯು ಜನಗಳಿಗೆ ತಿಳಿಯುವಂತೆ ಪ್ರಾಂತಿಕ ಕೊಂಗ್ರೆಸ್ ಕಮಿಟಿಗಳು ಜಿಲ್ಲೆಗಳಲ್ಲಿ ಅಧಿವೇಶನಗಳನ್ನು ಕೂಡಿಸತಕ್ಕದು, ಈ ವರ್ಷ ಕಲಕತ್ತೆಯಲ್ಲಿ ಆಗಲಿಕ್ಕಿದ್ದ ರಾಷ್ಟ್ರೀಯ ಸಭೆಯ ಅಧಿವೇಶನದ ದಿವಸವೆ ಬೇರೆಬೇರೆ ಪ್ರಾಂತಗಳ ಜಿಲ್ಲಾಸಭೆಗಳು ಸೇರಿ ರಾಷ್ಟ್ರೀಯ ಸಭಾಧ್ಯಕ್ಷರು ಅಂದು ಮಾಡಲಿಕ್ಕಿರುವ ಭಾಷಣವನ್ನು ದೇಶೀಯ ಭಾಷೆಯಿಂದ ಎಲ್ಲ ಜನಗಳಿಗೆ ಓದಿಹೇಳತಕ್ಕದು, ಮುಂತಾದ ಠರಾವುಗಳು ಆದವಲ್ಲದೆ ಪಾರ್ಲಮೆಂಟಿಗೂ, ಭಾರತ ಮಂತ್ರಿಗಳಿಗೂ ಹಿಂದುಸ್ಥಾನದ ವೈಸರಾಯರಿಗೂ ಹಿಂದುಸ್ಥಾನದ ರಾಜಕೀಯ ಸ್ಥಿತಿಯನ್ನು ಬರೆದು ತಿಳಿಸಬೇಕೆಂಬುದಾಗಿ ನಿರ್ಣಯಿಸೋಣಾಯಿತು. ವೈಸರಾಯರಿಗೆ ಕಳುಹಿಸಿಕೊಡುವ ಪತ್ರಕದಲ್ಲಿ ಯಾವ ಯಾವ ಸಂಗತಿಗಳಿರಬೇಕೆಂಬ ನಿರ್ಣಯವು ಅಧಿವೇಶನದಲ್ಲಿ ಆಗಿಹೋಗಿದೆ. ಈ ದೇಶದ ಪ್ರಮುಖವಾದ ಎರಡು ರಾಜಕೀಯಸಂಸ್ಥೆಗಳ ಸಂಯುಕ್ತ ಅಧಿವೇಶನಕ್ಕೆ ಮುಖ್ಯವಾಗಿ ಕಾರಣಗಳಾದ ಮದ್ರಾಸ ಸರಕಾರದ ಕೃತ್ಯಗಳು—ಲೊ. ಪೆಂಟಲೆಂಡರ ಭಾಷಣ, ಮದ್ರಾಸ ಪ್ರತಿಬಂಧ ಮುಂತಾದವುಗಳ ವಿಷಯದಲ್ಲಿ ಮೇಲಿನ ಸಭೆಯು ಪೂರ್ಣ ನಿಷೇಧವನ್ನು ವ್ಯಕ್ತಗೊಳಿಸಿದೆ. ರಾಷ್ಟ್ರೀಯ ಸಭೆಯು ಕಳೆದ ವರ್ಷದ ಲಖನೌ ಅಧಿವೇಶನದಲ್ಲಿ ಭಾವಿಸುಧಾರಣೆಯ ಪತ್ರಕವು ಪಾಸಾಗಿದೆ. ಆ ಮಸೂದೆಯನ್ನೆ ಇಟ್ಟುಕೊಂಡು. ನಾಮದಾರಮದನಮೋಹನ ಮಾಲವಿಯ, ಸರ್. ನಾರಾಯಣ ಚಂದಾವರಕರ ಮತ್ತು ಮ. ರಾ. ಸಮರ್ಥ ಈ ಮೂವರು ಪಾರ್ಲಮೆಂಟಿಗೆ ಒಂದು ಅರ್ಜಿಯನ್ನು ತಯಾರಿಸಬೇಕೆಂದು ಅಧಿವೇಶನದಲ್ಲಿ ವ್ಯವಸ್ಥೆಮಾಡಿದ್ದಾರೆ. ಪಂಡಿತ ಮಾಲವೀಯ ಮೊದಲಾದ ಈ ಮೂವರು ರಾಜಕಾರಣ ಕುಶಲರಾಗಿರುವದರಿಂದ ಮತ್ತು ಸರಕಾರ ದರಬಾರಿನಲ್ಲಿ ಭಾರವುಳ್ಳವರಾಗಿರುವುದರಿಂದ ಅವರು ತಯಾರಿಸುವ ಅರ್ಜಿಯು ಫಲಕಾರಿಯಾಗಿರುವುದೆಂಬುದಕ್ಕೆ ಸಂದೇಹವಿಲ್ಲ. ವೈಸರಾಯ ಪ್ರಭುಗಳಿಗೆ ಕಳುಹಿಸಿಕೊಡುವ ಪತ್ರಕವನ್ನು ನೋಡುವಾಗ ಇದರಿಂದ ಈಗಿನ ಅಧಿಕಾರಿಗಳ ಕೃತ್ಯಗಳ ವಿಷಯದಲ್ಲಿ ಜವಾಬದಾರವಾದ ಲೋಕಮತವು ಪ್ರಕಟವಾಯಿತೆನ್ನಬಹುದು.

೬. ಮುನ್ಸಿಪಾಲಿಟಿಗಳೂ ಲೋಕಲ್‌ಬೋರ್ಡುಗಳೂ ತಂತಮ್ಮ ಗಡಿಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಖಡ್ಡಾಯದಿಂದ ಪ್ರಾರಂಭಿಸತಕ್ಕದೆಂಬುದಾಗಿ ಮುಂಬಯಿ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಪಟೇಲರು ಒಂದು ಠರಾವನ್ನು ತಂದಿರುವರು. ಆದರ ಒಂದನೆ ವಾಚನವು ಮುಗಿದು ಈ ವಿಷಯವನ್ನು ವಿಚಾರಮಾಡುವುದಕ್ಕಾಗಿ ಅದನ್ನು ಸಿಲೆಕ್ಟ ಕಮಿಟಿಗೆ ಒಪ್ಪಿಸಿದೆ. ಈ ಠರಾವು ಕೌನ್ಸಿಲಿನಲ್ಲಿ ಬಂದಾಗ ಸರಕಾರದ ಸಾಹಾಯ್ಯವನ್ನು ಅಪೇಕ್ಷಿಸದೆ ಮುನ್ಸಿಪಾಲಿಟಿಗಳು ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂಬುದೊಂದು ಮಾತು ಆ ಠರಾವಿನಲ್ಲಿತ್ತು, ಈ ಸಂಬಂಧದಿಂದ ತುಂಬಾ ಭವತಿನಭವತಿ ನಡೆಯಿತು. ಸರಕಾರದ ದ್ರವ್ಯಸಹಾಯವನ್ನು ಕೇಳುವುದಿಲ್ಲೆಂದಾದರೆ ಈ ಬಿಲ್ಲನ್ನು ಕೌನ್ಸಿಲಿನಲ್ಲಿ ಪಾಸು ಮಾಡಿಕೊಳ್ಳುವ ಅಗತ್ಯವೇನು? ಮುನ್ಸಿಪಾಲಿಟಿಗಳೆ ತಮ್ಮಷ್ಟಕ್ಕೆ ಶಿಕ್ಷಣವನ್ನು ಪ್ರಾರಂಭಿಸಬಹುದಲ್ಲವೆ! ಎಂಬದಾಗಿ ಕೆಲವರು ಆಕ್ಷೇಪಿಸಿದರು. ಸರಕಾರದ ಕಡೆಯ ಮಂತ್ರಿಗಳು ಮುನ್ಸಿಪಾಲಿಟಿಗಳು ಕೇಳಿದಾಗ ಮತ್ತು ಕೇಳಿದ್ದಷ್ಟು ಹಣವನ್ನು ಕೊಡುವುದು ಪ್ರಾಂತಿಕ ಸರಕಾರದ ಸಾಂಪತ್ತಿಕಸ್ಥಿತಿಗೆ ಒಂದುವೇಳೆ ಅನುಕೂಲತೆ ಇಲ್ಲಾದರೆ ತೊಂದರೆ ಬಂದೀತು. ಆದುದರಿಂದ ಮೇಲಿನ ಮಾತು ಅಗತ್ಯವೆಂಬುದಾಗಿ ಸೂಚಿಸಿದರು. ಆದರೆ ಗವರ್ನರ ದೊರೆಗಳು—ಒಂದು ಮುನ್ಸಿಪಾಲಿಟಿಯು ಪ್ರಾಥಮಿಕ ಶಿಕ್ಷಣಕ್ಕೆ ಸೊಂಟಕಟ್ಟಿ ಮಧ್ಯದಲ್ಲಿ ದ್ರವ್ಯಸಾಹಾಯ್ಯವು ಅದಕ್ಕೆ ಬೇಕಾದರೆ ಸರಕಾರವು ಆ ಸಾಹಾಯ್ಯವನ್ನು ಕೊಡುವುದು ತಪ್ಪಲ್ಲ. ಈ ದ್ರವ್ಯಸಾಹಾಯ್ಯದ ಜವಾಬದಾರಿಯು ಸರಕಾರದ ಮೇಲೆ ಇರಕೂಡದು. ಸಾಂಪತ್ತಿಕ [illegible] ನೋಡಿಕೊಳ್ಳುವುದು ಮುನ್ಸಿಪಾಲಿಟಿಗಳ ಕರ್ತವ್ಯವಾಗಿದೆ—ಎಂದು [illegible] ಈ ಮಸೂದೆಯ [illegible] ಮುಗಿಸಿದರು.

ಸ್ಥಳಿಕ—ಮಂಗಳೂರು.

ಪಾಂಡೇಶ್ವರ ನಂಬ್ರ ೧೫೦೪ನೇ ಶ್ರೀಕೃಷ್ಣವಿಶ್ವಾಸ ಪರಸ್ಪರ ಸಹಾಯಕ ಸಂಘದ ೩ನೇ ವಾರ್ಷಿಕ ಮಹಾಸಭೆಯು ಇದೇ ಕಳೆದ ಜುಲಾಯಿ ೨೯ನೇ ಆದಿತ್ಯವಾರ ಮ. ರಾ. ರಾ. ಇನ್ಸಪೆಕ್ಟರ್ ಯಂ. ಗಿರಿಯಪ್ಪ ಬಿ. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಸೆಕ್ರೆಟರಿಯರಿಂದ ವಿವರಿಸೋಣಾದ ವಾರ್ಷಿಕ ವೃತ್ತಾಂತವನ್ನು ಮಂಜೂರು ಮಾಡಲಾಗಿ, ಅಗತ್ಯವಿರುವ ಕೆಲವು ನಿಬಂಧನೆಗಳನ್ನು ತಿದ್ದುಪಡಿ ಮಾಡುವಲ್ಲಿ ಸಂಸ್ಥಾನದ ರಿಜಿಸ್ಟ್ರಾರವರಿಗೆ ಬರಕೊಳ್ಳಬೇಕಾಗಿ ನಿರ್ಣಯಿಸಿರುವದಲ್ಲದೆ ಸಾವುಕಾರ ಮ. ರಾ. ರಾ. ಅತ್ತಾವರ ಸೋಮಪ್ಪನವರನ್ನು ಸಂಘದ ಪ್ರೆಸಿಡೆಂಟರಾಗಿ ನೇಮಿಸಲಾಯಿತು. ಅನಂತರ ಮಂಗಲಸ್ತೋತ್ರದಿಂದ ಶ್ರೀಕೃಷ್ಣನನ್ನು ಪ್ರಾರ್ಥಿಸಿ, ಪುಷ್ಪಪನ್ನೀರು ವಗೈರೆ ಸತ್ಕಾರಗಳೊಡನೆ ಸಭೆಯನ್ನು ಸತ್ಕರಿಸಿ ಸಭೆಯು ಮುಕ್ತಾಯವಾಯಿತು.

ಸಬ್ ಇನ್ಸ್‌ಪೆಕ್ಟರರಾದ ರಾ. ಅಮೃತರಾವ್ ಹೆಡ್‌ಕೊನ್ಸಟೇಬಲ್ ಮೋನಪ್ಪ ಮತ್ತು ಕೊನ್ಸಟೇಬಲ್ ಡೊಮೆಲ್ಲೊ ಈ ಮೂರು ಜನರ ಮೇಲೆ ದಾಖಲಾದ ಕ್ರಿಮಿನಲ್ ಮೊಕದ್ದಮೆಯ ತನಖಿಯು ಇಲ್ಲಿಯ ಟ್ರೆಜರಿ ಡಿಪ್ಯುಟಿ ಮೆಜಿಸ್ಟ್ರೇಟರಲ್ಲಿ ಇದೇ ತಿಂಗಳ ತಾ. ೨ರಲ್ಲಿ ಪ್ರಾರಂಭವಾಯಿತು. ಈ ಮೊಕದ್ದಮೆಯನ್ನು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಹುಕುಮಿನ ಪ್ರಕಾರ ಪಬ್ಲಿಕ್ ಪ್ರೊಸಿಕ್ಯೂಟರರಿಂದ ದಾಖಲು ಮಾಡೋಣಾಗಿರುವದು. ಡೊಮೆಲ್ಲೊ ಮತ್ತು ಮೋನಪ್ಪಾ ಇವರಿಬ್ಬರು ಸಬ್ ಇನ್ಸ್‌ಪೆಕ್ಟರ ಅಮೃತರಾಯರ ಪ್ರೇರಣೆಯಿಂದ ತಾ. ೧೫-೬-೧೭ರಲ್ಲು ಪುತ್ತಿ ಬಾಯಿಯೆಂಬ ನಾಯಕಸಾನಿಯನ್ನು ಹಿಡಿಸಿದರೆಂದೂ, ಕಳೆದ ಮೇ ತಿಂಗಳಲ್ಲಿ ಚುಡ್ಡೆಗಲ್ಲಿಯಲ್ಲಿರುವ ನಾರಾಯಣಾಚಾರಿ ಮನೆಯಿಂದ ಕಳವಾಗಿ ಹೋದ ಸೊತ್ತುಗಳನ್ನು ಪುತ್ತಿಬಾಯಿಯು ಅಡಗಿಸಿಟ್ಟದ್ದಾಗಿದೆಂಬುದು ಒಪ್ಪುವಂತೆಯೂ ಆ ಸೊತ್ತುಗಳನ್ನು ಪೋಲೀಸಿನವರ ಮತ್ತು ಮೊಕ್ತೇಸರರ ಮುಂದೆ ತಂದು ಹಾಜರುಪಡಿಸುವಂತೆಯೂ, ಇವಳನ್ನು ಹಿಡಿಸಿದ್ದೆಂಬುದಾಗಿಯೂ ಆರೋಪಣೆಗಳು ಈ ಮೊಕದ್ದಮೆಯಲ್ಲಿ ಇವೆ. ತಾ. ೨ನೇ ದಿನ ಮುದ್ದೈಕಡೆಯಿಂದ ಕೆಲವು ಸಾಕ್ಷಿಗಳ ವಿಚಾರಣೆ ಆಯಿತು. ಮುಂದಿನ ವಿಚಾರಣೆಯು ಈ ದಿನ ನಡಿಯುವದು.

ಮಿಸಿಸ್ ಬಿಸೆಂಟ್ ಮೊದಲಾದವರ ಪ್ರತಿಬಂಧಗಳ ನಂತರ ಇಲ್ಲಿಯ ಹೋಮ್‌ರೂಲ್ ಲೀಗಿಗೆ ಇನ್ನೂ ಕೆಲವು ವಕೀಲರೂ ವರ್ಗದಾರರೂ ಕೂಡಿರುವರಾಗಿ ತಿಳಿಯುತ್ತೇವೆ. ಕಾಸರಗೋಡು ಪುತ್ತೂರು ಮತ್ತು ಮುಲ್ಕಿ ಈ ಮೂರು ಕಡೆಗಳಲ್ಲಿ ಹೋಮ್‌ರೂಲ್ ಲೀಗುಗಳ ಶಾಖೆಗಳು ಸ್ಥಾಪಿಸೋಣಾಗಿವೆ. ಉಡ್ಪಿಯ ಕೆಲವು ಗೃಹಸ್ಥರು ಮಂಗಳೂರು ಹೋಮ್‌ರೂಲ್ ಲೀಗನ್ನು ಸೇರಿಕೊಂಡಿರುತ್ತಾರೆ.

ಸ್ವದೇಶಿ ಸ್ಟೋರನ್ನು ಇಲ್ಲಿ ಸ್ಥಾಪಿಸುವ ಬಗ್ಗೆ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಒಂದು ಸಭೆಯು ಸೇರಿತ್ತು. ಸದ್ಯಕ್ಕೆ ಕೆಲವು ಗೃಹಸ್ಥರು ಕೂಡಿಕೊಂಡು ರೂ. ೫೦೦ರ ಸ್ವದೇಶಿ ಸಾಮಗ್ರಿಗಳನ್ನು ತರಿಸಿ ಇವುಗಳ ಮಾರಾಟವನ್ನು ಇಲ್ಲಿಯ ವಕೀಲರಾಗಿರುವ ಮ. ರಾ. ಎಸ್. ಬಿ. ಭಿಡೆಯವರ ಸಂಬಂಧಿಗಳೊಬ್ಬರು ಭಿಡೆಯವರ ಮನೆಯಲ್ಲಿಯೆ ನಡಿಸಿ ನೋಡಿದ ನಂತರ ಸ್ಟೋರನ್ನು ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಗೆ ಅನುಸಾರವಾಗಿ ಅಥವಾ ಜೊಯಿಂಟ್ ಸ್ಟೋರ್ ಕಂಪೆನಿಗಳ ಸ್ಥಾಪನೆಗೆ ಅನುಗುಣವಾಗಿ ಸ್ಥಾಪಿಸಬಹುದೆಂತ ನಿಶ್ಚಯಿಸೋಣಾಗಿದೆ.

ವಕ್ಕಲುಗಳಿಂದ ಗೇಣಿಯು ಕಳೆದ ವರುಷದಲ್ಲಿ ಸರಿಯಾಗಿ ವಸೂಲಾದದ್ದೇ ಇಲ್ಲ. ವಕ್ಕಲುಗಳಿಗೆ ಕೂಳಿಗೆ ಬೇಕಾದಷ್ಟು ಭತ್ತವನ್ನು ಸಹ ಕೂಡಿಸಿಡಲು ಕಳೆದ ಕಾರ್ತಿ ಬೆಳೆಯಲ್ಲಿ ಆಸ್ಪದವಿರಲಿಲ್ಲ. ಕಾರ್ತಿಬೆಳೆಯು ನುಸಿಗಳ ಕಾಟದಿಂದ ಅಷ್ಟು ಹಾಳಾಗಿ ಹೋಗಿತ್ತು. ಈ ವರುಷದಲ್ಲಿಯೂ ಇವುಗಳ ಕಾಟವು ಕಳೆದ ವರುಷಕ್ಕಿಂತ ವಿಪರೀತವಾಗಿರುವದೆಂಬುದಾಗಿ ತಿಳಿಯುತ್ತೇವೆ. ಕೊಯಿಂಬುತ್ತೂರಿನಿಂದ ಕ್ರಿಮಿವಿಜ್ಞಾನಪಂಡಿತರು ಕೆಲವು ಸಮಯದ ಹಿಂದೆ ಇಲ್ಲಿ ಬಂದಿದ್ದರು. ಇವರಿಂದ ಈ ಕಾಟವನ್ನು ತಪ್ಪಿಸುವ ಬಗೆಯನ್ನು ಸೂಚಿಸಲಿಕ್ಕಾಗಲಿಲ್ಲವೆಂತ ತಿಳಿಯುತ್ತೇವೆ. ಒಂದೆರಡು ವರುಷಗಳಿಂದ ಈ ಬಾಧೆಯು ಈ ಜಿಲ್ಲೆಯನ್ನು ವಿಶೇಷ ನಷ್ಟಕ್ಕೆ ಗುರಿಪಡಿಸುತ್ತಿರುವದು. ಈ ಕ್ರಿಮಿಕಾಟವನ್ನು ತಪ್ಪಿಸುವ ವಿಷಯದಲ್ಲಿ ಇನ್ನಷ್ಟು ಹೆಚ್ಚಿನ ಪರಿಶ್ರಮವು ಬೇಕಾಗಿರುವದು. ಇಂಥಾ ಪರಿಶ್ರಮವನ್ನು ಸರಕಾರದವರು ಬೇಗನೆ ಕೈಕೊಳ್ಳುವದು ಅಗತ್ಯ.

ಮಂಗಳೂರಿನ ಗೌಡಸಾರಸ್ವತರ ಶ್ರೀವೆಂಕಟ್ರಮಣದೇವಸ್ಥಾನದವರು ಮತ್ತು ಪ್ರಕೃತ ಕಾಶೀಕ್ಷೇತ್ರದಲ್ಲಿರುವ ಕಾಶೀಮಠದ ಶ್ರೀಪಾದಂಗಳವರು ಈ ಸಂವತ್ಸರದ ಅಧಿಕಮಾಸವನ್ನು ಆಶ್ವೀಜದಲ್ಲಿ ಆಚರಿಸುವರೆಂಬುದಾಗಿ ತಿಳಿಯುತ್ತೇವೆ. ಇಲ್ಲಿಯ ಪಂಡಿತ ಮಂಗಳೂರು ನಾರಾಯಣಾಚಾರ್ಯರ ಅಭಿಪ್ರಾಯವು ಸಹ ಇದೇ ರೀತಿ ಇರುವದು. ಈ ಅಭಿಪ್ರಾಯಕ್ಕೆ ಬೇಕಾದ ಆಧಾರಗಳನ್ನು ಅಪೇಕ್ಷಿಸಿದವರಿಗೆ ನಾರಾಯಣಾಚಾರ್ಯರು ಕೊಡಲು ಸಿದ್ಧವಿರುತ್ತಾರೆ. "ಅಧಿಕಮಾಸದ ಸಿದ್ಧಾಂತ"ದ ಪತ್ರವ್ಯವಹಾರವು ಸ್ವದೇಶಾಭಿಮಾನಿಯಲ್ಲಿ ಉದ್ದುದ್ದ ಬೆಳೆದುಹೋಯಿತ್ತು, ಎರಡು ಪಕ್ಷದವರ ಹೇಳಿಕೆಗಳನ್ನು ವಾಚಕರ ಮುಂದೆ ಇರಿಸಿದೆವು. ಈ ಪ್ರಾಂತ್ಯದ ಜನರ ಆಚಾರವಿಚಾರಗಳ ನಿಯಾಮಕರಾದ ಮಠಾಧಿಪತಿಗಳು, ದೇವಸ್ಥಾನದವರು ಮೊದಲಾದವರು ಮುಂದೆ ಬಂದು ಪಂಚಾಂಗಕರ್ತರಲ್ಲಿ ಏಕವಾಕ್ಯತೆಯನ್ನು ಉಂಟುಮಾಡುವರೆಂಬುವ ಕೋರಿಕೆಯಿಂದ ಈ ಪತ್ರವ್ಯವಹಾರಗಳಿಗೆ ಸಾಕಷ್ಟು [illegible] ಕೊಟ್ಟೆವು. ಆದರೆ ಇಂಥಾ ಐಕ್ಯವು ನಮ್ಮವರಲ್ಲಿ [illegible] ವಾಗಿ ಕಾಣುತ್ತದೆ. ಇನ್ನು ಅಧಿಕಮಾಸದ ಈ ಅಧಿಕ ಪ್ರಸಂಗ ಸ್ವದೇಶಾಭಿಮಾನಿಯಲ್ಲಿ ಸ್ಥಳ ದೊರಕದು.

ಈ ದಿನ ಇಲ್ಲಿಯ ಎಲ್ಲಾ ಮುಖ್ಯರ ದೇವಸ್ಥಾನಗಳಲ್ಲಿ [illegible] ರೂ ಮಿತ್ರರಿಗೂ ಈ ಘೋರ ಯುದ್ಧದಲ್ಲಿ ಜಯವು [illegible] ದಾಗಿ ಪ್ರಾರ್ಥನೆ [illegible]

ಈ ವರ್ಷ [illegible] ಕಾರ್ತಿಕ [illegible] ಬಿದ್ದಿರುವದು.

[illegible] ಮೂಡ [illegible]

ಳಕ್ಕನೆ ಒಂದು ಸೋಂಕುರೋಗವು ಊರಲ್ಲಿ ಹಬ್ಬಿತೆಂದರೆ ಜನರ ಆರೋಗ್ಯಕ್ಕೆ ಹಾನಿಬರುತ್ತದೆಂದಾಗಲೀ ಕಂಡುಬಂದಾಗ ಮುಂಚಿನಂತೆಯೇ ನಿರೀಕ್ಷಣೆಯಿಂದ ಆ ಬಿಲ್ಲನ್ನು ನಡಿಸಿ ಮರು ಮೀಟಿಂಗಿಗೇ ಆ ಸಂಗತಿಯನ್ನು ಮುಂದೆ ಆ ಬವಣೆಯನ್ನು ಸೆಂಕ್ಷನ್ ಮಾಡಿಸುವುದು ವಾಡಿಕೆ. ಇದಕ್ಕೆ ಬದಲಾಗಿ ಮ್ಯುನಿಸಿಪಲ್ ಕೌನ್ಸಿಲರುಗಳು ಆಕ್ಷೇಪಿಸಿದರೂ ಅಥವಾ ಅದಕ್ಕಾಗಿಯೇ ನೇಮಕಪಟ್ಟ ಕಮಿಟಿಯವರು ಚೇರ್ಮನ್‌ನ ಅಥವಾ ಪ್ರೆಸಿಡೆಂಟರ ಅಭಿಪ್ರಾಯಕ್ಕೆ ಭಿನ್ನಾಭಿಪ್ರಾಯವನ್ನು ಕೊಟ್ಟಾಗ ಪ್ರಜಾಜನಗಳ ಕಂದಾಯದಿಂದ ಈ ಮ್ಯುನಿಸಿಪಾಲಿಟಿ ವಹಿವಾಟುಗಳು ನಡೆಯುತ್ತವೆ ಎಂಬುದನ್ನು ನೆನಪಿಗೆ ತಂದುಕೊಳ್ಳದೆ ಸ್ವೇಚ್ಛಾವರ್ತನವನ್ನು ಕೈಕೊಳ್ಳುವುದು ಪ್ರೆಸಿಡೆಂಟರ ಬಿರುದಾಗಿದೆ. ಇದೇ ವಿಷಯದಲ್ಲಿ ಮೀಟಿಂಗಿನಲ್ಲಿ ಚರ್ಚೆ ಬಂದಾಗ ಎರಡು ಪಕ್ಷಗಳು ಸಮಬಲವಾಗಲು, ಇತ್ಯರ್ಥದ ಓಟನ್ನು ಪ್ರಜಾಪ್ರತಿನಿಧಿಗಳ ಅಭಿಪ್ರಾಯಗಳಿಗೆ ವಿರೋಧವಾಗಿ ತನ್ನ ಪಕ್ಷ ಗೆಲ್ಲಬೇಕೆಂಬ ಆಸೆಯಿಂದ ಕೊಡುವ ಸಂದರ್ಭಗಳು ಅನೇಕವಾಗುತ್ತ ಈಚೀಚೆಗೆ ಮ್ಯುನಿಸಿಪಾಲಿಟಿಗಳಲ್ಲಿ ಇಲ್ಲದಸಲ್ಲದ ಕಲಹಗಳು ತೋರುತ್ತವೆ. ಅದರಲ್ಲಿಯೂ ಪ್ರೆಸಿಡೆಂಟರು ಅಥವಾ ಚೇರ್ಮನರು ಸರಕಾರದಿಂದ ನಿಯಮಿತರಾದವರೆಂದರೆ ಅವರು ಪ್ರಜಾಪ್ರತಿನಿಧಿಗಳ ಓಟುಗಳ ಸಹಾಯದಿಂದ ಆ ಪದವಿಯನ್ನು ಹೊಂದಲಿಲ್ಲವೆಂಬ ಒಂದೇ ಕಾರಣದಿಂದ ಪ್ರಜಾಪ್ರತಿನಿಧಿಗಳ ನ್ಯಾಯಯುಕ್ತವಾದ ಚರ್ಚೆಯನ್ನು ತೃಣೀಕರಿಸುವುದು ಮತ್ತಷ್ಟು ದುಃಖದ ವಿಷಯವಾಗಿದೆ. ನಾಮಿನೇಟೆಡ್‌ವರು ಮ್ಯುನಿಸಿಪಲ್ ಮೀಟಿಂಗಿನಲ್ಲಿ ತನ್ನ ಇತ್ಯರ್ಥದ ಓಟಿನಿಂದ ಗೆದ್ದು ಬಟ್ಟದ್ದರಲ್ಲಿಯೇ ತೃಪ್ತರಾಗಲಿಲ್ಲ. ಸ್ಪೆಶಲ್ ಇಂಜಿನಿಯರ್ ಆಫೀಸನ್ನು ಮ್ಯುನಿಸಿಪಲ್ ಆಫೀಸಿಗೋಸ್ಕರವಾಗಿಯೇ ಕಟ್ಟಿಸಿದ ದೊಡ್ಡ ಕಟ್ಟಡಕ್ಕೆ ವರ್ಗಾಯಿಸಬೇಕೆಂಬುದನ್ನು ಪುನಃ ಚರ್ಚಿಸುವುದಕ್ಕೋಸ್ಕರ ಸ್ಪೆಶಲ್ ಮೀಟಿಂಗ್ ಕರೆಯಬೇಕಾಗಿ ೧೦ ಮಂದಿ ಮೆಂಬರರ ಸಹಿಯುಳ್ಳ ಅರ್ಜಿ ಬರುವುದೆಂದು ಗೊತ್ತಿದ್ದರೂ ಪೂರ್ವಸ್ಥಳದಲ್ಲಿಯೇ ಆ ಸ್ಪೆಶಲ್ ಇಂಜಿನಿಯರ್ ಆಫೀಸನ್ನು ಇರಗೊಡಿಸುವಂತೆ ಮ್ಯುನಿಸಿಪಾಲಿಟಿಯವರ ಕೈಕಟ್ಟಿದ ಹಾಗೆ ಬಾಡಿಗೆ ಚೀಟನ್ನು ಪುನಃ ಬರೆಯಿಸಿದರಂತೆ. ಈ ಸಂದರ್ಭದಲ್ಲಿ ಸ್ಪೆಶಲ್ ಮೀಟಿಂಗಿನ ಅವಶ್ಯಕತೆಯನ್ನು ವಿವರಿಸುವುದ ಅಗತ್ಯ.

ಒಂದೊಂದು ಸಲ ಯಾಕೆ? ಅನೇಕ ಸಲ, ಚರ್ಚೆಯಾಗತಕ್ಕ ವಿಷಯಗಳ ಪಟ್ಟಿಯಲ್ಲಿ ಕಾಣಿಸುವ ವಿಷಯಗಳ ಸಮಯ ಸಾಲದಿದ್ದರೆ, ಅಥವಾ ಅನಿವಾರ್ಯ ಕಾರಣಗಳಿಂದಾಗಲಿ ಕೆಲವು ಮೆಂಬರರು ಗೈರುಹಾಜರಾಗಿದ್ದ ಒಂದು ಮೀಟಿಂಗಿನಲ್ಲಿ ಒಂದು ವಿಶೇಷ ವಿಷಯವು ಚರ್ಚೆ ಆದರೆ ಸಹಜವಾದ ಬಹುಮತವನ್ನು ನಿರ್ಧರಿಸಲಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಅದೇ ವಿಷಯವನ್ನು ಪುನಃ ಬೇರೆಯಾಗಿ ಒಂದು ಮೀಟಿಂಗಿನಲ್ಲಿ ಚರ್ಚಿಸಬೇಕೆಂದು ಮೆಂಬರರ ಸಂಖ್ಯೆಯಲ್ಲಿ ದಲವರು ಒಂದು ಸೂಚನಾಪತ್ರವನ್ನು ಪ್ರೆಸಿಡೆಂಟರಿಗೆ ಬರೆದಲ್ಲಿ ಅವರು ಈ ಚರ್ಚೆಗಾಗಿಯೇ ಒಂದು ಸ್ಪೆಶಲ್ ಮೀಟಿಂಗ್ ಕರೆಯಿಸಬೇಕೆಂದು ನಿಯಮವಿದೆ. ಆದರೆ ಇದಕ್ಕೆ ತಾರೀಕು ನಿಶ್ಚಯಿಸುವ ಅಧಿಕಾರವು ಪ್ರೆಸಿಡೆಂಟರಿಗೆ ಬಿಡಲ್ಪಟ್ಟಿದೆ.

ಇಂಥ ಸೂಚನಾಪತ್ರವು ಬಂದೊಡನೆ ಉಪಾಯಶಾಲಿಗಳಾದ ಪ್ರೆಸಿಡೆಂಟರು ಸ್ಪೆಶಲ್ ಮೀಟಿಂಗ್ ಇನ್ನೂ ಮೂರು ತಿಂಗಳ ನಂತರ ಜರುಗುವುದೆಂದು ಪ್ರಕಟಿಸಿದರು. ಅಷ್ಟು ದಿವಸದಲ್ಲಿ ಮೀಟಿಂಗ್ ಇಟ್ಟರೆ ಪ್ರೆಸಿಡೆಂಟರು ಮುಂದೆ ಮಾಡಿ ಹೋದ ಕಾರ್ಯವನ್ನು ನಿಲ್ಲಿಸಲಿಕ್ಕೆ ಸಾಧ್ಯವೇ ಇಲ್ಲ. ಇದಲ್ಲದೆ ವಿದ್ಯಾಸು ಟೌಂಹಾಲ್ ಪತ್ರಿಕೆಯನ್ನು ವಿಚಾರಿಸಿಲ್ಲ, ಮದ್ರಾಸು ಮ್ಯುನಿಸಿಪಾಲಿಟಿಯು ಹಾಸ್ಯಗಾರರ ಕಚೇರಿಯಲ್ಲ, ಮೆಂಬರರಿಗೆ ಈ ರೀತಿಯಾಗಿ ತೃಣೀಕರಿಸಿ ಮೇಲೂ ಅವಮಾನಕ್ಕೂ ಪರಿಹಾಸ್ಯಕ್ಕೂ ಗುರಿಪಡಿಸುವುದು ತಪ್ಪೆಂದು [illegible] ಹೇಳಿರುವರು.

ಇದರ ಸಹಜವಾಗಿಯೂ ಮ್ಯುನಿಸಿಪಾಲಿಟಿಗಳೂ, ಬೋರ್ಡುಗಳೂ ಈ ಜಿಲ್ಲೆಯ ಹಾಗಾದರ ಕೊಟಗಳೆಂಬ ಭಾವನೆ ಸರಕಾರಿ ನಿಯಮಿತ ಪ್ರೆಸಿಡೆಂಟರಲ್ಲಿಯೂ, ಅಥವಾ ಸರಕಾರಿ ಉದ್ಯೋಗಸ್ಥರಾಗಿದ್ದ ಮೆಂಬರರಿಂದ ಚುನಾಯಿಸಲ್ಪಟ್ಟವರಲ್ಲಿಯೂ ಇದೆಯೋ ಎಂಬ ಶಂಕೆಯು ನಮಗೆ ಇದೆ. ಪರದೆಯ ಹಿಂದೆ ನಿಂತಿರುವ ಸೂತ್ರಧಾರನು ಸೂತ್ರಗಳನ್ನು ಹಿಡಿದು ನಡಿಸುವುದು ಗೊತ್ತಾಗದ ಬೊಂಬೆಗಳ ಕುಣಿತ, ಬೊಂಬೆಗಳೆ ಮಾಡುತ್ತವೆ ಎಂದು ತಿಳಿಯುವುದು ಮೂರ್ಖತನವೇ. ತಮ್ಮ ಅಧಿಕಾರಗಳೇನು ಕರ್ತವ್ಯಗಳೇನು ಎಂದು ತಿಳಿಯಲಿಕ್ಕಾಗಿ ಕಾಲ ವಹಿಸದೆ ಇದ್ದರೂ ಅದರಲ್ಲಿಯೂ ಸಾರ್ವಜನಿಕ ಪ್ರಯೋಜನವನ್ನು ಉದ್ದೇಶಿಸಿ ಜಾಗ್ರತೆವಹಿಸದೆ ಮರೆತು ಕಿಂದಲ್ಲನ್ನು ಮಾಡುವವರು ಎಷ್ಟು ಮಂದಿ! ಎಂದು ಮೆಂಬರರ ಜಾತಕಪುಟ ಮಾಡಿದರೆ ಗೊತ್ತಾಗುವುದು. ಈ ಮೆಂಬರರಲ್ಲಿ ಬಹುಮಂದಿ ಗೊಂಬೆಯಾಟದ ಗೊಂಬೆಗಳಲ್ಲದೆ ಬೇರೇನೂ ಇಲ್ಲ; ಇದಕ್ಕೆ ಅವರಿಗೆ ನಾವು ದೂರುವುದೂ ಇಲ್ಲ. ಈ ಮೆಂಬರುಗಳಲ್ಲಿ ಹಲವರು ಹಲವು ಕಾರಣಗಳಿಂದ ಈ ಪದವಿಯನ್ನು ಹೊಂದಿರುವರು. ಸ್ವಾವಲಂಬನೆ, ಸ್ವಾರ್ಥತ್ಯಾಗ, ಇದೇ ಅನೇಕ ಮೆಂಬರರ ಧ್ಯೇಯಗಳಲ್ಲದೆ ವಾಕ್ಕಿ ಬೇರೆ ಇಲ್ಲ. ಇವು ಕೈಗೂಡಬೇಕಾದರೆ ಸಾಧನಗಳೇ ಇಲ್ಲ. ಮ್ಯುನಿಸಿಪಲ್ ಮತ್ತು ಲೋಕಲ್‌ಬೋರ್ಡುಗಳಲ್ಲಿ ಪರದೆಯ ಹಿಂದೆ ನಿಂತಿರುವ ಸೂತ್ರದಾರನು ಸ್ವಂತಕ್ಕೋಸ್ಕರ ಈ ಗೊಂಬೆಗಳು ಬಾಯಮಡಿಸುವುದು ಕೈಯಾಡಿಸಿದಂತೆ ಕುಣಿಯುವುದು. ಹೀಗಾಗಿ ಸರಿಯಾದ ಅಂಥ ಸಂಸ್ಥೆಗಳೇ ಬಹು ವಿರಳ. ಯಾವುದೊಂದು ಮೆಂಬರನಿಗೆ ಅಥವಾ ಅವನ ಜಾತಿಗೆ ಸಂಬಂಧಿಸಿದ ವಿಷಯವೇನಾದರೂ ಚರ್ಚೆಗೆ ಬಂದರೆ ಆಗ ಮೆಂಬರರ ಪಿತ್ಥಾಟ; ಬಾಯಿ ತುಂಬಾ ಚರ್ಚೆ; ಗುಲ್ಲು. ಸಾರ್ವಜನಿಕ ವಿಷಯವಾದರೆ 'ನನಗೆ ಯಾವ ಇಲ್ಲ'.

ಕೆಲವು ಬೋರ್ಡು ಅಥವಾ ಮ್ಯುನಿಸಿಪಾಲಿಟಿಗಳ ಮೆಂಬರರ ಹೆಸರುಗಳನ್ನು ನೋಡಿದರೆ ಕೆಲವುಗಳಲ್ಲಿ ಒಂದೇ ಜಾತಿಯವರು ಬಹುಮತ; ಕೆಲವುಗಳಲ್ಲಿ ಒಬ್ಬನೇ ಮೆಂಬರನು ೧೦, ೧೫ ೨೦ ವರ್ಷಗಳಿಂದಲೂ ಮೆಂಬರನಾಗಿ ಬರುವನು. ಅವನ ಢೀಕೆ ಅಥವಾ ವಾರ್ಡಿನಲ್ಲಿ ಅವನಿಗೆ ಎದುರಿಸುವವರೇ ಇಲ್ಲ. ಅವನು ಅನೇಕ ಸಲ ಮೀಟಿಂಗಿನಲ್ಲಿ ಮೌನಾವಸ್ಥೆಯನ್ನು ತಾಳಿರುವನು, ಅಥವಾ ಬೇರೆ ಒಬ್ಬಿಬ್ಬರು ಚರ್ಚಿಸುವಾಗ ಹಲ್ಲು [illegible] ಈ ರೀತಿಯ ಮೆಂಬರುಗಳು ಸರಕಾರದ ಕಡೆಯ ಚುನಾವಣೆಯಲ್ಲಿಯೂ ಅಪರೂಪವಲ್ಲ. ಯಾವ ವರೆಗೆ ಒಳಸೂತ್ರವು ಸರಿಯಾಗಿದೆಯೋ ಆ ವರೆಗೆ ಈ ಗೊಂಬೆಗೆ ಕುಣಿದು ಸಾಕಾಗುವುದೂ ಇಲ್ಲ.

ಮೆಂಬರರಲ್ಲಿ ಇನ್ನೊಂದು ವರ್ಗವೂ ಇದೆ. ಇವರು ಯಾವುದೊಂದು ಚರ್ಚೆಗೆ ಕೈಹಾಕದೆ ಕಾಲಕಾಲದ ಭತ್ಯೆಯನ್ನು ಸರಿಯಾಗಿ ಹೊಂದುವರು. ಈ ಭತ್ಯೆಯು ಸೂತ್ರಕ್ಕೆ ಒಪ್ಪಿಕೊಡುವಿಕೆಗೆ ಒಂದೊಂದು ಸಲ ಬೇಕಾಗುತ್ತದೆ. ಇಂಥವರೊಡನೆ "ನೀವು ಏಕೆ ಸುಮ್ಮನಿರಿ" ಎಂದು ಕೇಳಿದರೆ "ಸುಮ್ಮನೆ ನಾವು ಚರ್ಚಿಸಬೇಕಿಲ್ಲ. ಓದಿಹೇಳುವ ಮೊದಲೇ ಠರಾವು ಬರೆಯುತ್ತಾರೆ. ನಾವು ಬಾಯಿ ಎತ್ತಿ ಮಾತನಾಡಿದರೆ ಒಳಗಿನ ಸೂತ್ರಕ್ಕಾಗಲಿ ಹೊರಗಿನ ಬೊಂಬೆಗಳ ಪೈಕಿ ಒಬ್ಬಿಬ್ಬರು ಮುಖಂಡರಿಗಾಗಲಿ ನೋವಾಗುತ್ತದೆ." ಎಂದು ಸಮಾಧಾನ ಹೇಳುವರು. ಇಂಥವರು ಸಭೆಯಲ್ಲಿ ಮೆಂಬರರಾಗುವ ಅಗ್ರಹವೇಕೆ? ಇವರ ಮಾತಿಗೆ ಯಾರೂ ಕಿವಿಗೊಡುವುದಿಲ್ಲವಾದರೆ ಪ್ರಜಾಜನಗಳ ಪ್ರತಿನಿಧಿ ಎಂತ ಮೆಂಬರರ ಕುರ್ಚಿಯನ್ನು ಅಲಂಕರಿಸುವುದು ಯಾಕೆ?

ಇಂಥ ಗೊಂಬೆಯಾಟದ ಸೂತ್ರಗಳನ್ನು ಕಡಿದು ಈ ಆಟವನ್ನು ನಿಲ್ಲಿಸಿ ನರ[illegible] ಜನರಾದ ಸ್ಥಳೀಯ ರಾಜ್ಯಭಾರವನ್ನು ನಡೆಗೊಳಿಸಲಿಕ್ಕೆ ಅನುಕೂಲ[illegible] ಈ ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡ್ ಆಕ್ಟುಗಳನ್ನು ತಿದ್ದ[illegible] ಇದರಲ್ಲಿ ಬಿಲ್ಲುಗಳಾದವು ಹೇಗೆಗೇಗಿ ಬಲಗೊಳ್ಳು-ತ್ತದೆಯೋ ಹಾಗೆಯೇ ಸ್ಥಳೀಯ ರಾಜಭಾರದ ಕಾಂಕ್ಷೆಯೂ ಬಲಗೊಳ್ಳುತ್ತಲೇ ಇದೆ ಎಂಬುದು ಸರಕಾರದವರಿಗೆ ಈಚೀಚೆಗೆ ತಿಳಿಯದೆ ಹೋಗಿಲ್ಲ. ಆದ್ದರಿಂದ ಅವರು ಜನರ ವಾಸ್ತವಿಕವಾದ ಈ ಕಾಂಕ್ಷೆಯನ್ನು ತೃಪ್ತಿಸುವುದಕ್ಕೆ ಬೇಗನೇ ಏರ್ಪಾಡುಗಳನ್ನು ಮಾಡಿ ಈ ಗೊಂಬೆಗಳನ್ನು ಮೂಲೆಗೊತ್ತುವರೆಂದು ನಾವು ನಂಬುತ್ತೇವೆ.

ಮಂಜೇಶ್ವರದಲ್ಲಿ ಜರಗಿದ ಮದ್ಯಪಾನ ನಿಷೇಧಕ ಸಭೆಯು

ಕಳೆದ ಜುಲೈ ತಾ. ೨೭ರಲ್ಲಿ ಮಂಗಳೂರಿನ ಶ್ರೀ [illegible] ಸಮಾಜದವರು ಇಲ್ಲಿಗೆ ಬಂದು ಮಧ್ಯಾಹ್ನ ೩ ಘಂಟೆಗೆ ಒಂದು ಮಹಾ ಸಭೆಯನ್ನು ಜರಗಿಸಿದರು. ಈ ಸಭೆಗೆ ಮಂಜೇಶ್ವರದ ಸುತ್ತಲ ಜಾತಿಯ ಎಲ್ಲಾ ಗುರಿಕಾರರೂ ಅಲ್ಲದೆ ಸಮುಸ್ತರೂ ನೆರೆದುಬಂದಿದ್ದರಲ್ಲದೆ ಇತರ ಜಾತಿಯ ಗೃಹಸ್ಥರಲ್ಲನೇಕರೂ ಪ್ರೇಕ್ಷಕರಾಗಿ ಬಂದಿದ್ದರು. ಮಂಜೇಶ್ವರದ ಜಮೀನುದಾರರೂ ಬೋರ್ಡ್ ಮೆಂಬರರೂ ಆಗಿರುವ ಮಹಾರಾಜಶ್ರೀ ಎ. ಗೋವಿಂದ ಪೈಗಳವರು ಈ ಸಭೆಯಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಸಮಾಜದ ಉಪದೇಶಕರೊಬ್ಬರು ಮದ್ಯಪಾನದಿಂದ ಶರೀರಕ್ಕೆ ಅನೇಕ ಪ್ರಯೋಜನಗಳುಂಟೆಂದು ಜನರು ಹೇಳುವ ಕಾರಣಗಳು ಎಷ್ಟು ನಿರಾಧಾರವಾದುವೆಂದು ಪ್ರತ್ಯಕ್ಷ ಪ್ರಮಾಣಗಳಿಂದಲೇ ತೋರಿಸಿ ಮತ್ತು ಅದು ಶರೀರವನ್ನು ವಿವಿಧ ರೋಗಗಳಿಗೆ ಗುರಿಪಡಿಸಿ, ಬುದ್ಧಿ ಭ್ರಷ್ಟ, ಮಾನ, ಜ್ಞಾನ, ಮತ್ತು ಧನಹಾನಿಗಳುಂಟುಮಾಡುತ್ತವೆಂದೂ, ಜನನ್ನ ಹ್ಯಾಗೆ ವಿನಾಶವಾದರಿಂದ ಬ್ರಹ್ಮಸೋದರರವಾಗಿ ಅಭಿವೃದ್ಧಿಯ ದಾರಿಯು, ಸ್ವತಃ ಹ್ಯಾಗೆ ಕಷ್ಟಗಳೆ [illegible] ವಿವಿಧ ದೃಷ್ಟಾಂತಗಳ ಮೂಲಕ ತಿಳಿಸಿದ. ೨ ಘಂಟೆಯ ಕಾಲ ಭಾಷಣವನ್ನು ಮಾಡಿದರು. ಸಮಾಜದ ಸಂಗೀತ ಕಾರಿದವರು ನವನವದ ಮದ್ಯಪಾನ ನಿಷೇಧ ಪರವಾದ ಚಲೋ ಗಾಯನಗಳನ್ನು ಹಾಡಿ ಸಭಿಕರೆಲ್ಲರ ಮನಸ್ಸನ್ನಾಕರ್ಷಿಸಿದರು. ಅದರ ತರುವಾಯ ಕೆಲವು ಗುರಿಕಾರರು ಪ್ರತಿನಿಧಿಯಿಂದ ಬಿಟ್ಟು ವಾಕ್‌ಚಿತ್ರತನ, ಉಪನ್ಯಾಸಕರಿಗೆ ಮದ್ಯಪಾನದ ಅವಶ್ಯಕತೆಯ ಕುರಿತ ವಿವಿಧ ಪ್ರಶ್ನೆಗಳನ್ನು ಹಾಕಿ ಉತ್ತರಗಳನ್ನು ಎಬ್ಬಿಸಿದರು. ಇದಕ್ಕೆ ಉಪನ್ಯಾಸಕರು— ಇಂತಹ ಪ್ರಶ್ನೆಗಳಿಂದ ನಾವು ಮಾತಾಡದೆ ಬಿಟ್ಟ ಅನೇಕ ವಿಷಯಗಳು ಸಭಿಕರಿಗೆ ಇನ್ನಷ್ಟು ಹೆಚ್ಚಾಗಿ ತಿಳಿಯಲಿಕ್ಕೆ ಅನುಕೂಲವಾಯಿತೆಂದು— ವಾಕ್‌ಚಾತುರ್ಯದಿಂದ ಕುಶಲತೆಯಿಂದ, ಕೇಳಿದ ಪ್ರಶ್ನೆಗಳಿಗೆಲ್ಲ ಯುಕ್ತಿಯುಕ್ತವಾದ ಮತ್ತು ಸಪ್ರಮಾಣವಾದ ಉತ್ತರಗಳನ್ನಿತ್ತರು.

ತರುವಾಯ ಅಧ್ಯಕ್ಷರು ಭಾಷಣ ಮಾಡುತ್ತಾ ಗ್ರಾಮಕ್ಕೆ ಹೊಲಕರಲ್ಲಿನ ಮಹತ್ವ, ಪಂಚಾಯತ ಪದ್ಧತಿ, ವಿದ್ಯಾವರ್ಧನೆ, ಆತ್ಮೋದ್ಧಾರ, ದೇಶೋಪಕಾರ ಮೊದಲಾದ ವಿಷಯಗಳಲ್ಲಿ ಒಳ್ಳೇ ಬೋಧಪ್ರದವಾದ ಮಾತುಗಳನ್ನಾಡಿ, ಸಮಾಜದವರು ಉಂಟುಮಾಡುವ ಮದ್ಯಪಾನ ನಿಷೇಧ ಚಳವಳವು ಶ್ಲಾಘನೀಯವಾದುದೆಂದೂ ಅವರು ಹಾಡುವ ಪದಗಳು ಪತಿ ಕುಟುಂಬದ ಬಾಲಬಾಲಿಕೆಯರಲ್ಲಿಯೂ ಪ್ರಚಾರವಾಗುವಂತೆ ಮಾಡುವುದು ಒಳ್ಳೇದೆಂದೂ ಹೇಳಿದರು.

ಸಭಾಂತ್ಯದಲ್ಲಿ ಸುಮಾರು ೩೦ ಜನರು ಮುಂದೆ ಬಂದು ಪ್ರಮಾಣವನ್ನು ಮಾಡಿ, ತಾವು ಜೀವಾಂತ್ಯದ ವರೆಗೂ ಮದ್ಯಪಾನ ಮಾಡಲಿಕ್ಕಿಲ್ಲವೆಂದು ಶಪಥವನ್ನು ಮಾಡಿದರು. ಇವರ ಶಪಥವು ಉಜ್ಜೀವನಾರ್ಥವಾಗಿ ಗೋಸ್ಕರ, ಸಮಾಜದ ಒಂದು ಶಾಖೆಯನ್ನು ಒಂದು ಭವನ ಮುಂತಲಿಸ ಸ್ಥಾಪನೆ ಮಾಡುವುದಕ್ಕೋಸ್ಕರ ಸಮಾಜದ ಕಾರ್ಯನಿರ್ವಾಹಕ ಸಭಿಕರಲ್ಲಿಬ್ಬರಾದ, ರಾ| ಪೂವಪ್ಪ ಅಮಣ್ಣಯವರು ಕೆಲವು ಸಮಯ ಮಂಜೇಶ್ವರದಲ್ಲೇ ವಾಸಿಸುವರೆಂದು ನಿಶ್ಚಯ ಮಾಡಿದರು! ತರುವಾಯ ಮಂಜೇಶ್ವರ ಊರವರ ಕಡೆಯಿಂದ ರಾ| ಎಲ್ಲಪ್ಪ ಗುರಿಕಾರರು ಸಮಾಜದವರ ಉಪಕಾರಸ್ಮರಣೆಮಾಡಿ, ಸಮಾಜದ ಕಾರ್ಯಸಾಧನೆಗಾಗಿ ತಾವೂ ತಮ್ಮ ಬಲವಾಯು, ದೈವದ ಫಲದಾರದಿಂದ ಯಥಾಶಕ್ತಿ ಪ್ರಯತ್ನಮಾಡುವದನ್ನು ಸಂತೋಷದಿಂದ ಕಳುಹಿಸುವರೆಂದೂ ವಾಗ್ದಾನ ಮಾಡಿದರು.

ಪ್ರೇಕ್ಷಕ.

ಪತ್ರವ್ಯವಹಾರ.

ಅಧಿಕ ಮಾಸದ ಸಿದ್ಧಾಂತವು.

ವಾಚಕ ಮಹಾಶಯರೇ,

ಈ ಸಲ— ಸೂರ್ಯಸಿದ್ಧಾಂತ ಪ್ರಕಾರ ಕನ್ಯಾ ಸಂಕ್ರಮಣವು ೫೯-೯ ಆದ ತರುವಾಯ ೬೯ ಅಧಿಕವು ಭಾದ್ರಪದ ಆಗುವದೋ ಎಂಬ ವಿಚಾರವು ಮಾಡಬೇಕಾದದ್ದು.

ಸಿದ್ಧಾಂತ ಗ್ರಂಥಗಳಲ್ಲಿ ನಿತ್ಯ ಪಂಚಾಂಗ ಗಣಿತದ ಕ್ರಮವು ಇರುವದಿಲ್ಲ. ಹ್ಯಾಗೂ ಮಾಡಬಹುದೆಂದು ಹೇಳಿದರೆ— ಒಂದೇ ಒಂದು ತಿಥಿಯನ್ನು ಸೂಕ್ಷ್ಮವಾಗಿ ಗುಣಿಸಿ ನೋಡಬೇಕಾದರೆ ಎಂತಹ ವಿದ್ವಾಂಸನಾಗಿದ್ದರೂ ಒಂದೆರಡು ದಿವಸಗಳು ಬೇಕಾಗುವದು. ಆದ್ದರಿಂದ ಇಡೀ ವರ್ಷದ ಪಂಚಾಂಗ ಗುಣಿಸಲಿಕ್ಕೆ ಯಾರಿಂದ ಸಾಧ್ಯ? ಆದಾಕಾರಣದಿಂದಲೇ ಪ್ರಾಚೀನ ಗಣಕರು ಸುಲಭವಾಗಿ ನಿತ್ಯಪಂಚಾಂಗ ಗುಣಿಸುವದಕ್ಕೋಸ್ಕರ ಗ್ರಹಲಾಘವ, ಮಕರಂದ, ಕರಣಕಲ್ಪಲತಾ ಇವೇ ಮೊದಲಾದ ಅನೇಕ ಸಣ್ಣ ಸಣ್ಣ ಗ್ರಂಥಗಳನ್ನು ರಚಿಸಿಟ್ಟಿರುವರು. ಈ ದೇಶದ ಪಂಚಾಂಗಕರ್ತರೆಲ್ಲರೂ ಪರಹಿತ ವಾಕ್ಯಕರಣವೆಂಬ ಗಣಿತ ಗ್ರಂಥದಿಂದ ಗುಣಿಸುತ್ತಾ ಬರುತ್ತಾರೆ. ಈ ಗಣಿತವು ಈಗ ಸ್ಥೂಲವಾಗಿ ಸ್ಥೂಲವಾಗಿ ಹೋದರೂ ಹೊಸ ಸಂಸ್ಕಾರಗಳಿಂದ ಸಂಸ್ಕರಿಸದೆ ಪೂರ್ವ ಪದ್ಧತಿ ಎಂದು ಹಟಹಿಡಿದು ಮುಂಚಿನಂತೆ ಗುಣಿಸುತ್ತಾ ಬರುತ್ತಾರೆ. ಈ ಸ್ಥೂಲಗಣಿತದಿಂದಲೇ ಗ್ರಹಣಕಾಲದಲ್ಲಿ [illegible] ಒಬ್ಬರು ತಮ್ಮ ಪಂಚಾಂಗದಲ್ಲಿ ಬರೆದು ಪ್ರಕಟಿಸಿರುವ ಪ್ರಕಾರ ಈ ಇಡೀ ಭರತಖಂಡದಲ್ಲಿರುವ ಯಾವ ದೇಶದಲ್ಲಿಯಾದರೂ ಈ ಗ್ರಹಣವು ಗೋಚರವಾಗಲಿಲ್ಲ. ಈ ಸಂಗತಿಯು ವಾಚಕರೆಲ್ಲರಿಗೂ ಮರೆತುಹೋಗಲಾರದು. "ವರಹಿತರೀತ್ಯಾ" "ಆರ್ಯರೀತ್ಯಾ" ಎಂದು ಬರೆದಿರುವ ಪಂಚಾಂಗಗಳು ಗುಣಿಸುವದು ಸಹಾ ಇದೇ ಗ್ರಂಥದ ಆಧಾರದಿಂದಾಗಿರುವದು. ನಾವಾದರೂ ವೇಧಶಾಲೆಗಳಿಂದ ಪ್ರಕಟಿಸಿರುವ ಗ್ರಹಗಳ ವೇಧಗಳನ್ನು ತರಿಸಿ ಅದೇ ಗಣಿತಕ್ಕೆ ಸೂಕ್ಷ್ಮವಾಗಿ ಸಂಸ್ಕರಿಸಿಕೊಂಡು ನಿತ್ಯ ಪಂಚಾಂಗವನ್ನು ಗುಣಿಸುತ್ತೇವೆ. ವ್ರತಾದಿಗಳ ವಿಷಯದಲ್ಲಿ ಸಂದೇಹ ಉಂಟಾದರೆ ಮಾತ್ರ ಸಿದ್ಧಾಂತ ಗಣಿತ ಪ್ರಕಾರ ಗುಣಿಸಿ ಬರೆಯುತ್ತೇವೆ. ಸ್ಫುಟಕನ್ಯಾ ಸಂಕ್ರಮಣ ೫೯-೯ ಎಂದು ಬರೆದದ್ದು ಇದೇ ಗಣಿತದಿಂದ ಗುಣಿಸಿ ಬರೆದ್ದಾಗಿರುವದು. ಪುರಾತನವಾದ ಧಂಗಾರಕ್ಕೆ ನಾವು ಸ್ಪಷ್ಟಪಡಿಸದ ವನ್ನು ಕೊಟ್ಟಿರುವಂಥಾದ್ದು ಈ ಶಾಸ್ತ್ರಿಯವರ ವಿಚಾರಕ್ಕೆ ತಿಳಿದುಬಾರದೆ ಇರುವದರಿಂದ ಈ ಶಾಸ್ತ್ರಿಯವರಿಗೆ ಗಲಿಬಿಲಿಯಾದಂತೆ ತೋರುತ್ತದೆ ಎಂದು ಕಂಡುಬಂತು.

ಈ ಶಾಸ್ತ್ರಿಗಳೇ "ಸೂರ್ಯಸಿದ್ಧಾಂತಾನುಸಾರವಾದ ಕರಣ ಗ್ರಂಥಗಳಿಂದ ಕನ್ಯಾ ಸಂಕ್ರಮಣವನ್ನು, ಭಾದ್ರಪದ ಬಹುಳ ಅಮಾವಾಸ್ಯೆಯನ್ನು ಗುಣಿಸಿದರೆ ಭಾದ್ರಪದವೇ ಸಂಕ್ರಾಂತಿ ರಹಿತವಾದ (ಅಧಿಕ) ಮಾಸವಾಗುತ್ತೆ" ಎಂದು ಜುಲೈ ತಾ. ೧೯ನೇ ಸ್ವದೇಶಾಭಿಮಾನಿಯಲ್ಲಿ ಇವರಿಂದ ಬರೆದಿರುವ ಪತ್ರವ್ಯವಹಾರದಲ್ಲಿ ಒಪ್ಪುತ್ತಲ್ಲವೇ? ಆದ್ದರಿಂದ ಈ ಶಾಸ್ತ್ರಿಗಳಿಗೆ [illegible] [illegible].

ಉಡುಪಿನ ಉಡುಪರ ಪಂಚಾಂಗದಲ್ಲಿಯೂ ಘಟಿ ೩೬ರಲ್ಲಿ "ಸೂರ್ಯಸಿದ್ಧಾಂತರೀತ್ಯಾ ಕನ್ಯಾ ಸಂಕ್ರಮಣ ೩೦, ಆ ದಿನ ಅಮಾವಾಸ್ಯೆ ಘಟಿ ೨೦, ಅಮಾವಾಸ್ಯೆ ಕಳೆದು ಸಂಕ್ರಮಣ ಮುಹೂರ್ತವಾದ್ದರಿಂದ ಭಾದ್ರಪದವು ಅಧಿಕವಾಗುತ್ತೆ. ಸೂರ್ಯಸಿದ್ಧಾಂತರೀತ್ಯಾ ಸಮಸ್ತ ಕರ್ಮವನ್ನು ಆಚರಿಸುತ್ತಾ ಬಂದವರು ಭಾದ್ರಪದ ಅಧಿಕಮಾಸ ಆಚರಿಸಬಹುದೆಂತಲೂ, ಅನಂತರ ಘಟಿ ೩೭ರಲ್ಲಿ ಬ್ರಹ್ಮಸಿದ್ಧಾಂತರೀತ್ಯಾ ಸಹ ಭಾದ್ರಪದವೇ ಅಧಿಕಮಾಸ, ಆದ್ದರಿಂದ ನಿಜ ಭಾದ್ರಪದದಲ್ಲಿ ಮಹಾಲಯ ಶ್ರಾದ್ಧಗಳನ್ನು ಮಾಡಬೇಕೆಂತಲೂ, ಮತ್ತು ಕಡಿಸ್ಥಳದ ಸಮಸ್ತ ಕರ್ಮಣಾಂ ನಿಶ್ಚಯಾರ್ಥಂ ಸೂರ್ಯಸಿದ್ಧಾಂತ ಪಂಚಾಂಗಂ ಎಂದು ಬರೆದಲ್ಲಿ "ಅಧಿಕಭಾದ್ರಪದ ನಿಜಭಾದ್ರಪದ" ಎಂದು ಇದರ ಶಿರೋಭಾಗದಲ್ಲಿ ಪ್ರಕಟಿಸಿರುವದನ್ನೂ ಸಹ ನೋಡಿದ್ದಲ್ಲಿ ಕನ್ಯಾಸಂಕ್ರಮಣ ೫೯-೯ ನಾವು ಬರೆದದ್ದು ಯಾವ ಅನುಮಾನಪಡತಕ್ಕ ಕಾರಣವೇ ಇಲ್ಲ. ಆದ್ದರಿಂದ ಇವರ ಅಭಿಪ್ರಾಯದಿಂದ ಕೂಡಾ ಅಧಿಕ ಭಾದ್ರಪದವೇ ಆಗುವದು.

ಇವಲ್ಲದೆ ಮುಂಬಯಿ, ಪೂನಾ, ಮಥುರಾ, ಆಗ್ರಾ, ಗುಜರಾತು, ಕಾಶಿ, ಮದರಾಸು, ಬೆಂಗಳೂರು, ಮೈಸೂರು, ಬಳ್ಳಾರಿ ಈ ಮೊದಲಾದ ದೇಶಗಳಲ್ಲಿ ಅಧಿಕ ಭಾದ್ರಪದವೆಂದು ಪ್ರಕಟಿಸಲ್ಪಟ್ಟಿರುವ ಪ್ರಸಿದ್ಧ ಪಂಚಾಂಗಗಳನ್ನು ಹತ್ತರ ತೈಂತಲೂ ಎಷ್ಟೋ ಜೋತ್ಯುಷರುಗಳನ್ನು ನೋಡಬೇಕೆಂಬುವವರಿಗೆ ತೋರಿಸಲು ಅಕ್ಷೇಪವಿರುವದಿಲ್ಲ.

ಸೂರ್ಯಚಂದ್ರ ಗ್ರಹಣಗಳಂತೆ ಅಧಿಕಮಾಸ, ಗಣಿತ ಚತುರ್ಥಿ, ಸಂಕ್ರಮಣ ಇವೇ ಮೊದಲಾದವುಗಳು ಕಣ್ಣಿಗೆ ಪ್ರತ್ಯಕ್ಷ ಕಾಣಬಾರದ ವಿಷಯಗಳಾಗಿರುವದರಿಂದ ಇಂತಹ ಸಂಗತಿಗಳಲ್ಲಿ ಮಾತ್ರ ಇಂಥವರು ಜಾತಿ, ಮತ, ಮಠ, ಸಾಂಪ್ರದಾಯ ಈ ಮೊದಲಾದವುಗಳನ್ನು ಶಾಸ್ತ್ರದ ಸರಿಚಿತಿ ಇಲ್ಲದ ಜನರಿಗೆ ತೋರಿಸಿ, ಹೊಟ್ಟೆ ಪಾಡಕ್ಕೆ ಬಂದ, ಲೋಕದಲ್ಲಿ ಅವ್ಯವಸ್ಥೆಯನ್ನುಂಟುಮಾಡಿಸುವದನ್ನು ನಾವು ಈ ಮೊದಲೇ ತಿಳಿಸಿದವರಾಗಿ "ಗ್ರಹಣ ಅಧಿಕಮಾಸ, ವ್ರತಗಳು, ಮುಹೂರ್ತಗಳ ವಗೈರೆ ನಿಶ್ಚಯಿಸಲು ತಿಳಿಯದೆ ತಿಥಿ ಪಂಚಾಂಗವನ್ನು ಗುಣಿಸಲು ತಿಳಿದ ಮಾತ್ರವೇ ಪಂಚಾಂಗವನ್ನು ಮಾಡಿಸಿ ಜನಾಂಗಕ್ಕೆ ಉಪದ್ರವವನ್ನೀಯುವದು ಬಹು ಶೋಚನೀಯವಾದ ಅಂಶವೆಂದು" ನಮ್ಮ ಪಂಚಾಂಗದಲ್ಲಿ ಬರೆದದ್ದು ಈ ಶಾಸ್ತ್ರಿಗಳು ಅಧಿಕ ವಚನವೆಂದ ಹೇಳುವದು ಸರಿಯಲ್ಲ. ಯಾಕೆಂದರೆ ಮೇಲೆ ಬರೆದಿರುವ ಸ್ಮೃತಿಗಳನ್ನು ಹುಡುಕಿ ನೋಡದೆ, ಮೂಲ ಸೂರ್ಯಸಿದ್ಧಾಂತ ಪ್ರಕಾರ ಗುಣಿಸದೆ "ಕರಣಾನುಸಾರದಿಂದ ಗುಣಿಸಿ, ನಾವು ಬರೆದ ಸಂಕ್ರಮಣವು ಅಧಿಕವು ತಪ್ಪೆಂದು ಲೋಕದಲ್ಲಿ ಯಾವ ಧೈರ್ಯದಿಂದ ಈ ಶಾಸ್ತ್ರಿಗಳು ಪ್ರಕಟಿಸಿದರು? ಇಂತಹ ಇವರ ಪಿಶಾಚತಿಯಿಂದ ಗಣಿತ ಚತುರ್ಥಿ ಅನಂತವ್ರತ ಈ ಮೊದಲಾದ ನಿತ್ಯನೈಮಿತ್ತಿಕ ಕರ್ಮಾನುಷ್ಠಾನ ವಿಷಯದಲ್ಲಿ ಲೋಕದಲ್ಲಿ ಯಾವ ತರದ ಅವ್ಯವಸ್ಥೆಯುಂಟಾದೀತು? ಈ ಕಾರಣದಿಂದಲೇ ನಾವು ಬರೆದದ್ದು; ಅದೆಲ್ಲಾ ನಿಜವಾಗಿರುವದ, ಎಂದೂ ಅತಿಶಯೋಕ್ತಿ ಆಗಲಾರದು.

ವಾಚಕಮಹಾಶಯರೇ!

ಗಣಿತ ಶಾಸ್ತ್ರದಿಂದಲೂ, ಸ್ಮೃತಿವಚನಗಳಿಂದಲೂ, ಪಂಚಾಂಗಗಳ ಬಹುಪಕ್ಷದಿಂದಲೂ ಅಧಿಕವು ಭಾದ್ರಪದವೇ ಆಗಿರುವದರಿಂದ ಶಾಸ್ತ್ರಪ್ರಕಾರವೇ ಸಮಸ್ತ ಕರ್ಮಗಳನ್ನು ಆಚರಿಸಬೇಕೆಂದು ಮನಸ್ಸುಳ್ಳವರು ಅಧಿಕವು ಭಾದ್ರಪದವನ್ನು ಆಚರಿಸಿಕೊಂಡು, ನಿಜಭಾದ್ರಪದ ಮಾಸದಲ್ಲಿ ಗಣೇಶಾದಿ ಸಮಸ್ತ ವ್ರತಗಳನ್ನು ಆಚರಿಸುವರೆಂದು ನಾವು ನಂಬುತ್ತೇವೆ.

ಪಿಂಗಳ ಶ್ರಾವಣ ಶು. ೩ / ಉದ್ಯಾವರ ನಾರಾಯಣಾಚಾರ್ಯರ,
ಮಂಗಳೂರು, ತಾ. 2-7-17.)

"ಸೌರ ಋಗುಪಾಕರ್ಮ ವಿಚಾರ"

ವಾಚಕ ಮಹಾಶಯರೇ,

ತಾ. ೨೭—೭—೧೭ನೇ ಸ್ವದೇಶಾಭಿಮಾನಿಯಲ್ಲಿ ಸೌರ ಋಗುಪಾಕರ್ಮವನ್ನು ಚತುರ್ಥಿವಿದ್ಧದ್ದು ಪಂಚಮಿ ದಿನವೇ ಮಾಡಬೇಕೆಂದು ಅರ್ಥವನ್ನು ಪ್ರಚಾರಪಡಿಸಿರುವ ಧರ್ಮಾಭಿಲಾಷಿಯು ಹೆಸರಿಗೆ ಅದರಲ್ಲಿ ಒಂದು ಅಕಾರವನ್ನು ಸೇರಿಸಬೇಕು. ಯಾಕೆಂದರೆ, ಉಪಾಕರ್ಮ ವಿಷಯ— ಅಶ್ವಲಾಯನ ಗೃಹ್ಯಸೂತ್ರ— ಅಥಾತೋಧ್ಯಾಯೋಪಾಕರಣ ಮೋಷಧೀನಾಂಪ್ರಾದುರ್ಭಾವೇ ಶ್ರವಣೇನ ಶ್ರಾವಣಸ್ಯ ಪಂಚಮ್ಯಾಂ ಹಸ್ತೇನವಾ— ಎಂಬದರಿಂದ ಋಗುಪಾಕರ್ಮಕ್ಕೆ ಶ್ರಾವಣಮಾಸದ ಶ್ರವಣ ಮುಖ್ಯ. ಅದು ಉತ್ತರಾಷಾಢವಿದ್ಧ ಆಗಿ ಘಟಿಕಾದ್ವಯ ನ್ಯೂನವಾಗಿದ್ದರೆ ಅದೇ ಶುದ್ಧ ಪಂಚಮಿ ಮುಖ್ಯ. ಅದು ಸಹಾ ಪೂರ್ವ ದಿನ ಚತುರ್ಥಿವಿದ್ಧ ಪರದಿನ ಮುಹೂರ್ತದ್ವಯ ನ್ಯೂನವಾಗಿದ್ದರೆ, ಹಸ್ತನಕ್ಷತ್ರ ದಿನ ಮಾಡಬೇಕು. ಈ ವರುಷ ಶ್ರಾವಣವು ಕರ್ಕಟ ಯುಕ್ತವಾದ್ದರಿಂದಲೂ ಭಾದ್ರಪದ ಶ್ರವಣವು ಪೂರ್ವ ದಿನ ಉತ್ತರಾಷಾಢವಿದ್ಧವಾಗಿ ಪರದಿನ ಶ್ರವಣವಿಲ್ಲವಾದ್ದರಿಂದ ಪಂಚಮಿ ಮುಖ್ಯವಾಯಿತು— ಇಲ್ಲಿ ಧರ್ಮಾಭಿಲಾಷಿಯು ಮೂರು ಮುಹೂರ್ತ ಇರುವ ಪಂಚಮಿಯನ್ನ ಬಿಟ್ಟು, ಸಾಮಾನ್ಯ ತಿಥಿ ನಿರ್ಣಯ ಪಂಚಮಿ ವಿಚಾರದಲ್ಲಿ ಹೇಳುವ ಪ್ರಮಾಣಗಳನ್ನು ಕೇವಲ ಪೂರ್ವ ವಿಧ್ವವರ್ಜ್ಯವಾದ ಉಪಾಕರ್ಮ ವಿಷಯದಲ್ಲಿ ಉಪಯೋಗಿಸಿದ್ದು ೧ನೇ ಅಜ್ಞತ್ವ. ಮುಹೂರ್ತತ್ರಯವಿರುವ ಪಂಚಮಿಯೂ, ಷಷ್ಠಿವಿದ್ಧ ದುಷ್ಟವಾಗುತ್ತದೆಂದು ಆರೋಪಿಸಿಕೊಂಡದ್ದು ೨ನೇ ಅಜ್ಞತ್ವ. ತದ್ವಿಷಯೇ ಕೃಷ್ಣಾಚಾರ್ಯ ಸ್ಮೃತಿವಚನಂ— ಪಕ್ಷದ್ವಯೇಪಿ ತಿಥಯೋ ತಿಥಿಂ, ಪೂರ್ವಾಂ ತಥೋತ್ತರಾಂ । ತ್ರಿಭಿರ್ಮುಹೂರ್ತೈರ್ವರ್ಧಂತಿ ಸಾಮಾನ್ಯೋಯಂ ವಿಧಿಸ್ಮೃತಃ । ತಥಾಹೇಮಾದ್ರಿಃ ಉದಿತೇದೈವತಂ ಭಾನೌಪಿತ್ರ್ಯಂಚಾಸ್ತಮಿತೇರವೌ । ದ್ವಿಮುಹೂರ್ತಂ ತ್ರಿರಹ್ನಸ್ತು ಸಾ ತಿಥಿರ್ಹವ್ಯಕವ್ಯಯೋಃ । ತಥಾಚ ಪಠ್ಯೋಕ್ತಿಃ । ತ್ರಿಮುಹೂರ್ತಾಪಿ ಕರ್ತವ್ಯಾ ಯಾ ತಿಥಿರ್ವೃದ್ಧಿಗಾಮಿನೀ । ತೆಂಚಪ್ಪತೋಃ ಪರಾಸಸ್ನಾನಾ ದಾದ್ವಿಮುಹೂರ್ತಿಕಯಾ ಭವೇತ್ । ಉದಯೇಸಾತಿಥಿಗ್ರಾಹ್ಯಾ ವಿಪರೀತಾತು ಪೈತೃಕೇ । ಅಶ್ವಲಾಯನಃ ಉದಯಸ್ಥಾತಿಥಿರ್ಯಾಹಿತ್ರಿ ಮುಹೂರ್ತಾತು ಸಾತಿಥಿಃ । ವೃತಕರ್ಮಣಿಕಸ್ತಾತು ಸ್ನಾನದಾನಜಪಾದಿಷು । ಇನ್ನು ಅನೇಕ ಪ್ರಮಾಣಗಳು ಇರುವದರಿಂದ ಇಲ್ಲಿ ಬೇಧಾತ್ರಸಕ್ತಿಗೆಯೇ ಅವಕಾಶವಿಲ್ಲವಾದ್ದರಿಂದ ಸತಿಕಷ್ಟ ಚಿತ್ರಂಕರ್ಮವೆಂಬಂತೆ ಧರ್ಮಾಭಿಲಾಷಿಯು ಬರೆದಿರುವ ಪ್ರಮಾಣಗಳು ನಿರರ್ಥಕಗಳಾದವು ಮತ್ತು ಮುಹೂರ್ತದ್ವಿತಯಂ ಪಾಪಿಷ್ಟಾ ಶರ್ವಾಣಿಯಾಂಗಳೆ । ಉಪಾಕರ್ಮ ಪ್ರಕುರ್ವಂತಿಋಗ್ವಿಜಃ ಸಾಮಗಾಃ ಶ್ರವಾತ್ । ಮುಖ್ಯಧಿಷ್ಣ್ಯಾ ಸಂಯುತಾ ಕ್ಷ್ಯೇತಾ ಪೂರ್ಣಿಮಾ ಪ್ರತಿಪದ್ಯುತಾ । ಉಪಾಕರ್ಮಣಿ ಕಸ್ತಾಸ್ಯಾ ದ್ವಿತೀಯೈರ್ಕ್ಷ್ಯಸಂಯುತಾ । ಉಪಾಕರ್ಮಣಿ ಚೋತ್ಸರ್ಗೇ ಪೂರ್ವವಿದ್ಧಾಂವಿವರ್ಜಯೇತ್ । ಇತ್ಯಾದಿ ಪ್ರಮಾಣಗಳಿಂದ ತಿಥಿನಕ್ಷತ್ರಗಳು ೨ ಮುಹೂರ್ತವಿದ್ಧರಹ ಆದೇ. ಶಿವಸವೇ ಉಪಾಕರ್ಮ ಮಾಡಬೇಕೆಂತ ಖಂಡಿತ ಇರುವದರಿಂದ ಉಭಯವ್ಯಾಪಿತವಾಗಿ ತ್ರಿಮುಹೂರ್ತ ಪರಿಯಂತವಿರುವ ಪಂಚಮಿ ಗುರುವಾರ ದಿವಸವೇ ಉಪಾಕರ್ಮ ಮಾಡತಕ್ಕದ್ದು. ಶಾಸ್ತ್ರವಿಹಿತವು— ಪಕ್ಷಪಾತಿಯಾದ ಧರ್ಮಾಭಿಲಾಷಿಯ ಅಧರ್ಮಬೋಧನೆಯನ್ನು ಅವಲಂಬಿಸಿ ಮೋಸಹೋಗಬೇಡಿರಿ..

ಇಂತಿ ಸದ್ಧರ್ಮಾಭಿಲಾಷಿಯಾದ,

[illegible]

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಕಪಿಪಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಕ್ಷಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಗಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೪ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದಕ್ಕೆ ಸಾಟಿಯಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis ಉಪದಂಶ (ಗರಮಿ)ಯಿಂದ ಮೈಮೇಲೆ ಉಬ್ಬುವ ಹಪ್ಪೆಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸನಿಂದ ಮೂಗಿನ ಹೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯು ಕೊಳೆದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳು ಉರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ಅಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ್ ಕಂಪೆನಿ,
ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ಸಿದ್ಧವಾದ ಚಿಕಿತ್ಸೆಯು ಇಲ್ಲ. ಡಬ್ಬಿ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿದೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನನ್ನ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟ್‌ರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟ್ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಯಾವ ವೇಳೆಗೂ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅಲ್ಪ ಕಾಲದಲ್ಲಿ ವಾಸಿಮಾಡುವಂತೆ ಸೂಚಿಸಿರುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 6—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ [illegible] ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ಎ. ಇನ್‌ಸ್ಟಿಟ್ಯೂಟ್ ಆಫ್ [illegible] ಎಲ್. ಆಫ್ ದಿ ಸ್ಕೂಲ್ ಇನ್‌ಸ್ಟಿಟ್ಯೂಟ್, ಲಂಡನ್ [illegible], ಎಗ್ಮೋರ್ ನಂ. 2, [illegible] ಅವರು ಬರೆದಿರುವುದು: ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ [illegible], ಅಜೀರ್ಣ, ಮಲಬದ್ಧತೆ, ಹಲ್ಲಿನ ನೋವು, ಹೊಟ್ಟೆನೋವು, [illegible] ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. [illegible]

ಮ॥ ರಾ॥ [illegible] ಎಸ್. [illegible] ಸರ್ಜನ್, ಮತ್ತು [illegible], ಮೈಸೂರು ಗವರ್ನಮೆಂಟ್ ಅವರು ಬರೆದಿರುವುದು: ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. [illegible]

[illegible] ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. [illegible]

ವಿಳಾಸ:— ಶ್ರೀ [illegible] ವೈದ್ಯಶಾಲಾ, ಮೈಸೂರು.

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ ಕೆಲವು ಔಷಧಗಳು.

ಇಕ್ಲಿಪ್ಸ್ ಡ್ರಾಪ್ಸ್ ಸೇವನೆಯಿಂದ ಹಲವು ಬಗೆಯ ರೋಗಿಗಳು ಚೇತರಿಸಿಕೊಂಡಿದ್ದಾರೆಂತ ಸರ್ಟಿಫಿಕೇಟುಗಳು ಬರುತ್ತಿದ್ದಾರೆ.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗವು ಹತ್ತಿಕೊಳ್ಳದು.

ಕ್ರಯ 50 ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-6-0 ವಿ. ಪಿ. ಬೇರೆ.

ಎಂಟಿಸ್ನೇಕ್ ಬೈಟ್:- ಈ ಔಷಧಿಯು ನಾಗರಹಾವು, ಕೊಳಕುಹಾವು ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡದವರು ಒಂದೇ ತಾಸಿನಲ್ಲಿ, ಚೇಳು ಕಡೆದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1. ವಿ. ಪಿ. ಬೇರೆ.

ಟೋರಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಕುರುಹುಗಳು ಕಂಡರೆ ತಿಳಿದು ಯಾ ತಿಳಿಯದರೀತಿಯಲ್ಲಿ ಧಾತುನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೋರಕಬ್ ಸೇವಿಸಿರಿ.

ಕ್ರಯ ಸೀಸೆ 1ಕ್ಕೆ ರೂ 1—8—0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರೊಪ್ಸ್:— ಇದು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳನ್ನು ತಪ್ಪದೆ ಗುಣಮಾಡುತ್ತದೆ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0—6—0. ವಿ. ಪಿ. ಬೇರೆ.

ಇಕ್ಲಿಪ್ಸ್ ಬಾಮ್, ತಾಜಾ ಯೂಕಲಿಪ್ಟಸ್ ತೈಲ, ಮೂಲವ್ಯಾಧಿ, ಅಂಧ್ರವಾಯು, ಅಜೀರ್ಣ ಮೊದಲಾದ ಹಲವು ರೋಗಗಳಿಗೆ ಬೇಕಾದ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್‌ಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡೆಯುವದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಕಾನೂನು ಎಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿಯಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರ್ಯಾಕ್ಟ್ ಆಕ್ಟ್, ಸ್ವತ್ತುಗಳ ಪರಭಾರೆ ಆಕ್ಟ್, [illegible] ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ, [illegible] ಹಿಂದೂ ಲಾ, [illegible] ಆಕ್ಟ್, [illegible] ಆಕ್ಟ್, ರೆವಿನ್ಯು ಕೋಡ್, [illegible] ಸೀಪ್ ಕೋರ್ಟ್ ಕೋಡ್, ಸಹೋದರರು ಮನೆಗಳನ್ನು [illegible] ಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, [illegible] ನಮೂನೆಗಳು ಮತ್ತು ದಸ್ತಾವೇಜುಗಳ 40 ನಮೂನೆಗಳು [illegible] ಇದು ಪ್ರತಿಯೊಬ್ಬನ ಸವಿಯಲ್ಲಿ ದಳ್ಳದ್ದು. [illegible]

[illegible] 1—8—0. [illegible] 1—12—0.

ಯಂ. ಯಸ್. [illegible]

[illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) [illegible] ಅಕಬರ ಬಾದಶಹನ ಬಳಿಯಲ್ಲಿ ವಿದ್ವಚ್ಛಿರೋಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು [illegible] ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ [illegible] ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವದಕ್ಕೆ ಬಹಳ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದ [illegible] ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 1 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಗಳಾದ ಸ್ತ್ರೀಯರಿಗೆ [illegible] ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಫಲಿತಾಂಶವನ್ನು ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು [illegible] ಬಹಳ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ [illegible] ಅಚ್ಚುಹಾಕಿಸಿದೆ. ಇದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 1 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು [illegible] ಹೇಳಿದ ಮನೋರಂಜಕವಾದ ಕಥೆಗಳು. ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ [illegible] ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 1 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವ [illegible] ದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲ [illegible] ರಲ್ಲಿಯೂ, ಮಲಸಂಬಂಧವನ್ನು [illegible] ಕ್ರಯ ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳ [illegible]

144 ಪುಟಗಳ ವೈದ್ಯಪುಸ್ತಕ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ [illegible] ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
[illegible] ಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥ [illegible] ಸಾಮಾನುಗಳು ಇರುವ ಪೆಟ್ಟಿಗೆ [illegible]

ಶಾಮಿಲೆ [illegible]

ಉತ್ತಮ ತರಹ [illegible] ತೊಲೆ, [illegible] ತೊಲೆ, [illegible] ತೊಲೆ, [illegible] ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ [illegible] ಕಳುಹಿಸಲಾಗುವದು. ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪೆನಿ,
[illegible] ಕಾಶಿ.

SIROMANI NARAYANA CHARYA & CO.,
Choukhambay,
BENARES CITY.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುದಿನವೂ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸ್ವಚ್ಛವಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವದಕ್ಕೆ ಅನುಕೂಲವಾಗಿ ಹೆಚ್ಚು ಕಾಲ ಬಾಳುವದಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

[illegible] ಕಳುಹಿಸಲ್ಪಡುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ.
[illegible]

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಉಳಿದಿರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧ ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
[illegible]

ಮುಂಬೈಲ್ಯಾಫ್ ಎಸ್ಸುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ॥ ಲಲ್ಲುಭಾಯಿ, ಸಾಮಳದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫಿರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವರಿ:—ಮಿ॥ ಜೋರ್ಜ್ ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. [illegible] ವನ್ನು ಠೇವಣಾತಿ ಮಾಡಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೋಟೆಕಾರ್ ಬ್ರದರ್ಸ್, ಉಡುಪಿ,
ಪ್ರಾಮೆಂಟ್ಸ್ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೋಟೆಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಸುರೆನ್ಸ್ ಕಂಪೆನಿಯ ಮೆನೇಜಿಂಗ್ ಡ್ಯರೆಕ್ಟರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಬಾಬತಿಯಾಗತಕ್ಕ ಹಣವನ್ನು ಸರಿಯಾದ ಸಮಯಕ್ಕೆ [illegible] ಪೋಲಿಸಿ ಪ್ರಕಾರ ಬೇಕಾದ ಇತರ ದಾಖಲೆಗಳನ್ನು ಸಂಗ್ರಹಿಸಿ ಕೊಟ್ಟೊಡನೆ ಕೊಟ್ಟ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಯೆಂಬುದನ್ನು ಕಾರ್ಯತಃ ತಿಳಿಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು. ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟ್ ಪ್ಲೀಡರ್, ಸೇಲಂ.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವೆಲ್, ನಾಟಕ, ಪ್ರಹಸನ ಒಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಅಭ್ಯಾಸಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವೆಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:— [illegible]
ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
[illegible]

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟ ಗಿಲ್ಟು ಮೂವ್‌ಮೆಂಟ್ ಮಾಡಿರುವುದು, ಮತ್ತು ಧಾಳಿ, ಧೂಳು ಸೇರದಂತೆ ಹಿಂಧಾಗದಲ್ಲಿ ಗ್ಲಾಸ್ ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ನೀವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರದಮುಖಿ 1, ಗಚ್ಚಿ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮುಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

ಮನೋಲ್ಲಾಸಿನಿ ತೈಲ!

ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಭಾರ, ಕಣ್ಣುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ದೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕುಂದಿಹೋಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದೆಂತಲೂ [illegible] ಕೂದಲನ್ನು ನಿಲ್ಲಿಸಿ, ನಿಡ್ದಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನು [illegible] ಕೊಟ್ಟು, ಅಕಾಲಕ್ಕೆ ಹಣ್ಣಾಗಿರುವ ಕೂದಲನ್ನು ತಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುವದೆಂತಲೂ ಈ ತೈಲವನ್ನು ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ 1 ಸೀಸೆಗೆ ರೂ. 0—12—0 [illegible] 1 ಆಣೆ.
,, 3 ಸೀಸೆಗಳಿಗೆ ,, 2—0—0 [illegible]

ಬೆಲೆ ಸುಲಭ! ಚಿನ್-ಚಿನ್-ಬಾಂ. ಗುಣ ಅಧಿಕ!

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ಚಳಿ, ಥಂಡಿ, ಚೇಳು ಕಡಿತ, ಕ್ರಿಮಿ ಮುಂತಾದ್ದು ತಕ್ಷಣ ಗುಣ. ಬೆಲೆ 1 ಡಬ್ಬಿಗೆ ಒಂದೇ ಆಣೆ. ಡಜನ್ 1ಕ್ಕೆ ರೂ. 0—10—0 ಅಂಚೆ ಹಾಸಲು ಬೇರೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್

ಸೂಚನೆ:—ಅನೇಕ ತರದ ವಾತ್ರೆಗಳು, ತೈಲಗಳು, ಘೃತಗಳು, ಲೇಹ್ಯಗಳು, ಅರಿಷ್ಟಗಳು, ಸಿಕ್ಕುತ್ತವೆ. ಕೆಟಲಾಗಿಗೆ ಬರೆಯಿರಿ.

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
4, ಕಂಕನಾಡಿ ಪೋಸ್ಟು, ಮುಂಗಳೂರು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಚಮಾನ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ½ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನ್ 1 0-12-0. ವಿ. ಪಿ. ಖರ್ಚು 0—4—0 [illegible]

[illegible]:—
ಎಚ್. ಆರ್. ಮೋದಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಮುಂಬೈ.
H. R. MODY & Co.
10 Princess Street, Bombay.

S. NAGAPPA NAYAK,

K. APPAYA SHENOY & CO.

Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು [illegible] ನೂತನವಾಗಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಅಂಗಡಿಯಲ್ಲಿ [illegible], ಸೇಲಂ, ಮಧುರಾ, ಕೊಯಂಬತ್ತೂರು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಸೀರೆ, ಪಟ್ಟೆ ಪೀತಾಂಬರ, ಅಹ್ಮದಾಬಾದ ಧೋತಿ, [illegible], [illegible] ಪಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಪಿನೆತ್ತಿಯಿನ ವಸ್ತ್ರಗಳೂ, [illegible] ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. [illegible] ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮಾರ್ಜಿನಲ್ಲಿ [illegible] ದೊರೆಯುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ [illegible] ತೀರ್ಥವಿಧಿಗಳು, ವಸತಿ, ಸೀದು ಮತ್ತು ಆಹಾರ ಸಾಮಗ್ರಿಗಳ ಕೊರತೆ [illegible] ಭಯ, ಇವೇ ಮೊದಲಾದ ಹಲವು ವಿಧವಾದ ಅನಾನುಕೂಲಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ [illegible] ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಠಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:—ಬಂಟುವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

ಮೈಸೂರ ದಸರಾ ಪ್ರದರ್ಶನದಲ್ಲಿ
ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. **ಚವನಪ್ರಾಶ ಲೇಹ್ಯ**:—ಕೆಳಕವ್ವು, ಕ್ಷಯ ಮತ್ತು ಉಬ್ಬಸ ಇವುಗಳನ್ನು ನಾಶಪಡಿಸುವದು [illegible], ಆರೋಗ್ಯವನ್ನೂ, ಹೆಚ್ಚಾದ ಆಯಸ್ಸನ್ನೂ, ಇಂದ್ರಿಯ ಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಚ್ಯವನನಿಗೆ [illegible] ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ [illegible] ಪುನರ್ಯೌವನವನ್ನು ಹೊಂದಿದನೆಂದು ದೇವಿ ಭಾಗವತದಲ್ಲಿ ಹೇಳಿದೆ. ಕ್ರಯ ಡಬ್ಬಿಗೆ ರೂ. 3—0—0.

೨. **ಬಾಣಂತಿ ಮಾತ್ರೆ**:—ಪ್ರಸೂತಿಯಾದ ಬಳಿಕ 30 ದಿನಗಳವರೆಗೆ ಉಪಯೋಗಿಸುವದರಿಂದ [illegible] ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವಸಿದ್ಧವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. [illegible] ರೋಗಗಳನ್ನು ಇರುವ ವರೆಗೂ ಉಪವಾಸದಿಂದ [illegible] ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನ್ಯೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾತರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇವು ಹೆಚ್ಚು ಕಾಲದಿಂದ ಉಪಯೋಗಿಸಿ ಕೀರ್ತಿಯನ್ನು ಹೊಂದಿದ್ದಾಗಿದೆ. ಧರವನ್ನು ಇದರಡಿ ಸೂಚಿಸಿರುವರು.

	ಬಿಲ್ಲೆ 1ರ	ಡಜನ್ 1ರ
1. ಕಸ್ತೂರಿ ಸಾಬೂನು 3 ಬಿಲ್ಲೆಗಳಿರುವ ಪೆಟ್ಟಿಗೆ	0—8—0	5—0—0
2. ಮನೋಹರ ,, ,, ,,	0—5—0	3—8—0
ಅತ್ತರ ಸಾಬೂನುಗಳು.		
3. ಖಸ್ ಸಾಬೂನು	0—4—0	2—12—0
4. ಗುಲಾಬ್ ,,	0—4—0	2—12—0
5. ಹಿನಾ ,,	0—4—0	2—12—0
6. ಕೇವಡಾ ,,	0—4—0	2—12—0
7. ಗುಲಾಬಿ ,,	0—4—0	2—12—0
8. (ಬಾತ್ ಸೋಪ್) ಸ್ನಾನದ ಬಗ್ಗೆ ಉಪಯೋಗಿಸುವದು.	0-1-6	1-1-0
ಡೈಮಂಡ್ ಬಟ್ಟೆದ ಸಾಬೂನು.		
9. [illegible]	0—1—6	1—1—0
10. [illegible]	0—2—0	1—7—0

[illegible]

ಆರ್. ಮಾರ್ಟಿನ್ಸ್‌ರ

ಸಾರಸಾಪರಿಲ್ಲಾ.

ಈ ಸಾರ್ಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ನೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ, ಸುಖರೋಗ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕೃತ್ಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಅದನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿಗಳ ಕ್ರಯ ರೂ. ೧-೧೨-೦.

ಆರ್. ಮಾರ್ಟಿನ್ಸ್‌ರ ಎಗ್ಯೂ ಮಿಕ್ಸ್‌ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾರಿಜ್ವರ, ಸನ್ನಿಪಾತ, ಕೆಟ್ಟ ಹವೆಯು ಇವುಗಳಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಷ್ಟಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡು ಎರಡು ಬಾಟ್ಲಿಗಳ ಸೇವನೆಯಿಂದ ಹುಷಾರಾಗಿದೆ. ಬಾಟ್ಲಿ 1ಕ್ಕೆ ರೂ. ೦—೧೪—೦.

ಆರ್. ಮಾರ್ಟಿನ್ಸ್‌ರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಚ್ಚೆ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥಹ ತರದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ಶಂಪಾಗಿ ವಾಡುತ್ತದೆ. ಬಾಟ್ಲಿಗಳ ರೂ. ೧—೮—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ

ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಕುಂಬಳೆ ನರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಭಾಮಿನಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೨ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುವುದು.

ಪಂಡಿತ್ ಟಿ. [illegible]

ಲಂಗ್ ಟೋನಿಕ್

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. [illegible] ಮಿಶ್ರವಾದ ಈ ಮಿಶ್ರಣದ ಬಾಟ್ಲಿ 48 ದಿವಸಗಳ [illegible] ಕೆಮ್ಮು, ದಮ್ಮು, ಧಾತುಕ್ಷಯ, [illegible] ಸಂಬಂಧವಾದ ಎಲ್ಲಾ ರೋಗಗಳು ಮತ್ತು [illegible] ಮೂತ್ರಕೃಚ್ಛ್ರ, [illegible] ನಿಸ್ಸಂದೇಹವಾಗಿ ಗುಣವಾಗುವವು. [illegible]

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು; ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಕವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಚಿನ್ನದ ಬೆಳ್ಳಿಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ಡಬ್ಬಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ಡಬ್ಬಿಗೆ ೩ ರೂ.

೫. ಪ್ಲೀಹೋದರಾರಿಚೂರ್ಣ. ಖಂಡಿತ [illegible] ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ಅದರ ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. [illegible] ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಕ್ಷಣ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವಿಲ್ಲದೆ [illegible] ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. [illegible] ಜ್ವರ ಮುಂತಾದ ಎಲ್ಲ ಜ್ವರಗಳನ್ನೂ ತಪ್ಪದೆ ಗೆಲ್ಲುವದು. [illegible] ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ಡಬ್ಬಿಗೆ ೩ ರೂ.

೧೦. ಶಾಲ್ಮಲೀ ಪಾಕ. [illegible], ಮೂತ್ರದಲ್ಲಿ ಧಾತು ಪತನ, [illegible] ಮೂಲಕವಾಗಿ [illegible] ಪುರುಷರನ್ನು [illegible] ರಕ್ತ, ಕಾಂತಿ, [illegible]ಗಳನ್ನು ಕೊಡುವದು. ಡಬ್ಬಿಗೆ ೩ ರೂ.

೧೧. ವಾತಸಂಹಾರಿ ತೈಲ. ತಲೆ ನೋವು, ಎದೆ ನೋವು ಸೊಂಟನೋವು, [illegible] ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ

೧೨. ಗಜಕರ್ಣ [illegible] ಮುಲಾಮು. [illegible] ಕೀವಸಹಿತ [illegible] ಗೆಲ್ಲುವದು. [illegible] ಸುವಾಸಿಕವಾಗಿದೆ. ಕರಡಿಗೆ ೩ ಆಣೆ

೧೩. ನೇತ್ರರಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು [illegible] ಗುಣಪಡಿಸುವದು. ತೊಲೆಗೆ ೧ ರೂ.

೧೪. ಬ್ರಾಹ್ಮಿ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, [illegible], [illegible]ಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಸುವದು. ವಾಕ್ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಸೋಸಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ಹೊಸ್ತ ಕನ್ನಡ ಕೆಟಲಾಗ್ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸಿದವರಿಗೆ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸುವದು.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M NATH & CO
Vepery Post MADRAS,

ದಂತವೈದ್ಯರಾದ

ಡಾಕ್ಟರ್ ಪಿ[illegible]. ಲಿಮಾರವರು

ಸದ್ಯದಲ್ಲಿಯೇ ಇಲ್ಲಿಂದ ಇತರ ಪ್ರಾಂತ್ಯಗಳಿಗೆ ಹೋಗುವದೆ ನಿಶ್ಚಯಿಸಿರುತ್ತಾರೆ. ಆದ್ದರಿಂದ ಕೃತಕ ಹಲ್ಲುಗಳನ್ನು ಇಷಪಡಿಸುವವರೂ ವ ದಂತ ಚಿಕಿತ್ಸೆ ಮಾಡಬೇಕೆಂದಿರುವವರೂ ಈ ಸಂದರ್ಭವನ್ನು ಬಿಡಬಾರದು.

ಚಾರ್ಜು ಅತೀ ಸುಲಭ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ತೋಟಿನ ಬಳಿ,
ಮಂಗಳೂರು.

ಅಮೃತಾರ್ಣವ [illegible]ಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತ ವೃದ್ಧಿಯುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತುಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೈಗೂಡಿಸುವದು. ಕ್ರಯ ಸುಲಭ! ಫಲವು ಅಧಿಕವು!!

೨೦ ತೊಲೆಗೆ ರೂ. ೨—೦—೦ ಮಾತ್ರವೇ

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮುದ್ರಾಸು.

Local Agents: **Raphael & Co.,**
Brito Buildings.
Hampankatta, MANGALORE.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂಧರಿ ರೋಜ

[illegible] ಮನೋಹರವೂ ಮೋಹಕವೂ ಆದ ತೈಲವು.

[illegible] ಶೀಶೆ 1-ಕ್ಕೆ ಒಂದೇ ರೂಪಾಯಿ.

ಕನಸು ಕಂಡ [illegible] ಉಪಯೋಗಿಸಿ ನಿಮ್ಮ ಕೂದಲನ್ನು [illegible] ಸುಂದರವಾದ ಕೇಶರಾಶಿಯೂ, ಉಂದವಾದ ಕೂದಲುಗಳೂ [illegible] ಅಲಂಕಾರವಾಗಿದೆ, ಕೂದಲುಗಳು [illegible] ಕಂಗೊಳಿಸುತ್ತಿರಬೇಕು. [illegible]

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆ[illegible] ಸರ್ವ ವ್ಯಾಧಿಗಳನ್ನು [illegible] ಈ ತೈಲವನ್ನು [illegible] ಮನೋಹರವೂ ಮೋಹಕವೂ ಆಗ [illegible] ತೈಲವನ್ನು ಉಪಯೋಗಿಸು [illegible] ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು [illegible] ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು [illegible] ಬಹಳ ಉಪಕಾರಿಯಾಗಿರುವುದು. [illegible] ರಾಜಸುಂದರಿರೋಜ ಹೇರಾಯಿಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊರಳಗಿಜ 6, ಕಣ್ಣುಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅಡ್ಡಾ 1, ತಾಂಬೂಲ ಮುತ್ತು 30, ದಂತದ ಬಾಚಣಿಗೆ 1, ಸೊಗಸಾದ ರಾಜಾರಾಣಿ ಕಾರ್ನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋಗ್ರಾಫ್ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಕ್ರಯ 5॥ ಬಹುಮಾನಗಳ ಸಹಿತ ರೂ 1—0—0

ವಿಳಾಸ:— ವಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಅರ್ಧ ಕ್ರಯ! ಅರ್ಧ ಕ್ರಯ!!

ಒಂದು ತಿಂಗಳ ವರೆಗೆ ಮಾತ್ರ!



ನಮ್ಮ ನಿಕ್ಕಲ್ ಬೆಳ್ಳಿ ಕೇಸ ಗಡಿಯಾರವು ಬಹಳ ಸರಿಯಾಗಿ ಸಮಯವನ್ನು ಸೂಚಿಸುವದು. ಸಪ್ಪರೂ ಸಹ ಧರಿಸಿಕೊಳ್ಳಲು ಸಾಧ್ಯವಾದಂಥಾದ್ದು. ಮೂರು ವರುಷಗಳ ಗೆರೆಂಟಿ ಇದೆ. ರೂ. 7-14-0, 9—14—0 ಕ್ರಯವಿರುವಂಥವುಗಳನ್ನು ಈಗ ರೂ. 3—1[illegible]—0, 4—15—0ಕ್ಕೆ ವಿಕ್ರಯಿಸುತ್ತೇವೆ

ರೈಲ್ವೆ ರೆಗ್ಯುಲೇಟರ್ ವಾಚು ರೂ. 13ರ ಕ್ರಯದ್ದು ರೂ. 6—[illegible]—0ಕ್ಕೆ ದೊರಕುವದು. ರೂ 15ರ ಅಂದವಾದ ಹಂಟಿಂಗ್ ವಾಚು ರೂ. 7—[illegible]—0 ಕ್ಕೆ ದೊರೆಯಾಗುವದು. ಲೇಡಿ ಸ್ಪ್ಯಾಜಿನ ಬೆಳ್ಳಿ ರೂ. 18ರ ವಾಚನ್ನು ರೂ. 9ಕ್ಕೆ. ಅಂದವಾದ ಭಂಗಾರದ ಮುಲಾಮಿನ ರೂ. 20ರ ವಾಚು ರೂ. 10ಕ್ಕೆ.

ರಿಷ್ಟ್ ವಾಚು ರೂ. 12 ಕ್ರಯದ್ದು ಬಹಳ ಉತ್ಕೃಷ್ಟವಾದದ್ದು ರೂ. 6ಕ್ಕೆ ಕೈಗೆ ಹಾಕುವ ಚರ್ಮದ ಪಟ್ಟಿ ಸಹಿತ. ಬಹಳ ಗಟ್ಟಿಯಾದದ್ದು, ಎಂಟು ದಿವಸಗಳ ಚಾವಿ ಇರುವಂಥಾದ್ದು ಕ್ರಯ ರೂ 24ರದ್ದನ್ನು ರೂ 12ಕ್ಕೆ ಕೊಡಲಾಗುವದು.

ವಿಶೇಷ ಇನಾಮು. ಪ್ರತಿ ಒಂದು ವಾಚು ಪಡಕೊಳ್ಳುವವನಿಗೆ ಒಂದು ಚಂದವಾದ ಸರಪಳಿಯು ಇನಾಮು. 6 ವಾಚುಗಳನ್ನು ಪಡಕೊಳ್ಳುವವನಿಗೆ ಒಂದು ವಾಚು ಉಚಿತಾರ್ಥವಾಗಿ ಕಳುಹಿಸಲಾಗುವದು.

ಕೊಂಪಿಟೇಷನ್ ವಾಚ್ ಕಂಪೆನಿ,
25 ಮದನಮಿತ್ರ ಲೇನ್, ಕಲ್ಕತ್ತ

ಕರ್ಣಾಟಕ ಎಗ್ಯುಮಿಕ್ಸ್ಚರ
Karnik's Ague Mixture.

ಚಳಿಜ್ವರ, ಮಲೇರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಪೆನೊ-ವಿನ್:—ಕೊಲೆರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಕ್ಷಣವೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು:—ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಉಚಿತ.

ಕರ್ಣಾಟಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡೊಕ್ಟರುಗಳ ಚಿಕಿತ್ಸೆ ವ ದಂತಚೂರ್ಣಗಳು ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ಹಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ ೧ಕ್ಕೆ ಕ್ರಯ ರೂಪಾಯಿ 1—4—0.
ಟಪ್ಪಾಲು ಹಾಸಲು ಪ್ರತ್ಯೇಕ.
[illegible]

ಡೆಂಟಲ್ ಸರ್ಜನ್ [illegible] **STANY BROTHERS**
ಮತ್ತು [illegible] Sole Agents
ಮಂಗಳೂರಿನ ಔಷಧಿಗಳಲ್ಲಿ M. O. O's. Toothache
ದೊರಕುವದು. Specific, Mangalore.
[illegible]

ಮೈಸೂರು ದಸರಾ 1916ನೇ ವರ್ಷದ ಸರ್ವ ವಸ್ತುಪ್ರದರ್ಶನ ಶಾಲೆಯಲ್ಲಿ ಚಿನ್ನದ ಬಿಲ್ಲೆಯನ್ನೂ ಮತ್ತು ಅನೇಕ ಡಾಕ್ಟರುಗಳಿಂದ ಯೋಗ್ಯತಾಪತ್ರವನ್ನೂ ಪಡೆದಿರುತ್ತದೆ.

ಇತ್ತ ನೋಡಿ! ಜಾಗ್ರತೆ ಮಾಡಿ!! ಬೆಲೆ ಸುಲಭ!!!

ರಿಕ್ಸ್ ರಾಮಕೃಷ್ಣಾಮೃತ.

ನೀವು ನಿಮ್ಮ ಅಮೂಲ್ಯವಾದ ಶರೀರವನ್ನು ವಿಕಲ್ಪ ಯಾತನೆಗೂ ಸಂಕಟಕ್ಕೂ ಒಳಗುಮಾಡಿಕೊಂಡು ಕೃಶರಾಗಿರುವಿರಿ!

ಈಗಷ್ಟೇ ತಯಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ಸುಲಭ, ಪ್ರಯೋಜನ ಬಹಳ. ವಿದ್ಯಾರ್ಥಿಯರಿಗೂ, ಪ್ರಯಾಣಿಕರಿಗೂ; ಸ್ತ್ರೀ ಕುಟುಂಬ ವರ್ಗದವರಿಗೂ, ಮುಖ್ಯವಾಗಿ ಎಲ್ಲಾ ಜನಾಂಗಳಲ್ಲಿ ಬಹಳ ಪ್ರಯೋಜನಕರವಾದದ್ದು. ಒಂದಾವರ್ತಿ ಉಪಯೋಗಿಸಿದ್ದಲ್ಲಿ ಮತ್ತೆ ಇದನ್ನು ಬಿಡಲಾರಿರಿ. ಬೆಲೆ ಬುಡ್ಡಿ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ. 5—4—0. ಟ. ಖ. ಬೇರೆ.

ಎಲ್ಲಾ ಸ್ಥಳದಲ್ಲಿಯೂ ಏಜಂಟರು ಬೇಕು. ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್ ದೊರೆಯುವದು.

ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

R. K. DEPOT,
272 Chamrajpet, MYSORE.
Agents in Mangalore—
The Mangalore Cycle Stores, Mangalore.

Registered No. M. 493

ಚಂದಾದಾರಿಯು:— ವರ್ಷ 1ಕ್ಕೆ ರೂ. 1—8—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

... 2—5—0.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೦ | ಮಂಗಳೂರು, ತಾರೀಖು ೧೧ನೇ ಆಗೋಸ್ತು ಶನಿವಾರ ೧೯೧೭. | ಸಂಚಿಕೆ ೩೨.

ಒಂದು ತಿಂಗಳ ಕಾಲಕ್ಕೆ ಮಾತ್ರ!

ಅರ್ಧ ಕ್ರಯಕ್ಕೆ ಮಾರಲ್ಪಡುವವು.

ಫ್ಲೂಟ್ ಹಾರ್ಮೋನಿಯಮ್‌ಗಳು.



ಎಲ್ಲಾ ನಮೂನೆಯ ಗಾಯನಗಳಿಗೆ ತಕ್ಕಂಥವುಗಳು, ಯಾವ ಹವಾಗುಣಗಳಲ್ಲಿಯಾದರೂ ಬಾಳುವಂಥವುಗಳು. ಒಳ್ಳೆ ಮಾಗಿದ ಸಾಗವಾನಿ ಮರದ ಹಲಗೆಗಳಿಂದ ತಯಾರಿಸಲ್ಪಟ್ಟವುಗಳು. ಇವುಗಳಲ್ಲಿರುವ ರೀಡ್ಸುಗಳು ಉತ್ತಮ ತರಗತಿದ್ದಾಗಿವೆ. ಸಮ್ಮತಿವಾಗಿದ್ದ ಈ ಹಾರ್ಮೋನಿಯಮ್‌ಗಳನ್ನು ಇವುಗಳು ತಲ್ಪಿದ ಏಳು ದಿವಸಗಳಲ್ಲಿ ಹಿಂತಿರುಗಿ ಕಳುಹಿಸಿದರೆ ಪಡಕೊಳ್ಳುತ್ತೇವೆ. ಸಿಂಗಲ್ ರೀಡ್ ಇರುವಂಥವುಗಳಿಗೆ ರೂ. 40, 45, 50 ಕ್ರಯವಿದ್ದವುಗಳು ರೂ. 20, 22—8—0, 25—0—0 ಕೊಡೋಣಾಗುವವು. ಡಬ್ಬಲ್ ರೀಡ್ ಇದ್ದವುಗಳು ರೂ. 70, 80, 90 ಕ್ರಯದವುಗಳನ್ನು ರೂ. 35, 40, 45ಕ್ಕೆ ಈಗ ಕೊಡುತ್ತೇವೆ. ಕೈಗಳಿಂದಲೂ ಕಾಲುಗಳಿಂದಲೂ ಬಾರಿಸಬಹುದಾದ ಅತ್ಯುತ್ತಮ ಡಬ್ಬಲ್ ರೀಡ್ ಮಡಚುವಂಥ ರೂ. 130ರ ಹಾರ್ಮೋನಿಯಮ್‌ಗಳು ಈಗ ರೂ. 65ಕ್ಕೆ ದೊರಕುತ್ತವೆ. ಹಾರ್ಮೋನಿಯಮ್‌ಗಳು ಬೇಕಾದವರು ಕ್ರಯದ ಕಾಲು ಅಂಶವನ್ನು ಮುಂಗಡವಾಗಿ ಕಳುಹಿಸಬೇಕು, ಮತ್ತು ತಮಗೆ ಸಮೀಪವಿರುವ ರೈಲ್ವೆ ಸ್ಟೇಶನನ್ನು ಸಹ ತಿಳಿಸಬೇಕು. ಪತ್ರವ್ಯವಹಾರವನ್ನು ಇಂಗ್ಲಿಷ್ ಭಾಷೆಯಲ್ಲಿಯೆ ಬರೆಯಬೇಕಾಗಿದೆ.

ನೆಷನಲ್ ಹಾರ್ಮೋನಿಯಮ್ ಕಂಪೆನಿ,
10/3 ಲೋವರ್ ಚಿತ್‌ಪುರ ರೋಡ,
ವಾದ್ಯಗಳ ಬಗ್ಗೆ ವಿಳಾಸ:— ಮ್ಯೂಜಿಸಿಯನ್ಸ್ ಕಲ್ಕತ್ತಾ.

ವಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಯಕ್ಷಗಾನ.

...ಳು ಪಂಚವಟಿ ರಾಮಾಯಣ	...	ಕ್ರಯ ರೂ. 0—3—0
...ಡ ದುಂದುಭಿ ಆಖ್ಯಾನ	...	,, ,, 0—4—0
...ಶಿ ಚಂದ್ರಮೌಳಿ ಕಾಳಗ	...	,, ,, 0—4—0

ಈ ಪುಸ್ತಕಗಳು ವಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಕ್ರಯ ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕಮಿಷನು ಮುಫತ್ತು.

ವಿಳಾಸ:— ಕೆ. ಸುಬ್ರಾಯ ನಾಯಕ ಬಂಡ್ ಸನ್ಸ್,
ಜಿ. ಟಿ. ಏಜನ್ಸಿ, ವಿಟ್ಲ, ದ. ಕ.

ಉಚಿತ! ಉಚಿತ! ಉಚಿತ!

ಕ್ರಯ 5 ರೂ. ಉಳ್ಳ ಇಂಗ್ಲಿಷ್ ಲಿವರ್ ವಾಚು ಉಚಿತ.



ಈ ನಳ್ಳೆಯಲ್ಲಿ ಕಂಡ ಪ್ರಸಿದ್ಧಿಯನ್ನು ಹೊಂದಿದ ಇಂಕಿಯನ್ನು ಅದ್ಭುತವಾಗಿ ಬರೆಯುವ ಅಷ್ಟರಿಯಾ ದೇಶದಲ್ಲಿ ತಯಾರಿಸಿದ ೧೪ ಕ್ಯಾರಟ್ ಚಿನ್ನದ ಮುಳ್ಳುಳ್ಳ ಫೌಂಟನ್ ಪೆನ್ನ ಮತ್ತು ಇದಕ್ಕೆ ಹಾಕುವ ೧ ಬಾಟ್ಲಿ ಇಂಕಿ ಸಹಿತ ಕ್ರಯ ರೂ. ೩—೧೪—೦. ಈ ಪೆನ್ನವನ್ನು ತರಿಸಿಕೊಳ್ಳುವವರಿಗೆ ಇವುಗಳು ಪ್ರಖ್ಯಾತಿಯಾಗುವದಕ್ಕಾಗಿ ಕೆಲವು ಕಾಲದವರೆಗೆ ಮಾತ್ರವೇ ಮೇಲೆ ಹೇಳಿದ 5 ರೂಪಾಯಿ ಬೆಲೆಯ ವಾಚನ್ನು ಉಚಿತವಾಗಿ ಕೊಡುತ್ತೇವೆ. [177-2]

ವಿಳಾಸ— ಮದರಾಸು ಮೇಲ್ ಆರ್ಡರು ಕಂಪೆನಿ,
ನಂ. 9, ಸುಬ್ಬರಾಯ ನಾಯ್ಡು ಲೇನ್,
... ಮದರಾಸು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಸೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹೆಚ್ಚಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅವಶ್ಯವಲ್ಲ; ಸೊಪ್ಪು ಗೊಬ್ಬರದಂತೆ ನಾತ ಬಿಡುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಷ್ಟಕ್ಕೆ ಹಟ್ಟಿಗೊಬ್ಬರ ಒಂದು ಮೂಟೆ ಬೇಕು. ಊರ ಗೊಬ್ಬರಗಳ ಜೊತೆಯಲ್ಲಿ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

'ಕೃಷಿ ಸುಧಾರಣೆ' ಎಂಬ ಸಚಿತ್ರ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀಸು.

ನಮ್ಮ ವೈದ್ಯಶಾಲೆಯಲ್ಲಿ ಬೆಳಿಗ್ಗೆ ೯ ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೋಮಿಯೋಪತಿ, ಬಿಕ್ಸ್, ಸ್ಪೆಸಿಫಿಕ್, ಇಲೆಕ್ಟ್ರೊ ಹೋಮಿಯೋಪತಿ, ಆಯುರ್ವೇದಿಕ್ ಔಷಧಗಳನ್ನು ಬಡಜನರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೋಮಿಯೋಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ, ಬರ್ಕೆಸ್ಥಳ

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ.

O. P. No. 73/1917

ಕಾರ್ಕಳ ತಾಲೂಕು ಕಾರ್ಕಳ ಕಸಬೆಯಲ್ಲಿ ಮೃತಪಟ್ಟ ಲಾದ್ರುಕಾಡ್ತೋಸರ ಆಸ್ತಿಯ ಬಾಬಿನಲ್ಲಿ—

1. ಫ್ರಾನ್ಸಿಸ್ ಜಬ್ರಾವ್ ಕಾಡ್ತೋಸ್ }
2. ಸೊಫಿನಾ ಮಾರ್ಟಿಸ್ ಯಾನೆ ಕೌಡ್ತೋಸ್ } ಅರ್ಜಿದಾರರು.

ಅರ್ಜಿದಾರರ ಹೆಸರಿಗೆ ಮೃತಪಟ್ಟ ಲಾದ್ರುಕಾಡ್ತೋಸರ ಆಸ್ತಿಗೆ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಶನ್ ಕೊಡಬೇಕಾಗಿ ಅಪೇಕ್ಷಿಸಿ ಮೇಲ್ಕಂಡ ಅರ್ಜಿದಾರರು ದಾಖಲು ಮಾಡಿದ ಅರ್ಜಿಯು ಬರುವ 1917ನೇ ಇಸವಿ ಸಪ್ಟಂಬರ ತಾರೀಕು 25ಕ್ಕೆ ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪಣೆ ಇದ್ದವರು ಸದರಿ ತಾರೀಕಿನಲ್ಲಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು ಎಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ.

ಮಂಗಳೂರು, }
ತಾ. 2—8—17. } **A. C. Gonsalves** B. A., B. L.,
Vakil for Petitioner.

ನೋಟೀಸು.

ಮಂಗಳೂರ ಶಹಾರ ಸೈಕಿ ಡೊಂಗರಕೇರಿಯಲ್ಲಿರುವ ಮರೋಳಿ ಲಿಂಗಭಂಡಾರಿ ಅಳಿಯ ನೇಮು ಭಂಡಾರಿಯು ಸರ್ವಜನರಿಗೆ ತಿಳಿಸುವುದೇನೆಂದರೆ:—ಮಂಗಳೂರು ಶಹಾರಿನಲ್ಲಿರುವ ಸುಬ್ರಾಯಾಚಾರಿ ಮತ್ತು ಗೋವಿಂದಾಚಾರಿ ಕೂಡಾ 2 ಜನರು—ನನಗೆ ಕುರಿಫಂಡಿನ ಬಾಬತು ತಾ. 21—6—1916ಲ್ಲು ರೂ. 150ಕ್ಕೆ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟು ವ ಇದರೊಂದಿಗೆ ಇದ್ದ ಇನ್ನು ಕೆಲವು ರಿಕಾರ್ಡುಗಳು ಗೈರವಲೆ ಆಗಿರುತ್ತವೆ. ಅವುಗಳನ್ನು ಯಾರಾದರೂ ಸಿಕ್ಕಿದವರು ನನಗೆ ತಂದುಕೊಟ್ಟಲ್ಲಿ ಅವರಿಗೆ ರೂ. 2ನ್ನು ಇನಾಮಾಗಿ ಕೊಡುತ್ತೇನೆ.

ಮಂಗಳೂರು. |
ತಾ. 4—8—1917. | ನೇಮು ರುಜು.

ಔಷದಗಳ ಸಂಗ್ರಹ, ಅವುಗಳ ಜೋಪಾನನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಸಿಕ್ಕದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು
ಇತರರಿಂದ ಏಕೆ ಪಡೆಯಬೇಕು?

ಬಾಟ್ಲಿ 1ಕ್ಕೆ 0—5—0. **ಡಜನಿಗೆ ರೂ. 3.**

ಲಾಭವೊಂದನ್ನೇ ತನ್ನ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ತೇರಬೀದಿ, ಮಂಗಳೂರು.

ಕರ್ಣಾಟಕ ಸಂಗೀತ

ಮೃಚ್ಛಕಟಿಕ ನಾಟಕ.

ಪ್ರತಿಯೊಂದರ ಕ್ರಯ	... ...	ರೂ. 0—5—0
3 ಪ್ರತಿಗಳಿಗೆ ,,	... ...	,, 0—13—0

ಪೋಸ್ಟು ಖರ್ಚು ಅಲಾಹಿದಾ.

ವಿಳಾಸ:— ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ, ದ. ಕ.

ಹೊಸ ಪುಸ್ತಕಗಳು.

(ಹೊಸ ಮುದ್ರಣ).

1918ನೇ ಮೆಟ್ರಿಕ್ಯುಲೇಶನ ಟೆಕ್ಸ್ಟ್ 4 ಆಣೆ, ಡಿಟೋ ನೋಟ್ಸು ಮಿ. ವೆಂಕಟಸುಬ್ಬಾಚಾರ್ಯರದು 8 ಆಣೆ, ಸಂ. ಟೆಕ್ಸ್ಟ್ 2½ ಆಣೆ, Rama & Sita 4 as., (Do) Notes 6 as., General Eng. Questions & Answers from 1901-1917 6 as., by Mr. Pichamuttu, B. A.,) Gen. English by Mr. Chennakesaviah Rs. 1-2-0, ಭೂವಿವರಣೆ 15 ಆಣೆ, ಡಿಟೋ IIನೇದು 5 ಆಣೆ, ಪ್ರಶ್ನೋತ್ತರ ಲೆಖ್ಖಬೋಧಿನಿ ರೂ. 1-8-0, ನವೀನ ಗಣಿತ 8 ಆಣೆ, ಹಿಂದೂ ಚರಿತ್ರಸಾರ 10½ ಆಣೆ, ಕನ್ನಡ 1ನೇ ರೀಡರ್ 5 ಆಣೆ, ಡಿಟೋ 2ನೇದು 7 ಆಣೆ, ಡಿಟೋ 3ನೇದು 8½ ಆಣೆ, ಡ್ರಿಲ್ ಪುಸ್ತಕ 2½ ಆಣೆ, ಮಕ್ಕಳ ಪದ್ಯಾವಳಿ 12 ಆಣೆ, ಲೆಖ್ಖಬೋಧಿನಿ 8½ ಆಣೆ, ಲೆಖ್ಖದ ಪುಸ್ತಕ 5 ಆಣೆ, 2ನೇ ತರಗತಿ ಗಣಿತ 3½ ಆಣೆ, ಡಿಟೋ 3ನೇದು 5½ ಆಣೆ.

ಕ್ರಿಮಿನಲ್ ಲಾ ಸಂಗ್ರಹ.

ಈ ಪುಸ್ತಕದಲ್ಲಿ:—೧ ಪಿನಲ್‌ಕೋಡು, ೨ ಕ್ರಿಮಿನಲ್ ಪ್ರೊಸೀಜರ್ ಆಕ್ಟ್, ೩ ... ರೆಗ್ಯುಲೇಶನ್, ೪ ಆಯುಧಗಳ ರೆಗ್ಯುಲೇಶನ್, ೫ ... ರೆಗ್ಯುಲೇಶನ್, ೬ ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಶನ್, ೭ ... ಆಕ್ಟ್, ... ರೆಗ್ಯುಲೇಶನ್, ೮ ... ರೆಗ್ಯುಲೇಶನ್, ೯ ... ರೆಗ್ಯುಲೇಶನ್, ೧೦ ... ಆಕ್ಟ್, ೧೧ ... ಆಕ್ಟ್ ... ಅಡಂಗಿರುತ್ತವೆ. ಕ್ರಯ ರೂ. 2—3—0.

ಎಲ್. ಎನ್. ರಾವ್ ಬ್ರದರ್ಸ್,
...

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು ,,	225,000—0—0
Paid-up Capital	205,450—0—0	ಆಗತ ಮೂಲ ಧನವು ,,	205,450—0—0
Deposits	304,490—14—11	ಠೇವಣಾತಿಯಾಗಿ ಕೊಡಲ್ಪಟ್ಟ ಮೊಬಲಗುಗಳು	304,490—14—11
Reserve Fund	50,003—2—5	ರಕ್ಷಿತ ಧನವು	50,003—2—5

25% of the net profits are added annually to the **Reserve Fund.** Rs. 37,364—11—2 have been **invested in Government Paper**

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ನೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ 37,364-11-2 ಧರ್ಮಸಾಧನಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

Dividends of not less than 6%. paid during the past years and a bonus of 1%. to 2%. paid in addition during the last eight years.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಶೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು [illegible]

Fixed Deposits of Rs. 50/-and above in multiples of Rs. 5/ received for 3, 6, 12 and 24 [illegible] 4, 4½, 5, 5½% and 6 respectively at the dis[illegible] of the managing committee.

[illegible] ಠೇವಣಾತಿಗಳು [illegible] 3, 6, 12, ಮತ್ತು 24ರ [illegible] ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ [illegible] 50ಕ್ಕೆ ಮಿಕ್ಕ [illegible] ಮೆನೇಜಿಂಗ್ ಕಮಿಟಿ [illegible] ತೋರುವ ಮೇರೆಗೆ [illegible] ಲಾವಾವು.

Short-notice Deposits requiring on[illegible] of withdrawal after one month received [illegible] **annum at the discretion of the managing committee.**

[illegible] ಅಲ್ಪಕಾಲ [illegible] ಠೇವಣಾತಿಗಳು ಶೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿ ಯವರಿಗೆ ಯುಕ್ತತೋರುವ ಮೇರೆಗೆ ಪಡೆಕೊಳ್ಳಲಾದಾವು.

Current Deposit Account opened free of charge

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and **interest paid @ 4½%.**

ಸೇವಿಂಗ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ

Loans granted on proper securities and pledges.

ಮತ್ತು ಆಧಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,
Mangalore, 1st. August 1917.

P. Gopal Naik,
Secretary.

ಪ್ಲೇಗನ್ನು ನಿರ್ಮೂಲವಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನ ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ. [illegible] ಪ್ರತಿನಿತ್ಯವೂ ಹೇಳಿದ ಪ್ರಕಾರ ತೆಗೆದುಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಗಳು. ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ತಂತಿ ವಿಳಾಸ: — "ಪಂಡಿಟ್" ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ಡೊಂಗರ್ ಇವರ ಬಾಲಾಮೃತ.

ಇದು
ಬಹಳ
ಮಧುರವಾಗಿರುವದರಿಂದ
ಚಿಕ್ಕ ಮಕ್ಕಳು
ಸಂತೋಷದಿಂದ
ಕುಡಿಯುತ್ತವೆ.
ಒಂದು ಸೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು
ಮಕ್ಕಳಿಗೆ
ಶಕ್ತಿಯನ್ನೂ
ಆರೋಗ್ಯವನ್ನೂ
ಹೆಚ್ಚಿಸಿ
ದೃಢಕಾಯರನ್ನಾಗಿ
ಮಾಡುವುದು.

ಕೆ. ಟಿ. ಡೊಂಗರ್ ಕಂಪನಿ, ಗಿರಗಾಂವ, ಮುಂಬಯಿ.
[illegible]

ಪಂಡಿತ ಎಂ. ಎಸ್. ಯವರ ಮದರಾಸ್ ಪುಡಿ ನಶ್ಯ.

ಈ ನಶ್ಯವನ್ನು ಉತ್ತಮವಾದ ಹೊಗೆಸೊಪ್ಪಿನಿಂದ ತಯಾರಿಸಿದೆ. ಈ ಪುಡಿಯನ್ನು ಉಪಯೋಗಿಸುವುದರಿಂದ ಪೀನಾಸಿ, ಅರೆತಲೆನೋವು, ನೆಗಡಿ, ಮುಂತಾದ ವ್ಯಾಧಿಗಳನ್ನು ಕೂಡಲೇ ಗುಣ ಮಾಡುವದು. ಈ ನಶ್ಯವು ಬೇರೆಯವರ ನಶ್ಯದಂತೆ ಸ್ವಲ್ಪ ಮೂಸಿದೊಡನೆಯೇ ನೆತ್ತಿಗೇರಿ ಮಿದುಳನ್ನು ಕೆಡಿಸುವದಿಲ್ಲ. ಈ ನಶ್ಯವನ್ನು ಉಪಯೋಗಿಸುತ್ತಿದ್ದರೆ ಮೂಗಿನಲ್ಲಿ ಎಷ್ಟು ದುರ್ವಾಸನೆ ಇದ್ದಾಗ್ಯೂ ಹೋಗಲಾಡಿಸಿ ಮಧುರವಾದ ಸುವಾಸನೆಯು ಹೊರಟು ಜನರನ್ನು ಆಹ್ಲಾದಿಸುವುದು. 1ನ್ನು ತರಿಸಿ ಪರೀಕ್ಷಿಸಿರಿ.

ಕ್ರಯ ಡಬ್ಬಿ 1ಕ್ಕೆ 5 ಆಣೆ.

ಒಂದೇಸಲ 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ. ನಮ್ಮ ವಿಳಾಸ:—

ಎಮ್. ಎಸ್. ಸಿಟಿ. ಬಾಬು ಕಂಪನಿ,
ನಂಬ್ರ 7-2ನೇ ನಾರಾಯಣ ಬೀದಿ, ಮಿಂಟ್ ಬಿಲ್ಡಿಂಗ್ ಮದರಾಸ್.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ ಅಮೃತ ಸಂಜೀವನ ಟೋನಿಕ್, ಬಾಲಸಂಜೀವನ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತಂಸಲು ಮರೆಯಬೇಡಿರಿ.

೧ ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಉಷ್ಣಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಅವಿ ರೋಗಗಳನ್ನು ಗುಣಪಡಿಸಿ ಸುಪುತ್ರಸರವನ್ನು ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುರ್ಮಾಸ್ ಎಂಬ ಐಪಿ ಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕಿಸಿ ಧ್ರುವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್ ಉಗ್ರಾಣಕರ್, ಮೆನೇಜರ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯನಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 6 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ ಆಣೆ 3ಅವಶ್ಯಕ]

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ —

ಉನ್ಮಾದಿನಿ	0—6—0
ಆಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
[illegible] ,,	0—10—0
ಇಂದಿರಾ ಕೈ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0—4—0
ಪ್ರಫುಲ್ಲ ,, ,,	0—12—0
ಅಂಬ್ರಾಲಿಕೆ (ಹೊಸ ನಾವಿಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ	0—6—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ	0—2—0
[illegible] (School Discipline)	0—12—0
[illegible] (Flower Making)	0—14—0
[illegible]	1—0—0
[illegible]	1—4—0
[illegible]	1—4—0
[illegible]	1—2—0
[illegible]	0—10—0
[illegible]	0—1—0

ಯೂರೋಪದ ಮಹಾ ಯುದ್ಧ.

ಕೆಲವು ಕುಸ್ತಾರದಿಂದ ಪಶ್ಚಿಮ ಯುದ್ಧರಂಗದಲ್ಲಿ ಅಪೂರ್ವವಾದ ಫಿರಂಗಿಗಳ ನಾದವು ಕೇಳಿಸುತ್ತದೆ. ಈ ಶಬ್ದವು ಕೆಲವು ಕಡೆಗಳಲಿ ೩೦ ಮೈಲು ದೂರದ ವರೆಗೆ ಕೇಳಿಸುತ್ತದಂತೆ.

೧೯೧೬ನೆ ಜುಲೈಯಿಂದ ಈ ವರೆಗೆ ಈ ಯುದ್ಧರಂಗದಲ್ಲಿ ಬ್ರಿಟಿಷರೂ ಫ್ರೆಂಚರೂ ಜರ್ಮನರ ಕಡೆಯ ೧೬೦,೦೦೦ ಮಂದಿಯನ್ನು ಸೆರೆಹಿಡಿದರೆಂದು ತಿಳಿದುಬರುತ್ತದೆ. ಇದಲ್ಲದೆ ೯೪೮ ದೊಡ್ಡ ಫಿರಂಗಿಗಳು, ೭೮೦ ತೋಪುಗಳು, ೩,೫೦೦ ಮೆಶಿನ್‌ಗನ್ನುಗಳು ಸಹಾ ಮಿತ್ರಮಂಡಳಿಯವರಿಗೆ ಜರ್ಮನರಿಂದ ಸಿಕ್ಕಿದುವು.

ಜರ್ಮನರು ಟಾರ್ನೋಪೋಲಿನ ದಕ್ಷಿಣಕ್ಕೆ ಮುಂದೊತ್ತಿ ಬಂದದ್ದರಿಂದ ರುಸ್ಯರು ಹಿಂಜರಿದು ಜಬ್ಲಿಯನೋಕೊಲ್ನ, ಬೋರಿಸೊಸೆ ಮುಂತಾದ ಸ್ಥಳಗಳನ್ನು ಬಿಟ್ಟುಕೊಡಬೇಕಾಯಿತು. ಕಾರ್ಪೆತಿಯನ್ ಬೆಟ್ಟಗಳ ಸಮೀಪದಲ್ಲಿಯೂ ಕಿರ್ಲಿಬಾಬಾ ಬಳಿಯಲ್ಲಿಯೂ ರುಸ್ಯರು ಹಿಮ್ಮೆಟ್ಟಿದರು. ಈ ಬಿಟ್ಟುಕೊಟ್ಟ ಭಾಗಗಳಲ್ಲಿ ವೈರಿ ಕೈಯ್ಯಲ್ಲಿ ತಯಾರಾಗಿದ್ದದರಿಂದ ಇದನ್ನು ಬಿಟ್ಟುಕೊಡಬೇಕಾಗಿ ಬಂದದ್ದು ರುಸ್ಯರಿಗೆ ಬಾಧಕವಿ ಸರಿ.

ಜರ್ಮನರ ಯುದ್ಧವಿಮಾನಗಳು ಡೆಂಸ್ ಪಟ್ಟಣದ ಮೇಲೆ ಹಾರಿಬಂದವು. ಆದರೆ ಹೆಚ್ಚಿನ ಹಾವಳಿಮಾಡಲು ಸಾಧ್ಯವಾಗಲಿಲ್ಲ.

ಬ್ರಿಟಿಷ್ ಯುದ್ಧವಿಮಾನಗಳು ಕಳೆದ ಶನಿವಾರ ಬ್ರೂಸೆಲ್ಸ್, ಧೂರೊ, ವಿತಲ್‌ಕೇರ್, ಗ್ರಿಸ್ಸೆಲ್ಲಿ ಮುಂತಾದ ಜರ್ಮನರ ವಶವಾಗಿದ್ದ ಪಟ್ಟಣಗಳ ಮೇಲೆ ಸಿಡಿಮದ್ದನ್ನು ಚೆಲ್ಲಿದುವು.

ಲಿಸ್‌ನದಿಯ ಬಳಿಯಲ್ಲಿರುವ ಲಾಬೆಸ್ಸಿವಿಲ್ಲೆಯಿಂದ ಇಜರ್‌ನದಿಯ ಮೇಲಿರುವ ಸ್ಟೀನ್‌ಸ್ಟ್ರಾಟ್ ವರೆಗೆ ೧೫ ಮೈಲುಗಳ ವಿಸ್ತಾರಕ್ಕೆ ಜರ್ಮನರ ಸೈನ್ಯವು ಇಂಗ್ಲಿಷ್ ಸೈನ್ಯದಿಂದ ಪೆಟ್ಟುತಿಂದು ಹಿಮ್ಮೆಟ್ಟಿತೆಂತಲೂ ಅದೇ ಸಮಯದಲ್ಲಿ ಫ್ರೆಂಚರು ೩ ಮೈಲು ವಿಸ್ತಾರಕ್ಕೆ ಮುಂದೊತ್ತಿದರೆಂತಲೂ ತಿಳಿದುಬರುತ್ತದೆ. ಸುಮಾರು ೩,೫೦೦ ಜನರು (ಜರ್ಮನ) ಸೆರೆಹಿಡಿಯಲ್ಪಟ್ಟರು.

ಒಂದು ಜರ್ಮನ ಜಲಾಂತರ್ಗಾಮಿಯು ಬಹಳ ನಾರ್ಡುಯಸ್ಟ್ರಾಗ ಕೆರಸ್ಸಾ ಎಂಬಲ್ಲಿಗೆ ಬಂದಿದೆ. ಬ್ರಿಟಿಷರ 'ಆರಿಯಡ್ನೆ' ಎಂಬ ಯುದ್ಧಹಡಗು ಟೋರ್ಪಿಡೊ ತಗಲಿ ಮುಳುಗಿತು. ೩೮ ಮಂದಿ ಹಡಗಿನಲ್ಲಿದ್ದವರು ಟೋರ್ಪಿಡೊ ಸಿಡಿತ ತಗಲಿ ಸತ್ತುಹೋದರು.

ರುಸ್ಸನ್ ರಣರಂಗದಲ್ಲಿ ಬ್ರಾಕ್‌ನದಿಯನ್ನು ಜರ್ಮನರು ದಾಟಿಹೋಗಲಿಕ್ಕೆ ಆಗಲಿಲ್ಲ. ಜಾಲಿಸಕ್ ಎಂಬಲ್ಲಿ ಅವರು ಸೋತರು; ಆದರೆ ಜ್ವಿರ್ಮೋಕಿಸೆಲಿ, ಸ್ಟೆಕೋವಾ ಎಂಬಲ್ಲಿ ರುಸ್ಯರು ಹಿಮ್ಮೆಟ್ಟಬೇಕಾಯಿತು. ಕಾರ್ಪೆತಿಯನ್ ಪರ್ವತದ ಬಳಿಯಲ್ಲಿಯೂ ಮೋಲ್ಡೇವಿಯದ ಕಿಮೋರಲ್ ಎಂಬಲ್ಲಿಯೂ ರುಸ್ಯರು ಹಿಂಜರಿದರು. ರುಮೇನಿಯದ ರಣರಂಗದಲ್ಲಿಯೂ ಮಾಯೊಟ್ಟೆ ಬಳಿಯಲ್ಲಿ ರುಮೇನಿಯರೂ ರುಸ್ಯರೂ ಹಿಮ್ಮೆಟ್ಟಿದರು.

ಬ್ರಿಟಿಷ್ ಇಂಡಿಯಾ ಕಂಪೆನಿಯ 'ಒಕ್ರಾ' ಎಂಬ ಹಡಗವು ಸಮುದ್ರದಲ್ಲಿ ತೇಲಿಸಿಬಿಟ್ಟ ಸಿಡಿಮದ್ದಿನ ಗುಂಡಿಗೆ ತಗಲಿ ಮುಳುಗಿತು.

ಗತವಾರದಲ್ಲಿ ಬ್ರಿಟಿಷರ ೧,೬೦೦ ಟನ್ನಿಗೆ ಮಿಗಿಲಾದ ೧೮ ಹಡಗುಗಳೂ ೧,೬೦೦ ಟನ್ನಿಗೆ ಕಡಿಮೆಯಾದ ೩ ಹಡಗುಗಳೂ ಮುಳುಗಿಹೋದುವು.

ಪಶ್ಚಿಮ ಯುದ್ಧರಂಗದಲ್ಲಿ ಮಳೆಯ ಹೊಡೆತವು ಕೆಲವು ದಿನಗಳಿಂದ ಜೋರಾಗಿದ್ದರೂ ಬ್ರಿಟಿಷರ ಮತ್ತು ಫ್ರೆಂಚರ ಸಾಹಸದ ಬೆಂಕಿಯು ರವೆಯಷ್ಟಾದರೂ ಆರಿಹೋಗಿಲ್ಲ. ಫ್ರೆಂಚರು ಇಜರ್‌ಕಾಲಿವೆಯ ಪೂರ್ವಭಾಗದಲ್ಲಿ ಸ್ವಲ್ಪ ಮುಂದೊತ್ತಿಹೋದರು. ಜಿಲ್ಲೆಬೆಕ್ ಸಮೀಪದಲ್ಲಿ ಬ್ರಿಟಿಷರು ಸ್ವಲ್ಪ ಮುಂದೆ ಸರಿದರು. ಈ ಪಟ್ಟಣದ ಪೂರ್ವ ಮತ್ತು ಈಶಾನ್ಯಭಾಗಗಳಲ್ಲಿ ಆಗಲೇ ಜರ್ಮನರಿಂದ ಕಿತ್ತುಕೊಂಡ ಕೆಲವು ಭಾಗಗಳನ್ನು ತುಂಡತುಂಡವಾಗಿ ಮೇಲೆ ಬಿದ್ದ ಜರ್ಮನರಿಗೆ ಹಿಂದಕ್ಕೆ ಕೊಟ್ಟು ಸೆಂಟ್ ಜೂಲಿಯನ್ ಎಂಬಲ್ಲಿಂದ ಹಿಮ್ಮೆಟ್ಟಬೇಕಾಗಿ ಬಂತು. ಈಪರ್‌ನಿಂದ ರೂಲರ್ಸ್‌ಗೆ ಹೋಗುವ ರೈಲುರಸ್ತೆಯ ಬಳಿಯಲ್ಲಿ ಜರ್ಮನರು ಬ್ರಿಟಿಷರ ವಾಳ್ಯದ ಸ್ವಲ್ಪ ಭಾಗವನ್ನು ಕಿತ್ತುಕೊಂಡರು. ಜರ್ಮನ್‌ರ ೫೦೦೦ ಸೈನಿಕರನೂ ಕೆಲವು ಫಿರಂಗಿಗಳನ್ನೂ ಹಿಡಿದೆವು. ಜರ್ಮನರ ಆರು ಯುದ್ಧವಿಮಾನಗಳು ನೆಲಕ್ಕೆ ಉರುಳಿಬಿದ್ದವು. ನಮ್ಮ ಕಡೆಯ ಮೂರು ವಿಮಾನಗಳು ಅದೃಶ್ಯವಾಗಿವೆ.

ಫ್ರೆಂಚರ ಹಲವು ವಿಮಾನಗಳು ಜರ್ಮನರ ವಶದಲ್ಲಿದ್ದ ಮೆಟ್ಜ್, ರೂಲರ್ಸ್, ತಿಯೊನ್‌ವಿಲ್ಲೆ ಎಂಬಲ್ಲಿ ಸಿಡಿಮದ್ದನ್ನು ಜರ್ಮನ್ ಕೆಂಟೋನಮೆಂಟುಗಳ ಮೇಲೂ ಯುದ್ಧಸಾಮಗ್ರಿಗಳ ಕಾರ್ಖಾನೆಗಳ ಮೇಲೂ ಚೆಲ್ಲಿ ಬಹಳ ಹಾವಳಿಯನ್ನುಂಟುಮಾಡಿದುವು.

ಫ್ರೆಂಚರ ಜನರಲ್ ಪೆಟೆಯನ್‌ರು ಮಾಡಿದ ಸನ್ನಾಹದ ಬಿಗುವಿನ ಬಲದಿಂದ ಇಜರ್‌ಕಾಲಿವೆಯ ಬಳಿಯಲ್ಲಿ ಮಿತ್ರಮಂಡಲಿಯವರ ಫಿರಂಗಿ ಗುಂಡುಗಳು ಜರ್ಮನರ ಗುಂಡುಗಳ ಐದುಪಾಲನ್ನು ಹೆಚ್ಚಾಗಿ ಹಾರುತ್ತಿದ್ದದರಿಂದ ಜರ್ಮನರು ತಮ್ಮ ವಾಳ್ಯದ ಪ್ರಥಮದ ೩ ಸಾಲುಗಳನ್ನು ಬಿಟ್ಟು ಹಿಂಜರಿಯಬೇಕಾಯಿತು. ಗುಂಡುಗಳು ಬಿದ್ದು ನೆಲದಲ್ಲಿ ಉಂಟಾದ ದೊಡ್ಡ ಹೊಂಡಗಳಲ್ಲಿ ಮಳೆನೀರು ನಿಂತು ಆ ಪ್ರದೇಶವು ನೋಡಲಿಕ್ಕೆ ಭಯಂಕರವಾಗಿದೆ.

ಜುಲೈ ೨೮ನೇ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ಇಟೆಲಿಯ ೮ ಸಣ್ಣ ಹಾಯಿಹಡಗುಗಳೂ ಫ್ರೆಂಚರ ೩ ಹಡಗುಗಳೂ ಮಾತ್ರವೇ ಮುಳುಗಿಹೋದುವು.

ರುಸ್ಯದ ಸೈನ್ಯವು ಟ್ರೊಕ್‌ಜ್‌ನದಿಯ ಹಿಂದಕ್ಕೆ ಹಲವು ಕಡೆಗಳಲ್ಲಿ ದಾಟಿಹೋಗಬೇಕಾಯಿತು. ನೀಸ್ಟರ್ ಮತ್ತು ಪ್ರುತ್‌ನದಿಯ ಮಧ್ಯಭಾಗದ ಪ್ರದೇಶದಲ್ಲಿಯೂ ಅವರು ಹಿಮ್ಮೆಟ್ಟಿದರು. ಕೀಲಮೂಲನ್ನು ರುಸ್ಯರು ಬಿಟ್ಟುಹೋದರು. ಪೋಕ್ಸ್ ಊರನ್ನು ಜರ್ಮನರು ಹಿಡಿದರು.

ಜನರಲ್ ಕೋರ್ನಿಲೊಫನ ಸೈನ್ಯವು ಒಂದುಕಾಲದಲ್ಲಿ ಯುದ್ಧರಂಗವನ್ನು ಬಿಟ್ಟುಹೋಗುತ್ತಿದ್ದರೂ ಈಗ ಪುನಃ ಜೊತೆಯಾಗಿ ಜರ್ಮನರ ಹಾದಿಯನ್ನು ಅಡ್ಡಕಟ್ಟುತ್ತಲಿದ್ದಾರೆ.

ಇಂಗ್ಲಿಷ್ ಮತ್ತು ಫ್ರೆಂಚ್‌ಸೈನ್ಯವು ಬಹಳ ಸಾಹಸಮಾಡಿ ಬೆಲ್ಜಿಯಮ್ ಕರಾವಳಿಯ ಪ್ರದೇಶದಲ್ಲಿ ಜರ್ಮನರ ಮೇಲೆ ಬಿದ್ದು ಜರ್ಮನರ ವಾಳ್ಯದಲ್ಲಿ ಬಹಳ ದೂರದ ವರೆಗೆ ಹೋದ ಕಾರಣ ಜರ್ಮನರು ತಾವು ಹಿಮ್ಮೆಟ್ಟಬೇಕಾಯಿತು ಎಂದು ಒಪ್ಪುತ್ತಾರೆ.

ಮಳೆಗಾಲ ಜೋರಾಗಿದ್ದದರಿಂದ ನೋಟಬೆಕ್ಕೆ ಎಂಬಲ್ಲಿ ಇಂಗ್ಲಿಷರು ಈ ಮೊದಲು ಹಿಡಿದು ಭದ್ರಪಡಿಸಿದ ಭಾಗಗಳ ಮೇಲೆ ಮರಳಿಬಿದ್ದು ಜರ್ಮನರು ಕಿತ್ತುಕೊಳ್ಳುವುದಕ್ಕೆ ಯತ್ನಿಸಿ ಸುಮಾರು ಅರ್ಧಮೈಲು ವಿಸ್ತಾರದ ಒಂದು ಸ್ಥಳದಲ್ಲಿ ಇಂಗ್ಲಿಷರ ವಾಳ್ಯದ ಕೆಲವಂಶವನ್ನು ಹಿಡಿದರು. ಆದರೆ ಇಂಗ್ಲಿಷ್ ಸೈನ್ಯವು ಪುನಃ ಸಿದ್ಧವಾಗಿ ಒಂದು ಮೇಲೆ ಬಿದ್ದು ಅವರ ಒಂದು ಅಂಶವನ್ನು ಹಿಂದಕ್ಕೆ ಹಿಡಿಯಿತು. [illegible] ಮತ್ತು [illegible] ಬಳಿಯಲ್ಲಿ ಜರ್ಮನರ ಪ್ರಯತ್ನಗಳು ನಿಷ್ಫಲವಾಗಿಲ್ಲ. ಇಂಗ್ಲಿಷರಿಂದ ಹಿಡಿದ ಸೆಂಟ್ ಜೂಲಿಯನ್ ಊರು ಇಂಗ್ಲಿಷರ ವಶಕ್ಕೆ ಪುನಃ [illegible] ಎಂಬಲ್ಲಿ ಜರ್ಮನರು ಹಿಡಿದ [illegible] ಇಂಗ್ಲಿಷರ ವಶಕ್ಕೆ ಬಂದಿರುವುದು.

ಮ್ಯೂಸ್‌ನದಿಯ ಇಕ್ಕಡೆಗಳಲ್ಲಿಯೂ ಫ್ರೆಂಚರ ಫಿರಂಗಿಗಳ ಶಬ್ದವು ಜೋರಾಗಿ ಕೇಳಿಸುತ್ತದೆ.

ಈಪರ್ ಕೊಮಿನ್ಸ್‌ರಸ್ತೆ ಮತ್ತು ಈಪರ್‌ರೂಲರ್ಸ್ ರೈಲ್ವೆಯ ಬಳಿಯ ಪ್ರದೇಶಗಳನ್ನು ಮಿತ್ರಮಂಡಲಿಯವರಿಂದ ಕೀಳಲಿಕ್ಕೆ ಜರ್ಮನರು ಮಾಡಿದ ಸಾಹಸವು ಅಷ್ಟಿಷ್ಟಲ್ಲ.

ಜರ್ಮನ್ ಕೈಸರನು ಯುದ್ಧದ ೪ನೇ ವರ್ಷದ ಪ್ರಥಮ ದಿನವಾದ ಒಗಸ್ಟ ೪ನೇ ತಾರೀಕಿನಲ್ಲಿ ತನ್ನ ಇಡೀ ಸೈನ್ಯಕ್ಕೆ ಉತ್ತೇಜಕವಾದ ಒಂದು ಸರ್ಕ್ಯುಲಾರನ್ನು ಕೊಟ್ಟಿರುವನು. ಇದರ ಮೇರೆಗೆ ಇನ್ನೂ ಜರ್ಮನ ಗರ್ವವು ಕೊಬ್ಬು ಮುರಿಯಲಿಲ್ಲವೆಂದು ಕಾಣುತ್ತದೆ. "ಜಗತ್ತಿನ ಮುಖ್ಯವಷ್ಟು ರಾಜ್ಯಗಳ ವಿರೋಧಕಟ್ಟಿಕೊಂಡು ಇನ್ನೂ ತಾನು ಗೆಲ್ಲುವೆನೆಂದು ಬಹಿರಂಗವಾಗಿ ಹೇಳುವುದು" ಎಂಥ ಉದ್ಧಟತನ!

ವಿದೇಶ ವೃತ್ತಾಂತ.

ಇಂಗ್ಲೆಂಡಿನಲ್ಲಿ ಕೈಗಾರಿಕೆ ಕಾರ್ಖಾನೆಗಳಲ್ಲಿ ಕಾಯಕಷ್ಟಮಾಡಿ ಜೀವಿಸುವಂಥವರ ಒಂದ ಕೂಟವಿದೆ. ಇದಕ್ಕೆ ಲೇಬರ್ ಕೂಟವೆನ್ನುವರು. ಇವರ ಪ್ರತಿನಿಧಿಗಳ ಪಾರ್ಲಿಮೆಂಟಿನಲ್ಲಿಯೂ ಮೆಂಬರರಾಗಿದ್ದು ಈ ಜನರ ಅಹವಾಲಿಗಳನ್ನು ಆಗಾಗ ಪಾರ್ಲಿಮೆಂಟಿನ ಮುಂದೆ ತಂದು ಅವರಿಗೆ ಸುಧಾರಣೆ ಮಾಡಲು ಯತ್ನಿಸುತ್ತಿದ್ದಾರೆ. ಇಂಥ ಕೂಟಗಳು ಈಗ ಸಾಮಾನ್ಯವಾಗಿ ಪಾಶ್ಚಿಮಾತ್ಯ ಆಡಳಿತೆಯ ಕ್ರಮವು ಜಾರಿಯಲ್ಲಿರುವ ಎಲ್ಲಾ ರಾಜ್ಯಗಳಲ್ಲಿಯೂ ಪ್ರಬಲಕ್ಕೆ ಬಂದಿರುತ್ತದೆ. ಇಂಗ್ಲೆಂಡಿನ ಇಂಥ ಕೂಟದ ಪ್ರತಿನಿಧಿಗಳಾಗಿ ಮಿ. ಹೆಂಡರ್‌ಸನ್, ವಾರ್ಡಲ್, ರಾಮಸೆ ಮೆಕ್‌ಡೊನಲ್ಡ್ ಎಂಬ ಮೂರು ಮುಖಂಡರು ಈಗಿನ ಯುದ್ಧದ ಸ್ಥಿತಿಯನ್ನು ಕುರಿತು ಫ್ರೆಂಚ ಮತ್ತು ರುಸ್ಯದ ಲೇಬರ್ ಕೂಟದವರೊಡನೆ ಚರ್ಚಿಸಲಿಕ್ಕೆ ಫ್ರಾನ್ಸ್‌ದೇಶಕ್ಕೆ ಹೋಗಿರುವರು.

ರುಸ್ಯದಲ್ಲಿ ಮಾಡಿದಂತೆ ರುಮೇನಿಯದಲ್ಲಿಯೂ ಕ್ರಾಂತಿಯನ್ನು ಉಂಟುಮಾಡುವುದಕ್ಕೆ ಜರ್ಮನರು ಬಹಳ ಪ್ರಯತ್ನ ಮಾಡಿದರೂ ಹೆಚ್ಚಿನ ಪ್ರಯೋಜನ ಸಿಕ್ಕಲಿಲ್ಲವಂತೆ.

ಸೈನಿಕರು ಮತ್ತು ಕಾಯಕಷ್ಟದಿಂದ ಜೀವಿಸುವವರ ಪ್ರತಿನಿಧಿಗಳ ಕೂಟವೊಂದು ನೇಲ್ಡ್‌ದೇವದ ಸ್ವಾನಸಿ ಎಂಬಲ್ಲಿ ಜರಗಲಿಕ್ಕಿತ್ತು. ಆದರೆ ಅದು ಆರಂಭಿಸುವಷ್ಟರಲ್ಲಿಯೇ ಊರಜನರೂ, ನಾವಿಕರೂ, ಸೈನಿಕರೂ ಕೆಲವರು ಬಂದು ಅವರ ಮೇಲೆ ಬಿದ್ದು ಓಡಿಸಿ ಅವರ ಕೂಟವನ್ನು ನಿಲ್ಲಿಸಿಬಿಟ್ಟರು.

ಲಂಡನ್ ಎಂಬವನೊಬ್ಬನು ಇಂಗ್ಲೆಂಡಿನಲ್ಲಿ ಕೈಗಾರಿಕೆ ವೃತ್ತಿಯವರ ಮತ್ತು ಸೈನ್ಯಕ್ಕೆ ಸೇರಿದವರ ಪ್ರತಿನಿಧಿಗಳ ಸಭೆಗಳನ್ನು ಇಂಗ್ಲೆಂಡಿನಲ್ಲಿ ಕೈಗಾರಿಕೆಯ ಕೆಲವು ಮುಖ್ಯ ಪಟ್ಟಣಗಳಲ್ಲಿ ಸ್ಥಾಪಿಸಿರುವನು. ಇವುಗಳ ಪ್ರತಿನಿಧಿಗಳು ಒಂದು ಅಧಿವೇಶನವನ್ನು ಜರಗಿಸಿ ವಿಲಾಯಿತಿಯ ಮಹಾಯುದ್ಧವು ಬೇಗನೆ ನಿಲ್ಲಿಸಬೇಕೆಂಬ ವಿಷಯವನ್ನು ಚರ್ಚಿಸುವಾಗ ಲಂಡನಿನಲ್ಲಿಯೂ ನಿವ್ಕೆಸ್ಟಲ್ ಎಂಬಲ್ಲಿಯೂ ಜನರು ಕೋಣೆಯೊಳಗೆ ಪ್ರವೇಶಿಸಿ ಬಲಾತ್ಕಾರದಿಂದ ಈ ಸಭಿಕರನ್ನು ಹೊಡೆದು ಅವಮಾನಪಡಿಸಿ ಓಡಿಸಿದರು.

ರುಸ್ಯದಲ್ಲಿ ಪರರಾಷ್ಟ್ರಗಳ ವ್ಯವಹಾರದ ಮಂತ್ರಿಯು ಈಗ ರುಸ್ಯದ ಸೈನ್ಯದಲ್ಲಿ ಆದ ಗಲಭೆಯಿಂದ ಯುದ್ಧದ ಧ್ಯೇಯವು ಕೊನೆಗಾಣುವುದಕ್ಕೆ ಅಡ್ಡಿಬಾರದ ಹಾಗೆ ಪ್ರಯತ್ನ ನಡೆದಿದೆ ಎಂತ ಮಿತ್ರಮಂಡಲಿಯ ಎಲ್ಲಾ ರಾಜಧಾನಿಗಳಿಗೆ ತಿಳಿಸಿರುವನು.

ಒಗಸ್ಟ ತಿಂಗಳಲ್ಲಿ ಯುನೈಟೆಡ್ ಸ್ಟೇಟ್ಸಿನವರು ತಮ್ಮಿಂದ ಪಡಕೊಳ್ಳುವ ಎಲ್ಲಾ ವಿಧದ ಸಾಮಗ್ರಿಗಳ ಬಗ್ಗೆ ಬ್ರಿಟಿಷರಿಗೆ ೩೬ ಮಿಲಿಯ ಫ್ರಾನ್ಸಿಗೆ೩ ಮಿಲಿಯ ಪೌಂಡು ಸಾಲಕೊಟ್ಟಿರುವರು.

ಗ್ರೀಸ್‌ರಾಜ್ಯದಲ್ಲಿ ಪದಚ್ಯುತನಾದ ಕೊನ್‌ಸ್ಟೆಂಟೈನನ ಪಕ್ಷದವರು ಕೆಲವರು ಸ್ವಲ್ಪ ದಂಗೆ ಎಬ್ಬಿಸಿದ್ದು ರಾಜ್ಯದ ಕೆಲವು ಭಾಗಗಳಲ್ಲಿ ಸರಕಾರದವರು ಸೈನ್ಯದಮುತ್ತಿಗೆ ಹಾಕಿರುವರು.

ಉತ್ತರ ಹಿಂದೂಸ್ಥಾನ.

ಕಲ್ಕತ್ತ — ಕಲ್ಕತ್ತಾ ಯುನಿವರ್ಸಿಟಿಯ ಪರವಾಗಿ ಒಂದು ರೆಜಿಮೆಂಟನ್ನು ನಿರ್ಮಿಸುವ ಕಮಿಟಿಯವರು ಬಂಗಬಾಸಿ ಕಾಲೇಜಿನಲ್ಲಿ ಸಭೆಸೇರಿದಾಗ ಆ ಕಾಲೇಜಿನ ಒಂದು ಪ್ರೊಫೆಸರರೂ (ಉಪಾಧ್ಯಾಯರೂ) ೩೮ ವಿದ್ಯಾರ್ಥಿಗಳೂ ಈ ರೆಜಿಮೆಂಟಿಗೆ ಸೇರುವುದಕ್ಕೆ ಒಪ್ಪಿದರು.

೧೯೧೬ನೇ ಮಾರ್ಚ ಆಖೈರಿಗೆ ಪೋಸ್ಟ್ ಆಫೀಸ್ ಸೇವಿಂಗ್ಸ್ ಬೇಂಕುಗಳಲ್ಲಿ ಠೇವಣಾತಿ ಇದ್ದ ಹಣ ಮತ್ತು ಆ ವರೆಗಿನ ಬಡ್ಡಿ ಕೂಡಿ ೧೬೫೮ ಲಕ್ಷ ರೂಪಾಯಿ ಆಗಿತ್ತು, ಎಂತಲೂ ಇದು ೧೯೧೬ನೆ ಇಸವಿ ಮಾರ್ಚ ಆಖೈರಿಗೆ ಇದ್ದ ಹಣಕ್ಕಿಂತಲೂ ಸೇಕಡಾ ೮ರಷ್ಟು ಮಿಕ್ಕಿ ಇತ್ತೆಂತಲೂ ಗೊತ್ತಾಗುತ್ತದೆ.

ದಕ್ಷಿಣ ಹಿಂದೂಸ್ಥಾನ.

೧೯೧೬ನೇ ಮಾರ್ಚ ಆಖೈರಿಗೆ ಅಂತ್ಯವಾದ ಒಂದು ವರ್ಷದಲ್ಲಿ ಮದ್ರಾಸು ಸಂಸ್ಥಾನದಲ್ಲಿ ೧,೫೧,೦೪,೮೮೯ ರೂಪಾಯಿ ಬೆಲೆಯ ರಸೆಕಾಗದ ಖರ್ಚಾಯಿತೆಂದು ತಿಳಿದುಬರುತ್ತದೆ. ಈ ವೈಕೆ ಕೋರ್ಟ ರಸೆಕಾಗದಗಳ ಖರ್ಚು ಹೆಚ್ಚೆಂದು ರಿಪೋರ್ಟ ಹೇಳುತ್ತದೆ. ಇದರಲ್ಲಿ ತಂಜಾವೂರ ಜಿಲ್ಲೆಯಲ್ಲಿಯೂ ೮,೮೫,೩೦೩ ರೂಪಾಯಿ ಬೆಲೆಯ ರಸೆಖರ್ಚಾಗಿ ಈ ಜಿಲ್ಲೆಯು ವ್ಯಾಜ್ಯಗಳನ್ನು ದಾಖಲು ಮಾಡುವುದರಲ್ಲಿ ಪ್ರಥಮಸ್ಥಾನವನ್ನು ಹೊಂದುತ್ತದೆ. ಮಲೆಬಾರಿನಲ್ಲಿ ೭,೭೫,೬೬೬ ರೂಪಾಯಿಯಷ್ಟು ಖರ್ಚಾಗಿ ಆ ಜಿಲ್ಲೆಯು ೨ನೆ ಸ್ಥಾನವನ್ನು ಸೇರಿದೆ.

ಕಳೆದ ತಿಂಗಳ ೨೬, ೨೭, ೨೮ನೆ ತಾರೀಕುಗಳಲ್ಲಿ ವಿದ್ಯಾಸಂಬಂಧವಾದ ಒಂದು ಪ್ರದರ್ಶನವು ಅರ್ಕಾಟಿಯಲ್ಲಿ ಜರಗಿತು. ಉತ್ತರಆರ್ಕಾಡು ಜಿಲ್ಲೆಯ ಕಲೆಕ್ಟರ್ ಮಿ. ಜಿ. ಎಸ್. ರೋಯಿಯವರು ಅಧ್ಯಕ್ಷರಾಗಿದ್ದರು. ಈ ಪ್ರದರ್ಶನವು ಅರ್ಕಾಟಿಯ್ಯಾದ ರೇಂಜಿನ ಎಲಿಮೆಂಟ್ರಿ ಶಾಲೆಗಳ ಉಪಾಧ್ಯಾಯರ ಸಂಘಗಳ ಪ್ರಯತ್ನದಿಂದ ಉಂಟಾಯಿತೆಂದು ತಿಳಿದುಬರುತ್ತದೆ.

ತಿರುಪತಿಯ ಮಹಂತರ ಮೇಲೆ ಆರೋಪಿಸಿದ ಮೊಕದ್ದಮೆಗಳ ವಿಚಾರವು ನಡೆಯಲಾರಂಭಿಸಿದೆ. ಜೋಯಿಂಟ್ ಮೆಜಿಸ್ಟ್ರೇಟ್ ಮಿ. ರೋಬರ್ಟ್‌ಸನ್ ಇವರು ಪ್ರಥಮ ತನಿಖೆ [illegible]

ಅಹಮ್ಮದ್‌ಖಾದರ ಸಾಹೇಬ ಬಹದ್ದೂರರವರು ಈಗ ತನಿಖೆ ಮಾಡುತ್ತಿರುವರು. ೨೬ನೇ ತಾರೀಕಿಗೆ ಬಾವಾಜಿ ರಾಮಲಕ್ಷ್ಮಣ ದೋಸಜಿಯವರನ್ನು ಪೋಲೀಸಿನವರು ಕೈದುಮಾಡಿದರು. ಆದರೆ ಡಿಸ್ಟ್ರಿಕ್ಟ ಜಡ್ಜರಾದ ಮಿ. ಬೂಟಿಯವರು ಇವರನ್ನು ಜಾಮೀನಿನ ಮೇಲೆ ಬಿಟ್ಟರು.

ಮೊದಲನೇ ಚಾರ್ಜಿನಲ್ಲಿ ದೋಸಜೀಯವರು ಪ್ರಭುಗಳು ಮೊದಲಾದವನ್ನು ತಾನೇ ಬಿನಾಮಿಯಾಗಿ ಬೇರೆಯವರ ಹೆಸರಿನಲ್ಲಿ ದೇವಸ್ಥಾನದಲ್ಲಿ ಭದಗಿಸಿಕೊಟ್ಟ ಹಾಗೆ ಕಾಣುತ್ತದೆ. ಈಗ ಈ ಮೊಕದ್ದಮೆಯು ವಿಚಾರ ನಡೆಯುತ್ತಲಿದೆ.

ಮದ್ರಾಸ್ ಸ್ಮೊಲ್‌ಕೊಜ್ ಕೋರ್ಟಿನ ಚೀಫ್ ಜಡ್ಜರಾಗಿರುವ ಮ| ರಾ| ಸಿ. ಕೃಷ್ಣನ್‌ರನ್ನು ತಂಗಾಮಿಯಾಗಿ ಮದ್ರಾಸ್ ಹೈಕೋರ್ಟಿನ ಎಡ್ಡಿಶನಲ್ ಜಡ್ಜರಾಗಿ ನೇಮಿಸಿರುವರು.

ಪೋರ್ತುಗೀಸ್ ಇಂಡಿಯದಿಂದ (ಗೋವೆ ಪ್ರಾಂತ್ಯ) ಹೊರಗೆ ಪ್ರಯಾಣ ಮಾಡುವವರು ೫ ರೂಪಾಯಿಗಳ ಬೆಲೆಗಿಂತ ಹೆಚ್ಚಿನ ಬೆಲೆಯ ಬೆಳ್ಳಿಯ ನಾಣ್ಯಗಳನ್ನು ಕೊಂಡುಹೋಗ ಬಾರದಾಗಿ ಪೋರ್ತುಗೀಸ್ ಇಂಡಿಯದ ಸರಕಾರದವರು ಹುಕುಂ ಮಾಡಿರುವರು.

ಇಡೀ ಹಿಂದೂಸ್ಥಾನದಲ್ಲಿ ಇಂಡಿಯನ್ ಡಿಫೆನ್ಸ್ ಫೋರ್ಸ್ (ಹಿಂದೂಸ್ಥಾನದ ರಕ್ಷಣೆಯ ಸೈನ್ಯ) ಬಗ್ಗೆ ಉಮೇದ್ವಾರರನ್ನು ಚುನಾಯಿಸುವುದಕ್ಕೂ ಅದಕ್ಕೆ ಸಂಬಂಧಿಸಿದ ಇತರ ಎಲ್ಲಾ ವಿಲೆವಾರಿಗಳನ್ನು ನಡಿಸುವುದಕ್ಕೂ ಒಂದು ಸೆಂಟ್ರಲ್ ಬೋರ್ಡು ಮತ್ತು ಅದರ ಅಧಿಕಾರದೊಳಗೆ ಪ್ರತಿ ಒಂದು ಸಂಸ್ಥಾನದಲ್ಲಿ ಒಂದು ಪ್ರೊವಿನ್‌ಶಿಯಲ್ ಬೋರ್ಡು ಏರ್ಪಡಿಸಬೇಕಾಗಿ ಇಂಡಿಯಾ ಗವರ್ನಮೆಂಟಿನವರು ಇತ್ಯರ್ಥಿಸಿದ ಮೇರೆಗೆ ಮದ್ರಾಸು ಗವರ್ನಮೆಂಟಿನವರು ಒಂದು ಬೋರ್ಡನ್ನು ಏರ್ಪಡಿಸಿರುವರು. ಅದಕ್ಕೆ ಸರಕಾರದ ಎಕ್ಸಿಕ್ಯುಟಿವ್ ಕೌನ್ಸಿಲಿನ ೨ನೇ ಮೆಂಬರರಾದ ಒನರೆಬಲ್ ಗಿಲ್ಮನರು ಅಧ್ಯಕ್ಷರಾಗಿದ್ದು ಇನ್ನು ೧೫ ಮೆಂಬರುಗಳು ಇರುವರು. ದೇಶಿಯರಲ್ಲಿ ಬೊಬ್ಬಿಲಿ, ರಾಮನಾಡ, ಕೊಲ್ಲೆಂಗೋಡ, ಪಿಠ್ಠಾಪುರದ ಜಮೀನುದಾರರೂ, ಸರ್ ಶಿವಸ್ವಾಮಿ ಅಯ್ಯರೂ, ಮ| ರಾ| ರಾಮರಾಯ ನಿಂಗಾರ, ಖಾನ್ ಬಹದ್ದೂರ ಅಹಮ್ಮದ್‌ತಂಬಿ ಮರಕಾಯರ್ ಇವರು ಈ ಬೋರ್ಡಿನ ಮೆಂಬರುಗಳು.

ಇಂಡಿಯನ್ ಡಿಫೆನ್ಸ್ ಫೋರ್ಸಿಗೆ ದಾಖಲಾದವರು ಮೆಸೊಪೊಟೆಮಿಯಾ ಬಸ್ರಾ, ಮುಂತಾದ ಪ್ರದೇಶಗಳಲ್ಲಿ ಹೋಗಿ ಕೆಲಸ ಮಾಡಬೇಕಾಗಿ ಅವರಿಗೆ ಒತ್ತಾಯ ಪಡಿಸುವುದಕ್ಕೆ ಸಾಧ್ಯವಿದೆಯೆ ಎಂದು ಒಬ್ಬರು ಸರ್. ಶಿವಸ್ವಾಮಿ ಅಯ್ಯರಿಗೆ ಪ್ರಶ್ನಿಸಿದ್ದಕ್ಕೆ ಆ ಪ್ರದೇಶಗಳು ಹಿಂದೂಸ್ಥಾನಕ್ಕೆ ಸೇರಿಲ್ಲದಿದ್ದರಿಂದ ಅಲ್ಲಿ ಹೋಗಿ ಕೆಲಸಮಾಡಬೇಕೆಂದು ಈ ಫೋರ್ಸಿನಲ್ಲಿ ದಾಖಲಾದವರಿಗೆ ಬಲತ್ಕಾರ ಪಡಿಸಲಿಕ್ಕೆ ಸಾಧ್ಯವಿಲ್ಲವೆಂಬದಾಗಿ ಉತ್ತರ ಕೊಟ್ಟಿರುವರು.

ಮಿಸೆಸ್ ಬಿಸೆಂಟರ ಫಂಡಿಗೆ ಒಟ್ಟಿಗೆ ೪ನೇ ತಾರೀಕಿನ ವರೆಗೆ ರೂಪಾಯಿ ೩೯,೫೭೯ — ೧೩ — ೧೧ ವಂತಿಗೆಯಾಯಿತೆಂದು ತಿಳಿದುಬರುತ್ತದೆ.

ದಕ್ಷಿಣ ಕನ್ನಡ.

ಫೋರ್ಟಸೆಂಟ್‌ಜೋರ್ಜ ಗಜೇಟಿನ ಉತಾರು.

ಮ| ರಾ| ಎಚ್. ಲಕ್ಷ್ಮೀನಾರಾಯಣ ಶಟ್ಟಿಯವರು ಕುಂದಾಪುರ ತಾಲೂಕು ಬೋರ್ಡಿನ ಮೆಂಬರರಾಗಿ ಆರಿಸಲ್ಪಟ್ಟದ್ದು ಮಂಜೂರಾಗಿಯದೆ.

ಮ| ರಾ| ಕೆ. ಕುಂಞಾಬು ನಾಯರರು ಪುತ್ತೂರು ತಾಲೂಕುಬೋರ್ಡಿನ ಮೆಂಬರರಾಗಿ ಆರಿಸಲ್ಪಟ್ಟದ್ದು ಮಂಜೂರಾಗಿಯದೆ.

ಮ| ರಾ| ನರಸಿಂಹಮೂರ್ತಿ ಭಂಡಾರಿಗಳು ಡಿಸ್ಟ್ರಿಕ್ಟಬೋರ್ಡಿಗೆ ಮಂಗಳೂರು ತಾಲೂಕುಬೋರ್ಡಿನಿಂದ ಆರಿಸಲ್ಪಟ್ಟದ್ದು ಮಂಜೂರಾಗಿಯದೆ.

ಮುಲ್ಕಿ: — ವಿಲಾಯತಿಯಲ್ಲಿ I. M. S. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಫ್ರಾನ್ಸ, ಮೆಸಪೊಟೊಮಿಯ ಮೊದಲಾದ ರಣಕ್ಷೇತ್ರದಲ್ಲಿ ಕೆಲಸಮಾಡಿ ರಜೆಯಮೇಲೆ ಇಲ್ಲಿಗೆ ಬಂದಿರುವ ಲೆಫ್ಟನೆಂಟ ಬಿ. ಜಿ. ಮಲ್ಯರವರನ್ನು ಅಭಿವಂದನೆಪುರಸ್ಸರ ಸತ್ಕರಿಸುವದಕ್ಕಾಗಿ ಇಲ್ಲಿಯ ಯೂನಿಯನ್ ಕ್ಲಬ್ಬಿನವರಿಂದ ಕಳೆದ ಶುಕ್ರವಾರ ದಿನ ಬಹಳ ವಿಶೇಷವಾದ ಒಂದು ಟೀಪಾರ್ಟಿಯು ಕೊಡಲ್ಪಟ್ಟಿತು. ಅಂದಿನ ಸಭೆಗೆ ಇಲ್ಲಿಯ ಸರಕಾರಿ ಉದ್ಯೋಗಸ್ಥರೂ, ಶ್ರೀಮಂತ ಸಾಹುಕಾರರೂ, ಕ್ಲಬ್ಬಿನ ಇತರ ಮೆಂಬರರೂ ಹಾಜರಿದ್ದರು. ಪುಷ್ಪಗುಚ್ಛಗಳಿಂದಲೂ ಲತಾಪಲ್ಲವಗಳಿಂದಲೂ ಅಲಂಕೃತವಾದ ಮನೋರಮಾಭವನವು ಮತ್ತಷ್ಟು ಮನೋಹರವಾಗಿ ಕಂಗೊಳಿಸುತ್ತಿತ್ತು. ಕ್ಲಬ್ಬಿನ ಸೆಕ್ರೆಟರಿ ಮ| ರಾ| ಪಿ. ಸೊನ್ನರವರ ವಾಗ್ಮಾಧುರ್ಯದಷ್ಟೆ ಕಾರ್ಯಚಾತುರ್ಯವು ಇರುತ್ತದೆಂಬದು ಇಂದಿನ ಸಮಾರಂಭಕ್ಕೆ ಅವರು ಅನುಗೊಳಿಸಿದ ಸಿದ್ಧತೆಯ ಮೇಲಿಂದ ಪ್ರೇಕ್ಷಕರಿಗೆ ದೃಗ್ಗೋಚರವಾಗುತ್ತಿತ್ತು. ರಾ| ಸೊನ್ನರವರು ಪಾಶ್ಚಿಮಾತ್ಯ ವಿದ್ಯಾ ಸಂಸ್ಕೃತಿಗಳಿಂದ ಭೂಷಿತರಾದ ಲೆಫ್ಟನೆಂಟ ಮಲ್ಯರವರ ವಿದ್ಯೆ, ಸಾಹಸ, ಸ್ವಾವಲಂಬನ ಮೊದಲಾದ ಗುಣಗಳನ್ನು ಕೊಂಡಾಡಿ ಆ ದೇಶಗಳಲ್ಲಿ ಇದ್ದು ನೋಡಿ ತಿಂದ ತಮ್ಮ ವಿಶೇಷವಾದ ಅನುಭವವನ್ನು ನಿರೂಪಿಸುವಂತೆ ವಿಜ್ಞಾಪಿಸಿ ಮಾತಾಡುವ ಸಂದರ್ಭದಲ್ಲಿ ಚೀನಾ, ಜಪಾನು ಮೊದಲಾದ ಪೌರ್ವಾತ್ಯ ರಾಷ್ಟ್ರಗಳನ್ನು ವ್ಯಾಪಾರ ನಿಮಿತ್ತವಾಗಿ ಸಂದರ್ಶಿಸಿ ಬಂದ ಶ್ರೀಯುತ ಕೆ. ಶ್ಯಾಮರಾಯರ ವಿಷಯ ಸಹ ಪ್ರಸ್ತಾಪಿಸಿ ತಮ್ಮ ಅಭಿವಂದನಪರವಾದ ಭಾಷಣವನ್ನು ಮುಗಿಸಿದರು. ಅನಂತರ ಸಭೆಯಲ್ಲಿ ಹಲವು ಪ್ರಶ್ನೆಗಳು ಲೆಫ್ಟನೆಂಟ ಮಲ್ಯರನ್ನು [illegible] ತರುವಾಯ ಲೆಫ್ಟನೆಂಟ ಮಲ್ಯರವರು ಎದ್ದು ವಿದ್ಯೆಯ ಮಹತ್ವವನ್ನೂ ಪ್ರಯೋಜನವನ್ನೂ ಕುರಿತು ಪ್ರಸ್ತಾಪಿಸಿ ಅದನ್ನು ಹೊಂದಲಿಕ್ಕೆ ನಾವು ಅನುಸರಿಸಬಹುದಾದ ಹಲವು ಮಾರ್ಗಗಳನ್ನು ಸೂಚಿಸಿ ವಿದ್ಯಾಬುದ್ಧಿಗಳ ಬಲದಿಂದ ಪಾಶ್ಚಿಮಾತ್ಯರಲ್ಲಿರುವ ದೇಶವಾತ್ಸಲ್ಯ, ಸ್ವಾತಂತ್ರ್ಯಪ್ರೇಮ, ರಾಜನಿಷ್ಠೆ ಮೊದಲಾದ ವಿಶೇಷ ಗುಣಗಳನ್ನು ವಿವರಿಸಿ ರಣರಂಗದಲ್ಲಿ ದೊಡ್ಡ ದೊಡ್ಡ ಮನುಷ್ಯರು ಅಭೇದಭಾವದಿಂದ ಮಾಡುವ ರಾಷ್ಟ್ರಸೇವೆಯನ್ನು ಶ್ಲಾಘಿಸಿ ತನ್ನನ್ನು ಈ ರೀತಿ ಸತ್ಕರಿಸಿದ್ದಕ್ಕಾಗಿ ವಂದನೆಗಳನ್ನು ಹೇಳಿ ವಿಚಾರ ಅನುಭವಗಳಿಂದ ಭರಿತವಾದ ತನ್ನ ಭಾಷಣವನ್ನು ಮುಗಿಸಿದರು. ಅನಂತರ ಅರಸರ [illegible] ಸಭೆಯು ವಿಸರ್ಜನೆಯಾಯಿತು.

ಯುದ್ಧದಿನದ ಸಮ್ಬಂಧವಾಗಿ [illegible]

[illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು.
೧ ಶ್ರೀಕೃಷ್ಣಚರಿತ್ರ . . . ೪
ಸ್ಫುಟವಿಚಾರಗಳು:—
೧ ಶುಭೋದಯವು ಹೇಳುವ "ಬಿಜಯವು" . . . ೪
೨ ವೃತ್ತಾಂತಪತ್ರಿಕೆಯ "ಸ್ವಾರಾಜ್ಯ" . . . ೫
೩ ಮುಂಬಯಿಯ ಸ್ಥಾನಿಕ ಸ್ವರಾಜ್ಯ ಪರಿಷತ್ತು . . . ,,
೪ ಹಿಲಾಯತಿಯ ಒಡೆಯರು ಎಚ್ಚರಿಸಬೇಕಾಯಿತು! . . . ,,
೫ ಮಹಾಯುದ್ಧದ ೨ನೆ ವರ್ಷ . . . ,,
೬ ಮಂಗಳೂರ ವಸ್ತುಪ್ರದರ್ಶನ . . . ,,
೭ ಹುಲ್ಲುಗಾವಲಿನ ಸ್ಥಳ . . . ,,
ಸ್ಥಳ — ಮಂಗಳೂರು
ವರ್ತಮಾನ ಸಂಗ್ರಹಗಳು:—
೧ ಯೂರೋಪದ ಮಹಾಯುದ್ಧ . . . ೩
೨ ವಿದೇಶ ವೃತ್ತಾಂತ . . . ,,
೩ ದಕ್ಷಿಣ ಹಿಂದೂಸ್ಥಾನ . . . ,,
೪ ದಕ್ಷಿಣ ಕನ್ನಡ . . . ,,
೫ ಉತ್ತರ ಹಿಂದುಸ್ಥಾನ . . . ,,
೬ ಜಾತವಿಗಳು — ಮುಳ್ಳು, ಕುಂಬಳೆ, ಪುತ್ತೂರು . . . ,,
೭ ಪತ್ರವ್ಯವಹಾರ — ಸ್ವರ್ಗದ ಬಾಗಿಲಲ್ಲಿ ನರಕದ ನಾಯಿ, ಕಳ್ಳನ ಪಿಸಯ . . . ,,

ಸ್ವದೇಶಾಭಿಮಾನಿ.

ಶಕ ೧೮೩೭ ಶ್ರಾವಣ ಬ. ೯ ಶನಿವಾರ.

ಶ್ರೀ ಕೃಷ್ಣಚರಿತ್ರ.

ಶ್ರೀಕೃಷ್ಣನು ದ್ವಾಪರದಲ್ಲಿ ಅವತರಿಸಿದನು. ಶ್ರೀಮದ್ಭಾಗವತ, ಹರಿವಂಶ ಮೊದಲಾದ ಪುರಾಣ ಗ್ರಂಥಗಳು ಶ್ರೀಕೃಷ್ಣನ ಚರಿತ್ರವನ್ನೂ ಲೀಲೆಯನ್ನೂ ವಿಸ್ತಾರದಿಂದ ವರ್ಣಿಸುವವು. ಆ ಚರಿತ್ರದ ಮತ್ತು ಲೀಲೆಯ ಸಾರಾಂಶವನ್ನು ಒಂದೆ ಮಾತಿನಿಂದ ಹೇಳುವುದಾದರೆ, ಲೋಕದ ವ್ಯಾವಹಾರಿಕ ಮತ್ತು ಆಧ್ಯಾತ್ಮಿಕ ಜೀವನವನ್ನು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಯಿಂದ ಕೆಡಿಸುವ ಆತತಾಯಿಗಳನ್ನೂ ಅವರ ಕೃತ್ಯಗಳನ್ನೂ ನಿರ್ಮೂಲಿಸಿ ಧರ್ಮಪರಾಯಣ ಹಾಗು ಭಗವತ್ ಪ್ರತಿಪನ್ನರಾದ ಶಿಷ್ಟರನ್ನು ರಕ್ಷಿಸುವುದೆ ಶ್ರೀ ಕೃಷ್ಣ ಚರಿತ್ರದ ಸಾರಸರ್ವಸ್ವವು. ಈ ಸಿದ್ಧಾಂತವು ಶ್ರೀ ಕೃಷ್ಣನ ಬಾಲ್ಯದೊಳಗಿನ ಕಾಳೀಯಸರ್ಪದ ವಧದಂಥ ಚಿಕ್ಕಸಂಗತಿಯಿಂದಲೂ, ಪ್ರೌಢ ವಯಸ್ಸಿನೊಳಗಿನ ಭಾರತೀಯ ಯುದ್ಧದಲ್ಲಿ ತೋರಿಸಿದ ಅಪೂರ್ವ ಮುತ್ಸದಿತನದಂಥ ಮಹತ್ವದ ಸಂಗತಿಯಿಂದಲೂ ಸಿದ್ಧವಾಗುತ್ತದೆ. ನಮಗೆ ಈ ಹೊತ್ತಿನ ಲೇಖದಲ್ಲಿ ಕೃಷ್ಣಚರಿತ್ರವನ್ನು ಪ್ರಸ್ತಾಪಿಸಬೇಕಾದ್ದಿಲ್ಲ. ಅದನ್ನು ಪ್ರಾಚೀನ ಅಥವಾ ಅರ್ವಾಚೀನ ಗ್ರಂಥಗಳಿಂದ ಜಿಜ್ಞಾಸುಗಳು ತಿಳಕೊಳ್ಳಬಹುದಾಗಿದೆ. ಆದರೆ ಈ ಹೊತ್ತು ನಾವು ಹೇಳಲು ಉದ್ದೇಶಿಸಿಕೊಂಡ ವಿಷಯವು ಯಾವುದೆಂದರೆ, ಶ್ರೀ ಕೃಷ್ಣಚರಿತ್ರದ ಸೃಷ್ಟಿದೃಷ್ಟಿಯಿಂದ ವಿಮರ್ಶವು. ಅದನ್ನು ಈಗ ಯಥಾಕ್ರಮ ಮಾಡೋಣ.

ಶ್ರೀಕೃಷ್ಣಚರಿತ್ರವನ್ನು ಆದರಿಸುವವರಲ್ಲಿ ಎರಡು ವರ್ಗಗಳನ್ನು ಮಾಡಬಹುದು. ಭಾವಿಕರಾದವರು ಶ್ರೀಕೃಷ್ಣನು ಪರಮಾತ್ಮನ ಅವತಾರವು, ಅವನ ಚರಿತ್ರದಲ್ಲಿ ವರ್ಣಿತವಾದ ಅದ್ಭುತ ಕಾರ್ಯಗಳು ಅಸಂಭವನೀಯವಲ್ಲ, ಅವನ ವರ್ತನವು ಕೆಲವು ಸಂದರ್ಭಗಳಲ್ಲಿ ಮಾನವ ನೀತಿಸೂತ್ರಗಳಿಗೆ ವಿರುದ್ಧವಾಗಿತ್ತೆಂದು ತೋರಿದರೂ ಅವನು ಪರಮಾತ್ಮನ ಆದಕಾರಣ ನಿರ್ದೋಷನು—ದೋಷಲೇಪವು ಅವನಲ್ಲಿ ಇಲ್ಲ ಎಂಬುದಾಗಿ ಹೇಳುವರು. ಇದು ಆಶ್ಚರ್ಯದ ಸಂಗತಿಯಲ್ಲ. ಯಾವ ಧರ್ಮದ ಅನುಯಾಯಿಗಳನ್ನು ತೆಕ್ಕೊಂಡರೂ ಅವರು ತಂತಮ್ಮ ಧರ್ಮಸಂಸ್ಥಾಪಕರ, ಧರ್ಮತತ್ವಗಳ ಮತ್ತು ಆಚಾರವಿಚಾರಗಳ ಸಮರ್ಥನವನ್ನು ಕೇವಲ ಶ್ರದ್ಧೆಯ ಬಲದಿಂದಲೆ ಮಾಡುವರು. ಇಂಥವರು ಪರಧರ್ಮದ ನ್ಯೂನತೆಯನ್ನು ಹುಡುಕುವಾಗ ಅದರೊಳಗಿನ ಪೂರ್ವಾಪರವಿರೋಧ, ನೀತಿತತ್ವಗಳುಲ್ಲಂಘನ ಇತ್ಯಾದಿ ಸಂಗತಿಗಳನ್ನು ತಾತ್ವಿಕಬುದ್ಧಿಯಿಂದ ತೋರಿಸುತ್ತಿದ್ದರೂ ಸ್ವತಃ ತಮ್ಮ ಧರ್ಮದ ವಿಷಯಗಳು ಬರುತ್ತಲೆ ಶ್ರದ್ಧೆಯ ಗೋಣಿಪಟ್ಟೆಯನ್ನು ಕಣ್ಣಿಗೆ ಕಟ್ಟಿಕೊಳ್ಳುವರು! ಇಂಥ ಭಾವಿಕರು ಜಗತ್ತಿನೊಳಗಿನ ಎಲ್ಲ ಧರ್ಮಗಳಲ್ಲಿ ಇದ್ದೇ ಇದ್ದಾರೆ. ಈ ವಸ್ತುಸ್ಥಿತಿಗನುಸಾರವಾಗಿಯೆ ಕೃಷ್ಣನ ಅನುಯಾಯಿಗಳಾದ ಭಾವಿಕರು ಶ್ರೀ ಕೃಷ್ಣನನ್ನು ಪರಮಾತ್ಮ ಸ್ವರೂಪದಿಂದ ನೋಡುವದು ಸ್ವಾಭಾವಿಕವೆ.

ಈ ಭಾವಿಕರು ಅಥವಾ ಶ್ರದ್ಧಾಳುಗಳಲ್ಲದೆ ಶ್ರೀಕೃಷ್ಣಚರಿತ್ರವನ್ನು ಆದರಿಸುವವರ ಇನ್ನೊಂದು ವರ್ಗವಿದೆ. ಅವರು ಅಂಧಶ್ರದ್ಧೆಯಿಂದ ನಂಬುವವರಲ್ಲ, ನಾಸ್ತಿಕ್ಯದಿಂದ ನಿರಾಕರಿಸುವವರೂ ಅಲ್ಲ. ಒಂದು ಸಂಗತಿಯ ಗುಣದೋಷಗಳನ್ನು ಚಿಕಿತ್ಸಕದೃಷ್ಟಿಯಿಂದ ಪರೀಕ್ಷಿಸಿ ಅದನ್ನು ಸ್ವೀಕರಿಸುವವರು. ಈ ಚಿಕಿತ್ಸಕ ಮತದ ಲೇಖಕರು ಶ್ರೀ ಕೃಷ್ಣ ಚರಿತ್ರವನ್ನು ಪರೀಕ್ಷಿಸುವುದೆಂದರೆ, ಶ್ರೀಕೃಷ್ಣನು ಧಾರ್ಮಿಕ ಮತ್ತು ಸಾಮಾಜಿಕ ವಿಷಯದಲ್ಲಿ ಸಂಪ್ರದಾಯವಾದಿಯಾಗಿದ್ದನೊ, ಅಥವಾ ಸುಧಾರಣಾವಾದಿಯಾಗಿದ್ದನೊ ಹಾಗೆಯೆ ರಾಜಕಾರಣದಲ್ಲಿ ನ್ಯಾಯಪಕ್ಷಪಾತಿಯಾಗಿದ್ದನೊ ಇಲ್ಲವೆ ಆಪ್ತಪಕ್ಷ ಎಂದರೆ ಸ್ವಾರ್ಥಪಕ್ಷದವನಿದ್ದನೊ ಈ ಪ್ರಶ್ನೆಗಳನ್ನು ಉದ್ಭವಿಸುವುದು ಅಗತ್ಯವಾಗಿದೆ. ಶ್ರೀಕೃಷ್ಣನ ತತ್ವಜ್ಞಾನ, ಧಾರ್ಮಿಕಮತ, ಸಾಮಾಜಿಕ ಸುಧಾರಣಾ ಇತ್ಯಾದಿ ವಿಷಯಗಳ ಪ್ರತಿಬಿಂಬವು ಅವನು ಉಪದೇಶಿಸಿದ ಭಗವದ್ಗೀತೆಯಲ್ಲಿ ಸರಿಯಾಗಿ ಕಾಣುವುದು. "ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ" ನಾನು ಧರ್ಮವನ್ನು ಸ್ಥಾಪಿಸಲು ಯುಗಯುಗದಲ್ಲಿ ಅವತರಿಸುವೆನು, ಎಂದು ಅವನೆ ಹೇಳಿರುವನು. ಈ ಮಾತಿನಿಂದ ಧರ್ಮಾಚಾರ್ಯತ್ವವು ಅವನ ಕಡೆಗೆ ಇದೆ ಎಂದು ಸ್ಪಷ್ಟವಾಗುತ್ತದೆ. ಕೃಷ್ಣನಿಗೆ ಸಂಪ್ರದಾಯವಾದಿ ಎನ್ನುವುದಕ್ಕಿಂತ ಸುಧಾರಣಾವಾದಿಯೆಂದು ಹೇಳುವುದೆ ಹೆಚ್ಚು ಒಪ್ಪುತ್ತದೆ. ವೇದಗಳಲ್ಲಿ ದ್ವೈತತರ ವಿಷಯವು ಅಷ್ಟೊಂದು ಉದಾರಧೋರಣೆಯಿಂದ ಇದ್ದು ಈಗಿನ ವಾಕ್ಯಗಳೊಳಗಿನ ಶಬ್ದದಿಂದ ಹೇಳುವುದಾದರೆ—ಅಷ್ಟೊಂದು ಸಹಾನುಭೂತಿಯಿಂದ ಸಾಮಾನ್ಯರ ನಾಮವು ಕಂಡುಬರುವುದಿಲ್ಲ. ತಥಾಪಿ ವೇದಕಾಲದಲ್ಲಿ ಶೂದ್ರಾದಿಕರನ್ನು ಬ್ರಾಹ್ಮಣರು—ಎಂದು ಕಾಲದಲ್ಲಿ ಗುಲಾಮರನ್ನು ಪಾಶ್ಚಾತ್ಯರು ನೋಡುತ್ತಿದ್ದಂತೆ—ಎಂದೂ ಅವಮಾನದೃಷ್ಟಿಯಿಂದ ನೋಡಿದರೆಂಬ ನಿಷ್ಕರ್ಷೆಯಾದರೂ ಮಾಡಬಹುದು. ಇರಲಿ, ಶ್ರೀ ಕೃಷ್ಣನ ಗೀತೆಯಲ್ಲಿಯಾದರೆ ಸ್ತ್ರೀಯರಿಗೂ ಶೂದ್ರರಿಗೂ ಮೋಕ್ಷ ಮಂದಿರದ ಬಾಗಿಲುಗಳನ್ನು ತೆರೆದುಕೊಟ್ಟಿದೆ. "ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂಗತಿಮ್" ಈ ಮಾತಿನಿಂದ ಶ್ರೀ ಕೃಷ್ಣನು ವೇದಾಧಿಕಾರವಿಲ್ಲದವರ ವಿಷಯದಲ್ಲಿ ಕುಂದು ಸಹಾನುಭೂತಿಪರನಾಗಿದ್ದನು ಎಂದು ಹೇಳಲು ಪ್ರತ್ಯವಾಯ ತೋರುವುದಿಲ್ಲ. ಅಲ್ಲದೆ, ಶ್ರೀ ಕೃಷ್ಣನು ಯಾದವಕುಲೋತ್ಪನ್ನನಾದುದರಿಂದ ಕ್ಷತ್ರಿಯನಿದ್ದರೂ ಸಂಧಾನದಸಲುವಾಗಿ ಕೌರವಪುರಕ್ಕೆ ಹೋದಾಗ ಭಕ್ತಶಿರೋಮಣಿಯಾದ ಶೂದ್ರ ವಿದುರನಲ್ಲಿ ನಿಂತುಕೊಂಡನಲ್ಲದೆ ಕೌರವನಲ್ಲಿ ಹೋಗಲಿಲ್ಲ. ಈ ಮಾತು ಉಕ್ತ್ಯದಲ್ಲಿರುವಹಾಗಿದೆ. ಆದರೆ ಧಾರ್ಮಿಕ ಮತ್ತು ಸಾಮಾಜಿಕ ಬಂಧನಗಳನ್ನೆಲ್ಲ ಮುರಿದು ಬಿಟ್ಟು ಮನಬಂದಂತೆ ಶೂದ್ರವ ಸುಧಾರಣೆಗಳಿಗೆ ಕೃಷ್ಣನು ಸಮ್ಮತಿಸುತ್ತಿದ್ದನೆಂದು ನೆನಸಲು ಮಾತ್ರ ಸಾಧ್ಯವಿಲ್ಲೆಂದು ತೋರುತ್ತದೆ. ಕಾರಣ, ಅದೇ ಗೀತೆಯಲ್ಲಿ ಅರ್ಜುನನಿಗೆ "ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ" ಕಾರ್ಯಾಕಾರ್ಯವಿಚಾರದಲ್ಲಿ ನಿನಗೆ ಶಾಸ್ತ್ರವೆ ಪ್ರಮಾಣವೆಂದು ಹೇಳಿದ್ದಾನೆ. ಸಾರಾಂಶ ಶಾಸ್ತ್ರಾನುವರ್ತಿಯಾದ ಸುಧಾರಣೆಯೆ ಶ್ರೀ ಕೃಷ್ಣನಿಗೆ ಅಭಿಮತವಾಗಿತ್ತೆಂದು ಹೇಳಲು ಅಡ್ಡಿಯಿಲ್ಲ. ಈ ಸೂತ್ರವಾದರೂ ನಾವು ಈ ತತ್ವವನ್ನೆ ಅವಲಂಬಿಸಿಕೊಂಡು ಸುಧಾರಣೆಯನ್ನು ಪ್ರೋತ್ಸಾಹಿಸಿದರೆ ನಮಗೆ ಹಾಗೂ ನಮ್ಮ ಸುಧಾರಣೆಗಳಿಗೆ ಯಾವ ಪ್ರತಿಬಂಧವೂ ಬರಲಿಕ್ಕಿಲ್ಲೆಂದು ಹೇಳಬಹುದಾಗಿದೆ. ಸ್ವಧರ್ಮ, ಸ್ವದೇಶ, ಸ್ವಪರಂಪರೆ, ವೈಶಿಷ್ಟ್ಯ ಈ ನಾಲ್ಕು ಸಂಗತಿಗಳನ್ನು ಆಕರಿಸಿಡುವ ಉದಾತ್ತ ಪ್ರವೃತ್ತಿಯು ಕೃಷ್ಣನಿಗೆ ಮೆಚ್ಚಿಕೆ.

ಕೃಷ್ಣನ ರಾಜಕಾರಣವು ಅತಿ ಗಹನವಾಗಿತ್ತು. ಆದರೆ ಕೆಲವು ಆಧುನಿಕ ನೀತಿವಾದಿಗಳಿಗೆ ಕೃಷ್ಣನ ರಾಜಕಾರಣದಲ್ಲಿ ದೋಷಗಳು ಕಂಡುಬರುತ್ತವೆ. ಕೌರವ ಪಾಂಡವರೊಳಗೆ ನಡೆದ ಭಾರತ ಯುದ್ಧದಲ್ಲಿ ಕೃಷ್ಣನು ಕುಂದು ಅನ್ಯಾಯ ನಡಿಸಿದನು. ಕೃಷ್ಣನು ಭೀಷ್ಮ ದ್ರೋಣ, ಕರ್ಣ ಮೊದಲಾದ ಅಸಾಮಾನ್ಯ ವೀರರನ್ನು ಕೊಲ್ಲುವಾಗ ರಣನೀತಿಯ ಸೂತ್ರಗಳನ್ನು ಉಲ್ಲಂಘಿಸಿ ಕಿಂಬಹುನಾ ಭಂಗಪಡಿಸಿ ಮೋಸವಾಡಿದನು. ಭೀಷ್ಮನನ್ನು ಕೊಲ್ಲಲು ಅರ್ಜುನನಿಂದಾಗದೆ ಕೃಷ್ಣನಿಗೆ ನಾಂತವರು ಯುಕ್ತಿಯಿಂದ ಶಿಖಂಡಿಯನ್ನು ಎದುರು ನಿಲ್ಲಿಸಿದರು. ದ್ರೋಣನನ್ನು ವಧಿಸುವಾಗಂತೂ ಕೃಷ್ಣನ ಕುಯುಕ್ತಿಗೆ ಪಾರವೆ ಇದ್ದಿಲ್ಲ. ಅಶ್ವತ್ಥಾಮನು ಸತ್ತನೆಂದು ಯುಧಿಷ್ಠಿರನ ಬಾಯಿಯಿಂದ ಬರಿಸಿದಾತ ಕೃಷ್ಣನು ದ್ರೋಣನನ್ನು ಕೊಲ್ಲಿಸಿದನು! ಯುದ್ಧದ ಮಧ್ಯದಲ್ಲಿ ಕರ್ಣನ ರಥದ ಚಕ್ರಗಳು ಹೂಳಹೋಗಿದ್ದವು, ಆ ರಥವನ್ನು ಮೇಲಕ್ಕೆ ಎತ್ತುವುದರಲ್ಲಿ ಕರ್ಣನು ತೊಡಗಿದಾಗ—ರಣನೀತಿಗೆ ವಿರೋಧವಾಗಿ ಈ ಕೃಷ್ಣನೆ ಅರ್ಜುನನಿಂದ ವೀರಕರ್ಣನನ್ನು ವಧಿಸಿದನಲ್ಲವೆ? ಇಂಥ ಕಪಟ ಅನ್ಯಾಯಗಳನ್ನು ಕೃಷ್ಣನು ಭಾರತೀಯ ಯುದ್ಧದಲ್ಲಿ ಮಾಡಿದ್ದಾನೆ. ಆಧುನಿಕ ನೀತಿವಾದಿಗಳ ಮತದಂತೆ ಕೃಷ್ಣನ ರಾಜಕಾರಣವು ಸರಳವಲ್ಲ, ಕಪಟವು ಯುದ್ದು. ಎಂದು ಒಂದೆ ಮಾತಿನಿಂದ ಹೇಳಬಹುದು. ನೀತಿತತ್ವಗಳ ಉಚ್ಚ ಕಲ್ಪನೆಯು ಈಗಿನವರ ತಲೆಯಲ್ಲಿ ಮಾತ್ರ ಬರುತ್ತವೆ ಎಂದಲ್ಲ. ಗದಾ ಯುದ್ಧದಲ್ಲಿ ಪರಾಭೂತನಾಗಿ ಮತ್ತು ಮರಣೋನ್ಮುಖನಾಗಿ ಬಿದ್ದು ಅತ್ತಿತ್ತ ಹೊರಳಾಡುವಾಗ ಸ್ವತಃ ದುರ್ಯೋಧನನ ಕೃಷ್ಣನಿಗೆ "ಕಂಸನ ದಾಸನ ಮಗನೆ" ಎಂದು ಕರೆದು ಮೇಲಿನ ನೀತಿಪಾಠವನ್ನೆ ಒದಿದ್ದಾನೆ! ಕೃಷ್ಣನು ಯುದ್ಧನೀತಿಯನ್ನು ಮೂಲೆಗೊತ್ತಿ ನಡಿಸಿದ ಕಾರಸ್ಥಾನಗಳನ್ನು ಮೇಲಿನಂತೆ ಒಂದರ ಹಿಂದೆ ಒಂದಾಗಿ ಹೇಳಿ ಕೊನೆಗೆ ದುರ್ಯೋಧನನು "ನನ್ನನ್ನು ಕೊಲ್ಲುವಾಗ ಕೂಡ ಗದಾಯುದ್ಧದ ನಿಯಮವನ್ನು ಮುರಿದು ತೊಡೆಮೇಲೆ ಗದಾಪ್ರಹಾರಮಾಡಲು ಕೃಷ್ಣಾ, ನೀನು ಹೇಳಿದಿ. "ನತೇಲಜ್ಜಾನತೇ ಘೃಣಾ" ನಿನಗೆ ನಾಚಿಕೆಯೂ ಇಲ್ಲ, ದಯೆಯೂ ಇಲ್ಲ!" ಎಂದು ಧಾರಾಳವಾಗಿ ದೂಷಿಸಿದನು. ಆಗ ಕೃಷ್ಣನು ಅವನಿಗೆ ಸಮರ್ಪಕವಾದ ಉತ್ತರವನ್ನು ಕೊಟ್ಟದ್ದನು ಅವನ್ನೆ ತೋರಿಸಿದರೆ ದುರ್ಯೋಧನ ಕಡೆಯಿಂದಾಗಲಿ ಶ್ರೀ ಕೃಷ್ಣನ ಕಡೆಯಿಂದಾಗಲಿ ನಮಗೆ ಯಾರಿಗೂ ಪಕ್ಷಪಾತ ಮಾಡಬೇಕಾದ ಅಗತ್ಯವಿಲ್ಲ. "ಭೀಷ್ಮ, ದ್ರೋಣ, ಕರ್ಣ ಮೊದಲಾದ ವೀರರು ನಿನ್ನ ದುಷ್ಕೃತ್ಯದಿಂದಲೆ ಮೃತ್ಯುವಶರಾದರು. ನೀನು ಈಗ ಮಾಡಿದ ವಿಲಾಪವು ಅನುಚಿತವಾಗಿತ್ತು. "ಯಾತ್ತ್ವಮನುಶೋಚಸಿ" ... ಪಿತೃಮಂಶನಿಂದಿತ್ಸಸಿ! ಪಾಂಡವೇಭ್ಯಃ ಸ್ವರಾಜ್ಯಾಂಶ ಲೋಭಾತ್ ಶಕುನಿನಿಶ್ಚಯಾತ್!" ನಾನು ಪಾಂಡವರ ಕಡೆಯಿಂದ ಯಾಚನೆಮಾಡಲು ಬಂದಾಗ ನೀನು ಮೂಢಾ! ಆ ಶಕುನಿಯ ಬೆನ್ನೆಹತ್ತಿ ಲೋಭಕ್ಕೆ ಒಳಗಾಗಿ ಪಾಂಡವರ ಹಕ್ಕಿನ ರಾಜ್ಯವನ್ನು ಅವರಿಗೆ ಕೊಡಲಿಲ್ಲ. ಭೀಮನಿಗೆ ವಿಷಹಾಕಿದಿ. ಪಾಂಡವರಿಗೂ, ಕುಂತಿಗೂ, ಲಾಕ್ಷಾಗೃಹದಲ್ಲಿ ಹಾಕಿ ಸುಡಲುಯತ್ನಿಸಿದಿ. ನಿಷ್ಕಪಟ ಯುಧಿಷ್ಠಿರನನ್ನು ದ್ಯೂತಕ್ಕೆ ಕರೆದು ಅವನನ್ನು ಕಪಟದಿಂದ ಸೋಲಿಸಿದಿ. ಕರ್ಣಾನೊದಲಾದ ತುಂಟರ ಹೇಳಿಕೆಯಮೇರೆಗೆ ದ್ರೌಪದಿಯನ್ನು ತುಂಬಿದ ಸಭೆಯಲ್ಲಿ ಕರತರಿಸಿ ಅವಳ ಮರ್ಯಾದೆಯನ್ನು ಅಪಹರಿಸಲು ತೊಡಗಿದಿ. ಈಗ ನೀತಿಪಾಠವನ್ನು ಓದುವ ದುರ್ಯೋಧನಾ! ನಿನ್ನ ಈ ಕೃತ್ಯಗಳು ಯಾವ ನೀತಿಗೆ ಸಮ್ಮತವಾಗಿವೆ? ರಾಜ್ಯತೃಷ್ಣೆ ಮತ್ತು ರಾಜ್ಯಲೋಭ ಇವುಗಳ ಮೂಲಕ ಮಾಡಿದ ದುಷ್ಕೃತ್ಯಗಳ ಫಲವನ್ನು ಉಣಮಾಡು."

ಶ್ರೀ ಕೃಷ್ಣನು ಮೇಲಿನಂತೆ ದುರ್ಯೋಧನನಿಗೆ ಕೊಟ್ಟ ಉತ್ತರವೆ ಅವನ ರಾಜಕಾರಣವನ್ನು ಸಮರ್ಥಿಸುವುದಾದರಿಂದ ಆ ವಿಷಯದಲ್ಲಿ ನಮ್ಮ ಹೆಚ್ಚಿನ ಟೀಕೆಯು ಅವಶ್ಯವಿಲ್ಲ. ಸಾಮಾನ್ಯ ನೀತಿತತ್ವಗಳ ಆಸರೆಯಿಂದ ರಾಜಕಾರಣವನ್ನು ಅಳೆಯುವುದು ಎಂದೂ ಯುಕ್ತವಾಗಲಾರದು. ಸಾಮಾನ್ಯತತ್ವಗಳನ್ನು ಅಲ್ಲೂ ಹಚ್ಚಬೇಕೆಂದು ಆಗ್ರಹವಿದ್ದರೆ ಪ್ರಕೃತ ಉದಾಹರಣದಲ್ಲಿ ಅದಕ್ಕೂ ಅಡ್ಡಿ ಇಲ್ಲ. ಪಾಂಡವರ ಪಕ್ಷವು ಸತ್ಯಾವಲಂಬಿಯು ಎಂದು ಯಾರೂ ಒಪ್ಪಬೇಕಾದುದೆ. ಅರ್ಥಾತ್, ಕೌರವರ ಪಕ್ಷವು ಅನ್ಯಾಯಮೂಲಕದ್ದೆಂದಾದ ಮೇಲೆ ಇಲ್ಲಿ ಸಾಮಾನ್ಯನೀತಿಯು ಬಿಟ್ಟುಹೋಯಿತು! ಏವಂಚ ಶ್ರೀಕೃಷ್ಣನ ರಾಜಕಾರಣವನ್ನು ನಾವು ಎಷ್ಟು ಚಿಕಿತ್ಸಕದೃಷ್ಟಿಯಿಂದ ನೋಡುವೆವೊ ಅಷ್ಟೆ ರಾಜನೀತಿಯ ಗೂಢತತ್ವಗಳ ದೃಷ್ಟಿಯಿಂದಲೂ ಪರಾಮರ್ಶಿಸಬೇಕು. ಇದೆ ಪೂರ್ಣವಾದ ಚಿಕಿತ್ಸಕ ದೃಷ್ಟಿಯು. ಹಾಗೆ ನೋಡುವಾಗ ಕೃಷ್ಣನ ರಾಜಕಾರಣದಲ್ಲಿ ಯಾವ ಕುಂದುಕೊರತೆಗಳೂ ಕಂಡುಬರುವುದಿಲ್ಲ.

ಇರಲಿ; ಶ್ರೀಕೃಷ್ಣನ ಚರಿತ್ರವು ವಂದ್ಯವಾದುದೆಂಬುದು ನಿರ್ವಿವಾದವಾಗಿದೆ. ಶ್ರೀಕೃಷ್ಣಚರಿತ್ರವೆಂಬ ಸಮುದ್ರದಲ್ಲಿ ಮುಳುಗಿದರೆ ಕೈಗೆ ಎಷ್ಟೊ ರತ್ನಗಳು ಸಿಗುವವು. ಅವು ಇಷ್ಟೆ ಎಂದು ಹೇಳಲು ಅಸಾಧ್ಯವು. ಆ ಸಮುದ್ರವು ಅಪಾರವಾಗಿದೆ. ಮತ್ತು ಅಲ್ಲಿಯ ರತ್ನಗಳು ಅಸಂಖ್ಯವಾಗಿವೆ. ಆದರೂ ಮೊನ್ನೆ ದಾಟಿದ ಕೃಷ್ಣಜನ್ಮಾಷ್ಟಮಿಯ ನಿಮಿತ್ತದಿಂದ ಆ ಚರಿತ್ರದೊಳಗಿನ ಒಂದೆರಡು ಸಂಗತಿಗಳನ್ನು ವಾಚಕರ ಅವಗಾಹನಕ್ಕೆ ತಂದುಕೊಟ್ಟಿದ್ದೇವೆ. ಅವು ಶ್ರೀಕೃಷ್ಣಪ್ರೀತಿಗೂ ದೇಶಪ್ರೀತಿಗೂ ಕಾರಣವಾಗಲಿ, ಇದೆ ನಮ್ಮ ಆಶೆ.

ಸ್ಫುಟವಿಚಾರಗಳು.

೧ ಮುಂಬಯಿಯ ಗವರ್ನರ ಲೊರ್ಡ ವಿಲಿಂಗ್ಡನವರು ಕಾಯದೆ ಕೌನ್ಸಿಲಿನ ಅಧಿವೇಶನದಲ್ಲಿ ಮಹರ್ಷಿ ದಾದಾಭಾಯಿಯವರ ಮರಣದ ವಿಷಯದಲ್ಲಿ ದುಃಖಪ್ರದರ್ಶಕ ಠರಾವಿನ ಮೇಲೆ ಭಾಷಣಮಾಡುವಾಗ ದಾದಾಭಾಯಿಯವರ ಕರ್ತೃತ್ವವನ್ನು ಹೊಗಳಿ, ಕೊನೆಗೆ "ನೀವು (ಹಿಂದಿಗಳು) ಸಾಮ್ರಾಜ್ಯಾಂತರ್ಗತವಾದ ಸ್ವರಾಜ್ಯದ ಧ್ಯೇಯವನ್ನು ಸಾಧಿಸುವ ದಕ್ಕಾಗಿ ಯತ್ನಮಾಡುವಿರೆಂದು ನಾವು ಆಶಿಸುತ್ತೇವೆ" ಎಂಬುದಾಗಿ ಹೇಳಿದರು. ಗವರ್ನರ ದೊರೆಗಳ ಬಾಯಿಯಿಂದ ಹೊರಟ ಈ ಮಾತುಗಳಿಂದ ನಮ್ಮ ಬಂಧುಗಳಾದ ಧಾರವಾಡದ "ಶುಭೋದಯ"ಕಾರರು "ಸ್ವರಾಜ್ಯವಾದಿಗಳ ವಿಜಯವು"ಉಂಟಾಯಿತೆಂದು ನೆನಸುತ್ತಾರೆ. ನಾಲ್ಕೈದು ತಿಂಗಳುಗಳ ಹಿಂದೆ ಇದೆ ವಿಲಿಂಗ್ಡನ್ ಪ್ರಭುಗಳು "ಹೋಮ್-ರೂಲ್, ಸ್ವರಾಜ್ಯ ಮುಂತಾದ ಸಂಗತಿಗಳನ್ನು ತಲೆಯಲ್ಲಿ ಹಾಕಿಕೊಂಡು ವೃಥಾಚಳವಳಿಯನ್ನು ಮಾಡುತ್ತೀರಿ. ಇದರಿಂದ, ಮುಂದೆ ನಿಮಗೆ ಸಿಗತಕ್ಕ ಹಕ್ಕುಗಳಿಗೂ ಒಂದುವೇಳೆ ಕೊರತೆ ಉಂಟಾಗುವುದು." ಎಂದು ತರ್ಜನಿ ತೋರಿಸಿ ಹೇಳಿದರು, ಆದರೆ ಮೊನ್ನೆ ಕೌನ್ಸಿಲಿನಲ್ಲಿ ಸ್ವರಾಜ್ಯಕ್ಕೆ ಸಮ್ಮತಿಯ ಮೊಹರನ್ನು ಒತ್ತುವುದು ಒಂದು ದೃಷ್ಟಿಯಿಂದ "ಸ್ವರಾಜ್ಯವಾದಿಗಳ ವಿಜಯವೆ" ಎನ್ನಬಹುದು. ಆದರೆ ನಾಲ್ಕು ತಿಂಗಳೊಳಗೆ ಗವರ್ನರರಲ್ಲಿ ಮತಾಂತರವು ಹೇಗುಂಟಾಯಿತು? ಇದೆ ವಿಚಾರಣೀಯ ಪ್ರಶ್ನವು. "ಶುಭೋದಯ"ವು ಊಹಿಸುವಂತೆ ಮಿ. ಮೊಂಟಗ್ಯೂ ಇವರ ಭಾರತ ಮಂತ್ರಿತ್ವದ ಪ್ರಭಾವವು ಈ ಮತಾಂತರದ ಕಾರಣವಾಗಿರಬಹುದು. ಅಥವಾ ಮದ್ರಾಸಿನ ಸುಪ್ರಸಿದ್ಧಪ್ರತಿಬಂಧಗಳ ನಂತರ ಉಂಟಾದ ಪ್ರತಿಕೂಲ ಲೋಕಮತದ ವಿರಾಟ್‌ಸ್ವರೂಪದಿಂದ ಮುಂಬಯಿಯ ಟೈಮ್ಸ್ ಪತ್ರಿಕೆಯು ಕಣ್‌ತೆರೆದು ಶುದ್ಧಿಗೆ ಬಂದು ಮಾತಾಡಲು ಉಪಕ್ರಮಿಸಿತು, ಇದೆ ಈ ಮತಾಂತರದ ಕಾರಣವಾಗಿರಬಹುದೆಂದು ಕಾಣುತ್ತದೆ. ಬ್ಯುರೋಕ್ರಸಿಯ ಕೃತ್ಯಗಳನ್ನು ಸಮರ್ಥಿಸಲಿಕ್ಕೆ ಎಂಗ್ಲೊ ಇಂಡಿಯನ್ ಪತ್ರಿಕೆಗಳ ಸೇನೆಯು, ಮತ್ತು ಎಂಗ್ಲೊ ಇಂಡಿಯನ್ ಪತ್ರಿಕೆಗಳ ಮತಗಳನ್ನು ಆಚರಿಸಲಿಕ್ಕೆ ಬ್ಯುರೋಕ್ರಸಿಯ ಯಂತ್ರವು. ಈ ಪ್ರಕಾರ ಈ ಅನ್ಯೋನ್ಯಾಶ್ರಯವು ಅಹೋರೂಪಮಹೋಧ್ವನಿಯ ನ್ಯಾಯವನ್ನು ಹೋಲುತ್ತದೆ. ಹೇಗೂ ಇರಲಿ. ಲೊರ್ಡ ವಿಲಿಂಗ್ಡನರ ಮತಾಂತರವು ನಮಗೆ ಅತ್ಯನ್ತ ... ಆದರೆ ಮುಂಬಯಿಯ ವಿಶಿಷ್ಟ ಹಿಳನಂತೆ ಹಿಂದುಸ್ತಾನದೊಳಗಿನ ಅಧಿಕಾರಿಗಳಿಂದ ಮನಸ್ಸು ಪಾಲಿಸಿ ದಲು ಕೃತಿ ... ಅಸಾಧ್ಯವಂತೆ ... ಎಂದ ಮೇಲೆ ... ಮತಾಂತರವು ಇಂದಿಗಳಿಗೆ ಕಾರ್ಯಕಾರಿ ... ಇದು ನಿಜವಿದ್ದರೆ ... ಪ್ರವೃತ್ತಿಯಂತೆ ... ಸ್ವಾತಂತ್ರ್ಯಗಳನ್ನು ... ಇಲ್ಲವೂ ...

ಕೈಯಲ್ಲಿ ಇದೆ. ಅದನ್ನು ಮುಂಬಯಿಯ ಪ್ರಭುಗಳು ಮಾಡದೆ ಇದ್ದುದೆ "ಅವಶ್ಯೋಪಕ್ಷೈವವಿಗುಣಸ್ಯಗ್ರೇಣಾ" ಈ ನ್ಯಾಯದಿಂದ ಶ್ಲಾಘ್ಯವು, ಮತ್ತು ಈ ದೃಷ್ಟಿಯಿಂದ ಇದು "ಸ್ವರಾಜ್ಯವಾದಿಗಳ ವಿಜಯ"ವೆನ್ನ ಬಹುದು.

೨. ಮೈಸೂರಿನ "ವೃತ್ತಾಂತಪತ್ರಿಕೆ"ಯು ಹೋಮ್-ರೂಲ್ ಎಂಬ ಅರ್ಥದಲ್ಲಿ "ಸ್ವಾರಾಜ್ಯ" ಶಬ್ದವನ್ನು ಉಪಯೋಗಿಸಿದೆ! ಸ್ವರಾಜ್ಯ 'ಸ್ವಾರಾಜ್ಯ' ಈ ಎರಡು ಶಬ್ದಗಳಲ್ಲಿ ಅರ್ಥಭೇದವಿದೆ. ಸ್ವಾರಾಜ್ಯ ವೆಂದರೆ ಸ್ವರ್ಗದ ರಾಜ್ಯ. ಸ್ವರಾಜ್ಯವೆಂದರೆ ಸ್ವಂತರಾಜ್ಯ. ವೃತ್ತಾಂತ ಪತ್ರಿಕೆಯು ಹಿಂದೀ ಹೋಮ್‌ರೂಲು ಸ್ವರ್ಗದ ರಾಜ್ಯದಂತೆ ಸುಖಮಯ ವಾದುದು ಎಂಬ ಅರ್ಥದಲ್ಲಿ 'ಸ್ವಾರಾಜ್ಯ' ಶಬ್ದವನ್ನು ಉಪಯೋಗಿಸಿದ್ದಿದ್ದರೆ ಅದು ನಮಗೂ ನಿರಾಕ್ಷೇಪಕರವೆ. ಆದರೆ ಸ್ವತಃ ವೃತ್ತಾಂತ ಪತ್ರಿಕೆಗೆ ಇದು ಆಕ್ಷೇಪಕರವಾಗಿ ತೋರುವುದು. ಇದು ಮಾತ್ರ ಆಶ್ಚರ್ಯ!! ಸ್ವರ್ಗದ ರಾಜ್ಯವು ಭೂಲೋಕದ ಮೇಲೆ ಬರಲಿ ಎಂದು ಪ್ರಾರ್ಥಿಸುವ ಈ ಪತ್ರಿಕೆಗೆ "ಹಿಂದೀ ಸ್ವಾರಾಜ್ಯವು" ಯಾಕೆ ಆಕ್ಷೇಪ ಕರವಾಗಿ ಕಾಣುವುದೊ? ಈಗ "ಸ್ವರಾಜ್ಯ" ಮತ್ತು "ಸ್ವಾರಾಜ್ಯ" ಈ ಶಬ್ದಗಳ ಅರ್ಥಭೇದವನ್ನು ತಿಳಕೊಳ್ಳದೆ "ಸ್ವರಾಜ್ಯ"ದ ಅರ್ಥದಲ್ಲಿ "ಸ್ವಾರಾಜ್ಯ" ಶಬ್ದವನ್ನು ಉಪಯೋಗಿಸಿ ಅಂಥ ಹಿಂದೀ ಸ್ವರಾಜ್ಯಕ್ಕೆ ಈ ಪತ್ರಿಕೆಯು ಆಕ್ಷೇಪಿಸುತ್ತದಾದರೆ ಅದ. ಕನಿಷ್ಠಪಕ್ಷಕ್ಕೆ ಮೈಸೂರ ಪ್ರಾಂತ ದಲ್ಲಾದರೂ ಇರುವುದು ಉಚಿತವಲ್ಲ. ಇಷ್ಟೆ ನಮ್ಮ ಅಭಿಪ್ರಾಯವು. ಬೇರೆ, ಈ ವಿಷಯದಲ್ಲಿ ಆ ಪತ್ರಿಕೆಯು ಮಾಡಿರುವ ವಿಧಾನಗಳನ್ನು ಖಂಡಿಸುವುದೆಂದರೆ ಕಾಲ ಮತ್ತು ಸ್ಥಲಇವುಗಳ ಅಪವ್ಯಯವೆ ಸರಿ.

೩. ಕಳೆದ ಮಾರ್ಚಿ ತಿಂಗಳಲ್ಲಿ ಮದ್ರಾಸ್ ಸಂಸ್ಥಾನದ ಸ್ಥಾನಿಕ ಸ್ವರಾಜ್ಯದ ಪರಿಷತ್ತು ಜರಗಿದಂತೆಯೆ ಮುಂಬಯಿ ಸಂಸ್ಥಾನದಲ್ಲಿ ಒಂದು ಸ್ಥಾನಿಕ ಸ್ವರಾಜ್ಯದ ಪರಿಷತ್ತು ಸದ್ಯಃಪುಣೆಯಲ್ಲಿ ಜರಗಿತು. ಇದು ಆ ಪ್ರಾಂತದಲ್ಲಿ ಮೊದಲನೆ ಪರಿಷತ್ತಾದರೂ ಇದಕ್ಕೆ ದೂರ ದೂರದಿಂದ ಸುಮಾರು ೩೦೦ ಪ್ರತಿನಿಧಿಗಳು ಬಂದಿದ್ದರು. ನಾಮದಾರ ಪಟೇಲರು ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಇಲಾಖಾಧಿಪತಿಗಳಾದ ಲೋರ್ಡ ವಿಲಿಂಗ್ಡನರು ಸಭೆಗೆ ಚಿತ್ತಯಿಸಿ ತಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ಅಲ್ಲದೆ, ಮಧ್ಯಭಾಗದ ಕಮಿಷನರಾದ ಮಿ. ಸೆಡನ್, ಕಾರ್ಯಕಾರಿ ಕೌನ್ಸಿಲಿನ ಮೆಂಬರರಾದ ಮಿ. ಚೌಬಳ ಮುಂತಾದ ಸರಕಾರಿ ಅಧಿಕಾರಿಗಳು ಸಭಾಕಾರ್ಯಗಳನ್ನು ನಿರೀಕ್ಷಿಸಿಕೊಂಡಿದ್ದರು. ಅಧ್ಯಕ್ಷರಾದ ಮಿ. ಪಟೇಲರು ತಮ್ಮ ಭಾಷಣ ದಲ್ಲಿ ಸ್ಥಾನಿಕಸ್ವರಾಜ್ಯದ ಪೂರ್ವೇತಿಹಾಸವನ್ನು ಹೇಳಿ ಅದರ ಸುಧಾರಣೆಯ ವಿಷಯದಲ್ಲಿ ಕೆಲವು ಉಪಯುಕ್ತವಾದ ಸೂಚನೆಗಳನ್ನು ಕೊಟ್ಟರು. "ಸ್ಥಾನಿಕ ಸ್ವರಾಜ್ಯದೊಳಗಿನ ಎಲ್ಲ ಸಭಾಸದರು ಲೋಕ ನಿಯುಕ್ತರಾಗಿರಬೇಕು. ಅಧ್ಯಕ್ಷನೂ ಲೋಕನಿಯುಕ್ತನಾಗಿರಬೇಕು. ಅತ್ಯುತ್ತಮವಾದ ಪದ್ಧತಿಯಿಂದ ಈ ಸಂಸ್ಥೆಗಳ ಘಟನೆಯನ್ನು ಮಾಡಿದರೂ ಅವುಗಳಿಗೆ ಬೇಕಾಗಿರುವ ದ್ರವ್ಯವನ್ನು ಒದಗಿಸಿಕೊಳ್ಳುವ ಸಾಧನವು ಸಂಸ್ಥೆಗಳ ಕೈಯಲ್ಲಿ ಇಲ್ಲಾಮಲಿಂದ ಇವುಗಳ ಸುಧಾರಣೆಯು ಆಗುವುದಿಲ್ಲ. ಹಣದ ವಿಷಯ ಬಂದ ಕೂಡಲೆ ಜನರ ಮೇಲೆ ಕರವನ್ನು ಹೆಚ್ಚಿಸಿರಿ ಎಂದು ಅಧಿಕಾರಿಗಳು ಹೇಳುವರು. ಆದರೆ ಸರಕಾರಿಕರ ಮತ್ತು ಸ್ಥಾನಿಕಕರ ಎಂದು ಎರಡೂ ವಿಧದಿಂದ ಜನರೆ ಹಣಕೊಡ ಬೇಕಾಗುತ್ತದೆ. ಇದು ಅಧಿಕಾರಿಗಳಿಗೆ ಗೊತ್ತಿಲ್ಲ. ಫ್ರಾನ್ಸಿನಲ್ಲಿ ಜಮೀನಿನ ಕಂದಲ್ಲಿ ಅರ್ಧಕ್ಕಿಂತ ಹೆಚ್ಚಿನ ಅಂಶವು ಸ್ಥಾನಿಕ ಸಂಸ್ಥೆಗಳ ಕೈಗೆ ಸೇರುವುದು. ಆದರೆ ಈ ದೇಶದಲ್ಲಿ ಕಂದಿಂದ ಆಗುವ ಉತ್ಪನ್ನದ $\frac{1}{1}$ ಭಾಗಗಳನ್ನು ಸರಕಾರವು ತನ್ನ ಕೈಯಲ್ಲಿಟ್ಟುಕೊಂಡು ಉಳಿದ $\frac{1}{1}$ನೆ ಭಾಗವನ್ನು ಸ್ಥಾನಿಕ ಸಂಸ್ಥೆಗಳಿಗೆ ಕೊಡುತ್ತದೆ. ಆದುದರಿಂದ ಸರಕಾರವು ಹೆಚ್ಚಿನ ಸಾಹಾಯ್ಯವನ್ನು ಈ ಸಂಸ್ಥೆಗಳಿಗೆ ಕೊಡಬೇಕಾದುದು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕೆಲಸವು ನಿರಾತಂಕವಾಗಿ ನಡೆಯುವಂತೆ ಅವುಗಳ ಮೇಲಿನ ಅಧಿಕಾರಿಗಳ ಜವಾಬದಾರಿಯನ್ನು ತೆಗೆದುಹಾಕಬೇಕು" ನಾಮದಾರ ಪಟೇಲರ ಈ ಸೂಚನೆಗಳು ಮನನೀಯವಾಗಿವೆ. ಪರಿಷತ್ತಿನಲ್ಲಿ ಪಾಸಾದ ಠರಾವುಗಳೂ ಕೂಡ ಮಹತ್ವದವುಗಳಾಗಿದ್ದವು. ಈ ಪರಿಷತ್ತು ಸರ್ವದೃಷ್ಟಿಯಿಂದ ಯಶಸ್ವಿಯಾದುದರಿಂದ ಬರುವ ವರ್ಷವೂ ಇದರ ಅಧಿವೇಶನವನ್ನು ಮಾಡಲು ನಿಶ್ಚಿತವಾಗಿದೆ. ಇರಲಿ. ಈ ಸಭೆಯ ಕೆಲಸವು ಲೋಕದೃಷ್ಟಿಯಿಂದ ಹೇಗೆ ಯಶಸ್ವಿಯಾಯಿತೋ ಹಾಗೆಯೆ ಇದರ ಠರಾವುಗಳ ಮತ್ತು ಅಧ್ಯಕ್ಷರ ಭಾಷಣದ ಸುಪರಿಣಾಮವು ಮುಂಬಯಿ ಸರಕಾರದ ಮೇಲೆ ಉಂಟಾಗಿ ತದ್ದ್ವಾರಾ ಈ ಪರಿಷತ್ತು ಫಲಪ್ರಕಾರಿಯಾಗಲಿ ಎಂದು ನಾವು ಹಾರೈಸುವೆವು.

೪. ಹಿಂದೂಸ್ಥಾನದ ಜಮಾ ಖರ್ಚಿನ ಖಾತೆಯವರು ಹೆಚ್ಚಿನ ಜಾಗ್ರತೆ ತಕೊಳ್ಳುವುದಿಲ್ಲ. ಎಂದು ಎಷ್ಟೋ ಸಮಯದಿಂದ ಜನರದೊಂದು ಅಂಬೋಣವಿದೆ. ಆದರೆ ಇದರ ಕಡೆಗೆ ಸರಕಾರವು ಹೆಚ್ಚಿನ ಮನಸ್ಸು ಕೊಡುವುದಿಲ್ಲ, ಅಥವಾ ಜಮಾ ಖರ್ಚಿನ ಇಲಾಖೆಯವರೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಇದು ಸಿದ್ಧಪ್ರಾಯವೆ. ಕಾರಣ, ಜಮಾಖರ್ಚ-ಖಾತೆಯವರು ಹಿಂದೂಸ್ಥಾನದ ಹಣದ ವಿಷಯದಲ್ಲಿ ಜನರ ಕಡೆಯಿಂದ ಜಾಗ್ರತೆ ತಕೊಳ್ಳುವದಿಲ್ಲವೆಂಬುದಾಗಿ ಮೊದಲು ಎಷ್ಟೋ ದೃಷ್ಟಾಂತಗಳು ಎಲ್ಲರ ನಿದರ್ಶನಕ್ಕೆ ಬಂದುಹೋಗಿವೆ. ಇದೆ ಮಾತು ವಿಲಾಯತಿ ಒಡಿಟರರ ಮೊನ್ನೆಯ ರಿಪೋರ್ಟಿನ ಸಾರಾಂಶ ದಿಂದಲೂ ಸಿದ್ಧವಾಗುತ್ತದೆ. ಒಡಿಟರನು ಕೆಲಸವು ವಾರ್ಷಿಕ ಜಮಾ ಖರ್ಚಿನ ಲೆಕ್ಕವನ್ನು ಶೋಧಿಸುವದು. [illegible]

ಯ್ಯವನ್ನು ಮಾಡುತ್ತಿರುವುದೊ ಅದರ ಬೆಲೆಯು ಹಿಂದೂಸ್ಥಾನದ ಜವಾಬದಾರ ಅಧಿಕಾರಿಗಳಿಗೆನೆ ಸರಿಯಾಗಿ ಗೊತ್ತಿರುವುದಿಲ್ಲೆಂದು ಹೇಳಿ ವಿಲಾಯತಿ ಒಡಿಟರರು ಈಚೆಯ ಒಂದು ದೃಷ್ಟಾಂತವನ್ನು ತೋರಿಸುತ್ತಾರೆ. ೧೯೧೫-೧೬ ಈ ವರ್ಷದಲ್ಲಿ ಹಿಂದೂಸ್ಥಾನದ ಖಜಾನೆಯಿಂದ ೧೩ ಸಾವಿರ ಪವನುಗಳ ನಷ್ಟವು ಆಗಲಿಕ್ಕಿತ್ತು. ಆದರೆ ಅದನ್ನು ಒಡಿಟರರು ಅಧಿಕಾರಿಗಳ ಲಕ್ಷ್ಯಕ್ಕೆ ತಂದುಕೊಟ್ಟರು. ಹಿಂದೂಸ್ಥಾನದಿಂದ ಆಸ್ಟ್ರೇಲಿಯಕ್ಕೆ ಕಳುಹಿಸಿದ ಸೈನ್ಯದ ಸಂಬಂಧದಿಂದ ಖರ್ಚವಾದ ಮತ್ತು ಆಸ್ಟ್ರೇಲಿಯ ಸರಕಾರಕ್ಕೆ ಅಲ್ಲಿಯೆ ಸೈನ್ಯದ ಸಂಚಲನದ ಬಗ್ಗೆ ಸಾಲಕೊಟ್ಟ ಹಣವು ೮ ಲಕ್ಷ ೫೦ ಸಾವಿರ ಪವನುಗಳು. ಇದು ಸಾಕಾಗದೆ ಪುನಃ ಖರ್ಚಿಗಾಗಿ ಹಣವು ಹಿಂದೂಸ್ಥಾನದಿಂದ ಕೊಡೋಣಾಯಿತು! ಈ ಮಾಹಿತಿಯನ್ನು ಹೇಳಿ ಮುಂದೆ ಒಡಿಟರರು ಹೇಳುತ್ತಾರೇನೆಂದರೆ 'ಸೈನ್ಯಗಳ ಹೋಗುಬರುವಿಕೆಗೆ ಮೊದಲಿನ ದ್ರವ್ಯವೆ ಸಾಕಷ್ಟು ಇರುವಾಗ ಪುನಃ ಯಾಕೆ ಎಂಬ ಪ್ರಶ್ನವನ್ನು ನಾನು ಕೇಳಿದೆನು. ಅದು ಅಲ್ಲಿಯ ಅಧಿಕಾರಿಗಳ ಲಕ್ಷ್ಯದಲ್ಲಿ ಬಂದು ೧೩ ಸಾವಿರ ಪವನುಗಳ ನಷ್ಟವು ಉಳಿಯಿತು' ಒಡಿಟರರ ಈ ವಿವರಣದಿಂದ ಹಿಂದೂಸ್ಥಾನದ ಜಮಾ ಖರ್ಚಿನವರು ಎಷ್ಟು ಜಾಗ್ರತೆಯನ್ನು ತೆಗೆದುಕೊಳ್ಳಬೇಕಾಗಿದೆಂಬುದನ್ನು ತಿರಿಗಿ ಪ್ರಸ್ತಾಪಿಸುವುದು ಅಗತ್ಯವಿಲ್ಲ. ಮದ್ರಾಸಿನ 'ಹಿಂದು' ಪತ್ರಕಾರರು ಹೇಳುತ್ತಾರೆ: ಹಿಂದೀ ಸಾಂಪತ್ತಿಕ ಸ್ಥಿತಿಯು ಎಷ್ಟು ನಾಜೂಕಾಗಿದೆ ಎಂದರೆ ಒಂದು ರೂಪಾಯಿಯನ್ನು ಉಳಿಸಿದರೆ ಒಂದು ಜೀವವನ್ನು ಉಳಿಸಿದಂತಾಗುವುದು. ಇದು ನಿಜ. ಈ ಸತ್ಯವು ಜನರ ಮನಸ್ಸಿಗೆ ಬರುವಂತೆ ಪೆಟ್ಟಿಗೆಯ ಬೀಗದಕೈಯು ಕೈಯಲ್ಲಿರುವವರ ಮನಸ್ಸಿಗೆ ಯಾವಾಗ ತೋರುವುದೊ ಆಗ ಹಿಂದೀ ರಾಷ್ಟ್ರದ ಶುಭೋದಯವಾದೀತೆನ್ನಬಹುದು.

೫. ಈ ತಿಂಗಳ ೪ನೆ ತಾರೀಕಿನ ದಿವಸ ಯುರೋಪ-ಮಹಾಯುದ್ಧದ ಮೂರು ವರ್ಷಗಳು ದಾಟಿ ನಾಲ್ಕನೆಯದು ಪ್ರಾರಂಭವಾಗಿದೆ. ಆ ಸಂಬಂಧದಿಂದ ಬ್ರಿಟಿಷ್ ಸಾಮ್ರಾಜ್ಯದಲ್ಲೆಲ್ಲ ಭಾವಿಜಯದ ಬಗ್ಗೆ ಪ್ರಜೆಗಳು ಪ್ರಾರ್ಥನೆಯನ್ನು ಮಾಡಿದರು. ನಮ್ಮ ಹಿಂದುಸ್ಥಾನದಲ್ಲೂ ಸರ್ವತ್ರ ಪ್ರಾರ್ಥನೆಯು ನಡೆಯಿತು. ಬ್ರಿಟಿಷ್ ಪಾರ್ಲಿಮೆಂಟಿನ ಪ್ರಧಾನಮಂತ್ರಿಗಳಾದ ಮಿ. ಲೊಯ್ಡ ಜೋರ್ಜರು ಮಿತ್ರಸಂಘಕ್ಕೆ ಉತ್ಸಾಹ ಪರವಾದ ಮತ್ತು ಬಾಂಧವ್ಯಸೂಚಕವಾದ ಸಂದೇಶವನ್ನು ಕಳುಹಿಸಿಕೊಟ್ಟಿರುವರು. ಹಾಗೆಯೆ ನಮ್ಮ ಬಾದಶಹರು ಲೊ. ಮೇಯರರಿಗೆ ಕಳುಹಿಸಿಕೊಟ್ಟ ಸಂದೇಶದಲ್ಲಿ ಅಪ್ಪಣೆಕೊಡುತ್ತಾರೆ, ಏನೆಂದರೆ: "ಮೂರು ವರ್ಷಗಳಲ್ಲಿ ನಡೆದ ಈ ಯುದ್ಧದ ದೆಸೆಯಿಂದ ಸಾಮ್ರಾಜ್ಯದ ಎಲ್ಲ ಭಾಗಗಳು ಹೆಚ್ಚು ನಿಗಡಿತವಾದವು. ಈ ರೀತಿಯಿಂದ ಉಂಟಾದ ಐಕ್ಯಬಂಧದಿಂದಲೂ ಈಶ್ವರಸಾಹಾಯ್ಯದಿಂದಲೂ ನ್ಯಾಯ, ಸ್ವಾತಂತ್ರ್ಯ, ದೀನವಾತ್ಸಲ್ಯ ಈ ಪವಿತ್ರತತ್ವಗಳ ರಕ್ಷಣಾರ್ಥವಾಗಿ ಪ್ರಾರಂಭಿಸಿದ ಈ ಯುದ್ಧದಲ್ಲಿ ನಮಗೆ ಜಯಶ್ರೀಯು ಪ್ರಾಪ್ತವಾದೀತು." ನಮ್ಮ ಬಾದಶಹರ ಈ ಸದಿಚ್ಛೆಯು ಪೂರ್ಣವಾಗಲೆಂದು ಪ್ರಾರ್ಥಿಸುವುದು ಪ್ರಜೆಗಳ ಕರ್ತವ್ಯವಾಗಿದೆ. ನಾಲ್ಕನೆ ವರ್ಷದ ಆದಿಯಲ್ಲಿ ನಮ್ಮ ಬಾದಶಹರೂ, ಮಂತ್ರಿಗಳೂ ಸಾಮ್ರಾಜ್ಯದಲ್ಲೂ ಮಿತ್ರಸಂಘದಲ್ಲೂ ಸದ್ಭಾವನೆಯ ಪ್ರೇರಣೆಗಾಗಿ ಮೇಲಿನಂತೆ ಹೇಗೆ ಸಂದೇಶಗಳನ್ನು ಪ್ರಕಟಿಸಿರುವರೊ ಹಾಗೆಯೆ ಜರ್ಮನ್ ಬಾದಶಹಾ ಕೈಸರರೂ ತಮ್ಮ ಪ್ರಜೆಗಳಲ್ಲೂ ಕೂಟದವರಲ್ಲೂ ಉತ್ಸಾಹ ಹುಟ್ಟುವಂತೆ ಸಂದೇಶವನ್ನು ಪ್ರಕಟಿಸಿರುವರು! ಅವರ ಸಂದೇಶವನ್ನು ನೋಡುವಾಗ ಜರ್ಮನ್ ಬಾದಶಹರಿಗೆ ಇನ್ನೂ ಜಯದ ಆಶೆಯು ಬಿಟ್ಟಿಲ್ಲೆಂದು ತೋರುತ್ತದೆ. ಕೈಸರರು ತಮ್ಮ ಸಂದೇಶದಲ್ಲಿ ಗತಿಸಿದ ವರ್ಷ ಜರ್ಮನಿ ಪಕ್ಷದವರು ಮಾಡಿರುವ ರುಮಾನಿಯಾ ಮೊದಲಾದ ರಾಷ್ಟ್ರಗಳ ವಿಧ್ವಂಸನದ ಶತಕೃತ್ಯವನ್ನು ಕೊಂಡಾಡಿ ತಮ್ಮ ದಂಡಾಳುಗಳಲ್ಲಿ ಚೈತನ್ಯ ಹುಟ್ಟಿಸಲು ಯತ್ನಿಸಿದ್ದಾರೆ. ಇದು ಎಷ್ಟರಮಟ್ಟಿಗೆ ಫಲಕಾರಿಯಾಗುವುದೊ? ಇದು ಮುಂದೆಯೆ ಗೊತ್ತಾಗಬೇಕು. ಜರ್ಮನಿಯ ಅಂತರ್ಗತ ವಿಷಯದಲ್ಲಿ ಬರುವ ವರ್ತಮಾನಗಳನ್ನು ನೋಡಿದರೆ ಜರ್ಮನ್ ಸೋಶಲಿಸ್ಟರಿಗೆ (ಸಮತಾ ವಾದಿಗಳಿಗೆ) ಈ ಯುದ್ಧವು ಈಗ ಬೇಡಾಗಿದೆ. ಅವರ ಅಭಿಪ್ರಾಯದಂತೆ ಜರ್ಮನ್ ಬಾದಶಹರ ಈ ಕೃತ್ಯವು (ಯುದ್ಧವು) ಮಾನವ ಜಾತಿಯ ಸಂಹಾರದ ಒಂದು ಅವತಾರವೆ ಸರಿ. ಇರಲಿ. ಜರ್ಮನ್ ಸಮತಾವಾದಿಗಳ ಈ ಅಭಿಪ್ರಾಯವನ್ನು ನಿರೀಕ್ಷಿಸುವಾಗ ಜರ್ಮನ ಬಾದಶಹರ ಸಂದೇಶವು ವಿಫಲವೆ ಆದೀತೆಂದು ಯುದ್ಧಶಾಸ್ತ್ರಜ್ಞರು ಹೇಳುವರು. ಅಂತು ಯುದ್ಧವು ಬೇಗನೆ ಮುಗಿದು ಜಗತ್ತಿನಲ್ಲಿ ಸುಖಶಾಂತಿಯುಂಟಾಗಲೆಂದು ನಮ್ಮ ಬಾದಶಹರಂತೆ ನಾವೆಲ್ಲರೂ ಕೋರುತ್ತೇವೆ.

೬. ಬರುವ ಕ್ರಿಸ್ತಮಸ್ ರಜೆಯಲ್ಲಿ ಈ ಜಿಲ್ಲೆಯ ಕೃಷಿ ಮತ್ತು ಕೈಗಾರಿಕೆಯ ಒಂದು ವಸ್ತುಪ್ರದರ್ಶನವನ್ನು ಮಾಡಬೇಕೆಂಬುದಾಗಿ ನಮ್ಮ ಮ. ಕಲೆಕ್ಟರ ದೊರೆಗಳು ಇಲ್ಲಿಯ ಪ್ರಮುಖಗೃಹಸ್ಥರ ಒಂದು ಮೀಟಿಂಗನ್ನು ಕರೆಯಿಸಿ ನಿರ್ಣಯಿಸಿದ್ದಾರೆಂದು ತಿಳಿಯುತ್ತೇವೆ. ಇಂಥ ವಸ್ತುಪ್ರದರ್ಶನವು ನಮ್ಮ ಜಿಲ್ಲೆಗೆ ಮಾತ್ರ ನವೀನವಲ್ಲದೆ ಬೇರೆ ಕಡೆಗಳಲ್ಲಿ ಇಂಥ ಪ್ರದರ್ಶನಗಳನ್ನು ಆಗಾಗ್ಗೆ ಒದಗಿಸಿ ಅಮೂಲ್ಯಕ ಕೈಗಾರಿಕೆ, ಕೃಷಿ-ಉದ್ಯಮಗಳ ಉನ್ನತಿಯು ಆಗುತ್ತಿದೆ. ನಮ್ಮ ಜಿಲ್ಲೆಯಲ್ಲಿ ಇತ್ತರವರೆಗೆ ಇಂಥ ಪ್ರದರ್ಶನದ ಕಲ್ಪನೆಯು ಇದ್ದಿಲ್ಲ. ಪ್ರಕೃತ ಗವರ್ನರ ದೊರೆಗಳಂಥವರು ಅಭ್ಯಾಗತರಾಗಿ ಬರುವಾಗ ಜಿಲ್ಲೆಯೊಳಗಿನ ದೊಡ್ಡ ದೊಡ್ಡ ಕೆಲವಸ್ತುಗಳನ್ನು ಪ್ರದರ್ಶಿಸಿ ಒಂದು ತರದ ವಿನೋದವನ್ನುಯುಮಾಡುವ ಪ್ರಯತ್ನವು ಮಧ್ಯಮಧ್ಯದಲ್ಲಿ ನಡೆಯುತ್ತಿತ್ತು. [illegible]

ಅವರ ಕೋರಿಕೆಯಂತೆಯೆ ನೆರವೇರಿದರೆ, ಅದರಿಂದ ಈ ಜಿಲ್ಲೆಯ ಕೈಗಾರಿಗೆ ಮತ್ತು ಕೃಷಿವೃತ್ತಿ ಇವುಗಳಿಗೆ ಯೋಗ್ಯಪ್ರಯೋಜನವು ಸಿಗದೆ ಇರದೆಂದು ಹೇಳಬಹುದು. ಈ ಜಿಲ್ಲೆಯಲ್ಲಿ ಮತ್ತು ಇಲ್ಲಿಂದ ಕೆಳಗೆ ಪಶ್ಚಿಮತೀರದಲ್ಲಿ ಮಲಬಾರದ ವರೆಗಿನ ಕೈಗಾರಿಕೆಯ ಒಡವೆಗಳನ್ನೂ ಕೃಷಿಸಾಧನೆಗಳನ್ನೂ ಹಾಗು ಐತಿಹಾಸಿಕ ವಸ್ತುಗಳನ್ನೂ ಈ ಮಂಗಳೂರ ಪ್ರದರ್ಶನದಲ್ಲಿ ತಂದಿಡಬೇಕೆಂದು ನಮ್ಮ ಕಲೆಕ್ಟರ ದೊರೆಗಳ ಮನೀಷೆಯು ಇದೆ. ಈ ಪ್ರದರ್ಶನವನ್ನು ಒದಗಿಸಲು ಬೇಕಾದ ದ್ರವ್ಯಸಾಹಾಯ್ಯವನ್ನು ಜನರೂ ಜಿಲ್ಲಾ ಬೋರ್ಡ ತಾಲೂಕ ಬೋರ್ಡ ಹಾಗು ಮುನ್ಸಿಪಾಲಟಿ ಇವುಗಳೂ ಕೊಡಬೇಕಾಗಿ ನಾವು ಸೂಚಿಸುವೆವು. ಅಲ್ಲದೆ ಮೊದಲು ಈ ಜಿಲ್ಲೆಯ ಕೃಷಿಯ ಉತ್ತೇಜನದ ಬಗ್ಗೆ ಒಂದು ಸಂಘವು ಅಸ್ತಿತ್ವದಲ್ಲಿದ್ದು ಅದು ಶೇಖರಿಸಿದ ಹಣವೂ ಇರುವದು. ಅದರ ಹಣದಲ್ಲಿ ಕೆಲವು ಅಂಶವನ್ನು ಸಹ ಈ ಮಂಗಳೂರ ಪ್ರದರ್ಶನದಲ್ಲಿ ಉಪಯೋಗಿಸ ಬಹುದು. ಮಂಗಳೂರ ವಸ್ತುಪ್ರದರ್ಶನವನ್ನು ಕುರಿತು ನಮಗೆ ಇನ್ನೂ ಕೆಲವು ಮಾಹಿತಿಯನ್ನು ವಾಚಕರ ಮುಂದಿಡಲು ಇದೆ. ಅದನ್ನು ಸ್ಥಲಸಂಕೋಚದ ದೆಸೆಯಿಂದ ಮುಂದರಿಸಬೇಕಾಗುತ್ತದೆ. ಆದರೂ ಇಂಥ ಉಪಯುಕ್ತವಾದ ಪ್ರದರ್ಶನವನ್ನು ಒದಗಿಸಿ ತರುವ ವಿಷಯದಲ್ಲಿ ನಮ್ಮ ಕಲೆಕ್ಟರ ದೊರೆಗಳು ತಕೊಳ್ಳುವ ಉತ್ಸಾಹದ ಬಗ್ಗೆ ಮನಃಪೂರ್ವಕ ಅವರ ಅಭಿನಂದನವನ್ನು ಮಾಡದೆ ನಮ್ಮಿಂದಿರಲಾಗದು.

೭. ದನಕರುಗಳ ಉಪಯೋಗಾರ್ಥ ಬಿಟ್ಟಿರುವ ಹುಲ್ಲುಗಾವಲು ಕೆಂಬಹುನಾ 'ಪರಂಭೋಗ' ಸ್ಥಲಗಳನ್ನು ಅದೆ ಕೆಲಸಕ್ಕೆ ಇರಗೊಡಿಸ ಬೇಕೋ ಎಂಬೀ ವಿಷಯದಲ್ಲಿ ರೆವಿನ್ಯು ಬೋರ್ಡಿನವರು ಜಿಲ್ಲಾ ಕಲೆಕ್ಟರರುಗಳ ಅಭಿಪ್ರಾಯಗಳನ್ನು ಕೇಳಿರುವರು. ನಮ್ಮ ಜಿಲ್ಲಾ ಕಲೆಕ್ಟರ ದೊರೆಗಳವರು ಈ ವಿಷಯ ಪ್ರಜಾಭಿಪ್ರಾಯವನ್ನು ಗೊತ್ತುಮಾಡುವದರಲ್ಲಿದ್ದಾರೆಂಬುದಾಗಿ ತಿಳಿಯುತ್ತೇವೆ. ಈಗಿನ ವಿದ್ಯಮಾನಗಳಲ್ಲಿ ಹುಲ್ಲುಗಾವಲುಗಳಿಂದ ದನಕರುಗಳಲ್ಲಿ ಆಗುವ ಹಾವಳಿಯ ವಿವರವು ರೆವಿನ್ಯೂ ಬೋರ್ಡಿನವರ ಪತ್ರದಲ್ಲಿರುವದು. ಹುಲ್ಲುಗಾವಲುಗಳ ಮೂಲಕ ಅಂಟುರೋಗಗಳು ಹೇಗೆ ಹುಟ್ಟುತ್ತವೆ, ರಾಶಿರಾಶಿಯಾಗಿ ದನಕರುಗಳು ಮೇವುಸ್ಥಳಗಳಲ್ಲಿ ಕೂಡುವದರಿಂದ ಹುಲ್ಲು ಬೆಳೆಯುವದೂ ಸಹ ಹೇಗೆ ಹಾಳಾಗಿಹೋಗುವದು—ಈ ಸ್ವಭಾವದ ವಾದಗಳು ಬೋರ್ಡಿನ ಪತ್ರದಲ್ಲಿರುವವು. ಈ ವಿಷಯ ಇನ್ನೊಮ್ಮೆ ವಿಸ್ತಾರವಾಗಿ ಬರೆಯಬೇಕೆಂದಿರುವೆವು. ಈ ತನ್ಮಧ್ಯ ನಾವು ಹೇಳುವುದೇನಂದರೆ—ಹಳ್ಳಿಗಳೊಳಗಿನ ಅಥವಾ ಪಟ್ಟಣದೊಳಗಿನ ಹುಲ್ಲುಗಾವಲಿನ ಪ್ರಕೃತ ವಿರುವ ಅಲ್ಪಸ್ವಲ್ಪ ಸ್ಥಲಗಳನ್ನು ಅಂಟುರೋಗದ ನಿಮಿತ್ತದಿಂದ ಮನಾಯಿ ಮಾಡುವುದೆಂದರೆ ಸಂತೆ ಮಾರ್ಕೆಟು ಮುಂತಾದ್ದರಿಂದ ಸ್ಪಾರ್ಶಿಕ, ಸಾಂಕ್ರಾಮಿಕರೋಗ ಪ್ರಸಾರಣವುಂಟಾಗುವುದೆಂದು ಅವುಗಳನ್ನು ನಿಲ್ಲಿಸುವಂತೆಯೆ ಸರಿ. ಅಥವಾ ಬಾವಿಗಳನ್ನು ಸರಿಯಾಗಿ ಕಲ್ಲುಗಳಿಂದ ಕಟ್ಟದೆ ಇದ್ದು ಆ ಮೂಲಕ ದೂಷಿತವಾದ ನೀರಿನಿಂದ ಸನ್ನಿಪಾತಾದಿ ರೋಗಗಳು ಬರುತ್ತವೆಂದು ನೀರನ್ನೆ ಉಪಯೋಗಿಸಕೂಡದೆಂದು ಹೇಳುವುದು, ಎಷ್ಟು ತಪ್ಪೊ ಅಷ್ಟೆ ಮೇಲಿನ ಕಾರಣದಿಂದ ಪರಂಭೋಗ ಹುಲ್ಲುಗಾವಲು ಸ್ಥಲಗಳನ್ನು ತೆಗೆದುಹಾಕುವದು ತಪ್ಪಾಗಿದೆ. ಡಿಸ್ಟ್ರಿಕ್ಟ್ ಎಸೋಶಿಯೇಶನು ಮತ್ತು ಹಳ್ಳಿಯೊಳಗಿನ ಎಲ್ಲ ಗೋಪೋಷಕರು ಈ ವಿಷಯದಲ್ಲಿ ಯೋಗ್ಯವಾದ ಪ್ರಯತ್ನವನ್ನು ನಡಿಸಿ ಬರುವ ಸಪ್ಟೆಂಬರಿನಲ್ಲಿ ಇಲ್ಲಿ ಬರಲಿಕ್ಕಿದ್ದ ಗವರ್ನರ ದೊರೆಗಳಿಗೆ ಈ ಪರಂಭೋಗ ಸ್ಥಲಗಳನ್ನು ತೆಗದುಹಾಕದಂತೆ ಮನವಿಮಾಡಕೊಳ್ಳಬೇಕೆಂದು ನಾವು ಈಗಲೆ ಸೂಚಿಸುವೆವು.

ಸ್ಥಳಿಕ — ಮಂಗಳೂರು.

ನೋಟೀಸು ಪ್ರಕಟಿಸಿದಂತೆ ತಾ. ೫ ಭಾನುವಾರ ಇಲ್ಲಿಯ ಕೆನರಾ ಹೈಸ್ಕೂಲಿನ ಭುವನೇಂದ್ರ ಮಂದಿರದಲ್ಲಿ ಲೆಫ್ಟಿನೆಂಟ್ ಬಿ. ಜಿ. ಮ. ಲ್ಯಾ ಪಿ. ಎಮ್. ಎಸ್. ಇವರ ಮ। ರಾ। ಯು. ಸಿ. ಕೃಷ್ಣಭಟ್ಟ ವಕೀಲರ ಅಧ್ಯಕ್ಷತೆಯಲ್ಲಿ ಉಪನ್ಯಾಸವಾಯಿತು. ಉಪನ್ಯಾಸಕರು ತಮ್ಮ ಉಪನ್ಯಾಸದಲ್ಲಿ ತಮ್ಮ ಅನುಭವವನ್ನು ಸರಿಯಾಗಿ ವಿವರಿಸಿ ಹೇಳಿ ತನಗೂ ಪರಮಪೂಜ್ಯಬಾದಶಹರಿಗೂ ಮಾಜಿ ಸೆಕ್ರೆಟರಿ ಮಿ. ಚೆಂಬರಲೇನರಿಗೂ ನಡದ ಸಂಭಾಷಣವನ್ನು ಹೇಳಿದರು. ಅನಂತರ ಅಧ್ಯಕ್ಷರ ಸಮಾರೋಪದ ಭಾಷಣವು ಸುಶ್ರಾವ್ಯವಾಗಿತ್ತು.

ನಮ್ಮ ಮದ್ರಾಸ ಗವರ್ನರರಾದ ಲೋರ್ಡ ಪೆಂಟ್‌ಲೆಂಡ್ ಪ್ರಭುಗಳು ಒಕ್ಟೋಬರ ತಾ. ೧೩ಕ್ಕೆ ಇಲ್ಲಿ ದಯಮಾಡುವರಾಗಿ ತಿಳಿದು ಬರುತ್ತದೆ.

ನಿನ್ನೆ ಶುಕ್ರವಾರ ಘಂಟೆ ೧೦ ಸಮಯಕ್ಕೆ ಮ. ಕಲೆಕ್ಟರ ದೊರೆಗಳ ಬಂಗಲೆಯಲ್ಲಿ 'ಮಂಗಳೂರ ವಸ್ತು ಪ್ರದರ್ಶನ'ದ ಕಮ್ಮಿಟಿ ಮೆಂಬರರ ಕೂಟವು ಸೇರಿತ್ತು. ಪ್ರದರ್ಶನದ ವ್ಯವಸ್ಥೆಯನ್ನು ಯಾವ ರೀತಿಯಿಂದ ಮಾಡುಬೇಕಾದುದು ಎಂಬುದನ್ನು ನಿರ್ಣಯಿಸಲು ನಿನ್ನೆಯ ಕೂಟವು ಸೇರಿತ್ತು.

ಕಳದ ವಾರ ಸೆಂಟ್ರಲ್ ವಾರ್ಡಿನಲ್ಲಿ ೧, ಕೋರ್ಟವಾರ್ಡ ೧, ಕೆಂಟೋನ್‌ಮೆಂಟ್ ವಾರ್ಡ ೧, ಫೋರ್ಟವಾರ್ಡ ೨, ಹೀಗೆ ೫ ಪ್ಲೇಗಮರಣಗಳಾದವು.

ಮ। ರಾ। ರಾ। ಕೆ. ಕೃಷ್ಣರಾವ್ ತಾಲೂಕು ಬೋರ್ಡ ಮೆಂಬರ್ ಇವರು ಬರೆದು ಕಳುಹಿಸಿದ ಪತ್ರಕ್ಕೆ ಈ ಸಂಚಿಕೆಯಲ್ಲಿ ಸ್ಥಳವಿಲ್ಲದ್ದರಿಂದ ಪ್ರಕಟಿಸಲಿಲ್ಲ.

ಮಂಗಳೂರಲ್ಲಿ ಸ್ವದೇಶಿ ಸ್ಟೋರ್ಸ ಸ್ಥಾಪಿತವಾಗುವ ವಿಷಯ ಕಳದ ಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಮ। ರಾ। ರಾ। ವಕೀಲ ಭೇಡೆಯವರ ಮನೆಯಲ್ಲಿ [illegible] ಸ್ವದೇಶಿ ವಸ್ತುಗಳನ್ನು ವಿಕ್ರಿತಕ್ಕೆ ತರಿಸಿರುವ [illegible]

ಮಾಧವರಾಯರವರು ಆ ಸ್ಥಿತಿ ಒಪ್ಪಿರಾಗಿರುತ್ತಾರೆ. ಇಂದಿನ ಸಭೆಗೆ ಪೋಲಿಸ ಸಬ್ ಇನ್ಸ್ಪೆಕ್ಟರವರೂ ಬಂದಿದ್ದರು.

ಯುದ್ಧದಿವಸದ ನಿಮಿತ್ತವಾಗಿ ಇಲ್ಲಿಯ ಮುಖ್ಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿಯೂ ಶ್ರೀ. ಉಮಾಮಹೇಶ್ವರ ದೇವಸ್ಥಾನದಲ್ಲಿಯೂ ಬ್ರಿಟಿಷರಿಗೂ ಮಿತ್ರರಿಗೂ ಜಯ ಉಂಟಾಗಲೆಂದು ಅಭಿಷೇಕ ಪೂಜೆ, ಪ್ರಾರ್ಥನೆ ಮೊದಲಾದವುಗಳನ್ನು ಆಯಾಯ ಭಜಕ ಮಂಡಳಿಯವರು ಬಹಳ ಶ್ರದ್ಧಾಭಕ್ತಿಗಳಿಂದ ಆಚರಿಸಿರುತ್ತಾರೆ.

ಇಲ್ಲಿಯ ಗೌಡಸಾರಸ್ವತ ಬಡ ವಿದ್ಯಾರ್ಥಿ ಸಹಾಯಕ ಫಂಡಿನಿಂದ ಟಾಲ್ಪವರಾವಳ್ಳಿ ಇಲ್ಲಿಯ ಎಲಿಮೆಂಟರಿ ಶಾಲೆಯ ೩ನೇ ಕ್ಲಾಸಿನಲ್ಲಿ ಕಲಿಯುವ ನರಸಿಂಹ ಕಿಣ್ಣಿರ ಮಗ ಕೇಶವಕಿಣ್ಣಿ, ಗಣಪತಿ ಕಿಣಿಯರ ಮಗ ನರಸಿಂಹ ಕಿಣಿ, ೪ನೇ ಕ್ಲಾಸಿನಲ್ಲಿ ಕಲಿಯುವ ಅಚ್ಯುತಕ್ಯಾನಭಾಗರ ಮಗ ನಾಗೇಶಕ್ಯಾನಭಾಗ್, ವೆಂಕಟಪ್ರಭು ಮಗ ಲಕ್ಷ್ಮಣಪ್ರಭು, ದೇಟಲಿ ವಾಮನಭಟ್ಟರ ಮಗ ರಾಮಭಟ್ಟ, ಲಕ್ಷ್ಮಣಪ್ರಭು ಮಗ ನಾರಾಯಣಪ್ರಭು, ಸೆಕೆಂಡರಿ ಶಾಲೆಯಲ್ಲಿ ಕಲಿಯುವ ಮುಕುಂದ ಕಿಣ್ಣಿರ ಮಗ ವೆಂಕಟೇಶಕಿಣ್ಣಿ ಕೂಡಾ ೭ ಮಂದಿ ವಿದ್ಯಾರ್ಥಿಗಳಿಗೆ ಅವರವರ ಕ್ಲಾಸಿನ ವರ್ಷಾವಧಿ ಪರೀಕ್ಷೆವರೆಗಿನ ಪ್ರತಿ ತಿಂಗಳ ಶಾಲಾ ಫೀಸನ್ನು ಫಂಡಿನಿಂದ ಸಹಾಯಮಾಡಬೇಕಾಗಿ ಕಾರ್ಯನಿರ್ವಾಹಕ ಸಭೆಯವರು ನಿರ್ಣಯಿಸಿರುತ್ತಾರೆ. ಮತ್ತು ಪರಸ್ಥಳದಲ್ಲಿರುವ ಈ ಊರಿನವರಾದ ಸರಕಾರಿ ಉದ್ಯೋಗಸ್ಥರು ಮೊದಲಾದವರಿಗೆ ಈ ಫಂಡಿಗೆ ಸಹಾಯಮಾಡುವಂತೆ ವಿಜ್ಞಾಪಿಸಿ ಒಂದು ಛಾಪಾಮನವಿಯನ್ನು ತಯಾರಿಸುವರೆ ಕಾರ್ಯನಿರ್ವಾಹಕಸಭೆಯವರು [illegible] ಕಮಿಟಿಯನ್ನು ನೇಮಿಸಿರುತ್ತಾರೆ. ಈ ಫಂಡಿಗೆ ರೂ. ೧೦ನ್ನು ತಮ್ಮ ಉದಾರಹಸ್ತದಿಂದ ಸಹಾಯಮಾಡಿದ್ದಕ್ಕಾಗಿ ಸೇಲಂನಲ್ಲಿರುವ ಸಾಹುಕಾರ ಮ॥ ರಾ॥ ರಾ॥ ಶ್ರೀನಿವಾಸ ಜೋಗಪ್ಪಾಡಾಂಗೆರವರಿಗೆ ಈ ಸಂಸ್ಥೆಯವರು ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಾರೆ.

ಕುಂದಾಪುರ:—ಈ ಶಹರಿನಲ್ಲಿ ಈಚೆಗೆ ಆದ ಕನ್ನಕಳವುಗಳ ಕುರಿತು ಪೋಲೀಸ್ ತಲಾಶಿಯು ಚಟುವಟಿಕೆಯಿಂದ ನಡೆಯುತ್ತದೆ. ಆದರೆ ಅಗ್ಗಾಗ್ಗೆ ನಡೆಯುವ ಕಳ್ಳೇಟುಗಳು, ಜುಗಾರಾಟ ವಗೈರೆ ಘಾತಾ ಕಡೆಗಾಣಿಸುವದು [illegible] ಪೋಲೀಸ್ ಸ್ಟೇಶನ್ ಅತೀ ಅಗತ್ಯವೆಂತ ಇಲ್ಲಿಯ [illegible] ಈ ಮೊದಲು ಬರಕೊಂಡ ಮನವಿಯನ್ನು ಮಾನ್ಯ ಕಲೆಕ್ಟರ್ ಮೊದಲಾದವರು ಇನ್ನಾದರೂ ಮನ್ನಿಸುವರಾಗಿ ನಂಬುತ್ತೇವೆ.

ಇದೇ ತಾ ೨ನೇ ಸ್ಯಾನಿಟರಿ ಶಿಕ್ಷ ಸಾವಕಾರ [illegible] ವಾಮನ ಶೆಣೈರವರ ಕಟ್ಟೋಣದ ೩ನೇ ಅಂತಸ್ತಿನಲ್ಲಿ [illegible] ಸಭೆಯನ್ನು 'ಹೋಮ್‌ರೂಲ್ ಲೀಗ್' ಎಂಬ ಸಂಸ್ಥೆಯ ಶಾಖೆಯನ್ನು [illegible]. ಇದಕ್ಕೆ ಆಗಲೇ ೧೪ ಜನರು ಮೆಂಬರರಾಗಿ ಸೇರಿದ್ದಾರೆ. ಕೂಡಿದ ಸಭೆಯ ಮುಂದೆ ಮ॥ ರಾ॥ ಶೆಣೈರವರು ಸಾರ್ವಜನಿಕ ಉಪಯೋಗಕ್ಕಾಗಿ ಯೋಗ್ಯವಾದ ಒಂದು 'ರೀಡಿಂಗ್ ರೂಮ್' ತನ್ನ ಸ್ವಂತ ಖರ್ಚಿನಿಂದ ಬೇಗನೆ ಕಟ್ಟಿಸಿಕೊಡುವದಾಗಿಯೂ – ಕೆಲವು ವರ್ತಮಾನಪತ್ರಿಕೆಗಳನ್ನೂ, ಪುಸ್ತಕಗಳನ್ನೂ ಸಹ ತರಿಸಿಕೊಡುವುದಾಗಿಯೂ ಒಪ್ಪಿರುವರು. ಇವರ ಉದಾರತ್ವವು ಶ್ಲಾಘನೀಯವಾಗಿದೆ.

ತಾ॥ ೪ಲ್ಲು ಇದೇ ಕಟ್ಟೋಣದಲ್ಲಿ ಈಗಿನ ಯುದ್ಧಸಂಬಂಧವಾದ ೪ನೇ ವರ್ಷದ ವರ್ಧಂತಿಸಭೆಯು ಕೂಡಿತು. ಉಚ್ಚಸ್ಥಾನದಲ್ಲಿ ರಾಜರಾಣಿಯವರ ಚಿತ್ರಗಳನ್ನಿರಿಸಿತ್ತು.— ನಮ್ಮ ಪ್ರಭುಗಳಾದ ಬ್ರಿಟಿಷರು ಫಲಾಪೇಕ್ಷೆಯಿಲ್ಲದೆ ಧರ್ಮರಕ್ಷಣೆಗಾಗಿ ಪ್ರವೇಶಿಸಿದ ಈ ಘೋರಯುದ್ಧವು ಬೇಗನೆ ಸಮಾಪ್ತಿಯಾಗಿ ನಮ್ಮವರಿಗೆ ನಿಶ್ಚಯವಾಗಿ ಚಕ್ರವರ್ತಿಯವರಿಗೂ, ಮಹಾರಾಣಿಯವರಿಗೂ ಆಯುರಾರೋಗ್ಯಗಳನ್ನು ಶ್ರೀದೇವರು ದಯಪಾಲಿಸಲೆಂತ ಮ॥ ರಾ॥ ಆರ್. ನರಸಿಂಗ ನ್ಯಾಕರವರು ಭಾಷಣ ಮಾಡುತ್ತಲೇ ಸಭೆಯಲ್ಲಿ ಅದೇ ಘೋಷವಾಯಿತು. ಸಭೆ ವಿಸರ್ಜಿಸಿದ ನಂತರ ಶ್ರೀ ದೇವಸ್ಥಾನದಲ್ಲಿ ಪೂಜೆಯನ್ನು ನಡೆಸಿ [illegible] ಪ್ರಾರ್ಥನೆಯಿಂದ ಪ್ರಸಾದಪಾನಾದಿಗಳು ಹಂಚಲಾಯಿತು. ಈ ದಿನ ಇಲ್ಲಿಯ ಬಿ. ಎಮ್. ಎಲಿಮೆಂಟರಿ ಶಾಲೆ, ಬೋರ್ಡ್ ಬಾಲಿಕಾ ಪಾಠಶಾಲೆ, ಮತ್ತು ನ್ಯಾಶನಲ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಸಹ ಪ್ರಾರ್ಥನೆಗಳು ನಡೆದಿವೆಯಾಗಿ ಕೇಳುತ್ತೇನೆ.

ಪುತ್ತೂರು ಸರಕಾರಿ ಹುಡುಗಿಯರ ಶಾಲೆಯಿಂದ ಯುದ್ಧ ಫಂಡಿಗೆ ಸಹಾಯ.

ಪುತ್ತೂರು ಸರಕಾರಿ ಹುಡುಗಿಯರ ಶಾಲೆಯಲ್ಲಿ ಯುದ್ಧದ ಖರ್ಚಿಗೆ ಪ್ರಸ್ಯ ಸಹಾಯ ಮಾಡುವುದಕ್ಕೋಸ್ಕರ ಇದೇ ತಿಂಗಳ ತಾ ೨ನೇ ಗುರುವಾರ ದಿವಸ ಮಂಗಳೂರಿನ ಶ್ರೀಮತಿ ಸೌ ಸಯಂಪಳ್ಳಿ ಲಲಿತಾಬಾಯಿಯವರ ಅಧ್ಯಕ್ಷತೆಯಲ್ಲಿ ವಿಶೇಷವಾದ ಕೈಗಾರಿಕೆ ಸಾಮಾನುಗಳ ಮಾರಾಟವೂ ವಿಧವಿಧದ ದೀಪಾವಳಿಯೂ ಇದ್ದವು. ಶಾಲಾ ಮಕ್ಕಳು ಅಭಿನಯಿಸಿದ ಬಗೆಬಗೆಯ ಆಟಗಳು, ಮುಖ್ಯವಾಗಿ ಮರಾಠಿಸಂಗೀತ, ಕುಂಜವಿಹಾರಿ ನಾಟಕವು ಬಹಳ ಚಲೋದಾಗಿದ್ದು ಸಭಿಕರು ತಮಗುಂಟಾದ ಆನಂದವನ್ನು ಆಗಾಗ್ಯೆ ಕೈಚಪ್ಪಾಳೆಗಳಿಂದ ತೋರ್ಪಡಿಸುತ್ತಿದ್ದರು. ಶಾಲಾ ಕಟ್ಟೋಣವು ವಿಧವಿಧದ ಸಳ್ಳೆಗಳಿಂದಲೂ, ವೈಜಯಂತಿಗಳಿಂದಲೂ, ಪತಾಕೆಗಳಿಂದಲೂ, ತಳಿರುತೋರಣಗಳಿಂದಲೂ ಬಹಳ ಅಲಂಕೃತವಾಗಿತ್ತು. ನಾಟಕಾದಿಗಳನ್ನು ಆಡಿದ ನಂತರ ಸಭಾಧ್ಯಕ್ಷರಾಗಿದ್ದ ಸೌ ಲಲಿತಾಬಾಯಿಯವರು – "ಪುತ್ತೂರಿನಲ್ಲಿ ಸಹಕಾರದ ಏರ್ಪಾಡು ಬದ್ಧಮೂಲವಾಗಿದ್ದು ಎಲ್ಲಾ ವಿಧದಲ್ಲಿಯೂ ಪ್ರಯೋಜನಕರವಾದ ಮತ್ತು ಸಾರ್ವಜನಿಕವಾದ ಕಾರ್ಯಗಳನ್ನು ನಡೆಸುವುದರಲ್ಲಿ ಇಲ್ಲಿಯ ಸಹಕಾರಿಗಳು (Co-operators) ತೋರಿಸುವ ಕುತೂಹಲ ಮತ್ತು ಸಾಹಸವು ಶ್ಲಾಘನೀಯವಾಗಿದೆ. ಇಲ್ಲಿಯ ಸೆಕೆಂಡರಿ ಶಾಲೆಯ ಸ್ಥಾಪನೆಗೆ ಮತ್ತು ಹುಡುಗಿಯರ ಶಾಲೆಯ ವೃದ್ಧಿಗೆ ಪೌರಜನರ ಐಕ್ಯಮತ್ಯ ಮತ್ತು ಪರಸ್ಪರ ಸಹಾಯವೇ ಮುಖ್ಯಕಾರಣವಾಗಿರುತ್ತದೆ. ಮಂಗಳೂರಿನ ಮಹಿಳಾ ಸಭೆಯನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಅದೇ ಮಾದರಿಯಲ್ಲಿ ಪುತ್ತೂರಲ್ಲಿಯೂ ಒಂದು ಮಹಿಳಾ ಸಭೆಯನ್ನು ಏರ್ಪಡಿಸ ತಕ್ಕದ್ದು; ಆ ಸಭೆಯಲ್ಲಿ ಹೊಲಿಯುವುದು, ಹೆಣೆಯುವುದು ಮೊದಲಾದುವುಗಳನ್ನು ಕಲಿಸಬೇಕಲ್ಲದೆ, ಇಲ್ಲಿಯ ಡಾಕ್ಟರರಿಗೆ ಮನವಿ ಮಾಡಿ ಅವರಿಂದ ಆರೋಗ್ಯಶಾಸ್ತ್ರ, ಶಿಶುಗಳ ಮತ್ತು ಅಸೌಖ್ಯದಲ್ಲಿರುವವರ ಆರೈಕೆ ನೋಡುವ ಕ್ರಮ, ಪ್ರಥಮ ಚಿಕಿತ್ಸೆ ಮೊದಲಾದುವುಗಳಲ್ಲಿ ಉಪನ್ಯಾಸಗಳನ್ನು ಮಾಡಿಸಬೇಕು. ನಮ್ಮ ಮಹಾರಾಜ್ಞಿಯವರು ತಮ್ಮ ಮಾತೃಭೂಮಿಯಲ್ಲಿ ಉಂಟುಮಾಡಿದ ವಸ್ತುಗಳನ್ನೇ ಉಪಯೋಗಿಸುತ್ತಾರೆ; ತಮ್ಮ ದೇಶದಲ್ಲಿ [illegible] ವಸ್ತುಗಳನ್ನು ಮಾತ್ರ ತಾವು ಉಪಯೋಗಿಸುತ್ತೇನೆಂಬುದು ಪ್ರತಿಯೊಬ್ಬ [illegible] ಗೌರವದ ಮಾತಾಗಿದೆ; ಅವರನ್ನು ಆದರ್ಶವಾಗಿಟ್ಟುಕೊಂಡು ನಮ್ಮ ಸ್ತ್ರೀಯರು ಕೂಡ [illegible] ಹಿಂದುಸ್ಥಾನದಲ್ಲಿ ತಯಾರಾದ ವಸ್ತ್ರ ಸಮಸ್ತ ಸಾಮಾನುಗಳನ್ನೇ ಕೊಂಡುಕೊಳ್ಳಬೇಕು. ಈ ಹುಡುಗಿಯರ ಶಾಲೆಯಲ್ಲಿ ಇತರ [illegible] ಮಹಿಳೆಯರನ್ನು [illegible] [illegible] "ಎಂಬುದಾಗಿ [illegible]

ಮಾಡಿ ಅಷ್ಟರಿಂಗೆ ಆ ದಿನದ ಸಮಾರಂಭವನ್ನು ಕೈಗೂಡಿಸಿದುದಕ್ಕೆ ಶಾಲೆಯ ಮುಖ್ಯ ಉಪಾಧ್ಯಾಯಿನಿಯನ್ನೂ, ನಾಟಕಾದಿಗಳನ್ನು ಚಲೋದಾಗಿ ಅಭಿನಯಿಸಿದುದಕ್ಕಾಗಿ ಶಾಲಾ ಮಕ್ಕಳನ್ನೂ ವಿಶೇಷವಾಗಿ ಸ್ತುತಿಸಿದರು. ಅನಂತರ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ, ರಾಜಗೀತವನ್ನು ಹಾಡಲಾಯಿತು. ಇದೆಲ್ಲಾ ಮುಗಿದ ಮೇಲೆ ಕೈಗಾರಿಕೆ ಸಾಮಾನುಗಳ ಮಾರಾಟವು ಪ್ರಾರಂಭವಾಯಿತು. ಶಾಲಾ ಮಕ್ಕಳಿಗೆ ತರಬೇತು ಮಾಡುವುದರಲ್ಲಿಯೂ ಇತರ ವಿಧದಲ್ಲಿಯೂ ಇಲ್ಲಿಯ ಸಹಕಾರಿಗಳ ಪೈಕಿ ಕೆಲವರು ಮಾಡಿದ ಸಹಾಯವು ಅಷ್ಟಿಷ್ಟಲ್ಲ. ಶಾಲೆಯ ಎಲ್ಲಾ ಉಪಾಧ್ಯಾಯಿನಿಯರು ಮೇಲ್ಕಂಡ ಕೈಗಾರಿಕೆ ಸಾಮಾನುಗಳನ್ನು ಸುಮಾರು ಆರು ತಿಂಗಳುಗಳ ಲಾಗಾಯತು ಬಹಳ ಶ್ರಮವಹಿಸಿ ತಯಾರಿಸಿದ್ದರು. ಅವರ ರಾಜಭಕ್ತಿಯನ್ನೂ ಸಾರ್ಥಕ್ಯಗುಣವನ್ನೂ ಎಷ್ಟು ಹೊಗಳಿದರೂ ಸಾಲದು.

ಪುನಯಲ್ಲಿ ಕೂಡಿದ ಲೋಕಲ್ ಬೋರ್ಡುಗಳ ಪ್ರತಿನಿಧಿಗಳ ಸಭೆಯಲ್ಲಿ ಮಂಜೂರಾದ ನಿರ್ಣಯಗಳ ಸಾರಾಂಶ.

೧. ಮುನಿಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳ ಮೆಂಬರರೆಲ್ಲ ಪ್ರಜೆಗಳಿಂದ ಆರಿಸಲ್ಪಟ್ಟವರಾಗಬೇಕು.

೨. ಇವುಗಳ ಅಧ್ಯಕ್ಷರು ಬಿನ್‌ಸರಕಾರಿಯವರಾಗಿದ್ದು ಮೆಂಬರರಿಂದ ಚುನಾಯಿಸಲ್ಪಡಬೇಕು.

೩. ಲೋಕಲ್ ಬೋರ್ಡುಗಳ ವರ್ಷಾವಧಿ ಖರ್ಚಿನಲ್ಲಿ ನಿರ್ಣಯಿಸಿದ ಒಂದು ಭಾಗವನ್ನು ಅಲ್ಲಿ ಸ್ವಂತವಾದ [illegible] ಕರ್ಚನ್ನು ಸಮಿತಿ ಕೊಡಬೇಕು.

೪. ಎಲಿಮೆಂಟರಿ ವಿದ್ಯಾಭ್ಯಾಸದ ಖರ್ಚಿನಲ್ಲಿ ಮುಕ್ಕಾಲು ಅಂಶವನ್ನು ಸರಕಾರದವರು ವಹಿಸಿಕೊಳ್ಳಬೇಕು.

೫. ಈಗ ಜಿಲ್ಲಾ ಕಲೆಕ್ಟರನೆ ಅಥವಾ ಡಿಪ್ಯುಟಿ ಕಮಿಶನರಿಗೆ ಈ ಲೋಕಲ್ ಬೋರ್ಡುಗಳ ಆಡಳಿತದ ಮೇಲೆ ಇರುವ ಮೇಲ್ವಿಚಾರಣೆಯ ಅಧಿಕಾರವು ಲೋಕಲ್ ಗವರ್ನಮೆಂಟ್ ಬೋರ್ಡ ಎಂಬ ಹೊಸದಾಗಿ ಸ್ಥಾಪಿಸಬೇಕಾದ ಒಂದು ಸರಕಾರಿ ಕಮಿಟಿಯ ಮೇಲೆ ಹೊಂದಿರಬೇಕು.

೬. ಈ ಕಮಿಟಿಯಲ್ಲಿ ಗವರ್ನಮೆಂಟಿನ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರರಲ್ಲಿ ಲೋಕಲ್ ಗವರ್ನಮೆಂಟ್ ಇಲಾಖೆಯ ಮೇಲ್ವಿಚಾರ ನೋಡುವ ಮೆಂಬರರು ಅಧ್ಯಕ್ಷರಾಗಿಯೂ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಈ ಲೋಕಲ್ ಬೋರ್ಡುಗಳ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಮೆಂಬರರು ಈ ಕಮಿಟಿಯ ಮೆಂಬರರಾಗಿಯೂ ಇರಬೇಕು.

೭. ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳಿಗೆ ಬರುವ ಮೆಂಬರರು ಪ್ರಜಾಜನಗಳಿಂದ ಚುನಾಯಿಸಲ್ಪಡುವುದರಿಂದ ಮಹಮ್ಮದೀಯರ ಕಡೆಯಿಂದ ಕೆಲವು ಮೆಂಬರರನ್ನು ಚುನಾಯಿಸುವ ವಿಶೇಷಾಧಿಕಾರ ಎಡೆಕೊಡಬೇಕೆಂದೂ ಇತರ ಸಣ್ಣ ಜಾತಿ ಉಪಜಾತಿಗಳ ಪ್ರತಿನಿಧಿಗಳಾಗಿ ೩ ಮೆಂಬರರು ಚುನಾಯಿಸಲ್ಪಡುವುದಕ್ಕೆ ಏರ್ಪಾಡು ಇರಬೇಕೆಂದೂ ಠರಾವಾಯಿತು.

೮. ಲೋಕಲ್‌ಬೋರ್ಡ ಸಿಬಂಧಿಗೆ ಈಗಿನ ಸ್ಥಿತಿಯಲ್ಲಿ ಬಹಳ ಕಡಿಮೆ ಸಂಬಳ ಸಿಕ್ಕುವುದರಿಂದ ಯೋಗ್ಯರಾದವರು ಈ ಕೆಲಸಕ್ಕೆ ಬರುವುದಿಲ್ಲವೆಂತಲೂ ಈ ಸಿಬಂದಿಯು ಒಂದ ಇಲಾಖೆಯನ್ನೇ ಪ್ರತ್ಯೇಕಿಸಿ ಅವರಿಗೆ ಒಂದು ಕಡಗೆ ಬಡ್ತಿಯಿಂದ ವರ್ಗವಾಗುವ ಹಾಗೆ ಏರ್ಪಾಡು ಮಾಡಬೇಕೆಂತಲೂ ಠರಾವಾಯಿತು.

ಪತ್ರವ್ಯವಹಾರ.

ಅಯ್ಯಾ,

ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಅಗ್ಗಾಗ್ಗೆ ಮೊರಿಷಿಯಸ್ ಕಬ್ಬಿನ ಗುಣಗಳನ್ನು ಹೊಗಳಿ, ಅದು ಊರಿನ ಕಬ್ಬಿಗಿಂತ ಎಷ್ಟೋ ಪಾಲು ಉತ್ತಮವಾದ್ದು, ಅದಕ್ಕೆ ಊರಿನಲ್ಲಿರುವ ರೋಗಗಳೆಲ್ಲಾ ಗುಸ್ತುಬಿಟ್ಟುಗಳಿಗೆ ಒಡಿಸುವ ಪ್ರತಿಕಾರದ ಶಕ್ತಿಯು ಉಂಟೆಂತ ವಗೈರೆ ಬರೆಯುವದನ್ನು ಅಗ್ಗಾಗ್ಗೆ ನೋಡುತ್ತೇನೆ.

ಈ ಊರಿನಲ್ಲಿ ಕಬ್ಬು ಭತ್ತದ ಪ್ರಕಾರವೇ ಪ್ರಾಚೀನದಿಂದ ನಡೆದುಬರುವ ಬೆಳೆಯಾಗಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ರಸದಾಳಿಕಬ್ಬು, ಕರಿಕಬ್ಬು, ದಾಸಕಬ್ಬು, ಬಿಳಿಕಬ್ಬು, ಎಂಬ ಅನೇಕ ಜಾತಿ ಕಬ್ಬುಗಳು ವಾಡಿಕೆಯಲ್ಲಿದ್ದು ಅವುಗಳನ್ನು ತಮ್ಮ ತಮ್ಮ ಅನುಕೂಲತೆಗೆ ಸರಿಯಾಗಿ ಬೆಳಸುತ್ತಿದ್ದರು.

ಆದರೆ ಈಚೀಚೆಗೆ ರೈತನು ಕಬ್ಬಿನ ಪೈರಿಗೆ ಕೊಡಬೇಕಾದಷ್ಟು ಮನಸ್ಸನ್ನು ಯಾವ ಕಾರಣದಿಂದಲೋ ಕೊಡದೆ ಇರುವದರಿಂದ ಸದರಿ ಊರಿನ ಕಬ್ಬುಗಳಲ್ಲಿ ಸ್ವಭಾವಿಕವಾಗಿ ಇದ್ದಿದ್ದ ಒಳ್ಳೇ ಗುಣಗಳನ್ನು ಕಳೆದುಕೊಂಡಿರುವವು. ಪೂರ್ಣ ಕೆಟ್ಟುಹೋಗಲಿಕ್ಕೆ ಇರುವ ಈ ಕಬ್ಬುಗಳ ಸ್ಥಾನಕ್ಕೆ ಪರದೇಶಿ ಕಬ್ಬುಗಳನ್ನು ತಂದು ಕಬ್ಬಿನ ಕೃಷಿಯನ್ನು ಉರ್ಜಿತಪಡಿಸಬೇಕೆಂದಿರುವ ಮಹಾನುಭಾವರಿಗೆ ನನ್ನ ವಿನಯಪೂರ್ವಕವಾದ ವಂದನೆಯನ್ನು ಈ ಮೂಲಕ ಅರ್ಪಿಸುವೆನು. ಆದರೆ ಈ ಸಂದರ್ಭದಲ್ಲಿ ನನ್ನದೊಂದು ಅರಿಕೆ ಏನೆಂದರೆ:— ಕರಿಕಬ್ಬು ಎಂಬ ಹೆಸರಿನಿಂದ ಬೆಳಸಲ್ಪಡುವ ಊರುಕಬ್ಬನ್ನು ಜಾಗ್ರತೆಯಿಂದ ಬೆಳೆಸಿದ್ದಲ್ಲಿ ಅದು ಮೊರಿಷಿಯಸ್ ಕಬ್ಬಿನಷ್ಟೇ ಪ್ರತಿಫಲ ಕೊಡುವದರಲ್ಲಿ ಏನೂ ಸಂದೇಹವಿಲ್ಲ. ಮೊರಿಷಿಯಸ್ ಕಬ್ಬಿನಂತೆ ಇದರ ಸಿಪ್ಪೆಯು ಗಟ್ಟಿಯಾಗಿಯೂ ಒಳಗಿನ ದಿಂಡು ಮೃದುವಾಗಿಯೂ ಇದೆ. ಮೊರಿಷಿಯಸ್ ಕಬ್ಬು ಒಳ್ಳೇ ಜಾತಿ ಕಬ್ಬು ಎನ್ನುವದರಲ್ಲಿ ಏನೂ ಅನುಮಾನವಿಲ್ಲ. ಆದರೆ ಅದನ್ನು ಊರು ಕಬ್ಬಿನ ಪ್ರತಿಯಾಗಿ ಬೆಳಸಬೇಕಾದರೆ ಊರಿನ ಕಬ್ಬು ಅದಕ್ಕಿಂತ ನಿಕೃಷ್ಟವಾಗಿರಬೇಕಲ್ಲವೇ! ಇಲ್ಲಿ ಕೆಲವು ಕಡೆಗಳಲ್ಲಿ ಬೆಳಸಿರುವ ಕರೀಕಬ್ಬನ್ನು ಇಂಗ್ಲಿಷು ಬಲ್ಲ (ಕನ್ನಡ ಬಾರದ) ಧೊರೆಯು ಸ್ವಳಸಂದರ್ಶನೆಯಿಂದ ಪರೀಕ್ಷಿಸಿದ್ದಲ್ಲಿ "ಸಿಂಪ್ಲಿ ಎಕ್ಸಲೆಂಟ್" ಅನ್ನುವದರಲ್ಲಿ ಅನುಮಾನವಿಲ್ಲ.

ಆದ್ದರಿಂದ ಮೊರಿಷಿಯಸ್ ಕಬ್ಬನ್ನು ಈ ಊರಿನಲ್ಲಿ ಪ್ರಚುರಪಡಿಸಬೇಕೆಂದಿರುವವರು ಊರಿನಲ್ಲಿ ಕಬ್ಬಿನ ಬೆಳೆಯು ಕೆಟ್ಟುಹೋಗಿದೆಯೋ, ಮೊರಿಷಿಯಸ್ ಕಬ್ಬನ್ನು ಸ್ಥಾಪಿಸುವದು ಸದರಿ ಹಳ್ಳಿಯಲ್ಲಿ ಅಗತ್ಯವಾದದ್ದೋ ಎಂಬ ಅನೇಕ ಸಂಗತಿಗಳನ್ನು ಮನಸ್ಸಿಗೆ ತಂದುಕೊಂಡು ಅನಂತರ ಪರ್ಯಾಲೋಚನೆ ಮಾಡಬೇಕಾಗಿ ನನ್ನ ಅರಿಕೆ. ಕಬ್ಬಿನ ಪೈರಿಗೆ ನೀರು ಸಲ್ಲುವ ಜಾಗುಸ್ಥಳವು ಬಹು ಅಯೋಗ್ಯವಾದದ್ದು. ನೀರು ಬಿಡಲಿಕ್ಕೆ ಅನುಕೂಲ ಇರುವ ಎತ್ತರವಾದ ಒಳ್ಳೇ ಗದ್ದೆಯಲ್ಲಿ ರೋಗರಹಿತವಾದ ಬೀಜದ ತೊಡಗೆಗಳನ್ನು ನಟ್ಟು, ಕಾಲಕಾಲಕ್ಕೆ ಸರಿಯಾದ ಸಾಮಗ್ರಿಯನ್ನು ಮಾಡಿ, ಸರಿಯಾಗಿ ಬೆಳೆದ ಸಮಯದಲ್ಲಿ [illegible], ಒಳ್ಳೇ ರೀತಿಯಿಂದ ಬೆಲ್ಲ ಮಾಡುವದೇ ಕಬ್ಬಿನ ಬೆಳೆಯಲ್ಲಿ ಇರುವ ಗುಟ್ಟು.

Belanji } B. Shinappa Tolar
4–8–1917 }

ಸ್ವರ್ಗದ ಬಾಗಿಲಲ್ಲಿ ನರಕದನಾಯಿ.

ಮೇಲೆ ತೋರುವ ಗಾದೆಯು ವಾಚಕ ಮಹಾಶಯರೆಲ್ಲರೂ ತಿಳಿದಿರಬಹುದು. ಆದರೆ, ಆ ಉಕ್ತಿಯ ಪರಿಣಾಮದ ಕಟುವಾದ ಅನುಭವವು ವಾಚಕರೆಲ್ಲರಿಗೂ ಇರದು. ಬ್ಯಾಬಲದಲ್ಲಿ ಯೆಹೋವನು ತನ್ನ ಇಚ್ಛಾಮಾತ್ರದಿಂದ ಪ್ರಪಂಚವನ್ನೆಲ್ಲಾ ನಿರ್ಮಿಸಿದನು. ಆತನು ನಿರ್ಮಿಸಿದ ಆ ಸ್ವರ್ಗಪ್ರಾಯವಾದ ಪ್ರಪಂಚದಲ್ಲಿ ಸಹ ಸೈತಾನನೆಂಬ ನರಕದ ನಾಯಿಯು ಇದ್ದೇ ಇದ್ದಿತು. ಇಂಥಾ ನರಕದ ನಾಯಿಗಳ ಅಸ್ತಿತ್ವವೇನೂ ಆಶ್ಚರ್ಯವಲ್ಲ. ಆದರೆ ಅಂಥಾ ನರಕದ ನಾಯಿಗಳು ಬಾಡಿ ಮೊಕುಗಳಿಂದ ಉಂಟಾಗುವ ಸಂಕಷ್ಟವು ಮಾತ್ರ ವರ್ಣಿಸತಕ್ಕಂಥಾದ್ದಲ್ಲ. ಇಂಥಾ ನರಕದ ನಾಯಿಗಳು ತಾವು ಊರೊಳಗಿನ ಶಿಷ್ಟರೆಂದೂ ನಿಷ್ಠಾವಂತರೆಂದೂ ಅಧಿಕಾರಿಗಳಿಗೆ ಸಮಾಧಾನಪಡಿಸುವದಕ್ಕೂ, ಅಧಿಕಾರಸ್ಥರ ಸ್ನೇಹಾಚಾರವುಳ್ಳವರೆಂದು ಜನರಿಗೆ ತೋರ್ಪಡಿಸುವದಕ್ಕೂ, ಯಾವಾಗಲೂ ಅಧಿಕಾರಸ್ಥರ ಆಗಮನವನ್ನು ಅನ್ವೇಷಿಸಿಕೊಂಡಿರುವರು. ಅಷ್ಟೇ ಅಲ್ಲ ಹತ್ತುಹರದಾರಿ ದೂರ ಇರುವ ತನ್ನ ಆಪ್ತ ಸಂಬಂಧಿಕರನ್ನು ಹತ್ತು ಅಂಗುಲಕ್ಕಿಂತಲೂ ಹತ್ತರಕ್ಕೆ ಸೇರದು ತಾನು ಇಂಥವರಿಗೆ ಹೀಗಾಗಬೇಕು ಅಂಥವರಿಗೆ ಹಾಗಾಗಬೇಕು ಎಂದು ತನ್ನ ಗೌರವವನ್ನು ತಾನೇ ಕೊಚ್ಚಿಕೊಂಡು ಆ ಉದ್ಯೋಗಸ್ಥರಿಗೆ ಆಗ್ಗಾಗ್ಗೆ ಕಂಡುಮಾತಾಡಿ ತಾನು ಊರಿನ ಶಿಷ್ಟನೆಂದು ತೋರಿಸಲು ಪ್ರಯತ್ನಿಸುವರು. ಆದರೆ, ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು, ಎಂಬ ಲೋಕೋಕ್ತಿಯಂತೆ ವಿವೇಕವುಳ್ಳವರು ಇಂಥವರ ಇಂದ್ರಜಾಲದಲ್ಲಿ ಸಿಲುಕದಿದ್ದರೂ ಸರಳಸ್ವಭಾವದ ಹಲವು ಉದ್ಯೋಗಸ್ಥರು ಈ ಇಂದ್ರಜಾಲಿಗಳ ಬಾಡಿಜಾಲದಲ್ಲಿ ಸಿಲುಕಿಬೀಳುವ ಸಂದರ್ಭಗಳು ತುಂಬಾ ಇವೆ. ಈ ಕಪಟ ಶಿಷ್ಟರ ಕೃಷ್ಣಕಾರಸ್ಥಾನದ ಗರ್ಭದಲ್ಲಿ ಸ್ವಾರ್ಥ ಸಾಧನೆಯೇ ಅಡಗಿರುತ್ತದೆಂಬುದ. ಈ ಮಹಾತ್ಮರಿಗೆ ಹೇಗೆ ತಿಳಿದೀತು? ಈ ಪ್ರಕಾರ ಈ ನರಕದ ನಾಯಿಗಳ ಕಾರಸ್ಥಾನವನ್ನೆಲ್ಲಾ ಆಲೋಚಿಸಿದರೆ ವೈಯಿಲ್ಲಾ ರೋಮಾಂಚನವಾಗುವುದು. ಮೇಲಿನ ವಿಧಾನದಿಂದ ಉದ್ಯೋಗಸ್ಥರನ್ನು ಕಂಡು ಮಾತಾಡುವವರೆಲ್ಲರೂ ಮೇಲಿನ ಸ್ವಭಾವದವರೇ ಎಂದು ವಾಚಕರು ತಪ್ಪುಗ್ರಹಿಕೆಯನ್ನು ಪಡಬಾರದು. ಶಿಷ್ಟಾಚಾರವನ್ನೂ ನಾಗರೀಕರೆಂಬ ಕರ್ತವ್ಯವನ್ನೂ ಸ್ಥಾಪಿಸಿ ಅಧಿಕಾರಸ್ಥರನ್ನು ಸ್ವಾಗತೀಕರಿಸುವವರೂ ಉಪಚರಿಸುವವರೂ ಹೇರಳವಿದ್ದಾರೆ. ನಮ್ಮ ಸುದೈವದಿಂದ ಮೇಲೆ ಪ್ರಸ್ತಾಪಿಸಿದ ನರಕದ ನಾಯಿಗಳು ಊರಲ್ಲಿ ಧಾರಾಳವಾಗಿಲ್ಲವೆಂದೇ ಹೇಳಬೇಕು. ಆದರೂ ದೊಡ್ಡದಾದ ಮೇಲುಪ್ಪರಿಗೆಯ ಮನೆಯನ್ನು ಸುಟ್ಟು ಬೂದಿಮಾಡಲಿಕ್ಕೆ ಒಂದೆರಡು ಬೆಂಕಿಕಿಡಿಗಳು ಸಾಕಾಗುವಂತೆ ನಿರಪರಾಧಿಗಳನ್ನು ಸಂಕಷ್ಟಕ್ಕೆ ಗುರಿಪಡಿಸುವದಕ್ಕೆ ಈ ಒಂದೆರಡು ಬೆಂಕಿಕಿಡಿಗಳೇ ಸಾಕಾಗುತ್ತವೆಂದು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಈ ನರಕದ ನಾಯಿಗಳಿಗೆ ತಮ್ಮ ವಾರ್ಷಿಕ ಉತ್ಪನ್ನವು ಮಿತವ್ಯಯದಿಂದ ವೆಚ್ಚವಾದಿದರೂ ಸಾಕಾಗದ್ದರಿಂದ ಮೇಲಿನ ಕಾರಸ್ಥಾನವನ್ನು ರಚಿಸಿ ತಾನು ಉದ್ಯೋಗಸ್ಥರ ಸ್ನೇಹಾಚಾರವುಳ್ಳವನೆಂದು ನಟಿಸಿ, ತಾನು ಇವರ ಕೂಡೆ ಮಾತಾಡಿ ಹೀಗೆ ಮಾಡುತ್ತೇನೆ, ಅವರ ಕೂಡೆ ಮಾತಾಡಿ ಹಾಗೆ ಮಾಡುತ್ತೇನೆ ಎಂದು ಕೆಲವರನ್ನು ಬೆದರಿಸಿ ಕೆಲವರನ್ನು ವಂಚಿಸಿ ತಮ್ಮ ಸ್ವಾರ್ಥಸಾಧನೆಯನ್ನು ನಡೆಸುವರು. ಯಾರಾದರೂ ಇವರ ಈ ವಿಧದ ಸ್ವಾರ್ಥಪಂಜರದಲ್ಲಿ ಸಿಲುಕದೆ ಜಾರಿಹೋದರೆ ಅಂಥವರ ಮೇಲೆ ದ್ವೇಷಕಟ್ಟಿ ಅವರ ಮೇಲೆ ಅಲ್ಲದಸಲ್ಲದ ಬಾಡಿಗಳ ಸಂಧಾನವನ್ನು ಹೂಡುವರು. ಅದಲ್ಲದೆ ತಾನು ಹೆಚ್ಚಾಗಿ ಚಾಡಿ ಹೇಳಿದರೆ ತನ್ನ ಹಗೆಬುದ್ಧಿವನ್ನೆ ಒರೆ ಕಲ್ಲಿಗೆ ತಾಗಿಸಿ ಬಿಟ್ಟಾರೆಂದು ಭಾವಿಸಿ, ತಮ್ಮ ಕಾರಸ್ಥಾನವನ್ನು ತಳ್ಳಿ ಕಾಗದವನ್ನು ಹಾಕಿ ಪೂರೈಸಿಕೊಳ್ಳುವರು. ಅಧಿಕಾರಸ್ಥರಿಗೆ ಅಂಥಾ ತಳ್ಳಿ ಕಾಗದಗಳು ಮಟ್ಟಲು, ಅವರ ಮಾಹಿತಿಯು ಊರಿನ ಶಿಷ್ಟರೆಂದು ಕಾಣಿಸಿಕೊಳ್ಳುವ ಈ ರಾವಣಸನ್ಯಾಸಿಗಳ ಕೂಡೆ ಪ್ರಸ್ತಾಪಿಸಿ ತಿಳಕೊಳ್ಳಬೇಕಾದ್ದರಿಂದ, ಆ ಸಮಯವನ್ನು ಸಾಧಿಸಿ ಈ ಕಪಟ ಶಿಷ್ಟರು ತನ್ನ ಹೊಟ್ಟೆಯಲ್ಲಿ ಬಚ್ಚಿಟ್ಟ ಆ ಕಾರಸ್ಥಾನದ ವಿಷವನ್ನು ಬಿಸ್ಸಿ ದೊಮ್ಮಿಯೇ ಕಾರಿಬಿಡುವರು. ಇದೀಗ ಈ ಇಂದ್ರಜಾಲಿಗಳ ಬಾಡಿಜಾಲಗಳಲ್ಲಿ ಸಿಕ್ಕಿಬೀಳುವ ಸಂದರ್ಭಗಳು! ಹಾ! ದೈವವೇ ಈ ನರಕದ ನಾಯಿಗಳ ಶಾಸನಕ್ಕೆ ನೀನು ಏನಾದರೂ ಉಪಾಯವನ್ನು ಕಲ್ಪಿಸಲಿಲ್ಲವೆ?

ಹಿತಕಾಂಕ್ಷಿ.

ಜೀನಸು ಧಾರಣೆ.

(ಖಂ)

ಮಸ್ಕತಿ ಅಕ್ಕಿ	6–4–0	ರಿಂದ	6–12–0
ಗುಡ್ಡು ಸುಗ್ಗಿ	5–12–0	,,	6–4–0
ಬಾತಿ	5–10–0	,,	5–14–0
ಅವ್ವಲ್ ಬೆಳ್ತಿಗೆ	6–4–0	,,	6–8–0
ಗುಡು ಬೆಳ್ತಿಗೆ	5–13–0	,,	6–0–0
ರಂಗೂನು ಬೆಳ್ತಿಗೆ ಗೋಣಿ ೧ರ			10–4–0
ಗೋಧಿ ಗೋಣಿ ೧ರ	20–0–0	,,	20–8–0
ಹುರುಳಿ ಗೋಣಿ ೧ರ	6–4–0	,,	7–8–0
ಕಡಲೆ ಗೋಣಿ ೧ರ ಬೊಂಬ್ಯೆ	10–10–0	,,	10–8–0
ತೊಗರಿ ಗೋಣಿ ೧ರ			10–8–0
ತೊಗರಿಬೇಳೆ ಗೋಣಿ೧ರ 11–0–0	12–8–0	,,	16–8–0
ಉದ್ದು ಗೋಣಿ ೧ರ	11–8–0	,,	11–12–0
[illegible] ಖಂಡಿ ೧ರ		,,	38–12–0
ಉಪ್ಪು ಗೋಣಿ ೧ರ		,,	5–12–0
ಕೊಬ್ಬರಿ ಖಂಡಿ ೧ರ	70–0–0	,,	76–0–0
ಕೊಬ್ಬರಿಹಿಂಡಿ ಖಂಡಿ ೧ರ			24–0–0
ಎಳ್ಳಿಂಡಿ ಖಂಡಿ ೧ರ ಬೊಂಬ್ಯೆ	28–12–0	,,	35–0–0
ಕೊಬ್ಬರಿ ಎಣ್ಣೆ ಮುಡಿ ೧ರ	5–8–0	,,	5–12–0
ಎಳ್ಳೆಣ್ಣೆ ಮುಡಿ ೧ರ (ಘಟ್ಟದ)		,,	4–10–0
[illegible] ಎಣ್ಣೆ [illegible] ೧ರ	6–12–0	,,	7–9–0
ಕೆರೋಸಿನ್ ಸೆಕ್ಕರೆ ಮುಡಿ ೧ರ	5–6–0	,,	5–6–0
[illegible] ಖಂಡಿ ೧ರ	150–0–0	,,	165–0–0
[illegible] ಖಂಡಿ೧ರ	72–0–0	,,	78–0–0
[illegible] ಮುಡಿ ೧ರ	1–12–0	,,	1–14–0
[illegible] ಖಂಡಿ ೧ರ	105–0–0	,,	110–0–0
[illegible] ಮುಡಿ ೧ರ	31–0–0	,,	34–8–0
[illegible] ಮುಡಿ ೧ರ		,,	34–0–0
[illegible] ೧ರ	23–8–0	,,	25–4–0
[illegible] ಮುಡಿ ೧ರ		,,	5–2–0
[illegible]		,,	235–0–0

K. B. RELE & Cos.,—BOMBAY

Estd. 1888.　　ಕೆ. ಬಿ. ರೇಳೆ ಕಂಪೆನಿಕೃತ　　ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಮು.

ಎಷ್ಟೋ ಹಳೆ, ಕರೆ ಮತ್ತು ಹಟವಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳೆ, ಕ್ಷಿಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೩ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ನಿಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲಾ.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯುಸಂದು ನೋವೋಣ, ಕೈಕಾಲು ಒಡಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಲೆ ಕೈಕಾಲುಗಳುರಿಯೋಣ, ಮೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೊಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂದೇಹವಿಲ್ಲದ ಧೂಪ. ಇದಕ್ಕಿಂತಲೂ ಬೇರೆ ಹಿತವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಎಣ್ಣೆಯನ್ನು ತೀರ ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ಷನಿಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಒಂದಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ನಾರ್ಥರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತು ವಾಸಿಗೂ ವೈದ್ಯರ ಸಮಯವನ್ನು ಕಾದು ನೋರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—9—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.



ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ... ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಲ್. ಎಂ. ಆರ್ಗ್ಯುಮೆಂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಕೊಂಡ್ಲಿ ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವದರಲ್ಲಿ ... ಅಜೀರ್ಣ, ಮಲಬದ್ಧತೆ, ಹಳ್ಳೆಯ ನೋವು, ಹೊಟ್ಟೆನೋವು, ... ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತದೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ ಸ್ವದೇಶಿ ವೈದ್ಯರು ಮುಖ್ಯವಾಗಿ ... ಶಿಫಾರಸ್ ಮಾಡುತ್ತೇನೆ.

ಮ॥ ರಾ॥ ಪಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ... ಅನೇಕ ... ಈ ಗುಳಿಗೆಗಳು ... ಎಂಬುದಾಗಿ ... ನಾನು ... ಮಾಡುತ್ತಿರುತ್ತೇನೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ... ವೈದ್ಯಶಾಲಾ, ಮೈಸೂರು.

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ ಕೆಲವು ಔಷಧಗಳು.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗವು ಹತ್ತಿಕೊಳ್ಳದು.

ಕ್ರಯ 50 ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-6-0. ವಿ. ಪಿ. ಬೇರೆ.

ಇಕ್ಸಿವ್ಸ್ ಡ್ರೊಪ್ಸ್ ಸೇವನೆಯಿಂದ ಹಲವು ಬಗೆಯ ರೋಗಿಗಳು ಚೇತರಿಸಿಕೊಂಡಿದ್ದಾರೆಂತ, ಸಿದ್ಧಾಪುರದ ಮ॥ ತ್ರಿಸೇರರು ಬರೆದಿರುತ್ತಾರೆ.

ಎಂಟಿಸ್ನೇಕ್ ಬೈಟ್:— ಈ ಔಷಧಿಯು ನಾಗರಹಾವು, ಕೊಳಕುಹಾವು ಚೇಳು ಮೊದಲಾದ ವಿಷ ಜಂತುಗಳು ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡಿದವರು ಒಂದೇ ತಾಸಿನಲ್ಲಿ, ಚೇಳು ಕಡಿದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ. 1 ವಿ. ಪಿ. ಬೇರೆ.

ಟೂರಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಕುರುಹುಗಳು ಕಂಡರೆ ನಿಮಗೆ ಯಾ ತಿಳಿಯದ ರೀತಿಯಲ್ಲಿ ಧಾತು ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೂರಕಬ್ ಸೇವಿಸಿರಿ.

ಕ್ರಯ ಸೀಸೆ 1ಕ್ಕೆ ರೂ. 1—8—0. ವಿ. ಪಿ. ಬೇರೆ

ಇಕ್ಸಿವ್ಸ್ ಡ್ರೊಪ್ಸ್:— ಇದು ನರಸಂಬಂಧವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳನ್ನು ತಪ್ಪದೆ ಗುಣ ಮಾಡುತ್ತದೆ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0—6—0. ವಿ. ಪಿ. ಬೇರೆ

ಶ್ರೀ ಇಕ್ಸಿವ್ಸ್ ಬಾಮ್, ಕಾಜಾ ಯುಕಲಿಪ್ಟಸ್ ತೈಲ. ಮೂಲವ್ಯಾಧಿ, ಅಂಧ್ಯವಾಯ, ಅಂಡವೃದ್ಧಿ ಮೊದಲಾದ ಹಲವು ರೋಗಗಳಿಗೆ ಬೇಕಾದ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಸಿವ್ಸ್ ಏಜನ್ಸಿ, ಕಂಕನಾಡಿ ಪೋಸ್ಟ್, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್ ಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್ ಮಿಸ್ರಿ ಮುರಬ್ಬಾ"ವಿನ ಸೇವನೆ ಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್ ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುತವರಿಗೆ—

1,000

ರೂಪಾಯಿಗಳು ಬಹುಮಾನಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಲೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದುಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿ. ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರಾಕ್ಟ್ ಆಕ್ಟ್, ಸ್ವತ್ತುಗಳ ಸರಬರಾಜ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟಾಂಪ, ಕೋರ್ಟಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ... ಆಕ್ಟ್, ... ಆಕ್ಟ್, ರೆವಿನ್ಯು ಕೋಡ್, ... ಕೋಡ್, ... ಸ್ಮಾಲ್ ಕಾಸ್ ಕೋರ್ಟ್ ಕೋಡ್, ... ಮನೆಗಳನ್ನು ... ಕೊಳ್ಳುವ ಕೋಡ್, ... ಸಂಗ್ರಹಗಳು, ಅನೇಕ ... ನಮೂನೆಗಳು ಮತ್ತು ... 40 ನಮೂನೆಗಳು ಇದರಲ್ಲಿದೆ. ಇದು ಪ್ರತಿಯೊಬ್ಬನ ಮನೆಯಲ್ಲಿ ಇರತಕ್ಕದ್ದು. ...

... 1—8—0. ... 1—12—0.

ಯು. ಯಸ್. ...,
...

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕ್ಕೆ [illegible] ಸ್ತ್ರೀಯರಿಗೆ ಉಂಟಾ[illegible] ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನು [illegible] ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯು ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀ[illegible] ಮನನ[illegible] ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ [illegible] ಅದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು [illegible]!

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರಿ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೋ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲದಲ್ಲಿಯೂ, ಮಲಸಂಬಂಧವನ್ನು ನರಗಳ ಬಲಹೀನತೆಯನ್ನು ಹೋಗಲಾಡಿಸುತ್ತವೆ. ವಾರ್ಧಿಕ್ಯ ಇವುಗಳನ್ನು ನಿವಾರಣೆ ಮಾಡುವದರಲ್ಲಿ ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡಿ ಬುದ್ಧಿಗೆ ತೀಕ್ಷ್ಣತ್ವವನ್ನುಂಟುಮಾಡುವದು. 40 ಮಾತ್ರೆಗಳ ಡಬ್ಬಿ ಕ್ರಯ: ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯಸಲಹೆಯು ಮುಫತ್ತಾಗಿ ದೊರೆಯುವದು.

144 ಪುಟಗಳ ವೈದ್ಯವಿದ್ಯಾ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೨೦ ಜೀನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು



ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೨ ಸಾಮಾನುಗಳು ಇರುವ ಸೆಟ್ಟಿಗೆ ೧—೮—೦. ಮಧ್ಯಮ ತರದ ಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮ ತರದ ೧ಕ್ಕೆ ರೂ. ೪—೦—೦.

ಕಾಬುಲಿ ಹಿಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದ್ವಿಯಂ ರೂಪ್ಯಾ ೧ಕ್ಕೆ ೮ ತೊಲೆ, ತೃಯಂ ರೂಪ್ಯಾ ಒಂದಕ್ಕೆ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೨ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ದಾನವಾಗಿ ಕಳುಹಿಸಲಾದೀತು, ಪೋಸ್ಟು ಕಾರ್ಡ ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪೆನಿ,
ಚೌಖಂಬಾ, ಕಾಶಿ.

SIROMANI NARAYANA CHARYA & CO.
Chaukhambaji,
Benares City.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!

ಕ್ರಯ ಆಣೆ 5 ಮತ್ತು ಆಣೆ 9.

ಸರ್ವಊರುಗಳಲ್ಲಿ ಏಜಂಟರುಗಳು ಬೇಕಾಗಿರುತ್ತದೆ. ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ [illegible] ಕನ್ನಡಾಕ್ಷರದ ಸಂಧ್ಯಾದಿ ನಿತ್ಯ ಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟ್ ಖರ್ಚು ಬೇರೆ.

M. S. Rao Co., ಮ್ಯಾನೇಜರ್,
Avenue Road, ವೇದಪಾಠಶಾಲಾ,
BANGALORE CITY. ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮಿ। ಲಲ್ಲುಭಾಯಿ, ಸಾಮಲ್ ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಫ್ರಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:—ಮಿ। ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೊಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೊಲಿಸಿ ಪ್ರಕಾರ ಬೇಕಾದ ಇತರ ದಾಖಲಾತನ್ನು ಸಂಗ್ರಹಿಸಿ ಕೊಟ್ಟೊಡನೆ ತಕ್ಷ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೊಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿರುವದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ರಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯಾರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಒಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಕಣ್ಮನಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:— ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
ಬೆಂಗಳೂರು ಸಿಟಿ.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.

ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೂವ್‌ಮೆಂಟ್ ಮಾಡಿರುವುದು. ಮತ್ತು ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷವಾದರೂ ವ್ಯತ್ಯಾಸ ಮಾಡುವುದಿಲ್ಲ. ನಮ್ಮ ಗಡಿಯಾರವನ್ನು ಘಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಶಾಮಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರಮುಖಿ 1, ಗಜ್ಜೆ ಅಡ್ಡಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈವಸ್ತ್ರ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಜುಮಲಾ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3. ಇರುಳಪ್ಪನ ಬೀದಿ, ಮದರಾಸ್.

S. NAGAPPA NAYAK,
K. APPAYA SHENOY & CO.
Cloth Merchants, Car Street, Mangalore.

ಸುಜೀರ ನಾಗಪ್ಪ ನಾಯಕ್,
ಕೆ. ಅಪ್ಪಯ್ಯ ಶ್ಯಾನಭಾಗ ಮತ್ತು ಕಂಪೆನಿ.
ರಥಬೀದಿ, ಮಂಗಳೂರು.

ಇವರು ಅಜೆಜುದ್ದೀನ್ ರಸ್ತೆಯು ರಥಬೀದಿಗೆ ಕೂಡುವಲ್ಲಿ ಸ್ಥಾಪಿಸಿದ ತಮ್ಮ ಹೊಸ ಜವಳಿ ಮಳಿಗೆಯಲ್ಲಿ ಕೊಯಂಬತ್ತೂರು, ಸೇಲಂ, ಮಧುರಾ, ಕೊನ್ನಾಡು, ಬೆಂಗಳೂರು, ಹುಬ್ಬಳ್ಳಿ, ಗದಗ, ಪೂನಾ, ಮುಂಬಯಿ, ಬನಾರಿಸ್, ಸೂರತ್ ಮೊದಲಾದ ಪ್ರಖ್ಯಾತಿಯ ದೇಶಗಳಲ್ಲಿ ತಯಾರಿಸಲ್ಪಟ್ಟ ಜರಿಕಂಬಿ ಶೀರೆ, ಪಟ್ಟೆ ಪೀತಾಂಬರ, ಅಮ್ಮದಾಬಾದ ಧೋತಿ, ರುಮಾಲು, ಟೊಪ್ಪಿ, ವಿವಿಧ ತರದ ಅಂಗಿಬಟ್ಟೆ, ವಿಲಾಯತಿ ಉಡಿಗೆತೊಡಿಗೆ ವಸ್ತ್ರಗಳೂ, ಸುಗಂಧ ದ್ರವ್ಯಗಳೂ, ಕೊಡೆ ವಗೈರೆ ಸಾಮಾನುಗಳೂ ಮಾರಾಟಕ್ಕೆ ಇಟ್ಟಿರುವರು. ದರಗಳು ಸುಲಭ. ಜವಳಿ ವ್ಯಾಪಾರಸ್ಥರಿಗೆ ಕಮ್ಮಿ ಮುನಾಫೆಯಲ್ಲಿ ಮಹಾಲು ದೊರಕುವದು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಿಗಾಗಿ ಬರುವ ಕನ್ನಡ, ತುಳು, ಮರಾಠಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರಂ,
ಪೋಸ್ಟ್ ಆಫೀಸು ಎದುರು,
ರಾಮೇಶ್ವರಮ್.

ಆರ್. ಮಾರ್ಟಿನ್ಸರ ಮಾತ್ರೆಗಳು

ನಂಬ್ರ 2.

ಧನಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, [illegible], ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅಲ್ಲದೆ ಮೂತ್ರರೋಗ, ಭ್ರಾಂತಿ, ಗುಂಡಿಗೆ ಬಡಿಯೋಣ, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮಿದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ. ೧—೧೦—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇಷ್ಟೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಣಿಯೂ ಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಿರಿಯುಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೨—೦.

ಆರ್. ಮಾರ್ಟಿನ್ಸರ ಗ್ಲಿಟೋಡಾಯಿನ್.

ಗಂಡಸರ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪತ್ತೆನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೧—೧೪—೦.

ವಿಳಾಸ:—
ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರಿಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay

ಹೊಸ ಪುಸ್ತಕ! 'ಹಿಂದೂ ಲಾ' ಹೊಸ ಪುಸ್ತಕ!

ಇದುವರಿವಿಗೆ ನಿರೀಕ್ಷಿಸಿಕೊಂಡಿದ್ದ ಈ ಪುಸ್ತಕವು ಇಂಗ್ಲೀಷಿನಿಂದ ತರ್ಜುಮೆ ಮಾಡಲ್ಪಟ್ಟು ಸಿದ್ಧವಾಗಿದೆ—ಇದರಲ್ಲಿ ಅಣ್ಣತಮ್ಮಂದಿರ ದಾಯಭಾಗ ಪಾಲು ಪಾರಿಖತ್ತು, ವಿಲ್, ಮರಣಶಾಸನ, ಜೀವನಾಂಶದ ಹಕ್ಕು, ವಾರಸುಹಕ್ಕು, ಮತ್ತು ಸಿವಿಲ್ ಕ್ರಿಮಿನಲ್ ರೆವಿನ್ಯೂ ದಾವಾ ಅರ್ಜಿಗಳು, ಕ್ರಯಭೋಗ್ಯ ಆಧಾರ ಅನ್ಯಾದಿಪತ್ರಗಳು, ಗುರುಹಿರಿಯರು ಮುಂತಾದವರಿಗೆ ಕಾಗದ ಬರೆಯುವ ಪಕ್ಕಿತೆಗಳು ವಿಶದವಾಗಿ ಅಚ್ಚುಮಾಡಲ್ಪಟ್ಟಿದೆ. ಕ್ರಯ ರೂ. ೧—೮—೦.

ವಿಳಾಸ:—ಬಿ. ನರಸಿಂಗರಾವ್, ಎಡಿಟರ್,
ಲಾ ಗಜೆಟ್, ಬೆಂಗಳೂರು ಸಿಟಿ.

A Kannada Popular Science Monthly.

"ವಿಜ್ಞಾನ" ವೆಂಬ ಕನ್ನಡ ಮಾಸಪತ್ರಿಕೆ.

ಇದರಲ್ಲಿ ಜನರಿಗೆ ಉಪಯುಕ್ತವಾದ ಆಧುನಿಕ ವಿಜ್ಞಾನದ ವಿಷಯಗಳು, ಸಾಮಾನ್ಯ ಜನರಿಗೆ ತಿಳಿಯುವಂತೆ, ಸುಲಭವಾದ ಕನ್ನಡದಲ್ಲಿ ಸ್ವಾರಸ್ಯವಾಗಿ, ಅನೇಕ ಚಿತ್ರಗಳೊಡನೆ ವಿವರಿಸಲ್ಪಡುವುವು. ಸಂಚಿಕೆಗೆ ೩೨ ಪುಟಗಳು. ಈ ವರುಷದ ಚೈತ್ರಮಾಸ ಮೊದಲ್ಗೊಂಡು ಹನ್ನೆರಡು ಸಂಚಿಕೆಗಳಿಗೆ, ಚಂದಾ ಮೊಬಲಗು, ಮೂರು ರೂಪಾಯಿಗಳು.

ಅಪೇಕ್ಷಿಸಿದಲ್ಲಿ ಮಾದರಿ ಪುಟಗಳನ್ನು ಉಚಿತವಾಗಿ ಕಳುಹಿಸುವೆವು.

ಬಿ. ವೆಂಕಟನಾರಣಪ್ಪ, ಎಂ. ಎ.,
ಮ್ಯಾನೇಜರ್, "ವಿಜ್ಞಾನ"
ಬಸವನಗುಡಿ, ಬೆಂಗಳೂರು ಸಿಟಿ.

ಮೈಸೂರು ದಸರಾ ಪ್ರದರ್ಶನದಲ್ಲಿ ಭಂಗಾರದ ಮೆಡಲ್ ಪಡೆದಿರುವ

ಸಾಂಖ್ಯತೀರ್ಥ ಚಿಕಿತ್ಸಾಲಯ.

ಚಿಕ್ಕಮಗಳೂರು.

೧. ಚವನಪ್ರಾಶ ಲೇಹ್ಯ:—ಕಳೆಕೆಮ್ಮು, ಕ್ಷಯ ಮತ್ತು ಉಬ್ಬಸ ರೋಗಗಳನ್ನು ಪರಿಹರಿಸುವದು. ದೇಹಕಾಂತಿಯನ್ನೂ, ಆರೋಗ್ಯವನ್ನೂ, ದೀರ್ಘದಾಯುಸ್ಸನ್ನೂ, ಇಂದ್ರಿಯಬಲವನ್ನೂ ಜೀರ್ಣಶಕ್ತಿಯನ್ನೂ ಕೊಡುತ್ತದೆ. ಅಶ್ವಿನೀ ದೇವತೆಗಳಿಂದ ಬಹುಮಾನವಾಗಿ ಕೊಡಲ್ಪಟ್ಟ ಈ ರಸಾಯನ ಸೇವನೆಯಿಂದ ವೃದ್ಧಾಪ್ಯದಿಂದ ಗಳಿತವಾದ ಚವನಾಚಾರ್ಯರು ನವಯೌವನವನ್ನು ಹೊಂದಿದರೆಂದು ದೇವೀ ಭಾಗವತದಲ್ಲಿ ಹೇಳಲ್ಪಟ್ಟಿದೆ. ಕ್ರಯ ಡಬ್ಬಿಗೆ ರೂ. 3—0—0.

೨. ಬಾಣಂತಿ ಮಾತ್ರೆ:—ಪ್ರಸೂತವಾದ ಬಾಣಂತಿಯರು 30 ದಿನಗಳವರೆಗೆ ಉಪಯೋಗಿಸುವದರಿಂದ ಮಾಗಿ, ಲೇಹ್ಯ ಇವುಗಳ ಅವಶ್ಯಕತೆಯೇ ಇರುವದಿಲ್ಲ. ಇದು ಅನುಭವ ಪ್ರಖ್ಯಾತವಾದದ್ದು. ಕ್ರಯ ರೂ. 6—0—0.

ಇಲ್ಲಿ ಅನೇಕ ತರಹ ಮಾತ್ರೆಗಳು, ಲೇಹ್ಯಗಳು, ತೈಲಗಳು, ಅರಿಷ್ಟಗಳು ಸಿಕ್ಕುತ್ತವೆ. ವಾತ್ಸರ್ಯ ವಾಯುವಿನಿಂದ ಪೀಡಿತರಾದವರೂ, ರೋಗಕೊಪ್ಪ ಇರುವವರೂ, ಉದರದಿಂದ ಪೀಡಿತರಾದವರೂ ಸುಲಭವಾಗಿ ಚಿಕಿತ್ಸೆ ಹೊಂದಬಹುದು.

ಕವಿರಾಜ್ ರಾಮಚಂದ್ರ ವಾಸುದೇವರಾವ್,
ಎಂ. ಎ. ಎಸ್. ಎಲ್. ಸಿ. ಪಿ. ಎಸ್. ವೈದ್ಯಶೇಖರ,
ಮ್ಯುನಿಸಿಪಲ್ ಕೌನ್ಸಿಲರ್ ಮತ್ತು ರೆಪ್ರಸೆಂಟೆಟಿವ್ ಮೆಂಬರು.

ಇದಿಗೋ
ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ವ ಚೇಳುಗಳ ವಿಷಧ್ವಂಸಿನಿ.

ಚೇಳು ಕೊಡದ ಸ್ಥಳದಲ್ಲಿ ಸರ್ವ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಚಳಕೂ ಮಾಯವಾಗುವವು.

ಇದಿಗೋ
ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಸೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪನಿ,
ಸಾಹುಕಾರಪೇಟೆ, ಮದರಾಸು.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ½ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನ್ 1ರ 0-12-0. ವಿ. ಪಿ. ಖರ್ಚು 0—4—0 ಬೇರೆ.

ತಯಾರಕರು:—
ಎಚ್. ಆರ್. ಮೋದಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.

H. R. MODY & Co.,
102 [illegible] Street, BOMBAY.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇದು ಹೆಚ್ಚು ಕಾಲದಿಂದ ಉಪಯೋಗಿಸಿ ಶಿಫಾರಸು ಹೊಂದಿದ್ದಾಗಿದೆ. ದರವನ್ನು ಇದರಡಿ ಸೂಚಿಸಿರುವರು.

	ಬಿಲ್ಲೆ 1ರ	ಡಜನ್ 1ರ
1. ಕಸ್ತೂರಿ ಸಾಬೂನು 3 ಬಿಲ್ಲೆಗಳಿರುವ ಪೆಟ್ಟಿಗೆ	0—8—0	5— 0—0
2. ಮನೋಹರ ,, ,, ,,	0—5—0	3— 8—0
ಅತ್ತರ ಸಾಬೂನುಗಳು.		
3. ಖಸ್ ಸಾಬೂನು	0—4—0	2—12—0
4. ಗುಲಾಬ್ ,,	0—4—0	2—12—0
5. ಹೀನಾ ,,	0—4—0	2—12—0
6. ಕೇವುಡಾ ,,	0—4—0	2—12—0
7. ಗುಡಾಬಿ ,,	0—4—0	2—12—0
8. (ಬಾತ್ ಸೋಪ್) ಸ್ನಾನದ ಬಗ್ಗೆ ಉಪಯೋಗಿಸುವದು.	0-1-6	1- 1-0
ಡೈಮಂಡ್ ಬಣ್ಣದ ಸಾಬೂನು.		
9. [illegible]	0—1—6	1— 1—0
10. [illegible]	0—2—0	1— 7—0

[illegible]— [illegible], ದ. ಕ.

ಕುಂಬಳೆ ನರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತ ಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಭಾಮಿನಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೨ ಆಣೆಗೆ ವಿ. ಪಿ. ಮೂಲಕ ರವಾನಿಸಬಹುದು., ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರೆಯುತ್ತದೆ.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಶಾರದಾ ಛಾಪಖಾನೆಯಲ್ಲಿಯೂ ದೊರೆಯುತ್ತದೆ.

ಪಂಡಿತ್ ಟಿ. [illegible]

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿಲ್ಲವಾದ್ದರಿಂದ, [illegible] ಮಿತ್ರವಾದ ಈ ಔಷಧವ ಬರೇ 48 ದಿವಸಗಳ ಸೇವನೆಯಿಂದ [illegible] ಕೆಮ್ಮು, ದಮ್ಮು, ಧಾತುಕ್ಷಯ, ಕ್ಷಯರೋಗ, ಮೊದಲಾದ [illegible] ಸಂಬಂಧವಾದ ಎಲ್ಲಾ ರೋಗಗಳು ಮತ್ತು [illegible] ಮೂತ್ರಕೃಚ್ಛ್ರ, [illegible] ಮುಂತಾದ ಎಲ್ಲಾ ವಿಧದ ಮೂತ್ರರೋಗಗಳು [illegible] ಗುಣವಾಗುವವು. [illegible] ಶಕ್ತಿವಂತರಾಗುವರು.

[illegible] 14 [illegible]

[illegible]

ವಿಳಾಸ:— [illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದುವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಬಿಗಿ, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ

೧೩. ಸನ್ನೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉನ್ಮಾದವಾತ, ಬುದ್ಧಿವಿಕಾರ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಬಹುದು.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M NATH & CO
Ayurvedic Chemists
Vepery Post MADRAS,

ದಂತವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮೂರವರು

ಸದ್ಯದಲ್ಲಿಯೇ ಇಲ್ಲಿಂದ ಇತರ ಪ್ರಾಂತ್ಯಗಳಿಗೆ ಹೋಗುವರೆ ನಿಶ್ಚಯಿಸಿರುತ್ತಾರೆ. ಆದ್ದರಿಂದ ಕೃತಕ ಹಲ್ಲುಗಳನ್ನು ಇಡಲಿಚ್ಛಿಸುವವರೂ ಹಾಗೂ ದಂತ ಚಿಕಿತ್ಸೆ ಮಾಡಬೇಕೆಂದಿರುವವರು ಈ ಸುಸಂದರ್ಭವನ್ನು ಬಿಡಬಾರದು.

ಚಾರ್ಜು ಅತೀ ಸುಲಭ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ಕೋಟಿನ ಬಳಿ,
ಮಂಗಳೂರು.

ಅಮೃತಾರ್ಣವ ಅವಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟು ಹೋಗಿರುವ ರಕ್ತವು ಶುದ್ಧಿಯಾಗಿ ರಕ್ತಪುಷ್ಟಿಯುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತು ಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೈಗೂಡಿಸುವದು. ಕ್ರಯ ಸುಲಭ! ಫಲವು ಅಧಿಕವು!!

೨೦ ತೊಲೆಗೆ ರೂ. ೩—೦—೦ ಮಾತ್ರವೇ

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.
ಮತ್ತು 96 ಮೌಂಟ್ ರೋಡ್, ಮದ್ರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂದರಿರೋಜ

ಎಂದು ಮನೋಹರವೂ ಮೋಹಕವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಶೆ 1-ಕ್ಕೆ ಒಂದೇ ರೂಪಾಯಿ.

ಕಡಿಮೆ ತರದ ಹೇರಾಯಿಲುಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಕೂದಲನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಉದ್ದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ, ಕೂದಲುಗಳು ಚಂದವಾಗಿ ಕಾಣಬೇಕಾದರೆ ಅವು ಶುದ್ಧವಾಗಿ ಮತ್ತು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಇದಲ್ಲದೆ ತಲೆಯನ್ನು ಯಾವ ರೀತಿಯಿಂದಲೂ ಕಳ್ಳವಿಲ್ಲದಂತೆ ಸುಖವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿ ಬೆಳೆಯಿಸಿ ತಲೆಯ ಸರ್ವ ವ್ಯಾಧಿಗಳನ್ನು ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಅದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೂ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರಿರೋಜ ತೈಲವನ್ನು ಉಪಯೋಗಿಸು ತಲೆ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿರುವ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರುಗುಂಗುರಾಗಿ ಬೆಳೆಯಿಸುವದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟು ಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರಿರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಒಂದು ರಾಜಸುಂದರಿರೋಜ ಹೇರಾಯಿಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೊಂಡೆಗಿಜ 6, ಕನ್ನಡಿಸಹಿತ ಫಣಿ 1, ಕುಂಕುಮದ ಭರಣಿ 1, ಅದ್ದ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರವಿಕಣದ ಕಾರ್ನೇಷನ್ ಪೆಟ್ಟಿಗೆ 1, ರವಿವರ್ಮ ಫೋಟೋ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. ಕ್ರಯ. 50 ಬಹುಮಾನಗಳ ಸಹಿತ ರೂ. 1—0—0

ವಿಳಾಸ:— ಪಿ. ಎ. ಎಸ್. ಪಾಣಿ, ಕಂಪೆನಿ,
ಸಾಹುಕಾರ ಪೇಟೆ, ಮದರಾಸು.

ಅರ್ಧ ಕ್ರಯ! ಅರ್ಧ ಕ್ರಯ!!

ಒಂದು ತಿಂಗಳ ವರೆಗೆ ಮಾತ್ರ!



ನಮ್ಮ ನಿಕ್ಕಲ್ ಬೆಳ್ಳಿ ಕಿಸೆ ಗಡಿಯಾರವು ಬಹಳ ಸರಿಯಾಗಿ ಸಮಯವನ್ನು ಸೂಚಿಸುವದು, ಸಪ್ಪರದ ಸಹ ಧರಿಸಿಕೊಳ್ಳಲು ಸರಿಯಾದಂಥಾದ್ದು. ಮೂರು ವರುಷಗಳ ಗೆರೆಂಟಿ ಇದೆ. ರೂ. 7-14-0, 9—14—0 ಕ್ರಯವಿರುವಂಥವುಗಳನ್ನು ಈಗ ರೂ. 3—15—0, 4—15—0ಕ್ಕೆ ವಿಕ್ರಯಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚು ರೂ. 13ರ ಕ್ರಯದ್ದು ರೂ. 6—8—0ಕ್ಕೆ ದೊರಕುವದು. ರೂ. 15ರ ಅಂದವಾದ ಹಂಟಿಂಗ್ ವಾಚು ರೂ. 7—8—0 ಕ್ಕೆ ದೊರೆಯಾಗುವದು. ಲೇಡಿ ಸ್ಯಾಜಿನ ಬೆಳ್ಳಿ ರೂ. 18ರ ವಾಚನ್ನು ರೂ. 9ಕ್ಕೆ. ಅಂದವಾದ ಭಂಗಾರದ ಮುಲಾಮಿನ ರೂ. 20ರ ವಾಚು ರೂ. 10ಕ್ಕೆ. ರಿಷ್ಟ್ ವಾಚು ರೂ. 12 ಕ್ರಯದ್ದು ಬಹಳ ಉತ್ಕೃಷ್ಟವಾದದ್ದು ರೂ. 6ಕ್ಕೆ ಕೈಗೆ ಹಾಕುವ ಚರ್ಮದ ಪಟ್ಟಿ ಸಹಿತ; ಬಹಳ ಗಟ್ಟಿಯಾದದ್ದು, ಎಂಟು ದಿವಸಗಳ ಚಾವಿ ಇರುವಂಥವು ಕ್ರಯ ರೂ. 24ರದ್ದನ್ನು ರೂ. 12ಕ್ಕೆ ಕೊಡಲಾಗುವದು.

ವಿಶೇಷ ಇನಾಮು. ಪ್ರತಿ ಒಂದು ವಾಚು ಪಡಕೊಳ್ಳುವವನಿಗೆ ಒಂದು ಚಂದವಾದ ಸರಪಳಿಯು ಇನಾಮು. 6 ವಾಚುಗಳನ್ನು ಪಡಕೊಳ್ಳುವವನಿಗೆ ಒಂದು ವಾಚು ಉಚಿತಾರ್ಥವಾಗಿ ಕಳುಹಿಸಲಾಗುವದು.

ಕೊಂಪಿಟೇಷನ್ ವಾಚ್ ಕಂಪೆನಿ,
25 ಮದನಮಿತ್ರ ಲೇನ್, ಕಲ್ಕತ್ತಾ.

ಕರ್ಣಿಕ
ಎಗ್ಯುಮಿಕ್ಸ್ಚರ
Karnik's Ague Mixture.

ಚಳಿಜ್ವರ, ಮಲೇರಿಯಾ, ಅಂತರಿತ (ದಿನದಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಪೆನೊ-ವಿನ್:—ಕೋಲೆರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು:—ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೮—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ.

ಕರ್ಣಿಕ ಬ್ರದರ್ಸ್,
56, ಗಿರಗಾಂವ, ಮುಂಬಯಿ.

ಹಲ್ಲುನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ
ಹಲ್ಲುಗಳು ಅಲ್ಲಾಡುವದಿಲ್ಲ
ಡಾಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ
ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ
ಸುಲಭವಾದ ಔಷಧಿ
ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ
ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ
ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವದು
ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.
ಅಂಚೆ ಹಾಸಲು ಪ್ರತ್ಯೇಕ.

STANY BROTHERS
Sole Agents
M. O. O's. Toothache
Specific, Mangalore.

ಮೈಸೂರು ದಸರಾ 1916ನೇ ವರ್ಷದ ಸರ್ವ ವಸ್ತುಪ್ರದರ್ಶನ ಶಾಲೆಯಲ್ಲಿ ಬಿರುದು ಬಿಲ್ಲೆಯನ್ನೂ ಮತ್ತು ಅನೇಕ ಡಾಕ್ಟರುಗಳಿಂದ ಯೋಗ್ಯತಾಪತ್ರವನ್ನೂ ಪಡೆದಿರುತ್ತದೆ.

ಇತ್ತ ನೋಡಿ! ಜಾಗ್ರತೆ ಮಾಡಿ!! ಬೆಲೆ ಸುಲಭ!!!

ರಿಕ್ಸ್ ರಾಮಕೃಷ್ಣಾಮೃತ.

ನೀವು ನಿಮ್ಮ ಅಮೂಲ್ಯವಾದ ಶರೀರವನ್ನು ಏತಕ್ಕೆ ಯಾತನೆಗೂ ಸಂಕಟಕ್ಕೂ ಒಳಗಾಗಮಾಡಿಕೊಂಡು ಕೃಶರಾಗಿರುವಿರಿ!

ಈಗಲೇ ತಯಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ಸುಲಭ, ಪ್ರಯೋಜನ ಬಹಳ. ವಿದ್ಯಾರ್ಥಿಗಳಿಗೂ, ಉದ್ಯೋಗಸ್ಥರಿಗೂ, ಸ್ತ್ರೀ ಕುಟುಂಬ ವರ್ಗದವರಿಗೂ, ಮುಖ್ಯವಾಗಿ ಎಲ್ಲಾ ಜನಾಂಗಕ್ಕೂ ಬಹಳ ಪ್ರಯೋಜನಕಾರಿಯಾದದ್ದು.

[illegible]

8 ಆಣೆ. ಡಜನ್ 1ಕ್ಕೆ ರೂ. 5—4—0. ಅಂ. ಹಾ. ಬೇರೆ.

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು. ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ದೊರೆಯುವದು.

ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

R. K. DEPOT,

Registered No. M. 990

ಮುಂಗಡವಾರ್ಷಿಕ — ವರ್ಷ 1ಕ್ಕೆ ರೂ. 1—8—0

ಡಾಕ್ ಹಾಸಲು ಸಹಿತ ರೂಪಾಯಿ 2—5—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಕು ೧೭ನೇ ಆಗೋಸ್ತು ಶುಕ್ರವಾರ ೧೯೧೭. | ಸಂಚಿಕೆ ೩೩.

ಒಂದು ತಿಂಗಳ ಕಾಲಕ್ಕೆ ಮಾತ್ರ!

ಅರ್ಧ ಕ್ರಯಕ್ಕೆ ಮಾರಲ್ಪಡುವವು.

ಫ್ಲುಟ್ ಹಾರ್ಮೋನಿಯಮ್‍ಗಳು.



ಎಲ್ಲಾ ನಮೂನೆಯ ಗಾಯನಗಳಿಗೆ ತಕ್ಕಂಥವುಗಳು, ಯಾವ ಹವಾಗುಣಗಳಲ್ಲಿ ಆದರೂ ಬಾಳುವಂಥವುಗಳು. ಒಳ್ಳೆ ಮಾಗಿದ ಸಾಕವಾನಿ ಮರದ ಹಲಿಗೆಗಳಿಂದ ತಯಾರಿಸಲ್ಪಟ್ಟವುಗಳು. ಇವುಗಳಲ್ಲಿರುವ ರೀಡ್ಸುಗಳು ಉತ್ತಮ ತರಗತಿದ್ದಾಗಿವೆ. ಪಸಂತವಾಗದ ಈ ಹಾರ್ಮೋನಿಯಮ್‍ಗಳನ್ನು ಇವುಗಳು ತಲ್ಪಿದ ಏಳು ದಿವಸಗಳಲ್ಲಿ ಹಿಂತಿರುಗಿ ಕಳುಹಿಸಿದರೆ ಪಡಕೊಳ್ಳುತ್ತೇವೆ. ಸಿಂಗಲ್ ರೀಡ್ ಇರುವಂಥವುಗಳಿಗೆ ರೂ. 40, 45, 50 ಕ್ರಯದವುಗಳು ರೂ. 20, 22—8—0, 25—0—0 ಕೊಡೋಣಾಗುವವು. ಡಬ್ಬಲ್ ರೀಡ್ ಇದ್ದವುಗಳು ರೂ. 70, 80, 90 ಕ್ರಯದವುಗಳನ್ನು ರೂ. 36, 40, 45ಕ್ಕೆ ಈಗ ಕೊಡುತ್ತೇವೆ. ಕೈಗಳಿಂದಲೂ ಕಾಲುಗಳಿಂದಲೂ ಬಾರಿಸಬಹುದಾದ ಅತ್ಯುತ್ತಮ ಡಬ್ಬಲ್ ರೀಡ್ ಮಡಚುವಂಥ ರೂ. 130ರ ಹಾರ್ಮೋನಿಯಮ್‍ಗಳು ಈಗ ರೂ. 65ಕ್ಕೆ ದೊರಕುತ್ತವೆ. ಹಾರ್ಮೋನಿಯಮ್‍ಗಳು ಬೇಕಾದವರು ಕ್ರಯದ ಕಾಲು ಅಂಶವನ್ನು ಮುಂಗಡವಾಗಿ ಕಳುಹಿಸಬೇಕು, ಮತ್ತು ತಮಗೆ ಸಮೀಪವಿರುವ ರೈಲ್ವೆ ಸ್ಟೇಷನಿನ ಹೆಸರು ತಿಳಿಸಬೇಕು. ಪತ್ರವ್ಯವಹಾರವನ್ನು ಇಂಗ್ಲಿಷ್ ಭಾಷೆಯಲ್ಲಿಯೇ ಬರೆಯಬೇಕಾಗಿದೆ.

ನೆಷನಲ್ ಹಾರ್ಮೋನಿಯಮ್ ಕಂಪೆನಿ,
10/3 ಲೋವರ್ ಚಿತ್‍ಪುರ ರೋಡು.

ಟೆಲಿಗ್ರಾಮುಗಳ ಬಗ್ಗೆ ವಿಳಾಸ:— ಮ್ಯೂಜಿಸಿಯನ್ಸ್ ಕಲ್ಕತ್ತಾ.

ಬಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಯಕ್ಷಗಾನ.

ತುಳು ಪಂಚವಟಿ ರಾಮಾಯಣ	...	ಕ್ರಯ ರೂ. 0—3—0
ಕನ್ನಡ ದುಂದುಭಿ ಆಖ್ಯಾನ	...	,, ,, 0—4—0
ಕನ್ನಡ ಚಂದ್ರಮೌಳಿ ಕಾಳಗ	...	,, ,, 0—4—0

ಈ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಕ್ರಯ ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕೆಟಲಾಗು ಮುಫತ್ತು.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,
ಜಿ. ಟಿ. ಏಜನ್ಸಿ, ವಿಟ್ಲ, ದ. ಕ.

ನಮ್ಮ ಅನುಭವಸಿದ್ಧವಾದ

ಗಜಕರ್ಣದ ಮುಲಾಮು.

ಡಬ್ಬಿ 1ಕ್ಕೆ ಆಣೆ. 6.

ಮಕ್ಕಳ ಎಕ್ಜಿಮಾ ಎಂಬ ತುರಿಗಜ್ಜಿಗೆ ಬಹಳ ಉಪಯುಕ್ತವಾದ ಮುಲಾಮು ಡಬ್ಬಿ 1ಕ್ಕೆ ಆಣೆ 8.

ಇನ್ನೂ ಬೇಕಾದ ಹಲವು ಬಗೆಯ ಔಷಧಗಳನ್ನು ನಮ್ಮಿಂದ ಪಡೆಯಬಹುದು.

ವಿಳಾಸ:—
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರಬೀದಿ, ಮಂಗಳೂರು.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾಗ್ವಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೋಮಿಯೋಪತಿ, ಟಿಸ್ಯೂ ಸ್ಪೆಸಿಫಿಕ್, ಇಲೆಕ್ಟ್ರೊ ಹೋಮಿಯೋಪತಿ, ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೋಮಿಯೋಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ, ಧರ್ಮಸ್ಥಳ.

ನೋಟೀಸು.

ಪಾವಂಜೆ ಗ್ರಾಮದಲ್ಲಿರುವ ಶ್ರೀನಿವಾಸಯ್ಯನವರ ಮಗ ಕೃಷ್ಣಯ್ಯನು ಈ ಮೂಲಕ ಸರ್ವ ಜನರಿಗೆ ತಿಳಿಸುವದೇನೆಂದರೆ:—

ನಾನು ನಿನ್ನೆ ದಿನ ಊರಿನಿಂದ ಮಂಗಳೂರಿಗೆ ಗಾಡಿಯಲ್ಲಿ ಬರುವಾಗ ಈ ಕೆಳಗೆ ನಮೂದಿಸಿದ ಲೆಕ್ಕದಪುಸ್ತಕ, ಡಿಮಾಂಡ್ ನೋಟುಗಳು ವಗೈರೆ ಇದ್ದ ಕಟ್ಟು 1 ಗೈರವಿಲೆಯಾಗಿ ಹೋಗಿರುತ್ತದೆ. ಸದರಿ ಕಟ್ಟು ಸಿಕ್ಕಿದವರು ಅದನ್ನು ನನಗೆ ತಂದುಕೊಟ್ಟರೆ ರೂ. 5—0—0 ಇನಾಮಾಗಿ ಕೊಡುವರೆ ಸಿದ್ಧವಿದ್ದೇನೆ—

1916ನೇ ಇಸವಿಯ ಅಂಗಡಿ ಲೆಕ್ಕದಪುಸ್ತಕ 1.

ಮುಕ್ಕದ ಮಂಜ ಪೂಜಾರಿಯು ನನಗೆ ಬರಿಸಿಕೊಟ್ಟ ರೂ. 80ರ ನೋಟು 1.

ಹಳೆಅಂಗಡಿ ಕರಿಹಿತ್ತಲಿನಲ್ಲಿರುವ ಕ್ಲೋರಿಕ ರಾಮನು ನನಗೆ ಬರಕೊಟ್ಟ ರೂ. 90ರ ನೋಟು 1.

ಸದರಿ ಹಿತ್ತಲಿನಲ್ಲಿರುವ ಕೂವಪ್ಪ ಪೂಜಾರಿಯು ನನಗೆ ರೂ. 100ಕ್ಕೆ ಬರಕೊಟ್ಟ ನೋಟು 1.

ಪಾವಂಜೆ ಗ್ರಾಮದಲ್ಲಿರುವ ಕೊರಗ ಮೊಯಿಲಿಯು ನನಗೆ ರೂ. 100ಕ್ಕೆ ಬರಕೊಟ್ಟ ನೋಟು 1.

ಪಾವಂಜೆ ಕೇಳ್ ಶಾಂತಿ ನಾರಾಯಣನಿಗೆ ಬಿಟ್ಟ ರಿಜಿಸ್ಟ್ರಿ ಕಾರ್ಡಿನ ನಕ್ಲು 1, ವ ಸದರಿಯವನ ಉತ್ತರದ ಕಾರ್ಡು 1.

ಮಂಗಳೂರು,
ತಾ. 11-8-1917. ಕೃಷ್ಣಯ್ಯನ ರುಜು.

ಔಷಧಗಳ ಸಂಗ್ರಹ, ಅವುಗಳ ಜೋಪಾಸನೆ, ಅವುಗಳ ಪರಿಶೋಧನೆ, ಅವುಗಳ ಗುಣಾವಗುಣ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಮಿಕ್ಕಿದ ವಿಷಯಗಳು. ಈ ವಿದ್ಯಮಾನಗಳಲ್ಲಿ ಕಳೆದ ಹತ್ತಿಪ್ಪತ್ತು ವರುಷಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡಿಯುವದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ 'ಎಣ್ಣೆಯನ್ನು

ಇತರರಿಂದ ಏಕೆ ಪಡೆಯಬೇಕು?

ಬಾಟ್ಲು 1ಕ್ಕೆ 0—5—0. ಡಜನಿಗೆ ರೂ. 3.

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು

ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ತೇರಬೀದಿ, ಮಂಗಳೂರು.

ಸಂಗೀತ ಪುಸ್ತಕಗಳು.

೧ ಹಾರ್ಮೋನಿಯಂ ಸ್ವಯಂ ಬೋಧಿನಿ.

ಎರಡನೇಯ ಛಾಪೆ.

ಈ ಪುಸ್ತಕದಲ್ಲಿ ಪ್ರಥಮ ಮುದ್ರಣದಲ್ಲಿ ಪ್ರಕಟವಾಗಿರುವ ಪುರಂದರದಾಸರ ಕೀರ್ತನೆಗಳೇ ಮೊದಲಾದ ಕನ್ನಡ ಕೀರ್ತನೆಗಳ ಜತೆಗೆ, ಅಲಂಕಾರಗಳು, ಗೀತಗಳು, ಸ್ವರಜತಿಗಳು, ವರ್ಣಗಳು, ಸುಪ್ರಸಿದ್ಧವಾದ ತೆಲುಗು ಕೀರ್ತನೆಗಳು, ನಾಟಕದ ಮಟ್ಟುಗಳು, ವಗೈರೆ ಅನೇಕ ಹೊಸ ವಿಷಯಗಳನ್ನು ಸೇರಿಸಿರುತ್ತೆ. ಈಗಿನ ಪುಸ್ತಕವು ೮೦ ಪುಟಗಳುಳ್ಳದ್ದು.

ಬೆಲೆ 0—8—0. ಹಾಸಲು 0—2—0.

ಲೈಬ್ರರಿಗೆ ಬೇಕಾದ ಪುಸ್ತಕಗಳು.

ಕುಮಾರವ್ಯಾಸಭಾರತ	3—0—0	ಮೈಸೂರು ಚರಿತ್ರಸಾರ	0—4—0
ಜೈಮಿನಿಭಾರತ ಮೂಲ	1—8—0	[illegible]	1—4—0
ಬಸವಪುರಾಣ	1—0—0	ದೇವೀಭಾಗವತ	1—4—0
ತೊರವೆ ರಾಮಾಯಣ	1—0—0	ಇಂದಿರಾ	0—6—0
ಭಾಗವತ (ಪದ್ಯಕಾವ್ಯ)	3—0—0	ರಮಾನಂದ	0—10—0
ಭಾಲಭಾರತ	1—0—0	ಸುಭದ್ರೆ	0—5—0
ಆರ್ ವೆಂಕಟೇಶ್ವರ ಕಂಪೆನಿ ರಾಮಾಯಣ ಆರು ಕಾಂಡಗಳುಳ್ಳದ್ದು ವಚನಕಾವ್ಯ	8—8—0	ಕಲಿಯುಗ	0—5—0
		ರಾಧಾರಾಣಿ	0—3—0
		[illegible]	0—8—0
		[illegible]	1—4—0
ಮುದ್ರಾಮಂಜೂಷ	1—9—0	[illegible]	0—8—0
ಪಂಚತಂತ್ರ	0—9—0	[illegible]	1—0—0
ಕಾವ್ಯವಿಹಾರಗಳ ಕಥೆ	0—4—0	ಭಾರತವೀರ ಚರಿತ್ರೆ	1—8—0
ಕೃಷ್ಣಕುಮಾರಿ	0—13—0	[illegible]	1—4—0
ಶ್ರೀ ಧರ್ಮನೀತಿ	0—9—0	[illegible]	3—2—0
ಸತ್ಯವತೀ ಚರಿತ್ರೆ	0—6—0	[illegible]	0—10—0
ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ	1—8—0		

ಇನ್ನೂ ಅನೇಕ ಪುಸ್ತಕಗಳು ಬಿಕರಿಗೆ ಸಿದ್ಧವಾಗಿವೆ. [illegible]

ವಿಳಾಸ:— ಎಲ್. ಎಸ್. [illegible] ಬ್ರದರ್ಸ್,
[illegible]

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು	ರೂಪಾಯಿ	300,000—0—0
Issued Capital ...	225,000—0—0	ಹುಟ್ಟಿಬಂದ ಮೂಲ ಧನವು	,,	225,000—0—0
Subscribed Capital ...	225,000—0—0	ಪ್ರತಿಜ್ಞಾತ ಮೂಲ ಧನವು	,,	225,000—0—0
Paid up Capital ...	205,450—0—0	ಆಗತ ಮೂಲ ಧನವು	,,	205,450—0—0
Deposits ...	304,490—14—11	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		304,490—14—11
Reserve Fund ...	50,003—2—5	ರಕ್ಷಿತ ಧನವು ...		50,003—2—5

25% of the net profits are added annually to the Reserve Fund. Rs. 37,364—11—2 have been invested in Government Paper

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 37,364-11-2 ಧರ್ಮಶಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

Dividends of not less than 6%. paid during the past years and a bonus of 1%. to 2%. paid in addition during the last eight years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs 5/ received for 3, 6, 12 and 24 months @ 4, 4½, 5, 5½%. and 6% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one week's notice of withdrawal after one month received @ 2½%. per annum at the discretion of the managing committee

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೇಕು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತವೆ.

Loans granted on proper securities and pledges.

Canara Bank Ltd.,
Mangalore, 1st. August 1917.

P. Gopal Naik,
Secretary

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ, ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಹೈಮಾದಿಪಾನಕ: ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ: ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ: — "ಪಂಡಿತ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಸೀಸೆಯ ಬೆಲೆ 12 ಆಣೆ

ವಿ. ಪಿ. ಪ್ರತ್ಯೇಕ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು: — ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಅರ್ಧ ಕ್ರಯ! ಅರ್ಧ ಕ್ರಯ!!

ಒಂದು ತಿಂಗಳ ವರೆಗೆ ಮಾತ್ರ!

ನಮ್ಮ ನಿಕ್ಕಲ್ ಬೆಳ್ಳಿ ಕಿಸೆ ಗಡಿಯಾರವು ಬಹಳ ಸರಿಯಾಗಿ ಸಮಯವನ್ನು ಸೂಚಿಸುವದು, ಸರ್ವರೂ ಸಹ ಧರಿಸಿಕೊಳ್ಳಲು ಸರಿಯಾದಂಥಾದ್ದು. ಮೂರು ವರುಷಗಳ ಗೆರೆಂಟಿ ಇದೆ. ರೂ. 7-14-0, 9—14—0 ಕ್ರಯವಿರುವಂಥವುಗಳನ್ನು ಈಗ ರೂ. 3—15—0, 4—15—0ಕ್ಕೆ ವಿಕ್ರಯಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚು ರೂ. 13ರ ಕ್ರಯದ್ದು ರೂ. 6—8—0ಕ್ಕೆ ದೊರಕುವದು. ರೂ. 15ರ ಅಂದವಾದ ಹಂಟಿಂಗ್ ವಾಚು ರೂ. 7—8—0 ಕೊಡೋಣಾಗುವದು. ಲೇಡಿ ಸ್ಯಾಜಿನ ಬೆಳ್ಳಿ ರೂ. 18ರ ವಾಚನ್ನು ರೂ. 9ಕ್ಕೆ. ಅಂದವಾದ ಬಂಗಾರದ ಮುಲಾಮಿನ ರೂ. 20ರ ವಾಚು ರೂ. 10ಕ್ಕೆ. ರಿಸ್ಟ್ ವಾಚು ರೂ. 12 ಕ್ರಯದ್ದು ಬಹಳ ಉತ್ಕೃಷ್ಟವಾದದ್ದು ರೂ. 6ಕ್ಕೆ ಕೈಗೆ ಹಾಕುವ ಚರ್ಮದ ಪಟ್ಟಿ ಸಹಿತ; ಬಹಳ ಗಟ್ಟಿಯಾದದ್ದು, ಎಂಟು ದಿವಸಗಳ ಚಾವಿ ಇರುವಂಥಾದ್ದು ಕ್ರಯ ರೂ. 24ರದ್ದನ್ನು ರೂ. 12ಕ್ಕೆ ಕೊಡೋಣಾಗುವದು.

ವಿಶೇಷ ಇನಾಮು. ಪ್ರತಿ ಒಂದು ವಾಚು ಪಡಕೊಳ್ಳುವವನಿಗೆ ಒಂದು ಚೆಂದವಾದ ಸರಪಳಿಯು ಇನಾಮು. 6 ವಾಚುಗಳನ್ನು ಪಡಕೊಳ್ಳುವವನಿಗೆ ಜೇಬು ವಾಚು ಉಚಿತಾರ್ಥವಾಗಿ ಕಳುಹಿಸೋಣಾಗುವದು.

ಕೊಂಪಿಟೇಷನ್ ವಾಚ್ ಕಂಪೆನಿ,
25 ಮದನಮಿತ್ರ ಲೇನ್, ಕಲ್ಕತ್ತಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ಪಿಲ್ಸ್, ಸುದರ್ಶನ ಮಾಲಿಸಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಶುಕ್ಲಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯನ್ನಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಚಿವ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುಮ್ಮಸ್ ಎಂಬ ಬಿಡಕೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ. 1—0—0

N. B — ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾಧಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಯಂ. ಯಸ್. ರಾವ್ ಕಂಪೆನಿ,

ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.

(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯೂ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ —

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅದ್ಭುತ ಖೂನಿ ,,	0—10—0
ಇಂದಿರಾ ದ್ವಿ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರತಿಜ್ಞೆ ,, ,,	0—13—0
ಅಂಬಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾಕಾಂತ ,,	0—2—0
ಸುಭದ್ರೆ ,,	0—5—0
ಸಂಕ್ರಾಂತ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
[illegible]	1—2—0
[illegible]	0—10—0
[illegible] 18×22-4	0—1—0

ಯೂರೋಪದ ಮಹಾ ಯುದ್ಧ.

ಸೇಸ್ಸರ್ ಮತ್ತು ಪ್ರೂತ್ ನದಿಗಳ ನಡುವೆ ಇರುವ ಪ್ರದೇಶದಲ್ಲಿ ಜರ್ಮನರನ್ನು ಎದುರಿಸಲಿಕ್ಕೆ ರುಶ್ಯರು ಕಷ್ಟಪಡುತ್ತಲಿದ್ದಾರೆ. ಜರ್ನೋವಿಡ್ಸ್ ನ ಆಗ್ನೇಯ ದಿಕ್ಕಿನಲ್ಲಿ ಜರ್ಮನರು ರುಶ್ಯರನ್ನು ತಡೆಗಟ್ಟಿರುವರು.

ರುಶ್ಯದ ಸೆರೆತ್ ಮತ್ತು ಸುಕ್‌ಜೆವಿಯಾ ಪ್ರದೇಶಗಳಲ್ಲಿ ತಯಾರಾದ ಫಸಲನ್ನು ಜರ್ಮನರು ಧಾರಾಳವಾಗಿ ಕೊಯ್ಯುತ್ತಾರೆ. ಕೆಂಪೊಲುಂಗ್ ಬಳಿಯಲ್ಲಿ ರುಶ್ಯರ ಮೇಲೆ ಒತ್ತಿ ಒತ್ತಿ ಜರ್ಮನರು ಬರುತ್ತಿರುವರು.

ರುಶ್ಯರ ಎರಡು ರೆಜಿಮೆಂಟುಗಳು ಶತ್ರುಗಳಿಗೆ ಸೆರೆಹೊಕ್ಕ ನಿಮಿತ್ತ ಬಿಸ್ಟ್ರಿಟ್ಜ ನದಿಯ ಬಳಿಯಲ್ಲಿ ರುಶ್ಯರು ಹಿಮ್ಮೆಟ್ಟಬೇಕಾಯಿತು.

ಫೋಕ್ಸಾನಿ ಎಂಬಲ್ಲಿ ಜರ್ಮನರ ಹೊಡೆತ ಸಹಿಸಲಾರದೆ ರುಶ್ಯರು ಟರ್ಲ್ ದಿಸಸ್ ನದಿಯ ದಡದ ವರೆಗೆ ಹಿಮ್ಮೆಟ್ಟಬೇಕಾಯಿತು.

ಬರ್ಲಿನ್ ಬಳಿಯಲ್ಲಿ ಜರ್ಮನರ ಒಂದು ಸಿಡಿಮದ್ದಿನ ಕಾರ್ಖಾನೆಯು ಸುಟ್ಟುಹೋಯಿತು.

ಬ್ರಿಟಿಷರ ೧೬೦೦ ಟನ್ನಿಗೆ ಮಿಕ್ಕಿದ ೨೧ ಹಡಗುಗಳೂ ೧೬೦೦ಕ್ಕೆ ಕಡಿಮೆಯಾದ ೩ ಹಡಗುಗಳೂ ಗತವಾರದಲ್ಲಿ ಮುಳುಗಿಹೋದವು.

ಅದೇ ಕಾಲದಲ್ಲಿ ಫ್ರೆಂಚರ ೧೬೦೦ ಟನ್ನಿಗೆ ಮಿಕ್ಕಿದ ೪ ಹಡಗುಗಳೂ ೧೬೦೦ ಟನ್ನಿಗೆ ಕಡಿಮೆಯಾದ ೩ ಹಡಗುಗಳೂ ಮುಳುಗಿಹೋದವು.

ಸ್ವೀಡನ್ ರಾಜ್ಯದ ೯ ಉಗಿಹಡಗುಗಳೂ ೪೭ ಹಾಯಿಹಡಗುಗಳೂ ಈ ಯುದ್ಧಕಾಲದಲ್ಲಿ ಜರ್ಮನರ ಟೋರ್ಪಿಡೋಗಳಿಗೆ ತುತ್ತಾದವು.

ಭಾರಿಮಳೆಯು ಇರುವುದರಿಂದ ಯುದ್ಧದ ಪಶ್ಚಿಮ ರಣರಂಗದಲ್ಲಿ ಕಾಳಗವು ಅಷ್ಟು ರಭಸದಿಂದ ನಡೆಯುವುದಿಲ್ಲ. ಮೊದಲು ಹಿಡಿದ ಸ್ಥಳಗಳನ್ನು ಭದ್ರಪಡಿಸುವುದರಲ್ಲಿಯೂ ಮಳೆಯ ಹಾವಳಿಯನ್ನು ತಡೆಗಟ್ಟುವುದರಲ್ಲಿಯೂ ಫ್ರೆಂಚರಿಗೂ ಬ್ರಿಟಿಷರಿಗೂ ಕೈತುಂಬಾ ಕೆಲಸವಿದೆ. ಆದರೂ ಬಿಕ್ಸ್‌ಕೂಟರ ವಾಯುವ್ಯದಲ್ಲಿ ಫ್ರೆಂಚರು ಸ್ವಲ್ಪ ಮುಂದರಿಸಿದರು.

ಜರ್ಮನರು ರುಶ್ಯದ ದಕ್ಷಿಣ ಭಾಗದಲ್ಲಿ ಬೆಸ್ಸರಬಿಯಾ ಪ್ರಾಂತ್ಯವನ್ನೂ ಒಡೆಸ್ಸಾ ಎಂಬ ಮುಖ್ಯ ಪಟ್ಟಣವನ್ನು ಹಿಡಿಯುವ ಮತ್ತು ಆ ಪ್ರಾಂತ್ಯದಲ್ಲಿ ತಯಾರಾದ ಫಸಲನ್ನು ಕೊಳ್ಳೆಹೊಡೆಯುವ ತವಕದಿಂದ ಮುಂದೊತ್ತುತ್ತಿದ್ದಾರೆ.

ಜರ್ಮನಿಯ ಎಸ್ಸೆನ್ ಊರಿನಲ್ಲಿ ಕೈಗಾರಿಕೆ ವೃತ್ತಿಯವರ ಮತ್ತು ಗಣಿಗಳಲ್ಲಿ ಕೆಲಸಮಾಡುವವರ ಒಂದು ಸಭೆಸೇರಿ ಅದರಲ್ಲಿ ಆಹಾರ ಸಾಮಗ್ರಿಗಳ ತುಟ್ಟಿ ಮೊದಲಾದ್ದನ್ನು ಚರ್ಚಿಸುವಾಗ ಯುದ್ಧವನ್ನು ಬೇಗನೇ ಮುಗಿಸುವಂತೆ ಸರಕಾರಕ್ಕೆ ಒತ್ತಾಯ ಪಡಿಸಬೇಕೆಂಬ ಠರಾವು ಆಯಿತು.

ರುಮೇನಿಯದಲ್ಲಿ ಫೋಕ್ಸಾನಿ ಎಂಬ ಸ್ಥಳದ ಉತ್ತರದಲ್ಲಿ ಜನರಲ್ ಮೆಕ್ಕೆನ್ ಸನ್ ಗೆಲಟ್ಜಿನಿಂದ ದಕ್ಷಿಣಕ್ಕೆ ಹೋಗುವ ರೈಲ್ವೆ (ಅಂದರೆ ಉತ್ತರ ಭಾಗದ ರೈಲ್ವೆ) ಮತ್ತು ಕಾರ್ಪೇತಿಯನ್ ಪರ್ವತಗಳ ಬಳಿಯಲ್ಲಿರುವ ಸೈನ್ಯದವರಲ್ಲಿಗೆ ಹೋಗುವ ರೈಲ್ವೆ ಇವನ್ನು ಮಧ್ಯದಲ್ಲಿಯೇ ಕಡಿದುಬಿಟ್ಟು ಈ ಎರಡು ಸೈನ್ಯಗಳೂ ಒಂದಕ್ಕೊಂದು ಸಹಾಯಕ್ಕೆ ಬಾರದ ಹಾಗೆ ಪ್ರಯತ್ನಿಸುತ್ತಿದ್ದಾನೆ.

ರುಶ್ಯದಲ್ಲಿ ಈಗ ಬೆಳೆಕಟಾವು ಆರಂಭಿಸಿಯದೆ. ಈ ಬೆಳೆಯನ್ನು ಅಪಹರಿಸಲಿಕ್ಕೆ ಜರ್ಮನರು ತುಂಬಾ ಸಾಹಸಮಾಡುತ್ತಿದ್ದಾರೆ.

ರುಮೇನಿಯದಲ್ಲಿ ಒಪ್ಪುಜ ಮತ್ತು ಕೆಸಿನೊ ಊರುಗಳ ಮಧ್ಯವಿರುವ ಭಾಗದಲ್ಲಿ ರುಮೇನಿಯರು ಜರ್ಮನರ ಆಕ್ರಮಣವನ್ನು ತಡೆಯಲಾರದೆ ಹಿಮ್ಮೆಟ್ಟುತ್ತಿದ್ದಾರೆ.

ಪೋಲೆಂಡಿನಲ್ಲಿ ಈಗ ಜರ್ಮನರ ವಶವಾಗಿದ್ದ ಭಾಗದಲ್ಲಿ ಜ್ಯೂಸ್ (ಯೆಹೂದಿಯ)ರಲ್ಲಿ ಹೊಟ್ಟೆಗಿಲ್ಲದೆ ಅನೇಕಾನೇಕ ಜನರು ಸಾಯುತ್ತಾರೆಂತ ದುಃಖಕರ ವಾರ್ತೆ ಕೇಳಿಸುತ್ತದೆ.

ಇಟಲಿಯ ಕೆಲವು ಯುದ್ಧ ವಿಮಾನಗಳು ಒಸ್ಟ್ರಿಯನರ ಪೋಲಾ ಎಂಬ ಊರಿನ ಮೇಲೆ ೪ ಟನ್ ಸಿಡಿಮದ್ದನ್ನು ಚೆಲ್ಲಿ ಒಸ್ಟ್ರಿಯನರ ನೌಕಾಸೇನೆಯನ್ನು ಸ್ವಲ್ಪ ಕದಲಿಸಿಬಿಟ್ಟವು.

ಇಸರ್ ಬಳಿಯಲ್ಲಿ ಜೋರಾಗಿ ಇಂಗ್ಲಿಷರಿಗೂ ಜರ್ಮನರಿಗೂ ಯುದ್ಧ ನಡೆಯುತ್ತದೆ. ಜರ್ಮನರ ೭ ವಾಯುವಿಮಾನಗಳು ಕೆಳಕ್ಕೆ ಬಿದ್ದು ನಾಶವಾದವು. ಇಂಗ್ಲಿಷರು ೪ ವಿಮಾನಗಳನ್ನು ಕಳಕೊಂಡರು.

ಮ್ಯೂಸ್ ನದಿಯ ಇಕ್ಕಡೆಗಳಲ್ಲಿಯೂ ಫ್ರೆಂಚರ ಭಯಂಕರವಾದ ಫಿರಂಗಿಗಳ ನಾದವೂ ಅವುಗಳಿಂದ ಉಂಟಾದ ಹಾವಳಿಯೂ ಅಸಮಾಧಾನಕರವಾಗಿವೆ.

ವಿದೇಶ ವೃತ್ತಾಂತ.

ರುಶ್ಯದ ಆಡಳಿತೆಯನ್ನು ಸರಿಗೊಳಿಸುವುದು ಬಹು ಕಷ್ಟಸಾಧ್ಯವೆಂದು ತಿಳಿದು ಮೊ। ಕೆರೆನ್ಸ್ಕಿಯು ಮುಖ್ಯ ಮಂತ್ರಿತ್ವಕ್ಕೆ ರಾಜಿನಾಮೆ ಕೊಟ್ಟನು. ಇತರ ಮಂತ್ರಿಗಳೂ ಅದೇ ರೀತಿಯಲ್ಲಿ ಹಿಂಬಾಲಿಸಿದರು. ಸರಕಾರದವರು ಅಲ್ಲಿಯ ಡೂಮಾ (ಪಾರ್ಲಿಮೆಂಟು)ದ ಮೆಂಬರುಗಳ ಪ್ರತಿನಿಧಿಗಳನ್ನೂ ಸೈನಿಕರ ಮತ್ತು ಕೈಗಾರಿಕೆ ವೃತ್ತಿಯವರ ಕೌನ್ಸಿಲಿನ ಪ್ರತಿನಿಧಿಗಳನ್ನೂ ಜತೆಗೊಳಿಸಿ ಹೊಸ ಮಂತ್ರಿಸಭೆಯನ್ನು ಆರಿಸಲು ಯತ್ನಿಸುತ್ತಿದ್ದಾರೆ.

ಜರ್ಮನಿಯಲ್ಲಿಯೂ ೫ ಮಂದಿ ಮಂತ್ರಿಗಳು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರು. ಇದರಿಂದ ಸುಧಾರಣೆ ಬಂದೀತೆಂತಲೂ ಪ್ರಜಾಸತ್ತೆ ಬೆಳೆದೀತುವೆಂತಲೂ ಕುರುಹುಗಳು ಕಾಣುವುದಿಲ್ಲ.

ಸೂಜಿಲೆಂಡಿನಲ್ಲಿ ಭಯಂಕರವಾದ ಭೂಕಂಪವಾಯಿತು. ವಾಯುರರಪ್ಪಾ ಪ್ರಾಂತ್ಯದಲ್ಲಿ ಬಹಳ ನಷ್ಟ ಸಂಭವಿಸಿಯದೆ.

ಗ್ರೀಸ್ ರಾಜ್ಯದಲ್ಲಿ ನವೀನವಾಗಿ ಪಟ್ಟಕ್ಕೇರಿದ ರಾಜನು ಕೊಟ್ಟ ಭಾಷಣದಲ್ಲಿ ಮಿತ್ರಮಂಡಳಿಯವರು ಗ್ರೀಸ್ ರಾಜ್ಯದ ಪರವಾಗಿ ಈ ಮೊದಲು ಮಾಡಿದ ಉಪಕಾರವನ್ನು ಸ್ಮರಿಸಿದ್ದಲ್ಲದೆ ಬಲ್ಗೇರಿಯ ರಾಜ್ಯವು ಗ್ರೀಸ್ ರಾಜ್ಯಕ್ಕೆ ವಂಶಪರಂಪರೆಯಿಂದ ಶತ್ರುವಾಗಿದೆ ಎಂದೂ ಹೇಳಿರುವನು.

ಆಫ್ರಿಕದ ಲಾಯ್ಬೇರಿಯ ರಾಜ್ಯವು ಜರ್ಮನರ ಮೇಲೆ ಯುದ್ಧಮಾಡುವುದಾಗಿ ನಿಶ್ಚಯಿಸಿದೆ.

ಯುನೈಟೆಡ್ ಸ್ಟೇಟ್ಸಿನಲ್ಲಿ ಈ ಯುದ್ಧಕಾಲದಲ್ಲಿ ವರ್ಷಾವಧಿಗೆ ಗೋಧಿಯ ಫಸಲು ೧೬೫೦ ಮಿಲಿಯ ಬುಶ್ಯಲ್ ರಾಯ್ ಎಂಬ ಧಾನ್ಯದ ಫಸಲು ೭೩ ಮಿಲಿಯ ಬುಶ್ಯಲ್ ಆಗುವ ಹಾಗೆ ಹೆಚ್ಚಿನ ಸ್ಥಳವನ್ನು ಆಗಮಗೆ ತರಬೇಕೆಂದು ನಿಶ್ಚಯಿಸಿರುವರು.

ಕೆನಡಾ ರಾಜ್ಯದಲ್ಲಿ ಪ್ರಾಯಸ್ಥರು ಎಲ್ಲರೂ ಯುದ್ಧದ ತರಬೇತಿಯನ್ನು ಹೊಂದಬೇಕೆಂದು ಅಲ್ಲಿಯ ಪಾರ್ಲಿಮೆಂಟಿನಲ್ಲಿ ತಂದ ಬಿಲ್ ಮಂಜೂರಾಯಿತು.

ಸ್ಪೇನ್ ದೇಶದಲ್ಲಿ ಆರಂಭ ಹೇರವು ಇನ್ನೂ ಮುಗಿಯಲಿಲ್ಲ. ಆಗಾಗ [illegible] ತೋರುತ್ತದೆ. [illegible] ರೈಲ್ವೆಯ ಕೆಲಸದವರ [illegible] ಮುಖ್ಯ [illegible]

ಒಸ್ಟ್ರಿಯದಲ್ಲಿ ಕ್ರೆಕೊ ಎಂಬಲ್ಲಿ ಸಿಡಿಮದ್ದಿನ ಕಾರ್ಖಾನೆಯು ಸುಟ್ಟುಹೋಗಿ ೪೮ ಮಂದಿ ಸತ್ತರು; ಅನೇಕರಿಗೆ ಗಾಯ ತಗಲಿದೆ.

ರುಶ್ಯದಲ್ಲಿ ಪಾರ್ಲಿಮೆಂಟ (ಡೂಮಾ) ಸಭೆಯಲ್ಲಿ ಇದ್ದ ಹಲವು ಪಕ್ಷದವರು ತಮ್ಮ ವಾದವಿವಾದಗಳಿಂದ ರಾಜ್ಯದ ಸ್ಥಿತಿಯು ಕೆಟ್ಟುಹೋಗುವುದೆಂತಲೂ ಯುದ್ಧವನ್ನು ತಕ್ಕಕಾಲದಲ್ಲಿ ಕೊನೆಗಾಣಿಸದಿದ್ದರೆ ಪರಿಣಾಮವು ಕೆಟ್ಟದಾಗುವುದೆಂತಲೂ ಬಹಳ ಹೊತ್ತು ಚರ್ಚಿಸಿ ಕಡೆಗೆ ಮೊ। ಕೆರೆನ್ಸ್ಕಿಯನ್ನು ಪುನಃ ಮುಖ್ಯ ಮಂತ್ರಿತ್ವವನ್ನು ವಹಿಸಬೇಕಾಗಿ ಕೇಳಿಕೊಂಡರು. ಹೀಗಾಗಿ ಅವರು ರಾಜಿನಾಮೆಯನ್ನು ಹಿಂದೆಗೆದರು.

ಜನರಲ್ ಕೊರ್ನಿಲೊಫರಿಗೆ ಯುದ್ಧದ ಪೂರ್ಣ ಸ್ವತಂತ್ರಕೊಟ್ಟು ಮುಖ್ಯ ಸೇನಾಪತಿತ್ವವನ್ನು ಕೊಟ್ಟಿರುವರು.

ಜನರಲ್ ಗೂರ್ಕೊ ಈ ಮೊದಲು ಪಟ್ಟದಿಂದ ಕಳೆಹಾಕಲ್ಪಟ್ಟ ರುಶ್ಯನ್ ಝಾರ್ ನಿಕೊಲಸರೊಡನೆ ಒಳಸಂಚು ನಡಿಸುವ ರಾಜದ್ರೋಹ ತಪ್ಪಿಗೆ ಸೆರೆಹಿಡಿಯಲ್ಪಟ್ಟಿರುವರು. ಮೊ। ಬೆಸೋಬ್ರಜೊಫ್ ಮೊ। ಕ್ಲಾಸ್ನೋವ್ಸ್ಕಿ ಇವರು ತಮ್ಮ ಮಂತ್ರಿತ್ವಕ್ಕೆ ರಾಜಿಕೊಟ್ಟರು. ಈ ಪೈಕಿ ಕ್ಲಾಸ್ನೋವ್ಸ್ಕಿ ೧೧ ಮಿಲ್ಲಿಯ ರೂಬಲ್ (೧ ರೂಬಲ್ = ೨ ರೂ. ೨ ಆಣೆ.) ಸರಕಾರಿ ಹಣವನ್ನು ದುರುಪಯೋಗ ಮಾಡಿದ ಚಾರ್ಜಿನ ಮೇಲೆ ಕೈದುಮಾಡಲ್ಪಟ್ಟಿರುವರು.

ಕ್ರೊನ್‌ಸ್ಟಾಡ್ ಎಂಬಲ್ಲಿ ದಂಗೆಯೋರರ ಸ್ಥಿತಿಯೇನಾಗಿದೆ ಎಂದು ನೋಡಿ ಅವರೊಡನೆ ವಿಚಾರ ನಡಿಸಲಿಕ್ಕೆ ಹೋದ ಕಮಿಶನ್ ಅವರ ಉದ್ಧಟತನವನ್ನು ನೋಡಿ ಪೆಟ್ರೊಗ್ರೇಡಿಗೆ ಹಿಂದಿರುಗಿತು.

ಇಂಗ್ಲೆಂಡಿನಲ್ಲಿ ಹೌಸ್ ಒಫ್ ಕೊಮನ್ಸ್ (ಪಾರ್ಲಿಮೆಂಟಿನಲ್ಲಿ ತಾಳಿಸ್ಸರು) ಒಂದು ಎಜ್ಯುಕೇಶನ್ ಬಿಲ್ ಚರ್ಚೆಗೆ ತಂದಿರುವರು. ಇದರ ಮೇರೆಗೆ ಅಲ್ಲಿ ಈ ವರೆಗೆ ಇದ್ದ ಪ್ರಾಥಮಿಕ ವಿದ್ಯಾಭ್ಯಾಸವು ಇನ್ನಷ್ಟು ಅಭಿವೃದ್ಧಿಗೆ ಬರುವಂತೆ ಏರ್ಪಾಡುಗಳು ಆಗುವವು. ವಿದ್ಯಾಭ್ಯಾಸಕ್ಕೆ ಅಡ್ಡಿಯಾಗುವ ರೀತಿಯಲ್ಲಿ ಅವರನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ಹಚ್ಚುವುದು ಬಹಳ ಕಡಿಮೆಹೋಗುವುದು. ೫ ವರ್ಷಕ್ಕಿಂತ ಕಡಿಮೆ ಪ್ರಾಯದ ಮಕ್ಕಳ ದೇಹದ ಆರೈಕೆಯನ್ನು ನೋಡಿಕೊಂಡು, ಅವರಿಗೆ ಶಿಕ್ಷಣಕೊಡುವ ಶಾಲೆಗಳು ಸ್ಥಾಪಿಸಲ್ಪಡುವವು. ೧೪ ವರ್ಷ ಪ್ರಾಯದ ವರೆಗೆ ಕಡ್ಡಾಯದ ಪ್ರಾಥಮಿಕ ಶಿಕ್ಷಣವು ಕೊಡಲ್ಪಡುವುದು. ಅದರ ನಂತರ ೧೮ನೇ ವರ್ಷ ಪ್ರಾಯದ ವರೆಗೆ ಅರ್ಧ ಹೊತ್ತು ಕಲಿಸುವ ಶಾಲೆಗಳು ಸ್ಥಾಪಿಸಲ್ಪಡುವವು.

ಗ್ರೀಸ್ ರಾಜ್ಯದಲ್ಲಿ ಕ್ರಾಂತಿಯನ್ನು ಹುಟ್ಟಿಸುವ ತವಕದಲ್ಲಿದ್ದವರನ್ನು ಅಡಗಿಸುವುದಕ್ಕಾಗಿ ಮಾರ್ಶಲ್ ಲೊ ಜಾರಿಗೆ ತಂದಿದೆ. ಇದರ ಮೇರೆಗೆ ದಂಗೆಖೋರರನ್ನು ಸಾಮಾನ್ಯ ಕಾನೂನಿನ ಬದಲಾಗಿ ಮಿಲಿಟರಿ ಕಾನೂನು ಮೇರೆಗೆ ತನಿಖೆ ನಡಿಸಿ ಶಿಕ್ಷೆ ವಿಧಿಸುವರು.

ಸ್ಪೇನ್ ರಾಜ್ಯದಲ್ಲಿ ರೈಲ್ವೆ ನವುಕರರ ಮುಷ್ಕರವು ಇನ್ನೂ ಅಡಗಲಿಲ್ಲ.

ಅಮೇರಿಕವು ಯುದ್ಧದಲ್ಲಿ ಕೈಹಾಕಿದಂದಿನಿಂದ ಅಲಿಪ್ತರಾಜ್ಯಗಳು (ಯುದ್ಧದಲ್ಲಿ ಸೇರದವು) ಅಮೇರಿಕದಿಂದ ಆಹಾರ ಸಾಮಗ್ರಿಗಳು ಬಾರದೆ ನಷ್ಟಪಡುವುದರಿಂದ ಈ ವಿಷಯವನ್ನು ಚರ್ಚಿಸಲಿಕ್ಕೆ ಸ್ವೀಡನ ಮುಖ್ಯ ಪಟ್ಟಣವಾದ ಸ್ಟೋಕ್‌ಹೋಮಿನಲ್ಲಿ ಒಂದು ರಾಜಕೀಯ ಪರಿಷತ್ತು ಕೂಡಿಬರುವುದು.

ಇಂಗ್ಲೆಂಡಿನಲ್ಲಿ ಬಾರ್ಕಿಂಗ್ ಎಂಬಲ್ಲಿ ಬೆಂಕಿಬಿದ್ದು ಒಂದು ರಸಾಯನಿಕ ಕೈಗಾರಿಕೆಯ ಕಾರ್ಖಾನೆಯು ನಾಶವಾಗಿ ೧೯ ಮಂದಿ ಹೆಂಗಸರು ಸತ್ತುಹೋದದ್ದಲ್ಲದೆ ಅನೇಕರಿಗೆ ಗಾಯತಗಲಿದೆ.

ಇಂಗ್ಲೆಂಡಿನಲ್ಲಿ ಆಹಾರ ಸಾಮಗ್ರಿಗಳ ತುಟ್ಟಿಯನ್ನು ಹೋಗಲಾಡಿಸುವುದಕ್ಕೆ ಒಂದು ಮಿಲ್ಲಿಯ ಎಕ್ರೆಯಷ್ಟು ಹೆಚ್ಚಿನ ಸ್ಥಳದಲ್ಲಿ ಬಟಾಟೆ ಮತ್ತು ಧಾನ್ಯಗಳನ್ನು ಪೈರು ಮಾಡಿರುವರು.

ಫ್ರೆಂಚರ ಮುಖ್ಯ ಮಂತ್ರಿಯಾದ ಮೊ। ರಿಬೋರು ಲಂಡನಿಗೆ ಬಂದಿದ್ದು ಮಿತ್ರಮಂಡಳಿಯವರ ಒಂದು ಸಭೆಯು ಸೇರಿದೆ. ಅದರಲ್ಲಿ ಯುದ್ಧದ ವಿಲೆವಾರಿಗಳ ಚರ್ಚೆ ನಡೆಯುವುದು.

ಉತ್ತರ ಹಿಂದೂಸ್ಥಾನ.

ಸೆಕೆಂಡರಿ ಶಾಲೆಗಳಲ್ಲಿ ಇಂಗ್ಲಿಷ ಭಾಷೆಯಲ್ಲಿ ಪಾಠ ಹೇಳಿಕೊಡುವಿಕೆಯನ್ನು ಕುರಿತು ಚರ್ಚಿಸುವುದಕ್ಕೆ ಇದೇ ತಿಂಗಳ ೨೦-೨೧ನೇ ತಾರೀಖುಗಳಲ್ಲಿ ಸಿಮ್ಲಾದಲ್ಲಿ ಸರ್. ಶಂಕರನಾಯರರ ಅಧ್ಯಕ್ಷತೆಯಲ್ಲಿ ಒಂದು ಅಧಿವೇಶನವು ಕೂಡಿಬರುವುದು. ಇದಕ್ಕೆ ಎಲ್ಲಾ ಪ್ರಾಂತಗಳ ಡಿರೆಕ್ಟರುಗಳು, ಕೆಲವು ಪ್ರಸಿದ್ಧ ಉಪಾಧ್ಯಾಯರುಗಳೂ, ಕೆಲವು ದೇಶಿಯ ಪ್ರಜಾಪ್ರತಿನಿಧಿಗಳೂ ಆಮಂತ್ರಿಸಲ್ಪಟ್ಟಿರುವರು. ಈ ಅಧಿವೇಶನವನ್ನು ಬಹುಮಾನಪಟ್ಟ ನೈಸರಾಯರವರು ಸ್ವತಃ ಆರಂಭಿಸುವರು.

ಗ್ವಾಲಿಯರ್ ಮತ್ತು ಧೋಲ್‌ಪುರದ ಮಧ್ಯದಲ್ಲಿರುವ ಸಾಂಕ್ ರೈಲ್ವೆ ಸ್ಟೇಶನಿನ ಬಳಿಯಲ್ಲಿ ನೆರೆಯಿಂದ ಟೆಲಿಗ್ರಾಫ ಕಂಬಗಳು ಬಿದ್ದುಹೋಗಿವೆ. ಮುಂಬಾಯಿಯಿಂದ ಸಿಮ್ಲಾಕ್ಕೆ ಸೀದಾ ಆಮದುರಪ್ತು ರೈಲ್ವೆಗಳ ಮೂಲಕ ಆಗಲಿಕ್ಕೆ ತೊಡಕಾಗಿ ಕಲ್ಕತ್ತಾ ದಾರಿಯಾಗಿ ಹೋಗಬೇಕಾಗಿದೆ.

ಬಂಗಾಳದ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸರಕಾರಿ ನವುಕರರಲ್ಲದವರನ್ನು ಒಂದು ಜಿಲ್ಲೆಯಲ್ಲಾದರೂ ಪರೀಕ್ಷಾರ್ಥವಾಗಿ ನೇಮಿಸಬೇಕೆಂದು ಬಂದ ಚರ್ಚೆಗೆ ಉತ್ತರವಾಗಿ ಸರಕಾರದ ಕಡೆಯಿಂದ ಸರ್. ಎಸ್. ಪಿ. ಸಿಂಹರು ಈ ವಿಷಯದಲ್ಲಿ ಸರಕಾರದವರು ಒಂದು ಜಿಲ್ಲೆಯಲ್ಲಿ ಮೆಂಬರರಿಂದಲೆ ಚುನಾಯಿಸಲ್ಪಟ್ಟ ಅಧ್ಯಕ್ಷರನ್ನು ಪರೀಕ್ಷಾರ್ಥವಾಗಿ ಕೊಡುವುದಾಗಿ ನಿಶ್ಚಯಿಸಿರುವರೆಂತ ತಿಳಿಸಿದರು. ಸರಕಾರದ ಮುಖ್ಯ ಮೆಂಬರುಗಳೂ ಸೆಕ್ರೆಟರಿಗಳೂ ವರ್ಷದಲ್ಲಿ ಕೆಲವು ತಿಂಗಳು ಶೀತವಾಯುಗುಳ್ಳ ಪರ್ವತ ಪ್ರದೇಶಗಳಲ್ಲಿ ಹೋಗಿ ವಾಸಮಾಡುವುದರಿಂದ ಸರಕಾರದ ಖರ್ಚು ಹೆಚ್ಚಾಗುವುದೆಂದೂ ವರ್ತಮಾನ ಸರಿಯಾಗಿ ನಡಿಯುವುದಕ್ಕೆ ಕಾಲವಿಳಂಬವಾಗುತ್ತದೆಂದೂ ಬಂದ ಚರ್ಚೆಯು ಬಹುಮತದಿಂದ ಇದೇ ಅಧಿವೇಶನದಲ್ಲಿ ಬಿದ್ದುಹೋಯಿತು.

'ಸ್ವದೇಶಿ' ವಿಚಾರವನ್ನು ಪ್ರಚಾರಗೊಳಿಸುತ್ತಿದ್ದ ಮೌಲವಿ ಲಿಯಾಕತ್ ಹುಸೇನ್ ಎಂಬವರು ಜನರನ್ನು ಇಂಡಿಯಾ ಡಿಫೆನ್ಸ್ ಫೋರ್ಸ್ (ಸಂರಕ್ಷಣೆಯ ಸೈನ್ಯ)ಗೆ ಸೇರದ ಹಾಗೆ ಪ್ರೇರೇಪಿಸುತ್ತಾರೆಂಬ ಚಾರ್ಜಿನ ಮೇಲೆ ಅವರಿಗೆ [illegible] ಶಿಕ್ಷೆ ವಿಧಿಸಿಯದೆ.

[illegible] ಪ್ರಾಂತ್ಯದಲ್ಲಿ ಉಂಟಾದ ನೆರೆಯಿಂದ ಸುಮಾರು ೧೫೦ಕ್ಕೆ ಮಿಕ್ಕಿದ ಗ್ರಾಮಗಳಿಗೆ ಬಾಧಕ ತಟ್ಟಿತು. [illegible] ಸಂಖ್ಯೆ [illegible] ನಷ್ಟ ಯಥೇಷ್ಟವಾಯಿತು. ಸರಕಾರದವರು ಸೊತ್ತು ನಷ್ಟಹೊಂದಿದವರ ಸಹಾಯಾರ್ಥವಾಗಿ ೧೯,೦೦೦ ರೂಪಾಯಿ ಕಳುಹಿಸಿರುವರು. ಇದಲ್ಲದೆ ಪ್ರಜಾಜನಗಳೂ ಕೂಡಿ ಒಂದು ವಂತಿಗೆ ಪಟ್ಟಿಯನ್ನು ಆರಂಭಿಸಿದಾಗ ೩೦೦೦ ರೂಪಾಯಿ ಜಮೆ ಆಯಿತು.

ದಕ್ಷಿಣ ಹಿಂದೂಸ್ಥಾನ.

ಈ ವರೆಗೆ ಎನ್ನಿಬಿಸೆಂಟರ ಫಂಡಿಗೆ ವಂತಿಗೆಯಾದ ರೂ. ೪೦,೯೭೪—೬—೦ ಅದಲ್ಲದೆ ಅವರ ಶಿಲಾಪ್ರತಿಮೆಯನ್ನು ಮಾಡಿಸುವುದಕ್ಕೋಸ್ಕರ ಏರ್ಪಡಿಸಿದ ಫಂಡಿಗೆ ರೂ. ೫೮ ಜಮೆ ಆಯಿತು. ಈ ಫಂಡಿಗೆ ೧ ರೂಪಾಯಿಗಿಂತ ಹೆಚ್ಚಿಗೆ ವಸೂಲು ಮಾಡಲೇ ಬಾರದೆಂದು ನಿಯಮವನ್ನು ಕಮ್ಮಿಟಿಯವರು ಮಾಡಿರುವರು.

ಜಿ. ಐ. ಪಿ. ರೈಲ್ವೇ ನವುಕರರ ಮುಷ್ಕರವು ಇನ್ನೂ ಅಡಗಲಿಲ್ಲ. ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಾದ ರಾವ್ ಬಹದ್ದೂರ್ ಸಿಟಲವಾಡರೂ, ಪೋಲೀಸ್ ಕಮ್ಮಿಶನರೂ ರೈಲ್ವೇ ವರ್ಕಶೋಪಿನ ಸುಪರಿಂಟೆಂಡೆಂಟ ಬೊನ್ನರೂ ಬಹಳ ರೀತಿಯಿಂದ ಸಮಾಧಾನಿಸಿದರೂ ತಮಗೆಲ್ಲರಿಗೂ ಒಂದೇ ಸಲ ಬತ್ತಿ (ಸಂಬಳ) ಸಿಕ್ಕದ ವಿನಾ ತಾವು ಕೆಲಸವನ್ನು ಆರಂಭಿಸುವುದಿಲ್ಲವಾಗಿ ಅವರು ಹಟಹಿಡಿದಿರುವರು.

ಬಾತಮಿ.

ಮುಲ್ಕಿ:— ಇಲ್ಲಿಯ ಗೌಡಸಾರಸ್ವತ ಬಡ ವಿದ್ಯಾರ್ಥಿ ಸಹಾಯಕ ಫಂಡಿನ ಪರವಾಗಿ ಪ್ರೆಸಿಡೆಂಟ ಮ। ರಾ। ಬೋಳಮಾಧವರಾಯರಿಂದ ಲೆಪ್ಟನೆಂಟ ಬಿ. ಜಿ. ಮಲ್ಯರವರಿಗೆ ಕಳೆದ ಶನಿವಾರ ದಿನ ಒಂದು ಉಪಹಾರಸತ್ಕಾರವು (Tea party) ಮಾಡಲ್ಪಟ್ಟಿತು. ಸಾಮಾನ್ಯವಾಗಿ ಸಂಸ್ಥೆಯ ಮೆಂಬರರೆಲ್ಲರೂ ಹಾಜರಿದ್ದರು. ಸಂಸ್ಥೆಯ ಪ್ರೆಸಿಡೆಂಟರವರು ಸಂಸ್ಥೆಯ ಚರಿತ್ರೆಯನ್ನು ವಿವರಿಸಿ ಈ ವರೇಗೆ ಈ ಊರಿನ ಗೌಡಸಾರಸ್ವತ ಶ್ರೀಮಂತ ಗೃಹಸ್ಥರ ಉದಾರಾಶ್ರಯವು ಈ ಸಂಸ್ಥೆಗೆ ಸಿಕ್ಕದಿದ್ದರೂ ಇನ್ನೂ ಕ್ರಮೇಣ ನಮ್ಮ ಸಂಪನ್ನಬಾಂಧವರ ಉದಾರ ಸಹಾಯವು ಈ ಸಂಸ್ಥೆಗೆ ಸಿಕ್ಕಿ ಸಂಸ್ಥೆಯು ಹೆಚ್ಚಿನ ಅಭಿವೃದ್ಧಿಯನ್ನು ಹೊಂದುವ ಹಾಗೆ ದೇವರು ಕೃಪೆಮಾಡಬೇಕೆಂದು ಬಯಸಿ, ಸಂಸ್ಥೆಯ ಸವತಳೆ ಅಭಿವೃದ್ಧಿ ವಿಷಯಗಳಲ್ಲಿ ಅನುಭವಸ್ಥವಾದ ಬುದ್ಧಿವಾದವನ್ನೂ ಸೂಚನೆಗಳನ್ನೂ ನಿರೂಪಿಸುವಂತೆ ಲೆಪ್ಟನೆಂಟ ಮಲ್ಯರವರಿಗೆ ವಿನಂತಿಸಿ ತಮ್ಮ ಭಾಷಣವನ್ನು ಮುಗಿಸಿದರು. ಇವರ ಭಾಷಣಕ್ಕೆ ಪ್ರತ್ಯುತ್ತರವಾಗಿ ಸಂಸ್ಥೆಯ ಸಾಂಪತ್ತಿಕ ಸ್ಥಿತಿ ಮೊದಲಾದ ವಿಷಯದಲ್ಲಿ ಸಂಸ್ಥೆಯ ಕಮಿಟಿಯವರು ಕೆಲವು ಮಾತುಗಳಾಡಿದ ತರುವಾಯ ಲೆಪ್ಟನೆಂಟ ಮಲ್ಯರವರು ವಿದ್ಯೆಯೇ ಸಕಲ ಉನ್ನತಿಗೂ ಕಾರಣವಾಗಿರುವದರಿಂದ ಇಲ್ಲಿಯ ಗೌಡಸಾರಸ್ವತರಲ್ಲಿ ಪ್ರತಿ ಒಬ್ಬರು ಪ್ರಾಥಮಿಕ ವಿದ್ಯಾಭ್ಯಾಸವನ್ನಾದರೂ ಹೊಂದುವಂತೆ ಈ ಸಂಸ್ಥೆಯವರು ಪ್ರಯತ್ನಿಸಬೇಕೆಂದೂ ಹೀಗೆ ಪ್ರಯತ್ನಿಸುವದರಿಂದ ಇತರ ಸಮುದಾಯದವರಿಗೂ ಆ ರೀತಿ ಪ್ರಯತ್ನಿಸುವ ಆತುರ ಉಂಟಾಗಿ ಊರಲ್ಲೆಲ್ಲಾ ವಿದ್ಯಾಪ್ರಸಾರವು ಆಗುವದೆಂದು ಪ್ರಸ್ತಾಪಿಸಿ ಈ ಸಂಸ್ಥೆಯವರು ಅನುಸರಿಸಬೇಕಾದ ಕೆಲವು ಮಾರ್ಗಗಳನ್ನು ಸೂಚಿಸಿ ಸಂಸ್ಥೆಗೆ ಶ್ರೇಯಸ್ಸನ್ನೂ ಅಭಿವೃದ್ಧಿಯನ್ನೂ ಚಿಂತಿಸಿ ತಮ್ಮ ಅರ್ಥವಯುಕ್ತವಾದ ಭಾಷಣವನ್ನು ಮುಗಿಸಿದರು. ಅನಂತರ ಸಂಸ್ಥೆಯ ಪ್ರೆಸಿಡೆಂಟರು ಲೆಪ್ಟನೆಂಟ ಮಲ್ಯರವರು ಸಂಸ್ಥೆಗೆ ದಾನಮಾಡಿದ ರೂಪಾಯಿ ೧೦ನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿದ್ದೇವೆಂದೂ ಈ ಬಡಸಂಸ್ಥೆಯ ಆಮಂತ್ರಣವನ್ನು ಸ್ವೀಕರಿಸಿ, ಇಲ್ಲಿಗೆ ದಯಮಾಡಿ ಸಂಸ್ಥೆಗೆ ಬುದ್ಧಿವಾದವನ್ನೂ ಅಮೂಲ್ಯವಾದ ಸೂಚನೆಗಳನ್ನೂ ನಿರೂಪಿಸಿದಕ್ಕಾಗಿ ಸಂಸ್ಥೆಯ ಪರವಾಗಿ ಮಲ್ಯರವರಿಗೆ ವಂದನೆಗಳನ್ನು ಸಮರ್ಪಿಸಿ ಅಂದಿನ ಸಮಾರಂಭವನ್ನು ಮುಗಿಸಿದರು.

ಸ್ವಕೀಯ ರಾಜ್ಯಭಾರ.

ಈ ವಿಷಯವನ್ನು ಚರ್ಚಿಸುವುದಕ್ಕೆ ಮ್ಯುನಿಸಿಪಾಲಿಟಿಗಳ ಕಡೆಯಿಂದ ಕ್ಷೇಮ ಪ್ರತಿನಿಧಿಗಳು ಪೂನೆಯಲ್ಲಿ ಸಭೆಸೇರಿ ನಡೆದ ಪ್ರೊಸೀಡಿಂಗ್ಸುಗಳ ಉತ್ತಾರು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದೆ. ಮದ್ರಾಸಿನಲ್ಲಿ ಕೆಲವು ತಿಂಗಳ ಹಿಂದೆ ಈ ವಿಷಯವನ್ನೆತ್ತಿ ಒಂದು ಪರಿಷತ್ತು ಕೂಡಿತು. ಎಲ್ಲಾ ಕಡೆಗಳಲ್ಲಿ ವರ್ತಮಾನ ಪತ್ರಮುಖೇನ, ಅಥವಾ ಪರಿಷತ್ತುಗಳ ಮೂಲಕ, ಅಥವಾ ಕೊಂಗ್ರೆಸ್ ಸಭೆಗಳಲ್ಲಿ, ಅಥವಾ ಸಂಸ್ಥಾನಿಕ ಮತ್ತು ಜಿಲ್ಲೆಗಳ ರಾಜಕೀಯ ಪರಿಷತ್ತುಗಳಲ್ಲಿ ವಿವಿಧರೂಪವಾಗಿ ಚರ್ಚೆಗಳು ಎದ್ದಿವೆ. ಅಲ್ಲಲ್ಲಿ ಈ ವಿಷಯದಲ್ಲಿ ತಾವು ಸಂಪೂರ್ಣ ಸಹಕಾರಿಗಳಾಗಿರುವೆವೆಂದೂ, ತಕ್ಕಕಾಲದಲ್ಲಿ ಬೇಕುಬೇಕಾದ ಬದಲಾವಣೆಗಳನ್ನು ಮಾಡಿ ಪ್ರಜಾಜನಗಳಿಗೆ ಸ್ವಕೀಯರಾಜ್ಯಭಾರ ಶಿಕ್ಷಣವನ್ನು ಕೊಟ್ಟು ಅದು ವೃದ್ಧಿಯಾದ ಹಾಗೆ ಹೆಚ್ಚಿನ ಅಧಿಕಾರ ಸ್ವತಂತ್ರಗಳನ್ನು ಕೊಡಲಿಕ್ಕಿದ್ದೇವೆಂದು ಸರಕಾರದ ಪ್ರತಿನಿಧಿಗಳು ಹೇಳುತ್ತಲೇ ಇದ್ದಾರೆ. ಇದರಲ್ಲಿ 'ತಕ್ಕಕಾಲ' ಎಂಬುದರಲ್ಲಿ ಮಾತ್ರ ವಿಶೇಷ ಚರ್ಚೆ ಇದೆ. ಸರಕಾರದ ದೃಷ್ಟಿಯಲ್ಲಿ ಸ್ವಕೀಯ ರಾಜ್ಯಭಾರದಲ್ಲಿ ಪೂರ್ಣ ಸ್ವತಂತ್ರವನ್ನು ಪ್ರಜಾಜನರಿಗೆ ಒಪ್ಪಿಸಿಕೊಡುವುದಕ್ಕೆ ಪ್ರಜಾಜನಗಳ ಶಿಕ್ಷಣ ಸಾಕಷ್ಟು ಇಲ್ಲ; ಜಾತಿಭೇದವು, ವಿದ್ಯಾಪ್ರಚಾರದ ಸಂಕೋಚತ್ವ, ಮುಂತಾದ ಹಲವು ಅಭ್ಯಂತರಗಳು ಪರ್ವತಪ್ರಾಯವಾಗಿ ನಿಂತಿವೆ. ಪ್ರಜಾದೃಷ್ಟಿಯಲ್ಲಿ "ಅಧಿಕಾರವನ್ನು ಜನರಿಗೆ ಒಪ್ಪಿಸದ ವಿನಾ ಅವರ ಸಾಮರ್ಥ್ಯವನ್ನು ಪರೀಕ್ಷಿಸುವ ಬಗೆ ಹೇಗೆ" ಎಂದು ಕಾಣುತ್ತದೆ. ಸಣ್ಣ ಮಗುವಿಗೆ ಲಡ್ಡನ್ನು ತೋರಿಸಿ "ಇಗೊ ಹಾರು, ಹಾರಿದರೆ ಕೈ ಎಟುಕುವುದು." ಎಂದು ಹೇಳಿ ಸರಕಾರದವರು ಮಾಯೆಗೊಳಿಸುತ್ತಾರೆಂಬುದು ಕೆಲವರ ಅಭಿಪ್ರಾಯ. ಈ ಭಿನ್ನಾಭಿಪ್ರಾಯಗಳು ಪೂರ್ಣ ಸತ್ಯವೂ ಅಲ್ಲ, ಪೂರ್ಣ ಅಸತ್ಯವೂ ಅಲ್ಲ. ಮಗು ನಡೆಯಲಿಕ್ಕೆ ಕಲಿತಮೇಲೆ ಅದು ನಡೆಯಬಹುದು, ಅದರ ಮುಂಚೆ ಪ್ರಯತ್ನಿಸಿದರೆ ಮಗುವಿಗೆ ಕೇಡು ಬಂದೀತು ಎಂತ ಹೇಳುವುದೂ, ಅಥವಾ 'ತೊದಲು ನುಡಿಯ ಜೊಲ್ಲುಗುವ' ಮಗುವಿಗೆ ಕಾಳಿದಾಸನ ಕವಿತೆಯ ಅಲಂಕಾರವನ್ನು ವಿವರಿಸುವುದೂ ವಿಕೃತಕಾರ ಅಸಂಭವ್ಯವು. ಅದೆ ರೀತಿಯಲ್ಲಿ ಸ್ವಕೀಯ ರಾಜ್ಯಭಾರದ ವಾಸನೆಯು ಜನಸಾಮಾನ್ಯರಿಗೆ ಹತ್ತಿ ಇಲ್ಲವಾದರೆ ಅವರಿಗೆ ಸ್ವಕೀಯ ರಾಜ್ಯಭಾರದಲ್ಲಿ ಪೂರ್ಣ ಸ್ವತಂತ್ರ ಕೊಡುವುದು ಆಗದಹೋಗದ ಮಾತು. ಈಗ ನಿಜವಾಗಿಯೂ ಜನಸಾಮಾನ್ಯರಿಗೆ ಸ್ವಕೀಯ ರಾಜ್ಯಭಾರದ ವಿಷಯವಾಗಿ ಪೂರ್ವವಾಸನೆ ಇಲ್ಲವೆಂತಾದರೆ, ಕಳೆದ ೩೦ ವರ್ಷಗಳಲ್ಲಿ ಅಂದರೆ ಮಾರ್ಕ್ವಿಸ್ ಒಫ್ ರಿಪನ್ ಇವರು ಹಿಂದುಸ್ಥಾನದಲ್ಲಿ ಈ ಸ್ವಕೀಯ ರಾಜ್ಯಭಾರದ ಬೀಜವನ್ನು ಹೊಸ ರೀತಿಯಲ್ಲಿ ಬಿತ್ತಿದಂದಿನಿಂದ ಅದರಲ್ಲಿ ಒಳ್ಳೆ ಫಸಲಿನ ಬದಲಾಗಿ ಕಳೆಗಳೆ ಬಂದಿದ್ದರೆ ಈ ಪ್ರಯತ್ನವೆ ನಿಷ್ಫಲವೆನ್ನಬೇಕು. ಬೆಳೆಯು ಹುಲುಸಾಗಿ ಬರುವುದಕ್ಕೆ ಒಳ್ಳೆಯ ಮಳೆ, ಸಕಾಲಿಕ ಮಳೆ, ರೈತನ ಆರೈಕೆ ಇವು ಸರಿಯಾಗಿರಬೇಕು. ಬೆಳೆಯ ಬದಲಾಗಿ ಕಳೆಗಳೆ ಎದ್ದರೆ ರೈತನ ಆರೈಕೆ ಸಾಲದು ಎನ್ನುವೆವು. ಬೆಳೆಯು ಹುಲುಸಾಗಿ ಏಳುವುದಕ್ಕೆ ಬದಲಾಗಿ [illegible] ಮಳೆಯ ದೋಷವೋ ರೈತನ ಆರೈಕೆಯ [illegible] ಎಂದು ನಿರ್ಣಯಿಸುವುದು ವಿವೇಕಿಯಾದವನ ಲಕ್ಷಣ.

ಸ್ವಕೀಯ ರಾಜ್ಯಭಾರದಲ್ಲಿ [illegible] ಕಳೆಗಳೆ ಬಂದಿಲ್ಲ [illegible] ಬೆಳೆಯು [illegible] ಸಾಗಿಬಂದ [illegible] ಸರಕಾರದ [illegible] ಮುಂಚೆ [illegible] ಇಲ್ಲದೆ ಧಾರಾಳವಾಗಿ [illegible] [illegible]

ಅನುಕ್ರಮಣಿಕೆ.

ಅಗ್ರಲೇಖ— ಪಾನು.
೧ ಭಾವಿ ಸುಧಾರಣೆಗಳ ಭಾವಚಿತ್ರ . . . ೪
ಸ್ಫುಟವಿಚಾರಗಳು:—
೧ ಬಂಗಾಲ ಸರಕಾರವು ಹುಕುಮನ್ನು ಹಿಂದೆ ತಕ್ಕೊಂಡಿತು . . . ೪
೨ ಮಿ| ಬೆಜಿಬಾಸರ ಮತ . . . ೪-೫
೩ ಪ್ರತಿಬದ್ಧರ ನಿರಾಕರಣ . . . ,,
೪ ಸರ್ ಆ. ಠಾಗೋರರ ಭಾಷಣ . . . ,,
೫ ಮೋರಿ ಚಕ್ರವರ್ತಿನಿಯವರ ಸಹಸಂತಾಪ . . . ,,
೬ ಎಕ್ಸ್‌ರೆಸ್ಪಾಜ್ ಪುಸ್ತಕಗಳ ರೂಢಿ . . . ,,
ಶ್ಲೋಕ— ಮಂಗಳಾಂಬು
ವರ್ತಮಾನ ಸಂಗ್ರಹಗಳು:—
೧ ಯುರೋಪದ ಮಹಾಯುದ್ಧ . . . ೫
೨ ವಿದೇಶ ವೃತ್ತಾಂತ . . . ,,
೩ ಉತ್ತರ ಹಿಂದುಸ್ಥಾನ . . . ,,
೪ ದಕ್ಷಿಣ ಹಿಂದುಸ್ಥಾನ . . . ,,
೫ ಬಾತಮಿಗಳು — ಮುಲ್ಕಿ . . . ,,
೬ ಲೇಖಗಳು — ಸ್ವಕೀಯ ರಾಜ್ಯಭಾರ . . . ೫-೬
೭ ಪತ್ರವ್ಯವಹಾರ — ರಾ| ಕೆ. ಕೃಷ್ಣರಾವ್, ಸೌರಯುಗಿಹಾರತರ ವಿಷಯ, ಅಧಿಕಮಾಸದ ನಿರ್ಣಯ . . . ,,

ಸ್ವದೇಶಾಭಿಮಾನಿ.

ಶಕ ೧೮೪೦ ಶ್ರಾವಣ ಬ. ೩೦ ಶುಕ್ರವಾರ.

ಭಾವಿ ಸುಧಾರಣೆಗಳ ಭಾವಚಿತ್ರ.

ಯುದ್ಧವು ಮುಗಿದನಂತರ ಹಿಂದುಸ್ಥಾನದ ಪಾಲಿಗೆ ಯಾವ ಸುಧಾರಣೆಗಳು ಬರುವವು ಎಂಬುದನ್ನು ಹಿಂದೀ ದೇಶಭಕ್ತರು ಬಹು ಆತುರದಿಂದ ನಿರೀಕ್ಷಿಸಿಕೊಂಡು ಕುಳಿತಿರುವರು. ದೇಶಭಕ್ತರು ಮತ್ತು ಅವರ ಸಂಸ್ಥೆಗಳು ಇಂಥಿಂಥ ಸುಧಾರಣೆಗಳು ಹಿಂದುಸ್ಥಾನಕ್ಕೆ ಸಿಗಬೇಕು ಎಂದು ಹೇಳಿದರೂ ಅವೆಲ್ಲ ಒಂದೆ ಗಂಟಿನಿಂದ ಸಿಗಲಿಕ್ಕಿಲ್ಲ, ಎಂಬ ಮಾತಾಗಲಿ ಪುನಃ ಲೊರ್ಡ ರೊನಾಲ್ಡಶೆಯಂಥ ಅಧಿಕಾರಿಗಳು ಹಿಂದುಸ್ಥಾನಕ್ಕೆ ಯುದ್ಧದ ಮರುದಿನವೆ ಸುಧಾರಣೆ ಅಪೇಕ್ಷಿಸುವುದು ತಪ್ಪು ಎಂದು ವಾದಿಸಿದರೂ ಯುದ್ಧದ ಮರುದಿನ ಕೊಂಚವಾದರೂ ಸಿಗಲಿಕ್ಕಿದೆ ಎಂಬೀ ವಿಧಾನವಾಗಲಿ ನಿಜವಾದರೂ ಜವಾಬದಾರರಾದ ಅಧಿಕಾರಿಯ ಬಾಯಿಯಿಂದ ಯಾವ ಭಾವಿ ಸುಧಾರಣೆಗಳು ಬರುತ್ತವೆ, ಇದನ್ನು ಹಿಂದೀಜನತೆಯು ಮೊನ್ನೆಯ ವರೆಗೆ ಚಾತಕದಂತೆ ನಿರೀಕ್ಷಿಸಿಕೊಂಡಿತ್ತು. ಆದರೆ ಖೇದದ ಮಾತೇನೆಂದರೆ: ಹಿಂದೀ ಸುಧಾರಣೆಯ ಮೋಡವು ಮಳೆಯನ್ನು ಸುರಿಸುವುದರೊಳಗಾಗಿಯೆ ಲೊರ್ಡ ಇಸ್ಲಿಂಗ್ಟನ್ ದೊರೆಗಳ ಮಾತಿನ ಗಾಳಿಯಿಂದ ಹಾರಿಯೆ ಹೋಯಿತು! ಎಂದ ಮೇಲೆ ಹಿಂದೀ ಜನತೆಯ ಚಾತಕದ ಬಾಯಿಯಲ್ಲಿ ಹನಿಗಳು ಉದುರುವುದು ಎಲ್ಲಿಂದ? ಮುಖ್ಯ ನೀರಿನ ಮೋಡವು ಕರಗಿ ಹೋದಮೇಲೆ ಅಲ್ಪಸ್ವಲ್ಪ ತುಂತುರೆಗಳನ್ನು ವಿರಳವಾಗಿ ಉದುರಿಸಿದರೆ ಅದು ಮಳೆಯ ಕಾರ್ಯವನ್ನು ಮಾಡಬಲ್ಲದೊ? ಇದೆ ನ್ಯಾಯವು ಲೊರ್ಡ ಇಸ್ಲಿಂಗ್ಟನ್ ದೊರೆಗಳ ಮೊನ್ನೆಯ ಭಾಷಣಕ್ಕೆ ಅನ್ವಿತವಾಗುವುದು.

ಲೊರ್ಡ ಇಸ್ಲಿಂಗ್ಟನ್ ಇವರ ಪರಿಚಯವನ್ನು ನಮ್ಮ ವಾಚಕರಿಗೆ ಮಾಡಿಕೊಡುವುದೆಂದರೆ, ಅವರು ಹಿಂದುಸ್ಥಾನದ ಅಂಡರ್ ಸೆಕ್ರೆಟರಿಗಳು. ಮುಖ್ಯ ಸೆಕ್ರೆಟರಿಗಳು ಮಿ. ಮೊಂಟೆಗ್ಯೂ ಇವರು. ಮತ್ತು ಅವರ ಕೈಕೆಳಗೆ ಇಸ್ಲಿಂಗ್ಟನರು. ಮಿ. ಮೊಂಟೆಗ್ಯೂಗಳಂತೆಯೆ ಈ ಸಹಕಾರಿ ಮಂತ್ರಿಗಳು ಸಹ ಉದಾರತತ್ವಗಳನ್ನೆ ಪುರಸ್ಕರಿಸುತ್ತಿದ್ದರು. ಕೆಲವು ಸಮಯದ ಹಿಂದೆ ಒಂದು ಪ್ರಸಂಗದಲ್ಲಿ "ಹಿಂದುಸ್ಥಾನದೊಳಗಿನ ರಾಜ್ಯಪದ್ಧತಿಯ ಪರ್ಯಾವಸಾನವು ಪ್ರಜಾಹಿತದ ರಾಜ್ಯಶಾಸನ ಕ್ರಮದಲ್ಲಿಯೆ ಆಗುವುದು. ಯಾವ ಶಾಸನಕ್ರಮದಿಂದ ಹಿಂದುಸ್ಥಾನವು ಆದಷ್ಟು ಬೇಗನೆ ಸ್ವರಾಜ್ಯಕ್ಷಮವಾಗುವುದೊ ಅಂಥ ಸುಧಾರಣೆಯನ್ನೆ ಹಿಂದುಸ್ಥಾನಕ್ಕೆ ಕೊಡಬೇಕಾಗಿದೆ" ಎಂದು ಲೊರ್ಡ ಇಸ್ಲಿಂಗ್ಟನರು ಅಡಿತೋರಿಸಿದ್ದರು. ಪರಂತು ಈಗ ರೊಯ್ಟರನು ತಂತಿವರ್ತಮಾನದ ಮೂಲಕ ತಿಳಿಸುವಂತೆ ವಿದ್ಯಾರ್ಥಿಗಳ ಮುಂದೆ ಇವರು ದಿಕ್ಕು ತೋರಿಸಿದ ಮುಂದಿನ ಹಿಂದೀ ಸುಧಾರಣೆಗಳ ಜಾಲದಲ್ಲಿ ಇವರ ಮೊದಲಿನ ಔದಾರ್ಯವು ಸುತರಾಂ ಕಂಡುಬರುವುದಿಲ್ಲ. ಮಿ. ಮೊಂಟೆಗ್ಯೂಗಳೆ ಮೊದಲು ಉದಾರವಾದಿಗಳು, ಅಂಥವರಿಗೆ ಸಿಕ್ಕಿದ ಇಸ್ಲಿಂಗ್ಟನರು ಇನ್ನೂ ಉದಾರವಾದಿಗಳು. ಮಂತ್ರಿ, ಸಹಕಾರಿ ಮಂತ್ರಿ, ಎಂದರೆ ಈ ರಥಸಾರಥಿಗಳ ಜೊತೆಯಿಂದ ಹಿಂದುಸ್ಥಾನದ ಸುಧಾರಣಾರಥವು ಪರಿಷ್ಕೃತವಾಗಿ ಬಹು ವೇಗದಿಂದ ನಡೆದೀತು, ಎಂದು ಹಿಂದಿಗಳೆಲ್ಲರು ಭಾವಿಸಿದ್ದರು. ಪರಂತು ರಥಿಸಾರಥಿಗಳಾದವರೆ ರಥಕ್ಕೆ ಕಟ್ಟಿದ ಕುದುರೆಗಳಾದುದರಿಂದ 'ರಥದ ಗತಿಯು ಸುಧಾರಣಾಮಾರ್ಗದಲ್ಲಿ ಕುಂಠಿತವಾಗಿದೆ. ವಸ್ತುತಃ ಈ ಉಭಯತರು ಇನ್ನೂ ಉದಾರವಾದಿಗಳಾಗಿಯೆ ಇರುವರು, ಮತ್ತು ಹಾಗೆಯೆ ಇದ್ದಾರೆ. ಆದರೆ ಹಿಂದುಸ್ಥಾನಕ್ಕೆ ಈ ಹೊತ್ತು ಬೇಕಾದವರು ಬರೆ ಉದಾರವಾದಿಗಳಲ್ಲ, ಉದಾರಕಾರಿಗಳು ಕಡಿಮೆವಕ್ಷಕ್ಕೆ ಉದಾರದಾಯಿಗಳಾದರೂ ಚಿಂತೆ ಇಲ್ಲ. ಲೊರ್ಡ ಇಸ್ಲಿಂಗ್ಟನರು ರೂಪಿಸಿರುವ ಸುಧಾರಣೆಗಳ ಭಾವಚಿತ್ರವನ್ನು ನೋಡಿದ್ದಾದರೆ ಅವರು ಬರೆ ಉದಾರವಾದಿಗಳೆ ಎಂದು ಕಂಡುಬರುತ್ತದೆ. ಅವರು ಸೂಚಿಸಿರುವ ಸುಧಾರಣೆಗಳ ಸಾರಾಂಶವನ್ನು ಕೆಳಗೆ ಮೊದಲು ಕೊಡೋಣ.

ಸುಧಾರಣೆಗಳ ಚಿತ್ರವನ್ನು ಬಿಡಿಸುವುದಕ್ಕಿಂತ ಮುಂಚೆ ಹಿಂದುಸ್ಥಾನ ಸರಕಾರದಲ್ಲಿ ಏಕೀಕೃತವಾದ ಅಧಿಕಾರಗಳನ್ನು ವಿಭಾಗಿಸಿ ಜನತೆಯ ಕೈಯಲ್ಲಿ ಕೊಡಲು ಸಾವಕಾಶಮಾಡುವುದು ಸರಿಯಲ್ಲ ಎಂದು ಪ್ರಸ್ತಾವನೆಮಾಡಿ ಮುಂದೆ ಸಹಕಾರಿ ಮಂತ್ರಿಗಳಾದ ಈ ಇಸ್ಲಿಂಗ್ಟನರು ಹೇಳುತ್ತಾರೆ: "ವರಿಷ್ಠ ಕೌನ್ಸಿಲಿನ ೧೯ ಜನ ಸಭಾಸದರು ಸೂಚಿಸಿರುವ ಸುಧಾರಣೆಗಳನ್ನು ಜಾರಿಗೆ ತರುವುದರಿಂದ ಸರಕಾರದ ಟೀಕಾಕಾರರ ಹೆಚ್ಚಾಗುವದಲ್ಲದೆ ನಿಜವಾದ ಜವಾಬದಾರತನವು ಜನತೆಯ ಮೇಲೆ ಬರಲಿಕ್ಕಿಲ್ಲ. ಈ ಜವಾಬದಾರತನವಿಲ್ಲದೆ ಬರೆ ಟೀಕೆಮಾಡುವ ಅಧಿಕಾರವನ್ನು ಹೊಂದಿ ಫಲವೇನು? ಮುನ್ಸಿಪಾಲಿಟಿಗಳಿಗೆ ಸ್ಥಾನಿಕ ಸಂಗತಿಗಳಲ್ಲಿ ಆಡಳಿತೆಯನ್ನು ನಡಿಸುವಂತೆ ಮರ್ಯಾದಿತ ಅಧಿಕಾರದಲ್ಲಿ ಕರವನ್ನು ಕಲ್ಪಿಸುವ ಹಕ್ಕು ಕೊಡುವುದು ಯುಕ್ತವಾಗಿದೆ. ಇಲಾಖೆ ಮತ್ತು ಪ್ರಾಂತಿಕಸರಕಾರಗಳ ಅಧಿಕಾರವನ್ನು ಕುರಿತು ವಿಚಾರಮಾಡುವುದೆಂದರೆ, ಅವು ತಮ್ಮ ವ್ಯವಹಾರಗಳಲ್ಲಿ — ಅಧಿಕಾರಿ ಮಂಡಲದಲ್ಲಿ ಸಂಲಗ್ನವಾದ ಸಾರ್ವಜನಿಕಹಿತದ ಕಾರಭಾರಗಳನ್ನು ಸರಕಾರದೊಡನೆ ಸಹಕಾರ್ಯವನ್ನು ಮಾಡುವ ಲೋಕಪ್ರತಿನಿಧಿಗಳ ಕೈಯಲ್ಲಿ ಒಪ್ಪಿಸತಕ್ಕದ್ದು. ಗವರ್ನರನು ಇಲ್ಲ, ಕಾರ್ಯನಿರ್ವಾಹಕ ಮಂತ್ರಿಗಳು ನಾಲ್ಕು. ಇವರಲ್ಲಿ ಇಬ್ಬರು ಯುರೋಪಿಯನರು ಮತ್ತು ಇಬ್ಬರು ಹಿಂದಿಗಳು. ಈ ನಮೂನೆಯ ಪ್ರಾಂತಿಕಸರಕಾರದ ಪುನ್ಹರಚನೆ ಇರುವುದು ಯುಕ್ತವು. (ಪಿಲಾಯತಿಯಲ್ಲಿರುವ) ಇಂಡಿಯಾ ಆಫೀಸಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದಾದರೆ ಹಿಂದುಸ್ಥಾನದ (ಪ್ರಾಂತಿಕ ಮೊದಲಾದ) ಸರಕಾರಗಳೊಡನೆ ನಡೆಯುವ ಇಂಡಿಯಾ ಆಫೀಸಿನ ವ್ಯವಹಾರಗಳಲ್ಲಿ ಕೆಲವು ಆನುಷಂಗಿಕ ಬದಲಾವಣೆಗಳನ್ನು ಮಾಡಬಹುದು. ಹಿಂದುಸ್ಥಾನದ ರಾಜ್ಯಪದ್ಧತಿಯು ಹೆಚ್ಚುಕಡಿಮೆ ಆಸ್ಟ್ರೇಲಿಯದೊಳಗಿನ ಪದ್ಧತಿಯಂತೆ ಆಗತಕ್ಕದ್ದು." ಈ ರೀತಿಯಿಂದ ಕೆಲವು ಸಂದಿಗ್ಧ ಮತ್ತು ಅಸ್ಪಷ್ಟ ಶಬ್ದಗಳನ್ನು ಉಚ್ಚರಿಸಿ ಉಪಮಂತ್ರಿಗಳು ಮುಂದರಿಸುವರು: "ಹಿಂದುಸ್ಥಾನದ ಭವಿಷತ್ಕಾಲವು ಆಂಗ್ಲಸಾಮ್ರಾಜ್ಯದ ಅಂತಿಮಧ್ಯೇಯದೊಡನೆ ಸಂವಾದಿಯಾಗಿರಬೇಕು. ಎಂದರೆ ಆಂಗ್ಲಸಾಮ್ರಾಜ್ಯದ ಧ್ಯೇಯಕ್ಕೆ ಒಪ್ಪುವಂತಿರಬೇಕು. ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಹೊಂದುವ ಹಿಂದುಸ್ಥಾನದ ಮಹತ್ವಾಕಾಂಕ್ಷೆಯು ಒಂದೆ ಒಂದು ದಿವಸದಿಂದ ಫಲಿಸತಕ್ಕದ್ದಲ್ಲ. ಅಥವಾ ಪಾರ್ಲಿಮೆಂಟಿನಲ್ಲಿ ಸ್ವರಾಜ್ಯವಿಷಯದ ಕಾಯಿದೆಯನ್ನು ಪಾಸುಮಾಡುವುದರಿಂದಲೂ ಸಾಧ್ಯವಾಗತಕ್ಕದ್ದಲ್ಲ! ಈ ಸ್ವರಾಜ್ಯದ ಪ್ರವಾಸವು ದೀರ್ಘವೂ ದುಸ್ತರವೂ ಆದೀತು! ಮತ್ತು ಈ ಮಾರ್ಗದಲ್ಲಿ ತಪ್ಪಿಬೀಳುವ ಹೆಜ್ಜೆಗಳನ್ನು ಅಲ್ಲಗಳೆಯತಕ್ಕದ್ದೂ ಇಲ್ಲ." ಭಾರತ ಉಪಮಂತ್ರಿಗಳು ಈ ರೀತಿಯಿಂದ ಇಕ್ಕಟ್ಟನ್ನು ಎತ್ತಿಹಿಡಿದಂತೆ ಮಾಡಿ ಹಿಂದುಸ್ಥಾನಕ್ಕೆ ಮಾರ್ಗವನ್ನು ತೋರಿಸುವ ಕಂದೀಲನ್ನು ಕೇವಲ ಬ್ರಿಟಿಷ್ ಜನತೆಯೆ ಹಿಡಿಕೊಂಡಿದೆ ಎಂದು ಸ್ಪಷ್ಟ ರೀತಿಯನ್ನು ತೋರಿಸಿದ್ದಾರೆ!

ಅಧಿಕಾರ ವಿಭಾಗವನ್ನು ಕುರಿತು ಪ್ರಸ್ತಾಪಿಸುವಾಗ ಲೊರ್ಡ ಇಸ್ಲಿಂಗ್ಟನರು ಸೂಚಿಸಿದ್ದೇನೆಂದರೆ: "ಪೋಲಿಸ, ಶಿಕ್ಷಣ, ಜೇಸಾಯ, ಜಂಗಲಖಾತೆ, ಪಬ್ಲಿಕ್‌ವರ್ಕ್ಸ ಮತ್ತು ಕೈಗಾರಿಕೆ ಈ ವಿಷಯಗಳ ಸ್ವಾತಂತ್ರ್ಯವನ್ನು ಪ್ರಾಂತಿಕ ಸರಕಾರಗಳ ಕೈಯಲ್ಲಿ ಸಂಪೂರ್ಣವಾಗಿ ಒಪ್ಪಿಸುವುದು. ಆ ಪ್ರಾಂತಿಕ ಸರಕಾರಗಳು ತಂತಮ್ಮ ಅನುಕೂಲತೆಗನುಸಾರವಾಗಿ ಕೆಲಸಮಾಡುವಂತೆ ಅವುಗಳಿಗೆ ಸ್ವಾತಂತ್ರ್ಯವಿರಬೇಕು. ಕಾಯಿದೆ ಕೌನ್ಸಿಲಿನ ಸರಕಾರದ ಆಡಳಿತೆಯಲ್ಲಿ ಬದಲಾವಣೆಯನ್ನು ಮಾಡಿದರೆ ಅದರಿಂದುಂಟಾಗುವ ಪರಿಣಾಮಗಳಿಗೆ ಕಾಯಿದೆ ಕೌನ್ಸಿಲು ಜವಾಬದಾರರಾಗಿರಬೇಕು. ಇದೆ ಪ್ರಾತಿನಿಧಿಕ ಸ್ವರಾಜ್ಯದ ಮುಖ್ಯ ಸಾರವು. ಇಂಥ ಪ್ರಾತಿನಿಧಿಕ ಪದ್ಧತಿಯನ್ನು ಹಿಂದುಸ್ಥಾನದಲ್ಲಿ ಜಾರಿಗೆ ತರುವುದಕ್ಕೆ ತಕ್ಕುದಾದ ಚುನಾವಣೆಯ ಪದ್ಧತಿಯು ಮುಖ್ಯವಾದುದು. ಈ ಕ್ರಮವು ನಾಗರಿಕಾಧಿಕಾರದಂತೆ ನಡೆಯುವುದು ಅಗತ್ಯವಾದರೂ ಸಾಧ್ಯವಿದ್ದಲ್ಲಿ ಚುನಾವಣೆಯನ್ನು ನೇರವಾಗಿಯೆ ಮಾಡಬಹುದು. ಸ್ಥಾನಿಕ ಸರಕಾರಗಳಿಗೆ ಕಾರಭಾರದ ವಿಷಯದಲ್ಲಿ ಸಾಕಷ್ಟು ಅಧಿಕಾರವನ್ನು ಕೊಟ್ಟು ಆ ಸ್ಥಾನಿಕ ಸರಕಾರಗಳಿಗೆ ಪ್ರಕೃತದಲ್ಲಿರುವುದಕ್ಕಿಂತಲೂ ಹೆಚ್ಚಿನ ಆರ್ಥಸ್ವಾತಂತ್ರ್ಯವನ್ನು ಬಿಟ್ಟುಕೊಡುವುದು. ಪ್ರಾಂತಿಕ ಆಡಳಿತೆಯಲ್ಲಿ ಅಂಥ ಪ್ರಸಂಗವಿದ್ದಲ್ಲಿ ವರಿಷ್ಠರು ತನಖಿಯನ್ನು ನಡಿಸಬಹುದು." ನಮ್ಮ ಉಪಮಂತ್ರಿಗಳು ಅಧಿಕಾರ ವಿಭಾಗವನ್ನು ಕುರಿತು ಈ ಪ್ರಕಾರ ಚಿತ್ರವನ್ನು ಬಿಡಿಸಿದ್ದರು. ತಥಾಪಿ ತಮ್ಮ ಇಂಡಿಯಾ ಆಫೀಸಿನ ಮುಂದಿನ ಭವಿತವ್ಯತೆಯ ವಿಷಯವನ್ನು ಉಪಮಂತ್ರಿಗಳು ಸಹಜವಾಗಿಯೆ ಚಾರಿಸಿದಿಟ್ಟರೆಂದು ತಿಳಿದುಬರುತ್ತದೆ. ಈ ಸುಧಾರಣೆಗಳನ್ನು ವಿದ್ಯಾರ್ಥಿಗಳ ಮುಂದಿಡುವಾಗ ಉಪಮಂತ್ರಿಗಳು ಮಧ್ಯಮಧ್ಯದಲ್ಲಿ ಅದಷ್ಟು ಜಾಗ್ರತೆಯನ್ನು ಹುಟ್ಟಿಸುತ್ತಲೆ ಇದ್ದರು. ಈ ಸುಧಾರಣೆಗಳನ್ನಾದರೂ ಒಮ್ಮಿಗೆನೆ ಪ್ರಾರಂಭಿಸುವುದಲ್ಲ, ಮೆಲ್ಲಮೆಲ್ಲನೆ, ಬಹು ಜಾಗರೂಕತೆಯಿಂದ ಕೈಕೊಂಡರೂ ಹಿಂದುಸ್ಥಾನ ಸರಕಾರವು ಯಾವಾಗಲೂ ಸಾಮ್ರಾಜ್ಯ ಸರಕಾರಕ್ಕೆ ಅಧೀನವಾಗಿಯೆ ಇರಬೇಕು. ಸೈನ್ಯ, ಪರದೇಶಗಳೊಡನೆ ಸಂಬಂಧ ಹಾಗು ಬೇರೆ ವ್ಯವಹಾರ, ಕಸ್ಟಮ್ ಮತ್ತು ಚಲಾವಣೆಯ ನಾಣ್ಯ ಈ ವಿಷಯದಲ್ಲಿ ಹಿಂದುಸ್ಥಾನಕ್ಕೆ ಅಧಿಕಾರವಿರುವುದು ಅಸಾಧ್ಯವು. ವರಿಷ್ಠಕೌನ್ಸಿಲಿನ ಸುಧಾರಣೆಯು ಸಾಮಾನ್ಯತಃ ಪ್ರಾಂತಿಕ ಕೌನ್ಸಿಲುಗಳ ರಚನೆಯಂತೆ ಇರುವುದು. ಆದರೂ ಪ್ರಾಂತಿಕ ಕೌನ್ಸಿಲುಗಳಲ್ಲಿ ಯಶಸ್ವಿಯಾಗಿ ಕಂಡುಬಂದ ಮಾರ್ಪಾಟುಗಳನ್ನೆ ಕ್ರಮಕ್ರಮೇಣ ಮೇಲಿನ ಕೌನ್ಸಿಲಿನಲ್ಲಿ ಅಂಗೀಕರಿಸತಕ್ಕದ್ದು."

ದೇಶೀಯ ಸಂಸ್ಥಾನಗಳ ವಿಷಯವು ಸಹ ಉಪಮಂತ್ರಿಗಳ ಪ್ರಸ್ತಾಪದಲ್ಲಿ ಇತ್ತು. ದೇಶಿಸಂಸ್ಥಾನಗಳು ತಮ್ಮ ಅಂತರ್ಗತ ಕಾರಭಾರದಲ್ಲಿ ಸ್ವತಂತ್ರವಾಗಿಯೆ ಇರುವವುಗಳಾದರೂ ಬ್ರಿಟಿಷ್ ಸಿಂಹಾಸನದೊಡನೆ ಇರುವ ಸಂಬಂಧವನ್ನು ಕುಂದಿಸಲು ಯಾವ ಪ್ರಯತ್ನವನ್ನೂ ಆಚರಿಸೋಣಾಗಲಿಕ್ಕಿಲ್ಲ." ಇಷ್ಟನ್ನು ಹೇಳಿದ ಕೂಡಲೆ ಇಸ್ಲಿಂಗ್ಟನರು ತಿರುಗಿ "ಯಾವ ಸುಧಾರಣೆಗೂ ಅವಸರವು ಕೂಡದು" ಎಂಬ ಪಲ್ಲವಿಯನ್ನು ಪುನಃಪುನಃ ಹಾಡುತ್ತಲೆ ಇದ್ದಾರೆ. "ವಿದ್ಯಾಪ್ರಸಾರಣೆಯಾಗಬೇಕು, ಜನತೆಯಲ್ಲಿ ಅಧಿಕಾರ ವಿಭಜನವಾಗಬೇಕು, ಮುಂತಾದ ಶ್ರಾವ್ಯಮಾತುಗಳನ್ನು ಈ ಭಾಷಣದಲ್ಲಿ ಲೊರ್ಡ ಇಸ್ಲಿಂಗ್ಟನರು ಉಚ್ಚರಿಸುತ್ತಿದ್ದರೂ ಸರ್ವಸತ್ತಾಧಾರಿಯಾದ ಬ್ಯುರೊಕ್ರಸಿಯಲ್ಲಿ ಏಕೀಕೃತವಾದ ಅಧಿಕಾರಗಳನ್ನು ತಪ್ಪಿಸಿ ಆ ಬ್ಯುರೊಕ್ರಸಿಯನ್ನು ಲೋಕಮತದ ಕೈಗೆ ಕೊಡುವುದು ಅವರಿಗೆ ಅಸಾಧ್ಯಕೋಟಿಲೆ ತೋರುವುದು. ಇದು ಇವರ ಭಾಷಣದ ಮುಖ್ಯ ತತ್ವವು. ಇದನ್ನು ನೋಡುವಾಗ ೧೯ ಜನ ಲೋಕನಿಯುಕ್ತರು ಸೂಚಿಸಿದ ಸುಧಾರಣೆಗಳಲ್ಲಿ ತೋರಿಬರುವ ಲೋಕಮತದ ಮಾನ್ಯತೆಯ ಮೇಲೆ ಇವರು ಹರಿದ್ರಾಲೇಪನವನ್ನು ಮಾಡಿದ್ದಾರೆಂದಲೆ ಹೇಳಬೇಕಾಗುತ್ತದೆ. ಇವರು ಮೊನ್ನೆ ಭಾರತ ಉಪಮಂತ್ರಿತ್ವದ ಜವಾಬದಾರಿಯಿಂದ ಮಾತಾಡಲಿಲ್ಲ, ಇವರು ಹಿಂದೀರಾಷ್ಟ್ರದ ಮಿತ್ರತ್ವಕ್ಕನುಗುಣವಾಗಿಯೆ ಭಾಷಣಮಾಡಿದ್ದಾರೆ. ಇದು ನಿಜವಾದರೂ ಇವರೆ ಇಂಡಿಯಾ ಆಫೀಸನ್ನು ಅಲಂಕರಿಸುವರು ಎಂದಾದ ಮೇಲೆ ಇವರ ಭಾಷಣದೊಳಗಿನ ಬೇರೆಬೇರೆ ಸಂಗತಿಗಳನ್ನು ತಕ್ಕೊಂಡು ಒರಗಲ್ಲಿಗೆ ಹಚ್ಚಿ ಅದರ ಬಣ್ಣವನ್ನು ಪರೀಕ್ಷಿಸುವುದು ಅಗತ್ಯವು. ಆದರೆ ಈ ಹೊತ್ತು ಈ ಸಾರಾಂಶವೆ ಎಷ್ಟೊ ಸ್ಥಳವನ್ನು ಆಕ್ರಮಿಸಿದ್ದರಿಂದ ಅದರ ಪರೀಕ್ಷಣಕ್ಕೆ ಬರುವ ವಾರದ ವರೆಗೆ ನಿರೀಕ್ಷಿಸಬೇಕಾಗಿದೆ.

ಸ್ಫುಟವಿಚಾರಗಳು.

೧. ಮದ್ರಾಸಿನ ಪ್ರತಿಬಂಧಗಳನ್ನು ಪ್ರತಿಷೇಧಿಸುವುದಕ್ಕಾಗಿ ಕಲಕತ್ತೆಯಲ್ಲಿ ಎಲ್ಲ ನಾಗರಿಕರ ಸಭೆಯನ್ನು ಶೇರೀಫರು ಕರೆದಿದ್ದರು. ಆದರೆ ಬಂಗಾಲ ಸರಕಾರದ ಡಿಫೆನ್ಸ್ ಒಫ್ ಇಂಡಿಯಾ ಎಕ್ಟಿನ ಭೀಮಗದೆಯು ಅಡ್ಡಬಂದುದರಿಂದ ಅಲ್ಲಿಯ ಪ್ರಮುಖರಿಗೆ ಸಭೆಯನ್ನು ನಿಲ್ಲಿಸಬೇಕಾಯಿತು. ಈ ವರ್ತಮಾನವನ್ನು ನಾವು ವಾಚಕರಿಗೆ ಹಿಂದೆಯೆ ತಿಳಿಸಿದ್ದೇವೆ. ಸರಕಾರವು ಟೌನ್‌ಹೋಲ್ ಮೀಟಿಂಗನ್ನು ನಿಲ್ಲಿಸಿ ಜನರ ನಾಗರಿಕತತ್ವದ ಹಕ್ಕನ್ನು ಕಸಕೊಳ್ಳಲು ಯತ್ನಿಸುತ್ತಿದೆ. ಆದುದರಿಂದ ಬಂಗಾಲದ ಗವರ್ನರರಾದ ಲೋರ್ಡ ರೊನಾಲ್ಡಶೆಯವರ ಕಡೆಗೆ ಒಂದು ಡೆಪ್ಯುಟೇಶನನ್ನು ಕಳುಹಿಸಿ ನೋಡುವುದು. ಆ ಡೆಪ್ಯುಟೇಶನಿಗೆ ಸಮರ್ಪಕವಾದ ಸಮಾಧಾನವನ್ನು ಕೊಡದಿದ್ದರೆ ಮುಂದೆ ಪೆಸಿವ್ ರೆಸಿಸ್ಟನ್ಸಿನ ಎಂದರೆ ಅಶಸ್ತ್ರಪ್ರತಿಕಾರದ ಉಪಾಯವನ್ನು ಜನರು ಕೈಕೊಳ್ಳಬೇಕು ಎಂದು ನಿಶ್ಚಯಿಸಿ ನಾಮದಾರ ಸು. ಬೆನರ್ಜಿ ಮೊದಲಾದ ಬಂಗಾಲಿ ಪ್ರಮುಖರು ಒಂದು ಡೆಪ್ಯುಟೇಶನನ್ನು ಕಳುಹಿಸಿಕೊಟ್ಟರು. ಕಂಡ ಕಂಡ ಸಂಗತಿಗಳನ್ನು ನಾವು ಅಧಿಕಾರಿಗಳು, ಡಿಫೆನ್ಸ್ ಒಫ್ ಇಂಡಿಯಾ ಎಕ್ಟಿನ ಗದೆಯನ್ನು ತಕ್ಕೊಂಡು ಹೊರಟರೆ ಜನರು ಅಶಸ್ತ್ರ ಪ್ರತಿಕಾರದ ಅಥವಾ ಸತ್ಯಾಗ್ರಹದ ಸುದರ್ಶನವನ್ನು ಅವಲಂಬಿಸಿ ಪುನಃ ಸಭೆಯನ್ನು ಸೇರಿಸುವುದರಲ್ಲಿದ್ದಾರೆ ಎಂದು ಆಲೋಚಿಸಿ ಬಂಗಾಲಿ ಗವರ್ನರರು ಆ ಗದೆಯನ್ನು ಹಿಂದಕ್ಕೆ ತಕ್ಕೊಂಡು ಜನರಿಗೆ ಮದ್ರಾಸ ಪ್ರತಿಬಂಧಗಳನ್ನು ಪ್ರತಿಷೇಧಿಸುವುದಕ್ಕಾಗಿ ಪುನಃ ಸಭೆಯನ್ನು ಸೇರಿಸಲು ಹುಕುಮನ್ನು ಕೊಟ್ಟಿದ್ದಾರೆ. ಇದನ್ನು ತಿಳಿದು ನಾವು ತುಂಬಾ ಸಂತೋಷಪಡುತ್ತೇವೆ. ಬಂಗಾಲ ಸರಕಾರವು ಪ್ರತಿಬಂಧಕ ಹುಕುಮನ್ನು ಮೊದಲು ಯಾವ ತಿಳಿವಿನಿಂದಲೆ ಕೊಟ್ಟಿದ್ದಿರಲಿ, ಮತ್ತು ಈಗ ಯಾವ ಕಾರಣದಿಂದಲೆ ಅದನ್ನು ಹಿಂದಕ್ಕೆ ತಕ್ಕೊಂಡಿದ್ದಿರಲಿ, "ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಮ್" ಎಂದರೆ ಕೆಸರಲ್ಲಿ ಕಾಲನ್ನು ಹಾಕಿ ಅದನ್ನು ತೊಳಕೊಳ್ಳುವುದಕ್ಕಿಂತ ದೂರದಲ್ಲಿರುವುದೆ ಜಾಣತನವು ಎಂಬ ಮಾತಿನಂತೆ ಈ ಪ್ರಕರಣದಲ್ಲಿ ಬಂಗಾಲ ಸರಕಾರದ ಅಪ್ರಬುದ್ಧತ್ವವು ಹೊರಗೆ ಬಂದರೂ ಅದರ ಈಗಿನ ಸೌಜನ್ಯವು ನಿಜವಾಗಿ ಶ್ಲಾಘ್ಯವಾಗಿಯೆ ಇದೆ. ಆದುದರಿಂದ ಲೊರ್ಡ ರೊನಾಲ್ಡಶೆಯವರ ಅಭಿನಂದನವನ್ನು ಮಾಡದೆ ನಮ್ಮಿಂದಿರಲಾಗದು.

೨. ಮೆಸೆಪೊಟೆಮಿಯ ಕಮಿಷನಿನ ರಿಪೋರ್ಟು ಅರ್ಧಜರತೀಯವಾಗಿದೆ. ಒಂದು ಸಂಗತಿಯಲ್ಲಿ ಕೆಲವು ಗ್ರಾಹ್ಯವಾದ ಅಂಶವಿರೋಣ, ಕೆಲವು ತ್ಯಾಜ್ಯವಾದ ಅಂಶವಿರೋಣ, ಅದಕ್ಕೆ "ಅರ್ಧಜರತೀಯ ನ್ಯಾಯ" ಎಂದು ಸಂಸ್ಕೃತದಲ್ಲಿ ಹೇಳುವರು. ಮೆಸೆಪೊಟೆಮಿಯಾ ರಿಪೋರ್ಟಿನೊಳಗಿನ ಕೆಲವಂಶವು ಅಗ್ರಾಹ್ಯವಾಗಿಯೂ, ಕೆಲವಂಶವು ಗ್ರಾಹ್ಯವಾಗಿಯೂ ಇದ್ದುದರಿಂದ ಅದು ಅರ್ಧಜರತೀಯ ನ್ಯಾಯವನ್ನು ಹೋಲುತ್ತದೆ: ಮೆಸೆಪೊಟೆಮಿಯದೊಳಗಿನ ಅನರ್ಥಕ್ಕೆ ಲೊರ್ಡ ಹಾರ್ಡಿಂಜ ಪ್ರಭುಗಳೆ ಕಾರಣ ಎಂಬುದಾಗಿ ಆ ರಿಪೋರ್ಟಿನಲ್ಲಿ ಕಮಾಂಡರ್ ವೆಜ್‌ವುಡ್ ಇವರು [illegible] ಕೇವಲ ತ್ಯಾಜ್ಯವು. ಆದರೆ ಇದೆ ಸದಸ್ಯರು ಕೆಲವು ಗ್ರಾಹ್ಯವಾದ ವಿಧಾನಗಳನ್ನು ಆ ರಿಪೋರ್ಟಿನಲ್ಲಿ ಮಾಡಿರುವರು. [illegible]

ವಿಲಾಯತಿಯೊಳಗಿನ ಮಿ. ಮೊಂಟೆಗ್ಯೂಗಳಂಥ ಅಧಿಕಾರಿಗಳೂ ಬ್ರಿಟಿಷ್ ಜನತೆಯೂ ಕಿವಿಗೊಡುವುದು ಅತ್ಯಗತ್ಯವು. ಅಲ್ಲದೆ ಈ ಗ್ರಾಹ್ಯ ವಿಧಾನಗಳನ್ನು ಹಿಂದುಸ್ಥಾನದೊಳಗಿನ ಲೊರ್ಡ. ಚೆಮ್ಸ್‌ಫೋರ್ಡ, ಲೊರ್ಡ. ಪೆಂಟ್‌ಲೆಂಡ್ ಮುಂತಾದ ದೊಡ್ಡ ಅಧಿಕಾರಿಗಳು ಶಾಂತ ಮನಸ್ಸಿನಿಂದ ಆಲೋಚಿಸುವುದು ಅಗತ್ಯವಾಗಿದೆ. ಮೇಲ್ಕಂಡ ರಿಪೋರ್ಟಿನಲ್ಲಿ ವೆಜ್‌ಬುಡರು ಹೇಳುತ್ತಾರೆ: "ಹಿಂದುಸ್ಥಾನದ ಸೈನ್ಯದಲ್ಲಿ ಹಿಂದಿಜನರಿಗೆ ಅಮಲದಾರತನದ ಜಾಗೆಗಳನ್ನು ಕೊಡಕೂಡದೆಂಬುದಾಗಿ ಕೆಲವರು ಸುಮ್ಮನೆ ದುರಾಗ್ರಹವನ್ನು ತಕ್ಕೊಳ್ಳುವರು. ಆ ದುರಾಗ್ರಹವು ದೂರವಾಗುವಂತೆ ಮಾಡಬೇಕು. ಜರ್ಮನ್ ಶಿಕ್ಷಣದಿಂದ ತುರ್ಕಿ ಸೈನಿಕರೂ ಅಮಲದಾರರೂ ತಯಾರಾಗುವಂತೆ ಇಂಗ್ಲಿಷ್ ಸೈನ್ಯಶಿಕ್ಷಣದಿಂದ ಮಾತ್ರ ಹಿಂದೀ ಅಮಲದಾರರೂ ಸೈನಿಕರೂ ತಯಾರಾಗಕೂಡದೊ?" ಎಂಬುದಾಗಿ ವೆಜ್‌ಬುಡ್‌ರು ಮಾರ್ಮಿಕ ಪ್ರಶ್ನವನ್ನು ಮಾಡಿರುವರು. ಅನಂತರ ಸೈನ್ಯಕ್ಕೆ ಸಂಬಂಧಪಟ್ಟ ಕೆಲವು ಉಪಯುಕ್ತ ಸೂಚನೆಗಳನ್ನು ಮಾಡಿ ಮುಂದೆ ಬರೆಯುತ್ತಾರೆ: "ಪ್ರಕೃತ ಯುದ್ಧದಲ್ಲಿ ವಸಾಹತುಗಳಿಂದ ಸಾಕಷ್ಟು ಮದತು ಬರುತ್ತಿದೆ, ಹಿಂದುಸ್ಥಾನದಿಂದ ಮಾತ್ರ ಅದು ಕಡಿಮೆ ಬರುತ್ತಿದೆ. ಈ ವಿಷಯದಲ್ಲಿ ಹಿಂದುಸ್ಥಾನ ಸರಕಾರವು ಕೊಡುವ ಕಾರಣಗಳು ಯಾವುವೆಂದರೆ, ಸ್ವರಾಜ್ಯವನ್ನು ಉಪಭೋಗಿಸುವ ವಸಾಹತುಗಳು ಹಿಂದಿಗಳ ಬ್ರಿಟಿಷ್ ನಾಗರಿಕತ್ವದ ಹಕ್ಕನ್ನು ಒಪ್ಪಿಕೊಳ್ಳುವುದಿಲ್ಲ. ಹಿಂದೀ ರಾಷ್ಟ್ರದ ಇಚ್ಛೆಗೆ ವಿರುದ್ಧವಾಗಿ ಬೇರೆ ವಸಾಹತುಗಳ ವ್ಯಾಪಾರವು ನಿಷ್ಪ್ರತಿಬಂಧವಾಗಿ ಹಿಂದುಸ್ಥಾನದಲ್ಲಿ ನಡೆಯುತ್ತದೆ. ಆದರೆ ಹಿಂದುಸ್ಥಾನದಿಂದ ವಸಾಹತುಗಳಿಗೆ ಹೋಗುವ ಜಿನಸುಗಳ ಮೇಲೆ ಅವು ಕರವನ್ನು ಕೂಡ್ರಿಸುವವು. ಈ ರೀತಿಯಿಂದ ಕರವನ್ನು ಕೂಡ್ರಿಸುವ ಸಂಧಿಯು ಅವುಗಳಿಗುಂಟಾಗುವುದರಿಂದ ಸಾಮ್ರಾಜ್ಯ ಸಂರಕ್ಷಣಕ್ಕಾಗಿ ಆ ವಸಾಹತುಗಳು ಬೇಕಷ್ಟು ದ್ರವ್ಯಸಾಹಾಯ್ಯವನ್ನು ಮಾಡುತ್ತವೆ." ವೆಜ್‌ಬುಡರು ಹೇಳುತ್ತಾರೇನೆಂದರೆ, "ಹಿಂದುಸ್ಥಾನಸರಕಾರವು ತೋರಿಸುವ ಈ ಕಾರಣಗಳು ನಿಜವಾದುದರಿಂದ ಹಿಂದಿಗಳಿಗೆ ನಾವು ಬ್ರಿಟಿಷ್ ನಾಗರಿಕತ್ವದ ಪೂರ್ಣ ಹಕ್ಕನ್ನು ಕೊಡತಕ್ಕದ್ದು. ಮತ್ತು ಅವರಿಗೆ (ಹಿಂದಿಗಳಿಗೆ) ಹಿಂದುಸ್ಥಾನದಲ್ಲಿ ಸ್ವರಾಜ್ಯದ ಹಕ್ಕುಗಳನ್ನು ಕೊಡತಕ್ಕದು. ಇದರಿಂದ ಹಿಂದೀ ಬ್ಯುರೊಕ್ರಸಿಯ ಮೇಲೆ ಲೋಕಮತದ ಧಾರವು ಬಿದ್ದೀತು. ಈಗ ಹಾಗೆ ಧಾರವು ಬೀಳುವುದಿಲ್ಲಾದುದರಿಂದ ಈ ನಿರಂಕುಶವಾದ ಬ್ಯುರೊಕ್ರಸಿಯಿಂದ ಬ್ರಿಟಿಷ್ ಅಧಿಕಾರಿಗಳಂತೆ ಕೆಲಸವಾಗದು. ಲೊರ್ಡ ಕಿಚನರರು "ಈ ಮಹಾಯುದ್ಧದಲ್ಲಿ ಸೋತು ಹೋಗುವುದಕ್ಕಿಂತ ಹಿಂದುಸ್ಥಾನವು ಕೈ ತಪ್ಪಿದರೂ ಚಿಂತೆ ಇಲ್ಲ." ಎಂದು ಒಮ್ಮೆ ಹೇಳಿದ್ದರು. ನಾನು ಕೂಡ ಹೇಳುವುದೇನೆಂದರೆ, ಯಾವ ಲೋಕಸತ್ತಾಕ ಸ್ವಾತಂತ್ರ್ಯಕ್ಕೋಸ್ಕರ ನಾವು ಈಗ ಯುದ್ಧ ಮಾಡುತ್ತಿದ್ದೇವೋ ಆ ತತ್ತ್ವವನ್ನು ಬಿಟ್ಟುಕೊಡುವುದಕ್ಕಿಂತ ಹಿಂದುಸ್ಥಾನವು ನಮ್ಮ ಕೈ ತಪ್ಪಿದರೂ ಅಡ್ಡಿ ಇಲ್ಲ" ವೆಜ್‌ಬುಡ್ ದೊರೆಗಳ ವಿಚಾರಸರಣಿಯು ಬಹು ಸ್ಪಷ್ಟವಾಗಿರುವುದರಿಂದ ಪುನಃ ನಮ್ಮ ಟೀಕೆಯ ಆವಶ್ಯಕತೆಯು ಕಂಡುಬರುವದಿಲ್ಲ.

೩. ಮಿಸೆಸ್ ಎನಿಬೆಝೆಂಟ್, ಮಿ. ಅರುಂಡೇಲ್ ಮತ್ತು ಮಿ. ವಾಡಿಯಾ ಈ ಮೂವರ ವಿಷಯದಲ್ಲಿ ಈ ವಾರದೊಳಗೆ ನಡೆದ ಒಂದು ವರ್ತಮಾನವನ್ನು ವಾಚಕರ ಮುಂದೆ ಇಡಬಹುದು. ಈ ಮೂವರನ್ನು ಪ್ರತಿಬಂಧ ಮಾಡಿದ ನಂತರ ಅವರ ವಿಷಯಕ ಸಾಕ್ಷಾತ್ ವರ್ತಮಾನಗಳನ್ನು—ಬೇರೆ ಪತ್ರಿಕೆಗಳಲ್ಲಿ ಆಗಾಗ್ಯೆ ತುಂಬಾ ಬರುತ್ತಿದ್ದರೂ—ನಾವು ಹೆಚ್ಚಾಗಿ ಕೊಡುವ ಕ್ರಮವನ್ನಿಟ್ಟುಕೊಳ್ಳಲಿಲ್ಲ. ಮದ್ರಾಸ ಪ್ರತಿಬಂಧ. ರಾಷ್ಟ್ರೀಯ ಸಭೆ, ಸ್ವರಾಜ್ಯ ಮುಂತಾದ ಹಿಂದಿ ರಾಜಕಾರಣದಿಂದ ಅಜೀರ್ಣರೋಗ ಬರುವಂಥ ನಾಜೂಕ ಪ್ರಕೃತಿಯವರನ್ನು ನಾವು ಎಷ್ಟೋ ಸಾರಿ ನೋಡಿರುವುದರಿಂದ ಅಂಥ ವಿಷಯಗಳನ್ನು ಆದಷ್ಟು ತಪ್ಪಿಸಲು ಯತ್ನಿಸುತ್ತೇವೆ. ಆದರೂ ನಮ್ಮ ವಿಧಿಯೇನೆಂದರೆ, ನಾವು ವಾಸಿಸುವ ದೇಶ, ಮತ್ತು ಪೋಲಿಸ ಸಂಗತಿಗಳು ಒಂದೆ ವಿಷಯಕ್ಕೆ ಸಂಬಂಧಪಟ್ಟವುಗಳಾದುದರಿಂದ ಆ ಸಂಗತಿಗಳನ್ನು ಕೊಂಚ ಕೊಂಚವಾದರೂ ವಿಮರ್ಶಿಸದೆ ಇರುವುದು ನಮ್ಮ ಮನಸ್ಸಿಗೆ ಹಿತವಾಗುವುದಿಲ್ಲ! ಇದು ಒಂದು ವೇಳೆ ನಮ್ಮ ಮನಸ್ಸಿನ ದೋಷವೂ ಇರಬಹುದು!! ಇರಲಿ. ಮಿಸೆಸ ಬೆಝೆಂಟ್ ಪ್ರಭೃತಿಗಳನ್ನು ಪ್ರತಿಬಂಧಿಸಿ ಆ ಮೂವರು ಇಷ್ಟರ ವರೆಗೆ ಬರೆದಿರುವ ಮತ್ತು ಇನ್ನು ಮುಂದೆ ಬರೆಯುವ ಯಾವ ತರದ ವಾಙ್ಮಯವನ್ನೂ ಪ್ರಸಿದ್ಧಿಸಕೂಡದು ಎಂದು ಮದ್ರಾಸ ಸರಕಾರವು ಪ್ರಸಿದ್ಧ ಮಾಡಿತ್ತಷ್ಟೆ. ಅನಂತರ "ಥಿಯೊಸೊಫಿಗೆ ಸಂಬಂಧಪಟ್ಟ ಧಾರ್ಮಿಕ ವಿಷಯಗಳನ್ನು-ಅವೂ ಸರಕಾರಿ ಅಧಿಕಾರಿಗಳಿಂದ ಪಾಸಾಗಬೇಕು—ಪ್ರಸಿದ್ಧಪಡಿಸಲು ಅಡ್ಡಿಯಿಲ್ಲ" ಎಂದು ಸರಕಾರವು ಈಚೆಗೆ ಒಂದು ಹುಕುಮನ್ನು ಹೊರಡಿಸಿ ಅದನ್ನು ಪ್ರತಿಬದ್ಧರಾದ ಮೂವರ ಕಡೆಗೆ ಕಳುಹಿಸಿದ್ದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತಗೊಳಿಸಿದ್ದಾರೆ. ಆಧ್ಯಾತ್ಮಿಕ, ಧಾರ್ಮಿಕ, ರಾಜಕೀಯ ಸಾಮಾಜಿಕ, ಮುಂತಾದ ಎಲ್ಲ ಭಾಗಗಳಿಂದ ಮಾನವವಂಶದ ಉನ್ನತಿಯನ್ನು ಸಾಧಿಸುವದೆ ಥಿಯೊಸೊಫಿಯ ಮುಖ್ಯ ಉದ್ದೇಶವಿರುವುದರಿಂದ ರಾಜಕೀಯ ಧಾರ್ಮಿಕ ಮೊದಲಾದಭೇದಗಳನ್ನು ಮಾಡಲು ಸಾಧ್ಯವಿಲ್ಲ. ಎಲ್ಲ ಸಂಗತಿಗಳು ಮಾನವಸ್ವಾತಂತ್ರ್ಯವೆಂಬ ಒಂದೆ ಪವಿತ್ರ ಉದ್ದೇಶಕ್ಕಾಗಿ ಇರುವವು. ವಿಚಾರಸ್ವಾತಂತ್ರ್ಯ ಮತ್ತು ಭಾಷಣ ಸ್ವಾತಂತ್ರ್ಯಗಳನ್ನು ಒದಗಿಸಿ ಜನಗಳ ಹಕ್ಕನ್ನು ಸಂಕೋಚದಲ್ಲಿ ತರಲು ಬಿದ್ದಾಗುತ್ತಿರುವ ಹೊತ್ತು, ಪವಿತ್ರ ತತ್ತ್ವಗಳಲ್ಲಿ ಹಿಂದಿನ ಅಲ್ಲದ ನಾಸ್ತಿಕರ ಪದ್ಧತಿಯನ್ನು ಪಡೆದು ಧಾರ್ಮಿಕ ಪುಸ್ತಕಗಳನ್ನ ಮಾತ್ರ ಪ್ರಸಿದ್ಧಪಡಿಸಲು ನಾವು ಒಪ್ಪಿಕೊಳ್ಳುವುದಿಲ್ಲ. ಈ ರೀತಿಯಿಂದ ಮಿಸೆಸ್ ಬೆಝೆಂಟ್ ಮೊದಲಾದ ಮೂವರು ಬರೆದಿರುವರು. ರಾಷ್ಟ್ರೀಯ ಸಭೆ, ಮೊಸ್ಲೆಮ್‌ಲೀಗ್, ಹೋಮ್‌ರೂಲ್‌ಲೀಗ, ಇವೆಲ್ಲ ಒಂದೆ ವ್ಯಕ್ತಿಯ ಅವಯವಗಳಾದುದರಿಂದ ಮತ್ತು ಇವು ಧಾರ್ಮಿಕತತ್ತ್ವದ ಮೇಲೆಯೆ ನಡೆದಿರುವುದರಿಂದ ಅವುಗಳನ್ನು ಬಿಟ್ಟು ಥಿಯೊಸೊಫಿಯ ಪರವಾಗಿ ಪ್ರತ್ಯೇಕ ಬಿಸ್ತಂದ ಮಾಡಲು ನಾನು ಒಪ್ಪುವುದಿಲ್ಲೆಂದು ಬೆಝೆಂಟರು ಹೇಳುವರು. ಇದೀಗ ಸತ್ಯಾಗ್ರಹ!!

೪. ಸರ್ ರವೀಂದ್ರನಾಥ ಟಾಗೋರರು ಸುಪ್ರಸಿದ್ಧ ಪುರುಷರು. ಇವರು ದೇಶೀಯರಿಂದಲೂ ರಾಜ್ಯಕರ್ತರಿಂದಲೂ, ಅಮೇರಿಕ, ಜಪಾನ ಮೊದಲಾದ ಅನ್ಯದೇಶೀಯರಿಂದಲೂ ಒಂದೆ ಸಮನೆ ಮಾನ್ಯರಾಗಿರುವರು. ಈ ರಾಜಮಾನ್ಯ ಲೋಕಮಾನ್ಯರ ವಿಚಾರದಲ್ಲಿ ಉಗ್ರತ್ವವಿರದು, ಮಾತಿನಲ್ಲಿ ವೇಗವಿರದು, ಕೃತಿಯಲ್ಲಿ ತಪ್ಪಿರದು, ಎಂದರೆ ಇವರ ಉಚ್ಚಾರ, ವಿಚಾರ ಮತ್ತು ಆಚಾರ ಇವು ಯಾವಾಗಲೂ ಶುದ್ಧವಾಗಿದೆ. ಇದುವವು ಅಂಥ ಮಹನೀಯರು ಈಗ ಹಿಂದುಸ್ಥಾನದಲ್ಲಿ ಸಾರ್ವತ್ರಿಕವಾದ ಸ್ವರಾಜ್ಯದ ಕುರಿತು ಒಂದು ಸಭೆಯಲ್ಲಿ ಭಾಷಣಮಾಡುವಾಗ ಸಮಾಜ, ಧರ್ಮ, ನೀತಿ ಇವುಗಳ ವಿಷಯದಲ್ಲಿ ಹಿಂದಿನಿಂದ ನಡಕೊಂಡು ಬಂದ ಎಂದರೆ ರೂಢವಾದಂಥ ಸತ್ಯಾಭಾಸ ಕಲ್ಪನೆಗಳನ್ನು ಬಿಟ್ಟುಬಿಡಲು ಬಂಗಾಲಿಗಳಿಗೆ ಉಪದೇಶಿಸಿ ಮುಂದೆ ಹೇಳುವದೇನಂದರೆ—"೧೮೦೦-೧೯೦೦ ವರ್ಷಗಳಿಂದ ಬ್ರಿಟಿಷರ ಆಳಿಕೆಯು ಈ ದೇಶದಲ್ಲಿರುವುದು. ಈ ದೀರ್ಘ ಅವಧಿಯಲ್ಲೂ ಮದ್ರಾಸಿಗೆ ಮತ್ತು ಪಟ್ನಿನಿಂದ ಬಂಗಾಲಕ್ಕೆ ಸೋಪಾನಗಳಿಕ್ಕಿಲ್ಲೆಂದು ನೆನೆಸುವುದು ಸರಿಯಲ್ಲ. ಬೆಲಜಿಯಮ್ ಮತ್ತು ಫ್ರಾನ್ಸ ಈ ದೇಶಗಳಿಗೆ ಬ್ರಿಟಿಷ್ ಜನರು ಅನುತಾಪ ಪಡುವುದಾದರೆ ಮದ್ರಾಸಿನ ಗೋಸ್ಕರ ಬಂಗಾಲವು ಅನುತಾಪಪಡದೆ? ಪ್ರತಿಬಂಧದಂಥ ಉತ್ಪಾಟದ ಉಪಾಯದಿಂದ ಅಧಿಕಾರಿಗಳಿಗೆ ಜಯವು ಪ್ರಾಪ್ತವಾಗದು. ಸ್ವರಾಜ್ಯವು ಪ್ರಾಪ್ತವಾಗಬೇಕಾದರೆ ಮೊದಲು ಕ್ರಮದಿಂದ ಮೆಲ್ಲಮೆಲ್ಲನೆ ಎಷ್ಟೊ ಸುಧಾರಣೆಗಳು ಆಗಬೇಕು, ಥಟ್ಟನೆ ಸ್ವರಾಜ್ಯವು ಸಿಗದು ಎಂದು ಅಧಿಕಾರಿಗಳು ಆಗಾಗ್ಗೆ ಹೇಳುತ್ತಿರುವರು. ಈ ವಿಧಾನವು ಸತ್ಯವಲ್ಲ. ಇಂಗ್ಲಂಡಿನೊಳಗಿನ ಪಾರ್ಲಿಮೆಂಟಿನ ಈ ಹೊತ್ತಿನ ಸ್ವರೂಪವು ಅದರ ಜನ್ಮ ದಿವಸದಲ್ಲಿ ಇದ್ದಿಲ್ಲ. ಎಂದರೆ ಅಪೂರ್ಣಾವಸ್ಥೆಯಲ್ಲಿ ಪಾರ್ಲಿಮೆಂಟು ಅಸ್ತಿತ್ವದಲ್ಲಿ ಬಂದು ಮತ್ತೆ ಈ ಹೊತ್ತು ಈ ಸುಧಾರಣೆಯು ಅದಕ್ಕೆ ಪ್ರಾಪ್ತವಾಗಿದೆ. ಬ್ರಿಟಿಷರ ಗೌರವವನ್ನು ಕಾಪಾಡಲು ನ್ಯಾಯ್ಯವನ್ನು ಮೂಲೆಗೊತ್ತುವುದರಿಂದ ಇಲ್ಲಿ ಬ್ರಿಟಿಷರ ಆಳಿಕೆಯು ಯಶಸ್ವಿಯಾಗುವುದು ಕಷ್ಟಕರವು."

೫. ರಣರಂಗದಲ್ಲಿ ಹತರಾದ ಹಿಂದೂಸ್ಥಾನದ ಸೇನೆಯ ಹಿಂದೀ ಆಫೀಸರರ ಮತ್ತು ಸೇನಿಕರ ಬಂಧುಜನಗಳಿಗೆ ಬಹುಮಾನಾರ್ಥವಾಗಿ ಮೇರಿಚಕ್ರವರ್ತಿನಿಯವರು ತನ್ನ ಭಾವಪಟಗಳನ್ನು ಕೊಡಬೇಕೆಂತ ಅಪೇಕ್ಷಿಸಿದ್ದರಿಂದ ಈ ಭಾವಪಟಗಳು ವಿಲಾಯತಿಯಿಂದ ಹಿಂದೂಸ್ಥಾನಕ್ಕೆ ಬಂದಿರುವವು. ಚಕ್ರವರ್ತಿನಿಯವರಿಗೆ ಹಿಂದೀ ಪ್ರಜೆಗಳ ಮೇಲಿರುವ ಸಹಾನುಭೂತಿಯ ಇಂಥಾ ನಿದರ್ಶನಗಳು ಪ್ರಜಾವರ್ಗದಲ್ಲಿ ಸರ್ವರಿಗೂ ಗೊತ್ತಾಗುವದು ಅವಶ್ಯಕ. ಬಹಳ ಅಂದವಾಗಿ ತಯಾರಿಸಲ್ಪಟ್ಟ ಈ ಭಾವಚಿತ್ರಗಳ ಒಂದು ಪ್ರತಿಯನ್ನು ನಮಗೆ ಮದ್ರಾಸು ಸರಕಾರದವರು ಕಳುಹಿಸಿಕೊಟ್ಟಿರುವರು. ಮತ್ತು ಈ ವಿಷಯದ ಒಂದು ಪ್ರೆಸ್ ಕೊಮ್ಯುನಿಕನ್ನು ಪತ್ರದಲ್ಲಿ ಪ್ರಕಟಿಸಬೇಕೆಂತ ವಿಜ್ಞಾಪಿಸಿಕೊಂಡಿರುತ್ತಾರೆ. ಈ ಪ್ರೆಸ್ ಕೊಮ್ಯುನಿಕ್ ಜಾಹೀರನಾಮೆಯು ಇಂಗ್ಲೀಷು ಭಾಷೆಯಲ್ಲಿರುವದು. ಕನ್ನಡದಲ್ಲಿ ಇದರ ತಾತ್ಪರ್ಯವೇನಂದರೆ:—

ಈಗಿನ ಮಹಾ ಯುದ್ಧದಲ್ಲಿ ಹಿಂದೂಸ್ಥಾನದ ಸೇನೆಯ ಆಫೀಸರರಲ್ಲಿಯೂ ಸೇನಿಕರಲ್ಲಿಯೂ ಕಾದಾಡಿ ಸತ್ತವರ ಅಥವಾ ಘಾಯಗಳಿಂದ ಮಡಿದುಹೋದವರ ಅಥವಾ ರಣರಂಗದಲ್ಲಿ ರೋಗಗಳಿಗೆ ಬಲಿಬಿದ್ದ ವ್ಯಕ್ತಪಟ್ಟವರ ವಿಧವೆಯರಿಗೆ ಅಥವಾ ತಾಯಂದಿರುಗಳಿಗೆ ಅಥವಾ ಪುತ್ರಿಯರಿಗೆ ಸಹಸಂತಾಪಸೂಚನಾರ್ಥವಾಗಿ ತನ್ನ ಭಾವಪಟದ ಪ್ರತಿಗಳನ್ನು ಕೊಡಬೇಕೆಂದು ಮೇರಿ ಮಹಾರಾಜ್ಞಿಯವರ ಅಪೇಕ್ಷೆಯಾಗಿದೆಂದು ಲೇಡಿ ಚೆಮ್ಸ್‌ಫರ್ಡರವರು ಲಾಹೋರಿನಲ್ಲಿ ಕಳೆದ ಎಪ್ರಿಲ್ ತಿಂಗಳ ತಾ. ೧೫ರಲ್ಲಿ ಜರುಗಿದ ಸ್ತ್ರೀಯರ ಪರ್ದಾಪಾರ್ಟಿಯು ಸಮಯ ಹೇಳಿದ್ದರು. ಭಾವಪಟಗಳ ಅನೇಕ ಪ್ರತಿಗಳು ಪ್ರಕೃತ ಹಿಂದೂಸ್ಥಾನಕ್ಕೆ ಬಂದು ತಪ್ಪಿರುತ್ತವೆ, ಮತ್ತು ಇವುಗಳು ಸದ್ಯದಲ್ಲಿಯೇ ಹಂಚೋಣಾಗುವವು. ಪ್ರತಿ ಪಟದ ಕೆಳಭಾಗದಲ್ಲಿ ಮೃತಪಟ್ಟ ಸೇನಿಕನ ಧೀರ ಕೃತ್ಯಗಳ ಪ್ರಶಂಸೆಯೂ ಮೃತಪಟ್ಟವರ ಸಂಬಂಧಿಗಳೊಡನೆ ತನ್ನ ಸಹಸಂತಾಪವೂ ಉಳ್ಳ ವಾಕ್ಯಗಳನ್ನು ಚಕ್ರವರ್ತಿನಿಯವರು ತಮ್ಮ ಸ್ವಹಸ್ತದಿಂದಲೇ ಬರೆದಿರುವರು. ಚಕ್ರವರ್ತಿ ಚಕ್ರವರ್ತಿನಿಯರಲ್ಲಿ ವಿಶೇಷವಾಗಿರುವಂಥ ಹಿಂದೀ ಪ್ರಜಾ ಕ್ಷೇಮಚಿಂತನೆ ಮತು ಪ್ರಜಾ ಪ್ರೇಮಗಳಿಗೆ ಇದು ಮತ್ತೊಂದು ನಿದರ್ಶನವಾಗಿರುವದು. ಭಾವಪಟವು ಅಂದವಾಗಿ ಬಣ್ಣಗಳಿಂದ ತಯಾರಿಸಲ್ಪಟ್ಟಿರುವದು. ಚಿತ್ರದಲ್ಲಿ ರಾಜ್ಞಿಯವರು ರಾಜವೈಭವದ ಉಡುಪನ್ನೂ ಬಿರುದಾಂಕಿತಗಳನ್ನೂ ಧರಿಸಿ ನಿಂತಿರುವರು. ರಾಜ್ಞಿಯರ ನಿರೂಪಣೆಯನ್ನು ದೇಶಭಾಷೆಗಳಲ್ಲಿ ಭಾಷಾಂತರಿಸಿಕೊಂಡು ಲೇಡಿ ಚೆಮ್ಸ್‌ಫರ್ಡರವರು ತಮ್ಮ ಸ್ವಹಸ್ತ ಬರಹದಿಂದ ಬರೆದ ಪತ್ರಗಳೊಡನೆ ಈ ಭಾವಪಟಗಳು ಕಳುಹಿಸೋಣಾಗುವವು.

೬. ಶಾಲೆಗಳಲ್ಲಿ ಅತಿ ವಿಶೇಷವಾಗಿ ಬಂದಂಥ ಎಕ್ಸರ್‌ಸ್ಯಾಜ್ ಪುಸ್ತಕಗಳ [illegible] ಶಾಸ್ತ್ರೀದಾರರಲ್ಲೊಬ್ಬರು ಹಿಂದೊಮ್ಮೆ ವಾಚಕರ ಲಕ್ಷ್ಯಕ್ಕೆ ತಂದಿದ್ದರು. ಹಿಂದೂಸ್ಥಾನದ ಇನ್ನೊಂದು ಕಡೆಯಲ್ಲಿ ಇದೇ ರೂಢಿಯು ಇದ್ದದ್ದನ್ನು ನೋಡಿಕೊಂಡು ಅಲ್ಲಿಯ ವಿದ್ಯಾಖಾತೆಯ ಡಿರೆಕ್ಟರರಾದ ಬಹುಮಾನಪಟ್ಟ ಮಿ. ಸಿ. ಎಫ್. ಡಿ. ಲಾಫೊಸ್ಸೆ ಎಂಬವರು ತನ್ನ ಕೈಕೆಳಗಿನ ಶಾಲಾ ಇನ್ಸಪೆಕ್ಟರುಗಳಿಗೆಲ್ಲ ಒಂದು ಸರ್ಕ್ಯುಲರನ್ನು ಬರೆದು ಕಳುಹಿಸಿರುತ್ತಾರೆ. ಕಾಗದದ ಕ್ರಯವು ಬಹಳ ವಿಪರೀತವಾಗಿರುವ ಇಂಥಾ ಸಮಯಗಳಲ್ಲಿ ನೋಟುಬುಕ್ ಅಥವಾ ಎಕ್ಸರ್‌ಸ್ಯಾಜ್ ಪುಸ್ತಕಗಳನ್ನು ಮೂರು ಯಾ ನಾಲ್ಕು ವಿಧಾನಗಳಿಂದ ವಿದ್ಯಾರ್ಥಿಗಳಿಂದ ಉಪಯೋಗಿಸುವಂತೆ ಮಾಡುವದು ಹುಡುಗರ ಹೆತ್ತವರಿಗೆ ವಿಶೇಷ ನಷ್ಟಕಾರಿಯಾಗಿದೆ, ಎಂದು ಈ ಸರ್ಕ್ಯುಲರ್ ಪತ್ರದಲ್ಲಿ ಡಿರೆಕ್ಟರರವರು ಸೂಚಿಸಿರುವರಲ್ಲದೆ ಇನ್ಸಪೆಕ್ಟರುಗಳು ಶಾಲಾ ಸಂದರ್ಶನಾಕಾಲದಲ್ಲಿ ಈ ವಿಷಯದಲ್ಲಿ ಮುಖ್ಯವಾದ ಕೆಲವು ಸಂಗತಿಗಳಿಗೆ ಲಕ್ಷ್ಯಕೊಡಬೇಕೆಂದು ಡಿರೆಕ್ಟರರು ಅಪ್ಪಣೆಕೊಟ್ಟಿರುತ್ತಾರೆ. ಅವು ಯಾವವೆಂದರೆ—ಬಹಳ ಕ್ರಯಬಾಳುವ ಕಾಗದವನ್ನು ವಿದ್ಯಾರ್ಥಿಗಳು ಉಪಯೋಗಿಸದಂತೆ ನೋಡಿಕೊಳ್ಳಬೇಕು; ನೋಟು ಬೂಕುಗಳ ಬಗ್ಗೆ ಬಿಳಿಕಾಗದ ಅವಶ್ಯವಿಲ್ಲ, ಕಡಿಮೆ ಕ್ರಯದ ಬದಾಮಿಬಣ್ಣದ ಕಾಗದವನ್ನು ಉಪಯೋಗಿಸಬಹುದು. ನೋಟುಪುಸ್ತಕಗಳ ಪಾನಿನ ಎರಡು ಬದಿಗಳಲ್ಲಿಯೂ ಬರಿಯತಕ್ಕದ್ದು. ಒಬ್ಬೊಬ್ಬ ಹುಡುಗನು ಎಷ್ಟೆಷ್ಟು ನೋಟುಪುಸ್ತಕಗಳನ್ನು ಕೊಂಡುಕೊಳ್ಳಬೇಕೆಂಬ ವಿಷಯವನ್ನು ಹೆಡ್ ಮಾಸ್ತರರು ತೀರ್ಮಾನಿಸಬೇಕು ವಿನಹ ಆಯಾ ದರ್ಜೆಯ ಉಪಾಧ್ಯಾಯರಲ್ಲ. ಎಕ್ಸರ್‌ಸ್ಯಾಜು ಪುಸ್ತಕಗಳ ಡಬ್ಬಲ್ ಸೆಟ್ಟನ್ನು ಇಟ್ಟುಕೊಳ್ಳುವ ವಿಧಾನವನ್ನು ತೆಗೆದುಹಾಕಬೇಕು—ಈ ಸಂಗತಿಗಳನ್ನು ಶಾಲೆಗಳಲ್ಲಿ ವಿಚಾರಿಸಿ ನೋಡಬೇಕೆಂದು ಡಿರೆಕ್ಟರರು ಇನ್ಸಪೆಕ್ಟರುಗಳಿಗೆ ಸೂಚಿಸಿರುತ್ತಾರೆ. ಈ ಸಂಸ್ಥಾನದ ಶಾಲಾ ಇನ್ಸಪೆಕ್ಟರುಗಳಿಗೆ ಇಂಥಾ ಸರ್ಕ್ಯುಲರುಗಳು ಡಿರೆಕ್ಟರರಿಂದ ಬಂದರೆ ಉಪಕಾರವಾಗುತ್ತಿತ್ತು.

ಸ್ಥಳಿಕ — ಮಂಗಳೂರು.

ಕವಿರಾಜ ಎನ್. ಎನ್. ಸೆನ್. ಕಲ್ಕತ್ತಾ ಇವರ ಕೆಟಲಾಗುಗಳನ್ನು ವಾಚಕರ ಅವಗಾಹನೆ ಬಗ್ಗೆ ಈ ಸಂಚಿಕೆಯೊಂದಿಗೆ ಕಳುಹಿಸುತ್ತೇವೆ.

ಮಂಗಳೂರು ವಸ್ತುಪ್ರದರ್ಶನದ ಕಮ್ಮಿಟಿಯ ಸೆಕ್ರೆಟರಿಗಳಾಗಿ ಮಾ। ರಾ। ರಾ। ನೆಲ್ಲಿಕಾಯಿ ವೆಂಕಟರಾವ್ ಮತ್ತು ರಾವ್ ಬಹದ್ದೂರ್ ಎನ್. ಸುಬ್ಬರಾವ್ ಇವರು ನೇಮಿಸಲ್ಪಟ್ಟಿರುವರು. ವಸ್ತುಪ್ರದರ್ಶನವನ್ನು ಇಲ್ಲಿಯ ಗವರ್ನಮೆಂಟು ಕೊಲೇಜಿನಲ್ಲಿ ಏರ್ಪಡಿಸಲು ನಿಶ್ಚಯಿಸಿರುತ್ತಾರೆ.

ಅಧಿಕಮಾಸವು ಆಶ್ವೀಜದಲ್ಲಿಯೇ ಆಚರಿಸಲ್ಪಡಬೇಕಾಗಿದೆ ಎಂತ ಮಂಗಳೂರಿನ ಶ್ರೀ ವೆಂಕಟರಮಣ ದೇವಸ್ಥಾನದವರಿಗೆ ಶ್ರೀ ಕಾಶೀಕ್ಷೇತ್ರದಲ್ಲಿರುವ ಕಾಶೀಮಠದ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರ ನಿರೂಪಣೆಯು ತಂತೀಮೂಲಕ ಬಂದಿರುವದಾಗಿ ತಿಳಿಯುತ್ತೇವೆ.

ಅಮ್ಮೆಂಬಳ ಸುಬ್ರಾಯ ಪೈ ಸ್ಮರಣಾರ್ಥಕ ಫಂಡಿನಿಂದ ತಿಂಗಳು ಗಟ್ಲೆ ವೇತನಗಳು ಈ ರೀತಿ ಕೊಡೋಣಾಗಿರುವವು—ಕೆ. ಬಿ. ಕೃಷ್ಣರಾವ್ ರೂ. ೫; ಯಮ್. ಗೋಪಾಳ ಕೃಷ್ಣರಾವ್ ರೂ. ೧೫; ಕೆ. ಪುರುಷೋತ್ತಮ ಜೋಯಿಸ ರೂ. ೧೦; ಬಿ. ಎಚ್. ಪದ್ಮನಾಭ ಪೈ ರೂ. ೧೦; ಯೆ ವೈಕುಂಠ ಶೆಣಯಿ ರೂ. ೧೦; ಬಿ. ಬಾಲಕೃಷ್ಣ ಪುರೋಹಿತ ರೂ. ೧೨; ಟಿ. ಗೋವಿಂದ ಪೈ ರೂ. ೧೫; ಜಿ. ವೆಂಕಟರಾಯ ಪೈ ರೂ. ೭; ಯು ಪುಂಡಳೀಕ ಶೆಣೈ ರೂ. ೧೦; ಪಿ. ವಿಟ್ಲ ಕಾಮತ್ ರೂ. ೪; ಜಿ. ವಾಸುದೇವ ಪೈ ರೂ. ೫; ಸಿ. ವಾಸುದೇವ ಕಾಮತ್ ರೂ. ೫.

ಕೆಲವು ಸಮಯದ ಹಿಂದೆ ಇಲ್ಲಿಗೆ ಬಂದಿದ್ದ ಪ್ರೊಫೆಸರ್ ಕೃಷ್ಣಮೂರ್ತಿಯವರಿಗೂ ಸೈಂಟ್ ಎಲೋಸಿಯಸ್ ಕೋಲೇಜಿನ ಜಿಮ್ನಾಸ್ಟಿಕ್ಸ್ ಉಪಾಧ್ಯಾಯರಾದ ಕೆ. ಗೋಪಾಳಕೃಷ್ಣರಾಯರಿಗೂ ಇದೇ ತಾ. ೧೯ನೇ ಆದಿತ್ಯವಾರ ೩॥ ಘಂಟೆಗೆ ಪಂದ್ಯಾಟವು ಮಾಜಿ ಗಣಪತಿ ಶಾಲೆಯ ಕಟ್ಟಡದಲ್ಲಿ ನಡಿಯುವದಾಗಿ ತಿಳಿಯುತ್ತೇವೆ.

ಇದೇ ತಿಂಗಳ ತಾ. ೧೬ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರ ಮುನಿಸಿಪಾಲಿಟಿಯಲ್ಲಿ ಮೂರು ಪ್ಲೇಗ್‌ಮರಣಗಳಾದವು. ಗೋಳಿಕಟ್ಟೆ ವಾರ್ಡಿನಲ್ಲಿ ೧, ಪೋರ್ಟ್‌ವಾರ್ಡು ೧, ಜಪ್ಪುವಾರ್ಡು ೧.

ಮಂಗಳೂರು ಮುನ್ಸಿಪಾಲಿಟಿಯ 1916—17ನೇ ವರುಷದ ಆಡಳಿತೆಯ ವೃತ್ತಾಂತವು ಸರಕಾರದವರಿಂದ ಪರಿಶೀಲಿಸಲ್ಪಟ್ಟು ಪ್ರಕಟವಾಗಿರುತ್ತದೆ. ಉರ್ವದಲ್ಲಿ ಮನೆಗಳನ್ನು ಕಟ್ಟಿಸಲು ಸ್ಥಳಗಳನ್ನು ಒದಗಿಸಿಕೊಡುವ ಏರ್ಪಾಡಿನ ಜಾರಿಯನ್ನು ಶೀಘ್ರದಲ್ಲಿಯೇ ನಡಿಸಬೇಕೆಂದು ಸರಕಾರದವರು ಆಜ್ಞಾಪಿಸಿರುತ್ತಾರೆ. ಬಡಜನರು ವಾಸಿಸುವ ಮಲೀನತೆಯಿಂದ ತುಂಬಿ ಹೋಗಿರುವ ಪಟಾರಗಳನ್ನು ಸರಿಗೊಳಿಸಬೇಕೆಂಬ ಸೂಚನೆಯು, ಸರಕಾರದವರ ಕಡೆಯಿಂದ ಇರುವದು. ಮುನ್ಸಿಪಲ್ ರಸ್ತೆಗಳ ವಿಷಯದಲ್ಲಿ ಸರಕಾರದವರು ಇದ್ದ ಸಂಗತಿಯನ್ನೇ ಮುನ್ಸಿಪಲ್ ಕೌನ್ಸಿಲಿನವರ ಲಕ್ಷ್ಯಕ್ಕೆ ತಂದಿರುತ್ತಾರೆ. ರಸ್ತೆಗಳ ಬಗ್ಗೆ ಮುನ್ಸಿಪಾಲಿಟಿಯವರು ಬಹಳ [illegible] ಇಂಥಾ ಖರ್ಚಿಗೆ ತಕ್ಕ ಪ್ರತಿಫಲವು ಸಿಕ್ಕಿದೆ, [illegible] ಮಾನವಿದೆ ಎಂತ ಸರಕಾರದವರು ಹೇಳಿರುವರು. [illegible] ಸೂಚನೆಯು ನಿಯಮಿತ [illegible] ಮರಣಗಳನ್ನು [illegible] ವರು ವಿಶೇಷ ಲಕ್ಷ್ಯ ಕೊಡಬೇಕೆಂದು ತಿಳಿಸಿರುತ್ತಾರೆ. [illegible]

[illegible] ಕಾರಣದಿಂದಲೂ ಸೊರಗಿಹೋಗುತ್ತದೆ. ದ್ರವ್ಯಾನುಕೂಲದ ಗೊಬ್ಬರವು [illegible]ಯಾಗಿದ್ದು ಸರಕಾರವು ಕೊಡುವ ಸಹಾಯವು ನಿರೀಕ್ಷಿಸಿದ ಕಾಲದಲ್ಲಿ ಸಿಕ್ಕದೆ ಒದಗುವ ಏರ್ಪಾಡು ಇಲ್ಲವಾದ್ದರಿಂದ ಸಮಯಕ್ಕೆ 'ಹಟ್' ಮಳೆನೀರಿನೊಂದಿಗೆ ಕೊಚ್ಚಿಹೋಗುತ್ತದೆ ವಿನಾ ಬೆಳೆಯ ಬೆಳವಣಿಗೆಗೆ ಸಿಕ್ಕುವುದಿಲ್ಲ. ರೈತನ ಅಶಕ್ತಿಯು ಅಷ್ಟಕ್ಕೆ ಇದೆ. ಕಸಬುಗಾರನಲ್ಲದವನು ಆಟಕ್ಕಾಗಿ ಬೆಳೆಬಿತ್ತಿದರೆ ಬೆಳೆಯು ಫಸಲು ಎತ್ತುವ ವರೆಗೆ ಅದನ್ನು ನೋಡಿಕೊಳ್ಳಬೇಕೆಂಬ ಆಲೋಚನೆ ಅವನಿಗೆ ಬಂದೀತೆ? ಆ ಆಲೋಚನೆ ಬಂದರೂ ಅಷ್ಟರ ವರೆಗೆ ಕಾಯುವ ತಾಳ್ಮೆ ಅವನಲ್ಲಿ ಇದ್ದೀತೆ? ಈ ಮೂರು ಕಾರಣಗಳಿಂದ ಸ್ವಕೀಯ ರಾಜ್ಯಭಾರದ ಫಸಲು ನಮ್ಮ ಇಚ್ಛೆಯಂತೆ ಸಿಕ್ಕದೆ ನಾವು ನಿರಾಶರಾಗುತ್ತೇವೆ.

ಸ್ಪಷ್ಟವಾಗಿ ಹೇಳುವುದಾದರೆ ಸ್ವಕೀಯ ರಾಜ್ಯಭಾರವು ಯಾಂದ ಸಾಗಬೇಕೋ ಅಂಥ ವಿದ್ವಾಂಸರಿಗೆ ಈ ಸಭೆಗೆ ಸೇರಲಿಕ್ಕೆ ಹಲವು ಬಗೆಯ ಅಭ್ಯಂತರಗಳಿವೆ. ಅನೇಕ ಸಲ ಇವರಿಗೆ ಸಾಕಷ್ಟು ಆಸ್ತಿಪಾಸ್ತಿ ಇಲ್ಲ; ಹೀಗಾಗಿ ಕಾಯಿದೆಯ ದೃಷ್ಟಿಯಿಂದ ಇವರು ಸಭೆಗೆ ಅರ್ಹರಾಗುವುದಿಲ್ಲ. ಇನ್ನೂ ಕೆಲವರಿಗೆ ಸಕಿಕ್ಷಿತ ಶಕ್ತಿಗಳಾದ ಓಟರುಗಳಿಗೆ ಬೆನ್ನುಹಿಡಿದು ಇಲ್ಲದಸಲ್ಲದ ರಕ್ಷಕೇಳಿ ಅವರ ಓಟುಗಳನ್ನು ಪಡಕೊಳ್ಳುವ ಕೆಲಸವು ಗೌರವಾಸ್ಪದವಲ್ಲವೆಂದು ಕಾಣುತ್ತದೆ. ಇಂಥವರಿಗೆ ಸರಕಾರದವರು ಚುನಾಯಿಸಬಹುದಲ್ಲವೆ ಎಂದು ಕೇಳಿದರೆ ಇಂಥವರು ಅಜ್ಞಾನಿಯಾದ ಓಟರುಗಳನ್ನು ಪುಸಲಾಯಿಸುವುದು ಎಷ್ಟು ಹೀನವೆಂದು ನೆನಸುವರೋ? ಸರಕಾರೀ ಅಧಿಕಾರಿಗಳ ಬಳಿಯಲ್ಲಿ ಕಾಲೋಚಿತ ಸಲ್ಲಾಪವಮಾಡಿ ಅವರಿಗೆ ಆಗಾಗ ಭೇಟಿಮಾಡಿ ತಾನು ದೊಡ್ಡ ಮನುಷ್ಯನೆಂದು ಜನಸಾಮಾನ್ಯರು ತಿಳಿಯುವಂತೆ ನಟಿಸುವುದಕ್ಕೂ ಸಂದರ್ಭಾನುಸಾರವಾಗಿ ಇತರರ ಮೇಲೆ ಚಾಡಿಯ ಕೊಳೆನೀರನ್ನು ಚೆಲ್ಲಿ ಬಿಡುವುದಕ್ಕೂ ಅಷ್ಟೆ ಹಿಂಜರಿಯುತ್ತಾರೆ. ಮುಂದರಿಯುತ್ತಿರುವವರೆಲ್ಲ ಇದೆ ರೀತಿಯವರು ಎಂದು ನಾವು ಪ್ರತಿಪಾದಿಸುವುದಿಲ್ಲ. ಬಿಟ್ಟಿಬ್ಬರು ಜನಸಾಮಾನ್ಯದ ಒಳ್ಳೆತನ್ನ ಬಯಸಿ ಹೆಣಗಾಡುತ್ತಲಿರುವರು. ಆದರೆ ಇಂಥವರು ತಮ್ಮ ನಿರ್ದಾಕ್ಷಿಣ್ಯದ ಮಾತುಗಳಿಂದ ಬೇಗನೆ ಹಲವರ ಹಗೆ ಕಟ್ಟಿಕೊಳ್ಳಬೇಕಾಗುತ್ತದೆ. ಅಂಥವರನ್ನು ತಲೆ ಎತ್ತಲು ಬಿಡಬಾರದೆಂದು ಸ್ವಕೀಯ ರಾಜ್ಯಭಾರದ ಸೂತ್ರವನ್ನು ಹಿಡಿದವರು ಸಾಹಸಮಾಡುವುದೂ ಉಂಟು. ಹೀಗಾಗಿ ಜನರ ಅಜ್ಞಾನ ಒಂದು ಕಡೆ, ಸರಕಾರಿ ಅಧಿಕಾರ ವಕ್ರದೃಷ್ಟಿ ಇನ್ನೊಂದು ಕಡೆ, ಇವುಗಳಿಂದ ಹತಾಶರಾಗಿ ಕಾಲಗತಿಯನ್ನು ವಿಪರೀತವಾಗಿದೆ ಎಂದು ಭಾವಿಸಿ ಸ್ವಕೀಯ ರಾಜ್ಯಭಾರದ ಕಡೆಗೆ ಬೆನ್ನು ಹಾಕಿ ಬಿಡುತ್ತಾರೆ.

ಇದಲ್ಲದೆ ಪ್ರಜಾಜನಗಳ ಚುನಾವಣೆಯ ಮೆಂಬರರ ಸಂಖ್ಯೆಯೊಂದಿಗೆ ಸರಕಾರಿ ನಿಯಮಿತ ಮೆಂಬರರ ಸಂಖ್ಯೆಯೊಂದು ಇದೆ. ಈ ಸಂಖ್ಯೆ ಕಡಿಮೆಯಾದಲ್ಲಿಯೂ ಅವರ ಪ್ರಭಾವವು ಹೆಚ್ಚು. ಇವರು ಆಗಾಗ ಅಧಿಕಾರಿಗಳನ್ನು ಕಾಣುತ್ತಿದ್ದು ಅವರ ಉದ್ದೇಶಕ್ಕನುಸಾರವಾಗಿ ತಮ್ಮ ಮತವನ್ನು ತಿರುಗಿಸುವ ಅನುಕೂಲವಾದಿಗಳು. ಇವರ ಸ್ವಾಭಾವಿಕ ಪ್ರಜಾಪ್ರತಿನಿಧಿಗಳಿಗೆ ಎಂದೆಂದಿಗೂ ಸಿಕ್ಕಲಾರದು. ಅದರಲ್ಲಿಯೂ ಒಬ್ಬನ ಚುನಾವಣೆಯಲ್ಲಿ ಸೋತುಹೋಗಿ ಅನಂತರ ಸರಕಾರದ ಆಶ್ರಯಹೊಕ್ಕಿದ್ದರೆ ಇವರು ಗುಪ್ತ ಶತ್ರುಗಳೆಂತಲೆ ಭಾವಿಸಬೇಕು.

ಇನ್ನು ಕೆಲವು ಜಾತಿಗಳ ಮುಖಂಡರು ಓಟುಗಳ ಚುನಾವಣೆ ಸದಾ ದಾರಿಯಲ್ಲಿ ಒಳಗೆ ಬರಲಾರರು ಎಂದು ತಿಳಿದು ಕೆಲವು ಜಾತಿಗಳಿಗೆ ಮುಖ್ಯವಾಗಿ ಪರಮತಸ್ಥರಿಗೆ ಬೇರೆ ಮೆಂಬರುಗಳ ಚುನಾವಣೆ ಹಕ್ಕು ಕೊಟ್ಟಿದೆ. ಇದಕ್ಕೆ ಕೆಲವು ಮಟ್ಟಿಗೆ ಸ್ವಾರ್ಥಪರರಾದ ಮೆಂಬರುಗಳ ಅಧಿಕಾರಪ್ರಿಯತ್ವವೇ ಕಾರಣವಾಯಿತು. ಎಷ್ಟು ವರ್ಷಗಳ ವರೆಗೂ ಮೆಂಬರರಾಗಿರಲಿ ತನ್ನ ಜಾತಿ ತನ್ನ ಮತದ ಮೆಂಬರುಗಳೆ ಹೆಚ್ಚಿಗೆ ಇರಬೇಕು, ತನ್ನ ಜಾತಿಯ ಉದ್ಧಾರವಾಗಬೇಕು ಎಂಬಂತಹ ಅಲ್ಪಕಾಂಕ್ಷೆಯಿಂದ ನಡೆಸಿದ ಸತ್ಕ್ರಿಯೆ ಈ ಅನರ್ಥಕ್ಕೆ ಕಾರಣವಾಯಿತು. ಈಗಲೂ ಹಲವು ಕಡೆಗಳಲ್ಲಿ ಈ ಜಾತಿಸ್ವಾರ್ಥವು ಸ್ವಕೀಯ ರಾಜ್ಯಭಾರದ ಮರಕ್ಕೆ ಹಿಂಗು ಇಟ್ಟಂತಾಗಿದೆ. ಮರವು ಸ್ವಲ್ಪಗಿ ಹೋದದ್ದು ಕಾಣುತ್ತದಲ್ಲದೆ ಕಾರಣವು ಬಾಹ್ಯದೃಷ್ಟಿಗೆ ಥಕ್ಕನೆ ಹತ್ತುವುದಿಲ್ಲ.

ಇಷ್ಟು ಹೇಳಿದ ಮೇಲೆ ಚುನಾವಣೆಯ ಹಕ್ಕುಗಳುಳ್ಳವರ ಸಂಖ್ಯೆಯು ಕೇವಲ ಆಸ್ತಿಯ ಮೊಬಲಗಿನ ಮೇಲೆ ಆಧಾರಿಸಿದೆ ಇತರ ಸಂಗತಿಗಳನ್ನು ಅಲೋಚನೆಗೆ ತೆಕ್ಕೊಳ್ಳಬೇಕೆಂದೂ ಮುಖ್ಯವಾಗಿ ವಿದ್ಯಾಬಲವನ್ನು ಸಹಕಾರಿಯಾಗುವಂತೆ ಆದರಕ್ಕೆ ಎದೆಕೊಡಬೇಕೆಂತಲೂ ಬೇರೆ ಹೇಳಬೇಕಾಗಿಲ್ಲ. ಚುನಾವಣೆ ಮಾಡುವವರಲ್ಲಿ ಯೋಗ್ಯರು ಬಹುಮಂದಿ ಇದ್ದರೆ ಅಂಥವರ ಚುನಾವಣೆಯಿಂದ ಆರಿಸಲ್ಪಡುವ ಮೆಂಬರರು ಸಹಜವಾಗಿಯೆ ಸ್ವಕೀಯರಾಜ್ಯಭಾರದ ರಥವನ್ನು ಸರಿಯಾಗಿ ಮುಂದೊತ್ತುವರು. ಆಗ ಸ್ವಕೀಯರಾಜ್ಯಭಾರದ ಸಂಸ್ಥೆಗಳಲ್ಲಿ ಕೇವಲ ಚುನಾವಣೆಯ ಮೆಂಬರರೆ ಇದ್ದರೆ ಆಕ್ಷೇಪವೇನು? ಹೀಗೆ ಓಟರುಗಳ ಯೋಗ್ಯತೆಯಲ್ಲಿ ಅಗತ್ಯ ಇರುವ ಬದಲಾವಣೆಗಳನ್ನು ಮಾಡದಿದ್ದರೆ ಬಹುಮಾನಪಟ್ಟ ಪಟೇಲರು ಹೇಳುವಂತೆ ಲೋಕಲ್‌ಬೋರ್ಡುಗಳಲ್ಲಿ ಕೇವಲ ಚುನಾವಣೆಯ ಮೆಂಬರುಗಳನ್ನು ತರುವುದೂ ಸರಿಯಲ್ಲ. ಮತ್ತು ಅಂಥ ಜೋಂಟಿಗಳಿಂದ ಸ್ವಕೀಯರಾಜ್ಯಭಾರದ ಕೆಲಸವು ಕೈಸಾಗದು.

ಪತ್ರವ್ಯವಹಾರ.

ಈ ಶಹರು ಮದ್ರಾಸ ಸಂಸ್ಥಾನದ ಜಿಲ್ಲೆಗಳಲ್ಲಿರುವ ಮುಖ್ಯ ಬಂದರುಗಳ ಪೈಕಿ ಒಂದಾಗಿರುತ್ತದೆ. ಇಲ್ಲಿ ಮಳೆಗಾಲ ವಿನಹ ಬಾಕಿ ಉಳಿಯುವ ಕಾಲಗಳಲ್ಲಿ ಬೊಂಬೈ ಸ್ಟೀಮ್ ನೆವಿಗೇಶನ್ ಕಂಪೆನಿಯವರ ಹಾಯಿ ಹೊಗೆ ಹಡಗಗಳು ಪ್ರತಿವಾರಕ್ಕೊಮ್ಮೆ ಬಂದುಹೋಗುತ್ತಾ ಇವೆ ಶಿವಾಯ ಸೌತ್ ಇಂಡಿಯಾ ರೈಲ್ವೆ ಕಂಪೆನಿಯವರ ಬಾಬ್ತು ಕೊನೆಯ ಸ್ಟೇಶನು ಆಗಿರುತ್ತದೆ. ಇಲ್ಲಿ ಗುಜರಾತಿ ಜಾತಿಯವರ ವಸ್ತಿಯು ಸುಮಾರು ಒಂದು ಶತಮಾನಕ್ಕಿಂತ ಮೊದಲಿನಾರಭ್ಯ ಇರುತ್ತದೆ. ಮಲಬಾರ ಕೋಸ್ತಿನ ಕಣ್ಣಾನೂರು, ಕಲ್ಲಿಕೋಟೆ, ಕೊಚ್ಚಿ, ಅಲಪಯಿ ವಗೈರೆ ಇನ್ನೂ ಅನೇಕ ಬಂದರ ವ ಇತರ ವ್ಯಾಪಾರದ ಸ್ಥಳಗಳಲ್ಲಿರುವ ಗುಜರಾತಿ ಜಾತಿಯವರಿಗೂ ಇಲ್ಲಿಯ ಗುಜರಾತಿ ವ್ಯಾಪಾರಸ್ಥರಿಗೂ ವ್ಯಾಪಾರ ಸಮ್ಮಂಧವಿರುತ್ತದೆ. ಆದರಿಂದ ಈ ಶಹರಿಗೆ ವ್ಯಾಪಾರ ವ ಇತರ ಸಮಯಗಳಲ್ಲಿ ಅನೇಕ ಗುಜರಾತಿಯವರು ಬರುವದು ಯಾ ಹೋಗುವದು ಇರುತ್ತದೆ ಶಿವಾಯ ಸುಮಾರು ೧೮ ಮೈಲು ದೂರವಿರುವ ಶ್ರೀ ಮುಲ್ಕಿ ವ ಸುಮಾರು ೨೨ ಮೈಲು ದೂರವಿರುವ ಶ್ರೀ ಮೂಡಬಿದ್ರೆಯಲ್ಲಿ ಯಾತ್ರಿಕಸ್ತರಿಗೆ ಪೂಜ್ಯವಾದ ಸ್ಥಳಗಳು ಈ ಶಹರಿಗೆ ಒಳಪಟ್ಟಿರುವದರಿಂದ ಮಲಬಾರ ಕಡೆಯವರೂ ಮಾರವಾಡ, ಉತ್ತರಹಿಂದುಸ್ಥಾನ, ಬೊಂಬಯಿಪ್ರಾಂತ್ಯದ ಇತರ ಸ್ಥಳಗಳಿಂದ ಗುಜರಾತಿಯವರು ಯಾತ್ರಿಕರಾಗಿ ಬರುತ್ತಾ ಇರುತ್ತಾರೆ. ಈ ಯಾತ್ರಿಕರಿಗೂ ಅಥವಾ ಬೊಂಬಯಿ ಅತ್ತಕಡೆಯಿಂದ ಬಂದು ರೈಲ್ವೆಮಾರ್ಗದಿಂದ ಮಲಬಾರ ಕಡೆಗೆ ಹೋಗುವವರಿಗೂ ಅಥವಾ ಮಲಬಾರದಿಂದ ಬಂದು ಬೊಂಬಯಿ ವಗೈರೆ ಸ್ವದೇಶಕ್ಕೆ ಹೋಗುವವರಿಗೂ ಹೊಗೆಹಡಗದಿಂದ ಯಾ ರೈಲಿನಿಂದ ಇಳಿದ ಕೂಡಲೆ ಉಳಕೊಳ್ಳುವದರೆ ಯಾವ ತರದ ಠಿಕಾಣೆಯುಲ್ಲದೆ ಇರುವ ಪ್ರಯುಕ್ತ ಪ್ರಯಾಣಸ್ಥರು ಬಹಳವಾದ ಕಷ್ಟಗಳಿಗೊಳಗಾಗಬೇಕಾಗುತ್ತದೆ. ಈ ಕಷ್ಟಗಳನ್ನು ಹೋಗಲಾಡಿಸಿ [illegible] ಪ್ರಯಾಣಿಕರಿಗೆ ಸಾಧ್ಯವಿದ್ದ ಮಟ್ಟಿಗೆ ಸಹಾಯಕರಾಗಿರುವಂತೆ ಮೆಸ್ಸರ್ಸ ನಾರಾಯಣಜೀ [illegible] ಕಂಪೆನಿಯ [illegible], ಮೆಸ್ಸರ್ಸ [illegible] [illegible] ಎಂಡ್ [illegible] ಕಂಪೆನಿಯ [illegible] ಮತ್ತು [illegible] [illegible]

ತಾ. ೧-೮-೧೭ಲ್ಲು ಸರ್ವ ಮಿತ್ರವರ್ಯರ ಗ.ಜರಾತಿಯರಿಗೆ ಸಭೆಕೂಡಬೇಕಾಗಿ ವಿನಯಪೂರ್ವಕ ಕರೆಯಲ್ಪಟ್ಟಮೇರೆಗೆ ಸಭೆಕೂಡಿತು. ಸಭೆಯವರ ಅಪೇಕ್ಷೆಮೇರೆಗೆ ಇಲ್ಲಿಯ ವಯೋವೃದ್ಧರಾದ ಮ. ರಾ. ಶೇಟ್ ವಿಠಲದಾಸವಲ್ಲಭದಾಸ ಇವರ ಚಿ. ತುಲಸಿದಾಸ ಶೆಟ್ರುವರು ಪ್ರಮುಖಸ್ಥಾನವನ್ನು ಅಂಗೀಕರಿಸಿ ಈ ಮಂಡಳಿಯಿಂದ ಆಗುವ ಅನೇಕ ತರವಾದ ಲಾಭಗಳನ್ನೂ, ಪರೋಪಕಾರವನ್ನೂ ವಿವೇಚನೆಮಾಡಿದರು. ಶಿವಾಯಿ ಇತರ ಅನೇಕ ಸಭಿಕರೂ ಸಹ ತಮಗೆ ಯುಕ್ತಕಂಡ ಭಾಷಣಗಳನ್ನೂ ಕೊಟ್ಟರು. ಇದರಿಂದ ಸಭೆಯಲ್ಲಿ ಹಾಜರಿದ್ದ ಅನೇಕರು ಸದಾ ಮಂಡಳಿಯ ಮೆಂಬರರಾಗುವರೆ ತಂತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ನಂತರ ಈ ಹೊತ್ತಿನ ದಿವಸ ಪುನಹಾ ಸಭೆಕೂಡಿ ಸಭೆಯವರ ಅಪೇಕ್ಷೆಯಂತೆ ಮ. ರಾ. ಶೇಟ್ ಪುರುಷೋತ್ತಮನಾನಜೀಮವರ ಪ್ರಮುಖಸ್ಥಾನವನ್ನು ಅಂಗೀಕರಿಸಿ "ಗುಜರಾತಿ ಮಿತ್ರಮಂಡಳಿ" ಎಂಬ ಸಂಸ್ಥೆಯನ್ನು ಶ್ರೀ ಕೃಷ್ಣಜನ್ಮಾಷ್ಟಮಿಯ ದಿವಸ ಮಂಗಳೂರಲ್ಲಿ ಸ್ಥಾಪಿಸಿದರ, ವ ಈ ಮಂಡಳಿಯು ಮೂಲಧಂಡಿನ ಬಗ್ಗೆ ಅನೇಕ ಸಭಾಗೃಹಸ್ಥರು ತಂತಮ್ಮ ಇಚ್ಛೆಯಂತೆ ಪವೇಜನ ರಕಮುಗಳನ್ನು ಬರಾಯಿಸಿ ತಮ್ಮ ಉದಾರವೃತ್ತಿಯನ್ನು ತೋರಿಸಿದರು. ತರುವಾಯ ಸಭೆಯವರ ಸಂತೋಷಾರ್ಥವಾಗಿ ಶಿಷ್ಯದಾನಂದ ಪರಬ್ರಹ್ಮಸ್ವರೂಪಿಯಾದ ಶ್ರೀ ಕೃಷ್ಣ ಬಾಲಲೀಲೆಯನ್ನು ಇಲ್ಲಿಯ ಹರಿದಾಸ ಶಿವಾನಂದ ಭಟಜೀಯವರು ಕೀರ್ತನೆಮಾಡಿ, ಸಭೆಯವರಿಗೆ ಪುಷ್ಪಹಾರಾದಿಗಳನ್ನು ಕೊಟ್ಟು ತಾ ೧೨-೮-೧೭ಕ್ಕೆ ಪುನಹಾ ಸಭೆಕೂಡಬೇಕಾಗಿ ನಿರ್ಣಯಿಸಿ ಈ ದಿನ ಸಭೆ ಬರಕಾಸ್ತ ಮಾಡಲಾಯಿತು.

ಸ್ವಾಮಿ,

ಕಳೆದ ತಿಂಗಳ ೨೭ನೇ ತಾರೀಕಿನ ತಮ್ಮ ಪತ್ರಿಕೆಯಲ್ಲಿ ಮಂಗಳೂರು ತಾಲೂಕು ಬೋರ್ಡಿನಲ್ಲಿ ನಡೆದಿದ್ದೆಂಬ ಕೆಲವು ಅಬದ್ಧ ಸಂಗತಿಗಳನ್ನು ಆಧಾರಿಸಿಕೊಂಡು ಅನೇಕ ತಾಲೂಕುಬೋರ್ಡುಗಳ ಮಿಟಿಂಗುಗಳು ಇದೇ ರೀತಿಯಲ್ಲಿ ನಡೆಯುವದೆಂತ ಅಭಿಪ್ರಾಯಪಟ್ಟು ಸ್ವರಾಜ್ಯದ ತತ್ವವನ್ನೇ ಆಕ್ಷೇಪಿಸಿ ತಮ್ಮ ಬಾತ್ಮೀದಾರನು ಪ್ರಕಟಿಸಿದ 'ಕಳವಾದ ನಂತರ ಕಳವಳಿಸಿ ಫಲವೇನು' ಎಂಬ ಶಿರನಾಮೆಯ ಲೇಖನವನ್ನು ನೋಡಿ ಆಶ್ಚರ್ಯಪಟ್ಟೆನು.

ತಮ್ಮ ಬಾತ್ಮೀದಾರನು ತಾಲೂಕುಬೋರ್ಡ ಮೆಂಬರನೂ ಅಲ್ಲ ತಾಲೂಕುಬೋರ್ಡುಗಳ ಮಿಟಿಂಗುಗಳ ರೀತಿಗಳನ್ನು ಅನುಭವಪಟ್ಟವನೂ ಅಲ್ಲ. ತಾಲೂಕುಬೋರ್ಡುಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಓದಿಯಾದರೂ ಮಾಹಿತಿ ಸಂಪಾದಿಸಿಕೊಂಡವನೂ ಅಲ್ಲವೆಂಬುದು ಆತನ ಬಾತ್ಮಿಯಿಂದ ಸ್ಪಷ್ಟವಾಗುತ್ತದೆ. ಹೇಗೆಂದರೆ:—

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು

ಇತರರಿಂದ ಏಕೆ ಪಡೆಯಬೇಕು?

ಬಾಟ್ಲು 1ಕ್ಕೆ 0—5—0. ಡಜನಿಗೆ ರೂ. 3

ಲಾಭವೊಂದನ್ನೇ ತಮ್ಮ ಗುರಿಯಾಗಿಟ್ಟುಕೊಳ್ಳುವ ಸಾಮಾನ್ಯ ವ್ಯಾಪಾರಸ್ಥರಿಗೆ ಮಿಶ್ರಣವಾದ ಎಣ್ಣೆಯು ಯಾವುದು, ಶುದ್ಧವಾದದ್ದು ಯಾವುದೆಂಬುದನ್ನು ತಿಳಿಯಲು ಆಗುವುದಿಲ್ಲ. ಔಷಧಿಗಳ ಶುದ್ಧತೆಯನ್ನು ಕೆಡಿಸಿದ್ದರಿಂದ ಅದನ್ನು ಉಪಯೋಗಿಸುವಂಥಾ ಜನರಿಗೆ ಎಂಥೆಂಥಾ ಅಪಾಯಗಳು ಉಂಟಾಗುವವೆಂಬುದನ್ನು ಇಂಥವರಿಂದ ಗ್ರಹಿಸಲಾಗುವದಿಲ್ಲ. ಹೆಚ್ಚೇನು?

ಔಷಧಿ ವ್ಯಾಪಾರದ ವಿಶೇಷ ಜವಾಬ್ದಾರಿಯು

ಏನೆಂಬುದನ್ನು ಇವರು ಸರ್ವಥಾ ತಿಳಿಯರು. ಆದ್ದರಿಂದ ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ದಿ ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,

ತೇರಬೀದಿ, ಮಂಗಳೂರು.

ಸಂಗೀತ ಪುಸ್ತಕಗಳು.

೧ ಹಾರ್ಮೋನಿಯಂ ಸ್ವಯಂ ಬೋಧಿನಿ.

ಎರಡನೇಯ ಛಾಪೆ.

ಈ ಪುಸ್ತಿಕದಲ್ಲಿ ಪ್ರಥಮ ಮುದ್ರಣದಲ್ಲಿ ಪ್ರಚುರಪಡಿಸಿರುವ ಪುರಂದರ ದಾಸರಕೀರ್ತನೆಗಳೇ ಮೊದಲಾದ ಕನ್ನಡ ಕೀರ್ತನೆಗಳ ಜತೆಗೆ, ಅಲಂಕಾರಗಳು, ಗೀತಗಳು, ಸ್ವರಜತಿಗಳು, ವರ್ಣಗಳು, ಸುಪ್ರಸಿದ್ಧವಾದ ತೆಲುಗು ಕೀರ್ತನೆಗಳು, ನಾಟಕದ ಮಟ್ಟುಗಳು, ವನ್ನೆರೆ ಅನೇಕ ಹೊಸ ವಿಷಯಗಳನ್ನು ಸೇರಿಸಿರುತ್ತೆ. ಈಗಿನ ಪುಸ್ತಕವು ೮೦ ಪುಟಗಳುಳ್ಳದ್ದು.

ಬೆಲೆ 0—8—0. ಹಾಸಲು 0—2—0.

ಲೈಬ್ರರಿಗೆ ಬೇಕಾದ ಪುಸ್ತಕಗಳು.

ಕುಮಾರವ್ಯಾಸಭಾರತ	3— 0—0	ವೈಶಂಪಾಯನ ಚಂದ್ರಸಾರ	0— 4—0
ಜೈಮಿನಿಭಾರತಮೂಲ	1— 8—0	ದುಗೇಶ ನಂದಿನಿ	1— 4—0
ಭವ ಬಸವಪುರಾಣ	1— 0—0	[illegible]	1— 4—0
ತೊರವೆ ರಾಮಾಯಣ	1— 0—0	ಇಂದಿರಾ	0— 6—0
ಭಾಗವತ(ಪದ್ಯಕಾವ್ಯ)	3— 0—0	ರಮಾನಂದ	0—10—0
ಬಾಲಭಾರತ	1— 0—0	ಸುಭದ್ರೆ	0— 5—0
ಅರ್ನ ನೆಂಕಟೇಶ್ವರ ಕಂಪೆನಿ ರಾಮಾಯಣ ಆರು ಕಾಂಡಗಳುಳ್ಳದ್ದು		ಕಲಿಯುಗ	0— 5—0
		ರಾಧಾರಾಣಿ	0— 3—0
		[illegible]	0— 8—0
ವಚನಶಾಸ್ತ್ರ	8— 8—0	ಏಕಲವ್ಯ	1— 4—0
ಮುದ್ರಾಮಂಜೂಷ	1— 9—0	[illegible]	0— 8—0
ಪಂಚತಂತ್ರ	0— 9—0	[illegible]	1— 0—0
ಕಾವ್ಯಾವಲೋಕನ ಶತ್ರ	0— 4—0	ಭಾರತವೀರ ಚರಿತ್ರೆ	1— 8—0
ಪ್ರಬಂಧಮಂಜರಿ	0—13—0	[illegible]	1— 4—0
ಸ್ತ್ರೀ ಧರ್ಮನೀತಿ	0— 9—0	[illegible]	
ಸತ್ಯಹರಿಶ್ಚಂದ್ರ	0— 6—0	[illegible]	3— 0—0
ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ	1— 8—0	[illegible]	0—10—0

[illegible]

ವಿಳಾಸ:— ಎಚ್. ಎಸ್. [illegible]

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು	ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು	,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು	,,	225,000—0—0
Paid up Capital	205,450—0—0	ಆಗತ ಮೂಲ ಧನವು	,,	205,450—0—0
Deposits	304,490—14—11	ಠೇವಣಾತಿಯಾಗಿ ಕೊಡೋಣವಾದ ಮೊಬಲಗುಗಳು		304,490—14—11
Reserve Fund	50,003—2—5	ರಕ್ಷಿತ ಧನವು		50,003—2—5

25% of the net profits are added annually to the Reserve Fund. Rs. 37,364—11—2 have been invested in Government Paper

ರಕ್ಷಿತ ಧನಕ್ಕೆ ಪ್ರತಿ ವರುಷದ ಪೂರಾ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 37,364-11-2 ಸರಕಾರದ ನೋಟುಗಳಲ್ಲಿ ಠೇವಣಾತಿ ಮಾಡಿಡಲ್ಪಟ್ಟಿರುವುದು.

Dividends of not less than 6%. paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋತ್ತೇಜಕವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5, 5½% and 6% respectively at the discretion of the managing committee.

ಕಾಯಂ ಠೇವಣಾತಿಗಳು. ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Short-notice Deposits requiring one week's notice of withdrawal after one month received @ 3½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಸೇಕಡಾ 3½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ತರೆಯಲಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಬಹುದಾಗಿದೆ. ಆ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡಲಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಾರದ ಮೇಲೆ ಸಾಲಗಳು ಕೊಡೋಣವಾಗುವುವು.

Canara Bank Ltd.,
Mangalore, 1st. August 1917.

P. Gopal Naik,
Secretary

ಅರ್ಧ ಕ್ರಯ! ಅರ್ಧ ಕ್ರಯ!!
ಒಂದು ತಿಂಗಳ ವರೆಗೆ ಮಾತ್ರ!

ನಮ್ಮ ನಿಕ್ಕಲ್ ಬೆಳ್ಳಿ ಕಿಸೆ ಗಡಿಯಾರವು ಬಹಳ ಸರಿಯಾಗಿ ಸಮಯವನ್ನು ಸೂಚಿಸುವದು, ಸಭ್ಯರೂ ಸಹ ಧರಿಸಿಕೊಳ್ಳಲು ಸರಿಯಾದಂಥಾದ್ದು. ಮೂರು ವರುಷಗಳ ಗೆರೆಂಟಿ ಇದೆ. ರೂ. 7-14-0, 9—14—0 ಕ್ರಯವಿರುವಂಥವುಗಳನ್ನು ಈಗ ರೂ. 3—15—0, 4—15—0ಕ್ಕೆ ವಿಕ್ರಯಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚು ರೂ. 13ರ ಕ್ರಯದ್ದು ರೂ. 6—8—0ಕ್ಕೆ ದೊರಕುವದು. ರೂ. 15ರ ಅಂದವಾದ ಹಂಟಿಂಗ್ ವಾಚು ರೂ. 7—8—0 ಕ್ಕೆ ದೊರಕುವದು. ಲೇಡಿ ಸ್ಯಾಜಿನ ಬೆಳ್ಳಿ ರೂ. 18ರ ವಾಚನ್ನು ರೂ. 9ಕ್ಕೆ. ಅಂದವಾದ ಭಂಗಾರದ ಮುಲಾಮಿನ ರೂ. 20ರ ವಾಚು ರೂ. 10ಕ್ಕೆ. ರಿಷ್ಟ್ ವಾಚು ರೂ. 12 ಕ್ರಯದ್ದು ಬಹಳ ಉತ್ಕೃಷ್ಟವಾದದ್ದು ರೂ. 6ಕ್ಕೆ. ಕೈಗೆ ಹಾಕುವ ಚರ್ಮದ ಪಟ್ಟಿ ಸಹಿತ, ಬಹಳ ಗಟ್ಟಿಯಾದದ್ದು, ಎಂಟು ದಿವಸಗಳ ಚಾವಿ ಇರುವಂಥಾದ್ದು ಕ್ರಯ ರೂ. 24ರದ್ದನ್ನು ರೂ. 12ಕ್ಕೆ ಕೊಡೋಣಾಗುವದು.

ವಿಶೇಷ ಇನಾಮು. ಪ್ರತಿ ಒಂದು ವಾಚು ಪಡಕೊಳ್ಳುವವನಿಗೆ ಒಂದು ಚಂದವಾದ ಸರಪಳಿಯು ಇನಾಮು. 6 ವಾಚುಗಳನ್ನು ಪಡಕೊಳ್ಳುವವನಿಗೆ ಒಂದು ವಾಚು ಉಚಿತಾರ್ಥವಾಗಿ ಕಳುಹಿಸೋಣಾಗುವದು.

ಕೊಂಪಿಟೇಷನ್ ವಾಚ್ ಕಂಪೆನಿ,
25 ಮದನಮಿತ್ರ ಲೇನ್, ಕಲ್ಕತ್ತಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪ್ಪೂರ್ ಕಮಿಷನ್!!

ಶತಮೂಲಿಕಾ ಅಮೃತ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಪ್ರಭಾ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಶಿದ್ಧ ರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠವೇಥ, ವಾತರೋಗಗಳು ನಿಶ್ಚಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ಪರ್ಶೇಂದ್ರಿಯ, ಸರ್ವೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಬಸಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನು ಸುಪುತ್ರನನ್ನು ಕೊಡುತ್ತದೆ. ಕೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮವ್ಯಾಧಿ, ಕ್ಷಯರೋಗ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0.

೭. ದಬಾರ್ ಬ್ಯೂಟಿ ವೆಸ್ಲಿನ್. ಇದರ ಉಪಯೋಗದಿಂದ ಮುಖದ ಮೇಲೆ ಇರುವ ಸರ್ವ ಕಲೆಗಳು ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ. ಇದು ವಾಯು ದುಮ್ಮಾನ್ ಎಂಬ ಬಡಿ ಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಲೆ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ನಾನಾರೀತಿ ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ
ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ
ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಪ್ಲೇಗ್ ವಿನಾಶಕ. ಪ್ರಿವಾಡಿ ಸಾಧಕವನ್ನು ಪ್ರತಿನಿತ್ಯವೂ ಸೇವಿಸುವ ಪ್ರಕಾರ ತಕೊಳ್ಳುವವರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ. ಈ ಘೃತವು ಪ್ಲೇಗ್ ಬ್ಯೂಬೋ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡಿತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ಯಂ ಯಸ್. ರಾವ್ ಕಂಪೆನಿ,
ಬುಕ್-ಸೆಲರ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಿಷಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0-12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0— 8—0
ಆದರ್ಶ ಸುಂದರಿ (ದ್ವಿತೀಯ ಮುದ್ರಣ)	0— 8—0
ಅಮೃತ ಪುಲಿನ ,,	0—10—0
ಇಂದಿರಾ ಕ್ಕೆ. ಮು.	0— 6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0—10—0
ಮಧುಸೂದನ ಡಿಟೆಕ್ಟಿವ್ ನಾವಿಲ್	0— 4—0
ಪ್ರಫುಲ್ಲ ,, ,,	0—12—0
ಅಂಬಾಲಿಕೆ (ಹೊಸ ನಾವಿಲ್)	0— 1—0
ಕುಸುಮ ,,	0— 1—0
ರಾಧಾರಾಣಿ ,,	0— 2—0
ಸುಭದ್ರೆ ,,	0— 5—0
ಚಂದ್ರಹಾಸ (ಹೊಸ ಕತೆ)	0— 1—0
ಧ್ರುವ ,,	0— 2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಅಕ್ಷರ ಮಂಜರಿ	1— 0—0
,, ಸಂಗೀತ ಸಮಯಸಾರ	1— 4—0
ಮಾತೃನಂದಿನಿ (ಶ್ರೀ ಹನುಮಂತು)	1— 4—0
ವಿಕ್ರಮ ,,	1— 2—0
ಕಂದರ್ಪ ವಿಜಯ	0—10—0
[illegible] 19×29	0— 1—0

ಡೊಂಗರ್ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರ್ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಯೂರೋಪದ ಮಹಾ ಯುದ್ಧ.

ಜರ್ಮನರ ಸೈನ್ಯವು ತರಂಗತರಂಗವಾಗಿ ಬೆಸ್ರಾಬಿ ಎಂಬ ಸ್ಥಳದ ಬಳಿಯಲ್ಲಿ ರುಷ್ಯದವರಮೇಲೆ ಬಿದ್ದರೂ, ಅವರನ್ನು ಹಿಂದಟ್ಟಲಿಕ್ಕೆ ಆಗಲಿಲ್ಲ. ರುಷ್ಯರ ಒಂದು ಸೈನ್ಯವು [illegible]ಗೆ ಮುಂದರಿಸಿ ಹೋಗಿ ಸುಮಾರು ೩೦೦ ಜರ್ಮನರನ್ನು ಸೆರೆಹಿಡಿದರು. ಫಾಮೂದಾ ಎಂಬ ಸ್ಥಳಕ್ಕೆ ದಕ್ಷಿಣದಲ್ಲಿರುವ ಕೆಲವು ದಿಣ್ಣೆಗಳನ್ನು ಜರ್ಮನರಿಂದ ರುಷ್ಯರು ಕಿತ್ತುಕೊಂಡರು.

ಒಕ್ನಾ ಬಳಿಯಲ್ಲಿ ರುಮೇನಿಯರು ಹಿಮ್ಮೆಟ್ಟಬೇಕಾಯಿತು. ಫೊರ್ಕ್ಷಾನಿಮರೆ ಸೆಟ್ಟಿ ರೈಲ್ವೆ ಬಳಿಯಲ್ಲಿ ಜರ್ಮನರು ತಂಡತಂಡವಾಗಿ ರುಮೇನಿಯನರ ಮೇಲೆ ಬಿದ್ದು ಅವರನ್ನು ಸುಟಿಟ್ಸಾ ನದಿಯ ಪಾರುಮಾಡಿಸಿ ಹಿಂದಕ್ಕೆ ಅಟ್ಟಿದರು.

ಫ್ರೆಂಚರು ಬೆಕ್ಸಕೂಟದ ವಾಯುವ್ಯದಲ್ಲಿ ಮುಂದರಿಸಿದ್ದಾರೆ. ಬ್ರಿಟಿಷರ ಯುದ್ಧವಿಮಾನಗಳು ಜರ್ಮನರ ಪಾಳ್ಯದಿಂದ ೪೦ ಮೈಲು ಹಿಂದವರೆಗೆ ಹೋಗಿ ಕೈಲ್ವೆಗಳ ಮೇಲೆ ಸಿಡಿಮದ್ದನ್ನು ಚೆಲ್ಲಿ ಬಹಳ ಹಾವಳಿಯನ್ನುಂಟುಮಾಡಿದವು. ಅದೇ ರೀತಿಯಲ್ಲಿ ಜರ್ಮನ ಯುದ್ಧವಿಮಾನಗಳು ಬಂದಾಗ ಅವುಗಳಲ್ಲಿ ೧೨ ಇಂಗ್ಲಿಷ ಫಿರಂಗಿಗಳ ಪೆಟ್ಟಿನಿಂದು ನೆಲಕ್ಕೆ ಉರುಳಿದವು; ಇಂಗ್ಲಿಷರ ೧೨ ವಿಮಾನಗಳು ಕಾಣದೆಹೋದವು.

ಜರ್ಮನರ ಯುದ್ಧವಿಮಾನಗಳು ಇಂಗ್ಲೆಂಡಿನಲ್ಲಿ ಸೌತ್‌ಎಂಡ ಎಂಬಲ್ಲಿಗೆ ಹಾರಿಬಂದು ಸಿಡಿಮದ್ದನ್ನು ಚೆಲ್ಲಿದ್ದರಿಂದ ೮ ಪ್ರಾಯಸ್ಥರೂ ೬ ಮಕ್ಕಳೂ ಸತ್ತುಹೋದದ್ದಲ್ಲದೆ ಸುಮಾರು ೫೦ ಮಂದಿಗೆ ಗಾಯತಗಲಿದೆ. ರೋಕ್‌ಫೊರ್ಡಿನಲ್ಲಿ ಒಬ್ಬನಿಗೆ ಪೆಟ್ಟುತಗಲಿದೆ. ಮಾರ್ಗೇಟಿನಲ್ಲಿ ಒಂದು ಖಾಲಿಮನೆಯು ನೆಲಸಮವಾಯಿತು.

ನೋರ್ತ್‌ಸೀಯಲ್ಲಿ ಒಂದು ಬ್ರಿಟಿಷ ಯುದ್ಧನಾವೆಯು ಸಮುದ್ರದಲ್ಲಿ ತೇಲಬಿಟ್ಟಿದ್ದ ಸಿಡಿಮದ್ದಿನ ಗುಂಡುಗಳಿಂದ ಮುಳುಗಿಹೋಯಿತು. ಅದರ ಕೆಪ್ಟನ್, ೨ ಅಧಿಕಾರರು ಮತ್ತು ೨೪ ಖಲಾಸಿಗಳು ಮಾತ್ರ ಜೀವಂತರಾಗಿ ಉಳಿದರು.

ಸ್ಟೆನಿಕ್ ಮತ್ತು ಸ್ವೊಕಲೀರಿ ಎಂಬ ಊರುಗಳ ಬಳಿಯಲ್ಲಿ ಜರ್ಮನರು ರುಷ್ಯದಮೇಲೆ ಮಾಡಿದ ಸಾಹಸವು ಸಫಲವಾಗದೆ ಹೋಯಿತು.

ರುಮೇನಿಯರು ಮೊವಡದ ವಾಯುವ್ಯದಲ್ಲಿಯೂ ಫೊಕ್ಷಾನಿ ಬಳಿಯಲ್ಲಿಯೂ ಜರ್ಮನರ ಯುದ್ಧರಭಸವನ್ನು ತಡೆಕಟ್ಟಿದರು.

ಬ್ರಿಟಿಷ ಯುದ್ಧವಿಮಾನಗಳು ಒಸ್ಟೆಂಡ್ ಮತ್ತು ಟೂರ್ಹೌಟ್ ರೈಲ್ವೆ ಸ್ಟೇಶನುಗಳ ಮೇಲೆ (ಬೆಲ್ಜಿಯಮ್) ಸಿಡಿಮದ್ದನ್ನು ಚೆಲ್ಲಿ ಬೆಂಕಿಯ ಜ್ವಾಲೆಯನ್ನು ಹಬ್ಬಿಸಿದವು.

ಬೆಲ್ಜಿಯಮ್‌ದ ಫ್ಲೆಂಡರ್ಸ್ ಭಾಗದಲ್ಲಿ ಜರ್ಮನರಿಗೂ ಇಂಗ್ಲಿಷ ಮತ್ತು ಫ್ರೆಂಚರಿಗೂ ಈಗ ನಡಿಯುತ್ತಿರುವ ಯುದ್ಧವು ವಿವರಿಸಲು ಅಸದಳವಾಗಿದೆ.

ಬ್ರಿಟಿಷರು ಈಪರ್‌ದ ಪೂರ್ವದಲ್ಲಿ ಎರಡು ಮೈಲುಗಳ ವರೆಗೆ ಮುಂದರಿಸಿ ವೆಸ್ಟಹೋಕನ್ನು ಹಿಡಿದು ಗ್ಲೆನ್‌ಕೂರ್ಸ್‌ವರೆಗೆ ಮುಟ್ಟಿದರು. ಆದರೆ ಅದರ ಕೆಲವು ಅಂಶವನ್ನು ಹಿಂದಕ್ಕೆ ಬಿಟ್ಟುಕೊಡಬೇಕಾಯಿತು.

ಫ್ರೆಂಚರು ಸ್ಟೀನ್ ಚಿಕ್ಕನದಿಯ ಬಳಿಯಲ್ಲಿ ಸ್ವಲ್ಪ ಮುಂದರಿಸಿದರು.

ರಷ್ಯದ ಮೇಲೆಯೂ ರುಮೇನಿಯರ ಮೇಲೆಯೂ ಜರ್ಮನರ ಒತ್ತಾಟವು ಜೋರಾಗಿದೆ. ಬ್ರೊಡಿ ಬಳಿಯಲ್ಲಿ ರುಷ್ಯರು ಜರ್ಮನರನ್ನು ಸ್ವಲ್ಪ ತಡೆದರೂ ರುಮೇನಿಯದ ದಕ್ಷಿಣ ಭಾಗದಲ್ಲಿಯೂ ಮೊಲ್ಡೇವಿಯದ ಉತ್ತರ ಭಾಗದಲ್ಲಿಯೂ ಜರ್ಮನರು ಮುಂದೊತ್ತಿ, ಸುಸಿಟ್ಸ ನದಿಯನ್ನು ದಾಟಿ ವೆಸ್ಸಿನ್ ಎಂಬ ಭದ್ರವಾದ ಸ್ಥಳವನ್ನು ಹಿಡಿದರು.

ಸೆಲೊನಿಕಾ ರಣರಂಗದಲ್ಲಿ ಫ್ರೆಂಚರಮೇಲೆ ಮುಂದೊತ್ತಿಬರಲಿಕ್ಕೆ ಜರ್ಮನ್ ಒಸ್ಟ್ರಿಯನ್ ಮತ್ತು ಬಲ್ಗೇರಿಯನ್ ಸೈನ್ಯವು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ.

ಗ್ರೀಸ್ ರಾಜ್ಯದವರು ಜರ್ಮನಿ ಮತ್ತು ಒಸ್ಟ್ರಿಯಾದವರೊಡನೆ ಯುದ್ಧಕ್ಕೆ ಮುಂದರಿಸಿರುವರು.

ಬ್ರಿಟಿಷರ ೧೬೦೦ ಟನ್ನಿಗೆ ಮಿಕ್ಕಿದ ೧೪ ಹಡಗುಗಳೂ ೧೬೦೦ ಟನ್ನಿಗೆ ಕಡಿಮೆಯಾದ ೨ ಹಡಗುಗಳೂ ಜಲಂತರ್ಗಾಮಿಗಳಿಂದ ಮುಳುಗಿಸಲ್ಪಟ್ಟವು.

ಚೀನರಾಜ್ಯವು ಜರ್ಮನರೊಡನೆ ಯುದ್ಧಮಾಡುವುದಾಗಿ ಪ್ರಕಟಿಸಿದ ನಂತರ ಅವರ ಮತ್ತು ಒಸ್ಟ್ರಿಯದವರ ಸುಮಾರು ೧೮೦೦೦ ಟನ್ನಿನ ಹಡಗುಗಳನ್ನು ನಿರ್ಬಂಧಿಸಿರುವರು.

ಅಮೇರಿಕದಿಂದ ಯುದ್ಧರಂಗಕ್ಕೆ ಕಳಿಸಲ್ಪಟ್ಟ ಇಂಜಿನಿಯರ ಪಡೆಯನ್ನು ಬಹಳ ಉತ್ಸಾಹದಿಂದ ಲಂಡನ್ನಿನಲ್ಲಿ ಸ್ವಾಗತ ಮಾಡಿದರು.

ವಿದೇಶ ವೃತ್ತಾಂತ.

ಸ್ಪೇನ್ ದೇಶದಲ್ಲಿ ಚಳವಳವು ಇನ್ನೂ ಬೆಳೆಯುತ್ತಲೇ ಇದೆ. ಬಾರ್ಸಲೋನ ಮತ್ತು ಸಾರಾಗೋಜಾ ಎಂಬಲ್ಲಿ ತಕ್ಕಮಟ್ಟಿಗೆ ದಂಡೋಪಾಯದಿಂದ ಶಾಂತತೆಯನ್ನು ತಂದಿಕ್ಕಿದರೂ ಬಿಲ್ಬೊ ಎಂಬಲ್ಲಿ ಮುಷ್ಕರ ತಂಡದವರು ಒಂದು ರೈಲ್ವೆಯನ್ನು ಸಿಡಿಮದ್ದಿನಿಂದ ಹಾರಿಸಿಬಿಟ್ಟರು. ಸತ್ತವರ ಸಂಖ್ಯೆ ಗೊತ್ತಾಗಲಿಲ್ಲ. ಮುಖ್ಯ ಪಟ್ಟಣವಾದ ಮ್ಯಾಡ್ರಿಡಿನಲ್ಲಿಯೂ ಹಲವು ಅನಾಯಕತ್ವ ಪಂಗಡದವರು ದಂಗೆ ಎದ್ದರು. ಸರಕಾರದವರು ಸೈನ್ಯಸಹಾಯದಿಂದ ಈ ದಂಗೆಯನ್ನು ಅಡಗಿಸಲಿಕ್ಕೆ ಪ್ರಯತ್ನಮಾಡುತ್ತಿರುವರು.

ಇಟಲಿಯ ಪೋಪಸಾಹೇಬರು ಯುದ್ಧಮಾಡುವ ರಾಜ್ಯಗಳಿಗೆ ಈ ಕೆಳಗಿನ ಶರ್ತಗಳನ್ನು ಅನುಸರಿಸಿ ರಾಜಿಯಾಗಬಹುದೇ ಎಂದು ಅಭಿಪ್ರಾಯ ಕೇಳಿರುವರು. ಆಸ್ಪತ್ರೆಗಳಲ್ಲಿ ಸತ್ತು ಮತ್ತು ಸಾಯುತ್ತಿದ್ದರೂ ಸತ್ತಂತೆಯೇ ನಿಷ್ಪ್ರಯೋಜಕರಾಗಿ ಅಂಗವಿಹೀನರಾಗಿರುವ ಅಸಂಖ್ಯಾತ ಜನರ ಸ್ಥಿತಿಯನ್ನು ನೋಡಿ ಈ ಸೂಚನೆಯನ್ನು ರೋಮನ್‌ಕೆಥೊಲಿಕ ಜನರ ಮಹಾ ಗುರುವಾದ ಇವರು ಯೋಧ್ಧ ಜನಾಂಗಗಳ ಮುಂದೆ ಇರಿಸಿದರೆಂದು ಕಾಣುವದು. ಈ ಶರ್ತಗಳು ಯಾವವೆಂದರೆ:—

೧. ಇನ್ನುಮುಂದೆ ಯುದ್ಧಕ್ಕೆ ಭೂಲೋಕದ ಜನಾಂಗಗಳು ಕೈಹಾಕದ ಹಾಗೆ ಅಡ್ಡಕಟ್ಟುವದಕ್ಕೆ ಬೇರೆಬೇರೆ ಜನಾಂಗದವರ ಪ್ರತಿನಿಧಿಗಳ ಒಂದು ಕೂಟವನ್ನು ಏರ್ಪಡಿಸಿ ಎಲ್ಲಾ ಬಗೆಯ ರಾಜಕೀಯ ವಿವಾದಗಳನ್ನು ಈ ಕೂಟಕ್ಕೆ ಒಪ್ಪಿಸಿಬಿಡಬೇಕು.

೨. ಈಗ ಯುದ್ಧಮಾಡುವ ಜನಾಂಗಗಳು ಹಿಡಿದ ಎದುರುಪಕ್ಷದ ವಸಾಹತುಗಳನ್ನು ಹಿಂದಕ್ಕೆ ಬಿಟ್ಟುಕೊಡಬೇಕು. ಪೋಲೆಂಡ್ ಮತ್ತು ಆಲ್‌ಸೇಸ್ ಲೊರೈನಗಳಲ್ಲಿ ಮತ್ತು ಬಾಲ್ಕನ್ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಪ್ರಜೆಗಳ ಅನುಮತಿಯನ್ನು ಅನುಸರಿಸಿ ಅವರು ಸ್ವತಂತ್ರರಾಗಿರಬೇಕೊ ಅಥವಾ ಯಾವ ರಾಜ್ಯದ ಅಧೀನರಾಗಿರಬೇಕೊ ಎಂಬುದನ್ನು ನಿರ್ಧರಿಸಬೇಕು.

೩. ಎಲ್ಲಾ ಕಡಲುಗಳಲ್ಲಿಯೂ ಎಲ್ಲಾ ರಾಜ್ಯಗಳಿಗೂ ನಿರಾತಂಕವಾಗಿ ಹಡಗುಗಳನ್ನು ಓಡಿಸುವುದಕ್ಕೆ ಅನುಕೂಲತೆ ಇರಬೇಕು.

೪. ಒಂದು ರಾಜ್ಯದ [illegible] ರಾಜ್ಯದೊಡನೆ ವ್ಯಾಪಾರ ಮಾಡುವ [illegible]

ಈ ಶರ್ತಗಳು ಮೊದಲು ಜರ್ಮನ ಪಾರ್ಲಿಮೆಂಟಿನಲ್ಲಿ ಛಾನ್ಸೆಲರ್‌ರು ಹೇಳಿದ ಶರ್ತಗಳಿಂದ ಬಹಳ ಬಿಟ್ಟುಕೊಂಡಿಲ್ಲ.

ಸ್ಪೆನ್ ದೇಶದಲ್ಲಿ ತಕ್ಕಮಟ್ಟಿಗೆ ಶಾಂತತೆಯುಂಟಾಗಿದೆ, ಆದರೂ ಕೆಲವು ಕಡೆಗಳಲ್ಲಿ ವ್ಯಾಪಾರ ವಹಿವಾಟುಗಳಿಗೆ ಇನ್ನೂ ಕೊಡಕಿದೆ. ಟ್ರೇಮ್ ಬಂಡಿಗಳನ್ನು ಸೈನಿಕರೇ ನಡಿಸುತ್ತಾರೆ. ಮ್ಯಾಡ್ರಿಡಿನ ಮುಖ್ಯ ಬೀದಿಯಲ್ಲಿ ಒಂದು ದಂಗೆಯುಂಟಾಗಿ ೭ ಮಂದಿ ಸತ್ತರಲ್ಲದೆ ಹಲವರಿಗೆ ಗಾಯವಾಗಿದೆ. ಸೈನ್ಯದ ಸಹಾಯದಿಂದ ದಂಗೆಯನ್ನು ಅಡಗಿಸಬೇಕಾಯಿತು.

ರುಷ್ಯದ ಝಾರರನ್ನೂ ಅವರ ಕುಟುಂಬವನ್ನೂ ಸೈಬೇರಿಯದಲ್ಲಿ ಟೊಬೊಲ್ಸ್ಕ ಎಂಬಲ್ಲಿಗೆ ಕೊಂಡುಹೋಗಿ ಇರಿಸಿದರು. ರುಷ್ಯದಲ್ಲಿ ಕೆಲವರು ಇವರನ್ನು ಪುನಃ ಪಟ್ಟಕ್ಕೇರಿಸಬೇಕೆಂದು ಪ್ರಯತ್ನಪಡುವುದು ಗೊತ್ತಾದ್ದರಿಂದ ಇವರನ್ನು ಸಾರ್ಸ್ಕೊಸೆಲ್ ಎಂಬಲ್ಲಿಂದ ಸೈಬೇರಿಯಕ್ಕೆ ವೈಯ್ಯಬೇಕಾಯಿತು.

ಮದ್ರಾಸಿನ ಜನರು ಯುದ್ಧದ ಬಗ್ಗೆ ಒದಗಿಸಿಕೊಟ್ಟ 'ಹೊಸ್ಪಿಟಲ್‌ಶಿಪ್' 'ಕೊರಮಂಡಲ್' ಎಂಬ ಹಡಗು (ಗಾಯಪಟ್ಟವರನ್ನು ಹಿಂದೂಸ್ಥಾನಕ್ಕೆ ಸಾಗಿಸಿಕೊಂಡು ಬರಲಿಕ್ಕೆ ವೈದ್ಯ ಸಹಾಯವನ್ನು ಒದಗಿಸಿ ತಯಾರಿಸಿದ ಹಡಗು) ಬೆಂಕಿ ತಗಲಿ ಇದೇ ಜೂನು ೩ನೇ ತಾರೀಕಿಗೆ ಸುಟ್ಟುಹೋಯಿತು; ಆ ಕಾಲದಲ್ಲಿ ಹಡಗಿನಲ್ಲಿ ಅಸ್ವಸ್ಥರವರು ಅಥವಾ ಗಾಯಪಟ್ಟವರ ಯಾರೂ ಇರಲಿಲ್ಲ ಎಂದು ಸರ್ ಸ್ಟೆನಲೀ ರೀಡು ಮ್ಯಾಕ್ಲೇಮಿಯಿಂದ ಮದ್ರಾಸಿನ ಗವರ್ನರಿಗೆ ಪತ್ರವನ್ನು ಬರೆದಿರುವರು.

ಇಂಗ್ಲೆಂಡಿನಲ್ಲಿ ರೈಲ್ವೇ ಇಂಜಿನಿಯರ್ ಮತ್ತು ಫಾಯರ್‌ಮೆನ್‌ಗಳ ಒಂದು ಕೂಟವು ತಮಗೆ ದಿನಕ್ಕೆ ೮ ತಾಸುಗಳಿಗಿಂತ ಹೆಚ್ಚಿಗೆ ಕೆಲಸ ಕೊಡಕೂಡದೆಂದು ಬೋರ್ಡ ಒಫ್ ಟ್ರೇಡ್ ಇಲಾಖೆಯ ಮುತ್ಸದ್ದಿಗಳಿಗೆ ಮನವಿಮಾಡಿದ್ದಾರೆ. ಈ ಯುದ್ಧಕಾಲದಲ್ಲಿ ಹೀಗೆ ರಿಯಾಯಿತಿ ಮಾಡಿದರೆ ಆ ಕೆಲಸಕ್ಕೆ ಇನ್ನಷ್ಟು ಹೆಚ್ಚಿಗೆ ಜನರನ್ನು ಹಚ್ಚಬೇಕಾಗುವುದರಿಂದ ಇದು ಈ ಕಾಲದಲ್ಲಿ ಅಸಾಧ್ಯವೆಂತಲೂ ಮುತ್ಸದ್ದಿಗಳು ಅವರಿಗೆ ತಿಳಿಸಿರುವರು.

ಕೆನಡಾ ದೇಶದಲ್ಲಿ (ಉತ್ತರ ಅಮೇರಿಕ) ಕ್ವಿಬೆಕ್ ಪ್ರದೇಶದ ರಿಗೋಡ್ ಎಂಬಲ್ಲಿನ ಒಂದು ಕಾರ್ಖಾನೆಯಲ್ಲಿ ಸ್ಫೋಟನವು ಆಗಿ ಸಮೀಪದಲ್ಲಿದ್ದ ೪೦ ಮನೆಗಳು ನೆಲಸಮವಾದವು. ೩೦೦ ಮಂದಿ ಜನರ ಪತ್ತೆಯೇ ಸಿಕ್ಕಲಿಲ್ಲ. ಸುತ್ತಮುತ್ತಲಿನ ಹಳ್ಳಿಪ್ರದೇಶದಲ್ಲಿ ದಟ್ಟವಾದ ಹೊಗೆಯು ಮುಚ್ಚಿಕೊಂಡಿದೆ.

ಗ್ರೀಸಿನ ಸೆಲೊನಿಕಾ ಎಂಬ ಊರಿನಲ್ಲಿ ಫ್ರೆಂಚರ ಮುಖ್ಯ ಪಾಳ್ಯವೊಂದು ಇದೆ. ಇಲ್ಲಿಂದ ಅವರು ಬಲ್ಗೇರಿಯದ ಕಡೆಗೆ ಯುದ್ಧಮಾಡಿ ಮುಂದೊತ್ತಲು ಪ್ರಯತ್ನಿಸುತ್ತಿರುವರು. ಈ ಸೆಲೊನಿಕದಲ್ಲಿ ಇದೇ ೧೯ನೆ ತಾರೀಕಿಗೆ ಬಯಂಕರವಾದ ಬೆಂಕಿಯಿಂದ್ದು ಕೋಟೆಯೊಳಗಿನ ಅರ್ಧಾರ್ಧ ಪಟ್ಟಣವು ನಾಶವಾಯಿತು. ೮೦,೦೦೦ ಪ್ರಜೆಗಳಿಗೆ ೧೦೩ ಗುಡಿಸಲುಗಳು ಇಲ್ಲದಂತಾಗಿದೆ. ೧೯ನೇ ಸಾಯಂಕಾಲದ ಒಳಗೆ ಬೆಂಕಿಯನ್ನು ತಕ್ಕಮಟ್ಟಿಗೆ ಶಮನಮಾಡಿದರು.

ನೊರ್ವೆಯ ಕ್ರಿಶ್ಚನಿಯ ಎಂಬ ನಗರದಲ್ಲಿ ಒಂದು ಕಾರ್ಖಾನೆಯು ಸುಟ್ಟುಹೋಗಿ, ಸಮೀಪದ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನು ನೆಲಸಮಮಾಡಿ ಕೆಲವು ಅಂಗಡಿಗಳನ್ನೂ ಹೊಟೆಲುಗಳನ್ನೂ ನಾಶಪಡಿಸಿತು. ಸುಮಾರು ೩೦,೦೦೦ ಪೌಂಡು ಬೆಲೆಯ ವಸ್ತು ನಾಶವಾಯಿತೆಂದು ಪತ್ರಿಕೆಯಿಂದ ತಿಳಿದುಬರುತ್ತದೆ.

ಉತ್ತರ ಹಿಂದೂಸ್ಥಾನ.

ಮುಂಬಾಯಿಯಲ್ಲಿ ಮುಷ್ಕರಹಿಡಿದ ರೈಲ್ವೆ ಕಾಮಗಾರಿಯವರಿಗೆ ಆಹಾರಸಾಮಗ್ರಿಗಳನ್ನು ಒದಗಿಸುವುದಕ್ಕೆ ನೂತನವಾಗಿ ಏರ್ಪಡಿಸಿದ ಅಂಗಡಿಗಳನ್ನು ಮುಂಬಯಿ ಪೋಲಿಸ್ ಕಮಿಶನರು ಮುಂಬೈ ಪೋಲೀಸ್ ಆಕ್ಟಿನ ೪ನೆ ಸೆಕ್ಷನ್ ಮೇರೆಗೆ ಮುಚ್ಚಿಸಿಬಿಟ್ಟರು.

ಅಗೋಸ್ತು ೧೧ನೆ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ಹಿಂದುಸ್ಥಾನದಲ್ಲಿ ಪ್ಲೇಗುರೋಗವು ೫,೫೬೨ ಜನರಿಗೆ ತಗಲಿತು, ೩,೮೬೬ ಜನರು ಸತ್ತುಹೋದರು.

ಸರ್ ವಿಲಿಯಮ್ ಮೇಯರ್ (ಇಂಡಿಯಾ ಗವರ್ನಮೆಂಟಿನ ಕೋಶಾಧಿಕಾರಿ) ಇವರು ಕಲ್ಕತ್ತೆಯ ಚೇಂಬರ್ ಒಫ್ ಕೊಮರ್ಸ್ (ವರ್ತಕರ ಸಂಘ) ಸಭೆಯಲ್ಲಿ ಹೇಳಿದ ಮೇರೆಗೆ ೧ ರೂಪಾಯಿ ಮತ್ತು ೨॥ ರೂಪಾಯಿ ಬೆಲೆಯ ಕರೆನ್ಸಿ ನೋಟುಗಳು ಇದೇ ಬರುವ ನವೆಂಬರ್ ತಿಂಗಳಲ್ಲಿ ಚಲಾವಣೆಗೆ ಬರುವವಂತೆ.

ಅಗೋಸ್ತು ೧೫ನೆ ತಾರೀಕಿಗೆ ಕಲ್ಕತ್ತೆಯಲ್ಲಿ ಶ್ರೀಯುತ ಭೂಪೇಂದ್ರನಾಥ ಬಾಸು ಇವರಿಗೆ ವಿಲಾಯತಿಯ ಇಂಡಿಯಾ ಕೌನ್ಸಿಲಿನ ಮೆಂಬರರಾಗಿ ನೇಮಕವಾದ ನಿಮಿತ್ತ ಗೌರವಾರ್ಥವಾಗಿ ಕೊಟ್ಟ ಔತಣ ಕಾಲದಲ್ಲಿ ಅವರು ಸಭಿಕರ ಉಪಕಾರ ಸ್ಮರಿಸಿ ಒಂದು ಭಾಷಣವನ್ನು ಮಾಡಿದರು. ಈ ಸಂದರ್ಭದಲ್ಲಿ ಅವರು ತನಗೆ ಈ ಕೆಲಸಕ್ಕೆ ನೇಮಕವಾದ್ದೇ ಸರಕಾರದವರಿಗೆ ಈಚೆಗೆ ಉಂಟಾದ 'ನೂತನ ಅವಲೋಕನದ' ಫಲಪರಿಪಾಕವೆಂದೂ ತಮ್ಮ ಅಹವಾಲೆಗಳನ್ನು ಹಿಂದೀ ಜನರು ನಿರ್ಭೀತಿಯಿಂದಲೂ ಮನೋದಾರ್ಢ್ಯದಿಂದಲೂ ಬ್ರಿಟಿಷ ಪಾರ್ಲಿಮೆಂಟಿನವರ ಮುಂದಿರಿಸಿದ್ದಲ್ಲಿ ಬ್ರಿಟಿಷ ಜನಾಂಗವು ನಮ್ಮ ಧ್ಯೇಯಗಳಿಗೆ ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲವೆಂದೂ ತನ್ನ ಕೈಲಾದಮಟ್ಟಿಗೆ ಹಿಂದುಸ್ಥಾನದ ಸ್ಥಿತಿಯನ್ನು ಸುಧಾರಿಸುವುದಕ್ಕೆ ತಾನು ಪ್ರಯತ್ನಪಡುವೆನೆಂದೂ ಈ ಸಮಯದಲ್ಲಿ ವಿಲಾಯತಿಯಲ್ಲಿ ನಮ್ಮ ಅಹವಾಲೆಗಳನ್ನು ಕುರಿತು ವ್ಯವಹರಿಸಲಿಕ್ಕೆ ಯೋಗ್ಯವಾದ ಮತ್ತು ಬಲವಾದ ಒಂದು ಪ್ರತಿನಿಧಿಕೂಟವನ್ನು ಕಳುಹಿಸಬೇಕೆಂದೂ ಸೂಚಿಸಿದರು.

ಗ್ವಾಲಿಯರದಲ್ಲಿ ಪ್ರವಾಹವು ಉಕ್ಕಿಬಂದು ರಸ್ತೆಯಲ್ಲಿ ಕೆಲವು ಕಟ್ಟಡಗಳ ಮೇಲೆಯೂ ನೀರು ನಿಂತಿದೆಯಂತೆ.

ಈವರೆಗೆ ಯುದ್ಧಫಂಡಿಗೆ ಹಿಂದುಸ್ಥಾನದಿಂದ ಜಮೆ ಆದ ಮೊಬಲಗಿನ ವಿವರ.

	ರೂಪಾಯಿ
ಲೋಕ್ ವಂತಿಗೆ...	೩೮,೩೩,೦೪,೬೦೦
ಇಂಗ್ಲೆಂಡಿನಲ್ಲಿ ಖಜಾನೆ ಬಿಲ್ ಮೂಲಕ ...	೧೬,೪,೧೧,೬೦೦
ಪೋಸ್ಟು ಆಫೀಸು ಮೂಲಕ...	೨,೮೫,೭೮,೫೦೦
ಕೇಷ್ ಸರ್ಟಿಫಿಕೇಟು	೬,೦೨,೨೧,೨೦೦
ಒಟ್ಟು	೫೪,೮೬,೧೫,೨೦೦

ಜಿ. ಐ. ಪಿ. ರೈಲ್ವೆಯ ಕಾಮಗಾರಿ ಜನರ ಮುಷ್ಕರವು ಇನ್ನೂ ಮುಗಿದಿಲ್ಲ. ಇದೇ ೧೯ನೇ ತಾರೀಕಿಗೆ ಅವರು ಮುಂಬಾಯಿಯ [illegible]

[illegible]

ದರು. ಈ ಮುಷ್ಕರಹಿಡಿದವರ [illegible] ಕೆಲವು ಉದಾರ ಗೃಹಸ್ಥರು ಅವರಿಗೆ [illegible] ಕಾಮಗಾರ ಹಿತವರ್ಧಕ ಸಭೆಯವರು ಈ [illegible] ಬೇಕೆಂದೂ ಕಾಮಗಾರಿಯವರು ಪುನಃ ಕೆಲಸಕ್ಕೆ ಬರಬೇಕೆಂದೂ ಮರಾಠಿಯಿಂದ ಪ್ರಕಟನಾ ಪತ್ರಗಳನ್ನು ಹಂಚಿದರು. ಕೆಲವರು ಕೆಲಸಕ್ಕೆ ತಯಾರಾಗಿದ್ದರೂ ಇತರರ ಪೀಡನಕ್ಕೆ ಹೆದರಿ ಹಿಂಜರಿದರು. ಈಗ ಮುಂಬಾಯಿಯ ಕೆಲವು ಸದ್‌ಗೃಹಸ್ಥರು ರೈಲ್ವೆ ಅಧಿಕಾರಿ ಮಜರ್ ಹೆಪ್ಪರ್‌ರ ಬಳಿಯಲ್ಲಿ ಈ ವಿಷಯವಾಗಿ ಪ್ರಸ್ತಾಪಿಸಲಿ ಕಾಮಗಾರಿಯವರ ಅಹವಾಲುಗಳನ್ನು ಸಮರ್ಥಿಸಿದ್ದಕ್ಕೆ ೩೦ ರೂಪಾಯಿಗೆ ಮಿಕ್ಕಿ ಸಂಬಳ ಇರುವವರಿಗೆ ನೇಕಡಾ ೮೦ರಷ್ಟು ಸಂಬಳ ಹೆಚ್ಚಿಸಲಾಗುವದೆಂದೂ ಅವರವರ ಗ್ರೇಡ್ ಮೇರೆಗೆ ಈ ಸಂಬಳ ಬಡ್ತಿಯಾಗುವದೆಂದೂ ಮಜರ್ ಹೆಪ್ಪರ್ ತಿಳಿಸಿದರು. ೩೦ ರೂಪಾಯಿಗೆ ಕಡಿಮೆ ಸಂಬಳವಿದ್ದವರಿಗೆ ಸರಕಾರಿ ಕ್ರಮಗಳ ಮೇರೆಗೆ ಮಂಗ್ಯಾಭತ್ತೆ ಸಿಕ್ಕಬಹುದಾಗಿಯೂ ತಿಳಿದುಬಂತು.

ಯುದ್ಧ ಸಂಬಂಧದ ಖರ್ಚಿಗಾಗಿ ವಿನಿಯೋಗಿಸುವರೆ ಉದಯಪುರದ ರಾಣಾರವರು ರೂ. ೫೦,೦೦೦ವನ್ನು ವ್ಯಾಸರಾಯ ಪ್ರಭುಗಳ ಕೂಡೆ ಕೊಟ್ಟಿರುವರು.

ವರಿಷ್ಠ ನ್ಯಾಯನಿರ್ಮಾಣ ಸಭೆಯು ಬರುವ ಸೆಪ್ಟೆಂಬರ ತಿಂಗಳ ೩ನೇ ತಾರೀಕಿನಿಂದ ಸಿಮ್ಲಾದಲ್ಲಿ ಕೂಡುವದು. ಬಹುಮಾನಪಟ್ಟ ಪಂಡಿತ ಮದನ ಮೋಹನ ಮಾಲವಿಯಾರವರು ಪ್ರತಿಬಂಧದಲ್ಲಿಟ್ಟಿರುವ ಮಿಸೆಸ್ ಬೆಸೆಂಟ್, ವಾಡಿಯಾ ಮತ್ತು ಅರುಂಡೇಲ ಇವರನ್ನು ಬಂಧನೆಯಿಂದ ಬಿಡುಗಡೆಮಾಡಬೇಕೆಂಬ ನಿರ್ಣಯವನ್ನು ಸಭೆಯ ಮುಂದೆ ತರುವರು.

ಆಯಾ ಸಂಸ್ಥಾನಿಕ ಸರಕಾರದ ವಿದ್ಯಾಖಾತೆಯ ಡಿರೆಕ್ಟರರ ಮತ್ತು ಬಿನ್ ಸರಕಾರಿ ಮೆಂಬರರ ವಿದ್ಯಾಪರಿಷತ್ತು ಸಿಮ್ಲಾದಲ್ಲಿ ಇದೇ ತಿಂಗಳ ೫೩ ೨೦ರಲ್ಲಿ ಕೂಡಿರುವದು. ಸೆಕೆಂಡರಿ ವಿದ್ಯಾಭ್ಯಾಸದ ವ್ಯವಸ್ಥೆಯು ಈ ಪರಿಷತ್ತಿನಲ್ಲಿ ಪರ್ಯಾಲೋಚಿಸಲ್ಪಡುವದು. ಸೆಕೆಂಡರಿ ಶಾಲೆಗಳಲ್ಲಿ ಇಂಗ್ಲೀಷ ಕಲಿಸುವಕ್ರಮವನ್ನು ಪರಿಷ್ಕರಿಸಬೇಕೆಂದು ವ್ಯಾಸರಾಯ ಪ್ರಭುಗಳವರು ಈ ಸಭೆಯ ಸ್ವಾಗತ ಭಾಷಣದಲ್ಲಿ ಸೂಚಿಸಿದ್ದಾರೆ.

ಸಿಮ್ಲಾ.

(ಇಂಡಿಯಾ ಗಜೆಟುಗಳ ಉತಾರು)

ಹಿಂದೀ ಜನರಿಗೆ ಸೈನ್ಯದಲ್ಲಿ ಕಮಿಷನ್ ಆಫೀಸರುಗಳಾಗಿ (ಅಂದರೆ, ಲೆಫ್ಟಿನೆಂಟ್, ಕರ್ನೆಲ್ ಮುಂತಾದವರು) ಮಾಡುವ ಸಂಪ್ರದಾಯವು ಈ ವರೆಗೆ ಇದ್ದಿಲ್ಲ. ಈಗ ಸೈನ್ಯದಲ್ಲಿ ಯುದ್ಧಮಾಡಿ ಹೆಸರುಪಡೆದ ೯ಮಂದಿ ಹಿಂದೀ ಒಳಆಫೀಸರನ್ನು ಈ ರೀತಿಯಾಗಿ ಕಮಿಷನ್ ಆಫೀಸರರಾಗಿ ಮಾಡುವಂತೆ ನಿಶ್ಚಯಿಸಿಯದೆ. ಅವರ ಹೆಸರುಗಳು ಗಜೆಟಿನಲ್ಲಿ ಪ್ರಕಟವಾಗುವವು. ಇನ್ನೂ ಮುಂದೆ ಯಾವ ಶರ್ತಗಳಿಂದ ಹಿಂದೀ ಜನರನ್ನು ಈ ಹುದ್ದೆಗೆ ನೇಮಿಸಬಹುದು ಎಂಬುದಕ್ಕೆ ಸೆಕ್ರೆಟರಿ ಒಫ್ ಸ್ಟೇಟ್ ಮತ್ತು ಇಂಡಿಯಾ ಗವರ್ನಮೆಂಟಿನವರು ಚರ್ಚಿಸುತ್ತಲಿದ್ದಾರೆ. ಇನ್ನೂ ಆರ್ಮಿ ಕೌನ್ಸಿಲ್ (ಅಂದರೆ ಸೈನ್ಯದ ಆಡಳಿತೆಯ ಸಭೆ)ಯವರೊಡನೆ ಅಭಿಪ್ರಾಯವನ್ನು ಕೇಳಿ ಕೇಳಿ ಹಿಂದೀ ಜನರನ್ನು ಕಮಿಶನ್ ಆಫೀಸರುಗಳಾಗಿ ನೇಮಿಸುವುದಕ್ಕೆ ಇದ್ದ ಪ್ರತಿಬಂಧಕಗಳನ್ನು ಹೋಗಲಾಡಿಸಿ, ಹಿಂದೀ ಜನರಿಗೆ ಸೈನ್ಯದಲ್ಲಿಯೂ ದೊಡ್ಡ ಅಧಿಕಾರಗಳನ್ನು ಅವರವರ ಯೋಗ್ಯತೆಗೆ ಸರಿಯಾಗಿ ಕೊಡುವ ಆಲೋಚನೆಯಿದೆ ಎಂದು ಪಾರ್ಲಿಮೆಂಟಸಭೆಯಲ್ಲಿ ಇಂಡಿಯಾ ಸೆಕ್ರೆಟರಿಗಳು ತಿಳಿಸಿದರಾಗಿ ಇಂಡಿಯಾ ಗವರ್ನಮೆಂಟು ಗಜೇಟು ತಿಳಿಸುತ್ತದೆ.

ಹಿಂದುಸ್ಥಾನದಲ್ಲಿ ಪ್ರಜಾಜನಗಳಿಗೆ ರಾಜ್ಯಭಾರವಿಚಾರದಲ್ಲಿ ಕ್ರಮಾಗತವಾಗಿ ಯಾವ ಹೆಚ್ಚಿನ ಅಧಿಕಾರಗಳನ್ನು ಕೊಡಬಹುದೆಂದು ಇತ್ಯರ್ಥಿಸುವುದಕ್ಕೆ ಹಿಂದುಸ್ಥಾನದ ವೈಸರಾಯರೊಡನೆಯೂ ಸ್ಥಳೀಯ ಗವರ್ನಮೆಂಟಿನವರೊಡನೆಯೂ ಸ್ವತಃ ಚರ್ಚಿಸುವುದಕ್ಕಾಗಿ ಇಂಡಿಯಾ ಸೆಕ್ರೆಟರಿಗಳಾದ ಮಿ| ಮೊಂಟೆಗೆರು ಹಿಂದುಸ್ಥಾನಕ್ಕೆ ಬರುವರಾಗಿ ಪಾರ್ಲಿಮೆಂಟಿನಲ್ಲಿ ಸೂಚಿಸಿದರೆಂದು ಇಂಡಿಯಾ ಗವರ್ನಮೆಂಟಿನ ಗಜೆಟಿನಿಂದ ತಿಳಿಯಬರುತ್ತದೆ.

ಬೊಂಬೈ:— ಮುಷ್ಕರಹಿಡಿದ ರೈಲ್ವೆನೌಕರರಲ್ಲಿ ೫೧ಮಂದಿ ಪರೆಲ್ ಕಾರ್ಖಾನೆಯಲ್ಲಿ, ೧೪ಮಂದಿ ಮಾತುಂಗದಲ್ಲಿಯೂ ಪುನಃ ಕೆಲಸಕ್ಕೆ ದಾಖಲಾದರೆಂತಲೂ ಇತರರು ಇನ್ನೂ ಹಟಹಿಡಿದಿರುವರೆಂತಲೂ ಮುಚ್ಚಿಸಿದ ಅಂಗಡಿಗಳಿಗೆ ಬದಲಾಗಿ ಬೇರೆ ಸ್ಥಲಗಳಲ್ಲಿ ಅಂಗಡಿಗಳನ್ನು ತೆರೆದು ಈ ಕಾಮಗಾರಿಯವರು ತಮಗೆ ಬೇಕಾದ ದವಸಧಾನ್ಯಗಳನ್ನು ಒದಗಿಸಿಕೊಳ್ಳುತ್ತಾರೆಂತಲೂ ತಿಳಿದುಬರುತ್ತದೆ.

ಡಾ. ಮವರೋಜಿಯವರು ಗತಿಸಿದ್ದಕ್ಕಾಗಿ ತಮ್ಮ ದುಃಖವನ್ನು ತೋರ್ಪಡಿಸುವುದಕ್ಕೆ ಬೊಂಬಾಯಿಯಲ್ಲಿ ಸ್ತ್ರೀಯರ ಒಂದು ಅಧಿವೇಶನವು ಸೇರಿತು. ಇದಕ್ಕೆ ಬಹುಮಾನಪಟ್ಟ ಲೇಡಿ ವಿಲ್ಲಿಂಗ್‌ಡನ್ (ಈಗಿನ ಬೊಂಬಾಯಿ ಗವರ್ನರರವರ ಪತ್ನಿ) ಅಧ್ಯಕ್ಷರಾಗಿದ್ದರು.

ದಕ್ಷಿಣ ಹಿಂದೂಸ್ಥಾನ.

ಗುಂಟೂರು ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ ಜಡ್ಜರು ಅಲ್ಲಿಯ ದುನ್ಸಿಫರಿಗೆ ಎಷ್ಟುಮಂದಿ ವಕೀಲರು ಹೋಮ್‌ರೂಲ್ ಲೀಗಿನ ಮೆಂಬರರಾಗಿದ್ದಾರೆಂದು ತಿಳಿಸಬೇಕೆಂದು ಬರೆದ ವರ್ತಮಾನ ಗೊತ್ತಾಗಿ ಅಗೋಸ್ತು ೧೩ನೇ ತಾರೀಕಿಗೆ ವಕೀಲರ ಸಂಘದ ಒಂದು ಅಧಿವೇಶನವು ಸೇರಿ ಜಡ್ಜರ ಈ ವರ್ತನೆಯು ವಕೀಲರ ಸ್ವಾತಂತ್ರ್ಯದ ಮೇಲೆ ವಿನಾಕಾರಣವಾಗಿ ನಿರ್ಬಂಧವನ್ನು ಇರಗೊಡಿಸುವುದೆಂದೂ ಈ ವಿಷಯವಾಗಿ ತಮಗಿರುವ ಅಸಂತೋಷವನ್ನು ಡಿಸ್ಟ್ರಿಕ್ಟ ಜಡ್ಜರಿಗೆ ತಿಳಿಸುವುದಲ್ಲದೆ, ಮದ್ರಾಸು ಗವರ್ನಮೆಂಟಿನವರಿಗೂ ಹೈಕೋರ್ಟಿನವರಿಗೂ ಮನವಿಮಾಡಬೇಕೆಂದೂ ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರಜಾ ಪ್ರತಿನಿಧಿ ಮೆಂಬರರಿಗೂ [illegible] ತಮ್ಮ ಈ ಅಭಿಪ್ರಾಯವನ್ನು ತಿಳಿಯಪಡಿಸಬೇಕೆಂದೂ ಠರಾವು ಮಾಡಿರುವರು.

'ನ್ಯೂ ಇಂಡಿಯಾ' ಪತ್ರಿಕೆಯಲ್ಲಿ ಕೆಲವು ಆಕ್ಷೇಪಕರವಾದ ಲೇಖನಗಳು ಬಂದಕಾರಣ ಆ ಪತ್ರಿಕೆಯ ಪರವಾಗಿ ಕೊಟ್ಟ ೨೦೦೦ ರೂಪಾಯಿ ಜಾಮೀನು ರದ್ದುಪಡಿಸಿ ಆ ಹಣವನ್ನು ಸರಕಾರ ಖಾತೆಗೆ ಸೇರಿಸಿಯದೆ ಎಂಬ ಹುಕುಂ ಮದ್ರಾಸು ಗವರ್ನಮೆಂಟಿನವರಿಂದ ೧೧ನೇ ತಾರೀಕಿಗೆ ಹೊರಟಿದೆ.

ಎನ್ನಿ ಬೆಸೆಂಟರವರ [illegible] ಫಂಡಿಗೆ ಈ ವರೆಗೆ ರೂ. [illegible] ಜಮೆ ಆಯಿತು.

ಮದ್ರಾಸು ಸಂಸ್ಥಾನದ [illegible] ಸಿ. ಎಸ್. ಶಿವಸ್ವಾಮಿ ಅಯ್ಯರು [illegible]

[illegible]

ಅನುಕ್ರಮಣಿಕೆ.

	ಪಾನು.
ಅಗ್ರಲೇಖ:—	
೧ ಇವು ಯಾಕೆ?	೪
ಸ್ಫುಟವಿಚಾರಗಳು:—	
೧ ಪ. ವಾ. ಗೋಖಲೆಯವರ ಸುಧಾರಣೆ	೪
೨ ನೇತ್ರಚಿಕಿತ್ಸಾಲಯಗಳ ಏರ್ಪಾಡು	೪-೫
೩ ಕೊನೆಗೆ ಆಧ್ಯಾತ್ಮಿಕ ಪರಿಷತ್ತು ಜರಗಿತು	,,
೪ ಇವರಿಂದಾದರೂ ಧೇಶೋದ್ಧಾರವಾಗಲಿ	,,
೫ ನಾಮ. ಬಾಸುಗಳಿಗೆ ಕೊಟ್ಟ 'ಮೇಜವಾನ'	,,
೬ ಗಾಯತ್ರಿಯು ಪರಿವಾಜಾಚಾರ್ಯರ ಉಪದೇಶದಿಂದ ಮಲಿನವಾಗದೆ ಇರಲಿ.	,,
ಸ್ಥಳೀಕ—ಮಂಗಳೂರು	
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೬
೨ ವಿದೇಶ ವೃತ್ತಾಂತ	,,
೩ ಉತ್ತರ ಹಿಂದುಸ್ಥಾನ	,,
೪ ದಕ್ಷಿಣ ಹಿಂದುಸ್ಥಾನ	,,
೫ ಬಾತಮಿಗಳು—ಕೊಂಬಳೆ	,,
೬ ಪತ್ರವ್ಯವಹಾರ—ಮುನ್ಸಿಪಲ್ ಮಾರ್ಗಗಳು. ತಾಲೂಕು ಬೋರ್ಡು ಮೆಂಬರರಾದ ರಾ| ಕೆ. ಕೃಷ್ಣರಾಯರಿಗೆ	,,

ಸ್ವದೇಶಾಭಿಮಾನಿ.

ಶಕ ೧೮೩೯ ಭಾದ್ರಪದ ಶು. ೬ ಶುಕ್ರವಾರ.

ಇವು ಯಾಕೆ?

ಕಳೆದಸಾರೆ ಲೊರ್ಡ ಇಸ್ಲಿಂಗ್‌ಟನರು ಸೂಚಿಸಿರುವ ಸುಧಾರಣೆಗಳನ್ನು ವಾಚಕರ ಅವಗಾಹನದ ಬಗ್ಗೆ ಕೊಟ್ಟಿದ್ದೇವೆ. ಅವುಗಳನ್ನು ಬರೆ ಮೇಲಿಂದ ಮೇಲೆ ನೋಡಿದರೂ ಅವು ಹಿಂದಿಗಳ ಆಕಾಂಕ್ಷೆಯ ಒಂದು ಶತಾಂಶವನ್ನು ಸಹ ಕೊಡಹಾಕಲಿಕ್ಕಿಲ್ಲವೆಂಬುದು ವಾಚಕರಿಗೆ ತಿಳಿಯದೆ ಇರದು. ಇಸ್ಲಿಂಗ್‌ಟನೀ-ಸುಧಾರಣೆಗಳ ನಿಜಸ್ವರೂಪವನ್ನು ಆವಿಷ್ಕರಿಸುವ ಮೊದಲು ಒಂದು ಮಾತನ್ನು ಹೇಳುವುದು ಅಪ್ರಾಸಂಗಿಕವಾಗಲಾರದು. ಅದು ಯಾವುದೆಂದರೆ, ಬಂಗಾಲ ಕೊಂಗ್ರೆಸ ಕಮಿಟಿಯವರು ಇಸ್ಲಿಂಗ್‌ಟನೀ-ಸುಧಾರಣೆಗಳ ವಿಷಯದಲ್ಲಿ ತಮ್ಮ ಅಸಮ್ಮತಿಯನ್ನು ವ್ಯಕ್ತಗೊಳಿಸಿದ್ದಾರೆ. ಹಾಗು ಹಿಂದುಸ್ಥಾನದೊಳಗಿನ ಸುಶಿಕ್ಷಿತ ಲೋಕಮತವು ಲೊರ್ಡ ಇಸ್ಲಿಂಗ್‌ಟನರ ಬಾಯಿಯಿಂದ ಹೊರಟ ಸುಧಾರಣೆಯ ಈ ಇಲಿಮರಿಯನ್ನು ನೋಡಿ ವ್ಯಸನಪಡುತ್ತಿದೆ.

ವರಿಷ್ಠ ಕಾಯಿದೆ ಕೌನ್ಸಿಲಿನ ೧೯ ಜನ ಸಭಾಸದರು ಸೂಚಿಸಿರುವಂತೆ ಕಾಯಿದೆಕೌನ್ಸಿಲುಗಳನ್ನು ಬೆಳಸುವುದೆಂದರೆ ಸರಕಾರದ ಟೀಕಾಕಾರರನ್ನು ಹೆಚ್ಚಿಸುವುದಲ್ಲದೆ ಬೇರೆ ಏನೂ ಅಲ್ಲ. ಈ ಟೀಕಾಕಾರರ ಅಂದೋಣದಂತೆ ಆಡಳಿತೆಯಲ್ಲಿ ಬದಲಾವಣೆಯನ್ನು ಮಾಡುವುದರಿಂದ ಸಂಭವಿಸುವ ಲಾಭ ಹಾನಿಗಳ ಜವಾಬದಾರಿಯು ಈ ಟೀಕಾಕಾರರ ಮೇಲೆ ಇರದು. ಎಂದ ಮೇಲೆ ಇಂಥ ನಿರರ್ಥಕ ಸುಧಾರಣೆಯಿಂದ ಫಲವೇನು? ಎಂಬುದಾಗಿ ಒಂದು ಕೋಟಿಯು ಇಸ್ಲಿಂಗಟನೀ-ಸುಧಾರಣಾಪ್ರವಚನದಲ್ಲಿ ಕಂಡು ಬರುವುದು. ೧೯ ಜನ ಸಭಾಸದರ ಸುಧಾರಣಾಮಸೂದೆಯಲ್ಲಿ ಕಾಯಿದೆ ಕೌನ್ಸಿಲುಗಳನ್ನು ಮಾತ್ರ ಹೆಚ್ಚಿಸುವುದಾಗಲಿ ಅಥವಾ ಅವುಗಳಲ್ಲಿ ಲೋಕನಿಯುಕ್ತ ಸಭಾಸದರ ಬಹುಮತವು ಇರುವಂತೆ ಲೋಕನಿಯುಕ್ತ ಸಭಾಸದರ ಸಂಖ್ಯೆಯು ಹೆಚ್ಚಿರಬೇಕೆಂದು ಹೇಳುವುದಾಗಲಿ ಸರಕಾರದ ಟೀಕಾಕಾರರನ್ನು ಹೆಚ್ಚಿಸುವುದೆ ಎಂದು ಇವರು ತಿಳಿಯುತ್ತಾರೆ. ಪರಂತು ಈ ಕೇಳಿಕೆಯ ಮುಖ್ಯ ತಾತ್ಪರ್ಯವೇನೆಂದರೆ, ಕಾರ್ಯನಿರ್ವಾಹಕ ಮಂಡಲವು ಲೋಕಮತಕ್ಕೆ ಜವಾಬದಾರವಾಗಿರಬೇಕು. ಕೈಯಲ್ಲಿ ಸತ್ತೆಯು ಇಲ್ಲದೆ ಬರೆ ಟೀಕೆ ಮಾಡುವುದರಿಂದ ಫಲವೇನೆಂಬುದು ಹಿಂದಿ ಸಭಾಸದರಿಗೆ ಗೊತ್ತಿಲ್ಲೆಂದಲ್ಲ, ಆದರೆ ಲಾಭ ಹಾನಿಗಳ ಜವಾಬದಾರಿಯನ್ನು ಕೇಳಹೋದರೆ ನೀವೆ ಕೈಯಲ್ಲಿ ದಂಡವನ್ನು ಹಿಡಿದುಕೊಂಡು ಬರುವಿರಿ. ಬರೆನರುವಪ್ರವರ್ತ್ತೇಕೆಯ ಹಕ್ಕುಗಳನ್ನು ಕೇಳಿದ್ದಕ್ಕೆ ಅಧಿಕಾರಿಗಳ ಕೋಲಾಹಲವು ಎಷ್ಟು, ಟೀಕೆಯು ಎಷ್ಟು, ಉಪಹಾಸವು ಎಷ್ಟು! ಲೊಡ್ರ್ ಇಸ್ಲಿಂಗ್‌ಟನ್ ಮತ್ತು ಮಿ. ಮಾಂಟೆಗ್ಯೂ ಇವರ ಪರಮ ಗುರುಗಳಾದ ಮೋರ್ಲೆ ದೊರೆಗಳಾದರೂ ಮೊದಲು ಕೊಟ್ಟ ದಿವ್ಯಸುಧಾರಣೆಯು ಯಾವುದು? ಕೌನ್ಸಿಲಿನೊಳಗಿನ ನಿರರ್ಥಕವಾದ ವಿವಾದವನ್ನು ಹೆಚ್ಚಿಸುವುದೆ ಅಲ್ಲದೆ ಬೇರೆ ಯಾವ ಅಧಿಕಾರವು ಮೋರ್ಲೆ-ಮಿಂಟೊ ಸುಧಾರಣೆಯಿಂದ ಬಂದಿದೆ? ಅದೆ ದಾರಿಯನ್ನು ಹಿಡಕೊಂಡು ಕೌನ್ಸಿಲ್-ವಿಸ್ತಾರದ ಕೇಳಿಕೆಯನ್ನು ಹಿಂದೀ ಸಭಾಸದರು ಕೇಳಿದ್ದಾದರೆ ಅದರಲ್ಲಿ ಆಶ್ಚರ್ಯವಿಲ್ಲ. ಈಗ ಇಸ್ಲಿಂಗ್‌ಟನರು—ಲಾಭಹಾನಿಗಳ ಜವಾಬದಾರಿಯನ್ನು ವಹಿಸದ ಸುಧಾರಣೆಯು ನಿರರ್ಥಕವಾದುದು ಎಂದು ಹೇಳುವ ಪಕ್ಷದಲ್ಲಿ ಲಾಭಹಾನಿಗಳ ಜವಾಬದ್ಧಾರಿಯು ಲೋಕನಿಯುಕ್ತ ಸಭಾಸದರ ಪಾಲಿಗೆ ಬರುವಂಥ ಸುಧಾರಣೆಯನ್ನು ಹಿಂದಿಗಳು ಕೇಳಲಿಕ್ಕೆ ಏನೂ ತಪ್ಪಿಲಿಕ್ಕಿಲ್ಲ. ಇಸ್ಲಿಂಗ್‌ಟನರ ಅಭಿಪ್ರಾಯದಂತೆ ಬರೆ ಟೀಕಿಸುವುದರಿಂದ ಫಲವೇನು? ಕೈಯಲ್ಲಿ ಅಧಿಕಾರ ಬೇಕಲ್ಲವೆ! ಆ ಅಧಿಕಾರವನ್ನು ಲೊರ್ಡ ಇಸ್ಲಿಂಗ್‌ಟನರಂಥ ಉದಾರಧೀಗಳು ಐದುಹತ್ತುವರ್ಷಗಳಿಂದ ಹಿಂದುಸ್ಥಾನಕ್ಕೆ ಕೊಡಬಹುದಾದರೆ ಹಿಂದುಸ್ಥಾನವು ಅದನ್ನು ತನ್ನ ಬಂದರದಲ್ಲು, ೩೦ ಕೋಟಿ ಕೈಗಳಿಂದ ಸ್ವೀಕರಿಸಲು ಈ ಹೊತ್ತು ಸಿದ್ಧವಿದೆ. ಆದರೆ ಇಸ್ಲಿಂಗ್‌ಟನರು ರಾಜ್ಯದಾಡಳಿತೆಯ ಜವಾಬದಾರಿಯನ್ನು ಹಿಂದೀ ಜನತೆಯ ಕೈಯಲ್ಲಿ ಒಪ್ಪಿಸುವ ಸಂಗತಿಯಂತು ಇರಲಿ. ಬರೆ ಟೀಕೆಗೆ ಇಂಬುಕೊಡುವುದು ಕೂಡ ಅವರಿಗೆ ಅಸಹ್ಯವಾಗುತ್ತದೆ! ಸರ್ವಸತ್ತಾಧಾರಿಯಾದ ಬ್ಯುರೊಕ್ರಸಿಯನ್ನು ಮನಬಂದಂತೆ ಟೀಕಿಸುವುದೆಂದರೇನು! ಅದರಿಂದ ದೇಶದ ಯಾವ ಹಿತವು ಉಂಟಾಗುವುದು? ಬರೆಗುಲ್ಲು ನೆದ್ದೆಗೇಡು!' ತಲೆಮೇಲೆ ಜವಾಬದಾರಿ ಇಲ್ಲದೆ ಟೀಕೆ ಮಾತ್ರ ಮಾಡುವುದೆಂದರೆ ಕೇರೆಹಾವು ಹೆಡೆಎತ್ತುವಂತೆ ನಿರರ್ಥಕವಾದುದು. ಇದು ಉಪಮಂತ್ರಿಗಳ ವಿಚಾರ ಸರಣಿಯು. ಇದನ್ನು ಕೇಳುವಾಗ ಪ್ರತಿ ಒಬ್ಬನು ತಲೆ ಅಲ್ಲಾಡಿಸಿ "ಹೌದಣ್ಣಾ! ಹೌದು!" ಎಂದು ಹೇಳಬೇಕಾಗುದೆ. ಜವಾಬದಾರಿಯನ್ನು ಕೇಳಿದಾಗ ನಿಮ್ಮಲ್ಲಿ ಪಾತ್ರತೆ ಇಲ್ಲ, ಜವಾಬದಾರಿಯನ್ನು ಪಡಕೊಂಡು ನೀವು ಏನು ಮಾಡುವಿರಿ? ಎಂದು ಗೌಜಿ ಹಾಕುವುದು, ತತ್ಕಾಲಕ್ಕೆ ಕೌನ್ಸಿಲುಗಳನ್ನು ಹೆಚ್ಚಿಸಿ ಲೋಕಮತದ ಪ್ರವೇಶವು ಸರಕಾರ ದರಬಾರಿನಲ್ಲಿ ಹೆಚ್ಚು ಹೆಚ್ಚು ಉಂಟಾಗುವಂತೆ ಯಾದರೂ ಮಾಡಿರಿ ಎಂದು ಯಾಚಿಸಿದಾಗ ಮೇಲಿನಂತೆ ಉಪಹಾಸ ಮಾಡುವುದೆಂದರೆ ಮನೆಯನ್ನು ಕೇಳಿದಾಗ ಬೀಗದ ಕೈ ಇಲ್ಲದೆ ಮನೆ ಯಾಕೆ ಎಂದು ವಾದಿಸುವುದು, ಎಂತ ಬೀಗದ ಕೈಯನ್ನು ಬೇಡಿದರೆ ಮನೆ ನಮ್ಮ ಸ್ವಾಧೀನ ಉಂಟು. ಬೀಗದ ಕೈಮಾತ್ರ ಯಾಕೆ ಎಂದು ಹೇಳುವ ಹಾಗೆಯೆ ಸರಿ. ದಾನಬುದ್ಧಿಯು ಸ್ವಲ್ಪದೂರದಲ್ಲಿದ್ದ ಮೇಲೆ ಈ ಎಲ್ಲ ಯುಕ್ತಿಗಳು ರಾಜನೀತಿಯ ಶಾಸ್ತ್ರಕ್ಕನುಸಾರವಾಗಿಯೆ ಮುಂದೆ ಬರುವವು. ಆದುದರಿಂದಲೆ ನಾವು ಕಳೆದ ಸಂಚಿಕೆಯಲ್ಲಿ ಉಪಮಂತ್ರಿಗಳ ಕೇವಲ ಉದಾರವಾದಿತ್ವವು ಹಿಂದುಸ್ಥಾನಕ್ಕೆ ಫಲಕಾರಿಯಾಗದು ಎಂದು ಹೇಳಿದ್ದೇವೆ.

ಅದೆ ಮಾತು ಅವರ ಇನ್ನೊಂದು ವಿಧಾನದಿಂದಲೂ ಸ್ಪಷ್ಟವಾಗುತ್ತದೆ. "ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಹೊಂದುವ ಹಿಂದುಸ್ಥಾನದ ಮಹತ್ವಾಕಾಂಕ್ಷೆಯು ಒಂದೆ ಒಂದು ದಿವಸದಿಂದ ಫಲಿಸತಕ್ಕುದಲ್ಲ, ಅಥವಾ ಪಾರ್ಲಿಮೆಂಟಿನಲ್ಲಿ ಸ್ವರಾಜ್ಯ ವಿಷಯದ ಕಾಯಿದೆಯನ್ನು ಪಾಸುಮಾಡುವುದರಿಂದಲೂ ಸಾಧ್ಯವಾಗತಕ್ಕುದಲ್ಲ. ಈ ಸ್ವರಾಜ್ಯದ ಪ್ರವಾಸವು ದೀರ್ಘವೂ ದುಸ್ತರವೂ ಆದೀತು." ಉಪಮಂತ್ರಿಗಳ ಈ ವಿಧಾನವನ್ನು ನೋಡುವಾಗ ಲೋಕಸುಧಾರಣೆಯನ್ನು ಅವರು ಏನೂ ಪರಿಶೀಲಿಸಲಿಲ್ಲವೆಂತಲೆ ಹೇಳಬೇಕಾಗುತ್ತದೆ. ಇಲ್ಲಿಯ ಅಧಿಕಾರಿವರ್ಗವು (ಬ್ಯುರೊಕ್ರಸಿಯು) ಸಹ ಎಷ್ಟೊಸಾರಿ ಈ ಮತವನ್ನೆ ಅನುವಾದಿಸುವುದು. ಸ್ವತಃ ಇಂಗ್ಲಂದಿಗೆ ಸ್ವರಾಜ್ಯವು ಪ್ರಾಪ್ತವಾಗಬೇಕಾದರೆ ಎಷ್ಟೊ ಶತಮಾನಗಳು ದಾಟಿಹೋದವು. ಪ್ರಕೃತ ಐರ್ಲಂದಿಗಾದರೂ ಸ್ವರಾಜ್ಯವು ಸುಲಭದಿಂದ ಸಿಗುವುದಿಲ್ಲ. ಐರ್ಲಂದಿನ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಕಾಯಿದೆ ಪಾಸಾಗಿ ಎಷ್ಟೊ ಸಮಯವಾದರೂ ಐರ್ಲಂದಿಗೆ ಪೃಥಕ್ ಪಾರ್ಲಿಮೆಂಟು ಒಂದಿದೆಯೆ? ಇನ್ನೂ ಅವರ ಒದ್ದಾಟವು ನಡೆದಿದೆ. ಗಾರುಡಿಯು ವಿಭೂತಿಯನ್ನು ಊದಿದ ಕೂಡಲೆ ಅಥವಾ ಮಂತ್ರದ ಕೋಲನ್ನು ತಿರುಗಿಸಿದ ಕೂಡಲೆ ಮಾವಿನ ಹಣ್ಣನ್ನು ತಂದುತೋರಿಸುವಂತೆ ಹಿಂದಿಗಳಿಗೆ ಒಂದೆ ಒಂದು ರಾತ್ರಿಯಲ್ಲಿ ಸ್ವರಾಜ್ಯವು ಬರಬೇಕು! ಎಂಬುದಾಗಿ ಅಧಿಕಾರಿಗಳು ಆಗಾಗ್ಗೆ ಹೇಳುವರು ಮತ್ತು ಮೊನ್ನೆ ಭಾರತ ಉಪಮಂತ್ರಿಗಳಾದರೂ ಇದನ್ನೆ ಅರ್ಥಾಂತರದಿಂದ ಧ್ವನಿಸುವರು. ಆದರೆ ಈ ವಿಚಾರಸರಣಿಯು ಕೇವಲ ದೋಷಾಸ್ಪದವಾಗಿದೆ. ಜೇಮ್ಸ್‌ವೋಟನು ಉಗಿಯ ಸಾಮರ್ಥ್ಯವನ್ನು ಕಂಡುಹಿಡಿದು ಅದರಿಂದ ಉಗಿಯಂತ್ರ ಮುಂತಾದ ಅನೇಕ ಉಪಯುಕ್ತ ವ್ಯವಹಾರಗಳ ಸೌಕರ್ಯವನ್ನು ಸಾಧಿಸಿಕೊಡುವ ಮೊದಲು ಇದೆ ಇಸ್ಲಿಂಗ್‌ಟನರ ಮತ್ತು ಇಲ್ಲಿಯ ಅಧಿಕಾರಿವರ್ಗದವರ ಅಜ್ಜಪಿಜ್ಜಂದಿರು ದೂರದೂರದ ಪ್ರವಾಸವನ್ನು ನಡಕೊಂಡೊ, ಗಾಡಿಯಿಂದಲೊ ಮಾಡುತ್ತಿದ್ದರು. ಎಂತ ಆಗಲೂ, ರೈಲು, ಮೋಟಾರು ಮುಂತಾದ ಸುಲಭ ಸಾಧನಗಳು ಬಂದ ಸಮಯದಲ್ಲಿ ಅಂಥ ಕಷ್ಟಕರ ಪ್ರವಾಸವನ್ನೆ ಮಾಡಿರಿ ಎಂದು ಹೇಳಿದರೆ ಹೇಳುವವನಿಗೆ ಬುದ್ಧಿಹೀನನೆಂತಲೆ ಹೇಳ್ಯಾರು. ನ್ಯೂಟನನಿಗೆ ಗುರುತ್ವಾಕರ್ಷಣಶಕ್ತಿಯನ್ನು ಹುಡುಕಲು ಶಾನೆ ಕಷ್ಟವೂ ಕಾಲಾವಧಿಯೂ ಆಯಿತೆಂದು ಈಗ ಪ್ರತಿಒಬ್ಬನು ಅದೆ ರೀತಿಯಿಂದ ಗುರುತ್ವಾಕರ್ಷಣದ ತತ್ವವನ್ನು ಅಷ್ಟೆ ಕಷ್ಟಪಟ್ಟು ತಿಳಿದುಕೊಳ್ಳಬೇಕೆಂದು ವಾದಿಸಿದರೆ ಆ ಮಾತಿಗೆ ಯಾರು ಕಿವಿಗೊಟ್ಟಾರು? ತಂದೆಗೆ ತೆಂಗಿನ ಬೀಜವನ್ನು ಹಾಕಿ, ಸಸಿಮಾಡಿ, ಅದರಲ್ಲಿ ಫಲವನ್ನು ತಿನ್ನಬೇಕಾದರೆ ಕಾಲಾವಧಿಯು ಹಿಡಿಯುವುದು ಸಹಜವೆನ್ನೋಣ. ಪರಂತು ಮಗನ ವಿಷಯದಲ್ಲೂ ಹಾಗೆಯೆ ಕಾಲಾವಧಿಯ ನೆವಹೇಳಹೋದರೆ ಅದು ವಸ್ತುಸ್ಥಿತಿಗೆ ಸಮರ್ಪಕವಾದೀತೆ? ಮನೆಮಾರುಗಳ ಕಲ್ಪನೆ, ರಚನಾಕ್ರಮ್ಮು ಉಪಯುಕ್ತತೆ ಇವು ಒಂದೂ ಗೊತ್ತಾಗುವ ಪೂರ್ವದಲ್ಲಿ ನಮ್ಮ ಹಿರಿಯರು ಮರದ ಅಡಿಯಲ್ಲೊ, ಗುಹೆಯೊಳಗೊ, ಬಂಡೆಕಲ್ಲಿನ ಆಶ್ರಯದಲ್ಲೊ ದಿವಸಗಳನ್ನು ಕಳೆಯುತ್ತಿದ್ದರೆಂದು ಈ ಹೊತ್ತು ನಾವು ಹಾಗೆಯೆ ಮಾಡುವುದೆಂದರೆ ನಮ್ಮ ಮತಿಮಂದತ್ವಕ್ಕೆ ಮಿತಿಯಿಲ್ಲ ಎಂಬುದೆ ಅರ್ಥ. ಇರಲಿ. ಈ ಎಲ್ಲ ಸಂಗತಿಗಳು ಇಸ್ಲಿಂಗ್‌ಟನರಿಗಾಗಲಿ, ಇಲ್ಲಿಯ ಅಧಿಕಾರಿ ವರ್ಗಕ್ಕಾಗಲಿ ಗೊತ್ತಿಲ್ಲ, ಎಂದಲ್ಲ ಆದರೆ ಅವರೆಲ್ಲರು ದುರಾಗ್ರಹಪರವಶರಾಗಿ ಮೇಲಿನಂಥ ಲೋಕಸುಧಾರಣೆಯ ತತ್ವಕ್ಕೆ ವಿರುದ್ಧವಾದ ವಿಧಾನವನ್ನು ಏನೂ ಹುರಿಮಾಡದೆ ಮಾಡುವರು. ಇಂಗ್ಲಂದಿಗೆ ಸ್ವರಾಜ್ಯವನ್ನು ಹೊಂದಬೇಕಾದರೆ ಎಷ್ಟೊ ಶತಮಾನಗಳು ಹೋದುದಾದರೆ ಸಕ್ಸದ ಪೋಲಂದಿಗೆ ಯಾಕೆ ಅಷ್ಟು ಸಮಯಬೇಕಾಗಲಿಲ್ಲ? ಪೋಲಂದಿಗೆ ಸ್ವರಾಜ್ಯವನ್ನು ಕೊಟ್ಟವರು ನಮ್ಮ ಮಿತ್ರಸಂಘದಲ್ಲಿ ಸೇರಿದ ರಸಿಯನರ ಅಲ್ಲವೆ? ದೀರಿಯವರ ಸಂಗತಿಯನ್ನು ಬಿಟ್ಟರೂ ಬೋವರ ಜನರಿಗೆ ಸ್ವರಾಜ್ಯದ ಹಕ್ಕುಗಳನ್ನು ಅರ್ಪಿಸಿದವರು ತಾವೆ ಬ್ರಿಟಿಷರಲ್ಲವೆ? ಅವರ ವಿಷಯದಲ್ಲಿ ಕಾಲಾವಧಿಯ ಪ್ರಶ್ನವು ಬರಲಿಲ್ಲ! ಇಂಥ ಅನೇಕ ಉದಾಹರಣೆಗಳನ್ನು ನಾವು ತೋರಿಸಿಕೊಟ್ಟೇವು. ಆದರೆ ನೀವು ಮಾತ್ರ ದುರಾಗ್ರಹವನ್ನು ಬದಿಗಿಟ್ಟು ಅವುಗಳನ್ನು ಧ್ಯಾನಿಸಬೇಕು. ಆದರೆ ಇಲ್ಲಿಯ ಅಧಿಕಾರಿಗಳಂತೆಯೆ ನಮ್ಮ ಉಪಮಂತ್ರಿಗಳು ಸಹ ಈ ಮಾತನ್ನು ಒಪ್ಪುವಂತೆ ತೋರುವುದಿಲ್ಲ. ಕಾರಣ, ಅವರು ತಮ್ಮ ಮಾತಿನಲ್ಲಿ 'ಸರ್ವಸತ್ತಾಧಾರಿಯಾದ ಬ್ಯುರೊಕ್ರಸಿಯಲ್ಲಿ ಏಕೀಕೃತವಾದ ಅಧಿಕಾರಗಳನ್ನು ಕೂಡಲೆ ತಪ್ಪಿಸುವುದು ಯುಕ್ತವಲ್ಲೆಂದು ಪದೇಪದೇ ಹೇಳುವರು. ಇವರು ಅಡಿತೋರಿಸುವ ಈ ಮೂರುನಾಲ್ಕು ವಿಧಾನಗಳನ್ನು ಏಕೀಕರಿಸಿ ವಿಚಾರಮಾಡಿ ನೋಡಿದರೆ ೧೯ ಸಭಾಸದರು, ರಾಷ್ಟ್ರೀಯ ಸಭೆ, ಮೊಸಲೆಮ್-ಲೀಗ್ ಮುಂತಾದ ಜವಾಬದಾರ ವ್ಯಕ್ತಿಗಳೂ, ಸಂಸ್ಥೆಗಳೂ ಯಾವ ಪ್ರಾತಿನಿಧಿಕ ತತ್ವವನ್ನು ಅವಲಂಬಿಸಿ ಅಲ್ಪಸ್ವಲ್ಪ ಸುಧಾರಣೆಗಳನ್ನು ಕೇಳಿರುವವೊ ಅದನ್ನೆ "ಮೂಲೋಚ್ಛೇದನ್ಯಾಯದಿಂದ, ಕಳೆದ ಸಂಚಿಕೆಯಲ್ಲಿ ಹೇಳಿದಂತೆ ಉಪಮಂತ್ರಿಗಳು ಅಳಿಸಿಬಿಟ್ಟಿದ್ದಾರೆಂಬುದಕ್ಕೆ ಸಂದೇಹವಿಲ್ಲ. ಮುಖ್ಯವಾದ ಪ್ರಾತಿನಿಧಿಕ ತತ್ವವೆ ಹೋದನಂತರ ನಿರ್ಜೀವವಾದ ಅಲ್ಪಸ್ವಲ್ಪ ಸುಧಾರಣೆಗಳು ಬರುವವಾದರೆ ಅವುಗಳಿಂದ ಫಲವೇನು? ಜನತೆಯ ಕೈಯಲ್ಲಿ ಆ ಖಾತೆ, ಈ ಖಾತೆಯ ಕೆಲಸಗಳನ್ನು ಹೆಚ್ಚುಹೆಚ್ಚು ಒಪ್ಪಿಸಿಕೊಟ್ಟು ಮುಖ್ಯ ಜವಾಬದಾರಿಯನ್ನು ಕೊಡದೆ ಇದ್ದರೆ ಬರೆ ಪಲ್ಲಕಿಯನ್ನು ಹೊತ್ತುಕೊಂಡು ಹೋಗುವ ಅಧಿಕಾರವನ್ನು ಕೊಟ್ಟ ಹಾಗೆಯೆ ಸರಿ! ತಥಾಪಿ ಲೊರ್ಡ ಇಸ್ಲಿಂಗ್‌ಟನರು "ಆಸ್ಟ್ರೇಲಿಯದಂತೆ ಇದರ ಸ್ವರಾಜ್ಯರಚನೆಯಾಗತಕ್ಕುದು" ಎಂದು ನೆನೆಸುತ್ತಾರೆ. ಅದನ್ನು ಮಾತ್ರ ಯಾವ ಆಧಾರದಿಂದ ನೆನೆಸುತ್ತಾರೆ, ಇದು ಗೊತ್ತಾಗದು. ಸುಧಾರಣೆಗಳಲ್ಲಿ ಜೀವಾಳವಾದ "ಪ್ರಾತಿನಿಧಿಕ ತತ್ವ"ವನ್ನು ಬಹಿಷ್ಕರಿಸಿ "ನಿಮ್ಮ ಸುಧಾರಣೆಯ ಅಂತಿಮಧ್ಯೇಯವು ಸ್ವರಾಜ್ಯ. ಆಸ್ಟ್ರೇಲಿಯದಂತೆ ನಿಮ್ಮ ರಾಜ್ಯಕ್ರಮವು ನಡೆಯಬೇಕು." ಮುಂತಾದ ಬಹು ರುಚಿಕರವಾಗಿ ಮಾತನಾಡುವುದೆಂದರೆ ಪ್ರಾಪಂಚಿಕರಲ್ಲಿ ಅನೇಕರು ತಮ್ಮ ಮಕ್ಕಳೊಡನೆ ಇಂಥ ರುಚಿಕರವಾದ ಮಾತುಗಳನ್ನು ಅನೇಕ ಸಾರಿ ಆಡಿತೋರಿಸುವುದುಂಟು, ಅಂಥವರನ್ನು ಅನುಕರಿಸುವುದೆ ಸರಿ! ಇದಕ್ಕಿಂತ ಸಮರ್ಪಕವಾದ ದೃಷ್ಟಾಂತವು ನಮ್ಮ ಉಪಮಂತ್ರಿಗಳ ಮೇಲಿನ ವಿಧಾನಕ್ಕೆ ಬೇರೆ ಸಿಗದು.

ಇರಲಿ; ಜೀವಾತುವಾದ ಪ್ರಾತಿನಿಧಿಕ ತತ್ವವು ಬಹಿಷ್ಕೃತವಾದಲ್ಲಿ ಇವರು ಹೇಳಿರುವ ಬೇರೆ ಸುಧಾರಣೆಗಳು ಯಾಕೆ? ಅವು ಕೇವಲ ನಿರರ್ಥಕ. ಆ ವಿಷಯದಲ್ಲಿ ಚರ್ಚಿಸುವುದು ವ್ಯರ್ಥ. ಸುಧಾರಣೆಗಳು ಬಂದಾವು, ಬಂದಾವು ಎಂದು ಆಶಿಸಿ ಕುಳಿತುಕೊಂಡ ಹಿಂದೀ ದೇಶಭಕ್ತರ ಬಾಯಿಯಲ್ಲಿ ಬೀಳತಕ್ಕವು ಈ ತುಂತುರಿಗಳೆ ಎಂದಾದರೆ ಇವು ಕೇವಲ ನಿಸ್ಸಾರವಾದವುಗಳೆಂದು ತಿಳಿಸಲು ನಾವು ಖೇದಗೊಳ್ಳುವೆವು. ಆದರೂ ಇದರ ಎಡೆಯಲ್ಲಿ ನಮಗೆ ಒಂದು ವಿಷಯದಲ್ಲಿ ಮಾತ್ರ ತುಂಬಾ ಸಂತೋಷವಾಗುತ್ತದೆ. ಅದೇನೆಂದರೆ, ಮುಂಬಯಿಯ ಮಾಜಿ ಗವರ್ನರ ಲೊರ್ಡ ಸಿಡೆನ್‌ಹೆಮ್ ಮತ್ತು ಅಲ್ಲಿಯ ಈಗಿನ ಬಿಶಪರು ಹಾಗು ಬೇರೆ ದೊಡ್ಡದೊಡ್ಡ ಪ್ರಾಂತಿಕ ಅಧಿಕಾರಿಗಳನೇಕರು ಮತ್ತು ಸಂಪೂರ್ಣ ಎಂಗ್ಲೊ ಇಂಡಿಯನರು ಈ ಎಲ್ಲರು ಕೂಡಿ "ಇಂಗ್ಲಂಡವು ಯುದ್ಧದಲ್ಲಿ ಬಿದ್ದಿದೆ, ಅಲ್ಲಿಯ ಮುತ್ಸದಿಗಳಿಗೆ ಹಿಂದುಸ್ಥಾನದ ವಿಷಯದಲ್ಲಿ ಆಲೋಚಿಸಲು ಏನೂ ಸಮಯವಿಲ್ಲ. ನೀವು ಈ ಸಮಯದಲ್ಲಿ ಈ ಅನ್ಯಾಯಾರೇಕು ಚಳುವಳಿಯನ್ನು ಯಾಕೆ ಕೈಕೊಂಡಿದ್ದೀರಿ? ಎಂದು ಹೇಳುತ್ತಿದ್ದರು; ಆದರೆ ಹಿಂದುಸ್ಥಾನದ ವಿಷಯದಲ್ಲಿ ಆಲೋಚಿಸಲಿಕ್ಕೆ ನಮ್ಮ ಇಸ್ಲಿಂಗ್‌ಟನರಿಗೆ ಮತ್ತು ಇನ್ನೂ ಕೆಲವರಿಗೆ ತುಂಬಾ ಸಮಯವಿದೆ. ಅವರು ಹಿಂದುಸ್ಥಾನದ ಆಕಾಂಕ್ಷೆಗಳನ್ನು ಆಲೋಚಿಸುತ್ತಿದ್ದಾರೆ ಎಂಬುದನ್ನು ಈಗಲಾದರೂ ಮೇಲಿನ ಎಲ್ಲ ವಾದಿಗಳು ತಿಳಿದುಕೊಂಡರೆ ಲೊಡ್ರ. ಇಸ್ಲಿಂಗ್‌ಟನರ ಶ್ರಮಕ್ಕಿಂತ ಹಿಂದಿಗಳ ಶ್ರಮವು ಹೆಚ್ಚು ಸಾರ್ಥಕವಾದೀತೆಂದು ನೆನೆಸುತ್ತೇವೆ.

ಸ್ಫುಟವಿಚಾರಗಳು.

೧. ಲೊರ್ಡ ಇಸ್ಲಿಂಗ್‌ಟನರ ಸುಧಾರಣೆಯು ಹೊರಗೆ ಬಿದ್ದ ಸಮಯದಲ್ಲೆ ಪರಲೋಕವಾಸಿ ಗೋಖಲೆಯವರ ಸುಧಾರಣೆಯು ಹೊರಗೆಬಿದ್ದಿದೆ. ಸರದಾರ ಆಗಾಖಾನರು ಇಂಗ್ಲಂಡಿನಲ್ಲಿ ಗೋಖಲೆಯವರ ಸುಧಾರಣೆಗಳನ್ನು ಹೊರಪಡಿಸಿದ್ದಾರೆ. ಗೋಖಲೆಯವರು ಸ್ಥಾಪಿಸಿದ "ಭಾರತ ಸೇವಕ-ಸಮಾಜ"ದ ಈಗಿನ ಅಧ್ಯಕ್ಷರಾದ ಮತ್ತು ಗೋಖಲೆಯವರ ಪಟ್ಟಶಿಷ್ಯರಾದ ನಾಮದಾರ ಶ್ರೀನಿವಾಸ ಶಾಸ್ತ್ರಿಗಳು ಈ ಸುಧಾರಣೆಗಳ ಜನ್ಮಕಥೆಯನ್ನು ಕೊಟ್ಟಿರುವರು. ಗೋಖಲೆ ಸುಧಾರಣೆಗಳ ವಸ್ತುಸ್ವರೂಪವನ್ನು ನೋಡುವಾಗ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಹೇಳುವಂತೆ ಈಗ ಹೊರಬಂದ ಸುಧಾರಣೆಗಳು ಗೋಖಲೆಯವರ ಅಂತಿಮನಿರ್ಣಯಕ್ಕೆ ಬಂದವುಗಳೆಂದು ಹೇಳಲಾಗದು. ಪ್ರಕೃತಿಯ ಅಸ್ವಾಸ್ಥ್ಯ, ಸಾಕಷ್ಟು ವಿಚಾರಕ್ಕೆ ತಕ್ಕ ವ್ಯಕ್ತಿಗಳ ಅಸಾನ್ನಿಧ್ಯ, ಯುದ್ಧವು ಬರೆ ಪ್ರಾರಂಭವಾದ ಸಮಯ, ಮತ್ತು ಈಗಿನಷ್ಟು ಜನತೆಯ ಆಕಾಂಕ್ಷೆಯು ಪುಷ್ಟವಿಲ್ಲದೆ ಇರೋಣ, ಇಂಥ ಪರಿಸ್ಥಿತಿಯಲ್ಲಿ ದಿವಂಗತ ಗೋಖಲೆಯವರು ಸುಧಾರಣೆಯ ಕೆಲವು ರೂಪರೇಖೆಗಳನ್ನು ಮಾತ್ರ ಬರೆದಿಟ್ಟಿರುವ ... ಅದರಿಂದ ... ಯಾವ ಅನುಮಾನವನ್ನು ಹೊರಡಿಸಲು ಸಾಧ್ಯವಿಲ್ಲ. ಗೋಖಲೆಯವರು ಕೊಟ್ಟ ಸುಧಾರಣಾಪತ್ರಕದಲ್ಲಿ ... ಸುಧಾರಣೆಯ ವಿಷಯದಲ್ಲಿ ... ಬರುತ್ತದೆ. ಹಿಂದುಸ್ಥಾನದ ... ಗೋಖಲೆಯವರು ಹೇಳಿದ ... ಗಳು; ಉಳಿದವರು ಯುರೋಪಿಯನ ... ಕೇವಲ

ಅಪೂರ್ಣವಾಗಿದೆಂದು ರಾಷ್ಟ್ರೀಯಸಭೆ ಮೋಸಲೆಮ್-ಲೀಗಿನ ಸುಧಾರಣಾಪತ್ರಕದಿಂದ ಕಂಡುಬರುತ್ತದೆ. ನಾಮದಾರ. ಶಾಸ್ತ್ರಿಗಳು ಹೇಳುವಂತೆ ಗೋಪಾಲಕೃಷ್ಣ ಗೋಖಲೆಯವರು ಇಷ್ಟರವರೆಗೆ ಬದುಕಿಉಳಿದುದಾದರೆ ೧೯ ಜನ ಸಭಾಸದರ ಮಸೂದೆಪತ್ರಕದಲ್ಲಿ ಅವರ ಹೆಸರೆ ಮೊದನೆಯದಾಗಿ ಬರುತ್ತಿತ್ತು. ಕಾಯಿದೆಕೌನ್ಸಿಲಿನ ೧೯ ಜನ ಸಭಾಸದರ, ರಾಷ್ಟ್ರೀಯಸಭೆಯ, ಮೋಸ್‌ಲೆಮ್-ಲೀಗಿನ ಮತ್ತು ಹೋಮ್‌ರೂಲ್-ಲೀಗಿನ ಸುಧಾರಣಾಪತ್ರಕಗಳೊಡನೆಯಾಗಲಿ, ಈಗ ದೇಶತುಂಬಾ ಅಭಿವ್ಯಕ್ತವಾಗುವ ಸುಶಿಕ್ಷಿತ ಲೋಕಮತದ ಆಕಾಂಕ್ಷೆಯೊಡನೆಯಾಗಲಿ, ಪರವಾಸಿ ಗೋಖಲೆಯವರ ಈ ಸುಧಾರಣಾಮಸೂದೆಯನ್ನು ಹೋಲಿಸಿನೋಡಿದರೆ ಇದು ಎಷ್ಟೊ ಕೆಳಗಿನ ತರಗತಿಯನ್ನು ಹೊಂದುತ್ತದೆಂಬುದು ನಿಜವಾದರೂ ಇನ್ನೊಂದು ಸಂಗತಿಯು ನಿರ್ವಿವಾದವು. ಅದು ಯಾವುದೆಂದರೆ, ಎರಡು ವರ್ಷಗಳ ಪೂರ್ವದಲ್ಲಿ ಎಂದರೆ ಮೆಸಪೊಟೆಮಿಯದ ಅಪಘಾತದಂಥ ಅಧಿಕಾರಿವರ್ಗದ ನಿರಂಕುಶತ್ವದ ಕುರುಹು ಹೊರಗೆ ಬರುವ್ರದಕ್ಕಿಂತ ಮುಂಚೆಯೆ ಅಧಿಕಾರಿಮಂಡಲದಲ್ಲಿ ಅನೇಕ ಮಹತ್ವದ ಬದಲಾವಣೆಗಳು ಆಗಬೇಕೆಂದು ಗೋಖಲೆಯವರಂಥ ರಾಜನೀತಿಧುರಂಧರರೂ ಸೂಚಿಸಿದ್ದಾರೆ.

೨. ನೇತ್ರಚಿಕಿತ್ಸೆಯ ವ್ಯವಸ್ಥೆಯು ಈಗ ಇರುವುದು ಕೇವಲ ಅಪೂರ್ಣವಾಗಿದೆ. ಇಡಿ ಮದ್ರಾಸ ಪ್ರಾಂತದಲ್ಲಿ ನೇತ್ರಚಿಕಿತ್ಸೆಯ ಒಂದೆ ಔಷಧಾಲಯವು ಮದ್ರಾಸಿನಲ್ಲಿ ಮಾತ್ರ ಇರುವುದರಿಂದ ಅನೇಕರಿಗೆ ಮದ್ರಾಸಿಗೆ ಬರುವುದು ಬಹು ಅಸೌಕರ್ಯದ ಹಾಗು ಪರಿಶ್ರಮದ ಕೆಲಸವಾದುದರಿಂದ ಮದ್ರಾಸ ಸರಕಾರವು ಸರ್ಜನ್ ಜನರಲನಿಗೆ ಸಂಸ್ಥಾನದೊಳಗಿನ ಬೇರೆಬೇರೆ ಮುಖ್ಯಸ್ಥಲಗಳ ಆಸ್ಪತ್ರಿಗಳಲ್ಲಿ ನೇತ್ರಚಿಕಿತ್ಸೆಯ ವ್ಯವಸ್ಥೆಯನ್ನು ಮಾಡಲು ಬರೆದುಕೊಂಡಿತ್ತು. ಸರಕಾರದ ಇನ್ನೊಂದು ಸೂಚನೆಯು ಯಾವುದಿತ್ತೆಂದರೆ, ಬೇರೆ ಕಡೆಗಳಲ್ಲಿ ತೆರೆಯಲ್ಪಡುವ ನೇತ್ರರೋಗ ಚಿಕಿತ್ಸಾಲಯಗಳಲ್ಲಿ ಮದ್ರಾಸಿನ ನೇತ್ರಚಿಕಿತ್ಸಾಲಯದಲ್ಲಿ ತರಬೇತುಹೊಂದಿದ ಸಿವಿಲ್-ಅಸಿಸ್ಟಂಟ್ ಸರ್ಜನರೆ ಇರಬೇಕು. ಇವರು ಮುಖ್ಯವಾಗಿ ನೇತ್ರರೋಗಿಗಳ ಚಿಕಿತ್ಸೆಯನ್ನ ಮಾಡಬೇಕು. ಸರಕಾರದ ಈ ಮೇಲಿನ ಸೂಚನೆಯ ಮೇರೆಗೆ ಸರ್ಜನ್-ಜನರಲನು ಶೋಧಾಂತ್ಯದಲ್ಲಿ ತನ್ನ ಅಭಿಪ್ರಾಯವನ್ನು ತಿಳಿಸಿದ್ದಾನೆ. ಆ ಅಭಿಪ್ರಾಯದಂತೆ ವಿಶಾಖಪಟ್ಣ, ತಂಜಾವೂರ ಮತ್ತು ಕೊಯಿಮುತ್ತೂರ ಈ ಪಟ್ಟಣಗಳಲ್ಲಿ ಇರುವ ಮೆಡಿಕಲ್ ಕಾಲೇಜುಗಳನ್ನು ಹೊಂದಿಕೊಂಡಿರುವ ಆಸ್ಪತ್ರಿಗಳಲ್ಲಿ ನೇತ್ರಚಿಕಿತ್ಸೆಯನ್ನು ನಡಿಸಬಹುದು. ಈ ಸಂದರ್ಭದಲ್ಲಿ ಕಲಿಕೋಟೆಯಲ್ಲಿ ಇರುವ ಮೆಡಿಕಲ್-ಸ್ಕೂಲನ್ನು ತೆಗೆದುಹಾಕಬಹುದು, ಎಂಬುದಾಗಿಯೂ ಆ ಅಭಿಪ್ರಾಯದಲ್ಲಿ ಕಂಡು ಬರುತ್ತದೆ. "ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾಃ ಏಕಾ ಕ್ರಿಯಾ ದ್ವ್ಯರ್ಥಕರೀ ಬಭೂವ" ಎಂಬ ಮಾತಿನಂತೆ ಈ ಯೋಜನೆಯಿಂದ ನೇತ್ರರೋಗಿಗಳ ಶುಶ್ರೂಷೆ, ಮತ್ತು ವಿದ್ಯಾರ್ಥಿಗಳಿಗೆ ನೇತ್ರಚಿಕಿತ್ಸಾಧ್ಯಯನ ಈ ಎರಡೂ ಕೆಲಸಗಳೂ ಆಗಬಹುದು, ಎಂದು ಸರ್ಜನ್-ಜನರಲರು ಅಭಿಪ್ರಾಯಪಡುತ್ತಾರೆ. ಮೇಲಿನ ಮೂರು ಆಸ್ಪತ್ರಿಗಳಲ್ಲಿ ನೇತ್ರಚಿಕಿತ್ಸೆಯ ಸಲುವಾಗಿ ಪ್ರತ್ಯೇಕವಾಗಿ ಉಪಕರಣಗಳ ಯೋಜನೆಯು ಅವಶ್ಯಕವಿದೆಂದು ತಿಳಿದುಬರುತ್ತದೆ. ಇರಲಿ. ಸರ್ಜನ್-ಜನರಲನ ಕಡೆಯಿಂದ ಮೇಲಿನಂತೆ ಅಭಿಪ್ರಾಯವು ವ್ಯಕ್ತವಾದಲ್ಲಿ ಅದನ್ನು ಸಮ್ಮತಿಸಿ ಸರಕಾರವು ಈ ಅಭಿಪ್ರಾಯಕ್ಕನುಗುಣವಾಗಿ ವ್ಯವಸ್ಥೆಗಳೆಲ್ಲವು ಆದಷ್ಟು ಬೇಗನೆ ಆಗಬೇಕಾಗಿದೆಂದು ಸರಕಾರಿ ಸರಕ್ಯುಲರು ಹೊರಟಿದೆ. ಈ ವ್ಯವಸ್ಥೆಯು ಬೇಗನೆ ಜಾರಿಗೆಬಂದಲ್ಲಿ ನೇತ್ರರೋಗಿಗಳ ಮದ್ರಾಸ ಯಾತ್ರೆಯ ಖರ್ಚು, ಶ್ರಮ ಮುಂತಾದ್ದು ಸ್ವಲ್ಪ ಉಳಿಯುವುದಾದ ಕಾರಣ ಅವರು ಸರಕಾರದ ಕಿಂಚಿತ್ ಆಭಾರಿಗಳಾಗದೆ ಇರರು.

೩. ಹಳೆಬಟ್ಟೆಯು ಒಂದು ಕಡೆಯಲ್ಲಿ ಹರಿಯಲಿಕ್ಕೆ ಪ್ರಾರಂಭವಾಗುವುದೆ ಅವಕಾಶ, ಮತ್ತೆ ಮೇಲಿಂದ ಮೇಲೆ ಅದು ಹರಿಯುತ್ತ ಹೋಗುತ್ತದೆ. ಈ ಅನುಭವವು ಮೊದಲಿನಿಂದಲೆ ಇದ್ದುದರಿಂದ ಒಂದು ಹೊಲಿಗೆಯೂ ಹತ್ತು ಛಿದ್ರಗಳನ್ನು ಉಳಿಸುತ್ತದೆ ಎಂದು ಬಲ್ಲಾದವರು ಹೇಳತೊಡಗಿದರು. ಹಳೆಬಟ್ಟೆಯ ಅವಸ್ಥೆಯು ಹೀಗಿದ್ದರೂ ಹೊಸ ಚಳವಳಿಯ ಬಟ್ಟೆಯು ಹೀಗಿರಲಿಕ್ಕಿಲ್ಲೆಂದು ಮೇಲಿಂದ ಮೇಲೆ ನೋಡುವಾಗ ಕಾಣುತ್ತದೆ. ಆದರೆ ಕೊಯಿಮುತ್ತೂರಿನ ಒಂದೆ ಜಿಲ್ಲೆಯಲ್ಲಿ ಒಂದೆ ದಿವಸ ಜಿಲ್ಲಾಸಭೆ, ಅದಕ್ಕೆ ಎದುರಾಗಿ ಅಬ್ರಾಹ್ಮಣಸಭೆ ಈ ಎರಡು ಸಭೆಗಳಲ್ಲಿ ನಡೆದ ವೃತ್ತಾಂತವನ್ನು ನೋಡಿದರೆ ಹೊಸ ಚಳವಳಿಯಲ್ಲಿ ಒಡಕು ಬರಹತ್ತಿದರೆ ಅದು ಮುಂದರಿಸಲಿಕ್ಕಿಲ್ಲ ಎಂದು ತಿಳಿಯುತ್ತಿರುವ ಭ್ರಮವನ್ನು ಬಿಟ್ಟುಬಿಡಬೇಕಾಗಿ ಬರುತ್ತದೆ. ಕೊಯಿಮುತ್ತೂರಿನಲ್ಲಿ ಜಿಲ್ಲಾಸಭೆಯನ್ನು ಕೂಡಿಸುವುದು ಮೊದಲಿನಿಂದಲೇ ನಡೆಯುತ್ತಿತ್ತು. ಜಿಲ್ಲಾ ಸಭೆಯ ತಂಡದವರು ಬ್ರಾಹ್ಮಣೇತರರನ್ನು ಬಹಿಷ್ಕರಿಸುವ ಯತ್ನವನ್ನಾಗಲಿ, ಉದ್ದೇಶವನ್ನಾಗಲಿ ಮಾಡಿದ್ದಿಲ್ಲ. ಆದರೂ ಪರಪ್ರತ್ಯಯನೇಯ ಬುದ್ಧಿಗಳಾದ ಕೆಲವು ದುರಾಗ್ರಹಿಗಳಿಗೆ ಅಬ್ರಾಹ್ಮಣಪರಿಷತ್ತನ್ನು ಕೂಡಿಸುವುದು ಅತ್ಯಗತ್ಯವಾಗಿ ಕಂಡುಬಂತು. ಜಿಲ್ಲಾ ಸಭೆಯ ತಂಡದವರು ಬ್ರಾಹ್ಮಣ, ಅಬ್ರಾಹ್ಮಣ ಇಂಥ ಭೇದಗಳನ್ನು ಮಾಡಲಿಲ್ಲೆಂಬುದು ಆ ಸಭೆಯ ಅಧ್ಯಕ್ಷಸ್ಥಾನವನ್ನು ಮಿ. ರಾಮನ್‌ಮೆನನ್ ಎಂಬ ಅಬ್ರಾಹ್ಮಣ ಸದ್ಗೃಹಸ್ಥರಿಗೆ ಕೊಟ್ಟ ಈ ಒಂದು ಸಂಗತಿಯಿಂದಲೆ ತಿಳಿದುಬರುವ ಹಾಗಿದೆ. ಜಿಲ್ಲಾ ಸಭೆಯು ಕೊಂಗ್ರೆಸ್-ಸಭೆಯ ಅಂಕಿತ ಕೆಂಬಹುದಾ ಒಂದು ಗೋಣಸಾದುದರಿಂದ ಇಡಿ ದೇಶದ ಪರವಾಗಿ ಕೂಡುವ ಕೊಂಗ್ರೆಸಿನಲ್ಲಿ ಜಾತಿ-ವಿಜಾತಿ, ಮತ-ವಿಮತ ಮುಂತಾದ ಭೇದಭಾವಗಳ ಪ್ರವೇಶವೆ ಇಲ್ಲದಿರುವಾಗ ಪ್ರತ್ಯುತ ರಾಷ್ಟ್ರದ ಸಂಗತಿಗಳನ್ನು ಸಮಾಲೋಚಿಸುವ ಈ ಸಂದರ್ಭದಲ್ಲಿ ಎಲ್ಲ ತಂಡಗಳಿಂದಲೂ, ವಿವಿಧ ಪಕ್ಷಗಳಿಂದಲೂ ಸಂಮತ್ರವಾದ ಬ್ರಿಟಿಷ್-ಪಾರ್ಲಿಮೆಂಟಿನ [illegible] ರೂ ಒಂದೆ ಭಾವನೆ, ಒಂದೆ ಪ್ರೇರಣೆ ಮತ್ತು ಒಂದೆ ಕಾರ್ಯ [illegible] ಆ ಕೊಂಗ್ರೆಸ್ಸಿನಲ್ಲಿ ಕೆಲಸಮಾಡುತ್ತಿರುವಾಗ, ಅದರ ಗೋಣನಾದ ಜಿಲ್ಲಾ ಸಭೆಯಲ್ಲಿ ಸಭೆಯ ಕಾರ್ಯನಿರ್ವಾಹಕರಿಗೆ ಈ ಭೇದಗಳು [illegible]

ಹೇಗೆ ಸಾಧ್ಯವಾದೀತು? ಆದರೆ ಈ ವಿವೇಚನೆಯನ್ನು ಮಾಡುವ ಅವಶ್ಯಕತೆಯು, ರಾಷ್ಟ್ರಕಾರ್ಯದಲ್ಲಿ ಒಡಕೆ ತರಬೇಕೆಂದು ಆಶೆ ಇಟ್ಟುಕೊಂಡ ದುರಾಗ್ರಹಿಗಳಿಗೆ ಉಂಟೆ? ಅವರು ತಮ್ಮ ಹಟವನ್ನು ಸಾಧಿಸಿ ಪ್ರತ್ಯೇಕ ಒಂದು ಸಭೆಯ ಅಧಿವೇಶನವನ್ನು ಜರಗಿಸಿಯೆ ಬಿಟ್ಟರು!

೪. ಹಟದಿಂದ ಸಭೆಯನ್ನು ನೆರಿಸಿದ ಮೇಲೆ ಅದರಲ್ಲಿ ಸ್ವಾಗತ ಕಮಿಟಿಯ ಅಧ್ಯಕ್ಷರಾಗಲಿ, ಸಭಾಧ್ಯಕ್ಷರಾಗಲಿ ಮಾತಾಡುವ ವಿಷಯವು ಇನ್ನಾವದಿದ್ದೀತು? ಬ್ರಾಹ್ಮಣರ ದೂಷಣ, ದೇಶದ ಪ್ರಕೃತ ಚಳವಳದ ಮೇಲೆ ವೃಥಾಆರೋಪಣ, ಒತ್ತಾಟದ ಉಪಾಯಗಳನ್ನು ನಡಿಸುವ ಅಧಿಕಾರಿಗಳ ಬೆನ್ನುತಟ್ಟೋಣ ಇವೆ ಇಂಥ ಸಭೆಗಳ, ಪರಿಷತ್ತುಗಳ ಮತ್ತು ಕೂಟಗಳ ಕಾರ್ಯಕ್ರಮಗಳು! ನಡೆಯಲಿ! ಈ ಪ್ರಕಾರ ನಡಕೊಳ್ಳುವುದರಿಂದ ಬ್ರಾಹ್ಮಣೇತರರ ಸಮಾಜವು ನಿಜವಾಗಿ ಮೇಲುತರಗತಿಯನ್ನು ಹೊಂದುವುದು, ಉನ್ನತಿಯನ್ನು ಪಡೆಯುವುದು, ದೇಶದ ಸ್ವಾವಲಂಬನಕ್ಕೆ ಕಾರಣವಾಗುವುದು ಎಂದಿದ್ದರೆ ಅವರ ಈ ಪ್ರಯತ್ನಕ್ಕೆ ಯಾರೂ ಅಡ್ಡಬರಬಾರದೆಂದು ನಾವು ಮನಸಾ ಉಪದೇಶಿಸುವೆವು. ಅಧಿಕಾರಿಗಳು ಕೊಡುವುದೆ ಇದ್ದರೆ ಸ್ವರಾಜ್ಯದ ಹಕ್ಕನ್ನು ಇವರಿಗೆ ಕೊಡಲಿ. ಅದರಿಂದ ಬ್ರಾಹ್ಮಣ ಸಮಾಜವು ಸಂತೋಷವನ್ನೆ ಹೊಂದಬೇಕು. ಈಗ ತಾನೆ ಜನ್ಮಕ್ಕೆ ಬಂದ ಕೊಯಿಮುತ್ತೂರಿನ ಅಬ್ರಾಹ್ಮಣ ಸಭೆಯಿಂದ ನಾಳೆ ಯಾವ ಯಾವ ಹಕ್ಕುಗಳು ದೊರಕಿಕ್ಕಿವೆ ಇದನ್ನು ನಾವು ಬಹು ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದೇವೆ. ನಮ್ಮ ಮದ್ರಾಸ ಪ್ರಾಂತದಲ್ಲಿ ಬ್ರಾಹ್ಮಣ ವಿರೋಧದ ಅಶ್ವಮೇಧಯಾಗವನ್ನು ಈಗ ಎಷ್ಟೊ ಸಮಯದಿಂದ ಪ್ರಾರಂಭಿಸಿ ಹೋಮ್-ರೂಲು ವಿಧ್ವಂಸನದ ಸೂತ್ರಧಾರರಾದ ಸುಪ್ರಸಿದ್ಧ ಡೊಕ್ಟರ ನಾಯರುಗಳಾಗಲಿ ಅಥವಾ ಬೇರೆಯವರಾಗಲಿ, ಈ ಕೊಯಿಮುತ್ತೂರಿನ ಅಬ್ರಾಹ್ಮಣ ಸಭೆಯಿಂದ ತಾವು ಕೃತಕೃತ್ಯರಾದೆವೆಂದು ಈಗ ನೆನೆಸಿಕೊಂಡಿರಬಹುದು, ತಥಾಸ್ತು.

೫. ವಿಲಾಯತಿಯೊಳಗಿನ ಇಂಡಿಯಾ ಒಫೀಸಿನಲ್ಲಿ ನೇಮಕ ಪಟ್ಟವರಾದ ನಾಮ. ಭೂಪೇಂದ್ರನಾಥ ಬಾಸುಗಳು ತಮ್ಮ ಸ್ಥಾನದ ಮೇಲೆ ಹಾಜರಾಗಲು ಪ್ರಯಾಣೋನ್ಮುಖರಾಗಿದ್ದಾರೆ. ಈ ಸಂದರ್ಭದಲ್ಲಿ ಶಿಷ್ಟಾಚಾರದಂತೆ ಕಲಕತ್ತೆಯೊಳಗಿನ ಅನೇಕ ಸಂಸ್ಥೆಗಳ ಮುಖಾಂತರ ಅವರಿಗೆ 'ಮೇಜವಾನಿಗಳು' ಆಗುತ್ತಿವೆ. ಇಂಥದ್ದೆ ಒಂದು 'ಮೇಜವಾನಿಯ' ಸಮಾರಂಭದಲ್ಲಿ ಅವರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದರು. ನಾಮ. ಬಾಸುಗಳವರು ಕೌನ್ಸಿಲಿನಲ್ಲಿ ಮಾತಾಡಲು ಬಹು ಗಟ್ಟಿಗರೆಂದೂ ರಾಷ್ಟ್ರೀಯ ಸಭೆಯ ಪ್ರಮುಖಭಕ್ತರೆಂದೂ ಪ್ರಸಿದ್ಧವಿದೆ. ತಥಾಪಿ ಅವರು ಮೇಲಿನ ಒಂದು ಪ್ರಸಂಗದಲ್ಲಿ ಮಾಡಿದ ಭಾಷಣದಲ್ಲಿ ಈಗಿನ ಚಳವಳವನ್ನು ಕುರಿತು ತಮ್ಮ ಮಂದಾದರತ್ವವನ್ನು ವ್ಯಕ್ತಗೊಳಿಸಿದರು. ಅದರೂ ೧೯ ಜನ ಸಭಾಸದರು ತಯಾರಿಸಿದ ಮಸೂದೆಯೊಳಗಿನ—ಈ ಮಸೂದೆಯನ್ನು ಕಳುಹಿಸಿದವರಲ್ಲಿ ಇವರೂ ಒಬ್ಬರು ಸಮಾವಿಷ್ಟರಾದುದರಿಂದ—ಆ ಸುಧಾರಣೆಗಳು ಲಭಿಸುವಂತೆ ಆದಷ್ಟು ಯತ್ನಿಸುವೆನು, ನೀವು ವಿಲಾಯತಿಗೆ ಡೆಪ್ಯುಟೇಶನ್ ಕಳುಹಿಸಿರಿ ಎಂದು ಹೇಳಿದರು. ಇವರು ವಿಲಾಯತಿಯಲ್ಲಿ, ತಮ್ಮ ಪೂರ್ವದ ಕೀರ್ತಿಗೆ ಅನುರೂಪವಾಗಿಯೆ ನಡೆಕೊಂಡಾರೆಂದು ಎಲ್ಲರು ಆಶಿಸುತ್ತಾರೆ.

೬. ಬೆಳೆಯ ಲಕ್ಷಣವನ್ನು ಮೊಳೆಯಿಂದಲೆ ಊಹಿಸಬಹುದಾದಂತೆ ರಾಜ್ಯಕರ್ತರು ನಮಗೆ ಯುದ್ಧಾಂತ್ಯದಲ್ಲಿ ಕೊಡಲಿಕ್ಕಿದ್ದ ಸುಧಾರಣೆಗಳನ್ನು ಲೊರ್ಡ ಇಸ್ಲಿಂಗ್‌ಟನರ ಪ್ರಸ್ತಾವನೆಯಿಂದಲೆ ಜಾಣಾಕ್ಷರಿದ್ದವರು ತಿಳಿದಿದ್ದಾರೆ. ಆದರೂ ಕೆಲವರಿಗೆ ಇನ್ನೂ ಆಶೆಯು ಬಿಟ್ಟಿಲ್ಲ. ಅಂಥವರನ್ನು ಮೊನ್ನೆ ಭಾರತಮಂತ್ರಿಗಳಾದ ಮಿ. ಮೊಂಟೆಗ್ಯೂ ಇವರು ವೈಸರಾಯರ ಮುಖಾಂತರ ಒಂದು ಪ್ರಕಟನೆಯನ್ನು ಹೊರಡಿಸಿ ಸಂಶಯಸಮುದ್ರದಿಂದ ಮೇಲಕ್ಕೆ ಎತ್ತಿದ್ದಾರೆ, ಇದು ಅಭಿನಂದನೀಯವಾದ ಮಾತು. ಬ್ರಿಟಿಷ ಪಾರ್ಲಿಮೆಂಟಿನ ಲೋಕಸಭೆಯಲ್ಲಿ ಮೊಂಟೆಗ್ಯೂ ಅವರು ಆದಿ ತೋರಿಸಿದ್ದೇನೆಂದರೆ, ಹಿಂದುಸ್ಥಾನದ ಪ್ರಜೆಗಳಿಗೆ ಜವಾಬದಾರಿಯ ಅಧಿಕಾರವನ್ನು ಕೊನೆಗೆ ಸಮರ್ಪಿಸುವಂತೆ ಮೊದಲು ರಾಜ್ಯದಾಡಳಿತೆಯ ಬೇರೆ ಬೇರೆ ಶಾಖೆಗಳಲ್ಲಿ ಹೆಚ್ಚಿನ ಪ್ರವೇಶವನ್ನು ಕೊಟ್ಟು ಇಡಿ ಬ್ರಿಟಿಷ ಸಾಮ್ರಾಜ್ಯದೊಡನೆ ಹಿಂದುಸ್ಥಾನವನ್ನು ಏಕಜೀವ ಮಾಡುವುದೆ ನಮ್ಮ ಉದ್ದೇಶವಾಗಿದೆ. ಈ ಉದ್ದೇಶವನ್ನು ಸಾಧಿಸುವುದಕ್ಕಾಗಿ ಆದಷ್ಟು ಬೇಗನೆ ಯೋಗ್ಯವಾದ ಉಪಕ್ರಮಗಳನ್ನು ಕೈಕೊಳ್ಳಬೇಕೆಂದು ಅಭಿಪ್ರಾಯವಿದೆ. ಈ ಉಪಕ್ರಮಗಳನ್ನು ಕೈಕೊಳ್ಳುವ ರೀತಿಯನ್ನು ಕುರಿತು ಇಂಗ್ಲಂಡಿನ ಮತ್ತು ಹಿಂದುಸ್ಥಾನದೊಳಗಿನ ಅಧಿಕಾರಿಗಳಲ್ಲಿ ಸ್ವತಂತ್ರಮತಭೇದಗಳಿವೆ. ಆದುದರಿಂದ ಬಾದಶಹರ ಅಭಿಪ್ರಾಯದಂತೆ, ಮಿ. ಮೊಂಟೆಗ್ಯೂಗಳು ಹೇಳುತ್ತಾರೆ, ನಾನು ಹಿಂದುಸ್ಥಾನದ ವೈಸರಾಯರ ಭೇಟಿಯನ್ನು ಪಡೆದು ಹಾಗು ಅಲ್ಲಿಯ ಸ್ಥಾನಿಕ ಸರಕಾರಗಳ ಅಭಿಪ್ರಾಯಗಳನ್ನೂ ಮತ್ತು ವೈಸರಾಯರ ಕಡೆಗೆ ಬರುವ ಪ್ರತಿನಿಧಿಗಳ ಸೂಚನೆಗಳನ್ನೂ (!) ಸ್ವೀಕರಿಸುವವನಿದ್ದೇನೆ. ಮಿ. ಮೊಂಟೆಗ್ಯೂಗಳಿಗೆ ಈ ರೀತಿಯಿಂದ ಕಾರ್ಯವನ್ನು ಉಪಕ್ರಮಿಸಿದ್ದಲ್ಲಿ ಅದು ಯಶಸ್ವಿಯಾದೀತೆಂಬ ಭರವಸೆ ಇದೆ. ಭಾರತಮಂತ್ರಿಗಳ ಅಭಿಪ್ರಾಯದ ಪ್ರಕಾರ ಹಿಂದಿ ಜನತೆಯ ಪ್ರಗತಿಯು ಮತ್ತು ಕಲ್ಯಾಣವು ಹಿಂದುಸ್ಥಾನದ ಮತ್ತು ವಿಲಾಯತಿಯೊಳಗಿನ ಅಧಿಕಾರಿಗಳ ಮೇಲೆ ಅವಲಂಬಿಸಿರುವುದರಿಂದ ಆ ಅಧಿಕಾರಿಗಳು ಕಾಲಪರಿಸ್ಥಿತಿಯನ್ನು ಅರಿತವರಾಗಿರಬೇಕು. ಅಲ್ಲದೆ, ಜವಾಬದಾರಿಯ ಕೆಲಸಗಳನ್ನು ಮಾಡುತ್ತಿರುವ ಈ ಅಧಿಕಾರಿಗಳು ಪರಸ್ಪರ ಸಹಕಾರ್ಯದಿಂದ ಅನುವರ್ತಿಸತಕ್ಕದು. ಮಿ. ಮೊಂಟೆಗ್ಯೂಗಳ ಈ ಪ್ರಕಟನವನ್ನು ಎರಡು ವಿಧವಾಗಿ ವಿಂಗಡಿಸಬಹುದು. ಒಂದು ಅಧಿಕಾರಿಗಳು ಯಾವ ರೀತಿಯಿಂದ ನಡಕೊಳ್ಳತಕ್ಕದು ಎಂಬುದನ್ನು ಸೂಚಿಸುತ್ತದೆ. ಅಧಿಕಾರಿಗಳ ಜವಾಬದಾರಿಯು ಯಾವ ಯಾವದು ಎಂಬುದನ್ನು ತಿಳಿಸಿಕೊಟ್ಟದ್ದರಿಂದ ಅಧಿಕಾರಿಗಳು ಮಿ. ಮೊಂಟೆಗ್ಯೂಗಳ ಆಭಾರಿಗಳಾದಿರುವರೆಂಬುದಕ್ಕೆ ಸಂದೇಹವಿಲ್ಲ. ಅದರ ಇನ್ನೊಂದು ಭಾಗದಲ್ಲಿ ಮಿ. ಮೊಂಟೆಗ್ಯೂಗಳು ಸುಧಾರಣೆಯನ್ನು ಪ್ರಸ್ತಾಪಿಸುತ್ತಾರೆ. ಅದರಲ್ಲಿ ಯಾವ ಯಾವ ನಮೂನೆಯ ಸುಧಾರಣೆಯ ರೊಟ್ಟಿಚೂರುಗಳು ಕೊಡಲಿಕ್ಕಿವೆ ಇದನ್ನು ಅವರು ಹೇಳುವುದೆ ಇಲ್ಲ. ಅವರೆ ಇಲ್ಲಿ ಬಂದು ವೈಸರಾಯ ಪ್ರಭೃತಿ ಅಧಿಕಾರಿಗಳೊಡನೆ ಮಂತ್ರಿಸುವರಂತೆ! ಈ ಅಧಿಕಾರಿಗಳು ಸದ್ಯ ಹಿಂದುಸ್ಥಾನದಲ್ಲಿ [illegible] ತ್ತಿರುವ ಮಂತ್ರಿಗಳನ್ನು [illegible] ಯತ್ನಯೋಗಗಳನ್ನು [illegible]

ಉಂಟಾದೀತೊ ತಿಳಿಯದು. ಇವರು ಹಿಂದುಸ್ಥಾನಕ್ಕೆ ಬರುವ ಸುಯೋಗವನ್ನು ಹೊಂದುವುದಾದರೆ ಈ ದೇಶದಲ್ಲಿ ಇರುವ ಅನೇಕ ಸನದಶೀರ ಸಂಸ್ಥೆಗಳ ಪ್ರತಿನಿಧಿಗಳನ್ನು ಕರೆಯಿಸಿ ಇಲ್ಲಿಯ ಲೋಕಮತದ ಸ್ವರೂಪವನ್ನು ತಿಳಿದು ಅದಕ್ಕೆ ಅನುಗುಣವಾದ ಸುಧಾರಣೆಗಳನ್ನೆ ಕೊಟ್ಟರೆ ಇವರು ಇಲ್ಲಿ ಬರುವ ಪ್ರಯಾಸವನ್ನು ಪಟ್ಟಿದ್ದಕ್ಕೆ ಸಾರ್ಥಕವಾದೀತು. ಹೊರತು, ಇವರು ಸ್ವಯಂಪ್ರತಿಷ್ಠಿತ ಅಧಿಕಾರಿಗಳೊಡನೆಯೆ ಕಿವಿಗುಟ್ಟು ಮಾಡಿಹೋದರೆ ಇವರು ಸಂಕಲ್ಪಿಸಿದ ಉದ್ದೇಶವು ಸಾರ್ಥಕವಾಗಲಿಕ್ಕಿಲ್ಲ. ಪ್ರತ್ಯುತ ಇದರಿಂದ ಒಂದು ಮಾತ್ರ ಭಯವು ತೋರಿಬರುತ್ತದೇನೆಂದರೆ, ಈ ಅಧಿಕಾರಿಗಳ ನೀರುಳ್ಳಿಯ ವಾಸನೆಯು ಮೊಂಟೆಗ್ಯೂಗಳ ಗುಲಾಬಿಹೂವಿಗೆ ಬರುತ್ತದೊ ಏನೊ! ಇಲ್ಲವೆ ಗಾಯತ್ರಿಯು ವರಾಹಾಚಾರ್ಯರ ಉಪದೇಶದಿಂದ ಮಲಿನವಾಯಿತಂತೆ. ಹಾಗೆ ಮಿ. ಮೊಟೆಗ್ಯೂಗಳ ಉದಾರವಾದಿತ್ವವು ಈ ಅಧಿಕಾರಿಗಳ ಸಂಘಟನದಿಂದ ಮತ್ತು ಮಂತ್ರಾಲೋಚನದಿಂದ ಸಂಪುಷ್ಟದಲ್ಲಿ ಬಾರದೆ ಇದ್ದರೆನೆ ನಾವು ತುಂಬಾ ಸಂತೋಷಪಡುವೆವು.

ಸ್ಥಳಿಕ — ಮಂಗಳೂರು.

ಜಿಲ್ಲಾ ಕಲೆಕ್ಟರರುಗಳ ಕೊನ್ಫರೆನ್ಸ್ ಸಭೆಗೆ ಹೋಗಿರುವ ಇಲ್ಲಿಯ ಕಲೆಕ್ಟರ ದೊರೆಗಳವರು ಈ ತಿಂಗಳ ತಾ. ೨೮ಕ್ಕೆ ಇಲ್ಲಿಗೆ ಬರುವರಾಗಿ ತಿಳಿಯುತ್ತೇವೆ.

ಇಲ್ಲಿ ಸ್ಥಾಪಿತವಾಗಿರುವ "ಮಲೆಯಾಳಿಕ್ಲಬ್" ಎಂಬ ಇಲ್ಲಿರುವ ಮಲಿಬಾರಿನವರ ಕ್ಲಬ್ ಇವರ ಎರಡನೇ ವರುಷದ ವಾರ್ಷಿಕಸಭೆಯೂ ಇದರ ಜನ್ಮದಿನಾಚರಣೆಯೂ ಇಲ್ಲಿಯ ಮಾಜಿ ಗಣಪತಿ ಸೆಕೆಂಡರಿ ಶಾಲೆಯ ಕಟ್ಟೋಣದಲ್ಲಿ ಇದೇ ತಿಂಗಳ ತಾ. ೩೦ನೇ ಗುರುವಾರ ಸಾಯಂಕಾಲ ೬ ಘಂಟೆಗೆ ನಡಿಯುವದು. ಪ್ರಿಜಿಡೆಂಟ ಡಿಪ್ಯುಟಿ ಕಲೆಕ್ಟರರಾಗಿರುವ ಮ. ರಾ. ರಾ. ರಾವ್‌ಸಾಹೇಬ ಪಿ. ಕೃಷ್ಣನ್ ನಂಬಿಯಾರ್ ಇವರು ಈ ಸಂದರ್ಭದಲ್ಲಿ ಸಭಾಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು.

ಕಳೆದ ಮಂಗಳವಾರ ವಿನಾಯಕಚತುರ್ಥಿ ದಿವಸ ಇಲ್ಲಿ ನಾಡವರ ಶ್ರೀರಾಮಕೃಷ್ಣ ವಿದ್ಯಾರ್ಥಿಭವನದಲ್ಲಿ ಸೇರಿದ ವಿದ್ಯಾರ್ಥಿಗಳ ಸಭೆಯಲ್ಲಿ ಪೂನೆಯ ಸರ್ವೆಂಟ್ಸ್ ಒಫ್ ಇಂಡಿಯಾ ಎಂಬ ಭಾರತಸೇವಾ ಸಂಘಕ್ಕೆ ಸೇರಿರುವ ಮ. ರಾ. ರಾ. ಎಮ್. ಎಸ್. ಮಾಧವರಾಯರು (Rural Life in India) ಹಿಂದುಸ್ಥಾನದಲ್ಲಿಯ ಗ್ರಾಮಗಳಲ್ಲಿಯ ಜೀವಿತವು ಎಂಬುವ ವಿಷಯ ಒಂದು ಉಪನ್ಯಾಸವನ್ನು ಕೊಟ್ಟರು. ಇಲ್ಲಿಯ ವಕೀಲರಾದ ಮ. ರಾ. ರಾ. ಎಮ್ ಮಾಧವರಾವ್ ಬಿ. ಎ. ಬಿ. ಎಲ್., ಇವರು ಆ ದಿನ ಕೂಡಿದ ಸಭೆಯ ಅಧ್ಯಕ್ಷರಾಗಿದ್ದರು. ಕೈಗಾರಿಕೆಗಳನ್ನು ಸ್ಥಾಪಿಸುವದರಲ್ಲಿಯೂ ಇತರ ನಮ್ಮ ಜೀವನಮಾರ್ಗಗಳಲ್ಲಿಯೂ ನಾವು ಪಾಶ್ಚಾತ್ಯರನ್ನು ತಾರತಮ್ಯವಿಲ್ಲದೆ ಅನುಸರಿಸುವದರಿಂದ ಹಳ್ಳಿಗಳಲ್ಲಿರುವ ಜನರು ತಮ್ಮ ಜೀವನದ ಬಗ್ಯೆ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಸೇರುತ್ತಿದ್ದಾರೆ. ಇದರಿಂದ ಗ್ರಾಮಗಳು ಬರಿದಾಗಿ ಬಂದು ಗ್ರಾಮವಾಸದಿಂದ ದೊರಕುವ ಸುಖಕರ ಮತ್ತು ಆರೋಗ್ಯಕರ ಜೀವಿತದ ಪ್ರಯೋಜನವು ಜನರಿಗೆ ಇಲ್ಲದೆ ಹೋಗುವದು. ಮತ್ತು ಪಟ್ಟಣವಾಸದ ಭೀಕರವಾದ ಗಂಡಾಂತರಗಳಿಗೆ ಜನರು ತುತ್ತಾಗುವರು. ಗ್ರಾಮವಾಸಿಗಳು ಗ್ರಾಮಗಳಲ್ಲಿರುವಂತೆ ಮತ್ತು ಅವರ ಜೀವನವು ಅಲ್ಲಿಯೇ ಸಾಗುವಂತೆ ಮನೆಗಳಲ್ಲಿಯೇ ಇದ್ದುಕೊಂಡು ನಡಿಸಲುಬಹುದಾದ ಚಿಕ್ಕ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಡುವದು ಅಗತ್ಯ ಎಂಬಿತ್ಯಾದಿ ಅಭಿಪ್ರಾಯಗಳನ್ನು ರಾ. ಎಮ್. ಎಸ್. ಮಾಧವರಾಯರು ವಿದ್ಯಾರ್ಥಿಗಳ ಸಭೆಗೆ ಹೇಳಿರುತ್ತಾರೆ.

ಇಲ್ಲಿಗೆ ಬಂದಿರುವ ಪ್ರೊಫೆಸ್ಸರ್ ಕೃಷ್ಣಮೂರ್ತಿ ಮತ್ತು ಸೈಂಟ್ ಆಲ್ಲೊಸಿಯಸ್ ಕೋಲೇಜಿನ ಜಿಮ್ನಾಸ್ಟಿಕ್ಸ್ ಇನ್ಸ್‌ಟ್ರಕ್ಟರ್ ರಾ. ಕೆ. ಗೋಪಾಲಕೃಷ್ಣರಾಯರಿಗೆ ಕಳೆದ ಸಂಚಿಕೆಯಲ್ಲಿ ಸೂಚಿಸಿರುವಂತೆ ಪಂದ್ಯಾಟವು ನಡೆಯಲಿಲ್ಲ. ಈ ಪಂದ್ಯಾಟಕ್ಕೆ ಗೋಪಾಲಕೃಷ್ಣರಾಯರು ಏಕೆ ಬರಲಿಲ್ಲವೆಂಬುದಕ್ಕೆ ಕಾರಣಗಳನ್ನು ಇವರು ಪ್ರಕಟಿಸಿರುವರು. ಕೃಷ್ಣಮೂರ್ತಿಗಳು ಆ ದಿನ ನಿಶ್ಚಯಿಸಿದ ಆಟವನ್ನು ಸಹ ಆಡಲು ಆಗದಂತೆ ಮಾಜಿ ಗಣಪತಿ ಸೆಕೆಂಡರಿ ಶಾಲೆಯ ಕಟ್ಟಡವು ಇವರಿಗೆ ಸಿಕ್ಕದ ಹಾಗೆ ನಡದ ಪ್ರಯತ್ನಗಳನ್ನು ತಿಳಕೊಂಡರೆ ಗೋಪಾಲಕೃಷ್ಣರಾಯರು ಪ್ರಕಟಿಸಿರುವ ಕಾರಣಗಳಲ್ಲಿ ಸ್ವಲ್ಪ ಅನುಮಾನವು ಉಂಟಾಗುವದು. ಪಂದ್ಯಾಟಕ್ಕೆ ಕೃಷ್ಣಮೂರ್ತಿಯವರು ಇಟ್ಟಿದ್ದ ಕ್ಲಿಷ್ಟವಾದ ಸಂಕೋಲೆಯನ್ನು ಕೃಷ್ಣಮೂರ್ತಿಯವರಿಂದ ಇತ್ತಲಾಗೆ ತರಬೇತಿಹೊಂದಿದ ಸಣ್ಣ ವಿದ್ಯಾರ್ಥಿಯೊಬ್ಬನು ಅಂದಿನ ಆಟದಲ್ಲಿ ಮುರಿದುಬಿಟ್ಟಿರುವನು ಎಂಬಿತ್ಯಾದಿ ವಿವರವನ್ನು ಒಬ್ಬ ಬಾತ್ಮೀದಾರರು ನಮಗೆ ಬರೆದುಕಳುಹಿಸಿರುವರು.

ನಂಬ್ರ ೨೪೨ನೇ ಬೀಟ್‌ಕೊನ್ಸಟೇಬಲ್ ಮೇಲೆ ಒಂದು ದೂರು ಪ್ರಕಟಣೆ ಬಗ್ಯೆ ನಮ್ಮಲ್ಲಿಗೆ ಬಂದಿರುವದು. ವೆಬ್‌ಸ್ಟರ್ ಮಾರ್ಕೆಟ ಬಳಿಯಿರುವ ಎಲ್ಲಪನ ಸೂಳೆ ಶೇಸುಹೆಂಗಸು ಈ ದೂರನ್ನು ಬರಹ ಮೂಲಕ ಕೊಟ್ಟಿರುವಳು. ಹಗಲುಹೊತ್ತಿನಲ್ಲಿ ಈ ಪೋಲೀಸು ಜವಾನನೂ ಇನ್ನು ಇಬ್ಬರನ್ನು ಕರಕೊಂಡು ತನ್ನನ್ನು ನಾನಾ ಪ್ರಕಾರವಾಗಿ ಹೊಡೆದು ಪೀಡಿಸುತ್ತಿರುವನೆಂತ ಈ ಹೆಂಗಸಿನ ಹೇಳಿಕೆಯಾಗಿರುವದು. ಹೀಗೆ ಹೊಡೆದದ್ದನ್ನು ಪ್ರತ್ಯಕ್ಷ ನೋಡಿದವರ ಸಹಿಗಳು ಈ ಹೆಂಗಸು ಬರಕೊಂಡ ಪತ್ರದಲ್ಲಿರುವವು. ಫಿರ್ಯಾದು ಇತ್ಯಾದಿಗಳನ್ನು ಕೊಡಲಿಕ್ಕೆ ತಾನು ಕಾನೂನು ತಿಳಿದವಳು ಅಲ್ಲ, ತನಗೆ ಯಾರೂ ಸಹಾಯ ಮಾಡುವರೂ ಇಲ್ಲವೆಂಬುದಾಗಿ ಬರೆದಿರುವದು. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯ ತನಖಿಯನ್ನು ನಡಿಸುವದು ಅಗತ್ಯವಾಗಿರುವದು.

ಮಂಗಳೂರು ಗೌಡಸಾರಸ್ವತ [illegible] ವಿದ್ಯಾರ್ಥಿಗಳ ಸಹಾಯಕ ಫಂಡಿನವರು ಕಳೆದ ವಿನಾಯಕಚತುರ್ಥಿಹಬ್ಬದ ದಿನಗಳಲ್ಲಿ [illegible] ಗಳನ್ನು ಕೂಡಿಸಲು ಪ್ರಾರಂಭಿಸಿರುವರು [illegible] ರೂಪಾಯಿಗಳ ಮೊಬಲಗು [illegible]

[illegible]

[illegible]. ಈ ವಿಷಯದಲ್ಲಿ ಯುವಕರು ತಮ್ಮ ದೇಶವಾತ್ಸಲ್ಯವನ್ನು [illegible] ಈ ಫೋರ್ಸಿಗೆ ದಾಖಲಾಗುವ ಪಾಯಿದೆಯು ಇದೇ [illegible] ಗುಜಾರಾಗುವದರಿಂದ ಆದಷ್ಟು ಬೇಗನೆ ತಮ್ಮ ಹೆಸರುಗಳನ್ನು [illegible] ಅಯ್ಯರು ಸೂಚಿಸುತ್ತಾರೆ.

ಟ್ರೈನಿಂಗ್ ಅಥವಾ ಶಿಕ್ಷಣದ ಕಾಲದಲ್ಲಿ ಪ್ರತಿ ಒಬ್ಬ ಉಮೇದ್ವಾರನಿಗೆ ತಿಂಗಳಿಗೆ ೧೧ ರೂಪಾಯಿ ಸಂಬಳ ಸಿಕ್ಕುವದು. ಊಟದ ಖರ್ಚಿಗಾಗಿ ಸುಮಾರು ೭ ರೂಪಾಯಿ ತಿಂಗಳಿಗೆ ಸಿಕ್ಕುವದು. ಇದಕ್ಕೆ ಸಂಬಳದಿಂದ ೭ ಯಾ ೮ ರೂಪಾಯಿ ಕೂಡಿಸಿ ಒಬ್ಬೊಬ್ಬರ ಕೋಲೇಜ ಹೋಸ್ಟೆಲುಗಳಲ್ಲಿ ಸಿಕ್ಕುವ ನಮೂನೆಯ ಆಹಾರವನ್ನು ಕೊಡಿಸಲಿಕ್ಕೆ ಏರ್ಪಾಡು ಮಾಡಬಹುದು. ಆಹಾರವಿಷಯದಲ್ಲಿ ಜಾತಿಪದ್ಧತಿಗಳಿಗೆ ಬಾಧಕ ಬಾರದಹಾಗೆ ಏರ್ಪಾಡು ಇರುವದು. ಮದ್ರಾಸು ಸಂಸ್ಥಾನದಲ್ಲಿ ಹೊಂದಿದ ಜನರಿಗೆ ತಿರುಚನಾಪಳ್ಳಿಯಲ್ಲಿ ತರಬೇತಿ ಕೊಡೋಣಾಗುವದು. ಈ ಕೆಲಸವನ್ನು ಸುಮಾರು ಒಕ್ಟೋಬರ್ ಅಥವಾ ನವಂಬರ್ ತಿಂಗಳಲ್ಲಿ ಆರಂಭಿಸೋಣಾಗುವದು.

೧೯೧೮ನೇ ಮಾರ್ಚ ಏಪ್ರಿಲ್ ತಿಂಗಳಲ್ಲಿ ಯೂನಿವರ್ಸಿಟಿ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳು ಈ ಫೋರ್ಸಿಗೆ ದಾಖಲಾದ್ದಲ್ಲಿ ಅವರ ತರಬೇತಿಯನ್ನು ಬರುವ ಜನವರಿ ಅಖೈರ್ ಒಳಗೆನೆ ಮುಗಿಸಬೇಕಾಗಿ ನಿರ್ಣಯಿಸಿದೆ.

ಮದ್ರಾಸು ಸಂಸ್ಥಾನದಲ್ಲಿ ಇಂಡಿಯಾ ಡಿಫೆನ್ಸ್ ಫೋರ್ಸಿಗೆ ದಾಖಲುಮಾಡಿ ಕೊಳ್ಳುವದಕ್ಕೆ ಆಯಾಯ ಜಿಲ್ಲೆಯಲ್ಲಿ ಆಯಾ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೂ ಸಬ್ ಡಿವಿಜನ್ ಮೇಜಿಸ್ಟ್ರೇಟರಿಗೂ ಅಧಿಕಾರ ಕೊಟ್ಟಿರುವದರಿಂದ ಈ ಆಫೀಸರರು ಉಮೇದ್ವಾರರಾಗಿ ಬರುವವರನ್ನು ಆರೋಗ್ಯಪರೀಕ್ಷೆ ಮಾಡಿಸಿ ದಾಖಲುಮಾಡುವ ಏರ್ಪಾಡು ಮಾಡಬಹುದಾಗಿ ಹುಕುಂ ಬಂದಿದೆ.

ಮಿಸೆಸ್ ಬೆಸೆಂಟರವರು ಉದಕಮಂಡಲದಿಂದ ಕೊಯಂಬುತ್ತೂರಿಗೆ ಬಂದಿರುವರಾಗಿ ತಿಳಿದುಬರುತ್ತದೆ.

ನ್ಯೂ ಇಂಡಿಯಾ ಪತ್ರದವರು ಪುನಹಾ ರೂ. ೧೦,೦೦೦ದ [illegible] ಭದ್ರತೆಯನ್ನು ಸರಕಾರಕ್ಕೆ ಕೊಟ್ಟು ಪತ್ರಪ್ರಕಟನೆಯನ್ನು ಮುಂದರಿಸಿ [illegible]

ಮದ್ರಾಸಿನ ಮೈಲಾಪುರ ಎಂಬಲ್ಲಿ ವಕೀಲ ವಿ. ಸಿ. ಶೇಷಾಚಾರ್ಯರ ಪುತ್ರ ವಿ. ಸಿ. ಕೃಷ್ಣಸ್ವಾಮಿ ಎಂಬವರು ಮಿಸೆಸ್ ಬೆಸೆಂಟರವರ ಹೆಸರಲ್ಲಿ ಒಂದು ಸ್ವದೇಶಿವಸ್ತು ಭಂಡಸಾಲೆಯನ್ನು ಸ್ಥಾಪಿಸುವರು. ಈ ಸ್ಥಾಪನೆಯ [illegible] ಹಿಂದೂ ಪತ್ರದ ಸಂಪಾದಕರಾದ ರಾ। ಎಸ್. ಕಸ್ತೂರಿ ರಂಗಯ್ಯಂಗಾರರವರಿಂದ ಈ ತಿಂಗಳ ತಾ. ೨೩ನೇ ಗುರುವಾರ ಬೆಳಿಗ್ಗೆ ಘಂಟೆ ೯ಕ್ಕೆ ಮಾಡೋಣಾಯಿತು.

ದಕ್ಷಿಣ ಕನ್ನಡ.

ಫೋರ್ಟ ಸೆಂಟ್‌ಜೋರ್ಜ ಗಜೆಟಿನ ಉತಾರ.

ರಾವ್‌ಬಹದ್ದೂರ ನಯಂಪಳ್ಳಿ ಸುಬ್ರಾಯರಿಗೆ ಡಿಸ್ಟ್ರಿಕ್ಟ್‌ಬೋರ್ಡ ಪ್ರೆಸಿಡೆಂಟರಾಗಿ ಆದ ಚುನಾವಣೆಯು ಸರಕಾರದಿಂದ ಮಂಜೂರು ಮಾಡಲ್ಪಟ್ಟಿತು.

ಕುಂಬಳೆ:— ಪುತ್ತೂರು ಡಿವಿಜನಲ್ ಆಫೀಸರರವರು ಸಕೀಟಿನಲ್ಲಿ ತಾ. ೧೫—೧೭ರ ವರೆಗೆ ಇಲ್ಲಿ ಮೊಕ್ಕಾಂ ಮಾಡಿ ತಾ. ೧೭ರಲ್ಲು ಕಾಸರಗೋಡಿಗೆ ತೆರಳಿದರು.

ಕಳೆದ ಸಂಚಿಕೆಯಲ್ಲಿ ಬರಕೊಂಡಂತೆ ಇಲ್ಲಿ "ಔಟ್‌ಪೋಸ್ಟ ಸ್ಟೇಶನ್" ಬಗ್ಗೆ ಪೋಲಿಸ ಸಿಬಂಧಿಯು ಮೊಕ್ಕಾಂ ಆಗಿರುವದಾಗಿ ಕೇಳುತ್ತೇವೆ. ಆದರೆ ಇದರಿಗೆ ರಾಜ್ಯವಿಲ್ಲದೆ ಯಾ ಮೊದಲಿನಂತೆ ಪೋಲಿಸ್ ಸ್ಟೇಶನ್ ಇಲ್ಲವೆಂತ ತೋರುವದರಿಂದ ಇದನ್ನು ಅನುಗ್ರಹಿಸಿದ ಘನ ಕಲೆಕ್ಟರ್ ದೊರೆಗಳವರು ಸದ್ಯ ಹಂಗಾಮಿ ಕಟ್ಟೋಣದಲ್ಲಿ ಸ್ಟೇಶನ್ ನಡಿಸಿಕೊಟ್ಟು ಮೊದಲಿನ ಟೌನ್ ಸ್ಟೇಶನ್ನು ಅನ್ನು ಪುನಹಾ ಜಾಂಬ್ರಿಯಲ್ಲಿ ತರಿಸುವದು ಸಹ ಅಗತ್ಯವಾಗಿದೆ.

ಇದೇ ತಾ. ೧೬ರಲ್ಲು ಇಲ್ಲಿ ಹೋಮ್‌ರೂಲ್ ಮಿಟಿಂಗ. ಮ। ರಾ। ಎಸ್. ವಿ. ರಾಮರಾವ್ ಬಿ. ಎ. ವಕೀಲ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯು ಎಲ್ಲಾ ಮತಸ್ಥರಿಂದ ತುಂಬಿತ್ತು. ಮ। ರಾ। ವಕೀಲ್ ಎಚ್. ಶ್ರೀನಿವಾಸ್ ಕಾಮತ್‌ರವರು ಸ್ವರಾಜ್ಯ ವಿಷಯವಾಗಿಯೂ ಮ। ರಾ। ವಕೀಲ್ ಎಚ್. ವಿಟ್ಠಲಕಾಮತ್‌ರವರು ಸ್ವದೇಶಿ ವಿಷಯ ಸಹ ಚಲೋ ಭಾಷಣಗಳನ್ನು ಕೊಟ್ಟರು. ಪ್ರತಿಬಂಧದಲ್ಲಿರುವ ಮಿಸೆಸ್ ಎನಿಬಿಸೆಂಟ್, ಮೆಸರ್ಸ್ ಅರುಂಡೇಲ್, ವಾಡಿಯಾ ಇವರಿಗೆ ಸಹನುಭಾವದ ತಂತಿಯು ಕಳುಹಿಸುವದಾಗಿ ಸಭೆಯಲ್ಲಿ ಮಂಜೂರಾಯಿತು. ಸಭಾಂತ್ಯದಲ್ಲಿ ಅಧ್ಯಕ್ಷರು ಬ್ರಿಟಿಷ್ ರಾಜರಿಂದ ಪ್ರಜೆಗಳಾದ ನಾವು ಅನುಭವಿಸುವ ಉನ್ನತಿಯನ್ನು ವಿವರಿಸಿ ಈ ರಾಜ್ಯಭಾರವು ಸ್ಥಿರಸ್ಥಾಯಿಯಾಗಿ ಅವರ ಕೃಪಾಛತ್ರದ ನೆರಳಿನಲ್ಲಿ ನಮಗೆ ಸ್ವರಾಜ್ಯವು ಲಭಿಸುವಂತೆ ಶ್ರೀ ದೇವರು ಅನುಗ್ರಹಿಸಲೆಂತ ಅಪ್ಪಣೆಕೊಡಿಸಿದಮೇಲೆ ವಕೀಲ ಮಹಾಶಯರಿಗೂ ಅಧ್ಯಕ್ಷರಿಗೂ ಉಪಕಾರ ಸ್ಮರಣೆಯಿಂದ ಸಭೆಯು ಮುಕ್ತಾಯವಾಯಿತು.

ಪತ್ರವ್ಯವಹಾರ.

ಮಂಗಳೂರು ಮುನ್ಸಿಪಲ್ ಮಾರ್ಗಗಳು.

ಪತ್ರಾಧಿಪರೇ,

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಮಂಗಳೂರು ವಾರ್ತೆಯಲ್ಲಿ ಮಂಗಳೂರು ಮುನ್ಸಿಪಲ್ ಮಾರ್ಗಗಳ ವಿಷಯ ಸರಕಾರದವರು ಏನು ಅಭಿಪ್ರಾಯಪಟ್ಟಿರುವರೆಂಬುದು ಪ್ರಕಟವಾಗಿರುವದು. ಕಳೆದ ವರುಷದ ವೃತ್ತಾಂತದಲ್ಲಿ [illegible] ಕಲೆಕ್ಟರ ದೊರೆಗಳೇ ಮೊದಲಾದವರ ಅಭಿಪ್ರಾಯವು ಇದೇ ರೀತಿಯಿತ್ತು. ಮೊದಲು ಹಿಸೋ ೩೦ ಯಾ ೩೦ ರೂಪಾಯಿಗಳ ಸಂಬಳದ ಮೇಲೆ [illegible] ಮುಖಾಂತರ ಮುನ್ಸಿಪಾಲಿಟಿಯವರು ಮಾರ್ಗ ದುರುಸ್ತಿ [illegible] ನಡಿಸುತ್ತಿದ್ದರು. ಇತ್ತಲಾಗಿ ಕೆಲವು ವರುಷಗಳಿಂದ ಬಹಳ [illegible] ಸುಪರ್‌ವೈಜರರನ್ನು ಈ ಕೆಲಸದ ಬಗ್ಗೆ ನೇಮಿಸಿರು [illegible] ಮಾರ್ಗಗಳ ಸ್ಥಿತಿ ಹೀಗೇಕೆ? [illegible] ಎಂದೂ ಅಲ್ಲ. [illegible] ಹೇಳುವದು ಇದೇ. ಸರಕಾರದವರು [illegible] ಮುನ್ಸಿಪಲ್ ಮಾರ್ಗಗಳ ದುರುಸ್ತಿ [illegible] ಘಟ್ಟದ ಮೇಲಿನ [illegible] ಮುನ್ಸಿಪಲ್ ಗೇಟುಗಳು

ಘಾಟಿಯಲ್ಲಿ ಇರುವಂಥಾ ಡಿಸ್ಟ್ರಿಕ್ಟ್ ಬೋರ್ಡ ರಸ್ತೆಗಳನ್ನು ನೋಡಿ, ನಮ್ಮ ಪಟ್ಟಣದ ರಸ್ತೆಗಳನ್ನು ನೋಡಿ. ವ್ಯತ್ಯಾಸವೇನು? ಡಿಸ್ಟ್ರಿಕ್ಟ್ ಬೋರ್ಡ ರಸ್ತೆಗಳಲ್ಲಿ ೧೦ ವರುಷಗಳ ಕೆಲಸಮಾಡಿದ ಎತ್ತಿಗೆ ಅಥವಾ ಕುದುರೆಗೆ ೫ ವರುಷಗಳ ಕಾಲ ಕೆಲಸ ಮಾಡಲಿಕ್ಕೆ ಇಲ್ಲಿ ಆಗುವದಿಲ್ಲ. ಸಾಮಾನ್ಯವಾಗಿ ಪಟ್ಟಣದಲ್ಲಿರುವಷ್ಟು ಗಾಡಿಗಳ ವ್ಯಾಪಾರವು ಮುನ್ಸಿಪಲ್ ಗೇಟುಗಳಿಗೆ ಹೊರಗಿರುವ ಡಿಸ್ಟ್ರಿಕ್ಟ್ ಬೋರ್ಡರಸ್ತೆಗಳಲ್ಲಿ ಇಲ್ಲವೇ? ಆದರೂ ಡಿಸ್ಟ್ರಿಕ್ಟ್ ಬೋರ್ಡ ರಸ್ತೆಗಳಷ್ಟು ಮುನ್ಸಿಪಲ್ ರಸ್ತೆಗಳು ಒಳ್ಳೇದಾಗದೆ ಇರಲು ಕಾರಣವೇನು? ಮುನ್ಸಿಪಲ್ ಮಾರ್ಗಗಳ ದುರುಸ್ತಿ ಕ್ರಮವು ಹ್ಯಾಗೆ? ಸುಮಾರು ಎರಡು ಮೂರು ವರುಷಗಳಿಂದೀಚೆಗೆ ಅಂದರೆ ಈಗಿನ ಸುಪರ್‌ವೈಜರರ ಕಾಲದಲ್ಲಿಯೇ ಮುನ್ಸಿಪಲ್ ಮಾರ್ಗಗಳ ದುರುಸ್ತಿಯು ಒಂದು ನವೀನ ರೀತಿಯು ಪ್ರಾರಂಭವಾಗಿರುತ್ತದೆ. ಚರಂಡಿಗಳಲ್ಲಿ ಬಹಳ ಕಾಲದಿಂದ ಕೊಳೆತು ನಾರುವಂಥಾ ಹೊಗೆಮಣ್ಣನ್ನು ತೆಗೆದು ಮಾರ್ಗಕ್ಕೆ ಹಾಕಿಸುವದು. ಈಗಲೂ ಇದು ನಡಿಯುತ್ತಲಿದೆ. ಚರಂಡಿಗಳಲ್ಲಿ ಮಳೆನೀರು ಹೋಗಲಿಕ್ಕೆ ಇದರಿಂದ ಅನುಕೂಲವಾಗುವದು ಇದೊಂದು ನಫೆ ಮತ್ತು ಬಹಳ ಸವಿಸ್ತರದಲ್ಲಿಯೆ ಮಾರ್ಗಕ್ಕೆ ಹಾಕಲು ಮಣ್ಣು ದೊರಕುವದು. ಅಂದರೆ ಒಂದು ಕಾರ್ಯವಿಧಾನದಿಂದ ಎರಡು ನಫೆಗಳು ಅಥವಾ ಒಂದು ಗುಂಡಿನ ಏಟಿಗೆ ಎರಡು ಪಕ್ಷಿಗಳು ಬೀಳುವಂಥಾದ್ದು ಬಹಳ ಲಾಭಕರವೆಂತ ಗ್ರಹಿಸಿಕೊಂಡು ಈ ಅಗ್ಗವಾದ ದುರುಸ್ತಿ ರೀತಿಯನ್ನು ಶೋಧಿಸಿಕೊಂಡು ಹಿಡಿದದ್ದಾಗಿರಬಹುದು. ಆದರೆ ಈ ನಫೆಯನ್ನು ಕಾಗದದಲ್ಲಿ ಬರೆದು ಮಾತ್ರ ತೋರಿಸಲಿಕ್ಕಾಗುವದು, ಇಲ್ಲವೆ ಹೀಗೆ ನಫೆಯಾಗಿ ತೋರುವ ಗಂಟು ಕನ್ನಡಿಯಲ್ಲಿ ತೋರುವಂಥಾದ್ದೇ ಹೊರತು ವಸ್ತುವೇನೂ ಅಲ್ಲ. ಮಳೆಗಾಲದಲ್ಲಿ ಮಾರ್ಗ ದುರುಸ್ತಿ. ಚರಂಡಿಯಲ್ಲಿ ಕೊಳೆಸಹಿತ ಇರುವ ಮಣ್ಣನ್ನು ಮಾರ್ಗಕ್ಕೆ ಹಾಕಿದ ಕೂಡಲೆ ಕೊಳೆಯು ಮಳೆನೀರಿನಲ್ಲಿ ಮಿಶ್ರವಾಗಿ ಎಲ್ಲಾ ಕಡೆಗಳಲ್ಲಿಯೂ ಸರಿಯಾಗಿ ಮೇಲೆಬಿದ್ದು ಹರಿಯುವದು. ಅತ್ತಿತ್ತ ಹಾದುಹೋಗುವವರ ಕಾಲು ತುಂಬಾ ಕೊಳೆ ಇದೊಂದು. ಇನ್ನು ಹೊಗೆಮಣ್ಣು ತುಂಬಿದ ಮಾರ್ಗಗಳ ಮೇಲೆ ಗಾಡಿಗಳು ಹಾದುಹೋಗುತ್ತಿರುವದರಿಂದಲೂ ಮಳೆಯು ಜೋರಿನಿಂದ ಬರುವದರಿಂದಲೂ ಕೊಳೆ ಇತ್ಯಾದಿಯುಳ್ಳ ಮಾರ್ಗದಲ್ಲಿದ್ದ ಶುದ್ಧವಾದ ಹೊಗೆಮಣ್ಣು ತಿರುಗಿ ಚರಂಡಿಗಳನ್ನೇ ಸೇರುವದು — ಇದು ಇನ್ನೊಂದು. ಕೆಲವು ಸಂದರ್ಭಗಳಲ್ಲಿ ಹೀಗೆ ಮಣ್ಣು ತುಂಬಿಸಿದ್ದರಿಂದ ಮಾರ್ಗಗಳು ಗಟ್ಟಿಯಾಗಲು ಬಹಳ ಸಮಯ ಬೇಕಾಗ ತ್ವರಿತ ಇದರ ಮೇಲೆ ಬರೆ ಮೈಗೆ ಹಾಕುವದೂ ಉಂಟು. — ಇದು ಮತ್ತೊಂದು. ನಂತರ ಮಣ್ಣು ಹಾಕಿದರೂ ಗಟ್ಟಿಯಾಗದ ಇದ್ದದ್ದನ್ನು ನೋಡಿ ಅಲ್ಲಲ್ಲಿ ಸ್ವಲ್ಪ ಮೆಟಲ್ ಅಂದರೆ ಜಲ್ಲಿ ಹಾಕಿಸಿ ಜಡಿಯುವದೂ ಉಂಟು — ಇದು ತಿರಗೊಂದು. — ಇದಲ್ಲ ಒಂದೊಂದೇ ಕೂಡಿಕೊಂಡಿರುವ ಮಾರ್ಗದುರುಸ್ತಿಯು ಅಗ್ಗವಾದ ವಿಧಾನ! ಜಲ್ಲಿಹಾಕುವ ಖರ್ಚ ವಿಪರೀತವೆಂತ ಇದು ಕೈಕೊಳ್ಳುವದಂತೆ. ಜಲ್ಲಿಹಾಕುವ ಬರೆ ಒಂದೇ ವಿಧಾನವನ್ನೂ ಈ ಹಲವು ಒಂದುಗಳು ಕೂಡಿರುವ ಅಗ್ಗವಾದ ವಿಧಾನವನ್ನೂ ಸರಿಹೋಲಿಸಿದರೆ ಯಾವ ವಿಧಾನವು ಅಗ್ಗವಾಗಿ ಕಂಡು ಬರುವದೋ? ಹ್ಯಾಗೂ ಕಲೆಕ್ಟರ ದೊರೆಗಳವರ ಬಂಗ್ಲೆಯಿಂದ ಕಲೆಕ್ಟರರ ಆಫೀಸಿನ ವರೆಗೂ ಇರುವ ರಸ್ತೆಗೆ ಮತ್ತು ಇನ್ನು ಒಂದೆರಡು ರಸ್ತೆಗಳಿಗೋ ಏನೋ ಈ ಅಗ್ಗವಾದ ದುರುಸ್ತಿವಿಧಾನದಿಂದ ವಿನಾಯಿತಿ ಇರುವದು. ಹ್ಯಾಗೂ ಈ ಅಗ್ಗ ವಿಧಾನವು ಒಂದುವೇಳೆ ಅಗ್ಗವಲ್ಲವೆಂತ ಕಂಡುಬಂದರೂ ಗಾಡಿ ಕುದುರೆ ಎತ್ತುಗಳು ಈ ವಿಧಾನದ ಜಾಂಬ್ರಿಯನ್ನು ಕೇಳಲಾರದೆ ಬೊಬ್ಬಿಡುತ್ತಾದರೂ, ಇದರಲ್ಲಿ ಒಂದು ವಿಶೇಷ ಪ್ರಯೋಜನವುಂಟು. ಮುನ್ಸಿಪಾಲಿಟಿಯ ಈ ದುರುಸ್ತಿವಿಧಾನಗಳು ಹೆಚ್ಚದಂತೆ ಮುನ್ಸಿಪಾಲಿಟಿಗೂ ಕಂಟ್ರಾಕ್ಟರುಗಳಿಗೂ, ಇವರೊಳಗೆ ಸುಪರ್‌ವೈಜರರ ಮೂಲಕ ಇರುವ ವ್ಯಾಪಾರಗಳು, ಹೆಚ್ಚಾಗಿ ಮಳೆಗಾಲದಲ್ಲಿ ಸ್ವಲ್ಪ ಜನ ಬಡಬಗ್ಗರಿಗಾದರೂ ಕೆಲಸವು ನಿರಂತರವಾಗಿ ದೊರಕುವದು. ಇದೊಂದು ಅಗ್ಗವಾದ ದುರುಸ್ತಿವಿಧಾನದ ಪ್ರಯೋಜನವೆಂತ ಹೇಳಲೇಬೇಕು. ಸ್ವಾಮಿ ಪಟ್ಟಣವಾಸಿಗಳೇ, ಸರಕಾರದವರು ನಿಮ್ಮ ಮಾರ್ಗಗಳ ವಿಷಯ ಏನು ಅಪ್ಪಣೆಕೊಟ್ಟಿರುವರು? ಮಾರ್ಗಗಳ ಯಥಾರ್ಥಸ್ಥಿತಿಯೇನು? ಎಂಬದನ್ನು ನೋಡಿಕೊಂಡು ಸರಕಾರದ ಈ ಅಭಿಪ್ರಾಯವನ್ನು "ರೆಕೊರ್ಡ್" ಎಂತ ತಮ್ಮ ಸಭೆಯಲ್ಲಿ ಹೇಳಿಕೊಂಡು [illegible] ಸುಪರ್‌ವೈಜರರಿಂದ ಇದರ ಸಮಾಧಾನವನ್ನು ಕೇಳಿಕೊಂಡು ನಂತರ "ರೆಕೊರ್ಡ್" ಎಂತ ಹೇಳುವಿರೋ? ಅಥವಾ ವಿಚಾರಿಸಿ ಈ ಬಗ್ಗೆ ಅಗತ್ಯವಿರುವ ಕಾರ್ಯಗಳನ್ನು ಕೈಕೊಳ್ಳುವಿರೋ ಏನು? ಅಪ್ಪಣೆಕೊಡಿರಿ. ಇನ್ನು ಮುಂದಿನ ತಮ್ಮ ಸಭಾವೃತ್ತಾಂತಗಳಲ್ಲಿ ಇದಕ್ಕೆ ಅಪ್ಪಣೆ ಏನು ದೊರಕುವದೆಂಬದನ್ನು ನಿರೀಕ್ಷಿಸಿಕೊಂಡಿರುವೆನು.

ಪಟ್ಟಣನಿವಾಸಿಕ.

ತಾಲೂಕು ಬೋರ್ಡು ಮೆಂಬರರಾದ ಕೃಷ್ಣರಾಯರಿಗೆ.

(i)

ಸ್ವಾಮಿ,

ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿ ತಮ್ಮ ದಸ್ಕತು ಸಹಿತ ಪ್ರಕಟಿಸಲ್ಪಟ್ಟ ಪತ್ರವನ್ನು ನೋಡಿ ಬಹಳ ಸಂತೋಷಕ್ಕೆ ಕಾರಣವಾಗಿದೆ. ತಾಲೂಕು ಬೋರ್ಡ ಮೆಂಬರರು ಸುಮ್ಮನೆ ಶೃಂಗಾರಕ್ಕಾಗಿ ಸಭೆಗಳಿಗೆ ಹೋಗುವದಲ್ಲ. ಸಭೆಯಲ್ಲಿ ನಡೆದ ಸಂಗತಿಗಳನ್ನು ತಮ್ಮಂತೆ ಜನರಿಗೆ ತಿಳಿಸಲಿಕ್ಕೆ ಉದ್ಯುಕ್ತರಾಗಬೇಕು. ಮೆಂಬರರಲ್ಲಿ ಇಂಥಾ ಚಟುವಟಿಕೆಯೇ ಬೇಕಾಗಿರುತ್ತದೆ. ತಾಲೂಕು ಬೋರ್ಡುಗಳೆಂದರೇನು, ಅವುಗಳು ಮಾಡುವಂಥಾ ಕೆಲಸವೇನು, ಅವುಗಳಿಂದ ಪ್ರಯೋಜನವೇನು, ಅವುಗಳ ಅಧಿಕಾರವೇನು, ಇದನ್ನೆಲ್ಲಾ ತಾಲೂಕುಬೋರ್ಡ ಮೆಂಬರರೂ ಅವುಗಳ ಕಾನೂನುಗಳ ಮಾಹಿತಿದಾರರೂ ಆದ ತಾವು ಸ್ವದೇಶಾಭಿಮಾನಿಯಲ್ಲಿ ಲೇಖಗಳನ್ನು ಬರೆದು ಪ್ರಕಟಗೊಳಿಸುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು. 'ಸ್ವರಾಜ್ಯ'ದ ತತ್ವವನ್ನು ಏನೆಂತ ತಿಳಕೊಳ್ಳಬೇಕಾಗಿ ಜನರಲ್ಲಿ ಉತ್ಸಾಹವಿರುವಂಥಾ ಇಂಥಾ ಸಮಯದಲ್ಲಿ ತಮ್ಮ ಲೇಖಗಳಿಂದ ಬಹಳ ಪ್ರಯೋಜನವಾಗಬಹುದು. ಮತ್ತು ಯಾರಾದರೂ ಅಸೂಯೆಯಿಂದ ತಾಲೂಕು ಬೋರ್ಡುಗಳನ್ನು ಕುರಿತು ಏನಾದರೂ ಬರೆದುಬಿಟ್ಟರೆ ಅಂಥಾ ಬರವಣಿಗೆಗಳ ಹಣೆಬರಹವು ತನ್ನಷ್ಟಕ್ಕೆನೇ ಹೊರಬೀಳುವದು. ಸಭೆಗಳ ಕಾನೂನು ಏನು, ಸಭೆಗಳ ರೂಢಿ ಏನು, ರೂಢಿಗೂ ಕಾನೂನಿಗೂ ವಿರೋಧವಿದ್ದರೆ ರೂಢಿಯನ್ನು ಬಿಡಬೇಕೋ ಕಾನೂನನ್ನು ಬಿಡಬೇಕು, ಎಂಬ ವಿವರವನ್ನು ವಿವರವಾಗಿ ತಿಳಿಸಿರಿ. ಹ್ಯಾಗೂ ತಮ್ಮಂಥವರು ಇಂಥಾ ಪತ್ರಗಳನ್ನು ಬರೆಯಲಿಕ್ಕೆ ಮನಸ್ಸುಮಾಡಬೇಕು. ತಮ್ಮ ಮೂಲಕ ಈ ವಿಷಯದಲ್ಲಿ ಜನರಿಗೆ ಶಿಕ್ಷಣ ದೊರಕುವದು. ಸ್ವಾಮಿ ಉಪಕಾರಮಾಡಿರಿ. ಖಂಡಿತವಾಗಿ ವಾಚಕರು ಪ್ರಯೋಜನ ಪಡೆಯುವರು.

ಇಂತಿ ತಮ್ಮ ಹಿತೇಚ್ಛು ಸೇವಕ

ಗೋವಿಂದ.

(ii)

[illegible]

ಹಾಕಿ ಬರೆಯಲಿ ಎಂಬದಾಗಿ ಮ। ರಾ। ಮಂಗಳೂರು ತಾಲೂಕು ಬೋರ್ಡ ಮೆಂಬರ್ ಕೆ. ಕೃಷ್ಣರಾಯರು ನಿಮ್ಮ ಪತ್ರಿಕೆಯ ಗತಸಂಚಿಕೆಯಲ್ಲಿ ಕೇಳಿರುತ್ತಾರಷ್ಟೆ. ಹೆಸರು ಹಾಕದೆ ವರ್ತಮಾನ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವದು ವಾಡಿಕೆಯಾಗಿದೆ. ಲೇಖನದಲ್ಲಿರುವ ಸತ್ಯಾಸತ್ಯದ ವಿಚಾರಕ್ಕೆ ಲೇಖನದ ಕರ್ತರ ಹೆಸರು ಬಹಳಮಟ್ಟಿಗೆ ಸಹಾಯಮಾಡುವದಿಲ್ಲ. ಒಂದುವೇಳೆ ಹೆಸರನ್ನು ಹಾಕಿದರೂ ಲೇಖನದಲ್ಲಿದ್ದ ಸುಳ್ಳು ಸತ್ಯವಾಗಲಿಕ್ಕಿಲ್ಲ; ಸತ್ಯವು ಸುಳ್ಳಾಗಲಿಕ್ಕಿಲ್ಲ. ಇದೇ ತಿಂಗಳ ೧೫ನೇ ತಾರೀಕಿನ 'ಹಿಂದೂ' ಎಂಬ ಇಂಗ್ಲಿಷ ಪತ್ರಿಕೆಯಲ್ಲಿ ಡಾ। ಸುಬ್ರಮಣ್ಯ ಅಯ್ಯರರಿಗೆ ಸಂಬೋಧಿಸಿದ ಒಂದು ಪತ್ರದ ಅಡಿಯಲ್ಲಿ 'ಪಂಚಮ' ಎಂದು ಹೆಸರಿರುವದರಿಂದ ಅದನ್ನು ನಿಜವಾಗಿಯೂ ಪಂಚಮನೇ ಬರೆದನೆಂದು ಖಂಡಿತವಾಗಿ ಹೇಳಬಹುದೇ? ಅಷ್ಟೇ ಅಲ್ಲ. ಸರಿಯಾದ ಹೆಸರನ್ನು ಅಡಿಯಲ್ಲಿ ಕಾಣಿಸಿದರೂ ಆ ಹೆಸರಿನವರೆ ಪತ್ರವನ್ನು ಬರೆದಿದ್ದಾರೆ ಎಂದು ಹ್ಯಾಗೆ ಹೇಳಬಹುದು? ಬೇರೊಬ್ಬರು ತಾವೇ ಪತ್ರವನ್ನು ಬರೆದು ಆ ಪತ್ರಕ್ಕೆ 'ಗೋಮತಿ ಗಣೇಶನ ರುಜು'ವನ್ನು ಹಾಕಿಸಿ ಯಾಕೆ ಕಳುಹಿಸಬಾರದು? ಅಡಿಯಲ್ಲಿ ಹೆಸರಿದ್ದರೂ ಅದೇ ಹೆಸರುಳ್ಳ ಇನ್ನೊಬ್ಬರು ಆ ಪತ್ರವನ್ನು ಬರೆದಿರಬಹುದೆಂದು ಯಾಕೆ ಊಹಿಸಬಾರದು? ಮಂಗಳೂರು ತಾಲೂಕು ಬೋರ್ಡ ಮೆಂಬರರ ಪಟ್ಟಿಯನ್ನು ನೋಡಿದ್ದಲ್ಲಿ 'ಕೆ. ಕೃಷ್ಣರಾವ್' ಎಂಬ ಹೆಸರಿನ ಇಬ್ಬರು ಮೆಂಬರರು ಕಾಣುತ್ತಾರೆ. ಇದರಿಂದ ಅಡಿಯಲ್ಲಿ ಹೆಸರುಕೊಟ್ಟಮಾತ್ರಕ್ಕೆ ಪತ್ರಬರೆದವರು ಇಂಥವರೆಂದು ಸ್ಪಷ್ಟವಾಯಿತೇ? ಮಕ್ಕಳ ಜಾತಕವನ್ನು ಮಾಡಬೇಕಾಗಿ ಜೋಯಿಸನ ಹತ್ತರ ಹೋದರೆ ಜೋಯಿಸನು ಮಕ್ಕಳ ಹೆಸರೇನು, ಮಕ್ಕಳ ಅಪ್ಪನ ಹೆಸರೇನು, ಎಂದು ಕೇಳುವದು ನಿರರ್ಥಕವೂ ಹಾಸ್ಯಕರವೂ ಎಂಬ ವಿಚಾರವು ಸದ್ರಿ ಲೇಖನ ಬರೆದ ರಾ। ಕೃಷ್ಣರಾಯರ ಮನಸ್ಸಿಗೆ ಹತ್ತಲಿಲ್ಲವೋ?

ಲೇಖನದಲ್ಲಿ ಹೆಸರು ಕೊಡುವದಕ್ಕೆ ಕೆಲವು ಸಂದರ್ಭದಲ್ಲಿ ಸಾಧ್ಯವೇ ಇಲ್ಲ. ಅನೇಕ ತಕ್ರಾರುಗಳ ನಿಜಸ್ಥಿತಿಯು ವರದಿಯನ್ನು ಸರಕಾರದವರಿಗೆ ಕೊಟ್ಟು ಸಹಾಯ ಮಾಡಿದರೆ ಹೆಸರುಗಳು ಬಹಿರಂಗವಾಗುವದಿಲ್ಲ; ಬಹಿರಂಗವಾಗುವದು ನ್ಯಾಯ ಪರಿಪಾಲನೆಗೆ ತೊಡಕನ್ನು ಉಂಟುಮಾಡುತ್ತದೆ. ಲೇಖನದಲ್ಲಿ ಬರೆದ ಸಂಗತಿಗಳು ನಿಜವೋ ಸುಳ್ಳೋ ಎಂಬದಾಗಿ ಅವರವರು ವಿಚಾರಿಸಬೇಕಲ್ಲದೆ ಹುಮಾನಿಯಿಂದ ಲೇಖನದ ಕರ್ತರ ಹೆಸರು ಕೊಡದಿರುವದರಿಂದ ಒಂದು ಬಾಧಕವಿದೆ ಎಂದು ನಾನು ಒಪ್ಪುತ್ತೇನೆ. ಅದೇನೆಂದರೆ, ಲೇಖನವನ್ನು ಯಾರು ಬರೆದಿರಬಹುದು ಎಂಬ ಗುಮಾನಿಯೂ ಅನೇಕ [illegible]ರ ತಲೆಯ ಮೇಲೆ ಬೀಳುವದಕ್ಕೆ ಎಡೆಯಿರುತ್ತದೆ. ಕಳವು ಮಾಡಿದವನೇ ಪೋಲೀಸಿನವರಿಗೆ ಮೊದಲೇ ಸೂಚನೆಕೊಟ್ಟಲ್ಲಿ ಉಳಿದವರ ಮೇಲೆ ಸಂಶಯ ಬಿದ್ದು ಬಹಳ ತೊಂದರೆಗೆ ಕಾರಣವಾಗುತ್ತದೆಂಬ ದೃಷ್ಟಾಂತವನ್ನು ರಾ। ಕೃಷ್ಣರಾಯರಿಗೆ ವಿಸ್ತಾರವಾಗಿ ಹೇಳಬೇಕಾದ್ದಿಲ್ಲ.

ಬರ್ಮಾ:— ಮಂಡಲೆಯಲ್ಲಿ ಬಹುಮಾನಪಟ್ಟ ಲೆಫ್ಟಿನೆಂಟ್ ಗವರ್ನರರ ಅಧ್ಯಕ್ಷತೆಯಲ್ಲಿ ೨೧ನೇ ತಾರೀಕಿಗೆ ಜರಗಿದ ವ್ಯವಸಾಯ ಮತ್ತು ಸಹಕಾರ ಸಂಘಗಳ ಪಂಚಾಯತಿನಲ್ಲಿ ಅಧ್ಯಕ್ಷರು ಬರ್ಮಾದಲ್ಲಿ ಸಹಕಾರದ ಬೆಳವಣಿಗೆಯನ್ನು [illegible] ರೀತಿಯಾಗಿ ವಿವರಿಸಿ ಹೇಳಿರುವರು:— ಗತವರುಷದಲ್ಲಿ ನೇಮಕಪಟ್ಟ ೭ [illegible] ಉದ್ಯೋಗಸ್ಥರು ಕೂಡಿ ಒಟ್ಟಿಗೆ ೧೯ ಮಂದಿ ಇರುವರು. ಇವರು ೨೨ ಜಿಲ್ಲೆ[illegible] ಪೈಕಿ ೧೪ ಜಿಲ್ಲೆಗಳಲ್ಲಿ ಕೃಷಿಕ್ಷೇತ್ರಗಳಲ್ಲಿ ಕೆಲಸ ನಡಿಸುತ್ತಲಿರುವರು. ಇದ[illegible] ಅಕ್ಕಿಯ ಸ್ಥಿತಿಯು ಬಹಳಮಟ್ಟಿಗೆ ಸುಧಾರಣೆಗೆ ಬಂದದೆ. ಕಬ್ಬಿನ ಕೃಷಿ ವೃದ್ಧಿಪಡಿಸಿಗುತ್ತಲಿರುವುದರಿಂದ ಇನ್ನೂ ಕೆಲವು ಕಾಲದಲ್ಲಿ ಈ ಪ್ರಾಂತ್ಯಕ್ಕೆ ಬೇ[illegible]ದಷ್ಟು ಬಿಳಿ ಸಕ್ಕರೆಯನ್ನು ಸ್ಥಳೀಯ ಕಾರ್ಖಾನೆಗಳೇ ತಯಾರಿಸುವುವು. [illegible] ನಾರನ್ನು ಬೆಳಸುವುದಕ್ಕೆ ಬಂಗಾಳ ಸರಕಾರದ ಸಹಾಯದಿಂದ ಅನುಭವಸ್ಥ ಒಬ್ಬ[illegible] ರನ್ನು ಕರಸಿಟ್ಟಿರುವುದರಿಂದ ಈ ಬೆಳೆಯು ಇನ್ನೂ ಸ್ವಲ್ಪಕಾಲದಲ್ಲಿಯೇ ಪ್ರಚಾರಕ್ಕೆ ಬರಲಿಕ್ಕೆ ಅವಕಾಶವಿದೆ. ಜಿಲ್ಲೆಗೆ ಒಬ್ಬ ವೆಟರಿನರಿ ಇನ್ಸ್‌ಪೆಕ್ಟರ್ ಮತ್ತು ಒಂದೊಂದು ಟೌನಿಗೆ ಒಬ್ಬೊಬ್ಬ ಅಸಿಸ್ಟಾಂಟರನ್ನು ಇರಗೊಡಿಸುವಂತೆ ಏರ್ಪಾಡು ಆಗಿದೆ.

ಅಪ್ಪರ್ ಬರ್ಮಾ ಕೋಓಪರೇಟಿವ್ ಬೇಂಕಿನ ದ್ರವ್ಯಾನುಕೂಲವನ್ನು ಬಲಪಡಿಸಿಯದೆ. ಸಂಘಗಳ ಸಂಖ್ಯೆ ೧೪೯೦ರಿಂದ ೨೫೧೫ಕ್ಕೆ, ಮೆಂಬರರ ಸಂಖ್ಯೆ ೩೯,೦೦೦ದಿಂದ ೬೧,೦೦೦ಕ್ಕೆ, ಬಂಡವಾಳವು ೬೫ ಲಕ್ಷದಿಂದ ೧೩೦ ಲಕ್ಷಕ್ಕೆ ಏರಿತು. ಗೋವುಗಳ ವಿಮಸಂಘಗಳ ಸಂಖ್ಯೆಯು ೬೪ರಿಂದ ೧೯೧೬ನೇ ಇಸವಿ ಜೂನು ಅಂತ್ಯಕ್ಕೆ ೩೨೪ಕ್ಕೆ ಏರಿತು. ಸಂಘಗಳ ವಹಿವಾಟುಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಿ ಹೆಚ್ಚಿನ ಸೌಕರ್ಯವನ್ನುಂಟುಮಾಡಿದೆ. ಸಂಘಗಳ ಯೂನಿಯನ್‌ಗಳು ೧೧೨ರಿಂದ ೨೦೭ಕ್ಕೆ ಬಂದುಬಿಟ್ಟವು.

ಪುತ್ತೂರು:— ಇಲ್ಲಿಯ ಪಂಚಮರ ವಿದ್ಯಾರ್ಥಿಗಳಿಗೋಸ್ಕರ ಕಟ್ಟಿಸಿದ ಶಾಲೆಯು ಅಪಾಯಕರವಿದ್ದಂತ ಪಂಚಮರ ಶಾಲೆಯನ್ನು ಎಲಿಮೆಂಟರಿ ಶಾಲೆಗೆ ಸೇರಿಸಿ ಅಲ್ಲಿ ಕಲಿಸಲಾರಂಭಿಸಿರುವರು. ಎಲಿಮೆಂಟರಿ ಶಾಲೆಗೆ ಪಂಚಮರ ಶಾಲೆಯನ್ನು ಸೇರಿಸಿದ್ದರಿಂದ ಮೇಲಹೊಲೆಯ ಜಾತಿಯ ಹುಡುಗರು ಸಹ ಸೇರಲಿಕ್ಕೆ ಮನಸ್ಸುಕೊಟ್ಟಿರುವರು.

ಅಕ್ಕಿಯ ಧಾರಣೆಯು ದಿನೇದಿನೇ ಹೆಚ್ಚುತ್ತ ಬಂದು ಛತ್ರ ಮುಡಿ ೧೧ ರೂಪಾಯಿ ೩೧ ವರೆಗೂ ಅಕ್ಕಿಮುಡಿ ೧೧ ರೂಪಾಯಿ ೬-೮-೦ರ ವರೆಗೂ ಏರಿತಲ್ಲದೆ ಅಕ್ಕಿ ಸೇರು ೧೧ರ ಆಣೆ ೨, ಪೈ೫ ಧಾರಣೆಯಿರುತ್ತದೆ. ಬಡಬಗ್ಗರ ಗೋಳು ಹೇಳತಕ್ಕದ್ದಲ್ಲ. ಹಳ್ಳಿಹಳ್ಳಿಗಳಲ್ಲಿ ಎದ್ರುಪೆಲೆಕಾಯಿ, ನರೆಯಂಬ ಬೇರು ಅಗೆದುತಿಂದು ಕಾಲಕ್ಷೇಪ ಮಾಡುವರು. ಬಡಬಗ್ಗರ ಗೋಳು ನಿವಾರಿಸುವರೆ ಕಳೆದ ಮಾಸ ಅಕ್ಕಿಮುಡಿಗೆ ರೂಪಾಯಿ ೬ ಬೆಲೆ ಏರಿದಾಗ್ಗೆ ಆದರೂ ಕಡಿಮೆ ಕ್ರಯದಲ್ಲಿ ಬಡಬಗ್ಗರಿಗೆ ಅಕ್ಕಿ ಕೊಡುತ ವಿಲೇವಾರಿಯು ಇಲ್ಲಿಯ ಹಲವು ಸಾಹುಕಾರರು ವಕೀಲರು ಮೊದಲುಗೊಂಡು ದ ಜಿಲ್ಲೆಯ ಇತರ ಕಡೆಯಲ್ಲಿ ಸಹಾ ವಿಲೇವಾರಿ ಮಾಡಿದರೆಂದ. ತಮ್ಮ ಪತ್ರದಲ್ಲಿ ಕಂಡಿದ್ದೆ; ಆದರೆ ಈ ವರುಷದಲ್ಲಿ ಆ ಕುರಿತು ಯಾವದೊಂದು ಏರ್ಪಾಡು ಮಾಡದೆ ಇದ್ದದ್ದು ಯುದ್ಧದ ಸಮ್ಮಂದ ಸಾಲ ಕೊಟ್ಟದ್ದರಿಂದಲೊ ಯಾ ಇನ್‌ಕಮ್‌ಟೆಕ್ಸ್ ಹೆಚ್ಚು ಹೊರಿಸಿದರಿಂದಲೊ ಎಂಬದು ತಿಳಿಯಲಾರೆ. ಸರ್ಕಾರಕ್ಕೆ ಯುದ್ಧದ ಸಮ್ಮಂದ ಸಾಲಕೊಟ್ಟರೆ ಬಡ್ಡಿ ಸಿಕ್ಕದೆ? ಇನ್‌ಕಮ್‌ಟೆಕ್ಸ್ ಹೊರಿಸಿದರೆ ಲೆಕ್ಕ ತೋರಿಸಿಕೊಂಡು ವಜಾ ಕಳೆಯಬಾರದೆ? ಅಂತು ಇಂತು ಕುಂಟಿ ಮಕ್ಕಳಿಗೆ ವನವಾಸ ಎಂಬಂತೆ ಜನರ ಈ ಆಲೋಚನೆಯಿಂದ ಬಡಬಗ್ಗರ ಗೋಳು ಶಾಂತಪಡಿಸುವ ಬಗೆ ಹ್ಯಾಗೆ? ಕೆಲಸ ಮಾಡಿಸುವವರು ಅಕ್ಕಿ ಪ್ರಿಯವಾದುದರಿಂದ ಹಡಿಯಲ್ಲವೆನ್ನುವರು. ಬಡಬಗ್ಗರ ಜೀವನದ ಬಗೆ ಹ್ಯಾಗೆ? ಅಕ್ಕಿ ಪ್ರಿಯವಾದುದರಿಂದ ಸಾಹುಕಾರರಿಗೆ ಲಾಭವೇ ಸರಿ. ಮ. ರಾ. ರಾ. ಸಾಹುಕಾರ ರುಕ್ಮಯ್ಯ ಪೈಗಳವರು ಅಕ್ಕಿಯ ಬೆಲೆ ಇಳಿಸಿ ಇಟ್ಟಿದ್ದರೂ ಬಡಬಗ್ಗರ ದುರಾದೃಷ್ಟದಿಂದ ಉಪ್ಪಿನಂಗಡಿ ಸಾಹುಕಾರರಿಂದ ಅವರು ತರುವ ಅಕ್ಕಿಗೆ ಅಲ್ಲಿಯ ಸಾಹುಕಾರರು ಬೆಲೆ ಏರಿಸಿದುದರಿಂದ ಯೋಚನೆಪಟ್ಟಿರುವರು.

ಇಲ್ಲಿಯ ಮ॥ ಜುಮಾಂಛ ಸಾಲ್ಯಬೋರರ ಪ್ರದದಲ್ಲಿ ಹೀರೆ ಕಳವುಮಾಡಿದ ನಂಬ್ರ ತಲಾಶಿಮಾಡಿದ್ದಲ್ಲಿ ಇಲ್ಲಿಯ ಸ್ಟೇಶನ್ ಕನ್‌ಸ್ಟೇಬಲ್ ಶೇಷಗಿರಿ ಪೈಯವರಿಗೆ ಡಿಸ್ಟ್ರಿಕ್ಟ್ ಪೋಲಿಸು ಸುಪರಿಂಟೆಂಡೆಂಟ್ ಘೋರಿಗಳವರು ರೂಪಾಯಿ ೫ ಇನಾಂ ಶೆಂಕ್ಷನ್ ಮಾಡಿರುವರು.

ಹೊಸದುರ್ಗ:— ಕಾಸರಗೋಡು ಸ್ಟೇಶನರಿ ಸಬ್‌ಮೆಜಿಸ್ಟ್ರೇಟರಿಗೆ ರಜೆಕೊಟ್ಟ ಸಮ್ಮಂದ ಇಲ್ಲಿಯ ಮೆಜಿಸ್ಟ್ರೇಟ ರಾ॥ ವೆಂಕಟರಾಯರು ಕಾಸರಗೋಡು ಚಾರ್ಜನಲ್ಲಿ ಸಹಾ ಇರಬೇಕಾಗಿದೆ. ಕಾಸರಗೋಡು ತಾಲ್ಲೂಕಿನ ಗ್ರೀಜಾದರಿನ ಕಾಲದಲ್ಲಿ ಇಲ್ಲಿಯ ಸಬ್‌ಅಸಿಸ್ಟಾಂಟ ಸರ್ಜನರು ಅಲ್ಲಿಯ ಚಾರ್ಜನಲ್ಲಿ ಇರುತ್ತಾರೆ. ಏವಂಚ ನಮ್ಮ ಕಸಬೆಯಲ್ಲಿ ಈಗ ಮೆಜಿಸ್ಟ್ರೇಟರೂ ಡಾಕ್ಟರರೂ ಇಲ್ಲದ್ದರಿಂದ ಬಡಜನರಿಗೆ ಹೆಚ್ಚಿನ ಕಷ್ಟನಷ್ಟಕ್ಕೆ ಕಾರಣವಾಗಿದೆ. ಸಬ್ ಅಸಿಸ್ಟಾಂಟ ಸರ್ಜನರನ್ನು ಆಗಾಗ್ಗೆ ಈ ಕಸಬೆಯಿಂದ ತಪ್ಪಿಸಿದರೆ, [illegible] ಬಿಸುವ ಸಂಕಷ್ಟಗಳು ಅನೇಕ ಸಾರೆ ಮೇಲಿನ ಉದ್ಯೋಗಸ್ಥರ [illegible] ದ್ದಾದರೂ ಅವಶ್ಯಬೀಳುವ ಸಮಯ ಇಲ್ಲಿಯ ಸಬ್ ಅಸಿಸ್ಟಾಂಟ ಸರ್ಜನರಿಗೆ ಕಾಸರಗೋಡಿಗೆ ಹೋಗುವರೆ ಕೊಡುವ ಹುಕುಂ ನಿಲ್ಲಿಸುವಂತೆ [illegible] ಮುಂದಾದರೂ ಈ ವಿಷಯ ಮೇಲುಉದ್ಯೋಗಸ್ಥರು [illegible] ನಂಬುತ್ತೇನೆ.

[illegible]

[illegible]:— [illegible]

ಅನುಕ್ರಮಣಿಕೆ.

ಲೇಖ:— ಪಾನು.

ಅಶಸ್ತ್ರಪ್ರತೀಕಾರ ಅಥವಾ ಸತ್ಯಾಗ್ರಹ ೪

ವಿಚಾರಗಳು:—

೨—೩ ಸಿದ್ದಾಪುರದಲ್ಲಿಯ ಶಿಕ್ಷಣಪರಿಷತ್ತು ೪-೫

೪ ಮದ್ರಾಸಿನ ಪ್ರಾಂತಿಕ ಪರಿಷತ್ತು . . . . . ,,

೫ — ಮಂಗಳೂರು.

ವರ್ತಮಾನ ಸಂಗ್ರಹಗಳು:—

೬ ಯೂರೋಪದ ಮಹಾಯುದ್ಧ ೩

೭ ವಿದೇಶ ವೃತ್ತಾಂತ . . . . . ,,

೮ ಒಳದೇಶ ವರ್ತಮಾನ . . . . . ,,

೯ ಬಾತಮಿಗಳು — ಪುತ್ತೂರು, ಹೊಸದುರ್ಗ, ಮುಲ್ಕಿ . . . . . ,,

೧೦ ಪತ್ರವ್ಯವಹಾರ— ತಾಲೂಕು ಬೋರ್ಡಿನ ಮೆಂಬರರಾದ ರಾ॥ ಕೆ. ಕೃಷ್ಣರಾಯರಿಗೆ . . . . . ,,

೧೧ ದೊಡ್ಡ ಮನಸಿನ ಅಸ್ಪೃಶ್ಯ ಶಿಷ್ಯರವರ ಸ್ಮಾರಕಕೆಂದು . . . . . ,,

೧೨ ಬೆಳಗಾವಿ ಇನಾಮು ತನಿಖೆ; ಪುತ್ತೂರು . . . . . ,,

ಸ್ವದೇಶಾಭಿಮಾನಿ.

ಶಕ ೧೮೪೩ ಭಾದ್ರಪದ ಶು. ೧೪ ಶುಕ್ರವಾರ.

ಅಶಸ್ತ್ರಪ್ರತೀಕಾರ ಅಥವಾ ಸತ್ಯಾಗ್ರಹ.

ಹಿಂದೀ ರಾಷ್ಟ್ರಸಭೆಯು ಜನ್ಮತಾಳಿ ೩೦-೩೫ ವರ್ಷಗಳ ವರೆಗೆ ಅವ್ಯಾಹತವಾಗಿ ಅದು ಕೆಲಸಮಾಡುತ್ತಿದ್ದರೂ ಗತವರ್ಷ ಕಲಕತ್ತೆಯಲ್ಲಿ ಆದ ಸುಪ್ರಸಿದ್ಧ ಅಧಿವೇಶನದ ವರೆಗೆ ಅದಕ್ಕೆ ತನ್ನ ಧ್ಯೇಯವು ಯಾವುದು ಎಂಬುದೆ ನಿಶ್ಚಿತವಾಗಿರಲಿಲ್ಲ. ಸೂರ್ಯ ಚಂದ್ರ ಮೊದಲಾದ ಗೋಲಕಗಳು ಸೂರ್ಯನ ಸುತ್ತಲೂ ಉದ್ದೇಶ, ಧ್ಯೇಯ, ಹೇತು ಇವುಗಳೊಂದೂ ಇಲ್ಲದೆ ಹೇಗೆ ಸುಮ್ಮನೆ ಭ್ರಮಿಸುತ್ತಿರುವವೊ ಹಾಗೆಯೆ ನಮ್ಮ ರಾಷ್ಟ್ರೀಯ ಸಭೆಯ ಪ್ರಚಂಡ ಸಂಸ್ಥೆಯು ಕಲಕತ್ತೆಯ ಆ ಅಧಿವೇಶನದ ವರೆಗೆ ಧ್ಯೇಯದ ಪರಿಜ್ಞಾನವಿಲ್ಲದೆ ಒಂದು ಕ್ರಮದಿಂದ ಕೆಲಸ ಮಾಡಿಕೊಂಡೆ ಇತ್ತು. ಪರಂತು ಮಹರ್ಷಿ ದಾದಾಭಾಯಿಗಳು ಸ್ವರಾಜ್ಯವೆ ರಾಷ್ಟ್ರೀಯ ಸಭೆಯ ಧ್ಯೇಯವೆಂಬುದಾಗಿ ನಿಶ್ಚಯಿಸಿದರು. ಅಂದಿನಿಂದ, ಮಧ್ಯದಲ್ಲಿ ಸ್ವಲ್ಪ ಸಮಯ ಒಂದೆರಡು ವ್ಯಕ್ತಿಗಳ ದುರಾಗ್ರಹದ ಸಂಕಲೆಯು ರಾಷ್ಟ್ರೀಯ ಸಭೆಯ ಕಾಲಿಗೆ ಬಿದ್ದಿದ್ದರೂ ಈಗ ತನ್ನ ಆ ನಿಶ್ಚಿತ ಧ್ಯೇಯದ ಕಡೆಗೆ ಪ್ರಗತ್ಯನ್ಮುಖವಾದ ಹೆಜ್ಜೆಗಳಿಂದ ಮುಂದರಿಯುತ್ತಿದೆ. ಧ್ಯೇಯವು ಇಂಥದ್ದು ಎಂದು ನಿಶ್ಚಿತವಾದ ಮೇಲೆ ಅದರ ಪ್ರಾಪ್ತಿಯ ಉಪಾಯಗಳು ಯಾವವು, ಇದು ಎರಡನೆ ಪ್ರಶ್ನವು. ಈ ಪ್ರಶ್ನವನ್ನು ಕುರಿತು ಅನೇಕರು ಅನೇಕ ಉಪಾಯಗಳನ್ನು ಸೂಚಿಸುವರು. ಅವುಗಳಲ್ಲಿ ತತ್ಕಾಲಕ್ಕೆ ಅಶಸ್ತ್ರಪ್ರತೀಕಾರವೆಂಬ ಉಪಾಯವನ್ನು ಅವಲಂಬಿಸಬೇಕೆಂದು ಈಗ ಅನೇಕರು ಹೇಳುವರು. ಅದು ಈಗಿನ ಪರಿಸ್ಥಿತಿಯಲ್ಲಿ ನಮಗೆ ಹೇಳಿದ್ದಲ್ಲ ಎಂದು ಪ್ರತಿಯಾಗಿ ಇನ್ನು ಸ್ವಲ್ಪ ಜನರು ವಾದಿಸುವರು. ದೇಶತುಂಬಾ ಈಗ ಇದೆ ಚರ್ಚೆಯು ಮುಖ್ಯವಾಗಿ ನಡೆದಿರುವದು. ಮಿ॥ ಎನ್. ಸುಬ್ಬರಾವ್ ಪಂತಲು, ನಾಮ॥ ಬಿ. ಎನ್. ಶರ್ಮಾ, ವಿ. ಎಸ್. ಶಾಸ್ತ್ರಿ ಮೊದಲಾದ ಕೆಲವು ಪ್ರಮುಖರು ಅಶಸ್ತ್ರಪ್ರತೀಕಾರದ ನಿಷೇಧಸೂಚಕವಾದ ಒಂದು ಹಸ್ತಪತ್ರಕವನ್ನು ಪ್ರಕಟಿಸಿ ಈ ಚರ್ಚೆಯಲ್ಲಿ ಇನ್ನಷ್ಟು ಜೀವಕಳೆಯನ್ನು ತುಂಬಿದರು. ಮತ್ತು ಮದ್ರಾಸಿನ ಮೊನ್ನೆಯ ಪ್ರಾಂತಿಕ ಪರಿಷತ್ತಿನೊಳಗಿನ ಇದರ ಠರಾವಿನಿಂದ ಇದರ ತತ್ವವು ಇನ್ನಷ್ಟು ವ್ಯಕ್ತವಾಗಿ ಬಂದಿರುವುದು. ಅಶಸ್ತ್ರಪ್ರತೀಕಾರ ವಾದದ ಪೂರ್ವೋತ್ತರ ಪಕ್ಷಗಳನ್ನು ನಮ್ಮ ವಾಚಕರಿಗೆ ತಿಳಿಸುವುದು ಅವಶ್ಯಕವೆಂದು ನಾವು ನೆನಸುತ್ತೇವೆ. ಆದರೆ ಅದನ್ನು ಹೇಳುವ ಮೊದಲು ಅಶಸ್ತ್ರಪ್ರತೀಕಾರವೆಂದರೇನೆಂಬುದನ್ನು ಮೊದಲು ನೋಡೋಣ.

'ಪೆಸಿವ್ ರೆಝಿಸ್ಟನ್ಸ್' ಎಂಬೀ ಶಬ್ದದ ಸರಿಯಾದ ಅರ್ಥವೇನೆಂದರೆ, ನ್ಯಾಯ್ಯವಾದ ಸ್ವಮತವನ್ನು ಸಾಧಿಸುವುದಕ್ಕೆ ಪ್ರಯತ್ನಪಡುವಾಗ ಬರುವ ಸಂಕಟಗಳನ್ನು ಶಾಂತವೃತ್ತಿಯಿಂದ ಸಹಿಸಿ ಸಾಧ್ಯವಾಗುವ ತನಕ ಅದನ್ನು ಅನುವರ್ತಿಸಿಕೊಂಡಿರುವುದು ಎಂದರೆ ಒಂದೇ ಮಾತಿನಿಂದ ಇದಕ್ಕೆ ಅಸ್ಪೃಷ್ಟ ಪ್ರತೀಕಾರವೆನ್ನಬಹುದು. ಈ ಪ್ರತೀಕಾರದ ಉಪಾಯದಲ್ಲಿ ಸ್ವೋದಿಷ್ಟ ಹೇತುವನ್ನು ಸಾಧಿಸುವುದಕ್ಕೆ ಕೊಲೆಪಾತಕ, ರಕ್ತಪಾತ, ಶಸ್ತ್ರಪ್ರಯೋಗ ಮುಂತಾದ ಯಾವ ಘಾತಕಸಾಧನಗಳನ್ನೂ ಉಪಯೋಗಿಸುವುದು ಕೇವಲ ನಿಷಿದ್ಧವಾದುದರಿಂದ ಈ ಚಳವಳಿಯನ್ನು ಸ್ವಿಗೆ ಅಶಸ್ತ್ರಪ್ರತೀಕಾರವೆಂಬ ಹೆಸರು ಯೋಗ್ಯವಾಗಿದೆ. ಪ್ರತ್ಯಕ್ಷ ಶಸ್ತ್ರವಾಗಲಿ ಅಥವಾ ಶಸ್ತ್ರದಂತೆ ಇರುವ ಬೇರೆ ಘಾತಕಸಾಧನವಾಗಲಿ ಪ್ರತೀಕಾರೋಪಾಯದಲ್ಲಿ ಬಹಿಷ್ಕರಿಸಲ್ಪಟ್ಟದ್ದರಿಂದ ಅಶಸ್ತ್ರ ಅಥವಾ ನಿಃಶಸ್ತ್ರ ಪ್ರತೀಕಾರವೆಂಬ ಹೆಸರು [illegible]

ಅವರು ಇದಕ್ಕೆ ಸತ್ಯಾಗ್ರಹವೆಂಬ ಅರ್ಥಪೂರ್ಣವಾದ ಅಭಿಧಾನವನ್ನು ಕೊಟ್ಟಿರುವರು. ತಾನು ಸಾಧಿಸಲಿಕ್ಕೆ ಹಿಡಿದ ಅಥವಾ ಕೈಕೊಂಡ ಸತ್ಯವನ್ನು ಬರೆ ನೀತಿಧೈರ್ಯದ ಬಲದಿಂದ ಯಶಸ್ವಿಯಾದ ಮಾರ್ಗದಲ್ಲಿ ತಂದುಬಿಡುವುದೆ ಸತ್ಯಾಗ್ರಹವು. ಈ ಹೆಸರು ಸರಿಯಾಗಿ ಅನ್ವಿತವಾಗುತ್ತದೆ. ಮಾತ್ರವಲ್ಲ, ಪೆಸಿವ್‌ರೆಝಿಸ್ಟನ್ಸ ಎಂಬ ಇಂಗ್ಲಿಷ್ ಶಬ್ದದಿಂದ ತೋರಿಬರುವ ತತ್ವದಮೇಲೆ ಈ ಶಬ್ದವು ಕೊಡುವಷ್ಟು ಪ್ರಕಾಶವು ಸ್ವತಃ ಮೂಲ ಇಂಗ್ಲಿಷ್ ಶಬ್ದವಾದರೂ ಕೊಡುವುದಿಲ್ಲವೆಂಬುದು ವಾಚಕರಿಗೆ ಹೇಳಬೇಕಾದ ಅಗತ್ಯವಿಲ್ಲ. ಸತ್ಯಾಗ್ರಹ ಶಬ್ದವನ್ನು ಕೇಳಿದ ಕೂಡಲೆ ಮನಸ್ಸಿನಲ್ಲಿ ಮುದ್ರಿತವಾಗುವ ಮುಖ್ಯತತ್ವವು ಸತ್ಯವನ್ನು ಬಿಡಬಾರದು, ಶಾರೀರಿಕ ಸಾಮರ್ಥ್ಯದಿಂದ ಪ್ರವರ್ತಿಸಬಾರದು, ನೀತಿಧೈರ್ಯದಿಂದ ಮತ್ತು ಸಾತ್ವಿಕನಿಗ್ರಹದಿಂದ ಉದ್ದಿಷ್ಟವಾದ ಸತ್ಯಧ್ಯೇಯವನ್ನು ಪಡಕೊಳ್ಳಬೇಕು, ಎಂಬುದೆ ಆಗಿದೆ. ಈ ಸತ್ಯಾಗ್ರಹವನ್ನು ಮೊದಲು ಪಂಡ್ಯಂತರ ಅನೇಕ ಸಾಧುಪುರುಷರು ಅವಲಂಬಿಸಿದ್ದಾರೆ. ಸತ್ಯದ ಸಲುವಾಗಿ ಪ್ರಾಣಗಳನ್ನು ಸಹ ಅರ್ಪಿಸಿದರೂ ತನ್ನನ್ನು ಪೀಡಿಸುವವರ ಕೇಡನ್ನು ಎಳ್ಳಷ್ಟು ಚಿಂತಿಸದೆ ಇದ್ದ ಮಹಾಪುರುಷರಲ್ಲಿ ಕ್ರೈಸ್ತನು ಒಬ್ಬನಾಗಿದ್ದನು. ಇಂಥ ಮಹಾತ್ಮರು ನಮ್ಮಲ್ಲಿಯೂ ಅನೇಕರಾಗಿ ಹೋದರು. ಪರಮಾತ್ಮನ ಭಕ್ತಿಯನ್ನು ಬಿಡಿಸಲು ಪ್ರಹ್ಲಾದನಿಗೆ ಯಾವ ಯಾವ ದಂಡನೆಗಳನ್ನು ಕೊಟ್ಟರೂ ಆ ಸತ್ಯಾಗ್ರಹಿಯು ಅವುಗಳನ್ನೆಲ್ಲ ಸಹಿಸಿದನು. ಈ ಸತ್ಯಾಗ್ರಹದ ತತ್ವವು ಪಾಶ್ಚಾತ್ಯದೇಶದಲ್ಲಿ ಸಾಧಾರಣವಾಗಿ ಎಲ್ಲ ಕಡೆಗಳಲ್ಲಿ ಹಬ್ಬಿಕೊಂಡೆ ಇದೆ. ಆದರೆ ಅಧುನಿಕ ದಿಂದಿಗಳಲ್ಲಿ ಈ ತತ್ವದ ಪರಿಚಯವನ್ನು ಹುಟ್ಟಿಸಿದವರು ದೇಶಭಕ್ತ ಗಾಂಧಿಗಳು. ದಕ್ಷಿಣ ಆಫ್ರಿಕದಲ್ಲಿ ಗತವರ್ಷದಲ್ಲಿ ಟ್ರಾನ್ಸ್‌ವಾಲ ಸರಕಾರವು 'ಎಶಿಯಾಟಿಕ ಎಕ್ಟನ್ನು' ಪಾಸುಮಾಡಿ ಹಿಂದುಜನರಿಗೆ ಟ್ರಾನ್ಸ್‌ವಾಲದಲ್ಲಿ ಬರಲು ಆಡ್ಡಿಮಾಡಿತು. ಆಗ ಮಿ. ಸ್ಮಟ್ಸರ ಕಡೆಗೆ ಹಿಂದುಗಳು ಹೋದರು. ಆಗ ಮೊದಲು ಕಾಯಿದೆಯನ್ನು ರದ್ದುಪಡಿಸುವ ಅಭಿವಚನವನ್ನು ಕೊಟ್ಟರು, ಆದರೂ ಅದು ರದ್ದಾಗಲಿಲ್ಲ. ಅಷ್ಟರಲ್ಲಿ ಇನ್ನೂ ವಿಶೇಷವೆಂದರೆ, 'ಮಂಡಸ್ಥ್ಯಾವಲಿಟಿಕ' ಸಂಸ್ಕೃತಿಯ ಪ್ರಕಾರ ಮೇಲೆ ಕಾಲ ಇಡುವಂತೆ ಆ ಅವಮಾನಾಸ್ಪದ ಕಾಯಿದೆಯು. ಹಾಗೆಯೆ ಕಡೇವರೆಯಲ್ಲಿ ಇರುತ್ತ ಹಿಂದೀ ಸ್ತ್ರೀಯರ ವೈವಾಹಿಕ ಸಂಬಂಧಕ್ಕೆ ಬಾಧಕವಾದ ಇನ್ನೊಂದು ಕಾಯಿದೆಯನ್ನು ಟ್ರಾನ್ಸ್‌ವಾಲಿನವರು ಜಾರಿಗೆ ತಂದರು. ಆಗ ದೇಶಭಕ್ತ ಗಾಂಧಿಗಳಿಗೆ ಇದೆ ಸತ್ಯಾಗ್ರಹದ ಉಪಾಯವನ್ನು ಅವಲಂಬಿಸಬೇಕಾಯಿತು. ಸತ್ಯಾಗ್ರಹವನ್ನು ಯಾವಾಗ ಕೈಕೊಳ್ಳಬೇಕೆಂಬುದನ್ನು ನೋಡುವುದಾದರೆ, ಪೆಸಿವ್‌ರೆಝಿಸ್ಟನ್ಸಿನ ಸ್ಮೃತಿಕಾರರು ಹೀಗೆ ಹೇಳುತ್ತಾರೆ: ನ್ಯಾಯ್ಯವಾದ ಎಲ್ಲ ಮಾರ್ಗಗಳು—ಉಪಾಯಗಳು ವ್ಯರ್ಥವಾಗಿ ಹೋಗುವವೊ ಆಗ ಇದನ್ನು ದುರ್ಬಲರಾದವರು ಬಲಿಷ್ಠರಿಗೆ ಎದುರಾಗಿ (The weapon of the weak against the strong) ಕೈಕೊಳ್ಳುವರು. ಈ ಸೂತ್ರದಂತೆಯೆ ಟ್ರಾನ್ಸ್‌ವಾಲ ಸರಕಾರದ ಅನ್ಯಾಯದ ಕಾಯಿದೆಗಳನ್ನು ಕಡಿದುಹಾಕಲು ಗಾಂಧಿಯವರಿಗೆ ಈ ಅಶಸ್ತ್ರೋಪಾಯದ ಶಸ್ತ್ರವನ್ನು ಅವಲಂಬಿಸಬೇಕಾಯಿತು. ಅನಂತರ ಸದ್ಯದಲ್ಲಿ ಬಿಹಾರಪ್ರಾಂತದೊಳಗಿನ ಚಂಪಾರಣ್ಯದ ಪ್ರಕರಣದಲ್ಲಿ ಅಲ್ಲಿಯ ಪೋಲಿಸ್ಮೆಂಟರು ಗಾಂಧಿಗಳ ಮೇಲೆ ಅನ್ಯಾಯದ ನೋಟೀಸನ್ನು ಜಾರಿಪಡಿಸಿದ್ದರಿಂದ ಅವರಿಗೆ ಹಿಂದುಸ್ಥಾನದಲ್ಲಿ ಈ ತತ್ವದ ಅನ್ವಯವನ್ನು ತೋರಿಸಬೇಕಾಯಿತು. ಈ ಚಂಪಾರಣ್ಯದ ವಿಷಯವು ನಮ್ಮ ವಾಚಕರಿಗೆ ಚನ್ನಾಗಿ ಗೊತ್ತಿರುವದರಿಂದ ಆ ವಿಷಯವನ್ನು ಇಲ್ಲಿ ಹೆಚ್ಚು ವಿಸ್ತಾರದಿಂದ ಪ್ರಸ್ತಾಪಿಸುವ ಅಗತ್ಯವಿಲ್ಲ. ಸಾರಾಂಶ ಸತ್ಯಾಗ್ರಹದ ತತ್ವವನ್ನು ಹಿಂದಿಗಳಲ್ಲಿ ಮತ್ತು ಹಿಂದುಸ್ಥಾನದಲ್ಲಿ ಮೊದಲಿಗೆ ಪ್ರಯೋಗಿಸಿದವರು ದೇಶಭಕ್ತ ಗಾಂಧಿಗಳೆ ಎಂಬುದು ಸ್ಪಷ್ಟವಾಗಿದೆ.

ಸತ್ಯಾಗ್ರಹದ ಈ ಅಸ್ತ್ರವನ್ನು ಗಾಂಧಿಯವರೊಬ್ಬರೆ ಅನುಭವಿಸಬೇಕೊ ಅಥವಾ ಈಗಿನ ಕಾಲದಲ್ಲಿ ಇಡೀ ಹಿಂದುಸ್ಥಾನವು ಅದರ ಪಾಲು ಗಾರನಾಗಬೇಕೊ; ಸತ್ಯಾಗ್ರಹದ ತತ್ವವನ್ನು ಗಾಂಧಿಗಳಾಗಲಿ ಅಥವಾ ಅಂಥ ಕೆಲವರಾಗಲಿ ಅವಲಂಬಿಸಿಕೊಂಡು ಅದರಿಂದ ಒದಗತಕ್ಕ ಲಾಭಹಾನಿಗಳನ್ನು ಪಡೆಯತಕ್ಕದ್ದೊ ಹೊರತು ಇಡಿ ದೇಶವು ಅದನ್ನು ಕೈಕೊಳ್ಳತಕ್ಕದ್ದೊ; ಬೇರೆ ಬೇರೆ ಪ್ರಾಂತಿಕ ಸರಕಾರಗಳ ಅಪ್ರವೇಶದ ಹುಕುಮುಗಳು, ಮದ್ರಾಸಿನ ಮತ್ತು ಬೇರೆ ಕಡೆಯ ಪ್ರತಿಬಂಧಗಳು, ತಂತಮ್ಮ ಪ್ರಾಂತಗಳಿಂದ ಬಹಿಷ್ಕಾರ, ಅಧಿಕಾರಿಗಳ ಭೀತಿಜನಕ ಭಾಷಣ, ಭಾಷಣಸ್ವಾತಂತ್ರ್ಯದ ಸಂಕೋಚ, ಪ್ರೆಸ್ ಎಕ್ಟಿನ ನಿರಂಕುಶವಾದ ಆಟ ಇವೆ ಮುಂತಾದ ಬಿತ್ತಾಟದ ಉಪಾಯಗಳಿಂದ ದೇಶವು ತುಂಬಿ ಹೋದಾಗ ಸತ್ಯಾಗ್ರಹದ ತತ್ವವನ್ನು ಜನತೆಯು ಅವಲಂಬಿಸುವುದು ಅಯುಕ್ತವೆ; ಬಿತ್ತಾಟವು ಪ್ರಾರಂಭಿಸಿದಕೂಡಲೆ ನೀವು ಇದನ್ನು ಕೈಕೊಂಡದ್ದು ಸರಿಯಲ್ಲ ಎಂದು ಸರಕಾರಿ ಅಧಿಕಾರಿಗಳಿಗೆ ಲೋಕಮತವನ್ನು ತಿಳಿಸಲು, ಸಭೆಯನ್ನು ಕೂಡಿಸಹೋದರೆ ಆ ಸಭೆಯು ಕೂಡದ ಹಾಗೆ ಪ್ರತಿಬಂಧಕ ಹುಕುಮುಗಳನ್ನು ಹೊರಡಿಸಿ ಅಧಿಕಾರಿಗಳು ಜನರ ಸನದಶೀರ ಮಾರ್ಗವನ್ನು ತಡೆಯುವರು, ಆಗ ಸತ್ಯಾಗ್ರಹವನ್ನು ಅವಲಂಬಿಸುವುದು ತಪ್ಪಾದೀತೆ; ಯಾಚನೆ, ಪ್ರಾರ್ಥನೆ, ಎಚ್ಚರಿಕೆ, ಮೊದಲಾದ ಎಲ್ಲ ಸನದಶೀರ ಉಪಾಯಗಳ ಮೇಲೆ ಅಧಿಕಾರಿಗಳು ಕೈಯಿಡುವುದಕ್ಕೆ ಬಂದರೆ [illegible] ಇದ್ದಲ್ಲಿ ಮತ್ತು ಸನದಶೀರ ಮಾರ್ಗವನ್ನು ತಡೆಯಲ್ಪಟ್ಟಲ್ಲಿ [illegible]

ಪ್ರಶ್ನವು ಬಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಉದ್ಭವಿಸಿತು. ಅದನ್ನು ಚರ್ಚಿಸಿ ತಂತಮ್ಮ ಅಭಿಪ್ರಾಯಗಳನ್ನೂ ನಿರ್ಣಯಗಳನ್ನೂ ಕಳುಹಿಸಿಕೊಡಬೇಕೆಂಬುದಾಗಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಬಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಕೇಳಿಕೊಂಡಿತು. ಆದುದರಿಂದ ಈಗ ಈ ದೇಶದಲ್ಲಿ ಈ ಪ್ರಶ್ನದ ವಿಷಯದಲ್ಲಿ ತುಂಬಾ ಚರ್ಚೆಯು ನಡೆದುಕೊಂಡಿದೆ. ನಮ್ಮ ಮದ್ರಾಸ ಪ್ರಾಂತಿಕ ಪರಿಷತ್ತಿನ ಮೊನ್ನೆಯ ವಿಶಿಷ್ಟ ಅಧಿವೇಶನದಲ್ಲಿ ಈ ಪ್ರಶ್ನದ ಚರ್ಚೆಯು ಸಾಕಷ್ಟು ನಡೆದು ಕೊನೆಗೆ ಸತ್ಯಾಗ್ರಹವನ್ನು ಈಗ ಹಿಂದಿಗಳು ಅವಲಂಬಿಸಬಹುದಾಗಿ ನಿರ್ಣಯವು ಪಾಸಾಯಿತು. ಇದನ್ನು ನಾವು ಕೆಳಗಿನ ಸ್ಫುಟವಿಚಾರಗಳಲ್ಲಿ ತೋರಿಸಿದ್ದೇವೆ. ಸತ್ಯಾಗ್ರಹದ ಉಪಾಯವನ್ನು ಈಗಿನ ನಾಜೂಕ ಪರಿಸ್ಥಿತಿಯಲ್ಲಿ ಅವಲಂಬಿಸುವುದು ಯುಕ್ತವಲ್ಲ ಎಂದು ವಾದಿಸುವವರದೂ ಒಂದು ಪಕ್ಷವಿದೆ. ಅವರ ಅಭಿಪ್ರಾಯವೇನೆಂದರೆ ಸತ್ಯಾಗ್ರಹದ ಚಳವಳವು ಕಾಯಿದೆ ಮತ್ತು ಸನದುಗಳಿಗೆ ಅನುವಾಗಿ ಸ್ವರೂಪ ಇಷ್ಟುದೊಡ್ಡ ನಮ್ಮ ದೇಶದಲ್ಲಿ ಆ ಚಳವಳವು ಯಶಸ್ವಿಯಾಗಲಿಕ್ಕಿಲ್ಲ; ಮತ್ತು ನಾವು ಸತ್ಯಾಗ್ರಹವನ್ನು ಅವಲಂಬಿಸುವುದೆಂಬುದರ ಅರ್ಥವೇನು; ನಾವು ಸರಕಾರ ಕಂದಾಯವನ್ನು ಕೊಡುವುದು ನಿಲ್ಲಿಸುವುದೊ; ಇಂಥ ವಿಕ್ಷಿಪ್ತ ಮತಗಳನ್ನು ಹೇಳಹೋದರೆ ಸತ್ಯಾಗ್ರಹತತ್ವದ ಮೇಲೆಯೆ ಅರಸಿನಹಾಕಬೇಕಾದೀತು; ಅಲ್ಲದೆ, ಬೇಗನೆ ಮಿ. ಮೊಂಟೆಗ್ಯೂಗಳು ಹಿಂದೂಸ್ಥಾನವನ್ನು ಸಂದರ್ಶಿಸಲು ಬರುವವರಿದ್ದಾರೆ; ಇಂಥ ಸಮಯದಲ್ಲಿ ನಾವು ಸತ್ಯಾಗ್ರಹಿಗಳಾಗಿ ಸರಕಾರದೊಡನೆ ವೈಮನಸ್ಯವನ್ನು ಕಟ್ಟಿಕೊಂಡು ತುಳಿದರೆ ಮೊಂಟೆಗ್ಯೂಗಳ ಅಭಿಪ್ರಾಯವೇನಾದೀತು? ಇಲ್ಲಿಯ ಎಂಗ್ಲೊ ಇಂಡಿಯನರಾಗಲಿ ಊ. ಸಿಡನ್‌ಹೆಮರಾಗಲಿ ಹೇಳುವಂತೆ ನಾವು ಹಿಂದಿಗಳು ಸರಕಾರದ ಸಹಕಾರಿಗಳಲ್ಲವೆಂಬುದನ್ನು ಮೊಂಟೆಗ್ಯೂರವರಿಗೆ ಪ್ರತ್ಯಕ್ಷವಾಗಿಯೆ ತೋರಿಸಿಕೊಟ್ಟಂತೆ ಆದೀತಲ್ಲವೆ; ದಕ್ಷಿಣ ಆಫ್ರಿಕದ ಪರಿಸ್ಥಿತಿಯು ಬೇರೆ ವಿಧದ್ದಿತ್ತು; ಇಲ್ಲಿಯೂ ಆ ಸೂತ್ರವನ್ನೆ ಅನುವರ್ತಿಸುವುದೆಂದರೆ ಜನತೆಯ ಮೇಲೆ ಬೇಕೆಂದು ಸಂಕಟಗಳನ್ನು ಬರಮಾಡಿಕೊಳ್ಳುವುದೆ ಸರಿ; ಸತ್ಯಾಗ್ರಹದ ಪುರಸ್ಕಾರವನ್ನು ಮಾಡುವಷ್ಟು ತೀವ್ರ ಪರಿಸ್ಥಿತಿಯು ಈಗ ಹಿಂದೂಸ್ಥಾನದಲ್ಲಿ ಇಲ್ಲ; ಇಲ್ಲಿ ಹೊಸ ಸುಧಾರಣೆಗಳನ್ನು ಕೊಡುವ ಆಲೋಚನೆಯು ಜವಾಬದಾರರಾದ ಸರಕಾರಿ ಅಧಿಕಾರಿಗಳಲ್ಲಿ ನಡೆದಿದೆ, ಕಲಕತ್ತೆಯ ಸಭಾ ಪ್ರತಿಬಂಧದ ಹುಕುಮನ್ನು ಅಲ್ಲಿಯ ಅಧಿಕಾರಿಗಳು ಹಿಂದಕ್ಕೆ ಉಪಸಂಹರಿಸಿದ್ದಾರೆ. ಮಿ. ಮೊಂಟೆಗ್ಯೂಗಳು ಸಹಕಾರ್ಯದಿಂದ ವಿಚಾರ ನಡೆಸಲು ಹಿಂದೂಸ್ಥಾನಕ್ಕೆ ಬರುತ್ತಿದ್ದಾರೆ. ಇಂಥ ಶುಭಸೂಚಕವಾದ ಅರುಣೋದಯದ ಪ್ರಭೆಯು ಹಿಂದೂಸ್ಥಾನದ ಕ್ಷಿತಿಜದ ಮೇಲೆ ಮೂಡುತ್ತಿರುವಾಗ ನಾವು ಸತ್ಯಾಗ್ರಹವನ್ನು ಅವಲಂಬಿಸಿದರೆ ಅದು ಬುದ್ಧಿವಂತಿಕೆಯು ಆದೀತೆ; ಎಂಬುದಾಗಿ ಸತ್ಯಾಗ್ರಹ ವಿರೋಧಿಗಳು ಇನ್ನೊಂದು ಕಡೆಯಲ್ಲಿ ವಾದಿಸುವರು.

ಈ ಪ್ರಕಾರ ಸತ್ಯಾಗ್ರಹದ ವಿಷಯದಲ್ಲಿ ಇಕ್ಕಡೆಯವರು ವಿವಾದಿಸಿಕೊಳ್ಳುತ್ತಿದ್ದಾರೆ. ಈ ರೀತಿಯಿಂದ ಅನುವಾದಿಸುವ ಎರಡು ಪಕ್ಷಗಳು ಈ ದೇಶದ ಎಲ್ಲ ಪ್ರಾಂತಗಳಲ್ಲಿದ್ದಾರೆ. ಆದರೆ ಮೊನ್ನೆಯ ಮದ್ರಾಸಿನ ವಿಶಿಷ್ಟಪರಿಷತ್ತಿನಲ್ಲಿ ಬಂದ ಸತ್ಯಾಗ್ರಹದ ಠರಾವಿನ ಮೇಲೆ ತೀವ್ರವಾದ ಚರ್ಚೆಯು ನಡೆದರೂ ಕೊನೆಗೆ ಸತ್ಯಾಗ್ರಹದ ಕಡೆಗಿನ ಬಹುಮತವು ನಿಂತಿತು. ದೂರದೃಷ್ಟಿಯ ಮತ್ತು ಕಾರ್ಯಸಾಧನೆಗಳ ದೀರ್ಘವಿಚಾರದಿಂದ ಸತ್ಯಾಗ್ರಹವನ್ನು ನಿಷೇಧಿಸುವವರಿಗೆ ಕೆಲವರು ಸತ್ಯಾಗ್ರಹದ ಕಾರ್ಯವಿವರಗಳನ್ನು ಸೂಚಿಸುವ ಉತ್ತರಗಳನ್ನು ಕೊಟ್ಟಿರುವರು. ಸನದಶೀರ ಮಾರ್ಗವನ್ನು ಹಿಡಿದು ಚಳವಳವನ್ನು ಮಾಡುವಾಗ ಅದನ್ನು ಮುಂದರಿಸಲಿಕ್ಕೆ ಬಿಡುವುದಿಲ್ಲ ಎಂದಾದ ಮೇಲೆ ಆಗ ಬರೆ ಸುಮ್ಮನೆ ಕುಳಿತುಕೊಳ್ಳುವುದು ಶಾಂತವಾದ ಪರಿಸ್ಥಿತಿಯನ್ನು ಉಂಟುಮಾಡಿದಂತಾಗುವುದೆಂಬುದು ನಿಜ; ಇಂಥ ಸಭೆಗಳಿಂದ ಶಾಂತಪರಿಸ್ಥಿತಿಯು ಕೆಡುವುದಿಲ್ಲವೆ; ಸತ್ಯಾಗ್ರಹವಾದಿಗಳು ಅರಾಜಕವನ್ನು ಬೆಳೆಸಬೇಕೆಂದು ಹೇಳುವರೊ; ಸನದಶೀರ ಚಳವಳವನ್ನು ನಡಿಸಲಿಕ್ಕೆ ತಡೆಮಾಡಲು ಬಂದರೆ ಅಂಥ ಹುಕುಮುಗಳನ್ನು ಮಾತ್ರ ಈ ಸತ್ಯಾಗ್ರಹದ ತತ್ವಕ್ಕನುಸಾರವಾಗಿ ಮನ್ನಿಸಕೂಡದೆಂದಿಷ್ಟು ಸತ್ಯಾಗ್ರಹಿಗಳು ಹೇಳುವರಲ್ಲದೆ 'ಸರಕಾರದ ಕಂದಾಯ ಕೊಡಕೂಡದು' ಎಂದು ಮುಂತಾಗಿ ಯಾವ ಸತ್ಯಾಗ್ರಹ ವಾದಿಯೂ ವಾದಿಸುತ್ತಾನೆ; ಸತ್ಯಾಗ್ರಹಿಗಳ ವಸ್ತುಸ್ಥಿತಿಯ ಮತದಲ್ಲಿ ವಿಪರ್ಯಾಸಮಾಡುವುದು ಯುಕ್ತವಲ್ಲ, ಈ ಪ್ರಕಾರ ಸತ್ಯಾಗ್ರಹವಾದಿಗಳು ಪ್ರತ್ಯುತ್ತರವನ್ನು ನಿಷೇಧವಾದಿಗಳಿಗೆ ಕೊಟ್ಟಿರು. ಅವಕಾಶವು ಇದ್ದರೆ ನಿಷೇಧವಾದಿಗಳು ಪ್ರತ್ಯುತ್ತರವನ್ನು ಇನ್ನೂ ಕೊಡುತ್ತಿದ್ದರೊ ಏನೊ? ಹೇಗೂ ಇರಲಿ, ಸಭೆಯಲ್ಲಿ ಬಹುಮತದಿಂದ ಸತ್ಯಾಗ್ರಹದ ಠರಾವು ಪಾಸಾಯಿತೆಂಬುದು ನಿಜ.

ಮೇಲಿನ ಎರಡೂ ಪಕ್ಷದವರ ವಿಧಾನಗಳನ್ನು ನೋಡುವಾಗ ಆ ಎರಡೂ ಪಕ್ಷಗಳಲ್ಲಿ ಸತ್ಯಾಂಶವು ಇದೆ. ಸತ್ಯಾಗ್ರಹದ ತತ್ವದ ದೃಷ್ಟಿಯಿಂದ ನೋಡಿದರೂ ಅದರಲ್ಲಿ ಯಾವ ಪ್ರಕಾರದ ಪ್ರಯತ್ನವಾಗಲಿ, ಇಚ್ಛೆಯಾಗಲಿ ಲವಮಾತ್ರವೂ ಇಲ್ಲ. ಆದುದರಿಂದಲೆ ಈ ಶಬ್ದವು ಅರ್ಥಪೂರ್ಣವಾಗಿದೆಂದು ನಾವು ಮೊದಲು ಹೇಳಿದ್ದೇವೆ. ಬೇರೆ ಎಲ್ಲ ಸನದಶೀರ ಉಪಾಯಗಳು [illegible] ಮೇಲೆ ಇದೊಂದೆ ಉಪಾಯವು [illegible] ಅದನ್ನು ಅನುವರ್ತಿಸುವುದರಿಂದ [illegible]

ಆಲ್ ಇಂಡಿಯಾ ಕಾಂಗ್ರೆಸ್ಸು ಕಮಿಟಿಯವರಿಂದ ಮಂಜೂರಾಗಲಿಕ್ಕಿದೆ. ರಾಜಕೀಯ ಶಿಕ್ಷಣವನ್ನು ಪ್ರಜಾಸಾಮಾನ್ಯರಲ್ಲಿ ವ್ಯಾಪಿಸುವ ವಿಷಯ ನಾನಾ ಬಗ್ಗೆಯ ಠರಾವುಗಳು ಬಹಳ ಕಾಲದಿಂದ ರಾಷ್ಟ್ರೀಯ ಸಭೆಯಲ್ಲಿ ಮಂಜೂರಾಗುತ್ತವೆಯಾದರೂ ಈ ಠರಾವುಗಳ ಜ್ಯಾರಿಯು ಹೇಗೆ ನಡೆದಿದೆ? ನಾವು ಈಗ ಹೇಳುವುದೇನೆಂದರೆ ಇದು ಹೇಗೂ ಹಾಗೆಯೇ ಒಂದು ಠರಾವನ್ನು ದೊಡ್ಡ ಸಭೆಯು ಪಾಸುಮಾಡಿದ ಕೂಡಲೆ ಜನತೆಯ ಆಚರಣದಲ್ಲಿ ಅದು ಬಂದು ಬಿಡುತ್ತದೆಂದು ನಿರೀಕ್ಷಿಸುವುದು ಸರಿಯಲ್ಲ. ಈ ದೃಷ್ಟಿಯಿಂದ ನೋಡುವಾಗ ಕೆಲವು ಸನ್ಮಾನ್ಯಮುಖಂಡರು ಸತ್ಯಾಗ್ರಹದ ನಿಷೇಧದ ವಿಷಯದಲ್ಲಿ ವೃಥಾ ದುರಾಗ್ರಹವನ್ನು ಪಟ್ಟು ಜಾಹೀರ ಪತ್ರಿಕವನ್ನು ಹೊರಡಿಸಿದ್ದು ಯುಕ್ತವೆಂತ ತೋರುವದಿಲ್ಲ. ಮಾರನೆ ದಿನ ಸಭೆಯಲ್ಲಿ ತಮಗೆ ಬೇಕಾದ ರೀತಿ ಕಾರಣಗಳನ್ನು ಕೊಟ್ಟು ಆ ವಿಷಯವನ್ನು ವಾದಿಸುವ ಅವಕಾಶವು ಇದ್ದಾಗ ಜಾಹೀರು ಪತ್ರಿಕದ ಕಸ್ತಲ್ಲಿ ಕೋಲಾಹಲವು ಏಕೆ ಬೇಕಿತ್ತೊ ತಿಳಿಯದು. ಆದರೆ ಈ ಕೋಲಾಹಲದಿಂದ ಒಂದು ಸಂಗತಿಯು ವ್ಯಕ್ತವಾಯಿತು. ಆಯಾ ಜಿಲ್ಲೆಗಳಿಂದ ಬಂದ ಪ್ರತಿನಿಧಿಗಳ ಅಭಿಪ್ರಾಯ ಬಲವು ಯಾವ ಪಕ್ಷಕ್ಕೆ ಇದೆ. ಮತ್ತು ಅಂಥಾ ಬಲಾಧಿಕ್ಯವು ಹೇಗೆ ಸರ್ವತ್ರ ವ್ಯಾಪಿಸಿಕೊಂಡಿವೆ? ಇದೆಲ್ಲ ಈಗ ಸರಿಯಾಗಿ ಗೊತ್ತು ಮಾಡಿಕೊಂಡಂತಾಯಿತು.

ಸ್ಫುಟವಿಚಾರಗಳು.

೧. ಸಿಮ್ಲಾದಲ್ಲಿ ಕಳೆದವಾರ ಒಂದು ವಿಶೇಷವಾದ ಶಿಕ್ಷಣ ಪರಿಷತ್ತು ಜರಗಿತು. ನಮ್ಮ ಈಗಿನ ಸುಧಾರಿಸಿದ ರಾಜ್ಯಪದ್ಧತಿಯ ಮುಖ್ಯ ಲಕ್ಷಣವು ಯಾವುದೆಂದರೆ, ಒಂದೊಂದು ವಿಷಯದಲ್ಲಿ ಒಂದೊಂದು ಪರಿಷತ್ತನ್ನು ಕೂಡಿಸುವುದು. ಹಾಗೆಯೇ ಒಂದೊಂದು ವಿಷಯದಲ್ಲಿ—ವಿಚಾರಣೆಮಾಡುವ ಬಗ್ಗೆ ಒಂದೊಂದು ಕಮಿಷನನ್ನು ಏರ್ಪಡಿಸುವುದು. ಇಂಥ ಪರಿಷತ್ತುಗಳಿಂದ ಅಥವಾ ಇಂಥ ಕಮಿಷನುಗಳಿಂದ ಆಗುವ ಲಭ್ಯಾಂಶವು ಅಷ್ಟೊಂದು ಹೆಚ್ಚಿನದಿರುವುದಿಲ್ಲ; ಒಮ್ಮೊಮ್ಮೆ—ಯಾಕೆ, ಸಾಧಾರಣವಾಗಿ ಅನೇಕಸಾರಿಯೆಂದೆ ಹೇಳಬಹುದು—ಇಂಥ ಪರಿಷತ್ತುಗಳಿಂದಲೂ ಕಮಿಷನುಗಳಿಂದಲೂ ಮೇಲಾಗಿ ತೊಂದರೆಯೆ ಬರುತ್ತಿರುತ್ತದೆ. ಮೊನ್ನೆಯ ಸಿಮ್ಲಾ ಶಿಕ್ಷಣಪರಿಷತ್ತಿನ ಹಾಡಾದರೂ ಇದುವೆ. ಈ ಶಿಕ್ಷಣಪರಿಷತ್ತಿಗೆ ಪ್ರಾಯಃ ಎಲ್ಲಾ ಪ್ರಾಂತಗಳ ವಿದ್ಯಾಇಲಾಖೆಯ ಡಿರೆಕ್ಟರುಗಳು, ಹಾಗೂ ಕೆಲವು ಶಿಕ್ಷಣವ್ಯವಸಾಯಿಗಳು ಬಂದಿದ್ದರು. ಪರಿಷತ್ತು ಪ್ರಾರಂಭಿಸುವಾಗ ವೈಸರಾಯರು ಪ್ರಸ್ತಾವನಾರೂಪದಿಂದ ಕೆಲವು ಮಾತುಗಳನ್ನು ಆಡಿದರು. "ಹೈಸ್ಕೂಲುಗಳಲ್ಲಿ ಇಂಗ್ಲಿಷ್‌ಭಾಷೆಯನ್ನು ಇನ್ನೂ ಯಶಸ್ವಿಯಾದ ರೀತಿಯಿಂದ ಕಲಿಸಬೇಕಾದರೆ ಯಾವ ಯಾವ ಸುಧಾರಣೆಗಳನ್ನು ಈಗಿನ ಪದ್ಧತಿಯಲ್ಲಿ ತತ್ಕಾಲಕ್ಕನುಗುಣವಾಗಿ ಮಾಡಬಹುದು ಎಂಬೀ ಪ್ರಶ್ನವನ್ನು ಚರ್ಚಾರ್ಗಂತ್ಯದಲ್ಲಿ ನಿರ್ಣಯಿಸುವುದೆ ಈ ಪರಿಷತ್ತಿನ ಉದ್ದೇಶವಾಗಿದೆ. ಆದರೆ ೧೯೧೫ನೇ ಇಸವಿಯಲ್ಲಿ ವರಿಷ್ಠಕೌನ್ಸಿಲಿನೊಳಗೆ ಹೈಸ್ಕೂಲಶಿಕ್ಷಣದಲ್ಲಿ ದೇಶೀಭಾಷೆಗಳು ಮಧ್ಯವರ್ತಿಗಳಾಗಿರಬೇಕೆಂಬುದಾಗಿ ಒಂದು ಠರಾವು ಬಂದಿತ್ತು. ಅದನ್ನು ಮುಂದೆ ಇಟ್ಟುಕೊಂಡು ಈ ಹೊತ್ತಿನ ಪರಿಷತ್ತಿನಲ್ಲಿ ನಿರ್ಣಯಿಸಬೇಕಾದುದಿಲ್ಲ. ಆದರೆ ಅದೆ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಎಂದರೆ ಆ ಪ್ರಶ್ನವನ್ನು ಸಾಧಕರೀತಿಯಿಂದಾಗಲಿ ಬಾಧಕರೀತಿಯಿಂದಾಗಲಿ ಸುಲಭವಾಗಿ ಬಿಡಿಸುವಂತೆ ಈ ಹೊತ್ತಿನ ಪರಿಷತ್ತಿನಲ್ಲಿ ಕೆಲಸವಾದರೆ ಈ ನಿರ್ಣಯಗಳಿಗನುಸಾರವಾಗಿ ಮುಂದೆ ಆ ಪ್ರಶ್ನದ ವಿಷಯದಲ್ಲಿ ಪ್ರಾಂತಿಕ ಸರಕಾರಗಳಿಗೆ ಕೇಳಬಹುದಾಗಿದೆ." ಈ ಪ್ರಕಾರ ಕೆಲವು ಸೂಚನೆಯ ಮಾತುಗಳನ್ನು ಮಾತಾಡಿ ವೈಸರಾಯರು ದೇಶೀಯ ಭಾಷೆಗಳಿಗೆ ಪ್ರಾಮುಖ್ಯವನ್ನು ಕೊಡಬಹುದೊ ಹೇಗೆ ಎಂಬೀ ಪ್ರಶ್ನವನ್ನು ಕುರಿತು ಹಿಂದಿನಿಂದ ನಡೆದ ಇದರ ಇತಿಹಾಸವನ್ನು ಹೇಳಿ ಮುಂದೆ ಅಭಿಪ್ರಾಯಪಡುತ್ತಾರೇನೆಂದರೆ "ಹಿಂದಿನಶಿಕ್ಷಣ ಕಮಿಷನ್, ಯುನಿವರ್ಸಿಟಿ ಕಮಿಷನ್ ಮುಂತಾದವುಗಳ ಅಭಿಪ್ರಾಯದಂತೆ ದೇಶೀಯ ಭಾಷೆಗಳ ಮಹತ್ವ, ಸಾರ್ವತ್ರಿಕತೆ ಮುಂತಾದ್ದು ಇದ್ದರೂ ಈ ಕಾಲದಲ್ಲಿ ಇಂಗ್ಲಿಷ್ ಭಾಷೆಯು ಸಾಕಷ್ಟು ಹಬ್ಬಿಕೊಂಡು ಹೋಗಿರುವುದರಿಂದ ಅದು ಈಗ ಮನೆಯಮಾತೆ ಎಂದೆನ್ನಲು ಅಷ್ಟೊಂದು ಬಾಧಕತೋರುವುದಿಲ್ಲ. ಅಲ್ಲದೆ ದೇಶೀಭಾಷೆಗಳಿಗೆ ಮಧ್ಯವರ್ತಿತ್ವವನ್ನು ಕೊಟ್ಟರೆ ಅದರಿಂದ ಅನೇಕ ಅವ್ಯವಸ್ಥೆಗಳು ತಪ್ಪದೊರುವ ಸಂಭವವಿರುವುದರಿಂದ ಇಂಗ್ಲಿಷನ್ನೆ ಮಧ್ಯವರ್ತಿಯಾಗಿ ಇಟ್ಟುಕೊಳ್ಳುವುದು ಅಯುಕ್ತವಾಗಲಾರದು."

೨. ವೈಸರಾಯ ಪ್ರಭುಗಳ ಈ ಅರ್ಥದ ಭಾಷಣವಾದನಂತರ ಶಿಕ್ಷಣಪರಿಷತ್ತಿನ ಕಾರ್ಯಕ್ಕೆ ಪ್ರಾರಂಭವಾಯಿತು: ಈ ಶಿಕ್ಷಣಪರಿಷತ್ತಿನೊಳಗಿನ [illegible] ವಿಷಯದಲ್ಲಿ ವಿಸ್ತರಿಸುವುದಾದರೆ ಈ ಪರಿಷತ್ತಿನಲ್ಲಿ ಚರ್ಚೆಗೆ ಇಟ್ಟ ಪ್ರಶ್ನಗಳು ವಕೀಲರು ಕೋರ್ಟುಗಳಲ್ಲಿ ಸಾಕ್ಷಿಗಾರನಿಂದ ತನಗೆ ಬೇಕಾದ ಉತ್ತರವನ್ನೆ ತಕ್ಕೊಳ್ಳುವುದಾದರೆ ಯಾವ ರೀತಿಯಿಂದ ಪ್ರಶ್ನಮಾಲಿಕೆಗಳಲ್ಲಿ ಕೌಶಲ್ಯವನ್ನು ನಡಿಸುವುದುಂಟೊ ಅದೇತರದವಿದ್ದವು. ಇಂಗ್ಲಿಷ್‌ಭಾಷೆಯ ಪ್ರಾವೀಣ್ಯವನ್ನು ಹೊಂದಬೇಕಾದರೆ ಪ್ರಥಮದಲ್ಲಿ ಇಂಗ್ಲಿಷನ್ನು ಪ್ರಾರಂಭಿಸುವುದೊ ಅಥವಾ ದೇಶೀಯಭಾಷೆಯ ಸಾಧಾರಣ ಅಧ್ಯಯನವಾದನಂತರವೊ? ಈ ಒಂದೇ ಪ್ರಶ್ನವನ್ನಿಟ್ಟರೆ ಪ್ರಾರಂಭದಿಂದಲೆ ಇಂಗ್ಲಿಷ್ ಕಲಿಸುವುದು ಒಳ್ಳೇದು ಎಂಬ ತಮಗೆ ಬೇಕಾದ ಉತ್ತರವು ಸಿಗಲಿಕ್ಕೆ ತೊಂದರೆ ಬಂದೀತೊ ಎಂಬ ಭಯದಿಂದ ಈ ಎಡೆಯಲ್ಲಿ ಇನ್ನೊಂದು ಪ್ರಶ್ನವನ್ನಿಟ್ಟಿದ್ದಾರೆ: "ಮೊದಲಿನಿಂದಲೆ ಇಂಗ್ಲಿಷನ್ನು ಕಲಿತವನು ಆ ಭಾಷೆಯಲ್ಲಿ ಹೆಚ್ಚು ಪ್ರವೀಣನಾಗುವನೊ? ಅಥವಾ ದೇಶೀಯ ಭಾಷೆಯನ್ನು ಕಲಿತು ಮತ್ತೆ ಇಂಗ್ಲಿಷ್ ಕಲಿಯುವವನು ಪ್ರವೀಣನಾಗುವನೊ?" ಈ ತರದ ಪ್ರಶ್ನಗಳನ್ನು ನೋಡುವಾಗಲೇ ಈ ಶಿಕ್ಷಣ[illegible] ಗಳು ಹೊರಗೆಬಂದಾವೆಂದು [illegible] ಯ ಕೆಲಸವಲ್ಲ. [illegible] ಕೊಡುವುದೇ ಒಳ್ಳೇದೊ, ಅಥವಾ [illegible] ಯುವವರು [illegible]

ದಾರೆ? ಎಂದು ಕೇಳಿದರೆ ಈ ಪ್ರಶ್ನೆಗಳಿಗೆ ಯಾವ ಉತ್ತರವಿದ್ದೀತು! ಹಾಗೆಯೆ ಮೇಲಿನ ಪ್ರಶ್ನೆಗಳಿಗೆ ಪ್ರಾಯಶಃ ಎಲ್ಲರು ಹೈಸ್ಕೂಲುಗಳಲ್ಲಿ ಇಂಗ್ಲಿಷನ್ನೆ ಮಧ್ಯವರ್ತಿಯಾಗಿ ಕಲಿಸಬೇಕು ಮತ್ತು ಅದನ್ನು ಆದಷ್ಟು ಬೇಗನೆ ಪ್ರಾರಂಭಿಸಬೇಕು ಎಂದು ಮುಂತಾಗಿ ಹೇಳಿದರು. ದೇಶೀ ಭಾಷೆಗಳನ್ನು ಪುರಸ್ಕರಿಸಿದವರಲ್ಲಿ ಎಂದು ಹೇಳುವುದಕ್ಕಿಂತ ದೇಶೀಯ ಭಾಷೆಯಲ್ಲಿ ಶಿಕ್ಷಣವನ್ನು ಕೊಡುವುದು ಹಿತಾವಹವಿದೆ ಎಂದು ಹೇಳುವವರಲ್ಲಿ ಪಂಜಾಬದ ಡಿರೆಕ್ಟರುಗಳು ಮತ್ತು ಮುಂಬಯಿಯ ಕೆಲವರು ಇವರಲ್ಲದೆ ಬೇರೆ ಈ ಪರಿಷತ್-ಕಮಿಟಿಯೊಳಗಿನವರು ಇಂಗ್ಲಿಷ್ ಭಾಷೆಯು ಶಿಕ್ಷಣ ಮಧ್ಯವರ್ತಿಯಾಗುವುದು ಹಿತಾವಹವೂ ಅವಶ್ಯಕವೂ ಎಂದು ಅಭಿಪ್ರಾಯಪಟ್ಟರು! ಪರಿಷತ್ತಿನ ಅಧಿವೇಶನದಲ್ಲಿ ಪಾಸಾದ ಠರಾವುಗಳು ಕೂಡ ಇದೆ ಸ್ವರೂಪದವು, ಅವುಗಳನ್ನು ಕೆಳಗಿನ ಸಂಕ್ಷೇಪದಿಂದ ತಿಳಿಯುಕೊಳ್ಳಬಹುದು.

೩. ವಿದ್ಯಾರ್ಥಿಗಳಲ್ಲಿ ಆಂಗ್ಲ ಭಾಷಾ ಸ್ವಪ್ರಜ್ಞೆ ಬರಬೇಕಾದದರಿಂದ ಇಂಗ್ಲಿಷನ್ನು ಸಾಧ್ಯವಿದ್ದಷ್ಟು ಬೇಗನೆ ತರಗತಿಯಿಂದಲೆ ಪ್ರಾರಂಭಿಸತಕ್ಕದ್ದು. ಎಂದರೆ ೯ರಿಂದ ೧೧ ವಯಸ್ಸಿನೊಳಗೆ ಹುಡುಗರು ಇಂಗ್ಲಿಷನ್ನು ಪ್ರಾರಂಭಿಸಬಹುದೆಂದು ಬಹುಮತವಾಯಿತು. ಪ್ರಾರಂಭದಲ್ಲಿ ದೇಶೀಭಾಷೆಯನ್ನೆ ಕಲಿತು, ಅನಂತರ ಇಂಗ್ಲಿಷನ್ನು ಕಲಿಯುವ ವಿದ್ಯಾರ್ಥಿಗಳು ಮುಖ್ಯ ವಿಷಯಗಳನ್ನು ಪ್ರವೀಣತೆಯಿಂದ ಕಲಿತರೂ ಇಂಗ್ಲಿಷಿನಲ್ಲಿ ಅವರು ಸಮರ್ಥರಾಗುವುದಿಲ್ಲವೆಂಬುದೆ ಅನೇಕರ ಮತ. ವಿನಾ ಹೈಸ್ಕೂಲಿನ ಮೇಲಿನ ಕ್ಲಾಸುಗಳಲ್ಲಿ ಇಂಗ್ಲಿಷನ್ನೆ ಮಧ್ಯವರ್ತಿಯಾಗಿ ಇಟ್ಟುಕೊಳ್ಳಬೇಕೆಂದು ನಿರ್ಣಯಿಸಲಾಯಿತು. ಆದರೂ ದೇಶೀಭಾಷೆಯೆ ಮಧ್ಯವರ್ತಿಯಾಗುವುದು ಉಚಿತವೆಂದು ಕೆಲವರು ವಾದಿಸಿದರೂ ಇವರ ಕಡೆಗೆ ಬಹುಮತವು ಇರಲಿಲ್ಲ. ಹೈಸ್ಕೂಲಿನ ಅಂತಿಮಕ್ಲಾಸಿನ ಪರೀಕ್ಷೆಯನ್ನು ಬಿಂದು ಇಂಗ್ಲಿಷಲ್ಲದೆ ಬೇರೆ ವಿಷಯಗಳಲ್ಲಿ ದೇಶೀಯಭಾಷೆಗಳಿಂದ ಮಾಡಬಹುದಾಗಿ ಕೆಲವರು ಮಾತ್ರ ತಮ್ಮ ಮತಗಳನ್ನು ಕೊಟ್ಟರು. ಇನ್ನೂ ಕೆಲವರು ಇಂಗ್ಲಿಷಭಾಷೆಯಿಂದಲೂ ಆಗಬಹುದು, ದೇಶೀಯಭಾಷೆಗಳಿಂದಲೂ ಆಗಬಹುದೆಂದು ಐಚ್ಛಿಕವಿಕಲ್ಪವನ್ನು ಸೂಚಿಸಿದರು. ಇರಲಿ. ಇವೇ ಶಿಕ್ಷಣಪರಿಷತ್ತಿನಲ್ಲಿ ನಡೆದ ಮುಖ್ಯ ನಿರ್ಣಯಗಳು. ಈ ನಿರ್ಣಯಗಳನ್ನು ನೋಡುವಾಗ ಆ ಕಮಿಟಿಯ ಮುಂದೆ ಇಟ್ಟ ಪ್ರಶ್ನಗಳಿಗೆ ತಕ್ಕವಾಗಿಯೆ ಇವೆ. ಅಲ್ಲದೆ ಅನ್ಯಥಾ ಇಲ್ಲ. ಪರಿಷತ್ತಿನ ಸೂತ್ರಧಾರರಿಗೆ ಬೇಕಾದ ನಿರ್ಣಯವು ಇದೇ ಆಗಿರುವುದರಿಂದ ಅದನ್ನು ತಪ್ಪದೆ ಕೈಗೆ ಬರುವಂತೆಯೆ ಅವರು ಮೇಲಿನಂಥ ಸೂಚಕಪ್ರಶ್ನಗಳನ್ನು ಪರಿಷತ್ತಿನ ಮುಂದಿಟ್ಟರು. ಸರಕಾರದವರು ಹಿಂದೀ ಜನರಿಗೆ ಕೊಡುವ ಶಿಕ್ಷಣದ ಉದ್ದೇಶವು ಹಿಂದಿಗಳಲ್ಲಿ ಮುಖ್ಯವಾಗಿ ಇಂಗ್ಲಿಷ ಭಾಷೆಯ ಸ್ವಪ್ರಜ್ಞೆ ಇದ್ದರೆ ಸಾಕು ಎಂದು ಇದ್ದೀತು. ಮತ್ತು ಅದೆ ದೃಷ್ಟಿಯಿಂದ ಅವರು ಇಲ್ಲಿಯ ಶಿಕ್ಷಣ ಕ್ರಮದ ರೂಪರೇಖೆಗಳನ್ನು ಹಾಕಿಕೊಟ್ಟಿದ್ದಾರೆ ಎಂದೆನ್ನೋಣ. ತಥಾಪಿ ಹಿಂದಿಗಳಿಗೆ ಬರೆ ಇಂಗ್ಲಿಷ್ ಭಾಷೆಯ ಸ್ವಪ್ರಜ್ಞೆಯನ್ನು ಕಲ್ಪಿಸಿಕೊಂಡು ಏನು ಮಾಡುವುದಿದೆ? ಶಿಕ್ಷಣದ ಮುಖ್ಯಧ್ಯೇಯವು ಭಾಷೆಯ ಪ್ರಭುತ್ವವಲ್ಲ, ವಿಷಯಜ್ಞಾನದ ಪ್ರಭುತ್ವವು. ಅದು ದೇಶೀಯ ಭಾಷೆಯ ಮಧ್ಯವರ್ತಿತ್ವದಿಂದ ಬರುತ್ತದೆಂದು ಮಹತಿಯಲ್ಲಿ ಪ್ರಾಯಶಃ ಎಲ್ಲರು ಒಪ್ಪಿಕೊಂಡಿದ್ದಾರಾದ ಮೇಲೆ ಮೇಲಿನ ತರದ ನಿರ್ಣಯಕ್ಕೆ ಪರಿಷತ್ತು ಹೇಗೆ ಬಂದು ತಪ್ಪಿತು. ಇದೇ ಆಶ್ಚರ್ಯವು. ದೇಶೀಯ ಭಾಷೆಗಳಿಗೆ ಮಹತ್ವ ಮತ್ತು ಮುಖ್ಯಸ್ಥಾನವನ್ನು ಕೊಡಬೇಕು, ಎಂದರೆ ಇಂಗ್ಲಿಷನ್ನು ಎರಡನೆದಾಗಿ ಮತ್ತು ಆವಶ್ಯಕವಿದ್ದಾಗ ಇಟ್ಟುಕೊಂಡು ಬೇರೆ ಶಿಕ್ಷಣವಿಷಯಗಳನ್ನು ದೇಶೀಯ ಭಾಷೆಗಳಿಂದ ಕಲಿಸುವುದರಿಂದಲೆ ಹಿಂದೀ ಶಿಕ್ಷಣಕ್ರಮವು ಯಶಸ್ವಿಯಾದೀತೆಂದು ಈಗ ಎಲ್ಲ ಸುಶಿಕ್ಷಿತರು ಏಕಕಂಠದಿಂದ ಒಪ್ಪಿಕೊಳ್ಳುತ್ತಿದ್ದಾರೆ. ಇದಕ್ಕೆ ಅಪವಾದವಾಗಿ ಕೆಲವರು—ಅಲ್ಪಸ್ವಲ್ಪ ಇಂಗ್ಲಿಷನ್ನು ಕಲಿತು ದೇಶೀಯ ಭಾಷೆಯ ಗಂಧಕೂಡ ಗೊತ್ತಿಲ್ಲದ ಜ್ಞಾನ ಲವ ದುರ್ವಿದಗ್ಧರಾದವರು—ಇರಬಹುದು. ಆದರೆ ಇವರ ಸಂಖ್ಯೆಯು ಬರೆ ಬೆರಳಿನಿಂದ ಎಣಿಸುವಷ್ಟು ಕೂಡ ಇಲ್ಲ. ಸುಶಿಕ್ಷಿತ ಲೋಕಮತದ ಮುಖ್ಯ ಆಕಾಂಕ್ಷೆಯು ದೇಶೀಯಭಾಷೆಗಳ ಮುಖ್ಯ ಸ್ಥಾನವೆ. ಪರಂತು ಈ ಲೋಕಮತದ ಆಕಾಂಕ್ಷೆಯು ಮೊನ್ನೆಯ ಪರಿಷತ್ತಿನ ಸಂಗತಿಯನ್ನು ನೋಡುವಾಗ ಬೇಗನೆ ಫಲಿಸೀತೆಂದು ತೋರುವುದಿಲ್ಲ! ಸಾರಾಂಶ ಲೋಕಮತಕ್ಕೆ ಯಾವುದು ಬೇಕಾಗಿರುವುದೊ ಅದು ಸರಕಾರಕ್ಕೆ ಬೇಡವಾಗಿರುತ್ತದೆ. ಇದೇ ಮಾತು ಮೊನ್ನೆಯ ಪರಿಷತ್ತಿನಿಂದಲೂ ಇನ್ನೊಮ್ಮೆ ಸಿದ್ಧವಾಯಿತು!! ಅಯ್ಯೋ ದೇಶೀಯ ಭಾಷೆಗಳ ದುರದೃಷ್ಟವೆ!!!

೪. ಮದ್ರಾಸು ಸಂಸ್ಥಾನದ ಪ್ರಾಂತಿಕಸಭೆಯ ಅಧಿವೇಶನವು ಈ ವಾರದಲ್ಲಿ ಮದ್ರಾಸಪಟ್ಟಣದ ಗೋಖಲೆ-ಮಂದಿರದಲ್ಲಿ ಜರಗಿತು. ಪ್ರಾಂತಿಕಸಭೆಯ ಅಧಿವೇಶನವು ವಾಡಿಕೆಯಂತೆ ಕಳೆದ ಮೇ ತಿಂಗಳಲ್ಲಿ ಕಡಲೂರಿನಲ್ಲಿ ಜರಗಿತ್ತು. ತಥಾಪಿ ಸದ್ಯಃ ಎರಡು ಮೂರು ತಿಂಗಳಿಂದ ಈಚೆಗೆ ಸರಕಾರಿ ಅಧಿಕಾರಿಗಳು ತಮ್ಮ ಭಾಷಣದಿಂದಲೂ ಕೃತಿಯಿಂದಲೂ ರಾಜಕೀಯ ವಾತಾವರಣದಲ್ಲಿ ಸಂಚಲನವನ್ನುಂಟು ಮಾಡಿದ್ದರಿಂದ ಈ ನಾಜೂಕಪರಿಸ್ಥಿತಿಯ ವಿಚಾರವನ್ನು ಮಾಡುವುದಕ್ಕಾಗಿ ಕೆಲವು ದಿವಸಗಳ ಹಿಂದೆ "ಆಲ್-ಇಂಡಿಯಾ-ಕಾಂಗ್ರೆಸ್ ಕಮಿಟಿಯ ಅಧಿವೇಶನವು ಮುಂಬಯಿಯಲ್ಲಿ ಕೂಡಿತ್ತು; ಅದರಲ್ಲಿ ನಿರ್ಣಯವಾದಂತೆ ಕೆಲವು ಮಹತ್ವದ ಪ್ರಶ್ನಗಳ ಕುರಿತು ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬೇರೆ ಪ್ರಾಂತಗಳಲ್ಲಿ ಇನ್ನು ಆಗಲಿಕ್ಕಿರುವಂತೆ ಮದ್ರಾಸಪ್ರಾಂತಿಕಸಭೆಯು ಒಂದು ವಿಶಿಷ್ಟಅಧಿವೇಶನವನ್ನು ಜರಗಿಸುವುದು. ಪ್ರಾಂತಿಕಸಭೆಯ ಚಾಲಕರಿಗೆ ಅವಶ್ಯವಾಗಿ ಕಂಡುಬಂತು. ದಿವಾನಬಹದೂರ ಕೇಶವಪಿಳ್ಳೆಯವರು ಅಧ್ಯಕ್ಷಸ್ಥಾನದಲ್ಲಿದ್ದರು. [illegible]

ನಡೆಸಿಕೊಳ್ಳುವುದೆ ಪ್ರಶಸ್ತವಾದುದು ಎಂದು ಹೇಳಲು ಅಧ್ಯಕ್ಷರು [illegible] ಲಿಲ್ಲ. ಹಿಸಿವಾರದವರನ್ನ ಎಂದರೆ ಅಶಸ್ತ್ರಪ್ರತಿಕಾರ ಇದರ [illegible] ದಲ್ಲಿ ಅವರು ಅಭಿಪ್ರಾಯಪಟ್ಟಿದ್ದೇನೆಂದರೆ, ಈಗಿನಕಾಲದಲ್ಲಿ [illegible] ಪ್ರತಿಕಾರದ ಮಾರ್ಗವು ಹಿತಕರವಾಗಿ ಕಾಣುವದಿಲ್ಲ. [illegible] ಯಿಂದ ಅಧ್ಯಕ್ಷರ ಭಾಷಣವು ಮುಗಿದ ನಂತರ—ಉಪಾ[illegible] ದಲ್ಲಿ ಪುನಃ ಸಭೆಯ ಕಾರ್ಯಕ್ರಮವು ಪ್ರಾರಂಭವಾಗಿ [illegible] ದಾದಾಭಾಯಿ, ರಸೂಲ ಇವರ ಮರಣದವಿಷಯದಲ್ಲಿ ದುಃಖ[illegible] ಮದ್ರಾಸಸರಕಾರದ ಹಿತ್ತಾಟ—ವಿಶೇಷತಃ ಮೆಸೆಸ್ [illegible] ಪ್ರತಿಬಂಧ ಮತ್ತು ಅಶಸ್ತ್ರಪ್ರತಿಕಾರ ಈ ಠರಾವುಗಳು [illegible] ಅಶಸ್ತ್ರಪ್ರತಿಕಾರದ ಠರಾವು ಸಭೆಯಲ್ಲಿ ವಿಚಾರಾರ್ಥ ಬಂದಾಗ [illegible] ಮಹತ್ವದ ಚರ್ಚೆಗಳು ನಡೆದವು. ಮಾಂಟೆಗ್ಯುಗಳು ಹಿಂದುಸ್ಥಾನವನ್ನು ಸಂದರ್ಶಿಸಲು ಬರುವ ಈ ಸಮಯದಲ್ಲಿ ಜನತೆಯು ಅಶಸ್ತ್ರ ಪ್ರತಿಕಾರದ ಉಪಾಯವನ್ನು ಕೈಕೊಳ್ಳುವುದು ಯುಕ್ತವಲ್ಲ ಎಂದು ಒಂದು ಜಾಹೀರ ಪತ್ರಕವು ಎರಡು ಮೂರು ದಿವಸಗಳ ಹಿಂದೆಯೆ ನಾಮ. ಶ್ರೀನಿವಾಸ ಶಾಸ್ತ್ರೀ, ನಾಮ. ಶರ್ಮಾ, ಮಿ. ವಿ. ಪಿ. ಮಾಧವರಾವ್ ಮುಂತಾದ ಕೆಲವು ಪ್ರತಿಷ್ಠಿತರ ಹೆಸರಿನಿಂದ ಪ್ರಕಟವಾಗಿತ್ತು. ಅಶಸ್ತ್ರಪ್ರತಿಕಾರದ ಠರಾವನ್ನು ತಂದ ಮ. ರಾ. ನಾಮ. ರಾಮಾನುಜಾಚಾರ್ಯರು ಪ್ರಕಟವಾದ ಆ ಜಾಹೀರಪತ್ರಕವನ್ನೂ ಅದರಲ್ಲಿ ದಸ್ಕತು ಹಾಕಿದವರನ್ನೂ ಒತ್ತಿ ಟೀಕಿಸಿದರು. ನಾಮ. ಶಾಸ್ತ್ರಿಗಳು ಅಲ್ಲಿ ಇದ್ದರು, ಆದರೆ ಆಚಾರ್ಯರ ಸರ್ಪಮಂತ್ರಕ್ಕೆ ಗರುಡಮಂತ್ರವನ್ನು ಉಚ್ಚರಿಸಿದುದು ಮಾ ರಾ. ಸಿ. ಪಿ. ರಾಮಸ್ವಾಮಿಗಳು ಅಶಸ್ತ್ರಪ್ರತಿಕಾರದ ಸ್ವರೂಪವೇನು, ಅದರ ವ್ಯಾಪ್ತಿ ಎಷ್ಟು, ತತ್ಕಾಲಕ್ಕೆ ಅದನ್ನು ನಾವು ಯಾವ ಸ್ವರೂಪದಲ್ಲಿ ಅವಲಂಬಿಸಬಹುದು ಮುಂತಾದ್ದನ್ನು ಸ್ಪಷ್ಟೀಕರಿಸಿದರು. ವಿನಾ ಶಾಸ್ತ್ರಿಗಳು, ಆಚಾರ್ಯರು ಮತ್ತು ಸ್ವಾಮಿಗಳು ಈ ಎಲ್ಲರ ಮೂಲ ಭಾಷ್ಯ, ಟೀಕೆ ಪ್ರತಿಟೀಕೆ ಮುಂತಾದ ಎಲ್ಲ ವಿಧಿಗಳು ನಡೆದ ನಂತರ ಆ ಠರಾವು ಬಹುಮತದಿಂದ ಪಾಸಾಯಿತು. ಬೇಡವೆನ್ನುವವರ ಕಡೆ ಮುಕ್ಕಾಲು ಮತಗಳಿದ್ದವು, ಮತ್ತು ೧೫ ತಟಸ್ಥಮತಗಳಿದ್ದವು. ಈ ರೀತಿಯಿಂದ ಅಶಸ್ತ್ರಪ್ರತಿಕಾರದ ಠರಾವು ವಿಜಯಿಯಾದ ನಂತರ ಮಾರನೆ ದಿವಸದ ಅಧಿವೇಶನದಲ್ಲಿ ಹಿಂದೀ ಸ್ವರಾಜ್ಯ ಮುಂತಾದ ಠರಾವುಗಳು ಪಾಸಾದವು. ಇರಲಿ. ಲೋಕಮತದ ಝಳವು ಎತ್ತಿದೆ ಎಂಬುದನ್ನು ಅಶಸ್ತ್ರಪ್ರತಿಕಾರ ನಿಷೇಧದ ಜಾಹೀರಪತ್ರಕವನ್ನು ಪ್ರಕಟಿಸಿದ ಗೃಹಸ್ಥರು ಮೊನ್ನೆಯ ಅನುಭವದಿಂದ ಅಜಮಾಯಿಸದೆ ಇರರು.

ಸ್ಥಳಿಕ — ಮಂಗಳೂರು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಎಸೋಸಿಯೇಶನಿನ ಸಭೆಯು ಕಳೆದ ಶುಕ್ರವಾರ ಶ್ಯಾಮ ಘಂಟೆ 5ಕ್ಕೆ ಇಲ್ಲಿಯ ಕೋಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಸೇರಿತ್ತು. ಸಭಾ ಅಧ್ಯಕ್ಷಸ್ಥಾನವನ್ನು ಮಂಗಳೂರು ತಾಲೂಕು ಬೋರ್ಡಿನ ಪ್ರೆಸಿಡೆಂಟರಾದ ಮ| ರಾ| ರಾ| ಮಿಜೇರ ರಘುನಾಥಯ್ಯನವರು ವಹಿಸಿಕೊಂಡಿದ್ದರು. ಮಂಗಳೂರು ಅರಸಿಕೆರೆ ರೈಲ್ವೆ ವಿಷಯ ಸರಕಾರದವರಿಗೆ ಬರಕೊಂಡ ಅರ್ಜಿಯು ಸಭೆಯವರಿಂದ ಅಂಗೀಕರಿಸಲ್ಪಟ್ಟಿತು. ಮತ್ತು ಈ ರೈಲ್ವೆಯ ವಿಶೇಷತ್ವವನ್ನೂ ಅದರ ಉಪಯುಕ್ತತೆಯನ್ನೂ ಸದ್ಯದಲ್ಲಿ ಬರುವ ಗವರ್ನರ್ ದೊರೆಗಳವರಿಗೆ ಸರಿಯಾಗಿ ಮಂಡಿಸಿ ನಾಡುವದೆ ಬಹುಮಾನಪಟ್ಟ ರಾ| ಕೆ. ಸದಾಶಿವ ಭಟ್ಟ, ವಿ. ಪಿ. ಎಫ್. ಎಕ್ಸ್. ಸಾಲ್ಡಾನಾ, ರಾವ್ ಬಹದ್ದೂರ್ ಎನ್. ಸುಬ್ಬರಾವ್, ಖಾನ್‌ಸಾಹೇಬ ಹಾಜಿಅಬ್ದುಲ್ಲ ಹಾಜಿಕಾಸೀಮ್ ಸಾಹೇಬ ಮತ್ತು ಮಿ. ಹೆಮಿಲ್ಟನ್ ಇವರ ಒಂದು ಕಮ್ಮಿಟಿಯು ನೇಮಿಸಲ್ಪಟ್ಟಾಗಿರುವದು. ಪರಂಬೋಗ್ ಗೋಚಾರವು ಸ್ಥಳಗಳನ್ನು ದರಖಾಸ್ತಿಗೆ ಕೊಡದೆ ಅವುಗಳಿಂದ ಹೆಚ್ಚಿನ ಪ್ರಯೋಜನವು ಗ್ರಾಮಸ್ಥರಿಗೆ ಸಿಕ್ಕುವಂತೆ ಅವುಗಳನ್ನು ವ್ಯವಸ್ಥೆಗೊಳಿಸಬೇಕೆಂಬುವ ನಿರ್ಣಯವು ಸಭೆಯಲ್ಲಿ ಮಂಜೂರಾಗಿದೆ. ಮತ್ತು ಗವರ್ನರ ದೊರೆಗಳು ಈ ಸಾರಿ ಬಂದಾಗ ನಮ್ಮ ಜಿಲ್ಲೆಯ ಪರವಾಗಿ ಹಾಜರುಪಡಿಸತಕ್ಕ ಮನವಿಗಳನ್ನು ಹೇಳಿಕೊಳ್ಳಲಿಕ್ಕೆ ಇವುಗಳಲ್ಲಿ ಯಾವ ಯಾವ ವಿಷಯಗಳು ಕೂಡಿರಬೇಕೆಂಬುದನ್ನು ನಿರ್ಣಯಿಸಲಿಕ್ಕೆ ಇನ್ನೊಂದು ಕಮ್ಮಿಟಿಯು ಏರ್ಪಡಿಸಲ್ಪಟ್ಟಾಗಿರುವದು. ಡಿಸ್ಟ್ರಿಕ್ಟ್ ಎಸೋಸಿಯೇಶನನ್ನು ಮದ್ರಾಸು ಪ್ರೊವಿನ್ಸಿಯಲ್ ಕಾಂಗ್ರೆಸ್ ಕಮ್ಮಿಟಿಗೆ ಸೇರಿಸಿಕೊಳ್ಳಬೇಕೆಂಬುದು ಸಭೆಯಲ್ಲಿ ಮಂಜೂರಾದ ಕಡೇ ನಿರ್ಣಯವಾಗಿರುತ್ತದೆ.

ಇಲ್ಲಿಯ ಮಂಗಳೂರು ತಾಲೂಕು ಆಫೀಸಿನಲ್ಲಿ ಕೋರ್ಟು ಫೀಸು ಕಾಗದಗಳು ಸಿಕ್ಕಲು ಆಗುವ ತೊಂದರೆಯ ವಿಷಯ ಮತ್ತು ಅಲ್ಲಿಯ ಅಧಿಕಾರಸ್ಥರು ಆಫೀಸಿಗೆ ಬಂದ ಕೋರ್ಟುಫೀಸು ಕಾಗದಗಳ ಅರ್ಜಿದಾರರನ್ನು ನಡಿಸುವ ವಿಷಯ ವಿ. ಸೋಮಪ್ಪ ಅತ್ತಾವರ ಎಂಬವರು ಬರೆದ ಪತ್ರವು ನಮ್ಮ ಕೈಸೇರಿಯದು. ಈ ವಿಷಯವನ್ನು ಪ್ರಥಮದಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಬರಕೊಳ್ಳುವುದು ವಿಹಿತವೆಂತ ನಮ್ಮ ಅಭಿಪ್ರಾಯವಿರುವದರಿಂದ ಅದನ್ನು ಪ್ರಕಟಿಸಲಿಲ್ಲ.

ರಾ| ಎನ್. ಶೇಷಪ್ಪನವರು ಪ್ರಕಟಿಸಿಯ [illegible] ನೋಟೀಸಿನ ಪ್ರತಿಯು ಈ ಸಂಚಿಕೆಯು [illegible] ಬಂದು ತಪ್ಪಿದ್ದರಿಂದ ಅದನ್ನು ಈ ಸಂಚಿಕೆಯಲ್ಲಿ [illegible]

ಮಂಗಳೂರು ಮುನ್ಸಿಪಾಲಿಟಿಯಲ್ಲಿ [illegible] ಅಂತ್ಯವಾಗುವ ವಾರದಲ್ಲಿ ೩ ಪ್ಲೇಗುಮರಣಗಳು [illegible] ಬೈಲು ವಾರ್ಡಿನಲ್ಲಿ ೧, ಕಂಟೋನಮೆಂಟ [illegible]

ಇದೇ [illegible] ಬೋರ್ಡು ಸಭೆಯು [illegible]

[illegible] ಅಲಂಕರಿಸಿ ಇಂತಹ ಸಭೆಯು ಆಗಾಗ್ಗೆ ನೆರೆದುಬರುತ್ತಿದ್ದರಿಂದ ಉಪಾಧ್ಯಾಯರಿಗುಂಟಾಗುವ ಪ್ರಯೋಜನಗಳನ್ನು ತಿಳಿಯಪಡಿಸಿದರು. ತರುವಾಯ ಈ [illegible] ಮೀಟಿಂಗು ಪ್ರತಿ ತಿಂಗಳಿಗೊಂದುಸಾರಿ ಜರಗಿಸಬೇಕಾಗಿ ಸಭೆಯಲ್ಲಿ ನಿರ್ಣಯದ ಪ್ರಕಾರ ಇದೇ ತಿಂಗಳ ತಾ. ೨೫ರಲ್ಲಿ ಇದೇ ಶಾಲೆಯಲ್ಲಿ ಮುಲ್ಕಿ [illegible] ಸೆಕೆಂಡರಿಶಾಲೆಯ ಹೆಡ್ ಮಾಸ್ತರ್ ಮ! ರಾ! ಪಿ. ಭೋಜರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಇಂದಿನ ಸಭೆಗೆ ೨೪ ಮಂದಿ ಉಪಾಧ್ಯಾಯರೂ ೮ ಮಂದಿ ಉಪಾಧ್ಯಾಯಿನಿಯರೂ ಹಾಜರಿದ್ದರು. ಕಾರ್ನಾಡು ಬಿ. ಶಾಲಾ ಹೆಡ್ ಮಾಸ್ತರ್ ಮ! ರಾ! ಇ. ಬಿ. ಸೋನ್ಸರು ಪ್ರತ್ಯಕ್ಷಪಾಠದ ವಿಷಯ ಒಂದು ವಾದರಿಪಾಠವನ್ನು [illegible] ದರ್ಜೆಯ ಮಕ್ಕಳಿಗೆ ಕಲಿಸಿದನಂತರ ಸೆಕೆಂಡರಿ ಶಾಲಾ ಉಪಾಧ್ಯಾಯ [illegible] ಮ! ರಾ! ಪಿ. ಸೋನ್ಸರು "ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಇರುವ ಸಂಬಂಧ" ಎಂಬುದರ ವಿಷಯ ಒಂದು ಚೆಲೋ ಭಾಷಣವನ್ನು ಮಾಡಿದರು. [illegible] ಅಧ್ಯಕ್ಷರು ಇದೇ ವಿಷಯ ಇನ್ನೂ ಕೆಲವು ಅಮೂಲ್ಯವಾದ ಸಂಗತಿಗಳನ್ನು [illegible] ತಿಳಿಯಪಡಿಸಿ ಸಭೆಯನ್ನು ಮುಕ್ತಾಯಪಡಿಸಿದರು.

ಇಲ್ಲಿಗೆ ರಜೆಮೇಲೆ ಬಂದಿರುವ ಲೆಪ್ಟನೆಂಟ ಬಿ. ಭ. ಮಲ್ಯರವರು ತಮ್ಮ ಕೆಲಸಕ್ಕೆ ಹಾಜರಾಗಲು ನಿನ್ನೆ ಇಲ್ಲಿಂದ ಹೊರಟಿರುವದರಿಂದ, ಈ ಊರಜನರು ಅವರನ್ನು ಸನ್ಮಾನಪೂರ್ವಕವಾಗಿ ಬೇಂಡ್‌ವಾದ್ಯದಿಂದ ಮೊಟಾರ್‌ಸ್ಟೇಶನ ವರೇಗೆ ಮುಟ್ಟಿಸಿ ಸಾಮ್ರಾಜ್ಯಸೇವೆಗಾಗಿ ರಣರಂಗಕ್ಕೆ ಹೊರಟಿರುವ ಮಲ್ಯರವರಿಗೆ ಶ್ರೀದೇವರು ಸಕಲ ಗಂಡಾಂತರಗಳಿಂದಲೂ, ಅಪಾಯಗಳಿಂದಲೂ ತಪ್ಪಿಸಿ ಅವರ ಉದ್ಯೋಗದಲ್ಲಿ ಅಭಿವೃದ್ಧಿಯನ್ನೂ ಶ್ರೇಯಸ್ಸನ್ನೂ ಪಾಲಿಸಲೆಂದು ಪ್ರಾರ್ಥಿಸಿ [illegible] ಕಡೆಯಿಂದ ರಾ! ಪಿ. ಸೊನ್ನರವರು ಹೂಮಾಲೆಯನ್ನು ಹಾಕಿದರು. ಮಲ್ಯರವರು ಊರಜನರ ಪ್ರೇಮಸತ್ಕಾರಗಳಿಗಾಗಿ ಪುರಜನರನ್ನು ವಂದಿಸಿ, ಊರ ಪ್ರಮುಖರಿಗೆ ಹಸ್ತಾಂದೋಲನವನ್ನು ಮಾಡಿ ಮೋಟಾರುಬಸ್ಸಿನಿಂದ ನಿನ್ನೆ ಸಾಯಂಕಾಲ ಇಲ್ಲಿಂದ ತೆರಳಿರುತ್ತಾರೆ. ಇವರಿಗೆ ಇಲ್ಲಿಯ ವೈದ್ಯಉದ್ಯೋಗಸ್ಥರಾದ ಡಾಕ್ಟರ ರಾಮರಾಯರಿಂದ ಹೊಸ ಡಿಸ್ಪೆನ್ಸರಿ ಕಂಪೌಂಡಿನಲ್ಲಿಯೂ, ಇಲ್ಲಿಯ [illegible] ವರ್ಗದಾರ ರಾ! ರಾಮಕೃಷ್ಣಪ್ರಭುವಿಂದ ಅವರ ಭಂಡಸಾಲೆಕಟ್ಟೋಣದಲ್ಲಿಯೂ ವಿಶೇಷವಾದ ಉಪಹಾರಸತ್ಕಾರಗಳು ನಡದಿರುವವು. ಈ ಜಿಲ್ಲೆಯ [illegible] ಸಾರಸ್ವತರಲ್ಲಿ ವಿಲಾಯತಿಗೆ ಹೋಗಿ ವಿದ್ಯಾಭ್ಯಾಸಕೊಂಡಿದವರಲ್ಲಿ ಮಲ್ಯ [illegible] ರೇ ಪ್ರಥಮದವರಾಗಿರುತ್ತಾರೆ. ಅಷ್ಟೇ ಅಲ್ಲ, ಯುದ್ಧದ ಕಾಲದಂಥ ಗಂಡಾಂತರದ ಸಮಯದಲ್ಲಿ ಪ್ರಾಯಾಣಬೆಳಸಿ ರಣಾಂಗಣದಲ್ಲಿ ಸಾಮ್ರಾಜ್ಯ ಸೇವೆಯನ್ನು ಮಾಡಲು ಪ್ರಾಪ್ತವಾದ ಸುವರ್ಣಸಂಧಿಯನ್ನು ಭೀರುತನದಿಂದ ಕಳಕೊಳ್ಳದೆ ಲೆಪ್ಟನೆಂಟ ಉಪ್ಯಾಧಿಯನ್ನು ಪಡೆದು, ಕನ್ನಡನಾಡಿನ ಬ್ರಾಹ್ಮಣರಿಗೆ ರಣರಂಗದಲ್ಲಿ ಕೆಲಸ ಮಾಡುವಷ್ಟು ಶೌರ್ಯ, ಧೈರ್ಯ, ಸಾಹಸಗಳು ಇರುತ್ತವೆಂಬದನ್ನು ತಮ್ಮ ಕೆಲಸದಿಂದ ರುಜುಪಡಿಸಿರುವರು. ಈ ವಿಷಯವು ಈ ಜಿಲ್ಲೆಯ [illegible] ಯಕ್ಕೆ ಸಂತೋಷಕರವೂ ಅಭಿಮಾನಕರವೂ ಆಗಿರುವದು. ಪರಿಸ್ಥಿತಿಯು [illegible] ಕ್ಕೆ ಅನುಸಾರವಾಗಿ ಕೆಲವು ಶತಮಾನಗಳಿಂದ ವ್ಯಾಪಾರ ಉದ್ಯೋಗಗಳಲ್ಲಿಯೇ ತಮ್ಮ ಜೀವಮಾನವನ್ನು ಕಳೆಯುವ ಗೌಡಸಾರಸ್ವತರು ಇತ್ತೀಚೆಗೆ ವಿದ್ಯಾವಿಷಯದಲ್ಲಿ ಹೆಚ್ಚು ಗಮನಕೊಡ ಹತ್ತಿರುವುದು ಸಂತೋಷಕರವಾದ ಸಂಗತಿಯು. ಆದರೆ ವಿಲಾಯತಿಗೆ ಹೋಗಿ ವಿದ್ಯೆಯ ಅತ್ಯುನ್ನತಸ್ಥಾನವನ್ನು ಪಡೆಯುವಷ್ಟರ ಮಟ್ಟಿಗೆ ವಿದ್ಯಾಕಾಂಕ್ಷೆಯ ತೀವ್ರತೆಯು ಗೌಡಸಾರಸ್ವತರಲ್ಲಿ ಈ ವರೇಗೆ ಉದ್ಭವಿಸಲಿಲ್ಲವಿತ್ತು. ಮಲ್ಯರವರ ಆದರ್ಶದಿಂದ ವಿಳಂಬವಾಗಿ ಆದರೂ ಉದಯಿಸಿದ ಈ ನವಚೇತನವು ಬಿಸಿ ಆರದಂತೆ ವಿದ್ಯಾಕಾಂಕ್ಷಿತರಾದ ಸುಶಿಕ್ಷಿತ ತರುಣರು ಲೆಪ್ಟನೆಂಟ ಮಲ್ಯರವರ ಅನುಕರಣೆಯನ್ನು ಮಾಡಿ ತಮಗೂ ತಮ್ಮ ಜ್ಞಾತಿಗೂ ಸ್ವದೇಶಕ್ಕೂ ಶ್ರೇಯೋಭಿವೃದ್ಧಿಯನ್ನು ತರುವರಾಗಿ ಹಾರೈಸುತ್ತೇನೆ. ಯಾಕೆಂದರೆ ಯಾವದೊಂದು ದೇಶದ ಅಥವಾ ಸಮಾಜದ ಏಳಿಗೆಗೆ ಸುಶಿಕ್ಷಿತರೇ ಕಾರಣಭೂತರೆಂದು ಲೋಕದ ಇತಿಹಾಸವು ನಮಗೆ ಸಾರುತ್ತಿರುವುದು. ಆದುದರಿಂದ ದೇಶದಲ್ಲಿ ಸುಶಿಕ್ಷಿತರು ಎಷ್ಟು ಹೆಚ್ಚುವರೊ ದೇಶೋನ್ನತಿಯು ಅಷ್ಟಕ್ಕೆ ಸಮೀಪಿಸುವದು. ಈ ಸರ್ವಸಾಧಾರಣವಾದ ಸಿದ್ಧಾಂತಕ್ಕೆ ನಮ್ಮ ಜಿಲ್ಲೆಯು ಎಂದೂ ಅಪವಾದವಾಗಲಾರದು. ಅಸ್ತು. ಶ್ರೀದೇವರು ಲೆಪ್ಟನೆಂಟ ಮಲ್ಯರವರಿಗೆ ಆಯುರಾರೋಗ್ಯವನ್ನೂ ಶ್ರೇಯಸ್ಸನ್ನೂ ದಯಪಾಲಿಸಲಿ.

ಪತ್ರವ್ಯವಹಾರ.

ಸ್ವಾಮಿ ಕೃಷ್ಣರಾಯರೇ,

ತಾಪು ತಾಲೂಕುಬೋರ್ಡಿನ ಕಾನೂನು ಪುಸ್ತಕಗಳನ್ನು ಚೆನ್ನಾಗಿ ಮಗುಚಿ ನೋಡಿದ್ದೀರಿ ಎಂತಲೂ ತಾಲೂಕುಬೋರ್ಡಿನ ವಹಿವಾಟುಗಳನ್ನು ಚೆನ್ನಾಗಿ ಅರಿತಿರುವಿರಿ ಎಂತಲೂ ತಮ್ಮ ಪ್ರಕಟನೆಯಿಂದ ಸ್ಪಷ್ಟವಾಗುತ್ತದೆ. ದಯಮಾಡಿ ಈ ಕೆಳಗಿನ ಪ್ರಶ್ನೆಗಳಿಗೆ ತಮ್ಮ ಉತ್ತರವನ್ನು ಪ್ರಕಟಿಸಿದರೆ ತಾಲೂಕುಬೋರ್ಡ ವಹಿವಾಟುಗಳ ಅನುಭವವು ಇತರ ಪ್ರಜಾಜನಗಳಿಗೂ ಸಿಕ್ಕುತ್ತದೆ ಮತ್ತು ಸ್ವರಾಜ್ಯದ ತತ್ವಗಳ ವಿಚಾರವು ಅವರ ಮನಸ್ಸಿಗೆ ಹತ್ತಬಹುದು. ಪ್ರಶ್ನೆಗಳು:—

೧. ತಾಲೂಕುಬೋರ್ಡು ಆಫೀಸಿನಲ್ಲಿ ಕೆಲಸ ಹೆಚ್ಚಿದೆ ಎಂಬುದು ಯಾವಾಗ ಗೊತ್ತಾಯಿತು?

೨. ಈ ವಿಷಯವಾಗಿ ಸೂಚನೆಯೇನಾದರೂ ನಿಮ್ಮ ವರ್ಷಾವಧಿ ಆಡಳಿತ ರಿಪೋರ್ಟಿನಲ್ಲಿ ಇದೆಯೊ?

೩. ತಾಲೂಕುಬೋರ್ಡು ವಹಿವಾಟುಗಳಲ್ಲಿ ೬ ತಿಂಗಳಿಗೆ ಹಂಗಾಮಿ ಇಸಮನ್ನು ನಿರ್ಮಿಸುವ ಅಧಿಕಾರವು ಪ್ರಸಿಡೆಂಟರಿಗೆ ಇದೆ ಎಂದು ಬರೆಯುತ್ತೀರಿ. ಹಾಗೆ ಇಸಂ ನಿರ್ಮಿಸಿದ ಸಂಗತಿಯನ್ನು ಈ ಆರು ತಿಂಗಳೊಳಗೆ ಯಾವಾಗಲಾದರೂ ಬೋರ್ಡಿನ ಮೆಂಬರರ ತಿಳುವಳಿಕೆಗೆ ತರಬೇಕೆಂಬ ನಿಯಮವಿದೆಯೊ?

೪. ಹಂಗಾಮಿಯಾಗಿ ಎಪ್ರಿಲ್ ತಿಂಗಳಲ್ಲಿ ನಿರ್ಮಿಸಿದ ಇಸಂ ಕಾಯಂ ಮಾಡಿಸಬೇಕಾಗಿ ಮೇ ತಿಂಗಳಲ್ಲಿ ಮದ್ರಾಸು ಗವರ್ನಮೆಂಟಿನವರಿಗೆ ಬರೆದುಕೊಳ್ಳಬೇಕೆಂದು ನಿಯಮವುಂಟೊ? ಅಥವಾ ವಾಡಿಕೆಯಾಗಿ ಇಂಥ ಇಸಮುಗಳನ್ನು ಕಾಯಂ ಮಾಡುವುದಕ್ಕೆ ಬರೆಯುವ ವಾಯಿದೆ ಯಾವುದು?

೫. ಈ ಕೆಲಸಕ್ಕೆ ಹಚ್ಚಿದ ಉಮೇದ್ವಾರನ ಅರ್ಹತೆಯು ಟ್ರೈನಿಂಗ್ ಶಾಲೆಯ ಹೆಡ್‌ಮಾಸ್ತರರ ಮೂಲಕ ಬಂದಿತ್ತೊ ಮತ್ತು ಬೇರೆ ಇಲಾಖೆಗಳಲ್ಲಿ ಕೆಲಸವಿರುವವರಿಗೆ ತಾಲೂಕುಬೋರ್ಡು ಆಫಿಸಿನಲ್ಲಿ ನೇಮಕವಾಗುವುದಾದರೆ ಅಂಥಾ ಉಮೇದ್ವಾರರು ಮೊದಲು ಕೆಲಸ ಮಾಡುತ್ತಿದ್ದಲ್ಲಿಂದ ಅಪ್ಪಣೆಪಡಿಯಬೇಕಿಲ್ಲವೆಂದು ಗವರ್ನಮೆಂಟ್ ಆರ್ಡರ್ ಇದೆಯೊ?

೬. ಈ ಕೆಲಸಕ್ಕೆ ನೇಮಕಮಾಡುವ ಮೊದಲು ಇಸಂ ಖಾಲಿ ಇದೆ ಎಂಬುದನ್ನು ಪ್ರಕಟ ಮಾಡಿಯುಂಟೊ?

೭. ಈ ಹುದ್ದೆಗೆ ಇಸಂ ಅಗತ್ಯವಿದೆ ಎಂದು ತೋರಿಸುವದಕ್ಕೆ ಯಾವ [illegible] ತಾಲೂಕುಬೋರ್ಡು ಮೀಟಿಂಗಿನ ಮುಂದೆ ಬಂತು?

[illegible] ಮ. ರಾ. ಕೃಷ್ಣರಾಯರು ಉತ್ತರ ದಯಪಾಲಿಸಲಿ.

ಪ್ರತಿಸ್ಪರ್ಧಿ.

[illegible]

[illegible] ಮ. ರಾ. [illegible]

ಅವರ ಹೆಸರೇ ಮೊದಲು ನನ್ನ ನೆನಪಿಗೆ ಬಂತು. ಆದರೆ ಕಡೆಗೆ ನಿಮ್ಮ ಬಾತ್ಮೀದಾರರು ಮ. ರಾ. ಕಕ್ಕಿ ಕೃಷ್ಣರಾಯರೆಂದು ನಾನು ಮಂಗಳೂರಲ್ಲಿ ಇದ್ದಾಗ ತಿಳಿದುಬಂತು. ಇದಲ್ಲದೆ ಸದ್ರಿಯವರು ಈಗ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಬದ್ಲಿ ಹೆಡ್‌ಮಾಸ್ತರರಾಗಿದ್ದಾರೆಂದೂ ಗೊತ್ತಾಯಿತು. ಅವರು ಸ್ವತಃ ಉಪಾಧ್ಯಾಯರಾಗಿದ್ದದರಿಂದಲೂ ತಾಲೂಕುಬೋರ್ಡು ಮೆಂಬರರಾಗಿರುವದರಿಂದಲೂ ಮ. ರಾ. ಕೊಂಟ್ರಾಕ್ಟರ್ ಕೃಷ್ಣರಾಯರಿಗಿಂತಲೂ ನಮ್ಮಂಥ ಬಡ ಉಪಾಧ್ಯಾಯರಿಗೆ ಇನ್ನೂ ಸಮೀಪವೆಂದು ನನ್ನಲ್ಲಿ ಒಂದು ಬಗೆಯ ನಂಬಿಕೆಯುಂಟಾಗಿದೆ. ಆದುದರಿಂದ ತಮ್ಮ ಪತ್ರಮೂಲಕ ಒಂದೆರಡು ಸೂಚನೆಗಳನ್ನು ಕೊಟ್ಟಲ್ಲಿ ನಾನು ನನ್ನ ಹೆಸರನ್ನು ಹೇಳಲಿಕ್ಕೂ ಮತ್ತು ಅವರಿಗೂ ಅವರು ಹೇಳಬಹುದಾದ ಯಾರಿಗಾದರೂ ಹೋಗಿ ನೋಡಲಿಕ್ಕೆ ಸಿದ್ಧನಿದ್ದೇನೆ. ನನ್ನಂಥ ಬಡ ಉಪಾಧ್ಯಾಯರ ಗೋಳನ್ನು ಯಾರೂ ಕೇಳುವುದಿಲ್ಲ. ಒಂದು ಕಡೆಯಿಂದ ಒಂದು ಕಡೆಗೆ ವರ್ಗವಾದ ಹುಕುಂ ಬಂದೇ ಬಿಡುತ್ತದೆ. ಈ ಮುಂಚೆ ಮಂಗಳೂರ [illegible] ಸಬ್ ಅಸಿಸ್ಟಾಂಟರಾಗಿದ್ದ ಮ. ರಾ. ಶಂಕರ ಮಂಗೇಶರಾಯರ ಬಳಿಯಲ್ಲಿ ನನ್ನ ಅಹವಾಲುಗಳನ್ನು ಹೇಳಿಕೊಂಡಾಗ "ನನ್ನ ಹತ್ತರ ಬಂದು ಮಾತನಾಡಿ ಪ್ರಯೋಜನವಿಲ್ಲ. ಈಗ ಎಲ್ಲವೂ ತಾಲೂಕು ಬೋರ್ಡಿನಿಂದಲೇ ಮಾಡಲ್ಪಡುತ್ತದೆ. ಅದೇ ಕ್ರಮವು ಒಳ್ಳೇದೆಂದು ನಾನು ಬರೆದಿದ್ದೇನೆ" ಎಂದು ಹೇಳಿ, ಇನ್ನೂ ನಾವು ನಿಂತರೆ "ಹೋಗಿ, ಹೋಗಿ" ಎಂದು ಗದರಿಸುತ್ತಿದ್ದರು. ಮ. ರಾ. ತಾಲೂಕುಬೋರ್ಡ ಪ್ರಸಿಡೆಂಟರಿಗೆ ಹೆದರಿ ಹೆದರಿ ಹೋಗಿ ಕಂಡೆನು. "ಎಲ್ಲವೂ ವಿದ್ಯಾಇಲಾಖೆಯ ಶಿಫಾರಸಿನ ಮೇಲೆ ಕೊಂಡಿದೆ, ಹೋಗಲಿಕ್ಕೆಮ" ಎಂದು ಅಪ್ಪಣೆ ದೊರೆಯಿತು. ಈಗ ನೇಮಕವಾದ ಸಬ್ ಅಸಿಸ್ಟಾಂಟರು ತೀರಾ ಹೊಸಬರು ಅವರ ಬಳಿಯಲ್ಲಿ ಮಾತನಾಡಿದರೂ ಏನೂ ಪ್ರಯೋಜನ ಸಿಕ್ಕುವದಿಲ್ಲ. [illegible]

[illegible]

ಬಡ ಉಪಾಧ್ಯಾಯ.

ಪತ್ರಿಕಾಕರ್ತರೇ,

ಸ್ವದೇಶಾಭಿಮಾನಿಯು ಕಳೆದ ಸಂಚಿಕೆಯಲ್ಲಿ ಕೆ. ಗೋಪಾಲಕೃಷ್ಣರಾಯರು, ಪ್ಲೀ., ಕೆ. ಮೂರ್ತಿಗಳು ಇವರೊಳಗೆ ನಿಶ್ಚಿತವಾದ ಪಂದ್ಯಕ್ಕೆ ಗೋಪಾಲಕೃಷ್ಣರಾಯರು ಬರಲಿಲ್ಲ. ಪಂಥಕ್ಕಿಟ್ಟ ಸಂಕಲೆಯನ್ನು ಮೂರ್ತಿಗಳು ಕೆನರಾ ಹೈಸ್ಕೂಲಿನ ಒಬ್ಬ ವಿದ್ಯಾರ್ಥಿಯಿಂದ ತುಂಡುಮಾಡಿಸಿದರು. ಗೋಪಾಲಕೃಷ್ಣರಾಯರು ನಿಶ್ಚಿತ ಸ್ಥಳವನ್ನು ಸಿಕ್ಕದಂತೆ ಪ್ರಯತ್ನಿಸಿದ್ದರಿಂದ ಅವರ ವಿಷಯದಲ್ಲಿ ಅನುಮಾನ ಕಾಣುತ್ತದೆ, ಎಂಬಿತ್ಯಾದಿಯಾಗಿ ಒಬ್ಬ ಬಾತ್ಮೀದಾರರು ಕೊಟ್ಟಿದ್ದರು.

ಇರಲಿ, ಬಾತ್ಮೀದಾರರಿಗೆ ಗೋಪಾಲಕೃಷ್ಣರಾಯರ ಮೇಲೆ ಅನುಮಾನ ಕಂಡಿತು, ಯಾಕೆ ಕಾಣಬಾರದು? ಅವರು ಅನುಮಾನದೃಷ್ಟಿಯಿಂದ ನೋಡಿದರೆ, ಅನುಮಾನವೆ ಕಂಡೀತು. ಆದರೆ ಪಂಥಕ್ಕಾಗಿಟ್ಟ ಬಲವಾದ ಸಂಕಲೆಯನ್ನು ಒಬ್ಬ ಚಿಕ್ಕ ವಿದ್ಯಾರ್ಥಿ ಕಡಿದದ್ದರಲ್ಲಿ ಇವರಿಗೇನೂ ಅನುಮಾನ ಕಾಣದಿದ್ದದ್ದು ನಮಗೆ ಅನುಮಾನವನ್ನುಂಟುಮಾಡುತ್ತದೆ. ಸ್ವದೇಶಾಭಿಮಾನಿ ಆಫೀಸಿನಿಂದ ೧॥ ಫರ್ಲಾಂಗಿನೊಳಗೆ ನಡೆದ ವಿಷಯವನ್ನು ಈ ಬಾತ್ಮೀದಾರರು ಕೂಡಲೆ ಬಂದು ಸುಳ್ಳುಸುಳ್ಳೆ ವರ್ತಮಾನ ಕೊಟ್ಟದ್ದರಿಂದ ಇವರ ಧೈರ್ಯವು ನಮಗೆ ಆಶ್ಚರ್ಯವನ್ನು ಉಂಟುಮಾಡುತ್ತದೆ.

ಪಂಥಕ್ಕಿಟ್ಟ ಸಂಕಲೆಯನ್ನು ವಿದ್ಯಾರ್ಥಿಯು ಕಡಿಯಲಿಲ್ಲ. ಅವನು ಕಡಿದದ್ದು ಇನ್ನೊಂದು ಸಪೂರ ಸಂಕಲೆ. ಗೋಪಾಲಕೃಷ್ಣರಾಯರು ಪಂಥಕ್ಕೆ ಬಾರದಿದ್ದ ಕಾರಣವನ್ನು ಮೊದಲಾಗಿಯೇ ಅವರು ನೋಟೀಸಿನ ಮೂಲಕ ಸರ್ವರಿಗೂ ತಿಳಿಸಿದ್ದಾರಷ್ಟೆ. ಆದರೂ ತಿರುತಿರುಗಿ ಹೇಳುವದೇನೆಂದರೆ:—ವಿದ್ಯಾರ್ಥಿಯಿಂದ ಪಂಥಕ್ಕಿಟ್ಟ ಸಂಕಲೆಯನ್ನು ಕಡಿಸಿಬಿಟ್ಟದ್ದು ನಮ್ಮ ಬಾತ್ಮೀದಾರರ ಪಕ್ಷಪಾತಬುದ್ಧಿಯಲ್ಲದೆ ಬೇರೆಯಲ್ಲ.

ಇನ್ನೊಬ್ಬ ಬಾತ್ಮೀದಾರ.

ಮಾಜಿ ಮರಕಡ ಅಪ್ಪಯ್ಯ ಸೆಟ್ರುವರ ಸ್ಮಾರಕಫಂಡು,

ಬಂಟರ ಯೂನೆ ನಾಡವರ ಸಂಘದ ಮೆಂಬರರಿಗೂ, ವಿದ್ಯಾರ್ಥಿಸಂಘದ ಮೆಂಬರರಿಗೂ, ಶ್ರೀರಾಮಕೃಷ್ಣ ವಿದ್ಯಾರ್ಥಿಭವನದ ಪೋಷಕರ ಮತ್ತು ವಿದ್ಯಾರ್ಥಿಗಳ ವಿಜ್ಞಾಪನೆ—

ಸ್ವರ್ಗಸ್ಥ ಮರಕಡ ಅಪ್ಪಯ್ಯ ಸೆಟ್ರುವರು ವಿದ್ಯಾರ್ಥಿಸಂಘದ ಪ್ರೋತ್ಸಾಹಕರೂ ಬಂಟರ ಯೂನೆ ನಾಡವರ ಸಂಘದ ಪ್ರಥಮ ಕೋಶಾಧಿಕಾರಿಗಳೂ ಸ್ಥಾಪಕರೂ [illegible] ಸಂಘದ [illegible] ಕಾರ್ಯದರ್ಶಿಗಳಾಗಿದ್ದ ಮ. ರಾ. ಸೀತಾರಾಮ ಸೆಟ್ರುವರೆ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನವನ್ನು ಸ್ಥಾಪಿಸುವದರಲ್ಲಿ ಪಟ್ಟಿರುವ ಶ್ರಮವು ನಮಗೆಲ್ಲರಿಗೂ ತಿಳಿದಿರುವುದು. ಮ. ಸೀತಾರಾಮ ಸೆಟ್ರುವರ ಹೆಸರನ್ನೂ ಅವರ ಕೆಲಸವನ್ನೂ ನೀವು ಈ ಮೊದಲೇ ಚಿರಸ್ಮರಣೀಯವಾಗಿ ಮಾಡಿರುವಿರಿ. ಆದರೆ ಮ. ಅಪ್ಪಯ್ಯ ಸೆಟ್ರು ಸ್ಮರಣೆಯನ್ನು ಜ್ಞಾಪಕದಲ್ಲಿರಿಸುವದಕ್ಕೆ ಅವರ ವಾರಿಸುದಾರರಲ್ಲದೆ ನಾವು ಯಾವ ಕೆಲಸವನ್ನೂ ಈ ತನಕ ಮಾಡಿಲ್ಲ. ಸಂಘದವರ ತಿಳುವಳಿಕೆಗೆ ಕೂಡಾ ಈ ವಿಷಯವು ಬಾರದೆ ಇದ್ದದ್ದು ತುಂಬಾ ಖೇದಕರವಾಗಿ ಕಂಡುಬಂದದ್ದರಿಂದ ಇನ್ನೂ ಸುಮ್ಮಗಿರುವುದು ಕರ್ತವ್ಯವಲ್ಲವೆಂಬ ವಿಚಾರವನ್ನು ಬಂಟರ ವಿದ್ಯಾರ್ಥಿ ಸಂಘದ ಕೆಲವು ಮೆಂಬರರು ಮನಸ್ಸಿಗೆ ತಂದು ಅವರ ಸಮ್ಮತಿಯನ್ನು ಪಡೆದು ಈ ವಿಜ್ಞಾಪನೆಗೆ ಕೈಕೊಡಬೇಕಾಯಿತು.

ಸ್ವಜಾತಿ ಗ್ರಹಸ್ಥರ ಸಹಕಾರವು ಹೆಚ್ಚಿಗೆ ದೊರೆಯದೆ ಇದ್ದ ಕಾಲಕ್ಕೆ ಮ. ರಾ. ಅಪ್ಪಯ್ಯ ಸೆಟ್ರುವರ ಒಂದು ಭಾವಚಿತ್ರವನ್ನಾದರೂ ತಯಾರಿಸಿ ಬರುವ ಮುಹಾಸಭೆಯ ಅಧ್ಯಕ್ಷರಿಂದ ಪ್ರತಿಷ್ಠಮಾಡಿಸಿ ನಮ್ಮ ಹೊಸ ಸಭಾಸದನದಲ್ಲಿ ಇಡಬೇಕೆಂದು [illegible] ಈ ನಮ್ಮ ಕೆಲಸಕ್ಕೆ ಸುಮಾರು ೧೦೦. ರೂಪಾಯಿ ಖರ್ಚು ತಗಲುವುದು. [illegible]

[illegible]

ಭಾವಚಿತ್ರಕ್ಕೆ ಖರ್ಚಾಗಿ ಮಿಕ್ಕುಳಿದ ಹಣವನ್ನು ಭವನದ ಆಡಳಿತ ಕಮಿಟಿಯವರು ನಿರ್ಣಯಿಸುವ ಮೇರೆಗೆ ಉಪಯೋಗಿಸಲಾಗುವದು. ಸಹಾಯವನ್ನು ಈ ಕೆಳಗೆ ದಸ್ಕತುಮಾಡಿದವರಿಗೆ ಕಳುಹಿಸಿ ನಮ್ಮ ಉದ್ದೇಶವನ್ನು ತ್ವರೆಯಿಂದ ನೆರವೇರಿಸಬೇಕಾಗಿ ಸವಿನಯ ಪ್ರಾರ್ಥನೆಯಾಗಿರುತ್ತದೆ.

ಶ್ರೀರಾಮಕೃಷ್ಣ ವಿದ್ಯಾರ್ಥಿಭವನ,
ಮಂಗಳೂರು, ತಾ. 28-8-17.

ಮುಲ್ಕಿ ರಾಮಣ್ಣ ಸೆಟ್ಟಿ.
ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಮೋಕ್ತೇಸರರು.

ದರ್ಬಾರು ಇನಾಮು ಪರೀಕ್ಷೆ: ಪುತ್ತೂರು.

ಮೇಲ್ಕಂಡ ಪರೀಕ್ಷೆಯು ಈ ವರ್ಷ (೧) ಪುತ್ತೂರು; (೨) ಉಪ್ಪಿನಂಗಡಿ; (೩) ವಿಟ್ಲ; (೪) ಬೆಳ್ತಂಗಡಿ; (೫) ಸುಳ್ಯ; (೬) ಬೆಳ್ಳಾರೆ; (೭) ಪಂಜ; ಈ ಸ್ಥಳಗಳಲ್ಲಿ ಬೋರ್ಡು ಶಾಲಾಕಟ್ಟೋಣಗಳಲ್ಲಿ ಬರುವ ಅಕ್ಟೋಬರ ತಾ. ೨೦ನೇ ಶನಿವಾರ ಬೆಳಿಗ್ಗೆ ಘಂಟೆ ೧೦ ರಿಂದ ೧೨ರ ವರೆಗೆ, ಮತ್ತು ಮಧ್ಯಾಹ್ನ ಘಂಟೆ ೨ರಿಂದ ೪ರ ವರೆಗೆ, (೧) ಸಾಮಾನ್ಯ ತಿಳುವಳಿಕೆ. (೨) ಕನ್ನಡ ಭಾಷಾಜ್ಞಾನ. (೩) ಗಣಿತ. (೪) ಶಾಸ್ತ್ರ ವಿಷಯ, ಈ ನಾಲ್ಕು ವಿಷಯಗಳಲ್ಲಿ ನಡಿಸೋಣಾಗುವದು. ಉಪ್ಪಿನಂಗಡಿ ತಾಲೂಕಿನ ಪ್ರತಿಯೊಂದು ಪ್ರಾಥಮಿಕ ಶಾಲೆಯಿಂದ ೪ನೇ ಮತ್ತು ೫ನೇ ದರ್ಜೆಯ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಸ್ಪರ್ಧಿಸಲು ಅರ್ಹರಾಗಿರುತ್ತಾರೆ. ಆದರೆ ಮೇಲ್ಕಂಡ ಒಂದೊಂದು ದರ್ಜೆಯಿಂದ ಮೂವರಿಗಿಂತ ಹೆಚ್ಚು ಮಂದಿ ವಿದ್ಯಾರ್ಥಿಗಳನ್ನು ಸ್ಪರ್ಧಿಸಲು ಬಿಡೋಣಾಗಲಿಕ್ಕಿಲ್ಲ. ವಿದ್ಯಾರ್ಥಿಗಳು ಕಾಗದ, ಮಸಿ, ಲೇಖನಿ ಮುಂತಾದವುಗಳನ್ನು ತಾವೇ ಒದಗಿಸಿಕೊಳ್ಳಬೇಕು. ಪರೀಕ್ಷೆಗೆ ಬರಕೊಳ್ಳುವ ಅರ್ಜಿ ಛಾಪಾಫೋರ್ಮಿನಲ್ಲಿ ಆಗಬೇಕೆಂತಿಲ್ಲ. ಫುಲ್‌ಸ್ಕೇಪು ಕಾಗದದ ಮೇಲೆ ಒಂದೇ ಬದಿಯಲ್ಲಿ (೧) ವಿದ್ಯಾರ್ಥಿಯ ಸಂಪೂರ್ಣ ಹೆಸರು, (೨) ಪ್ರಾಯ, (೩) ತಂದೆ ಯಾ ರಕ್ಷಕನ ಹೆಸರು, (೪) ಶಾಲೆಯ ಹೆಸರು. (೫) ಯಾವ ದರ್ಜೆ. (೬) ಕಳೆದ ಸಪ್ಟಂಬರ ಆರಂಭದಿಂದ ಈ ವರ್ಷದ ಆಗೋಸ್ತು ಅಖೈರು ವರೆಗೆ, (a) ಶಾಲೆ ನಡೆದ ದಿನಗಳು. (b) ವಿದ್ಯಾರ್ಥಿ ಹಾಜರಿದ್ದ ದಿನಗಳು, (೭) ಪರೀಕ್ಷೆಗೆ ಹಾಜರಾಗುವ ಸ್ಥಳ, (೮) ಸದರಿ ಮಿತಿಯ ತಗಲು ಶಾಲಾ ರಿಜಿಸ್ಟರಿಗೆ ಸರಿಯಾಗಿದ್ದು ಸಿದ್ಧವಾಗಿರುತ್ತವೆಯೆಂದು ಮುಖ್ಯೋಪಾಧ್ಯಾಯರ ದೃಢಪತ್ರಿಕೆ— [illegible] ತಪಸೀಲುಗಳನ್ನು ಕಾಣಿಸಿ ಕೆಳಗೆ ದಸ್ಕತು ಹಾಕಿದವರಿಗೆ ಸಪ್ಟಂಬರ ತಿಂಗಳ ಅಖೈರಿನ ಒಳಗೆ ಅರ್ಜಿ ಮುಟ್ಟುವಂತೆ ಕಳುಹಿಸತಕ್ಕದ್ದು.

ವರ್ಗದಾರರ ಸಂಘ,
ಪುತ್ತೂರು, ತಾ. ೨೫-೮-೧೭.

ಬೈಂದೂರು ಆನಂದರಾವ್.
ಉಪಕಾರ್ಯದರ್ಶಿ.

ಪ್ರಕಟಣೆ.

ಬ್ರಹ್ಮಾವರ ಕಸಬೆಯಲ್ಲಿರುವ ಪೇಟೆ ಮಧ್ಯ ಇರುವ ಗತ ಸರ್ವೋತ್ತಮರಾಯರ ಮನೆ ಕಟ್ಟೋಣ ಸ್ಥಳ ವಗೈರೆಯನ್ನು ಮಾರಾಟಕ್ಕೆ ತೆರೆಯಲ್ಪಟ್ಟಿದೆ. ಸದರಿ ಮನೆಯು ಸುಮಾರು ೪೦ ಅಂಕಣ ಮುಚ್ಚಿಗೆವುಳ್ಳ ಅವ್ವಲ್‌ತರದ ಮೋಪುಗಳು ಸಹಾ ಉಳ್ಳದ್ದು. ಇದನ್ನು ಗಿರಾಕಿಗಳಿಗೆ ಬೇಕಾದಷ್ಟೆ ಅಂಶವನ್ನು ವಿಂಗಡಿಸಿ ಕೊಡುವದಾಗಿ ಈ ಮೂಲಕ ತಿಳಿಸಲಿಕ್ಕೆ ತುಂಬಾ ಸಂತೋಷಪಡುತ್ತೇನೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಯಚ್. ವೆಂಕಟಕೃಷ್ಣ ಉಪಾಧ್ಯಾಯರು
ಪೋಸ್ಟು ಬ್ರಹ್ಮಾವರ.

ಜಿನಸು ಧಾರಣೆ.

(ರಖಂ).

ಮುಷ್ಟಿ ಅಕ್ಕಿ	6— 6—0	ರಿಂದ	6—13—0
ಗುಡ್ಡು ಸುಗ್ಗಿ	6— 2—0	,,	6— 6—0
ರಾಶಿ	5—14—0	,,	6— 2—0
ಅವ್ವಲ್ ಬೆಳ್ತಿಗೆ	6— 9—0	,,	6—12—0
ಗುಡು ಬೆಳ್ತಿಗೆ	6— 0—0	,,	6— 4—0
ರಂಗೂನು ಬೆಳ್ತಿಗೆ ಗೋಣಿ ೧ರ	10— 8—0	,,	10—12—0
ಗೋದಿ ಗೋಣಿ ೧ರ	20— 0—0	,,	20— 8—0
ಹುರುಳಿ ಗೋಣಿ ೧ರ	6—10—0	,,	7—12—0
ಕಡಲೆ ಗೋಣಿ ೧ರ ಬೊಂಬ್ಲೆ	9— 8—0	,,	10— 8—0
ತೊಗರಿ ಗೋಣಿ ೧ರ			10— 8—0
ತೊಗರಿಬೇಳೆ ಗೋಣಿ ೧ರ 11—0—0	12— 8—0	,,	15— 8—0
ಉದ್ದು ಗೋಣಿ ೧ರ	11— 8—0	,,	11—12—0
[illegible]		,,	42— 8—0
ಉಪ್ಪು ಗೋಣಿ ೧ರ		,,	5—14—0
ಕೊಬ್ರಿ ಖಂಡಿ ೧ರ	70— 0—0	,,	75— 0—0
ಬೆಳ್ಳುಳ್ಳಿ ಖಂಡಿ ೧ರ	22— [illegible]—0	,,	23— 0—0
ಎಳ್ಳೆಂಡಿ ಖಂಡಿ ೧ರ ಬೊಂಬ್ಲೆ	28— 2—0	,,	32— 8—0
ಕೊಬ್ರಿ ಎಣ್ಣೆ ಮಣ ೧ರ	5— 6—0	,,	5—12—0
ಎಳ್ಳೆಣ್ಣೆ ಮಣ ೧ರ([illegible])		,,	4—12—0
[illegible] ಎಣ್ಣೆ ಶೆಟ್ಟಿಗೆ ೧ರ	[illegible]—12—0	,,	7— 9—0
ಮೋರಿಸ್ ಸಕ್ಕರೆ ಮಣ ೧ರ	[illegible]— 4—0	,,	5— 6—0
ಕಾಫಿ ಖಂಡಿ ೧ರ	[illegible]0— 0—0	,,	165— 0—0
[illegible] ಖಂಡಿ ೧ರ	72— 0—0	,,	78— 0—0
ಗೇರುಬೀಜ ಮುಡಿ ೧ರ	1— 8—0	,,	1—10—0
[illegible] ಖಂಡಿ ೧ರ	105— 0—0	,,	110— 0—0
[illegible] ಮಣ ೧ರ	31— 0—0	,,	34— 8—0
[illegible]		,,	34— 0—0
[illegible]	23— 8—0	,,	25— 4—0
[illegible]			6— 2—0
[illegible]		,,	235— 0—0

K. B. RELE & Cs.,—BOMBAY

Estd. 1888. ಕೆ. ಬಿ. ರೇ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ಕಜ್ಜಿ, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರಿ ಮತ್ತು ಹಟಮಾರಿ ಗಜಕರ್ಣವು ಈ ಮುಲಾಮಿನ ಒಂದೆ ಸಲ ಸಾರಿ ಹಚ್ಚೋಣದಿಂದಲೇ ಸ್ವಚ್ಛವಾಗುತ್ತವೆ. ೨೦—೨೫ ವರ್ಷಗಳ ಹಳತ, ಸ್ಥಿಮಿನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಡಬ್ಬಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಡಬ್ಬಿಗಳ ವರೆಗೆ ಒಂದೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷ [illegible]ವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದ [illegible](Syphilis) ಉಪದಂಶ (ಗರಮಿ)ಯಿಂದ ಮೈಮೇಲೆ ಉಬ್ಬುವ [illegible] ಬಿಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀ[illegible] ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, [illegible] ನೋವೋಣ, ಕೈಕಾಲು ಬಡಿಯೋಣ, ಪ್ರಮೇಹ (ಪರ[illegible]) ಕೈಕಾಲುಗಳ ಸಂದುಗಳು ನೋವೋಣ, ಕೆಲ ಕೈಕಾಲುಗಳು [illegible] ಕೈಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗ[ಳು ಗುಣ]ವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ [illegible] ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧ [illegible] ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ಕಕ್ಕೊಳ್ಳುವವರಿಗೆ ಯೋಗ್ಯ ಕಮಿಶನ್.

ಕೆ. ಬಿ. ರೇಲೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾವು ತಯಾರುಮಾಡುವ ಆರೋಗ್ಯವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇವೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, [illegible] 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದೆ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು. ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟಿನವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,

ಸುಗಕಾರಿ, ಮೈಸೂರು.

ಹಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿ.

ಪ್ರತಿವರ್ಷವೂ ಲಕ್ಷಾಂತರ ಶೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜೀಲ್ಯಾಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ, ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಶೀಸೆಯು ನಿಮ್ಮ ಮನೆಯಲ್ಲಿದ್ದರೆ ಎಷ್ಟು ವಾಸಿಗೂ ವೈದ್ಯರ ಸಮಯವನ್ನು ಕಾದು ಮರೆಯಿಡುವುದು ನಿಜವಾಗಿಯೂ ತಪ್ಪುವದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಶೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 1—8—0.

ಪ್ರತಿ 12 ಶೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 2—12—0.

ಪ್ರತಿ 25 ಶೀಸೆಗಳನ್ನು ಒಟ್ಟಿಗೆ ಕರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಶೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಶೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಬುಡ್ಡಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ ರಾ ರಾ ಡಾಕ್ಟರ್ [illegible] ಆಯುರ್ವೇದಿಕ್ ಯೂನಿವರ್ಸಿಟಿ, ಗ್ರ್ಯಾಜುಯೇಟ್ ಎಸ್. ವೈ. ಇನ್‌ಸ್ಟಿಟ್ಯೂಟ್ ಆಫ್ [illegible] ಯುನೈಟೆಡ್ ಸ್ಟೇಟ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಕಾಟಿಶ್ [illegible] ಲಂಡನ್ [illegible] ಎಗಿಯರ್‌ವೇನ್ ನಂ. 2, ಬೆಂಗಳೂರು [illegible] ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವದರಲ್ಲಿ [illegible] ಅಜೀರ್ಣ, ಮಲಬದ್ಧತೆ, ಹೊಟ್ಟೆಯ ನೋವು, [illegible] ಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. [illegible]

[illegible]

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ ಕೆಲವು ಔಷಧಗಳು.

[illegible] ಯಂತಹ ಹಲವು ಬಗೆಯ ರೋಗಿಗಳು [illegible] ಶ್ರೀಮಂತರು ಬರೆದಿರುತ್ತಾರೆ.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗವು ಹತ್ತಿಕೊಳ್ಳದು.

ಕ್ರಯ 50 ಬಿಲ್ಲೆಗಳ ಶೀಸೆಯೊಂದಕ್ಕೆ ರೂ. 1-8-0. ವಿ. ಪಿ. ಬೇರೆ.

ಏಂಟಿಸ್ನೇಕ್ ಬೈಟ್:- ಈ ಔಷಧಿಯು ನಾಗರಹಾವು, ಕೊಳಕುಹಾವು ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರಹಾವು ಕಡದವರು ಒಂದೇ ತಾಸಿನಲ್ಲಿ, ಚೇಳು ಕಡದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಶೀಸೆ 1ಕ್ಕೆ ರೂ. 1. ವಿ.ಪಿ. ಬೇರೆ.

ಟೊರಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಕುರುಹುಗಳು ಕಂಡರೆ ತಿಳಿದು ಯಾ ತಿಳಿಯದ ರೀತಿಯಲ್ಲಿ ಧಾತು ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೊರಕಬ್ ಸೇವಿಸಿರಿ.

ಕ್ರಯ ಶೀಸೆ 1ಕ್ಕೆ ರೂ 1—8—0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರೊಪ್ಸ್:— ಇದು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳನ್ನು ತಪ್ಪದೆ ಗುಣ ಮಾಡುತ್ತದೆ. ವಿಶೇಷ ಮಾಹಿತಿಗೆ ಬರಕೊಳ್ಳಿರಿ.

ಕ್ರಯ ಶೀಸೆ 1ಕ್ಕೆ 0—6—0. ವಿ. ಪಿ. ಬೇರೆ.

[illegible] ಇಕ್ಲಿಪ್ಸ್ ಬಾಮ್, ತಾಜಾ ಯುಕಲಿಪ್ಟಸ್ ತೈಲ, ಮೂಲವ್ಯಾಧಿ, ಅಂಧ್ರವಾಯು, ಅಂಡವೃದ್ಧಿ ಮೊದಲಾದ ಹಲವು ರೋಗಗಳಿಗೆ ಬೇಕಾದ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್ ಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ಈ "ಸಾಲಾಬ್ ಮಿಸ್ರಿ ಮುರಬ್ಬಾ"ದಿನ ಸೇವನೆ ಯಿಂದ — ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್ ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟಿದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0. ಟಪ್ಪಾಲು ಖರ್ಚು ೧ ಡಬ್ಬಾದಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,

೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ಮಾಡುವುದಕ್ಕಾಗಿ [illegible] ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟ್, ಕೋಡು, ಶಾಸನ, ಕಾನೂನಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯೂ (ಮುಲ್ಕಿ) ಎಂದು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು [illegible]

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳ

ಸುಮಾರು ೩೦೦ ವರುಷಗಳ ಹಿಂದೆ ದಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಸಭೆಯಲ್ಲಿ ವಿದ್ವನ್ಮಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ಇರುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡೆದಂಥ ಚಾತುರ್ಯವಾದ ವಿನೋದ ಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವದಕ್ಕೆ ಒಳ್ಳೇ ಸಾಧನವಿದು. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಸುಂದರವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರೆ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಸುಖವನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗಲು ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಸುಂದರವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪಾಲು ಹಾಸಲು 4 ಆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಷ.

೧,೦೦೧ ದಿನ ರಾತ್ರಿಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋಹರವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥವುಗಳನ್ನು ನಮ್ಮ ಕರ್ನಾಟಕ ದೇಶೀಯರು ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬ್ಯೂರೋ ಪ್ರೆಸ್, ಬಳ್ಳಾರಿ.

ಭೂಲೋಕದ ಅಮೃತವು.

ಈ ಮಾತ್ರೆಗಳು ಜೀರ್ಣ ಶಕ್ತಿಯನ್ನು ವೃದ್ಧಿಮಾಡಿ ಕೆಟ್ಟುಹೋದ ರಕ್ತವನ್ನು ಶುದ್ಧಿಮಾಡಿ ಅದನ್ನು ವೃದ್ಧಿಗೊಳಿಸುವುದರಲ್ಲಿಯೂ ಸ್ವಪ್ನಸ್ಖಲಿತ, ಅಕಾಲ



ವಾರ್ಧಿಕ್ಯ ಅವಸ್ಥೆಯನ್ನು ನಿವಾರಣೆ ಮಾಡುವದರಲ್ಲಿ ಜ್ಞಾನಶಕ್ತಿಯನ್ನು ವೃದ್ಧಿಮಾಡಿ ಬುದ್ಧಿಗೆ ತೀಕ್ಷ್ಣತ್ವವನ್ನುಂಟುಮಾಡುವದ ರಲ್ಲಿಯೂ, ಮಲಸಂಬಂಧವನ್ನು ನರಗಳ ಬಲಹೀನತೆಯನ್ನು ಹೋಗಲಾಡಿಸುತ್ತದೆ. 40 ಮಾತ್ರೆಗಳ ಡಬ್ಬಿ ಕ್ರಯ ರೂ. 1—0—0.

ಎಲ್ಲಾ ಅಸಾಧ್ಯ ರೋಗಗಳಿಗೂ ವೈದ್ಯಸಲಹೆಯು ಮುಫತ್ತಾಗಿ ದೊರೆಯುವದು.

144 ಪುಟಗಳ ವೈದ್ಯವಿದ್ಯೆ

ಎಂಬ ವೈದ್ಯ ಪುಸ್ತಕವು ಕೋರಿದವರಿಗೆ ಮುಫತ್ತಾಗಿ ಕ್ರಯವು ಅಂಚೆ ಹಾಸಲು ಇಲ್ಲದೆ ಕಳುಹಿಸಲ್ಪಡುವದು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ಫಾರ್ಮಸಿ,
೫೦ ಜೀನಾಬಜಾರ್, ಮದ್ರಾಸ್.

ಮಕ್ಕಳು ಆಡುವ ಸಾಮಾನುಗಳು.

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಕ್ಕೆ ಯೋಗ್ಯವಾದಂಥಾ ೩೩ ಸಾಮಾನುಗಳು ಇರುವ ಸೆಟ್ಟಿಗೆ ರೂ. ೧—೮—೦ ಮಧ್ಯಮ ತರದ ಸೆಟ್ಟು ಒಂದಕ್ಕೆ ೨—೦—೦. ದೊಡ್ಡ ಸೆಟ್ಟು ಉತ್ತಮತರದ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮತರದ ರೂಪಾಯಿ ೧ಕ್ಕೆ ೪ ತೊಲೆ, ದ್ವಿಯಂ ರೂಪಾಯಿ ೧ಕ್ಕೆ ೮ ತೊಲೆ, ತ್ರಿಯಂ ರೂಪಾಯಿ ಒಂದಕ್ಕೆ ೧೦ ತೊಲೆ, ಚಾರಂ ರೂಪಾಯಿ ೧ಕ್ಕೆ ೧೭ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಇನಾಮು ಕಳುಹಿಸಲ್ಪಡುವದು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಚಾರ್ಯ
ಮತ್ತು ಕಂಪೆನಿ,
ಚೌಖಂಬಾ, ಕಾಶಿ.

SIROMANI NARAYANA CHARYA & CO.,
Chowkhamba,
BENARES CITY.

ವಿಲ್ಲಿಯಮ್ಸ್ ಡೆಂಟೋನ್,

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟೆ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕರ್ಮಕಾಂಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಶಾಸ್ತ್ರಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲ್ಯಾಫ್ ಎಸ್ಯುರೆನ್ಸ್ ಕೋ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ| ಲಲ್ಲುಬಾಯಿ, ಸಾಮಲದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:— ಫ್ರೆಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ:— ಮಿ| ಜೋರ್ಜ್‌ಕಿಂಗ್ ಎಫ್. ಎಸ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿ ಮಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ವಿಚಾರ ಒಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಟ್ಟಿಕಾರ್ ಬ್ರದರ್ಸ್, ಉಡುಪಿ;
ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಟ್ಟಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ಸತ್ತ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ರಮದ ಪ್ರಕಾರ ಕೂಡಲೆ ಹಣವನ್ನು ವಿಮೆದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಂಡು ತಿಳಿಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮೆ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೆದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜೇಶ್ರೀ ರಾಮರಾವ್ ರಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟ್ ಪ್ಲೀಡರ್, ಸೇಲಂ.

ವಿದ್ಯೋದಯ.

ಶುದ್ಧ ಕನ್ನಡ ಶೈಲಿಯಲ್ಲಿ ನಾವಲ್, ನಾಟಕ, ಪ್ರಹಸನ ಒಗಟುಗಳು ಮುಂತಾದುವನ್ನು ಪ್ರಚಾರಪಡಿಸುವ ಈ ಮಾಸಪತ್ರಿಕೆಗೆ ನಾಲ್ಕಾಣೆ ಪ್ರವೇಶ ಧನವನ್ನು ಕೊಡುವವರು ಚಂದಾದಾರರಾಗಬಹುದು. ಪ್ರತಿ ತಿಂಗಳೂ ತಪ್ಪದೆ ಹೊರಟು ವಾಚಕರ ಕಣ್ಮನಗಳನ್ನು ರಂಜಿಸುವ ನಮ್ಮ ವಿದ್ಯೋದಯಕ್ಕೆ ಚಂದಾದಾರರಾಗುವವರಿಗೆ ಸೊಗಸಾದ ಎರಡು ನಾವಲ್‌ಗಳನ್ನು ಉಚಿತವಾಗಿ ಕೊಡುವೆವು. ಮಾದರಿ ಸಂಚಿಕೆಗೆ ಅರ್ಧಾಣೆ ಚೀಟಿ ಕಳುಹಿಸಬೇಕು. ಪ್ರಕಟಣೆ ದರವು ಬಹಳ ಸುಲಭ. ಪ್ರಾರಂಭ—ಚೈತ್ರ ರಾಕ್ಷಸ ಸಂವತ್ಸರ. ತ್ವರೆಮಾಡಿರಿ!

ವಿಳಾಸ:—

ವಿದ್ಯೋದಯ ಆಫೀಸ್,
ಶಾರದಾ ವಿಲಾಸ ಪ್ರೆಸ್,
ಬೆಂಗಳೂರು ಸಿಟಿ.

ಮದರಾಸ್ ಮೇಲ್ ವಾಚ್.

5 ವರುಷಗಳ ಗ್ಯಾರಂಟಿ.

15 ಬಹುಮಾನಗಳ ಸಹಿತ ರೂಪಾಯಿ 4—0—0.

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ.



ಇದು ನೋಡುವದಕ್ಕೆ ಗಂಭೀರವಾಗಿಯೂ ಅಂದವಾಗಿಯೂ ಇದೆ. ಚಕ್ರಗಳಲ್ಲಿ ಕೆಂಪು ಕೆತ್ತಲ್ಪಟ್ಟು ಗಿಲ್ಟು ಮೊವ್ಮೆಂಟ್ ಮಾಡಿರುವುದು; ಮತ್ತು ಥಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಗ್ಲಾಸ್‌ಡೋಮು ಇರುವದು. ಇದು ಕಾಲವನ್ನು ತೋರಿಸುವುದರಲ್ಲಿ ಒಂದು ನಿಮಿಷದಷ್ಟೂ ವ್ಯತ್ಯಾಸ ಮಾಡುವದಿಲ್ಲ. ನಮ್ಮ ಗಡಿಯಾರವನ್ನು ನಾವುಗಳೇ ಹೊಗಳುವುದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿನೋಡಿರಿ. ನಮ್ಮ ರಿಜಿಸ್ಟರ್ ಮಾಡಲ್ಪಟ್ಟಿರುವ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು:—ಜಪಾನ್ ಬೀಸಣಿಗೆ 1, ಕಾವಂತಿಗೆ ಹೂವು 1, ಸುವಾಸನೆ ಸೆಂಟ್ ಬಾಟ್ಲಿ 1, ದಂತದ ಬಾಚಣಿಗೆ 1, ಗಡಿಯಾರದ ಸರಪಣಿ 1, ಗಡಿಯಾರದ ಉತ್ತರವಾಣಿ 1, ಗಜ್ಜಿ ಅದ್ದಿಗೆ 1, ದಂತದ ಕನ್ನಡಿ 1, ಸುವಾಸನೆ ಹೇರಾಯಿಲ್ 1, ವಜ್ರದ ಗುಂಡಿಗಳು 4, ಜಪಾನ್ ಕೈಚೀಲ 1, ರೋಲ್ಡ್‌ಗೋಲ್ಡ್ ಎಂಬ ಭಂಗಾರದ ಉಂಗುರ 1, ಹೀಗೆ 15 ಬಹುಮಾನಗಳ ಸಹಿತ ಕ್ರಯ 1ಕ್ಕೆ ರೂ. 4.

ವಿಳಾಸ:— ವಿ. ಎ. ಕೃಷ್ಣ ಅಂಡ್ ಕೊ.,
3, ಇರುಳಪ್ಪನ ಬೀದಿ, ಮದರಾಸ್

ಕರ್ಣಾಟಕ ಸಂಗೀತ

ಮೃಚ್ಛಕಟಿಕ ನಾಟಕ.

ಪ್ರತಿಯೊಂದರ ಕ್ರಯ	... ...	ರೂ. 0—5—0
3 ಪ್ರತಿಗಳಿಗೆ ,,	... ...	,, 0-13—0

ಪೋಸ್ಟ್ ಖರ್ಚು ಅಲಾಹಿದಾ.

ವಿಳಾಸ:— ಬಿ. ಕೆ. ಪ್ರಭು,
ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ, ದ. ಕ.

A Kannada Popular Science Monthly.

"ವಿಜ್ಞಾನ" ವೆಂಬ ಕನ್ನಡ ಮಾಸಪತ್ರಿಕೆ.

ಇದರಲ್ಲಿ ಜನರಿಗೆ ಉಪಯುಕ್ತವಾದ ಆಧುನಿಕ ವಿಜ್ಞಾನದ ವಿಷಯಗಳೆ, ಸಾಮಾನ್ಯ ಜನರಿಗೆ ತಿಳಿಯುವಂತೆ, ಸುಲಭವಾದ ಕನ್ನಡದಲ್ಲಿ ಸ್ವಾರಸ್ಯವಾಗಿ, ಅನೇಕ ಚಿತ್ರಗಳೊಡನೆ ವಿವರಿಸಲ್ಪಡುವುವು. ಸಂಚಿಕೆಗೆ 48 ಪುಟಗಳು. ಈ ವರುಷದ ಚೈತ್ರವಾರ ಮೊದಲೊಂಡು ಹನ್ನೆರಡು ಸಂಚಿಕೆಗಳಿಗೆ, ಚಂದಾ ಮೊಬಲಗು, ಮೂರು ರೂಪಾಯಿಗಳು.

ಅಪೇಕ್ಷಿಸಿದಲ್ಲಿ ಮಾದರಿ ಪುಟಗಳನ್ನು ಉಚಿತವಾಗಿ ಕಳುಹಿಸುವೆವು.

ಬಿ. ವೆಂಕಟನಾರಣಪ್ಪ ಎಂ. ಎ.,
ಮ್ಯಾನೇಜರ್, "ವಿಜ್ಞಾನ"
ಬಸವನಗುಡಿ, ಬೆಂಗಳೂರು ಸಿಟಿ.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್.

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳ್ಳವ ಸುಗಂಧವು. ಒಂದೆರಡು ತಟಕು ಕೈವಸ್ತ್ರದಲ್ಲಿ ಹಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ½ ಔನ್ಸ್ ಟ್ಯೂಬ್ 2-0-0 ಒಟ್ಟೊ ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನ್ 100=12-0.

ವಿ. ಪಿ. ಖರ್ಚು 0—4—0 ಜಾಸ್ತಿ.

ಪ್ರತಿನಿಧಿಯು ವಿಳಾಸರು:—
ಎಚ್. ಆರ್. ಮೋದಿ ಎಂಡ್ ಕೊ.,
10 ಪ್ರಿನ್ಸೆಸ್ ಸ್ಟ್ರೀಟ್, ಮುಂಬೈ.

H. R. MODY & Co.,
10 Princess Street, BOMBAY.

ಉಚಿತ! ಉಚಿತ!

ಕ್ರಯ 5 ರೂ. ಉಳ್ಳ ಇಂಗ್ಲಿಷ್ ಲೀವರ್ ವಾಚು ಉಚಿತ.



ಈ ಸಣ್ಣೆಯಲ್ಲಿ ಕಂಡ ಪ್ರತಿನಿಧಿಯನ್ನು ಹೊಂದಿದ ಇಂಕಿಯನ್ನು ಅದ್ದದೆ ಶಾಶ್ವತವಾಗಿ ಬರೆಯುವ ಅಸ್ವಿಯಾ ದೇಶದಲ್ಲಿ ತಯಾರಿಸಿದ ಗಿಲ್ ಕ್ಯಾರೆಟ್ ಚಿನ್ನದ ಮುಳ್ಳುಳ್ಳ ಫೌಂಟನ್ ಪೇನಾ ಮತ್ತು ಇದಕ್ಕೆ ಬೇಕಾಗುವ 1 ಬಾಟ್ಲಿ ಇಂಕಿ ಸಹಿತ ಕ್ರಯ ರೂ. 4—4—0 ಈ ಪೇನಾವನ್ನು ತರಿಸಿಕೊಳ್ಳುವವರಿಗೆ ಹೆಸರು ಪ್ರಖ್ಯಾತಿಯಾಗುವದಕ್ಕಾಗಿ ಕೆಲವು ಕಾಲದವರೆಗೆ ಮಾತ್ರವೇ ಮೇಲೆ ಹೇಳಿದ ಈ ರೂಪಾಯಿ ಬೆಲೆಯ ವಾಚನ್ನು ಉಚಿತವಾಗಿ ಕೊಡಲ್ಪಡುತ್ತದೆ. [172.2]

ವಿಳಾಸ— ಮದರಾಸು ಮೇಲ್ ಆರ್ಡರು ಕಂಪೆನಿ,
ನಂ 2, ಸುಬ್ಬರಾಯ ನಾಯಕ್ಕನ್ ಲೇನ್,
ಚೈನಾಬಜಾರ್ ರೋಡು, ಮದರಾಸು.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಧಾರೆ ತಿಳಿಯ ಸ್ಥಳವೂ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಜೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಆತಂಕಗಳು ಇದ್ದೇ ಇರುವವು! ನಾನು ಕಳೆದ ಅನೇಕ ವರ್ಷಗಳಿಂದ ಈ ಭಾರಿಕಲ್ಲೇ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿ ಕೊಡಲು ಸಿದ್ಧನಾಗಿದ್ದೇನೆ.

ನನ್ನ ವಿಳಾಸ:— ಬಂಟನಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರಿ ಛತ್ರಂ,
ಪೋಸ್ಟು ಆಫೀಸು ಎದುರು,
ರಾಮೇಶ್ವರಮ್

ಅಮೃತಾರ್ಣವ ಅವಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತಪುಷ್ಟಿಯುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿ ರೋಗಗಳನ್ನು ಕಿತ್ತುಹಾಕುವದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೃಗೊಡಿಸುವದು. ಕ್ರಯ ಸುಲಭ! ಫಲವು ಅಧಿಕವು!!

30 ತೊಲೆಗೆ ರೂ 3—0—0 ಮಾತ್ರವೇ.

ವಿಳಾಸ:—
ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೆ, ಮದರಾಸು,
ಮತ್ತು 96 ಮೌಂಟ್ ರೋಡ್, ಮದ್ರಾಸು.

Local Agents: **Raphael & Co.,**
Brito Buildings,
Hampankatta, MANGALORE.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜೀನಪ್ಪಿನಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ, ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡು ಸವಾಲ್ಪಟಾವನಾಗುವದು.

S. P. RAJA & Co.,
Kalyanakaraka Bishagmandir.
POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟ್ ಪೊಳಲಿ, ದ. ಕ.

ಬೊಂಬೈ ಡೈಮಂಡ್ ಸೋಪ್ ಕಂಪೆನಿಯಲ್ಲಿ ತಯಾರಾದ

ಡೈಮಂಡ್ ಸೋಪುಗಳು.

ಇದು ಹೆಚ್ಚು ಕಾಲದಿಂದ ಉಪಯೋಗಿಸಿ ಶಿಫಾರಸು ಹೊಂದಿದ್ದಾಗಿದೆ. ಧರವನ್ನು ಇದರಡಿ ಸೂಚಿಸಿರುವರು. ಬಿಲ್ಲೆ 1ರ ಡಜನ್ 1ರ

		ಬಿಲ್ಲೆ 1ರ	ಡಜನ್ 1ರ
1.	ಕಸ್ತೂರಿ ಸಾಬೂನು 3 ಬಿಲ್ಲೆಗಳಿರುವ ಪೆಟ್ಟಿಗೆ	0—8—0	5—0—0
2.	ಮನೋಹರ ,,	0—5—0	3—8—0
	ಅತ್ತರ ಸಾಬೂನುಗಳು.		
3.	ಖಸ್ ಸಾಬೂನು	0—4—0	2—12—0
4.	ಗುಲಾಬ್ ,,	0—4—0	2—12—0
5.	ಹಿನಾ ,,	0—4—0	2—12—0
6.	ಕೇವಡಾ ,,	0—4—0	2—12—0
7.	ಗುಲಾಬಿ ,,	0—4—0	2—12—0
8.	(ಬಾತ್ ಸೋಪ್) ಸ್ನಾನದ ದೊಡ್ಡ ಬಿಲ್ಲೆ ಉಪಯೋಗಿಸುವದು	0-1-6	1—1—0
	ಡೈಮಂಡ್ ಬಟ್ಟೆ ಸಾಬೂನು.		
9.	[illegible]	0—1—0	1—1—0
10.	[illegible]	0—2—0	1—7—0

ಏಜಂಟರು:— [illegible]

ಸ್ಯ ಪ್ರತಿಯೊಂದರ ನ್ನು ಮುಂದರಿಸಲು

ದಂದ ವೈದ್ಯರೊಳಗ...
ಕೆಟ್ಟ ರಕ್ತ ಸಂಬಂಧದಿಂದುಂಟಾದ ಎಲ್ಲಾ ...
ಹೋಗುವ ನೋವು, ವಾತ, ಸಂಧಿವಾತ, ಯಕ್ಷ್ಮಸಾರಿ, ಮತ್ತು ಚರ್ಮದ ರೋಗಗಳು, ವಿಕಾರದಿಂದುಂಟಾದ ವ್ಯಾಧಿ, ... ನೆಂದಲಾದದ್ದನ್ನು ನಾಶಮಾಡಿ, ರಕ್ತದಲ್ಲಿರುವ ವಿಷವಸ್ತುವನ್ನು ಎಂದರೆ ಮುಂತಾದ್ದರಿಂದ ಅದನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ 1ಕ್ಕೆ ಕ್ರಯ ರೂ. 1—8—0.

ಆರ್. ಮಾರ್ಟಿನ್ನರ ಎಗ್ಯೂ ಮಿಕ್ಷ್‌ಚರ್.

ಇದು ಜ್ವರ, ಶೀತಜ್ವರ, ಮಲೇರಿಯ, ಛಳಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹಠಹಿಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಚ್ಛೆಪಡುತ್ತವೆ. ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ 1ಕ್ಕೆ ರೂ. 0—14—0.

ಆರ್. ಮಾರ್ಟಿನ್ನರ ಮೂಲವ್ಯಾಧಿ ಮುಲಾಮು.

ಮನುಷ್ಯರಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಟ್ಟಿ ಹೊಯ್ಯುವಿಕೆ, ಮಲದ್ವಾರದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ ರಕ್ತ ಸುರಿಯುವ ಮೂಲವ್ಯಾಧಿ, ಕಂಕುಳಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂತಹ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟಿದೆ ... ನೋವನ್ನು ಕೊಡದ ತಂಪಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 0—8—0.

ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ಮುಂಬಯಿ.

R. D. Kately & Co.
No. D. Frere Road,
Near Wright & Co Fort Bombay

ಇದಿಗೋ

ಮದ್ರಾಸ್ ಗವರ್ನಮೆಂಟಿನಿಂದ ರಿಜಿಸ್ಟ್ರಿ ಮಾಡಲ್ಪಟ್ಟಿರುವ

ಸರ್ಪ ಚೇಳುಗಳ ವಿಷಧ್ವಂಸಿನಿ.

ಚೇಳು ಹೊಡೆದ ಸ್ಥಳದಲ್ಲಿ ಸರ್ಪ ಚೇಳುಗಳ ವಿಷಧ್ವಂಸಿನೀ ಎಂಬ ಈ ಔಷಧವನ್ನು ಇಟ್ಟ ಒಡನೆಯೇ ಗರುಡನನ್ನು ಕಂಡ ಸರ್ಪವು ತೊಲಗಿದಂತೆ ಒಂದೇ ಒಂದು ನಿಮಿಷದಲ್ಲಿ ಉರಿಯೂ ಛಳಕೂ ಮಾಯವಾಗುವವು.

ಇದಿಗೋ

ಈ ಔಷಧದಲ್ಲಿ ಗುಣವಿಲ್ಲವೆಂದು ವ್ಯಕ್ತಪಡಿಸುವವರಿಗೆ 100 ರೂಪಾಯಿ ಬಹುಮಾನ ಕೊಡುವೆವು.

ಕ್ರಯ ಶೀಸೆ 1ಕ್ಕೆ 8 ಆಣೆ.
ಡಜನ್ 1ಕ್ಕೆ ರೂ. 5.

ವಿಳಾಸ:— ವಿ. ಎ. ಎಸ್. ಪಾಣಿ ಅಂಡ್ ಕಂಪೆನಿ,
ಸಾಹುಕಾರಪೇಟೆ, ಮದರಾಸು.

ಕುಂಬಳೆ ನರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇದರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಭಾಮಿನಿ ಷಟ್ಪದಿಯಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ತಕ್ಕ ಯೋಗ್ಯವಾಗಿರುವದು. ಬೆಲೆ 4 ಆಣೆ. 4 ಪುಸ್ತಕಗಳು ಬೇಕಾದವರಿಗೆ 1 ಆಣೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ಸಾವೇ ... ವ್ಯಾಪಾರಸ್ಥರಿಗೆ ಒಳ್ಳೆ ಕಮಿಶನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,
ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಕಾರದಾ ಭಾಷಾಖಾನೆಯಲ್ಲಿಯೂ ದೊರೆಯುವುದು.

ಪಂಡಿತ್ ಡಿ. ಗೋಪಾಲಾಚಾರ್ಯರ

-ಲಂಗ್ ಟಾನಿಕ್-

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿಸಲ್ಪಟ್ಟಿಲ್ಲ. ... ನಿತ್ಯವಾದ ಈ ವಿಷಜ್ವರ ಬಿಟ್ಟ ... ದಿವಸಗಳ ... ಕೆಮ್ಮು, ದಮ್ಮು, ... [illegible]

ಕ್ರಯ ... ಔನ್ಸ್ 14 ಆಣೆ. ...

ವಿಳಾಸ:— ... [illegible]

ಎಲ್ಲರೂ ತರಿಸಿ ಓದಲೇಬೇಕು

ಪ್ರಖ್ಯಾತ ಪ್ರಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಂಗಾರದ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೨ ಆಣೆ.

೨. ಪ್ರಮೇಹಹರಿವು ಬಿಂದು. ಉರಿಯುವುದನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವುದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟುಗಳ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೂಕ್ಷ್ಮವಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, ಉಳುಕು, ಪೀನಸ, ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ.

೧೩. ನಯನೋರಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ರವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಸೋಸಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗ ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರಿಗೆ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ;— ಬಿ. ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M NATH & CO. *Ayurvedic Chemists*

Vepery Post MADRAS,

ಅನೇಕ ಯೋಗ್ಯತಾ ಪತ್ರಿಕೆಗಳನ್ನು ಪಡೆದಿರುವ

ರಾಜಸುಂದರಿ ರೋಜ

ಎಂದು ಮನೋಹರವೂ ಮೋಹಕವೂ ಆದ ತೈಲವು.

50 ಬಹುಮಾನಗಳ ಸಹಿತ ಶೀಸೆ 1-ಕ್ಕೆ ಒಂದೇ ರೂಪಾಯಿ.

ಕಡಿಮೆ ತರದ ತೈಲಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೈಯನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಚಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀ ಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಚಂದವಾಗಿ ಕಾಣಬೇಕೆಂದು ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇವಲ್ಲದೆ ತುರುಬನ್ನು ಯಾವ ರೀತಿಯಿಂದಾದರೂ ಕಟ್ಟಿದಂತೆ ನಯವಾಗಿರಬೇಕು.

ಈ ತೈಲ್ಯವನ್ನು ಉಪಯೋಗಿಸುತ್ತಲೆ ಕೂದಲನ್ನು ಬೇಗನೆಯೂ ತ್ವರೆಯಾಗಿ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಲಾಡಿಸುವದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದುದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿಳುಪು ಹೊಂದಲಾರವು. ಅದರೆ ಅವು ದಟ್ಟವಾಗಿ ಬೆಳೆದು ನಸ್ಸುಪ್ಪವಾಗುವವು. ಇದರ ಸುಗಂಧವಾದ ಪರಿಮಳ ಮನೋಹರವೂ ಮೋಹಕವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ರಾಜಸುಂದರೀರೋಜ ತೈಲವನ್ನು ಉಪಯೋಗಿಸುವ ತಲೆಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಪಾಗಿಸದೆ ಕಪ್ಪು ಬಣ್ಣದಿಂದೆಸೆವ ಗೂಡಿಸಿ ಗುಂಗುರುಗುಂಗುರಾಗಿ ಬೆಳೆಯಿಸುವುದು, ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು, ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತಕ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟುಮಾಡುವದು. ನಿದ್ರೆಯು ಚೆನ್ನಾಗಿ ಬರುವದು. ಈ ರಾಜಸುಂದರೀ ರೋಜ ಹೇರಾಯಿಲ್ ಔಷಧಕ್ಕೆ ಔಷಧವೂ ಸುಗಂಧ ದ್ರವ್ಯಕ್ಕೆ ಸುಗಂಧ ದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾಗಿರುವುದು. ಬಾಜು ರಾಜಸುಂದರೀರೋಜ ಹೇರಾಯಿಲ್ ಶೀಸೆಯು ಬಹಳ ದಿವಸಗಳ ವರೆಗೂ ಬರುವದು.

ಬಹುಮಾನಗಳ ವಿವರ.—ಸ್ತ್ರೀಯರು ಧರಿಸಿಕೊಳ್ಳುವ ಕೆಂಪುಗಳು 6, ಕಣ್ಣುಕಪ್ಪಿನ ಭರಣಿ 1, ಕುಂಕುಮದ ಭರಣಿ 1, ಅದ್ದಾ 1, ತಾಂಬೂಲ ಮಾತ್ರೆ 30, ದಂತದ ಬಾಚಣಿಗೆ 1, ಸೊಗಸಾದ ರಾಜಸಾತ ಕಾತನೀಯನ್ ಪೆಟ್ಟಿಗೆ 1, ರವಿವರ್ಮ ಫೋಟೋಗ್ರಾಫ 6, ಸುವಾಸನೆ ಅತ್ತರು ಬಿಲ್ಲೆ 1, ಗಂಧ ಬಿಲ್ಲೆ 1, ಸ್ತ್ರೀಯರು ಧರಿಸುವ ಬ್ರೂಚ್ 1. — ಕ್ರಯ. 50 ಬಹುಮಾನಗಳ ಸಹಿತ ರೂ 1—0—0

ವಿಳಾಸ:— ವಿ. ಎ. ಎಸ್. ಪಾಣಾ, ಕಂಪೆನಿ,

ಸಾಹುಕಾರ ಪೇಟೆ, ಮದರಾಸು.

ಚಳಿಜ್ವರ, ಮಲೇರಿಯಾ, ಅಂತರಿಕ (ದಿನದಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಾತ್ರಿಯಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಿಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಫೆನೊ-ಪಿನ್:— ಕಾಲರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು:— ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ,

ಕರ್ಣಿಕ ಬ್ರದರ್ಸ್,

೬೬ ಗಿರಗಾಂವ, ಮುಂಬಯಿ.

ಹಲ್ಲು ನೋವುಗಳಿಗೆ

ಖಾತ್ರಿಯಾದ ಔಷಧಿ

ಇದರ ಗುಣವನ್ನು ನೋಡಿರಿ

ಹಲ್ಲುಗಳ ಉಳ್ಳುವಿಕೆಯಿಲ್ಲ

ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಅಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗೆಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ತಾಗಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದರಿಂದಲೇ ಗುಣಹೊಂದುವವು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ-1ರ ಕ್ರಯ ರೂಪಾಯಿ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡರ್ ಗಾರ್ಡನ್

ಮತ್ತು

ಜಂಪರ್‌ಕಟ್ಟೆ ಶಾಪುಗಳಲ್ಲಿ

ದೊರಕುವದು.

STANY BROTHERS

Sole Agents

M. C. C's. Toothache

Specific, Mangalore.

ಒಂದು ತಿಂಗಳ ಕಾಲಕ್ಕೆ ಮಾತ್ರ!

ಅರ್ಧ ಕ್ರಯಕ್ಕೆ ಮಾರಲ್ಪಡುವವು.

ಫ್ಲುಟ್ ಹಾರ್ಮೋನಿಯಮ್‌ಗಳು.



ಎಲ್ಲಾ ನಮೂನೆಯ ಗಾಯನಗಳಿಗೆ ತಕ್ಕಂಥವುಗಳು, ಯಾವ ಹವಾಗುಣಗಳಲ್ಲಿ ಯಾದರೂ ಬಾಳುವಂಥವುಗಳು. ಒಳ್ಳೆ ಮಾಗಿದ ಸಾಗವಾನಿ ಮರದ ಹಲಿಗೆಗಳಿಂದ ತಯಾರಿಸಲ್ಪಟ್ಟವುಗಳು. ಇವುಗಳಲ್ಲಿರುವ ರೀಡ್ಸಗಳು ಉತ್ತಮ ತರಗತಿಯವು. ಸರ್ವಮಾನ್ಯವಾಗಿದ ಈ ಹಾರ್ಮೋನಿಯಮ್‌ಗಳನ್ನು ಇವುಗಳು ತಳ್ಳಿದ ಏಳು ದಿವಸಗಳಲ್ಲಿ ಹಿಂತಿರುಗಿ ಕಳುಹಿಸಿದರೆ ಪಡೆಕೊಳ್ಳುತ್ತೇವೆ. ಸಿಂಗಲ್ ರೀಡ್ ಇರುವಂಥವುಗಳಿಗೆ ರೂ 40, 45, 50 ಕ್ರಯದವುಗಳು ರೂ. 20, 22—8—0, 26—0—0 ಕೊಡಲಾಗುವವು. ಡಬ್ಬಲ್ ರೀಡ್ ಇದ್ದವುಗಳು ರೂ. 70, 80, 90 ಕ್ರಯದವುಗಳನ್ನು ರೂ. 35, 40, 45ಕ್ಕೆ ಈಗ ಕೊಡುತ್ತೇವೆ. ಕೈಗಳಿಂದಲೂ ಕಾಲುಗಳಿಂದಲೂ ಬಾರಿಸಬಹುದಾದ ಅತ್ಯುತ್ತಮ ಡಬ್ಬಲ್ ರೀಡ್ ಮಡಚುವಂಥ ರೂ. 130 ಹಾರ್ಮೋನಿಯಮ್‌ಗಳು ಈಗ ರೂ 65ಕ್ಕೆ ದೊರಕುತ್ತವೆ. ಹಾರ್ಮೋನಿಯಮ್‌ಗಳು ಬೇಕಾದವರು ಕ್ರಯದ ಕಾಲು ಅಂಶವನ್ನು ಮುಂಗಡವಾಗಿ ಕಳುಹಿಸಬೇಕು, ಮತ್ತು ತಮಗೆ ಸರಿಹೊಂದುವ ರೈಲ್ವೆ ಸ್ಟೇಶನನ್ನು ಸಹ ತಿಳಿಸಬೇಕು. ಪತ್ರವ್ಯವಹಾರವನ್ನು ಇಂಗ್ಲಿಷ್ ಭಾಷೆಯಲ್ಲಿಯೇ ಬರೆಯಬೇಕಾಗಿದೆ.

ನೆಷನಲ್ ಹಾರ್ಮೋನಿಯಮ್ ಕಂಪೆನಿ,

103 ಲೋವರ್ ಚಿತ್‌ಪುರ ರೋಡು.

ಟೆಲಿಗ್ರಾಮುಗಳ ಬಗ್ಗೆ ವಿಳಾಸ:— ಮ್ಯೂಜಿಸಿಯನ್ಸ್ ಕಲ್ಕತ್ತಾ.

ಎ ಕೋರ್ಸ್ ಆವ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ಮಂಡೆಗಳನ್ನು, ಬಸ್ಕಿಗಳನ್ನು ಸೇರಿ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆ, ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸ ಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ 0—12—0.

ವಿ. ಪಿ. ಚಾರ್ಜು 2 ಆಣೆ.

ಎರಡು ಭಾಗಗಳು ಸೇರಿ ಕ್ರಯ ರೂ 1—4—0. „ 2 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,

ಜಿಮ್ನಾಸ್ಟಿಕ್ಸ್ ಇನ್ಸ್‌ಟ್ರಕ್ಟರ್, ಪಾಚ್ಚಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,

Senior Gymnastic Instructor,

Pachiyappa's College, MADRAS.

N B — ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರಿಯಬೇಕು, ಮತ್ತು ಕಾಗದಗಳನ್ನು ಇಂಗ್ಲಿಷಿನಲ್ಲಿಯೇ ಬರಿಯಬೇಕೆಂದು ಕೋರುತ್ತೇನೆ.

ಮೈಸೂರು ದಸರಾ 1916ನೇ ವರ್ಷದ ಸರ್ವ ವಸ್ತುಪ್ರದರ್ಶನ ಶಾಲೆಯಲ್ಲಿ ಬಿರುದು ಬಿಲ್ಲೆಯನ್ನೂ ಮತ್ತು ಅನೇಕ ಡಾಕ್ಟರುಗಳಿಂದ ಯೋಗ್ಯತಾಪತ್ರವನ್ನೂ ಪಡೆದಿರುತ್ತದೆ.

ಇತ್ತ ನೋಡಿ! ಜಾಗ್ರತೆ ಮಾಡಿ!! ಬೆಲೆ ಸುಲಭ!!!

ರಿಸ್ಟ್ ರಾಮಕೃಷ್ಣಾಮೃತ.

ನೀವು ನಿಮ್ಮ ಅಮೂಲ್ಯವಾದ ಶರೀರವನ್ನು ಏತಕ್ಕೆ ಯಾತನೆಗೂ ಸಂಕಟಕ್ಕೂ ಒಳಗುಮಾಡಿಕೊಂಡು ಕೃಶರಾಗಿರುವಿರಿ!

ಈಗಲೇ ತಯಾರಾಗಿ ಎಲ್ಲಾ ಸ್ಥಳಗಳಲ್ಲಿಯೂ ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ ಸುಲಭ, ಪ್ರಯೋಜನ ಬಹಳ. ವಿದ್ಯಾರ್ಥಿಯರಿಗೂ, ವ್ಯವಹಾರಸ್ಥರಿಗೂ, ಪ್ರತಿ ಕುಟುಂಬ ವರ್ಗದವರಿಗೂ, ಮುಖ್ಯವಾಗಿ ಎಲ್ಲಾ ಜನಾಂಗಕ್ಕೂ ಬಹಳ ಪ್ರಯೋಜನಕರವಾದದ್ದು. ಒಂದಾವರ್ತಿ ಉಪಯೋಗಿಸಿದ್ದಲ್ಲಿ ಮತ್ತೆ ಇದನ್ನು ಬಿಡಲಾರಿರಿ. ಬೆಲೆ ಕುಪ್ಪಿ 1ಕ್ಕೆ 8 ಆಣೆ. ಡಜನ್ 1ಕ್ಕೆ ರೂ 5—4—0. ಟ. ಖ. ಬೇರೆ.

ಎಲ್ಲಾ ಸ್ಥಳದಲ್ಲಿಯೂ ಏಜೆಂಟರು ಬೇಕು, ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ದೊರೆಯುವದು.

ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ.

R. K. DEPOT,

272 Chamrajpet, MYSORE.

Agents in Mangalore—

The Mangalore Cycle Stores, Mangalore.

Printed & Published by ... at the ... Mangalore.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೇವತೆಗಳು ಬೆಲೆಯುಳ್ಳ ರತ್ನಗಳಿಂದಲೂ ಸಂತೋಷಪಡಲಿಲ್ಲ; ಭಯಂಕರವಾದ ವಿಷಕ್ಕೂ ಅಂಜಲಿಲ್ಲ; ಅಮೃತವನ್ನು ಹೊಂದುವ ವರೆಗೆ ಅವರ ಯತ್ನವು ನಡೆಯುತ್ತಲೆ ಇತ್ತು. ಧ್ಯೇಯವನ್ನು ಹೊಂದುವ ತನಕ ತಮ್ಮ ಪ್ರಯತ್ನವನ್ನು ತ್ಯಜಿಸದಿರುವುದು ಧೀರರ ಲಕ್ಷಣವೇ ಸರಿ.

ಪುಸ್ತಕ ೧೧ | ಮಂಗಳೂರು, ತಾರೀಖು ೭ನೇ ಸಪ್ಟಂಬರ ಶುಕ್ರವಾರ ೧೯೧೭. | ಸಂಚಿಕೆ ೩೬.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ ನಂಬ್ರು 444/17

ಅರೆಹೊಳೆ ಮೊಯಿದಿನ್‌ಸಾಹೇಬ ಮಹಮ್ಮದ್ ಹಬೀಬ್ ಅಬ್ದುಲ್ಲರಹಿಮಾನ್ ಸಾಹೇಬರ ಫಿರ್ ಗಂಗೊಳ್ಳಿ ಗ್ರಾಮ. } ವಾದಿ.

ಹಸನ್ ಕಾಶಿಮ್ ಬಿ ಮಗ ಹೊನ್ನಾವರ ತಾಲೂಕು ಮುರ್ಡೇಶ್ವರ ಮಾವಳ್ಳಿಯಲ್ಲಿರುವವ } ಪ್ರತಿವಾದಿ.

ಪ್ರತಿವಾದಿಯು ವಾದಿಗೆ ತಾರೀಕು ೯-೪-೧೯೧೭ರಲ್ಲಿ ರೂಪಾಯಿ ೨೦ಕ್ಕೆ ಬರಕೊಟ್ಟ ನೌಕರಿ ಕರಾರು ಪ್ರಕಾರ ಯಾವ ಕೆಲಸವನ್ನು ಮಾಡದೆಯೂ ಎಷ್ಟನ್ನಾದರೂ ಹಣವನ್ನು ವಾದಿಗೆ ವಸೂಲು ಕೊಡದೆಯೂ ಇರುವದರಿಂದ ವಾದಿಯು ಸದರಿ ಕರಾರಿನ ಅಸಲುಬಟ್ಟಿ ರೂಪಾಯಿ ೪೦—೦—೦ ಬರುವಾಬತ್ತಿಗೋಸ್ಕರ ಮಾಡಿದ ಸದರಿ ವ್ಯಾಜ್ಯವನ್ನು ತಾ ೧೨—೯—೧೭ಕ್ಕೆ ತನಿಕೆಗೆ ಇಟ್ಟಿರುವದರಿಂದ ಪ್ರತಿವಾದಿಯು ತಕ್ರೀರು ಉದಾಹರಣೆ ಇದ್ದರೆ ಆ ದಿವಸ ತನಿಕೆಗಿಂತ ಮೊದಲ್ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಬೇಕಾಗಿ ಈ ಮೂಲಕ ತಿಳಿಸೋಣವಾಗಿಯದೆ.

ಕುಂದಾಪುರ } ತಾ. 1—9—17 }

P. Mahabala Rao
Pleader for Plaintiff.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಿಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಒಳ್ಳೆ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನ ಗೊಬ್ಬರದಂತೆ ನಾತ ಬಡೆಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾಗ್ವದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಒಳ್ಳೆ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಪೇನೆಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು; ಉಳುಕು, ಎದೆನೋವು, ಸೊಂಟದನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲುಗಳು ಮಾರಲ್ಪಡುತ್ತವೆ. ಬಾಟ್ಲು ಒಂದರ ಕಿಮ್ಮತು ಆಣೆ 8. ಡಜನ್ ಒಂದಕ್ಕೆ ರೂ. 5—4—0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ.

ದಂತಮಂಜನ.

(ರಾಜಾರಾಣಿ ಟ್ರೇಡ್ ಮಾರ್ಕ್).

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ ಒಂದಕ್ಕೆ 0—2—0. ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪ್ಪೊ,

6, 7, ತೆಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕುದಾದ ಹೊಮಿಯೊಪತಿ, ಟಿಸ್ಯು, ಸ್ಪೆಸಿಫಿಕ್, ಇಲೆಕ್ಟ್ರೊ ಹೊಮಿಯೊಪತಿ, ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೊಮಿಯೊಪತಿಕ್ ಮತ್ತು ಆಯುರ್ವೇದಿಕ್ ಔಷಧಾಲಯ, ಧರ್ಮಸ್ಥಳ.

ಬಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಯಕ್ಷಗಾನ.

ತುಳು ಪಂಚವಟಿ ರಾಮಾಯಣ ...	ಕ್ರಯ ರೂ.	0—3—0
ಕನ್ನಡ ದುಂದುಭಿ ಆಖ್ಯಾನ ...	,, ,,	0—4—0
ಕನ್ನಡ ಚಂದ್ರಮೌಳಿ ಕಾಳಗ ...	,, ,,	0—4—0

ಈ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಕ್ರಯ ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕಟಲಾಗು ಮುಫತ್ತು.

ವಿಳಾಸ:— ಕೆ. ಸುಬ್ರಾಯ ನ್ಯಾಕ ಎಂಡ್ ಸನ್ಸ್,
ಜಿ. ಟಿ. ಏಜನ್ಸಿ, ವಿಟ್ಲ, ದ. ಕ.

ದಂತ ವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮಾರವರು

ಈ ಮೂಲಕ ತಿಳಿಯಪಡಿಸುವದೇನಂದರೆ:—ಅಮೇರಿಕಾ ದೇಶದ ಅತ್ಯುತ್ತಮವಾದ ಕೃತಕ ದಂತಗಳು ಈಗಲೇ ಬಂದಿರುತ್ತವೆ. ಬಡವರಿಗೂ ಅನುಕೂಲವಾಗುವಂತೆ ದರಗಳನ್ನು ಕಡಿಮೆ ಮಾಡಿದೆ.

ಒಂದು ತಿಂಗಳು ತನಕ ಮಾತ್ರವೇ ಮಂಗಳೂರಲ್ಲಿ ಇರುವರು. ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ವಿಳಾಸ:— ಪಿ. ಡಿ. ಲೀಮಾ,
ಡೆಂಟಲ್ ಸರ್ಜನ್,
ಒಡೆಯರರ ಸೋಕಿನ ಬಳಿ,
ಮಂಗಳೂರು.

CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು	ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು	,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು	,,	225,000—0—0
Paid up Capital	215,600—0—0	ಆಗತ ಮೂಲ ಧನವು	,,	215,600—0—0
Deposits	299,373—6—11	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು		299,373—6—11
Reserve Fund	50,003—2—5	ರಕ್ಷಿತ ಧನವು		50,003—2—5

25% of the net profits are added annually to the Reserve Fund. Rs. 53,444-11-2 have been invested in Government Paper.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 53,444-11-2 ಧರ್ಮಪಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

Dividends of not less than 6% paid during the past years and a bonus of 1% to 2% paid in addition during the last eight years.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ 8 ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5, 5½% and 6% respectively at the discretion of the managing committee.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

Short-notice Deposits requiring one week's notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ವರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4⅛%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡತಕ್ಕದ್ದಾಗಿದೆ. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು.

Loans granted on proper securities and pledges.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಒಡವೆ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd.,
Mangalore, 1st Sept. 1917.

P. Gopal Naik,
Secretary.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ.

ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.
ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಂಪಲ್ ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಗಳು. ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಂಪಲ್ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ.
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ: —"ಪಂಡಿಟ್" ಮದರಾಸ್.

ಡೊಂಗರೆ ಇವರ ಬಾಲಾಮೃತ.

ಇದು ಬಹಳ ಮಧುರವಾಗಿರುವದರಿಂದ ಚಿಕ್ಕ ಮಕ್ಕಳು ಸಂತೋಷದಿಂದ ಕುಡಿಯುತ್ತವೆ.

ಒಂದು ಶೀಸೆಯ ಬೆಲೆ 12 ಆಣೆ
ಟ. ಖ. 4ಆಣೆ.

ಇದು ಮಕ್ಕಳಿಗೆ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿ ದೃಢಕಾಯರನ್ನಾಗಿ ಮಾಡುವುದು.

ಕೆ. ಟಿ. ಡೊಂಗರೆ ಕಂಪೆನಿ, ಗಿರಗಾಂವ, ಮುಂಬಯಿ.
ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಅರ್ಧ ಕ್ರಯ! ಅರ್ಧ ಕ್ರಯ!!
ಒಂದು ತಿಂಗಳ ವರೆಗೆ ಮಾತ್ರ!

ನಮ್ಮ ನಿಕ್ಕಲ್ ಬೆಳ್ಳಿ ಕಿಸೆ ಗಡಿಯಾರವು ಬಹಳ ಸರಿಯಾಗಿ ಸಮಯವನ್ನು ಸೂಚಿಸುವದು, ಸಣ್ಣವರೂ ಸಹ ಧರಿಸಿಕೊಳ್ಳಲು ಸರಿಯಾದಂಥಾದ್ದು. ಮೂರು ವರುಷಗಳ ಗೆರಂಟಿ ಇದೆ. ರೂ. 7-14-0, 8-14-0 ಕ್ರಯವಿರುವಂಥವುಗಳನ್ನು ಈಗ ರೂ. 3-15-0, 4-15-0ಕ್ಕೆ ವಿಕ್ರಯಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚು ರೂ. 13ರ ಕ್ರಯದ್ದು ರೂ. 6-8-0ಕ್ಕೆ ದೊರಕುವದು. ರೂ. 15ರ ಅಂದವಾದ ಹಂಟಿಂಗ್ ವಾಚು ರೂ. 7-8-0 ಕೊಡೋಣಾಗುವದು. ಲೇಡಿ ಸ್ಯಾಜಿನ ಬೆಳ್ಳಿ ರೂ. 18ರ ವಾಚನ್ನು ರೂ. 9ಕ್ಕೆ. ಅಂದವಾದ ಭಂಗಾರದ ಮುಲಾಮಿನ ರೂ. 20ರ ವಾಚು ರೂ. 10ಕ್ಕೆ. ರಿಷ್ಟ್ ವಾಚು ರೂ. 12 ಕ್ರಯದ್ದು ಬಹಳ ಉತ್ಕೃಷ್ಟವಾದದ್ದು ರೂ. 6ಕ್ಕೆ. ಕೈಗೆ ಹಾಕುವ ಚರ್ಮದ ಪಟ್ಟಿ ಸಹಿತ; ಬಹಳ ಗಟ್ಟಿಯಾದದ್ದು, ಎಂಟು ದಿವಸಗಳ ಚಾವಿ ಇರುವಂಥಾದ್ದು ಕ್ರಯ ರೂ. 24ರದನ್ನು ರೂ. 12ಕ್ಕೆ ಕೊಡೋಣಾಗುವದು.

ವಿಶೇಷ ಇನಾಮು. ಪ್ರತಿ ಒಂದು ವಾಚು ಪಡಕೊಳ್ಳುವವನಿಗೆ ಒಂದು ಅಂದವಾದ ಸರಪಳಿಯು ಇನಾಮು. 6 ವಾಚುಗಳನ್ನು ಪಡಕೊಳ್ಳುವವನಿಗೆ ಒಂದು ವಾಚು ಉಚಿತಾರ್ಥವಾಗಿ ಕಳುಹಿಸೋಣಾಗುವದು.

ಕೊಂಪಿಟೇಷನ್ ವಾಚ್ ಕಂಪೆನಿ,
25 ಮದನಮಿತ್ರ ಲೇನ್, ಕಲ್ಕತ್ತಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮೀಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಮದನ[illegible] ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠರೋಗ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೊಳೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಋತು ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ಕೊಳೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1-8-0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಶೋಭಿಸುತ್ತದೆ. ಬಾಟ್ಲಿ 1ಕ್ಕೆ ರೂ. 0-8-0

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಡಿ ಕೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಳೆ ದ್ರಾವಕಕ್ಕೆ ರೂ. 1-0-0

N. B.— ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಯಂ ಯಸ್. ರಾವ್ ಕಂಪೆನಿ,
ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

ಸುರಸೀ ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ ಆಣೆ 8 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—	
ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರತಿಜ್ಞೆ ,, ,,	0—12—0
ಅಂಬಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರೆ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಸ್ತು ಬಳಕೆ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಆಖ್ಯಾನ ಮಂಜರಿ	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀಶಿಶುಪಾಲನ)	1—4—0
ವಿಶ್ವಮ	1—2—0
ಚಂದ್ರವದನಾ	0—10—0
[illegible] 19×20 [illegible]	0—1—0

ಯೂರೋಪದ ಮಹಾ ಯುದ್ಧ.

ಪಶ್ಚಿಮ ಯುದ್ಧರಂಗದಲ್ಲಿ ಯುದ್ಧವು ಇನ್ನೂ ಜೋರಾಗಿ ನಡೆಯುತ್ತಲಿದೆ. ಹುವರ್ಮನಿನ್ ರಸ್ತೆಯ ಸಮೀಪದಲ್ಲಿ ಜರ್ಮನರು ಬ್ರಿಟಿಷರಿಂದ ಕೆಲವಂಶವನ್ನು ಹಿಂದಕ್ಕೆ ತೆಗೆದುಕೊಂಡರು. ಆದರೆ ಸ್ಟಿಂಬೇಕ್ ಗ್ಯಾಸ್ಟಿಯನ ಬಳಿಯಲ್ಲಿ ಬ್ರಿಟಿಷರು ಮುಂದರಿಸಿರುವರು. ಲೆನ್ಸನ ಪಶ್ಚಿಮದಲ್ಲಿ ಒಂದು ದೊಡ್ಡ ಟ್ರೆಂಚ್ ಹಿಡಿದು ಬ್ರಿಟಿಷರು ಅದರ ವಾಯವ್ಯಕ್ಕೆ ಮುಂದೊತ್ತಿಹೋಗಿರುವರು. ಹಾಗೆ ಕ್ವೇಂಟೆನ ಪಶ್ಚಿಮದಲ್ಲಿ ೧ ಮೈಲು ದಿಸ್ತಾರಕ್ಕೆ ಕೆಲವು ಪ್ರದೇಶವನ್ನು ಬ್ರಿಟಿಷರು ಹಿಡಿದುಕೊಂಡರು. ಮಳೆಯು ಯುದ್ಧ ಸರಿಯಾಗಿ ನಡೆಸಲಿಕ್ಕೆ ಅಭ್ಯಂತರವನ್ನುಂಟು ಮಾಡುತ್ತಲಿದೆ.

ಫ್ರೆಂಚರು ವರ್ಡನ್ ಯುದ್ಧರಂಗದಲ್ಲಿ ಮ್ಯೂಸ್ ನದಿಯ ಬಳಿಯಲ್ಲಿ ಸುಮಾರು ೫ ಮೈಲು ಉದ್ದಕ್ಕೆ ಮುಂದೊತ್ತಿರುವರು.

ಇಟಲಿಯವರು ಮೊಂಟ್‌ಸಾಂತೊ ಎಂಬ ದಿನ್ನೆಯನ್ನು ಹಿಡಿದಮೇಲೆ ಬೈನ್‌ಸಿಜಾ ಸಾನುಪ್ರದೇಶದಲ್ಲಿ ಒಸ್ಟ್ರಿಯರ ಪೆಟ್ಟನ್ನು ತಡೆದು ಮುಂದರಿಸಿದರು.

ಬ್ರಿಟಿಷರ ೧೬೦೦ಕ್ಕೆ ಮಿಕ್ಕಿದ ೧೮ ಹಡಗುಗಳೂ ೧೬೦೦ಕ್ಕೆ ಕಡಿಮೆಯಾದ ೫ ಹಡಗುಗಳೂ ಮುಳುಗಿಹೋದವು. ಇಟಲಿಯವರ ೧ ಹಡಗು ಮತ್ತು ೩ ಸಣ್ಣ ಹಾಯಿಹಡಗುಗಳು ಮುಳುಗಿದವು. ಫ್ರೆಂಚರ ೧ ಸಣ್ಣ ಮತ್ತು ೪ ದೊಡ್ಡ ಹಡಗುಗಳು ಮುಳುಗಿದವು.

ರುಶ್ಯದ ನೈರುತ್ಯ ರಣರಂಗದಲ್ಲಿ ಚರ್ನೋವಿಟ್ಸ್ ಎಂಬಲ್ಲಿಂದ ಸೊಪ್ಪೊ ಸೆಲಿಟ್ಸಾ ಕಡೆಗೆ ಜರ್ಮನರು ಮತ್ತು ಒಸ್ಟ್ರಿಯನರು ಮುಂದರಿಸಿ ಬರುವಾಗ ಅವರನ್ನು ತಡೆಸಲಾರದೆ ಬೊಯನ್ನಿ ಎಂಬಲ್ಲಿ ರುಶ್ಯರು ಹಿಮ್ಮೆಟ್ಟಿದರು.

ಇಟಲಿಯ ಯುದ್ಧಹಡಗುಗಳು ಟ್ರಿಸ್ಟ್ ಕೊಲ್ಲಿಯ ಎದುರು ಅಗ್ನಿನಿಂತು ಫಿರಂಗಿಗುಂಡುಗಳನ್ನು ಹಾರಿಸಿ ನಬ್ರೆಸ್ಸಿನಾ, ಪ್ರೊಸೆಕ್ಕೊ, ಕೊಮೆನೊ ಮೊದಲಾದ ಸ್ಥಳಗಳಿಗೆ ಹೋಗುವ ರೈಲರಸ್ತೆಯನ್ನು ಹಾಳುಮಾಡಿರುವರು. ಇದಲ್ಲದೆ ಹರ್ಮಡಾ ದಿನ್ನೆಯ ಕಡೆಗೆ ಈಗ ಫಿರಂಗಿಗುಂಡುಗಳನ್ನು ಹಾರಿಸುತ್ತಿರುವರು.

ಇಟಲಿಯವರು ಗೊರಿಜಿಯದ ಪೂರ್ವಕ್ಕಿರುವ ಉತ್ತರ ಭಾಗಗಳಲ್ಲಿ ಮುಂದರಿಸಿದ್ದಲ್ಲದೆ ೧೦೦೦೦ ಶತ್ರುಸೇನಿಕರನ್ನು ಸೆರೆಹಿಡಿದರು. ಈ ಸಂದರ್ಭದಲ್ಲಿ ಇಟಲಿಯವರ ೨೪೬ ಯುದ್ಧವಿಮಾನಗಳು ಶತ್ರುಸೈನ್ಯದ ಚಲನೆಯನ್ನು ಹೊಂಚುಹಾಕಿ ನೋಡುತ್ತಿದ್ದು ಸೆನೊವಿಜಾವ್ರಾಡ್ ಎಂಬಲ್ಲಿದ್ದ ಒಸ್ಟ್ರಿಯದವರ ಬತ್ತೇರಿಯ ಮೇಲೆ ತುಂಬಾ ಸಿಡಿಮದ್ದನ್ನು ಚೆಲ್ಲಿದವು.

ರುಶ್ಯರು ಒಕ್ನಾ ಬಳಿಯಲ್ಲಿ ರಾಡೋಜ್ ಎಂಬಲ್ಲಿ ಜರ್ಮನರನ್ನು ಹಿಮ್ಮೆಟ್ಟಿಸಿದರು. ಆದರೆ ಕೆಟ್‌ಐವರ್ಸೆಲಿ ಎಂಬಲ್ಲಿ ಜರ್ಮನರು ರುಶ್ಯರ ಸೈನ್ಯವನ್ನು ಹಿಮ್ಮೆಟ್ಟಿಸಿ ಉತ್ತರಕಡೆಗೆ ಅಟ್ಟಿಬಿಟ್ಟರು. ಪೆಂಡ್‌ಜ್ಯಸ್ ಎಂಬ ಕಡೆಗೆ ಎರಡು ಹಳ್ಳಿಗಳನ್ನು ಹಿಡಿದು ರುಶ್ಯರು ತಮ್ಮ ವಶಮಾಡಿಕೊಂಡರು.

ಒಕ್ನಾ ಬಳಿಯಲ್ಲಿ ಜಯಾಪಜಯಗಳು ಇನ್ನೂ ನಿರ್ಧರಿಸಲಾಗುವದಿಲ್ಲ. ಫೊಕ್ಸಾನಿ ಕಡೆಗೆ ಇನ್ನೂ ಯುದ್ಧ ಜೋರಾಗಿ ನಡೆಯುತ್ತಲಿದೆ. ರುಶ್ಯರ ಒಂದು ಪಡೆಯು ತನ್ನ ಸ್ಥಳವನ್ನು ಬಿಟ್ಟು ಓಡಿಹೋದ್ದರಿಂದ ಜರ್ಮನರು ಮುಂದರಿಸಿ ವಾರ್ನಿಟ್ಸಾ ಬಳಿಯಲ್ಲಿ ರುಶ್ಯರ ಪಾಳ್ಯವನ್ನು ಪ್ರವೇಶಮಾಡಿದರು. ಆದರೆ ಇರೆಸ್ಟಿ ಬಳಿಯಲ್ಲಿಯೂ ಸುಚಿಟ್ಸಾ ಹಳ್ಳಿ ಪ್ರದೇಶದಲ್ಲಿಯೂ ಜರ್ಮನ ಮತ್ತು ಒಸ್ಟ್ರಿಯನ್ ಪಡೆಯ ರಭಸವನ್ನು ರುಶ್ಯರು ತಡೆಸಿದರು. ಶತ್ರುಗಳ ಕಡೆಯಲ್ಲಿ ಬಹಳ ನಷ್ಟವಾಯಿತು. ಸೊವಿಯಜಾ ಬಳಿಯಲ್ಲಿ ಒಸ್ಟ್ರಿಯನರು ಹಿಮ್ಮೆಟ್ಟಿದ್ದನ್ನು ಒಪ್ಪುತ್ತಾರೆ.

ಶತ್ರುಕಡೆಯ ೪೦ ಯುದ್ಧವಿಮಾನಗಳು ರುಶ್ಯದ ವಾಯುವ್ಯ ಭಾಗದಲ್ಲಿರುವ ಫಿನಲೆಂಡ್ ಮತ್ತು ರಿಗಾ ಕೊಲ್ಲಿಗಳಲ್ಲಿರುವ ದ್ವೀಪಗಳ ಮೇಲೆ ಹಲವು ಸಲ ಸಿಡಿಮದ್ದನ್ನು ಚೆಲ್ಲಿದವು. ಮತ್ತು ರುಶ್ಯದ ಯುದ್ಧಹಡಗುಗಳ ಮೇಲೆಯೂ ರೇವುಗಳ ಮೇಲೆಯೂ ೯೦ ಸಿಡಿಮದ್ದಿನ ತೋಟೆಗಳನ್ನು ಸುರಿಸಿದವು. ಈ ಕರಾವಳಿಯ ಸಮೀಪದಲ್ಲಿ ಶತ್ರುಗಳ ಯುದ್ಧ ಹಡಗುಗಳೂ ಜಲಾಂತರ್ಗಾಮಿಗಳೂ ಟೊರ್ಪಿಡೊ ಬೋಟುಗಳೂ ಓಡ್ಯಾಡಲು ತೊಡಗಿದುವು. ರಿಗಾ ಕೊಲ್ಲಿಯಲ್ಲಿ ಶತ್ರುಗಳ ಯುದ್ಧ ಹಡಗುಗಳು ಬಂದು ಕರಾವಳಿಯ ದೇಶದ ಕಡೆಗೆ ಫಿರಂಗಿ ಗುಂಡುಗಳನ್ನು ಹಾರಿಸುತ್ತಲಿವೆ.

ಇಟಲಿಯವರು ತಾವು ಹಿಡಿದ ಬೆಟ್ಟಪ್ರದೇಶಗಳನ್ನು ಭದ್ರಪಡಿಸುವರಲ್ಲದೆ ಅಲ್ಲಲ್ಲಿ ಗವಿಗಳಲ್ಲಿ ಅವಿತುಕೊಂಡಿರುವ ಶತ್ರುಪಡೆಯ ತಂಡಗಳನ್ನು ಸವರುತ್ತಲೂ ಸೆರೆಹಿಡಿಯುತ್ತಲೂ ಇದ್ದಾರೆ. ಇದಲ್ಲದೆ ಸಾನ್‌ಗೆಬ್ರಿಯಲ್ ಮತ್ತು ಟ್ರಿಸ್ಸೊವಿಟಿ ಪ್ರದೇಶಗಳ ಉತ್ತರದಲ್ಲಿ ಇನ್ನೂ ಇಟಲಿಯವರು ಮುಂದೊತ್ತಲಿದ್ದಾರೆ.

ಬೆಲ್ಜಿಯಮಿನ ಫ್ಲೆಂಡರ್ಸ್ ಭಾಗದಲ್ಲಿ ಮಳೆಯಿಂದ ನೆಲವೆಲ್ಲ ಕೆಸರಾಗಿ ಯುದ್ಧಕ್ಕೆ ಬಹಳ ಅಭ್ಯಂತರಗಳಾಗಿವೆ. ಜರ್ಮನರ ಲಷ್ಕರಿನ ಅನೇಕ ಡಿವಿಜನ್‌ಗಳು ಬರಿದಾಗಿ ಬರುವುದನ್ನು ಕಂಡು ಅವರಿಗೆ ಜನಸಹಾಯದ ಕುಟ್ಟೆಯು ಬಾಧಿಸುತ್ತದೆಂದು ತಿಳಿಯಬೇಕಾಗುತ್ತದೆ.

ಕರ್ನೆ ಮತ್ತು ಹುರ್ಟಬಿಸೆ ಬಳಿಯಲ್ಲಿ ಫಿರಂಗಿಗಳ ಶಬ್ದವು ಜೋರಾಗಿ ಕೇಳಿಸುತ್ತದೆ. ನಾಲ್ಕಾವರ್ತಿ ಜರ್ಮನರು ಬಂದು ಮೇಲೆಬಿದ್ದರೂ ಪ್ರಯೋಜನವಾಗಲಿಲ್ಲ.

ಸಪ್ಟಂಬರ ೩ನೇ ತಾರೀಕಿಗೆ ಜರ್ಮನರ ಯುದ್ಧವಿಮಾನಗಳು ಇಂಗ್ಲೆಂಡಿನ ಕೆಂಟ್ ಕರಾವಳಿಯ ವರೆಗೆ ಬಂದು ಹಿಂತಿರುಗಿದುವು. ಕೆಲವು ತೋಟೆಗಳನ್ನು ಚೆಲ್ಲಿದರೂ ಹೆಚ್ಚಿನ ನಷ್ಟವಾಗಲಿಲ್ಲ.

ಇಟಲಿಯವರ ಟ್ರೆಸ್ಸೊವಿಟ್ಸಾ ಸಿಮ್ಮಪ್ರದೇಶದ ಪೂರ್ವಭಾಗದಲ್ಲಿ ಸ್ವಲ್ಪ ಮುಂದೊತ್ತಿದರು.

ವಿದೇಶ ವೃತ್ತಾಂತ.

ರುಶ್ಯದ ಮೊಸ್ಕೊದಲ್ಲಿ ಆದ ಪರಿಷತ್ತು ದೊಡ್ಡದೊಂದು ಪ್ರತಿನಿಧಿಗಳ ಸಭೆಯಾಗಿತ್ತು. ಇದರಲ್ಲಿ ರುಶ್ಯದ ಸ್ಥಿತಿಯನ್ನು ಮುಚ್ಚುಮರೆಯಿಲ್ಲದೆ ಕೆರೆನ್‌ಸ್ಕೀ ಮತ್ತು ಜನರಲ್ ಕೊರ್ನಿಲೊಫರು ವಿವರಿಸಿದ ನಂತರ ಕಾಯಿಡ್‌ಜೆ ಎಂಬವರು (ಕಾಮಗಾರಿಯವರ ಮತ್ತು ಲಷ್ಕರಿನ ಕೌನ್ಸಿಲಿನ ಅಧ್ಯಕ್ಷರು) ಒಳದೇಶದ ಆಡಳಿತೆಯಲ್ಲಿ ಅಗತ್ಯವಿರುವ ಏರ್ಪಾಡುಗಳನ್ನು ಕುರಿತು ಭಾಷಣಮಾಡಿದರು. ಈ ಸಂದರ್ಭದಲ್ಲಿ ರುಶ್ಯಸರಕಾರಕ್ಕೆ ಸೇರಿದ ಬೇರೆ ಬೇರೆ ಜನಾಂಗದವರು ತಮ್ಮ ಪ್ರಾಂತ್ಯಗಳ ಆಡಳಿತೆಯನ್ನು ಕುರಿತು ಈಗಿನ ಸರಕಾರದೊಡನೆ ಚರ್ಚಿಸಿ ಇತ್ಯರ್ಥಮಾಡಿಕೊಳ್ಳುವಂತೆ ಸರಕಾರದವರು ಅವರಿಗೆ ಎಚ್ಚರಿಕೊಡಬೇಕೆಂದು ಹೇಳಿದರು.

"ರುಶ್ಯದ ಕ್ಸ್ಯಾಕ್‌ಮಾಯ್ಕಲ್‌ನಿಕೋಲೊ ವಿಚ್ ರ" ಪ್ರಸಿದ್ಧವಾದ ಹಾಸಗಿ ವಸ್ತುಪ್ರದರ್ಶನಾಲಯದಿಂದ ೫ ಮಿಲ್ಲಿಯ ರೂಬಲ್ ಬೆಲೆಬಾಳುವ ವಸ್ತುಗಳನ್ನು ಕಳ್ಳರು ಕದ್ದುಕೊಂಡು ಹೋದರಂತೆ.

[illegible]

ಗೊತ್ತಾಗದೆ ಸಂಧಿಯ ವಿಷಯವಾಗಿ ಚರ್ಚೆಮಾಡಲು ... ಕೊಟ್ಟಿರುವರು.

ಹೊಲ್ಲೆಂಡಿನ ಸಿಡಿಮದ್ದನ್ನು ಜರ್ಮನ್ ಯುದ್ಧವಿಮಾನಗಳು ಚೆಲ್ಲಿದ್ದಕ್ಕಾಗಿ ನಷ್ಟವನ್ನು ಕೊಡುವೆವೆಂದು ಜರ್ಮನ್ ಸರಕಾರದವರು ಒಪ್ಪಿರುವರು.

ದೇಶಸಂರಕ್ಷಣೆಯ ಆಕ್ಟ್ (ಇಂಡಿಯನ್ ಡಿಫೆನ್ಸ್ ಆಕ್ಟ್) ಮೇರೆಗೆ ಎನ್ನಿ ಬಸೆಂಟರಿಗೆ ಮದ್ರಾಸು ಗವರ್ನಮೆಂಟಿನವರು ನಿರ್ಬಂಧಪಡಿಸಿದ್ದಕ್ಕಾಗಿ ವಿಲಾಯಿತಿಯ ಪ್ರಿವಿಕೌನ್ಸಿಲಿನಲ್ಲಿ ಸ್ಪೆಶಲ್ ಅಪೀಲು ದಾಖಲಾಗಿಯದೆ.

ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಗಳಾದ ಮಿ। ಮೊಂಟೆಗರು ಎನ್ನಿಬಸೆಂಟರ ಮೇಲಿನ ಆರೋಪಗಳ ಪೂರ್ಣ ವಿವರವನ್ನು ತಿಳಿಸಬೇಕಾಗಿ ಹಿಂದೂಸ್ಥಾನದ ಸರಕಾರದವರಿಗೆ ತಂತಿ ಬಿಟ್ಟಿರುವರಂತೆ.

ಜರ್ಮನಿಯ ಮಂ। ಪೋಲೆಂಡನ್ನು ಜಯಿಸಿದ ಮೇಲೆ ಅಲ್ಲಿಯ ಗವರ್ನರರಿಗೆ ಆಡಳಿತೆಯಲ್ಲಿ ಸಹಾಯಮಾಡುವದಕ್ಕಾಗಿ ಏರ್ಪಡಿಸಿದ ರಾಜಕೀಯ ಸಭೆಯ ಮೆಂಬರುಗಳೆಲ್ಲರೂ ರಾಜಕೊಟ್ಟಿರುವುದರಿಂದ ಜರ್ಮನರ ಆಳ್ವಿಕೆಯು ಪೋಲೆಂಡಿನ ಜನರಿಗೆ ಸಮ್ಮತವಾಗಿಲ್ಲವೆಂದು ಸ್ಪಷ್ಟವಾಗುತ್ತದೆ.

ಇಂಗ್ಲೆಂಡಿನಲ್ಲಿ ಕೆಲವು ಆಹಾರಸಾಮಗ್ರಿಗಳ ಬೆಲೆಯನ್ನು ವ್ಯಾಪಾರಸ್ಥರು ಹೆಚ್ಚಿಸುವುದನ್ನು ನೋಡಿ ಸರಕಾರದವರೇ ಆ ಸಾಮಗ್ರಿಗಳನ್ನು ಕೊಂಡುಕೊಂಡು, ನಿಯಮಿತ ಬೆಲೆಗೆ ಪ್ರಜಾಜನಗಳಿಗೆ ವಿಕ್ರಯಿಸುವ ಏರ್ಪಾಡು ಮಾಡಿರುವರು.

ಕೆನಡಾದಲ್ಲಿ ಪ್ರಾಯಸಮರ್ಥರೆಲ್ಲರೂ ಯುದ್ಧದ ಟ್ರೈನಿಂಗ್ ಹೊಂದುವ ಬಗ್ಗೆ ಮಸೂದೆಯು ಅಲ್ಲಿಯ ಪಾರ್ಲಿಮೆಂಟಿನಲ್ಲಿ ಮಂಜೂರಾಯಿತು. ಇದಕ್ಕೆ ವಿರೋಧವಾಗಿ ಎಬ್ಬಿಸಬೇಕೆಂದು ಪಟ್ಟ ಚಳವಳವು ಸಫಲವಾಗಲಿಲ್ಲ.

ಪೆಟ್ರೊಗ್ರೆಡಿನಲ್ಲಿ ಒಕ್ತಾ ಎಂಬಲ್ಲಿ ಇಸ್ಫೋಟಕ ಕಾರಖಾನೆಯು ಸುಟ್ಟುಹೋಗಿ ಹಲವು ಮಿಲಿಯ ರೂಬಲ್ ನಷ್ಟವಾಯಿತು.

ಫಿನ್‌ಲೆಂಡು ರುಶ್ಯದ ವಾಯವ್ಯಭಾಗದ ಒಂದು ಪ್ರದೇಶ. ಅದಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಸ್ವಲ್ಪಮಟ್ಟಿಗೆ ಕೊಟ್ಟಿದ್ದರು. ಆ ಪ್ರದೇಶದವರು ರುಶ್ಯ ಸರಕಾರದವರಿಗೆ ವಿರೋಧ ತೋರ್ಪಡಿಸಿದ ಕಾರಣ ಅಲ್ಲಿಯ ಪಾರ್ಲಿಮೆಂಟು ಸಭೆಯು ಜರಗುವ ಮನೆಯನ್ನೇ ರುಶ್ಯದ ಸೈನ್ಯದವರು ಆಕ್ರಮಿಸಿ ಹಿಡಿದ ಸಭೆ ಸೇರದ ಹಾಗೆ ಆತಂಕಿಸಿರುವರು. ಈ ವಿಷಯವಾಗಿ ಈ ಸಭೆಯ ಅಧ್ಯಕ್ಷರು ಆಕ್ಷೇಪಿಸಿ ಅಲ್ಲಿಯ ಗವರ್ನರ್ ಜನರಲರಿಗೆ ತಿಳಿಸಿರುವರು.

ಒಸ್ಟ್ರಿಯ ರಾಜ್ಯದ ೧೯೧೬-೧೭ನೇ ವರ್ಷದ ಬಜೆಟ್ ಲೆಕ್ಕಾಚಾರವನ್ನು ನೋಡಲಾಗಿ ಅದರ ಹಿಂದಿನ ವರ್ಷದಲ್ಲಿ ಬರೇ ೪೯ ಮಿಲ್ಲಿಯ ಕ್ರೌನು ಮಾತ್ರ ವರ್ಷಾವಧಿ ಆದಾಯಕ್ಕಿಂತ ಹೆಚ್ಚು ಖರ್ಚಾಗಿತ್ತೆಂತಲೂ ೧೯೧೬-೧೭ರಲ್ಲಿ ಆದಾಯಕ್ಕಿಂತ ೩೩೪೪ ಮಿಲ್ಲಿಯ ಕ್ರೌನು ಹೆಚ್ಚಿಗೆ ನಷ್ಟವಾಯಿತೆಂತಲೂ ಗೊತ್ತಾಗುತ್ತದೆ. ಇದರಲ್ಲಿ ೧೭೬೧ ಮಿಲ್ಲಿಯ ಕ್ರೌನ್ ಯುದ್ಧದ ಸಾಲದ ಬಡ್ಡಿಗೆ ತೆರಬೇಕಾಯಿತೆಂದೂ, ಯುದ್ಧಮಾಡುವವರ ಕುಟುಂಬಸಂರಕ್ಷಣೆಗಾಗಿ ೧೬೩೦ ಮಿಲ್ಲಿಯ ಕ್ರೌನು ಖರ್ಚಾಯಿತೆಂದೂ ತಿಳಿಯಬರುತ್ತದೆ.

ಯೂರೋಪಿನ ಬೇರೆ ಬೇರೆ ದೇಶಗಳಿಂದ ಸೋಶಿಯಲಿಸ್ಟ್-ಪಂಥದವರು ಈ ಯುದ್ಧದ ಪರಿಣಾಮವನ್ನು ಚರ್ಚಿಸುವುದಕ್ಕೆ ಸ್ಟೊಕ್‌ಹೋಮ್ ಎಂಬಲ್ಲಿ ಬರುವ ಸಪ್ಟಂಬರ ೯ನೇ ತಾರೀಕಿಗೆ ಸಭೆಕೂಡಬೇಕೆಂದು ನಿಶ್ಚಯಿಸಿತ್ತು. ಆದರೆ ಈ ವಿಷಯ ಇಂಗ್ಲೆಂಡಿನಲ್ಲಿ ಆದ ಚರ್ಚೆಯಲ್ಲಿ ಜರ್ಮನ ಮತ್ತು ಇತರ ಶತ್ರುಜನಾಂಗಗಳ ಕಡೆಯ ಪ್ರತಿನಿಧಿಗಳೊಡನೆ ಈ ಸಭೆಯಲ್ಲಿ ಯುದ್ಧಸಮಾಚಾರವನ್ನು ಚರ್ಚಿಸುವುದು ಅಯುಕ್ತವೆಂದು ಪ್ರಸ್ತಾಪ ಬಂದದರಿಂದ ಆ ಸ್ಟೊಕ್‌ಹೋಮ್ ಮೀಟಿಂಗನ್ನು ಮುಂದರಿಸಿಬಿಟ್ಟಿರುವರು.

ಪೆಟ್ರೊಗ್ರೆಡಿನಲ್ಲಿ ರೈಲವೆ ಎಂಜಿನ್ ಡ್ರೈವರುಗಳು ಮುಷ್ಕರಹಿಡಿಯಬೇಕೆಂದು ಮಾಡಿದ ಪ್ರಯತ್ನವು ಅವರ ಆಕ್ಷೇಪಗಳನ್ನು ಚರ್ಚಿಸಿ ಇತ್ಯರ್ಥಿಸುವ ನಂಬಿಗೆಯನ್ನು ಸರಕಾರದವರು ಕೊಟ್ಟಿದ್ದರಿಂದ ನಿಂತುಹೋಯಿತು.

ಮೊಸ್ಕೊವಿನಲ್ಲಿ ನಡೆದ ಪರಿಷತ್ತಿನ ಕಾಲದಲ್ಲಿ ಈಗಿನ ಸರಕಾರದ ವಿರೋಧವಾಗಿಯೂ ಪದಚ್ಯುತರಾದ ಝಾರರ ಪರವಾಗಿಯೂ ದಂಗೆ ಎಬ್ಬಿಸುವ ಪ್ರಯತ್ನವು ನಡೆಯಿತು. ಇದರಲ್ಲಿ ಹಲವು ಪ್ರಮುಖ ಗೃಹಸ್ಥರು ಸೇರಿರುವುದರಿಂದ ಅವರಲ್ಲಿ ಅನೇಕರನ್ನು ನಿರ್ಬಂಧಿಸಿರುವರು. ಇವರ ಹೆಸರುಗಳನ್ನು ಈಗ ಪ್ರಕಟಿಸುವುದು ಅಪ್ರಶಸ್ತಕರವೆಂದು ರುಶ್ಯ ಸರಕಾರದವರು ಪ್ರಕಟಿಸಲಿಲ್ಲವಂತೆ.

ಒಳದೇಶ ವರ್ತಮಾನ.

ಮದ್ರಾಸಿನಲ್ಲಿ ಡಾ। ದಾದಾಭಾಯಿ ನವರೋಜಿಯವರ ಸ್ಮಾರಕವಾಗಿ ಏರ್ಪಡಿಸುವ ಶಿಲಾವಿಗ್ರಹದ ಖರ್ಚಿಗೆ ಹಣಸಂಗ್ರಹಮಾಡುವ ಕಮ್ಮಿಟಿಯವರಿಗೆ ೨೦೦ ರೂಪಾಯಿ ಮಂತಿಗೆ ಬಂತು.

ಮದ್ರಾಸ ಲಷ್ಕರಿನ ಕಮಾಂಡರ್ ಬಳಿಯಲ್ಲಿ ಈ ಸಂಸ್ಥಾನದಲ್ಲಿ ಡಿಫೆನ್ಸ್ ಫೋರ್ಸಿಗೆ ದಾಖಲು ಆಗಲಿಕ್ಕೆ ಬಂದ ಅರ್ಜಿಗಳು ೧೬೦೦ಕ್ಕೆ ಮೀರಿವೆ ಎಂದು ಸರ್ ಶಿವಸ್ವಾಮಿ ಅಯ್ಯರು ತಿಳಿಸಿರುವರು.

ತಂಜಾವೂರಿನಲ್ಲಿ ದಕ್ಷಿಣ ಕನ್ನಡಾ ಸರಕಾರಿ ನೌಕರರ ಸಹಕಾರಿ ಸಂಘದ ನಿಬಂಧನೆಗಳ ಕ್ರಮವನ್ನು ಅನುಸರಿಸಿ ಒಂದು ಸಂಘವನ್ನು ಏರ್ಪಡಿಸಿದರೆಂದು ಕೇಳುತ್ತೇವೆ. ದಕ್ಷಿಣ ಕನ್ನಡದಲ್ಲಿ ಮಾತ್ರ ಈ ಸಂಘವು ಇನ್ನೂ ಚಾಂಗಿ ಬರಲಿಲ್ಲವೆಂಬುದು ವಿಷಾದದ ಮಾತು.

ಜನವರಿ ಫೆಬ್ರವರಿ ತಿಂಗಳಲ್ಲಿ ತಿರುವಣ್ಣಾಮಲೆ ತಾಲೂಕು ಬೋರ್ಡಿನಲ್ಲಿ ಮಂಜೂರಾದ ಠರಾವುಗಳು ಈಗಲೆ ಜಿಲ್ಲಾ ಗಜೇಟಿನಲ್ಲಿ ಪ್ರಕಟವಾದವು ಎಂದು ವೆಲ್ಲೂರಿನಿಂದ 'ಹಿಂದೂ' ಪತ್ರಿಕೆಯ ಬಾತ್ಮೀದಾರರು ಬರೆಯುತ್ತಾರೆ. ಇದು ಅಲ್ಲಿಯ ಬೋರ್ಡುಗಳಿಗೆ ಮಾತ್ರವಲ್ಲ, ಇತರ ಕಡೆಗಳಲ್ಲಿಯೂ ಬಂದಿರುವ ರೂಢಿಯ ವಹಿವಾಟು. ನಮ್ಮ ಜಿಲ್ಲೆಯಲ್ಲಿಯೂ ಬಹಳ ತಡವಾಗಿ ಈ ಪ್ರೊಸಿಡಿಂಗ್ಸ್‌ಗಳು ಜಿಲ್ಲಾ ಗಜೇಟಿನಲ್ಲಿ ಮುದ್ರಿತವಾಗುವದರಿಂದ ಜನರಿಗೆ ಅವುಗಳ ಪ್ರಯೋಜನವೇ ಇಲ್ಲವಂತಾಗುತ್ತದೆ. ಆಯಾಯ ಸ್ಥಳೀಯ ಪತ್ರಿಕೆಗಳಲ್ಲಿ ಈ ಠರಾವುಗಳನ್ನು ಮುದ್ರಿಸಲಿಕ್ಕೆ ಏರ್ಪಾಡು ಮಾಡಿದರೆ ಎಷ್ಟೋ ಒಳ್ಳೇದು.

ಎನ್ನಿಬಸೆಂಟರ ಸ್ಮಾರಕ ಶಿಲಾಪ್ರತಿಮೆ ಫಂಡಿಗೆ ರೂ. ೬೩೮-೧೧-೦ ಜಮೆ ಆಯಿತು.

ಎನ್ನಿಬಸೆಂಟರ ಫಂಡಿಗೆ ಈ ವರೆಗೆ ರೂ. ೪೯,೫೪೪-೧೩-೪ ಜಮೆ ಆಯಿತು. ಈ ಪೈಕಿ ರೂ. ೧೪,೨೨೫-೩-೦ನ್ನು ಸ್ವದೇಶಿ ವಸ್ತುಗಳ ವ್ಯಾಪಾರ ಮಾಡುವದಕ್ಕೆ ಮತ್ತು ಅವುಗಳ ಪ್ರಚಾರವನ್ನು ಮಾಡುವದಕ್ಕೆ ... [illegible]

ಫಂಡಿನ ...

ಬೊಂಬಾಯಿ ಗವರ್ನ... ಎಂದಿನಂತೆ ಈ ವರ್ಷ ಮಹಾಬಲೇಶ್ವರ... ಇದ್ದು ನವಂಬರ ತಿಂಗಳಲ್ಲಿ ಪುನಃ ಬೊಂಬಾಯಿಗೆ ಬರು... ಸರಕಾರದ ಪ್ರಕಟನೆ ಹೊರಟಿದೆ.

ಮದ್ರಾಸು ಸಂಸ್ಥಾನದಲ್ಲಿ ಪರೀಕ್ಷಾರ್ಥವಾಗಿ ೪ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಸರಕಾರಿ ನೌಕರರಲ್ಲದ (ನೊನ್ ಒಫಿಶಿಯಲ್) ಪ್ರೆಸಿಡೆಂಟರನ್ನು ನೇಮಿಸುವರೆಂದೂ ಅವರಿಗೆ ಸಹಾಯಕರಾಗಿ ಸರಕಾರಿ ಉದ್ಯೋಗಸ್ಥರೂ ಪತ್ರವ್ಯವಹಾರ ಮತ್ತು ವಹಿವಾಟುಗಳ ಕ್ರಮ ತಿಳಿದ ಸರಕಾರಿ ನೌಕರರನ್ನು ವೈಸ್ ಪ್ರೆಸಿಡೆಂಟರಾಗಿ ನೇಮಿಸುವರೆಂದೂ ಮದ್ರಾಸು ಗವರ್ನಮೆಂಟಿನವರ ಹುಕುಂ ಆಗಿದೆ. ಈ ನಾಲ್ಕು ಜಿಲ್ಲೆಗಳು ಯಾವವೆಂದು ಬೇಗನೆ ತಿಳಿಸುವರಂತೆ.

ಪೂರ್ವಾಶ್ರಮದಲ್ಲಿ ಕುರ್ತಕೋಟಿಯ ಡಾ। ಮಹಾಭಾಗವತ ಪಿಯುಚ್. ಡಿ. ಎಫ್. ಆರ್. ಎಸ್. ಎ. ಎಮ್. ಆರ್. ಎ. ಎಸ್. ಆಗಿದ್ದು ಈಗ ಕೊಲ್ಲಾಪುರದ ಜಗದ್ಗುರುಗಳಾಗಿರುವ ಶ್ರೀ ಶಂಕರಾಚಾರ್ಯ ಶ್ರೀ ಪಾದಂಗಳವರು 'ತತ್ವಶಾಸ್ತ್ರ ಮತ್ತು ಮತವಿಚಾರ' ಎಂಬ ಹೆಸರಿನ ಒಂದು ಇಂಗ್ಲಿಷ ವಾರಪತ್ರವನ್ನು ಹೊರಡಿಸುವ ಆಲೋಚನೆ ಮಾಡಿರುವುದಾಗಿ ಅವರ ಸೆಕ್ರೆಟರಿಯವರು ಬರೆಯುತ್ತಾರೆ. ಈ ಪತ್ರವು ೧೯೧೭ನೇ ನವಂಬರ ೧೫ನೇ ತಾರೀಕು ಅಂದರೆ ದೀಪಾವಳಿ ಹಬ್ಬದ ದಿನ ಹೊರಡುವುದು. ಇದರಲ್ಲಿ ಸಾಮಾಜಿಕ, ನೈತಿಕ ಮತ್ತು ವ್ಯಾವಹಾರಿಕ ವಿಷಯಗಳ ಚರ್ಚೆಗಳು ಪ್ರಕಟಿಸಲಾಗುವುವು. ವಾರ್ಷಿಕ ಚಂದಾ ಟಪಾಲು ಹಾಸಲು ಕೂಡಿ ಬರೇ ರೂಪಾಯಿ ೪ ಮಾತ್ರ.

ಒಬ್ಬ ವಿಧವೆಯು ತನ್ನ ಮಗಳ ಗಂಡುಮಕ್ಕಳ ಹೆಸರಿನಲ್ಲಿ ತನ್ನ ಆಸ್ತಿಯನ್ನು ಆ ಮಗಳ ಒಪ್ಪಿಗೆಯಿಂದ ಪರಾಭಾರೆ ಮಾಡಿಬಿಡುವುದಕ್ಕೆ ಹಕ್ಕುಂಟೋ ಎಂಬ ವಿಷಯದಲ್ಲಿ ಮದ್ರಾಸು ಹೈಕೋರ್ಟಿನಲ್ಲಿ ನಡೆದ ಸೆಕೆಂಡ್ ಅಪೀಲಿನಲ್ಲಿ ವಿಧವೆಯೂ ಅವಳ ಮಗಳೂ ತಮ್ಮ ಹಕ್ಕನ್ನು ತಮ್ಮ ವಾರಿಸುದಾರರಿಗೆ ಬಿಟ್ಟುಕೊಡುವುದು ತಪ್ಪಾಗುವುದಿಲ್ಲವೆಂದು ತೀರ್ಪು ಆಯಿತು.

'ಸ್ವದೇಶಿ ಇಂಡಸ್ಟ್ರಿಯಲ್ಸ್ ಲಿಮಿಟೆಡ್' ಎಂಬ ಹೆಸರಿನಿಂದ ಕಂಜೀವರದಲ್ಲಿ ಒಂದು ಕಂಪೆನಿಯು ಒಂದು ಪಾಲಿಗೆ ೨೫ ರೂಪಾಯಿಗಳ ಮೇರೆಗೆ ೧೦೦೦ ಪಾಲುಗಳಿಂದ ೨೫೦೦೦ ರೂಪಾಯಿ ಮೂಲಧನ ಮಾಡುವ ಹಕ್ಕನ್ನು ಇಟ್ಟುಕೊಂಡು ಸ್ಥಾಪನೆಯಾಗಿದೆ. ರಸಾಯನಿಕ ಗೊಬ್ಬರಗಳನ್ನು ತಯಾರು ಮಾಡಿ ಮಾರುವುದು ಈ ಕಂಪೆನಿಯ ಉದ್ದೇಶವಾಗಿದೆ. ಇದಲ್ಲದೆ ಹತ್ತಿಯ, ವೇಷ್ಟಿ, ಸೊಂಟದಪಟ್ಟಿ ಮೊದಲಾದವುಗಳನ್ನು ನೇಯುವ ಕೆಲಸವನ್ನು ಸಹ ಈ ಕಂಪೆನಿಯವರು ಮಾಡುವುದರಲ್ಲಿದ್ದಾರೆ.

ಸೆಂಟ್ರಲ್ ಪ್ರೊವಿನ್ಸ್ (ಮಧ್ಯಸಂಸ್ಥಾನ) ದಲ್ಲಿ ಸೀಓನಿ ಹೈಸ್ಕೂಲಿನ ವಿದ್ಯಾರ್ಥಿಗಳು ರಾಜಕೀಯ ವಿಷಯಗಳನ್ನು ಚರ್ಚಿಸುವ ಸಭೆಗಳಿಗೆ ಹೋಗದಂತೆ ಹಿರಿಯರಿಂದ ತರಬೇಕಾದ ಜಾಮೀನು ಪತ್ರದ ಕ್ರಮವನ್ನು ಆಕ್ಷೇಪಿಸಿ ಶಾಲೆಗೆ ಹೋಗದೆ ನಿಂತುಬಿಟ್ಟಿದ್ದರು. ಈಗ ಸ್ವಲ್ಪ ರಿಯಾಯಿತಿಗಳು ದೊರಕಿದ್ದರಿಂದ ಪುನಃ ಶಾಲೆಗೆ ಹೋಗಲಾರಂಭಿಸಿರುವರು.

ಕಲ್ಕತ್ತೆಯ ಹಲವು ಪ್ರಮುಖ ಪ್ರಜಾಪ್ರತಿನಿಧಿ ಸಭೆಗಳ ಕಡೆಯಿಂದ ೧೦೦ ಪ್ರತಿನಿಧಿಗಳು ಬಂಗಾಳೆಯ ಗವರ್ನರ್ ಬಹುಮಾನಪಟ್ಟ ಲೊರ್ಡ್ ರೊನಾಲ್ಡ್‌ಶೆಯವರ ಮುಂದೆ ಹಾಜರಾಗಿ ಕುಸ್ತದಲ್ಲಿ ಹಲವು ಜಿಲ್ಲೆಗಳನ್ನು ಮಿಶ್ರಮಾಡಿ ವ್ಯಾಪಾರಿಗಳು ಉಂಟುಮಾಡುವ ತೊಂದರೆ ಮತ್ತು ಬಾಧಕ ನಿವಾರಣೆ ಬಗ್ಗೆ ಒಂದು ಕಾಯಿದೆಯನ್ನು ಮಾಡಬೇಕಾಗಿ ಮನವಿ ಮಾಡಿದ್ದಕ್ಕೆ ಅವರ ಮಸೂದೆಯು ಬೇಗನೆ ಲೆಜಿಸ್ಲೆಟಿವ್ ಕೌನ್ಸಿಲಿನ ಮುಂದೆ ಇರಗೊಡಿಸುವುದಾಗಿ ಭರವಸೆ ಸಿಕ್ಕಿತು.

ಈಗ ಬೆಳ್ಳಿಯ ಬೆಲೆಯು ಏರಿರುವುದರಿಂದ ಪರದೇಶಗಳಿಗೆ ಬೆಳ್ಳಿಯನ್ನೂ ಬೆಳ್ಳಿಯ ನಾಣ್ಯಗಳನ್ನೂ ಕಳುಹಿಸುವದು ಲಾಭಕರವೆಂದು ತಿಳಿದು ಜನರು ಈ ರೀತಿ ಮಾಡದಹಾಗೆ ಇಂಡಿಯಾ ಗವರ್ನಮೆಂಟಿನವರ ಒಂದು ಹುಕುಂ ಹೊರಟಿರುವುದು. ಇದರ ಮೇರೆಗೆ ಪ್ರಯಾಣಸ್ಥರು ೧೦೦ ರೂಪಾಯಿಗಳಿಗೆ ಮಿಕ್ಕಿ ಹಡಗಗಳ ಕಪ್ತಾನರು ಕಲಾಸಿಗಳ ಸಂಬಳದ ಬಗ್ಗೆ ೧೦೦೦ ರೂಪಾಯಿಗಳಿಗೆ ಮಿಕ್ಕಿ ರೂಪಾಯಿಗಳನ್ನು ಹಿಂದೂಸ್ಥಾನದಿಂದ ಪರದೇಶಗಳಿಗೆ ಕೊಂಡುಹೋಗಕೂಡದಂತೆ. ಇವಲ್ಲದೆ ಇಂಡಿಯಾ ಸರಕಾರದವರ ಬಗ್ಗೆ ಹಿಂದೂಸ್ಥಾನಕ್ಕೆ ಬರುವ ಬೆಳ್ಳಿಯ ನಾಣ್ಯಗಳು ನಿಜಾಮ ಸರಕಾರದ ಬಗ್ಗೆ ಬರುವ ಬೆಳ್ಳಿ ಮತ್ತು ಇಂಡಿಯಾ ಸರಕಾರದ ಲೈಸನ್ಸ ಪಡೆದು ತರಿಸುವ ಬೆಳ್ಳಿಯಲ್ಲದ ಬೇರೆ ಬೆಳ್ಳಿಯು ಹಿಂದೂಸ್ಥಾನದೊಳಕ್ಕೆ ಬರಕೂಡದೆಂದು ೧೧ನೇ ಜುಲಾಯಿಗೆ ಹೊರಟ ಪ್ರಕಟನೆಯನ್ನು ಈಗ ಜಾರಿಗೆ ತರಲಾಗುವುದು.

ಹುಗ್ಲಿ ಬಳಿಯಲ್ಲಿ ಗಂಗಾನದಿಯ ಪ್ರವಾಹವು ಉಕ್ಕಿ ಸುಮಾರು ೨೨ ಫೀಟ್ ಎತ್ತರಕ್ಕೆ ಬಂದಕಾರಣ ರಸ್ತೆಗಳಲ್ಲಿ ನೀರುನಿಂತಿತು. ಅದು ಒಂದುಸಲ ಇಳಿದುಹೋದನಂತರ ೩೦೧ ೩ನೇ ತಾರೀಕಿಗೆ ಒಂದು ದೊಡ್ಡ ನೆರೆ ಇರುವ ಸಂಭವ ಕಂಡುಬರುತ್ತದೆ.

ಯುನೈಟೆಡ್ ಪ್ರೊವಿನ್ಸ್ (ಸಂಯುಕ್ತಸಂಸ್ಥಾನ) ದಲ್ಲಿ ಹೈಸ್ಕೂಲುಗಳಲ್ಲಿ ಸ್ಥಳ ಸಾಕಾಗದೆ ಅನೇಕ ಮಕ್ಕಳನ್ನು ದಾಖಲುಮಾಡದೆ ಹಿಂದಕ್ಕೆ ಅಟ್ಟುತ್ತಾರೆಂದು ಸರಕಾರದ ಬಳಿಯಲ್ಲಿ ದೂರುಕೊಟ್ಟದ್ದರಿಂದ ಅದರ ವಿಚಾರಣೆ ಬಗ್ಗೆ ಏರ್ಪಡಿಸಿದ ಕಮ್ಮಿಟಿಯವರ ತನಿಖೆಯಲ್ಲಿ ಈ ರೀತಿಯಾಗಿ ವಿದ್ಯೆ ಕೊಡಕಾಗಿರುವುದೆಂಬುದು ಒಂದೆರಡು ಕಡೆಗಳಲ್ಲಿ ಮಾತ್ರವೇ ಅಲ್ಲದೆ ಸರ್ವತ್ರವಾಗಿಲ್ಲವೆಂದು ಆ ಕಮ್ಮಿಟಿಯವರು ರಿಪೋರ್ಟು ಮಾಡಿರುವರು. ಆದರೆ ಪ್ರತಿಶಾಲೆಯ ಹೆಡ್ಮಾಸ್ತರರು ಎಷ್ಟು ಮಂದಿಗೆ ಸ್ಥಳಸಂಕೋಚದ ದೆಸೆಯಿಂದ ದಾಖಲು ಮಾಡಲು ತಿರಸ್ಕರಿಸಬೇಕಾಯಿತು ಎಂಬ ರುಜುವಾತುಗಳನ್ನು ಬರೆಯಬೇಕೆಂದು ಸರಕಾರದವರು ಹುಕುಂ ಕೊಟ್ಟಿರುವರು.

ಒನರೆಬಲ್ ಸುರೇಂದ್ರನಾಥ ರೋಯಿಯವರು ಕಡ್ಡಾಯದ ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನು ಮಂಜೂರು ಮಾಡುವ ಬಗ್ಗೆ ಮಸೂದೆಯನ್ನು ಬಂಗಾಳದ ನ್ಯಾಯವಿಧಾಯಕ ಸಭೆಯ ಮುಂದೆ ಇರಿಸುವರು. ಈ ಮಸೂದೆಯಲ್ಲಿ ಮ್ಯುನಿಸಿಪಲ್ ಬೋರ್ಡುಗಳ ಆಡಳಿತೆಯೊಳಗಿರುವ ಪ್ರದೇಶದಲ್ಲಿಯೂ ಸರಕಾರದವರು ಪ್ರಕಟನೆ ಮೂಲಕ ಈ ಕಾಯಿದೆಯನ್ನು ಜಾರಿಗೆ ತರಬಹುದೆಂದು ಒಂದು ಕಲಂ ಇದೆ.

ಪ್ರಕಾಶಕರು:—[illegible]

[illegible]

CANARA ...

	ಪಾನು.
೧ ಅರ್ಥಸ್ಯ ಪುರುಷೋದಾಸಃ.	೪
ಸ್ಫುಟವಿಚಾರಗಳು:—	
೧ ಸತ್ಯಾಗ್ರಹದ ಚಳವಳವೂ ಮದ್ರಾಸ್‌ಮೈಲಿನ ಫೂತ್ಕಾರವೂ	,,
೨ ನಾವು. ಬಾಸುಗಳ ಉದ್ಗಾರಗಳು	೪-೫
೩ ರಾಷ್ಟ್ರೀಯ ಸಭೆಯ ಅಧ್ಯಕ್ಷತೆ	,,
೪ ಕಲಕತ್ತೆಯ ಒಡಕು	,,
೫ ಲೋಕಲ್‌ಬೋರ್ಡಿನ ಸುಧಾವೃ[illegible]	,,
೬ ಹಿಂದೀ ವಸಾಹತದಾರರೂ ಸರಕಾರ ಠರಾವೂ	,,
ಸ್ಥಳಿಕ—ಮಂಗಳೂರು	
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೬
೨ ವಿದೇಶ ವೃತ್ತಾಂತ	,,
೩ ಸ್ವದೇಶ ವರ್ತಮಾನ	,,
೪ [illegible] — [illegible]	೭
೫ ಪತ್ರವ್ಯವಹಾರ — ಸಿಂಹನಗದ್ದೆ ಜೈನಬಸ್ತಿಮಠ, ಉಪಾಧ್ಯಾಯರ ಸ್ನೇಹಿತ	,,

ಸ್ವದೇಶಾಭಿಮಾನಿ.

ಶಕೆ ೧೮೪೬ ಭಾದ್ರಪದ ಬ. ೬. ಶುಕ್ರವಾರ.

ಅರ್ಥಸ್ಯ ಪುರುಷೋದಾಸಃ

ಸಮಾಜದ ಬಾಲ್ಯಾವಸ್ಥೆಯನ್ನು ನಿರೀಕ್ಷಿಸಿ ಅದರ ಉತ್ಕ್ರಮಣವು ಯಾವ ರೀತಿಯಿಂದ ಆಗುತ್ತ ಬಂತು ಎಂಬುದನ್ನು ಸೋದಾಹರಣವಾಗಿ ತೋರಿಸಿಕೊಡುವ ಸಮಾಜಶಾಸ್ತ್ರಜ್ಞರು ಮನೋರಂಜಕ ಮತ್ತು ಬೋಧಪ್ರದವಾದ ಕೆಲವು ಸಿದ್ಧಾಂತಗಳನ್ನು ಹೇಳುತ್ತಾರೆ. ಈ ಹೊತ್ತು ಕಂಡುಬರುವ ಮಾನವ ಸಮಾಜದ ವಿಕಾಸವು ಒಮ್ಮಿಂದೊಮ್ಮೆ ಆದುದಲ್ಲ. ಗಿಡದಿಂದ ಅರಳಿ ಕೆಳಗೆ ಬಿದ್ದ ದೊರಗುಹತ್ತಿಯು, ಅನೇಕ ರೂಪಾಂತರಗಳನ್ನು ಹೊಂದಿ ಡಾಕ್ಕಾ ಪಟ್ಟಣದ ಕಾರಖಾನೆಯಿಂದ ಮಸ್ಲಿನಿನ ಅಥವಾ ಮಲಮಲಿನ ರೂಪದಿಂದ ಹೇಗೆ ಹೊರಬೀಳುತ್ತಿತ್ತೊ ಹಾಗೆಯೆ ಒಂದು ಕಾಲದಲ್ಲಿ ಕೇವಲ ಗ್ರಾಮ್ಯಸ್ಥಿತಿಯಲ್ಲಿದ್ದ ಈ ಮಾನವ ಸಮಾಜವು ಸೃಷ್ಟಿಯೊಡನೆ ಹೋರಾಡಿ ಹೋರಾಡಿ ಒಂದ ಅನುಭವಗಳಿಂದ ಸಂಸ್ಕೃತಿ ಮಾರ್ಗದಲ್ಲಿ ಒಂದೊಂದೆ ಹೆಜ್ಜೆಯನ್ನು ಮುಂದಿಡುತ್ತಾ ಈ ಹೊತ್ತು ಈ ಪರಿಣತ ಸ್ಥಿತಿಗೆ ಬಂದು ತಪ್ಪಿಯದೆ. ಸೃಷ್ಟಿಯ ಕ್ರೂರಸ್ವಭಾವದ ಪ್ರವಾಹದಲ್ಲಿ ಬಿದ್ದ ಮಾನವ ಸಮಾಜವು ಅದರೊಡನೆಯೆ ತೇಲಿಕೊಂಡು ಹೋಗದೆ ಆ ಪ್ರವಾಹದ ಗತಿಗೆ ಪ್ರತಿರೋಧಕವಾಗಿ ಈಜಹತ್ತಿದ್ದರಿಂದ ಮಾನವ ಸಂಸ್ಕೃತಿಯ ಸೋಪಾನಗಳು ಹೆಚ್ಚುತ್ತ ಹೋದವು. ಬಡ್ಡಿಗೆ ಹಚ್ಚಿದ ಹಣವು ದಿನೇ ದಿನೇ ಏರುತ್ತ ಹೋಗುವಂತೆ ಸೃಷ್ಟಿಯೊಡನೆ ನಡಿಸಿದ ಹೋರಾಟದಿಂದ ಮಾನವ ಸಮಾಜದ ಅನುಭವಕೋಶವು ದೊಡ್ಡದಾಗುತ್ತ ಬಂದಲ್ಲಿ ಆಶ್ಚರ್ಯವೇನೂ ಇಲ್ಲ. ಈ ಅನುಭವವು ಧರ್ಮಕಲ್ಪನೆ, ತತ್ವಜ್ಞಾನ, ವಿವಿಧ ಶಾಸ್ತ್ರ, ಕಲಾಕೌಶಲ್ಯ ರೂಪಗಳಿಂದ ಪರಿಣಮಿಸಿತು. ಪುನಃ ಇದರಿಂದ ಅನುಭವವು ಬೆಳೆಯಿತು. ಪುನಃ ಅದರಿಂದ ಸಂಸ್ಕೃತಿಯು ಉದ್ಭವಿಸಿತು. ಎಂದರೆ ಅನನಾಸ ಗಿಡಕ್ಕೆ ಕಾಯಿ, ಆ ಕಾಯಿಗೆ ಪುನಃ ಗಿಡ ಇದು ಹೇಗೆ ಅನ್ಯೋನ್ಯ ಕಾರಣಾತ್ಮಕವಾದ ದೃಷ್ಟಾಂತವೊ ಹಾಗೆಯೆ. ಅನುಭವದಿಂದ ಸುಧಾರಣೆ ಮತ್ತು ಸುಧಾರಣೆಯಿಂದ ಪುನಃ ಅನುಭವ ಇವು ಪರಸ್ಪರ ಕಾರಣಗಳೆಂಬುದು ಸೂಕ್ಷ್ಮ ನಿರೀಕ್ಷಣಾಂತ್ಯದಲ್ಲಿ ಕಂಡು ಬರುತ್ತದೆ. ಅನುಭವ ಭಾಂಡಾರವನ್ನು ಬೆಳೆಸಿಕೊಂಡು ಮಾನವ ಸಮಾಜವು ಆ ಜ್ಞಾನಸಂಗ್ರಹದಿಂದ ಪ್ರೌಢವಾಗುತ್ತ ಬಂದಲ್ಲಿ ಅದರ ಸ್ವಭಾವಪ್ರಾಯವಾದ ದೋಷಗಳು ಮರದಿಂದ ಹಣ್ಣಾದ ಎಲೆಗಳು ಉದುರಿಬೀಳುವಂತೆ ತನ್ನಷ್ಟಕ್ಕೆ ಲುಪ್ತಪ್ರಾಯವಾಗುತ್ತ ಬರುವವು. ದಯೆ, ಪರೋಪಕಾರ, ಸತ್ಯನಿಷ್ಠೆ, ಸಮತೆ, ಅಹಿಂಸೆ, ಸರ್ವಾತ್ಮಭಾವ ಮೊದಲಾದ ಉಚ್ಚತರದ ನೀತಿತತ್ವಗಳು ಸಮಾಜದ ಆಚರಣದಲ್ಲಿ ಬರುವವು. ಸೃಷ್ಟ್ಯವಲೋಕನದಿಂದ ಕಲಾಶಾಸ್ತ್ರಗಳ ಪ್ರಗತಿಯು ಆಗಿ ಆ ಮೂಲಕ ಜೀವನಮಾರ್ಗದಲ್ಲಿ ಅನುಕೂಲತೆ ಮತ್ತು ಉಪಯುಕ್ತತೆಯನ್ನು ಸಂಪಾದಿಸುವುದೆ ಈ ಹೊತ್ತಿನ ಸುಧಾರಿಸಿದ ಮಾನವ ವಂಶದ ಉದ್ದಿಷ್ಟ ಧ್ಯೇಯವಾಗಿದೆ. ಈ ಧ್ಯೇಯವನ್ನು ಸಾಧಿಸುವುದಕ್ಕಾಗಿ ಸುಧಾರಿಸಿದ ಮಾನವ ವಂಶದ ಪ್ರಯತ್ನವು ಅಹರ್ನಿಶವಡೆದಿದೆ. ಈ ನಿರ್ದಯ ಸೃಷ್ಟಿಯ ವಿರೋಧವನ್ನೂ, ಪ್ರತಿಕೂಲತೆಯನ್ನೂ ತೆಗೆದು ಹಾಕಿ ಅದನ್ನು ತಮ್ಮ ಜೀವನಕ್ಕೆ ಅನುಕೂಲವನ್ನಾಗಿಯಾಗಲಿ, ಕನಿಷ್ಠ ಪಕ್ಷಕ್ಕೆ ಅದರ ವಿರೋಧ ಮತ್ತು ಪ್ರತಿಕೂಲತೆಗಳಿಂದೂ ಹೋಗದವಾದರೆ ಅವುಗಳ ಬಾಧೆಯು ಅಥವಾ ಜಳವು ತಟ್ಟಕೂಡದು ಎಂಬುದಕ್ಕೆ ಈ ಸೃಷ್ಟಿಯು ಹೇಗೆ ಪ್ರತಿಸ್ಪರ್ಗವಾದೀತು ಇದೇ ಈಗಿನ ಉದ್ದಿಷ್ಟ ಧ್ಯೇಯದ ಪ್ರಧಾನ ಸೂತ್ರವಾಗಿದೆ.

ಈ ಹೋರಾಟವು ಒಂದು ರೀತಿಯಿಂದ ಸ್ಪೃಹಣೀಯವಾಗಿದ್ದರೂ ಇನ್ನೊಂದು ಕಡೆಯಿಂದ ಇದರ ಮೂಲಕ ದೋಷಗಳು ದೃಢಮೂಲವಾಗುವುದರಿಂದ ವ್ಯಸನಕ್ಕೆ ಕಾರಣವಾಗಿದೆ. ಮಾನವವ್ಯಕ್ತಿಯು ಅಥವಾ ಸಮಾಜವು ಉತ್ಕ್ರಮಣವಾಗುತ್ತ ಬರುವಾಗ ಮೇಲೆಹೇಳಿದ ದಯೆ, ಪರೋಪಕಾರ, ಸರ್ವಾತ್ಮಭಾವ ಮುಂತಾದ ಅತ್ಯುಚ್ಚನೀತಿ ತತ್ವಗಳು ವ್ಯಕ್ತಿಯ ಮೈಯ್ಯಲ್ಲಿ ಒಗ್ಗಿಹೋಗುವಂತೆ ಕೆಲವು ದೋಷಗಳೂ ತಮ್ಮ ರಾಜ್ಯವನ್ನು ಹಾಕುವವು. ಕಬ್ಬಿನ ರಸವನ್ನು ಪಾಕ ಮಾಡುವಾಗ ಒಂದು ಕಡೆಯಲ್ಲಿ ಸಕ್ಕರೆಯೂ ಇನ್ನೊಂದು ಕಡೆಯಲ್ಲಿ ಮದ್ಯವೂ ಬರುವಂತೆ ಮಾನವ ವ್ಯಕ್ತಿಯು ಸೃಷ್ಟಿಯೊಡನೆ ಹೋರಾಡಿ ಹೋರಾಡಿ ಉಚ್ಚ ನೀತಿ ಕಲ್ಪನೆಗಳನ್ನೂ, ಸ್ವಾರ್ಥಪರ ದೋಷಗಳನ್ನೂ ಸಂಪಾದಿಸಿದೆ. ನೀತಿಯ ಉದಾತ್ತ ತತ್ವವಾದ ಸರ್ವಾತ್ಮಭಾವದ ಕೆಂಬೆರ್ ಸಂಕೋಚವು ಸ್ವರಾಷ್ಟ್ರಭಾವವು. ಈ ತತ್ವದ ಉದಯವು ಸಮಾಜದ ಅತಿ ಬಾಲ್ಯಾವಸ್ಥೆಯಲ್ಲಿ ಆದುದು ಕಂಡುಬರುವದಿಲ್ಲಾದರೂ ಮತ್ತು ಸರ್ವಾತ್ಮಭಾವಕ್ಕೆನೆ ಧ್ಯೇಯಸ್ಥಾನವನ್ನು ಕೊಡುವುದು ಉಚಿತವಾಗಿದ್ದರೂ ಸದ್ಯಸ್ಥಿತಿಯು ಹೆಸರಿನಿಂದ ನಡೆಯುವ ಕೇವಲ ಕೃತ್ರಿಮ ಹೋರಾಟದಲ್ಲಿ ಜಯವನ್ನು ಹೊಂದುವುದಕ್ಕಾಗಿ ಸ್ವರಾಷ್ಟ್ರಭಾವದ ಕಲ್ಪನೆಯು ಅಸ್ತಿತ್ವದಲ್ಲಿ ಬಂತೆಂಬುದು ಒಪ್ಪಿಕೊಳ್ಳಬೇಕಾಗಿದೆ. ಇದು ಸ್ವಾರ್ಥದ ಗಾಳಿಯಿಂದ ಕೊಂಚಮಟ್ಟಿಗೆ ಸಂಸ್ಪೃಷ್ಟವಾಗಿದ್ದರೂ ಹೇಳಿ ಕೇಳಿದ ನೀತಿಕಲ್ಪನೆಗಳ [illegible] ಇದನ್ನು [illegible] ಯುಕ್ತವಾಗಿದೆ. [illegible] ಸ್ವರಾಷ್ಟ್ರಭಾವತತ್ವವು ವಿದ್ಯೆ, ಶಿಕ್ಷಣ, [illegible], ನೀತಿತತ್ವಗಳ ಪ್ರಸಾರಣ ಮುಂತಾದ [illegible] [illegible] [illegible] ಮಾನವ ಸಮಾಜದ [illegible] [illegible] [illegible] [illegible] ಉಪದೇಶ [illegible] [illegible] [illegible] ಸಂಸ್ಕೃತ [illegible] [illegible] [illegible] [illegible] ಗೊತ್ತಾಗದ [illegible] ಹೋಗುವವು. ಆದರೆ [illegible] ಮತ್ತು [illegible] ಸ್ವರಾಷ್ಟ್ರದ ಸರ್ವಾತ್ಮಭಾವವು ಎಷ್ಟೋ ಬಾರಿ ಸ್ವಾರ್ಥದಿಂದ ಪರಾಜಿತವಾಗಿ ಹೋಗುವುದು. ಮೇಲೆ ವಿವರಿಸಿಕೊಂಡು ಬಂದಂತೆ ಸುಧಾರಣೆಯು ಪರಿಸ್ಥಿತಿಗೆ ಬದಲಾಗಿ ಹುಟ್ಟಿದ್ದಾದರೂ ಮತ್ತು ಆ ಸುಧಾರಣೆಯಿಂದ ಉದಾರ ನೀತಿತತ್ವಗಳ ಉದ್ಗಮವಾದಮೇಲಾದರೂ ಈ ಸುಧಾರಣಾಲಂಕೃತ ವ್ಯಕ್ತಿಯೆ ಪರಿಸ್ಥಿತಿಯ ದಾಸ್ಯದಲ್ಲಿ ಬಿದ್ದು ಸ್ವಾರ್ಥಪರವಾಗಿ ಹೋಗುವುದು. ಉದಾತ್ತ ತತ್ವಗಳ ಸಂಸ್ಕಾರವು ಅಂತಃಕರಣದಲ್ಲಿ ಮುದ್ರಿತವಾಗಿ ವ್ಯಕ್ತಿಯು ಅಥವಾ ಸಮಾಜವು ನೀತಿಪರವಾದಲ್ಲಿ ಪರಿಸ್ಥಿತಿಯ ಗುಲಾಮನಾಗುವುದು ಹೇಗೆ? ಅಂತಃಕರಣದೊಡನೆ ಇಂದ್ರಿಯಗಳ ಪ್ರವೃತ್ತಿಯು ನೀತಿಯ ಕಡೆಗೆ ಉಂಟಾದಮೇಲೆ ಪ್ರಸಕ್ತ ಪರಿಸ್ಥಿತಿಯ ನೆವದಿಂದ ದೋಷಗಳ ಕಡೆಗೆ ಒಲುವುದು ಹೇಗೆ? ಈ ಪ್ರಶ್ನೆಯು ನಿಜವಾಗಿ ವಿಚಾರಣೀಯವಾಗಿದೆ ಹೌದು. ಆದರೆ ಮಾನವ ಸಂಸ್ಕೃತಿಯ ಮೂಲವನ್ನು ನಿರೀಕ್ಷಿಸಿದರೆ ಇದರಲ್ಲೇನೂ ಆಶ್ಚರ್ಯ ತೋರಲಾರದು. ಸಮಾಜವು ಅಥವಾ ವ್ಯಕ್ತಿಯು ಎಷ್ಟು ಸುಸಂಸ್ಕೃತವಾದರೂ, ಅದರ ಸ್ವಭಾವದಲ್ಲಿರುವ ವೈಗುಣ್ಯವು ಹೋಗುವುದು ಅಸಾಧ್ಯವು. ಕಬ್ಬಿನ ಬೆಳೆಯಲ್ಲಿ ಯಾವ ಸುಧಾರಣೆಗಳನ್ನು ಮಾಡಿದರೂ ಅದರ ಒಂದು ದೋಷವು ಎಂದೂ ಬಿಟ್ಟುಹೋಗದು. ಕೃಷಿಯ ಸುಧಾರಣೆಯಿಂದ ಕಬ್ಬಿನಲ್ಲಿ ಮಧುರಸದ ಆಧಿಕ್ಯವನ್ನು ನಾವು ತರಬಹುದು. ಆದರೂ ಬುಡದಿಂದ ತುದಿಯ ತನಕ ಹರಿದುಕೊಂಡು ಹೋಗುವ ಮಧುರ ರಸವಾಹಿಗಳಾದ ನಾಳಿವೆಗಳನ್ನು ಮಧ್ಯಮಧ್ಯದಲ್ಲಿ ಗಂಟುಗಳು ಹೇಗೆ ತಡೆಕಟ್ಟುವವೋ ಹಾಗೆಯೆ ಉದಾತ್ತ ತತ್ವಗಳನ್ನು ಸ್ವಾರ್ಥಪರತೆಯು ತಡೆವುದು. ಕಬ್ಬಿನಲ್ಲಿ ಮಧುರ ರಸವಿರುವುದೂ ಸಹಜ, ಗಂಟುಗಳಿರುವುದೂ ಸಹಜ. ಇದೇ ನ್ಯಾಯವು ಮಾನವ ಸಂಸ್ಕೃತಿಗೆ ಅನ್ವಿತವಾಗುತ್ತದೆ. ರಾಷ್ಟ್ರೋನ್ನತಿ, ರಾಷ್ಟ್ರಲಾಭ, ರಾಷ್ಟ್ರಹಿತ ಈ ಉಚ್ಚತತ್ವಗಳ ಶಿಖರದಲ್ಲಿ ನಿಂತು ಕಾರ್ಯಭಾರವನ್ನು ನಡಿಸುತ್ತಿರುವ ಸಮಾಜಗಳೂ ವ್ಯಕ್ತಿಗಳೂ ಸ್ವೋನ್ನತಿ ಸ್ವಲಾಭ, ಸ್ವಹಿತ ಈ ಸ್ವಾರ್ಥತತ್ವಗಳ ಛಾಯೆಯಲ್ಲಿ ಧುಮುಕುವವು. ಸ್ವಾರ್ಥದ ಪ್ರತೀಪದ ಎದುರಿನಲ್ಲಿ ನಿಂತಕೂಡಲೆ ಮೊದಲಿನ ನೀತಿಕಲ್ಪನೆಗಳೂ, ಸರ್ವಾತ್ಮಭಾವದ ರಾಷ್ಟ್ರಭಾವವೂ, ಉತ್ಸಾಹವೂ ಇವೆಲ್ಲ ಗಾಳಿಗೆ ಹಾರಿಹೋಗುವವು. ಜ್ಞಾನಿ ಮತ್ತು ಸುಧಾರಿಸಿದ ವ್ಯಕ್ತಿಯಲ್ಲಿ ಕೂಡ ಸ್ವಾರ್ಥವನ್ನು ಉದ್ದೀಪಿಸುವ ಸಾಧನಗಳಲ್ಲಿ ದ್ರವ್ಯವು ಮುಖ್ಯವಾದುದು. ಈ ಲಾಭವು ಕೈಗೆ ಬರುತ್ತದೆಂದಾದರೆ ಪ್ರಾಯಃ ನೂರರಲ್ಲಿ [illegible] ವ್ಯಕ್ತಿಗಳು ಪೂರ್ವದ ಮಾನಿಕ್ಯ, ಲೋಕಹಿತ ತತ್ಪರತೆ, ಸ್ವರಾಷ್ಟ್ರಭಕ್ತಿ ಇವುಗಳನ್ನು ಮರೆತು ಕೇವಲ ದ್ರವ್ಯದಾಸರಾಗುವರು. ಆದುದರಿಂದಲೇ ಭೀಷ್ಮನಂಥ ಸತ್ಯಪ್ರತಿಜ್ಞನು ಕೂಡ ಸ್ವಚರಿತ್ರವನ್ನು ವ್ಯಕ್ತಗೊಳಿಸುತ್ತಾನೋ ಎಂಬ ಹಾಗೆ, "ಅರ್ಥಸ್ಯ ಪುರುಷೋ ದಾಸಃ" ಎಂದು ಹೇಳಿರುವನು. "ಕೌರವಪಾಂಡವರೊಳಗೆ ಕೌರವರ ಪಕ್ಷವನ್ನು ಭೀಷ್ಮ ದ್ರೋಣ ಮೊದಲಾದವರು ಯಾಕೆ ಹಿಡಿದರು!" ಎಂದು ಕೇಳಿದ್ದಕ್ಕೆ ಭೀಷ್ಮನ ಮಾತು ಬಂದೆ. "ಪುರುಷನು ದ್ರವ್ಯದಾಸನು".

ದ್ರವ್ಯದಾಸ್ಯದಿಂದ ಯಾವ ಕೆಲಸವು ಆಗುವುದು! ಸುಧಾರಣೆ, ಸಂಸ್ಕೃತಿ, ವಿದ್ವತ್ತೆ ಮುಂತಾದ ಬೇಕಷ್ಟು ದೊಡ್ಡ ದೊಡ್ಡ ಹೆಸರುಗಳನ್ನು ಜಪಿಸುತ್ತ ಕುಳಿತರೂ ಅರ್ಥಪರವಶನಾದವನು ಅವುಗಳನ್ನೆಲ್ಲ ನಟನಾರ್ಥವಾಗಿಯೆ ಇಟ್ಟುಕೊಳ್ಳುವನು. ಮಾತ್ರವಲ್ಲ, ತನ್ನ ಪೂರ್ವಾಶ್ರಮದ ಕೃತ್ಯದ ಮೇಲೆ ಶಾಸ ಕೃಷ್ಣಾರ್ಪಣಮಾಡುವನು. ದ್ರವ್ಯಪಾರವಶ್ಯದಿಂದ ಯಾವ ಯಾವ ಅಪೂರ್ವ ಸಂಗತಿಗಳು ಸಂಭವಿಸುತ್ತವೆಂಬುದನ್ನು ವರ್ಣಿಸಹೋದರೆ ಅದು ಎಂದೂ ಮುಗಿಯದ ವಿಷಯವು. ಆದರೂ 'ಮೃದಂಗವು ಮುಖಲೇಪದಿಂದ ಮಧುರವಾದ ಧ್ವನಿಯನ್ನು ಮಾಡುತ್ತದೆ.' ಎಂದು ಹೇಳಿರುವಂತೆ, ಒಮ್ಮೆ ಸುಪ್ರಸಿದ್ಧ ವಂಗಭಂಗದ ಸಮಯದಲ್ಲಿ ಅಸಾಮಾನ್ಯ ಚಳವಳವನ್ನು ಎಬ್ಬಿಸಿ ವಿಲಾಯತಿಯಲ್ಲಿ 'ಕೇಬಲ್‌ಗ್ರಾಮ'ನ್ನು ಕಳುಹಿಸಿಕೊಟ್ಟ ಧುರಂಧರ ವೀರರೆ ಈ ಹೊತ್ತು ಸರಕಾರದ ನೌಕರಿಯ ಸಂಕಲೆಯು ಬಿದ್ದಕೂಡಲೆ "ನೋಡಿಕೊಳ್ಳಿರಿ! ಜಾಗ್ರತೆ!! ಅವಿವೇಕಕ್ಕೆ ಇಳಿಯಬೇಡಿರಿ! ಹಿರಿಯರ ಮಾತುಗಳನ್ನು ಕೇಳಿರಿ. ತರುಣರ ಪುಂಡಾಟವು ಒಳ್ಳೇದಲ್ಲ!!" ಎಂದು ಹೇಳುವಾಗ, ಅಲ್ಲ, ಉಪದೇಶಿಸುವಾಗ ಭೀಷ್ಮನ ಮಾತು ಯಾರಿಗೆ ನೆನಪಿಗೆ ಬಾರದೆ ಇದ್ದೀತು?

ಸ್ಫುಟವಿಚಾರಗಳು.

೧. ಸತ್ಯಾಗ್ರಹದ ಚಳವಳವನ್ನು ಮಿ. ಮೊಂಟೆಗ್ಯೂಗಳು ಹಿಂದೂಸ್ಥಾನಕ್ಕೆ ಬರುವವರಿದ್ದುದರಿಂದ ಈಗಿನ ಪರಿಸ್ಥಿತಿಯಲ್ಲಿ ಈ ದೇಶವು ಕೈಕೊಳ್ಳುವುದು ಯುಕ್ತವಲ್ಲ ಎಂಬುದಾಗಿ ಮ| ರಾ| ಪಂತಲು ಪ್ರಭೃತಿ ೭ ಜನ ಮುಖಂಡರು ಮೊದಲಿನ ದಿವಸ ಜಾಹೀರಪತ್ರಕದ್ವಾರಾ ಪ್ರಕಟಿಸಿದರೂ ಮಾರನೆಯ ದಿವಸದ ಪ್ರಾಂತಿಕಪರಿಷತ್ತಿನಲ್ಲಿ ಸತ್ಯಾಗ್ರಹದ ಠರಾವು ಬಹುಮತದಿಂದ ಪಾಸಾಗಿಹೋಯಿತೆಂಬುದನ್ನು ನಾವು ಹಿಂದಿನ ಸಂಚಿಕೆಯಲ್ಲಿ ತಿಳಿಸಿದ್ದೇವೆ. ಪಂತಲು ಮೊದಲಾದ ಏಳು ಜನರು ಸತ್ಯಾಗ್ರಹನಿಷೇಧದ ಜಾಹೀರ ಪತ್ರಕವನ್ನು ಹೊರಡಿಸಿ ತಮ್ಮ ಪ್ರತಿಷ್ಠೆಯನ್ನು ಕೆಡಿಸಿಕೊಂಡರೆಂದು ಹೇಳುವುದು ನಮಗೆ ಗತಸಂಚಿಕೆಯಲ್ಲಿ ಸ್ವಲ್ಪ ಸಂಕೋಚವಾಗಿ ಕಂಡಿತ್ತು. ಆದರೆ ಡಾ. ಸರ್. ಸುಬ್ರಮಣ್ಯ ಅಯ್ಯರರು ಏಳು ಜನರು ಈ ಜಾಹೀರಪತ್ರಕವನ್ನು ನಿಷ್ಕಾರಣವಾಗಿ ಬಿಡಿಸಿ ಆ ಪತ್ರಕಜನಕರು ತಮ್ಮ ಬುದ್ಧಿಹೀನತೆಯ ವರ್ತನವನ್ನು (unwise conduct) ಮಾಡಿದರೆಂದು ಅವರಿಗೆ ಒಳ್ಳೇ ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ! ಇರಲಿ. ಸತ್ಯಾಗ್ರಹದ ಠರಾವಿಗೆ ಯಾರೂ ಉಪದೇಶವನ್ನು ಮಾಡಿದ್ದರಲಿ, ಅದು ಪರಿಷತ್ತಿನಲ್ಲಿ ಪಾಸಾಯಿತು. ಸರ್. ಸುಬ್ರಹ್ಮಣ್ಯರಂಥ ಧುರೀಣರು ಅದನ್ನು ಮಂಡಿಸುತ್ತಿದ್ದಾರೆ. ಈ ಎಲ್ಲ ಸಂಗತಿಗಳನ್ನು ನೋಡಿ ಮದ್ರಾಸಿನ ಮೈಲ ಪತ್ರಿಕೆಗೆ ಮೈಯಲ್ಲೆಲ್ಲ ಹುಣ್ಣಾದಂತಾಗಿದೆ. ಇನ್ನೂ ಅದರ ದುರ್ದೈವವೇನೆಂದರೆ, ಭಾರತ ಮಂತ್ರಿಗಳಾದ ಮಿ. ಮೊಂಟೆಗ್ಯೂಗಳು ಮಿಸೆಸ್. ಎನಿಬಿಝಂಟ ಪ್ರಭೃತಿಗಳ ಬಿಡುಗಡೆಯ ಆಲೋಚನೆಯಲ್ಲಿದ್ದಾರೆ ಎಂಬುದು ಗೊತ್ತಾಗಿ ಮುಂತೂ ಅದರ ಹುಣ್ಣುಗಳಲ್ಲಿ ಉಪ್ಪು ತುಂಬಿದ್ದಂತಾಗಿದೆ! ಈ ವೇಗದಲ್ಲಿ ಆ ಮೈಲ ಪತ್ರಿಕೆಯು ಮಿ. ಮೊಂಟೆಗ್ಯೂಗಳಿಗೆ ಹೆದರಿಸಲಿಕ್ಕೆ ಕೂಡ ಹಿಂಜರಿಯಲಿಲ್ಲ. ಮಿ. ಮೊಂಟೆಗ್ಯೂಗಳು ಇಂಥ ಬದಲಾವಣೆಗಳನ್ನು ಮಾಡಹೋದರೆ ಮಂತ್ರಿಮಂಡಲದಲ್ಲಿ ಒಡಕುಹುಟ್ಟೀತು. ಮಿತ್ರಾಟದ ಕಾರ್ಯಕರ್ತರಿಗೆ—ಬಹುಶಃ ಲೋರ್ಡ್ ಪೆಂಟಲೆಂಡರಿಗೂ ಏನೋ ರಾಜಿಕೊಡಬೇಕಾದೀತು. ಮೈಲಿನ ಈ ಫೂತ್ಕಾರಗಳಿಗೆ ಬೆಲೆಯು ಎಷ್ಟು ಬಂದೀತೆಂಬುದು ಈ ಹೊತ್ತು ತಿಳಿಯದು, ಮುಂದೆಯೆ ಗೊತ್ತಾಗಬೇಕು. ಮೊಂಟೆಗ್ಯೂಗಳ ಹಿಂದೂಸ್ಥಾನ ಮಂತ್ರಿತ್ವದ ನೇಮಕವನ್ನು ತಿಳಿಸುವಾಗ ನಾವು ಒಂದು ಮಾತನ್ನು ಬರೆದದ್ದು ವಾಚಕರು ಮರೆತಿರಲಾರರು. "ಮಿ. ಮೊಂಟೆಗ್ಯೂಗಳು ಉದಾರವಾದಿಗಳು, ಆದರೂ ಎಂಗ್ಲೋ ಇಂಡಿಯನ್ನರ ಟೀಕೆಯ ಆಘಾತದಿಂದ ಅವರ ಮತದಲ್ಲಿ ಏನೇನು ಬದಲಾವಣೆಯಾದೀತೊ" ಎಂದು ವ್ಯಕ್ತಗೊಳಿಸಿದ ನಮ್ಮ ಸಂದೇಹಕ್ಕನುಗುಣವಾಗಿ ಮೊದಲು ನಮ್ಮ ಮದ್ರಾಸಿನ ಮೈಲಪತ್ರಿಕೆಯು ಅವರ ಮೇಲೆ ಭೀತಿಜನಕವಾದ ಟೀಕಾಸ್ತ್ರವನ್ನು ಪ್ರಯೋಗಿಸಿದೆ. ಆದರೆ ಮಿ. ಮೊಂಟೆಗ್ಯೂಗಳು ಇದಕ್ಕೆಲ್ಲ ಭಯಪಡತಕ್ಕವರಲ್ಲ. ಈಗ ಇಲ್ಲಿಯ ಅಧಿಕಾರಿಗಳು ಕೈಕೊಂಡ ಪ್ರತಿಗಾಮಿಧೋರಣದಲ್ಲಿ ಲೋಕಮತದ ಆಕಾಂಕ್ಷೆಗಳ ಮೇರೆಗೆ ಬದಲಾವಣೆಯನ್ನು ಮಾಡಿ ಒಂದು ತರದಿಂದ ಲೋಕಮತಕ್ಕೆ ವಿಜಯವನ್ನು ತಂದುಕೊಟ್ಟರೆ ಅದರಿಂದ ಸರಕಾರದ ವರ್ಚಸ್ಸು ಕಡಿಮೆಯಾದೀತೆಂದು ಯಾರೂ ಭಯಪಡಬೇಕಾದ್ದಿಲ್ಲ. ಮೇಲಾಗಿ ಇಂಥ ಪರಿಸ್ಥಿತಿಯಲ್ಲಿ ಜನರ ಅನುವರ್ತನವನ್ನು ಮಾಡುವುದರಿಂದಲೆ ಸರಕಾರದ ಗೌರವವು ಇನ್ನಷ್ಟು ಶ್ರೇಷ್ಠವಾಗುವುದು. ಇದು ನಿಜ. ಆದುದರಿಂದಲೆ ಸರ್. ಸುಬ್ರಹ್ಮಣ್ಯರು ಮಿ. ಮೊಂಟೆಗ್ಯೂ ಪ್ರಭುಗಳಿಗೆ ಇದೇ ಅರ್ಥದ ವಿಜ್ಞಾಪನೆಯನ್ನು ಮಾಡಿಕೊಂಡಿದ್ದಾರೆ. ಈ ಪ್ರಸ್ತಾಪದಲ್ಲಿ ಲೊ. ಪೆಂಟಲೆಂಡರಿಗೆ ತಮ್ಮ ಅಧಿಕಾರಸನ್ಯಾಸ ಮಾಡಬೇಕಾಗಿ ಬಂದೀತೆಂದು ಮೈಲು ತಿಳಿಯುವುದು ಅಷ್ಟೊಂದು ಸಮರ್ಪಕವಲ್ಲೆಂದು ತೋರುತ್ತದೆ. ಕಾರಣ, ಮೈಲಪತ್ರಿಕೆಯು ನಮ್ಮ ಮದ್ರಾಸಿನ [illegible] ಅರ್ಥಾರ್ಥಿಕಾರಿ ಎಂತಾದರೂ ಲೊ. ಪೆಂಟಲೆಂಡರು ಅಧಿಕಾರಸನ್ಯಾಸ ಮಾಡಲಾರ್ರೆಂದು. ಅದು ನೆನೆಸುವುದು ಕಿಂಬಹುನಾ. ಹಾಗೆ ಭಯಪಡುವುದು ವ್ಯರ್ಥವು. ಲೊ. ಪೆಂಟಲೆಂಡರು ಸ್ವತಃ ಉದಾರವಾದಿಗಳು, ಆದರೆ ಅವರು ಹೋದ ಚೆಂಬರಲೇನರಿಗೆ ಬೇಕಾಗಿ ಬಂದುವೇಳೆ ಪ್ರತಿಗಾಮಿಧೋರಣವನ್ನು ಕೈಕೊಂಡಿದ್ದರೂ ಈಗ ಉದಾರವಾದಿಗಳಾದ ಮಿ. ಮೊಂಟೆಗ್ಯೂಗಳಿಗನುಸಾರವಾಗಿಯೆ ನಡೆದುಕೊಂಡಾರು. ಆದುದರಿಂದ ಪೆಂಟಲೆಂಡ್ ಪ್ರಭುಗಳಿಗೆ ಅಧಿಕಾರ ಸನ್ಯಾಸದ ಯೋಗವು ಬರಲಿಕ್ಕಿಲ್ಲೆಂದು ನಾವು ನೆನೆಸುತ್ತೇವೆ.

೨. ಪೆಂಟಲೆಂಡ ಪ್ರಭುಗಳಿಗೆ ಅಧಿಕಾರ ಸನ್ಯಾಸದ ಯೋಗವು ಬರಲಿಕ್ಕಿಲ್ಲವಾದರೂ ನಾವು. ಭೂಪೇಂದ್ರನಾಥ ಬಾಸುಗಳಿಗೆ ಲೋಕಾಗ್ರಣಿತ್ವದ ಸನ್ಯಾಸವು ಬಂದೆಬಿಟ್ಟಿದೆ. ವಂಷ್ಮಕಾಯಿದೆ ಕೌನ್ಸಿಲಿನಲ್ಲಿದ್ದು ಲೋಕಪಕ್ಷದ ಕೆಲಸವನ್ನು ಮಾಡುವವರಾಗಿಯೂ ಕೊಂಗ್ರೆಸಿನ ಕಟ್ಟುಭಕ್ತರಾಗಿಯೂ ಇದ್ದ ಭೂಪೇಂದ್ರನಾಥರು ಸರಕಾರದ ನೌಕರರಾಗಿ ಹೋಗುವದು ಲೋಕಪಕ್ಷಕ್ಕೆ ಒಂದು ದೊಡ್ಡ ಹಾನಿಯೆ ಸರಿ.

ಈ ಹಾನಿಯನ್ನು ಹೇಗಾದರೂ ಸಹಿಸಬಹುದು. ಆದರೆ ಇಂಡಿಯಾ ಒಫೀಸಿನೊಳಗಿನ ಮೆಂಬರತನವನ್ನು ಕೈಕೊಳ್ಳುವ ಮೊದಲೆ ಭೂಪೇಂದ್ರನಾಥರು ಲೋಕಪಕ್ಷದ ಮೇಲೆ ಜಾರಿಬೀಳುವ ಅಶ್ಲಾಘ್ಯಪ್ರಯತ್ನವನ್ನು ಏನು ಮಾಡುತ್ತಿದ್ದಾರೊ ಅದು ಮಾತ್ರ ದುಃಸಹವಾಗಿದೆ. ಸ್ವಸ್ಥಾನದ ಮೇಲೆ ಹಾಜರಾಗಲು ವಿಲಾಯತಿಗೆ ಪ್ರಯಾಣವನ್ನು ಬೆಳೆಸುವುದಕ್ಕಾಗಿ ನಾವು. ಭೂಪೇಂದ್ರನಾಥರು ಮುಂಬಯಿ ಬಂದರಕ್ಕೆ ಬಂದರು. ಈಗ ಮುಂಬಾಯಿಯೊಳಗಿನ ಪ್ರೆಸಿಡೆನ್ಸಿ ಎಸೋಸಿಯೇಶನಿನಲ್ಲಿ ಚಿಕ್ಕದೊಂದು ಅವರ ಭಾಷಣವಾಯಿತು. ಆ ಭಾಷಣದಲ್ಲಿ ಮಹಾಶಯಬಾಬುಗಳು ಪ್ರಕೃತ ರಾಜಕೀಯ ಚಳವಳವನ್ನು ಕುರಿತು ಮಾತಾಡುವಾಗ ಸರಕಾರವು ಸುಧಾರಣೆಗಳನ್ನು ಕೊಡಲಿಕ್ಕಿದೆ. ಆದರೆ ಅವು ಇಂಥವೆ ಎಂದು ಹೇಳಲಾಗದು. ಮಿ. ಮೊಂಟೆಗ್ಯೂಗಳು ಹಿಂದೂಸ್ಥಾನಕ್ಕೆ ಬರುವವರಿದ್ದುದರಿಂದ ಈಗ ವಿಲಾಯತಿಗೆ ಇಲ್ಲಿಂದ ಡಿಪ್ಯುಟೇಶನನ್ನು ಕಳುಹಿಸುವುದು ಅಷ್ಟೊಂದು ಹಿತಾವಹವಾಗಲಾರದು ಮುಂತಾದ ಔಪಚಾರಿಕ ನಾಲ್ಕು ಶಬ್ದಗಳನ್ನು ಹೇಳಿ ಮುಂದರಿಸಿದ್ದೇನೆಂದರೆ:— "ಈಗಿನ ಲೋಕಮತದ ಸ್ಥಿತಿಯು ಕೆಟ್ಟುಹೋಗಿದೆ. ಜನರು ತಮ್ಮ ಹಕ್ಕುಗಳನ್ನು ಕೇಳುವ ಕ್ರಮವನ್ನು ಬಿಟ್ಟುಬಿಡಬಾರದು. ಆದರೆ ಸರಕಾರದೊಡನೆ ಅವರು ಅಮಿತ್ರಭಾವದಿಂದ ನಡಕೊಳ್ಳಬಾರದು. ಅಲ್ಲದೆ ಅಪಕಾರಕರವಾದ ಮಾರ್ಗವನ್ನು ಜನತೆಯು ಕೈಕೊಳ್ಳಬಾರದು. ರಾಜನಿಷ್ಠನಾದ ಮತ್ತು ಸನದಶೀರಾದ ಸಾಧನಗಳನ್ನವಲಂಬಿಸಿ ಸರಕಾರದೊಡನೆ ಸಹಕಾರ್ಯದಿಂದ ನಡಕೊಂಡರೆ ಅದರಿಂದ ಕಲ್ಯಾಣ ಉಂಟಾಗುವುದು. ಮಿತ್ರಭಾವದಿಂದ ಹೋರಾಡುವುದು ಒಮ್ಮೊಮ್ಮೆ ಹೆಚ್ಚಿನ ಪ್ರಯೋಜನಕ್ಕೆ ಕಾರಣವಾಗುವುದು." ಬಾಬುಗಳು ಇದೇ ರೀತಿಯಿಂದ ಇನ್ನೂ ಕೆಲವು ಮಾತುಗಳನ್ನು ಆಡಿರುವರು. ಇಷ್ಟರಿಂದಲೆ ಅವರ ಮಾತಿನ ಧೋರಣವು ಗೊತ್ತಾಗುವುದರಿಂದ ಉಳಿದುದನ್ನು ಕೊಡಲಿಲ್ಲ. ಈ ಭಾಷಣದ ಗುರಿಯು ಯಾವುದು ಎಂಬುದೆ ಗೊತ್ತಾಗದು. ಸದ್ಯಃ ಪ್ರಚಲಿತವಿರುವ ಹೋಮ್‌ರೂಲ್ ಚಳವಳಿನ ವಿಷಯವಾಗಿ ಅವರು "ಅಪಕಾರಕರವಾದ" ಎಂಬ ಮಾತನ್ನು ಉಪಯೋಗಿಸುತ್ತಿರುವರತೆ ಹೋಮ್‌ರೂಲಿನ ಉದ್ದಿಷ್ಟವು ರಾಷ್ಟ್ರೀಯ ಸಭೆಯು ಕಳೆದ ವರ್ಷದ ಸ್ವರಾಜ್ಯದ ಠರಾವನ್ನು ಅನುವರ್ತಿಸಿಕೊಂಡಿದೆ. ರಾಷ್ಟ್ರೀಯ ಸಭೆಯು ಮತ್ತು ಹಾಗು ಮೊಸ್‌ಲೆಮ್‌ಲೀಗಿನ ಈ ಸ್ವರಾಜ್ಯದ ಠರಾವು, ಯಾವ ೧೯ರಲ್ಲಿ ಪ್ರಕೃತ ಬಾಬುಗಳೂ ಒಬ್ಬರಾಗಿರುವರೊ ಮತ್ತು ಯಾವುದನ್ನು ಅವರು 'ಇದೆ ಭಾಷಣದ ಉತ್ತರಭಾಗದಲ್ಲಿ ಸಮರ್ಥಿಸಿರುವರೊ ಆ ಸುಪ್ರಸಿದ್ಧ ೧೯ ಜನ ಸಭಾಸದರ ಮಸೂದೆ ಪತ್ರಕದ ತತ್ವವನ್ನೆ ಅವಲಂಬಿಸಿಕೊಂಡಿದೆ. ಎಂದಮೇಲೆ ಬಾಬುಗಳು ಯಾವುದಕ್ಕೆ (Aggressive method) 'ಅಪಕಾರಕ ಪದ್ಧತಿ' ಎಂದು ಹೇಳುವರು ಇದು ಗೊತ್ತಾಗುವುದಿಲ್ಲ. ಸತ್ಯಾಗ್ರಹದ ವಿಷಯದಲ್ಲಿ ಈ ಶಬ್ದ ಪ್ರಯೋಗವು ಇದ್ದುದಾದರೆ ಆ ಸತ್ಯಾಗ್ರಹಕ್ಕೆ ಸನದಶೀರ ಅಲ್ಲವೆಂದು ಹೇಳಬಹುದೆ? ಹಾಗೆ ಹೇಳುವುದಾದರೆ ಅದೇ ಬಾಬುಗಳ ಪಂಕ್ತಿಯೊಳಗಿನ ಪಂತಲು, ಶಾಸ್ತ್ರಿ ಮೊದಲಾದ ಅನ್ಯ ಶಾಂತಪಕ್ಷೀಯರು ಅದು ಸನದುಶೀರೂ ಹೌದು, ಕಾಯಿದೆಶೀರೂ ಹೌದು, ಎಂದು ಹೇಳುತ್ತಾರೆ. ಈ ಎರಡು ಮಾತುಗಳ ಏಕವಾಕ್ಯತೆಯು ಹೇಗೆ? ಸಾರಾಂಶ ನಾವು. ಭೂಪೇಂದ್ರನಾಥರ ಭಾಷಣವು ಯಾವ ದೃಷ್ಟಿಯಿಂದಲೂ ಸಮರ್ಥನೀಯವಾಗಿ ತೋರುವುದಿಲ್ಲ. ಅವರು ಸರಕಾರಿಕೆಲಸದ ಮೇಲೆ ಹೋಗುವವರಾದ ಕಾರಣ ಅವರ ವಿಚಾರದಲ್ಲಿ ರೂಪಾಂತರವಾದುದಕ್ಕೆ ನಿಜವಾಗಿ ವಿಷಾದವಿಲ್ಲ. ಆದರೆ ಯಾವ ಜನತೆಯ ಕಡೆಯಿಂದ ಇಷ್ಟು ಸಮಯ ವರಿಷ್ಠ ಕೌನ್ಸಿಲಿನಲ್ಲಿ ವಕೀಲತನವನ್ನು ನಡಿಸುತ್ತಿದ್ದರೊ ಅವರನ್ನೆ ಇಷ್ಟು ಬೇಗನೆ ದೂಷಿಸುವುದು ಇದೆ ವಿಷಾದಕರವಾಗಿದೆ.

೬. ಬರುವ ಡಿಸೆಂಬರಿನಲ್ಲಿ ಕಲ್ಕತ್ತೆಯಲ್ಲಿ ಆಗಲಿಕ್ಕಿದ್ದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಮಿಸೆಸ್. ಎನಿಬೆಝಂಟರಿಗೆ ಕೊಡುವುದು ನಿಶ್ಚಿತವಾಗಿದೆ. ಈ ವರ್ತಮಾನವನ್ನು ತಿಳಿಸಲು ನಾವು ಸಂತೋಷಪಡುತ್ತೇವೆ. ರಾಷ್ಟ್ರಸಭೆಯ ಅಧ್ಯಕ್ಷರನ್ನು ಚುನಾಯಿಸುವ ಕ್ರಮವು ಯಾವುದೆಂದರೆ, ಪ್ರೊವಿನ್ಶಿಯಲ್‌ಕೊಂಗ್ರೆಸ್ ಕಮಿಟಿಯವರು ಮೊದಲು ತಂತಮ್ಮ ಮತರೀತ್ಯಾ ಅಧ್ಯಕ್ಷರ ಹೆಸರುಗಳನ್ನು ಸೂಚಿಸಿ ಅವುಗಳನ್ನು ಸ್ವಾಗತಮಂಡಲಕ್ಕೆ ಕಳುಹಿಸಿಕೊಡುತ್ತಾರೆ. ಇದು ಮೊದಲನೆ ಚುನಾವಣೆಯು. ಈ ಮೊದಲಿನ ಸಾರೆ ಪ್ರಾಂತಿಕ ಕಮಿಟಿಯು ಎಷ್ಟೊ ಹೆಸರುಗಳನ್ನು ಸೂಚಿಸಬಹುದು. ಆದರೆ ಆ ಹೆಸರುಗಳೆಲ್ಲ ಹೊಂದಿದನಂತರ ಪುನಃ ಒಮ್ಮೆ ಸ್ವಾಗತಕಮಿಟಿಯಿಂದ ಪ್ರಾಂತಿಕ ಕೊಂಗ್ರೆಸ್ ಕಮಿಟಿಗಳಿಗೆ ಸೂಚನೆಯು ಬರುವುದು. ಆಗ ಅವು ಒಂದೊಂದೆ ಹೆಸರನ್ನು ಹೆಕ್ಕಿ ಕಳುಹಿಸತಕ್ಕುದು. ಹೀಗೆ ಬಂದ ಹೆಸರುಗಳಲ್ಲಿ ಬಹುಮತದಿಂದ ಸ್ವಾಗತಕಮಿಟಿಯು ಅಧ್ಯಕ್ಷನನ್ನು ಆರಿಸುವುದು. ಈ ಕ್ರಮಕ್ಕನುಸಾರವಾಗಿ ಮದ್ರಾಸು, ಮುಂಬಯಿ, ಮಧ್ಯಪ್ರಾಂತ, ಪಂಜಾಬು, ಬರ್ಮಾ, ಬಂಗಾಲ ಮುಂತಾದ ಸಾಧಾರಣ ಎಲ್ಲ ಪ್ರಾಂತಿಕ ಕಮಿಟಿಗಳು ಮಿಸೆಸ್. ಬಿಝಂಟರ ಹೆಸರನ್ನೆ ಅಧ್ಯಕ್ಷಸ್ಥಾನದಲ್ಲಿ ಸೂಚಿಸಿದವು. ಮತ್ತು ಕೊನೆಗೆ ಕಲ್ಕತ್ತೆಯ ಸ್ವಾಗತ ಮಂಡಲುವು ಅದೆ ಹೆಸರನ್ನು ಮಂಜೂರುಮಾಡಿದೆ. ಆದರೆ ಮಿಸೆಸ್. ಬಿಝಂಟರು ಸರಕಾರಿ ಪ್ರತಿಬಂಧದಲ್ಲಿರುವಾಗ ಅವರನ್ನು ಅಧ್ಯಕ್ಷಸ್ಥಾನದಲ್ಲಿ ಆರಿಸಿದರೆ ಅವರು ಅಲ್ಲಿಗೆ ಬರುವುದು ಹೇಗೆ ಎಂಬುದಾಗಿ ಕೆಲವರಿಗೆ ಆಕ್ಷೇಪಬರಬಹುದು. ಇದಕ್ಕೆ ಸಮಾಧಾನವೇನೆಂದರೆ, ಅವರನ್ನು ಪ್ರತಿಬಂಧದಿಂದ ಬಿಡುಗಡೆಮಾಡಲು ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯವರು ಸರಕಾರದ ಕಡೆಗೆ ಕೇಳಿಕೊಳ್ಳಬೇಕು; ಹಾಗೆ ಪ್ರತಿಬಂಧವನ್ನು ಹಿಂದಕ್ಕೆ ತೆಕ್ಕೊಳ್ಳಲು ಕೇಳದಿದ್ದರೆ ಡಿಸೆಂಬರಿನ ಅಂತ್ಯದಲ್ಲಿ ಕಲ್ಕತ್ತೆಯ ಅಧಿವೇಶನದಲ್ಲಿ ಹಾಜರಿರಲಿಕ್ಕಾದರೂ ಸರಕಾರವು ಬಿಝಂಟರಿಗೆ ಬಿಡಬೇಕು; ಇದಕ್ಕೂ ಒಪ್ಪಿಕೊಳ್ಳದಿದ್ದರೆ ಅವರು ಇದ್ದಲ್ಲಿಂದಲೆ ಅಧ್ಯಕ್ಷತ್ವದ ಭಾಷಣವನ್ನು ಅಧಿವೇಶನದಲ್ಲಿ ಕಳುಹಿಸಿಕೊಡುವಂತೆಯಾದರೂ ಸರಕಾರವು ಬಿಝಂಟರಿಗೆ ಎಡೆಕೊಡಬೇಕು. ಈ ಯಾವ ಸಂಗತಿಗೂ ಸರಕಾರವು ಒಪ್ಪಿಕೊಳ್ಳದಿದ್ದರೆ ಅವರ ಹೆಸರಿನಿಂದಲೇ ಅಧ್ಯಕ್ಷಸ್ಥಾನವನ್ನು ಬೇರೆಯವರು ತಾತ್ಕಾಲಿಕವಾಗಿ ನಡಿಸಬೇಕು. ಈ ಪ್ರಕಾರದ ಆಲೋಚನೆಗಳು ಮುಖಂಡರಲ್ಲಿ ನಡದಿವೆ. ಎಂತೂ ಈ ವರ್ಷದ ರಾಷ್ಟ್ರೀಯಸಭೆಯ ಅಧ್ಯಕ್ಷಸ್ಥಾನವು ಮಿಸೆಸ್. ಬಿಝಂಟರದೆ ಎಂಬುದು ಈ ಹೊತ್ತಿನ ವರೆಗೆ ನಿರ್ಣೀತವಾಗಿದೆ.

೫. ಮದ್ರಾಸ ಸರಕಾರವು ಲೋಕಲ್‌ಬೋರ್ಡಿನ ಆಡಳಿತೆಯಲ್ಲಿ ಕೆಲವು ಹೆಚ್ಚಿನ ಸುಧಾರಣೆಮಾಡುವ ಉದ್ದೇಶದಿಂದ ಒಂದು ಜಾಹೀರ ಪತ್ರಕವನ್ನು ಹೊರಡಿಸಿದೆ. ಅದರ ಆಶಯವೇನೆಂದರೆ ಸ್ಥಾನಿಕ ಆಡಳಿತೆಗಳ ಹೆಚ್ಚಿನ ಪರಿಚಯವೂ ಅನುಭವವೂ ಬೋರ್ಡಿನಂಥ ಬಿನ್‌ಸರಕಾರಿ ಸಂಸ್ಥೆಗಳಿಗೆ ಉಂಟಾಗಬೇಕಾದರೆ ಅವುಗಳ ಅಧ್ಯಕ್ಷಸ್ಥಾನದಲ್ಲಿ ಬಿನ್‌ಸರಕಾರಿ ಗೃಹಸ್ಥರನ್ನೆ ನೇಮಿಸುವುದು ಯುಕ್ತವಿರುವುದರಿಂದ ಕೆಲವು ವಿವಕ್ಷಿತ ಜಿಲ್ಲೆಗಳಲ್ಲಿ ಈ ಕ್ರಮದ ಪ್ರಯೋಗವನ್ನು ಮಾಡುವುದು ಸರಕಾರದ ಆಲೋಚನೆಯಲ್ಲಿ ಒಂದಿದೆ. ಬೇರೆ ಬೇರೆ ತರದ ಪರಿಸ್ಥಿತಿಯಿರುವಂಥ ನಾಲ್ಕು ಜಿಲ್ಲೆಗಳಲ್ಲಿ ಈ ಬಿನ್‌ಸರಕಾರಿ ಗೃಹಸ್ಥರನ್ನು ಅಧ್ಯಕ್ಷರನ್ನಾಗಿ ಮಾಡಬಹುದೆಂದು ಸರಕಾರವು ನಿರ್ಣಯಿಸಿದೆ! ಬೇರೆ ಬೇರೆ ಲೋಕಸ್ಥಿತಿಯುಳ್ಳ ಈ ಜಿಲ್ಲೆಗಳನ್ನೆ ಆರಿಸಿಕೊಳ್ಳುವುದರಿಂದ ಅವುಗಳಲ್ಲಿಯ ಕೆಲಸಗಳ ಅನುಭವದಿಂದ ಈ ಪ್ರಯೋಗವು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆ ಎಂಬುವನ್ನು ನಿರೀಕ್ಷಿಸುವುದು ಸರಕಾರಕ್ಕೆ ಸುಲಭವಾಗಿದೆ. ಬಿನ್‌ಸರಕಾರಿ ಅಧ್ಯಕ್ಷರಿಗೆ ಆವಶ್ಯವಿದ್ದ ಅನುಭವನ್ನು ಕೊಡಲು ಅವರ ಕೈಕೆಳಗೆ ಸರಕಾರಿ ಉದ್ಯೋಗಸ್ಥರನ್ನು ವೈಸ್‌ಪ್ರೆಸಿಡೆಂಟರನ್ನಾಗಿ ನೇಮಿಸುವ ಏರ್ಪಾಡು ಆಗಿದೆ. ಇವರು ತಮ್ಮ ಬೇರೆ ಬೇರೆ ಖಾತೆಗಳ ಅನುಭವವನ್ನೂ ಸಾಹಾಯ್ಯವನ್ನೂ ಕೊಟ್ಟು ಬಿನ್‌ಸರಕಾರಿ ಅಧ್ಯಕ್ಷರೊಡನೆ ಸಹಕಾರ್ಯವನ್ನು ಮಾಡಬಹುದು. ಈ ಹೊಸ ಪ್ರಯೋಗವು ಯಶಸ್ವಿಯಾಗುವ ಸಂದರ್ಭವು ಕಾಣದೆಯಿದ್ದಲ್ಲಿ ಸರಕಾರವು ಇದನ್ನು ಒಂದುವೇಳೆ ತೆಗೆದುಹಾಕಬಹುದಾದರೂ ಕಲೆಕ್ಟರುಗಳ ಸಾಹಾಯ್ಯದಿಂದ ಇದರ ಪರಿಣಾಮವನ್ನು ತಿಳಿಯಬಹುದು. ಈ ಆಶಯವನ್ನು ನೋಡುವಾಗ ಈ ಹೊಸ ಕ್ರಮದಿಂದ ಬೋರ್ಡುಗಳ ಪರಿಸ್ಥಿಯು ಸುಧಾರಿಸಬಹುದೆಂದು ಯಾರಾದರೂ ಆಶಿಸಿದರೆ ಅದು ಅಸ್ಥಾನದಲ್ಲಾಗಲಾರದು.

೪. ಮಿಸೆಸ್. ಬಿಝಂಟರನ್ನು ಅಧ್ಯಕ್ಷಸ್ಥಾನದಲ್ಲಿ ನೇಮಿಸಿದ್ದಾದರೂ ಈಚೆಗೆ ಬಂದ ವರ್ತಮಾನಗಳನ್ನು ನೋಡುವಾಗ ಕಲಕತ್ತೆಯೊಳಗಿನ ಸ್ವಾಗತಮಂಡಲದಲ್ಲಿ ತುಂಬಾ ಒಡಕು ಬಂದುಹೋಗಿದೆಂಬುದು ಸ್ಪಷ್ಟವಾಗುತ್ತದೆ. ಸ್ವಾಗತ ಮಂಡಲದ ಅಧ್ಯಕ್ಷರು ಸೆಕ್ರೆಟರಿಗಳಿಗೆ ಅಪ್ಪಣೆ ಇಲ್ಲದೆ ಮುಂದೆ ಯಾವ ಏರ್ಪಾಡನ್ನೂ ನೀವು ಮಾಡಕೂಡದೆಂಬುದಾಗಿಯೂ ತಾನೆ ಎಲ್ಲ ಕಾಗದಪತ್ರಗಳನ್ನು ಕೈವಶಮಾಡಿಕೊಂಡಿದ್ದೇನೆಂಬುದಾಗಿಯೂ ಸೆಕ್ರೆಟರಿಗಳು ತಮ್ಮ ಒಫೀಸಿನ ಸ್ಥಾನವನ್ನು ಬದಲಾಯಿಸಿ ಬರತಕ್ಕ ಕಾಗದಪತ್ರಗಳನ್ನು ತಮ್ಮ ಕಡೆಗೆ ಬರಬೇಕೆಂಬುದಾಗಿಯೂ ಅವರವರು ತಂತಮ್ಮ ಇಚ್ಛಾನುಸಾರವಾಗಿ ಪ್ರಕಟಿಸಿರುತ್ತಾರೆ. ಮತ್ತು ದುಃಖದ ಮಾತೇನೆಂದರೆ, ಒಂದು ರಾಷ್ಟ್ರೀಯ ಸಭೆಗೆ ಎರಡು ಸ್ವಾಗತಮಂಡಲಗಳಾಗಿವೆ. ಈ ರೀತಿಯಿಂದ ಒಡಕು ಬರಲು ಕಾರಣವೇನೆಂದು ನೋಡಿದರೆ ಅದೂ ಮಹತ್ವದ್ದಲ್ಲ. ಸ್ವಾಗತಮಂಡಲದ ಕಡೆಯಿಂದ ಕೂಟಿದ ಅಧಿವೇಶನದಲ್ಲಿ ಒಬ್ಬ ವಕ್ತರು ವ್ಯಕ್ತಿಪರವಾಗಿ ಅಪಮಾನಾತ್ಮಕ ಶಬ್ದವನ್ನು ಆಡಿಹೋದರು. ಆ ಶಬ್ದವನ್ನು ಹಿಂದಕ್ಕೆ ತೆಕ್ಕೊಳ್ಳಲು ಹೇಳಿದರೂ ಅವರು ಕೇಳಲಿಲ್ಲೆಂಬ ಕಾರಣದಿಂದ ಸುರೇಂದ್ರನಾಥರಂಥ ವೃದ್ಧ, ಅನುಭವಿ ಮತ್ತು ಜಾಣ್ಮೆಯ ಮುಖಂಡರು ಸಭೆ ಬಿಟ್ಟು ಹೊರಟುಹೋದರು! ಅವರದೆ ಒಂದು ತಂಡವಾಯಿತು. ಸಭಾಸ್ಥಾನದಲ್ಲಿ ಉಳಿದ ಬಹುಜನರು ಇನ್ನೊಬ್ಬರನ್ನು ಎಂದರೆ ಅಮೃತಬಜಾರ ಪತ್ರಿಕೆಯ ಸನ್ಮಾನ್ಯ ಸಂಪಾದಕರಾದ ಬಾಬುಮೋತಿಲಾಲ ಘೋಷರನ್ನು ಅಧ್ಯಕ್ಷರನ್ನಾಗಿ ಮಾಡಿ ಕೆಲವು ನಿರ್ಣಯಗಳನ್ನು ಮಾಡಿದರು. ಆ ನಿರ್ಣಯಗಳಲ್ಲಿ ಬಿಝಂಟರ ಅಧ್ಯಕ್ಷಸ್ಥಾನದ ನಿರ್ಣಯವು ಒಂದಾಗಿದೆ. ಈಗ ಇನ್ನೊಂದು ಪಕ್ಷದವರು ಈ ನಿರ್ಣಯಗಳನ್ನಾಗಲಿ, ಅವರ ಆ ದಿನದ ಸಭಾಕಾರ್ಯಗಳನ್ನಾಗಲಿ ಮಾನ್ಯ ಮಾಡುವುದಿಲ್ಲ. ಈ ಎರಡು ತಂಡದವರು ಒಲ್ ಇಂಡಿಯಾ ಕೊಂಗ್ರೆಸ್ ಕಮಿಟಿಯ ಮುಂದೆ ತಂತಮ್ಮ ಅಭಿಪ್ರಾಯಗಳನ್ನು ಕಳುಹಿಸಿಕೊಟ್ಟಿರುವರು. ಇರಲಿ. ಬಂಗಾಲದವರು ಇಡಿ ಹಿಂದುಸ್ಥಾನದಲ್ಲಿ ಹೆಚ್ಚು ಸುಸಂಸ್ಕೃತರೂ, ಬುದ್ಧಿಶಾಲಿಗಳೂ, ದೇಶಾಭಿಮಾನಿಗಳೂ ಎಂದು ಅನೇಕರು ಹೊಗಳುವುದನ್ನು ನಾವು ಆಗಾಗ್ಗೆ ಕೇಳುತ್ತೇವೆ. ಆದರೆ ದೇಶದ ಇಂಥ ನಾಜೂಕ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸಭೆಯಂಥ ವಿಶಿಷ್ಟ ಸಂಸ್ಥೆಯಲ್ಲಿ ಅವರು ಒಡಕನ್ನು ಯಾಕೆ ತಂದಿರುವರು! ಇದು ಗೊತ್ತಾಗದು. ನಮ್ಮಲ್ಲಿ ಯಾಕೆ ಒಡಕು ಬರುವುದಿಲ್ಲ ಎಂದು ವ್ಯಸನಪಟ್ಟು ಅದನ್ನು ಪ್ರಾರ್ಥಿಸುವ ಕೆಲವು ಎಂಗ್ಲೊ ಇಂಡಿಯನ್ ಪತ್ರಿಕೆಗಳಿವೆ. ಅವುಗಳಿಗೆ ಕಲಕತ್ತೆಯ ಈ ಹವ್ಯಾಸವು ಬೂದು ಒಳ್ಳೆ ಉತ್ಸವವಾಗಿದೆ! ಇದೆ ಸುಮುಹೂರ್ತವೆಂದು, ನನಸಿ, ಸ್ಟೇಟ್ಸಮನ್‌ನಂಥ ಪತ್ರಿಕೆಗಳು ಶಾಂತಪಕ್ಷದವರಿಗೆ ಬೇರೆ ಒಂದು ಸ್ವತಂತ್ರವಾದ ಕೊಂಗ್ರೆಸನ್ನು ಸೇರಿಸಲು ಪ್ರೇರಿಸುತ್ತಿದ್ದವೆ! ... ನವತೆಯ ... ಮೇಲೆಯೆ ದೃಷ್ಟಿ, ಹಾಗೆ ಅವುಗಳಿಗೆ ನಮ್ಮ ಒಡಕಿನ ಮೇಲೆಯೆ ದೃಷ್ಟಿ. ... ಬಂಗಾಲದ ಜಾಣರಾದ ಮುಖಂಡರು ಈ ಒಡಕನ್ನು ಮುಂದರಿಸಲು ಬಿಡದೆ ಬೇಗನೆ ಐಕ್ಯವನ್ನು ತಂದಾರೆಂದು ನಮಗೆ ಭರವಸೆ ಇದೆ.

ನಮ್ಮ ನಿಕ್ಕಲ್ ಬೆಳ್ಳಿ ಕಿಸೆ ಗಡಿಯಾರವು ಬಹಳ ಸರಿಯಾಗಿ ಸಮಯವನ್ನು ಸೂಚಿಸುವದು, ಸಭ್ಯರೂ ಸಹ ಧರಿಸಿಕೊಳ್ಳಲು ಸರಿಯಾದಂಥಾದ್ದು. ಮೂರು ವರುಷಗಳ ಗೆರಂಟಿ ಇದೆ. ರೂ. 7-14-0, 9–14–0 ಕ್ರಯವಿರುವಂಥವುಗಳನ್ನು ಈಗ ರೂ. 3–15–0, 4–15–0ಕ್ಕೆ ವಿಕ್ರಯಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚು ರೂ. 13ರ ಕ್ರಯದ್ದು ರೂ. 6–8–0ಕ್ಕೆ ದೊರಕುವದು. ರೂ. 15ರ ಅಂದವಾದ ಹಂಟಿಂಗ್ ವಾಚು ರೂ. 7–8–0 ಕ್ಕೆ [illegible] ಲೇಡಿ ಸ್ಪ್ರಿಂಗಿನ ಬೆಳ್ಳಿ ರೂ. 18ರ ವಾಚನ್ನು ರೂ. 9ಕ್ಕೆ. [illegible] ಭಂಗಾರದ ಮುಲಾಮಿನ ರೂ. 20ರ ವಾಚು ರೂ. 10ಕ್ಕೆ. ರಿಸ್ಟ್ ವಾಚು ರೂ. 12 ಕ್ರಯದ್ದು ಬಹಳ ಉತ್ಕೃಷ್ಟವಾದದ್ದು ರೂ. 6ಕ್ಕೆ. [illegible] ಬಹಳ ಗಟ್ಟಿಯಾದದ್ದು, ಎಂಟು ದಿವಸಗಳ [illegible] ಕ್ರಯ ರೂ. 24ರದ್ದನ್ನು ರೂ. 12ಕ್ಕೆ ಕೊಡಲಾಗುವದು.

[illegible] ಇನಾಮು. ಪ್ರತಿ ಒಂದು ವಾಚು ಪಡಕೊಳ್ಳುವವನಿಗೆ ಒಂದು [illegible] ಇನಾಮು. 6 ವಾಚುಗಳನ್ನು ಪಡಕೊಳ್ಳುವವನಿಗೆ ಒಂದು ವಾಚು [illegible] ಕಳುಹಿಸಲಾಗುವದು.

ಕೊಂಪಿಟೇಷನ್ ವಾಚ್ ಕಂಪೆನಿ,
25 [illegible] ಲೇನ್, ಕಲ್ಕತ್ತಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

[illegible] ಭರಪೂರ್ ಕಮಿಷನ್!!

[illegible] ಅಮೃತ ಸಂಜೀವಿನಿ ಟಾನಿಕ್, ಬಾಲಸಂಜೀವಿನಿ ಟಾನಿಕ್, [illegible] ಗುಳಿಗೆ, [illegible] ಮೊದಲಾದವುಗಳನ್ನು [illegible]

೧. ಕಂಠೀರವ. ಈ ಔಷಧ [illegible] ರಕ್ತವು ಶುದ್ಧವಾಗಿ ಎಲ್ಲಾ [illegible] ರೋಗಗಳು ನಿಶ್ಶೇಷವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಜ್ಞಾನೇಂದ್ರಿಯ, ಕರ್ಮೇಂದ್ರಿಯವನ್ನು ಪುಷ್ಟಿ [illegible] ಕೊಡುತ್ತದೆ. ಶೀಶೆ 1ಕ್ಕೆ ರೂ. 1.

೩. ಆರೋಗ್ಯಕಾರಿಣಿ. ಈ ಔಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಿಣಿ. ಇದು ಸ್ತ್ರೀಯರ ಎಲ್ಲಾ [illegible] ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ಕೂಲಿ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ [illegible] ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1–8–0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಉಪಯೋಗದಿಂದ [illegible] ಹುಣ್ಣು [illegible] ಸರ್ವ [illegible] ಪೂರ್ಣವಾಗಿ [illegible] ಹೋಗುತ್ತದೆ. ಬಾಟ್ಲಿ 1ಕ್ಕೆ ರೂ. 0–8–0

೮. ಅಮೃತಸಾರ್. ಇದು ವಾಯು [illegible] ಸಿದ್ಧೌಷಧವಾಗಿರುತ್ತದೆ. 1 ಕೂಲಿ [illegible] ರೂ. 1–0–0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ [illegible] ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಿಕಾರ್, ಮೆನೇಜರ್.

ಕನ್ನಡ ಹೊಸ ಪುಸ್ತಕಗಳು.

(1) ಕನ್ನಡ ಕ್ರಿಮಿನಲ್ ಪ್ರೊಸೀಜರ್ [illegible] ಕಡೆಗಳಲ್ಲಿಯೂ ಹಾಲಿ ಜಾರಿಯಲ್ಲಿರುವ ಆಕ್ಟು. 696 ಪುಟಗಳು. ಗ್ಲೇಜು ದಪ್ಪ ಕಾಗದ. ಅನ್ವಲ್ ಬೈಂಡು ಕ್ರಯ 3 ರೂ. (2) ಕನ್ನಡ [illegible] ಭಾರತ ದೊಡ್ಡ ಅಕ್ಷರ, ದೊಡ್ಡ ಸೈಜ. [illegible] ಪುಟಗಳು. ಕ್ರಯ [illegible] ರೂ. (3) ಡಿಟೋ ಗ್ಲೇಜು ದಪ್ಪ ಕಾಗದ. ಅನ್ವಲ್ ಬೈಂಡು. ಕ್ರಯ [illegible] ರೂ. (4) ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಸಾಹಸ ಕಥೆಗಳು. ಪೂರಾ [illegible] ಪುಟಗಳು. ಕ್ರಯ ರೂ. 1-5-0. (5) ಸಚಿತ್ರ ಶುಕಸಪ್ತತಿ 70 ಕಥೆಗಳು. [illegible] ಚಾರಗಳನ್ನು ಬೋಧಿಸುವದು. 512 ಪುಟಗಳು. ಕ್ರಯ ರೂ. 1-[illegible] (6) ಸಚಿತ್ರ ವಿದ್ಯಾಮಂಜರಿ ಕಥೆಗಳು. 64 ವಿದ್ಯೆ ಚಮತ್ಕಾರ ಕಥೆಗಳು. [illegible] ಪುಟಗಳು. ಕ್ರಯ ರೂ. 1-4-0. (7) ಪ್ರಾಚೀನ [illegible] 392 ಪುಟಗಳು. [illegible] ಕ್ರಯ ರೂ. 1-8-0 (8) ಸಚಿತ್ರ [illegible] ದಶಾವತಾರ ರಾಮಾಯಣ ಕಥಾ ಸಂಗ್ರಹ. ಗ್ಲೇಜು ದಪ್ಪ ಕಾಗದ. ಅನ್ವಲ್ 344 ಪುಟಗಳು, ಕ್ರಯ ರೂ. 1-2-0. (9) ಮೂಲ [illegible] 34 ಸಂಧಿ. ಗ್ಲೇಜು ದಪ್ಪ ಕಾಗದ ದೊಡ್ಡ ಅಕ್ಷರ. ಅನ್ವಲ್ 374 ಪುಟಗಳು ಕ್ರಯ 1 ರೂ. (10) [illegible] 256 ಪುಟಗಳು. ಕ್ರಯ ರೂ. 1-0-0.

ಎರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ 3 ಆಣೆ ಕ್ರಯವುಳ್ಳ "ನವರತ್ನ ಪಕ್ಷಿಯ ಕಥೆ" ಇನಾಂ ಕಳಿಸುತ್ತೇವೆ. ಇವುಗಳೆಲ್ಲಾ [illegible] ದಲ್ಲಿ ಮುದ್ರಿಸಿ ಸೊಗಸಾಗಿ ಬೈಂಡು ಮಾಡಿ ಸಿದ್ಧವಾಗಿವೆ. ಟಪಾಲು ಖರ್ಚು ಬೇರೆ. ಇನ್ನೂ ಅನೇಕ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆದರೆ ಪುಗಸಟ್ಟೆ ಕಳಿಸುತ್ತೇವೆ.

ನಮ್ಮ ವಿಳಾಸ—ಎಂ ಆರ್ ವೆಂಕಟಾಚಲ ಶೆಟ್ಟಿ,
ಬುಕ್ ಡಿಪೊ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕರ್ಣಿಕ ಎಗ್ಯುಮಿಕ್ಸ್ಚರ

Karnik's Ague Mixture.

ಚಳಿಜ್ವರ, ಮಲೆರಿಯಾ, ಅಂತರಿಕ (ದಿನವಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಹೆನೊ-ವಿನ್:—ಕಾಲರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು:—ಬಾಟ್ಲಿ ೧ಕ್ಕೆ ೮ ಆಣೆಗಳು. ಡಜನ್ ೧ಕ್ಕೆ ರೂ. ೨—೮—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ.

ಕರ್ಣಿಕ ಬ್ರದರ್ಸ್,
೬೮ ಗಿರಗಾಂವ, ಮುಂಬಯಿ.

ನಿಮ್ಮ ಮಕ್ಕಳಿಗೆ ಶಕ್ತಿವರ್ಧಕ.

ಡೊಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವದರಿಂದ ಮಕ್ಕಳ ಶಕ್ತಿಯೂ ತೂಕವೂ ಹೆಚ್ಚುವದು, ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗದುಕೊಳ್ಳುತ್ತವೆ.

ಕ್ರಯ ಬಾಟ್ಲಿ 1ಕ್ಕೆ 12 ಆಣೆ. ಟ. ಖ. 4 ಆಣೆ.

ಕೆ. ಟಿ. ಡೊಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಯಂ. ಯಸ್. ರಾವ್ ಕಂಪೆನಿ,
ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ
ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು).

[illegible] ಹೇರ್ ಆಯಿಲ್ ಸೀಸೆ 1ಕ್ಕೆ	0–5–0
[illegible] ಹೇರ್ ಆಯಿಲ್ ,,	1–0–0
[illegible] ಹೇರಾಯಿಲ್ ,,	0–12–0
[illegible] ಹೇರಾಯಿಲ್ ,,	1–0–0

ಯುಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 5 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ 3 ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉತ್ಪಾದಿನಿ	0–6–0
ಆದರಿಯ ಹುಡುಗಿ (ದ್ವಿತೀಯ ಮುದ್ರಣ)	0–8–0
ಅಮೃತ ಫಲ ,,	0–10–0
ಇಂದಿರಾ ಕೃ. ಮು.	0–6–0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್‌ಪೆಕ್ಟರ್ ಡಿಟೆಕ್ಟಿವ್ ನಾವಿಲ್	0–10–0
ಮಧುಸೂದನ ಡಿಟೆಕ್ಟಿವ್ ನಾವಿಲ್	0–4–0
ಪ್ರಫುಲ್ಲ ,, ,,	0–12–0
ಅಂಬಾಲಿಕೆ (ಹೊಸ ನಾವಿಲ್)	0–1–6
ಕುಸುಮ ,,	0–1–0
ರಾಧಾನಾಥ ,,	0–2–0
ಸುಭದ್ರೆ ,,	0–5–0
ಚಂದ್ರಹಾಸ (ಹೊಸ ಕಥೆ)	0–1–0
ಧ್ರುವ ,,	0–2–0
ಮಕ್ಕಳ ಶಿಕ್ಷಾವಿಧಿ (School Discipline)	0–12–0
ಪುಷ್ಪರಚನೆ (Flower Making)	0–14–0
ಕನ್ನಡ ಅಕ್ಷರ ಮಂಜರಿ	1–0–0
,, ಸಂಗೀತ ಸಮಯಸಾರ	1–4–0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1–4–0
ವಿಶ್ರಮ ,,	1–2–0
ಚಂದ್ರವದನಾ	0–10–0
ಕನ್ನಡ ಅಕ್ಷರಮಾಲೆ, ಹೊಸ ಮಾದರಿ, ದೊಡ್ಡ ಸೈಜ್ 18×28	0–1–0

ಯೂರೋಪದ ಮಹಾ ಯುದ್ಧ.

ರುಷ್ಯರಿಗೆ ಬಾಲ್ಟಿಕ್ ಸಮುದ್ರದಲ್ಲಿ ದೊಡ್ಡ ಬಂದರು, ಮತ್ತು ಭದ್ರವಾದ ಸ್ಥಳವಾಗಿದ್ದ ರಿಗಾ ಪಟ್ಟಣವನ್ನು ಜರ್ಮನರು ಹಿಡಿದರು. ಇತ್ತೀಚಿನ ಬಳಿಯಲ್ಲಿ [illegible] ನದಿಯ ಸಮೀಪ ಜರ್ಮನರು ರುಷ್ಯರ ಕೆಲವು ಸ್ಥಳವನ್ನು ಹಿಡಿದರು. ಡ್ವಿನಾ ನದಿಯನ್ನು ಜರ್ಮನರಿಗೆ ದಾಟಲಿಕ್ಕೆ ಬಿಟ್ಟಿದ್ದರಿಂದ ರಿಗಾ ಜರ್ಮನರ ಕೈವಶ ಬಿಟ್ಟುಕೊಡಬೇಕಾಯಿತಂತೆ. ರುಷ್ಯರ ಸೈನ್ಯವು ಇಲ್ಲಿ ಚೆನ್ನಾಗಿ ಯುದ್ಧಮಾಡದೆ ಕಾನಾಗಿಯೇ ಹಿಮ್ಮೆಟ್ಟಿದಂತೆ ಕಾಣುತ್ತದೆ. ಇದರಿಂದ ರಿಗಾದಿಂದ ಪೆಟ್ರೊಗ್ರೇಡಿಗೆ ಹೋಗುವ ರೈಲುರಸ್ತೆಯು ಜರ್ಮನರ ಕೈವಶವಾದರೆ ರಾಜಧಾನಿಯಾದ ಪೆಟ್ರೊಗ್ರೇಡಿನಲ್ಲಿ ಕಾಲಿಡುವದು ಜರ್ಮನರಿಗೆ ಕಷ್ಟಸಾಧ್ಯವಲ್ಲವಂತೆ. ಆದರೆ ಜನರಲ್ ಚರ್ಕಿಕರು ಈಗ ಈ ಭಾಗದಲ್ಲಿ ರುಷ್ಯದ ಸೇನಾಧಿಪತ್ಯವನ್ನು ವಹಿಸಿದ್ದರಿಂದ ಏನಾಗುತ್ತದೋ ನೋಡಬೇಕಾಗಿದೆ.

ವಿಲ್‌ಡೆವ್, ರಬ್ನಿಕ್, ಕ್ರೆಂಜೆಮ್ ಎಂಬಲ್ಲಿ ರುಷ್ಯರು ಪುನಃ ಹಿಮ್ಮೆಟ್ಟಿದರು. ರಿಗಾ ಬಳಿಯಲ್ಲಿರುವ ಊರುಗಳ ಮೇಲೆ ಜರ್ಮನ್ ನೌಕಾಸೈನ್ಯವು ಫಿರಂಗಿ ಗುಂಡುಗಳನ್ನು ಹಾರಿಸತೊಡಗಿದೆ. ಇದಲ್ಲದೆ ರಿಗಾದಿಂದ ಈಶಾನ್ಯಕ್ಕೆ ಸುಮಾರು ೩೪ ಮೈಲು ಮುಂದರಿಸಿ ಜರ್ಮನರು 'ಆ' ಎಂಬ ನದಿಯ ಪಥವನ್ನು [illegible]. ರುಷ್ಯರ ಸೈನ್ಯವು ಜೆಗೆವೋಲ್ಡ್, ಲೆಂಬರ್ಗ, ಡೆಜ್‌ಬ್ಯಾಟ್, ಎಂಬ ಸ್ಥಳಕ್ಕೆ ಹಿಂದೆ ಬಂದುಬಿಟ್ಟಿತು.

ಜರ್ಮನ್ ಯುದ್ಧವಿಮಾನಗಳು ೪ನೇ ತಾರೀಖಿಗೆ ಚಿಥೆಮ್, ಶಿಯರ್‌ನೆಸ್ ಮತ್ತು ಥೆನೆಟ್ ದ್ವೀಪಗಳ ವರೆಗೆ ಸಂಚರಿಸಿ ಹಲವು ಸಿಡಿಮದ್ದಿನ ಗುಂಡುಗಳನ್ನು ಚೆಲ್ಲಿದವು. ಚಿಥೆಮಿನಲ್ಲಿ ೧೦೭ ಮಂದಿ ನೌಕಾ ಇಲಾಖೆಯ ಕಾಮಗಾರರು ಸತ್ತರು; ೮೬ ಮಂದಿಗೆ ಗಾಯವಾಯಿತು. ಇತರ ಜನಗಳಲ್ಲಿ ಒಬ್ಬನು ಸತ್ತನು. ೭ ಜನರಿಗೆ ಗಾಯವಾಯಿತು. ಮರುದಿನವೂ ಇನ್ನೊಮ್ಮೆ ಬಂದು [illegible] ೧೧ ಮಂದಿಯನ್ನು ಕೊಂದದ್ದಲ್ಲದೆ ೬೨ ಜನರಿಗೆ ಗಾಯಪಡಿಸಿದವು.

ಇದಕ್ಕೆ ಪ್ರತಿಯಾಗಿ ಬ್ರಿಟಿಷ್ ಯುದ್ಧವಿಮಾನಗಳು ಬ್ರುಜೆಸ್ ಬಳಿಯಲ್ಲಿ ಹಡಗು ನಿಲ್ಲುವ ರೇವನ್ನು ವಾರ್ನೆಟನ್ ಮತ್ತು [illegible] ಎಂಬಲ್ಲಿ ವಿಮಾನಗಳ ಕಾರ್ಖಾನೆಯನ್ನೂ ಗುರಿಯಿಟ್ಟು ಸಿಡಿಮದ್ದನ್ನು ಚೆಲ್ಲಿದವು. ಒಂದು ಜರ್ಮನ್ ವಿಮಾನವನ್ನು ನೆಲಕ್ಕೆ ಇಳಿಸಿ ಪುಡಿಮಾಡಿದವು; ಮತ್ತು ಎಟ್ರಿಕೋರ್ಟ್ ಮತ್ತು ರೈಲ್ವೆ ಸ್ಟೇಶನಿನ ಮೇಲೆ ಸಿಡಿಮದ್ದನ್ನು ಚೆಲ್ಲಿದವು.

ಅಮೇರಿಕದಿಂದ ಇಂಗ್ಲೆಂಡಿಗೆ ಬರುವ 'ಸಿಟಿ ಆಫ್ ಎಥೆನ್ಸ್' ಎಂಬ ದೊಡ್ಡ ಸರಕಿನ ಹಡಗು ಕಳೆದ ತಿಂಗಳಲ್ಲಿ ಸಮುದ್ರದಲ್ಲಿ ತೇಲುವ ಸಿಡಿಮದ್ದಿನ ಕೋಟೆ ತಗಲಿ ಮುಳುಗಿತು. ನ್ಯೂಯೋರ್ಕಿನಿಂದ ತುಂಬಿಸಿದ ೩೦೦ ಒಪ್ಪಾಲ ಚೀಲಗಳು ಮುಳುಗಿಹೋದವು; ೧೭ ಮಂದಿ ಪ್ರಾಣ ಹೋದರು.

ಒಗೆಸ್ಟ ತಿಂಗಳಲ್ಲಿ ನೊರ್ವೆ ರಾಜ್ಯದ ೨೧ ಹಡಗುಗಳನ್ನು ಜರ್ಮನರು ಮುಳುಗಿಸಿದವು.

ಗತವಾರದಲ್ಲಿ ೧,೬೦೦ ಟನ್ನಿಗೆ ಮಿಕ್ಕಿದ ೨೦ ಹಡಗುಗಳೂ ೧,೬೦೦ಕ್ಕೆ ಕಡಿಮೆಯಾದ ೪ ಹಡಗುಗಳೂ ಮುಳುಗಿಹೋದವು.

ಜರ್ಮನರ ಒಂದು ಜಲಾಂತರ್ಗಾಮಿಯು ಇಂಗ್ಲೆಂಡಿನ [illegible] ಎಂಬ ಊರಿಗೆ ಸಮೀಪಿಸಿ ಸುಮಾರು ೪೦ ತೋಟೆಗಳನ್ನು ತೀರದ ಕಡೆಗೆ ಹಾರಿಸಿತ. ಮೂವರು ಮಂದಿ ಇದರಿಂದ ಸತ್ತರು. ೫ ಮಂದಿಗೆ ಗಾಯತಗಲಿತು.

ಇಟೆಲಿಯವರು ಮೊಂಟ್‌ಸಾನ್ ಗಾಬ್ರಿಯೇಲ್ ಎಂಬ ಬಲವಾದ ದಿಣ್ಣೆಯನ್ನು ಒಸ್ಟ್ರಿಯದವರಿಂದ ಕಿತ್ತುಕೊಂಡರು. ಈ ಸಂದರ್ಭದಲ್ಲಿ ಸುಮಾರು ೧,೦೦೦ ಮಂದಿ ಒಸ್ಟ್ರಿಯರನ್ನು ಸೆರೆಹಿಡಿದಿರುವರು. ಜುಲಿಯನ್ [illegible]ದಲ್ಲಿ ಯುದ್ಧವು ಜೋರಾಗಿ ನಡೆಯುತ್ತಿದೆ. ಕಾಪ್ಯಾಗ್ನೈಜಾ ಮತ್ತು ಸಮುದ್ರತೀರಕ್ಕೆ ಮಧ್ಯದಲ್ಲಿರುವ ಭಾಗದಲ್ಲಿ ಒಸ್ಟ್ರಿಯರು ಬಹಳ ಕಾದಾಡಿ ಅಲ್ಪಸ್ವಲ್ಪ ಜಯಹೊಂದಿದರೂ ಕಡೆಗೆ ಇಟೆಲಿಯವರು ಪುನಃ ಸೈನ್ಯ ಜತೆಗೂಡಿಸಿ ಮೇಲೆ ಬಿದ್ದು ಒಸ್ಟ್ರಿಯರು ಹಿಡಿದ ಅಂತವನ್ನು ಹಿಂದಕ್ಕೆ ಪಡೆದರು. ಈ ಸಮಯದಲ್ಲಿ ೨೧ ಯುದ್ಧವಿಮಾನಗಳು ಇಟೆಲಿಯವರಿಗೆ ಸಹಾಯಮಾಡುತ್ತಿದ್ದವು. ಕೆಲವು ಪೋಲಾ ಎಂಬ ಊರಿನ ಮೇಲೆ ಸಿಡಿಮದ್ದನ್ನು ಚೆಲ್ಲಿ ಸುರಕ್ಷಿತವಾಗಿ ಹಿಂತಿರುಗಿದವು.

ಹಾರ್ಗೆನ್‌ಕೋರ್ಟಿನ ಉತ್ತರಭಾಗದಲ್ಲಿ ಜರ್ಮನರ ಪೆಟ್ಟು ತಡೆಯಲಾರದೆ ಬ್ರಿಟಿಷರು ಒಂದು ಸಲ ಹಿಮ್ಮೆಟ್ಟಿದರೂ ಕಡೆಗೆ ಹೊಸ ಸೈನ್ಯ ಜತೆಗೂಡಿಸಿ ಪೂರ್ವಸ್ಥಾನವನ್ನೆ ಸೇರಿದರು. ಜುಲೈ ೪ನೇ ತಾರೀಖಿನಿಂದ ಬ್ರಿಟಿಷರು ೧೦,೦೦೦ ಜರ್ಮನರನ್ನು ಹಿಡಿದದ್ದಲ್ಲದೆ ೩೮ ದೊಡ್ಡ ಫಿರಂಗಿ, ೨೦೦ ಮೆಶಿನ್‌ಗನ್ಸ್, ೭೪ ಟ್ರೆಂಚ್‌ಮೋರ್ಟರ್‌ಗಳನ್ನು ಸೆರೆಹಿಡಿದಿರುವರು. ಲಾಬೆಸ್ಸಿಯಲ್ಲಿ ಜರ್ಮನರು ಸ್ವಲ್ಪ ಹಿಂದೆ ಸರಿದರು. ಜರ್ಮನರ ೨ ಯುದ್ಧವಿಮಾನಗಳನ್ನು ಕೆಳಕ್ಕೆ ಉರುಳಿಸಿದರು. ಬ್ರಿಟಿಷರ ಒಂದು ವಿಮಾನವು ನಷ್ಟವಾಯಿತು. ಸೆಂಟ್ ಜುಲಿಯನ ಈಶಾನ್ಯದಲ್ಲಿಯೂ ಲೆನ್ಸಿನ ಉತ್ತರದಲ್ಲಿಯೂ ಬ್ರಿಟಿಷರು ಸ್ವಲ್ಪ ಮುಂದರಿಸಿದರು. ಈಪರ್ ಬಳಿಯಲ್ಲಿ ಭಯಂಕರವಾದ ಫಿರಂಗಿ ಕಾಳಗವು ಕೇಳಿಸುತ್ತಿತ್ತು. ಬ್ರಿಟಿಷರ ವಿಮಾನಗಳು ಜರ್ಮನರ ಹಲವು ರೈಲ್ವೆ ಸ್ಟೇಶನುಗಳ ಮೇಲೆ ಸಿಡಿಮದ್ದನ್ನು ಚೆಲ್ಲಿ ಬಹಳ ನಷ್ಟಪಡಿಸಿದವು. ಜರ್ಮನರ ೧೪ ವಿಮಾನಗಳು ಕೆಳಕ್ಕೆ ಬಿದ್ದವು, ೫ ಓಡಿಹೋದವು; ಬ್ರಿಟಿಷರ ೭ ವಿಮಾನಗಳು ನಷ್ಟವಾದವು.

ಹುರ್ಟಬಿಸೆ ಬಳಿಯಲ್ಲಿ ಫ್ರೆಂಚರು ಜರ್ಮನರ ಸೈನ್ಯದಲ್ಲಿ ಬಹಳ ನಷ್ಟಪಡಿಸಿದರು. ಹೆಪಿಗ್ನೆಲ್ಲೆಯ ಬಳಿಯಲ್ಲಿ ಜರ್ಮನ್ ಪಾಳ್ಯವನ್ನು ನುಗ್ಗಿ ಒಂದು ಸೈನ್ಯವನ್ನು ಪುಡಿಮಾಡಿದ್ದಲ್ಲದೆ, ಅವರ ಬಹಳ ಸಾಮಗ್ರಿಗಳನ್ನು ನಾಶಮಾಡಿದರು. ಜರ್ಮನರ ವಿಮಾನಗಳು ಡಂಕರ್ಕ್, ಕೆಲೈ, ಲುನವೆಲ್ಲ ಎಂಬ ಊರುಗಳ ಮೇಲೆ ಸಿಡಿಮದ್ದನ್ನು ಚೆಲ್ಲಿ ಕೆಲೈಯಲ್ಲಿ ಹಲವರಿಗೆ ಪೆಟ್ಟು ತಗಲಿತು. ಅದಕ್ಕೆ ಪ್ರತಿಯಾಗಿ ಫ್ರೆಂಚ್ ವಿಮಾನಗಳು ಮೆಟ್ಜ ಎಂಬ ಪ್ರಸಿದ್ಧ ಕೋಟೆಯ ಮೇಲೆಯೂ ಕೆಂಪ್ರ ಎಂಬ ಊರಿನ ಮೇಲೆಯೂ ಸಿಡಿಮದ್ದನ್ನು ಚೆಲ್ಲಿ ಜರ್ಮನರಿಗೆ ಬಹಳ ನಷ್ಟಪಡಿಸಿದರು. ಇಲ್ಲಿ ಜರ್ಮನರ ೧೪ ವಿಮಾನಗಳು ನೆಲಕ್ಕೆ ಉರುಳಿಬಿದ್ದವು.

ರಿಗಾ ಹಿಡಿದನಂತರ ಬಾಲ್ಟಿಕ್ ಸಮುದ್ರದ ಕರಾವಳಿಯನ್ನು ಜರ್ಮನರು ಕೈವಶಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿದ್ದಾರೆ. ರಿಗಾಕೊಲ್ಲಿಯಲ್ಲಿ ಜರ್ಮನ ಯುದ್ಧನಾವೆಗಳು ಬಂದಿರುವವು. ರಿಗಾದಿಂದ ಪೆಂಡನ್ನಿಗೆ ಹೋಗುವ ರೈಲುರಸ್ತೆಯನ್ನು ಕಡಿದುಬಿಡಲಿಕ್ಕೆ ವಿಶೇಷ ಪ್ರಯತ್ನ ನಡೆಯುತ್ತದೆ. 'ಆ' ನದಿಯನ್ನು ದಾಟಿ ರುಷ್ಯರು ಪ್ಸ್ಕೋವ್ ರಸ್ತೆಯಲ್ಲಿ ಮಲುಪನದಿಯನ್ನು ಸೇರಿದರು. ಇನ್ನೂ ಹಿಂದಕ್ಕೆ ಸರಿದರು. ಕಾಮಗಾರಿಯವರ ಕೃಷಿಕರ ಮತ್ತು ಲಷ್ಕರಿನ ಪ್ರತಿನಿಧಿಗಳ ಕೂಟದ ಕೆಲವು ಮುಂಬರರು ಜನರಲ್ ಕೊರ್ನಿಲೊಫರಿಗೆ ರಾಜಕೊಡಲಿಕ್ಕೆ ಒತ್ತಾಯಪಡಿಸಬೇಕೆಂದು ಪ್ರಯತ್ನಿಸಿದರು. ಆದರೆ ಕೊರ್ನಿಲೊಫರು ರಾಜನಾಮೆ ಕೊಟ್ಟರೆ ಅತನಷ್ಟು ಸಾಮರ್ಥ್ಯವಂತರು ಬೇರೆ ಸಿಕ್ಕಲಾರರು ಎಂಬದರಿಂದ ಈ ಪ್ರಯತ್ನವು ಸಫಲವಾಗಲಿಲ್ಲ.

ರುಮೆನಿಯದಲ್ಲಿ ರುಮೇನಿಯನ್ ಲಷ್ಕರಿನ ಎರಡು ಪಡೆಗಳು ಒಂದಾಗದಹಾಗೆ ಮಧ್ಯ ಇರುವ ರೈಲುರಸ್ತೆಯನ್ನು ಕಡಿದುಬಿಡುವುದಕ್ಕೆ ಜರ್ಮನರೂ ಒಸ್ಟ್ರಿಯರೂ ಬಲ್ಗೇರಿಯದವರೂ ಪ್ರಯತ್ನಿಸುತ್ತಿದ್ದಾರೆ.

ಇಟೆಲಿಯನರ ೩ ಹಡಗಗಳೂ ೧ ಹಾಯಿಹಡಗೂ ಮುಳುಗಿಹೋದವು; ಫ್ರೆಂಚರ ೩ ಹಡಗುಗಳು ಮುಳುಗಿದವು.

ಸ್ಕಾರಬೊರೊ ಬಳಿಯಲ್ಲಿ ಬಂದ ಜರ್ಮನ ಜಲಾಂತರ್ಗಾಮಿಯು ಫಿರಂಗಿ ಗುಂಡುಗಳನ್ನು ಹಾರಿಸುವಷ್ಟರಲ್ಲಿ ಬ್ರಿಟಿಷ ನಾವೆಗಳು ಅದರ ಮೇಲೆ ಪ್ರತಿಯಾಗಿ ಗುಂಡುಗಳನ್ನು ಹಾರಿಸಿದವು; ಅಷ್ಟರೊಳಗೆ ಅದು ಮುಳುಗಿದ್ದರಿಂದ ಅದಕ್ಕೆ ಪೆಟ್ಟು ತಗಲಿಯಿತೋ ಎಂಬದು ಗೊತ್ತಾಗಲಿಲ್ಲ.

ಗೊರಿಜಿಯದ ಉತ್ತರದಲ್ಲಿ ಇಟೆಲಿಯವರು ಒಸ್ಟ್ರಿಯದವರ ಮೇಲೆ ಕೈಮಾಡುವದು. ತಗ್ಗಿಸಲಿಕ್ಕೆ ಒಸ್ಟ್ರಿಯನರು ಕಾರ್ಸೊ ಪೀಠಭೂಮಿಯಲ್ಲಿ ಇಟೆಲಿಯನರ ಮೇಲೆ ಬೀಳಲು ಸಾಹಸಮಾಡುತ್ತಿರುವರು. ಟ್ರೆಂಟಿನೊ ಪ್ರದೇಶದಲ್ಲಿ ಒಸ್ಟ್ರಿಯರ ಕೆಲವು ಭದ್ರವಾದ ಸ್ಥಳಗಳನ್ನು ಇಟೆಲಿಯವರು ವಶಪಡಿಸಿದರು. ಒಸ್ಟ್ರಿಯನ್ ವಿಮಾನಗಳು ವೆನಿಸ್ ಪಟ್ಟಣದ [illegible] ಮೇಲೆ ಸಿಡಿಮದ್ದನ್ನು ಚೆಲ್ಲಿದರೂ ಬಹಳ ನಷ್ಟವಾಗಲಿಲ್ಲ. ಪೋಲಾ ಎಂಬಲ್ಲಿರುವ ಒಸ್ಟ್ರಿಯದ ನೌಕಾಸೇನೆಯ ಕಾರ್ಖಾನೆಯ ಮೇಲೆ ಇಟೆಲಿಯವರು ವಿಮಾನಗಳಿಂದ ಸಿಡಿಮದ್ದನ್ನು ಚೆಲ್ಲಿ ಬಹಳ ಹಾವಳಿ ಮಾಡಿದ್ದರಿಂದ ಯುದ್ಧನಾವೆಗಳನ್ನು ಪೋಲಾದಿಂದ [illegible] ಎಂಬಲ್ಲಿಗೆ ಒಸ್ಟ್ರಿಯರು ಕೊಂಡುಹೋಗಿರುವರು.

೩ನೇ ತಾರೀಖಿನ ದಿನ ಜರ್ಮನರ ವಿಮಾನಗಳ [illegible] ಬಂದಂತೆ ತಿಳಿದುಬರುತ್ತದೆ. ಮೊದಲನೆ ಗುಂಪು ಬಂದು ಹಿಂತಿರುಗಿ ಸ್ವಲ್ಪ ಸಮಯದ ನಂತರ ಎರಡನೆದ, ಅದು ಹಿಂದೆ ಹೋದನಂತರ ಮೂರನೆದ ಬಂದು ಸಿಡಿಮದ್ದಿನ ಮಳೆಯನ್ನು ಸುರಿಸಿತು. [illegible] ಒಂದೊಂದು ಗುಂಪು ಸುಮಾರು ೨೦ ನಿಮಿಷ ಒಂದೊಂದು ಕಡೆಯಲ್ಲಿ ತಂಗಿದಂತೆ ಕಾಣುತ್ತದೆ. ಈಗ ಬರುವ ವಿಮಾನಗಳು ಮೊದಲಿನಿಗಿಂತಲೂ ಹೆಚ್ಚಿಗೆ ಸಿಡಿಮದ್ದನ್ನು ತೊತ್ತುಕೊಂಡು ಬರುವದಲ್ಲದೆ ಅವುಗಳಲ್ಲಿ ಕೆಲವು ಫಿರಂಗಿಗಳೂ ಇವೆ.

[illegible] ಯುದ್ಧರಂಗದ ಬ್ರಿಟಿಷಭಾಗದಲ್ಲಿ ಜರ್ಮನರ ೫ ವಿಮಾನಗಳನ್ನು [illegible] ವಿಮಾನಗಳನ್ನು ಹಿಂದಕ್ಕೆ ಅಟ್ಟಿದರು. ಬ್ರಿಟಿಷರ ೭ ವಿಮಾನಗಳು [illegible]. [illegible]

[illegible] ಬ್ರಿಟಿಷ ಮತ್ತು ಫ್ರೆಂಚ ವಿಮಾನಗಳು ಸಿಡಿಮದ್ದನ್ನು ಚೆಲ್ಲಿದವು. ಈ ಸಂದರ್ಭದಲ್ಲಿ ಜರ್ಮನರ ೫ ವಿಮಾನಗಳು ನೆಲಕ್ಕೆ ಉರುಳಿದವು. ೫ ಹಿಂದಕ್ಕೆ ಓಡಿಹೋದವು. ಬ್ರಿಟಿಷರ ೩ ವಿಮಾನಗಳು ಕಾಣೆಯಾದವು. ಈ ದ್ವಿಮುಖಯುದ್ಧದಲ್ಲಿ [illegible] ಬ್ರಿಟಿಷರು ಲೆನ್ಸಿನ ನೈಋತ್ಯಭಾಗದಲ್ಲಿ ಸ್ವಲ್ಪ ಮುಂದರಿಸಿದರು. [illegible] ಬ್ರಿಟಿಷರ ಪಾಳ್ಯವನ್ನು ನುಗ್ಗಿದರೂ ಕಡೆಗೆ ಹಿಂದೆ ಸರಿಯಬೇಕಾಯಿತು. ಬೆಲ್ಜಿಯಮಿನ [illegible] ಭದ್ರವಾಗಿರುವ ಕೆಲವು ಸ್ಥಳಗಳ ಮೇಲೆ ಬ್ರಿಟಿಷರು [illegible] ವಶಮಾಡಿಕೊಂಡರು. [illegible] ವಿಮಾನಗಳ ಸಿಡಿಮದ್ದಿನ ದೆಸೆಯಿಂದ ೩೭ ಜರ್ಮನ್ ಬಂದಿಗಳು ಸತ್ತುಹೋದರು. ೮೩ ಜನರಿಗೆ ಗಾಯತಗಲಿತು. ಬ್ರಿಟಿಷರು ಬೆಲ್ಜಿಯಮಿನ ಬಳಿಯಲ್ಲಿ ಹಿಡಿದ ಸ್ಥಳಗಳನ್ನು ಬಿಟ್ಟುಕೊಡಬೇಕಾಯಿತು.

ಫ್ರೆಂಚರ ಭಾಗದಲ್ಲಿ ಜರ್ಮನರ ೩ ವಿಮಾನಗಳು ಮುರಿದುಬಿದ್ದವು. ೧೨ ಜಖಂ ಆಗಿ ಕೆಳಕ್ಕೆ ಇಳಿದವು. ಬೆಲ್ಜಿಯಮಿನಿಂದ ಜೊನ್ಸಿಕ್ಕಿಗೆ ಹೋಗುವ ರಸ್ತೆಯಲ್ಲಿ ಜರ್ಮನರ ಭದ್ರವಾದ ಕೆಲವು ಸ್ಥಳಗಳನ್ನು ಫ್ರೆಂಚರು ಹಿಡಿದರೂ ಕಡೆಗೆ ಹಿಂದಕ್ಕೆ ಬಿಟ್ಟುಕೊಡಬೇಕಾಯಿತು.

ವೆನೀಸ್ ಪಟ್ಟಣದ ಪಶ್ಚಿಮಭಾಗದ ಕರಾವಳಿ ಪ್ರದೇಶವನ್ನು ಜರ್ಮನರು ಯುದ್ಧನಾವೆಗಳಲ್ಲಿರುವ ಫಿರಂಗಿಗಳ ಮೂಲಕ ಸುಡುತ್ತಿರುವದರಿಂದ ಅವರು ಯುದ್ಧನಾವೆಗಳಿಂದ ಆ ಪ್ರದೇಶದಲ್ಲಿ ಇಳಿದು ಅಲ್ಲಿಂದ ಒಲ್ಸ್ ಎಂಬ ಊರಿನ ಬಳಿಯಲ್ಲಿರುವ ದೊಡ್ಡ ರೈಲುರಸ್ತೆಯನ್ನು ಕೈವಶಮಾಡಿಕೊಳ್ಳುವ ಅಭಿಪ್ರಾಯವಿದೆ ಎಂದು ಕಾಣುತ್ತದೆ. ಇದರಿಂದ ಪೆಟ್ರೊಗ್ರೆಡಿಗೆ ಅಪಾಯ ಉಂಟಾಗಬಹುದು. ರಿಗಾ ಪಟ್ಟಣಕ್ಕೆ ಪೂರ್ವಭಾಗದಲ್ಲಿ ಜರ್ಮನರು ೩ ತಂಡಗಳಾಗಿ ಹೊರಟು ಒಂದು ಕರಾವಳಿಯನ್ನು ತಮ್ಮ ವಶಕ್ಕೆ ಬಲಕಾಯಿಸಿಕೊಳ್ಳುವದಕ್ಕೂ ಇನ್ನೊಂದು ಪೆಟ್ರೊಗ್ರೆಡ ರೈಲುರಸ್ತೆಯನ್ನು ಕಡಿದುಬಿಡುವದಕ್ಕೂ ಮೂರನೆ ತಂಡವು ಡ್ವಿನಾ ಕಡೆಗೆ ಪೂರ್ವಕ್ಕೆ [illegible] ಮುಂದರಿಸಲಿಕ್ಕೆ ಆರಂಭಮಾಡಿಕೊಂಡಿದೆ. ಈ ತನ್ಮಧ್ಯ ಜರ್ಮನ ಜಲಾಂತರ್ಗಾಮಿಗಳು ರಿಗಾ [illegible]ಯನ್ನು ಫಿರಂಗಿಗಳ ಮೂಲಕ ಸುಟ್ಟು ಒಂದು ಭಾರವಾದ ಹಡಗನ್ನು ಮುಳುಗಿಸಲಿಕ್ಕೆ ಪ್ರಯತ್ನಿಸಿದವು; ಆದರೆ ಅದು ಸಾಧ್ಯವಾಗಲಿಲ್ಲ.

[illegible]ಯನ್ ರಣರಂಗದಲ್ಲಿ ಮೊನಿಯಾ, ವಾರ್ಡಾ ಭಾಗದಲ್ಲಿ ರುಮೇನಿಯದ ಸೈನ್ಯವು ಎದುರಿಸಿ ಬಂದಿದ್ದ ಜರ್ಮನರನ್ನು ತಡೆಗಟ್ಟಿತು. ದಾಟಿ ಹೋಗಲಿಕ್ಕೆ ಪ್ರಯತ್ನಿಸಿದಾಗ ಶತ್ರುಗಳಲ್ಲಿ ಅನೇಕ ಮಂದಿ ಸತ್ತುಬಿದ್ದರು.

ಒಸ್ಟ್ರಿಯದ ಕಾರ್ಸೊ ತಪ್ಪಲ ಪ್ರದೇಶದಲ್ಲಿ ೭ ಸಲ ಇಟೆಲಿಯ ಸೈನ್ಯದ ಮೇಲೆ ಬಂದು ಬಿದ್ದರು. ಹೆರ್ಮಡಾ ಬಳಿಯಲ್ಲಿ ಎರಡು ಕಡೆಗಳಲ್ಲಿ ಇಟೆಲಿಯವರ ಪಾಳ್ಯದೊಳಗೆ ಪ್ರವೇಶ ಮಾಡಿದರು. ಆದರೆ ಕಡೆಗೆ ಇಟೆಲಿಯವರು ಅವರನ್ನು ಹಿಂದಕ್ಕೆ ಅಟ್ಟಿದರು. ಈ ಸ್ಥಳದಲ್ಲಿ ಒಸ್ಟ್ರಿಯರ ಸೈನ್ಯವು ಬಹಳ ನಾಶವಾಯಿತು. ಗೊರಿಜಿಯದ ಬಳಿಯಲ್ಲಿ ಶತ್ರುಸೈನ್ಯವು ಬಹಳ ಪ್ರಯತ್ನದಿಂದ ಕಾದಾಡುತ್ತಿದೆ.

ರಿಗಾದಿಂದ ಮುಂದರಿಸಿ ಜರ್ಮನರು ಬರುತ್ತಿರುವದರಿಂದ ಪೆಟ್ರೊಗ್ರೆಡಿನಿಂದ ಸರಕಾರಿ ಬೇಂಕು ಮತ್ತು ಯುದ್ಧಸಾಮಗ್ರಿಗಳ ಹೆಡ್ ಆಫೀಸನ್ನು ನಿಜನಿನೊವ್ಗೊರೊಡ್ ಎಂಬಲ್ಲಿಗೆ ಸಾಗಿಸುವ ಪ್ರಯತ್ನ ನಡೆಯುತ್ತದೆ. ಸರಕಾರದ ಇತರ ಆಫೀಸುಗಳನ್ನು ಮೊಸ್ಕೋವಿಗೆ ಸಾಗಿಸುವದಕ್ಕೆ ಆಲೋಚನೆ ನಡೆಯುವದಲ್ಲದೆ ಪ್ರಜಾಜನಗಳಲ್ಲಿ ಈಗಲೇ ಪೆಟ್ರೊಗ್ರೇಡಿನಿಂದ ಹೊರಗೆ ಹೋಗಿ ಇರಲಿಕ್ಕೆ ಅನುಕೂಲವಿದ್ದವರು ಈಗಲೇ ಹೊರಟುಹೋಗುವುದು ಒಳ್ಳೇದೆಂದು ತಿಳಿಸಿಯದೆಯಂತೆ.

ಫ್ರೆಂಚರು ಮ್ಯೂಸ್‌ನದಿಯ ಬಲಭಾಗದಲ್ಲಿ ಜರ್ಮನರ ಮೇಲೆ ಬಿದ್ದು ಫೊಸ್ಸೆವೊಡ್ ಮತ್ತು ಚೊಮೆವೊಡ್ ಇವನ್ನು ಹಿಡಿದರು; ಇವನ್ನು ಪುನಃ ಹಿಂದಕ್ಕೆ ಪಡೆಕೊಳ್ಳಲಿಕ್ಕೆ ಜರ್ಮನರುಮಾಡಿದ ಪ್ರಯತ್ನವು ಸಫಲವಾಗಲಿಲ್ಲ. ಈ ಸಂದರ್ಭದಲ್ಲಿ ಸುಮಾರು ೮೦೦ ಜರ್ಮನರು ಸೆರೆಯಾದರು; ೧೦೦೦ಕ್ಕೆ ಮಿಕ್ಕಿ ಸತ್ತುಬಿದ್ದಿರುವರು.

ಶತ್ರುಸೈನ್ಯದವರು ಲಿಂಗ್ವಿಮಾರ್ಕ ಮತ್ತು ಹಾರ್ಗಕೋರ್ಟ ಎಂಬ ಬ್ರಿಟಿಷರ ವಶವಾಗಿದ್ದ ಸ್ಥಳಗಳ ಮೇಲೆ ಭಯಂಕರ ರೀತಿಯಲ್ಲಿ ಫಿರಂಗಿಗುಂಡುಗಳನ್ನು ಹಾರಿಸಿದರು. ವಿಲ್ಹೆಂಟಿನ ಪೂರ್ವಭಾಗದಲ್ಲಿ ಜರ್ಮನ ಪಾಳ್ಯವನ್ನು ನುಗ್ಗಿ ಬ್ರಿಟಿಷರು ಕೆಲವುಮಂದಿ ಜರ್ಮನರನ್ನು ಸೆರೆಹಿಡಿದರು.

ಜರ್ಮನರು ಕೇಳಿದಂತೆ ಶೆಲ್ಡ್‌ನದಿಯಲ್ಲಿ ಜರ್ಮನರ ಜಲಾಂತರ್ಗಾಮಿಗಳು ಓಡ್ಯಾಡುವದಕ್ಕೆ ಹೊಲ್ಲೆಂಡು ರಾಜ್ಯದವರು ಸಮ್ಮತಿಸುವದಿಲ್ಲವೆಂದು ತಿಳಿದುಬರುತ್ತದೆ.

ಗೊರಿಜಿಯದ ಈಶಾನ್ಯದಲ್ಲಿ ಇಟೆಲಿಯವರು ಭಯಂಕರವಾದ ರೀತಿಯಲ್ಲಿ ಒಸ್ಟ್ರಿಯರ ಮೇಲೆ ಬಿದ್ದು ಫಿರಂಗಿಗುಂಡುಗಳನ್ನು ಹಾರಿಸುತ್ತಲಿರುವರು. ಆದರೆ ಕೆಲವು ಕಡೆಗಳಲ್ಲಿ ಮಳೆಯಿಂದ ಬೆಟ್ಟದ ಬದಿಗಳಲ್ಲಿ ದೊಡ್ಡ ಪ್ರವಾಹಗಳು ಎದ್ದು ಯುದ್ಧವನ್ನು ಸರಿಯಾಗಿ ನಡಿಸುವುದಕ್ಕೆ ಅಡಚಣೆಯಾಗಿದೆ ಆದರೂ ಫಿರಂಗಿನಾದವು ಕಡಿಮೆಯಾಗಲಿಲ್ಲ.

ವಿದೇಶ ವೃತ್ತಾಂತ.

ರುಷ್ಯದ ಯುವರಾಜನಾದ ಮಾಯ್ಕಲ್ ಎಲೆಕ್ಸಾಂಡ್ರೊವಿಚ್, ಅವನ ಹೆಂಡತಿ ಮತ್ತು ಗ್ರೆಂಡ್‌ಡ್ಯೂಕ್ ಪಾವ್ಲೊವಿಚ್ ಇವರು ರುಷ್ಯದ ಸರಕಾರದವರಿಗೆ ವಿರೋಧವಾಗಿ ದಂಗೆಯೆಬ್ಬಿಸಿ ಪೂರ್ವದ ಅರಸುತನವನ್ನು ಪುನಃ ಸ್ಥಿರಗೊಳಿಸಬೇಕೆಂಬ ಇರಾದೆಯಲ್ಲಿರುವರೆಂಬ ಆರೋಪದ ಮೇಲೆ ನಿರ್ಬಂಧಿಸಲ್ಪಟ್ಟಿರುವರು.

ರ್‍ಹಾಯಿನ್ ನದಿಯಿಂದ ಡೆನ್ಯೂಬ್ ನದಿಯನ್ನು ಮುಟ್ಟುವದಕ್ಕೆ ಒಂದು ಕಾಲುವೆಯನ್ನು ಮಾಡುವುದಾಗಿ ನಿಶ್ಚಯಿಸಿದೆಂದು ಜರ್ಮನಿಯ ಒಂದು ಭಾಗವಾದ ಬೆವೆರಿಯದ ಅರಸನು ತನ್ನ ರಾಜಧಾನಿಯಲ್ಲಿ ಕೊಟ್ಟ ಭಾಷಣದಲ್ಲಿ ಹೇಳಿರುವನು. ಈ ಕಾಲುವೆಯಲ್ಲಿ ೧೨೦೦ ಟನ್ ಭಾರವಾಣಿಯ ಹಡಗುಗಳು ಓಡ್ಯಾಡುವಷ್ಟು ಅಳವಾಗುವುದಂತೆ.

ನ್ಯೂಜಿಲೆಂಡ್ ಎಂಬ ಬ್ರಿಟಿಷ ದ್ವೀಪದಲ್ಲಿ ಯುದ್ಧಸಹಾಯಕ್ಕೆ ೧೨ ಮಿಲ್ಲಿಯ ಪೌಂಡು ಒದಗಿಸಬೇಕಾಗಿ ಕೇಳಿದಾಗ ೧೬ ಮಿಲ್ಲಿಯ ಪೌಂಡು ವಂತಿಗೆಯಾಯಿತಂತೆ.

ಸರ್ವಿಯದಲ್ಲಿ ಬೆಳೆದ ಪೈರನ್ನು ಜರ್ಮನ್ ಮತ್ತು ಒಸ್ಟ್ರಿಯನ್ ಸೈನ್ಯದವರು ಬಲಕಾಯಿಸಿಕೊಂಡಿರುವದರಿಂದ ಸಾವಿರಾರು ಮಕ್ಕಳ, ಹೊಟ್ಟೆಗಿಲ್ಲದೆ ಸಾಯುವ ಸಂದರ್ಭ ಬಂದಿದೆ ಎಂದೂ, ಒಸ್ಟ್ರಿಯದಲ್ಲಿ ನಿರ್ಬಂಧಿಸಲ್ಪಟ್ಟವರಲ್ಲಿ ೮೦,೦೦೦ ಮಂದಿ ಸತ್ತುಹೋದರೆಂತಲೂ ಈಗ ಸರ್ವಿಯದಲ್ಲಿ ಉಪವಾಸಬೀಳುವವರ ಉದ್ಧಾರಾರ್ಥವಾಗಿ ಸಹಾಯ ಮಾಡಬೇಕೆಂತಲೂ ಸರ್ವಿಯದಿಂದ ವಿನಂತಿ ಬಂದಿದೆ.

೧೯೧೮ನೇ ಇಸವಿಯಲ್ಲಿ ತಯಾರಾಗಿ ಅಮೇರಿಕದಿಂದ ಯುದ್ಧರಂಗಕ್ಕೆ ಬರಬಹುದಾದ ದೊಡ್ಡ ಸೈನ್ಯದ ಬಗ್ಗೆ ಪಶ್ಚಿಮ ಯುದ್ಧರಂಗದ ಹಿಂಭಾಗದಲ್ಲಿ ಫ್ರಾನ್ಸ್‌ದೇಶದಲ್ಲಿ ವಿಶೇಷ ತಯಾರಿ ನಡೆಯುತ್ತಲಿದೆ.

ಬ್ರಿಟಿಷ್ ನೌಕಾ ಕಾರ್ಖಾನೆಗಳಲ್ಲಿ ೬ ತಿಂಗಳೊಳಗೆ ದೊಡ್ಡ ೬೩ ಹಡಗುಗಳು ಸರಕುಭಾರವಾಗುವ ಬಗ್ಗೆ ತಯಾರಾಗಿರುವವು.

ಬ್ರಿಟಿಷರಿಗೆ ಒಳಪಟ್ಟ ಹೋಂಗ್‌ಕೋಂಗ್ ದ್ವೀಪದಲ್ಲಿ ಎಲ್ಲರೂ ಯುದ್ಧದ ಸರ್ವಿಸಿಗೆ ಸೇರಬೇಕೆಂಬ ಮಸೂದೆಯನ್ನು ಅಲ್ಲಿಯ ನ್ಯಾಯವಿಧಾಯಕ ಸಭೆಯವರು ಮಂಜೂರುಮಾಡಿರುವರು.

ಕೆಲವು ಜರ್ಮನ್ ಅಮೇರಿಕನ್ ಪ್ರಜೆಗಳು ಅಮೇರಿಕದ ಯುನೈಟೆಡ್ ಸ್ಟೇಟ್ಸ್ ರಾಜ್ಯದಲ್ಲಿ ಜರ್ಮನಿಯ ಕಡೆಗೆ ಪಕ್ಷಪಾತವುಳ್ಳವರಾಗಿ ರಾಜ್ಯದ್ರೋಹದ ಚಳವಳವನ್ನು ಎಬ್ಬಿಸುವುದು ಗೊತ್ತಾಗಿ ಅವರಲ್ಲಿ ಮುಖಂಡರನ್ನು ನಿರ್ಬಂಧಿಸಿರುವರು.

ಬ್ರಿಟನಿಗೂ ಫ್ರಾನ್ಸಿಗೂ ಒಂದೊಂದು ಮಿಲ್ಲಿಯ ಡೊಲ್ಲರು (ಡೊಲ್ಲರು ೩ ರೂ. ೨ ಆಣೆ) ಅಮೇರಿಕದವರು ಸಾಲಕೊಟ್ಟರು.

ಲಂಡನಿನಲ್ಲಿ ೫ನೇ ತಾರೀಖಿಗೆ ಒಂದು ಭಯಂಕರವಾದ ಮಳೆಗಾಳಿಯು ಎದ್ದು ಜೋರಾಗಿ ಮಳೆಯು ೨ ತಾಸುಗಳ ವರೆಗೆ ಸುರಿಯಿತು. ರಸ್ತೆಗಳೆಲ್ಲ ಸರೋವರದಂತಾದವು. ಕೆಲವು ಮನೆಗಳಿಗೆ ಸಿಡಿಲು ಬಡೆಯಿತು.

ಹೊಲ್ಲೆಂಡಿಗೆ ಸೇರಿದ ಶೆಲ್ಡ್‌ನದಿಯ ಮುಖದಲ್ಲಿ ಜರ್ಮನ್ ಜಲಾಂತರ್ಗಾಮಿಗಳು ಓಡ್ಯಾಡಲಿಕ್ಕೆ ಬಿಡಬೇಕೆಂದು ಜರ್ಮನರು ಹೊಲ್ಲೆಂಡ ಸರಕಾರದವರೊಡನೆ ಅಪ್ಪಣೆಕೇಳುತ್ತಿದ್ದಾರಂತೆ.

ಅಮೇರಿಕದಲ್ಲಿ ಜರ್ಮನರ ಒಳಸಂಚಿಗೆ ಸೇರಿ ಪೈರನ್ನು ನಾಶಮಾಡಲಿಕ್ಕೂ ಗಣಿಗಳಲ್ಲಿ ಕೆಲಸಮಾಡುವ ಹತ್ಯಾರುಗಳನ್ನು ನಾಶಮಾಡಲಿಕ್ಕೂ ಪ್ರಯತ್ನಿಸಿದ ಕೂಟಗಳಲ್ಲಿ ಕೆಲವುಗಳ ಗುಟ್ಟು ಹೊರಕ್ಕೆಬಿದ್ದು ಈ ಕೂಟಗಳಿಗೆ ಕೆಲವು ಜರ್ಮನ (ಅಮೇರಿಕದಲ್ಲಿ ಹುಟ್ಟಿಬೆಳೆದಂಥ)ವರ ಕಂಪನಿಗಳು ದ್ರವ್ಯಾನುಕೂಲ ಕೊಡುತ್ತಿವೆ ಎಂದು ತಿಳಿದುಬಂದಿದೆ.

ಗ್ರೀಕ ಮತ್ತು ಇತರ ರಾಜ್ಯಗಳ ನೌಕಾಸೈನ್ಯಗಳು ಒಂದಕ್ಕೊಂದು ಸಹಕಾರಿಯಾಗುವಂತೆ ಕ್ರಮವನ್ನು ಏರ್ಪಡಿಸುವದಕ್ಕಾಗಿ ಬ್ರಿಟನಿನಿಂದ ಒಂದು ಕಮಿಟಿಯು ಹೊರಟು ಗ್ರೀಸದೇಶಕ್ಕೆ ಹೋಗುವದಾಗಿ ನಿಶ್ಚಯಿಸಿದೆ. ಗ್ರೀಸ್‌ರಾಜ್ಯದಲ್ಲಿ ಸೈನ್ಯದಲ್ಲಿ ದಾಖಲಾಗುವದಕ್ಕೆ ಪ್ರಜೆಗಳು ಬಹಳ ಉತ್ಸಾಹವನ್ನು ತೋರ್ಪಡಿಸುತ್ತಲಿದ್ದಾರೆ.

ಸಪ್ಟಂಬರ ತಿಂಗಳ ನಂತರ ಅಮೇರಿಕದ ಯುನೈಟೆಡ್ ಸ್ಟೇಟ್ಸಿನಿಂದ ಚಿನ್ನದ ನಾಣ್ಯ, ಲೋಹ ಮುಂತಾದ್ದು ಲೈಸನ್ಸ್ ಇಲ್ಲದೆ ಪರದೇಶಗಳಿಗೆ ಸಾಗಿಸಕೂಡದೆಂದು ಅಲ್ಲಿಯ ಪ್ರೆಸಿಡೆಂಟರು ಕಟ್ಟುಮಾಡಿರುವರು.

ಒಳದೇಶ ವರ್ತಮಾನ.

ಕಲ್ಕತ್ತ — ಬಂಗಾಳದ ನ್ಯಾಯವಿಧಾಯಕ ಸಭೆಯಲ್ಲಿ ೪ನೇ ತಾರೀಖಿಗೆ ಒನರೆಬಲ್ ಅಖಿಲ ಚಂದ್ರದತ್ತರು ಹಾಕಿದ ಪ್ರಶ್ನೆಗೆ ಉತ್ತರವಾಗಿ ಕಳೆದ ೫ ವರ್ಷಗಳಲ್ಲಿ ಕ್ರಿಮಿನಲ್ ಇನ್‌ವೆಸ್ಟಿಗೇಶನ್ ಇಲಾಖೆಯ ಬಗ್ಗೆ [illegible] ರೂಪಾಯಿ ಖರ್ಚಾಯಿತೆಂತಲೂ ಈ ವರ್ಷದ ಬಗ್ಗೆ ೭,೯೦,೦೦೦ ರೂಪಾಯಿ ವಿಂಗಡಿಸಿಟ್ಟಿದೆ ಎಂತಲೂ ಗೊತ್ತಾಯಿತು.

೧೯೧೬ನೇ ಇಸವಿಯಲ್ಲಿ ಆದ ೫೭ ದರೋಡೆಗಳ ಪೈಕಿ ೮ದರಲ್ಲಿ ಮಾತ್ರ ಆರೋಪಿಗಳಿಗೆ ಶಿಕ್ಷೆಯಾಯಿತೆಂತಲೂ ಅದೇ ಸಭೆಯಲ್ಲಿ ತಿಳಿದುಬಂತು.

ಇದಲ್ಲದೆ ಕಳೆದ ೩ ವರ್ಷಗಳಲ್ಲಿ ಪ್ರೆಸ್ ಎಕ್ಟ್ರಮೇರೆಗೆ ೭ ಛಾಪಖಾನೆ ಪತ್ರಿಕೆಕಾರರಿಗೆ ಎಚ್ಚರಿಸಲಾಯಿತೆಂತಲೂ, ಕಳೆದ ೫ ವರ್ಷಗಳಲ್ಲಿ ಬಂಗಾಳದ ಪೊಲೀಸ್ ಇಲಾಖೆಯ ಹಿಂದೀ ನವುಕರರಲ್ಲಿ ೪೯ ಮಂದಿಯ ಪ್ರಾಣದ ಮೇಲೆ ಅಪಾಯ ಬಂದಿತ್ತೆಂತಲೂ ಯುರೋಪಿಯನ್ ನವುಕರರ ಮೇಲೆ ಇಂಥ ಅಪಾಯಗಳು ಬರಲಿಲ್ಲವೆಂತಲೂ ವಾಡಿಕೆಯಾಗಿ ರಾಜ್ಯಕ್ರಾಂತಿಯ ತನಿಖೆಗಳ [illegible] ಮಾಡುವ ಕೆಲಸವನ್ನು ಹಿಂದಿ ನವುಕರರೇ ಮಾಡುತ್ತಿದ್ದರೆಂತಲೂ ತಿಳಿದುಬಂತು.

ಅದೇ ಸಭೆಯಲ್ಲಿ ಬುತ್ತದಲ್ಲಿ ಹಳ್ಳಿ ಪದಾರ್ಥಗಳನ್ನು ಮಿಶ್ರ[illegible] ಕಲ್ಪಿಸುವದಕ್ಕೆ ತಯಾರಾದ ಮಸೂದೆಯು ಮಂಜೂರಾಗಿ ಅಂಥ [illegible] ೨೦೦ ರೂಪಾಯಿಗಳಿಂದ ೧,೦೦೦ ವರೆಗೆ [illegible] ಆಗಿರುತ್ತದೆ.

ಅನುಕ್ರಮಣಿಕೆ.

ಅಗ್ರಲೇಖ:—	ಪುಟ.
೧ ಇದರಿಂದ ಯಾರಿಗೂ ಲಾಭವಿಲ್ಲ.	೪
ಸ್ಫುಟವಿಚಾರಗಳು:—	
೧. ೨—೩—೪ ವರಿಷ್ಠ ಕಾಯಿದೆಕೌನ್ಸಿಲಿನ ಪ್ರಸ್ತಾಪಗಳು	೪—೫
೪ ಹಿಂದೀ ಕೂಲಿಗಳ ಬಗ್ಗೆ ಹೊಸ ನಿಯಮಗಳು	,,
೫ ಮೈಸೂರ ದಿವಾನರ ಅನುಕರಣೀಯವಾದ ಜಿಲ್ಲಾ ಸಂದರ್ಶನ	,,
ಸ್ಥಳೀಕ—ಮಂಗಳೂರು	
ವರ್ತಮಾನ ಸಂಗ್ರಹಗಳು:—	
೧ ಯೂರೋಪದ ಮಹಾಯುದ್ಧ	೫
೨ ವಿದೇಶ ವೃತ್ತಾಂತ	,,
೩ ಸ್ವದೇಶ ವರ್ತಮಾನ	೫—೬
೪ ಬಾತಮಿಗಳು—ಬಂಟ್ವಾಳ, ಮುಲ್ಕಿ, ಕಾಪು, ಉಡುಪಿ	,,

ಸ್ವದೇಶಾಭಿಮಾನಿ.

ಶಕ ೧೮೩೯ ಭಾದ್ರಪದ ಬ. ೧೩ ಶುಕ್ರವಾರ.

ಇದರಿಂದ ಯಾರಿಗೂ ಲಾಭವಿಲ್ಲ.

ಸ್ವಪ್ರಗವರ್ನಮೆಂಟು ಅಥವಾ ಸ್ವರಾಜ್ಯದ ಚಳವಳವು ಹೋಮ್-ರೂಲ್ ರೂಪದಲ್ಲಿ ಪ್ರಾರಂಭವಾಗಿ ಅದು ಸ್ಥಿರಸ್ವರೂಪವಾಗಿದ್ದುದೆ ಮಾತ್ರ, ವಿಘ್ನಸಂತೋಷಿಗಳಾದ ಕೆಲವು ಎಂಗ್ಲೋ-ಇಂಡಿಯನರು ಆ ಚಳವಳವನ್ನು ನಿಲ್ಲಿಸುವುದಕ್ಕೆ ಒಳಗಿನಿಂದಲೂ ಹೊರಗಿನಿಂದಲೂ ಕೆಲವು ಸಮಯಭೇದ, ಇನ್ನು ಕೆಲವು ಸಮಯ ಭಯವನ್ನು ಹುಟ್ಟಿಸಿ ಹೇಗೆ ವಿಶ್ವಪ್ರಯತ್ನವನ್ನು ನಡಿಸುತ್ತಿದ್ದಾರೆಂಬುದು ಆಗನಕ ಸರ್ವತೋಮುಖವಾದ ವಿಷಯವೆ ಸರಿ. ಮದ್ರಾಸಿನಿಂದ ಬರುತ್ತಿರುವ ಪ್ರಾತ್ಯಹಿಕ ಪತ್ರಿಕೆಗಳನ್ನು ಮೇಲಿಂದ ಮೇಲೆ ನೋಡುವವರಿಗಾದರೂ ನಮ್ಮ ಮೇಲಿನ ವಿಧಾನದ ಸತ್ಯತೆಯು ಮನಸ್ಸಿನಲ್ಲಿ ಖಚಿತವಾಗದೆ ಇರದು. ಹೋಮ್-ರೂಲಿನ ಎದುರು ಈ ಮಹಾತ್ಮರು ಯಾರ್ಯಾರನ್ನು ಹೇಗೆ ಹೇಗೆ ಎಬ್ಬಿಸಿ ಹಾಕುತ್ತಾರೆ ಮತ್ತು ಆ ಪರಪ್ರತ್ಯಯನೇಯಬುದ್ಧಿಗಳು ಸ್ವರಾಷ್ಟ್ರ ಹಿತವನ್ನು ತಿಳಕೊಳ್ಳದೆ ಮುಂದೆ ಸ್ವಂತ ಆಗ್ರಹದಿಂದಲೆ ಹೇಗೆ ಸೂತ್ರಗೊಂಬೆಗಳಂತೆ ಕುಣಿಯುತ್ತಿರುತ್ತಾರೆ ಎಂಬುದನ್ನು ನಿರೀಕ್ಷಿಸಿ, ಈ ಎಂಗ್ಲೋ-ಇಂಡಿಯನರ ಬುದ್ಧಿಕೌಶಲ್ಯದಿಂದ ಅಂತಃಕರಣವು ಕ್ಷಣೈಕ ಆಶ್ಚರ್ಯಚಕಿತವಾಗಿ ಹೋದರೂ ಅವರ ಕಪಟಜಾಲಕ್ಕೆ ಒಳಗಾಗುವವರ ವಿಷಯದಲ್ಲಿ ತುಂಬಾ ವಿಷಾದಗ್ರಸ್ತವಾಗದೆ ಇರದು. ಹಿಂದುಸ್ಥಾನದೇಶದ ನಿವಾಸಿಗಳಲ್ಲಿ ಧರ್ಮ, ಸಂಸ್ಕೃತಿ, ಸಮಾಜರಚನೆ ಮತ್ತು ಆಚಾರ ಈ ಮುಖ್ಯ ಸಂಗತಿಗಳಲ್ಲಿ ಒಬ್ಬರಿಗೊಬ್ಬರು ತೀರಾ ಅಸಮಾನವಾದವು—ಹಿಂದು ಮತ್ತು ಮುಸಲ್ಮಾನ ಈ ಸಮಾಜಗಳು. ಈ ಎರಡೂ ಸಮಾಜಗಳು ಈಚೆಗೆ ತಮ್ಮ ಆನುವಂಶಿಕ ಭೇದಗಳನ್ನು ಮೂಲೆಗೊತ್ತಿ ಪಾಶ್ಚಾತ್ಯದೇಶದ ಮೂಲಕ ಉಂಟಾದ ಸಹೋದರಭಾವದಿಂದ ಒಟ್ಟಾಗಿ ಹಿಂದೀ ಹೋಮ್-ರೂಲಿನ ರಥವನ್ನು ಎಳೆದುಕೊಂಡು ಹೋಗಲಾರಂಭಿಸಿದರು. ದೇಶಭಕ್ತರಾದ ಹಿಂದುಮುಸಲ್ಮಾನರು ಈ ಹೋಮ್-ರೂಲಿನ ತೇರನ್ನು ರಾಜಭಕ್ತಿಯ ಬೀದಿಯಲ್ಲಿ ಎಳೆದುಕೊಂಡು ಹೋಗುವುದು ಎಂಗ್ಲೋ ಇಂಡಿಯನರಿಗೆ ಸಹಿಸಲಿಲ್ಲ; ಅವರು ಭೇದೋಪಾಯದ ಸೂಟೆಯನ್ನು ಹೊತ್ತಿಸಿ ಅದರ ಬೆಳಕಿನಲ್ಲಿ ಅನೇಕರನ್ನು ಕೂಡಿಸಿದರು. ಬೇರೆ ಪ್ರಾಂತ್ಯಗಳ ಸಂಗತಿಯು ಒಟ್ಟಿಗಿರಲಿ. ನಮ್ಮ ಮದ್ರಾಸಿನ ದೈನಿಕ ಪತ್ರಗಳನ್ನು ನೋಡಿದರೆ, ಅವುಗಳಲ್ಲಿ ಹೋಮ್-ರೂಲ್ ಇದು ಬರೆ ಬ್ರಾಹ್ಮಣರ ಹಿತಕ್ಕಾಗಿ ಹೊರಟದ್ದು, ಎಂದು ಕೆಲವು ಬ್ರಾಹ್ಮಣೇತರರು ಸಾರುತ್ತಿದ್ದಾರೆ, ಮತ್ತು ಪಂಚಮರ ಸ್ವರವೆಂತ ಕೆಲವರು ಇವಕ್ಕೆ ಪಂಚಮಸ್ವರವನ್ನು ಕೂಡಿಸಿ ಹಾಡುತ್ತಿದ್ದಾರೆ, ಎಂಗ್ಲೋ-ಇಂಡಿಯನರು ಈ ಗಾನಕ್ಕೆ ಶ್ರುತಿಕೊಡುತ್ತಲಿದ್ದಾರೆ.

ಎಂಗ್ಲೋ-ಇಂಡಿಯನರ ಈ ಇಂದ್ರಜಾಲದ ಆಟದಲ್ಲಿ ಅನೇಕ ಚಮತ್ಕಾರಗಳು ದೃಷ್ಟಿಗೆ ಬೀಳುವವು. ಸಾಧುಸ್ವಭಾವದವನಿಗೆ ಒಂದು ವ್ಯಸನವನ್ನು ಹಚ್ಚಿಸುವುದಾದರೆ ಮೊದಲು ಮೊದಲು ಒಬ್ಬ ಪ್ರೇರಕನು ಅವಶ್ಯವಿರುವನು. ಆ ವ್ಯಸನದ ರುಚಿಯು ಹತ್ತುತ್ತಲೆ ಅಥವಾ ಕೆಲ ಸಮಯ ಅದರ ಅಭ್ಯಾಸವು ಆಗುತ್ತಲೆ ಮುಂದೆ ಅವನಿಗೆ ಗುರುವಿನ ಸಹಾಯ್ಯವು ಬೇಕಾಗಿರುವುದಿಲ್ಲ. ಅವನೆ ಗುರುವಿಗೂ ಗುರುವಾಗುವನು. ಇದೆ ನ್ಯಾಯವು ಮೇಲಿನ ಚಮತ್ಕಾರಗಳಲ್ಲಿ ಕಂಡುಬರುವುದು. ಹೋಮ್-ರೂಲಿನ ಚಳವಳದ ದಾರಿಯಲ್ಲಿ ಗುರುಗಳಾದ ಸ್ವತಃ ಎಂಗ್ಲೋ-ಇಂಡಿಯನರಿಂದ ಕೂಡಪ್ಪಷ್ಟು ವಿಘ್ನಗಳನ್ನು ಬ್ರಾಹ್ಮಣೇತರರೂ ಪಂಚಮರೂ ತರುತ್ತಿದ್ದಾರೆ. ವಿಘ್ನವನ್ನು ತಂದು ಕಾರ್ಯವನ್ನು ವಿಕ್ಷೇಪಿಸುವ ವ್ಯಸನವು ಗುರೂಪದೇಶದಿಂದ ಒಮ್ಮೆ ಗೊತ್ತಾದ ಕೂಡಲೆ ಮತ್ತೆ ಗುರುಗಳ ಉಪದೇಶವೂ ಬೇಡ, ಪ್ರೇರಣೆಯೂ ಅಗತ್ಯವಿಲ್ಲ, ದೂರದ ನೆರಳೂ ಅವಶ್ಯವಿಲ್ಲ. ಶಿಷ್ಯರೆ ಸ್ವತಃ ಪರಾತ್ಪರ ಗುರುಗಳಾಗಿ ಈ ಪುಣ್ಯಕರ್ಮವನ್ನು ನಡಿಸುತ್ತಿದ್ದಾರೆ. ಪ್ರತಿ ದಿವಸದ ಪತ್ರಗಳಲ್ಲಿ ಬ್ರಾಹ್ಮಣೇತರರೂ ಪಂಚಮರೂ ಯಾವ ಯಾವ ವಿಧದಿಂದ ಹೋಮ್-ರೂಲನ್ನೂ ಬ್ರಾಹ್ಮಣರನ್ನೂ ದೂಷಿಸಿ ಪ್ರಕಟಿಸುವ ಪತ್ರಗಳೆಷ್ಟು! ಹೋಮ್-ರೂಲೆಂಬುದು ಬರೆ ಬ್ರಾಹ್ಮಣವರ್ಗಕ್ಕೆನೆ ಧಾರಾದತ್ತವಾಗಿದೆಂದು ವೃಥಾ ನೆನೆಸಿ ಅಲ್ಲಲ್ಲಿ ಹೋಮ್‌ರೂಲನ್ನೂ 'ಬ್ರಾಹ್ಮಣರನ್ನೂ ನಿಷೇಧಿಸುವ ಕೂಟಗಳ ಪ್ರಸಿದ್ಧವಾಗುವ ವಂದಿಗಳೆಷ್ಟು! ಧ್ರುವಕುಮಾರನ ಮುಂದೆ ಭಗವಂತನು ಪ್ರತ್ಯಕ್ಷನಾದಲ್ಲಿ ಅಂತರ್ಬಾಹ್ಯ ಭಗವದಾಕಾರದಲ್ಲಿ ಮುಳುಗಿಹೋದ ಧ್ರುವನಿಂದ ಒಂದು ಮಾತನ್ನು ಕೂಡ ಆಡಲಾಗಲಿಲ್ಲ. ಆದರೆ ಭಗವಂತನು ತನ್ನ ಶಂಖದಿಂದ ಅವನ ಕಂಠವನ್ನು ಸ್ಪರ್ಶಿಸಿದ ಕೂಡಲೆ ಆ ಚಿಕ್ಕ ಬಾಲಕ ಧ್ರುವನ ಬಾಯಿಯಿಂದ ಬಂದ ವಾಣಿಯು ವೇದತುಲ್ಯವಾಗಿ ನಿಂತಿದೆ. ಇದೆ ರೀತಿಯಿಂದ ಮೂಕಾವಸ್ಥೆಯಲ್ಲಿದ್ದ ಬ್ರಾಹ್ಮಣೇತರ ಸಮಾಜವು ಎಂಗ್ಲೋ-ಇಂಡಿಯನರ ಶಂಖಧ್ವನಿಯಿಂದ ಕಣ್ದೆರೆದು ಬ್ರಾಹ್ಮಣ ದೂಷಣದ ಪ್ರವಚನವನ್ನು ಮಾಡಹತ್ತಿದೆ. ಪಂಚಮರಂತೂ ಬ್ರಾಹ್ಮಣರನ್ನು ಶಪಿಸುವ ಭಾಷ್ಯಗಳನ್ನೆ ರಚಿಸುತ್ತಿದ್ದಾರೆ. ಬ್ರಾಹ್ಮಣೇತರರಲ್ಲಿ ಕೆಲವರು ತಾವೆ ಆ ಸಮಾಜದ ಸರ್ವ ಪ್ರತಿನಿಧಿಗಳೆಂದು ತಿಳಿದು ವಿಲಾಯತಿಯಲ್ಲಿ ಅಧಿಕಾರಿಗಳಿಗೆ ಕಂಟಿಮೂಲಕದಿಂದ ಆಧುನಿಕ ಚಳವಳದ ವಿರುದ್ಧವಾಗಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ವರ್ತಮಾನ ಪತ್ರಿಕೆಗಳಲ್ಲಿ ಬಹು ನರಸವಾಗಿ ಬರೆಯುವ ಪ್ರಜ್ಞೆಯನ್ನು ಪಂಚಮರಲ್ಲನೇಕರು ಪಡೆಕೊಂಡಿದ್ದರೂ ಇಷ್ಟರ ವರೆಗೆ ಅವರಲ್ಲಿ ಒಬ್ಬನೂ ಕೂಡ ಮಿ. ಮೊಂಟೆಗ್ಯೂನವರಿಗೆ ಮೇಲಿನಂಥ ಕೇಬಲ್‌ಗ್ರಾಮನ್ನು ಕಳುಹಿಸಿದ್ದು ಪ್ರಕಟವಾಗಲಿಲ್ಲ. ಇದೆ ನಮಗೆ ಆಶ್ಚರ್ಯವಾಗುತ್ತದೆ. ಬ್ರಾಹ್ಮಣರ ವಿರುದ್ಧ ಕಾಗದಪತ್ರಕ್ಕೆ ನಿಂತ ಬ್ರಾಹ್ಮಣೇತರ ಮತ್ತು ಪಂಚಮರೊಳಗೆ ಇದೊಂದೆ ನ್ಯೂನತೆಯು ಪಂಚಮರಲ್ಲಿ ಕಂಡುಬರುತ್ತದೆ. ಇದೂ ಒಂದುವೇಳೆ ಬೇಗನೆ ತುಂಬಿಬರಬಹುದು. ಆದರೆ ಇಲ್ಲಿ ಒಂದು ಪ್ರಶ್ನವು ಬರುವುದು. ಬ್ರಾಹ್ಮಣೇತರರಾಗಲಿ ಪಂಚಮರೆನ್ನಿಸಿಕೊಳ್ಳುವವರಾಗಲಿ ಈ ರೀತಿಯಿಂದ ಭೇದವನ್ನು ಮಾತ್ರವಲ್ಲ ವೈರವನ್ನು ಬೆಳಸುವುದು ಯಾಕೆ? ಹೋಮ್-ರೂಲ್ ವಾದಿಗಳು ಪ್ರಾತಿನಿಧಿಕ ತತ್ವದ ಆಧಾರದಿಂದ ಹೋಮ್-ರೂಲನ್ನು ಕೇಳುವುದಾದ ಮೇಲೆ ಬ್ರಾಹ್ಮಣೇತರ ಮುಂತಾದವರಿಗೆ ಈ ಸಂದರ್ಭದಲ್ಲಿ ಪ್ರಾಮಾಣಿಕತನದಿಂದ ಅಂಜಬೇಕಾದ ಕಾರಣವೇನು? ಹೋಮ್-ರೂಲಿನ ಚಳವಳವು ಸರಕಾರದ ಅನುಗ್ರಹದಿಂದ ಒಂದುವೇಳೆ ಯಶಸ್ವಿಯಾದರೆ ಆಗ ಬರತಕ್ಕ ಹಿಂದಿ ಪಾರ್ಲಿಮೆಂಟಿನಲ್ಲಿ ಬ್ರಾಹ್ಮಣರ ಕಡೆಯಿಂದ ಪ್ರತಿನಿಧಿಗಳು ಬರುವಂತೆ ಬ್ರಾಹ್ಮಣೇತರರ ಕಡೆಯಿಂದಲೂ ಪಂಚಮರ ಕಡೆಯಿಂದಲೂ ಈ ಪಂಚಮರಿಗಿಂತಲೂ ಇನ್ನೂ ಯಾರಾದರೂ ಅಧಮರಿದ್ದರೆ ಆ ಮಟ್ಟರ ಕಡೆಯಿಂದಲೂ ಪ್ರತಿನಿಧಿಗಳು ಬರುವರು. ಅರ್ಥಾತ್ ವಾದಕ್ಕೆ ಸ್ಥಲವೆಲ್ಲಿ? ವಿಘ್ನಕ್ಕೆ ಅವಕಾಶವೆಲ್ಲಿ? ಬ್ರಾಹ್ಮಣರು ಕೇವಲ ಸ್ವಾರ್ಥ ದೃಷ್ಟಿಯಿಂದಲೆ ಹೋಮ್-ರೂಲಿನದಾಗಲಿ ರಾಷ್ಟ್ರೀಯ ಸಭೆಯದಾಗಲಿ ಚಳವಳವನ್ನು ಮಾಡುತ್ತಿದ್ದಾರೆ ಎಂದು ಆರೋಪಿಸುವುದಾದರೆ ಬ್ರಾಹ್ಮಣರು ವ್ಯಾಪಾರದ ಪ್ರಶ್ನವನ್ನು ಕೃಷಿಯ ವಿಷಯವನ್ನೂ ಕೈಕೊಂಡು ಅವುಗಳ ಅಭಿವೃದ್ಧಿಗಾಗಿ ಈಗ ಎಷ್ಟೋ ವರ್ಷಗಳಿಂದ ಏನು ಮೋಡಿಮಾಡುತ್ತಿದ್ದಾರೋ ಅದರ ಅರ್ಥವೇನು? ಮಾತ್ರವಲ್ಲ. ಬ್ರಾಹ್ಮಣರು ನಾಳೆ ಹೋಮ್-ರೂಲಿನ ಕಾಲದಲ್ಲಿ ವ್ಯಾಪಾರ ಮುಂತಾದುದನ್ನೆಲ್ಲ ತಾವೆ ಕೈವಶಮಾಡಿಕೊಳ್ಳುವರೊ? ಅಬ್ರಾಹ್ಮಣರ ಮಾನದಿಂದ ಬ್ರಾಹ್ಮಣರ ಸಂಖ್ಯೆಯು ಅಲ್ಪವಿರುವುದರಿಂದ ಆ ಅಲ್ಪ ಸಂಖ್ಯಾಕ ವರ್ಗದ ಪ್ರಾಬಲ್ಯವು ಅಧಿಕವಾಗುವುದೆಂದು ನೆನೆಸುವುದು ವಸ್ತುಸ್ಥಿತಿಗೆ ವಿರುದ್ಧವಾಗಿದೆ. ವಿವಿಧ ಸಂಸ್ಕೃತಿ, ವಿಭಿನ್ನ ಮಾನವವಂಶ ಮುಂತಾದ ಅಡಚಣೆಗಳುಳ್ಳ ಅನ್ಯ ಖಂಡಗಳಲ್ಲಿ ಪ್ರಾತಿನಿಧಿಕ ಪದ್ಧತಿಯ ಶಾಸನಕ್ರಮವು ನಿರಾಬಾಧವಾಗಿ ನಡೆಯುತ್ತಿರುವಲ್ಲಿ ಇಲ್ಲಿ ಮಾತ್ರ ಭಯವನ್ನು ಕಂಡೊಡ್ಡುವುದು ಹೇಗೆ ಸಮಂಜಸವಾದೀತು? ಹೀಗಿರುವಾಗ ಅಬ್ರಾಹ್ಮಣರೂ, ಪಂಚಮರೂ ಬ್ರಾಹ್ಮಣರನ್ನು ದೂಷಿಸುವುದರಲ್ಲಿ, ದೇಶದ ಐಕ್ಯವನ್ನು ಒಡೆಯುವುದರಲ್ಲಿ ಯಾಕೆ ತಮ್ಮ ಬುದ್ಧಿಸಾಮರ್ಥ್ಯವನ್ನು ವಿಚ್ಛಿನ್ನ ಮಾಡುವರು? ಬ್ರಾಹ್ಮಣರಲ್ಲಿ ದೋಷಗಳಿರಬಹುದು, ಮಾತ್ರವಲ್ಲ ಅನೇಕ ದೋಷಗಳಿವೆ. ಆದರೆ ಆ ದೋಷಗಳ ಬಗ್ಗೆ ಬ್ರಾಹ್ಮಣರಲ್ಲಿ ಆಗತಕ್ಕ ಮುದುವೆಮುಂಗಲುಗಳಲ್ಲಿ ಒಂದುವೇಳೆ ವಿಘ್ನಗಳನ್ನು ಕಂಡರೆ ಅದು ಔಚಿತ್ಯದೃಷ್ಟಿಯಿಂದ ಕ್ಷಮ್ಯವಾದೀತು. ಪರಂತು ಬ್ರಾಹ್ಮಣರ ಆ ದೋಷಗಳ ಬಗ್ಗೆ ಹೋಮ್-ರೂಲಿಗೆ ವಿಘ್ನವು ಯಾಕೆ? ಹಿಂದೀ ಸ್ವರಾಜ್ಯಕ್ಕೆ ಅಬ್ರಾಹ್ಮಣರೆ! ಮತ್ತು ಪಂಚಮರೆ! ನೀವು ಸಮಾನ ಪಾಲುಗಾರರಿರುವಾಗ—ಒಂದುವೇಳೆ ಅದನ್ನು ರಾಜ್ಯಕರ್ತರಿಂದ ಕೇಳಿಕೊಳ್ಳುವ ಧೈರ್ಯವು ನಿಮ್ಮಲ್ಲಿ ಇಲ್ಲದೆ ಇದ್ದೀತು, ಬರೆ ಅಷ್ಟರಿಂದ ಹೋಮ್-ರೂಲ್ ಬೇಡವೆಂದು ಹೇಳುವುದೊ? ಇದ ಜಾಣತನವೊ? ಆದರೆ ನೀವು ಒಂದು ಸಂಗತಿಯನ್ನು ಖಂಡಿತವಾಗಿ ತಿಳಿಯಬೇಕು. ಹೋಮ್-ರೂಲ್ ಕೊಡುವುದು ಹಿಂದುಸ್ಥಾನಕ್ಕೆ, ಹೊರತು ಬ್ರಾಹ್ಮಣರಿಗಲ್ಲ.

ಆದುದರಿಂದ ಹೋಮ್‌ರೂಲಿನ ಪ್ರಶ್ನವನ್ನು ಜಾತಿಯ ದೃಷ್ಟಿಯಿಂದ ವಿಮರ್ಶಿಸತಕ್ಕುದಲ್ಲ. ಹೋಮ್‌ರೂಲು ಬ್ರಾಹ್ಮಣರದು ಎಂದು ವಾದಿಸುವದು ಬಹು ಸುಲಭ ಆದರೆ ಬ್ರಾಹ್ಮಣರಿದ್ದವರೆಲ್ಲರು ಹೋಮ್‌ರೂಲನ್ನು ವಾದಿಸುವರೊ? ಬ್ರಾಹ್ಮಣರಲ್ಲಿ ಅನೇಕರು ಹೋಮ್‌ರೂಲಿಗೆ ಅನುಕೂಲರಲ್ಲದವರಿದ್ದಾರೆ. ಹಾಗೆಯೆ ಬ್ರಾಹ್ಮಣೇತರರೆಲ್ಲರು ಹೋಮ್‌ರೂಲಿಗೆ ಪ್ರತಿಕೂಲರೊ? ಇಲ್ಲ. ಬ್ರಾಹ್ಮಣೇತರರಲ್ಲಿ ಅನೇಕರು ಮಾತ್ರವಲ್ಲ ಸಾಮಾನ್ಯ ೧೦೦ರಲ್ಲಿ ೭೫ ಸುಶಿಕ್ಷಿತರು ಹೋಮ್‌ರೂಲು ವಾದಿಗಳೆ. ಪಂಚಮರಲ್ಲಿ ಕೂಡ ಅನೇಕರು ಹೋಮ್‌ರೂಲನ್ನಾಗಲಿ ಬ್ರಾಹ್ಮಣರನ್ನಾಗಲಿ ಅಪೇಕ್ಷಿಸುವವರಿದ್ದಾರೆ. ಎಂದ ಮೇಲೆ ಹೋಮ್‌ರೂಲಿನ ಪ್ರಶ್ನವನ್ನು ಜಾತಿಮತಗಳ ದೃಷ್ಟಿಯಿಂದ ಬಿಡಿಸುವುದು ಹೇಗೆ? ಹೋಮ್‌ರೂಲಿನ ವಿಷಯದಲ್ಲಿ ಮಾತ್ರವಲ್ಲ, ಸಾಮಾನ್ಯ ರಾಜಕೀಯ ಹಕ್ಕಿನ ವಿಷಯದಲ್ಲಿ ಕೂಡ ಜಾತಿಮತಗಳ ದೃಷ್ಟಿಯು ಅಯುಕ್ತವಾದುದು. ಮತ್ತು ಆದುದರಿಂದಲೆ ಮೇಲೆ ಹೇಳಿದಂತೆ ಕೇವಲ ವಿಸದೃಶವಾದ ಹಿಂದು ಮುಸಲ್ಮಾನ ಸಮಾಜಗಳು ಏಕವಾಕ್ಯದಿಂದ ರಾಜಕೀಯ ಚಳವಳದ ಕ್ಷೇತ್ರದಲ್ಲಿ ಕೆಲಸಮಾಡುತ್ತಿವೆ. ಇಷ್ಟು ವಿಸದೃಶವಾದ ಸಮಾಜಗಳು ಒಟ್ಟಿಗೆ ಸೇರಿರುವಾಗ ಒಂದೆ ಹಿಂದು ಸಮಾಜದ ಅವಯವಗಳಾದ ಅಬ್ರಾಹ್ಮಣ ಮುಂತಾದವರು ಭೇದರಚನವನ್ನು ಬೆಳಸುವದರಲ್ಲಿ ಪುಣ್ಯವುಂಟೆ, ಅಥವಾ ಲಾಭವುಂಟೆ? ಜಾತಿಭೇದದ ತತ್ವವನ್ನು ಸನಾತನಧರ್ಮಾನುಯಾಯಿಗಳು ಒಂದುವೇಳೆ ರೂಢಿಯಲ್ಲಿ ತಂದಿದ್ದರೂ ಜಾತಿವೈರವನ್ನು ಬೆಳಸಿರಲಿಲ್ಲ; ಅದನ್ನು ಕೆಲವು ಬ್ರಾಹ್ಮಣೇತರೂ ಪಂಚಮರೂ ಈಚೀಚೆಗೆ ವೃದ್ಧಿಗೊಳಿಸುತ್ತಿದ್ದಾರೆ ಇದು ಮಾತ್ರ ಶೋಚನೀಯವು. ಬ್ರಾಹ್ಮಣವರ್ಗದ ಮೇಲಿರುವ ಹಗೆಯನ್ನು ಸಾಧಿಸುವುದಕ್ಕಾಗಿ ಬ್ರಾಹ್ಮಣರನ್ನು ಬೇಕಷ್ಟು ಬೈಯಬಹುದು. ಆದರೆ ದೇಶದ ಪ್ರಗತಿಯನ್ನು ಕುಂಠಿಸುವ ಕೃತ್ಯವನ್ನು ಯಾಕೆ ಕೈಕೊಳ್ಳಬೇಕು? ಇದರಿಂದ ಯಾರಿಗೂ ಲಾಭವಿಲ್ಲ. ಈ ಸಂಗತಿಯು ಈಗ ಅನೇಕ ಬ್ರಾಹ್ಮಣೇತರ ಬಂಧುಗಳಿಗೆ ಗೊತ್ತಾಗಿ ಅವರಲ್ಲಿಯ ಅನೇಕ ಸುಶಿಕ್ಷಿತ ಮುಖಂಡರು ನೊನ್ನೆ ಮದ್ರಾಸಿನ 'ಹಿಂದು' ಮೊದಲಾದ ದೈನಿಕ ಪತ್ರಿಕೆಗಳಲ್ಲಿ ತಂತಮ್ಮ ಹೆಸರುಗಳನ್ನು ಕೊಟ್ಟು ಪ್ರಕಟಿಸಿದ್ದಾರೇನೆಂದರೆ, ರಾಷ್ಟ್ರೀಯ ಸಭೆ, ಮೊಸ್‌ಲೆಮ್‌ಲೀಗ ಈ ಸಂಸ್ಥೆಗಳು ನಿರ್ಣಯಿಸಿದಂಥ ಸ್ವರಾಜ್ಯದ ಸುಧಾರಣೆಯು ಯುದ್ಧಾಂತ್ಯದಲ್ಲಿ ಹಿಂದುಸ್ಥಾನದ ಸೆರಗಿನಲ್ಲಿ ಬೀಳುವಂತೆ ಮಿ. ಮೊಂಟೆಗ್ಯೂಗಳ ಆಗಮನ ಕಾಲದಲ್ಲಿ ಅವರ ಮುಂದೆ ತಮ್ಮ ಏಕಮತ್ಯದ ಅಭಿಪ್ರಾಯವನ್ನು ಇಡಬೇಕು. ಇದು ಅನುಕರಣೀಯ ಮಾತ್ರವಲ್ಲ ಸಂತೋಷಕರವೂ ಆಗಿದೆ. ಈ ರೀತಿಯಿಂದಲೆ ನಮ್ಮಲ್ಲಿ ಏಕಮತ್ಯವನ್ನು ದೃಢಪಡಿಸಿಕೊಳ್ಳುವುದರಲ್ಲಿ ಹಿಂದುಸ್ಥಾನದ ಹಿತವುಂಟಲ್ಲದೆ ಒಡಕು ತಂದುಕೊಳ್ಳುವುದರಲ್ಲಿ ಯಾರಿಗೂ ಲಾಭವಿಲ್ಲ. ಒಂದು ಪ್ರಸಂಗದಲ್ಲಿ ಯುಧಿಷ್ಠಿರನು ತನ್ನ ತಮ್ಮಂದಿರಿಗೆ "ವಯಂ ಪಂಚೋತ್ತರಂ ಶತಮ್" ಎಂದರೆ ನಾವು ಐವರು, ಅವರು ನೂರು ಕೂಡಿ ನೂರೈವರು ಎಂದು ಉಪದೇಶಿಸಿದ್ದಂತೆ ಬ್ರಾಹ್ಮಣರು, ಬ್ರಾಹ್ಮಣೇತರರು, ಚಾತುರ್ವರ್ಣಿಕರು, ಪಂಚಮರು, ಹಿಂದುಗಳು, ಮುಸಲ್ಮಾನರು ಮತ್ತು ದೈಶೀಯ ಕ್ರೈಸ್ತರು ಇವರೆಲ್ಲರು ಒಟ್ಟಿಗೆ ಸೇರಿ ರಾಷ್ಟ್ರೀಯ ಸಭೆ ಮೊಸ್‌ಲೆಮ್ ಲೀಗ ಮತ್ತು ೧೯ ಜನ ಸಭಾಸದರ ಸುಧಾರಣಾ ಮಸೂದೆಯ ರಥವನ್ನು ಏಕವಾಕ್ಯದಿಂದ ಎಳೆದುಕೊಂಡು ಮುಂದಕ್ಕೆ ಹೋಗುವುದರಲ್ಲೆ ನಮ್ಮ ಭವಿಷ್ಯತ್ಕಾಲದ ಉತ್ಕರ್ಷವು ಉಂಟಲ್ಲದೆ ತಂತಮ್ಮ ವ್ಯಕ್ತಿಪರವಾದ ಹಟವನ್ನು ಸಾಧಿಸಲು ಇಳಿದು ಒಡಕು ತರುವುದರಿಂದ ಯಾರಿಗೂ ಲಾಭವಿಲ್ಲ.—ಮಾತ್ರವಲ್ಲ, ಅದರಿಂದ ದೇಶದ ದುರ್ದೈವವು ಬಲವತ್ತರವಾಗಿ ನಿಂತುಕೊಳ್ಳುವುದು ಇದನ್ನು ಯಾರೂ ಮರೆಯಕೂಡದು. ಬ್ರಾಹ್ಮಣವರ್ಗದಲ್ಲಿ ಸಂಪ್ರದಾಯವಾದಿಗಳಲ್ಲಿ, ಸನಾತನಧರ್ಮಾನುಯಾಯಿಗಳಲ್ಲಿ ದುರಾಗ್ರಹಿಗಳು, ಸಂಕುಚಿತ ದೃಷ್ಟಿಯವರು ಮತ್ತು ಕೇವಲ ತಮ್ಮ ನೆರಳನ್ನೆ ನೋಡಿ ಸಂತೋಷಪಡುವವರು ಇದ್ದಂತೆಯೆ ಸಮಾಜೋದ್ಧಾರಕರಲ್ಲೂ, ಬ್ರಾಹ್ಮಣೇತರರಲ್ಲೂ, ಪಂಚಮರ ಬಂಧುಗಳಲ್ಲೂ ಇದ್ದಾರೆ. ಇದು ಆಶ್ಚರ್ಯದ ಸಂಗತಿಯಲ್ಲ. ಮಾನವಸ್ವಭಾವವು ಸರ್ವತ್ರ ಒಂದೆ ತರದ್ದು. ಆದರೆ ಇಂಥವರ ಗೊಡವೆಗೆ ಈ ಹೊತ್ತು ಯಾರೂ ಇಳಿಯಬೇಕಾದ್ದು ಅಗತ್ಯವಿಲ್ಲ. ಭಾವನೆಯಲ್ಲಿ ಸಮರಸವಾದವರೆಲ್ಲರು ಏಕತ್ರ ಸೇರಿ ಮಾತೃಭೂಮಿಯ ಉದ್ಧಾರವನ್ನು ಮಾಡಬೇಕು. ಇದೆ ನಮ್ಮ ಕೋರಿಕೆ.

ಸ್ಫುಟವಿಚಾರಗಳು.

೧. ಸಿಮ್ಲಾದಲ್ಲಿ ವರಿಷ್ಠ ಕಾಯಿದೆಕೌನ್ಸಿಲಿನ ಸರತ್ಕಾಲದ ಅಧಿವೇಶನವು ಈ ತಿಂಗಳ ತಾ. ೫ರಲ್ಲಿ ಸೇರಿ ಪ್ರಸಕ್ತ ಮೊನ್ನೆ ಬುಧವಾರದಿಂದ ಪ್ರಾರಂಭವಾಗಿದೆ. ಈ ಅಧಿವೇಶನವು ಅನೇಕ ದೃಷ್ಟಿಯಿಂದ ಮಹತ್ವದ್ದಾಗಿತ್ತು. ಕೆಲವು ಪ್ರಾಂತಿಕ ಅಧಿಕಾರಿಗಳು ಐದಾರು ತಿಂಗಳಿಂದ ಲೋಕಪಕ್ಷದ ಚಳವಳವನ್ನು ಕಡಿದುಹಾಕಲು ಉಪಕ್ರಮಿಸಿದ್ದರಿಂದ ದೇಶದೊಳಗಿನ ಲೋಕಮತದಲ್ಲಿ ಅಸ್ವಾಸ್ಥ್ಯವುಂಟಾಗಿತ್ತು. ವೈಸರಾಯ ಪ್ರಭುಗಳು ಆ ಅವಧಿಯಲ್ಲಿ ಮೌನವನ್ನೆ ತಾಳಿ ಕುಳಿತದ್ದರಿಂದ ವೈಸರಾಯರ ಈ ಮೌನವು ತಮ್ಮ ಒತ್ತಾಯದ ಧೋರಣಕ್ಕೆ ಅಪ್ರತ್ಯಕ್ಷವಾದ ಸಮ್ಮತಿಯೆಂದೆ ಪ್ರಾಂತಿಕ ಅಧಿಕಾರಿಗಳು ನೆನಸಿಕೊಳ್ಳುತ್ತಿದ್ದುದಾದರೆ ಅದು ತೀರಾ ತಪ್ಪೆಂದು ಹೇಳಿದಸಲು ಸಾಧ್ಯವಿದ್ದಿಲ್ಲ. ಆದರೆ ಮೊನ್ನೆಯ ಕೌನ್ಸಿಲಿನಲ್ಲಿ ಯಾವ ಪರದೆಯನ್ನೂ ಇಡದೆ ಚೆಮ್ಸಫೋರ್ಡ ಧೊರೆಗಳು ನಿಷ್ಕಲಂಕಮನಸ್ಸಿನಿಂದ ದೇಶದೊಳಗಿನ ಕೆಲವು ಮಹತ್ವದ ರಾಜಕೀಯ ಪ್ರಶ್ನಗಳನ್ನು ಕುರಿತು ಯಾವ ಸ್ಪಷ್ಟೀಕರಣಗಳನ್ನು ಮಾಡಿದರೊ ಅದರ ಮೇಲಿಂದ ಅವರ ಮೌನದ ಸಮ್ಮತಿಯು ಜನರ ಚಳವಳದ ಕಡೆಗೆಯೆ ಇತ್ತು ಎಂದು ಒಬ್ಬ ಔಚಿತ್ಯವಾದಿಯು ಪ್ರತಿಪಾದಿಸಿದರೆ ಅದು ಎಂದೂ ಅಸಮಂಜಸವಾಗಲಾರದು. ವೈಸರಾಯ ಪ್ರಭುಗಳ ಈಗಿನ ಆಧರಣೀಯಮತವು ಕ್ಷುಬ್ಧಲೋಕಮತದ ಪ್ರಚಂಡ ಪ್ರವಾಹದಿಂದ ಬದಲಾಯಿಸಿದ್ದೂ ಇರಬಹುದು, ಅಥವಾ ಭಾರತ ಮಂತ್ರಿಗಳಾದ ಮಿ. ಮೊಂಟೆಗ್ಯೂಗಳ ಉದಾರಮತದ ಪರಿಣಾಮವೂ ಆಗಿರಬಹುದು. ಅವನ್ನು ಚಿಕಿತ್ಸಕದೃಷ್ಟಿಯಿಂದ ವಿಮಾಂಸಿಸುವುದು ಈಗ ಅಗತ್ಯವಿಲ್ಲ. ಇರಲಿ. ಈ ಅಧಿವೇಶನದ ರಿಪೋರ್ಟನ್ನು ನೋಡುವಾಗ ಈ ಅಧಿವೇಶನಕ್ಕೆ ನಾಮ. ಭೂಪೇಂದ್ರನಾಥಬಾಸು ಇವರೊಬ್ಬರಲ್ಲದೆ ಬೇರೆ ಎಲ್ಲ ಪ್ರತಿನಿಧಿಗಳು ಹಾಜರಿದ್ದರು. ಅಲ್ಲದೆ, ಬೇರೆ ಹಿಂದೀ ಆಂಗ್ಲಪ್ರೇಕ್ಷಕರ ಸಮುದಾಯವು ಹಾಜರಿತ್ತು. ಸರ್. ಶಂಕರನ್ ನಾಯರರು ಬೇರೆಬೇರೆ ಪ್ರಾಂತಗಳೊಳಗಿನ ಎಷ್ಟು ಕಾಲೇಜಗಳಲ್ಲಿ ಕಾಲೇಜಮೂಲಕ ಪದ್ಧತಿಯು ಅಂಗೀಕರಿಸಲ್ಪಟ್ಟಿರುವುದರ ವಿವ

ರಣವನ್ನೂ ಹಿಂದೂಸ್ಥಾನದೊಳಗಿನ ವಿಶ್ವವಿದ್ಯಾಲಯಗಳಲ್ಲಿ ಚುನಾವಣೆಯು ಮತ್ತು ನೇಮಕದ ಸಭಾಸದರ ಸಂಗತಿಯನ್ನು ಒಳಕೊಂಡ ವಿಷಯವನ್ನೂ ಅಧಿವೇಶನದ ಮುಂದಿಟ್ಟರು. ಬಳಿಕ ನಾಮ. ಎಮ್. ಎ. ಜೀನ್ನಾ ಇವರು ಮಿ. ಮೊಂಟೆಗ್ಯೂಗಳ ಸಂಚಾರಣಾಭಿವಚನಕ್ಕೂ ಹಿಂದೂಸ್ಥಾನದ ಸಂದರ್ಶನಕ್ಕೂ ಹಾಗು ದೇಶತುಂಬಾ ವ್ಯಕ್ತವಾದ ಲೋಕಮತಕ್ಕೂ ಮಾನಕೊಟ್ಟು ಸರಕಾರವು ಮಿಸೆಸ್. ಬಿಝೆಂಟರ ಮತ್ತು ಅವರ ಸಹಕಾರಿಗಳ ಬಂಧಮುಕ್ತತೆಯ ಪ್ರಶ್ನವನ್ನು ವಿಚಾರದಲ್ಲಿ ತೆಕ್ಕೊಂಡೀತೊ? ಎಂದು ಕೇಳಿದ್ದಕ್ಕೆ ಸರ್. ವಿಲಿಯಮ್ ವಿನ್ಸೆಂಟರು ಉತ್ತರಕೊಟ್ಟದ್ದೇನೆಂದರೆ, ಮಿಸೆಸ್. ಬಿಝೆಂಟರೂ ಅವರ ಸಹಕಾರಿಗಳಾದ ಮೆ. ಅರುಂಡೇಲ ಹಾಗು ಮಿ. ವಾಡಿಯಾ ಇವರು ಸನದುಬಾಹ್ಯ ಮತ್ತು ಕ್ಷೋಭಕರವಾದ ಪದ್ಧತಿಯನ್ನು ಬಿಟ್ಟು ಹಿಂದೂಸ್ಥಾನಸರಕಾರಕ್ಕೆ ಸಮಾಧಾನಪಡಿಸುವುದಾದರೆ ಅದು ಮದ್ರಾಸ ಸರಕಾರಕ್ಕೆ ಅವರನ್ನು ಪ್ರತಿಬಂಧದಿಂದ ಬಿಡಲು ಶಿಫಾರಸ ಮಾಡೀತು. ಬಾದಶಿರ ಕಡೆಯಿಂದ ಪ್ರಸಿದ್ಧವಾದ ನವಯೋಜನೆಯ ದಸೆಯಿಂದಲೂ ಮಿ. ಮೊಂಟೆಗ್ಯೂಗಳ ಆಗಮನದಿಂದಲೂ ಇಲ್ಲಿಯ ಲೋಕಮತದ ಕ್ಷೋಭವು ಶಾಂತವಾಗ ರಾಜಕೀಯ ಸುಧಾರಣೆಯ ಇಕ್ಕಟ್ಟಿನ ಒಗಟುಗಳನ್ನು ಬಿಡಿಸಲಿಕ್ಕೆ ಸಹಾಯ್ಯವಾಗುವುದಾದರೆ ಮದ್ರಾಸಿನ ಪ್ರತಿಬಂಧಗಳನ್ನು ಮಾತ್ರವಲ್ಲ ರಾಜ್ಯರಕ್ಷಣದ ಕಾನೂನಿನ ಮೇರೆಗೆ ಸಂಭವಿಸಿದ ಬೇರೆ ಪ್ರತಿಬಂಧಗಳನ್ನೂ 'ಕೂಡ ಕಳಚಿಹಾಕಲು ಸರಕಾರವು ಸಿದ್ಧವಿದೆ ಎಂಬುದಾಗಿ ಸರ್. ವಿಲಿಯಮ್ ವಿನ್ಸೆಂಟರು ಸರಕಾರದ ಕಡೆಯಿಂದ ಉತ್ತರವಿತ್ತರು.

ಈ ಪ್ರಶ್ನೋತ್ತರಗಳ ಅನಂತರ ವೈಸರಾಯ ಚೇಮ್ಸಫೋರ್ಡ ದೊರೆಗಳ ಭಾಷಣವಾಯಿತು. ಅವರ ಭಾಷಣದ ಪೂರ್ವಭಾಗದಲ್ಲಿ ಸಿಮ್ಲಾದಲ್ಲಿ ಜರುಗುವ ಈ ಅಧಿವೇಶನವು ಹೆಚ್ಚು ಉಪಯುಕ್ತವಾಗುವಂತೆ ಆ ಬಗ್ಗೆ ಮಾಡಿದ ಏರ್ಪಾಟುಗಳು, ಕೌನ್ಸಿಲಿನಿಂದ ಇಂಡಿಯಾ ಆಫೀಸಿಗೆ ಹೋಗಿ ಸೇರುವ ನಾಮ. ಬಾಸು ಮತ್ತು ಪಟ್ಟಣಿಯವರ ಗುಣವರ್ಣನ, ಸರಕಾರದ ಧೋರಣ, ಹಿಂದೀಸೈನ್ಯ, ಸಾಮ್ರಾಜ್ಯದಲ್ಲಿ ಹಿಂದುಸ್ಥಾನದ ತರಗತಿ ಮುಂತಾದ ವಿಷಯಗಳಿದ್ದವು. ಇವುಗಳಲ್ಲಿ ಸರಕಾರಿ ಧೋರಣವನ್ನು ಕುರಿತು ವಿವರಿಸುವಾಗ ವೈಸರಾಯರು ಗತವರ್ಷದಲ್ಲಿ ವೈಸರಾಯತನದ ಕೆಲಸವನ್ನು ಹೊಸತಾಗಿ ಕೈಕೊಂಡದ್ದರಿಂದ ತನ್ನ ಕೋರಿಕೆಗಳನ್ನಾಗಲಿ, ಆಶಂಕೆಗಳನ್ನಾಗಲಿ, ಪ್ರಯತ್ನಗಳನ್ನಾಗಲಿ, ಮಹತ್ವಾಕಾಂಕ್ಷೆಗಳನ್ನಾಗಲಿ ವ್ಯಕ್ತಗೊಳಿಸಲಿಲ್ಲ ಎಂಬುದಾಗಿ ವಾದಿಸಿ ಹೇಳಿದ್ದೇನೆಂದರೆ 'ಬೇಗನೆ ಸಫಲವಾಗದ ಸಂಗತಿಗಳ ವಿಷಯದಲ್ಲಿ ಅಭಿವಚನವನ್ನು ಕೊಡುವುದು ಯುಕ್ತವಲ್ಲ, ಮೊದಲು ಅತ್ಯಧಿಕ ವಚನಗಳನ್ನು ಕೊಡುವುದು ಮತ್ತು ದಿವಸ, ತಿಂಗಳು, ವರ್ಷಗಳು ದಾಟಿಹೋದರೂ ಅವು ಕೈಗೂಡುವುದಿಲ್ಲ ಎಂದಾದರೆ ಇದು ಸರಕಾರಕ್ಕೆ ಅಹಿತಕರವಾದ ಒಂದು ದೂಷಣವೆ ಸರಿ, ಈ ವಿಧಾನವು ಯಥಾರ್ಥವಾಗಲಿ ಅಥವಾ ಅಯಥಾರ್ಥವಾಗಲಿ ನನ್ನ ಆಳಿಕೆಯನ್ನು ಪರೀಕ್ಷಿಸುವುದಾದರೆ ಅಭಿವಚನಗಳ ದೃಷ್ಟಿಯಿಂದ ಅಲ್ಲ, ಕೈಗೆ ಬಂದ ಫಲಗಳಿಂದ ಅದನ್ನು ಪರೀಕ್ಷಿಸಬೇಕಾಗಿ ನಾನು ಕೇಳಿಕೊಳ್ಳುವೆನು." ಅನಂತರ ವೈಸರಾಯರು ಸೈನ್ಯದ ನ್ಯಾಯ್ಯವಾದ ಗಣನ, ಪ್ರತಿಫಲ, ಹಾಲಹವಾಲಿಗಳ ನಿವಾರಣ ಮತ್ತು ಬ್ರಿಟಿಷ್ ರಾಜಸತ್ತೆಯ ಅಂತಿಮಧ್ಯೇಯ ಈ ಮೂರು ಸಂಗತಿಗಳನ್ನು ಪ್ರಧಾನವಾಗಿಟ್ಟುಕೊಂಡು ತಮ್ಮ ಆಳಿಕೆಯ ೧೨ ತಿಂಗಳ ಪರೀಕ್ಷಣವನ್ನು ಮಾಡಿ ಮುಂದಿನ ಕಾರ್ಯಗಳನ್ನು ಸೂಚಿಸಿದರು. ಅವರ ಆಳಿಕೆಯ ಸಮಾಲೋಚನದಲ್ಲಿ ಹಿಂದೀ ಸೈನ್ಯದ ತರಗತಿಯು ಹೇಗೆ ಹೇಗೆ ವಿರುತ್ತ ಬಂದಿದೆ, ಸಾಮ್ರಾಜ್ಯದ ಪರಿಷತ್ತಿನಲ್ಲಿ ಹಿಂದುಸ್ಥಾನಕ್ಕೂ ಹೇಗೆ ಒಂದುಸ್ಥಾನವು ಸಿಕ್ಕಿತು, ವಸಾಹತುಗಳಲ್ಲಿ ಈ ಮೂಲಕ ಸಮಭಾವನೆಯು ಹೇಗೆ ಉಂಟಾಗಿದೆ ಮುಂತಾದನ್ನು ಹೇಳಿ ಲಾರ್ಡ. ಚೆಮ್ಸಫೋರ್ಡರು ವಿಲಾಯತಿವಸ್ತ್ರಗಳ ಮೇಲೆ ಹೆಚ್ಚಿಸಿದ ಕರ, ಸ್ವಯಂಸೇವಕ ಚಮೂ, ಹತ್ಯಾರ ಕಾಯಿದೆ ಈ ವಿಷಯಗಳನ್ನು ಪ್ರಸ್ತಾಪಿಸಿದರು. ಸನದಶೀರ ಸುಧಾರಣೆಯ ವಿಷಯವನ್ನು ಕೈಕೊಂಡು ಪ್ರಭುಗಳು ಹಿಂದುಸ್ಥಾನದಲ್ಲಿ ಬ್ರಿಟಿಷ್‌ರಾಜ್ಯದ ಅಂತಿಮಧ್ಯೇಯವು ಯಾವುದು ಎಂಬುದನ್ನು ಹೇಳುವಾಗ ಅಂತರ್ಗತ ಸ್ವರಾಜ್ಯದ ದಾನವೆ ಬ್ರಿಟಿಷ್‌ಸಾಮ್ರಾಜ್ಯದ ಅಂತಿಮಧ್ಯೇಯವಾಗಿದೆಂದು ಸ್ಪಷ್ಟಶಬ್ದಗಳಿಂದ ಹೇಳಲು ಹಿಂಜರಿಯಲಿಲ್ಲ. ಈ ಧ್ಯೇಯವನ್ನು ಹೊಂದಬೇಕಾದರೆ ಸ್ಥಾನಿಕ ಸ್ವರಾಜ್ಯದ ಮತ್ತು ಕಾಯಿದೆಕೌನ್ಸಿಲುಗಳ ಸುಧಾರಣೆ ಈ ವಿಷಯವನ್ನು ವರ್ಣಿಸಿದರು. ಅನಂತರ ಮಿ. ಮೊಂಟೆಗ್ಯೂಗಳ ಆಗಮನ, ಈ ಆಗಮನ ಸಮಯದಲ್ಲಿ ಮಹತ್ವದ ರಾಜಕೀಯಪ್ರಶ್ನಗಳ ಚರ್ಚೆಯು, ಶೋಧವು ನಡೆಯುವುದಿದ್ದುದರಿಂದ ಲೋಕಮತದ ವಾತಾವರಣವು ಶಾಂತವಿರುವುದು ಹೇಗೆ ಅಗತ್ಯವಿದೆ, ಮಿಸೆಸ್. ಬಿಝೆಂಟರ ಪ್ರತಿಬಂಧದ ಕೃತ್ಯವನ್ನು ಉಪಾಯವಿಲ್ಲದೆ—(ಬಿಝೆಂಟರ ದುರಾಗ್ರಹದಿಂದಲೆ ಎಂಬ ಅರ್ಥ) ಮದ್ರಾಸ ಸರಕಾರಕ್ಕೆ ಹೇಗೆ ಕೈಕೊಳ್ಳಬೇಕಾಯಿತು,—ಇದು ಸ್ವತಃ ಲಾರ್ಡ. ಪೆಂಟಲೆಂಡರು ಮಧ್ಯಸ್ಥತನವನ್ನು ನಡಿಸಿ ಆ ಮಾಧ್ಯಸ್ಥ್ಯವು ಉಪಯೋಗಕ್ಕೆ ಬರುವುದಿಲ್ಲ, ಎಂದಾದ ಮೇಲೆಯೆ ಈ ಪ್ರತಿಬಂಧಗಳು ಹೇಗೆ ಅಸ್ತಿತ್ವದಲ್ಲಿ ಬಂದವು ಮುಂತಾದುದನ್ನು ಚೆಮ್ಸಫೋರ್ಡರು ಆಡಿ ತೋರಿಸಿದರು. ಲಾರ್ಡ. ಪೆಂಟಲೆಂಡರ ಜಾರಿ ಬೀಳುವ ಧೋರಣವನ್ನು ವೈಸರಾಯ ಪ್ರಭುಗಳು ಈ ರೀತಿಯಿಂದ ಎತ್ತಿ ಹಿಡಿಯುವುದು ಬಂಧು ಕೃತ್ಯದ ದೃಷ್ಟಿಯಿಂದ ಸರಿ ಎಂತಲೆ ಎನ್ನೋಣ. ಮುಂದೆ ಶಿಕ್ಷಣದ—ವಿಶೇಷತಃ ಪ್ರಾಥಮಿಕ ಶಿಕ್ಷಣದ—ಅಭಿವೃದ್ಧಿಯು ಆಗುವುದು ಅಗತ್ಯವಿದೆ ಮತ್ತು ಅದಕ್ಕಾಗಿ ನಮ್ಮ ಪ್ರಯತ್ನವು ಹೇಗೆ ನಡೆದಿದೆ ಹಾಗು ನಡೆಯತಕ್ಕದೆಂಬುದನ್ನು ಹೇಳಿ ಲಾರ್ಡರು ಯುದ್ಧ ವಿಷಯವನ್ನು ಸಮಾಲೋಚಿಸಿದರು. ಮತ್ತು ತಮ್ಮ ಭಾಷಣದ ಉತ್ತರಾರ್ಧದಲ್ಲಿ ಬ್ರಿಟಿಷರ ಕರ್ತೃತ್ವ, ನ್ಯಾಯಬುದ್ಧಿ ಮತ್ತು ಔದಾರ್ಯಗಳ ಮೇಲೆ ಭರವಸೆಯನ್ನಿಡಲು ಹಿಂದಿಗಳಿಗೆ ಹೇಳಿಕೊಂಡರು. ಹಾಗು ಜನತೆಯು ಮತಭೇದಗಳನ್ನಲ್ಲ ಬದಿಗೆ ಇಟ್ಟು ಸರಕಾರದೊಡನೆ ಸಹಕಾರ್ಯದಿಂದ ನಡಕೊಳ್ಳುವುದು ಅಗತ್ಯವಿದೆಂಬುದನ್ನು ಸೂಚಿಸಿದರು. ವೈಸರಾಯ ಪ್ರಭುಗಳ ಮೊನ್ನೆಯ ಅಧಿವೇಶನದ ಈ ಪ್ರಾಸ್ತಾವಿಕ ಭಾಷಣದಲ್ಲಿ ತಕ್ಕಮಟ್ಟಿಗೆ ಕಂಡುಬರುವ ಸಹಾನುಭೂತಿಯು ನಿಜವಾಗಿ ಶ್ಲಾಘ್ಯವಾಗಿದೆ. ಪತ್ರಕಾರರ ಡೆಪ್ಯುಟೇಶನು ಭೇಟಿಗೆ ಬಂದಾಗ ಆ ಸಂದರ್ಭದಲ್ಲಿ ವ್ಯಕ್ತಪಡಿಸಿದ ವಿಚಾರಗಳೂ ಈಗಿನ ವಿಚಾರಗಳೂ ತುಂಬಾ ವ್ಯತ್ಯಾಸವುಳ್ಳವುಗಳಾಗಿದ್ದಾವೆ. ಇದರ ಕಾರಣವು ಯಾವುದೆ ಇರಲಿ, ವೈಸರಾಯಪ್ರಭುಗಳು ಈ ರೀತಿಯಿಂದ ಒಂದು ಮೆಟ್ಟು ಕೆಳಗಿಳಿದು ಜನತೆಯ ಮೇಲೆ ಸಹಾನುಭೂತಿಯನ್ನು ತೋರಿಸುವ ಈ ಸುಸಂದರ್ಭದಲ್ಲಿ ಅವರ ಹಿಂದಿನ ವಿಚಾರಗಳ ಉಗ್ರತೆಯನ್ನು ತೋರಿಸಿ ಹಾಕಿದ ಗಾಯದಲ್ಲಿ ಉಪ್ಪುಹಾಕಿ ಅದನ್ನು ಕೆರಳಿಸುವುದು ಯುಕ್ತವಲ್ಲ.

೩. ವೈಸರಾಯರ ಭಾಷಣವು ಮುಗಿದ ಮೇಲೆ ನಾಮ. ಸಭ್ಯರುಗಳು ಕೇಳಿದ ಪ್ರಶ್ನವನ್ನು ಉತ್ತರಿಸುವಾಗ ಸರ್. ವಿನ್ಸೆಂಟರು ವರಿಷ್ಠ ಸರಕಾರವು ಪ್ರಾಂತಿಕ ಸರಕಾರಗಳಿಗೆ ಹೋಮ್‌ರೂಲಿನ ತನಖಿಯ ವಿಷಯದಲ್ಲಿ ಒಂದು ಹುಕುಮನ್ನು ಕೊಟ್ಟದ್ದು ಹೌದು ಎಂದು ಪ್ರಾಂಜಲತನದಿಂದ ಒಪ್ಪಿಕೊಂಡರು. ಆದರೆ ಅದರ ಸಂಪೂರ್ಣ ವಿವರಣವನ್ನು ಅದು ಕೊನ್‌ಫಿಡೆನ್ಸಿಯಲ್ ಆದುದರಿಂದ ಕೊಡುವುದು ಸಾಧ್ಯವಿಲ್ಲವೆಂಬುದಾಗಿ ಹೇಳಿದರು. ಅನಂತರ ಬೇರೆ ಬೇರೆ ಸಭಾಸದರು ಯುನಿವರ್ಸಿಟಿ ಏಕ್ಟ್, ಬಂಗಾಲಎಸೋಶಿಯೇಟ್ ಜನರಲಿನ ವಿಷಯ, ಪಬ್ಲಿಕ್ ಸರ್ವಿಸ್ ಕಮಿಶನ್, ಮಿ. ಮಹಮದಾಲಿ ಸೈಕತ್‌ಅಲಿ ಇವರ ಪ್ರತಿಬಂಧ ಇತ್ಯಾದಿ ಪ್ರಶ್ನೋತ್ತರಗಳು ನಡೆದವು. ಅನಂತರ ಕೆಲವು ಕಾನೂನಿನ ರಚನೆಗಳು ವಿಚಾರಾರ್ಥ ಅಂಗೀಕರಿಸಲ್ಪಟ್ಟವು. ಕಾಯಿದೆಕೌನ್ಸಿಲಿನ ವಿಷಯದಿಂದಲೆ ಅಧಿಕವಾಗಿಯು ತುಂಬಿಹೋದುದರಿಂದ ಈ ಸಾರೆ ಆ ಪ್ರಸ್ತಾವಗಳನ್ನು ಇಲ್ಲಿಗೆ ಬಿಟ್ಟುಬಿಡಬೇಕಾಗುವುದು.

೪. ಗಯಾನ ಕರಾರಿನ ಉಲ್ಲಂಘನಾಪ್ರದವಾದ ಪದ್ಧತಿಯನ್ನು ನಿರ್ಮೂಲಗೊಳಿಸಿದ ಸಂಗತಿಯನ್ನು ಕಳೆದ ಸಂಚಿಕೆಯಲ್ಲಿ ವಾಚಕರಿಗೆ ತಿಳಿಸಿದ್ದೆವು ಮತ್ತು ಅದೆ ಸಂಚಿಕೆಯಲ್ಲಿ ಸೂಚಿಸಿದ್ದಂತೆ, ಈ ಪ್ರಶ್ನವನ್ನು ನಿರ್ಣಯಿಸಲು ಲಂಡನಿನಲ್ಲಿ ಸೇರಿದ ಪರಿಷತ್ತಿನ ವರದಿಯು ಹಿಂದುಸ್ಥಾನ ಸರಕಾರದ ಕಡೆಗೆ ಬಂದು ಹಿಂದೀ ಸರಕಾರವು ಆ ವರದಿಯೊಳಗಿನ ತನ್ನ ಠರಾವನ್ನು ಪ್ರಸಿದ್ಧಮಾಡಿದೆ, ಅದರ ಕೆಲವು ವಿವರಗಳನ್ನು ಸಂಕ್ಷೇಪದಿಂದ ವಾಚಕರ ಮುಂದಿಡುತ್ತೇವೆ. ಇನ್ನು ಮುಂದೆ ಪರದೇಶಗಳಿಗೆ ಹೋಗತಕ್ಕ ಕೂಲಿಯು ಗಯಾನ ಕರಾರಪತ್ರವನ್ನು ಬರೆದುಕೊಡಬೇಕಾದುದಿಲ್ಲ. ಕ್ಲಿಪ್ತ ಸಮಯದ ನಂತರ ಕೂಲಿಯು ಒಪ್ಪಿನ ಕೆಲಸವನ್ನು ಬಿಟ್ಟು ಬೇರೆಯವನದನ್ನು ಅವಲಂಬಿಸಬಹುದು; ಮಧ್ಯದಲ್ಲಿ ಒಪ್ಪಿನ ಕೆಲಸ ಬಿಟ್ಟುದ್ದಕ್ಕಾಗಿ ಅವನ ಮೇಲೆ ಕ್ರಿಮಿನಲ್ ಮೊಕದ್ದಮೆಯು ನಡೆಯದೆ ಸಿವಿಲ್ ದಾವೆಯು ಮಾತ್ರ ನಡೆಯುವುದು. ಹಿಂದುಸ್ಥಾನದಿಂದ ಪರದೇಶಗಳಿಗೆ ಹೋಗುವ ಕೂಲಿಗಳ ಸಮುದಾಯವು ಎಲ್ಲಿ ಸೇರಿಸಲ್ಪಡುವುದೊ ಅಲ್ಲಿ ಮೇಜಿಸ್ಟ್ರೇಟರಿಗಾಗಲಿ, ಬ್ರಿಟಿಷ್ ಸರಕಾರಿ ಸಬ್‌ಸ್ಟೇಪ್ಯುಟಿಗಳಾಗಲಿ ಹೋಗಿ ಅಲ್ಲಿಯ ಸಂಗತಿಗಳನ್ನು ವಿಮರ್ಶಿಸಬಹುದು ಈ ನಿಯಮಗಳಲ್ಲದೆ ಇನ್ನೊಂದು ಮಹತ್ವದ ನಿಯಮವು ಯಾವುದೆಂದರೆ ಪರದೇಶಗಳಲ್ಲಿ ಹೋದ ಕೂಲಿಗಳಿಗೆ ಅಲ್ಲಿಯ ನಾಗರಿಕತ್ವದ ಹಕ್ಕು ಸಿಗುವುದು. ಈ ಹೊಸ ನಿಯಮಗಳು ಮತ್ತು ಗಯಾನ ಕರಾರಿನ ದುಷ್ಟಪದ್ಧತಿಯ ಉಚ್ಚಾಟನವು ಹಿಂದಿಗಳಿಗೆ ಅಭಿನಂದನೀಯವಾಗಿವೆ.

೫. ಮೈಸೂರ ಸಂಸ್ಥಾನದ ಸಮರ್ಥ ದಿವಾಣರಾದ ಸರ್. ವಿಶ್ವೇಶ್ವರೈಯ್ಯನವರು ಅಲ್ಲಿಯ ಜಿಲ್ಲೆಗಳ ಸುಧಾರಣೆಯನ್ನು ಬಹು ಶ್ಲಾಘ್ಯವಾದ ರೀತಿಯಲ್ಲಿ ಸಾಧಿಸುತ್ತಿದ್ದಾರೆಂದು ಈಚೆಗೆ ಪ್ರಸಿದ್ಧವಾದ ಅವರ ಜಿಲ್ಲಾ ಸಂದರ್ಶನದ ವೃದಿಯಿಂದ ಕಂಡುಬರುತ್ತದೆ. ಆಯಾ ಜಿಲ್ಲೆಗಳಲ್ಲಿ ಮಾತ್ರವಲ್ಲ, ತಾಲೂಕುಗಳಲ್ಲೂ, ಗ್ರಾಮಗಳಲ್ಲೂ ಸ್ವತಃ ಹೋಗಿ ಅಲ್ಲಿಯ ಸ್ಥಿತಿಯನ್ನು ಅನೇಕ ದೃಷ್ಟಿಯಿಂದ ಪರೀಕ್ಷಿಸುವ ಕ್ರಮವನ್ನು ಅವರು ಕೈಕೊಂಡಿರುವರು. ಆಯಾ ಸ್ಥಳದ ಬೆಳೆ, ಎಂದರೆ ಯಾವ ಕಡೆಯಲ್ಲಿ ಯಾವ ಬೆಳೆಯು ಹೆಚ್ಚಾಗಿ ಬೆಳೆಯಬಹುದು, ಅದರ ಸಾಧನಗಳು ಎಲ್ಲೆಲ್ಲಿ ಹೇಗೆ ಹೇಗೆ ಅನುಕೂಲ ಇವೆ, ಆ ಅನುಕೂಲತೆಯು ಇಲ್ಲವಾದರೆ ಅದನ್ನು ಯಾವ ರೀತಿಯಿಂದ ಸಾಧಿಸಬಹುದು ನೀರಿನ ಪೂರವಣೆಯಾಗಲಿ, ದುರುಪಯೋಗವಾಗಲಿ ಎಲ್ಲೆಲ್ಲಿ ಹೇಗಾಗುತ್ತಿವೆ, ಒಂದು ಕಡೆಯಲ್ಲಿ ಒಂದು ಉತ್ಪತ್ತಿಯು ಉದಾಹರಣಾರ್ಥವಾಗಿ ಹತ್ತಿ ಎನ್ನೋಣ, ಮನಸ್ವಿಯಾಗಿ ಬೆಳೆದರೂ ಅದರ ಮುಂದಿನ "ಕಾಮಗಿರಿ"ಯು ನಡೆಯುವಂತೆ ಕಾರಖಾನೆಗಳ ಅಭಾವದಿಂದ ಎಷ್ಟು ತೊಂದರೆಯೂ ಹಾನಿಯೂ ಬರುವವು, ಅಂಥ ಕಡೆಗಳಲ್ಲಿ ಆಯಾ ಕೆಲಸಗಳಿಗೆ ಉಪಯುಕ್ತವಾದ ಕಾರಖಾನೆಗಳನ್ನು ಎಷ್ಟು ಪ್ರಮಾಣದಲ್ಲಿ ಹೊರಡಿಸಬಹುದು, ಹಾಗೆಯೆ ಶಾಲೆಗಳ ಪೂರ್ವದ ಮತ್ತು ಈಗಿನ ಸ್ಥಿತಿ, ಶಿಕ್ಷಣ ಪ್ರಸಾರಣವು ಯಾವ ಯಾವ ಕಡೆಯಲ್ಲಿ ಹೇಗಿದೆ, ಎಲ್ಲಿ ಅಗತ್ಯವಾಗಿದೆ ಮುಂತಾದ ಅನೇಕ ಉಪಯುಕ್ತ ಮತ್ತು ಪ್ರಗತಿಕರವಾದ ನಿರೀಕ್ಷಣವನ್ನೂ ಸೂಚನೆಗಳನ್ನೂ ದಿವಾಣ ಸಾಹೇಬರು ತಮ್ಮ ವೃದಿಗಳಲ್ಲಿ ಪ್ರಕಟಿಸಿರುವರು. ಇದೀಗ ಕಾರ್ಯತತ್ಪರತೆ. ಇಲ್ಲವಾದರೆ ಬಿಟ್ಟಿ ಸಾಗಿಸಲು ಸ್ಥಳಗಳನ್ನು ಸಂದರ್ಶಿಸಿ ಸರಕಾರಿ ಭತ್ತೆಯನ್ನು ಸಂಪಾದಿಸುವುದು ಒಂದು ಕರ್ತವ್ಯವೆ ಸರಿ. ದಿವಾಣ ಸಾಹೇಬರ ಈ ಅನುಕರಣೀಯವಾದ ಉದಾಹರಣವನ್ನು ಬ್ರಿಟಿಷ್ ಅಧಿಕಾರಿಗಳು ಅನುಕರಿಸುವರೆಂದು ನಾವು ಆಶಿಸುತ್ತೇವೆ.

ಸ್ಥಳಿಕ — ಮಂಗಳೂರು.

ತುಫಾನು ಇತ್ಯಾದಿಗಳು ಇಲ್ಲದಿದ್ದರೆ ಮುಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯ ಮಳೆಕಾಲದ ನಂತರದ ಮೊದಲನೆಯ ಸ್ಟೀಮರು ಇದೇ ತಿಂಗಳ ತಾ. ೨೭ನೇ ಗುರುವಾರ ಅಥವಾ ಒಂದೆರಡು ದಿವಸಗಳ ಮುಂಚಿತವಾಗಿ ಇಲ್ಲಿಗೆ ಬಂದು ತಲ್ಪಬಹುದೆಂತ ನಿರೀಕ್ಷಿಸಲ್ಪಟ್ಟಿರುತ್ತದೆ.

ಮಂಗಳೂರು ಜುಬುಲಿ ಸ್ಕೋಲರ್‌ಶಿಪ್ ಎಂಬ ವಿದ್ಯಾರ್ಥಿವೇತನದ ಫಂಡಿನ ಅಧ್ಯಕ್ಷರಾದ ಡಿಸ್ಟ್ರಿಕ್ಟ್ ಜಡ್ಜರವರು ವೇತನಗಳ ಬಗ್ಗೆ ವಿದ್ಯಾರ್ಥಿಗಳನ್ನು ಚುನಾಯಿಸುವದಕ್ಕೋಸ್ಕರ ನಡಿಸುವ ಸ್ಪರ್ಧಾಬದ್ಧ ಪರೀಕ್ಷೆಯು ಇದೇ ಬರುವ ನವಂಬರ ತಿಂಗಳ ತಾ. ೫ನೇ ಸೋಮವಾರ ೧೦ ಗಂಟೆಗೆ ಗವರ್ನಮೆಂಟ್ ಕೊಲೇಜಿನಲ್ಲಿ ನಡಿಸೋಣಾಗುವದೆಂಬ ಪ್ರಕಟಣೆಯನ್ನು ಪ್ರಸಿದ್ಧಪಡಿಸಿರುವರು. ವಿದ್ಯಾರ್ಥಿವೇತನಗಳಲ್ಲಿ ಒಂದು ಬ್ರಾಹ್ಮಣವಿದ್ಯಾರ್ಥಿಗಳಿಗೆ ಮತ್ತೊಂದು ಮಹಮ್ಮದೀಯ ವಿದ್ಯಾರ್ಥಿಗಳಿಗಾಗಿರುವದು. ಪರೀಕ್ಷೆಯು ಯಾವ ಯಾವ ವಿಷಯಗಳಲ್ಲಿ ನಡಿಸೋಣಾಗುವದು ಮತ್ತು ವೇತನದ ಶರ್ತಗಳೇನು, ಪರೀಕ್ಷೆಗೆ ದಾಖಲು ಮಾಡಲುಕೊಳ್ಳಬೇಕಾಗಿ ಬರಕೊಳ್ಳುವ ಅರ್ಜಿ ಫೊರ್ಮುಗಳನ್ನು ಅಪೇಕ್ಷಿಸುವವರು ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನಿಂದ ಪಡಕೊಳ್ಳಬಹುದು. ವೇತನಗಳನ್ನು ಅಪೇಕ್ಷಿಸಿ ಹೋಲಾಟದ ಈ ಪರೀಕ್ಷೆಗೆ ಉಮೇದ್ವಾರರಾಗಲು ಅಪೇಕ್ಷಿಸುವವರು ಇದೇ ಬರುವ ಅಕ್ಟೋಬರ ತಿಂಗಳ ತಾ. ೨೫ನೇ ದಿನ ವ ಅದರ ಮುಂಚಿತವಾಗಿಯೇ ಅರ್ಜಿಗಳನ್ನು ಬರಕೊಳ್ಳತಕ್ಕದ್ದು. ನಂತರ ಬರಕೊಳ್ಳೋಣಾಗುವ ಅರ್ಜಿಗಳು ದಾಖಲು ಮಾಡೋಣಾಗಲಿಕ್ಕಿಲ್ಲ.

ಕಳೆದ ತಿಂಗಳ ತಾ. ೨೫ನೇ ಶನಿವಾರ ಶ್ರೀ ಜ್ಞಾನೋದಯ ಸಹಕಾರ ಸಂಘದ ಆಫೀಸಿನಲ್ಲಿ 'ಮಂಗಳೂರು ತಾಲೂಕಿನ ಮೊನುವಣ್ಣೆ ಮತ್ತು ಗೊಬ್ಬರ ಕಾರ್ಖಾನೆಗಾರರ ಒಂದು ಸಭೆಯು ಕೂಡಿತ್ತು. ಈ ಸಭೆಗೆ ಪುತ್ತೂರಿನ ರಾ. ಮೊಳಹಳ್ಳಿ ಶಿವರಾಯರವರೂ ದಯಮಾಡಿಸಿದ್ದರು. ಒಗ್ಗಟ್ಟಿನಲ್ಲಿ ವ್ಯಾಪಾರ, ಹಣದ ಪರಸ್ಪರಸಹಾಯ ಇತ್ಯಾದಿ ಸೌಕರ್ಯಗಳನ್ನು ಒದಗಿಸುವಂಥಾ ಒಂದು ಸಂಘವನ್ನು ಏರ್ಪಡಿಸುವ ಆತೀ ಅವಶ್ಯಕತೆಯ ಕುರಿತು ರಾ. ವೇಂಕಪ್ಪ ತಿಂಗಲಾಯರು ಮಾತಾಡಿದರು. ರಾ। ಶಿವರಾಯರವರು ಪರಸ್ಪರ ಸಹಕಾರತ್ವದ ಉಪಯುಕ್ತತೆಯನ್ನು ಸರ್ವರಿಗೂ ವಿಶದವಾಗಿ ತಿಳಿಸಿದರು. ಮತ್ತು ಮಂಗಳೂರು ತಾಲೂಕು ಮೊನುಕಾರಖಾನೆ ಮಾಲಿಕರ ಹೋಲ್‌ಸೇಲ್. ಕೋ-ಒಪರೇಟಿವ್ ಸೊಸೈಟಿ ಎಂಬ ಸಂಘವನ್ನು ರಿಜಿಸ್ಟ್ರಿಮಾಡುವರೆ ರಿಜಿಸ್ಟ್ರಾರರವರಿಗೆ ಅರ್ಜಿಯನ್ನು [illegible]ಹಿಸಲು ನಿರ್ಣಯಿಸಲಾಯಿತು.

ಕಳೆದ ಶನಿವಾರ ಕೃಷ್ಣಾಷ್ಟಮಿಯ ದಿನ ರಾತ್ರೆ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ನಿವಾಸಿಗಳು ಬಡವಿದ್ಯಾರ್ಥಿಫಂಡಿಗೂ ಮಾಜಿ ಮರಕತ ಅಪ್ಪಯಶೆಟ್ರು ಸ್ಮಾರಕಫಂಡಿಗೂ ಸಹಾಯಾರ್ಥವಾಗಿ ಭವನದ 'ವೆಂಕಪ್ಪ ಪೂಂಜ' ಸಭಾಸದನದಲ್ಲಿ ಚಂದ್ರಹಾಸ ನಾಟಕವನ್ನು ಅಭಿನಯಿಸಿ ಪ್ರೇಕ್ಷಕರಿಗೆ ಆನಂದವನ್ನುಂಟುಮಾಡಿದರು. ನಾಟಕಾರಂಭದಲ್ಲಿ ತೋರಿಸಿದ 'ವೇಣುಗೋಪಾಲ' ಪ್ರದರ್ಶನವು ನೇತ್ರಾನಂದಕರವಾಗಿತ್ತು. ವಿದ್ಯಾರ್ಥಿಗಳು ಇದೊಂದು ನವೀನ ರೀತಿಯಿಂದ ಗೋಕುಲಾಷ್ಟಮಿಯನ್ನು ಆಚರಿಸಿ ಮೇಲ್‌ಹೇಳಿದ ಫಂಡುಗಳಿಗೆ ಸಹಾಯ ಮಾಡಿದ್ದು ಶ್ಲಾಘನೀಯವಾದದ್ದೆ.

ಇದೇ ತಿಂಗಳ ತಾ. ೨ನೇ ಆದಿತ್ಯವಾರ ಮಾಜಿ ಗಣಪತಿ ಸೆಕೆಂಡರಿ ಶಾಲೆಯ ಕಪೌಂಡದಲ್ಲಿ ರಾ। ಶೇಷಪ್ಪನವರು ತನ್ನ ಅದ್ಭುತ ಶಕ್ತಿಸಾಧನಗಳನ್ನು ಬಗೆಬಗೆಯಿಂದ ಮಾಡಿತೋರಿಸಿದರು. ಇವರ ಈ ಶಕ್ತಿಸಾಧನಗಳನ್ನು ಶ್ಲಾಘಿಸಿ ಮಂಗಳೂರು ಜ್ಞಾನೋದಯ ಸಮಾಜದವರು ಮತ್ತು ರಾ। ಶೇಷಪ್ಪನವರಲ್ಲೇ ಈ ಮೊದಲು ಕಲಿತ ಶಿಷ್ಯರು ಹೀಗೆ ಈ ತಂಡದವರು ಎರಡು ಬೆಂಗಾರದ ಪದಕಗಳನ್ನು ಬಹುಮಾನವಾಗಿ ಕೊಟ್ಟರು. ಪ್ರೇಕ್ಷಕರಲ್ಲಿ ಒಬ್ಬರು ಚಿನ್ನದ ಮಿಸ್ರಿಯನ್ನು ಉಚಿತವಾಗಿ ಕೊಟ್ಟರು.

ರಾ! ಎಸ್. ಶೇಷಪ್ಪ, ಪ್ರೊಫೆಸ್ಸರ್ ಕೃಷ್ಣಮೂರ್ತಿ ಮತ್ತು ಕೆ. ಗೋಪಾಲ ಕೃಷ್ಣರಾವ್, ಈ ಮೂವರೊಳಗೆ ಉಂಟಾದ ವೈಮನಸ್ಸಿನ ವಿಷಯವನ್ನು ವಾಚಕರು ತಿಳಿದುಕೊಂಡಿರಬಹುದು. ಈ ಮೂವರೊಳಗಿರುವ ವಿವಾದಗಳನ್ನು ಇಲ್ಲಿಯ ವಕೀಲರಾದ ಮ। ರಾ। ರಾ। ಅಡಿಗೆ ಶ್ರೀನಿವಾಸರಾಯರು ತೀರ್ಚಿ ಈ ಮೂರು ಜನರಲ್ಲಿ ಉಂಟಾದ ಮೈತ್ರಿಭಾವವನ್ನು ಜನರಲ್ಲಿ ವ್ಯಕ್ತಗೊಳಿಸಲಿಕ್ಕೆ ಮೂರು ಜನರು ಸೇರಿ ತಮ್ಮ ಶಕ್ತಿಸಾಧನಗಳನ್ನು ಆಡಿ ತೋರಿಸಬೇಕೆಂತ ರಾ। ಶ್ರೀನಿವಾಸರಾಯರು ಅಪೇಕ್ಷಿಸಿದ ಪ್ರಕಾರ ಇವರ ಆಟವು ಇದೇ ಆದಿತ್ಯವಾರ ತಾ. ೧೬ನೇ ಘಂಟೆ ೬॥ಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಪ್ರಾರಂಭಿಸುವದಾಗಿ ತಿಳಿಯುತ್ತೇವೆ.

ಈ ಜಿಲ್ಲೆಯ ವಿದ್ಯಾರ್ಥಿಗಳ ಕೊನ್ಫರೆನ್ಸ ಬರುವ ಅಕ್ಟೋಬರ ತಿಂಗಳ ತಾ. ೨೧ರಲ್ಲಿ ಮಾಜಿ ಮುಂಬಯಿ ಹ್ಯಾಕೋರ್ಟ ಜಡ್ಜರಾಗಿದ್ದ ಸರ್ ನಾರಾಯಣ ಗಣೇಶ ಚಂದಾವರಕಾರರವರ ಅಧ್ಯಕ್ಷತೆಯಲ್ಲಿ ಜರುಗುವದಾಗಿ ತಿಳಿಯುತ್ತೇವೆ. ದೇಶಭಾಷೆಗಳ ಅಭಿವೃದ್ಧಿ, ಈ ವಿಷಯ ಉತ್ಕೃಷ್ಟವಾದ ಉಪನ್ಯಾಸವನ್ನು ಬರೆದವರಿಗೆ ಇನಾಮು ಕೊಡೋಣಾಗುವದೆಂಬ ಕೊನ್ಫರೆನ್ಸಿನವರ ಪ್ರಕಟಣೆಯನ್ನು ಈ ಸಂಚಿಕೆಯ ಪ್ರಕಟಣಾ ಪಾನುಗಳಲ್ಲಿ ಪ್ರಕಟಿಸಿರುವೆವು.

ಈ ತಿಂಗಳಲ್ಲಿ ಇಲ್ಲಿಯ ಸೆಶನ್ಸ್ ಕೋರ್ಟಿನಲ್ಲಿ ಪ್ರಥಮ ತನಖಿಗೆ ತೆಗಿಯೋಣಾದ ಮೊಕದ್ದಮೆಯು ಬಂಟವಾಳ ಸಬ್ ಮೇಜಿಸ್ಟ್ರೇಟರು ಕಮಿಟು ಮಾಡಿದ್ದಾಗಿತ್ತು. ತಿಮ್ಮಪ್ಪಶೈ ಮತ್ತು ಇನ್ನು ಇಬ್ಬರು ಮಂಗಳೂರಿನಿಂದ ತಮ್ಮ ಗ್ರಾಮಕ್ಕೆ ಹೋಗುತ್ತಿದ್ದಾಗ ಜಪ್ಪಿನ ಮೊಗರು ಗ್ರಾಮದ ಒಪ್ಪಕ್ಕಲ್ ಸಮೀಪ ಮುದ್ದೆಗಳು ತಪ್ಪಿದೊಡನೆ ತ್ಯಾಂಪಣ್ಣ ಶೈ ಮತ್ತು ಇನ್ನೊಬ್ಬನು ಮುದ್ದೆಗೆ ಗುಂಡುಹೊಡದು ಮುದ್ದೆಯಾಳೆ ಕಡೆಯಿಂದ ಇನ್ನು ಕೆಲವರು ಬಂದು ತನ್ನನ್ನು ಕತ್ತಿಯಿಂದ ಕಡಿದು ಘಾಯಪಡಿಸಿದರೆಂಬ ಆರೋಪಣೆಗೆ ತ್ಯಾಂಪಣ್ಣ ಶೈ ಮೊದಲಾದ ಮುದ್ದೆಯಾಳೆಗಳು ಗುರಿಮಾಡಲ್ಪಟ್ಟಿದ್ದರು. ಈ ತಕ್ಷೀರು ನಡೆದದ್ದು ತಾ. ೧೩-೫-೧೭ರಲ್ಲಿ, ಸೆಶನ್ಸನಲ್ಲಿ ಇದರ ತನಖಿಯು ಈ ತಿಂಗಳ ಪ್ರಾರಂಭದಲ್ಲಿ ನಡದು ಮುದ್ದೆಯಾಳೆಗಳ ಮೇಲೆ ತಪ್ಪು ಸ್ಪಷ್ಟವಾಗಿ ರುಜು ಆಗದೆ ಇದ್ದದ್ದರಿಂದ ಮುದ್ದೆಯಾಳೆಯರೆಲ್ಲರನ್ನು ಖುಲಾಸಪಡಿಸಿರುವರು.

ಇಲ್ಲಿಯ ಹ್ಯಾಕೋರ್ಟ ವಕೀಲರಾದ ಮ। ರಾ। ಉಳ್ಳಾಲ ವಾಮನನ್ಯಾಕರು ಪುತ್ತೂರಿನ ಡಿಸ್ಟ್ರಿಕ್ಟ್ ಮುನ್ಸೀಫರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬೊಂಬಾಯಿ— ಜಿ. ಐ. ಪಿ. ರೈಲ್ವೆಯ ನವುಕರರ ಮುಷ್ಕರವು ಬಹುಮಾನಪಟ್ಟ ಗವರ್ನರರವರ ಪ್ರಯತ್ನದಿಂದ ಅಡಗಿತ್ತು. ಆದರೆ ೪ನೇ ತಾರೀಕಿಗೆ ಅವರು ಪುನಃ ಕೆಲಸ ಬಿಟ್ಟಿಸಿದರು. ಲೋಕೋ ಸುಪರಿಂಟೆಂಡೆಂಟ ಮಿ ಬೊನ್ನರು ಬಂದು ವಿಚಾರಿಸಿದಾಗ ಎಲ್ಲರೂ ಸುಮ್ಮನಿದ್ದರು. ಒಬ್ಬನು ಮಾತ್ರ ಜುಲೈ ೧ನೇ ತಾರೀಕಿನಿಂದ ಅವರಿಗೆ ಸಿಕ್ಕಬೇಕಾದ ಬತ್ತ ಏನತು ನೇಕಡಾ ೧೦ರಂತೆ ಹೆಚ್ಚಿಗೆ ಸಂಬಳ ಸಿಕ್ಕಬೇಕಾಗಿ ಬಾಯಿಬಿಟ್ಟು ಹೇಳಿದನು. ಆದರೆ ಇದಕ್ಕೆ ತಕ್ಕ ಕಾರಣಗಳನ್ನು ಕೊಡಲಿಲ್ಲ. ಮಿ ಬೊನ್ನರು ಒಂದು ಕಡೆಯಿಂದ ಕಾರ್ಖಾನೆಯ ಇನ್ನೊಂದು ಕಡೆಗೆ ಹೋಗುವಾಗ ಹಿಂದಿನಿಂದ ಕಲ್ಲುಗಳ ಮಳೆ ಸುರಿಯಲಾರಂಭಿಸಿತು. ಕಡೆಗೆ ಮೆನೇಜರ್ ಮಿ ಹಟಿಂಟರು ಒಬ್ಬೊಬ್ಬರನ್ನು ಓಡಿಸಿ ಗದರಿಸಿದರೂ ಈ ಮಳೆ ನಿಲ್ಲಲಿಲ್ಲ. ಹಾರಿ ಪಿಸ್ತೂಲನ್ನು ಸುಟ್ಟನು. ಆದರೂ ನಿಷ್ಫಲವಾಯಿತು. ಮಿ ಫೆಯರ್‌ವದರ್ ಎಂಬವರು (ಕಾರ್ಖಾನೆ ಕೂಲಿಗಳ ಮೊಕದಂ) ಕಡೇಗೆ ಎಷ್ಟು ಸವ ಜಾಯಿಸಿದರೂ ಕೂಲಿಯವರು ಕೇಳದೆ ಅವರಿಗೆ ಒಂದು ಏಟನ್ನು ಮುಖದ ಮೇಲೆ ಕೊಟ್ಟರು. ಅವರು ಕೂಡಲೆ ಪಿಸ್ತೂಲನ್ನು ಸುಟ್ಟು ಒಬ್ಬನಿಗೆ ಗಾಯಪಡಿಸಿದಾಗ ಎಲ್ಲರೂ ಪುನಃ ಕೆಲಸದ ಕಡೆಗೆ ಹಿಂದೆರಳಿದರು. ಈಗ ಈ ವೈಕೀಯ ಮುಖಂಡರ ಮೇಲೆ ಪೋಲೀಸ ಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿರುವದೆ. ಮುಷ್ಕರದವರ ಕಡೆಯಿಂದ ಗವರ್ನರ ಸಾಹೇಬರಿಗೆ ತಂತೀ ಮೂಲಕ ಮನವಿ ರವಾನಿಸಿಯದೆ. ಇದರಲ್ಲಿ ಗವರ್ನರ ದೊರೆಗಳು ತಮಗೆ ಸಹಾಯಮಾಡುತ್ತೇನೆಂದು ವಾಗ್ದತ್ತ ಕೊಟ್ಟ ಮೇಲೂ ರೈಲ್ವೆ ಏಜಂಟರು ಸಿಟ್ಟಿನಿಂದ ಕೆಲವರನ್ನು ದೂರಸ್ಥಳಗಳಿಗೆ ವರ್ಗಾಯಿಸಿ, ಕೆಲವರಿಗೆ ಕೆಲಸದಿಂದ ತಳ್ಳಿಹಾಕಿ, ಪೀಡಿಸುತ್ತಿದ್ದ ವಿನಹ ಈಗ ಒಬ್ಬನಿಗೆ ಪಿಸ್ತೂಲಿನ ಪೆಟ್ಟಿನಿಂದ ಗಾಯವಾಗಿದೆ, ಇದು ದೊಡ್ಡ ಅನ್ಯಾಯವೆಂದೂ ಇದನ್ನು ಗವರ್ನರ್ ಸಾಹೇಬರು ಪುನರ್ವಿಚಾರಣೆಗೆ ತಕ್ಕೊಳ್ಳಬೇಕೆಂದೂ ಇದೆ.

ಬರ್ಮಾ— ಬರ್ಮಾಮೆಡಿಕಲ್ ಸ್ಕೂಲಿನ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡುವದಕ್ಕಾಗಿ ಓನರೆಬಲ್ ಟಿನ್ಸೆಂಗ್, ಮ. ರಾ. ರಾ. ಎಸ್. ಆರ್. ರೆಡ್ಡಿಯಾರ್, ಮ. ರಾ. ರಾ. ಎಚ್. ಕೃಷ್ಣಪಿಳ್ಳೆ, ಈ ಮೂರು ಮಂದಿ ಒಟ್ಟೊಬ್ಬರು ೧೦೦೦ ರೂಪಾಯಿ ಮೇರೆಗೆ ಹಣಕೊಟ್ಟು ಅವರ ಒಪ್ಪಿಯಿಂದ ಇನಾಂ ಹಂಚಬೇಕಾಗಿ ಸೂಚಿಸಿದ್ದನ್ನು ಒಪ್ಪಿ ಸರಕಾರದವರು ಆ ಹಣವನ್ನು ಅಪ್ಪರ್ ಬರ್ಮಾ ಸೆಂಟ್ರಲ್ ಕೋಓಪರೇಟಿವ್ ಬೇಂಕಿನಲ್ಲಿ ಠೇವಣಾತಿಯಾಗಿ ಇರಗೊಡಿಸುವರು.

ಪೂನಾಮಲೆಯಲ್ಲಿ ವಾಸವಾಗಿರುವ ವಕೀಲ ಮ. ರಾ. ವೇದಾಚಲಯ್ಯರು (ಪೆಸ್ಸಿವ್ ರೆಸಿಸ್ಟೆನ್ಸ್) ಸತ್ಯಾಗ್ರಹದ ಚಳವಳವನ್ನು ೧೯೧೭ನೇ ಒಕ್ಟೋಬರ ತಾ. ೧ರಿಂದ ಆರಂಭಿಸಬೇಕೆಂದು ಕೂಡಿದ ಸಭೆಗಳಲ್ಲಿ ಉತ್ಸಾಹ ತೋರ್ಪಡಿಸಿದು ಇಂಥ ಚಳವಳವು ಮುಂದೆ ದಂಗೆ, ಮಾರಾಮಾರಿ, ಮುಂತಾದ ಅನಾಹುತಗಳಿಗೆ ಆಸ್ಪದ ಕೊಡಬಹುದೆಂಬ ಸಂದೇಹ ಹುಟ್ಟುವುದರಿಂದ ಈ ರೀತಿಯಾಗಿ ನಡೆಯುವುದಕ್ಕೆ ಪ್ರೋತ್ಸಾಹಮಾಡುವವರು ಸರಕಾರಿ ಕಾಯಿದೆಯ ಸರಿಯಾದ ಅಭಿಪ್ರಾಯವನ್ನು ವ್ಯವಹರಿಸುವುದಕ್ಕೆ ಅಯೋಗ್ಯರಾಗುತ್ತಾರೆಂಬ ಕಾರಣದಿಂದ ಅವರ ಸನದನ್ನು ಈ ವಿಷಯವಾಗಿ ಹೈಕೋರ್ಟಿನ ಇತ್ಯರ್ಥ ತಿಳಿಸುವ ವರೆಗೆ ಯಾತಕ್ಕೆ ಅಮಾನತು ಮಾಡಬಾರದೆಂಬದಕ್ಕೆ ಕಾರಣಗಳಿದ್ದರೆ ಅವನ್ನು ಇದೇ ೧೦ನೇ ತಾರೀಕಿಗೆ ಹಾಜರುಪಡಿಸಬೇಕೆಂಬದಾಗಿ ಸದರಿ ವೇದಾಚಲಯ್ಯರಿಗೆ ಚಿಂಗಲ್ಪಟ್ಟು ಜಿಲ್ಲೆಯ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರಿಂದ ನೋಟೀಸು ಕೊಡೋಣಾಗಿಯದೆ.

ಕಲ್ಕತ್ತ!— ಹಿಂದೂಸ್ಥಾನದ ಯುದ್ಧಫಂಡಿಗೆ ಆಗೋಸ್ಟು ೨೯ನೇ ತಾರೀಕು ವರೆಗೆ ಜಮಾ ರೂ. ೫೦,೩೩,೨೩,೮೮೫.

ಮದ್ರಾಸು:— ಇಂಡಿಯಾ ಡಿಫೆನ್ಸ್ ಫೋರ್ಸಿಗೆ ಮದ್ರಾಸು ಸಂಸ್ಥಾನದಲ್ಲಿ ಸಪ್ಟಂಬರ ೧ನೇ ತಾರೀಕು ವರೆಗೆ ದಾಖಲಾದವರ [illegible] ೧೭೮೮.

ದಕ್ಷಿಣ ಕನ್ನಡ.

ಬಂಟ್ವಾಳ:— ಇಲ್ಲಿ ಅಕ್ಕಿಯ ಕ್ರಯವು ದಿನೇ ದಿನೇ ಚಡಾವಾಗುತ್ತ ಬರುತ್ತದೆ. ಬಡವರ ವಿಷಯದಲ್ಲಿ ಯಾವದೊಂದು ತರದ ಸಹಾಯವು ಈ ಕಾಲದಲ್ಲಿ ತೋರದೆ ಇರುವದರಿಂದಲೂ ಈಗೀಗ ಅಕ್ಕಿಯ ಧಾರಣೆ ಏರುವದರಿಂದಲೂ ಬಡವರ ಕಷ್ಟ ಹೆಚ್ಚಾಗುತ್ತ ಬರುತ್ತದೆ.

ಇದೇ ಜೂನ್ ತಿಂಗಳಲ್ಲಿ ಇಲ್ಲಿಯ ಪಟ್ಟಣದ ಮೂಲೆಯಲ್ಲಿ ಪ್ಲೇಗ್‌ರೋಗವು ಪರದೆಯೊಳಗಿಂದ ಹಣಕಿನೋಡಿತು. ಈಗಲಾದರೋ ಪೇಟೆಯ ಮಧ್ಯಕ್ಕೆ ಬಂದು ತನ್ನ ರವಿಯನ್ನು ಸುತ್ತಲೂ ಬೀಸುಟುತ್ತದೆ. ಅಲ್ಲಲ್ಲಿ ಇಲಿಗಳು ಸಾಯುತ್ತ ಒಂದೆರಡು ಮರಣಗಳು ಉಂಟಾದವು. ಇದೇ ದಿನ ಡಿವಿಜನಲ್ ಆಫೀಸರರು ಬಂದು ಜನರಿಗೆ ಮುಂಜಾಗ್ರತೆಯನ್ನು ಬಹಳ ಹೇಳಿರುವರು.

ನಿಜವಾಗಿ ಅವರ ಅಭಿಪ್ರಾಯದಂತೆ ನಡಕೊಂಡರೆ ಜನರ ಹೆಚ್ಚಿನ ದುಃಖಕ್ಕೆ ಪಾತ್ರರಾಗಲಿಕ್ಕಿಲ್ಲ ಎಂತ ಹೇಳಬಹುದು. ಇಲ್ಲಿಯ ಜನ ಇಲಿಗಳ ಪತನವಾಗಲೀ ಪ್ಲೇಗ್ ಮರಣವಾಗಲಿ ಎಂದಿಗೂ ಆಗಗಿಸಬೇಕೆಂದೂ ಅಂಥ ಸಂದರ್ಭ ಸಂಭವಿಸಿದ್ದಲ್ಲಿ ಸರಕಾರದ ಒತ್ತಾಯವಿಲ್ಲದೆ ತಾವಾಗಿಯೇ ಮನೆಬಿಟ್ಟು ಸ್ವಲ್ಪ ಸಮಯಕ್ಕೆ ದೂರಹೋಗಬೇಕೆಂಬದು ಮರೆಯಬಾರದೆಂತಲೂ ಹೇಳಿರುತ್ತಾರೆ.

ಮನೆ ಮತ್ತು ಅಂಗಡಿಯ ಮುಂಭಾಗದ ಚಿರಂದಿಯ ಮೇಲೆ ಉದ್ದಕ್ಕೂ ಹಾಕಿರುವ ಪೆಟ್ಟಿಗೆ, ಕಲ್ಲುಗಳು ಇತ್ಯಾದಿಯನ್ನು ಒಂದು ಯಾರ್ಡಿನಷ್ಟು ಉದ್ದಕ್ಕೆ ಮಾತ್ರ ಬಿಟ್ಟರೆ ಸಾಕೆಂದೂ ಹೇಳಿಯುತ್ತಾರೆ. ಇದನ್ನು ತೆಗಿಸುವದಕ್ಕೆ ಮೇಜಿಸ್ಟ್ರೇಟರಿಗೆ ಹುಕುಂ ಸಹ ಕೊಟ್ಟಿರುತ್ತಾರೆ. ಅದಲ್ಲದೆ ಮನೆಯನ್ನೂ ಹಿತ್ತಲು ಇತ್ಯಾದಿ ಪರಿಸರವನ್ನೂ ಸ್ವಚ್ಛವಾಗಿ ಇರಗೊಡಿಸುವಹಾಗೆ ಇಲ್ಲಿಯ ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರವರಿಗೆ ಸೂಚನೆಯನ್ನು ಕೊಟ್ಟಿರುತ್ತಾರೆ. ಮತ್ತು ಕೋಟೆಗಳ ಮಾರ್ಗವನ್ನು ಗುಡಿಸುವದು ಮಾತ್ರವಲ್ಲದೆ ಚಿರಂದಿಗಳೂ ಮೆಟ್ಟಿಗಳ ಅಡಿಭಾಗ ಇತ್ಯಾದಿ ಗುಡಿಸಿ ಸ್ವಚ್ಛಮಾಡಬೇಕೆಂತಲೂ ಹುಕುಂ ಕೊಟ್ಟಿರುತ್ತಾರೆ.

ಊರಿನ ಜನರು ತಮ್ಮ ಮನೆಗಳಲ್ಲಿ ಗೂಡುಗಳನ್ನು ಇಟ್ಟು ಇಲಿಗಳನ್ನು ನಾಶಮಾಡಬೇಕು. ಸಣ್ಣ ಮನೆಯಲ್ಲಿ ದೊಡ್ಡ ಕುಟುಂಬ ಇರುವಂತೆ ಈ ಒಂದೂವರೆ ಮೈಲು ಉದ್ದ ಅರ್ಧ ಮೈಲು ಅಗಲವುಳ್ಳ ಊರಿನಲ್ಲಿ ಜನರು ಒತ್ತೊತ್ತಾಗಿ ಮನೆಮಠಗಳನ್ನು ಕಟ್ಟಿಕೊಂಡು, ಇರುವವರು ಮೇಲಿನ ಕಷ್ಟಬಂದಾಗ ಎಲ್ಲಿಗೆ ತಾನೆ ಹೋಗಬಹುದೆಂದು ಪ್ರತಿಒಬ್ಬರ ಚಿಂತೆಯಾಗಿದೆ. ಒಂದುವೇಳೆ ಐಶ್ವರ್ಯವಂತರು ಯಾವದೊಂದು ಏರ್ಪಾಡುಮಾಡದೆ ಇರಲಾರರು. ಆದರೆ ಬಡವರು ಹೋಗತಕ್ಕದ್ದೆಲ್ಲಿ! ಇದಕ್ಕಾಗಿ ದಯಾಳು ಸರಕಾರದವರು ನಮ್ಮ ಊರಿನ ಪಶ್ಚಿಮ ದಿಕ್ಕಿಗಿರುವ ಜೋಡುಮಾರ್ಗ ಎಂಬಲ್ಲಿ ಹಳೇ ಮಾರ್ಕೇಟು ಸ್ಥಳದಲ್ಲಿ ಕೆಲವು ಸೆಗ್ರಿಗೇಶನ್ ಕ್ಯಾಂಪು ಕಟ್ಟಿಸಿಕೊಟ್ಟರೆ ಹತ್ತು ದಿನದ ವರೆಗೆ ಅಲ್ಲಿ ಇರುವದಕ್ಕೆ ಜನರ ಆಕ್ಷೇಪ ಇರಲಿಕ್ಕಿಲ್ಲ.

ಬಂಟ್ವಾಳ ಮೇಜಸ್ಟ್ರೇಟು ಕೋರ್ಟ ಸರಹದ್ದಿಗೆ ಸೇರಿರುವ ಸ್ಥಳಗಳಲ್ಲಿ ಒಂದೆರಡು ವರ್ಷಗಳಲ್ಲಿ ಚೋರಶಕ್ತಿಯಿಂದ ಕಡಿದಿರುವ ನಂಬ್ರಗಳು ಸಾಧಾರಣ ೨೦ಕ್ಕಿಂತ ಹೆಚ್ಚಿರುವವು. ಇದೇ ವಾರದಲ್ಲಿ ಇಲ್ಲಿಂದ ಒಂದುಮೈಲು ದೂರಕ್ಕೆ ಒಬ್ಬ ಮಾಪಿಳ್ಳೆಯು ನಾಲ್ಕು ಜನರನ್ನು ಕತ್ತಿಯಿಂದ ಕಡದನೆಂತಲೂ ಒಬ್ಬ ಗರ್ಭಿಣಿ ಹೆಂಗಸೂ ಅವಳ ಮಗನೂ ಮೃತಪಟ್ಟರೆಂತಲೂ ಇಬ್ಬರು ಹಡುಗಿಯರು ಮೋದಂಡ [illegible] ಬಂದಿರುವದು.

ಮುಲ್ಕಿ— ನಂಬ್ರ ೧೦೬೭ನೇ ಮುಲ್ಕಿ ಪರಸ್ಪರ ಸಹಾಯಕ ಸಂಘದ ವಾರ್ಷಿಕ ಮಹಾಸಭೆಯು ತಾ ೧-೯-೧೯೧೭ನೇ ಶನಿವಾರ ಮುಲ್ಕಿ ಇಂಗ್ಲಿಷ ಶಾಲಾ ಕಟ್ಟೋಣದಲ್ಲಿ ಜರಗಿತು. ೭೦ ಜನ ಮೆಂಬರರು ಹಾಜರಿದ್ದರು. ಕೋಓಪರೇಟಿವ್ ಸಂಘಗಳ ಇನ್ಸ್‌ಪೆಕ್ಟರರವರು ಪಂಚಾಯತರ ವಿನಂತಿಯ ಮೇರೆಗೆ ಈ ಸಭೆಗೆ ದಯಮಾಡಿದ್ದರು. ಇದಲ್ಲದೆ ಬಡಜನರ ಹಿತಚಿಂತಕರೂ ಸಂಘದ ಪ್ರೋತ್ಸಾಹಕರೂ ಆಗಿದ್ದು ತಮ್ಮ ಹಣಗಳನ್ನು ಈ ಸಂಘದಲ್ಲಿ ಠೇವಣಾತಿ ಬಗ್ಗೆ ಇಟ್ಟಿರುವ ಮಹಾನುಭಾವರುಗಳ ಪೈಕಿ ಇಲ್ಲಿಯ ಸಬ್ ಅಸಿಸ್ಟೆಂಟ್ ಸರ್ಜನ್ ಮ. ರಾ. ರಾ. ಕೆ. ರಾಮರಾಯರೂ ಬಾಸೆಲ್ ಮಿಶನ್ ಸಭೆಪಾಲಕರಾದ ರೆವರೆಂಡ್ ಜತನ್ನರವರೂ ಪಟ್ಟಣದ ಇತರ ಕೆಲ ಮಾನ್ಯ ಗೃಹಸ್ಥರೂ ಕೂಡಾ ಚಿತ್ತೈಸಿದ್ದರು.

ಕಾಲೋಚಿತವಾದ ಇಂಪಾದ ಗಾಯನದೊಂದಿಗೆ ಸಮಾರಂಭವು ಉಪಕ್ರಮಿಸಿ ಕಾರ್ಯದರ್ಶಿಯವರು ಸೂಚಿಸಿದ ಮೇರೆಗೆ ರೆವರೆಂಡ್ ಫಾದರ್ ಎಮ್ ಮಿನೇಜಸ್‌ರವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಗತವರುಷದ ಆದಾಯ ವೆಚ್ಚಗಳೇ ಮೊದಲಾದ ವರದಿಯನ್ನು ಕಾರ್ಯದರ್ಶಿಯವರು ಓದಿ ಎಲ್ಲರಿಗೆ ಸ್ಪಷ್ಟವಾಗುವಂತೆ ಕನ್ನಡಭಾಷೆಯಲ್ಲಿ ವಿವರಿಸಿದರು. ಮೆಂಬರರುಗಳ ಠೇವಣಾತಿಗಳು ಸ್ವಲ್ಪವಾಗಿದ್ದಾಗ್ಯೂ ಊರಿನವರ ಠೇವಣಾತಿಗಳ ಹಣದಿಂದಲೆ ಸಂಘದ ಕೆಲ ಕಡಿಮೆ ಪೂರಾ ವಹಿವಾಟುಗಳೂ ಸೆಂಟ್ರಲ್ ಬೇಂಕಿನ ಹೆಚ್ಚು ಸಹಾಯವಿಲ್ಲದೆ ನಡೆಸಲಾಗುತ್ತವೆ ಎಂಬದೂ ಹೆಚ್ಚಾದ ಹಣವು ಕೃಷಿಯ ಬಗ್ಗೆ ವಿನಿಯೋಗಿಸಲ್ಪಡುತ್ತದೆ ಎಂಬದೂ ಸಂಘವು ಕ್ರಮೇಣ ವೃದ್ಧಿಯಾಗುತ್ತ ಬರುತ್ತದೆ ಎಂಬದೂ "ಪ್ರೋಟೆಸ"ನಲ್ಲಿ ಕಂಡುಬಂದ ಕ್ಲಿಷ್ಟಕರವಾದ ಸಂಗತಿಗಳಾಗಿದ್ದಾಗ್ಯೂ [illegible]

[illegible]

ನಂತರ ಹೊಸ ಪಂಚಾಯತದಾರರನ್ನು ಚುನಾಯಿಸಲಾಯಿತು. ಈ ಸಭೆಗೆ ಅಧ್ಯಕ್ಷರಾಗಿದ್ದ ರೆವರೆಂಡ್ ಫಾದರ್ ಮಿನೇಜಸ್‌ರವರನ್ನು ಪಂಚಾಯತರಲ್ಲೊಬ್ಬರಾಗಿ ಆರಿಸಲಾದದ್ದು ನಂತರ ಅವರನ್ನೇ ಸಂಘಕ್ಕೆ ಹೊಸ ಪ್ರೆಸಿಡೆಂಟರಾಗಿ ನೇಮಿಸಲಾದದ್ದು ಸಂಘದ ಮುಂದಿನ ಘನತೆಗೂ ಏಳಿಗೆಗೂ ಕಾರಣವಾಗುವದು ಎಂಬದು ಸರ್ವರ ನಿರೀಕ್ಷಣೆಯಾಗಿದೆ.

[illegible] ಸಂಘದ ಕೆಲವು ನಿಯಮಗಳನ್ನು ತಿದ್ದಲು ಮಾಡುವ ಕುರಿತೂ ಹೊಸ ನಿಯಮಗಳನ್ನು ಸೇರಿಸುವ ಕುರಿತೂ ಚರ್ಚಿಸಲಾಯಿತು. ಈ ಸಂಘದ [illegible] [illegible] ಸಂಘದ ಕಾರ್ಯನಿರ್ವಾಹಕ್ಕೆ [illegible] ಈ ಸಂಘವನ್ನು [illegible] ಹೋಬಳಿ, ಫಲ್ಗುಣಿ [illegible] ಗ್ರಾಮಗಳನ್ನು [illegible] ಅರ್ಧಭಾಗವನ್ನು [illegible] ಬಗ್ಗೆ [illegible] ನಿರ್ಣಯಿಸಲಾಯಿತು.

ಕಡೆಗೆ ಅಧ್ಯಕ್ಷರು ಸಭಿಕರಿಗೆ ಭಾಷಣಕೊಟ್ಟು ಬುದ್ಧಿವಾದಗಳನ್ನು ಹೇಳಿದ ನಂತರ ಎಲ್ಲರೂ [illegible] ಕೂಡಿದ ಸಭೆಗೆ ಕಾಂಟ್ರಿಬ್ಯೂಶನ್ [illegible] ಮುಕ್ತಾಯಿಸಲಾಯಿತು.

ಕಾಪು:— "ಸ್ವರಾಜ್ಯವೇ ನಾಮ್ಯವು" ಎಂದು ಸೂಚಿಸುವ ನೋಟೀಸುಗಳು ಇಲ್ಲಿಯ ಅಂಗಡಿಗೊಡೆಗಳಲ್ಲೂ ಮೋಟಾರ [illegible] ಗೋಡೆಗಳಲ್ಲೂ ಅಂಟಿಸಲ್ಪಟ್ಟಿವೆ.

ಹೋಮ್‌ರೂಲಿನ ಮೆಂಬರರುಗಳು ಇಲ್ಲಿಯ ಅನೇಕರಿದ್ದು [illegible] ಇದೇ ತಿಂಗಳ ೧೭ನೇ ತಾರೀಕಿನ ದಿನ ಮ. ರಾ. [illegible] ವಕೀಲ್ [illegible] ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗುವದಾಗಿ ಕೇಳುತ್ತೇವೆ.

ಎಸ್ಸಿಬಿಸೆಂಟರ ಸ್ಮಾರಕ ಫಂಡಿಗೆ ಇಲ್ಲಿಂದ ಕಾನಾರ್ಡ ಕೃಷ್ಣರಾಯರೂ ಮೋಟಾರು ಏಜಂಟರೂ ಬಹಳ ಶ್ರದ್ಧೆಯಿಂದ ಚಂದಾಹಣ ಸಂಗ್ರಹಿಸಿ ಮದ್ರಾಸಿಗೆ ಕಳುಹಿಸಿರುವರು.

ಮಹಮ್ಮದೀಯ, ಮಠದ ೪ ಜನರೊಳಗಿರುವ ಸುಮಾರು ೧೯೦೦೦ ರೂಪಾಯಿಗಳ [illegible] ಯಜಮಾನರು ಇತ್ಯರ್ಥಪಡಿಸಿರುವರು. ಪಂಚಾಯತಿಗೆಯು ರಾಜಿಯಿಂದ ಇತ್ಯರ್ಥ ಆದದ್ದಾದರೆ ಎಸಿಬಿಸೆಂಟರವರ ಫಂಡಿಗೆ ಪ್ರತಿ ಒಬ್ಬರು ರೂಪಾಯಿ ೧೦ರ ಪ್ರಕಾರ ಕೊಡಬೇಕೆಂಬ ಶರತ್ತು ಇದ್ದಿತ್ತು. ಆ ಪ್ರಕಾರ ನ್ಯಾಯತೀರಿದ ನಂತರ ಮಹಮ್ಮದೀಯರು ತಮ್ಮ ಸಂತೋಷದಿಂದ ರೂ. ೨೦ರ ಪ್ರಕಾರ ಕೊಟ್ಟು ಬಹಳ ಆನಂದದಿಂದ ತಮ್ಮ ಮನೆಗೆ ಹೋದರು. ಸದರಿ ಹಣವನ್ನೂ ಈ ಸಂಗತಿಯನ್ನೂ ಸೂಚಿಸಿ ಮದ್ರಾಸಿಗೆ ಕಳುಹಿಸಿದ್ದಲ್ಲಿ ಮ ರಾ ಸರ್. ಸುಬ್ರಮಣ್ಯ ಅಯ್ಯರವರು ಮಹಮ್ಮದೀಯರಿಗೆ ಕೃತಜ್ಞತಾಪೂರ್ವಕವಾದ ಸಂತೋಷ ಸೂಚನೆಯ ಕಾಗದವನ್ನು ಕಳುಹಿಸಿರುವರು.

ಈ ಊರಲ್ಲೇ ಬೆಳೆದು ಮದ್ರಾಸಿನಲ್ಲಿ ವಿದ್ಯಾಲಾಭವನ್ನು ಪಡೆದು ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟು ಸರಕಾರ ಕೆಲಸದಮೇಲೆ ವ ವಕೀಲವೃತ್ತಿಯ ಮೇಲೆ ಮನಸ್ಸುಕೊಡದೆ ಹೋದುರೂಲಿನ ಉಪಸೆಕ್ರೆಟರಿ ಸ್ಥಾನವನ್ನು ಮ ರಾ ಸಂಜೀವ ಕಮ್ತಿಯರವರು ವಹಿಸಿಕೊಂಡ ವಾರ್ತೆಯು ಈ ಪಟ್ಟಣದ ಸರ್ವರಿಗೂ ಆಹ್ಲಾದವಾಗಿದೆ. ಅಲ್ಲದೆ ಅವರು ಕೈಕೊಂಡ ವೃತ್ತಿಯಲ್ಲಿ ಶ್ರೀ ಭಗವಂತನು ಸಹಾಯವನ್ನಿಡಲಿ ಎಂದು ಪ್ರಾರ್ಥಿಸುತ್ತೇವೆ.

ಇಲ್ಲಿಯ ಬೋರ್ಡ ಕನ್ನಡ ಶಾಲೆಯಲ್ಲಿ ಕಳದ ತಿಂಗಳ ತಾ. [illegible] ಉಡುಪಿ ರೇಂಜ [illegible] ಸಬ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ ರಾ [illegible] ರಾಮರಾಯರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ [illegible] ಜರುಗಿತು. ಸುಮಾರು ೫೦ ಜನ ಉಪಾಧ್ಯಾಯರು ನೆರದಿದ್ದರು. ಸೂಚನಾ ಪತ್ರದ ಪ್ರಕಾರ ಸಭೆಯ ಸಂಗತಿಗಳೆಲ್ಲಾ ಆದನಂತರ ಬರುವ ಸಭೆಯು ಎರ್ಮಾಳ ಶಾಲೆಯಲ್ಲಿ ಇದೇ ತಿಂಗಳ ತಾ. ೨೨ನೇ ದಿನ ಜರುಗಬೇಕಾಗಿಯೂ ಪಾಂಗಾಳ ಹಿಂದೂ, ಮಲ್ಲಾರು ಬೋರ್ಡ ಹಿಂದೂಸ್ಥಾನೀ ಶಾಲಾ ಹೆಡ್ ಮಾಸ್ತರರು ಕೊಡಬೇಕಾದ ಪಾಠಗಳ ನಿರ್ಣಯವಾಗಿ ಸಭೆ ಕೊನೆಗೊಂಡಿತು.

ಅಕ್ಕಿಯ ಧಾರಣೆ ಏರುತ್ತ ಬಂದದ್ದರಿಂದ ಬಡಬಗ್ಗರ ಉಪಯೋಗಾರ್ಥವಾಗಿ ಇಲ್ಲಿಯ ಪೇಟೆಯ ಸಾಹುಕಾರರು ಮ ಗ್ರಾಮಪಟೇಲರು ಅಕ್ಕಿಯ ಒಂದೇ ಧಾರಣೆ ಮಾಡಿ ಬಡಬಗ್ಗರ ಗೋಳನ್ನು ತಪ್ಪಿಸಲು ತಕ್ಕ ದಾರಿಮಾಡುವದು ಉತ್ತಮವಲ್ಲವೇ

ದರ್ಬಾರ್ ಇನಾಂ ಪರೀಕ್ಷೆ ಉಡುಪಿ.

ಮಹಮ್ಮದಿ ಶಾಲೆಗಳ ಹುಡುಗರಿಗೆ ಉಡುಪಿ ಬೋರ್ಡ ಹಿಂದುಸ್ಥಾನಿ ಶಾಲೆಯಲ್ಲಿ ಅಕ್ಟೋಬರ ತಾರೀಕ ೩ನೇ ಮಂಗಳವಾರ ದಿವಸ ಬೆಳಿಗ್ಗೆ ಘಂಟೆ ೯ರಿಂದ ೧೨ರ ವರೆಗೂ ಮಧ್ಯಾಹ್ನ ಘಂಟೆ ೨ರಿಂದ ೪ರ ವರೆಗೆ (೧) ಅಮ್ಮಾಲೂಮಾತ್. (೨) ದೀನೀಯಾತ್. (೩) ಹಿಸಾಬ್ (೪) ಉರ್ದು. ಈ ವಿಷಯಗಳಲ್ಲಿ ಪರೀಕ್ಷೆ ನಡಿಸೋಣಾಗಿತ. ಮಹಮ್ಮದಿ ಶಾಲೆಯಿಂದ ೩ನೇ ದರ್ಜೆಯ ವಿದ್ಯಾರ್ಥಿಗಳು ಈ ಪರೀಕ್ಷೆಗೆ ನಿಲ್ಲಲಿಕ್ಕೆ ಅರ್ಹರಾಗಿರುತ್ತಾರೆ. ಈ ದರ್ಜೆಯಿಂದ ಮೂವರಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ಬಿಡೋಣಾಗಲಿಕ್ಕಿಲ್ಲ. ವಿದ್ಯಾರ್ಥಿಗಳು ಕಾಗದ, ಶ್ಯಾಹಿ, ವಗೈರೆ ತಾವೇ ಒದಗಿಸಿಕೊಳ್ಳಬೇಕು. ಪರೀಕ್ಷೆಗೆ ಬರಕೊಳ್ಳುವ ಅರ್ಜಿ ಹಿಂದುಸ್ಥಾನಿಯಿಂದ ಒಳ್ಳೇ ಅರ್ಥಶಾವು ಕಾಗದದಲ್ಲಿ ಕೆಳಗಿನ ನಿಶಾನೆಗಳನ್ನು ಮಾಡಿ ಭರಾಯಿಸಿ ಅಕ್ಟೋಬರ ತಾ. ೧ರ ಒಳಗೆ ಕೆಳಗಿನ ವಿಳಾಸಕ್ಕೆ ರವಾನಿಸಬೇಕು. (೧) ದಾಕ್ಲಿನ ನಂಬ್ರ (೨) ವಿದ್ಯಾರ್ಥಿಯ ಹೆಸರು. (೩) ಪ್ರಾಯ. (೪) ತಂದೆ ಯಾ ರಕ್ಷಕನ ಹೆಸರು. (೫) ಶಾಲೆಯ ಹೆಸರು. (೬) ದರ್ಜೆ. (೭) ಸದ್ರಿ ದರ್ಜೆಗೆ ದಾಕಲಾದ ತಾರೀಕು. (೮) ಸದ್ರಿ ಖಯಾಯತಿಗಳು. ಶಾಲಾ ರಿಜಿಸ್ಟರಿಗೆ ಸರಿಯಾಗಿದೆಯೆಂದು ಹೆಡ್‌ಮಾಸ್ತರರ ದಸ್ಕತು. ಈ ತಪಸೀಲುಗಳನ್ನು ಕಾಣಿಸಿ ಕೆಳಗೆ ದಸ್ಕತ ಹಾಕಿ ಅಕ್ಟೋಬರ ತಾ. ೧ರ ಒಳಗೆ ರವಾನಿಸಬೇಕು.

ಅರ್ಜಿ ಬರಕೊಳ್ಳುವ ವಿಳಾಸ:—

The Head Master,
MUHAMMADAN SCHOOL,
Udipi.

ನೋಟೀಸು.

ಯುನಿವರ್ಶಲ್ ಎಸ್ಸ್ಯುರೆನ್ಸ್ ಕಂಪೆನಿಯ ಮುಖ್ಯ ಏಜಂಟರು ಯಮ್. ಲಕ್ಷ್ಮಣರಾವ್ ಬ್ರದರ್ಸರು ಸದರಿ ಕಂಪೆನಿಯ ಎಲ್ಲಾ ಮೆಂಬರರಿಗೆ ತಿಳಿಯಪಡಿಸುವದೇನೆಂದರೆ:— ನಮ್ಮ ಏಜನ್ಸಿಯಲ್ಲಿ ಕಂಪೆನಿಯ ಸಮ್ಮಂಧ ಅನೇಕತರದ ತೊಂದರೆಗಳು ಬಂದು ಒದಗಿದ್ದರಿಂದ ಸದರಿ ಕಂಪೆನಿಯ ಕೆಲಸಕ್ಕೆ ನಾವು ಇದೇ ಕಳದ ಸೆಪ್ಟಂಬರ ತಾ. ೧ನೇಯಿಂದ ರಾಜಿನಾಮೆ ಕೊಟ್ಟಿರುತ್ತೇವೆ. ಆದುದರಿಂದ ಸಮ್ಮಂಧಪಟ್ಟ ಮೆಂಬರರು ಇನ್ನುಮುಂದೆ ಅವರ ಎಲ್ಲಾ ತರದ ವಹಿವಾಟುಗಳನ್ನು ಸೀದಾ ಕಂಪೆನಿ ಹೆಡ್ ಆಫೀಸಿನೊಡನೆ ಮಾಡಬೇಕಾಗಿಯದೆ.

ಎಮ್. ಲಕ್ಷ್ಮಣರಾವ್ ಬ್ರದರ್ಸ್,
ಉಡುಪಿ.

ಜೇನಸು ಧಾರಣೆ.

(ರಖಂ).

ಮುಸ್ಕಿ ಅಕ್ಕಿ	6— 8—0	ರಿಂದ	6—13—0
ಗುಡ್ಡ ಸುಗ್ಗಿ	6— 2—0	,,	6— 6—0
ರಾತಿ	5—14—0	,,	6— 0—6
ಅಪ್ಸಲ್ ಬೆಳ್ತಿಗೆ	6— 9—0	,,	6—12—0
ಗುಡು ಬೆಳ್ತಿಗೆ	6— 0—0	,,	6— 4—0
ರಂಗೂನು ಬೆಳ್ತಿಗೆ ಗೋಣಿ ೧ರ	10— 4—0	,,	10— 0—0
ಗೋಧಿ ಗೋಣಿ ೧ರ	20— 0—0	,,	20— 8—0
ಹುರುಳಿ ಗೋಣಿ ೧ರ	6—10—0	,,	7—12—0
ಕಡಲೆ ಗೋಣಿ ೧ರ ಬೊಂಬ್ಯ	9— 8—0	,,	10— 8—0
ತೊಗರಿ ಗೋಣಿ ೧ರ			10— [illegible]
ಕೊಗರದೆಗೆ ಗೋಣಿ೧ರ 11—0—0	12— 8—0	,,	15— 8—0
ಉದ್ದು ಗೋಣಿ ೧ರ	11— 0—0	,,	11—12—0
ಊರುಬೆಲ್ಲ ಖಂಡಿ ೧ರ		,,	45— 0—0
ಉಪ್ಪು ಗೋಣಿ ೧ರ		,,	5—14—0
ಕೊಬ್ಬರಿ ಖಂಡಿ ೧ರ	70— 0—0	,,	75— 0—0
ಬಾಪ್ಪಿಟಿಂಡಿ ಖಂಡಿ ೧ರ	23— 8—0	,,	23— 0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	28—12—0	,,	32— 8—0
ಕೊಬ್ಬರಿ ಎಣ್ಣೆ ಮುಡಿ ೧ರ	5— 4—0	,,	5—12—0
ಎಳ್ಳೆಣ್ಣೆ ಮುಡಿ ೧ರ(ಕುರಾಸನ)		,,	4—12—0
ಬಿಮಿನ ಎಣ್ಣೆ ಪೆಟ್ಟಿಗೆ ೧ರ	6—13—0	,,	7— 9—0
ಮೋರಿಸ್ ಸಕ್ಕರೆ ಮುಡಿ ೧ರ	5— 4—0	,,	5— 6—0
ಕಾಫಿ ಖಂಡಿ ೧ರ	160— 0—0	,,	165— 0—0
ಹೊಸಬೀಳಿಗೋಟು ಖಂಡಿ೧ರ	72— 0—0	,,	78— 0—0
ಗೇರುಬೀಜ ಮುಡಿ ೧ರ	1— 8—0	,,	1—10—0
ಕಬ್ಬಿಣ ಖಂಡಿ ೧ರ	105— 0—0	,,	110— 0—0
ತಾಂಬ್ರ ತಗಡು ಮುಡಿ ೧ರ	31— 0—0	,,	34— 8—0
ತಾಂಬ್ರ ಪಾತ್ರೆಗಳು ಮುಡಿ ೧ರ		,,	34— 0—0
ಚಿತ್ರ ಪೆಟ್ಟಿ ತೇಲು ೧ರ	23— 8—0	,,	25— 4—0
ಸಣ್ಣ ಹೆಸರು ಮುಡಿ ೧ರ		,,	5— 2—0
[illegible] ಖಂಡಿ೧ರ		,,	235— 0—0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಸ್ತ್ರೀಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳೂ ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ)ಯಿಂದ ಮೈಮೇಲೆ ಉಬ್ಬುವ ಚಿಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಹುಣ್ಣು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯಸಂದು ನೋವೋಣ, ಕೈಕಾಲು ಬಿಗಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕರೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯ ವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಶನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,
ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಬಿಲ್ಲೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

೨ ಮಿ. ಮೊಂಟೆಗ್ಯುಗಳ ಆಗಮನ, ಅಧಿಕಾರಿಗಳ ತುಂಟತನ . . . ,,

ಸ್ಫುಟವಿಚಾರಗಳು:—

೧ ಹಿಂದುಸ್ಥಾನದೊಳಗಿನ ಶಿಕ್ಷಣದ ಅಂಕೆಗಳ ಪಟ್ಟಿ . . . ,,

೨-೩ ವರಿಷ್ಠ ಕಾಯಿದೆಕೌನ್ಸಿಲಿನ ಪ್ರಸ್ತಾವಗಳು . . . ,,

ಸ್ಥಳೀಕ—ಮಂಗಳೂರು

ವರ್ತಮಾನ ಸಂಗ್ರಹಗಳು:—

೧ ಯೂರೋಪದ ಮಹಾಯುದ್ಧ . . . ೩

೨ ವಿದೇಶ ವೃತ್ತಾಂತ . . . ,,

೩ ಒಳದೇಶ ವರ್ತಮಾನ . . . ೩-೬

೪ ಬಾತಮಿಗಳು—ಪುತ್ತೂರು, ಬಂಟ್ವಾಳ, ಕುಂಬಳೆ . . . ,,

೫ ಒಬ್ಬ ಪ್ರೇಕ್ಷಕರಿಂದ-ಚಕ್ರಪಾಣಿ ದೇವಸ್ಥಾನದ ಕಡೆಯಿಂದ ವಿಜ್ಞಾಪನೆ ,,

ಸ್ವದೇಶಾಭಿಮಾನಿ.

ಶಕ ೧೮೩೯ ಅಧಿಕ ಆಶ್ವೀಜ ಶು. ೫ ಶುಕ್ರವಾರ.

ಸ್ವರಾಜ್ಯಸಾಧನೆಯ ಮುಖ್ಯ ಕರ್ತೃಗಳಾದ

ಮಿಸಿಸ್ ಎನ್ನಿಬಿಸೆಂಟ್ ಅರುಂಡೇಲ ವಾಡಿಯಾ

ಇವರ ಬಂಧವಿಮೋಚನೆಯು

ತಾ. 17ನೇ ಸೋಮವಾರ ನಡೆಯಿತು.

ಗ್ರಹಣಬಿಟ್ಟಿತು, ಮುಂದೆ ಏನು?

ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ ||

ಕಾಳಿದಾಸ.

ಈಗ ಎಷ್ಟೊ ಸಮಯದಿಂದ, ಎಷ್ಟೊ ಕಡೆಗಳಲ್ಲಿ, ಮಿಸೆಸ್ ಬಿಸೆಂಟರನ್ನು ಬಿಟ್ಟರು, ಈ ಅರ್ಥದ ತಂತಿ ಅವರಿಗೆ ಬಂದಿದೆ, ಇವರಿಗೆ ಬಂದಿದೆ, ಇನ್ನೊಬ್ಬರಿಗೆ ಪತ್ರ ಬಂದಿದೆ ಎಂಬುದಾಗಿ ಜನವಾರ್ತೆಯೂ ಹಬ್ಬಿಕೊಳ್ಳುತ್ತಲೆ ಇತ್ತು. ಆದರೆ ಅದು ಎಷ್ಟೊ ಸಾರಿ ಸುಳ್ಳಾಗಿಯೂ ಹೋಗುತ್ತಿತ್ತು. ಪರಂತು ಈ ಸಾರಿ ಮಾತ್ರ ಆ ಶುಭವರ್ತಮಾನವು ಸತ್ಯವಾಗಿದೆ. ಕಾರಣ, ಮಿಸೆಸ್ ಎನಿಬಿಸೆಂಟ ಮತ್ತು ಮೆಸರ್ಸ್ ಅರುಂಡೇಲ್ ಹಾಗು ವಾಡಿಯಾ ಈ ಮೂವರನ್ನು ಮದ್ರಾಸ ಸರಕಾರವು ವರಿಷ್ಠ ಸರಕಾರದ ಸೂಚನೆಯ ಮೇರೆಗೆ ಮೊನ್ನೆಯ ಸೋಮವಾರ ರಾತ್ರಿ ೧೧ ಘಂಟೆಯ ಸಮಯದಲ್ಲಿ ಪ್ರತಿಬಂಧದಿಂದ ಬಿಡುಗಡೆ ಮಾಡಿ ತನ್ನ ಹಿಂದಿನ ಹುಕುಮನ್ನು ಹಿಂದಕ್ಕೆ ತಕ್ಕೊಂಡಿದೆ ಎಂಬುದನ್ನು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ. ಮತ್ತು ಈ ಬಗ್ಗೆ ನಾವು ವರಿಷ್ಠ ಸರಕಾರಕ್ಕಿಂತಲೂ ಮದ್ರಾಸ ಸರಕಾರವನ್ನು ಹೆಚ್ಚಾಗಿ ಅಭಿನಂದಿಸುತ್ತೇವೆ. ಐಯರ್ಲಂಡಿಗೆ ಹೋಮ್‌ರೂಲನ್ನು ಕೊಡಲು ಆಯಾ ಪಕ್ಷಗಳ ಸಂಗನಮತದಿಂದ ಐರಿಶ್ ಹೋಮ್‌ರೂಲಿನ ಒಂದು ನಿಶ್ಚಿತ ಸ್ವರೂಪವನ್ನು ನಿರ್ಣಯಿಸುವದಕ್ಕಾಗಿ ಮುಖ್ಯ ಪ್ರಧಾನರು ಪಾರ್ಲಿಮೆಂಟಿನ ಸಮ್ಮತಿಯನ್ನು ಪ್ರಕಟಿಸಿ ಐರ್ಲಂಡದೊಳಗಿನ ಸಿನ್‌ಫೆನರ್ಸ್ (ದಂಗೆಕೋರ)ರನ್ನು ಸಹ ಯಾವ ದಿವಸ ಬಂಧಮುಕ್ತ ಮಾಡಿದರೊ ಅದೆ ದಿವಸ ದುರ್ದೈವದಿಂದ ನಮ್ಮ ಮದ್ರಾಸ ಸರಕಾರವು ಇಲ್ಲಿ ಎನಿಬಿಸೆಂಟ ಪ್ರಭೃತಿಗಳನ್ನು ಪ್ರತಿಬಂಧದಲ್ಲಿ ಹಾಕಿತ್ತು! ಆದರೆ ಮಿ. ಮೊಂಟೆಗ್ಯೂಗಳ ಆಗಮನದ ನಿಮಿತ್ತದಿಂದ ಅದು ಅವರ ಪ್ರತಿಬಂಧವನ್ನು ಈಗ ಕಳಚಿದೆ. ಇದರ ಶ್ರೇಯಸ್ಸನ್ನು ಜನತೆಯಿಂದ ವ್ಯಕ್ತವಾಗುತ್ತಿದ್ದ ಅಜಸ್ರ ನಿವೇದನಕ್ಕೆ ಕೊಡುವುದು ಒಂದು ವೇಳೆ ಕೆಲವರಿಗೆ ಇಷ್ಟವಿಲ್ಲದಿದ್ದರೆ ನಮಗೂ ಅದರಲ್ಲಿ ಆಗ್ರಹವಿಲ್ಲ. ಪ್ರತಿಬಂಧದ ದೂಷಣಕ್ಕೆ ಅಧಿಕಾರಿಗಳು ಹೊಣೆಗಾರರಾಗುವುದಾದರೆ ಮುಕ್ತತೆಯ ಶ್ರೇಯಸ್ಸಿಗೂ ಅವರೆ ಪಾತ್ರರಾಗಲಿ. ಎಂತೂ ಈ ಗ್ರಹಣವು ಬಿಟ್ಟುಹೋಯಿತು. ಇದು ಎಲ್ಲರಿಗೂ ಸಂತೋಷಾಸ್ಪದವಾದ ಮಾತು. ಪ್ರತಿಬಂಧದ ಮೂಲಕ ವ್ಯಕ್ತಿಗಳ ಸ್ವಾತಂತ್ರ್ಯವು ಸಂಪುಷ್ಟದಲ್ಲಿ ಬರುವುದರಿಂದ ಆ ಪ್ರತಿಬಂಧವು ಹೋದ ಮೇಲೆ ವ್ಯಕ್ತಿಗಳಿಗೆ ಆನಂದವುಂಟಾಗುವುದು ಮತ್ತು ಅವರ ಮಿತ್ರವರ್ಗಕ್ಕೆ ಸಂತೋಷವಾಗುವುದು ಸಾಹಜಿಕವಾಗಿದೆ. ಈ ದೃಷ್ಟಿಯಿಂದ ಮಿಸೆಸ್ ಎನಿಬಿಸೆಂಟ ಪ್ರಭೃತಿಗಳನ್ನು ಅಭಿನಂದಿಸುವುದು ಈ ಪ್ರಸಂಗದಲ್ಲಿ ಯುಕ್ತವೆ ಸರಿ. ತಥಾಪಿ ಬಿಸೆಂಟರು ದೇಶದ ಯಾವ ಧ್ಯೇಯವನ್ನು ಸಂಪಾದಿಸಲು ಬದ್ಧದೀಕ್ಷಿತರಾಗಿದ್ದರೊ ಮತ್ತು ಆಗಿರುವರೊ ಆ ಧ್ಯೇಯದ ಹಾದಿಯಲ್ಲಿ ಇವರ ಪ್ರತಿಬಂಧದಿಂದ ಒಂದು ತರದ ಅಡಚಣಿಗಳು ಬಂದು ಹೋಗಿದ್ದವು, ಅವರ ಸನ್ನದಶೀರ ವಾಗ್ಗೂಢ ಅಧಿಕಾರಿಗಳ ಸಂಶಯದೃಷ್ಟಿಯ ಮಂಜಿನಿಂದ ಮುಸುಕಿ ಬಿದ್ದಿತು. ಆದರೆ ಈಗ ಆ ಮಂಜು ಕರಗಿಹೋಗಿ ಪುನಃ ಆ ಧ್ಯೇಯವಾಗಲಿ ಆ ಸನ್ನದಶೀರ ಸಾಧನಗಳಾಗಲಿ ನಿರಾಕ್ಷೇಪಕರವಾಗಿದ್ದಾವೆ ಎಂಬುದು ಈ ಬಿಡುಗಡೆಯಿಂದ ತಿಳಿಯಲು ಯಾವ ಸಂಕೋಚವೂ ಇಲ್ಲ. ಈ ದೃಷ್ಟಿಯಿಂದ ಬರೆ ಪ್ರತಿಬದ್ಧ ವ್ಯಕ್ತಿಗಳ ಬಿಡುಗಡೆಯ ಬಗ್ಗೆ ಸಂತೋಷಪಡುವುದಕ್ಕಿಂತ ಧ್ಯೇಯದ ಸತ್ಯತ್ವ ಹಾಗು ಸನ್ನದಶೀರ ಸಾಧನಗಳ ನಿರಪವಾದತೆಗಳ ಬಗ್ಗೆ ಸಂತೋಷಪಡುವುದು ಯುಕ್ತವಾಗಿದೆ. ಮತ್ತು ಇದೆ ಕಾರಣದಿಂದ ಈ ಹೊತ್ತು ಹಿಂದುಸ್ಥಾನದ ಈ ಮೂಲೆಯಿಂದ ಆ ಮೂಲೆಯ ವರೆಗೆ ಎಲ್ಲ ಕಡೆಗಳಲ್ಲಿ ಆನಂದವು ತುಂಬಿಹೋಗಿದೆ. ಕ್ಲೇಶವು ಒಮ್ಮೆ ಬಂದು ಅನಂತರ ಇಷ್ಟಫಲವು ಪ್ರಾಪ್ತವಾದರೆ ಮೊದಲಿನ ಕ್ಲೇಶದ ಗಣನೆಯೆ ಇರದು; ಅದು ಪುನಃ ಹೊಸತಾಗಿಯೆ ಇರುವುದು ಎಂದು ಕಾಳಿದಾಸನು ಹೇಳುವಂತೆ ಈ ಹೊತ್ತಿನ ಆನಂದವು ಪರಮಾವಧಿಯನ್ನು ಹೊಂದಿದೆ. ಮಾತ್ರವಲ್ಲ, ಮೆಸರ್ಸ್ ಮಹಮ್ಮದ ಅಲಿ, ಶೌಕತ್ ಅಲಿ ಈ ಸಹೋದರರ ಹಾಗು ಬಂಗಾಲದಲ್ಲಿಯ ೫೦೦ ರಾಜಕೀಯ ಕೈದಿಗಳ ಬೇಗನೆ ಆಗಲಿಕ್ಕಿದ್ದ ಮುಕ್ತತೆಯಿಂದ ಈಗಲೆ ತುಂಬಿಹೋದ ಆನಂದವು ಇನ್ನೂ ದ್ವಿಗುಣಿತವಾಗದೆ ಇರದು. ಇರಲಿ, ಗ್ರಹಣವಾದುದರಿಂದ ಉಂಟಾಗುವ ವ್ಯಸನವಾಗಲಿ, ಅದು ಬಿಟ್ಟುಹೋಗುವುದರಿಂದ ಆಗುವ ಆನಂದವಾಗಲಿ ಈ ಎರಡೂ ಮನೋವೃತ್ತಿಗಳು ಕ್ಷಣಿಕವೆ ಸರಿ. ಆವೆ ವೃತ್ತಿಗಳಲ್ಲಿ ಯಾವಾಗಲೂ ಮುಳುಗಿಹೋಗುವುದು ಪುರುಷ ಲಕ್ಷಣವಲ್ಲ. ಗ್ರಹಣ ಬಿಟ್ಟಿತು, ಆನಂದವಾಯಿತು, ಆದರೆ ಮುಂದೆ ಏನು? ಈ ಆನಂದದ ಪರಮಾವಧಿಯ ಅನುಭವಿಸುತ್ತ ನಾವು ಕುಳಿತುಕೊಳ್ಳುವುದೆ? ಅಥವಾ ಬೇರೆ ಏನಾದರೂ ಕರ್ತವ್ಯವಿದೆಯೆ? ನಾಳೆ ಮಿ. ಮೊಂಟೆಗ್ಯೂಗಳು ಹಿಂದೂಸ್ಥಾನವನ್ನು ಸಂದರ್ಶಿಸಲು ಬರುವರು. ಅವರ ಮುಂದೆ ನಮ್ಮ ಧ್ಯೇಯವನ್ನು—ಅಂತರ್ಗತ ಸ್ವರಾಜ್ಯವನ್ನು ಯಾವ ಯಾವ ರೀತಿಯಿಂದ ಇಡಬೇಕು, ಹಿಂದೀದೇಶದ ಈ ಸ್ವರಾಜ್ಯಸಾಧನಕ್ಕಾಗಿ ಕಷ್ಟಪಟ್ಟ ಮಿಸೆಸ್ ಬಿಸೆಂಟರನ್ನು ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನದಲ್ಲಿಟ್ಟು ಅವರ ಪರಿಮುಖದಿಂದಲೆ ಮಿ. ಮೊಂಟೆಗ್ಯೂಗಳಿಗೆ ಮಾತಾಡಿಸುವುದು ಹೇಗೆ ಅಗತ್ಯವಿದೆ ಈ ಮುಂತಾದ ಮಹತ್ವದ ಸಂಗತಿಗಳನ್ನು ನಮ್ಮ ಮುಖಂಡರು ಈಗ ಆಲೋಚಿಸುವುದು ಕಾಲ ಪ್ರಾಪ್ತವಾಗಿದೆ. ಈ ವಿಷಯದ ನಮ್ಮ ಆಲೋಚನೆಗಳನ್ನು ಸ್ಥಲಸಂಕೋಚದ ದೆಸೆಯಿಂದ ಬರುವ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

~~~~~~

ಮಿ| ಮೊಂಟೆಗ್ಯೂಗಳ ಆಗಮನ, ಅಧಿಕಾರಿಗಳ ತುಂಟತನ.

ಭಾರತಮಂತ್ರಿಗಳಾದ ಮಿ| ಮೊಂಟೆಗ್ಯೂಗಳು ಹಿಂದುಸ್ಥಾನವನ್ನು ಸಂದರ್ಶಿಸಲು ಬರುವವರಿದ್ದಾರೆ. ಸದ್ಯ ಸಾಧಾರಣ ೬೦-೭೦ ವರ್ಷಗಳ ಈಚೆ ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯು ಸ್ವತಃ ತಾನು ಬಂದು ಹಿಂದುಸ್ಥಾನವನ್ನು ಸಂದರ್ಶಿಸಿದ ಪ್ರಸಂಗವು ಇಲ್ಲ, ಒಂದುವೇಳೆ ಬಾದಶಹಾರಾದರೂ ಬಂದು ತಮ್ಮ ಪ್ರಜೆಗಳಿಗೆ ದರ್ಶನವನ್ನು ಕೊಟ್ಟು ಹೋಗುತ್ತಾರೆ, ಆದರೆ ಹಿಂದುಸ್ಥಾನದ ರಾಜಕಾರಣದ ಸರ್ವಸತ್ತಾಧಾರಿಯಾದ ಭಾರತಮಂತ್ರಿಯು ಇಷ್ಟರವರೆಗೆ ಬಂದುದಿಲ್ಲ. ಈಗ ಮಿ| ಮೊಂಟೆಗ್ಯೂಗಳು ಬರುವವರಿದ್ದುದರಿಂದ ಈ ಪ್ರಸಂಗವು ಹಿಂದುಸ್ಥಾನದ ಇತಿಹಾಸದಲ್ಲಿ ಅಪೂರ್ವವಾದುದೆ ಸರಿ. ಆದುದರಿಂದ ಇಂಥ ಪ್ರಸಂಗದಲ್ಲಿ ಹಿಂದುಸ್ಥಾನದ ಜನತೆಯೂ ಆ ಜನತೆಯ ಮುಖಂಡರು ಮತ್ತು ಅವರ ಸಂಸ್ಥೆಗಳೂ ತಮ್ಮ ಪೂರ್ವಗ್ರಹವನ್ನೆಲ್ಲ ಮರೆತುಬಿಟ್ಟು ಸರಕಾರದೊಡನೆ ಸಹಕಾರ್ಯದಿಂದ ನಡೆದುಕೊಳ್ಳಬೇಕು, ಅಶಸ್ತ್ರಪ್ರತಿಕಾರ ಅಥವಾ ಸತ್ಯಾಗ್ರಹದಂಥ ತೀವ್ರ ಉಪಾಯವನ್ನು ಕೈಕೊಂಡು ಮಿ| ಮೊಂಟೆಗ್ಯೂಗಳ ಮನಸ್ಸನ್ನು ಕೆಡಿಸಬಾರದು, ಒಂದೆ ಮಾತಿನಿಂದ ಮೊಂಟೆಗ್ಯೂ ದೊರೆಗಳ ಆಗಮನಕಾಲದಲ್ಲಿ ಇಲ್ಲಿಯ ರಾಜಕೀಯ ವಾತಾವರಣವು ನಿರಭ್ರವಾಗಿಯೂ ಶಾಂತವಾಗಿಯೂ ಇರಬೇಕು ಎಂಬುದಾಗಿ ಆಂಗ್ಲೊ ಇಂಡಿಯನರೂ ಮತ್ತು ನಮ್ಮಲ್ಲಿಯ ವಿಚಾರವಂತರಾದ ಎಷ್ಟೊ ಮುಖಂಡರೂ ವಾದಿಸುತ್ತಿದ್ದರು, ಮಾತ್ರವಲ್ಲ ಮೊನ್ನೆ ವರಿಷ್ಠಕೌನ್ಸಿಲಿನ ತಮ್ಮ ಪ್ರಾಥಮಿಕ ಭಾಷಣದ ಅಂತ್ಯದಲ್ಲಿ ಇದೆ ಉದಾರತತ್ವವನ್ನು ವೈಸರಾಯಪ್ರಭುಗಳು ಉಚ್ಚರಿಸಿ ಅಧಿಕಾರಿಗಳ ಬೇಜವಾಬದಾರವಾದ ಕೃತ್ಯಗಳಿಂದ ಕಲಕಿಹೋದ ಜನತೆಯ ಮನಸ್ಸನ್ನು ಸಮಾಧಾನಪಡಿಸಿದ್ದಾರೆ ಮಾತ್ರ, ಅದೆ ಕೌನ್ಸಿಲಿನಲ್ಲಿ ಅದೆ ವೈಸರಾಯರ ಕೈಕೆಳಗಿನ ಅಧಿಕಾರಿಗಳಾದ ಪಂಜಾಬದ ಲೆ. ಗವರ್ನರರು ತಮ್ಮ ಮಾತಿನಿಂದ ಲೋಕಪಕ್ಷದ ಧಿಕ್ಕಾರವನ್ನು ವ್ಯಕ್ತಪಡಿಸಿರುವುದು ತುಂಬಾ ವಿಚಿತ್ರವಾಗಿದೆ. ವೈಸರಾಯಪ್ರಭುಗಳು ಲೋಕಮತದ ಪ್ರತಿನಿಧಿಗಳನ್ನು ಕುರಿತು 'ನಿಮ್ಮ ರಾಷ್ಟ್ರದ ಅಂತಿಮಧ್ಯೇಯವು ಅಂತರ್ಗತ ಸ್ವರಾಜ್ಯವೆಂಬುದಕ್ಕೆ ವಿವಾದವಿಲ್ಲ, ಆ ಉದ್ದಿಷ್ಟವನ್ನು ನಾವೂ ನೀವೂ ಕೂಡಿ ಸಹಕಾರ್ಯದಿಂದ ಸಾಧಿಸೋಣ, ಆಗಂತುಕ ವೈಮನಸ್ಯವನ್ನು ಬಿಟ್ಟುಬಿಡಿರಿ' ಎಂಬುದಾಗಿ ಉಚ್ಚರಿಸಿದ ಶಬ್ದಗಳ ಪ್ರತಿಧ್ವನಿಯು ಕೌನ್ಸಿಲಿನ ಹೋಲಿನಲ್ಲಿ ಇನ್ನೂ ತುಂಬಿಕೊಂಡಿರುವಾಗ ಅದೆ ಕೌನ್ಸಿಲಿನಲ್ಲಿ ಸರ್. ಮಾಯ್ಕಲ್ ಓಡಿಯರವರಂಥ ಲೆಫ್ಟಿನೆಂಟ ಗವರ್ನರರು 'ತಾನು ಲೋಕಮತವನ್ನು ತಿರಸ್ಕರಿಸಲು ಮಾತಾಡುತ್ತಿದ್ದೇನೆ' ಎಂದೀ ಭಾವನೆಯಿಂದ ವಿಷವನ್ನು ಕಾರಿದರೂ ಅದು ನಿಜವಾಗಿ ಲೋಕಮತಕ್ಕೆ ಅಪಮಾನದ ಸಂಗತಿಯಲ್ಲ, ವೈಸರಾಯರಿಗೆನೆ ಉಪಮರ್ದಕಾರಕವಾದುದು. ಪ್ರತ್ಯಕ್ಷ ಯಜಮಾನನು ಜನತೆಯ ಸಹಕಾರ್ಯವನ್ನು ಕೇಳುತ್ತಿರುವಾಗ ಅವನ ಕೈಕೆಳಗಿದ್ದವನು ಬಂದವರನ್ನು ದೂರಕ್ಕೆ ಅಟ್ಟಿಬಿಡುವುದು ಬಂದವರ ಅವಮಾನವೊ, ಸ್ವತಃ ಯಜಮಾನನ ಅವಮಾನವೊ! ಈ ಬಹು ಕುತೂಹಲವಾದ ಸಂಗತಿಯು ಕೂಡ ಸರ್. ಓಡಿಯರವರ ಧ್ಯಾನದಲ್ಲಿ ಬರಲಿಲ್ಲ! ಇವರ ಭಾಷಣದ ಅಲ್ಪ ಸಾರಾಂಶವು ಈ ಪತ್ರಿಕೆಯ ಸ್ಫುಟವಿಚಾರದಲ್ಲಿ ಪ್ರಕಟಿಸಿಯದೆ. ಅದನ್ನು ನೋಡಿದರೆ ಅದರಲ್ಲಿ ಹಿಂದುಸ್ಥಾನದೊಳಗಿನ ಬ್ಯುರೊಕ್ರಸಿಯ [illegible] ಕಾಣುತ್ತಿರುವುದು ಕಂಡುಬರುವುದು. ಸರ್. ಮಾಯ್ಕಲರು ಕಳೆದ ನಾಲ್ಕು ವರ್ಷಗಳಿಂದ ಕೌನ್ಸಿಲಿನಲ್ಲಿ ಏನೂ ಮಾತಾಡುತ್ತಿದ್ದಿಲ್ಲವಂತೆ, ಇಂಥವರು ಬರೆ ೫೦ ನಿಮಿಷ ಮಾತಾಡಿದರೆ ಅದೊಂದು ವಿಶೇಷ ಸಂಗತಿಯೆ? ಅಲ್ಲ. ಆದರೆ ಈ ಮಹಾತ್ಮರು ಇನ್ನೂ ನಾಲ್ಕಾರು ವರ್ಷಗಳತನಕ ಭಾಷಣ ಮಾಡದೆ ಸುಮ್ಮನೆ ಕುಳಿತು, ಕೊನೆಗೆ ಒಂದು ದಿನ ಈ ದೀರ್ಘ ಅವಧಿಯ ಮೌನದ ಬಾಡಿಗೆಯನ್ನು ಭರಾಯಿಸಲು ಎರಡು ಮೂರು ಘಂಟೆ ತನಕ ಬಾಯಿಯಿಂದ ವಿಷದ ತುಂತುರೆಗಳನ್ನು ಹಾರಿಸಲು ಉಪಕ್ರಮಿಸಿದರೆ ಅದೂ ಒಂದು ತರ್ಕಶಾಸ್ತ್ರಕ್ಕೆ ಸಮ್ಮತವಾದ ವಿಷಯವೆ ಅದೀತಲ್ಲವೆ? ಇಂಥವರ ಪಾಲಿಗೆ ಎರಡು ಮೂರು ಘಂಟೆಯ ಭಾಷಣವು ಬರುವುದೆಂದರೆ ನಮ್ಮ ಕೇಳುವವರ ದುರ್ದೈವವೆ ಸರಿ. ಕಾರಣ, ಮೊನ್ನೆಯ ಭಾಷಣವು ಬರೆ ೫೦ ನಿಮಿಷದ್ದಾದರೂ ಅದು ಹಿಂದುಸ್ಥಾನದೊಳಗಿನ ೫೦ ಲಕ್ಷಕ್ಕಿಂತ ಹೆಚ್ಚು ಜನರ ಮನಸ್ಸನ್ನು ನೋಯಿಸಿಬಿಟ್ಟಿದೆ. ಇವರ ಆ ಭಾಷಣವು ಕಹಿಯಾಗಿದ್ದರೂ ಸತ್ಯಪೂರ್ಣವಾದುದಾದರೂ ಇರಬೇಕಿತ್ತು. ಆದರೆ ಆ ಭಾಷಣದಲ್ಲಿ ಸತ್ಯವಿಲ್ಲ, ಯುಕ್ತಿ ಇಲ್ಲ, ನ್ಯಾಯಪ್ರಿಯತೆ ಇಲ್ಲ, ಸಹಾನುಭೂತಿ ಇಲ್ಲ, ಏನೂ ಇಲ್ಲ. "ಅದು ನೇತಿ ನೇತಿ" ಎಂದು ಹೇಳಿದಹಾಗಾಗಿದೆ. ಆ ಭಾಷಣದಲ್ಲಿ ಇದ್ದ ಅಂಶವನ್ನು ತೋರಿಸುವುದಾದರೆ ಅದರಲ್ಲಿ ಕುಟಿಲವಾದ ರಾಜನೀತಿಯು ಮೂರ್ತಿಮಂತವಾಗಿ ಕಂಡುಬರುವುದು. ಕನ್ಯಾಕುಮಾರಿಯಿಂದ ಹಿಮಾಲಯದವರೆಗಿನ ವಿಸ್ತೃತವಾದ ಈ ಭೂಖಂಡವು ಒಂದೆ ಭಾವನೆಯಿಂದ ನಿಗಡಿತವಾಗಿಹೋಗಿದ್ದ, ಅದರಲ್ಲಿ ಪಂಜಾಬನ್ನು ಬೇರೆಯಾಗಿ ತೆಗೆಯಲು ಯತ್ನಿಸುವುದು ಕುಟಿಲರಾಜನೀತಿಗೆ ಮಾತ್ರ ಒಪ್ಪುವುದು. ಪಂಜಾಬದವರನ್ನು ಹೊಗಳಿದ್ದಂತೆ ಮಾಡಿ ಅವರ ರಾಜನಿಷ್ಠೆಯ ಸ್ತುತಿಸ್ತೋತ್ರಗಳನ್ನು ಹಾಡಿ ಪರಪ್ರಾಂತಸ್ಥರನ್ನು ದೂಷಿಸುವುದು ಭೇದೋಪಾಯದ ಲಕ್ಷಣವೆ ಅಲ್ಲದೆ ಈ ದ್ವೈತದಿಂದ ಪಂಜಾಬಿಗಾದರೂ ಯಾವ ಲಾಭವಿದೆ? ಪಂಜಾಬವು ಈ ಯುದ್ಧದಲ್ಲಿ ನಿಮಗೆ ಅಮೂಲ್ಯ ಸಾಹಾಯ್ಯವನ್ನು ಕೊಟ್ಟಿದೆ; ಆದರೆ ಅದಕ್ಕೆ ನೀವು ಯಾವ ಪ್ರತಿಫಲವನ್ನು ಕೊಟ್ಟಿರುವಿರಿ? ಅಥವಾ ಇನ್ನು ಮುಂದೆ ಕೊಡಲಿಕ್ಕಿರುವಿರಿ? ಅಂತರ್ಗತ ಸ್ವರಾಜ್ಯದ ಧ್ಯೇಯವೂ, ಆ ಧ್ಯೇಯ ಸಿದ್ಧ್ಯರ್ಥ ಕೈಕೊಳ್ಳುವ ಸೌಮ್ಯ ಮತ್ತು ಕಾಯಿದೆಶೀರ ಹಾಗು ಶಿಕ್ಷಣಾತ್ಮಕ ಉಪಾಯಗಳು, ನಿಮ್ಮ ದೃಷ್ಟಿಯಿಂದ ಅರಾಜಕತ್ವವನ್ನು ಬೆಳೆಸುವ ಸಂಗತಿಗಳು, ಕತ್ತಿ, ಕೋವಿ, ಬೊಂಬು ಮೊದಲಾದ ಸಾಧನಗಳ ಇವು ಎಂದು ಯಾವ ಸಂಕೋಚವೂ ಇಲ್ಲದೆ, ಸಾರಾಸಾರ ವಿಚಾರವನ್ನೂ ಮನಸ್ಸಿಗೆ ತಾರದೆ ಅಭಿತೋರಿಸುವವರಾದ ನೀವು ಆ ಪಂಜಾಬಿಗೆ ನಾಳೆ ಯಾವುದನ್ನು ಕೊಡುವುದೆಂಬೊ ಅದು ಈಗಲೆ ನಿಮ್ಮ ಮಾತಿನಿಂದ ಗೊತ್ತಾಗುವುದು. ಸತ್ಯಾಗ್ರಹದ ಶಿಷ್ಟಸಮ್ಮತವಾದ ತತ್ವವನ್ನು ಉಪದೇಶಿಸುವವರಿಗೆ ಬೈಯುವ ನೆವದಿಂದ "ಕೌನ್ಸಿಲಿನಲ್ಲಿ ರಾಜಭಕ್ತಿಯ ಶಪಥವನ್ನು ತೆಕ್ಕೊಂಡು ಹೊರಗೆ ಅದಕ್ಕೆ ವಿರೋಧವಾದ ಕೃತ್ಯವನ್ನು ನಡಿಸುತ್ತಾರೆಂದು ಮಾನ್ಯರಾದ ಸಭಾಸದರಿಗೆ ಬೈಯುವವರಾದ ನೀವು ಪಂಜಾಬದ ಉಪಕಾರದ ಬಗ್ಗೆ ಕೃತಜ್ಞತೆಯಿಂದ ಅದಕ್ಕೆ ಯಾವ ಮೋಕ್ಷವನ್ನು ಕೊಡಲಿಕ್ಕಿರುವಿರಿ! ಮಹಾರಾಜರೆ, ಸಾಕು! ನಿಮ್ಮ ಈ ಭೇದೋಪಾಯವು ಈಗ ಪಂಜಾಬಿಗೂ ಗೊತ್ತಾಗಿರಬಹುದು. ಬಂಧು! ಪಂಜಾಬವೆ! ಈ ಭೇದಕ್ಕೆ ನೀನು ಬಲಿಯಾಗಬೇಡ. ಹಿಂದಿನಲ್ಲಿ ಸೇರಿಕೊಂಡು ಆತ್ಮಸಂರಕ್ಷಣಮಾಡಿಕೊಳ್ಳುತ್ತಿದ್ದ ಬಡ ಕರುವನ್ನು ಗುಂಪಿನಿಂದ ಬಿಡಿಸಿ ಕೊನೆಗೆ ಸ್ವಾರ್ಥವನ್ನು ಸಾಧಿಸಿಕೊಂಡ ತೋಳನ ಕಥೆಯು ನಿನಗೆ ಗೊತ್ತಿದ್ದುದಾದರೆ ಈ ಓಡಿಯರಂಥವರ ಮಾತಿಗೆ ನೀನು ಮರುಳಾಗಬೇಡ. ನೀನು ಮರುಳಾಗಲಿಕ್ಕಿಲ್ಲೆಂಬ ಭರವಸೆ ನಮಗಿದೆ. ಯಾಕಂದರೆ ನಮ್ಮ ಬಂಧುಗಳಾದ ಮದ್ರಾಸಿನ 'ಹಿಂದು' ಪತ್ರಕಾರರು ಹೇಳುವಂತೆ ಐರಿಶ್ ಹೋಮ್‌ರೂಲಿನ ಪ್ರಕರಣದಲ್ಲಿ ಅಲ್‌ಸ್ಟರ್ ಪ್ರಾಂತದವರು ಯಾವ ಭೂಮಿಕೆಯನ್ನು ಮಾಡುತ್ತಿದ್ದಾರೊ ಆ ವೇಷವನ್ನು ಬಂಧು, ಪಂಜಾಬವೆ! ನಿನಗೆ ಕಟ್ಟಲು ಸರ್. ಓಡಿಯರರ ಆಲೋಚನೆ ಇದೆ. ಆದರೆ ಈ ವೇಷವನ್ನು ಕಟ್ಟಿಕೊಂಡು ಲೋಕದಲ್ಲಿ ಹಾಸ್ಯಕ್ಕೆ ಗುರಿಯಾಗಬೇಡ ಮತ್ತು ನೀನು ಖಂಡಿತ ಆಗಲಿಕ್ಕಿಲ್ಲೆಂಬ ನಂಬಿಕೆಯು ನಮಗಿದೆ. ಪರಂತು ಸರ್. ಮಾಯ್ಕಲರಂಥ ಅಧಿಕಾರಿಗಳಿಗೆ ತಮ್ಮ ಕುಟಿಲ ರಾಜನೀತಿಯ ಪರೀಕ್ಷೆಯು ಅನ್ಯರಿಗಾಗಲಿಕ್ಕಿಲ್ಲೆಂದು ತೋರುತ್ತದೆ. ಈ ಮತಿಮಂದತ್ವದ ಭರದಲ್ಲೂ, ಅಧಿಕಾರೋಪಭೋಗದ ದರ್ಪದಲ್ಲೂ ಯಥೇಷ್ಟ ವಿಧಾನಗಳನ್ನು ಮಾಡಿ ಇಂಥ ಕೆಲವರು ಇಡೀ ಅಧಿಕಾರಿವರ್ಗದ ಗೌರವವನ್ನೆ ಕಳೆದುಬಿಡುವರು. ಮಿ| ಮೊಂಟೆಗ್ಯೂಗಳು ಬರುವಂಥ ಈ ನಾಜೂಕ ಸಮಯದಲ್ಲಿ ಜನರು ತಮ್ಮ ಚಳವಳಿಗಳ ಉಗ್ರಸ್ವರೂಪವನ್ನು ತೆಗೆದುಹಾಕಿ ಸೌಮ್ಯಸ್ಥಿತಿಗೆ ಬರಹತ್ತಿದರು. ವೈಸರಾಯರ ಮೊನ್ನೆ ಕೌನ್ಸಿಲಿನೊಳಗಿನ ಜವಾಬದಾರವಾದ ಶಬ್ದಗಳಮೇಲೆ ಭರವಸೆಯನ್ನಿಟ್ಟು ಒಪ್ಪಂದಕ್ಕೆ ಬಂದ ಈ ಮಹಾ ಅಧಿಕಾರಿಗಳೊಡನೆ ಜನರು ಒಂದು ತರದ ಒಪ್ಪಂದವನ್ನೂ ಮಾಡಿದರೆಂದೆನ್ನೋಣ. ಪರಂತು ಪುನಃ ಬ್ಯುರೊಕ್ರಸಿಯ ಕಡೆಯಿಂದ ಸರ್. ಮಾಯ್ಕಲರು ಯುದ್ಧಕ್ಕೆ ನಿಂತು ಅಶ್ರಾವ್ಯ ಶಬ್ದಗಳ ಗುಂಡುಗಳನ್ನೂ ಬಾಣಗಳನ್ನೂ ಲೋಕಮತದ ಮೇಲೆ ಒಂದೆ ಸಮನೆ ಹೊಡೆಯುತ್ತಿದ್ದಾರೆ, ಲೋಕಮತದ ದೂಷಣದ ಬೊಂಬುಗಳನ್ನು ಒಗೆಯುತ್ತಿದ್ದಾರೆ, ಹೀಗಾಗಿ ಬ್ಯುರೊಕ್ರಸಿಯ ಕಡೆಯಿಂದಲೆ ಪುನಃ ಈ ವಾಗ್ಯುದ್ಧವು ಪ್ರಾರಂಭವಾಗಿದೆ. ಮಿ| ಮೊಂಟೆಗ್ಯೂಗಳು ಬರುತ್ತಾರೆ, ಆದರೆ ಹಿಂದುಸ್ಥಾನದಲ್ಲಿ ಸರ್. ಓಡಿಯರರು ಜನತೆಯನ್ನು ಧಿಕ್ಕರಿಸುತ್ತಿದ್ದಾರೆ, ಎಂಥ ಮೊಂಟೆಗ್ಯೂ ದೊರೆಗಳ ಆಗಮನಕಾಲದ ಮಂಗಲಸಮಯದಲ್ಲಿ [illegible]
~~~~~~

ನಡಿಸುತ್ತಿದ್ದಾರೆ? ಜನರು ಸತ್ಯಾಗ್ರಹದ ಚಳವಳವನ್ನು ಉಪಕ್ರಮಿಸಿದರೆ ಈ ಅಧಿಕಾರಿಗಳು ಮೊಂಟಿಗ್ಯುಗಳ ಆಗಮನದ ಕಡೆಗೆ ಬೆರಳನ್ನು ತೋರಿಸಿ ಜನರನ್ನು ಸುಮ್ಮನಿರಿಸಲು ಯತ್ನಿಸುವವರಿಗೆ ಸ್ವತಃ ತಮ್ಮ ತುಂಟತನವು ಗೊತ್ತಾಗಬಾರದೆ? "ಪರೋಪದೇಶೇ ಪಾಂಡಿತ್ಯಂ" ಬರೆ ಬೇರೆಯವರನ್ನು ಉಪದೇಶಿಸುವುದರಲ್ಲಿ ಪಾಂಡಿತ್ಯವನ್ನು ತೋರಿಸಿದರೆ ಸಾಕೆ?

ಸ್ಫುಟವಿಚಾರಗಳು.

೧. ಬ್ರಿಟಿಷ್‌ಹಿಂದುಸ್ಥಾನದ ೧೯೧೫-೧೬ನೇ ಇಸವಿಯ ಶಿಕ್ಷಣದ ಅಂಕೆಗಳನ್ನು ಎಂದರೆ ಲೆಕ್ಕವನ್ನು ವಿವರಿಸುವ ಪಟ್ಟಿಯು ಪ್ರಸಿದ್ಧವಾಗಿದೆ. ಬ್ರಿಟಿಷ್‌ಹಿಂದುಸ್ಥಾನದ ವಿಸ್ತಾರವು ೧,೧೯೩,೫೦೦ ಚಚೌಕ ಮೈಲಿನದಿದ್ದು ಸಾಧಾರಣಮಟ್ಟಿಗೆ ಈ ವಿಸ್ತಾರದಲ್ಲಿ ೫೨೪,೫೦೭ ಹಳ್ಳಿಗಳೂ, ಪಟ್ಟಣಗಳೂ ಇರುವವು. ಬ್ರಿಟಿಷ್ ಹಿಂದುಸ್ಥಾನದ ಜನಸಂಖ್ಯೆಯು ೨೪ ಕೋಟಿ ೩೦ ಲಕ್ಷವಿರುವದು. ಈ ಭೂವಿಸ್ತಾರದ ಮತ್ತು ಜನಸಂಖ್ಯೆಯ ನಿರ್ವಾಹವು ಎಷ್ಟು ಶಿಕ್ಷಣಾಲಯಗಳಿಂದ ಆಗುತ್ತಿದೆ ಎಂಬುದನ್ನು ನೋಡಿದರೆ ೧೮೯,೭೪೮ ಸಂಸ್ಥೆಗಳಿದ್ದುದು ಕಂಡುಬರುವದು. ಇದರ ಪ್ರಮಾಣವನ್ನು ನೋಡಹೋದರೆ ತುಂಬಾ ನಿರಾಶೆಯಾಗದೆ ಇರದು. ಒಂದೊಂದು ಹಳ್ಳಿಗೆ ಎರಡುಮೂರು ಶಾಲೆಗಳಿರಬೇಕೆಂದು ವಿದ್ಯಾಪ್ರಿಯರ ಕೋರಿಕೆ. ಹೋಗಲಿ, ಕೊನೆಗೆ ಒಂದೊಂದು ಹಳ್ಳಿಗೆ ಒಂದೊಂದಾದರೂ ಶಾಲೆ ಇರಬಹುದು ಎಂದು ಯಾರಾದರೂ ನೆನೆಸಿದರೆ ಅದು ಮೇಲಿನ ಪ್ರಮಾಣದಿಂದ ಅಸಂಗತವಾಗಿ ಹೋಗುವುದು. ಮೇಲಿನ ಹಳ್ಳಿಗಳ ಮತ್ತು ವಿದ್ಯಾಸಂಸ್ಥೆಗಳ ಸಂಖ್ಯೆಯನ್ನು ಹೋಲಿಸಿ ನೋಡಿದರೆ ಹೆಚ್ಚುಕಡಿಮೆ ೩ ಹಳ್ಳಿಗಳಿಗೆ ಒಂದು ಶಾಲೆಯು ಬೀಳುವದು! ಮೈಲುಗಳ ಸಂಖ್ಯೆಯಿಂದ ನೋಡಿದರೆ ೧೧ ಚಚೌಕ ಮೈಲುಗಳಿಗೆ ಒಂದು ಶಾಲೆಯು ಬರುವದು! ಈ ಎರಡು ಪ್ರಮಾಣಗಳು ನಿಜವಾಗಿ ಎಷ್ಟು ಶೋಚನೀಯವಾಗಿವೆ. ಈ ಮೇಲಿನ ವರ್ಷದ ಅವಧಿಯಲ್ಲಿ ಶಾಲೆಗಳು ಹೆಚ್ಚುಕಡಿಮೆ ಬರೆ ನಾಲ್ಕು ಸಾವಿರದಿಂದ ಹೆಚ್ಚಾಗಿವೆ. ವಿದ್ಯಾರ್ಥಿಗಳ ಸಂಖ್ಯೆಯು ಸಾಧಾರಣವಾಗಿ ಸಮಾಧಾನಕರಸ್ಥಿತಿಯಲ್ಲಿದೆ ಎನ್ನಬಹುದು. ಸಾಮಾನ್ಯ ಜನಸಂಖ್ಯೆಯ ಮಾನದಿಂದ ಸೇಕಡಾ ೧೫ ಹುಡುಗರು ಶಿಕ್ಷಣವನ್ನು ಪಡೆಯುವುದಾದರೆ ವಿದ್ಯಾರ್ಜನವನ್ನು ಮಾಡುವ ಜಾತಿಯ ಮಾನದಿಂದ ವಿದ್ಯಾರ್ಥಿಗಳ ಸಂಖ್ಯೆಯು ಸೇಕಡಾ ೩೪ ಬರುವದು. ಸ್ತ್ರೀವಿದ್ಯಾರ್ಥಿನಿಗಳ ಸಂಖ್ಯೆಯಂತು ಬರೆ ೭ ಮಾತ್ರ ಬರುವದು. ಹೈಸ್ಕೂಲು ಕೋಲೇಜಗಳ ಮತ್ತು ಅವುಗಳಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಯು ಅಷ್ಟೊಂದು ಅಭಿವೃದ್ಧಿಯಲ್ಲಿದ್ದುದು ಕಂಡುಬರುವುದಿಲ್ಲ. ಪ್ರಾಥಮಿಕ ಶಾಲೆಗಳು ಮೊದಲಿನದಕ್ಕಿಂತ ೬೩೯೭ರಿಂದ ಹೆಚ್ಚಾಗಿವೆ. ಮತ್ತು ಅವುಗಳಲ್ಲಿಯ ವಿದ್ಯಾರ್ಥಿಗಳು ೧೧೧,೦೭೮ರಿಂದ ಹೆಚ್ಚಾಗಿದ್ದಾರೆ. ಶಿಕ್ಷಣಾಭಿವೃದ್ಧಿಯ ಮೇಲಿನ ಸ್ಥಿತಿಯನ್ನು ನೋಡುವಾಗ ಇದರಲ್ಲಿ ಅಭಿಮಾನವನ್ನು ಹೊತ್ತುಕೊಳ್ಳುವ ಹಾಗೆ ಸರಕಾರಕ್ಕೆ ಎಡೆ ಇಲ್ಲೆಂದು ಏನೂ ಸಂಕೋಚವಿಲ್ಲದೆ ಹೇಳಬಹುದು.

೨. ವರಿಷ್ಠಕೌನ್ಸಿಲಿನ ಅಧಿವೇಶನವು ಪುನಃ ಕಳೆದವಾರ ಪ್ರಾರಂಭವಾಯಿತು. ಈ ಅಧಿವೇಶನವು ಎರಡು ದಿವಸ ನಡೆಯಿತು. ಕೆಲವು ಮಸೂದೆಗಳ ಚರ್ಚೆ ಮತ್ತು ಕೆಲವು ಪ್ರಶ್ನೋತ್ತರಗಳು ಅಧಿವೇಶನದ ಕಾರ್ಯಕ್ರಮದಲ್ಲಿದ್ದುವು. ಅಧಿವೇಶನದಲ್ಲಿ ಬಂದ ಠರಾವುಗಳಲ್ಲಿ ಪಾಟನಾ ಯುನಿವರ್ಸಿಟಿಯ ಠರಾವು ಮಹತ್ವದ್ದಿತ್ತು. ಶಿಕ್ಷಣಮಂತ್ರಿಗಳಾದ ಸರ್. ಶಂಕರನಾಯರರು ಪಾಟನಾಯುನಿವರ್ಸಿಟಿಯ ಬಿಲ್ಲನ್ನು ತನಖಿಸಲು ನೇಮಿಸಿದ ಸಿಲೆಕ್ಟಕಮಿಟಿಯ ವರದಿಯನ್ನು ಪರ್ಯಾಲೋಚಿಸಿ ಹೇಳಿದ್ದೇನೆಂದರೆ, ಈ ಸಿಲೆಕ್ಟ ಕಮಿಟಿಯಲ್ಲಿ ಬಿಹಾರ ಮತ್ತು ಒರಿಸಾ ಪ್ರಾಂತದೊಳಗಿನ ಸರಕಾರಿ, ಬಿನ್‌ಸರಕಾರಿ ಮತ್ತು ಬೇರೆ ಯುನಿವರ್ಸಿಟಿಗಳ ಪ್ರತಿನಿಧಿಗಳಿದ್ದರು; ಈ ಸಿಲೆಕ್ಟಮಂಡಲವು ಸರ್ವಸಾಧಾರಣವಾಗಿಯೆ ಇತ್ತು. ಈ ಠರಾವಿನ ಮೇಲೆ ನಾಮದಾರ ಶರ್ಮರು ಒಂದು ಉಪಸೂಚನೆಯನ್ನು ತಂದರು. ಪಾಟನಾಯುನಿವರ್ಸಿಟಿಯ ವೈಸ್-ಚೆನ್ಸಲರನ್ನು ಸೆನೇಟಿನಿಂದ ಚುನಾಯಿಸಿದವನಿರಬೇಕು; ಹೊರತು ಸ್ಥಾನಿಕ ಸರಕಾರದಿಂದ ನೇಮಕನಾದವನಿರಕೂಡದು. ನಾಮದಾರ. ಶರ್ಮರ ಈ ಉಪಸೂಚನೆಯನ್ನು ಶಿಕ್ಷಣಮಂತ್ರಿಗಳು ಅಂಗೀಕರಿಸಲಾಗುವುದಿಲ್ಲವೆಂದು ನಿರಾಕರಿಸಿದರು. "ವೈಸ್-ಚೆನ್ಸಲರನೆಂಬವನು ಬರೆ ಚೆಯರಮೆನನೆಂಬ ಅರ್ಥವಲ್ಲ. ಹೊಸತಾಗಿರುವ ಸೆನೆಟಿನ ಅನುಭವವು ಅಪಕ್ವವಾಗಿರುವುದರಿಂದ ಅದಕ್ಕೆ ವೈಸಚೆನ್ಸಲರಿನ ಚುನಾವಣೆಯಂಥ ಜವಾಬದಾರಿಯ ಕೆಲಸವನ್ನು ಕೊಡುವುದು ಯುಕ್ತವಾಗಲಾರದು. ಸರ್. ನಾಯರರು ಈ ಯುಕ್ತಿವಾದದಿಂದ ಮೇಲಿನ ಉಪಸೂಚನೆಯನ್ನು ಕಡಿದುಹಾಕಲು ಬೇರೊಬ್ಬ ಪ್ರತಿನಿಧಿಗಳಾದ ಡೊ. ಸಪ್ರುಗಳು—ಸ್ಥಳಿಕ ಸರಕಾರವು ಮೊದಲನೇಸಾರಿ ಮೂರು ವರ್ಷದ ಅವಧಿಯಿಂದ ವೈಸ್ ಚೆನ್ಸಲರನನ್ನು ನೇಮಿಸಿ ಮುಂದಿನ ವೈಸಚೆನ್ಸಲರನ್ನು ಸೆನೆಟು ನೇಮಿಸಬಹುದು ಎಂಬ ಅರ್ಥದ ಇನ್ನೊಂದು ಉಪಸೂಚನೆಯನ್ನು ಮುಂದಿಟ್ಟರು. ಈ ಉಪಸೂಚನೆಯನ್ನು ಪಂಡಿತಮಾಲವೀಯ ಪ್ರಭೃತಿಗಳು ಮಂಡಿಸಿದ್ದಾಗ್ಯೂ ಅದು ಬಿದ್ದುಹೋಯಿತು. ಮಾರನೆ ದಿನ ಈ ವಿಷಯದ ಮೇಲೆ ಪುನಃ ವಾದವಿವಾದವು ನಡೆದು ಮುಂದೆ ಬಂದ ಎಲ್ಲಾ ಉಪಸೂಚನೆಗಳು ಯಥಾಪ್ರಕಾರ ಬಿದ್ದುಹೋಗಿ ಸರ್. ಶಂಕರನಾಯರರ ಎರಡು ಸಾರ್ಥಾಪಿಕ ಉಪಸೂಚನೆಗಳ ಮೇಲೆ ಪಾಟನಾಯುನಿವರ್ಸಿಟಿಯ ಬಿಲ್ಲು ಕೊನೆಗೆ [illegible] ಸಂತೋಷವಾಗುತ್ತಿದೆ. ಈ ಬಿಲ್ಲನ್ನು ಅಂಗೀಕರಿಸುವ ಸಮಯದಲ್ಲಿ ನಾವು. ಹೇಕ್ ಇವರು ಹೇಳಿದ್ದಂತೆ ಈಗಿನ ರೂಪದಲ್ಲಿ ಪಾಸಾದ ಈ ಠರಾವಿನಲ್ಲಿ ಎಷ್ಟೋ ದೋಷಗಳಿವೆ; ಆದರೂ ಆ ಪ್ರಾಂತೀಯರ ಶಿಕ್ಷಣಾಭಿವೃದ್ಧಿಯ ಆವಶ್ಯಕತೆಯ ದೃಷ್ಟಿಯಿಂದ ಅಪೂರ್ಣವಾಗಿರುವದು ಮಾತ್ರವಲ್ಲ, ಕೆಲವಂಶದಿಂದ ಕೊರತೆಗಳುಳ್ಳದ್ದಾದರೂ ಈ ಠರಾವು ಅಭಿನಂದನೀಯವಾಗಿಯೆ ಇದೆ. ಇರಲಿ. ಮೇಲಿನಂಥ ಠರಾವುಗಳ ಚರ್ಚೆಯು ಪ್ರಾರಂಭಿಸಬೇಕಾದರೆ ಮೊದಲು ಅಥವಾ ಅದು ಮುಗಿದ ಮೇಲೆ ಸಭಾಸದರು ಕೆಲವು ಪ್ರಶ್ನೆಗಳನ್ನು ಕೇಳುವ ರೂಢಿಯುಂಟು. ಆ ಕ್ರಮದಂತೆ ಒಬ್ಬ ಸಭಾಸದರು—ರಾಷ್ಟ್ರೀಯಸಭೆ ಮತ್ತು ಮೊಸಲೆಮ್ ಲೀಗಿನ ಧ್ಯೇಯವನ್ನು ಮುಂದಿಟ್ಟುಕೊಂಡು ಸನದಶೀರ ಕೆಲಸವನ್ನು ನಡಿಸುತ್ತಿರುವ ಸಂಸ್ಥೆಗಳ ಸಭೆ ಮುಂತಾದ ಚಳವಳಗಳನ್ನು ನಿಲ್ಲಿಸಲು ಸರಕಾರವು ಪ್ರಾಂತಿಕ ಸರಕಾರಗಳಿಗೆ ಸೂಚನೆಯನ್ನು ಕೊಟ್ಟಿದೆಯೊ? ಎಂದು ಕೇಳಿದ ಈ ಪ್ರಶ್ನೆಕ್ಕೆ ಇದೇ ತರದ ಒಂದು ಪ್ರಶ್ನವನ್ನು ಉತ್ತರಿಸುವಾಗ ಹಿಂದಿನ ಸಂಚಿಕೆಯಲ್ಲಿ ತೋರಿಸಿದ್ದಂತೆ ಸರಕಾರಿ ಸಭಾಸದರು ಇದು ಕೊನ್‌ಫಿಡೆನ್‌ಶಿಯಲ್ ಆದುದರಿಂದ ಈ ಬಗ್ಗೆ ಹೆಚ್ಚಿನ ಪ್ರಸ್ತಾಪವನ್ನು ಮಾಡಲು ಸಾಧ್ಯವಿಲ್ಲವೆಂಬದಾಗಿ ಉತ್ತರವನ್ನು ಕೊಟ್ಟರು.

೩. ವರಿಷ್ಠಕೌನ್ಸಿಲಿನಲ್ಲಿ ಎರಡನೆ ದಿವಸದ ಅಧಿವೇಶನದಲ್ಲಿ ಒಂದು ಅಪ್ರುತಪೂರ್ವಪ್ರಕಾರವು ನಡೆಯಿತು. ಬಿಹಾರ ಮತ್ತು ಒರಿಸಾ ಈ ಪ್ರಾಂತಗಳಲ್ಲಿರುವಂತೆಯೆ ಪಂಜಾಬದಲ್ಲೂ ನ್ಯಾಯವಿಧಾಯಕ ಮತ್ತು ಆಡಳಿತೆಯ ಕ್ರಮವು ಅಂಗೀಕರಿಸಲ್ಪಡತಕ್ಕದೆಂಬುದಕ್ಕೆ ಒಬ್ಬ ಸಭಾಸದರು ಕೌನ್ಸಿಲಿನಲ್ಲಿ ಒಂದು ಠರಾವನ್ನು ತಂದರು. ಪ್ರಕೃತ ಯುದ್ಧದಲ್ಲಿ ಪಂಜಾಬವು ಅತ್ಯಧಿಕ ಸಾಹಾಯ್ಯವನ್ನು ಮಾಡುವಾಗ ಹೊಸ್ನ ಹೊಸ್ನ ಅಸ್ತಿತ್ವದಲ್ಲಿ ಬಂದ ಬಿಹಾರ, ಒರಿಸಾಪ್ರಾಂತಗಳಿಗೆ ಸಿಕ್ಕಿದ ಅಧಿಕಾರಗಳೂ ಪಂಜಾಬಕ್ಕೆ ಸಿಗಬಾರದು. ಇದು ಸರಿಯಲ್ಲ ಎಂಬುದಾಗಿ ಠರಾವನ್ನು ಸಾದರಪಡಿಸಿದ ಮಿ. ಶಫಿ ಎಂಬವರು ಸಮರ್ಥಿಸಿದರು. ಅನಂತರ ಒಬ್ಬೊಬ್ಬ ಸಭಾಸದರ ಅನುಕೂಲ ಪ್ರತಿಕೂಲ ಭಾಷಣಗಳಾದವು. ಸರಕಾರಿ ಸಭಾಸದರಾದ ಮಿ. ವಿಲ್ಯಮ್ ವಿನ್‌ಸೆಂಟರು ಉದ್ದ ಭಾಷಣಮಾಡಿ ಈ ಠರಾವನ್ನು ಈಗಿದ್ದ ಸ್ವರೂಪದಲ್ಲಿ ಅಂಗೀಕರಿಸಲಾಗದು, ಅದರಲ್ಲಿ ತಕ್ಕ ಹೆಚ್ಚುಕಡಿಮೆ ಮಾಡಿದ್ದಲ್ಲಿ ಅದನ್ನು ವಿಚಾರಾರ್ಹ ತಕ್ಕೊಳ್ಳಬಹುದೆಂದು ಹೇಳಿ ಅದರಲ್ಲಿ ಹೆಚ್ಚುಕಡಿಮೆ ಮಾಡಬೇಕಾದ ಸಂಗತಿಗಳನ್ನು ಸೂಚಿಸಿದರು. ಮುಂದೆ ಮಿ. ಜೀನರಲ್ಲದೆ ಬೇರೆ ಇಬ್ಬರು ಸಭಾಸದರು ಠರಾವಿನ ಮೇಲೆ ಅನುಕೂಲವಾದ ಭಾಷಣಗಳನ್ನೆ ಮಾಡಿದರು. ಆದರೆ ನಾವು ಮೇಲೆ ತೋರಿಸಿದ್ದಂತೆ ಕೂಡಲೆ ಒಂದು ಅಶ್ರುತಪೂರ್ವಪ್ರಕಾರವು ಸಂಭವಿಸಿತು. ಪಂಜಾಬದ ಲೆಫ್ಟಿನೆಂಟ ಗವರ್ನರರಾದ ಸರ್. ಮಾಯ್ಕಲ್ ಓಡಾಯರರು ಮೇಲಿನ ಠರಾವನ್ನು ಪುಷ್ಟೀಕರಿಸುವ ನೆವವನ್ನು ತೋರಿಸಿಕೊಂಡು ಒಂದು ಅತಿವಿಸ್ತೃತವಾದ ಭಾಷಣವನ್ನು ಮಾಡತೊಡಗಿದರು. ಇವರ ಭಾಷಣದಲ್ಲಿ ಸಭ್ಯತೆಯ ಉಲ್ಲಂಘನ, ಲೋಕಪಕ್ಷದ ಮುಖಂಡರ ಮೇಲೆ ಯಥೇಚ್ಛ ಮುಗಿಬೀಳುವಿಕೆ, ಮಾಡುವ ನಿಂದ್ಯ ಆರೋಪ—ವಿಚಾರಗಳ ವಿದ್ಧತ್ವ, ಲೋಕಮತದ ತಿರಸ್ಕಾರ ಇವೆ ಸಂಗತಿಗಳಿದ್ದವು. ಇವರ ಭಾಷಣದ ನಮೂನೆಯನ್ನು ನೋಡುವಾಗ ಇವರಲ್ಲಿ ಲೋಕಮತ ವಿದ್ವೇಷದ ಗಾಳಿಯು ಹೇಗೆ ಸಂಚರಿಸಿಕೊಂಡಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವರ ವಾಗ್‌ರತ್ನಾಕರದೊಳಗಿನ ಒಂದೆರಡು ಮಣಿಗಳನ್ನು ಕೆಳಗೆ ವಾಚಕರ ಅವಗಾಹನದ ಬಗ್ಗೆ ಇಡೋಣ. ಪ್ರಾರಂಭದಲ್ಲಿ ಸರ್. ಓಡಾಯರರು ಠರಾವನ್ನೂ, ಠರಾವನ್ನು ತಂದ ಸಭಾಸದರನ್ನೂ, ಪಂಜಾಬಪ್ರಾಂತವನ್ನೂ ಹೊಗಳುವ ನೆವತೋರಿಸಿ, ಪಂಜಾಬಪ್ರಾಂತದ ವಿಷಯದಲ್ಲಿ ತನ್ನ ಪೂರ್ಣಸಹಾನುಭೂತಿಯನ್ನು ಪ್ರದರ್ಶಿಸುವ ವ್ಯಾಜ್ಯದಿಂದ ಬೇರೆ ಪ್ರಾಂತಗಳ ಮುಖಂಡರನ್ನು ದೂಷಿಸಲು ತೊಡಗಿದರು. ಈ ಅಪೂರ್ವವಕ್ತೃರಲ್ಲಿ ಪಂಜಾಬದ ಸಹಾನುಭೂತಿಯು ಲೆಕ್ಕವಿಲ್ಲದಷ್ಟು ಉಕ್ಕುತ್ತಿತ್ತು. 'ಹಿಂದುಸ್ಥಾನದಲ್ಲಿ ವಕ್ತೃತ್ವವು ತಕ್ಕಮಟ್ಟಿಗೆ ಇದ್ದರೂ ವಿವೇಕ ಮತ್ತು ನ್ಯಾಯಬುದ್ಧಿಯು ಇಲ್ಲ, ಇದು ದುರ್ದೈವದ ಮಾತಾಗಿದೆ. ಈ ಎರಡು ಗುಣಗಳು ಪಂಜಾಬದ ಮುಖ್ಯ ಗುಣಗಳು. ಈ ಗುಣಗಳೇ ಮೊದಲಿನಿಂದಲೆ ಬ್ರಿಟಿಷ್ ಜನಾಂಗದಲ್ಲಿ ಇದ್ದಾವೆ.' ಈ ಎರಡು ಗುಣಗಳು ಬ್ರಿಟಿಷರಲ್ಲಿ ಮತ್ತು ಪಂಜಾಬಿಗಳಲ್ಲಿ ಮಾತ್ರ ಇರಲು ಕಾರಣವೇನೆಂಬುದನ್ನು ಹೇಳುವಾಗ ಓಡಾಯರರು ತಮ್ಮ ಐತಿಹಾಸಿಕ ಜ್ಞಾನವನ್ನು ಸಹ ಚನ್ನಾಗಿ ತೋರಿಸಿದರು. "ವಿವೇಕ ಮತ್ತು ನ್ಯಾಯಬುದ್ಧಿ [illegible] ಗುಣಗಳುಳ್ಳವರಿಂದ ಅವು ಬ್ರಿಟಿಷರಲ್ಲಿ ಹಾಗು ಪಂಜಾಬಿಗಳಲ್ಲಿ ಮಾತ್ರ ಸಂಕ್ರಾಂತವಾದವು! ಆದುದರಿಂದಲೆ ಸರಕಾರವು ಹಾಗು ಪಂಜಾಬ ಪ್ರಾಂತವು ಸಹಕಾರ್ಯದಿಂದ ನಡಕೊಳ್ಳುತ್ತಿವೆ. ಬೇರೆ ಪ್ರಾಂತಗಳಿಗೆ ವಿರೋಧಕಟ್ಟಿಕೊಳ್ಳುವುದೆ ಸರಕಾರದೊಡನೆ ಸಹಕಾರವೆಂದು ತೋರುವದು. ಪಂಜಾಬದಲ್ಲಿರುವ ರಾಜಭಕ್ತಿಯು ಎಲ್ಲಿ ಮತ್ತು ಅನ್ಯಪ್ರಾಂತಗಳ ಉಪಟಳವೆಲ್ಲಿ? ಮಹಾಯುದ್ಧವು ಪ್ರಾರಂಭವಾದಕೂಡಲೆ ಪಂಜಾಬದೊಳಗಿರುವ ಅಲ್ಪಸ್ವಲ್ಪ ಅರಾಜಕತ್ವವನ್ನು ಅಲ್ಲಿಯ ಮುಖಂಡರು ನಿರ್ಮೂಲಪಡಿಸಿ ಸಾಮ್ರಾಜ್ಯ ಸರಕಾರಕ್ಕೆ ಮನುಷ್ಯಬಲ, ದ್ರವ್ಯಸಾಹಾಯ್ಯ, ರಣಸಾಮಗ್ರಿಯ ಪುರವಣೆ ಮುಂತಾದ ರೂಪದಿಂದ ಪಂಜಾಬವು ಯಾವ ಮದತನ್ನು ಕೊಟ್ಟಿರುವದೊ ಅದನ್ನು ಹೋಲಿಸಿ ನೋಡಿದರೆ ಬೇರೆ ಪ್ರಾಂತಗಳಲ್ಲಿ ಬರೆ ವಾಗ್ಡಂಬರದ ರಾಜಕಾರಣವು ಮಾತ್ರ ಕಂಡುಬರುವದು. ರಣಭೂಮಿಯ ಮೂರೂ ಕಡೆಗಳಲ್ಲಿ [illegible] ಸಿಪಾಯಿಗಳು ತಮ್ಮ ರಕ್ತವನ್ನು ಚೆಲ್ಲುತ್ತಿದ್ದಾರಲ್ಲದ [illegible] ಬೇರೆ ಪ್ರಾಂತೀಯರು ಏನು ಮಾಡಿದ್ದಾರೆ? [illegible] ಸರಕಾರದ [illegible]

ಸಮಯದಲ್ಲಿ ಸನದಶೀರ ಮತ್ತು ಕಾಯಿದಶೀರ ಎಂಬ ಹೆಸರುಗಳನ್ನು ಕೊಟ್ಟು ಹೋಮ್‌ರೂಲ್ ಎಂಬ ಹೆಸರಿನಿಂದ ಕತ್ತಿ, ಕೋವಿ ಮತ್ತು ಬೊಂಬುಗಳ ಸಹಾಯ್ಯದಿಂದ ಅರಾಜಕತ್ವವನ್ನು ಮಾಡಲು ತೊಡಗಿದ್ದಾರೆ, ಪೆಸಿವ್ ರೆಜಿಸ್ಟನ್ಸ್ ಎಂದರೆ ಅಶಸ್ತ್ರಪ್ರತಿಕಾರವನ್ನು ಉಪದೇಶಿಸಹತ್ತಿದ್ದಾರೆ, ಕೌನ್ಸಿಲಿನಲ್ಲಿ ಬರುವಾಗ ರಾಜನಿಷ್ಠೆಯ ಶಪಥವನ್ನು ಧರಿಸಿ ಹೊರಗೆ ಹೋದಕೂಡಲೆ ಅದಕ್ಕೆ ವಿರುದ್ಧವಾಗಿ ಆಚರಿಸುತ್ತಿದ್ದಾರೆ. ....ಪಂಜಾಬ ಪ್ರಾಂತದ ರಾಜನಿಷ್ಠೆಯು ಬಣ್ಣಹಾಕಿದ್ದಲ್ಲ. ಬೇರೆ ಪ್ರಾಂತಗಳಲ್ಲಿ ರೂಢವಾಗಿರುವ ರಾಜವಿರೋಧವಾಗಲಿ, ಅಶಸ್ತ್ರ ಪ್ರತಿಕಾರದಂಥ ಘಾತಕತ್ವವಾಗಲಿ ಇಷ್ಟರವರೆಗೆ ಪಂಜಾಬದಲ್ಲಿ ಬರಲಿಲ್ಲ. ಈ ಸಾಂಕ್ರಾಮಿಕ ರೋಗವು ದೂರದಲ್ಲೆ ಇದ್ದುದರಿಂದ ಪಂಜಾಬದ ರಾಜನಿಷ್ಠೆಯು ಅತಿ ಆರೋಗ್ಯಸ್ಥಿತಿಯಲ್ಲಿದೆ.' ಈ ರೀತಿಯಿಂದ ಸರ್. ಡೊರೆಗಳು ಬಾಯಿಗೆ ಬಂದ ವಿಧಾನಗಳನ್ನು ಕೌನ್ಸಿಲಿನಲ್ಲಿ ಮಾಡಿದರು. ಇವರ ಈ ಅಶ್ರಾವ್ಯ ಮತ್ತು ಶಿಷ್ಟಕ್ರಮಕ್ಕೆ ವಿರುದ್ಧವಾದ ಭಾಷಣವು ಮುಗಿಯುತ್ತಲೆ ಲೋಕಪಕ್ಷದ ಪ್ರತಿನಿಧಿಗಳು ಮಾತಾಡಲು ಉಪಕ್ರಮಿಸಿದರೆ ಅವರಿಗೆ ಸಮಯದ ಸಬಬಿನಿಂದ ಮಾತಾಡಲು ಕೊಡದೆ ಕೌನ್ಸಿಲಿನ ಅಧಿವೇಶನವು ಇನ್ನೊಂದು ದಿವಸ ಮುಂದರಿಸೋಣಾಯಿತು.

ಸ್ಥಳಿಕ — ಮಂಗಳೂರು.

ಮಿಸಿಸ್ ಎನ್ನಿಬೆಸೆಂಟ್, ಅರುಂಡೇಲ ಮತ್ತು ವಾಡಿಯಾರವರ ಬಂಧ ವಿಮೋಚನೆಯು ತಾ. ೧೭ನೇ ಸೋಮವಾರ ದಿನ ಮಾಡಲಾಯಿತು ಎಂಬ ಸಂತೋಷಕರ ವರ್ತಮಾನವನ್ನು ಕೇಳಿ ಬಂದರದಲ್ಲಿ ಸಾವುಕಾರರು ಕಲ್ಲುಸಕ್ಕರೆಯನ್ನು ಹಂಚಿದರು. ಇಲ್ಲಿಯ ಹೋಮ್ ರೂಲ್ ಲೀಗಿನವರು ಮಿಸಿಸ್ ಬೆಸೆಂಟ ಪ್ರಭೃತಿಗಳ ಬಂಧ ವಿಮೋಚನೆಯ ಮೂಲಕ ಉಂಟಾದ ಲೋಕಮತದ ವಿಜಯವನ್ನೂ ಸಂತೋಷವನ್ನೂ ಸೂಚಿಸುವ ಪ್ರಕಟಣೆಗಳನ್ನು ಪಟ್ಟಣದಲ್ಲೆಲ್ಲಾ ಬೀಂಡುವಾಲ್ಯರ ಮೂಲಕ ಹಂಚಿದರು.

ಈ ತಿಂಗಳ ತಾ. ೨೪ಕ್ಕೆ ಡಿಸ್ಟ್ರಿಕ್ಟ ಬೋರ್ಡಿನ ಸಭೆಯು ಕೂಡುವದು. ಇದೇ ದಿನ ಸಾಯಂಕಾಲ ೫ ಘಂಟೆಗೆ ಇಲ್ಲಿಯ ಕೊನ್ಸೊಲೇಟೆಡ್ ಕ್ಲಬ್ಬಿನಲ್ಲಿ ಗವರ್ನರ ಧೊರೆಗಳು ಇಲ್ಲಿಗೆ ಬಂದಾಗ ಅವರ ಮುಂದೆ ಯಾವ್ಯಾವ ವಿಷಯಗಳನ್ನಿಡಬೇಕೆಂಬದನ್ನು ಪರ್ಯಾಲೋಚಿಸಲು ಈ ಬಗ್ಗೆ ನೇಮಿಸಲ್ಪಟ್ಟಿರುವ ಸಬ್ ಕಮಿಟಿಯವರ ಸಭೆಯು ಕೂಡುವದು.

ಮದ್ರಾಸು ವ್ಯವಸಾಯ ಡಿಪಾರ್ಟಮೆಂಟಿನ ಪಿಂಗಲ ಸಂವತ್ಸರದ ಪಂಚಾಂಗದ ಒಂದು ಪ್ರತಿಯನ್ನು ನಮಗೆ ಕಳುಹಿಸಿಕೊಟ್ಟಿರುವರು. ಕನ್ನಡ ಭಾಷೆಯಲ್ಲಿ ಇದು ರಚಿಸಲ್ಪಟ್ಟಿರುವದು. ಎಂದಿನಂತೆಯೇ ಈ ಪಂಚಾಂಗದಲ್ಲಿ ರೈತರಿಗೆ ಉಪಯುಕ್ತವಾಗಿರುವ ಹಲವು ವಿಷಯಗಳು ಇವೆ. ಪಶುವೈದ್ಯ ಶಾಲೆಗಳ ಮತ್ತು ಪಶುವೈದ್ಯ ಇಲಾಖೆಗಳ ಮಾಹಿತಿಯು ಈ ಪಂಚಾಂಗದಲ್ಲಿ ಪ್ರಕಟಿಸಲ್ಪಟ್ಟಿರುವದು. ನೀರೆಳೆಯುವ ಯಂತ್ರಗಳ ಸ್ಥಾಪನೆಯ ವಿಷಯ ಮತ್ತು ಬೀಜದ ಎತ್ತುಗಳನ್ನು ಪೋಷಿಸಿದರೆ ಸರಕಾರದಿಂದ ಹಣಸಹಾಯ ಪಡಿಯುವ ವಿಷಯ ಬೇಕಾದ ಕ್ರಮಗಳನ್ನು ಈ ಸತೀಯ ಪಂಚಾಂಗದಲ್ಲಿ ಮುದ್ರಿಸಿರುತ್ತಾರೆ. ಪಂಚಾಂಗಕ್ಕೆ ಕ್ರಯ ಒಂದಾಣೆ ಮಾತ್ರ. ಈ ಸಂದರ್ಭದಲ್ಲಿ ಈ ಜಿಲ್ಲೆಯ ರೈತರು ಇನ್ನೊಂದು ವಿಷಯವನ್ನು ಸಹ ತಿಳಕೊಳ್ಳತಕ್ಕದ್ದು. ಮಂಗಳೂರಿನಲ್ಲಿ ಕೃಷಿ ಇಲಾಖೆಯ ಡಿಮೊನ್‌ಸ್ಟ್ರೇಟರ್ ಎಂಬ ಒಬ್ಬ ಅಧಿಕಾರಿಗಳಿರುವರು. ಕೃಷಿಸಂಬಂಧ ಬೇಕಾದ ಅನುಭವವನ್ನು ಕೊಡಲಿಕ್ಕೆ ಇವರು ಸಿದ್ಧವಾಗಿರುವರು. ರೈತರ ಜಮೀನುಗಳನ್ನು ನೋಡಿಕೊಂಡು ಮಣ್ಣು ಪರೀಕ್ಷೆ ಇತ್ಯಾದಿಗಳನ್ನು ಮಾಡಲೂ ಇವರು ಸಿದ್ಧರಿರುವರು.

ಈ ತಿಂಗಳ ತಾ. ೨೧ಕ್ಕೆ ಅಂತ್ಯವಾಗುವ ವಾರದಲ್ಲಿ ಕೊಡಿಯಾಲ ಬೈಲ್ ವಾರ್ಡಿನಲ್ಲಿ ೧, ಗೋಳಿಕಟ್ಟೆ ವಾರ್ಡಿನಲ್ಲಿ ೧, ಹೀಗೆ ೨ ಪ್ಲೇಗು ಮರಣಗಳಿದ್ದವು.

ದಕ್ಷಿಣ ಕನ್ನಡದಲ್ಲಿ ಹೋಮ್‌ರೂಲ್ ಲೀಗಿಗೆ ಉಡುಪಿಯಿಂದ ೧೫೫, ಕುಂಬಳೆಯಿಂದ ೪೭, ಕಾರ್ಕಳ ೯, ಕುಂದಾಪುರದಿಂದ ೧೦, ಕಾಪು ೨೭, ಮೂಲ್ಕಿ ೧೧, ಪುತ್ತೂರು ೩೮, ಮಂಗಳೂರು ೩೬, ಕಾಸರಗೋಡು ೩, ಮಂಜೇಶ್ವರ ೨, ಪಡೂರ ೧೭, ಕೊಳ್ನಾಡ ೧, ನೀಲೇಶ್ವರ ೧, ಬಂಟ್ವಾಳ ೨, ಅರ್ಕಳದಲ್ಲಿ ೧ ಈ ರೀತಿಯಾಗಿ ಮೆಂಬರರು ಸೇರಿದ್ದಾರಂತೆ.

ನೋಟೀಸು.

ಯುನಿವರ್ಶಲ್ ಎಸ್ಯುರೆನ್ಸ್ ಕಂಪೆನಿಯ ಮುಖ್ಯ ಏಜಂಟರು ಯಮ್. ಲಕ್ಷ್ಮಣರಾವ್ ಬ್ರದರ್ಸರು ಸದರಿ ಕಂಪೆನಿಯ ಎಲ್ಲಾ ಮೆಂಬರರಿಗೆ ತಿಳಿಯಪಡಿಸುವದೇನೆಂದರೆ:—ನಮ್ಮ ಏಜನ್ಸಿಯಲ್ಲಿ ಕಂಪೆನಿಯ ಸಮ್ಮಂಧ ಅನೇಕ ತರದ ತೊಂದರೆಗಳು ಬಂದು ಒದಗಿದ್ದರಿಂದ ಸದರಿ ಕಂಪೆನಿಯ ಕೆಲಸಕ್ಕೆ ನಾವು ಇದೇ ಕಳೆದ ಸೆಪ್ಟಂಬರ ತಾ. ೧ನೇಯಿಂದ ರಾಜಿನಾಮೆ ಕೊಟ್ಟಿರುತ್ತೇವೆ. ಆದುದರಿಂದ ನಮ್ಮೊಡನೆ ಮೆಂಬರರು ಇನ್ನುಮುಂದೆ [illegible]

[illegible] ಲಕ್ಷ್ಮಣರಾವ ಬ್ರದರ್ಸ

[illegible] ಶಾಸ್ತ್ರಿಂಗಳ ಸಂಖ್ಯೆ ಏರಿದ್ದರಿಂದ ಮತ್ತು ಕಟ್ಟೋಣಗಳು ಹೆಚ್ಚಾಗುತ್ತಿರುವುದರಿಂದ ಅವುಗಳನ್ನು ಹತ್ತಿಹೋಗಿ ಈಗಿನ ಟಿಪ್ಪಾಣಿಮಾಡಲಿಕ್ಕೆ ತಮಗೆ ಬಹಳ ಪ್ರಯಾಸವಾಗಿದೆ ಎಂತಲೂ ಕತ್ತಲಲ್ಲಿ ಉಪ್ಪರಿಗೆಗಳನ್ನು ಹತ್ತಿಹೋಗಲಿಕ್ಕೆ ಸಾಧ್ಯವಾಗಲು ತಮಗೆ ಲಾಂದರುಗಳನ್ನು ಒದಗಿಸಬೇಕೆಂತಲೂ, ಪೇದೆಗಳ ಸಂಖ್ಯೆಯನ್ನು ಹೆಚ್ಚಿಸಿ ಈಗ ಇರುವವರಿಗೆ ಸ್ವಲ್ಪ ಬಿಡುವು ಸಿಕ್ಕುವಂತೆ ಮಾಡಬೇಕೆಂತಲೂ ದಿವಸಕ್ಕೆ ೮ ತಾಸುಗಳಿಗಿಂತ ಹೆಚ್ಚಿಗೆ ಕೆಲಸಮಾಡಲಿಕ್ಕಿದ್ದಾಗ ಹೆಚ್ಚಿಗೆ ಎಲೋವನ್ಸ್ ಕೊಡಬೇಕೆಂತಲೂ ಅವರು ಕೇಳಿದ್ದಾರೆ. ಇದಲ್ಲದೆ ಬಜಾರು ಮತ್ತು ಪಟ್ಟೆಗಳ ಕ್ರಮಗಳು ತಮಗೆ ಬಹಳ ಶ್ರಮಕೊಡುವುದರಿಂದ ತಮಗೆ ಅನುಕೂಲವಾದ ರೀತಿಯು ಅಥವಾ ಸರಕಾರದವರೇ ನಿರ್ಣಯಿಸುವ ಬೇರೆ ಯಾವುದಾದರೂ ರೀತಿಯ ಉಡುಪನ್ನು ಹಾಕಿಕೊಳ್ಳಲಿಕ್ಕೆ ಬಿಡಬೇಕೆಂದೂ ಅವರು ಹೇಳಿದ್ದಲ್ಲದೆ ಈ ವಿಷಯವಾಗಿ ಹುಕುಂ ತಮಗೆ ನಾಲ್ಕು ದಿನಗಳಲ್ಲಿಯೇ ಕೊಡದೆ ಇದ್ದರೆ ತೊಂದರೆ ಬರಬಹುದಾಗಿ ಸೂಚಿಸಿರುವರು. ಸಿಕ್ಕ ರಜೆಯ ಕಾಲದಲ್ಲಿ ಅರ್ಧಸಂಬಳ ಕೊಡಬೇಕೆಂತಲೂ, ಮೆಡಿಕಲ್ ಸರ್ಟಿಫಿಕೇಟಿನ ಆಧಾರದಿಂದ ೨೦ ವರ್ಷಗಳಲ್ಲಿ ಪೆನ್‌ಶನ್ ಕೊಡಬೇಕೆಂದೂ ಇತರ ಸಂಗಾತಿಗಳಲ್ಲಿ ೨೫ ವರ್ಷ ಸರ್ವಿಸ್ ಆದೊಡನೆ ಪೆನ್‌ಶನ್ ಸಿಕ್ಕಲಿಕ್ಕೆ ಅರ್ಹರಾಗಿ ಮಾಡಬೇಕೆಂದೂ ಈಗ ಇರುವವರಿಗೆಲ್ಲರಿಗೂ ಸಂಬಳ ಹೆಚ್ಚಿಸಬೇಕೆಂದೂ ಅವರ ಕೋರಿಕೆಯಂತೆ.

ಬಾಪಟ್ಲ: — ಮ॥ ರಾ॥ ಸಿ. ವೆಂಕಟಾದ್ರಿ ಪಂತುಲುಗಾರು ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಸುಮಾರು ೨೦೦ ವಿದ್ಯಾರ್ಥಿಗಳ ಸಭೆಯು ಜರುಗಿ ವಿದ್ಯಾರ್ಥಿಗಳ ವರ್ತನದ ವಿಷಯವಾಗಿ ಹೊರಟ ನಂಬ್ರ [illegible]ನೇ ಗವರ್ನಮೆಂಟ ಆರ್ಡರ್ ರದ್ದು ಪಡಿಸುವಂತೆ ಡಿರೆಕ್ಟರರು ಗವರ್ನಮೆಂಟಿಗೆ ಬರೆಯಬೇಕಾಗಿ ಒಂದು ಠರಾವು ಪಾಸಾಗಿ ಆ ಠರಾವನ್ನು ಡಿರೆಕ್ಟರವರಿಗೆ ತಿಳಿಸುವಂತೆ ನಿಶ್ಚಯಮಾಡಿದರು. ಈ ಚಳವಳಿಕ್ಕೆ ಸೇರಿದ ಕಾಲೇಜ ಡಿಪಾರ್ಟಮೆಂಟಿನ ೨[illegible] ವಿದ್ಯಾರ್ಥಿಗಳ ಮತ್ತು ಹೈಸ್ಕೂಲಿನ ೧[illegible]೦ ವಿದ್ಯಾರ್ಥಿಗಳನ್ನು ಅಮಾನತು ಮಾಡಬೇಕೆಂದು ನಿಶ್ಚಯಿಸಿರುವುದಾಗಿಯೂ ಈ ಸಂದರ್ಭದಲ್ಲಿ ಕೆಲವು ಸಧ್ಯ್ರಹಸ್ಥರು ಇದನ್ನು ಸಮಾಧಾನಕರ ರೀತಿಯಲ್ಲಿ ಇತ್ಯರ್ಥಿಸುವಂತೆ ಪ್ರಯತ್ನಪಡುತ್ತಾರೆಂದೂ ತಿಳಿದುಬರುತ್ತದೆ.

ಕಲ್ಲಿಕೋಟೆ: — ಬಹುಮಾನಪಟ್ಟ ಮದ್ರಾಸ ಗವರ್ನರವರು ಕಲ್ಲಿಕೋಟೆಗೆ ಬರುವ ಒಕ್ಟೋಬರ ತಿಂಗಳಲ್ಲಿ ಬರುವ ಸಂದರ್ಭದಲ್ಲಿ ಅವರಿಗೆ ಸ್ವಾಗತ ಮಾಡುವ ವಿಷಯವನ್ನು ಚರ್ಚಿಸುವುದಕ್ಕೆ ಟೌನ್‌ಹೋಲಿನಲ್ಲಿ ಮ್ಯುನಿಸಿಪಲ್ ಚೆಯರ್ಮನರ ಸೂಚನೆ ಮೇರೆಗೆ ಸಪ್ಟಂಬರ ೧೯ನೇ ತಾರೀಕಿಗೆ ಸಭೆಯು ಜರಗಿತು. ಚೆಯರ್ಮನರಿಗೆ ಈ ಅಭಿಪ್ರಾಯವನ್ನು ವಿರೋಧಿಸಿ ಇಡೀ ಜಿಲ್ಲೆಯಿಂದ ೧೪೪ ಗೃಹಸ್ಥರು ಸಹಿಮಾಡಿದ ಒಂದು ಪತ್ರವು ತಲ್ಪಿತು. ಈ ಸಭೆಗೆ ಕಲೆಕ್ಟರ ಸಾಹೇಬರು ಅಧ್ಯಕ್ಷರಾಗಿದ್ದರು. ಸ್ವಾಗತ ಪತ್ರದ ಮಸೂದೆಯನ್ನು ತಯಾರಿಸಿದ್ದಲ್ಲದೆ ಕಲೆಕ್ಟರರ ಸೂಚನೆ ಮೇರೆಗೆ ಮದ್ರಾಸ್ ಹೊಸ್ಪಿಟಲ್ ಶಿಪ್ (ಲಷ್ಕರ್ ಆಸ್ಪತ್ರೆಯ ನೌಕೆ)ನ ಸಹಾಯಾರ್ಥವಾಗಿ ಹಣವನ್ನು ಗವರ್ನರವರ ಬಳಿಯಲ್ಲಿ ಕೊಡುವುದಾಗಿ ನಿಶ್ಚಯ ಸೋಣಾಯಿತು. ಇದಕ್ಕೆ ಹಣಸಂಗ್ರಹ ಮಾಡುವುದಕ್ಕೆ ಒಂದು ಕಮಿಟಿಯನ್ನು ನೇಮಕಮಾಡಬೇಕೆಂದು ಮ॥ ರಾ॥ ರಾ॥ ಕಾವಲ್‌ಪ್ಪಾಣ್ ನಾಯರವರು ಸೂಚಿಸಿದರು. ಆಗ ಮ॥ ರಾ॥ ರಾ॥ ಟೆಂಕ್ಸರ್ ಕೇಶವಮೆನನರು ಮಲೆಯಾಳ ಭಾಷೆಯಿಂದ ಭಾಷಣವನ್ನು ಮಾಡತೊಡಗಿದರು. ಆಗ ಅಧ್ಯಕ್ಷರು ಇಂಗ್ಲಿಷ ಭಾಷೆಯಿಂದಲೇ ಭಾಷಣವಾಗಬೇಕೆಂದು ಹೇಳಿ ಮಾತಾಡುವವರನ್ನು ತಡೆಗಟ್ಟಿದರು. ಸಭೆ ಸೇರಿದವರಲ್ಲಿ ಅನೇಕರಿಗೆ ಇಂಗ್ಲಿಷಿನ ಪರಿಚಯವಿದ್ದಿಲ್ಲ. ಆದರೆ ಕಲೆಕ್ಟರು ಮಲೆಯಾಳದಲ್ಲಿ ಭಾಷಣಕ್ಕೆ ಸಮ್ಮತಿಸಲಿಲ್ಲ. ಆಗ ಮ॥ ರಾ॥ ರಾ॥ ಮಂಜೇರಿ ರಾಮಯ್ಯರು ಆಕ್ಷೇಪಿಸಿ, ಅವರೂ ಇನ್ನೂ ಕೆಲವರು ಸಭಾಮಂದಿರವನ್ನು ಬಿಟ್ಟು ಹೋದರು. ಸರಕಾರ ನವುಕರರು ಇವರನ್ನೆಲ್ಲ ಸಮಜಾಯಿಸಲಿಕ್ಕೆ ನೋಡಿದರೂ ಕೇಳಲಿಲ್ಲ ಎಂದು ತಂತಿ ವರ್ತಮಾನವು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕಲ್ಲಿಕೋಟೆ: — ಜಾಮೊರಿನ್ ಕಾಲೇಜಿನ ವಿದ್ಯಾರ್ಥಿಗಳು ಧೋತ್ರ ಉಟ್ಟು, ಸಣ್ಣ ತುಂಡಂಗಿ ಧರಿಸಿ ಕಾಲೇಜಿಗೆ ಬಂದಕಾರಣ ಅವರು ಸ್ವಾಮಾದ ಉಡುಪುಗಳನ್ನು ಧರಿಸಲಿಲ್ಲವೆಂಬ ನೆವನದಿಂದ ಕಾಲೇಜಿನ ಹೆಡ್ ಮಾಸ್ತರು ಅವರನ್ನು ಮನೆಗಟ್ಟಿದರಂತೆ. "ಈ ವಿದ್ಯಾರ್ಥಿಗಳು ತಮ್ಮ ಈ ತಪ್ಪಿಗೆ ಕ್ಷಮೆಬೇಡದಿದ್ದರೆ ತಾನು ಕಾಲೇಜನ್ನು ಮುಚ್ಚಿಬಿಡಬೇಕಾದೀತೆಂದು ಎಚ್ಚರಿಸಿರುವರಂತೆ. ಜಾಮೊರಿನ್‌ರ ವಂಶದವರೊಬ್ಬರು ಸುಮಾರು ೨ ವಾರಗಳ ಹಿಂದೆ 'ನೆಕ್ಟಾಯಿ' ಧರಿಸದೆ ಬಂದ ಕಾರಣ ಅವರನ್ನು ೧೪ ದಿನಗಳ ವರೆಗೆ ಹೆಡ್ ಮಾಸ್ತರರು ಅಮಾನತ ಮಾಡಿದ್ದರಿಂದ ವಿದ್ಯಾರ್ಥಿಗಳು ಈ ರೀತಿಯ ತುಂಡಂಗಿವೇಷವನ್ನು ಧರಿಸಿದರೆಂತಲೂ ಈಗ ಈ ಕ್ರಮವು ಹೈಸ್ಕೂಲಿನಲ್ಲಿ ಹಬ್ಬುತ್ತಲಿದೆಯೆಂತಲೂ ಹಿಂದೂ ಪತ್ರಿಕೆಗೆ ಬಂದ ಒಂದು ತಂತೀ ವರ್ತಮಾನವು ತಿಳಿಸುತ್ತದೆ.

ತಿರುಪತಿ: — ಈ ದೇವಸ್ಥಾನದ ಬ್ರಹ್ಮೋತ್ಸವಕ್ಕೆ ಬರುವ ಪರಿಕಮರ ಅನಾನುಕೂಲತೆಗಳನ್ನು ನೋಡಿಕೊಂಡು ಅವರಿಗೆ ಸಹಾಯಮಾಡುವುದಕ್ಕಾಗಿ ವಿದ್ಯಾರ್ಥಿಗಳ 'ಒಂದು ತಂಡವು ಏರ್ಪಟ್ಟಿದೆಯಂತೆ. ಅವರು ಧರಿಸುವ ಬಿಲ್ಲೆಗಳಿಂದ ಅವರನ್ನು ಗುರ್ತಿಸಲಿಕ್ಕಾಗುವುದಂತ ಈ ತಂಗಡವು ಪರಊರಿನವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುತ್ತಲಿರುವರಂತೆ.

ಮದ್ರಾಸು: — ಕಳೆದ ಶನಿವಾರ ಮದ್ರಾಸಿನಲ್ಲಿ ಜರಗಬೇಕಾಗಿದ್ದ ಬ್ರಾಹ್ಮಣೇತರರ ಶಿರಡನೆ ತಂಡದ ಅಧಿವೇಶನವು ಜರಗುವ ಆರಂಭಕಾಲದಲ್ಲಿಯೇ ಚರ್ಚೆ ಹತ್ತಿ ಗಲಭೆಯುಂಟಾದ ಕಾರಣ ಅದನ್ನು ಮುಂದರಿಸಿಡಲಾಯಿತು. ಈ ಚರ್ಚೆಗೆ ೧ನೇ ತಂಡದವರು ಕಾರಣರೆಂತಲೂ ೧ನೇ ತಂಡದವರು ಬ್ರಾಹ್ಮಣೇತರರ ಸರಿಯಾದ ಪ್ರತಿನಿಧಿಗಳಲ್ಲವೆಂತಲೂ ಅವರು ಈಗಿನ ಹೋಮರೂಲ್ ಚಳವಳಿ ಪಕ್ಕದ ವಿಷಯವಾಗಿ ಇಂಡಿಯಾ ಸೆಕ್ರೆಟರಿಗೆ ತಂತೀಮೂಲಕ ತಿಳಿಸಿದ ಮಾತುಗಳು ಬ್ರಾಹ್ಮಣೇತರರ ಎಲ್ಲಾ ಜಾತಿಗಳ ಒಮ್ಮತವಾದ ಅಭಿಪ್ರಾಯವಲ್ಲವೆಂತಲೂ ಸೂಚಿಸುವುದೇ ಈ ಅಧಿವೇಶನದ ಉದ್ದೇಶವೆಂತಲೂ ತಿಳಿದುಬರುತ್ತದೆ. ಈ ಅಧಿವೇಶನವು ಇನ್ನೊಮ್ಮೆ ಕೂಡುವುದಾಗಿ ತಿಳಿದುಬರುತ್ತದೆ.

ಎನ್ನಿಬೆಸೆಂಟರ ಫಂಡಿಗೆ ಈ ವರೆಗೆ ರೂ. ೫೩,೪೫೦ — ೧೨ — ೪ ಜಮೆ ಆಯಿತು,

ಪಾಲ್ಘಾಟು: — ಇಂಟರ್-ಮಿಡಿಯಟ್ ಕ್ಲಾಸಿನ ೩ ವಿದ್ಯಾರ್ಥಿಗಳು ಹೋಮ್‌ರೂಲ್ ಲೀಗಿನವರ ನಿರ್ಬಂಧ ದಿನಾಚರಣೆಯ ಮೆರವಣಿಗೆಯಲ್ಲಿ ಸೇರಿಕೊಂಡಿದ್ದ ಕಾರಣದಿಂದ ಪಾಲ್ಘಾಟ ಕೋಲೇಜಿನ ಹೆಡ್‌ಮಾಸ್ತರರು ಅವರನ್ನು ಶಾಲೆಯಿಂದ ತೆಗೆದುಹಾಕಿದ್ದಲ್ಲದೆ ಇನ್ನೂ ಮೂರುಮಂದಿ ವಿದ್ಯಾರ್ಥಿಗಳಿಗೆ ಒಬ್ಬೊಬ್ಬನಿಗೆ ೩ ರೂಪಾಯಿ ಜುರುಮಾನೆ ವಿಧಿಸಿದರೆಂದು 'ಹಿಂದೂ' ಪತ್ರಿಕೆಯಲ್ಲಿ ಒಂದು ತಂತಿ ವರ್ತಮಾನವು ತಿಳಿಸುತ್ತದೆ.

ಬೊಂಬಾಯಿ: — ಅಲ್ಲಿ ಟಪ್ಪಾಲು ಉದ್ಯೋಗಸ್ಥರು ಮಾಡಿದ ಮನವಿಯು ವಕೀಲರ ಮೂಲಕ ಬರಬಾರದಿತ್ತೆಂಬ ಸಬೂಬಿನ ಮೇಲೆ ಅದನ್ನು ವಿಚಾರಕ್ಕೆ ತೆಗೆದುಕೊಳ್ಳಲಾಗುವುದಿಲ್ಲವೆಂತಲೂ ಕ್ರಮಪ್ರಕಾರ ಅವರ ಮೇಲಾಧಿಕಾರಿಗಳ ಮೂಲಕ ಅರ್ಜಿ ಬರಬೇಕೆಂತಲೂ ಬೊಂಬಾಯಿಯ ಪೋಸ್ಟ್‌ಮಾಸ್ಟರ್ ಜನರಲರವರು ಉತ್ತರ ಕೊಟ್ಟಿರುವರು.

ದಕ್ಷಿಣ ಕನ್ನಡ.

ಪುತ್ತೂರು: — ಇದೇ ತಿಂಗಳ ತಾ. ೧೦ರಲ್ಲಿ ಸಂತೆಗೆನ್ನು [illegible] ಹೋದ ಸಂತೆಗೆಳು ಗ್ರಾಮದ [illegible] ಮನೆ [illegible]

ಎಂಬವನು ಹುಲಿ ಎಂದು ಹೊಡೆದ ಗುಂಡು ಚಿಕ್ಕಿಗಾರ ಕಾಂತಿಗೋಡೆ ಗ್ರಾಮದ ಮರಕೊರೆ ಮೆ॥ ಲೋರೆನ ಸೋಜರ ಮಗ ಜುಜೆ ಸೋಜರಿಗೆ ಕುತ್ತಿಗೆಗೆ ತಾಗಿ ಮೃತಪಟ್ಟರು. ಮೃತಪಟ್ಟವರ ಶವವನ್ನು ಗೋಳಿತಟ್ಟು ಪೋಲೀಸಿನವರು ಇಲ್ಲಿಯ ಆಸ್ಪತ್ರೆಗೆ ಪರೀಕ್ಷೆಗೆ ತಾ. ೧೨ರಲ್ಲಿ ತಂದಿದ್ದರು. ಫೋರೆಸ್ಟ ಗಾರ್ಡರು ೨ ಕೋವಿಗಳನ್ನು ಅಮಾನತು ಮಾಡಿರುವರಂತೆ.

ಇದೇ ತಾ. ೧೪ರಲ್ಲಿ ಕನಕಮಜ್ಜ ಗ್ರಾಮದ ಗುಡ್ಡೆಯಲ್ಲಿ ಕನಕಮಜ್ಜ ಗ್ರಾಮದ ಬೊಮ್ಮಗೌಡ ಎಂಬವನ ಹೆಣವೂ ಹೆಣದ ಸಮೀಪ ೧೪ ತೆಂಗಿನಕಾಯಿ ಕಟ್ಟಿದ ಗೋಣಿಚೀಲವೂ ಸಿಕ್ಕಿತಂತೆ. ಹೆಣವನ್ನು ಸುಳ್ಯ ಸ್ಟೇಶನ್ ಪೋಲೀಸಿನವರು ಪರೀಕ್ಷೆಬಗ್ಗೆ ಇಲ್ಲಿಯ ಆಸ್ಪತ್ರೆಗೆ ತಂದಿದ್ದರು.

ಇಲ್ಲಿಯ ಡಿಸ್ಟ್ರಿಕ್ಟ ಮುನ್ಸಿಫರಾದ ಮ॥ ರಾ॥ ರಾ॥ ಸಿ. ಆರ್. ಕೃಷ್ಣರಾವ್ ವರು ೩ ತಿಂಗಳ ರಜೆಪಡಕೊಂಡದ್ದರಿಂದ ಇವರ ಚಾರ್ಜನ್ನು ಇಲ್ಲಿಗೆ ನೇಮಕರಾದ ಪ್ಲೀಡರ್ ವಕೀಲ ಮ॥ ರಾ॥ ರಾ॥ ಯು. ವಾಮನ ನಾಯಕರು ತಾ. ೧೭ರಲ್ಲಿ ವಹಿಸಿಕೊಂಡು ಕೆಲಸದ ಮೇಲೆ ಹಾಜರು ಆಗಿರುವರು.

ಈಗ ಕೆಲವು ದಿವಸಗಳಲ್ಲಾಗುಯಿತ ಮಳೆ ಶಾಂತವಾಗಿರುತ್ತದೆ. ಅಕ್ಕಿಗೆ ಮುಡಿ ೧೨ ರೂಪಾಯಿ ೬ — ೧೩ರಿಂದ ೬೦ ವರೆಗೆ ಇರುವದು.

ಇಲ್ಲಿಯ ಮೇಜಸ್ಟ್ರೇಟ ಕೋರ್ಟಿನ ಹಿಂದುಗಡೆ ಇರುವ ಮಂದಿರದ ಗುಡ್ಡೆಯಲ್ಲಿ ಲೋಟೆನಾ (ಚಿತ್ರಂಗಿ) ಗಿಡಗಳ ಕಾಡು ಬೆಳೆದು ಹುಲಿಗಳಿಗೆ ಆಶ್ರಯಕ್ಕೆ ಅನುಕೂಲವಾದ್ದರಿಂದ ಹುಲಿಗಳ ಉಪಟಳವು ಅತಿ ವಿಶೇಷವಾಗಿ ಹಟ್ಟಿಯಿಂದ ದನಕರುಗಳನ್ನು ಎಳಕೊಂಡು ಹೋಗುತ್ತವೆ. ತಾಲೂಕ ಅಧಿಕಾರಿಗಳು ಕೋವಿ ಲೈಸನ್ಸುದಾರರನ್ನು ಒಟ್ಟುಗೂಡಿಸಿ ಬೇಟೆಮಾಡಿಸಿದರೆ ಹುಲಿಗಳು ನಾಶವಾಗಿ ಜಾನುವಾರುಗಳನ್ನು ಮೇವಿಗೆ ಬಿಡಲಿಕ್ಕೆ ಯಾವಾಗಲೂ ಅನುಕೂಲವಾಗುತ್ತಿತ್ತು.

ಕಬಕ ಮತ್ತು ಆರ್ಯಾಪು ಗ್ರಾಮದ ಮಧ್ಯೆ ಇರುವ ಸಂಪ್ಯ ಎಂಬ ಕಾಡಿನಲ್ಲಿ ಚಿತ್ರಂಗಿಬಲ್ಲಿ ಮತ್ತು [illegible] ಎಂಬ ಮುಳ್ಳುಕಾಡು ವಿಶೇಷವಾಗಿ ಬೆಳೆದು ಹುಲಿಗಳಿಗೂ ಕಾಡು ಮೃಗಗಳಿಗೂ ಆಶ್ರಯಕ್ಕೆ ಅನುಕೂಲವಾಗಿರುವದು. ಪೇಟೆಯ ಜಾನುವಾರುಗಳನ್ನು ಮೇವಿಗೆ ಬಿಟ್ಟರೆ ಒಂದರಡಾದರೂ ಹುಲಿಗೆ ತುತ್ತಾಗುವವು. ಆಸುಪಾಸಿನ ಜನರು ತಮ್ಮ ಜಾನುವಾರುಗಳನ್ನು ನಷ್ಟಕ್ಕೆ ಮೇವಿಗೆ ಬಿಡದೆ ಕಟ್ಟಿ ಸಾಕಿ ಸಾಕಿರುವರು. ಮೇಲಾಧಿಕಾರಿಗಳು ಕಾಡಿನಲ್ಲಿರುವ ಚಿತ್ರಂಗಿಬಲ್ಲಿ ಮತ್ತು ಶಿವಳ್ಳಿ ಕಾಡು ಕಡಿಸಿ ಕಳೆಸುವ ಏರ್ಪಾಡು ಮಾಡಿದರೆ ಅನೇಕ ಜಾನುವಾರುಗಳನ್ನು ಹುಲಿಬಾಯಿಂದ ರಕ್ಷಿಸಿದಂತೆ ಆಗುತ್ತಿತ್ತು.

ಬಂಟವಾಳ: — ಇಲ್ಲಿ ಪ್ಲೇಗಿನ ಗಲಾಟೆಯು ದಿನೇ ದಿನೇ ದಕ್ಷಿಣ ದಿಕ್ಕಿಗೆ ಹಬ್ಬುತ್ತ ಬರುತ್ತದೆ. ಹೊಸಪೇಟೆಯ ಪೂರಾ ಜನರು ಮನೆ ಖಾಲಿಮಾಡಿದರು. ಅಯ್ಯನಾಯ್ಯರ ಓಣಿಯಲ್ಲಿ ಸಹ ಇಲಿಗಳು ಬೀಳುತ್ತಿರುತ್ತವೆ. ಇಲಿಗಳು ಬಿದ್ದ ಮನೆಯನ್ನು ಡಿಸಿನ್‌ಪೆಕ್ಟ್ ಮಾಡಬೇಕಾದರೆ ಮನೆಯ ಮಾಲಿಕನೇ ಎಣ್ಣೆ ಸಾಬೂನು ಕೊಡಬೇಕೆಂಬ ಚರ್ಚೆಯಿಂದಲೇ ಅನೇಕ ಮನೆಗಳು ನಾಲ್ಕೈದು ದಿವಸಗಳಾದರೂ ತೊಳೆಯದೆ ಇಲಿಗಳು ಸತ್ತು ಅಲ್ಲೇ ನಾತಹುಟ್ಟಿ ರೋಗದ ಕ್ರಿಮಿಗಳು ಹೆಚ್ಚಾಗುತ್ತವೆ. ಇಂಥಾ ಚರ್ಚೆಯಿಂದ ಗತಿಗೋತ್ರ ಇಲ್ಲದ ಬಡಬಗ್ಗರಿಗೆ ಬಹಳ ಕಷ್ಟ, ನಷ್ಟ, ಭಯ ಉಂಟಾಗಲಿಕ್ಕೆ ಸಾಕು. ಲೋಕಲ್‌ಬೋರ್ಡ ಖರ್ಚು ಮ್ಯಾಲೆ ಕೊಡಬೇಕೆಂದಲ್ಲಿ ಸರಕಾರದವರು ಬೇಗನೆ ತೊಳೆಯಿಸಿ ನಂತರ ಖರ್ಚಿನ ಬಾಬ್ತು ಬಿಲ್ ಮಾಡಬಹುದು. ಒಂದೇ ವಾರದಲ್ಲಿ ೩ ಪ್ಲೇಗ್ ಮರಣವಾಯಿತು. ಸುಮಾರು ೨೦೦ ಬಿಡಾರಗಳು ಸಾವಿರ ಜನವೂ ಊರುಬಿಟ್ಟರು. ಇಲ್ಲಿಗೆ ಜಿಲ್ಲಾ ಸರ್ಜನರು ಬಂದು ಕೆಲವರಿಗೆ ಇನಾಕ್ಯುಲೇಶನ್ ಮಾಡಿದರು. ಇಲ್ಲಿಗೆ ಬೇಗನೇ ಕೆಲವು ಜನ ಪೋಲೀಸಿನವರೂ ತೋಟಿಗಳೂ ಅಗತ್ಯ ಇರುವರು. ಇದನ್ನು ಸರಕಾರದವರು ಬೇಗನೇ ದಯಪಾಲಿಸ್ಯಾರೆಂತ ನಿರೀಕ್ಷಿಸುತ್ತೇವೆ. ದೇವಸ್ಥಾನಗಳಲ್ಲಿ ಗ್ರಾಮಶಾಂತಿ ನಡಿಯುತ್ತಿದೆ.

ಕುಂಬಳೆ: — ಇದೇ ತಾ. ೧೦ರಲ್ಲಿ ಜಿಲ್ಲಾ ಕಲೆಕ್ಟರ್ ದೊರೆಗಳವರೂ ಮುರಿದೆ ತಾ. ೧೧ರಲ್ಲಿ ಒನರೇಬಲ್ ಕೆ. ಸದಾಶಿವಭಟ್ ಬಿ. ಎ. ಬಿ. ಎಲ್. ರವರೂ ಇಲ್ಲಿಗೆ ಚಿತ್ತೈಸಿದರು. ತಾ. ೧೧ರಲ್ಲಿ ಬೆಳಿಗ್ಗೆ ೯ ಘಂಟೆಗೆ ಮ॥ ಭಟ್‌ರವರ ಅಧ್ಯಕ್ಷತೆಯಲ್ಲಿ ಹೋಮ್‌ರೂಲ್ ಸಭೆಯು ಕೂಡಿತು. ಹೋಮ್‌ರೂಲ್ ಎಂಬದನ್ನು ಸಭಿಕರಿಗೆ ವಿವರಿಸಿ ಇದು ಬರೇ ಹೆಸರಿನಲ್ಲಿ ಮಾತ್ರ ಇರತಕ್ಕ ಸಂಸ್ಥೆಯಲ್ಲ. [illegible] ಪತಿತಜನೋದ್ಧಾರ, ದೇಶಾಭಿವೃದ್ಧಿ ವಗೈರೆ ಸಾಧಿಸುವದು ಇದರ ಕಾರ್ಯಸಾಧನವಾಗಿರಬೇಕೆಂತ ಇನ್ನೂ ಕೆಲವು ಯೋಗ್ಯ ವಚನಗಳನ್ನು ಅಧ್ಯಕ್ಷರು ಮಾತಾಡಿದ ನಂತರ ಅಧ್ಯಕ್ಷ ಮಹಾಶಯರಿಗೆ ವಂದನೆಗಳನ್ನು ಕೊಟ್ಟು ಸಭೆಯು ವಿಸರ್ಜನೆಯಾಯಿತು. ಅಧ್ಯಕ್ಷರ ಸೂಚನೆಯನ್ನು ಮನ್ನಿಸುವರೆ ಸಭೆಯವರ ಈಚೆಗೆ ಕಾರ್ಯವಿವರಗಳನ್ನು ಚಿಂತಿಸುತ್ತಿರುವರು.

ಈ ದಿನ ಸಾಯಂಕಾಲ ೫ ಘಂಟೆಗೆ ಟ್ರಾವೆಲರ್ಸ್ ಬಂಗ್ಲೆಯಲ್ಲಿ ಊರವರಿಗೆ ಮಾನ್ಯ ಭಟ್ಟರವರ ಸಮಕ್ಷದಲ್ಲಿ ಕಲೆಕ್ಟರ್ ದೊರೆಗಳವರ ಭೇಟಿಯಾಯಿತು — ವ್ಯಾಪಾರಸ್ಥರ ಅನುಕೂಲಕ್ಕಾಗಿ ಇಲ್ಲಿಯ ಬಂಗ್ಲೆ ಮೈದಾನಿನಲ್ಲಿ ಅಂಗಡಿಸಾಲುಗಳನ್ನು ಕಟ್ಟುವರೆ ಹೊಸತಾಗಿ ಎರಡು ರಸ್ತೆಗಳನ್ನು ಏರ್ಪಡಿಸಿ ಕೊಡುವದಾಗಿಯೂ ಫಂಡಿನ ಸಮ್ಮತಿಯಂತೆ ಆಕಳ [illegible] ನಮೂನೆಯ ಬ[illegible]ನಿಯನ್ ಪಂಚಾಯತಿಯನ್ನು ಇಲ್ಲಿಯೂ ಸ್ಥಾಪಿಸುವರೆ ಒಂದೆರಡು ತಿಂಗಳ ಕೊಡಿಸುವದಾಗಿ ಅಪ್ಪಣೆಯಾಯಿತು. ಅನಂತರ ಇಲ್ಲಿಯ ಕಾಲಹವಾಲುಗಳನ್ನು ಪರಾಂಬರಿಸಿ ದೊರೆಗಳವರು ತಮ್ಮ ಅಭಯವನ್ನಿತ್ತರು. ಸರಕಾರ ಬಡಾವಣೆಯಿಂದ ನೂತನವಾಗಿಯೂ ಕಟ್ಟಿಸಿದ ಟ್ರಾವೆಲರ್ಸ್ ಬಂಗ್ಲೆಯನ್ನು ಆತಿಸ್ಥಳ ಸಮೇತ ಪಾರ ಮಾಡಿಸಿ ಬಂಗ್ಲೆ ಬಗ್ಗೆ ಬೇರೆ ಸ್ಥಳವನ್ನು ಆರಿಸುವರೆ ದೊರೆಗಳು ಸಮ್ಮತಿಸಿರುವರು.

ಮ॥ ರಾ॥ ಸಾಮರೇಶ್ವರ ದೇವಸ್ಥಾನ ಪಾಮನ ಶೆಟ್ಟಿರವರಿಂದ ಕಟ್ಟಿಸಲ್ಪಡಾಗುವ ಪಬ್ಲಿಕ್ ರೀಡಿಂಗ್ ರೂಮನ್ನು ಪರಾಂಬರಿಸಿ ದೊಡ್ಡದಾಗಿ ಕಟ್ಟುವಂತೆ ಸ್ಥಳ ಹೆಚ್ಚಿಗೆ ಕೊಡಿಸಿದ್ದಲ್ಲದೆ ಪರಸ್ಪರ ಸಹಾಯಕ ಸಂಘಕ್ಕಾಗಿ ಒಂದು ಸ್ಥಳ ಕೊಡಿಸಿದ ಮಾನ್ಯ ಕಲೆಕ್ಟರ ದೊರೆಗಳವರಿಗೆ ಸರ್ವರೂ ಕೃತಜ್ಞರಾಗಿರುತ್ತಾರೆ.

ಮಾನ್ಯ ಸದಾಶಿವ ಭಟ್ಟರವರು ತಾ. ೧೩ನೇ ಸಾಯಂಕಾಲ ಮೈಲಿನಲ್ಲಿಯೂ ಮಾನ್ಯ ದೊರೆಗಳವರು ತಾ. ೧೪ನೇ ಬೆಳಿಗ್ಗೆ ಪಾಸೆಂಜರಿನಲ್ಲಿಯೂ ಮಂಗಳೂರಿಗೆ ಹಿಂತೆರಳಿದರು.

ಇಲ್ಲಿಯ ಧೌನರಸ್ತೆಗಳ ದುರುಸ್ತಿ ಬಗ್ಗೆ ಒಂದೆರಡು ವರ್ಷಗಳಿಂದ ರೂಪಾಯಿ ಕಿಂಪ ಬೋರ್ಡನವರು ಕೊಡುತ್ತಾರಂತೆ! ಈ ವರ್ಷದ ದುರುಸ್ತಿಯು ಒಂದೇ ಸಣ್ಣ ರಸ್ತೆಯಲ್ಲಿ ಮುಕ್ತಾಯವಾಗಿದೆ, ಕಾರಣವೇನೋ ತಿಳಿಯದು!

ತಾ. ೧೧ರಲ್ಲಿ ಕೂಡಿದ ಹೋಮ್‌ರೂಲ್ ಸಭೆಯಲ್ಲಿ ಪ್ರತಿಬಂಧದಲ್ಲಿದ್ದವರನ್ನು ಬಿಡಿಸುವಂತೆ ಈ ಪತ್ರಿಕೆಮೂಲಕ ನಮ್ಮ ಸರಕಾರಕ್ಕೆ ಬಿನ್ನೈಸುವದಾಗಿ ಏರ್ಪಡಿಸಿ ಶ್ರೀದೇವಸ್ಥಾನದಲ್ಲಿ ಈ ಕುರಿತು ಪೂಜೆಯು ನಡೆಯಿತು. "

ಒಬ್ಬ ಪ್ರೇಕ್ಷಕರಿಂದ

ಸ್ವದೇಶಾಭಿಮಾನಿಯು ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಕಳೆದ ಆದಿತ್ಯವಾರ ಪ್ರೊ. ಕೃಷ್ಣಮೂರ್ತಿಗಳು, ಎಸ್. ಶೇಷಪ್ಪನವರು, ಕೆ. ಗೋಪಾಲಕೃಷ್ಣರಾಯರು, ಈ ಮೂವರ ಆಟವು ನಡೆಯಬೇಕಾಗಿತ್ತು; ಆದರೆ, ಕೃಷ್ಣಮೂರ್ತಿಗಳು "[illegible]" ಎಂದೊಂದು [illegible] [illegible] ರುವರು. [illegible]

ಎಸ್. ಶೇಷಪ್ಪನವರು [illegible]

ಎಸ್. ಶೇಷಪ್ಪನವರು ತೋರಿಸಿದ ಫೀಟ್ಸ್‌ಗಳಲ್ಲಿ ಮಹತ್ವಾದುದೆಂದರೆ: — ಕೇವಲವಾಗಿ ಬಿತ್ತು ತನ್ನ ಹೊಟ್ಟೆಯ ಮೇಲೆ ೧೨ ಮುಡಿ ಅಕ್ಕಿಯನ್ನು ಇರಿಸಿಕೊಂಡದ್ದು. ಇದನ್ನು ನೋಡುವಾಗ, ಒಂದು ಅಕ್ಕಿ ಬಂಡಸಾಲೆಯೇ ಇವರ ಮೈಮೇಲೆ ಇದ್ದಂತೆ ತೋರುತ್ತಿತ್ತು. ಗೃಹಸ್ಥಾಶ್ರಮವನ್ನು ವಹಿಸಿ ಮೂರು ಮಕ್ಕಳ ತಂದೆಯಾಗಿ ಇಷ್ಟು ಅದ್ಭುತಕಾರ್ಯ ಮಾಡುವುದೆಂದರೆ ಇದು ಸರ್ವರಿಗೂ ಒಂದು ಆದರ್ಶವೆ. ಈ ದಿನವೂ ಇವರಿಗೆ ಒಂದು ಬಂಗಾರದ ಪದಕ ಬಹುಮಾನವಾಗಿ ಬಂದಿತು.

ಕೆ. ಗೋಪಾಲಕೃಷ್ಣರಾಯರು, ಇವರು ಒಂದು- ಕಟ್ಟಿದ ಸರಳನ್ನು (ಟ್ರಪೀಜ್) ಮೇಲೆ ತೂಗಾಡಿಸಿ, ಅದರ ಮೇಲೆ ಏಣಿ ಇಟ್ಟು ಏನೂ ಆಧಾರವಿಲ್ಲದೆ ಅದರ ಮೇಲೆ ಹೋಗಿಬರುವುದು, ಮೊದಲಾದ ಅನೇಕ ಚಮತ್ಕಾರಿಕ ಸಾಹಸಗಳನ್ನು ಪ್ರೇಕ್ಷಕರ ಕಣ್ಣುಗಳು ಕುಕ್ಕರಿಸುವಂತೆ ಮಾಡಿತೋರಿಸಿದರು.

ಸಾರಾಂಶ: — ಇವರಿಬ್ಬರೂ ನಮ್ಮೂರವರು, ಮಂಗಳೂರವರು ಆದ್ದರಿಂದ ನಾವು ಹೇಳುವುದೇನೆಂದರೆ, ನಮ್ಮಿಂದ ಸಾಧ್ಯವಿದ್ದಷ್ಟು ಇವರಿಗೆ ಪ್ರೋತ್ಸಾಹ ಕೊಡುವುದಲ್ಲದೆ ಮುಂದೆ ದೇಶಕ್ಕೆ ಆಧಾರಸ್ತಂಭಗಳಾಗಲಿಕ್ಕಿರುವ ನಮ್ಮ ತರುಣರಿಗೂ ಇವರು ಒಂದೊಂದು "ಗುರಿ" ಎಂಬುದನ್ನು ಮರೆಯಕೂಡದು.

ಶ್ರೀವೇಣುಗೋಪಾಲ ಗೋಪಿನಾಥ ಪ್ರಸನ್ನ.

ಸದ್‌ಭಕ್ತಿಪರಾಯಣರಾದ ಮಹಾನುಭಾವರು ದಯವಿಟ್ಟು ಪರಾಂಬರಿಸುವ ಬಗ್ಗೆ —

ಇದೇ ಮಂಗಳೂರು ಶಹಾರ್ ರೈಲ್ವೇಸ್ಟೇಶನಿನ ಆಗ್ನೇಯಭಾಗದಲ್ಲಿ ಚಕ್ರಪಾಣಿಯೆಂಬ ಅಗ್ರಹಾರವು ಉಂಟೆಂಬದು ಈ ಊರ ನಿವಾಸಿಗಳಿಗೆಲ್ಲಾ ಗೊತ್ತಿದೆಯಷ್ಟೆ. ಆ ಸ್ಥಾನದಲ್ಲಿ ಒಂದುಸಾವಿರ ವರುಷಗಳ ಹಿಂದೆ ಮಹಾಯೋಗೀಶ್ವರರಾಗಿದ್ದ ಶ್ರೀ ಗೋರಕನಾಥರವರಿಂದ ಪ್ರತಿಷ್ಠಿತವಾದ (ಶ್ರೀ ಗೋಪಿನಾಥ) ಶ್ರೀ ವೇಣುಗೋಪಾಲಕೃಷ್ಣ ದೇವಸ್ಥಾನವಿದೆ. ಅದರಲ್ಲಿ ಪೂರ್ವದಾರಭ್ಯ ವೇದಮೂರ್ತಿಗಳಾದ ಮಾಧವಭಟ್ಟರು — ಕೇಶವಭಟ್ಟರು — ಕೃಷ್ಣಭಟ್ಟರು ಪಾರಂಪರ್ಯವಾಗಿ ಪೂಜಾಕಾರ್ಯಗಳನ್ನು ನಡಿಸಿಕೊಂಡು ಬಂದು ಪ್ರಸ್ತುತದಲ್ಲಿ ಸದರಿ ಕೃಷ್ಣಭಟ್ಟರ ಮಗ ಮಾಧವಭಟ್ಟರು ನಡಿಸಿಕೊಂಡು ಬರುತ್ತಾರೆ. ಇವರು ದೇವಸ್ಥಾನಕ್ಕೆ ಸನದುಪಟ್ಟ ಮೊಕ್ತೇಸರರೂ ಆಡಳತದಾರರೂ ಆಗಿರುತ್ತಾರೆ. ಆದರೆ ಊರಲ್ಲೆಲ್ಲಾ ಹಲವು ರೋಗಗಳು ಹಬ್ಬಿ ನಿವಾಸಿಗಳೊಳಗೆ ವಿವಿಧ ಸಂಕಷ್ಟಗಳು ಸಂಭವಿಸಿದ ಕಾರಣ ಸರ್ವಜನರ ಆರೋಗ್ಯಕ್ಕೂ ಕ್ಷೇಮಕ್ಕೂ ದೇಶದ ಸುಭಿಕ್ಷಪ್ರಾಪ್ತಿಗೂ ಶ್ರೀ ಗೋಪಿನಾಥ ದೇವರ ಆರಾಧನೆ ವಿಶೇಷರೀತಿಯಲ್ಲಿ ನಡಿಸುವಂತೆ ವ್ಯವಸ್ಥೆಮಾಡುವದು ಅಗತ್ಯವೆಂದು ಕೆಲವು ಗೃಹಸ್ಥರು ಸೂಚಿಸಿದರಿಂದ ಸದರಿ ಮಾಧವಭಟ್ಟರು ಕಳದ ಪರಿಧಾವಿ ಸಂವತ್ಸರದ ಕಾರ್ತಿಕ ಬಹುಳ ೧ ಆರಭ್ಯ, ಗಾಯತ್ರಿ ಪವಮಾನಾಭಿಷೇಕ ಮುಂತಾದ ವೇದೋಕ್ತಾರ್ಚನೆಗಳಿಂದ ಪೂಜಾನುಷ್ಠಾನವನ್ನು ಪ್ರಾರಂಭಿಸಿ ಪ್ರತಿ ತಿಂಗಳಲ್ಲಿ ಬರುವ ರೋಹಿಣಿನಕ್ಷತ್ರದ ದಿವಸ ನಡಿಸಿ ಬರುತ್ತಾರೆ. ಇದೆ ವಿನಹ ಇದೇ ಕಳದ ಭಾದ್ರಪದ ಬ ೮ ಯು ೧ ಗೆ ಕೃಷ್ಣಜಯಂತಿಯ ಮರುದಿವಸ ದೇವರ ಸೇವೆಯಾಗಿ ವೇದಮೂರ್ತಿಗಳಾದ ಚಿಂತಾಮಣಿ ಭಟ್ಟರಿಂದ ಶ್ರೀಕೃಷ್ಣಜನನದ ಹರಿಕಥೆ ಮಾಡಿಸಿರುತ್ತಾರೆ. ಇದಕ್ಕೆ ಅನೇಕ ಜನ ಮಹಾನುಭಾವರುಗಳು ಬಂದದರಿಂದ ಕಥೆಯು ಬಹು ವಿಜೃಂಭಣೆಯಿಂದ ನಡಿಯಿತು. ಇನ್ನು ಮುಂದೆಯೂ ಇದಕ್ಕೆ ಮಿಗಿಲಾಗಿ ನಡೆದೀತೆಂದು ನಾವು ನಂಬುತ್ತೇವೆ. ಸದರಿ ಮಾಧವಭಟ್ಟರು ನಡೆಸುವ ಈ ಕಾರ್ಯಗಳು ಲೋಕೋಪಕಾರಾರ್ಥವಾಗಿಯೂ ಸರ್ವರಿಗೆ ಆರೋಗ್ಯದಾಯಕವಾಗಿಯೂ ಇರುವಂಥ ಸತ್ಕಾರ್ಯವಾದ್ದರಿಂದ ಅದರ ದೀಕ್ಷೆಯನ್ನು ಹಿಡಿದಿರುವ ಸದರಿ ಮಾಧವಭಟ್ಟರು ಕೇವಲ ಗರೀಬರಾಗಿದ್ದು ದೇವರಿಗೆ ಸರಕಾರಿ ತಸ್ತೀಕು ಸಹಾ ಬಹುಸ್ವಲ್ಪ ರೂ ೯ ಒಂಭತ್ತು ಮಾತ್ರ ಆಗಿರುವದರಿಂದ ಪರರ ಸಹಾಯವಿಲ್ಲದೆ ತಾನಾಗಿ ಈ ಪೂಜಾದಿಗಳನ್ನು ನಡಿಸಿಕೊಂಡು ಬರುವರೆ ಅಸಮರ್ಥರಾಗಿರುತ್ತಾರೆ. ಆದ್ದರಿಂದಸದರಿ ಸತ್ಕಾರ್ಯಗಳನ್ನು ಈಗ ನಡಿಸುವದಕ್ಕೂ ಸದೋಚಿತವಾಗಿ ನವಧ: ದೇವರ ಕಲಾಸಾನ್ನಿಧ್ಯವನ್ನು ದಿನದಿಂದ ದಿನಕ್ಕೆ ವೃದ್ಧಿಸುವಂತೆ ಸರ್ವರೂ ಸಹಾಯ ಮಾಡ್ಯಾರೆಂತಲೂ ಸದರಿ ದೇವಸ್ಥಾನವು ಈಗ ಬಹು ಜೀರ್ಣಸ್ಥಿತಿಯಲ್ಲಿರುವದರಿಂದ ಅದರ ಜೀರ್ಣೋದ್ಧಾರಕ್ಕೂ ಸಹಾಯಮಾಡಿ ಉತ್ತೇಜನ ಕೊಟ್ಟಾರೆಂತಲೂ ಸದರಿ ದೇವರ ಭಜಕರಾದ ನಾವು ಕೋರುತ್ತೇವೆ.

ಪೇಜಾವರ ಭೋಜರಾವ್	ಕೆ. ರಾಮಚಂದ್ರ ರಾವ್
ಕೋಟೆ ಸಣ್ಣಯ್ಯ ಹಂದೆ	ವಾ. ಗೋಪಾಲಕೃಷ್ಣ
ಬದವಿದ ವೆಂಕಪ್ಪಯ್ಯ	ದೇರೆಬೈಲು ವಾಸ್ತೇವರಾವ್
ಪತ್ತುಮುಡಿ ಅನಂತಯ್ಯ	ಎನ್. ವೆಂಕಟಕೃಷ್ಣರಾವ್
ಬೋಳಾರ ಸೀತಾರಾಮಯ್ಯ	ಚಿದಂಬರ ಶ್ರೀನಿವಾಸಾಚಾರ್ಯರು.
ಕೆ. ಗುರುರಾಜ ತಂತ್ರಿ	ಅತ್ತಾವರ ರಾಮರಾವ್
ಹೆಜಮಾಡಿ ರಾಮಕೃಷ್ಣಯ್ಯ	ಸುಜೀರ ರಘುನಾಥಯ್ಯ
ಪಿ. ಶಂಕರನಾರಾಯಣ ರಾವ್	

ಜೀನಸು ಧಾರಣೆ.

(ರಖಂ).

ಮಸ್ಸೂರಿ ಅಕ್ಕಿ	6 — 6 — 0	ರಿಂದ	6 — 12 — 0
ಗುಡ್ಡೆ ಸುಗ್ಗಿ	6 — 2 — 0	,,	6 — 5 — 6
ರಾಶಿ	5 — 14 — 0	,,	6 — 0 — 0
ಅವ್ವಲ್ ಬೆಳ್ತಿಗೆ	6 — 9 — 0	,,	6 — 12 — 0
ಗುಡು ಬೆಳ್ತಿಗೆ	6 — 0 — 0	,,	6 — 4 — 0
ರಂಗೂನು ಬೆಳ್ತಿಗೆ ಗೋಣಿ ೧ರ	10 — 2 — 0	,,	10 — 4 — 0
ಗೋದಿ ಗೋಣಿ ೧ರ	20 — 0 — 0	,,	20 — 8 — [illegible]
ಹುರುಳಿ ಗೋಣಿ ೧ರ.	6 — 10 — 0	,,	7 — 12 — 0
ಕಡಲೆ ಗೋಣಿ ೧ರ ಬೊಂಬ್ಯ	9 — 8 — 0	,,	10 — 8 — 0
ತೊಗರಿ ಗೋಣಿ ೧ರ			10 — 8 — 0
ತೊಗರಿಬೇಳೆ ಗೋಣಿ೧ರ 11 — 0 — 0	12 — 8 — 0	,,	15 — 8 — 0
ಉದ್ದು ಗೋಣಿ ೧ರ	11 — 0 — 0	,,	11 — 12 — 0
[illegible]		,,	[illegible] — 0 — 0
ಉಪ್ಪು ಗೋಣಿ ೧ರ		,,	5 — 14 — 0
ಕೊಬ್ರಿ ಖಂಡಿ ೧ರ	70 — 0 — 0	,,	75 — 0 — 0
ಬೆಂಡ್ರಿತಿಂಡಿ ಖಂಡಿ ೧ರ.	22 — 8 — 0	,,	23 — 0 — 0
ಎಳ್ಳಿಂಡಿ ಖಂಡಿ ೧ರ ಬೊಂಬ್ಯ	28 — 12 — 0	,,	32 — 8 — 0
ಕೊಬ್ರಿ ಎಣ್ಣೆ ಮುಡಿ ೧ರ	5 — 4 — 0	,,	5 — 8 — 0
ಎಳ್ಳೆಣ್ಣೆ ಮುಡಿ೧ರ(ಘಟಾಸನ)		,,	4 — 12 — 0
ಹುಮದ ಎಣ್ಣೆ ಪೆಟ್ಟಿಗೆ ೧ರ	6 — 12 — 0	,,	7 — 9 — 0
ಮೋರಿಸ್ ಸಕ್ಕರೆ-ಮುಡಿ ೧ರ	5 — 4 — 0	,,	5 — 6 — 0
ಕಾಫಿ ಖಂಡಿ ೧ರ	150 — 0 — 0	,,	165 — 0 — 0
[illegible] ಖಂಡಿ೧ರ	72 — 0 — 0	,,	78 — 0 — 0
[illegible] ಮುಡಿ ೧ರ	1 — 8 — 0	,,	1 — 10 — 0
[illegible] ಖಂಡಿ ೧ರ	105 — 0 — 0	,,	110 — 0 — 0
[illegible] ಮುಡಿ ೧ರ	31 — 0 — 0	,,	34 — 8 — 0
[illegible] ಮುಡಿ ೧ರ		,,	34 — 0 — 0
[illegible] ೧ರ	29 — 8 — 0	,,	35 — 4 — 0
[illegible] ಮುಡಿ ೧ರ		,,	5 — 2 — 0
[illegible]		,,	235 — 0 — 0

K. B. RELE & Cos.,—BOMBAY

Estd. 1888. ಕೆ. ಬಿ. ರೇಳೆ ಕಂಪೆನಿಕೃತ ಸ್ಥಾಪನೆ 1888.

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆ ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಕ್ಷಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ೫ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದರೆ ನಮ್ಮ ಕ್ಯಾಟಲಾಗನ್ನು ಕಳುಹಿಸಿ ಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ)ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯು ಸಂದು ನೋವೋಣ, ಕೈಕಾಲು ಬತಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗೂ ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರ್ಜರಿ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ,

ಗಿರಗಾಂವ ನಂ. ೪ ಮುಂಬಯಿ.

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. ಇದು ಗಂಧದ ಎಣ್ಣೆಯನ್ನು ತೇದು ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಒಂದಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಮೈಸೂರು ನಮ್ಮ ಹೆಡ್ ಆಫೀಸಿನಲ್ಲಿ ದೊರೆಯುವಂತೆ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಸಹ ಮಂಗಳೂರಿನಲ್ಲಿರುವ ದಿ ಉಲನ್ ಮಾರ್ಟ್‌ರವರಲ್ಲಿಯೂ ಸಹ ದೊರೆಯುತ್ತೆ.

ದಿ ಉಲನ್ ಮಾರ್ಟ್,
ಸೋಲ್ ಏಜಂಟ್ಸ್,
ಮಂಗಳೂರು.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ; ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಹಾ ಮಾತಿಗೂ ವೈದ್ಯರ ಸಮಯವನ್ನು ಕಾದು ಕೂರೆಯುಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0.

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ। ರಾ। ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ. ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಎಗಿಯರಿವೇನ್ ನಂ. 2, ಬೆಂಗಳೂರು ಇವರು ಬರೆದಿರುವುದು. ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ನೋಡಿದರಲ್ಲಿ [illegible] ಅಜೀರ್ಣ, ಮಲಬದ್ಧತೆ, ಹೊಟ್ಟೆಯ ನೋವು, [illegible] ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ವೈದ್ಯರು ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ.

ಮ। ರಾ। ಬಿ. ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. [illegible] ಅನೇಕ ಆಶ್ಚರ್ಯಕರ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ತುಂಬಾ ಸಂತೋಷಪಡುತ್ತೇನೆ. ವೈದ್ಯಶಾಸ್ತ್ರದಲ್ಲಿ ಅನೇಕ ತರದ ಉಪಯುಕ್ತವಾದ [illegible] ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ಏಜಂಟ—ಶ್ರೀ [illegible] ವೈದ್ಯಶಾಲಾ, [illegible]

A Kannada Popular Science Monthly.

"ವಿಜ್ಞಾನ" ವೆಂಬ ಕನ್ನಡ ಮಾಸಪತ್ರಿಕೆ.

ಇದರಲ್ಲಿ ಜನರಿಗೆ ಉಪಯುಕ್ತವಾದ ಆಧುನಿಕ ವಿಜ್ಞಾನದ ವಿಷಯಗಳು, ಸಾಮಾನ್ಯ ಜನರಿಗೆ ತಿಳಿಯುವಂತೆ, ಸುಲಭವಾದ ಕನ್ನಡದಲ್ಲಿ ಸ್ವಾರಸ್ಯವಾಗಿ, ಅನೇಕ ಚಿತ್ರಗಳೊಡನೆ ವಿವರಿಸಲ್ಪಡುವುವು. ಸಂಚಿಕೆಗೆ ೩೨ ಪುಟಗಳು. ಈ ವರುಷದ ಚೈತ್ರದಿಂದ ಮೊದಲ್ಗೊಂಡು ಹನ್ನೆರಡು ಸಂಚಿಕೆಗಳಿಗೆ, ಚಂದಾ ಮೊಬಲಗು, ಮೂರು ರೂಪಾಯಿಗಳು.

ಅಪೇಕ್ಷಿಸಿದಲ್ಲಿ ಮಾದರಿ ಪುಟಗಳನ್ನು ಉಚಿತವಾಗಿ ಕಳುಹಿಸುವೆವು.

ಬಿ. ವೆಂಕಟನಾರಣಪ್ಪ ಎಂ. ಎ.,
ಮ್ಯಾನೇಜರ್, "ವಿಜ್ಞಾನ"
ಬಸವನಗುಡಿ, ಬೆಂಗಳೂರು ಸಿಟಿ.

ಒಂದು ಸಾರಿ ಕೊಂಡು ನೋಡಿರಿ!!

ಒಟ್ಟೊ ದಿಲ್-ಬಹಾರ್.

(ರಿಜಿಸ್ಟರ್ಡ.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವ ಸುಗಂಧವು. ಒಂದೆರಡು ತಟಕು ಹನಿ ವಸ್ತ್ರದಲ್ಲಿ ತಾಗಿಸಿದ್ದರೆ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

ಕ್ರಯ ½ ಡ್ರಾಮ್ ಟ್ಯೂಬ್ ರೂ. 0-8-0. 1 ಡ್ರಾಮ್ ಟ್ಯೂಬ್ ರೂ. 0-12-0. ½ ಔನ್ಸ ಟ್ಯೂಬ್ 2-0-0 ಒಟ್ಟೊ-ದಿಲ್-ಬಹಾರ್ ಪರಿಮಳದ ಕಾರ್ಡುಗಳು ಡಜನ್ 10-12-0. ವಿ. ಪಿ. ಚಾರ್ಜು 0—4—0 ಬೇರೆ.

ಖ್ಯಾತಮುಖ್ಯ ಏಜಂಟರು:—
ಎಚ್. ಆರ್. ಮೋದಿ ಎಂಡ್ ಕೊ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY.

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಬ್‌ಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಈ ಸಾಲಾಬ್‌ಮಿಸ್ರಿ ಮುರಬ್ಬಾ ದಿನ ಸೇವನೆ ಮಾಡಿದ—ವೀರ್ಯವು ನೀರಿನಂತೆ

ಇದ್ದರೂ, ಸ್ವಪ್ನದೋಷವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಬ್‌ಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಈ ಮುರಬ್ಬಾವು ಸಾಲಾಬ್ ಮಿಸ್ರಿಯಿಂದ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ—

1,000

ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುವು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ಕ್ರಯ ಡಬ್ಬಿ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ 0—6—0. ಉಪಯೋಗಿಸುವ ವಿಧ ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮುನ್ನಾಲಾಲ್, ಡಿಲ್ಲಿ ವೈದ್ಯರು,
೫ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಧರ್ಮದಿಂದ ಪ್ರಜಾಪಾಲನೆ ನಡಿಯುವುದಕ್ಕಾಗಿ ಪ್ರಭುಗಳು ಅನೇಕ ಕಟ್ಟಳೆಗಳನ್ನು ವಿಧಿಸಿರುತ್ತಾರೆ. ಇವುಗಳಿಗೆ ಆಕ್ಟು, ಕೋಡು, ಶಾಸನ, ಕಾನೂನೆಂತ ಅನೇಕ ಹೆಸರುಗಳು. ಇವು ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯು (ಮುಲ್ಕಿ) ಎಂಬು ವಿಭಾಗಗಳಾಗಿವೆ. ಇವುಗಳ ಮುಖ್ಯಾಂಶಗಳನ್ನು ಪ್ರತಿಯೊಬ್ಬನು ಅರಿತಿರಬೇಕು. ಕಾನೂನು ತಿಳಿಯದೆಂದು ಯಾರೂ ಹೇಳಕೂಡದು ಹಾಗೆ ಹೇಳುವುದನ್ನು ಅಂಗೀಕರಿಸುವುದಿಲ್ಲವೆಂದು ಸರ್ಕಾರದವರು ವಿಧಾಯಿಸಿದ್ದಾರೆ. ಪ್ರತಿ ಮನುಷ್ಯನಿಗೆ ತಿಳಿದಿರಬೇಕಾದ ಪೆನಲ್ ಕೋಡು, ಕ್ರಿಮಿನಲ್ ಪ್ರೊ. ಕೋಡು, ಸಿವಿಲ್ ಪ್ರೊ. ಕೋಡು, ಕಂಟ್ರ್ಯಾಕ್ಟ್ ಆಕ್ಟ್, ಸ್ವತ್ತುಗಳ ವರಥಾವಣೆ ಆಕ್ಟ್, ದ್ರೋಹದ ವಿವರಣೆ ಮತ್ತು ಲಿಮಿಟೇಶನ್ ಆಕ್ಟ್, ಸ್ಟ್ಯಾಂಪ, ಕೋರ್ಟ ಫೀ, ರಿಜಿಸ್ಟ್ರೇಶನ್ ಆಕ್ಟ್, ಹಿಂದೂ ಲಾ, ದೊಡ್ಡಿ ಆಕ್ಟ್, ಸ್ಪೆಸಿಫಿಕ್ ಆಫ್ ಕಂಟ್ರ್ಯಾಕ್ಟ್, ಮಕ್ಕಳ ಮದುವೆ ಆಕ್ಟ್, ರೆವಿನ್ಯು ಕೋಡ್, [illegible] ವಕೀಲರ ಕೋಡ್, ಗ್ರಾಮ ಮುನ್ಸೀಫ್ ಕೋರ್ಟ್ ಕೋಡ್, ಸಹೋದರರು ಮನೆಗಳನ್ನು ಭಾಗಮಾಡಿಕೊಳ್ಳುವ ಕೋಡ್, ಮುಂತಾದವುಗಳ ಸಂಗ್ರಹಗಳು, ಅನೇಕ ಅರ್ಜಿ ನಮೂನೆಗಳು ಮತ್ತು [illegible] 40 ನಮೂನೆಗಳು ಇದರಲ್ಲಿವೆ. ಇದು ಪ್ರತಿಯೊಬ್ಬನ [illegible]

[illegible] 1—8—0. ವಿ. ಪಿ. 1—12—0.

ಡಾ. ಯುಸ್. ನಂಜಪ್ಪನವರು,
[illegible], ಮೈಸೂರು.

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ತುಂಬಾ ಕಡಿಮೆ ಮಾಡಿರುತ್ತೇವೆ.

೨೮೦ ಕಥೆಗಳುಳ್ಳ

ಅಕಬರ ಬೀರಬಲರ ವಿನೋದ ಕಥೆಗಳು

ಸುಮಾರು ೪೦೦ ವರುಷಗಳ ಹಿಂದೆ ಡಿಲ್ಲಿ (ಹಸ್ತಿನಾಪುರ) ಯಲ್ಲಿ ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಕಬರ ಬಾದಶಹನ ಓಲಗದಲ್ಲಿ ವಿದ್ವನ್ಮುಕುಟಮಣಿಯಾಗಿದ್ದ ಬೀರಬಲನ ಹೆಸರನ್ನು ಅರಿಯದ ಮನುಷ್ಯನು ಈ ಹಿಂದುದೇಶದಲ್ಲಿ ಒಬ್ಬನಾದರೂ ದೊರೆಯುವದು ದುರ್ಲಭವು. ಇಂಥ ಅಕಬರ ಬಾದಶಹ ಮತ್ತು ಬೀರಬಲರನಡುವೆ ನಡದಂಥ ಚಾತುರ್ಯವಾದ ವಿನೋದ ರಸಭರಿತ ೨೮೦ ಕಥೆಗಳುಳ್ಳ ಈ ಗ್ರಂಥವನ್ನು ಓದುವದರಿಂದ ವ್ಯವಹಾರಿಕ ಜ್ಞಾನವು ಬೆಳೆದು ವಿನೋದದಿಂದ ಹೊತ್ತು ಕಳೆಯುವುದಕ್ಕೆ ಒಳ್ಳೇ ಸಾಧನವಾಗಿದೆ. ಇದನ್ನು ಓದಿದವರ ಹಾಗೂ ಕೇಳಿದವರ ಹೊಟ್ಟೆಯು ನಕ್ಕು ನಕ್ಕು ಹುಣ್ಣಾಗುವದು. ಇಂಥ ವಿನೋದಪ್ರಚುರವಾದ ಈ ಗ್ರಂಥವು ಅಂದವಾದ ಮುದ್ರಣದಿಂದ ಅಚ್ಚು ಹಾಕಲ್ಪಟ್ಟಿದೆ. ಪ್ರತಿಯೊಬ್ಬ ಮನುಷ್ಯನು ಅವಶ್ಯವಾಗಿ ಸಂಗ್ರಹಿಸತಕ್ಕದ್ದು.

ಇದರ ಬೆಲೆ ಪ್ರತಿ 1ಕ್ಕೆ ರೂ. 1—8—0. ಟಪ್ಪಾಲು ಹಾಸಲು 4 ಆಣೆ.

ಪ್ರತಿ ಒಬ್ಬರೂ ನೋಡತಕ್ಕದ್ದಾಗಿದೆ.

೮೦ ಕಥೆಗಳುಳ್ಳ

ಸಚಿತ್ರ ಸ್ತ್ರೀಚರಿತ್ರ

ಈ ಪುಸ್ತಕದಲ್ಲಿ ಅಜ್ಞಾನದಿಂದ ವ್ಯಭಿಚಾರಕರ್ಮಿಗಳಾದ ಸ್ತ್ರೀಯರಿಗೆ ಉಂಟಾಗಿರುವ ಹಾನಿಯನ್ನೂ, ಪತಿವ್ರತಾ ಧರ್ಮಪರಾಯಣರಾಗಿರುವ ಸ್ತ್ರೀಯರಿಗೆ ಉಂಟಾಗಿರುವ ಮೇಲನ್ನೂ ಸರಸವಾದ ೮೦ ಕಥೆಗಳಿಂದ ವರ್ಣಿಸಲ್ಪಟ್ಟಿದೆ. ಪ್ರತಿಯೊಂದು ಕಥೆಯ ಅಂತ್ಯಭಾಗದಲ್ಲಿ ಹೇಳಿದ ಸದ್ಬೋಧ ವಚನಗಳು ಪ್ರತಿಯೊಬ್ಬ ಸ್ತ್ರೀಪುರುಷರು ಮನನಮಾಡಿಕೊಂಡು ಸನ್ಮಾರ್ಗ ಪ್ರವರ್ತಕರಾಗುವದಕ್ಕೆ ಒಳ್ಳೇ ಅನುಕೂಲವಾಗಿದೆ. ಅಲ್ಲಲ್ಲಿ ಬಣ್ಣದ ಭಾವಚಿತ್ರಗಳಿಂದ ಮನೋಹರವಾಗುವಂತೆ ಅಂದವಾದ ಮುದ್ರಣದಿಂದ ಅಚ್ಚುಹಾಕಿಸಿದೆ. ಆದ್ದರಿಂದ ಪ್ರತಿಯೊಂದು ಕುಟುಂಬದವರು ಸಂಗ್ರಹಿಸಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಡಿಮೆ ಇಟ್ಟಿರುತ್ತದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 2—0—0. ಟಪ್ಪಾಲು ಹಾಸಲು 4 ಆಣೆ.

೧,೦೦೧ ರಾತ್ರೆ ಕಥೆಗಳು

ಅರೇಬಿಯನ್ ನೈಟ್ಸ್ ಕಥೆ.

೧,೦೦೧ ದಿನ ರಾತ್ರೆಗಳಲ್ಲಿ ರಾಣಿಯಾದ ಶಹಜಾದಿಯು ಬಾದಶಹನಿಗೆ ಹೇಳಿದ ಮನೋರಂಜಕವಾದ ಕಥೆಗಳು.

ಪೂರ್ವಕಾಲದಲ್ಲಿ ಅರಬ್ಬಿದೇಶದಲ್ಲಿ ಹೇಳಲ್ಪಟ್ಟ ಅನೇಕ ವಿಚಿತ್ರವಾದ ಕಥೆಗಳನ್ನು "ಅರೇಬಿಯನ್ ನೈಟ್ಸ್ ಎಂಟರ್ ಟೇಯಿನ್ ಮೆಂಟ್ಸ್" ಎಂದು ಇಂಗ್ಲಿಷ್ ಭಾಷೆಯಲ್ಲಿ ಪ್ರಚುರಪಡಿಸಿದಂಥಾದ್ದನ್ನು ನಮ್ಮ ಕರ್ನಾಟಕ ದೇಶೀಯರಿಗೆ ಸುಲಭವಾಗಿ ತಿಳಿಯುವಂತೆ ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ.

ಇದರ ಬೆಲೆ ಪ್ರತಿ 1ಕ್ಕೆ ರೂ. 1—4—0. ಟಪ್ಪಾಲು ಹಾಸಲು 4 ಆಣೆ.

ನಮ್ಮ ವಿಳಾಸ:—ಯಸ್. ಕೆ. ಕೃಷ್ಣಸ್ವಾಮಿಶೆಟ್ಟಿ, ಕರ್ನಾಟಕ ಬುಕ್ ಡಿಪೊ ಪ್ರೆಸ್, ಬಳ್ಳಾರಿ.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಕಂತೀ ವಿಳಾಸ:— "ಪಂಡಿಟ್" ಮದರಾಸ್.

ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ವಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ. ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚುನಾಯಿ, ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಪಟ್ಟು ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬಡುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ದನಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಆಹ್ನಿಕಮಂಜರೀ.

ಋಗ್ವೇದೀಯ ಸ್ವರಯುಕ್ತವಾದ ಕನ್ನಡಾಕ್ಷರದ ಸಂಧ್ಯಾದಿ ನಿತ್ಯಕರ್ಮಪದ್ಧತಿ ಪುಸ್ತಕವು. ಸ್ವಲ್ಪವೇ ಇರುವದರಿಂದ ಬೇಗ ತರಿಸಿಕೊಳ್ಳಿ. ಬೆಲೆ ಪುಸ್ತಕ ೧ಕ್ಕೆ ರೂ. ೧. ಪೋಸ್ಟು ಖರ್ಚು ಬೇರೆ.

M. S. Rao Co.,
Avenue Road,
BANGALORE CITY.

ಮ್ಯಾನೇಜರ್,
ವೇದಪಾಠಶಾಲಾ,
ತೀರ್ಥಮುತ್ತೂರು, ತೀರ್ಥಹಳ್ಳಿ.

ಮುಂಬೈಲೈಫ್ ಎಸ್ಯುರೆನ್ಸ್ ಕೊ.

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು:— ಬಹುಮಾನಪಟ್ಟ ಮಿ ಲಲ್ಲುಬಾಯಿ, ಸಾಮಲ್‌ದಾಸರವರು ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು:—ಪ್ರೇಮ್‌ರೋಜ್ ಆರ್ ಜೋಶಿರವರು, ಜೆ.ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚು ವೆರಿ:— ಮಿ ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 200,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳುಹಿಸಿಕೊಡುವ ಏಜನ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೊಚ್ಚಿಕಾರ್ ಬ್ರದರ್ಸ್, ಉಡುಪಿ,
ಪ್ರಾಮುಖ್ಯ ಏಜಂಟರು.

ಸೂಚನೆ:— ಮಂಗಳೂರಲ್ಲಿರುವ ಈ ಕಂಪೆನಿಯ ವಿಮೇದಾರರು ತಮ್ಮ ವಿಮು ಮೊಬಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಶೀದಿಯನ್ನು ಕೊಚ್ಚಿಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಸೇಲಂ, ತಾ. 10—4—16.

ಮುಂಬಯಿ ಲೈಫ್ ಎಸ್ಯುರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಿಗೆ—

ನನ್ನ ಮಗಳ ಗಂಡನ ಪೋಲಿಸಿ ಪ್ರಕಾರ ನನ್ನ ಮಗಳಿಗೆ ಪಾವತಿಯಾಗತಕ್ಕ ಹಣವನ್ನು ಸದರಿಯವಳಿಗೆ ಪ್ರಾಯ ಬಂದೊಡನೆ ಮತ್ತು ಪೋಲಿಸಿ ಪ್ರಕಾರ ಬೇಕಾದ ಇತರ ರುಜುವಾತನ್ನು ಸಂಗ್ರಹಿಸಿ ಕೊಟ್ಟೊಡನೆ ತಕ್ಷಣ ಬಗ್ಗೆ ಈ ಮೂಲಕ ನಿಮ್ಮನ್ನು ವಂದಿಸುತ್ತೇನೆ. ಪೋಲಿಸಿ ಕ್ಲೈಮು ಪ್ರಕಾರ ಕೂಡಲೆ ಹಣವನ್ನು ವಿಮೇದಾರರಿಗೆ ಪಾವತಿಮಾಡುವ ವಿಶೇಷ ಗುಣವು ಈ ಕಂಪೆನಿಯಲ್ಲಿದೆಂಬುದನ್ನು ಕಾರ್ಯತಃ ತಿಳಕೊಂಡು ಬಹಳ ಸಂತೋಷಪಟ್ಟಿರುವೆನು. ಇತರ ವಿಮ ಸಂಘಗಳಲ್ಲಿಲ್ಲದ ಹಲವು ಅನುಕೂಲತೆಗಳು ಈ ಕಂಪೆನಿಯಲ್ಲಿರುವವು. ಕ್ಲೈಮು ಪ್ರಕಾರ ಹಣವನ್ನು ವಿಮೇದಾರರ ಮನೆಗೆ ತಂದುಕೊಡುವಂಥಾದ್ದು ಈ ಕಂಪೆನಿಯ ಮತ್ತೊಂದು ವಿಶೇಷ ಲಕ್ಷಣವಾಗಿರುತ್ತದೆ. ಈ ಕಂಪೆನಿಯ ಇಲ್ಲಿಯ ಏಜಂಟರಾಗಿರುವ ರಾಜಶ್ರೀ ರಾಮರಾವ್ ಡಾಂಗೆ ಮತ್ತು ಕಂಪೆನಿಯವರಿಗೆ ಸದಾ ವಿಜಯ ಉಂಟಾಗಲೆಂದು ಕೋರುತ್ತೇನೆ.

ಡಬ್ಲ್ಯು ವೀರಸಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಕೋರ್ಟು ಪ್ಲೀಡರ್, ಸೇಲಂ.

ಮಕ್ಕಳು ಆಡುವ ಸಾಮಾನುಗಳು

ಈ ಸಾಮಾನುಗಳು ಹಿತ್ತಾಳೆ ಮತ್ತು ಕಂಚಿನಿಂದ ತಯಾರಾದವುಗಳು. ಮಕ್ಕಳ ಆಟಗಳಿಗೆ ಯೋಗ್ಯವಾದಂಥಾ ೩೩ ಸಾಮಾನುಗಳು ಇರುವ ಪೆಟ್ಟಿಗೆ ೧ಕ್ಕೆ ೧—೮—೦. ಮಧ್ಯಮ ತರದಸೆಟ್ಟು ೧ಕ್ಕೆ ೨-೦-೦. ದೊಡ್ಡ ಸೆಟ್ಟು ಉತ್ತಮತರಹ ೧ಕ್ಕೆ ರೂ. ೪—೦—೦.

ಕಾಬುಲಿ ಇಂಗು.

ಉತ್ತಮ ತರಹ ರೂಪ್ಯಾ ೧ಕ್ಕೆ ೪ ತೊಲೆ, ದುಯಂ ರೂಪ್ಯಾ ೧ಕ್ಕೆ ೮ ತೊಲೆ, ಶೀಯಂ ರೂಪ್ಯಾ ಒಂದಕ್ಕೆ ೧೦ ತೊಲೆ, ಚಾರಂ ರೂಪ್ಯಾ ೧ಕ್ಕೆ ೧೬ ತೊಲೆ.

ಇದಲ್ಲದೆ ಬೇರೆ ರೀತಿ ಸಾಮಾನುಗಳ ಕ್ಯಾಟಲಾಗನ್ನು ಕೋರುವವರಿಗೆ ಧರ್ಮಾಗಿ ಕಳುಹಿಸಲಾಗುವದು, ಪೋಸ್ಟು ಖರ್ಚು ಬೇರೆ.

ನಮ್ಮ ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ
ಮತ್ತು ಕಂಪೆನಿ,

SIROMANI NARAYANA CHARYA & CO.

ಶ್ರೀ ರಾಮೇಶ್ವರ ಯಾತ್ರೆ.

ಕ್ಷೇತ್ರ ಸ್ಥಳಗಳಲ್ಲಿ ಭಾಷೆ ತಿಳಿಯದಿರೋಣ, ವಸತಿ, ನೀರು ಮತ್ತು ಆಹಾರ ಸಾಮಗ್ರಿಗಳ ಕೊರತೆ, ಮೋಸಗಾರರ ಭಯ, ಇವೇ ಮೊದಲಾದ ಹಲವು ವಿಧವಾದ ಅಡಚಣೆಗಳು ಇದ್ದೇ ಇರುವವಷ್ಟೆ! ನಾನು ಕಳೆದ ಆರು ವರ್ಷಗಳಿಂದ ಈ ಊರಿನಲ್ಲಿ ವೈದಿಕವೃತ್ತಿ ನಡೆಸಿ ಸ್ಥಳವಂದಿಗನಾಗಿ ವಾಸವಾಗಿದ್ದು ಪೂರ್ಣ ಅನುಭವವುಳ್ಳವನಾಗಿದ್ದೇನೆ. ಮತ್ತು ಯಾತ್ರಿಕರಾಗಿ ಬರುವ ಕನ್ನಡ, ತುಳು, ಮರಾಟಿ ಮುಂತಾದ ಯಾವ ಭಾಷೆಯ, ಯಾವ ಜಾತಿಯ ಜನರಿಗೂ, ಮುಂದಾಗಿ ತಿಳಿಸಿದ ಪಕ್ಷದಲ್ಲಿ, ಬಹು ಸ್ವಲ್ಪ ವೆಚ್ಚದೊಳಗಾಗಿ ಸಮಸ್ತ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಯಾತ್ರೆಯು ಸುಲಭವೂ ಸುಖಕರವೂ ಆಗುವಂತೆ ಮಾಡಿಕೊಡಲು ಸಿದ್ಧನಾಗಿದ್ದೇನೆ.

ನಮ್ಮ ವಿಳಾಸ— ಬಂಟವಾಳ ಕೃಷ್ಣ ಭಟ್ಟಜಿ,
ಪುರೋಹಿತ, ಧರ್ಮಪುರೀ ಛತ್ರ,
ಪೋಸ್ಟು ...

ಒಂದು ತಿಂಗಳ ಕಾಲಕ್ಕೆ ಮಾತ್ರ!

ಅರ್ಧ ಕ್ರಯಕ್ಕೆ ಮಾರಲ್ಪಡುವವು.

ಪ್ಲುಟ್ ಹಾರ್ಮೋನಿಯಮ್‌ಗಳು.



ಎಲ್ಲಾ ನಮೂನೆಯ ಗಾಯನಗಳಿಗೆ ತಕ್ಕಂಥವುಗಳು, ಯಾವ ಹವಾಗುಣಗಳಲ್ಲಿ ಆದರೂ ಬಾಳುವಂಥವುಗಳು. ಒಳ್ಳೆ ಮಾಗಿದ ಸಾಗವಾನಿ ಮರದ ಹಲಿಗೆಗಳಿಂದ ತಯಾರಿಸಲ್ಪಟ್ಟವುಗಳು. ಇವುಗಳಲ್ಲಿರುವ ರೀಡ್ಸ್‌ಗಳು ಉತ್ತಮ ತರಗತಿಯ್ದಾಗಿವೆ. ಸಮ್ಮತವಾಗದ ಈ ಹಾರ್ಮೋನಿಯಮ್‌ಗಳನ್ನು ಇವುಗಳು ತಲ್ಪಿದ ೫. ದಿವಸಗಳಲ್ಲಿ ಹಿಂತಿರುಗಿ ಕಳುಹಿಸಿದರೆ ಪಡೆಕೊಳ್ಳುತ್ತೇವೆ. ಸಿಂಗಲ್ ರೀಡ್ ಇರುವಂಥವುಗಳಿಗೆ ರೂ. 40, 45, 50 ಕ್ರಯದವುಗಳು ರೂ 20, 22—8—0, 25—0—0 ಕೊಡೋಣಾಗುವವು. ಡಬ್ಬಲ್ ರೀಡ್ ಇದ್ದವುಗಳು ರೂ. 70, 80, 90 ಕ್ರಯದವುಗಳನ್ನು ರೂ. 35, 40, 45ಕ್ಕೆ ಈಗ ಕೊಡುತ್ತೇವೆ. ಕೈಗಳಿಂದಲೂ ಕಾಲುಗಳಿಂದಲೂ ಬಾರಿಸಬಹುದಾದ ಅತ್ಯುತ್ತಮ ಡಬ್ಬಲ್ ರೀಡ್ ಮಡಚುವಂಥ ರೂ. 130ರ ಹಾರ್ಮೋನಿಯಮ್‌ಗಳು ಈಗ ರೂ 65ಕ್ಕೆ ದೊರಕುತ್ತವೆ. ಹಾರ್ಮೋನಿಯಮ್‌ಗಳು ಬೇಕಾದವರು ಕ್ರಯದ ಕಾಲು ಅಂಶವನ್ನು ಮುಂಗಡವಾಗಿ ಕಳುಹಿಸಬೇಕು, ಮತ್ತು ತಮಗೆ ಸಮೀಪವಿರುವ ರೈಲ್ವೆ ಸ್ಟೇಶನನ್ನು ಸಹ ತಿಳಿಸಬೇಕು. ಪತ್ರವ್ಯವಹಾರವನ್ನು ಇಂಗ್ಲಿಷ್ ಭಾಷೆಯಲ್ಲಿಯೆ ಬರೆಯಬೇಕಾಗಿದೆ

ನೆಷನಲ್ ಹಾರ್ಮೋನಿಯಮ್ ಕಂಪೆನಿ,

10,8 ಲೊವರ್ ಚಿತ್‌ಪುರ ರೋಡ.

ಟೆಲಿಗ್ರಾಮುಗಳ ಬಗ್ಗೆ ವಿಳಾಸ: — ಮ್ಯೂಜಿಸಿಯನ್ಸ್, ಕಲ್ಕತ್ತಾ.

ಉಚಿತ! ಉಚಿತ! ಉಚಿತ!

ಕ್ರಯ ೫ ರೂ. ಉಳ್ಳ ಇಂಗ್ಲಿಷ್ ಲಿವರ್ ವಾಚು ಉಚಿತ.

ಈ ನಕ್ಷೆಯಲ್ಲಿ ಕಂಡ ಪ್ರಸಿದ್ಧಿಯನ್ನು ಹೊಂದಿದ ಇಂಕಿಯನ್ನು ಅದ್ದದೆ ಕಾನಾಗಿ ಬರೆಯುವ ಅಮೆರಿಕಾ ದೇಶದಲ್ಲಿ ತಯಾರಿಸಿದ ೧೪ ಕ್ಯಾರಟ್ ಚಿನ್ನದ ಮುಳ್ಳುಳ್ಳ ಫೌಂಟನ್ ಪೇನಾ ಮತ್ತು ಇದಕ್ಕೆ ಹಾಕುವ ೧ ಬಾಟ್ಲಿ ಇಂಕಿ ಸಹಿತ ಕ್ರಯ ರೂ ೩—೪—೦ ಈ ಪೇನವನ್ನು ತರಿಸಿಕೊಳ್ಳುವವರಿಗೆ ಹೆಸರು ಪ್ರಖ್ಯಾತಿಯಾಗುವದಕ್ಕಾಗಿ ಕೆಲವು ಕಾಲದವರೆಗೆ ಮಾತ್ರವೇ ಮೇಲೆ ಹೇಳಿದ ೫ ರೂಪಾಯಿ ಬೆಲೆಯ ವಾಚನ್ನು ಉಚಿತವಾಗಿ ಕೊಡಲ್ಪಡುತ್ತೆ. [177-2]

ವಿಳಾಸ— ಮದರಾಸು ಮೇಲ್ ಆರ್ಡರು ಕಂಪೆನಿ,

ನಂ 2, ಸುಬ್ಬರಾಯ ನಾಯ್ಡುನ್ ಲೇನ್,

ಬೈನಾಬಜಾರ್ ರೋಡ್, ಮದರಾಸು

ಆರ್. ಮಾರ್ಟಿನ್ಸ್‌ರ ಮಾತ್ರೆಗಳು

ನಂಬ್ರ ೨.

ದವಿಯಾನ ಮತ್ತು ಕಂಪೌಂಡ್ ಫೊಸ್ಫರಸ್ ಕೂಡಿರುವ ಈ ಮಾತ್ರೆಗಳು ದಿವ್ಯವಾದ ಏಳು ಔಷಧಿಗಳಿಂದ ತಯಾರಿಸಲ್ಪಟ್ಟಿವೆ. ಇದು ಕೂಡಲೇ ಗುಣಪಡಿಸುವ ಶಕ್ತಿಯುಳ್ಳದ್ದಾಗಿದ್ದು ಮಲಬದ್ಧತೆ, ಬಾಡಿದ ಮುಖ, ಕರುಳಿನ ಅಜೀರ್ಣ, ಸ್ನಾಯುಗಳ ಬಲಹೀನತೆ, ಸರ್ವ ವಿಧದ ಹೆಂಗಸರ ಬಲಹೀನತೆ, ಮೊದಲಾದ ರೋಗಗಳಿಗೆ ಸಿದ್ಧೌಷಧವು. ಅದಲ್ಲದೆ ಮೂತ್ರರೋಗ, ಭ್ರಾಂತಿ, ಗಂಡಿಗೆ ಬಡಿಯೋದು, ರಾತ್ರಿ ಬೆವರುವುದು, ಈ ರೋಗಗಳಿಗೂ ಗುಣಕಾರಿ. ಮೆದುಳು ಕೆಲಸ ಮಾಡುವವರಿಗೆ ಅತ್ಯುಪಕಾರಿ. ಪ್ರತಿ ಬಾಟ್ಲಿಯಲ್ಲಿ ೪೦ ಮಾತ್ರೆಗಳಿವೆ. ಬಾಟ್ಲಿಗೆ ರೂ ೧—೧೦—೦.

ಆರ್. ಮಾರ್ಟಿನ್ಸ್‌ರ್ಸ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮಲು ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವಲ್ಲಿ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಲಿ. ಅನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡದಿರುವಿರಿ. ಎಲ್ಲಾ ವಿಧವಾದ ಕೆಮ್ಮಲಿಗೂ ರಾಣಿಯಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯೆತ್ತದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ ೧—೨—೦.

ಆರ್. ಮಾರ್ಟಿನ್ಸ್‌ರ ಗ್ಲಿಟೋಡಾಯಿನ್.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ ೧—೧೪—೦.

ವಿಳಾಸ:—

ಆರ್. ಡಿ. ಕಟ್ಲಿ ಮತ್ತು ಕಂಪೆನಿ,

ನಂಬ್ರ ಡಿ. ಫ್ರೆಯರ್ ರೋಡ್,

ಮುಂಬಯಿ.

R. D. Kately & Co

No. D. Frere Road,

Near Wright & Co Fort Bombay

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇವರಲ್ಲಿ ಒಂದನೇ ಭಾಗ ಮದರಾಸ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟಿದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ತೋರಿಸ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 42 ಪ್ರತಿಮೆ ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸ ಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ 0—12—0.

ವಿ. ಪಿ. ಚಾರ್ಜು 2 ಆಣೆ

ಎರಡು ಭಾಗಗಳು ಸೇರಿ ಕ್ರಯ ರೂ 1—4—0 ... 2 ಆಣೆ.

ವಿಳಾಸ:— ಬಿ. ರಾಘವುಲು ನಾಯುಡು,

ಜಿಮ್ನಾಸ್ಟಿಕ್ಸ್ ಇನ್ಸ್‌ಟ್ರಕ್ಟರ್, ಪಾಚ್ಯಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,

Senior Gymnastic Instructor,

Pachiyappa's College, MADRAS.

N. B.—ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರೆಯಬೇಕು ಮತ್ತು ಕಾಗದಗಳನ್ನು ಇಂಗ್ಲೀಷಿನಲ್ಲಿಯೇ ಬರೆಯಬೇಕೆಂದು ಕೋರುವೆವು.

ಬಿಕರಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ಕರ್ಣಾಟಕ ಸಂಗೀತ

ಮೃಚ್ಛಕಟಿಕ ನಾಟಕ.

ಪ್ರತಿಯೊಂದರ ಕ್ರಯ ... ... ರೂ. 0—5—0

3 ಪ್ರತಿಗಳಿಗೆ „ ... ... „ 0-13—0

ಪೋಸ್ಟು ಖರ್ಚು ಅಲಾಹಿದಾ.

ವಿಳಾಸ:— ಬಿ. ಕೆ. ಪ್ರಭು,

ವಿಕ್ಟೋರಿಯಾ ಮುದ್ರಾಶಾಲೆ,

ಬಂಟ್ವಾಳ, ದ. ಕ.

ಯಕ್ಷಗಾನ.

ತುಳು ಪಂಚವಟಿ ರಾವಣಾಯಣ ... ಕ್ರಯ ರೂ. 0—3—0

ಕನ್ನಡ ದುಂದುಭಿ ಆಖ್ಯಾನ ... „ „ 0—4—0

ಕನ್ನಡ ಚಂದ್ರಮೌಳಿ ಕಾಳಗ ... „ „ 0—4—0

ಈ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಮೂರು ಪುಸ್ತಕಗಳನ್ನು ಒಟ್ಟು ತರಿಸಿಕೊಳ್ಳುವವರಿಗೆ ಕ್ರಯ ರೂ. 0—9—0. ವಿ. ಪಿ. ಹಾಸಲು ಪ್ರತ್ಯೇಕ. ಕೆಟಲಾಗು ಮುಫತ್ತು.

ವಿಳಾಸ:— ಕೆ. ಸುಬ್ರಾಯ ನಾಯ್ಕ ಎಂಡ್ ಸನ್ಸ್,

ಜಿ. ಟಿ. ಏಜನ್ಸಿ, ವಿಟ್ಲ, ದ. ಕ.

ದಂತ ವೈದ್ಯರಾದ

ಡಾಕ್ಟರ್ ಪಿ. ಡಿ. ಲಿಮಾರವರು

ಈ ಮೂಲಕ ತಿಳಿಯಪಡಿಸುವದೇನಂದರೆ:—ಅಮೇರಿಕಾ ದೇಶದ ಅತ್ಯುತ್ತಮವಾದ ಕೃತಕ ದಂತಗಳು ಈಗಲೇ ಬಂದಿರುತ್ತವೆ. ಬಡವರಿಗೂ ಅನುಕೂಲವಾಗುವಂತೆ ದರಗಳನ್ನು ಕಡಿಮೆ ಮಾಡಿದೆ.

ಒಂದು ತಿಂಗಳು ತನಕ ಮಾತ್ರನೇ ಮಂಗಳೂರಲ್ಲಿ ಇರುವರು. ಈ ಸಂದರ್ಭವನ್ನು ಕಳಕೊಳ್ಳಬೇಡಿರಿ.

ವಿಳಾಸ:— ಪಿ. ಡಿ. ಲೀಮಾ,

ಡೆಂಟಲ್ ಸರ್ಜನ್,

ಒಡೆಯರರ ಶೋಪಿನ ಬಳಿ,

ಮಂಗಳೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ಜಿನಭಿಷಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರಿಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,

Kalyanakaraka Bishagmandir.

POST POLALY, S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,

ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಅಮೃತಾರ್ಣವ ಅವಲೇಹ.

ಈ ಲೇಹವನ್ನು ಪ್ರತಿನಿತ್ಯವೂ ಉಪಯೋಗಿಸುವದರಿಂದ ಕೆಟ್ಟುಹೋಗಿರುವ ರಕ್ತವು ಶುದ್ಧಿಯಾಗಿ ರಕ್ತಪುಷ್ಟಿವುಂಟಾಗುತ್ತದೆ. ಶರೀರದಲ್ಲಿ ಉಷ್ಣಾಧಿಕವು ಕಡಿಮೆಯಾಗಿ ನೀರಾಗಿರುವ ವೀರ್ಯವು ವೃದ್ಧಿಗೊಳಿಸಿ ಧಾತು ಇವುಗಳನ್ನು ಪುಷ್ಟಿಸುತ್ತದೆ. ಕ್ಷಯರೋಗ, ಅತಿಸಾರ, ತಲೆನೋವು, ಎದೆನೋವು ಇತ್ಯಾದಿಗಳನ್ನು ಕಿತ್ತುಹಾಕುವುದಲ್ಲದೆ ದೇಹಕಾಂತಿ, ಶರೀರಸೌಖ್ಯ ಕೈಗೂಡಿಸುವದು. ಕ್ರಯ ಸುಲಭ! ಫಲವು ಅಧಿಕವು!!

೨೦ ಕೋಲಿಗೆ ರೂ. ೩—೦—೦ ಮಾತ್ರವೇ

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು.

ಮತ್ತು 96 ಮೌಂಟ್ ರೋಡ್, ಮದ್ರಾಸು.

Local Agents: **Raphael & Co.,**

Brito Buildings,

Hampankatta, MANGALORE.

ಕುಂಬಳೆ ಸರಸಿಂಹ ಲಕ್ಷ್ಮಣ ನಾಯ್ಕರಿಂದ ವಿರಚಿತವಾದ

ಸತ್ಯನಾರಾಯಣವ್ರತ ಮಹಾತ್ಮೆಯು.

ಇವರಲ್ಲಿ ಪೂಜಾ ವಿಧಾನವೆಂಬ ಒಂದು ಅಧ್ಯಾಯ ಮತ್ತು ವ್ರತಕಥಾ ಐದು ಅಧ್ಯಾಯಗಳಿವೆ. ಇದು ತಿಳಿಗನ್ನಡದ ಸುಲಭ ಶೈಲಿಯಾಗಿದ್ದು ಧಾಟಿ ಪದ್ಯದಿಂದ ವಿರಚಿಸಿಯದೆ. ಇದು ಪಾರಾಯಣಕ್ಕೆ ಸಹ ಯೋಗ್ಯವಾಗಿರುವದು. ಬೆಲೆ ೪ ಆಣೆ. ೩ ಪುಸ್ತಕಗಳು ಬೇಕಾದರೆ ೧೨ ಆಣೆಗೆ ವಿ. ಪಿ. ಮಾಡಿ ರವಾನಿಸಬಹುದು. ವಿ. ಪಿ. ಖರ್ಚು ನಾವೇ ವಹಿಸುವೆವು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರೆಯುವುದು.

ಪಿ. ಪಾಂಡುರಂಗ ವಿಟ್ಠಲ ನಾಯಕ್,

ಕುಂಬಳೆ, ದಕ್ಷಿಣ ಕನ್ನಡ.

ಮಂಗಳೂರಲ್ಲಿ ಕಾರದಾ ಛಾಪಖಾನೆಯಲ್ಲಿಯೂ ದೊರೆಯುವುದು.

ಹಲ್ಲುನೋವುಗಳಿಗೆ

ಖಾತ್ರಿಯಾದ ಔಷಧಿ.

ಇದರ ಗುಣವನ್ನು ನೋಡಿರಿ

ಹಲ್ಲುಗಳು ಅಲ್ಲಾಡುವದಿಲ್ಲ

ಡೊಕ್ಟರಗಳ ಚಿಕಿತ್ಸೆ ವ ದಂತಚೂರ್ಣಗಳ ಆಗತ್ಯವಿಲ್ಲ

ದಂತವೈದ್ಯರಿಂದ ಹಲ್ಲು ದವಡೆಗಳು ತೆಗಿಸುವದು ಅನಾವಶ್ಯಕ

ಸುಲಭವಾದ ಔಷಧಿ

ಬಾಯಿಯೊಳಗೆ ವ ಹಲ್ಲುಗಳಿಗೆ ಹಾಕಿಸುವ ಔಷಧವಲ್ಲ

ದೀರ್ಘಕಾಲದ ನೋವುಗಳಿಗೆ ಒಂದು ವಾರದ ಚಿಕಿತ್ಸೆ

ಕಿವಿಗಳಲ್ಲಿ 2, 3 ಬಿಂದುಗಳು ಹಾಕಿದ್ದರಿಂದಲೇ ಗುಣಹೊಂದುವದು

ಒಂದು ಶೀಸೆ ತರಿಸಿಕೊಳ್ಳಿ. ಇದರ ಗುಣವನ್ನು ಸ್ನೇಹಿತರಿಗೆ ಪ್ರಖ್ಯಾತಗೊಳಿಸಿ.

ಶೀಸೆ 1ರ ಕ್ರಯ ರೂಪಾಯಿ 1—4—0.

ಟಪ್ಪಾಲು ಹಾಸಲು ಪ್ರತ್ಯೇಕ.

ಈ ಕೆಳಗಿನವರ

ಕೆಂಡರ್ ಗಾರ್ಡನ್ ಮತ್ತು ದಂತವೈದ್ಯ ಶೋಪುಗಳಲ್ಲಿ ದೊರೆಯುವದು

STANY BROTHERS

Sole Agents

M. O. C's. Toothache

Specific, Mangalore.

ಹೆಯರ್‌ಫೂಡ್ ಎಂಬ ಕೇಶತೈಲ.

ಇದು ಸುಕೇಶತ್ವರಾದ ರಸಿಕರಿಗಾಗಿ ತಯಾರಿಸಿದ್ದಾಗಿದೆ. ರಸಿಕರಿಗೆ ಅನೇಕ ತರದ ಮಧುರ ಸುವಾಸನೆಯುಳ್ಳ ಅನುರಂಜಕ ಮಾನಸೀಕ ದೇಹಕವು ಸಿಗೆಯುತ್ತಿರುವುದು ಸಹಜವಾಗಿದೆ. ಈ ಸಲುವಾಗಿ "ಹೆಯರ್‌ಫೂಡ್" ತಾನೇ ತನ್ನ ಹೆಸರಿಗೆ ಸರಿಯಾಗಿ ಕೇಶರಾಶಿಯನ್ನು ಬೆಳಸಿ, ಸುವಾಸನೆಯನ್ನು ಕೊಡುವದಲ್ಲದೆ, ಮೆದುಳಿಗೆ ತಕ್ಕ ತಂಪನ್ನುಂಟುಮಾಡುವುದು.

ಚಿಕ್ಕ 2 ಔನ್ಸ್ ಸೀಸೆ 1ರ 6 ಆಣೆ. ಸೀಸೆ 1ರ ವಿ. ಖರ್ಚು 3 ಆಣೆ.

„ „ „ 3ರ 12 „ „ 3ರ „ „ 6 „

ವಿಳಾಸ:— ಮೋಹನ್ ಕಂಪೆನಿ,

ಹಂಪನಕಟ್ಟೆ, ಮಂಗಳೂರು.

ಪಂಡಿತ್ ಟಿ. ಬಾಬುರಾಯರ

ಲಂಗ್ ಟೋನಿಕ್.

ಇದರಲ್ಲಿ ಯಾವ ತರದ ಮಾದಕ ವಸ್ತುಗಳೂ ಸೇರಿರುವದಿಲ್ಲ. ಆಶ್ಚರ್ಯಕರವಾದ ಈ ಔಷಧದ ಬಲ 48 ದಿವಸಗಳ ಸೇವನೆಯಿಂದ ಕ್ಷಯರೋಗ, ಕೆಮ್ಮು, ದಮ್ಮು, ... ಮೊದಲಾದ ಶ್ವಾಸಕೋಶ ಸಂಬಂಧವಾದ ಎಲ್ಲಾ ರೋಗಗಳು ಮತ್ತು ... ಮೂತ್ರಕೃಚ್ಛ್ರ, ... ಎಲ್ಲಾ ವಿಧದ ಮೂತ್ರರೋಗಗಳು ... ಗುಣವಾಗುವವು. ... ರೋಗಿಗಳು ... ಗುಣವಾಗುವರು.

ಸೀಸೆ 1ರ ಕ್ರಯ 14 ಆಣೆ. ವಿ. ಪಿ. ಖರ್ಚು ಪ್ರತ್ಯೇಕ.

...

ವಿಳಾಸ:— ...

... ಮಂಗಳೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ. ೮ ಆಣೆ.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲ ವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತು ಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆ ನೋವು, ಎದೆ ನೋವು, ಸೊಂಟನೋವು, [illegible] ವಾತ ಬಾಧೆಗಳನ್ನೂ ಕೂಡಲೇ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ [illegible] ಮುಲಾಮು. ಕುಷ್ಠ, ಕಜ್ಜಿ ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ 4 ಆಣೆ.

೧೩. ಸರ್ವನೇತ್ರರಂಜನ (ಸುರುಮಾ), ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಬುದ್ಧಿಮಾಂದ್ಯ, [illegible] ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. [illegible] ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು [illegible] ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ರೋಗಿಯ ಪರೀಕ್ಷೆ ಅಂಚೆಯ ಹಾಸಲು [illegible] ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರು ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ.
ವೆಪರಿ ಪೋಸ್ಟು ಮದರಾಸು.

B. M NATH & CO
Vepery Post MADRAS,

ಮನೆಮನೆಯಲ್ಲಿಯೂ ಇಟ್ಟುಕೊಳ್ಳತಕ್ಕ
ಕೆಲವು ಔಷಧಗಳು.

ಪ್ಲೇಗ ಬಿಲ್ಲೆಗಳು:— ಈ ಬಿಲ್ಲೆಗಳ ಸೇವನೆಯಿಂದ ನೂರಾರು ಪ್ಲೇಗ ರೋಗಿಗಳು ಬದುಕಿಕೊಂಡಿದ್ದಾರೆ. ಅಷ್ಟೇ ಅಲ್ಲ; ಪ್ರತಿ ಮುಂಜಾನೆ ಒಂದೊಂದು ಬಿಲ್ಲೆಯನ್ನು ಸೇವಿಸಿದರೆ ಪ್ಲೇಗ ರೋಗಕ್ಕೆ ಹತ್ತಿಕೊಳ್ಳದು.

ಕ್ರಯ: [illegible] ಬಿಲ್ಲೆಗಳ ಸೀಸೆಯೊಂದಕ್ಕೆ ರೂ. 1-0-0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರಾಪ್ಸ್ ಸೇವನೆಯಿಂದ ಹಲವು ಬಗೆಯ ರೋಗಿಗಳು ಚೇತರಿಸಿಕೊಂಡಿದ್ದಾರೆಂತ [illegible] ತಿಳಿಸಿ ಬರುತ್ತಾರೆ.

ಎಂಟಿಸ್ನೇಕ್ ಬೈಟ್:— ಈ ಔಷಧಿಯು ನಾಗರ ಹಾವು, ಕೊಳಕುಹಾವು ಚೇಳು ಮೊದಲಾದ ವಿಷ ಜಂತುಗಳ ಕಡಿತದಿಂದುಂಟಾಗುವ ವಿಷವನ್ನು ಹೋಗಲಾಡಿಸುತ್ತದೆ. ನೂರಾರು ಮಂದಿ ಗುಣಹೊಂದಿರುತ್ತಾರೆ. ಸಾವಿರಾರು ಶಿಫಾರಸು ಪತ್ರಗಳು ಬಂದಿವೆ. ನಾಗರ ಹಾವು ಕಚ್ಚಿದವರು ಒಂದೇ ತಾಸಿನಲ್ಲಿ, ಚೇಳು ಕಡಿದವರು ಹತ್ತೇ ನಿಮಿಷದಲ್ಲಿ ಇದರ ಸೇವನೆಯಿಂದ ಗುಣವಾಗುವರು. ಕ್ರಯ ಸೀಸೆ 1ಕ್ಕೆ ರೂ 1 ವಿ. ಪಿ. ಬೇರೆ.

ಟೂರಕಬ್:— ಎಲ್ಲಾ ವಿಧದ ಗುಪ್ತರೋಗಗಳಿಗೆ ದಿವ್ಯ ಔಷಧ. ನಿಮ್ಮ ಆರೋಗ್ಯವು ಕೆಡುತ್ತಾ ಬರುವದಾದರೆ, ಮೆದುಳಿನ ಶಕ್ತಿ ಕುಂದುವ ಹಾಗೆ ತೋರಿದರೆ, ತಲೆನೋವು, ನಾಡಿ ತೀವ್ರ ಬಡಿಯುವದು ಮೊದಲಾದ ಕುರುಹುಗಳು ಕಂಡರೆ ತಿಳಿದು ಯಾ ತಿಳಿಯದ ರೀತಿಯಲ್ಲಿ ಧಾತು ನಷ್ಟ ಉಂಟಾಗುತ್ತದೆಂದು ಭಾವಿಸಿ ಕೂಡಲೇ ಟೂರಕಬ್ ಸೇವಿಸಿರಿ.

ಕ್ರಯ ಸೀಸೆ 1ಕ್ಕೆ ರೂ 1—8—0. ವಿ. ಪಿ. ಬೇರೆ.

ಇಕ್ಲಿಪ್ಸ್ ಡ್ರಾಪ್ಸ್:— ಇದು ನರಸಂಬಂಧವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾಲೆಗಳನ್ನು ತಪ್ಪದೆ ಗುಣ ಮಾಡುತ್ತದೆ. ವಿಶೇಷ ಮಾಹಿತಿಗೆ ಬರೆಕೊಳ್ಳಿರಿ.

ಕ್ರಯ ಸೀಸೆ 1ಕ್ಕೆ 0—6—0. ವಿ. ಪಿ. ಬೇರೆ.

☞ ಇಕ್ಲಿಪ್ಸ್ ಬಾಮ್, ಶುದ್ಧ ಯುಕಲಿಪ್ಟಸ್ ತೈಲ, ವಾಯುವ್ಯಾಧಿ, ಅರ್ಧವಾಯು, ಅಂಡವೃದ್ಧಿ ಮೊದಲಾದ ಹಲವು ರೋಗಗಳಿಗೆ ಬೇಕಾದ ಔಷಧ ಸಂಗ್ರಹಗಳು ನಮ್ಮಲ್ಲಿವೆ.

ವಿಳಾಸ:— ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ ಪೋಸ್ಟು, ಮಂಗಳೂರು.

ಸುಂದರವಾದ ಕಂಚಿ ನಮೂನೆ ಕೊರ್ನಾಡು ಶೀರೆಗಳು.

ಟೋಪು ಅಂಚುಗಳು ಮತ್ತು ಶೆರಗಿನಲ್ಲಿ ಅಚ್ಚ ರೇಷ್ಮೆ ಹಾಕಿ ಇರುವದು.

ಮೊಳ 16, ಅಗಲ 42 ಇಂಚು. ಕಿಮ್ಮತು ರೂಪಾಯಿ 8—1—0.
„ 18, „ „ „ „ „ 8—11—0.

ಸ್ವದೇಶಿಯಲ್ಲದ ಮಾಲುಗಳಲ್ಲಿ ಪ್ರಯೋಜನವಿಲ್ಲ. ಕಾರ್ಯದಲ್ಲಿ ತೋರಿಸುವೆವು.

ಯಸ್. ಉಲ್ಸೂರ ಕಂಪೆನಿ,
ಮದ್ರಾಸು [illegible]

ಔಷಧಗಳ ಸಂಗ್ರಹ, ಅವುಗಳ ಯೋಜನೆ, ಅವುಗಳ ಪರಿಶೋಧನೆ, ಅವುಗಳ ಗುಣದೋಷ ಇವೆಲ್ಲವುಗಳು—ಇತರ ಸಾಮಾನ್ಯ ವ್ಯಾಪಾರಿಗಳ ಕೈಗಳಿಗೆ ಸಿಕ್ಕಿದ ವಿಷಯಗಳು. ಈ ವ್ಯಾಪಾರಗಳಲ್ಲಿ ಕಲಿತ ಶಕ್ತಿಯುಕ್ತ ಪ್ರಮಾಣಗಳಿಂದ ಔಷಧಿಗಳ ಪೂರ್ಣ ಅನುಭವವಿರುವಂಥವರಿಂದ ಔಷಧಗಳನ್ನು ಪಡೆಯತಕ್ಕದ್ದು ಯುಕ್ತವೆಂದ ಮೇಲೆ

ಯುಕಲಿಪ್ಟಸ್ ಒಯಿಲ್

ಎಂಬ ನೀಲಗಿರಿ ಎಣ್ಣೆಯನ್ನು

ಇತರರಿಂದ ಏಕೆ ಪಡೆಯಬೇಕು?

ಬಾಟ್ಲಿ 1ಕ್ಕೆ 0—5—0 ಡಜನಿಗೆ ರೂ. 3.

[illegible] ಸಾಮಾನ್ಯ ವ್ಯಾಪಾರಸ್ಥರಿಂದ [illegible] ಔಷಧಿಗಳ ಶುದ್ಧತೆ [illegible] ಉಪಯೋಗಿಸಿದಂಥಾ ಜನರಿಗೆ [illegible] ಇಂಥವರಿಂದ ಗ್ರಹಿಸ [illegible]

ಔಷಧಿ ವ್ಯಾಪಾರದ ವಿಶೇಷ ಪ್ರಮಾಣಿಯು

[illegible] ಇವರು ಸರ್ವಥಾ ತಿಳಿಯರು. [illegible] ಯುಕಲಿಪ್ಟಸ್ ಒಯಿಲ್ ಮೊದಲಾದ ಔಷಧಗಳನ್ನು ಪಡೆಕೊಳ್ಳುವಾಗ ಈ ಕೆಳಗಿನ ವಿಳಾಸವನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ಕೇರಬೀದಿ, ಮಂಗಳೂರು.

ಹೆಂಗುಸರು ಸುಮ್ಮನೆ ನರಳುವುದೇತಕ್ಕೆ?

ನಾರೀಸಖಿ.

ಹೆಂಗುಸರ ರಕ್ತಸ್ರಾವ, ಬಿಳಿದು ಹೋಗುವದು, ತಿಂಗಳಿಗೆರಡುಸಾರಿ ಮುಟ್ಟಾಗುವದು, ಮುಟ್ಟಾದಾಗ್ಯೆ ಬಹಳ ನೋವು ಇರುವದು. ಕಿಬ್ಬೊಟ್ಟೆಯಲ್ಲಿ ನೋವು ಮತ್ತು ಭಾರ ಇಳಿದಂತಾಗುವದು. ಬಿಳಿದು ಹೋಗಿ ಉಂಟಾದ ಸೊಂಟನೋವು, ಇವಕ್ಕೆಲ್ಲಾ ನಮ್ಮ ನಾರೀಸಖಿಯಷ್ಟು ಗುಣಕೊಡುವ ಔಷಧಿಯು ಮತ್ತೊಂದು ಇಲ್ಲವೇ ಇಲ್ಲ. ಕಠಿಣ ರೋಗಿಗೆ ಕೂಡ ಒಂದೆರಡು ಸೀಸೆಗಳಲ್ಲಿ ಗುಣಸಿಕ್ಕುತ್ತದೆ.

ಬೆಲೆ ಸೀಸೆ 1ಕ್ಕೆ ರೂ. 2. ಅಂಚೆಹಾಸಲು 4 ಆಣೆ.

ಮನೋಲ್ಲಾಸಿನಿ ತೈಲವು.

ತಲೆನೋವು, ತಲೆ ತಿರುಗುವದು, ಅರ್ಧ ತಲೆನೋವು, ತಲೆಸ್ವರಿ, ಕಣ್ಣುಸ್ವರಿ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ, ನಿದ್ರೆ ಬಾರದಿರುವದು, ಪಿತ್ತದ ಉಪದ್ರ, ನೆನಪುಶಕ್ತಿ ಕುಂದಿಹೋಗುವದು, ಇವುಗಳನ್ನು ಖಂಡಿತವಾಗಿ ಗುಣಮಾಡುತ್ತದೆಂತಲೂ ಉದುರುವ ಕೂದಲನ್ನು ನಿಲ್ಲಿಸಿ, ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ, ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು, ಅಕಾಲಕ್ಕೆ ಹಣ್ಣಾಗಿರುವ ಕೂದಲನ್ನು ತಡೆದು, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುವದೆಂತಲೂ ಉಪಯೋಗಿಸಿದವರೆಲ್ಲರೂ ಹೊಗಳುತ್ತಾರೆ.

ಬೆಲೆ: 1 ಸೀಸೆಗೆ ರೂ. 0—12—0 (ವಿ. ಪಿ. ಖರ್ಚು 4 ಆಣೆ).
„ 3 ಸೀಸೆಗಳಿಗೆ „ 2—0—0 „ „ „ „

ಬೆಲೆ ಸುಲಭ! ಗುಣ ಅಧಿಕ!!

ಚಿನ್-ಚಿನ್-ಬಾಂ.

ಸ್ವಲ್ಪ ಮುಲಾಮನ್ನು ನೋವಿದ್ದ ಭಾಗಕ್ಕೆ ತಿಕ್ಕಿ ಹಚ್ಚಿ ಅದರ ಮೇಲೆ ಕಂಬಳಿ ವಸ್ತ್ರವನ್ನು ಸುತ್ತಿದರೆ ಎಲ್ಲ ತರದ ನೋವು, ತಲೆನೋವು, ಜಕಾಂ, ಘಾಯ, ಚೇಳುಕಡಿತ, ಶೈತ್ಯ ಮುಂತಾದದ್ದು ತಕ್ಷಣ ಗುಣ.

ಬೆಲೆ: 1 ಡಬ್ಬಿಗೆ ಒಂದೇ ಆಣೆ. ಡಜನ್ 1ಕ್ಕೆ 10 ಆಣೆ.
ದೊಡ್ಡ ಡಬ್ಬಿ 1ಕ್ಕೆ 6 ಆಣೆ. ಡಜನ್ 1ಕ್ಕೆ ರೂ. 4.
ಅಂಚೆಹಾಸಲು ಬೇರೆ.

ಇವುಗಳಲ್ಲದೆ ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಅಶ್ವಗಂಧಾರಿಷ್ಟ, ಅಭಯಾರಿಷ್ಟ, ಕುಟಜಾರಿಷ್ಟ, ಮುಸ್ತಕಾರಿಷ್ಟ, ಚಂದನಾಸವ, ಪುನರ್ನಾಸವ, ಸಾರಿವಾದ್ಯಾಸವ, ಅಶೋಕಾರಿಷ್ಟ, ಇತ್ಯಾದಿಗಳಿವೆ.

ಬೆಲೆ: 8 ಔನ್ಸ್ ಬಾಟ್ಲಿ 1ಕ್ಕೆ ರೂ. 1—8. ಅಂಚೆಹಾಸಲು 6 ಆಣೆ.

ಬೇರೆ ಔಷಧಗಳ ಬಗ್ಗೆ ಕೆಟಲಾಗು ತರಿಸಿನೋಡಿರಿ.

ವಿಳಾಸ:— ಮನೋಲ್ಲಾಸಿನಿ ಕಂಪೆನಿ,
4, ಕಂಕನಾಡಿ ಪೋಸ್ಟು, ಮಂಗಳೂರು.

ಒಬ್ಬನೇ ಒಬ್ಬ ರಣಧೀರನು



ನೂರಾರು ಜನ ಶತ್ರುಗಳನ್ನು ಹೊಡೆದು ಬಿಡುವನು.

ಅಜೀರ್ಣ, ಅರುಚಿ, ನರಸಂಸ್ಥಾಯಿಗಳ ಅಬಲತೆ, ಜ್ಞಾಪಕಶಕ್ತಿ, ಶಕ್ತಿ ಇವುಗಳು ಗಳಿತವಾಗಿ ಹೋಗುವದು, ಮಾನಸಿಕ ದುರ್ಬಲತೆ, ಇತ್ಯಾದಿ ಹಲವು ರೋಗಗಳನ್ನು ಭೂಲೋಕದ ಅಮೃತಪ್ರಾಯವಾಗಿರುವ ಮದನಮಂಜರಿ ಮಾತ್ರೆಗಳು ಪೂರ್ಣವಾಗಿ ಗುಣಪಡಿಸುವದು. ಈ ಮಾತ್ರೆಗಳ ಗುಣಕಥನವನ್ನು ಮಾಡಿ ಹಲವು ಶಿಫಾರಸು ಪತ್ರಗಳು ಬಂದಿವೆ. ಇನ್ನೂ ಬರುತ್ತಲಿವೆ. 40 ಮಾತ್ರೆಗಳಿರುವ ಡಬ್ಬಿ 1ಕ್ಕೆ ಕ್ರಯ: ರೂ. 1—0—0.

ವೈದ್ಯ ಮಾಹಿತಿಯು ಉಚಿತ. ಅಂಚೆ-ಹಾಸಲೂ ಇಲ್ಲ. ನಿಮಗೆ ಬೇಕಾಗಿರುವ ಪುಸ್ತಕವು. ತರುಣಪ್ರಾಯದ ಅಲ್ಪಬುದ್ಧಿಯಿಂದ ವಿಷಯಾಸಕ್ತರಾಗಿ ಚೇತನವನ್ನು ಕಳಕೊಂಡವರಿಗೆ ಅದನ್ನು ಪುನಹ ಹ್ಯಾಗೆ ಸಂಪಾದಿಸಿಕೊಳ್ಳಬಹುದೆಂಬುದನ್ನು ಈ ಪುಸ್ತಕವು ಹೇಳುತ್ತದೆ. ಈ ಕಾರಣದಿಂದಲೇ ಈ ಪುಸ್ತಕಕ್ಕೆ ವೈದ್ಯ ವಿದ್ಯೆ ಎಂಬ ಹೆಸರು.

ರಾಜವೈದ್ಯ ನಾರಾಯಣಜೀ ಕೇಶವಜೀ,
ಮದನಮಂಜರೀ ದವಾಖಾನೆ,
೨೦ [illegible] ಮದ್ರಾಸ್.

Printed & Published by V. S. Kamath at the [illegible]

Registered No. M. 1[illegible]

ಚಂದಾನಿರ್ಣಯ:— ವರ್ಷ 1ಕ್ಕೆ ರೂ. 1—8—0.

ಬಟ್ವಾಡೆ ಹಾಸಲು ಸಹಿತ ರೂಪಾಯಿ 2—5—0.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮ ರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ತಣಿವವಾಯಿತೆ? ವ್ಯಕ್ತ ವಿಶ್ವವ ಸುಡುತ ಬರುತಿರುವ ।
ಗರಲಕವರಂಜಿದರೆ? ಸುಧೆಯನು । ಮರೆತು ಶ್ರಮದಿಂ ತಣಿದು ಕುಳಿತರೆ? । ತಿಳಿಯಲ್ಕಿದರಿಂ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೧ ಮಂಗಳೂರು, ತಾರೀಕು ೨೮ನೇ ಸಪ್ಟಂಬರ ಶುಕ್ರವಾರ ೧೯೧೭. ಸಂಚಿಕೆ ೩೯

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಬಿಳಿ ಬಗೆಯ ಉಪ್ಪು. ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹೆಚ್ಚಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ; ಮೀನು ಗೊಬ್ಬರದಂತೆ ನಾತ ಬಡಿಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ಸಾಕಾಗುವಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಜೊತೆಲಕ್ಕೆ ಬಹಳ ಸಹಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಕೊಳ್ಳುವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸಧಾರಣೆ" ಎಂಬ ಸಚಿತ್ರ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಅಮೃತಾಂಜನ.

ಜಗತ್ಪ್ರಸಿದ್ಧವಾದ ವೇದನಾಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಎದೆನೋವು, ಸೊಂಟದನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ನಾನಿರಾರು ಡಾಕ್ಟರರೂ ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು ಆಣೆ 8. ಡಜನ್ ಒಂದಕ್ಕೆ ರೂ. 5—4—0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ: ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಚ್ಚಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ 0—6—0. 12 ಡಬ್ಬಿಗಳಿಗೆ 3—[illegible]—0. ವಿ. ಪಿ. ಪ್ರತ್ಯೇಕ.

ದಂತಮಂಜನ.

(ರಾಜಾರಾಣಿ ಟ್ರೇಡ್ ಮಾರ್ಕ).

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ ಒಂದಕ್ಕೆ 0—[illegible]—0. ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪೊ,

6. 7. ತೆಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್, ಮುಂಬಯಿ.

ಮಂಗಳೂರಲ್ಲಿ—ಊಲನ್ ಮಾರ್ಟ, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ಬೆಳ್ಳಿ ವಿಗ್ರಹಗಳು.

ಪೂಜೆಮಾಡುವದಕ್ಕೂ ನವಿಯರಿಗೆ ತಗಲುಹಾಕುವದಕ್ಕೂ ಅರಗು ಮೊಹರುಗಳೂ ಎಲ್ಲಾ ವಿಧವಾದ ಬೆಳ್ಳಿ ವಿಗ್ರಹಗಳು ತಯಾರಿದೆ.

(1) ಶುಂಕುಮಾರ ಮೂರ್ತಿ ರೂ. 2, 3.
(2) ಹನುಮಂತ ,, ರೂ. 2, 3, 5.
(3) ಗರುಡಾ ,, ರೂ. 2, 3, 5.

ವಿಗ್ರಹಗಳ ಹಿಂದೆ 2, 3 ಹೆಸರು, ಇಂಗ್ಲೀಷಿನಲ್ಲಿ, ಕನ್ನಡದಲ್ಲಿ ಪೂರ್ತಿಯಾಗಿ ಕೆತ್ತಿದ್ದಾರೆ. ರೂ. 1, 2, 3.

ವಿವೇಕಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಲ್ಹಿ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ: ರೂ. ೩—೪—೦. ಹಾಸಲು ೬ ಆಣೆ.

ವಿಳಾಸ:— ಎಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ನೋಟೀಸು.

ದಕ್ಷಿಣ ಕನ್ನಡಾ ಜಿಲ್ಲಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. $\frac{97}{17}$

1. ನಾರಾಯಣರಾವು
2. ರಾಮರಾವು.
3. ಸುಂದರಿಬಾಯಿ ಯಾನೆ ಪಾರ್ವತಿಬಾಯಿ.

ಅರ್ಜಿದಾರರು.

ಕಾರನಾಡ ಮಂಗೇಶರಾಯರ ಮಗ, ಕಾರನಾಡ ಶಿವಪ್ಪಯ್ಯರಿಗೆ ಬರತಕ್ಕ ಸಾಲಗಳನ್ನು ವಸೂಲುಮಾಡುವರೆ ಸಕ್ಸೆಶ್ಯನ್ ಸರ್ಟಿಫಿಕೇಟ್ ಅಪೇಕ್ಷಿಸಿ ಮೇಲ್ಕಂಡ ಅರ್ಜಿದಾರರು ಕೊಟ್ಟಿರುವ ಅರ್ಜಿಯನ್ನು ತಾರೀಕು 16-10-17ಕ್ಕೆ ಇಟ್ಟಿರುವದರಿಂದ ಆಕ್ಷೇಪ ಇದ್ದವರು ಆ ದಿವಸಕ್ಕೆ ಬಂದು ಕೋರ್ಟಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

MANGALORE, 20th Sep. 1917. B. Narsinga Rao, *Vakil.*

ನೋಟೀಸು.

ನಮ್ಮ ವೈದ್ಯಾಲಯದಲ್ಲಿ ಬೆಳಿಗ್ಯೆ 8 ಗಂಟೆಯಿಂದ್ಲ ಸಾಯಂಕಾಲ 4 ಗಂಟೆವರೆಗೆ ಎಲ್ಲಾ ತರದ ರೋಗಿಗಳನ್ನು ಪರೀಕ್ಷಿಸಿ ತಕ್ಕದ್ದಾದ ಹೋಮಿಯೋಪತಿ, ಬೈಸ್ಸು ಸ್ಪೆಸಿಫಿಕ್, ಇಲೆಕ್ಟ್ರೋ ಹೋಮಿಯೋಪತಿ, ಆಯುರ್ವೇದಿಕ್ ಔಷಧಗಳನ್ನು ಬಡಬಗ್ಗರಿಗೆ ಧರ್ಮಾರ್ಥವಾಗಿ ಕೊಡುತ್ತೇವೆ.

ನಮ್ಮ ವಿಳಾಸ:— ಕೆ. ಕುಮಾರಯ್ಯ,
ಹೋಮಿಯೋಪೆಥಿಕ್ ಮತ್ತು ಆಯುರ್ವೇದಿಕ್ ಔಷಧಾಲಯ,
[illegible] ಧರ್ಮಸ್ಥಳ.

THE CANARA BANK, LIMITED., MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು	ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು	,,	225,000—0—0
Subscribed Capital	225,000—0—0	ಪ್ರತಿಜ್ಞಾತ ಮೂಲ ಧನವು	,,	225,000—0—0
Paid up Capital	215,600—0—0	ಆಗತ ಮೂಲ ಧನವು	,,	215,600—0—0
		ಠೇವಣಾತಿಯಾಗಿ [illegible]		
Deposits	299,373—6—11			299,373—6—11
Reserve Fund	50,003—2—5	ರಕ್ಷಿತ ಧನವು	...	50,003—2—5

25% of the net profits are added annually to the **Reserve Fund.** Rs. 53-444—11—2 have been **invested in Government Paper**

ರಕ್ಷಿತ ಧನಕ್ಕೆ ಪ್ರತಿ [illegible] ಉಳಿಯುವ ಮುನಾಫೆಯು ನೂರಕ್ಕೆ 25ಕ್ಕೆ [illegible] ಕೂಡಿಸಲ್ಪಡುವುದು. ರಕ್ಷಿತ ಧನದ ಪೈಕಿ ರೂ. 53,444—11—2 ಸರಕಾರಿ ಪತ್ರಗಳಲ್ಲಿ ಠೇವಣಾತಿ ಮಾಡಲ್ಪಟ್ಟಿರುವುದು.

Dividends of not less than 6%. paid during the **past years** and a bonus of 1%. to 2%. paid in **addition** during the last eight years.

ಕಳೆದ ವರುಷಗಳಲ್ಲಿ ನೂರಕ್ಕೆ 6ಕ್ಕೆ ಕಡಿಮೆಯಾಗದಂತೆ ಲಾಭವು [illegible] ಕಳೆದ 8 ವರುಷಗಳಲ್ಲಿ ನೂರಕ್ಕೆ 1ರ [illegible] "ಬೋನಸ್" ಎಂಬ ಲಾಭೋತ್ತೇಜಕವು ಸಹ ಕೊಡಲ್ಪಟ್ಟಿರುತ್ತದೆ.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5, 5½%. and 6. respectively at the discretion of the managing committee.

ಕಾಯಂ ಠೇವಣಾತಿಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5, 5½ ಮತ್ತು 6 ಬಡ್ಡಿ [illegible] ರೂ. 50 ಯಾ 50ಕ್ಕೆ [illegible] ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವದು.

Short-notice Deposits requiring one week's notice **of withdrawal** after one month received @ 2½%. per **annum at the discretion of the managing committee**

ಒಂದು ತಿಂಗಳ ನಂತರ ಒಂದುವಾರದ ನೋಟೀಸು ಕೊಟ್ಟು ಹಿಂತೆಗೆಯಬಹುದಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು [illegible] ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವದು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬ್ಯಾಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡಲಾಗುವವು.

Savings Bank Account opened for any sum **not** less than 4 As. and multiples thereof and **interest paid** @ 4⅛%.

ಸೇವಿಂಗ್ಸ್ ಬ್ಯಾಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡಲಾಗುವದು. ಆ ಠೇವಣಾತಿಗಳಿಗೆ ನೂರಕ್ಕೆ 4⅛ರ ದರ ಬಡ್ಡಿಯು ಕೊಡಲಾಗುವದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡಲಾಗುತ್ತವೆ.

Loans granted on proper securities and pledges

Canara Bank Ltd.,

Mangalore, 1st. Sept. 1917.

P. Gopal Naik,
Secretary.

ಕನ್ನಡ ಹೊಸ ಪುಸ್ತಕಗಳು.

(1) ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು [illegible] ಎಲ್ಲಾ ಕಲಮುಗಳೂ ಹಾಲಿ ಜಾರಿಯಲ್ಲಿರುವ ಆಕ್ಟು. 600 ಪುಟಗಳು. ಗ್ಲೇಜು ದಪ್ಪ ಕಾಗದ. ಅವ್ವಲ್ ಬೈಂಡು ಕ್ರಯ 3 ರೂ. (2) ಕನ್ನಡ ಪದ್ಯಕಾವ್ಯ ದಶಪರ್ವ ಭಾರತ ದೊಡ್ಡ ಅಕ್ಷರ. ದೊಡ್ಡ ಸೈಜು. 710 ಪುಟಗಳು. ಕ್ರಯ [illegible] ರೂ. (3) ಡಿಟೋ ಗ್ಲೇಜು ದಪ್ಪ ಕಾಗದ ಅವ್ವಲ್ ಬೈಂಡು. ಕ್ರಯ [illegible] ರೂ. (4) ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಸಾಹಸ ಕಥೆಗಳು. ಪೂರ್ತಿ 576 ಪುಟಗಳು. ಕ್ರಯ ರೂ 1-8-0 (5) ಸಚಿತ್ರ ಶುಕಸಪ್ತತಿ 70 ಕಥೆಗಳು. ಸದ್ವಿಚಾರಗಳನ್ನು ಬೋಧಿಸುವದು. 512 ಪುಟಗಳು. ಕ್ರಯ ರೂ. 1-8-0 (6) ಸಚಿತ್ರ ವಿದ್ಯಾಮಂಜರಿ ಕಥೆಗಳು. 64 ವಿದ್ಯಾ ಚಮತ್ಕಾರ ಕಥೆಗಳು. [illegible] ಪುಟಗಳು. ಕ್ರಯ ರೂ. 1-4-0. (7) ಪ್ರತಿಪದ ಟೀಕಾ ತಾತ್ಪರ್ಯ ಸಹಿತ [illegible] 392 ಪುಟಗಳು [illegible] ಕ್ರಯ ರೂ 1-8-0 (8) ಸಚಿತ್ರ [illegible] ದಶಾವತಾರ ರಾಮಾಯಣ ಕಥಾ ಸಂಗ್ರಹ ಗ್ಲೇಜು ದಪ್ಪ ಕಾಗದ. ಅವ್ವಲ್ 344 ಪುಟಗಳು. ಕ್ರಯ ರೂ 1-2-0. (9) ಮೂಲ ಜೈಮಿನಿ ಭಾರತ. 34 ಸಂಧಿ. ಗ್ಲೇಜು ದಪ್ಪ ಕಾಗದ ದೊಡ್ಡ ಅಕ್ಷರ. ಅವ್ವಲ್ 374 ಪುಟಗಳು. ಕ್ರಯ 1 ರೂ (10) ಸರ್ವಜ್ಞ [illegible] 256 ಪುಟಗಳು. ಕ್ರಯ ರೂ. 1-0-0.

ಎರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡವರಿಗೆ 3 ಆಣೆ ಕ್ರಯದ "ನವರತ್ನ ಪಕ್ಷಿಯ ಕಥೆ" ಇನಾಮು ಕಳಿಸುತ್ತೇವೆ. ಇವುಗಳೆಲ್ಲಾ ದಪ್ಪ ಕಾಗದದಲ್ಲಿ ಮುದ್ರಿಸಿ ಸೊಗಸಾಗಿ ಬೈಂಡು ಮಾಡಿ ಸಿದ್ಧವಾಗಿವೆ. [illegible] ಇನ್ನೂ ಅನೇಕ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ. ಕ್ಯಾಟಲಾಗಿಗೆ ಬರೆದರೆ ಪುಗಸಟ್ಟೆ ಕಳಿಸುತ್ತೇವೆ.

ನಮ್ಮ ವಿಳಾಸ—ಎಂ ಆರ್ ವೆಂಕಟಾಚಲ ಶೆಟ್ಟಿ,
ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕರ್ಣಿಕ ಎಗ್ಯೂ ಮಿಕ್ಸ್ಚರ

Karnik's Ague Mixture.

ಚಳಿಜ್ವರ, ಮಲೇರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು 1 ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಹೆನೋ-ವಿನ್:—ಕೊಲೆರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಚಕರ್ಣಾದ ಮುಲಾಮು:—ಬಾಟ್ಲಿ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ದೀರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ.

ಕರ್ಣಿಕ ಬ್ರದರ್ಸ್,
ಠಕುರಗಾಂವ, ಮುಂಬಯಿ.

Agent.—The Woolen Mart, *Mangalore.*

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೊಂಗರೆ ಇವರ ಬಾಲಾಮೃತ.

. ಈ ಬಾಲಾಮೃತವನ್ನು ಕೊಡುವದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವದು, ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 12 ಆಣೆ. ಟ. ಖ. 4 ಆಣೆ.

ಕೆ. ಟಿ. ಡೊಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

ಅರ್ಧ ಕ್ರಯ! ಅರ್ಧ ಕ್ರಯ!!

ಒಂದು ತಿಂಗಳ ವರೆಗೆ ಮಾತ್ರ!



ನಮ್ಮ ನಿಕ್ಕಲ್ ಬೆಳ್ಳಿ ಕಿಸೆ ಗಡಿಯಾರವು ಬಹಳ ಸರಿಯಾಗಿ ಸಮಯವನ್ನು ಸೂಚಿಸುವದು, ಸಣ್ಣರೂ ಸಹ ಧರಿಸಿಕೊಳ್ಳಲು ಸರಿಯಾದಂಥಾದ್ದು. ಮೂರು ವರುಷಗಳ ಗೆರೆಂಟಿ ಇದೆ. ರೂ. 7-14-0, 9—14—0 ಕ್ರಯವಿರುವಂಥವುಗಳನ್ನು ಈಗ ರೂ. 3—15—0, 4—15—0ಕ್ಕೆ ವಿಕ್ರಯಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚು ರೂ 13ರ ಕ್ರಯದ್ದು ರೂ. 6—8—0ಕ್ಕೆ ದೊರಕುವದು. ರೂ 15ರ ಅಂದವಾದ ಹಂಟಿಂಗ್ ವಾಚು ರೂ. 7—8—0 ಕ್ಕೆ ದೊರಕುವದು. ಲೇಡಿ ಸ್ಪ್ಯಾಜಿನ ಬೆಳ್ಳಿ ರೂ 18ರ ವಾಚನ್ನು ರೂ. 9ಕ್ಕೆ. ಅಂದವಾದ ಭಂಗಾರದ ಮುಲಾಮಿನ ರೂ. 20ರ ವಾಚು ರೂ. 10ಕ್ಕೆ. ರಿಸ್ಟ್ ವಾಚು ರೂ. 12 ಕ್ರಯದ್ದು ಬಹಳ ಉತ್ಕೃಷ್ಟವಾದದ್ದು ರೂ. 6ಕ್ಕೆ. ಕೈಗೆ ಹಾಕುವ ಚರ್ಮದ ಪಟ್ಟಿ ಸಹಿತ. ಬಹಳ ಗಟ್ಟಿಯಾದದ್ದು, ಎಂಟು ದಿವಸಗಳ ಚಾವಿ ಇರುವಂಥಾದ್ದು ಕ್ರಯ ರೂ. 24ರದ್ದನ್ನು ರೂ. 12ಕ್ಕೆ ಕೊಡಲಾಗುವದು.

ವಿಶೇಷ ಇನಾಮು. ಪ್ರತಿ ಒಂದು ವಾಚು ಪಡಕೊಳ್ಳುವವನಿಗೆ ಒಂದು ಚಂದವಾದ ಸರಪಳಿಯು ಇನಾಮು. 6 ವಾಚುಗಳನ್ನು ಪಡಕೊಳ್ಳುವವನಿಗೆ ಒಂದು ವಾಚು ಉಚಿತಾರ್ಥವಾಗಿ ಕಳುಹಿಸಲಾಗುವದು.

ಕೊಂಪಿಟೇಷನ್ ವಾಚ್ ಕಂಪೆನಿ,
25 ಮದನಮಿತ್ರ ಲೇನ್, ಕಲ್ಕತ್ತಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾತ್ರೆ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿ.

೧. ಕಂಠೀರವ. ಈ ಸಿದ್ಧರಸಾಯನದಿಂದ ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠವೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಷ್ಟೇಂದ್ರಿಯವನ್ನು ಥಟ್ಟನೆ ಶಮಿಸುತ್ತದೆ. ಕೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಜನರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರನನ್ನೂ ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0

೭. ದರ್ಬಾರ್ ಬ್ಯೂಟಿ ವೆಸ್ಲಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಳೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ವಾಯು ದುಮ್ಮಾನ್ ಎಂಬ ಬಡಕಾಯಿಲೆಕ್ಕೆ ಸಿದ್ಧೌಷಧವಾಗಿರುತ್ತದೆ. 1 ಕೊಲೆ ದ್ರಾವಕಕ್ಕೆ ರೂ. 1—0—0

N. B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಸ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಯಂ. ಯಸ್. ರಾವ್ ಕಂಪೆನಿ,
ಬುಕ್-ಸೆಲರ್ಸ್, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಅತ್ಯುತ್ತಮವೂ ಪರಿಮಳಪೂರಿತವೂ ಆದ

ಹೇರ್ ಆಯಿಲ್ಸ್.
(ಕೂದಲು ಬೆಳೆಯುವ ತೈಲಗಳು)

ಸುಗಂಧ-ಹೇರ್ ಆಯಿಲ್ ಸೀಸೆ 1ಕ್ಕೆ	0—8—0
ಅಯಪಾ ಹೇರ್ ಆಯಿಲ್ ,,	1—0—0
ಮಹಾರಾಣೀ ಹೇರಾಯಿಲ್ ,,	0—12—0
ಕಾಮಿನಿಯಾ ಹೇರಾಯಿಲ್ ,,	1—0—0

ಯೂಕಲಿಪ್ಟಸ್ ಆಯಿಲ್ ಸೀಸೆ 1ಕ್ಕೆ 4 ಆಣೆ. [ಪ್ಯಾಕಿಂಗ್ ಮತ್ತು ಪೋಸ್ಟೇಜು 6 ಆಣೆ ಪ್ರತ್ಯೇಕ. ಮತ್ತು ಅಡ್ವಾನ್ಸ್ ಆಣೆ ಅವಶ್ಯಕ].

ಹೊಸ ಕಾದಂಬರಿಗಳು.

ಬಿ. ವೆಂಕಟಾಚಾರ್ಯರಿಂದ—

ಉನ್ಮಾದಿನಿ	0—6—0
ಅಡವಿಯ ಹುಡುಗಿ (ದ್ವಿತೀಯ ಮುದ್ರಣ)	0—8—0
ಅಮೃತ ಪುಳಿನ ,,	0—10—0
ಇಂದಿರಾ ಕೃ. ಮು.	0—6—0
(ಇವರ ಎಲ್ಲಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ).	
ಕಳವಾದ ಇನ್ಸ್ಪೆಕ್ಟರ್ ಡಿಟೆಕ್ಟಿವ್ ನಾವೆಲ್	0—10—0
ಮಧುಸೂದನ ಡಿಟೆಕ್ಟಿವ್ ನಾವೆಲ್	0—4—0
ಪ್ರತಿಜ್ಞೆ ,,	0—12—0
ಅಂದಾಲಿಕೆ (ಹೊಸ ನಾವೆಲ್)	0—1—6
ಕುಸುಮ ,,	0—1—0
ರಾಧಾನಾಥ ,,	0—2—0
ಸುಭದ್ರ ,,	0—5—0
ಚಂದ್ರಹಾಸ (ಹೊಸ ಕಥೆ)	0—1—0
ಧ್ರುವ ,,	0—2—0
ಮಕ್ಕಳ ಶಿಕ್ಷಣ (School Discipline)	0—12—0
ಪುಷ್ಪರಚನೆ (Flower Making)	0—14—0
ಕನ್ನಡ ಆಕ್ಸರ್ ಮಂಜರಿ.	1—0—0
,, ಸಂಗೀತ ಸಮಯಸಾರ	1—4—0
ಮಾತೃನಂದಿನಿ (ಶ್ರೀ ತಿರುಮಲಮ್ಮ)	1—4—0
ವಿಕ್ರಮ ,,	1—2—0
ಚಂದ್ರವದನಾ	0—10—0
ಕನ್ನಡ ಅಕ್ಷರಮಾಲೆ, ಹೊಸಮಾದರಿ [illegible]	
[illegible]	0—1—0

ಯೂರೋಪದ ಮಹಾ ಯುದ್ಧ.

ರುಮೇನಿಯನ್ ರಣರಂಗದಲ್ಲಿ ರುಮೇನಿಯರು ವಾರ್ನಿಟ್ಸಾ ಬಳಿಯಲ್ಲಿ ಕೆಲವು ಬಲವಾದ ಸ್ಥಳಗಳನ್ನು ಹಿಡಕೊಂಡರು. ಮತ್ತು ಒಕ್ನಾ ಬಳಿಯಲ್ಲಿ ಗ್ರೊಜೆಟ್ಸಿಗೆ ದಕ್ಷಿಣದಲ್ಲಿರುವ ಒಂದು ದಿನ್ನೆಯನ್ನು ಹಿಡಿದರು.

ಶೆಟ್‌ಲೆಂಡಿನ ಆಗ್ನೇಯಕ್ಕೆ ೪೦ ಮೈಲು ದೂರದಲ್ಲಿ ಬ್ರಿಟಿಷರ ಒಂದು ಹಡಗು ಒಂದು ಜರ್ಮನ್ ಜಲಾಂತರ್ಗಾಮಿಯನ್ನು ಮುಳುಗಿಸಿಬಿಟ್ಟಿತು. ಈ ಹಡಗನ್ನು ಮುಳುಗಿಸಲಿಕ್ಕೆಂದು ಬಂದಿರುವ ಇನ್ನೊಂದು ಜಲಾಂತರ್ಗಾಮಿಯನ್ನು ಬ್ರಿಟಿಷರ ಡಿಸ್ಟ್ರೋಯರ್ ಯುದ್ಧ ಹಡಗು ಮುಳುಗಿಸಿಬಿಟ್ಟಿತು.

ಚೆಂಪೆನ್ ಮತ್ತು ಒಬರೀವ್ ಪ್ರದೇಶದಲ್ಲಿ (ಪಶ್ಚಿಮ ಯುದ್ಧರಂಗದಲ್ಲಿ)ಯೂ ಮ್ಯೂಸ ನದಿಯ ಉತ್ತರದಲ್ಲಿ ಫ್ರೆಂಚರಿಗೂ ಜರ್ಮನರಿಗೂ ಯುದ್ಧವು ನಡೆಯುತ್ತಲೇ ಇದೆ. ಜೂವಿನ್‌ಕೋರ್ ಬಳಿಯಲ್ಲಿ ಜರ್ಮನರ ಪ್ರಯತ್ನಗಳು ಕೈಸಾಗಲಿಲ್ಲ. ಬೋನೋಬೆಜೋನ್‌ಪೊ ಬಳಿಯಲ್ಲಿ ಯುದ್ಧದ ರಭಸವು ಹೆಚ್ಚಾದಂತೆ ಕಾಣುತ್ತದೆ.

ಪಶ್ಚಿಮ ಯುದ್ಧರಂಗದಲ್ಲಿ ಇನ್‌ವರ್‌ನೆಸ್-ಕೊಪ್ಸ್ ಎಂಬಲ್ಲಿಯೂ ಸೆಂಟ್ ಜೂಲಿಯನ್‌ನ ಪೂರ್ವಭಾಗದಲ್ಲಿಯೂ ವೆಂಕೋಲಿನ ದಕ್ಷಿಣದಲ್ಲಿಯೂ ಬ್ರಿಟಿಷರು ತಮ್ಮ ಸ್ಥಳಗಳನ್ನು ಭದ್ರಪಡಿಸುತ್ತ ಜರ್ಮನರನ್ನು ಹಿಂದಕ್ಕೆ ಅಟ್ಟುತ್ತಿದ್ದಾರೆ. ಈ ಸಂದರ್ಭದಲ್ಲಿ ಜರ್ಮನರ ೪ ವಿಮಾನಗಳು ಕೆಳಕ್ಕೆ ಇಳಿಯಬೇಕಾಯಿತು; ಬ್ರಿಟಿಷರ ೪ ವಿಮಾನಗಳು ಕಾಣೆಯಾದವು.

ಫ್ರೆಂಚ ರಣರಂಗದಲ್ಲಿ ಈಪರ್‌ಮೆನಿನ್ ರಸ್ತೆಯ ಸಮೀಪ ಜರ್ಮನರ ಕೈವಶವಾಗಿರುವ ಗ್ಲೆಂಕೋರ್ಸ್‌ವುಡ್, ಇನ್‌ವರ್‌ನೆಸ್‌ಕೊಪ್ಸ್, ನೊನ್ನೆಬೊಶ್, ಮೊದಲಾದ ಸ್ಥಳಗಳನ್ನು ಹಿಡಿಯುವ ತವಕದಿಂದ ಬ್ರಿಟಿಷರು ಭಾರಿಯ ಯುದ್ಧವನ್ನು ಮಾಡಹತ್ತಿದ್ದಾರೆ. ಈ ಸಂದರ್ಭದಲ್ಲಿ ಜರ್ಮನರ ಒಂದು ವಿಮಾನವೂ ಬ್ರಿಟಿಷರ ಎರಡು ವಿಮಾನಗಳೂ ನಾಶವಾದವು.

ಬ್ರಿಟಿಷರ ೧೬೦೦ ಟನ್ನಿಗೆ ಮೀರಿದ ೮ ಹಡಗುಗಳೂ, ೧೬೦೦ಕ್ಕೆ ಕಡಿಮೆಯಾದ ೩೦ ಹಡಗುಗಳೂ ಮುಳುಗಿಹೋದವು. ಇಟಲಿಯ ೧೫೦೦ ಟನ್ನಿಗೆ ಕಡಿಮೆಯಾದ ೧ ಹಡಗು ಮತ್ತು ೧ ಹಾಯಿಹಡಗು ಮಾತ್ರವೇ ಮುಳುಗಿಹೋದವು. ಫ್ರೆಂಚರ ೨ ದೊಡ್ಡ ಹಡಗುಗಳೂ ೩ ಸಣ್ಣ ಹಡಗುಗಳೂ ಮುಳುಗಿಹೋದವು.

ರೀಗಾ ಪ್ರಾಂತ್ಯದಲ್ಲಿ ಲೆಂಬರ್ಗಿನ ಪೂರ್ವಕ್ಕೆ ಜರ್ಮನ ಸೈನ್ಯವು ವೆಟ್ಟ ತಗಲಿ ಹಿಮ್ಮೆಟ್ಟಿತು; ಆದರೆ ಅವರು ಜಡೆಗೆ ಗ್ರೊಜಟಿಯ ದಕ್ಷಿಣದಲ್ಲಿ ಕೆಲವು ಸ್ಥಳಗಳನ್ನು ಹಿಡಿದರು.

ಮೆಸೆಡೋನಿಯದ ಯುದ್ಧರಂಗದಲ್ಲಿ (ಗ್ರೀಸ್ ರಾಜ್ಯದ ಉತ್ತರದಲ್ಲಿ) ಒಕ್ರೀಡಾ ಸರೋವರದ ಬಳಿಯಲ್ಲಿ ಒಂದು ಎತ್ತರವಾದ ದಿನ್ನೆಯನ್ನು ಫ್ರೆಂಚರು ಹಿಡಿದರು.

ಈಪರಿನ ಪೂರ್ವಭಾಗದಲ್ಲಿ (ಪಶ್ಚಿಮ ಯುದ್ಧರಂಗದಲ್ಲಿ) ಸುಮಾರು ೮ ಮೈಲು ವಿಸ್ತಾರದ ಸ್ಥಳದಲ್ಲಿ ಬ್ರಿಟಿಷರಿಗೂ ಜರ್ಮನರಿಗೂ ಭಾರಿ ಯುದ್ಧ ನಡೆಯಿತು. ಇದರಲ್ಲಿ ಬ್ರಿಟಿಷರು ಸುಮಾರು ೩೦೦೦ ಮಂದಿಯನ್ನು ಸೆರೆಹಿಡಿದಿದ್ದಲ್ಲದೆ ಜರ್ಮನರು ಹಲವು ಸಲ ಮೇಲೆಬಿದ್ದದ್ದು ನಿಷ್ಫಲವಾಯಿತು. ಬ್ರಿಟಿಷರು ಸುಮಾರು ೧ ಮೈಲು ಮುಂದೊತ್ತಿದರು.

ಇಟಲಿಯವರ ಮೇಲೆ ಮಾಂಟ್‌ಫಾಲ್ಕೋನ ಪ್ರಾಂತ್ಯದಲ್ಲಿ ಜರ್ಮನರೂ ಆಸ್ಟ್ರಿಯರೂ ಬಂದುಬಿದ್ದು ಬಹಳ ನಷ್ಟಹೊಂದಿ ಹಿಂಜರಿದರು. ಟ್ರಿಹೊಫೊ ಸ್ಟೇಶನಿನ ಮೇಲೆ ೮ ಟನ್ ಸಿಡಿಮದ್ದನ್ನು ಇಟಲಿಯ ವಿಮಾನಗಳು ಚೆಲ್ಲಿದವು.

ಇಂಗ್ಲೆಂಡಿನ ಆಗ್ನೇಯದಲ್ಲಿ ಇಂಗ್ಲಿಷ ಚೆನ್ನಲ್ ಸಮುದ್ರದಲ್ಲಿ ಬ್ರಿಟಿಷರ ಒಂದು ಡಿಸ್ಟ್ರೋಯರ್ ನಾವೆಯನ್ನು ಜರ್ಮನ ಜಲಾಂತರ್ಗಾಮಿಯು ಟೋರ್ಪಿಡೊ ಎಸೆದು ಮುಳುಗಿಸಬಿಟ್ಟಿತು. ೫೦ ಮಂದಿ ಮಾತ್ರ ಜೀವಂತರಾಗಿ ಉಳಿದರು.

ವಿದೇಶ ವೃತ್ತಾಂತ.

ರಷ್ಯ:—ಇನ್ನೂ ದಂಗೆಯು ಹಬ್ಬದಂತೆಯೂ ಸೈನ್ಯವು ಸರಿಯಾಗಿ ಕಾದಾಡುವಂತೆಯೂ ಮಿ॥ ಕೆರೆನ್‌ಸ್ಕಿಯವರು ಪ್ರಯತ್ನಪಟ್ಟಿರುವರಾಗಿ ತಿಳಿದುಬರುತ್ತದೆ. ಸೈನ್ಯದ ಪೂರ್ಣ ಮೇಲ್ವಿಚಾರವನ್ನು ಜನರಲ್ ಎಲೆಕ್ಸೀಫರಿಗೆ ಕೊಟ್ಟಿರುವುದರಿಂದ ಚಳವಳವು ಶಾಂತವಾಗುವುದೆಂದು ನಂಬಿಕೆಯಿದೆ. ವಿರೋಧಪಕ್ಷದಲ್ಲಿ ಸಾಧನೆ ಮಾಡುತ್ತಿದ್ದ ಲೆನಿನ್ ಮತ್ತು ಜಿನೊವೀಫರನ್ನು ಬೇಗನೆ ಪತ್ತೆಮಾಡಬೇಕೆಂದು ಹುಕುಂ ಆಗಿಯದೆ. ಇವರಿಬ್ಬರೂ ಪೆಟ್ರೊಗ್ರೇಡಿಗೆ ಸಮೀಪದಲ್ಲಿ ಫಿನ್‌ಲೆಂಡ್ ಪ್ರದೇಶದಲ್ಲಿ ತಲೆತಪ್ಪಿಸಿಕೊಂಡಿರುವರಂತೆ.

ಕೊಸೆಕರೆಂಬ ಒಂದು ಜನಾಂಗವು ರಷ್ಯದಲ್ಲಿ ಇದೆ. ಇವರು ಸೈನ್ಯವೃತ್ತಿಯನ್ನೆ ಅವಲಂಬಿಸುವ ಶರ್ತದ ಮೇಲೆ ಇವರಿಗೆ ಜಹಗೀರುಗಳನ್ನೂ ಕೃಷಿಗೆ ನೆಲವನ್ನೂ ಕೊಟ್ಟಿರುವರು. ಇವರು ಈ ಚಳವಳದ ಕಾಲದಲ್ಲಿ ರಷ್ಯದ ಸರಕಾರದವರಿಗೆ ವಿರೋಧವಾಗಿರುವರೊ ಎಂಬ ಸಂದೇಹದಿಂದ ಅವರ ಲಷ್ಕರನ್ನು ತೆಗೆದುಹಾಕಬೇಕೆಂದು ಹುಕುಂ ಹೊರಟಿತ್ತು. ಆದರೆ ಅವರು ನೊವೆಚರ್‌ಕಾಸ್ಕ ಎಂಬಲ್ಲಿ ಸಭೆಸೇರಿ ತಮ್ಮ ನಾಯಕನಾದ ಕೆಲೆಡಿನ್ ಎಂಬವನಿಗೆ ನಿರ್ಬಂಧಿಸಲಿಕ್ಕೆ ಕೊಟ್ಟ ಹುಕುಂ ರದ್ದುಪಡಿಸಬೇಕೆಂತಲೂ ತಾವು ರಾಜದ್ರೋಹಿಗಳೆಂದಿಗೂ ಅಲ್ಲವಾದ್ದರಿಂದ ತಮ್ಮ ಮೇಲೆ ವಕ್ರದೃಷ್ಟಿ ಇಡಬಾರದೆಂದೂ ಕೇಳಿಕೊಂಡರು. ಅದಕ್ಕೋಸ್ಕರ ಅವರ ಮೇಲೆ ಕೊಟ್ಟ ಹುಕುಂ ಮನ್ನಾ ಇಟ್ಟಿದೆ. ಆದರೆ ಕೆಲೆಡ್ನನನ್ನು ಮಾರ್ಷಲ್ ಕೋರ್ಟಿನ ಮುಂದೆ ವಿಚಾರಮಾಡುವುದಾಗಿ ನಿರ್ಣಯಿಸಿದೆ.

ಜನರಲ್ ಕೊರ್ನಿಲೊಫರನ್ನು ಕೋರ್ಟು ಮಾರ್ಶಲ್ (ಲಷ್ಕರೀ ಕೋರ್ಟಿನ ವಿಚಾರಣೆ) ಮಾಡುವರಂತೆ.

ಜನರಲ್ ಎಲೆಕ್ಸೀಫರು ಸೈನ್ಯದ ಸರ್ವಾಧಿಕಾರವನ್ನು ಬಿಟ್ಟು ಪುನಃ ರಾಜೀ ಕೊಡಬೇಕಾಯಿತಂತೆ. ಮುಖ್ಯ ಮಂತ್ರಿಯಾದ ಮಿ॥ ಕೆರೆನ್‌ಸ್ಕಿಯವರು ಜನರಲ್ ಕೊರ್ನಿಲೊಫರ ದಂಗೆಯಲ್ಲಿ ಸೇರಿದವರನ್ನೆಲ್ಲ ಕೆಲಸದಿಂದ ತೆಗೆದುಹಾಕಬೇಕಾಗಿ ಒತ್ತಾಯಪಡಿಸಿದ್ದು ಜನರಲ್ ಎಲೆಕ್ಸೀಫರಿಗೆ ಸಮ್ಮತವಾಗಲಿಲ್ಲ. ಯುದ್ಧದ ಅನುಭವವುಳ್ಳ ನಾಯಕರನ್ನು ಥಟ್ಟನೆ ತೆಗೆದುಹಾಕಿದರೆ ಅವರ ಬದಲಾಗಿ ಆ ಕೆಲಸ ನಡಿಸುವವರು ಸಾಮರ್ಥ್ಯವಂತರು ಸಿಕ್ಕುವುದು ದುರ್ಲಭವೆಂದು ಅವರ ಅಭಿಪ್ರಾಯವಿತ್ತು.

ಕೊಸ್ಟರೀಕಾ ರಾಜ್ಯದವರು ಜರ್ಮನಿಯೊಡನೆ ಪರಸ್ಪರ ವ್ಯವಹಾರವನ್ನು ನಿಲ್ಲಿಸಿಬಿಟ್ಟಿರುವರು. ಜರ್ಮನ ನಿವಾಸಿಗಳಲ್ಲಿ ಕೆಲವರು ಸರಕಾರಕ್ಕೆ ವಿರೋಧವಾಗಿ ಚಳವಳವನ್ನು ಎಬ್ಬಿಸಬೇಕೆಂದು ಪ್ರಯತ್ನಿಸಿದ್ದು ಇದಕ್ಕೆ ಕಾರಣವಾಯಿತು. ಅಲ್ಲಿರುವ ಜರ್ಮನರನ್ನು ನಿರ್ಬಂಧಿಸುವುದಕ್ಕೆ ಹುಕುಂ ಆಗಿದೆ.

ಅಮೇರಿಕದಿಂದ ಮಿತ್ರಮಂಡಲಿಯವರಿಗಲ್ಲದೆ ಇತರ ರಾಜ್ಯಗಳಿಗೆ ... ವರೆಗೆ ರಫ್ತು ಆಗುತ್ತಿದ್ದ ಗೋಧಿಹುಡಿ, ಸಕ್ಕರೆ, ಜೋಳ, ಹತ್ತಿ, ... ಯುದ್ಧದ ಕೈಗಾರಿಕೆಗೆ ಬೇಕಾದ ರಸಾಯನಿಕ ದ್ರವ್ಯಗಳು ... [illegible] ಯುನೈಟೆಡ್ ಸ್ಟೇಟ್ಸ್ ರಾಜ್ಯದವರು ಹುಕುಂ ಮಾಡಿರುವರು.

ಲಂಡನ್ ಕಾರ್ಖಾನೆಗಳಲ್ಲಿ ನವೀನವಾಗಿ ತಯಾರಾಗುತ್ತಿದ್ದ ಯುದ್ಧವಿಮಾನಗಳ ನಕ್ಷೆಗಳು ವಿಚಿತ್ರರೀತಿಯಲ್ಲಿ ಕಳವಾಗಿಹೋದ ಸಂದರ್ಭದಲ್ಲಿ ಒಬ್ಬ ಗ್ರೀಕನನ್ನು ಹಿಡಿದು ನಿರ್ಬಂಧಿಸಿರುವರು.

ಐದು ಶಿಲ್ಲಿಂಗ್ ಬೆಲೆಯ ಕರೆನ್ಸಿ ನೋಟುಗಳನ್ನು ಇಂಗ್ಲೆಂಡಿನಲ್ಲಿ ಜಾರಿಗೆ ತರುವುದರಲ್ಲಿ ಇದ್ದಾರೆ. ಬೆಳ್ಳಿಯ ಕುಟ್ಟಯಾದದ್ದು ಇದಕ್ಕೆ ಕಾರಣವಾಗಿದೆ.

ಆರ್‌ಜಂಟಾಯ್ನ ರಾಜ್ಯದಲ್ಲಿ ಸ್ವೀಡನಿನ ರಾಯಭಾರಿಯ ಮೂಲಕವಾಗಿ ಜರ್ಮನಿಗೆ ವರ್ತಮಾನಗಳನ್ನು ಜರ್ಮನ್ ರಾಯಭಾರಿಯು ಮೋಸದಿಂದ ಕಳುಹಿಸುತ್ತಿದ್ದ ಕಾರಣ ಜರ್ಮನ್ ಸರಕಾರದವರೊಡನೆ ಉದಾಹರಣೆ ಕೇಳಿದ್ದಕ್ಕೆ ಈ ತಪ್ಪಿಗೆ ಅವರು ಕ್ಷಮೆ ಬೇಡಿರುವರು.

ಸ್ಪೇನ್ ದೇಶದಲ್ಲಿ ಫಿರಂಗಿಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸುವ ಏಲೆವಾರಿ ನಡೆಯುತ್ತದೆ.

ಆರ್‌ಜಂಟಾಯ್ನದ ಬ್ಯೂನಸ್ ಆಯಿರ್ ಎಂಬ ಊರಿನ ಬಳಿಯಲ್ಲಿ ಬ್ರಿಟಿಷರ ಯುದ್ಧಹಡಗು 'ಗ್ಲಸಗೊ' ಎಂಬುದು ಬಂದಾಗ ಅದಕ್ಕೆ ಆ ಸರಕಾರದ ಮತ್ತು ಪ್ರಜೆಗಳ ಕಡೆಯಿಂದ ಭಾರಿಯ ಸ್ವಾಗತವು ಸಿಕ್ಕಿತು. ಇದರಿಂದ ಈ ಜನಾಂಗವು ಬ್ರಿಟಿಷರ ಮತ್ತು ಮಿತ್ರಮಂಡಲಿಯವರ ಕಡೆಗೆ ಲೀನವಾಗಿದೆ ಎಂದು ಭಾವಿಸಬೇಕಾಗಿದೆ.

ಕೌಂಟ ಬರ್ನ್‌ಸ್ಟೊರ್ಫರು ಜರ್ಮನಿಯ ಪಕ್ಷವಾಗಿ ಯು. ನೈಟೆಡ್ ಸ್ಟೇಟ್ಸಿನಲ್ಲಿ ರಾಯಭಾರಿಯಾಗಿದ್ದಾಗ ಯುನೈಟೆಡ್ ಸ್ಟೇಟ್ಸ್ ಪಾರ್ಲಿಮೆಂಟ ಮೆಂಬರುಗಳಿಗೆ ಲಂಚಕೊಟ್ಟು ಜರ್ಮನ ಕಡೆಗೆ ಪಕ್ಷಪಾತಿಗಳಾಗುವಂತೆ ಮಾಡುವುದಕ್ಕೆ ೫೦,೦೦೦ ಡಾಲರ್ (೧ ಡಾಲರ್=೩ ರೂ ೩ ಆ.) ಮಂಜೂರಿ ಮಾಡಬೇಕೆಂದು ೧೯೧೬ನೇ ಜನವರಿ ತಿಂಗಳಲ್ಲಿ ಜರ್ಮನ್ ಸರಕಾರದ ಅಪ್ಪಣೆ ಕೇಳಿದ ಸಮಾಚಾರವು ಬಹಿರಂಗವಾಗಿ ಈ ಜರ್ಮನರು ಯಾವ ರೀತಿಯಲ್ಲಿ ಮಸಲತ್ತುಗಳನ್ನು ಪ್ರಯತ್ನಿಸುತ್ತಿದ್ದರು ಎಂಬುದು ಈಗ ಅಮೇರಿಕದಲ್ಲಿ ಗೊತ್ತಾಗಿದೆ.

ಬಿಯಸ್‌ಲೆಂಡಿನಲ್ಲಿ ಸಿಡಿಮದ್ದಿನ ಕಾರ್ಖಾನೆಯಲ್ಲಿ ಥಕ್ಕನೆ ಬೆಂಕಿ ಹೊತ್ತಿ ಸುಮಾರು ೧೯ ಮಂದಿ ಕಾಮಗಾರಿಯವರು ಸತ್ತರು.

ಯುನೈಟೆಡ್ ಸ್ಟೇಟ್ಸಿನಲ್ಲಿ ಶಾಂತಸಾಗರದ ತೀರದಲ್ಲಿ ರೇವುಗಳಲ್ಲಿ ಕೆಲಸ ಮಾಡುವವರು ಮುಷ್ಕರ ಹಿಡಿದಕಾರಣ ಹಲವು ಹಡಗುಗಳಲ್ಲಿ ಭರ್ತಿಮಾಡಿದ ಸಾಮಗ್ರಿಗಳನ್ನು ಥಕ್ಕಗೆ ಇಳಿಸಲಿಕ್ಕೂ ದಕ್ಕೆಯಲ್ಲಿ ತಂದುಹಾಕುವ ಸಾಮಾನನ್ನು ಹಡಗುಗಳಲ್ಲಿ ತುಂಬಿಸುವುದಕ್ಕೂ ತೊಂದರೆಯಾಗಿದೆ. ಈ ವಿಷಯವಾಗಿ ಕಾಮಗಾರಿಯವರ ಕೂಟದ ಅಧ್ಯಕ್ಷರಿಗೆ ಶಿಪ್ಪಿಂಗ್ ಬೋರ್ಡಿನ ಅಧ್ಯಕ್ಷರು ಬರೆದದ್ದರಲ್ಲಿ ಅದು ಶಾಂತವಾಗುವ ಚಿಹ್ನೆಗಳು ಕಂಡುಬರುತ್ತವೆ.

ಅಮೇರಿಕಕ್ಕೂ ಇತರ ಮಿತ್ರಮಂಡಲಿಯವರಿಗೂ ಸಾಕಷ್ಟು ಸಿಮೆಂಟನ್ನು ಇನ್ನೂ ೫ ವರ್ಷಗಳ ವರೆಗೆ ನಿರಾಯಾಸದಿಂದ ಒದಗಿಸುವಷ್ಟು ಅನುಕೂಲತೆಯುಳ್ಳದೆ ಎಂದು ಸ್ಟೇಂಡಾರ್ಡ ಒಯಿಲ ಕಂಪೆನಿಯ ಅಧ್ಯಕ್ಷರು ಪ್ರಕಟಿಸಿರುವರು.

ರಷ್ಯನ ಸೈನ್ಯದಲ್ಲಿ ಚಳವಳವನ್ನು ತಗ್ಗಿಸಿ ಅವರನ್ನು ಯುದ್ಧದ ಕಡೆಗೆ ಮನಸ್ಸುಕೊಡುವಂತೆ ಮಾಡುವುದಕ್ಕೆ ಈಗ ಪ್ರಯತ್ನಗಳು ನಡೆಯುತ್ತಲಿವೆ ಕೊರ್ನಿಲೊಫರ ವಿಷಾದಗಳ ಬಹಳ ಕ್ರೂರತರದವುಗಳಾಗಿದ್ದು ಸೈನ್ಯದಲ್ಲಿ ಬಹಳ ಅಸಮಾಧಾನವುಂಟಾಗಿತ್ತು. ಜನರಲ್ ವೆರ್ಕೊವ್‌ಸ್ಕಿ ಎಂಬವರು ಜನರಲ್ ಎಲೆಕ್ಸೀಫರ ಬದಲಾಗಿ ಸೈನ್ಯದ ಸರ್ವಾಧಿಕಾರವನ್ನು ವಹಿಸಿರುವರು.

ಇಟಲಿಯ ಪೋಪಸಾಹೇಬರ ಸಂಧಿಪ್ರಸ್ತಾಪ ಪತ್ರಕ್ಕೆ ಉತ್ತರವಾಗಿ ಜರ್ಮನ್ ಸರಕಾರದವರು ಕೊಟ್ಟ ಪತ್ರದಲ್ಲಿ ಎಲ್ಲಾ ರಾಜ್ಯಗಳು ಸ್ವತಂತ್ರವಾಗಿ ಸೈನ್ಯದ ಖರ್ಚನ್ನು ಕಡಿಮೆ ಮಾಡಬೇಕೆಂತಲೂ ಸಮುದ್ರಗಳ ಮೇಲೆ ವ್ಯಾಪಾರ ಸಾಗಿಸುವದಕ್ಕೆ ಎಲ್ಲರಿಗೂ ಏಕಪ್ರಕಾರವಾದ ಅಧಿಕಾರಗಳು ಸಿಕ್ಕಬೇಕೆಂತಲೂ ಸೂಚಿಸಿರುವರು. ಒಸ್ಟ್ರಿಯನ್ ಸರಕಾರದವರು ಇದನ್ನೇ ಒತ್ತಿಹೇಳುತ್ತಾರೆ.

ಐರ್ಲೆಂಡಿನಲ್ಲಿ ೧೯೧೬ನೇ ಇಸವಿಯಲ್ಲಿ ಚಳವಳವಿದ್ದಾಗ ಅದನ್ನು ಬಲಪಡಿಸಿ ಐರ್ಲೆಂಡಿಗೂ ಬ್ರಿಟನ್ನಿಗೂ ಜಗಳ ಬರುವಂತೆಯೂ ಅದರಲ್ಲಿ ಐರ್ಲೆಂಡಿನ ಪಕ್ಷವಾಗಿ ಜರ್ಮನರು ಸಹಾಯಮಾಡುವಂತೆಯೂ ಐರ್ಲೆಂಡಿನ ಜನರು ದಂಗೆ ಎಬ್ಬಿಸುವಾಗ ಇಂಗ್ಲೆಂಡಿನ ಮೇಲೆ ವಿಮಾನಗಳಿಂದ ಸಿಡಿಮದ್ದನ್ನು ಚೆಲ್ಲುವಂತೆಯೂ ಅದೇ ಕಾಲದಲ್ಲಿ ಬ್ರಿಟಿಷರ ಯುದ್ಧನಾವೆಗಳನ್ನು ಬೇರೊಂದು ಕಡೆಗೆ ಮೋಸದಿಂದ ಹೋಗುವಂತೆ ಉಪಾಯಮಾಡಿ ಅವು ಸಮೀಪ ಇಲ್ಲದ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಹಡಗುಗಳಿಂದ ಒಂದು ದೊಡ್ಡ ಪಡೆಯನ್ನು ಇಳಿಸುವಂತೆಯೂ ಅದೇ ಸಮಯದಲ್ಲಿ ಐರ್ಲೆಂಡಿನ ತೀರದ ಬಳಿಯಲ್ಲಿ ಜರ್ಮನ್ ಜಲಾಂತರ್ಗಾಮಿಗಳನ್ನು ಇಟ್ಟು ಐರ್ಲೆಂಡು ಮತ್ತು ಇಂಗ್ಲೆಂಡಿಗೆ ಇರುವ ವ್ಯಾಪಾರ ವಹಿವಾಟುಗಳನ್ನು ನಿಲ್ಲಿಸುವಂತೆಯೂ ಅಮೇರಿಕದಿಂದ ನ್ಯೂಯೋರ್ಕಿನ ಮುಖ್ಯ ಕೋರ್ಟಿನ ಜಡ್ಜ ಕೊಹಲನ್ ಎಂಬವರು ಸೂಚನೆ ಕೊಟ್ಟಿದ್ದರೆಂದು ಈಗ ಹೊರಬಿದ್ದದೆ.

ಆರ್‌ಜಂಟಾಯ್ನದಲ್ಲಿ ಕೆಬಲ್ ಕಂಪೆನಿಯವರು (ಸಮುದ್ರದಲ್ಲಿ ತೂಗುವ ಕಂಬಿಮೂಲಕ ವರ್ತಮಾನವನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸುವವರು) ಸ್ವಿಡನ್ ಮತ್ತು ಜರ್ಮನ್ ರಾಯಭಾರಿಗಳಿಂದ ಸ್ವಿಡನ್ನಿಗೆ ಮತ್ತು ಅದರ ಮೂಲಕ ಜರ್ಮನಿಗೆ ಕಳುಹಿಸಿದ ಸಂದೇಹಾಸ್ಪದವಾದ ಟೆಲಿಗ್ರಾಮುಗಳ ನಕಲುಗಳನ್ನು ಹಾಜರುಪಡಿಸಬೇಕೆಂದು ಆರ್ ಜಂಟಾಯ್ನ ಸರಕಾರದವರು ಹೇಳಿರುವರು.

ಆರ್ ಜಂಟಾಯ್ನದಲ್ಲಿ ರೈಲವೇ ಕಾಮಗಾರಿಯವರ ಮುಷ್ಕರವು ಇನ್ನೂ ಬಲಗೊಳ್ಳುತ್ತಿದೆ. ಇವರು ಒಂದು ದೊಡ್ಡ ಸೇತುವೆಯನ್ನು ಸಿಡಿಮದ್ದಿನಿಂದ ಸುಟ್ಟು ನಾಶಮಾಡಿದರು. ಆರ್ ಜಂಟಾಯ್ನದಲ್ಲಿ ಸಿವಿಲ್ ಕಾನೂನುಗಳನ್ನು ಮನ್ನಾಇಟ್ಟು ಲಷ್ಕರೀಕಾಯಿದೆಯನ್ನು ಜಾರಿಗೆ ತರುವ ಆಲೋಚನೆಯಲ್ಲಿದ್ದಾರೆ.

ಜರ್ಮನ ಸರಕಾರದವರು ಮೇಲೆ ಹೇಳಿದ ಒಳಸಂಚಿನ ಕೃತ್ಯವು ತಮ್ಮ ಮಧ್ಯತಿನಿಂದ ಆದದ್ದಲ್ಲವೆಂದೂ ತಾವೂ ಅದಕ್ಕೆ ಪೂರ್ಣ ವಿರೋಧವಾಗಿದ್ದೇವೆಂದೂ ಸಮಾಧಾನಕೊಟ್ಟಿದ್ದರಿಂದ ಅವರ ಮೇಲೆ ಯುದ್ಧಮಾಡುವದಾಗಿ ಆರ್ ಜಂಟಾಯ್ನದವರು ಮಾಡಿದ ಆಲೋಚನೆಯು ಅಲ್ಲಿಯೇ ತಗ್ಗಿತು.

ಮಿ॥ ಮೊಂಟಗರವರು (ಇಂಡಿಯಾಸ್ಟೇಟ್ ಸೆಕ್ರೆಟರಿಗಳು) ಲೊರ್ಡ, ಡನೊಮು ರ ಸಹಿತ ಹಿಂದುಸ್ಥಾನಕ್ಕೆ ಬರುವುದಕ್ಕೆ ಬರುವ ಒಕ್ಟೋಬರ್ ತಿಂಗಳಲ್ಲಿ ಹೊರಡುವರಂತೆ. ಅಲ್ಲಿ ಪಾರ್ಲಿಮೆಂಟು ಸಭೆಯು ಕೂಡಿದ್ದಾಗ ತಾನು ಇಲ್ಲಿ ಬಂದು ಮಾಡುವ ಕರ್ತವ್ಯಗಳನ್ನು ಕುರಿತು ಬಂದಿಷ್ಟು ವಿವರಿಸಿ ಅವರ ಸಹಾನುಭೂತಿಯನ್ನು ಪಡೆದು ಇಲ್ಲಿ ಬರುವ ನಿಮಿತ್ತ ಅವರ ಪಯಣವನ್ನು ಅಷ್ಟು ಮುಂದರಿಸಿರುವರಂತೆ.

[illegible]

ಆರ್‌ಜಂಟಾಯ್ನದಲ್ಲಿ ರೈಲ್ವೆ ಕಾಮಗಾರಿಯವರು ಮುಷ್ಕರ ಹಿಡಿದು ಕೆಲಸವನ್ನು ನಿಲ್ಲಿಸಿದ್ದು ಇನ್ನೂ ಚಳವಳವು ಬೆಳೆಯುತ್ತಲೇ ಇದೆ. ಆದರಿಂದ ಮಿತ್ರಮಂಡಲಿಯವರಿಗೆ ಕಳುಹಿಸಬೇಕಾದ ಕೆಲವು ಆಹಾರಸಾಮಗ್ರಿಗಳನ್ನು ಸಾಗಿಸಲಿಕ್ಕೆ ತೊಂದರೆಯಾಗಿದೆ. ಈ ಮುಷ್ಕರಕ್ಕೆ ಜರ್ಮನರ ಒಳಸಂಚು ಕಾರಣವಾಗಿದೆ ಎಂದು ತಿಳಿದುಬರುತ್ತದೆ.

ಒಳದೇಶ ವೃತ್ತಾಂತ.

ಮುಂಬಾಯಿ:—ಮುಂಬಾಯಿಯ ಟಪ್ಪಾಲು ಬಟ್ವಾಡೆ ಪೇದೆಗಳು ತಮ್ಮ ಮನವಿಗೆ ಸಮರ್ಪಕವಾದ ಉತ್ತರ ಸಿಕ್ಕಲಿಲ್ಲವೆಂಬ ನೆವನದಿಂದ ೧೯ನೇ ತಾರೀಕಿನಿಂದ ತಾವು ಕೆಲಸಮಾಡುವುದಿಲ್ಲವಾಗಿ ಮುಷ್ಕರ ಹಿಡಿದಿರುವರು. ಈ ಸಂದರ್ಭದಲ್ಲಿ ಮುಂಬಾಯಿಯ ಪೋಸ್ಟ್‌ಮಾಸ್ಟರ್ ಜನರಲರೂ ಪ್ರೆಸಿಡೆನ್ಸಿ ಪೋಸ್ಟ್‌ಮಾಸ್ಟರರೂ ಅವರನ್ನು ಸಮದಾಯಿಸಲಿಕ್ಕೆ ನೋಡಿದರು, ಅವರು ಈ ಮುಂಚೆ ಕೇಳಿಕೊಂಡ ರಿಯಾಯತಿಗಳಿಗೆ ಡಿರೆಕ್ಟರ್ ಜನರಲರವರಿಂದ ಹುಕುಂ ಆಗಿದೆಯೆಂಬಂತೆಯೂ ಅವರ ಅಹವಾಲೆಗಳಿಗೆ ತಕ್ಕಮಟ್ಟಿಗೆ ಅನುಕೂಲತೆಯನ್ನು ಒದಗಿಸಿಕೊಟ್ಟದೆಂತಲೂ ಹೇಳಿದರು. ಆದರೂ ಅದರಿಂದ ಸಮಾಧಾನಪಡದೆ ಈ ಪೇದೆಗಳು ಕೆಲಸಮಾಡುವುದನ್ನು ನಿಲ್ಲಿಸಿಬಿಟ್ಟಿರುವರು. ಈಗ ತತ್ಕಾಲ ಬಟ್ವಾಡೆ ಕೆಲಸಕ್ಕೆ ಟೆಲಿಗ್ರಾಫ ಡಿಪಾರ್ಟಮೆಂಟಿನ ಪೇದೆಗಳು ಸಹಾಯಮಾಡುವುದಲ್ಲದೆ ಮುಂಬಾಯಿಯ ಟಿಕ್ಕಿಕೆಟ್ ಕಂಪೆನಿಯ ಮ್ಯಾನೇಜರು ಫೀಸು ತಕ್ಕೊಳ್ಳದೆ ತಮ್ಮ ಟಿಕ್ಕಿಕೆಟ್ ಬಂಡಿಗಳಲ್ಲಿ ಕೆಲವನ್ನು ಟಪ್ಪಾಲ ಇಲಾಖೆಯ ವಶಕ್ಕೆ ಕೊಟ್ಟದ್ದರಿಂದ ಅವುಗಳ ಮೂಲಕ ಮನೆಮನೆಗಳಿಗೆ ಬಟ್ವಾಡೆ ಮಾಡುತ್ತಿರುವರು.

ಉಟಕಮಂಡ್:—ನೀಲಗಿರಿಯ ಟ್ರೇಡ್ಸ್ ಎಸೋಶಿಯೇಶನ್ (ವ್ಯಾಪಾರಿಗಳ ಕೂಟ) ನವರು ಸಭೆಸೇರಿ ಮಾಡಿದ ಈ ಕೆಳಗಿನ ಠರಾವನ್ನು ವೈಸರಾಯಿಯವರ ಬಳಿಗೆ ಕಳುಹಿಸಿರುವರು. ಅದರ ಸಾರಾಂಶವೇನೆಂದರೆ:—"ಎನ್ನಿಬೆಸೆಂಟ ಮೊದಲಾದವರು ಸನದಶೀರ ಅಲ್ಲದ ಮತ್ತು ತೀಕ್ಷ್ಣರೀತಿಯ ಚಳವಳದಲ್ಲಿ ಇನ್ನು ಕೈಹಾಕುವುದಿಲ್ಲವೆಂದು ಇಂಡಿಯಾ ಗವರ್ನಮೆಂಟಿನವರು ಸಮಾಧಾನಪಟ್ಟಲ್ಲಿ ನಿರ್ಬಂಧಿತರನ್ನು ಬಿಡುಗಡೆಮಾಡುವಂತೆ ಮದ್ರಾಸು ಗವರ್ನಮೆಂಟಿನವರಿಗೆ ಸೂಚಿಸಬಹುದಾಗಿ ಇಂಡಿಯಾ ಗವರ್ನಮೆಂಟಿನವರು ಮಾಡಿದ ತೀರ್ಮಾನವನ್ನು ನಾವು ತಿರಸ್ಕಾರಮಾಡಿಕೊಂಡರೂ ಲೋರ್ಡ ಪೆಂಟಲೆಂಡರು ಈ ಪ್ರತಿಬಂಧಕದ ಹುಕುಂ ಕೊಡುವ ಮುಂಚೆ ಬಹಳ ತಾಳ್ಮೆಯಿಂದ ಮದ್ರಾಸುವರೆಗೆ ಹೋಗಿ ಈ ವಿಷಯದಲ್ಲಿ ಎನ್ನಿಬೆಸೆಂಟರನ್ನು ಸಮದಾಯಿಸಲಿಕ್ಕೆ ನೋಡಿದರೂ ನಿಷ್ಫಲವಾದ ಸಂಗತಿಯನ್ನು ಇಂಡಿಯಾ ಗವರ್ನಮೆಂಟಿನವರು ಆಲೋಚನೆಗೆ ತೆಗದುಕೊಳ್ಳಬೇಕಾಗಿದೆ. ಊಟಕಮಂಡಿನಲ್ಲಿ ಈ ಸಂದರ್ಭದಲ್ಲಿ ಎನ್ನಿಬೆಸೆಂಟರು 'ಹೋಮ್‌ರೂಲ್' ಪತಾಕೆಯನ್ನು ಹಾರಿಸಿದ್ದು ಸನದಶೀರ ಅಧಿಕಾರಕ್ಕೆ ವಿರೋಧಬುದ್ಧಿಯನ್ನೂ ರಾಜ್ಯದ್ವೇಷವನ್ನೂ ತೋರ್ಪಡಿಸುವಂಥದ್ದಾಗಿದೆ. ಆದ್ದರಿಂದ ರಾಜಭಕ್ತರಾದ ಜನಗಳ ಮನಸ್ಸಿಗೆ ವಿರೋಧವಾಗಿಯೂ ಅತೀ ಕೊಂಚವಾದ ಕೆಲವು ಮಂದಿ ಚಳವಳಗಾರರ ಹುಟ್ಟಿದ ಛಲಕ್ಕೆ ಧೈರ್ಯಗುಂದಿಯೂ ಯಾವುದೊಂದು ಶರ್ತಗಳಿಲ್ಲದೆ ಥಕ್ಕನೆ ಎನ್ನಿಬೆಸೆಂಟರನ್ನು ಬಿಡುಗಡೆ ಮಾಡುವುದು ದೇಶದಲ್ಲಿ ಶಾಂತಿಯನ್ನು ಹೋಗಲಾಡಿಸುವುದಕ್ಕೆ ಕಾರಣವಾಗುವುದು ಎಂಬವನ್ನು ವಿಚಾರಕ್ಕೆ ತಕ್ಕೊಳ್ಳಬೇಕು."

ಸಿಮ್ಲಾ:—ವರಿಷ್ಠ ನ್ಯಾಯ-ವಿಧಾಯಕ ಸಭೆಯಲ್ಲಿ ಒನರೆಬಲ್ ಶಫಿಯವರು ಪಂಜಾಬು ಸರಕಾರದ ಅಧಿಕಾರಗಳನ್ನು ಹೆಚ್ಚಿಸಿ ಅದನ್ನು ಇತರ ಸಂಸ್ಥಾನಿಕ ಸರಕಾರದ ವರ್ಗಕ್ಕೆ ಏರಿಸಬೇಕೆಂದು ಚರ್ಚೆಗೆ ತಂದ ಠರಾವಿನ ವಿಷಯದಲ್ಲಿ ಪಂಜಾಬಿನ ಲೆಪ್ಟಿನೆಂಟ ಗವರ್ನರರವರು ಮಾಡಿದ ಭಾಷಣದಲ್ಲಿ ಅನಾವಶ್ಯಕವಾಗಿ ಇತರ ಸಂಸ್ಥಾನಗಳ ಪ್ರತಿನಿಧಿಗಳನ್ನೂ ಪ್ರಜಾಜನಗಳ ಮುಖಂಡರನ್ನೂ ದೂಷಿಸಿ ರೇಗಿಸುವ ಮಾತುಗಳನ್ನು ಆಡಿದ್ದು ತನಗೆ ಸಮ್ಮತಿಯಾಗಲಿಲ್ಲವೆಂದು ವೈಸರಾಯ ಪ್ರಭುಗಳು ಬಹಿರಂಗವಾಗಿ ಸಭೆಯಲ್ಲಿ ಹೇಳಿದ್ದಲ್ಲದೆ, ಆ ಮಾತುಗಳನ್ನು ಆಡಿದ್ದಕ್ಕಾಗಿ ತಾನು ವ್ಯಸನಪಡುತ್ತೇನೆಂದು ಲೆಪ್ಟಿನೆಂಟ ಗವರ್ನರರು ಸಹಾ ಹೇಳಿದರು.

ಕಲ್ಲಿಕೋಟೆ:—ಜಾಮೊರಿನ್ ಕೊಲೆಜಿನಲ್ಲಿ ಪ್ರಿನ್ಸಿಪಾಲ ಮಿ॥ ದೇವಿಯವರ ಅಪ್ಪಣೆಯನ್ನು ಉಲ್ಲಂಘಿಸಿದಕಾರಣ ಶಿಕ್ಷೆಗೆ ಗುರಿಯಾದರೆಂದು ಈ ಮೊದಲು ಹೇಳಿದ ವಿದ್ಯಾರ್ಥಿಗಳೂ ಇತರರೂ ೨೦ನೇ ತಾರೀಕಿನ ದಿನ ಮಾತ್ರವೇ ಪ್ರಥಮದ ೪ ತಾಸುಗಳಲ್ಲಿ ಕೊಲೆಜಿನ ಕ್ರಮಗಳಲ್ಲಿ ಹೇಳಿದ ಉಡುಪುಗಳನ್ನು ಧರಿಸಿಕೊಂಡು ಬರಬೇಕೆಂದೂ ಅನಂತರ ಇಚ್ಛಾನುಸಾರವಾಗಿ ಉಡುಪುಗಳನ್ನು ಧರಿಸಿದ್ದಲ್ಲಿ ತಾನು ಆಕ್ಷೇಪಿಸುವುದಿಲ್ಲವೆಂದೂ ಪ್ರಿನ್ಸಿಪಾಲರು ಹೇಳಿದ್ದಕ್ಕೆ ವಿದ್ಯಾರ್ಥಿಗಳು ಒಪ್ಪಿದ್ದರಿಂದ ಅಲ್ಲಿಯ ಚಳವಳವು ಶಾಂತವಾಯಿತೆಂದು ಕೇಳುತ್ತೇವೆ.

ಸಿಮ್ಲಾ:—ಯುದ್ಧ ಆರಂಭವಾದಂದಿನಿಂದ ೧೯೧೭ನೇ ಆಗೊಸ್ತು ೩೦ನೇ ತಾರೀಕುವರೆಗೆ ಸೆಂಟ್ರಲ್ ಇಂಪೀರಿಯಲ್ ಇಂಡಿಯನ್ ರಿಲೀಫ ಫಂಡ್ (ಹಿಂದೂಸ್ಥಾನದಲ್ಲಿ ಯುದ್ಧದ ಸಂಬಂಧವಾಗಿ ನಷ್ಟಹೊಂದಿದವರಿಗೆ ಸಹಾಯಕ್ಕೆಂದು ವೈಸರಾಯರು ಏರ್ಪಡಿಸಿದ ಫಂಡು) ಇದರಲ್ಲಿ ೧,೪೫,೮೫,೦೦೦ ರೂಪಾಯಿ ಸಂಗ್ರಹವಾಗಿ ಅದರ ಬಡ್ಡಿ ಸಮೇತ ೧೯,೪೧,೮೮,೦೦೦ ಆಗುವಲ್ಲಿ ಆ ತಾರೀಕುವರೆಗೆ ೭೩,೨೮,೦೦೦ ರೂಪಾಯಿ ಖರ್ಚುಮುಟ್ಟಿಸಿ ಅನೇಕರಿಗೆ ದ್ರವ್ಯಸಹಾಯ ಕೊಡಲಾಯಿತೆಂದು ತಿಳಿದುಬರುತ್ತದೆ.

ಒಬ್ಬ ಬಾತ್ಮಿದಾರರು ಹಿಂದೂ ಪತ್ರಿಕೆಗೆ ಬರೆದ ಬಾತ್ಮಿಯ ಉತಾರು:—

ಪಾಲ್ಘಾಟು:—೧೬ನೇ ತಾರೀಕಿನ ದಿನ ಪಾಲ್ಘಾಟಿನಲ್ಲಿ ಎನ್ನಿಬೆಸೆಂಟರ ನಿರ್ಬಂಧದ ದಿನವನ್ನು ಆಚರಿಸುವ ಸಂದರ್ಭದಲ್ಲಿ ಒಂದು ಮೆರವಣಿಗೆಯು ಹೊರಟಿತ್ತು. ಅದರಲ್ಲಿ ಪಾಲ್ಘಾಟು ಕೊಲೆಜಿನ ಕೆಲವು ವಿದ್ಯಾರ್ಥಿಗಳು ಸೇರಿದ್ದನ್ನು ಕೊಲೆಜಿನ ಪ್ರಿನ್ಸಿಪಾಲರು ತಿಳಿದು ಆ ವಿದ್ಯಾರ್ಥಿಗಳನ್ನು ಮರುದಿನ ಕೊಲೆಜಿಗೆ ಬಂದೊಡನೆ ಆ ಕುರಿತು ವಿಚಾರಿಸಿದರು. ಆ ವಿದ್ಯಾರ್ಥಿಗಳು ತಾವು ಮೆರವಣಿಗೆಯಲ್ಲಿ ಇದ್ದದ್ದನ್ನು ಒಪ್ಪಿಕೊಂಡರು. ಆಗ ಪ್ರಿನ್ಸಿಪಾಲರು ಮಿ॥ ರಾಮ ಸಂಕಲ್ಲಯವರು ಅವರಮೇಲೆ ರೇಗಿಬಿದ್ದು ೩ ಮಂದಿಗೆ ಒಬ್ಬೊಬ್ಬನಿಗೆ ೩ ರೂಪಾಯಿ ಜುಲ್ಮಾನೆ ವಿಧಿಸಿದ್ದಲ್ಲದೆ ಇನ್ನು ೩ ಮಂದಿಗೆ ಕೊಲೆಜಿನಿಂದ ಹೆಸರು ತೆಗೆದುಹಾಕಿದರು. ಅವರಿಗೆ ಲೀವಿಂಗ್ ಸರ್ಟಿಫಿಕೇಟು ಕೊಡಬೇಕೋ ಎಂದು ಕೇಳಿದ್ದಕ್ಕೆ ಆ ಹುಡುಗರು 'ಆಗುಹುದು' ಎಂದು ಒಪ್ಪಿದರು. ಆದರೆ ಲೀವಿಂಗ್ ಸರ್ಟಿಫಿಕೇಟಿನ ಪುಸ್ತಕವು ಮ್ಯುನಿಸಿಪಲ್ ಒಫೀಸರ ಬಳಿಯಲ್ಲಿದೆ ಎಂದು ಕೊಲೆಜಿನ ಗುಮಾಸ್ತರರು ಹೇಳಿದರು. ಆಗ ಮೊದಲು ಕೊಟ್ಟ ಹುಕುಮನ್ನು ಉಳಿಸಲಾಗಿದೆಯೆಂದು ಪ್ರಿನ್ಸಿಪಾಲರು ಹೇಳಿದರು.

ಈ ವರ್ತಮಾನವು ಇತರ ವಿದ್ಯಾರ್ಥಿಗಳಿಗೆ ತಿಳಿದೊಡನೆ ಅವರಲ್ಲಿ ... [illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು.
೧ ಮುಂದೆ ಏನು? ೪
ಸ್ಫುಟವಿಚಾರಗಳು:—
೧ ಸರ್. ಮಾಯ್ಕಲ್ ಒಡಿವರರ ಕ್ಷಮಾಪಣೆ ೪-೫
೨ ಮಾನ್ಯ ಕೌಟಮನರ ಅಪೂರ್ವ ವಿಧಾನಗಳು ೫
೩-೪ ಬರೋಡಾ ಸಂಸ್ಥಾನದ ವರದಿ . . . . . ,,
೫ ಮಿ.ಸೆಸ್. ಬಿಝೆಂಟರು . . . . . ,,
ಶ್ಲೋಕ — ಮಂಗಳೂರು ೫
ವರ್ತಮಾನ ಸಂಗ್ರಹಗಳು:—
೧ ಯುರೋಪದ ಮಹಾಯುದ್ಧ ೬
೨ ವಿದೇಶ ವೃತ್ತಾಂತ . . . . . ,,
೩ ಒಳದೇಶ ವರ್ತಮಾನ ೬-೭
೪ ಬಾತಮಿಗಳು — ಮುಲ್ಕಿ, ಕುಂಬಳೆ, ವಿಟ್ಲ . . . . . ,,
೫ ಪತ್ರವ್ಯವಹಾರ . . . . . ,,

ಸ್ವದೇಶಾಭಿಮಾನಿ.

ಶಕ ೧೮೪೦ ಅಧಿಕ ಆಶ್ವೀಜ ಶು. ೧೨ ಶುಕ್ರವಾರ.

ಮುಂದೆ ಏನು?

ಪ್ರತಿಗಾಮಿಧೋರಣದ ಬಗ್ಗೆ ಉತ್ಸಾಹಕರಲ್ಲವಾದರೂ ಪ್ರೋತ್ಸಾಹಕರಾದ ಮಿ. ಆಸ್ಟಿನ್ ಚೇಂಬರಲೇನರು ಭಾರತಮಂತ್ರಿತ್ವವನ್ನು ಬಿಟ್ಟು ಹೋದರು, ಆ ಸ್ಥಾನದಲ್ಲಿ ಉದಾರಧೋರಣದ ಪ್ರೋತ್ಸಾಹಕರಾದ ಮಿ. ಮೊಂಟೆಗ್ಯೂಗಳು ಬಂದರು, ಸನದಶೀರ ಚಳವಳದ ಕೆಲವು ಅಂಗಗಳ ಮೇಲೆ ಗಮನ ಕೊಡಲು ಪ್ರಾಂತಿಕ ಸರಕಾರಗಳಿಗೆ ಒಗಡೆಯಿಂದ ಹುಕುಮುಗಳನ್ನು ಕೊಡುತ್ತಿದ್ದ ಹಾಗು ಪ್ರೆಸ್ಸಿನವರ ಡೆಪ್ಯುಟೇಶನಿನ ಭೇಟಿಯನ್ನು ತಕ್ಕೊಂಡಾಗ ಲೋಕಮತದ ಕಡೆಗೆ ಸಹಾನುಭೂತಿಯ ಲವಲೇಶವನ್ನು ಸಹ ತೋರಿಸದೆ ಪ್ರಮುಖ ವಿಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಅದಿ ತೋರಿಸಿದ ವೈಸರಾಯಿ ಪ್ರಭುಗಳು "ಶಾಂತಿರಸ್ತು, ತುಷ್ಟಿರಸ್ತು" ಎಂದು ಈಗ ಸಮ್ಮತಿಯ ಅಂತಃಕರಣದಿಂದ ಶಾಂತಿಸೂಕ್ತವನ್ನು ಓದಿದರು, ಮಿಸೆಸ್ ಬಿಝೆಂಟಬಾಯಿ ಮತ್ತು ವಾಡಿಯಾ ಅರುಂಡೇಲರು ಬಂಧಮುಕ್ತತೆಯೂ ಆಯಿತು, ಮುಂಬಯಿ ಸಂಸ್ಥಾನದಲ್ಲಿ ಪ್ರವೇಶಿಸಕೂಡದೆಂದು ಬಿಝೆಂಟರಿಗೆ ಕೊಟ್ಟ ಹುಕುಮನ್ನು ಮುಂಬಯಿ ಸರಕಾರವು ಹಿಂದಕ್ಕೆ ತಕ್ಕೊಂಡಿತು, ಮಧ್ಯದಲ್ಲಿ ಐ ಪತ್ರ ತದ್ವಾ ವಾಕ್‌ಪಾಂಡಿತ್ಯವನ್ನು ತೋರಿಸಿದ ಸರ್ ಮಾಯ್ಕಲ್ ಒಡಿವಾರರು ಸಹ ಒಂದೆರಡು ದಿವಸಗಳೊಳಗಾಗಿ ಪಶ್ಚಾತ್ತಾಪದ ಪ್ರಾಯಶ್ಚಿತ್ತದಿಂದ ಪುನೀತರಾದರು, ತಾತ್ಪರ್ಯ, ಒಂದೆರಡು ಸಂಗತಿಗಳ ಅಪವಾದವನ್ನು ಬಿಟ್ಟರೆ ೧೨-೧೩ ತಿಂಗಳ ಹಿಂದೆ ಎಂದರೆ ಲೋಕಪ್ರಿಯ ವೈಸರಾಯರಾದ ಲಾ. ಹಾರ್ಡಿಂಜರ ಕಾಲದಲ್ಲಿ ಆಳಿಕೊಂಡಿದ್ದ ಸಹಾನುಭೂತಿಯ ಧೋರಣವು ಅಷ್ಟು ಸ್ಪಷ್ಟ ಮತ್ತು ಶುದ್ಧರೂಪದಲ್ಲಿಲ್ಲದರೂ ಕೆಲವು ಮಟ್ಟಿಗೆ ಪುನಃ ಪ್ರಾರಂಭವಾಗಿದೆ ಎನ್ನಲು ಅಡ್ಡಿ ಇಲ್ಲ. ಮೂರು ತಿಂಗಳ ಹಿಂದೆ ಬೀಸುತ್ತಿದ್ದ ಉಗ್ರಧೋರಣದ ಬಿರುಗಾಳಿಯು ನಿಂತುಹೋಗಿ ಈಗ ಲೋಕಮತಕ್ಕೆ ಅನುಕೂಲವಾದ ಗಾಳಿಯು ಬೀಸಹತ್ತಿದೆ. ಈಗ ಉಂಟಾದ ಅನುಕೂಲ ರಾಜಕೀಯ ಪರಿಸ್ಥಿತಿಯಿಂದ ಹಿಂದೀ ಮುತ್ಸದ್ದಿಗಳಿಗೆ ಆನಂದವುಂಟಾಗದೆ ಇರದು. ಅಂತರ್ಗತ ಸ್ವರಾಜ್ಯದಂಥ ರಾಜಮಾನ್ಯವಾದ ಶುಭಾಕಾಂಕ್ಷೆಯಿಂದ ಪ್ರೇರಿತವಾಗಿ ಹಿಂದೀ ದೇಶವು ರಾಜಕೀಯ ಚಳವಳದ ಸಮುದ್ರದಲ್ಲಿ ಸನದಶೀರ ಉಪಾಯಗಳ ನಾವೆಯನ್ನು ಬಿಟ್ಟಿದೆ ಮಾತ್ರ, ಕೂಡಲೆ ಆ ನಾವೆಯ ಮೇಲೆ ಅಧಿಕಾರಿಗಳ ವಕ್ರಧೋರಣದ ತೆರೆಗಳು ಒಂದರ ಮೇಲೆ ಒಂದು ಎಡೆಬಿಡದೆ ಅಪ್ಪಳಿಸಹತ್ತಿದವು; ಈ ತೆರೆಗಳ ಆಘಾತದಿಂದ ನಾವೆಯು ಎಲ್ಲಾದರೂ ಜಲಸಮಾಧಿಯನ್ನು ತಕ್ಕೊಳ್ಳುತ್ತದೋ ಏನೋ ಎಂದಾದಾಗ ಕಡಲೆ ಪ್ರತಿಕೂಲವಾದ ತೆರೆಗಳು ಅನುಕೂಲವಾದ್ದಲ್ಲಿ ಆ ನಾವೆಯೊಳಗಿನವರಿಗೆ ಎಷ್ಟು ಸಂತೋಷವಾದೀತು! ಸಮುದ್ರವೆಂದ ಮೇಲೆ ಅದರಲ್ಲಿ ತೆರೆಗಳು ಬರುವುದು ಸ್ವಾಭಾವಿಕವೆ. ಆದರೆ ನಾವೆಯ ಪ್ರಯಾಣಕ್ಕೆ ಪ್ರತಿಕೂಲವಾಗಿಯೆ ಆ ತೆರೆಗಳು ಪ್ರಯುಕ್ತಿಸಹತ್ತಿದರೆ ಅದು ಕೊಂಚ ಭಯಜನಕವಾಗುವುದು. ಮತ್ತು ಅವೆ ತೆರೆಗಳು ಅನುಕೂಲವಾದ್ದಲ್ಲಿ ಸಂತೋಷವಾಗುವುದು. ಈ ದೃಷ್ಟಿಯಿಂದ ಈಗಿನ ಬದಲಾಯಿಸಿದ ರಾಜಕೀಯ ಪರಿಸ್ಥಿತಿಯ ಮೂಲಕ ಹಿಂದೂಸ್ಥಾನವು ಆನಂದಮಗ್ನವಾದ್ದಲ್ಲಿ ಆಶ್ಚರ್ಯವಿಲ್ಲ. ಒಂದು ಲಗ್ನಕ್ಕೆ ನೂರು ವಿಘ್ನಗಳು ಎಂಬ ಗಾದೆಯಂತೆ ಒಂದು ಕೆಲಸದಲ್ಲಿ ಅನೇಕ ಅಡ್ಡಿಗಳು ಬರುವುದು ಸಾಹಜಿಕ ಮತ್ತು ಆ ಅಡ್ಡಿಗಳು ನಿವೃತ್ತವಾದಲ್ಲಿ ಆನಂದವುಂಟಾಗುವುದೂ ಸಾಹಜಿಕ. ತಥಾಪಿ ಈ ಆನಂದವು ಮುಂದಿನ ಕರ್ತವ್ಯವನ್ನು ನಿಲ್ಲಿಸುವಂತೆ ಅಥವಾ ಅದರಲ್ಲಿ ಔದಾಸೀನ್ಯವನ್ನು ಹುಟ್ಟಿಸುವಂತಿರಬಾರದು. ದಿಸಲು, ಮಳೆ ಮುಂತಾದ್ದರಿಂದಾಗುವುದನ್ನು ಲೆಕ್ಕಿಸದೆ ಬಹು ಕಷ್ಟದಿಂದ ದೇಶಾಟನವನ್ನು ಮಾಡಿದವನಿಗೆ ಅವನ ನಿರೀಕ್ಷಣದಂತೆ ಬೇಗನೆ ಬಂದರೆ ಯಾವ ಸಂತೋಷವುಂಟಾಗುವುದೋ ಅದರಲ್ಲಿ ಅವನು ಮಗ್ನನಾಗಿ ಆ ಸಂತೋಷದ ಭರದಲ್ಲಿ ಕೈಕಾಲುಗಳನ್ನು ಚಾಚಿ ಅಲ್ಲಿಯೇ ಕುಳಿತರೆ, ಅವನಂಥ ಮೂರ್ಖನು ಬೇರೆ ಒಬ್ಬನೂ ಇರನು. ಪ್ರಯಾಣ ಮಾಡುವಾಗ ಮಧ್ಯದಲ್ಲಿ ನಡಕೊಂಡು ಹೋಗಬೇಕಾದ ಕಲ್ಲುಮುಳ್ಳಿನ ದಾರಿಯನ್ನು ದಾಟಿದಮೇಲೆ ಸೊಗಸಾದ ರಾಜಮಾರ್ಗವು ಬಂದಲ್ಲಿ ಪ್ರಯಾಣಿಕನಿಗೆ ಸಂತೋಷವಾಗುವುದು ಸಾಹಜಿಕವಿದ್ದರೂ, ಆ ಸಂತೋಷದಿಂದ ಅವನು ಅಲ್ಲೆ ಕುಳಿತರೆ ಮುಂದಿನ ದಾರಿಯನ್ನು ನಡೆಯುವುದು ಯಾರು? ಹೋಗಲಿಕ್ಕಿದ್ದ ಪಟ್ಟಣವು ಬಹು ದೂರದಲ್ಲಿದ್ದುದರಿಂದ ಕಲ್ಲುಮುಳ್ಳಿನ ಹಾದಿಯು ನಿವೃತ್ತವಾಗಿ ಪ್ರಶಸ್ತವಾದ ಮಾರ್ಗವು ಬಂತೆಂದು ಆನಂದದಿಂದ ಅಲ್ಲೆ ನಿಲ್ಲಬಾರದು. ಆನಂದವು ಉಂಟಾಗಿದ್ದರೆ ಆ ಆನಂದದಿಂದ ಬಹಳ ದಾರಿಯನ್ನು ಬಹು ಬೇಗನೆ ನಡೆಯಬೇಕು; ಮಾತ್ರವಲ್ಲ, ಒಂದುವೇಳೆ ಆ ಪ್ರಶಸ್ತ ಮಾರ್ಗವು ಮುಗಿದ ಅನಂತರ ಇನ್ನೂ ಕಷ್ಟಕರವಾದ ದಾರಿಯು ಬರಲಿಕ್ಕೆ ಸಾಕು, ಅದನ್ನು ಕೂಡ ದಾಟಿ ಉದ್ದಿಷ್ಟ ನಗರವನ್ನು ಸೇರುವುದೆ ಪ್ರಯಾಣಿಕನ ಧರ್ಮವು. ಇದೆ ನ್ಯಾಯವು ರಾಜಕೀಯ ಚಳವಳದವರಿಗೂ ಅನ್ವಿತವಾಗುವುದು. ದಿನೇ ದಿನೇ ಹೆಚ್ಚು ಹೆಚ್ಚು ವಕ್ರವಾಗುತ್ತ ನಡೆದ ಅಧಿಕಾರಿಗಳ ಧೋರಣವು ತಮ್ಮ ಹಿಮ್ಮೇಳದಿಂದ ದಾರಿಗೆ ಬಂತು. ಪ್ರತಿಬಂಧದಿಂದ ಎಸ್ಸಿ ಬಿಝೆಂಟ ಪ್ರಭೃತಿಗಳಿಗೆ ಬಿಡುಗಡೆ ಆಯಿತು. ಈ ಪುರುಷಾರ್ಥಕ್ಕೆಂಕಲೂ ಇನ್ನು ದಿಪಿಸ್ತಾರು ಯಾವನು ಎಂದು ನೆನೆಸಿಕೊಂಡು ಹಿಂದೀಗಳು ತಮ್ಮಷ್ಟಕ್ಕೆ ಕೃತಾರ್ಥರಾಗಿ ಕುಳಿತರೆ ಅದು ತೀರಾ ತಪ್ಪಾದೀತು. ಮಹಾಜನ ಕರ್ತವ್ಯಕ್ಕೆ ಸಿದ್ಧಿಯು ಬಂದುದರಿಂದ ಏನೂ ತಾನಾಸ್ತ್ರದೆ ಸಂತೋಷಪಡಬೇಕಲ್ಲದೆ ಆ ಸಂತೋಷದಿಂದ ಮುಂದಿನ ಇನ್ನೂ ಹೆಚ್ಚು ಜವಾಬುದಾರಿಯ ಕರ್ತವ್ಯದಲ್ಲಿ ಔದಾಸೀನ್ಯವಾಗಲಿ ಮಂದಾದರತ್ವವಾಗಲಿ ಉಂಟಾಗಕೂಡದು. ಇದೆ ವಿವೇಕದ ಲಕ್ಷಣವು. ಮತ್ತು ನಮಗೆ ಈ ಸಂದರ್ಭದಲ್ಲಿ ಬೇಕಾದ ಸಂತೋಷವಾಗುವುದೇನೆಂದರೆ, ಪ್ರಸ್ತುತ, ಹಿಂದೂಸ್ಥಾನಕ್ಕೆ ಮುಂದಿನ ಕರ್ತವ್ಯದಲ್ಲಿ ಆನಂದಜನಕತೆಯಾಗಲಿ ಔದಾಸೀನ್ಯವಾಗಲಿ ಸಲ್ಪವದಿಂದ ಉಂಟಾಗದಿಲ್ಲ. ಆದುದರಿಂದ "ಮುಂದೆ ಏನು?" ಎಂಬೀ ಪ್ರಶ್ನೆಯು ಆದರ ಮುಂದೆ ನಿಂತಿದೆ.

ಒಂದುವೇಳೆ ಕೆಲವರು ಇಲ್ಲಿ ಆಕ್ಷೇಪಿಸಬಹುದು. ಏನೆಂದರೆ, ಮುಂದೆ ಏನು, ಈ ಪ್ರಶ್ನೆಯು ಹಿಂದೂ ದೇಶಕ್ಕೆ ಬರಲು ಕಾರಣವೇನು? ಹಿಂದೂದೇಶದ ಧ್ಯೇಯವು ಅಂತರ್ಗತ ಸ್ವರಾಜ್ಯವೆಂಬುದು ಈಗ ನಿಶ್ಚಿತವಾದ ವಿಷಯವಾಗಿದೆ. ಅದರ ಸಿದ್ಧಿಗಾಗಿ ಇಂಥಿಂಥ ಉಪಾಯಗಳನ್ನು ಕೈಕೊಳ್ಳಬೇಕೆಂಬುದರಲ್ಲಿ ತಕ್ಕಮಟ್ಟಿಗೆ ಏಕವಾಕ್ಯತೆಯಾಗಿದೆ. ಅವುಗಳಲ್ಲಿ ಮಿ. ಮೊಂಟೆಗ್ಯೂಗಳು ಹಿಂದೂಸ್ಥಾನಕ್ಕೆ ಬಂದಾಗ ಅವರ ಮುಂದೆ ಲೋಕಪಕ್ಷದ ಆಕಾಂಕ್ಷೆಗಳನ್ನಿಡುವುದು ಒಂದು ಮುಖ್ಯವಾಗಿದೆ. ಅಧಿಕಾರ, ನಿಶ್ಚಿತಧ್ಯೇಯ ಮತ್ತು ಕ್ಲಿಪ್ತಸಾಧನ ಇವು ಇಂದಿನ ಮಟ್ಟಿಗೆ ಬಂಧಿತವಾಗಿ ತೋರುವುದರಿಂದ ಪುನಃ "ಮುಂದೆ ಏನು?" ಈ ಪ್ರಶ್ನೆಯು ಯಾಕೆ ಬಂದೀತು? ಈ ಆಕ್ಷೇಪವು ಸಮರ್ಪಕವಾಗಿದೆ. ತಥಾಪಿ ಮಿ. ಮೊಂಟೆಗ್ಯೂಗಳ ಇಲ್ಲಿಯ ಸಂಚಾರದ ಕುರಿತು ಹಿಂದೂಸ್ಥಾನ ಸರಕಾರವು ಈಚೆಗೆ ಕೆಲವು ಮಾಹಿತಿಯನ್ನು ಪ್ರಕಟಿಸಿದೆ; ಅದನ್ನು ನೋಡುವಾಗ "ಮುಂದೆ ಏನು" ಈ ಪ್ರಶ್ನೆಯು ಬಾರದೆ ಇರದು. ಹಿಂದೂಸ್ಥಾನ ಸರಕಾರವು ಈಚೆಗೆ ಪ್ರಕಟಿಸಿದ್ದೇನೆಂದರೆ, ಮಿ. ಮೊಂಟೆಗ್ಯೂಗಳ ಕಡೆಗೆ ಕಳುಹಿಕೊಡತಕ್ಕ ಅರ್ಜಿಗಳನ್ನಾಗಲಿ ಹೋಗತಕ್ಕ ಡೆಪ್ಯುಟೇಶನಗಳನ್ನಾಗಲಿ ಮೊದಲು ಆಯಾ ಪ್ರಾಂತಿಕ ಸರಕಾರಗಳ ಕಡೆಗೆ ಕಳುಹಿಸತಕ್ಕದ್ದು. ಆ ಪ್ರಾಂತಿಕ ಸರಕಾರಗಳು ತಮ್ಮ ಕಡೆಗೆ ಬಂದ ಆ ಡೆಪ್ಯುಟೇಶನ್, ಅರ್ಜಿ ಮುಂತಾದವುಗಳನ್ನು ಆರಿಸಿ, ಯೋಗ್ಯವಾದವುಗಳನ್ನು ವರಿಷ್ಠ ಸರಕಾರದ ಕಡೆಗೆ ಕಳುಹಿಸಿಕೊಡಬೇಕು. ಪುನಃ ವರಿಷ್ಠ ಸರಕಾರವು ತನ್ನ ಕಡೆಗೆ ಬಂದುದರಲ್ಲಿ ಹೆಕ್ಕಿ, ವಿವೇಕಪೂರ್ವಕವಾಗಿ ಮಿ. ಮೊಂಟೆಗ್ಯೂಗಳ ಮುಂದೆ ಇಕ್ಕೀತು. ಮತ್ತು ವೈಸರಾಯರ ಸಮಕ್ಷಮ ಮಿ. ಮೊಂಟೆಗ್ಯೂಗಳು ಡೆಪ್ಯುಟೇಶನ ಮುಂತಾದವುಗಳಿಗೆ ಭೇಟಿಯನ್ನು ಕೊಟ್ಟಾರು. ಹಿಂದೂಸ್ಥಾನ ಸರಕಾರದ ಈ ಮಾತಿನ ಅರ್ಥವೇನೆಂದರೆ ಮಿ. ಮೊಂಟೆಗ್ಯೂಗಳ ಹತ್ತರ ನೆಟ್ಟಗೆ ಹೋಗಲಿಕ್ಕೆ ಅಥವಾ ಅರ್ಜಿಗಳನ್ನು ಕಳುಹಿಸಲಿಕ್ಕೆ ಯಾರಿಗೂ ಎಡೆ ಇಲ್ಲ. ಅವರ ಸುತ್ತಲು ಪ್ರಾಂತಿಕ ಮತ್ತು ವರಿಷ್ಠ ಈ ಎರಡು ಸರಕಾರಗಳ ಕೋಟೆಗಳಿರುವವು. ಈ ಎರಡು ಕೋಟೆಗಳನ್ನು ದಾಟಿ, ಒಳಗಿರುವ ಮೊಂಟೆಗ್ಯೂಗಳನ್ನು ಮಾತಾಡಿಸುವುದೆಂದರೆ ಲೋಕಪಕ್ಷದ ಎಲ್ಲ ಪ್ರತಿನಿಧಿಗಳಿಗೆ ಅಥವಾ ಸಂಸ್ಥೆಗಳಿಗೆ ಸಾಧ್ಯವಿಲ್ಲೆಂದು ಒಬ್ಬ ಹುಡುಗನೂ ಕೂಡ ಹೇಳ್ಯಾನು. ಎರಡನೆಯ ಸಂಗತಿ ಏನೆಂದರೆ ಒಮ್ಮೆ ಈ ಎರಡೂ ಬೇಲಿಗಳನ್ನು ಕಳಚಿಕೊಂಡು ಒಂದುವೇಳೆ ಒಳಗೆ ಹೋದರೆ, ಅಲ್ಲಿ ಮೊಂಟೆಗ್ಯೂಗಳೊಟ್ಟಿಗೆ ಪುನಃ ವೈಸರಾಯರು ಇದ್ದೆ ಇರುವರು. ವೈಸರಾಯರು ಅವರ ಸಂಗಡ ಇರುವುದು ಒಂದು ತೊಡಕು ಎಂದು ನಮ್ಮ ಅಂಬೋಣವಲ್ಲ. ವೈಸರಾಯರು ಬಲದಲ್ಲಿರುವಾಗ ಎಡಗಡೆಯಲ್ಲಿ ಬಂದು ನಿಂತುಕೊಂಡಿರುವ ಪ್ರತಿನಿಧಿಗಳಿಗೆ ಇಲ್ಲಿಯ ರಾಜ್ಯಕಾರಭಾರದ ವಿಶಿಷ್ಟ ದೋಷಗಳನ್ನು ಎಷ್ಟು ಸ್ಪಷ್ಟ ಶಬ್ದಗಳಿಂದ ಹೇಳಲು ಸಾಧ್ಯವಿದೆ ಇದೊಂದು ಪ್ರಶ್ನೆ. ಅಲ್ಲದೆ, ವೈಸರಾಯರಿರುವಾಗ ಮಿ. ಮೊಂಟೆಗ್ಯೂಗಳೊಡನೆ ಮನಸ್ಸು ಬಿಚ್ಚಿ ಮಾತಾಡುವುದೂ ಎಷ್ಟು ಸಾಧ್ಯವೆಂಬುದೂ ವಿಚಾರಣೀಯವೆ. ಈ ಪರಿಸ್ಥಿತಿಯಲ್ಲಿ ಮೊಂಟೆಗ್ಯೂಗಳ ಆಗಮನದಿಂದ ಜನರಿಗೆ ನಿರೀಕ್ಷಿಸಿದಷ್ಟು ಫಲವು ಬಂದೀತೆಂದು ನೆನೆಸಲು ಸಾಧ್ಯವಿಲ್ಲ. [illegible] ಫಲವು ಬಂದುದಾದರೆ ಅದು ದೈವದೆಂದು [illegible]

ಮಿ. ಮೊಂಟೆಗ್ಯೂಗಳ [illegible]

[illegible] ಪ್ರಕಟನವನ್ನು ಆಲೋಚಿಸಿದರೆ ತುಂಬಾ ಆಶ್ಚರ್ಯವಾಗುವುದು. ಮೊನ್ನೆ ಪೊಟಿಮಯಾ ಪ್ರಕರಣದಲ್ಲಿ ಸಂಭಾಷಣ ಮಾಡುವಾಗ "ಹಿಂದೂಸ್ಥಾನದಲ್ಲಿ ಸ್ವರಾಜ್ಯದ ಕೇಳಿಕೆಯು ಅಥವಾ ಅದರ ಚಳವಳವು ಸಾಕಷ್ಟು ಪ್ರಚುರಾವಸ್ಥೆಯಲ್ಲಿ ಇಲ್ಲ. ಎಂದರೆ ಈ ವಿಷಯದ ಚಳವಳವು ಇನ್ನೂ ಅಧಿಕವಾಗಬೇಕು" ಎಂದು ಮಿ. ಮೊಂಟೆಗ್ಯೂಗಳೆ ನುಡಿದಿದ್ದಾರೆ. ಮತ್ತು ಹಿಂದೂಸ್ಥಾನ ಸರಕಾರವು ಅವರ ಹತ್ತರ ಹೋಗುವ ಅರ್ಜಿಗಳಿಗೆ ಮತ್ತು ಜನರಿಗೆ ಮೇಲಿನಂತೆ ಎರಡು ಬೇಲಿಗಳನ್ನು ಅಡ್ಡವಾಗಿ ನಿಲ್ಲಿಸಿದೆ. ಭಾರತ ಮಂತ್ರಿಗಳಿಗೆ ಜನರ ಹೆಚ್ಚು ಕೇಳಿಕೆಗಳನು ಕೇಳುವ ಕುತೂಹಲವಿರುವಾಗ ಅವರನ್ನು ಪ್ರಾಂತಿಕ ಮತ್ತು ವರಿಷ್ಠ ಸರಕಾರದ ಈ ಎರಡು ಪಂಜರಗಳಲ್ಲಿ ಕೂಡ್ರಿಸುವುದು ಯಾಕೆ? ಈ ಪರಿಸ್ಥಿತಿಯಿಂದಲೆ ವಸ್ತುತಃ ಹಿಂದೂಸ್ಥಾನದ ಧ್ಯೇಯ ಮತ್ತು ಸಾಧನಗಳು ಇಂಥಿಂಥವೆಂದು ನಿಶ್ಚಿತವಾಗಿದ್ದರೂ "ಮುಂದೆ ಏನು" ಈ ಪ್ರಶ್ನೆಯು ಬರುತ್ತದೆ. ಈ ಪ್ರಶ್ನೆಯನ್ನು ಉತ್ತರಿಸುವುದೆಂದರೆ, ಮೊಂಟೆಗ್ಯೂ ದೊರೆಗಳು ಹಿಂದೂಸ್ಥಾನದಲ್ಲಿ ನಿಂತಾಗ ಅವರ ಕಡೆಗೆ ಲೋಕಪಕ್ಷದ ಎಲ್ಲ ಸಂಸ್ಥೆಗಳ ಪ್ರತಿನಿಧಿಗಳಿಗೆ ಅಕುಂಠಿತ ಪ್ರವೇಶವಿರುವುದು ಅವಶ್ಯಕವಾಗಿದೆ. ಅಧಿಕಾರಿಗಳ ಪ್ರಸನ್ನ ದೃಷ್ಟಿಯೆ ಸರ್ವಸ್ವವೆಂದು ತಿಳಿಯುವ ಕೇವಲ ಸ್ವಯಂ ಪ್ರತಿಷ್ಠಿತ ಪ್ರತಿನಿಧಿಗಳ ದಿಬ್ಬಣಕ್ಕೆ ಮಾತ್ರ ಎಡೆ ಕೊಟ್ಟು ರಾಷ್ಟ್ರೀಯ ಪಕ್ಷದವರನ್ನು ದೂರದಲ್ಲಿಟ್ಟರೆ, ನಿಜವಾದ ಲೋಕಮತವು ಭಾರತ ಮಂತ್ರಿಗಳಿಗೆ ಗೊತ್ತಾಗಲಿಕ್ಕಿಲ್ಲ. ಹಾಗಾದಮೇಲೆ ಅವರ ಆಗಮನದ ಆಯಾಸವು ನಿರರ್ಥಕವಾದೀತು. ಈ ಪ್ರಶ್ನೆಯು ದಿಲ್ಲಿಯ ರಾಷ್ಟ್ರೀಯ ಸಭೆಯ ಅಧಿವೇಶನದಲ್ಲೂ ಬಂದೀತು. ರಾಷ್ಟ್ರೀಯ ಸಭೆಯ ಅಧಿವೇಶನದ ಅನಂತರವೂ ಮೊಂಟೆಗ್ಯೂ ದೊರೆಗಳು ಹಿಂದೂಸ್ಥಾನದಲ್ಲಿ ಕೆಲವು ದಿವಸ ನಿಲ್ಲುವವರಾದುದರಿಂದ ಅವರ ಕಡೆಗೆ ಹೋಗತಕ್ಕ ರಾಷ್ಟ್ರೀಯಪಕ್ಷ ಮುಂತಾದವರ ಪ್ರತಿನಿಧಿಗಳು ಮೊದಲೆ ಆರಿಸಲ್ಪಡಬೇಕಾಗಿದೆ. ಇದನ್ನು ಸ್ವರಾಜ್ಯವಾದಿಗಳು ಈಗಿನಿಂದಲೆ ಆಲೋಚಿಸಬೇಕು. ಬರೆ ಬಿಝೆಂಟರನ್ನು ಬಿಟ್ಟ ಆನಂದದಲ್ಲಿ ಮುಳುಗಿಹೋಗಿ ಪ್ರಯೋಜನವಿಲ್ಲ. ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವನ್ನು ಮಿ.ಸೆಸ್ ಬಿಝೆಂಟರಿಗೆ ಕೊಡಬೇಕೆಂದು ಕಲಕತ್ತೆಯ ಬಿ. ಸುರೇಂದ್ರನಾಥ ಬಾನರ್ಜಿಯವರ ಹಿಂದು ಪಕ್ಷದವರಲ್ಲದೆ ಬೇರೆ ಎಲ್ಲರು ಒಪ್ಪಿಕೊಂಡಿದ್ದಾರೆ. ಈಗ ಆ ಪಕ್ಷದವರೂ ತಮ್ಮ ದುರಾಗ್ರಹವನ್ನು ಬಿಟ್ಟು ಬಿಝೆಂಟರನ್ನು ಆ ನಾಯಕಸ್ಥಾನಕ್ಕೆ ಆರಿಸಿದ್ದಾರೆಂದು ಈಚೆಗೆ ವರ್ತಮಾನವು ಬಂದಿದೆ. ಅವರನ್ನೆ ಆರಿಸಿದ್ದಲ್ಲಿ ಮಿ. ಮೊಂಟೆಗ್ಯೂಗಳ ಮನಸ್ಸಿನಮೇಲೆ ಕೂಡ ಹಿಂದೂಸ್ಥಾನದವರಿಗೆ ಹೋಮ್‌ರೂಲ್ ಅಗತ್ಯವಾಗಿದೆ ಎಂಬುದಾಗಿ ಒಂದು ಸುಪರಿಣಾಮವುಂಟಾದೀತು. ಆದುದರಿಂದ ಈ ಎರಡು ಕಾರ್ಯಗಳನ್ನು ನಮ್ಮ ರಾಷ್ಟ್ರವು ಏಕಮತ್ಯದಿಂದ ಸಾಧಿಸಿದ್ದಲ್ಲಿ ಅದು ಮೊಂಟೆಗ್ಯೂ ದೊರೆಗಳ ಆಗಮನದಿಂದ ಸ್ವಲ್ಪವಾದರೂ ಪ್ರಯೋಜನವನ್ನು ಪಡಕೊಂಡೀತೆಂದು ನಮ್ಮ ಮನೋದೇವತೆಯು ನಮಗೆ ಹೇಳುವುದು.

ಸ್ಫುಟವಿಚಾರಗಳು.

೧. ಹಿಮಾಲಯದ ಅಡಿಯಲ್ಲಿ ಜ್ವಾಲಾಮುಖಿಯ ಸ್ಫೋಟವಾಗುವಂತೆ ಅದೆ ಹಿಮಾಲಯಕ್ಕೆ ಹೊಂದಿಕೊಂಡಿದ್ದ ಪಂಜಾಬದ ಲೆ. ಗವರ್ನರರು ವರಿಷ್ಠ ಕೌನ್ಸಿಲಿನೊಳಗಿನ ತಮ್ಮ ಆಕ್ಷೇಪಕರ ಹಾಗು ಕಠೋರ ಮತ್ತು ಬಾಲಿಶತನದ ವಿಧಾನಗಳಿಂದ ಲೋಕಮತದಲ್ಲಿ ಅಸ್ವಾಸ್ಥ್ಯವನ್ನುಂಟುಮಾಡಿದ ಸಂಗತಿಯನ್ನು ನಾವು ಕಳೆದ ಸಂಚಿಕೆಯಲ್ಲೆ ನಿವೇದಿಸಿದ್ದೆವು. ಲೋಕಪಕ್ಷದ ಅಗ್ರಣಿಗಳಾದ ಪಂಡಿತ ಮಾಲವೀಯ ಪ್ರಭೃತಿಮಲ್ಲರು ಅಂದೆ ಈ ಬಹಾದ್ದರರಿಗೆ ಕೈಡೆ ಪ್ರತಿಕ್ಕೆ ಕೊಡುವವರಿದ್ದರು. ಆದರೆ ನಾವು ಕಳೆದಸಾರಿ ತೋರಿಸಿದ್ದಂತೆ ಕೌನ್ಸಿಲಿನ ಅಧ್ಯಕ್ಷರು ಕಾಲಾತಿಕ್ರಮದ ನಿಮಿತ್ತ ತೋರಿಸಿ ಈ ವಾಗ್ಯುದ್ಧವನ್ನು ಅರ್ಧದಲ್ಲೆ ನಿಲ್ಲಿಸಿಬಿಟ್ಟರು. ಆದರೆ ಸುದೈವದಿಂದ ಇದು ವೈಸರಾಯರಿಗೆ ಸಮ್ಮತವಾಗಲಿಲ್ಲ. ಕೂಡಲೆ ಅನಂತರ ಕೂಡಿದ ಅಧಿವೇಶನದಲ್ಲಿ ವೈಸರಾಯ ಪ್ರಭುಗಳು ಸ್ವತಃ ಅಧ್ಯಕ್ಷಸ್ಥಾನವನ್ನಲಂಕರಿಸಿ, ಮಾಯ್ಕಲ್ ಒಡಿವಾರರಿಗೆ ಪುನಃ ಸ್ಪಷ್ಟೀಕರಣದ ಶಬ್ದಗಳನ್ನು ಆಡಿತೋರಿಸಲು ಸಂದರ್ಭವನ್ನು ಕೊಟ್ಟರು. ಸರ್. ಒಡಿವರರು "ನಾನು ಹೇಳಿದ ವಿಧಾನಗಳು ಬರೆ ನನ್ನ ಜವಾಬುದಾರಿಯಿಂದಲೆ ಅಲ್ಲದೆ ಬೇರೆಯವರಿಗೆ ಅವುಗಳ ಸಂಬಂಧವಿಲ್ಲ, ನನ್ನ ಭಾಷಣದ ಬಗ್ಗೆ ನನಗೆ ಪಶ್ಚಾತ್ತಾಪವಾಗುತ್ತದೆ, ವೈಸರಾಯ ಪ್ರಭುಗಳ ಪೂರ್ವಭಾಷಣದಿಂದ ಸಮರಸವಾಗುತ್ತ ಬಂದ ಲೋಕಮತದಲ್ಲಿ ನನ್ನ ಮಾತುಗಳಿಂದ ಪುನಃ ಅಸ್ವಸ್ಥತೆಯು ಬರುವಂತಿದ್ದರೆ ನನಗೆ ಅದರಿಂದ ತುಂಬಾ ವ್ಯಸನವಾಗುತ್ತದೆ." ಎಂದುಹೇಳಿ ತನ್ನ ಅಪ್ರಬುದ್ಧ ವಿಚಾರಗಳ ಬಗ್ಗೆ ಒಂದು ತರದಿಂದ ಕ್ಷಮೆಯನ್ನು ಕೇಳಿಕೊಂಡರು. ಒಡಿವರರ ಕ್ಷಮಾಪಣೆಯಲ್ಲಿ ಸಾಕಷ್ಟು ಸ್ಪಷ್ಟೋಕ್ತಿ ಇದ್ದಿಲ್ಲವಾದುದರಿಂದ ಸ್ವತಃ ವೈಸರಾಯಪ್ರಭುಗಳೆ ಇವರ ನಿಂದಾವ್ಯಂಜಕ ಭಾಷಣದ ಅನಾವಶ್ಯಕತೆಯನ್ನೂ ವಿರೋಧಿತ್ವವನ್ನೂ ಚನ್ನಾಗಿ ತೋರಿಸಿ, ನಾಮದಾರ ಸಭಾಸದರಿಗೆ ಸರ್. ಒಡಿವರರ ವಿಧಾನಗಳನ್ನು ಖಂಡಿಸಲು ಪೂರ್ಣ ಹಕ್ಕುಂಟೆಂಬುದನ್ನು ಸ್ಪಷ್ಟವಾಗಿ ಆಡಿತೋರಿಸಿದರು. ಅನಂತರ ನಾಮದಾರ ಮಾಲವೀಯರು ಲೋಕಪ್ರತಿನಿಧಿಗಳ ಕಡೆಯಿಂದ ಎದ್ದು ಭಾಷಣಮಾಡುವಾಗ ಹೇಳಿದ್ದೇನೆಂದರೆ: "ಸರ್. ಮಾಯ್ಕಲರು ಒಂದು [illegible] ಲೋಕಪ್ರತಿನಿಧಿಗಳ ಮತ್ತು [illegible]

ಕೊಟ್ಟು ಒಂದುವೇಳೆ ಲೋಕಪಕ್ಷದ ಸಭಾಸದರು ಈ ವಿಷಯದಲ್ಲಿ ಮೌನವನ್ನು ತಾಳಿದ್ದಾದರೆ ಅದರಿಂದ ತಪ್ಪು ತಿಳುವಳಿಯುಂಟಾಗಲಿಕ್ಕಿಲ್ಲ." ಅನಂತರ ಪಂಡಿತ ಮಾಲವೀಯರು ಸರ್. ಒಡಿವರರ ವಿಧಾನಗಳನ್ನೆಲ್ಲ ಒತ್ತಿ ಖಂಡಿಸಿದರು. ಅಂತು ಈ ಒಡಿವರ—ಪ್ರಕರಣವನ್ನು ಮುಗಿಸುವಾಗ ನಮಗೊಂದು ಮಾತನ್ನು ಹೇಳುವುದು ಅಗತ್ಯವಾಗಿದೆ. ಕೌನ್ಸಿಲಿನ ೧೯ಜನ ಸಭಾಸದರು ಮತ್ತು ಕೊಂಗ್ರೆಸ್-ಲೀಗುಗಳು ಹಿಂದೂಸ್ಥಾನದ ನ್ಯಾಯ ಮತ್ತು ಕಾರ್ಯನಿರ್ವಾಹಕ ಪದ್ಧತಿಯನ್ನು ಸಂಪೂರ್ಣವಾಗಿ ಸುಧಾರಿಸುವ ಬಗ್ಗೆ ಮಸೂದೆಗಳನ್ನು ತಯಾರಿಸಿ ಸರಕಾರದ ಮುಂದೆ ಇಟ್ಟಿರುತ್ತ, ಮತ್ತು ಅವುಗಳಲ್ಲಿ ಪಂಜಾಬದ ಸುಧಾರಣೆಯೂ ಅಂತರ್ಭೂತವಾಗಿರುತ್ತ, ನಾಮದಾರ ಶಿಫಿಯವರು ಪುನಃ ಈ ಠರಾವನ್ನು ತಂದದ್ದೆ ಮೊದಲು ಅಚಾತುರ್ಯದ ಕೆಲಸವು. ಹಾಗಿರುವಾಗ ಈ ಒಡಿವೆರರು ಆ ಪ್ರಸಂಗದಲ್ಲಿ ಮಾಡಿದ ಅಕಾಂಡತಾಂಡವವಂತೂ ಇನ್ನೂ ಅಚಾತುರ್ಯದ ಮಾತು! ಆದರೂ ಇವರು ತಮ್ಮ ಬಾಲಿಶತನವನ್ನು ಒಪ್ಪಿಕೊಂಡು ಕೆಲವು ಮಟ್ಟಿಗೆ ಕ್ಷಮೆಯನ್ನು ಕೇಳಿಕೊಂಡದರಿಂದ ಹಿಂದಿಗಳೂ ಈಗ ಕೆಲವು ಮಟ್ಟಿಗೆ ಸಂತೋಷಪಟ್ಟಾರು.

೨. ಕಳೆದವಾರ ವರಿಷ್ಠ ಕೌನ್ಸಿಲಿನೊಳಗೆ ನಡೆದ ಪ್ರಸ್ತಾಪಗಳಲ್ಲಿ ನಾಮದಾರ. ಶರ್ಮಾ ಮತ್ತು ಪಂಡಿತ ಮಾಲವೀಯ ಈ ಇಬ್ಬರು ತಂದ ಠರಾವುಗಳು ಮಹತ್ವವುಳ್ಳವಿದ್ದವು. ಇಂಡಿಯನ್-ಸಿವಿಲ್ ಮತ್ತು ಪೋಲೀಸ್ ಸರ್ವಿಸಿನಲ್ಲಿ ಹಿಂದಿಗಳಿಗೆ ಇಂತಿಷ್ಟೆ ಸ್ಥಾನಗಳೆಂದು ಗಡಿ ಹಾಕಿದ್ದು ಸರಿಯಲ್ಲ, ಬ್ರಿಟಿಷ್-ಸಾಮ್ರಾಜ್ಯದ ಪ್ರಜೆಗಳಾದುದರಿಂದ ಹಿಂದಿಗಳಿಗೆ ವಿಲಾಯತಿಯವರಿಗಿದ್ದ ಹಕ್ಕಿರಬೇಕು, ಎಂಬುದಾಗಿ ಒಂದು ಠರಾವನ್ನು ನಾಮದಾರ ಶರ್ಮರು ತಂದರು. ಮೇಲಿನ ಎರಡು ಖಾತೆಗಳ ಉಚ್ಚತರಗತಿಯ ನೌಕರಿಗಳನ್ನು ಹಿಂದಿಗಳಿಗೆ ಅಲ್ಲಗಳೆಯುವುದು ಈಗಿನ ಬದಲಾಯಿಸಿದ ಪರಿಸ್ಥಿತಿಗೆ ಏನೂ ಒಪ್ಪುವಂತಿಲ್ಲ ಎಂದು ಮುಂತಾಗಿ ಅನೇಕ ದೃಷ್ಟಿಯಿಂದ ಶರ್ಮರು ತಮ್ಮ ಠರಾವನ್ನು ಸಮರ್ಥಿಸಿದರು. ಅನಂತರ ಮುಂಬಯಿಯ ಚೆಂಬರ್-ಒಫ್-ಕೊಮರ್ಸಿನ ಕಡೆಯ ಮೆಂಬರರಾದ ಮಿ. ಹೊಗ್ಗರು ಇಂಥ ಠರಾವಿನ ಸೂಚನೆಯನ್ನು ಸ್ವಲ್ಪ ಮೊದಲೆ ಕೊಡುವುದು ಯುಕ್ತವಿತ್ತು, ಈ ಸಂಗತಿಯನ್ನು ಆಲೋಚಿಸುವಷ್ಟು ಸಮಯವು ಮಿಕ್ಕ ಸಭಾಸದರಿಗಿರಲಿಲ್ಲ ಎಂದು ಮುಂತಾಗಿ ಕೆಲವಂಶದಿಂದ ಗುಣುಗುಟ್ಟಿದಂತೆ ಮಾಡಿದರೂ, 'ಸರಕಾರವು ಹಿಂದುಸ್ಥಾನಕ್ಕೆ ಸ್ವರಾಜ್ಯದ ಹಕ್ಕನ್ನು ಕೊಡಲು ಉದ್ಯುಕ್ತನಾಗಿರುವುದರಿಂದ ಆ ಸ್ವರಾಜ್ಯಕಾರಭಾರದ ಅನುಭವವಾಗುವಂತೆ ಸಿವಿಲ್-ಸರ್ವಿಸ್ ಮುಂತಾದ ಖಾತೆಗಳ ವರಿಷ್ಠತರಗತಿಯ ಸ್ಥಾನವನ್ನು ಆದಷ್ಟು ಹೆಚ್ಚು ಮತ್ತು ಕೂಡಿದಷ್ಟು ಬೇಗನೆ ಕೊಡುವುದು ಯುಕ್ತವಾಗಿದೆ.' ಎಂದು ಸ್ಪಷ್ಟ ಉದ್ಗರಿಸಿ ತಮ್ಮ ಸೌಜನ್ಯವನ್ನು ತೋರಿಸಿದರು. ತಥಾಪಿ ಮಾನ್ಯ, ಕೌಚಮನರಿಗೆ ಮಾತ್ರ ಈ ಠರಾವು ಅಸಮ್ಮತವಾಗಿ ತೋರಿತು. ಮಿ. ಕೌಚಮನರು ನಮ್ಮ ದಕ್ಷಿಣಕನ್ನಡಕ್ಕೆ ಅಪರಿಚಿತರಲ್ಲ. ಅವರು ಇಲ್ಲಿ ಮೊದಲು ಕಲೆಕ್ಟರರಾಗಿದ್ದರು; ಈಗ ಮದ್ರಾಸು ಸರಕಾರದ ಕಡೆಯಿಂದ ವರಿಷ್ಠ ಕೌನ್ಸಿಲಿನಲ್ಲಿ ಸರಕಾರಿ ಸಭಾಸದರಾಗಿದ್ದಾರೆ. ಇವರು ನಾಮದಾರ ಶರ್ಮರ ಠರಾವನ್ನು ಪ್ರತಿರೋಧಿಸುವಾಗ ಮಾಡಿದ ಕೋಟಿಕ್ರಮವು ಕೇವಲ ಅಪೂರ್ವವಾಗಿತ್ತು! 'ಸರಕಾರಿ ಖಾತೆಗಳ ವರಿಷ್ಠ ತರದ ನೌಕರಿಗಳಲ್ಲಿ ಹಿಂದಿಗಳ ಪ್ರವೇಶಕ್ಕೆ ಹೆಚ್ಚಿನ ಸಂದರ್ಭವನ್ನು ಕೊಟ್ಟರೆ, ಜರೆ ಆ ಸ್ಥಾನಗಳಲ್ಲಿ ಬ್ರಾಹ್ಮಣರೆ ತುಂಬಿಹೋಗುವರು. ಬ್ರಾಹ್ಮಣರ ಸಂಖ್ಯೆಯಂತು ಬಹು ಕಡಮೆ. ಇಂಥ ಅಲ್ಪಸಂಖ್ಯಾಕ ಬ್ರಾಹ್ಮಣರ ಕೈಕೆಳಗೆ ಬಹು ದೊಡ್ಡದಾದ ಬ್ರಾಹ್ಮಣೇತರರ ಸಮಾಜವನ್ನಿಡುವುದು ಯುಕ್ತವಲ್ಲ. ಮದ್ರಾಸ ಸಂಸ್ಥಾನದಲ್ಲಿ ಬ್ರಾಹ್ಮಣೇತರರ ಸಂಖ್ಯೆಯು ೪೨,೦೦,೦೦೦೦ ಇದೆ. ಇಷ್ಟು ದೊಡ್ಡ ಸಮಾಜಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಬ್ರಾಹ್ಮಣರೆ ಯಾಕೆ ಹೆಚ್ಚಿನ ಸ್ಥಾನಗಳನ್ನು ಆಕ್ರಮಿಸುವುದೆಂದರೆ ಅವರೆ ಶಿಕ್ಷಣದಲ್ಲಿ ಮುಂದೆ ಇದ್ದಾರೆ. ಅಂಥವರ ಪ್ರಯೋಜನಕ್ಕಾಗಿ ಈ ಠರಾವನ್ನು ಪಾಸುಮಾಡಿ ಬ್ರಾಹ್ಮಣೇತರರನ್ನು ನೋಯಿಸುವುದು ಇಷ್ಟವಲ್ಲ. ಬ್ರಾಹ್ಮಣೇತರರು ಬ್ರಾಹ್ಮಣರ ನೇತೃತ್ವದಲ್ಲಿ ನಿಲ್ಲಲು ಒಪ್ಪಿಕೊಳ್ಳುವುದಿಲ್ಲೆಂಬುದಕ್ಕೆ ಮದ್ರಾಸಿನ ಅಬ್ರಾಹ್ಮಣರ ಚಳವಳ ಮತ್ತು ಜಸ್ಟಿಸ್ ಪತ್ರದ ಉದಯ ಇವೆ ಸಾಕ್ಷಿಯಾಗಿವೆ." ಮಿ. ಕೌಚಮನರು ಈ ಅರ್ಥದ ಕೋಟಿಕ್ರಮಗಳನ್ನು ನಡಿಸಿದರು, ಶಾಹಬಾಸ! ಟಿ. ಎಮ್. ನಾಯರರೆ! ನೀವೆ ಧನ್ಯ! ಮದ್ರಾಸಿನ ಕೌನ್ಸಿಲಿನಲ್ಲಿ ಮೆಂಬರರಾಗಿ ಚುನಾಯಿಸಿ ಬರಲು ನೀವು ಕೆಲವು ಸಮಯದ ಹಿಂದೆ ಯತ್ನಿಸಿಕೊಂಡಿದ್ದಿರಿ. ಆದರೆ ಅದು ಆಗ ಸಾಧ್ಯವಾಗಲಿಲ್ಲಾದರೂ ಈಗ ನಿಮ್ಮ ಹೆಸರು, ನಿಮ್ಮ ಪತ್ರದ ಖ್ಯಾತಿ, ನೀವು ಕೈಕೊಂಡ ಚಳವಳದ ಕೀರ್ತಿ ಇವು ಸಿಮ್ಲಾದ ವರಿಷ್ಠ ಕೌನ್ಸಿಲಿನಲ್ಲಿ ಕೂಡ ಹೋಯಿತು! ನಿಮ್ಮಷ್ಟು ಧನ್ಯರಾದವರು ಇನ್ನಾರೂ ಇಲ್ಲ!! ಇರಲಿ. ಮಿ. ಕೌಚಮನ ಧೊರೆಗಳ ಈ ವಿಧಾನಗಳನ್ನು ನಾಮದಾರ. ಶ್ರೀನಿವಾಸ ಶಾಸ್ತ್ರಿಗಳು ಅಲ್ಲೆ ಖಂಡಿಸಿಬಿಟ್ಟದರಿಂದ ಅದರ ಪುನರುಕ್ತಿಯು ಅನಾವಶ್ಯಕವಾಗಿದೆ. ಈ ಠರಾವಿನ ಮೇಲೆ ಉತ್ತರರೂಪವಾಗಿ ಭಾಷಣಮಾಡುವಾಗ ಮಿ. ವಿನ್‌ಸೆಂಟರು ಅದಷ್ಟು ಸಹಾನುಭೂತಿಯನ್ನು ತೋರಿಸಿದ್ದರಿಂದ ನಾಮದಾರ ಶರ್ಮರು ಈ ಠರಾವನ್ನು ಹಿಂದಕ್ಕೆ ತೆಕ್ಕೊಂಡರು. ಮಾರಣೆ ದಿನ ಸ್ವಲ್ಪ ಹೆಚ್ಚು ಕಡಮೆ ಇದೆ ಸ್ವಭಾವದ ಎಂದರೆ ಇಂಡಿಯನ್-ಸಿವಿಲ್-ಸರ್ವಿಸ್ ಪರೀಕ್ಷೆಯು ಹಿಂದುಸ್ಥಾನದಲ್ಲೂ ವಿಲಾಯತಿಯಲ್ಲೂ ಏಕಕಾಲದಲ್ಲಿ ಆಗುವುದು ಉಚಿತವೆಂಬ ಅರ್ಥದ ಒಂದು ಠರಾವನ್ನು ಮಾಲವೀಯರು ಕೌನ್ಸಿಲಿನಲ್ಲಿ ತಂದರು. ಆದರೆ ಈ ಠರಾವಿಗಲ್ಲು ಅನೇಕ ಅನುಕೂಲ [illegible] ವಿವಾದ [illegible] ಹೋಯಿತು. ಈ ವಿಷಯವನ್ನು ಹೆಚ್ಚು ಪ್ರಸ್ತಾಪಿಸಲು ಸ್ಥಳಾಭಾವದ ದೆಸೆಯಿಂದ ಇಲ್ಲೆ ಬಿಡಬೇಕಾಗಿದೆ.

೩. ಬ್ರಿಟಿಷ್ ಸರಕಾರವು ನಿಜವಾಗಿ ಸುಧಾರಿಸಿದ್ದಾದರೂ ಅನೇಕ ಪ್ರಸಂಗಗಳಲ್ಲಿ ದೇಶೀಯ ಸಂಸ್ಥಾನಗಳೆ ಅದರ ಆದರ್ಶಸ್ಥಾನದಲ್ಲಿ ನಿಲ್ಲುತ್ತವೆ. ಅವು ಈ ರೀತಿಯಿಂದ ಆದರ್ಶವಾದರೂ ಅವುಗಳನ್ನು ಇಂಥ ಸಂದರ್ಭದಲ್ಲಿ ನಮ್ಮ ಸರಕಾರವು ಸ್ವಾಭಾವಿಕ ಜಾಡ್ಯದಿಂದ, ಅಥವಾ ಕಾರಣಾಂತರದಿಂದ ಅನುಕರಿಸುವುದಿಲ್ಲವೆಂಬ ವ್ರತವನ್ನೆ ಪಡಕೊಂಡಿದ್ದುದಾದರೆ ಆ ಬಗ್ಗೆ ಯಾರೂ ಹೆಚ್ಚಿನ ವಿಷಾದ ಪಡಲಾರರು. ತಥಾಪಿ ಸಂಸ್ಥಾನಗಳ ಎಷ್ಟೊ ಕ್ರಮಗಳು ಅನುಕರಣೀಯವಾಗಿವೆಂಬುದಕ್ಕೆ ಅಡ್ಡಿ ಇಲ್ಲ. ಬರೋಡಾ ಸಂಸ್ಥಾನದ ಕಳೆದ ವರ್ಷದ ಆಡಳಿತೆಯ ವರದಿಯೊಳಗಿನ ಕೆಲವು ಮಹತ್ವದ ಸಂಗತಿಗಳನ್ನು ಮುಂದಿಟ್ಟುಕೊಂಡು ಆಲೋಚಿಸಿದರೆ, ನಮ್ಮ ಮೇಲಿನ ವಿಧಾನದ ಸತ್ಯತ್ವವು ದೃಢವಾಗುವುದು. ಗ್ರಾಮಪಂಚಾಯತಿ, ಸ್ಥಾನಿಕಸರಕಾರ ಮುಂತಾದ ಲೋಕಶಿಕ್ಷಣಾತ್ಮಕ ಮತ್ತು ಸ್ವರಾಜ್ಯತತ್ವದ ದೃಷ್ಟಿಯಿಂದ ಆವಶ್ಯಕವಾದ ಸಂಗತಿಗಳನ್ನು ಬರೋಡಾಸಂಸ್ಥಾನವು ಆದಷ್ಟು ಅಭಿವೃದ್ಧಿಯ ಸ್ಥಿತಿಯಲ್ಲಿ ತಂದಿದೆ. ಮತ್ತು ಅವುಗಳಲ್ಲಿ ಯೋಗ್ಯಸುಧಾರಣೆಯನ್ನು ಮಾಡುತ್ತಿದೆ. ಈ ಸಂಸ್ಥೆಗಳನ್ನು ಮಾತ್ರವಲ್ಲ, ಶಾಲೆಗಳ ಸ್ಥಿತಿಯನ್ನೂ, ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸ್ಥಿತಿಯನ್ನೂ ಸುಧಾರಿಸಿ, ಶಾಲಾವಿದ್ಯಾರ್ಥಿಗಳ ಶಾರೀರಕ ಸಾಮರ್ಥ್ಯವು ಹೆಚ್ಚಾಗುವಂತೆ ಅದು ಬೇಕಾದ ಏರ್ಪಾಡುಗಳನ್ನು ಮಾಡುತ್ತಿದೆ; ಇದು ಅಭಿನಂದನೀಯವಾದ ಮಾತು. ಬರೋಡಾಸಂಸ್ಥಾನದೊಳಗಿನ ಶಿಕ್ಷಣದ ವಿಷಯವನ್ನು ವಿಮರ್ಶಿಸುವವರಿಗೆ ಅದು ಸಕ್ತಿಯ ಶಿಕ್ಷಣದ ಕ್ರಮವನ್ನು ಹಾಕಿಕೊಂಡದ್ದರಿಂದ, ೧೦೦-೨೦೦ ಜನ ವಸತಿಯ ಗ್ರಾಮಗಳಲ್ಲಿ ಸಹ ಒಂದೊಂದು ಪ್ರಾಥಮಿಕ ಶಾಲೆಯನ್ನು ತೆರೆದಿದೆ ಎಂಬುದನ್ನು ಕೇಳಿ ಬಹು ಸಂತೋಷವಾದೀತು. ಈ ಮೇಲಿನ ಸಂಗತಿಯಲ್ಲದೆ ಇನ್ನೂ ಅಲ್ಲಿಯ ಸರಕಾರವು ಆಲೋಚಿಸಿದ್ದೇನೆಂದರೆ ಶಾಲೆಗಳ ಸಂಖ್ಯೆ ಮತ್ತು ಶಾಲೆಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯು ತೃಪ್ತಿಕರ ರೀತಿಯಲ್ಲಿ ಉಪಲಬ್ಧವಾದಲ್ಲಿ, ಇನ್ನೂ ಶಾಲೆಗಳ ಸಂಖ್ಯೆಯು ಹೆಚ್ಚಿಸೋಣಾದೀತು." ಈ ಸುಧಾರಣೆಗಳಲ್ಲದೆ ಬಾಲಚಮೂ, ದೇಶೀಯ ಭಾಷೆಗಳ ಅಭಿವೃದ್ಧಿ, ಇನ್ಸಪೆಕ್ಟರನ ಇಲಾಖೆಯ ಸೂಚನೆಗಳನ್ನು ಜಾರಿಯಲ್ಲಿ ತರುವಿಕೆ ಮುಂತಾದ ಬೇರೆ ಮಹತ್ವದ ಸುಧಾರಣೆಗಳೂ ಆಗಿವೆಂದು ವರದಿಯ ಸಂಗತಿಯಿಂದ ತಿಳಿಯಬಹುದಾಗಿದೆ.

